ಇರುಳಿಗರು
ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧನಾ ವಿದ್ಯಾರ್ಥಿ
ಕೃಷ್ಣಮೂರ್ತಿ ಕೆ.ವಿ.

ಮಾರ್ಗದರ್ಶಕರು
ಡಾ. ಎನ್.ಚಿನ್ನಸ್ವಾಮಿ ಸೋಸಲೆ
ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೯

ಇರುಳಿಗರು

ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧನಾ ವಿದ್ಯಾರ್ಥಿ

ಕೃಷ್ಣಮೂರ್ತಿ ಕೆ.ವಿ.

ಮಾರ್ಗದರ್ಶಕರು

ಡಾ. ಎನ್.ಚಿನ್ನಸ್ವಾಮಿ ಸೋಸಲೆ

ಪ್ರಾಧ್ಯಾಪಕರು

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೯

ಮಾರ್ಗದರ್ಶಕರ ದೃಢೀಕರಣ ಪತ್ರ

ಕೃಷ್ಣಮೂರ್ತಿ ಕೆ.ವಿ. ಇವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ಇರುಳಿಗರು: ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಚರಿತ್ರೆ** ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ. ಎನ್.ಚಿನ್ನಸ್ವಾಮಿ ಸೋಸಲೆ
ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ: ಚರಿತ್ರೆ ವಿಭಾಗ, ವಿದ್ಯಾರಣ್ಯ
ದಿನಾಂಕ: 15.03.19

ಡಾ ಎನ್ ಚಿನ್ನಸ್ವಾಮಿ ಸೋಸಲೆ
ಪ್ರಾಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಸಂಶೋಧಕರ ಘೋಷಣಾ ಪತ್ರ

ಇರುಳಿಗರು: ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ ಎಂಬ ಈ ಮಹಾ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ, ಚರಿತ್ರೆ ವಿಭಾಗದ, ಪ್ರಾಧ್ಯಾಪಕರಾದ **ಡಾ. ಎನ್.ಚಿನ್ನಸ್ವಾಮಿ ಸೋಸಲೆ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ಕೃಷ್ಣಮೂರ್ತಿ ಕೆ.ವಿ.
ಪಿಎಚ್.ಡಿ.ಸಂಶೋಧನ ವಿದ್ಯಾರ್ಥಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ : ಚರಿತ್ರೆ ವಿಭಾಗ ವಿದ್ಯಾರಣ್ಯ
ದಿನಾಂಕ : 15-03-2019

ಪರಿವಿಡಿ

ಅಧ್ಯಾಯ: ಒಂದು

ಪ್ರಸ್ತಾವನೆ

ಅಧ್ಯಾಯ: ಒಂದು

ಪ್ರಸ್ತಾವನೆ

ಜನರು ಎಂದರೆ ಯಾರು ಹಾಗೂ ಜನರ ಚರಿತ್ರೆ ಎಂದರೇನು? ಎನ್ನುವ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಕಂಡುಹಿಡಿಯದೆ ಜನಕೇಂದ್ರಿತ ಚರಿತ್ರೆಯನ್ನು ನಿರ್ಮಿಸಲು ಸಾಧ್ಯವಿಲ್ಲ. ಪ್ರತಿಯೊಂದು ಪಂಥವೂ ತನ್ನದೇ ನೆಲೆಯಿಂದ ಅಥವಾ ಚೌಕಟ್ಟಿನೊಳಗೆ ಜನರನ್ನು ವ್ಯಾಖ್ಯಾನಿಸುವ ಪ್ರಯತ್ನವನ್ನು ಮಾಡಿದವು. ಅರಸ, ಮಂತ್ರಿ, ಅಧಿಕಾರಿ, ಪ್ರಜೆ ಇವರೆಲ್ಲರೂ ಮೊದಲು ಜನರು. ಆಮೇಲೆ ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ವಿವಿಧ ಸ್ತರಗಳಲ್ಲಿ ಗುರುತಿಸಿಕೊಳ್ಳುತ್ತಾರೆ. ಇವರಲ್ಲಿ ಯಾವ ಜನರನ್ನು ಕುರಿತು ಅಧ್ಯಯನ ನಡೆಸಬೇಕು ಎನ್ನುವುದು ಚರ್ಚೆಯ ವಿಷಯ. ಒಂದು ದೇಶದ ನಿಜವಾದ ಚರಿತ್ರೆಯೆಂದರೆ ಅದು ಜನರ ಚರಿತ್ರೆ, ಆ ಚರಿತ್ರೆಯಲ್ಲಿ ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಜೀವನ ಸಮಸ್ಯೆಗಳು ಮತ್ತು ಜೀವನ ಮೌಲ್ಯಗಳು ಮುಂತಾದ ವಿವರಣೆಗಳಿರುತ್ತವೆ. ಇಂಥ ಜನರ ಚರಿತ್ರೆಯಲ್ಲಿ ರಾಜರ ಚರಿತ್ರೆಯೂ ಸೇರಿಕೊಂಡಿರುತ್ತದೆ. ಏಕೆಂದರೆ ರಾಜರು ಒಂದು ರಾಜ್ಯದಲ್ಲಿ ಬದುಕಿದ ಜನ ಸಮೂಹದ ಒಂದು ಭಾಗ ಮಾತ್ರವಷ್ಟೇ. ಆದರೆ ಶ್ರೇಣಿಕೃತ ಸಮಾಜ ವ್ಯವಸ್ಥೆಯಲ್ಲಿ ಇವರು ಮೇಲ್ತುದಿಯಲ್ಲಿ ಕಾಣಿಸಿಕೊಳ್ಳುತ್ತಾರೆ ಹಾಗೂ ಆಯಾ ರಾಜ್ಯದ ಜನರ ಚರಿತ್ರೆಯನ್ನು ಗೌಣವಾಗಿಸಿ ರಾಜ್ಯ ಚರಿತ್ರೆ ಎಂದರೆ ತಾವೇ ಎನ್ನುವಷ್ಟರಮಟ್ಟಿಗೆ ಚರಿತ್ರೆಯ ಮೇಲೆ ಪ್ರಭಾವ ಬೀರುತ್ತಾರೆ. ಇನ್ನೊಂದು ಅಂಶವೆಂದರೆ ಜನ ಎಂದರೆ ಯಾವ ಜನ ಎನ್ನುವ ಚಿಂತನೆಯನ್ನು ಮಾಡಬೇಕಾಗಿದೆ. ಏಕೆಂದರೆ ಜನರನ್ನು ಮೇಲ್ವರ್ಗದ ಜನರು ಮಧ್ಯಮ ವರ್ಗದ ಜನರು ಹಾಗೂ ಕೆಳವರ್ಗದ ಜನರು ಎಂಬುದಾಗಿ ವರ್ಣ, ಜಾತಿ, ವರ್ಗಗಳ ಆಧಾರದ ಮೇಲೆ ಭಾರತದ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಈಗಾಗಲೇ ವರ್ಗೀಕರಿಸಲಾಗಿದೆ.

ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವದ ಬಿಗಿಹಿಡಿತದಲ್ಲಿ ಸಿಕ್ಕಿಕೊಂಡ ಹಾಗೂ ಆ ಮೂಲಕ ಚರಿತ್ರೆಯ ಪ್ರತಿಯೊಂದು ಕಾಲಾವಧಿಯಲ್ಲಿಯೂ ಶೋಷಣೆಗೆ ಒಳಪಟ್ಟ ಜನರನ್ನು ಪ್ರಸ್ತುತ ಅಧ್ಯಯನದಲ್ಲಿ 'ಜನರು ಎನ್ನುವ ವ್ಯಾಖ್ಯಾನದೊಳಗೆ ಸೇರಿಸಿಕೊಳ್ಳಲಾಗಿದೆ. ಹಲವಾರು

ಒತ್ತಡ-ಒತ್ತಾಯಗಳಿಗೆ ಸಿಲುಕಿ ಇಂಥ ಜನರ ಒಟ್ಟಾರೆ ಅಭಿವೃದ್ಧಿ ಒಂದು ಹಂತಕ್ಕೆ ನಿಲ್ಲಬೇಕಾಗಿ ಬಂತು. ತಮ್ಮ ಇಷ್ಟಕ್ಕೆ ವಿರುದ್ಧವಾಗಿ ಜೀವಿಸಬೇಕಾದ ಒತ್ತಾಯಕ್ಕೂ ಒಳಗಾಗಬೇಕಾಯಿತು. ಇವರಿಗೆ ವ್ಯವಸ್ಥೆಯ ಬೆಂಬಲವಿರಲಿಲ್ಲ ಹಾಗೂ ಆಡಳಿತದಿಂದ ದೂರವೇ ಉಳಿಯಬೇಕಾಗಿತ್ತು. ಆದರೂ ತಮ್ಮ ಇರುವಿಕೆಯನ್ನು ಸ್ಥಾಪಿಸುವಲ್ಲಿ ಸಂಪ್ರದಾಯ ಮತ್ತು ಆಚರಣೆಯನ್ನು ಮುಂದುವರಿಸಿಕೊಂಡು ಬರುವಲ್ಲಿ ಈ ಜನರು ವಿಫಲರಾಗಲಿಲ್ಲ.[೧]

ಎರಡು ಬಗೆಯ ಆಕರಗಳನ್ನು ಪ್ರಮುಖವಾಗಿ ಬಳಸಿಕೊಳ್ಳಲಾಗುತ್ತದೆ. ಅವುಗಳಲ್ಲಿ ಮೊದಲನೆಯದರಲ್ಲಿ ಸಾಹಿತ್ಯಿಕ ಆಕರಗಳು, ಎರಡನೆಯದರಲ್ಲಿ ಪುರಾತತ್ವ ಆಕರಗಳನ್ನು ಕಾಣಬಹುದು. ಸಾಹಿತ್ಯಿಕ ಆಕರಗಳೆಂದರೆ ಧರ್ಮ, ಪುರಾಣ, ಪಂಥ, ಪ್ರಾಚಾರಿಕ ಲಿಖಿತ ದಾಖಲೆಗಳ ಜೊತೆಗೆ ರಾಜನ ಜೀವನ ಚರಿತ್ರೆ, ವಂಶಾಡಳಿತದ ಕಡತಗಳು ಮತ್ತು ಆಡಳಿತಕ್ಕೆ ಸಂಬಂಧಿಸಿದ ಸೃಜನಶೀಲ ಕಲ್ಪನೆಯಾಧಾರಿತ ಕೃತಿಗಳು. ಇವುಗಳು ಕಲ್ಪನೆಯಾಧಾರಿತ ಸೃಜನಶೀಲ ಕೃತಿಗಳು, ರಾಜವಂಶಗಳ ಅನುವಂಶಿಕ ಆಸ್ಥಾನ ಚರಿತ್ರೆಗಳು, ಆಡಳಿತ ಸಂಬಂಧಿ ದಾಖಲೆಗಳು ಮುಂತಾದವು. ಎರಡನೆಯದಾಗಿ ಪುರಾತತ್ವ ಆಕರಗಳು, ದೇವಸ್ಥಾನಗಳು, ಕಟ್ಟಡಗಳು, ದಿನಬಳಕೆಯ ವಸ್ತುಗಳು, ಆಯುಧಗಳು, ಅಲಂಕಾರಿಕ ವಸ್ತುಗಳು, ಕೈಕೆಲಸದ ಕಸುಬಿ ವಸ್ತುಗಳು ಮತ್ತು ಅವುಗಳ ಅವಶ್ಯಕತೆಗಳು ಮುಂತಾದವುಗಳು.

ಇವುಗಳನ್ನು ಹೊರತುಪಡಿಸಿದರೆ ರಾಜರೋ, ವ್ಯಾಪಾರಿಗಳೋ ಬರೆಸಿದ ಶಾಸನಗಳು, ಠಂಕಿಸಿದ ನಾಣ್ಯಗಳು, ಪ್ರಬಲ ಸಮುದಾಯದ ನಾಯಕರೋ ಅಥವಾ ಊರ ಮುಖಂಡ, ಅವನ ಹೆಂಡತಿ ಕಟ್ಟಿಸಿದ ಬಾವಿ, ಕೆರೆ, ಕುಂಟೆ, ಕಾಲುವೆ ಮುಂತಾವುಗಳಷ್ಟೆ ಅಲ್ಲದೆ ವೀರಗಲ್ಲು, ಮಾಸ್ತಿಗಲ್ಲು, ಗೋವುಗಲ್ಲುಗಳನ್ನು ಚರಿತ್ರೆಯ ಆಕರಗಳನ್ನಾಗಿ ಪರಿಗಣಿಸಿ ಚರಿತ್ರೆಯನ್ನು ರಚಿಸುವ ಪರಿಪಾಠವಿದೆ. ಮೊದಮೊದಲು ವೇದಗಳು, ಧರ್ಮಶಾಸ್ತ್ರಗಳು, ಪುರಾಣಗಳು, ಕಾವ್ಯಗಳು ಇವೇ ಮೊದಲಾದವುಗಳ ಆಧಾರದ ಮೇಲೆ ಮತೀಯ ಸಾಂಸ್ಕೃತಿಕ ಬರವಣಿಗೆಗಳನಷ್ಟೆ ಮೂಲವಾಗಿಸಿಕೊಂಡು ಅಲ್ಲಿಂದ ಒಂದಿಷ್ಟು ಇಲ್ಲಿಂದ ಒಂದಿಷ್ಟು ವ್ಯಾಖ್ಯಾನಗಳನ್ನು ಸಂಗ್ರಹಿಸಿ ನಮ್ಮ ಚರಿತ್ರೆ ಇಷ್ಟೇ ಎಂದು ವ್ಯಾಖ್ಯಾನಿಸಿ ಬರೆದು ಬಿಡಲಾಯಿತು. ಇವುಗಳ ಜೊತೆಗೆ ಪದಗಳನ್ನು ಪ್ರಮುಖವಾಗಿಸಿಕೊಂಡು ಅವುಗಳನ್ನು ಹಿಂಬಾಲಿಸಿ ಇಡೀ ಸಮುದಾಯದ ಜೀವನ ಪದ್ಧತಿಯನ್ನು ಭಾಷೆಯ ಹೋಲಿಕೆಯ ಆಧಾರದ ಮೇಲೆ ಶತಮಾನಗಳ ಚರಿತ್ರೆಯನ್ನು ಪುನರಚಿಸಿ ನೋಡುವ ಕ್ರಮವು ಕಾಲಾ ನಂತರದಲ್ಲಿ ಬಂದಿತು. ಕೇವಲ ಪುರಾಣಗಳಲ್ಲಿ ಪ್ರಸ್ಥಾಪಿತವಾದ ರಾಜವಂಶ ವಿವರಗಳನ್ನೊ. ಕಥೆಗಳನ್ನೊ ಸಂಗ್ರಹಿಸಿಕೊಂಡು ಅವೇ ವಾಸ್ತವಗಳೆಂಬಂತೆ ಸ್ವೀಕರಿಸಿ ಚರಿತ್ರೆಯನ್ನು ರಚಿಸಲಾಗಿದೆ.

ಆದ್ದರಿಂದಲೇ ಡಿ ಡಿ ಕೋಸಾಂಬಿಯವರು ಚರಿತ್ರೆಯನ್ನು ಕುರಿತು ಹೀಗೆ ಹೇಳುತ್ತಾರೆ. ಸಾಹಿತ್ಯ ಹಾಗೂ ಪುರಾತತ್ವಗಳೆರಡನ್ನು ಸಮನ್ವಯಗೊಳಿಸಿ ನೋಡಿ ನಮ್ಮ ದೇಶದ ಚರಿತ್ರೆಯನ್ನು ಪುನರಚಿಸುವುದು ಸಹ ಪರಿಪೂರ್ಣವಾಗುವುದಿಲ್ಲ. ಹಾಗೆಯೇ ಕೇವಲ ಬ್ರಾಹ್ಮಣ ಪುರಾಣಗಳನಷ್ಟೆ ಅಲ್ಲದೆ ಪೋಚಮ್ಮ, ಗಂಗಮ್ಮ ಮೊದಲಾದ ಗ್ರಾಮದೇವತೆಗಳನ್ನು ಕುರಿತು ಜನಪದರಲ್ಲಿ ಪ್ರಚಲಿತವಿರುವ ಕಥೆಗಳನ್ನು ಗಮನಿಸಿ ಚರಿತ್ರೆಯನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಏಕೆಂದರೆ ಇನ್ನಿತರ ಯಾವುದೇ ದೇಶಕ್ಕೆ ಇಲ್ಲದ ಒಂದು ಮಹತ್ವದ ಅನುಕೂಲ ಭಾರತ ದೇಶದ ಚರಿತ್ರೆಗೆ ಇದೆ. ನಮ್ಮ ಸಂಸ್ಕೃತಿಯು ಪ್ರತ್ಯೇಕತೆಯನ್ನು ಹೊಂದಿರುವುದು ಅದರ ಭಿನ್ನ ಕಾರಣವಾಗಿ; ಗತಕಾಲದಲ್ಲಿ ಆಗಿಹೋದ ಎಲ್ಲಾ ಸಾಮಾಜಿಕ ಬದಲಾವಣೆಗಳೂ ತಮ್ಮ ಮುದ್ರೆಗಳನ್ನು ನಮ್ಮ ಇಂದಿನ ಸಮಾಜದಲ್ಲೂ ಉಳಿದು ಬರುವಂತೆ ಒತ್ತಿವೆ. ಇವುಗಳನ್ನಾಧರಿಸಿ ನಮ್ಮ ಚರಿತ್ರೆಯನ್ನು ಗ್ರಹಿಸುವ ಸಾಧ್ಯತೆ ಉಪಯುಕ್ತವಾದುದ್ದು.[೨]

ನಮ್ಮ ಸಾಮಾಜಿಕ ಚರಿತ್ರೆಯಲ್ಲಿ ಉಂಟಾದ ಯಾವ ಬದಲಾವಣೆಯು ಸಂಪೂರ್ಣವಾಗಿಲ್ಲ. ಸುಮಾರು ಐದು ಸಾವಿರ ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಎಲ್ಲರೂ ಆಹಾರ ಸಂಗ್ರಹಣೆಯ ಜೀವನ ವಿಧಾನಗಳನ್ನೇ ಅನುಸರಿಸುತ್ತಿದ್ದವರೆ ಆಗಿದ್ದಾರೆ. ಆಗ ಅವರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಅಲೆಮಾರಿಗಳಾಗಿ ಸಿಕ್ಕ ಸಿಕ್ಕ ಪ್ರಾಣಿಗಳನ್ನು, ಪಕ್ಷಿಗಳನ್ನು ಬೇಟೆಯಾಡಿಕೊಂಡು ಸಿಕ್ಕಿದ್ದನ್ನು ತಿನ್ನುತ್ತಾ ಒಂದೆಡೆ ನಿಲ್ಲದೆ ಅಲೆಮಾರಿ ಜೀವನ ವಿಧಾನ ಅನುಸರಿಸುತ್ತಿದ್ದರು. ನಂತರದ ಕಾಲಘಟ್ಟದಲ್ಲಿ ಆಹಾರ ಸಂಗ್ರಹಣೆ ಕಾರ್ಯವನ್ನು ಆಹಾರ ಉತ್ಪಾದಿಸುವ ಕಾರ್ಯವಾಗಿ ಪರಿವರ್ತಿಸಿಕೊಂಡು ಬದುಕಲಾರಂಭಿಸಿದರು. ಈ ಉತ್ಪಾದನೆಯ ಕ್ರಿಯೆಯು ಪರಿವರ್ತನೆಗೊಳ್ಳದೆ ಈಗಲೂ ಮುಂದುವರೆದುಕೊಂಡು ಬರುತ್ತಿದೆ. ಇದು ಪ್ರಸ್ತುತವಾಗಿ ಐದು ಸಾವಿರ ವರ್ಷಗಳ ಚರಿತ್ರೆಯ ಕುರುಹುವಾಗಿ ಉಳಿದುಕೊಂಡು ಬರುತ್ತಿದೆ. ಈ ಆಹಾರ ಸಂಗ್ರಹಣೆಯ ಸ್ಥಿತಿಯನ್ನಾಧರಿಸಿದ ಕಾಡು ಬದುಕನ್ನು ಸಾಗಿಸುತ್ತಿರುವ ಎಷ್ಟೋ ಆದಿವಾಸಿ ಬುಡಕಟ್ಟು ಸಮುದಾಯಗಳು ಇಂದಿಗೂ ಉಳಿದುಕೊಂಡು ಬಂದಿವೆ. ಮತ್ತೊಂದು ಕಡೆ ಆಹಾರ ಸಂಗ್ರಹಣೆಯ ಹಂತದಿಂದ ಪರಿವರ್ತನೆಗೊಂಡು ಬಂದಿವೆ. ಹಾಗೆಯೇ ವ್ಯವಸಾಯದಲ್ಲಿ ತೊಡಗಿ ಕಬ್ಬಿಣದ ಸಲಕರಣೆಗಳನ್ನು ಬಳಸಿಕೊಂಡು ಒಂದು ಕಡೆ ನೆಲೆ ನಿಂತು ಗ್ರಾಮಗಳನ್ನು ರಚಿಸಿಕೊಂಡು ಭೂಮಿಯ ಮೇಲಿನ ಒಡೆತನ ಆರಂಭವಾಗಿ ಅನಾಗರಿಕ ಶಕ್ತಿಗಳು ನಾಗರಿಕ ವಿಧಾನಗಳಾಗಿ ರೂಪಾಂತರಗೊಂಡಿವೆ. ರೂಪಾಂತರಗೊಂಡು ಗ್ರಾಮಗಳಲ್ಲಿಯೂ ಆಹಾರ ಸಂಗ್ರಹಣೆಯ ಹಂತದಲ್ಲಿರುವ ಕಾಡುವಾಸಿ ಬದುಕನ್ನು ಸಾಗಿಸುತ್ತಿರುವ ಆದಿವಾಸಿಗಳ ಚರಿತ್ರೆ ಮಾತ್ರ ದಾಖಲೆ ಆಗಲು ಇಂದಿಗೂ ಸೋತಿದೆ.

ಭಾರತದ ಚರಿತ್ರೆ ಬರವಣಿಗೆಯಲ್ಲಿ ಹೆಚ್ಚಾಗಿ ಕಂಡುಬರುವುದು ಅರಸ ಕೇಂದ್ರಿತ ಸಂಸ್ಕೃತಿ, ವೈದಿಕ ಸಂಸ್ಕೃತಿ ಹಾಗೂ ವಸಾಹತು ಸಂಸ್ಕೃತಿ. ಈ ಎಲ್ಲಾ ಪದಗಳು ಹೆಚ್ಚು ಕಡಿಮೆ

ಒಂದೇ ರೇಖೆಯಲ್ಲಿ ಸಾಗಿದಂತಹವು. ಇವು ಚರಿತ್ರೆ ಮತ್ತು ಸಂಸ್ಕೃತಿ ಪದಗಳಿಗೆ ಸೀಮಿತ ಅರ್ಥವನ್ನು ನೀಡಿ ಏಕಮುಖವಾಗಿ ಬೆಳೆಯುವಂತೆ ಒತ್ತಡಗಳನ್ನು ಹೇರಿದವು. ಈ ಪ್ರಕ್ರಿಯೆಯನ್ನು ಅಧಿಕೃತಗೊಳಿಸುವ ಅಥವಾ ಶಾಸನಬದ್ಧಗೊಳಿಸುವ ರೀತಿಯಲ್ಲಿ ಕೃತಿಗಳು ರಚನೆಯಾದವು. ಇಂತಹ ಕೃತಿಗಳಲ್ಲಿ ಸ್ಥಳೀಯ ಚರಿತ್ರೆ ಮತ್ತು ಮೌಖಿಕ ಚರಿತ್ರೆ ಸ್ಥಾನವನ್ನು ಪಡೆದುಕೊಳ್ಳಲಿಲ್ಲ. ಚರಿತ್ರೆಯ ಈ ಏಕಮುಖ ಬೆಳವಣಿಗೆಗೆ ಜನಕೇಂದ್ರಿತ ಅಧ್ಯಯನದಿಂದ ಮಾತ್ರ ಕಡಿವಾಣ ಹಾಕಲು ಸಾಧ್ಯ. ಈ ಅಧ್ಯಯನ ಕ್ರಮಕ್ಕೆ ಮೌಖಿಕ ಸಾಹಿತ್ಯ ಹೆಚ್ಚಿನ ಮಟ್ಟಿಗೆ ಸಹಕಾರಿಯಾಗುತ್ತದೆ. ಜಾನಪದ ಕಥೆಗಳನ್ನು ಚರಿತ್ರೆಯ ನೆಲೆಯಿಂದ ಪರಿಭಾವಿಸಿಕೊಂಡಾಗ ಚರಿತ್ರೆಯನ್ನು ನೀಡುವ ದೃಷ್ಟಿ ಬದಲಾಗಲು ಸಾಧ್ಯ. ರಾಜಪ್ರಭುತ್ವದ ಮಾಧ್ಯಮಗಳಂತಿರುವ ಶಾಸನಗಳು ಸ್ಮಾರಕಗಳು ಹಾಗೂ ಅನೇಕ ಕಾವ್ಯಗಳಲ್ಲಿ ಜಾನಪದೀಯ ಅಂಶಗಳು ಕಂಡು ಬರುತ್ತವೆಯಾದರೂ ಅವು ಅರಸಕೇಂದ್ರಿತ ಚರಿತ್ರೆಗೆ ಪ್ರವೇಶ ಪಡೆದಿಲ್ಲ. ಮೌಖಿಕ ಆಕರಗಳಂತೆ ಅವು ನಿರ್ಲಕ್ಷ್ಯಕ್ಕೆ ಒಳಪಟ್ಟವು. ಈ ರೀತಿಯಾಗಿ ಅಲಕ್ಷಿತವಾದ ಆಕರಗಳನ್ನು ಒಂದೂಗೂಡಿಸಿ ಚರಿತ್ರೆ ನಿರ್ಮಾಣಕ್ಕೆ ಬಳಸಿಕೊಂಡಾಗ ಮಾತ್ರ ಅದೊಂದು ಸಂಸ್ಕೃತಿ ಅಧ್ಯಾಯವಾಗಿ ಮಾರ್ಪಡಲು ಸಾಧ್ಯ. ಜನರ ಕುರಿತ ಅಧ್ಯಯನ ನಡೆಸುವಾಗ ವಿವಿಧ ಪಂಥಗಳು ಯಾವ ಯಾವ ರೀತಿಯ ಜನರ ಅಧ್ಯಯನ ನಡೆಸಿವೆ ಎನ್ನುವುದನ್ನು ತಿಳಿಯುವುದು ಅನಿವಾರ್ಯವಾಗುತ್ತದೆ. ಆ ಹಿನ್ನೆಲೆಯಲ್ಲಿಯೇ ಚರಿತ್ರೆ ಬರವಣಿಗೆ ಮತ್ತು ವಿಶ್ಲೇಷಣೆಗೆ ಸಂಬಂಧಪಟ್ಟಂತೆ ಅನೇಕ ಪಂಥಗಳು ಹುಟ್ಟಿಕೊಂಡವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ವಸಹಾತು ಪಂಥ, ರಾಷ್ಟ್ರೀಯವಾದಿ ಪಂಥ, ಮಾರ್ಕ್ಸ್‌ವಾದಿ ಪಂಥ, ಸಬಾಲ್ಟರ್ನ್ ಪಂಥ ಹಾಗೆಯೇ ಆಧುನಿಕೋತ್ತರವಾದ ಹಾಗೂ ನವಚಾರಿತ್ರಿಕವಾದ ಸಂಸ್ಕೃತಿ ಚರಿತ್ರೆಯ ಅಧ್ಯಯನದ ಸಂದರ್ಭದಲ್ಲಿ ಈ ಪಂಥಗಳ ಹುಟ್ಟು ಹಾಗೂ ಸೈದ್ಧಾಂತಿಕ ನೆಲೆಗಳ ಕುರಿತು ಚರ್ಚೆ ಅಗತ್ಯವೆನಿಸುತ್ತದೆ. ಈ ಪಂಥಗಳ ಸಿದ್ಧಾಂತಗಳು ಮೇಲ್ನೋಟಕ್ಕೆ ಭಾರತದ ಚರಿತ್ರೆಗೆ ಸಂಬಂಧಿಸಿದಂತೆ ಕಂಡುಬಂದು, ಕರ್ನಾಟಕ ಚರಿತ್ರೆಗೆ ಇವುಗಳಿಂದ ನೇರವಾಗಿ ಪ್ರಭಾವಿತವಾಗಿವೆ.[೩]

ಹದಿನೆಂಟನೆಯ ಶತಮಾನದ ಆನಂತರದಲ್ಲಿ ಭಾರತದಲ್ಲಿ ವಸಾಹತು ಆಳ್ವಿಕೆ ಪ್ರಾರಂಭಗೊಂಡಿದ್ದರಿಂದ ಯುರೋಪಿನ ವಿದ್ವಾಂಸರು ಭಾರತದ ಚರಿತ್ರೆಗಳ ಶೋಧ ನಡೆಸಿದರು. ಇದಕ್ಕೆ ಪ್ರಮುಖವಾದ ಕಾರಣವೆಂದರೆ ತಮ್ಮ ಆಡಳಿತಾತ್ಮಕ ಅನುಕೂಲಕ್ಕೆ ಭಾರತದ ಆಚರಣೆ ಸಂಪ್ರದಾಯ ಮುಂತಾದ ವಿಚಾರಗಳನ್ನು ತಿಳಿದುಕೊಳ್ಳಬೇಕಾದ ಅನಿವಾರ್ಯತೆ ಅವರಿಗೆ ಇತ್ತು. ಆದ್ದರಿಂದಲೇ ಇವರು ಸಂಸ್ಕೃತ, ಪರ್ಶಿಯನ್, ಬಂಗಾಳಿ, ತಮಿಳು ಮುಂತಾದ ಭಾಷೆಗಳನ್ನು ಅಧ್ಯಯನ ಮಾಡಿದರು. ಹಾಗೂ ಭಾಷೆಗೆ ಅವಶ್ಯಕವಾದ ವ್ಯಾಕರಣ ಇನ್ನಿತರ ಸಾಮಾಗ್ರಿಗಳನ್ನು ಬರೆಯಲಾರಂಭಿಸಿದರು. ಇದರ ಫಲವಾಗಿಯೇ ಭಾರತದ ಕೆಲವು ಧರ್ಮಶಾಸ್ತ್ರಗಳು, ಸ್ಮೃತಿಗಳು ಮತ್ತೆ ಕೆಲವು ಸಾಮಾಜಿಕ ಕಟ್ಟು ಪಾಡುಗಳು ಹಾಗೂ ಕ್ರಿಯಾ

ವಿಧಿ ವಿಧಾನಗಳು ಅನುವಾದಗೊಂಡವು. ಇದಕ್ಕೆ ಭಾರತೀಯರೇ ತರಬೇತಿ ನೀಡಿರುವುದು ವಿಪರ್ಯಾಸದ ಸಂಗತಿಯಾಗಿದೆ.

ಭಾರತದ ಚರಿತ್ರೆ ಮಾತ್ರ ಯುರೋಪಿನ ವಿದ್ವಾಂಸರ ಚೌಕಟ್ಟಿನಲ್ಲಿ ಕಂಡು ಬರಲಿಲ್ಲ. ಅಂದರೆ ಒಂದು ಚಿಂತನೆ, ಒಂದು ಘಟನೆ ಒಬ್ಬ ವ್ಯಕ್ತಿಯಿಂದ ಸ್ಫೂರ್ತಿ ಪಡೆದು ಬದಲಾವಣೆಗೊಂಡಿದ್ದರ ಬಗ್ಗೆ ಇವರಿಗೆ ಮಾಹಿತಿ ಸಿಗಲಿಲ್ಲ. ಏಕೆಂದರೆ ಚರಿತ್ರೆ ಎಂದರೆ ಹೀಗೆ ಎಂಬ ಒಂದು ಸಿದ್ಧಮಾದರಿ ಯುರೋಪಿಯನ್ನರ ಮನದಲ್ಲಿತ್ತು. ಈ ಮಾನಸಿಕ ಧೋರಣೆಗೆ ಪುಷ್ಠಿ ನೀಡುವಂತೆ ಹನ್ನೆರಡನೆಯ ಶತಮಾನದಲ್ಲಿ ರಚನೆಗೊಂಡಿದ್ದ ಕಾಶ್ಮೀರದ ಬಿಲ್ಹಣ ರಚಿತ ರಾಜತರಂಗಿಣಿ ಸಿಕ್ಕಿತು. ಇದು ಹಿಂದೂ ಆಚರಣೆ ಮತ್ತು ಸಂಸ್ಕೃತಿಯನ್ನು ಮಾತ್ರ ಪ್ರತಿನಿಧಿಸುತ್ತಿದ್ದರಿಂದ ತುರ್ಕರು, ಆಫ್ಘಾನ್ನರು ಮತ್ತು ಮೊಘಲರು ಭಾರತೀಯರಲ್ಲವೆಂದು ಬಿಂಬಿಸಿ ಅವರ ಕಾಲದಲ್ಲಿ ಸಿಕ್ಕ ಎಲ್ಲಾ ದಾಖಲೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಹಿಂದೂ ಸಂಸ್ಕೃತ ಅಂಶಗಳನ್ನು ವಿಶ್ವ ಚರಿತ್ರೆಗೆ ಭಾರತದ ಕೊಡುಗೆ ಎಂಬಂತೆ ಎತ್ತಿ ತೋರಿಸಿ ಭಾರತದ ನಾಗರಿಕತೆಯನ್ನು ಕಟ್ಟುವುದಕ್ಕೆ ಸಂಬಂಧಿಸಿದಂತೆ ನೋಡಿದಾಗ ಭಾರತದಲ್ಲಿಯೇ ಜನ್ಮ ತಾಳಿದ ಇತರೆ ಧಾರ್ಮಿಕ ಮತ್ತು ಭಾಷಿಕ ಸಂಸ್ಕೃತಿಗಳಾದ ಬೌದ್ಧ ಧರ್ಮ, ಜೈನ ಧರ್ಮ ಅಥವಾ ಇಸ್ಲಾಂ ಧರ್ಮಗಳನ್ನು ತಕ್ಕಮಟ್ಟಿಗೆಯಾದರೂ ಪರಿಗಣನೆಗೆ ತೆಗೆದುಕೊಳ್ಳಲೇ ಇಲ್ಲ.[೪]

೧೯ನೇ ಶತಮಾನದ ಆರಂಭದಲ್ಲಿ "ಹಿಸ್ಟರಿ ಆಫ್ ಬ್ರಿಟಿಷ್ ಇಂಡಿಯಾ" ಕೃತಿಯನ್ನು ರಚಿಸಿದ ಜೇಮ್ಸ್ ಮಿಲ್ ಭಾರತದ ಚರಿತ್ರೆಯನ್ನು ಮೊಟ್ಟ ಮೊದಲಿಗೆ ಕಾಲ ವಿಭಜನೆ ಮಾಡಿದನು. ಭಾರತ ಗತವನ್ನು ಅವನು ಹಿಂದೂ ನಾಗರಿಕತೆ, ಮುಸ್ಲಿಂ ನಾಗರಿಕತೆ ಹಾಗೂ ಬ್ರಿಟಿಷ್ ಕಾಲ ಎಂದೂ ವಿಂಗಡಿಸಿದ್ದು ಭಾರತವನ್ನು ಅಧ್ಯಯನ ಮಾಡುವವರಿಗೆ ಮಾನದಂಡವಾಗಿ ನಿಂತು ಬಿಟ್ಟಿತು. ಈ ವಿಂಗಡಣೆಯು ಇವತ್ತಿಗೂ ತನ್ನ ಪ್ರಭಾವವನ್ನು ಬೀರುತ್ತಲೇ ಬಂದಿದೆ.

ಯುರೋಪಿನ ವಿದ್ವಾಂಸರಿಗೆ ಮಾಹಿತಿಯ ಮೂಲವಾಗಿದ್ದವರು ಹೆಚ್ಚಾಗಿ ಬ್ರಾಹ್ಮಣರೇ. ಏಕೆಂದರೆ ಪ್ರಾಚೀನ ಪರಂಪರೆಯನ್ನು ಸಂಸ್ಕೃತ ಕೃತಿಗಳಲ್ಲಿಯೇ ಸಂರಕ್ಷಿಸಲಾಗಿತ್ತು ಹಾಗೂ ಅದರ ಬಗ್ಗೆ ಜ್ಞಾನವುಳ್ಳವರು ತಾವೇ ಎಂದು ಸ್ವತಃ ಬ್ರಾಹ್ಮಣರೇ ಸಮರ್ಥಿಸಿಕೊಂಡು ಬಂದಿದ್ದರು. ಆ ಪ್ರಕಾರದಿಂದಲೇ ಭಾರತದ ಪ್ರಾಚೀನ ಚರಿತ್ರೆ ಪುನರಚನೆಯಾಗಿದ್ದು ಸಂಸ್ಕೃತ ಗ್ರಂಥಗಳಿಂದಲೇ ಹಾಗೂ ಅವುಗಳಲ್ಲಿ ವ್ಯಕ್ತವಾಗಿದ್ದ ಅಭಿಪ್ರಾಯಗಳು ಅವುಗಳ ಲೇಖಕರಾದ ಬ್ರಾಹ್ಮಣರಿಂದಲೇ ಆಗಿದ್ದವು. ಈ ಎಲ್ಲಾ ಕೃತಿಗಳೆಲ್ಲವೂ ಹೆಚ್ಚಾಗಿ ಧರ್ಮ ಮತ್ತು ಕ್ರಿಯಾ ವಿಧಾನಗಳ ಕುರಿತಾದವುಗಳಾದ್ದರಿಂದ ಪ್ರಾಚೀನ ಭಾರತವನ್ನು ಅತಿಶಯವಾಗಿ ನಿರೂಪಿಸಿದ್ದವು. ಬೇರೆ ಬೇರೆ ಉದ್ದೇಶವನಿಟ್ಟುಕೊಂಡು ರಚಿತವಾದ ಗ್ರಂಥಗಳು ಕೂಡ ಬ್ರಾಹ್ಮಣ ಲೇಖಕರು ಹಾಗೂ ಬರಹಗಾರರನ್ನು ಹೊಂದಿದ್ದವು. ಆದ್ದರಿಂದಲೇ ಇವುಗಳೆಲ್ಲವು ಅಧಿಕಾರದಲ್ಲಿದ್ದವರ ಪರವಾದ ಪೂರ್ವಗ್ರಹಗಳನ್ನು ಹೊಂದಿದ್ದವು.

ಯುರೋಪಿನ ವಿದ್ವಾಂಸರು ಭಾರತೀಯ ದೊರೆಗಳೆಂದರೆ ಪ್ರಜೆಗಳ ಪೀಡಕರು ಪ್ರಜೆಗಳ ಬಗ್ಗೆ ಕಾಳಜಿ ಇಲ್ಲದ ನಿರಂಕುಶವಾದಿಗಳು ಎಂದು ಬಿಂಬಿಸಿ ಚರಿತ್ರೆ ಬರೆದಿದ್ದರು. ಜೊತೆಗೆ ಇವರಿಗೆ ಚರಿತ್ರೆಯ ಪ್ರಜ್ಞೆಯಿಲ್ಲ. ಪೂರ್ವಜನ್ನರು ಅನಾಗರಿಕರು ಇವರಿಗೆ ಸಾಂಪ್ರದಾಯಿಕ ಜ್ಞಾನ ಎಂಬುವುದಿಲ್ಲ ಇವರಿಗೆ ಜ್ಞಾನ ಎಂಬುದು ಸಿಗಬೇಕಾದರೆ ಅದು ಪಶ್ಚಿಮದವರಿಂದ ಮಾತ್ರ ಸಾಧ್ಯ ಎಂಬ ಧೋರಣೆಯಿಂದ ಪೂರ್ವದೇಶವಾದ ಭಾರತದ ಚರಿತ್ರೆಯನ್ನು ಬರೆಯುವಲ್ಲಿ ತೊಡಗಿಸಿಕೊಂಡರು. ಇದೇ ಸಂದರ್ಭದಲ್ಲಿ ಭಾರತೀಯ ಮಧ್ಯಮ ವರ್ಗ ಇಂಗ್ಲಿಶ್ ಭಾಷೆಗೆ ತೆರೆದುಕೊಂಡಿತು. ಈ ವರ್ಗ ವಸಾಹತುಶಾಹಿಯ ಹಿನ್ನೆಲೆಯಿಂದ ರಚನೆಗೊಂಡ ಕೃತಿಗಳು ಹಾಗೂ ಮೂಡಿಬಂದ ಭಾವನೆಗಳನ್ನು ಸಮರ್ಥವಾಗಿ ಎದುರಿಸಲು ಸಿದ್ಧವಾಯಿತು. ಇವರು ಬ್ರಿಟಿಷ್ ವಸಹಾತುಶಾಹಿ ಆಳ್ವಿಕೆ ಕೊನೆಗಾಣಿಸಲು ನಡೆಯುತ್ತಿದ್ದ ಹೋರಾಟದ ಸಂದರ್ಭವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ದೇಶಪ್ರೇಮ ಮತ್ತು ರಾಷ್ಟ್ರಾಭಿಮಾನ ಮೂಡಿಸುವ ನಿಟ್ಟಿನಲ್ಲಿ ದೇಶದ ಗತವನ್ನು ದಾಖಲಿಸಲು ಪ್ರಾರಂಭಿಸಿ ಏನೂ ಸಿಗದೇ ಹೋದಾಗ ವೈಭವಯುತ ಮತ್ತು ಕೇಮ್ಸ್ ಮಿಲ್‌ನ ಧೋರಣೆಯಂತೆ ಭಾರತದ ಚರಿತ್ರೆಯನ್ನು ರಚಿಸಿದರು. ಇವರನ್ನೆ ರಾಷ್ಟ್ರೀಯವಾದಿ ಚರಿತ್ರೆಕಾರರು ಎಂದು ಕರೆಯುತ್ತಾರೆ. ಇವರಲ್ಲಿ ಪ್ರಮುಖವಾದವರುಗಳೆಂದರೆ ಆರ್ ಸಿ ಮಜುಂದಾರ್, ಹೇಮಚಂದ್ರ ರಾಯ್ ಚೌದರಿ, ಆರ್ ಜಿ ಭಂಡಾರ್‌ಕರ್, ಕೆ ಪಿ ಜೈಸ್ವಾಲ್, ಕೆ ಎ ನೀಲಕಂಠಶಾಸ್ತ್ರಿ, ಎ ಎಸ್ ಆಲ್ಟೆಕರ್ ಮುಂತಾದವರು.

ಹೀಗೆ ವಸಹಾತುಶಾಹಿ ಚರಿತ್ರೆಕಾರರಿಗೆ ಸ್ಪರ್ಧೆಯನ್ನು ನೀಡುವ ಭರದಲ್ಲಿ ರಾಷ್ಟ್ರೀಯವಾದಿ ಚರಿತ್ರೆಕಾರರು ಎಂದು ಕರೆಸಿಕೊಂಡ ವರ್ಗ ಅರಸು ಕೇಂದ್ರಿತ, ಪ್ರಭುತ್ವ ಕೇಂದ್ರಿತ ಚರಿತ್ರೆ ರಚಿಸುವಲ್ಲಿ ಸೀಮಿತಗೊಂಡರು, ಹೆಚ್ಚೆಂದರೆ ಇವರ ಬರವಣಿಗೆಗಳು ಪ್ರಭುತ್ವದೊಂದಿಗೆ ಸಂಬಂಧ ಹೊಂದಿದ್ದ ಆಯಾಕಾಲದಲ್ಲಿ ಪ್ರಚಾರದಲ್ಲಿದ್ದ ಧರ್ಮ ಮತ್ತು ಪಂಥಗಳನ್ನು ಅಧ್ಯಯನ ಮಾಡಿ ಸಮಾಜದಲ್ಲಿದ್ದ ಅಸಂಖ್ಯಾತ ಜಾತಿ, ವರ್ಗಗಳ ಬದುಕನ್ನು ಪರಿಗಣನೆಗೆ ತೆಗೆದುಕೊಳ್ಳದೆ ಕೇವಲ ಅರಸು ಮತ್ತು ಧರ್ಮವನ್ನು ಚಿತ್ರಿಸುವ ಭವ್ಯಮನೋಹರವಾದ ಚರಿತ್ರೆಯನ್ನು ರಚಿಸುವುದರಲ್ಲಿ ತೊಡಗಿದರು. ಇದರಿಂದಲೇ ಭಾರತದಲ್ಲಿ ಸುವರ್ಣಯುಗ ಕಲ್ಪನೆ, ವೈಭವ ಪ್ರೇರಿತ ಆಡಳಿತದಂತಹ ಹೊಗಳಿಕೆಯ ಚರಿತ್ರೆ ರಚನೆಗೊಂಡವು.

ರಾಷ್ಟ್ರೀಯವಾದಿ ಚರಿತ್ರೆಕಾರರು ಎಂದು ಕರೆಸಿಕೊಳ್ಳುವ ಇವರು ವಸಾಹತುಶಾಹಿ ಬರಹಗಾರರಾದ ಓರಿಯಂಟಲಿಸ್ಟ್ ಮತ್ತು ಸಾಮ್ರಾಜ್ಯಶಾಹಿ ಚರಿತ್ರೆಕಾರರ ಸಿದ್ಧಾಂತಗಳಿಂದ ಹೊರಬಂದವರೆ ಆಗಿದ್ದರು. ಆದ್ದರಿಂದಲೇ ಇವರುಗಳು ವಸಾಹತುಶಾಹಿ ಧೋರಣೆಯಾದ ಹಿಂದೂ ಮತ್ತು ಮುಸ್ಲಿಂ ಎಂಬ ಇಬ್ಬಗೆಯತನವನ್ನು ತನ್ನೊಳಗೆ ಸೇರಿಸಿಕೊಂಡೇ ಭಾರತದ ಚರಿತ್ರೆಯನ್ನು ರಚಿಸಿದರು. ಇವರು ಕೂಡ ಪ್ರಭುತ್ವಕೇಂದ್ರಿತವಾದ ಅರಸ, ಮಂತ್ರಿ, ಅಧಿಕಾರಿಗಳು, ರಾಜಪ್ರಭುತ್ವ, ದೇವರು, ಬ್ರಾಹ್ಮಣ ಮತ್ತು ದೇವಾಲಯಗಳನ್ನೊಳಗೊಂಡ ಚೌಕಟ್ಟಿನಲ್ಲಿಯೇ

ವೈಧಿಕ ಧರ್ಮ ಗ್ರಂಥಗಳ ಆಧಾರವಾಗಿಟ್ಟುಕೊಂಡು ಏಕ ಧರ್ಮ ಮತ್ತು ಏಕ ಭಾಷೆಯ ಭಾರತದ ಚರಿತ್ರೆಯನ್ನು ನಿರ್ಮಿಸಿ ಸಾಂಪ್ರದಾಯಿಕ ಬ್ರಾಹ್ಮಣ ಧರ್ಮವನ್ನು ಇನ್ನಷ್ಟು ಗಟ್ಟಿಗೊಳಿಸಿದರು. ಇದರ ಫಲವಾಗಿಯೇ ಈ ಸಾಂಪ್ರದಾಯಿಕ ಧೋರಣೆ ಇಲ್ಲದ್ದೂ ಭಾರತದ ಮೇಲಿನ ಎಲ್ಲಾ ಅಧ್ಯಯನಗಳು ನಿಯಂತ್ರಿಸುತ್ತಾ ಬರುತ್ತಿವೆ.

ಈ ಸೂಕ್ಷ್ಮತೆಯ ಬಗ್ಗೆ ಡಾ ಎನ್ ಚಿನ್ನಸ್ವಾಮಿ ಸೋಸಲೆ ಹೀಗೆ ಹೇಳುತ್ತಾರೆ. ಕೇವಲ ಒಂದು ವರ್ಗ, ಒಂದು ಧರ್ಮ, ಒಂದು ಭಾಷೆ ಮತ್ತು ಒಂದು ಸಂಸ್ಕೃತಿಯನ್ನು ಆಧಾರವಾಗಿಟ್ಟು ಕೊಂಡು, ಹಲವಾರು ಸಂಸ್ಕೃತಿ ಸಂಪ್ರದಾಯ ದಲಿತರು, ಮಹಿಳೆಯರು, ಅಲ್ಪಸಂಖ್ಯಾತರು, ಆದಿವಾಸಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದರು, ಆದರೂ ಕೂಡ ಇವರನ್ನು ರಾಷ್ಟ್ರೀಯವಾದಿ ಚರಿತ್ರೆಕಾರರು ಎಂದು ಕರೆಯಲಾಯಿತು. ಆದರೆ ಈ ರಾಷ್ಟ್ರೀಯವಾದಿ ಚರಿತ್ರೆಕಾರರು ಎನ್ನುವ ಹೆಸರು ಆ ಸಂದರ್ಭಕ್ಕೆ ಸೀಮಿತವೇ ವಿನಃ ಪ್ರಸ್ತುತ ಸಂದರ್ಭದವರೆಗೂ ಮುಂದುವರೆಸಿಕೊಂಡು ಬಂದಿರುವುದು ವಿಪರ್ಯಾಸ.[೫]

ಏಕೆಂದರೆ ಒಂದು ರಾಷ್ಟ್ರ ಎಂದರೆ ಮೇಲಿನದಷ್ಟೆ ಆಗಿಲ್ಲಾ. ಇಲ್ಲಿ ಎಲ್ಲಾ ರೀತಿಯ ಸಾಮಾಜಿಕ ವರ್ಗಗಳೂ ಬರುತ್ತವೆ. ಎಲ್ಲ ರೀತಿಯ ಜನರೂ ಬರುತ್ತಾರೆ. ಆದರೆ ಕೇವಲ ಒಂದು ವರ್ಗ, ಒಂದು ಚೌಕಟ್ಟಿಗೆ ಸೀಮಿತವಾದ ಬರವಣಿಗೆಯನ್ನು ರಾಷ್ಟ್ರೀಯವಾದಿ ಚರಿತ್ರೆ ಅಥವಾ ಈ ಚರಿತ್ರಾಕಾರರನ್ನು ರಾಷ್ಟ್ರೀಯವಾದಿ ಚರಿತ್ರೆಕಾರರು ಎಂದು ಹೇಳುವುದು ಎಷ್ಟು ಸರಿ. ಇದು ಕೇವಲ ಆ ಸಂದರ್ಭಕ್ಕೆ ಸೀಮಿತವೇ ಹೊರತು ಮುಂದುವರೆಸಿ ಇವತ್ತಿನ ಸಂದರ್ಭದಲ್ಲೂ ಅದೇ ಬಿರುದಿನಿಂದ ಸಂಬೋಧಿಸುವುದರಲ್ಲಿ ಅರ್ಥವಿಲ್ಲ.

ಕೇವಲ ಮೇಲ್ವರ್ಗದ ಅಥವಾ ಅರಸಕೇಂದ್ರಿತವಾದ ಧರ್ಮ ಮತ್ತು ಪ್ರಭುತ್ವ ಕೇಂದ್ರಿತವಾಗಿದ್ದ ಸಂದರ್ಭದಲ್ಲಿ ಚರಿತ್ರೆಯಲ್ಲಿ ಬದಲಾವಣೆ ಎಂಬುದು ಏನಾದರೂ ಸಂಭವಿಸಿದ್ದರೆ ಅದು ಪ್ರಭುತ್ವ ಮತ್ತು ಧರ್ಮದ ಪಾಲ್ಗೊಳ್ಳುವಿಕೆಗಿಂತ ಸಾವಿರಾರು ಜನಸಮುದಾಯಗಳ ಪರಿಶ್ರಮ ಕಾರಣ ಎಂದು ಹೇಳುತ್ತಾ, ಒಂದು ದೇಶದ ಅಥವಾ ಒಂದು ಪ್ರಭುತ್ವದ ಏಳುಬೀಳುಗಳಿಗೆ ಆರ್ಥಿಕ ಅಂಶಗಳು ಅತ್ಯಂತ ಪ್ರಮುಖವಾದದ್ದು. ಈ ಆರ್ಥಿಕ ಅಂಶಗಳಿಗೆ ದುಡಿಯುವ ವರ್ಗ ಕಾರಣ ಎಂಬ ಅಂಶವನ್ನಿಟ್ಟುಕೊಂಡು ಮಾರ್ಕ್ಸ್‌ವಾದ ಭಾರತವನ್ನು ಪ್ರವೇಶ ಮಾಡಿತು. ಇದರಿಂದ ಇಲ್ಲಿಯವರೆಗೆ ಅರಸು, ಧರ್ಮ ಮತ್ತು ಬ್ರಾಹ್ಮಣಕೇಂದ್ರಿತವಾಗಿದ್ದ ಚರಿತ್ರೆ ಮಾರ್ಕ್ಸ್‌ವಾದದ ಪ್ರಭಾವದಿಂದ ಸಮಾಜದ ಇತರೆ ವರ್ಗಗಳ ಕಡೆಗೂ ಗಮನ ಅರಿಸು ವಂತಾಯಿತು.

ಮಾರ್ಕ್ಸ್‌ವಾದವನ್ನು ಭಾರತದಲ್ಲಿ ಪ್ರಚಾರ ಪಡಿಸಿದವರಲ್ಲಿ ಪ್ರಮುಖರೆಂದರೆ ಡಿ ಡಿ ಕೋಸಾಂಬಿ, ಆರ್ ಎಸ್ ಶರ್ಮ, ರೋಮಿಲಾ ಥಾಪರ್, ಡಿ ಎನ್ ಝಾ, ಇರ್ಫಾನ್ ಹಬೀಬ್, ಬಿಪಿನ್ ಚಂದ್ರ, ಸುಮಿತ್ ಸರ್ಕಾರ ಮುಂತಾದವರು. ಇವರುಗಳು ಹೇಳುವಂತೆ

ಮಾರ್ಕ್ಸ್‌ವಾದವು ಸಮಾಜದ ಅರ್ಥವ್ಯವಸ್ಥೆ ಹಾಗೂ ಸಂಸ್ಕೃತಿಗಳು ಉತ್ಪಾದನಾ ವ್ಯವಸ್ಥೆಯಲ್ಲಿ ಈಡಾಗಿದ್ದ ವಿವಿಧ ಶಕ್ತಿಗಳು ಮತ್ತು ಅವುಗಳ ನಡುವಣ ಸಂಬಂಧಗಳಲ್ಲಿ ಆಗುತ್ತಾ ಬಂದಂತಹ ಮಾರ್ಪಾಡುಗಳ ಭಾಗವೇ ಆಗಿವೆ ಎಂಬುವುದನ್ನು ತಿಳಿಸಿಕೊಟ್ಟಿತು. ಇದು ವಸ್ತು ವಾದಕ್ಕೆ ಹೆಚ್ಚಿನ ಮನ್ನಣೆ ನೀಡಿ ಚರಿತ್ರೆಯ ತಳಹದಿಗೆ ಭೌತಿಕ ವಸ್ತುಗಳ ಉತ್ಪಾದನೆ ಕಾರಣವಾದರೆ ಚರಿತ್ರೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುವವರು ಆಭೌತಿಕ ವಸ್ತುಗಳನ್ನು ಉತ್ಪಾದಿಸುವ ದುಡಿಯುವ ವರ್ಗ ಎಂಬುದನ್ನು ಹೇಳುವ ಮೂಲಕ ಕಾರ್ಲ್‌ಮಾರ್ಕ್ಸ್ ಮತ್ತು ಫ್ರೆಡಾರಿಕ್ ಏಂಗಲ್ಸ್ ತಮ್ಮ ವಾದವನ್ನು ಪ್ರತಿಪಾದಿಸಿದರು. ಇವರು ಪ್ರಚಾರಪಡಿಸಿದ ಚಾರಿತ್ರಿಕ ವಸ್ತುವಾದ ಸಿದ್ಧಾಂತವು ಚರಿತ್ರೆ ಬರವಣಿಗೆಯಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನುಂಟು ಮಾಡಿದವು. ಚಾರಿತ್ರಿಕ ವಸ್ತವಾದವು ಚರಿತ್ರೆಯನ್ನು ಈ ರೀತಿಯಾಗಿ ವ್ಯಾಖ್ಯಾನಿಸುತ್ತದೆ. ಸಾಮಾಜಿಕ ಬೆಳವಣಿಗೆಯ ಚರಿತ್ರೆಯು ಎಲ್ಲಕ್ಕಿಂತ ಮಿಗಲಾಗಿ ಉತ್ಪಾದನೆಯ ಬೆಳವಣಿಗೆಯ ಚರಿತ್ರೆಯಾಗಿದೆ. ನೂರಾರು ವರ್ಷಗಳಿಂದ ಒಂದರ ಹಿಂದೆ ಇನ್ನೊಂದರಂತೆ ಅಸ್ತಿತ್ವಕ್ಕೆ ಬಂದ ಉತ್ಪಾದನಾ ಚರಿತ್ರೆ ಉತ್ಪಾದಕ ಶಕ್ತಿಗಳ ಹಾಗೂ ಜನತೆಯ ಉತ್ಪಾದನಾ ಸಂಬಂಧಗಳ ಚರಿತ್ರೆಯಾಗಿದೆ. ಆದುದರಿಂದ ಚರಿತ್ರೆಯು ಒಂದು ಯಥಾರ್ಥವಾದ ವಿಜ್ಞಾನವಾಬೇಕಾದರೆ ಸಾಮಾಜಿಕ ವಿಕಾಸದ ಚರಿತ್ರೆಯನ್ನು ರಾಜಮಹಾರಾಜರ, ಸೇನಾಧಿಪತಿಗಳ, ಆಕ್ರಮಣಕಾರಕ ಹಾಗೂ ಧಮನಕಾರಿಗಳ ಪರಾಕ್ರಮಗಳ ಮಿತಿಯೊಳಗೆ ಅದುಮಿ ಹಿಡಿಯಲು ಸಾಧ್ಯ.[೬]

ಮಾನವನ ಚರಿತ್ರೆಯನ್ನು ಗಮನಿಸಿದಾಗ ಆರಂಭದ ಕಾಲಘಟ್ಟದಲ್ಲಿ ಅಲೆಮಾರಿಯಾಗಿದ್ದ ಮಾನವ ಒಂದು ಕಡೆ ನೆಲೆ ನಿಂತು ಆಹಾರ ಉತ್ಪಾದನೆಗೆ ತೊಡಗಿಕೊಂಡಲ್ಲಿ ಅಲೆಮಾರಿ ಜೀವನ ವಿಧಾನದಿಂದ ಒಂದು ಕಡೆ ನೆಲೆನಿಲ್ಲುವ ಸ್ಥಿತಿಗೆ ಬಂದ ಮಾನವ ತನ್ನ ಆಹಾರ ಸಂಗ್ರಹಣೆ ಮತ್ತು ಉತ್ಪಾದನೆಯಲ್ಲಿ ಬದಲಾವಣೆಗಳನ್ನು ಮಾಡಿಕೊಂಡನು. ಇದರಿಂದ ಇವನ ಜೀವನ ವಿಧಾನವೇ ಬದಲಾಗಿ ಆಹಾರ ಸಂಗ್ರಹಣೆಗೆ ಮತ್ತು ಉತ್ಪಾದನೆ ಬಳಸುತ್ತಿದ್ದ ಉಪಕರಣಗಳು ಒರಟುತನದಿಂದ ನಯವಾಗಲಾರಂಭಿಸಿದವು. ಇದರಿಂದ ಉತ್ಪಾದನೆಯ ಕ್ರಮವು ಹೆಚ್ಚು ಹೆಚ್ಚು ಸುಧಾರಿಸುವುದರೊಂದಿಗೆ ಜೀವನಾವಶ್ಯಕ ವಸ್ತುಗಳನ್ನು ನಿರ್ಮಿಸುವ ಸಾಮರ್ಥ್ಯವನ್ನು ಮಾನವರು ಗಳಿಸಿಕೊಂಡರು. ಈ ಪರಿವರ್ತನೆಗಳು ಸಾಮಾಜಿಕ ಸಂಬಂಧಗಳು ವಿವಿಧ ರಾಜಕೀಯ ಸಂಘಟನೆಗಳಿಗೆ ಯುದ್ಧಗಳಿಗೆ ಕಾರಣವಾದವು.

ಈ ಹಿನ್ನೆಲೆಯಲ್ಲಿ ಉತ್ಪಾದನಾ ಸಲಕರಣೆಗಳು, ಉತ್ಪಾದನಾ ಕ್ರಮ ಹಾಗೂ ಉತ್ಪಾದನಾ ಸಂಬಂಧಗಳು ಒಂದು ದೇಶದ ಚರಿತ್ರೆಯನ್ನು ನಿರ್ಧರಿಸಿ ನಿರ್ಮಿಸುತ್ತವೆ. ಎಂದು ಚಾರಿತ್ರಿಕ ವಸ್ತುವಾದ ಹೇಳುತ್ತವೆ. ಎಂಬುದನ್ನು ಹೇಳುವ ಮೂಲಕ ಮಾರ್ಕ್ಸ್‌ವಾದ ವರ್ಗದ ಹಿನ್ನೆಲೆಯಲ್ಲಿ ಭಾರತದಲ್ಲಿ ಪ್ರಭುತ್ವದಿಂದ ದುಡಿಯುವ ವರ್ಗದ ಕಡೆಗೆ ಚರಿತ್ರೆಯ ದಿಕ್ಕನ್ನು ಬದಲಿಸಿತು. ಆದರೆ ಭಾರತ ವರ್ಗದ ಮಾನದಂಡದಲ್ಲಿ ಇರಲಿಲ್ಲ ಏಕೆಂದರೆ ಭಾರತದಲ್ಲಿ ಶ್ರೇಣಿಕರಣ

ವ್ಯವಸ್ಥೆ ಜಾರಿಯಲ್ಲಿದ್ದು ಜಾತಿಗಳಿಂದ ಆವರಿಸಿಕೊಂಡಿತು ಇದರಿಂದ ಮತ್ತೆ ಚರಿತ್ರೆಯಲ್ಲಿ ಭೂಮಿ ಹೊಂದಿರುವ ಕಾರ್ಮಿಕ ದುಡಿಯುವ ವರ್ಗಗಳು ಗುರುತಿಸಿಕೊಂಡವೇ ವಿನಃ ಭೂಮಿ ಇಲ್ಲದ ದಿನಗೂಲಿ ಮಾಡುವವರು, ದಲಿತರು, ಮಹಿಳೆಯರು ವ್ಯವಸಾಯವನ್ನೇ ಮಾಡದೇ ಕಾಡಿನೊಂದಿಗೆ ಬದುಕು ಕಂಡುಕೊಂಡಿದ್ದ ಆದಿವಾಸಿಗಳು ಚರಿತ್ರೆಯ ಮುನ್ನೆಲೆಗೆ ಬರಲು ಸಾಧ್ಯವಾಗಲೇ ಇಲ್ಲ. ಏಕೆಂದರೆ ಮಾರ್ಕ್ಸ್‌ವಾದ ಪಾಶ್ಚಿಮಾತ್ಯ ದೇಶದ ಸಾಮಾಜಿಕ ಅನುಕರಣೆಯಾಗಿತ್ತು. ಅಲ್ಲಿ ದುಡಿಯುವ ವರ್ಗ ಮತ್ತು ದುಡಿಸಿಕೊಳ್ಳುವ ವರ್ಗ ಕಂಡು ಬಂದರೆ ಭಾರತದಲ್ಲಿ ದುಡಿಯುವವರಲ್ಲಿಯೂ ಜಾತಿಗಳು ನಿರ್ಣಾಯಕ ಪಾತ್ರ ವಹಿಸುತ್ತವೆ ಇದನ್ನು ಮಾರ್ಕ್ಸ್‌ವಾದ ಗ್ರಹಿಸಲು ಸಾಧ್ಯವಾಗಲಿಲ್ಲ.

ಮಾರ್ಕ್ಸ್‌ವಾದಕ್ಕೆ ಪರ್ಯಾಯ ಎಂಬಂತೆ ಭಾರತ ಪ್ರವೇಶ ಮಾಡಿದ ಮತ್ತೊಂದು ಪಂಥವೆಂದರೆ ಸಬಾಲ್ಟ್ರ್ನ್ ಪಂಥ. ಇದನ್ನು ಮೊದಲು ಮಿಲಿಟರಿ ಶ್ರೇಣೀಕರಣದ ವ್ಯವಸ್ಥೆಯಲ್ಲಿ ನೆಲೆಗೊಂಡಿರುವ ಕೈಕೆಳಗಿನ ಇಲ್ಲವೆ ಅಧೀನ ಸಮೂಹಗಳನ್ನು ಸಬಲ್ಟರ್ನ್ ಎಂದು ಗುರುತಿಸಲಾಗಿತ್ತು ಎಂದು ಮೊಟ್ಟ ಮೊದಲಬಾರಿಗೆ ಗ್ರಾಮ್ಸಿಯು ತನ್ನ "ಪ್ರಿಸನ್ ನೋಟ್‌ಬುಕ್" ಎಂಬ ಹೊತ್ತಿಗೆಯಲ್ಲಿ "ನೋಟ್ಸ್ ಆನ್ ಇಟಾಲಿಯನ್ ಹಿಸ್ಟರಿ' ಎಂಬ ಮೂರನೆಯ ಪಸುಗೆಯಲ್ಲಿ ಈ ಸಬಾಲ್ಟ್ರ್ನ್ ಎಂಬ ಅರಿಮೆಯ ಪದವನ್ನು ಮಿಲಿಟರಿ ಸನ್ನಿವೇಶ ಹೊರತಾಗಿ ಸಂಸ್ಕೃತಿ ಓದಿನ ಕ್ರಮವಾಗಿಯು ಬಳಸಿರುವುದನ್ನು ಕಾಣಬಹುದು. ಶ್ರಮಿಕವರ್ಗ (ಪ್ರೊಲೆಟರಿಯೇಟ್ಸ್) ಎಂಬ ಪದಕ್ಕೆ ಸಾಟಿಯಾಗಿ ಅಂದರೆ ರಾಜಕೀಯ ದೋಷಿತ ನೆಲೆಗಳನ್ನು ಸಾಂಕೇತಿಕವಾಗಿ ಸೂಚಿಸಲು ಈ ಪದವನ್ನು ಗ್ರಾಮ್ಸಿ ಬಳಸಿದಾಗಿ ಹೇಳುತ್ತಾರೆ.[೭]

ಗ್ರಾಮ್ಸಿ ಅವರು ಅಭಿಪ್ರಾಯ ಪಡುವಂತೆ ಸಬಾಲ್ಟಾರ್ನ್ ಪಂಥವು ಇದುವರೆಗಿನ ಚರಿತ್ರೆಯ ಅಧ್ಯಯನವನ್ನು ನಿಜವಾದ ಚರಿತ್ರೆಯ ಕೇವಲ ಒಂದು ಭಾಗವಾಗಿದೆಯೆಂದು ಪರಿಗಣಿಸುತ್ತದೆ. ಸಮಾಜದ ಕೆಳವರ್ಗದ ಬಹುಸಂಖ್ಯಾತ ಜನರ ಚರಿತ್ರೆಯು ನಿಜವಾದ ಚರಿತ್ರೆಯಾಗಿದ್ದು ಅದು ಶೋಷಣೆಗೊಳಗಾಗಿದೆ ಎನ್ನುತ್ತಾರೆ.

ಅದೇ ರೀತಿಯಲ್ಲಿ ಗಾಯಿತ್ರಿ ಸ್ಪೀವಾಕ್ ಸಬಾಲ್ಟರ್ನ್ ಪದವನ್ನು ವಿವರಿಸುತ್ತಾ ಸಬಾಲ್ಟರ್ನ್ ಎಂಬುದು ಕೇವಲ ದಮನಿತ ವರ್ಗವನ್ನು ಇತರರನ್ನು ಒಂದು ಬಿಡಿಗಾಸಿಗೂ ಗತಿಯಿಲ್ಲದವರನ್ನು ಸೂಚಿಸುವಂತಹದಲ್ಲ. ವಸಾಹತ್ತೋತ್ತರ ಚಿಂತನೆಯ ಪ್ರಕಾರ ಎಲ್ಲಾ ರೀತಿಯಿಂದಲೂ ಯಾರು ಸಾಂಸ್ಕೃತಿಕ ಸಾಮ್ರಾಜ್ಯಶಾಹಿಯ ಯಾವುದೇ ಬಗೆಯ ರೆಪ್ರೆಸೆಂಟೇಶನ್ ಅವಕಾಶಗಳಿಂದ ವಂಚಿತವಾಗಿರುವರೋ ಇಲ್ಲವೇ ಅಂತಹ ಆವರಣದೊಳಗೆ ಯಾರಿಗೆ ಯಾವುದೇ ಬಗೆಯ ದಾರಿ ಇರುವುದಿಲ್ಲವೋ ಅವರನ್ನು ಸಬಾಲ್ಟರ್ನ್ ಎಂದು ಕರೆಯಬಹುದೆಂದು ಸ್ಪೀವಾಕ ವಾದಿ ಸುತ್ತಾರೆ.[೮]

ಸಬಾಲ್ಟರ್ನ್ ಚಿಂತನೆಯ ಮೂಲಕ ಇಲ್ಲಿಯವರೆಗೂ ಚರಿತ್ರೆಯಿಂದ ದೂರ ಸರಿದಿದ್ದ ಕೆಳಸ್ತರದ ಚರಿತ್ರೆಯು ರಚನೆಗೊಳ್ಳುವಂತಾಯಿತು. ಸಬಾಲ್ಟರ್ನ್ ಪಂಥವು ಹೇಳುವಂತೆ ಕೆಳಸ್ಥರದ ದಲಿತರ ಮತ್ತು ಆದಿವಾಸಿಗಳ ಚರಿತ್ರೆಯ ನಿರ್ಲಕ್ಷ್ಯಕ್ಕೆ ಮೇಲುಸ್ತರದ ಜನರ ಯಜಮಾನಿಕೆ ಕಾರಣವಾಗಿದೆ. ಈ ಯಜಮಾನಿಕೆ ಎಂಬುದು ಕೇವಲ ಒಂದು ಸಂದರ್ಭದಲ್ಲಿ ಹುಟ್ಟಿಕೊಂಡ ಸಾಂಸ್ಕೃತಿಕ ರಾಜಕೀಯ ಬೆಳವಣಿಗೆಯಾಗಿದೆ. ಈ ಯಜಮಾನಿಕೆಯು ಕೆಲವು ಸಂದರ್ಭದಲ್ಲಿ ಮನವೊಲಿಕೆಯ ರೂಪದಲ್ಲಿ ನಡೆದರೆ ಮತ್ತೆ ಕೆಲವು ಸಂದರ್ಭದಲ್ಲಿ ಬಲಪ್ರಯೋಗದ ಮೂಲಕ ನಡೆಯುತಿತ್ತು ಎಂಬುದನ್ನು ವಿವರಿಸುತ್ತದೆ.

ಒಟ್ಟಾರೆಯಾಗಿ ಸಬಾಲ್ಟರ್ನ್ ಪಂಥವು ಚರಿತ್ರೆಯಲ್ಲಿ ಗುರುತಿಸಿಕೊಳ್ಳದೆ ಇದ್ದ ಜನರನ್ನು ಚರಿತ್ರೆಯ ಕೇಂದ್ರ ಬಿಂದುವಾಗಿಸಿಕೊಂಡು ಅಧ್ಯಯನ ಮಾಡಿತು. ಈ ಚಿಂತನೆಗೆ ಒಂದು ನಿರ್ದಿಷ್ಟ ಚೌಕಟ್ಟು ಹಾಕಿಕೊಟ್ಟವರೆಂದರೆ ರಣಜಿತ್ ಗುಹಾ, ಪಾರ್ಥ ಚಟರ್ಜಿ, ಗ್ಯಾನೇಂದ್ರ ಪಾಂಡೇ, ಡೇವಿಡ್ ಅರ್ನಾಲ್ಡ್, ಡೇವಿಡ್ ಹರ್ಡಿಮನ್, ದೀಪಕ್ ಚಕ್ರವರ್ತಿ ಮುಂತಾದವರು. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಯಾರು ಯಾರನ್ನು ಸಬಾಲ್ಟರ್ನ್ ಎಂದು ಕರೆಯುತ್ತಾರೆ? ಯಾಕೆ ಹಾಗೆ ಕರೆಯುತ್ತಾರೆ? ಹಾಗೆ ಕರೆಯುವುದಕ್ಕೆ ಯಾವ ತಾತ್ವಿಕ ನೆಲೆಯನ್ನು ಅನುಸರಿಸುತ್ತಾರೆ? ಅಲಕ್ಷಿತ ಸಮುದಾಯಗಳ ಪ್ರತಿರೋಧದ ಬಗೆ ಎಂತಹದು? ಆ ಪ್ರತಿರೋಧಕ್ಕೆ ಪ್ರೇರಣೆ ಎಲ್ಲಿಂದ ಹುಟ್ಟಿಕೊಳ್ಳುತ್ತದೆ? ಅದು ಅವರೊಳಗಿನಿಂದಲೇ ಬರುವಂತಹದೋ ಇಲ್ಲವೇ ಹೊರಗಿನ ಪ್ರಭಾವಗಳಿಂದ ರೂಪುಗೊಳ್ಳುವಂತಹದ್ದೋ ಎಂಬ ತಾತ್ವಿಕ ಸಂಗತಿಗಳು ಇಲ್ಲಿ ಅತ್ಯಂತ ಮುಖ್ಯವಾಗುತ್ತದೆ. ಹಾಗಾಗಿ ರಣಜಿತ್ ಗುಹಾ ಮುಂತಾದ ವರು ಕಟ್ಟಿಕೊಟ್ಟ ತಾತ್ವಿಕ ಚೌಕಟ್ಟುಗಳನ್ನು ಮರು ಪರಿಶೀಲಿಸುವ ಅಗತ್ಯ ಎದ್ದು ಕಾಣುತ್ತದೆ. ಅದಕ್ಕೆ ಗಾಯಿತ್ರಿ ಚಕ್ರವರ್ತಿಸ್ಪೀವಾಕ ಅವರು "ಸಬಲ್ಟರ್ನ್ ಮಾತನಾಡ ಬಲ್ಲರೆ ಎಂಬ ಕೇಳ್ವಿಗೆ ಎದುರಾಗಿ ನಾವು ಸಬಾಲ್ಟರ್ನ್ ಅವರ ಕೇಳುವಿಕೆಯನ್ನು ಕೇಳಿಸಿಕೊಳ್ಳುತ್ತೇವೆಯೇ? ಎಂಬ ಮರು ಕೇಳಿವೆಯೊಂದು ಹುಟ್ಟಿಕೊಂಡಿತು. ಇಂತಹ ನಿಲುವುಗಳಿಗೆ ಹೇಗೆ ಪ್ರತಿಕ್ರಿಯಿಸಬೇಕು ಎನ್ನುವ ಸಂಗತಿ ಮಹತ್ವವನ್ನು ಪಡೆಯುತ್ತದೆ. ಆದರೆ ಯಾಕೆ ಹೇಗೆ ಎಂಬ ಕೇಳ್ವಿಕೆಯು ಅಷ್ಟೇ ಮಹತ್ವದ್ದು ಆಗಿದೆ. ಹಾಗಾಗಿ ಈ ಎಲ್ಲ ಚರ್ಚೆಗಳನ್ನು ಗಮನದಲ್ಲಿಟ್ಟುಕೊಂಡು ಸಬಾಲ್ಟರ್ನ್ ಓದಿನ ಬಗೆಗೆ ಚರ್ಚಿಸುವ ಅಗತ್ಯ ಹೆಚ್ಚು ಪ್ರಸ್ತುತವಾದುದು.[೯]

ಭಾರತದ ಚರಿತ್ರೆಯಲ್ಲಿ ಕಂಡು ಬರುವ ಮತ್ತೊಂದು ಪ್ರಮುಖವಾದ ವಾದವೆಂದರೆ ಆಧುನಿಕೋತ್ತರವಾದ. ಈ ಚಿಂತನೆಯು ಚರಿತ್ರೆಯಲ್ಲಿ ಈಗಾಗಲೇ ಇರುವ ಸಿದ್ಧ ಮಾದರಿಗಳನ್ನು ನಿರಾಕರಿಸುತ್ತಾ. ಚರಿತ್ರೆ ಎಂದರೆ ಅದಕ್ಕೆ ಒಂದು ನಿರ್ದಿಷ್ಟ ಮಾದರಿಯಿಲ್ಲ, ನಿರ್ದಿಷ್ಟವಾದ ಒಂದು ಸತ್ಯವಿಲ್ಲ ಎನ್ನುವ ಜೊತೆಗೆ ಚರಿತ್ರೆ ಎಂಬುದು ಹಲವಾರು ಮಾದರಿ ಮತ್ತು ಬಹು ಸತ್ಯಗಳಿಂದ ಕೂಡಿದೆ. ಸಂಶೋಧಕರು ತನ್ನ ಮನದಲ್ಲಿನ ಒಂದು ಮಾದರಿಯನ್ನು ಚರಿತ್ರೆ

ರಚನೆಯಲ್ಲಿ ಬಳಸದೆ ಜಾಗರೂಕತೆಯಿಂದ ಬಹು ಸತ್ಯವನ್ನು ಹುಡುಕುವ ಕೆಲಸ ಮಾಡಬೇಕು ಎನ್ನುವುದನ್ನು ಕುರಿತು ಪ್ರತಿಪಾದಿಸುವುದೇ ಆಗಿದೆ.

ಚರಿತ್ರೆಯಲ್ಲಿ ಮೇಲು ನೋಟಕ್ಕೆ ಇದೇ ಖಚಿತ, ನಿಖರ ಸತ್ಯ ಎಂದು ಕಂಡು ಬಂದರೂ ಅದು ಸತ್ಯದ ಒಂದು ರೂಪಕವೇ ವಿನಃ ಅದೇ ಸತ್ಯವಾಗಿರುವುದಿಲ್ಲ. ಅದ್ದರಿಂದ ಈ ಎಲ್ಲಾ ಸತ್ಯಗಳನ್ನು ಹುಡುಕಿ ಸಿದ್ದ ಮಾದರಿಯನ್ನು ನಿರಾಕರಿಸಿ ಪರ್ಯಾಯವಾದ ಅಧ್ಯಯನ ಮಾದರಿಗಳನ್ನು ಕಟ್ಟಬೇಕಾದ ಅನಿವಾರ್ಯತೆ ಇದೆ ಎಂಬುದನ್ನು ತೋರಿಸಿಕೊಡುವ ಕೆಲಸವನ್ನು ಈ ಚಿಂತನೆ ಮಾಡಿತು. ಇದನ್ನು ಡಿರಿಡಾ, ಫೂಕೋ ಮುಂತಾದವರು ಹುಟ್ಟುಹಾಕಿ ಪ್ರಚಾರಮಾಡಿದರು,

ಎಪ್ಪತ್ತರ ದಶಕದಲ್ಲಿ ಚರಿತ್ರೆಯ ಬರವಣಿಗೆ ಕ್ರಮಕ್ಕೆ ಮತ್ತೊಂದು ಪಂಥ ಸೇರ್ಪಡೆಗೊಂಡಿತು. ಇದೇ ನವಚಾರಿತ್ರಿಕವಾದ. ಈ ಪಂಥವನ್ನು ಅಮೆರಿಕಾದಲ್ಲಿ New Historieism ಎಂದೇ ಕರೆಯಲಾಗುತ್ತದೆ. ಈ ಚಿಂತನೆಯನ್ನು ಪ್ರಾನ್ಸಿನ ಬುದ್ಧಿಜೀವಿಗಳು ಹುಟ್ಟು ಹಾಕಿದರು. ಈ ಚಿಂತನೆಯ ತಿರುಳೆಂದರೆ ಮಾನವನ ಮನೋ ಚಟುವಟಿಕೆಗಳನ್ನು ಗ್ರಹಿಸುವುದು. ಹಾಗೆಯೇ ಸಾಹಿತ್ಯದ ಪಾಠವೊಂದು ಚಾರಿತ್ರಿಕ ಸಂದರ್ಭದಲ್ಲಿ ಬೆರೆತು ಅನ್ಯೋನ್ಯ ಸಂಬಂಧವನ್ನು ಪಡೆದಿರುತ್ತವೆ ಎಂಬುದಾಗಿದೆ.[೧೦]

ಸಾಹಿತ್ಯವನ್ನು ಸೌಂದರ್ಯ ಮೀಮಾಂಸೆಯ ಹಿನ್ನೆಲೆಯಲ್ಲಿ ನೋಡುವ ಬದಲು ಸಾಂಸ್ಕೃತಿಕ ಪಠ್ಯಕ್ಕೆ ಕಾಲಾನುಕ್ರಮದ ಮೌಲ್ಯಮಾಪನದ ಹಿನ್ನೆಲೆಯಲ್ಲಿ ಚರಿತ್ರೆಯೊಂದಿಗೆ ಮೇಳೈಸಿ ನೋಡುವುದರ ಜೊತೆಗೆ ಆಗಿದೆ. ಚರಿತ್ರೆಯನ್ನು ಇತರೆ ಜ್ಞಾನ ಶಿಸ್ತುಗಳ ಹಿನ್ನೆಲೆಯಿಂದ ನೋಡುವ ಕ್ರಮವು ನವಚಾರಿತ್ರಿಕ ವಾದದ ತಿರುಳಾಗಿದೆ. ಈ ಚಿಂತನೆಯಲ್ಲಿ ಸಾಹಿತ್ಯ ಮತ್ತು ಸಾಹಿತ್ಯೇತರ ಎಂಬ ಸರಣಿಯನ್ನು ವಿರೋಧಿಸುತ್ತದೆ. ಹಾಗೆಯೇ ಸಾಹಿತ್ಯದಲ್ಲಿರುವ ಸಾಂಸ್ಕೃತಿಕ ಅಂಶಗಳಿಗೆ ಮಹತ್ವಕೊಟ್ಟು ಅವುಗಳನ್ನು ಎಳೆಎಳೆಯಾಗಿ ಅಭ್ಯಸಿಸುತ್ತದೆ. ಚರಿತ್ರೆ ಎಂಬುದು ಕೇವಲ ಗತವನ್ನು ಗ್ರಹಿಸುವ ಮೊತ್ತವಲ್ಲ ಅದು ವಾಸ್ತವಿಕತೆಗಳನ್ನು ಹೇಳುವ ನಿರಂತರತೆಯ ಪ್ರಕ್ರಿಯೆ ಎಂಬುವುದನ್ನು ನವ ಚಾರಿತ್ರಿಕವಾದ ಒತ್ತಿ ಹೇಳಿತು.

ಸ್ಥಳೀಯ ಚರಿತ್ರೆಗಳು ವಿಶ್ವಾತ್ಮಕ ಸ್ವರೂಪವನ್ನು ಪಡೆಯುವಂಥವುಗಳಾಗಿದ್ದು, ಇವುಗಳು ಸಂರಚನೆಗೊಳ್ಳುವುದು ಸಾಹಿತ್ಯದ ಮೂಲಕವೇ ಆಗಿದೆ. ವಸಾಹತುಶಾಹಿ ಸ್ಥಿತ್ಯಂತರಗಳು ಕೇವಲ ಮನೋ ಚಟುವಟಿಕೆಗಳನ್ನು ಮಾತ್ರ ನಾಶ ಪಡಿಸದೇ ಸಂಸ್ಕೃತಿಗಳನ್ನು ನಾಶಮಾಡುತ್ತದೆ. ಸಾಂಸ್ಕೃತಿಕ ಮಹತ್ವವುಳ್ಳ ವರ್ಗ, ಲಿಂಗ, ಜನಾಂಗ, ಸಮಾಜ ಇತ್ಯಾದಿ ಗ್ರಹಿಕೆಯ ಮೂಲಕವೇ ಸಾಂಸ್ಕೃತಿಕ ವಿಭಿನ್ನ ಸ್ತರಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಅಲ್ಲದೆ ಸಾಹಿತ್ಯ, ಸಮಾಜ

ಚರಿತ್ರೆ ಅಧಿಕಾರ ಜ್ಞಾನ ಮೊದಲಾದವು ಸಂಸ್ಕೃತಿಯ ಹಲವು ವಿನ್ಯಾಸಗಳಾಗಿರುತ್ತವೆ. ಇಂತಹ ಸೂಕ್ಷ್ಮತೆಗಳನ್ನು ಚರಿತ್ರೆಕಾರರಿಗೆ ನವ ಚಾರಿತ್ರಿಕವಾದ ತೋರಿಸಿಕೊಡುತ್ತದೆ.

ಒಟ್ಟಾರೆಯಾಗಿ ಈ ಚಿಂತನೆಯು ಚರಿತ್ರೆಯನ್ನು ವರ್ತಮಾನದ ಕಥನವನ್ನಾಗಿಸದೆ ಗತದ ಚೌಕಟ್ಟನ್ನು ಮುರಿಯುವ ಪ್ರಯತ್ನ ಮಾಡಿತು. ಚರಿತ್ರೆಯನ್ನು ಸಾಂಸ್ಕೃತಿಕ ಚರಿತ್ರೆಯನ್ನಾಗಿಸುವ ಹಾಗೂ ಸಾಹಿತ್ಯವನ್ನು ಚರಿತ್ರೆಯ ಭಾಗವಾಗಿಸುವ ಪ್ರಯತ್ನಗಳಲ್ಲಿ ನವ ಚಾರಿತ್ರಿಕವಾದದಿಂದಲೇ ಸಾಧ್ಯವಾದದ್ದು. ಗ್ರೀನ್ ಬ್ಲಾಟ್, ಪೂಕೋ, ಜಾಕ್ಯೂಸ್, ಡಾನ್ ಜೇಲಟ್ ಮುಂತಾದವರು ನವ ಚಾರಿತ್ರಿಕವಾದವನ್ನು ಪ್ರಚುರ ಪಡಿಸುತ್ತಿದ್ದಾರೆ.

ಯುರೋಪಿನಲ್ಲಿ ಉಂಟಾದ ಸಾಮ್ರಾಜ್ಯಶಾಹಿ ರಾಜಕಾರಣ ಶೈಕ್ಷಣಿಕ ಕ್ಷೇತ್ರದಲ್ಲಿ ಉಂಟಾದ ಜ್ಞಾನ ಕ್ರಾಂತಿಯು ಕೇವಲ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಬದಲಾವಣೆ ಉಂಟು ಮಾಡದೆ ಸಮಾಜದಲ್ಲಿ ಹೊಸ ಹೊಸ ಸಿದ್ಧಾಂತಗಳನ್ನು ಹುಟ್ಟುಹಾಕಿತು. ಈ ಆವಿಷ್ಕಾರದ ಫಲವಾಗಿ ಹೊಸ ಹೊಸ ಜಲಮಾರ್ಗಗಳ ಕಾರ್ಯ ಆರಂಭವಾಯಿತು. ಯುರೋಪಿನಲ್ಲಿ ಉತ್ಪಾದನೆಗೊಳ್ಳುತ್ತಿದ್ದ ಸರಕು ಮತ್ತು ಸೇವೆಗಳು ಮಾರುವುದು ಮತ್ತು ಉತ್ಪಾದನೆ ಪ್ರಮಾಣವನ್ನು ಹೆಚ್ಚಿಸಲು ಸಾಧ್ಯವಾಯಿತು. ಹೀಗೆ ಹೋದಲೆಲ್ಲ ತಮ್ಮ ಸೈನ್ಯದ ಮೂಲಕ ವಸಹಾತು ನಿರ್ಮಾಣ ಮಾಡಿ ಸೋತ ಅಧೀನ ದೇಶಗಳಲ್ಲಿ ತಮ್ಮ ರಾಜಕೀಯ ಆಳ್ವಿಕೆ ನಿರಂತರಗೊಳಿಸಿ ತಮ್ಮ ಆಳ್ವಿಕೆ ಮಾಡಲು ಪ್ರಾರಂಭಿಸಿದರು. ಆಗ ಸಮಾಜ ವಿಜ್ಞಾನಗಳು, ಅನೇಕ ಜ್ಞಾನಶಿಸ್ತುಗಳು ಈ ದೇಶಗಳ ನೆರವಿಗೆ ಬಂದವು. ಈ ಜ್ಞಾನ ಶಿಸ್ತುಗಳ ಮೂಲಕ ಅಧೀನ ದೇಶಗಳ ಜನರನ್ನು ಮತ್ತು ಸಮಾಜವನ್ನು ಅಧ್ಯಯನ ಮಾಡಲಾರಂಭಿಸಿದರು.

ಆದರೆ ರಾಜಕೀಯ ಉದ್ದೇಶಗಳ ಈಡೇರಿಕೆಗಾಗಿಯೇ ರೂಪುಗೊಂಡ ಇವರ ಶೈಕ್ಷಣಿಕ ವಿಧಾನವು ಅಧ್ಯಯನ ಮಾಡುವ ಸಮಾಜವನ್ನು ಅರ್ಥ ಮಾಡಿಕೊಳ್ಳುವಲ್ಲಿ ವಿಫಲವಾಯಿತು. ಏಕೆಂದರೆ ಇವರ್‍ಯಾರೂ ಮೂಲತಃ ಶೈಕ್ಷಣಿಕ ಕ್ಷೇತ್ರದ ಮೇದಾವಿಗಳಾಗಿರಲಿಲ್ಲ. ಬದಲಾಗಿ ಬೇರೆ ಬೇರೆ ಉದ್ದೇಶಗಳನ್ನಿಟ್ಟುಕೊಂಡು ಇಂಡಿಯಾಕ್ಕೆ ಬಂದ ಕಂಪನಿ ಅಧಿಕಾರಿಗಳೇ ಆಗಿದ್ದರು. ಮುಂದೆ ಇವರನ್ನು ಮಾನವಶಾಸ್ತ್ರಜ್ಞರಾಗಿ ರೂಪಾಂತರಿಸಿ ಭಾರತದಲ್ಲಿ ಸಮಾಜ ಅಧ್ಯಯನ ಮಾಡಲು ಕಳುಹಿಸಲಾಯಿತು. ಅಂಥರವರಲ್ಲಿ ಪ್ರಮುಖರೆಂದರೆ ರಿಸ್ಲೆ, ಎಂಥೋವನ್, ಥರ್ಸ್ಟನ್ ಮತ್ತು ಪಾಸೆಟ್ ಮುಂತಾದವರು.

ಹೀಗೆ ಮಾನವಶಾಸ್ತ್ರಜ್ಞರಾಗಿ ರೂಪಾಂತರಗೊಂಡ ಈ ಅಧಿಕಾರಿಗಳು ಮುಂದೆ ಭಾರತದ ವೈವಿಧ್ಯಮಯವಾದ ಸಮುದಾಯಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಸೋತ ಇವರು ನಾಗರಿಕತೆ ಎನ್ನುವ ಭ್ರಮನಿರಸನವನ್ನು ಮಾನದಂಡವಾಗಿಟ್ಟುಕೊಂಡಿದ್ದ ವಸಾಹತುಶಾಹಿ ಮಾನಶಾಸ್ತ್ರಜ್ಞರೂ ಆಳುವ ವರ್ಗದ ಸಂಸ್ಕೃತಿಯೇ ನಾಗರಿಕತೆಯ ಸಂಕೇತ ಎಂದು ಗ್ರಹಿಸಿಕೊಂಡು

ಭಾರತವನ್ನು ನೋಡಲು ಮುಂದಾದರು. ಆಗ ಈ ಭಾರತದ ಜನಸಮುದಾಯಗಳು ಇವರ ಕಣ್ಣಿಗೆ ಅನಾಗರಿಕ, ಅಜ್ಞಾನ ಮತ್ತು ಅಂಧಕಾರಿಗಳಾಗಿ ಕಂಡರು. ಇದನ್ನು ಸದುಪಯೋಗಪಡಿಸಿ ಕೊಂಡು ಇವರನ್ನು ಜೀತದಾಳುಗಳನ್ನಾಗಿ ಮಾಡಿಕೊಂಡರು. ಇದು ಇಡೀ ಭಾರತದ ಸಾಮಾಜಿಕ ವ್ಯವಸ್ಥೆಯನ್ನು ಅಲುಗಾಡಿಸಿ ಇದರ ಪ್ರಭಾವ ಬುಡಕಟ್ಟುಗಳ ಮೇಲೆ ಉಂಟಾಗಿ ಅರಣ್ಯ ನೀತಿಗಳಿಂದ ತಮ್ಮದೇ ಜಾಗದಲ್ಲಿ ಕದ್ದು ಬದುಕುವಂತಾಯಿತು. ಈ ವ್ಯವಸ್ಥೆ ಭಾರತ ಸ್ವತಂತ್ರ ಪಡೆದ ಮೇಲೂ ಮುಂದುವರಿಯಿತು.

ಬ್ರಿಟಿಶ್ ಪ್ರಭುತ್ವ ಬುಡಕಟ್ಟುಗಳ ಬಗ್ಗೆ ಹುಟ್ಟು ಹಾಕಿದ್ದ ಮನೋಧೋರಣೆಯನ್ನು ಸ್ವಾತಂತ್ರ್ಯ ನಂತರ ನಮ್ಮವರೇ ಆದ ಅಧಿಕಾರಿಗಳು ಮುಂದುವರೆಸಿಕೊಂಡು ಬುಡಕಟ್ಟುಗಳನ್ನು ಸದಾ ಅನುಮಾನದಿಂದಲೇ ನೋಡುವ, ಜೊತೆಗೆ ಬುಡಕಟ್ಟುಗಳನ್ನು ಕೈಗಾರಿಕಾ ಕ್ರಾಂತಿ, ಡ್ಯಾಮ್‌ಗಳ ನಿರ್ಮಾಣ, ಅರಣ್ಯ ಸಂರಕ್ಷಣೆಯ ನೆಪವೊಡ್ಡಿ ಒಕ್ಕಲೆಬ್ಬಿಸಿದರು. ಕರ್ನಾಟಕದಲ್ಲಿ ಬುಡಕಟ್ಟುಗಳನ್ನು ಕುರಿತು ಗಂಭೀರವಾದ ಅಧ್ಯಯನ ತೀರ ಇತ್ತೀಚೆಗೆ ಆರಂಭವಾಯಿತಾದರೂ ಮಾಹಿತಿ ಸಂಗ್ರಹಕಾರ್ಯ ಬಹು ಹಿಂದೆಯೇ ನಡೆದಿತ್ತು. ಬ್ರಿಟಿಷ್ ವಸಹಾತು ಕಾಲದಲ್ಲಿಯೇ ಬುಡಕಟ್ಟು ಮತ್ತು ಇತರೆ ಜನ ಜಾತಿಗಳನ್ನು ಕುರಿತು ಮಾಹಿತಿ ಸಂಗ್ರಹಿಸುವ ಪ್ರಯತ್ನವನ್ನು ಎಡ್ಗರ್‌ಥರ್‌ಸ್ಟನ್ ಮತ್ತು ಕೆ.ರಂಗಾಚಾರಿ ಮಾಡಿದರು. ಅವರು "Cast and Tribles of southern India" ಎಂಬ ಬೃಹತ್ ಸಂಪುಟಗಳ ಮೂಲಕ ಬುಡಕಟ್ಟುಗಳನ್ನು ಪರಿಚಯಿಸುವ ಕೆಲಸ ಮಾಡಿದರು. ಇವರ ಕಾಲದಲ್ಲಿ ಬುಡಕಟ್ಟುಗಳ ಕುರಿತು ಏಳು ಸಂಪುಟಗಳ ಮಾಹಿತಿ ನೀಡಿದರು. ಈ ಗ್ರಂಥಗಳು ೧೯೦೯ರಲ್ಲಿಯೇ ಪ್ರಕಟವಾಗಿ ಯಾವಯಾವ ಪ್ರಾಂತ್ಯದಲ್ಲಿ ಯಾವ ಯಾವ ಜನ ಜಾತಿಗಳು ಅವುಗಳ ಆರ್ಥಿಕ ಸ್ಥಾನಮಾನವೇನು, ಇವುಗಳ ಕೆಲಸವೇನು, ಇವುಗಳ ಪಾರಂಪರಿಕ ವೃತ್ತಿಗಳೇನು ಮತ್ತು ಅವರ ಸಾಂಸ್ಕೃತಿಕ ಬದುಕು ಎಂಥದ್ದು ಎಂಬುದನ್ನು ಕುರಿತು ವಸಾಹತುಶಾಹಿ ಹಿನ್ನೆಲೆಯಲ್ಲಿ ಚರ್ಚಿಸಿದವು.

೧೯೩೫ರಲ್ಲಿ ಎಲ್.ಕೆ. ಅನಂತಕೃಷ್ಣ ಅಯ್ಯರ್ ಅವರ ಕೃತಿಯಾದ The Mysore Tribes and Castes ಶೀರ್ಷಿಕೆಯ ನಾಲ್ಕು ಸಂಪುಟಗಳು ಕೂಡ ಐತಿಹಾಸಿಕ ಮಹತ್ವದ್ದಾಗಿದೆ. ಇದನ್ನು ಹೊರತುಪಡಿಸಿದರೆ ಬುಡಕಟ್ಟುಗಳನ್ನು ಕುರಿತು ಕರ್ನಾಟಕದ ಮಟ್ಟಿಗಂತು ಯಾವುದೇ ಮಾಹಿತಿ ಸಂಗ್ರಹವಾಗಲೀ ಅಧ್ಯಯನವಾಗಲೀ ಕಂಡುಬರುವುದಿಲ್ಲ.

೧೯೫೭ರಲ್ಲಿ ಮೈಸೂರು ರಾಜ್ಯದ ವಾರ್ತಾ ಇಲಾಖೆ ಪ್ರಕಟಿಸಿದ ಸಂಪುಟದಲ್ಲಿ ಡಿ.ಕೃಷ್ಣಯ್ಯ ಅವರು ಕನ್ನಡ ನಾಡಿನ ಆದಿವಾಸಿಗಳು ಎಂಬ ಸಂಕ್ಷಿಪ್ತ ಲೇಖನವೊಂದನ್ನು ಬರೆದರು. ಬಹುಶಃ ಅಲ್ಲಿಯವರೆಗೆ ಬುಡಕಟ್ಟುಗಳನ್ನು ಕುರಿತ ಯಾವುದೇ ಮಾಹಿತಿ ಕನ್ನಡದಲ್ಲಿ ಕಂಡುಬರಲಿಲ್ಲ. ಆದ್ದರಿಂದ ಬಡುಕಟ್ಟುಗಳನ್ನು ಕುರಿತ ಮೊದಲ ಕನ್ನಡ ಲೇಖನ ಇದಾಗಿದೆ. ನಂತರದ ಸಂದರ್ಭದಲ್ಲಿ ೧೯೭೭ರಲ್ಲಿ ಕರ್ನಾಟಕದ ಸಿದ್ದಿಯರನ್ನು ಕುರಿತು ಬಿ.ಸಿ.ಪಾಲಾಕ್ಷಪ್ಪ

ಅವರು ಇಂಗ್ಲಿಶ್‌ನಲ್ಲಿ ಒಂದು ಪುಸ್ತಕವನ್ನು ಪ್ರಕಟಿಸಿದರು. ಇದಾದ ನಂತರ ೭೦ ಮತ್ತು ೮೦ರ ದಶಕದಲ್ಲಿ ಭಾರತೀಯ ಮಾನವಶಾಸ್ತ್ರ ಸರ್ವೇಕ್ಷಣಾ ಇಲಾಖೆಯ ವತಿಯಿಂದ ಕೆಲವು ಬುಡಕಟ್ಟುಗಳನ್ನು ಕುರಿತಾದ ಪರಿಚಯಾತ್ಮಕ ಪುಸ್ತಕಗಳು ಪ್ರಕಟವಾದವು. ನಂತರ ಕನ್ನಡದಲ್ಲಿ ಬುಡಕಟ್ಟು ಸಂಸ್ಕೃತಿಯೊಂದನ್ನು ಕುರಿತು ಮೊದಲು ಬಂದ ಪಿಎಚ್.ಡಿ ಪ್ರಬಂಧವೆಂದರೆ ಡಾ. ತೀ.ನಂ ಶಂಕರನಾರಾಯಣ ಅವರ 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು' ಎಂಬುದಾಗಿದೆ. ಇದು ೧೯೮೨ರಲ್ಲಿ ಪ್ರಕಟವಾಯಿತು. ಇವುಗಳ ಹೊರತಾಗಿ ೧೯೯೨ರಲ್ಲಿ ಹಿ.ಚಿ.ಬೋರಲಿಂಗಯ್ಯ ಅವರ ಗಿರಿಜನ ನಾಡಿಗೆ ಪಯಣ ಎಂಬ ಗ್ರಂಥ ಸಹ್ಯಾದ್ರಿ ಮತ್ತು ಕರಾವಳಿ ಪ್ರದೇಶದ ದಟ್ಟ ಅರಣ್ಯಗಳಲ್ಲಿ ವಾಸಿಸುವ ಹಲವಾರು ಜನಾಂಗಗಳನ್ನು ಕುರಿತು ಪ್ರವಾಸ ಕಥನದ ರೂಪದಲ್ಲಿ ಪರಿಚಯಿಸಿದೆ.

ಇಷ್ಟು ಪ್ರಯತ್ನಗಳನ್ನು ಬಿಟ್ಟರೆ ವಿವಿಧ ಜನವರ್ಗಗಳನ್ನು ಕುರಿತು ಬೃಹತ್ ಪ್ರಮಾಣದಲ್ಲಿ ಪ್ರಕಟಣೆ ಆದುದ್ದು ೧೯೯೨ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಉಪಸಂಸ್ಕೃತಿ ಮಾಲೆ ಅಡಿಯಲ್ಲಿ ವಿವಿಧ ಲೇಖಕರು ಸುಮಾರು ೩೫ ಗ್ರಂಥಗಳನ್ನು ಪ್ರೊ. ಬರಗೂರು ರಾಮಚಂದ್ರಪ್ಪ ಅವರ ನೇತೃತ್ವದಲ್ಲಿ ಪ್ರಕಟಿಸುವ ಮೂಲಕ ಬುಡಕಟ್ಟುಗಳನ್ನು ಕುರಿತಾದ ವಿಸ್ತೃತ ಅಧ್ಯಯನಕ್ಕೆ ಮುಂದಾಗಿ ವಿಪುಲ ಮಾಹಿತಿಗಳನ್ನು ಒದಗಿಸಿಕೊಡುವ ಕೆಲಸ ಮಾಡಿದರು.

೧.೧. ಅಧ್ಯಯನದ ಮಹತ್ವ

ಸ್ವಾತಂತ್ರ್ಯ ನಂತರದ ಕರ್ನಾಟಕ ಚರಿತ್ರೆ ಬರವಣಿಗೆಯ ಸಂದರ್ಭದಲ್ಲಿ ಸಬಾಲ್ಟರ್ನ್ ಚಿಂತನೆಯ ನೆಲೆಯಲ್ಲಿ ಹಲವಾರು ಅಧ್ಯಯನ ನಡೆಯುತ್ತಿರುವುದು ಗಮನಾರ್ಹ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಚರಿತ್ರೆಯನ್ನು ವಿವಿಧ ಆಯಾಮಗಳ ಮೂಲಕ ನೋಡುವ ಕ್ರಮ ಚಾಲ್ತಿಗೆ ಬಂದಿತು. ಪ್ರಸ್ತುತ ಸಂದರ್ಭದಲ್ಲಿ ಪ್ರತಿಯೊಂದು ಜಾತಿ ಸಮುದಾಯಗಳನ್ನು ಚಾರಿತ್ರಿಕ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸುತ್ತಿರುವುದು ಸಬಾಲ್ಟರ್ನ್ ಚಿಂತನೆಯ ಪ್ರಭಾವವಾಗಿದೆ. ಇದು ವಿವಿಧ ವಲಯಗಳ ಸಮಷ್ಟಿ ಪ್ರಜ್ಞೆಯನ್ನು ಮೂಡಿಸುವ ಪ್ರಮುಖ ಚಿಂತನ ಕ್ರಮವಾಗಿದೆ. ಚರಿತ್ರೆಯ ಸಂಗತಿಗಳನ್ನು ವಿಮರ್ಶಾತ್ಮಕವಾಗಿ ನೋಡುವಾಗ ಪ್ರತಿಯೊಂದು ಜಾತಿ, ಸಮುದಾಯ ಅಧ್ಯಯನಗಳು ಬಹುಮುಖ್ಯ ಪಾತ್ರವಹಿಸುತ್ತವೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಚರಿತ್ರೆಯ ಸಂದರ್ಭದಲ್ಲಿ ಅಧ್ಯಯನಕ್ಕೆ ಒಳಪಡದೆ ಸಮಾಜದ ಅಂಚಿನಲ್ಲೇ ಉಳಿದಿರುವ ಪ್ರಮುಖ ಜಾತಿ, ಸಮುದಾಯಗಳಲ್ಲಿ ಇರುಳಿಗ ಸಮುದಾಯವು ಒಂದಾಗಿದೆ. ಆದ್ದರಿಂದ ಇರುಳಿಗರು: ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ ಎಂಬ ವಿಷಯಕ್ಕೆ ಪೂರಕ ಮಾಹಿತಿ ಸಂಗ್ರಹಿಸುವುದರ ಮೂಲಕ ವಿಶ್ಲೇಷಣೆಯ ಅಧ್ಯಯನಕ್ಕೊಳಪಡಿಸುವುದು ಅತ್ಯಂತ ಹೆಚ್ಚಿನ ಮಹತ್ವದ್ದಾಗಿದ್ದರಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿತ್ತು.

ಈ ಸಮುದಾಯವು ಚಾರಿತ್ರಿಕವಾದ ಅನನ್ಯತೆಯನ್ನು ಮೈಗೂಡಿಸಿಕೊಂಡಿದ್ದು ದಕ್ಷಿಣ ಕರ್ನಾಟಕದಲ್ಲಿ ಇವರ ವಾಸದ ನೆಲೆಗಳು ಹೆಚ್ಚಾಗಿ ಕಂಡುಬರುತ್ತವೆ. ಆದರೆ ಈ ಸಮುದಾಯದ ಚರಿತ್ರೆಯ ಬಗೆಗಿನ ಮಾಹಿತಿಗಳು ಅಸ್ಪಷ್ಟವಾಗಿವೆ. ಹಾಗೆಂದು ಈ ಸಮುದಾಯದ ಚರಿತ್ರೆ ರಚಿಸಲು ಮಾಹಿತಿಗಳೇ ಇಲ್ಲ ಎಂದಲ್ಲ, ಇರುವ ಎಲ್ಲಾ ಆಕರಗಳು ಮೌಖಿಕ ನೆಲೆಗಟ್ಟಿನಲ್ಲಿವೆ. ಇವುಗಳು ಈ ಸಮುದಾಯದ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಗಮನಾರ್ಹ ಪ್ರಭಾವ ಬೀರುತ್ತವೆ. ಆದ್ದರಿಂದ ಪ್ರಸ್ತುತ ಸಂದರ್ಭದಲ್ಲಿ ಈ ಸಮುದಾಯಕ್ಕೆ ಲಭ್ಯವಿದ್ದ ಮೌಖಿಕ ಆಕರಗಳನ್ನು ಒರೆಗಲ್ಲಿಗೆ ಹಚ್ಚಿ ವಿಶ್ಲೇಷಣಾತ್ಮಕ ಹಾಗೂ ವಸ್ತುನಿಷ್ಠವಾಗಿ ಅಧ್ಯಯನ ಮಾಡುವುದು ಮಹತ್ವಪೂರ್ಣವಾಗಿತ್ತು.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಪ್ರಕಟಗೊಂಡಿರುವ ಕರ್ನಾಟಕ ಬುಡಕಟ್ಟುಗಳು ಎಂಬ ಗ್ರಂಥದ ಎರಡನೇ ಸಂಪುಟದಲ್ಲಿ ಇಲ್ಲಿಗರು ಮತ್ತು ಇರುಳಿಗರನ್ನು ಪ್ರತ್ಯೇಕ ಬುಡಕಟ್ಟುಗಳಾಗಿ ಅಧ್ಯಯನ ಮಾಡಲಾಗಿತ್ತು. ಹಾಗೆಯೇ ಇರುಳಿಗ ಎಂಬ ಪದನಿಷ್ಪತ್ತಿಯ ಬಗ್ಗೆ ಅನೇಕ ಗೊಂದಲಗಳಿದ್ದು, ಅಧ್ಯಯನ ಕೈಗೊಂಡ ವಿದ್ವಾಂಸರುಗಳು ಒಮ್ಮತ ನಿರ್ಧಾರಕ್ಕೆ ಬರದೆ, ಇರುಳಿಗ ಪದನಿಷ್ಪತ್ತಿಯನ್ನು ಅವರ ಮಾನಸಿಕ ಆಲೋಚನೆಗಳಿಗೆ ತಕ್ಕಂತೆ ವ್ಯಾಖ್ಯಾನಿಸಿ ಇರುಳಿಗರು ತಮ್ಮ ಪದನಿಷ್ಪತ್ತಿಯ ಬಗ್ಗೆ ಮುಜುಗರಪಟ್ಟುಕೊಳ್ಳುವಂತಾಗಿತ್ತು. ಇರುಳಿಗ ಎನ್ನುವ ಪದನಿಷ್ಪತ್ತಿಯು, ಇಲಿ ತಿನ್ನುವುದರಿಂದ, ನೋಡಲು ಕಪ್ಪಾಗಿರುವುದರಿಂದ ಬಂದಿದೆ ಎನ್ನುವ ವಿದ್ವಾಂಸರುಗಳ ಅಭಿಪ್ರಾಯಗಳನ್ನು ಹೊರತುಪಡಿಸಿ ಇರುಳಿಗ ಪದನಿಷ್ಪತ್ತಿಯ ಹಿಂದಿನ ಸತ್ಯ ಸಂಗತಿಯನ್ನು ಹೊರತರುವ ಮಹತ್ವದೊಂದಿಗೆ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಯಾವುದೇ ಧರ್ಮದ ಪರಿಕಲ್ಪನೆ ಇಲ್ಲದೆ ಕಾಡಿನಲ್ಲಿ ಸಿಗುವ ಬಿದರಕ್ಕಿ ಮರಗೆಣಸು, ಜೇನು ಮತ್ತು ಪ್ರಾಣಿಗಳ ಮಾಂಸವನ್ನು ಆಹಾರಕ್ಕಾಗಿ ಬಳಸಿಕೊಳ್ಳುತ್ತಾ, ತುಂಡು ಬಟ್ಟೆಗಳಿಂದ ದೇಹ ಮುಚ್ಚಿಕೊಂಡು ಬದುಕುತ್ತಿರುವವರು ಇರುಳಿಗರು. ತಮ್ಮ ಎಲ್ಲಾ ಶುಭ ಮತ್ತು ಅಶುಭ ಕಾರ್ಯಗಳಿಗೂ ಕಣಿ ಹಾಕಿಸುತ್ತಾರೆ. ಈ ಕಣಿ ಹೇಳುವುದು ಅಮೆರಿಕಾ ಹಾಗೂ ಪಾಶ್ಚಾತ್ಯ ವಿದ್ವಾಂಸರುಗಳು ಪರಮನೋಜ್ಞಾನ ಎಂದು ಒಪ್ಪಿಕೊಂಡಿದ್ದಾರೆ ಎಂದು ಕಿಕ್ಕೇರಿ ನಾರಾಯಣ ಅವರು ಹೇಳುತ್ತಾರೆ. ಜೊತೆಗೆ ಕಾಡಿನಲ್ಲಿ ಸಿಗುವ ಎಲ್ಲಾ ಸಂಪನ್ಮೂಲಗಳನ್ನು ತಮ್ಮ ದಿನನಿತ್ಯಕ್ಕೆ ಬೇಕಾದಷ್ಟು ಇಟ್ಟುಕೊಂಡು ಉಳಿದುದ್ದನ್ನು ರಾಗಿ, ಅಕ್ಕಿ, ಬೇಳೆಗಳಿಗಾಗಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಮಾರಾಟ ಮಾಡಿ ಸಾಟಿ ವಿನಿಮಯ ಪದ್ಧತಿಯನ್ನು ಮುಂದುವರಿಸಿಕೊಂಡು ಬರುತ್ತಿರುವ ಇರುಳಿಗ ಸಮುದಾಯದವರನ್ನು ಅಧ್ಯಯನಕ್ಕೆ ಒಳಪಡಿಸುವುದು ಅತ್ಯಂತ ಮಹತ್ವದ್ದಾಗಿತ್ತು. ಆ ಹಿನ್ನೆಲೆಯಲ್ಲಿ 'ಇರುಳಿಗರು: ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ'ವನ್ನು ಕೈಗೊಳ್ಳಲಾಗಿತ್ತು.

೧.೨. ಅಧ್ಯಯನದ ಉದ್ದೇಶ

ಜನರ ಚರಿತ್ರೆಯನ್ನು ಕಟ್ಟಿಕೊಡಬೇಕಾಗಿದ್ದ ಚರಿತ್ರೆಯು ಕೆಲವು ಸಂದರ್ಭದಲ್ಲಿ ಒಂದು ವರ್ಗಕ್ಕೆ ಸೀಮಿತವಾಗಿ ಆ ವರ್ಗದ ಆಚಾರ, ವಿಚಾರ, ಸಂಸ್ಕೃತಿ ಮತ್ತು ಧರ್ಮಗಳನ್ನು ವೈಭವಪೂರಿತವಾಗಿ ಕಟ್ಟಿಕೊಡುವ ಮೂಲಕ ಅನೇಕ ಜಾತಿ ಸಮುದಾಯಗಳನ್ನು ನಿರ್ಲಕ್ಷಿಸಿತು. ಈ ನಿರ್ಲಕ್ಷ್ಯಕ್ಕೊಳಪಟ್ಟ ಅಥವಾ ಅಂಚಿಗೆ ನೂಕಲ್ಪಟ್ಟಿದ್ದ ಸಮುದಾಯಗಳಲ್ಲೊಂದಾದ ಇರುಳಿಗ ಸಮುದಾಯವನ್ನು ಪ್ರಸ್ತುತ ದಿನಮಾನಗಳಲ್ಲಿ ವಿಮರ್ಶಾತ್ಮಕವಾಗಿ ಚರ್ಚಿಸಬೇಕಾದ ಅಗತ್ಯತೆ ಇತ್ತು. ಆ ಹಿನ್ನೆಲೆಯಲ್ಲಿ ಇರುಳಿಗ: ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ ಕೈಗೊಳ್ಳಲಾಗಿದೆ.

ಪ್ರಮುಖವಾಗಿ ಲಿಖಿತ ಆಕರಗಳಿಲ್ಲದ ಇರುಳಿಗ ಸಮುದಾಯದ ಚರಿತ್ರೆಯನ್ನು ಸಮುದಾಯ ಹೊಂದಿರುವ ಮೌಖಿಕ ನೆಲೆಗಟ್ಟಿನಲ್ಲಿ ಹಾಗೂ ಆನುಷಂಗಿಕ ಆಕರಗಳನ್ನು ಬಳಸಿಕೊಂಡು ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ಇರುಳಿಗ ಅಸ್ಮಿತೆಯನ್ನು ಗುರುತಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಇರುಳಿಗರ ಪದನಿಷ್ಪತ್ತಿಯ ಬಗ್ಗೆ ವಿದ್ವಾಂಸರುಗಳು ವಿಭಿನ್ನ ನಿಲುವುಗಳನ್ನು ಪ್ರತಿಪಾದಿಸಿದ್ದರು. ಎಡ್ಗರ್ ಥರ್ಸ್ಟನ್ ತಮ್ಮ ಕ್ಯಾಸ್ಟ್ ಆ್ಯಂಡ್ ಟ್ರೈಬ್ ಸದರನ್ ಇಂಡಿಯಾ ಎಂಬ ಕೃತಿಯಲ್ಲಿ ಇರುಳಾಸ್ ಮತ್ತು ಇರುಳ ಎಂದು ವಿವರಿಸಿದ್ದಾನೆ. ಎಲ್.ಕೆ. ಅನಂತಕೃಷ್ಣ ಅಯ್ಯರ್ ಅವರು ತಮ್ಮ ಕೃತಿಯಾದ ಮೈಸೂರು ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್ ಕೃತಿಯಲ್ಲಿ ಇರುಳಾಸ್ ಮತ್ತು ಇರುಳಿಗ ಎಂಬುವುದಾಗಿ ಕರೆದಿದ್ದಾರೆ. ಹಯವಧನ್ ರಾವ್ ಅವರು ತಮ್ಮ ಮೈಸೂರು ಗೆಜೆಟಿಯರ್ ಎಂಬ ಕೃತಿಯಲ್ಲಿ ಇರುಳಿಗ ಎಂದು ಕರೆದಿದ್ದಾರೆ. ಆದರೆ ಸಿದ್ಧಗಂಗಯ್ಯ ಬಿ. ಕಂಬಾಳ್ ಅವರನ್ನು ಹೊರತುಪಡಿಸಿ ಇರುಳಿಗರ ಬಗ್ಗೆ ಅಧ್ಯಯನ ಕೈಗೊಂಡಿರುವ ಎಲ್ಲಾ ಅಧ್ಯಯನಕಾರರು ಇರುಳಿಗ, ಇರುಳಾಸ್, ಇರುಳರ ಒಂದೇ ಆಗಿದೆ ಎನ್ನುವ ನಿಟ್ಟಿನಲ್ಲಿ ವಿವರಿಸಿದ್ದಾರೆ. ಸಿದ್ಧಗಂಗಯ್ಯ ಬಿ. ಕಂಬಾಳ್ ಅವರು ಇರುಳಿಗ ಮತ್ತು ಇಲ್ಲಿಗರು ಬೇರೆ ಬೇರೆ ಎಂದು ತಮ್ಮ ಕೃತಿಯಾದ ಇಲ್ಲಿಗರ ಸಂಸ್ಕೃತಿ ಎಂಬುವುದರಲ್ಲಿ ಬಲವಾಗಿ ಪ್ರತಿಪಾದಿಸುತ್ತಾರೆ. ಈ ಎಲ್ಲಾ ವಿದ್ವಾಂಸರುಗಳ ದ್ವಂದ್ವ ನಿಲುವುಗಳಿಗೆ ಸಂಶೋಧನೆಯ ಅವಶ್ಯಕತೆ ಇತ್ತು. ಆ ಹಿನ್ನೆಲೆಯಲ್ಲಿ ಇರುಳಿಗರನ್ನು ಕುರಿತು ಅಧ್ಯಯನ ಕೈಗೊಳ್ಳುವ ಉದ್ದೇಶವನ್ನು ಹೊಂದಲಾಗಿದೆ.

ಬ್ರಿಟಿಶ್ ಕಂಪನಿಯ ಅಧಿಕಾರಿಯಾದ ಎಡ್ಗರ್ ಥರ್ಸ್ಟನ್ ಇರುಳಿಗರನ್ನು ಕುರಿತು ಹೇಳುವಾಗ 'Charcoal would have a white mark. The name Irula in fact means Darkness or blackness(IRUL). (E. Thurston and K. Rangachari, Cast and Tribes of Southern India, Vol. II, p. 373) ಸಾಧ್ಯವಾದರೆ ಕಪ್ಪು ಖನಿಜವಾದ ಕಲ್ಲಿದ್ದಲಿನಲ್ಲಿ ಬಿಳಿಯ ಕಲೆಗಳನ್ನು ಕಾಣಬಹುದು. ಆದರೆ ಇರುಳಿಗರು ಇರುಳಿನಷ್ಟೇ ಕಪ್ಪು ಬಣ್ಣದಿಂದ

ಕೂಡಿರುತ್ತಾರೆ ಎನ್ನುತ್ತಾನೆ. ಹಾಗೆಯೇ ಈ ಜನರು ಇಲಿಗಳನ್ನು ಬೇಟೆಯಾಡಿ ಆಹಾರಕ್ಕಾಗಿ ಬಳಸುತ್ತಿದ್ದರಿಂದ ಅಕ್ಕಪಕ್ಕದ ಜನರು ಇವರನ್ನು ಇಲ್ಲಿಗರು ಎಂದು ಕರೆದಿದ್ದಾರೆ. ಈ ಪದವೇ ವಿರೂಪಗೊಂಡು ಇರುಳಿಗ, ಇಲ್ಲಿನ ಇರುಳಾರ್ ಆಗಿರುವ ಸಾಧ್ಯತೆಗಳಿವೆ. 'The Tribe known as Iraliga or Irulega which is sometimes corrupted into Illigaru(Nanjundaiah H.V. and Ananthakrishna Iyer L.K., The mysore trible and cast, Vol. III, p. 378). ಇಂತಹ ವಸಾಹತುಶಾಹಿ ಮತ್ತು ಅಗ್ರಹಾರ ದೃಷ್ಟಿಕೋನಗಳಿಂದ ಇರುಳಿಗರ ಪದನಿಷ್ಪತ್ತಿಯನ್ನು ನೋಡಲಾಗಿದೆ ಹೊರತು ಸಮುದಾಯದವರ ಅಂತರಾಳವನ್ನು ಅರ್ಥ ಮಾಡಿಕೊಳ್ಳುವ ಗೋಜಿಗೆ ಹೋಗಿಲ್ಲ ಎಂಬುದು ಮೇಲುನೋಟಕ್ಕೆ ಕಂಡುಬರುತ್ತದೆ. ಏಕೆಂದರೆ ಬುಡಕಟ್ಟುಗಳು ತನ್ನದೇ ಆದ ಅಸ್ಮಿತೆಗಳನ್ನು ಉಳಿಸಿಕೊಂಡು ಬಂದಿರುತ್ತವೆ. ಅವುಗಳನ್ನು ಗ್ರಹಿಸಿ ಚಾರಿತ್ರಿಕ ವಿಶ್ಲೇಷಣಾತ್ಮಕವಾಗಿ ಅಧ್ಯಯನಕ್ಕೆ ಒಳಪಡಿಸುವ ಹಿನ್ನೆಲೆಯಲ್ಲಿ ಈ ಅಧ್ಯಯನ ಕೈಗೊಳ್ಳುವ ಉದ್ದೇಶ ಹೊಂದಲಾಗಿತ್ತು.

ಬ್ರಿಟಿಶರ ಕಾಲಘಟ್ಟದಲ್ಲಿ ಇರುಳಿಗರ ಸ್ಥಿತಿಗತಿ ಹೇಗಿತ್ತು. ಇರುಳಿಗರ ಪಾರಂಪರಿಕ ನಂಬಿಕೆ ಮತ್ತು ಆಚರಣೆಗಳಾದ ಕಣಿ, ಮಾಟ, ಮಂತ್ರ, ನ್ಯಾಯ ತೀರ್ಮಾನ, ದೇವರು ಧರ್ಮಗಳು ಯಾವ ರೀತಿಯ ಪಲ್ಲಟಕ್ಕೆ ಒಳಗಾದವು. ಇದರ ಜೊತೆಗೆ ಆಧುನೀಕರಣ ಮತ್ತು ಜಾಗತೀಕರಣ ಬ್ರಿಟಿಷರ ಕಾನೂನುಗಳ ಜೊತೆ ಸೇರಿಕೊಂಡು ಇರುಳಿಗರ ಸಾಂಸ್ಕೃತಿಕ ಜೀವನದ ಮೇಲೆ ಏನೆಲ್ಲಾ ಸ್ಥಿತ್ಯಂತರಗಳನ್ನು ಉಂಟುಮಾಡಿತ್ತು ಎಂಬುದನ್ನು ವಿಶ್ಲೇಷಣಾತ್ಮಕವಾಗಿ ಕಟ್ಟಿಕೊಡುವ ಇರಾದೆಯೊಂದಿಗೆ 'ಇರುಳಿಗರು : ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ'ವನ್ನು ಕೈಗೊಳ್ಳುವುದು ಉದ್ದೇಶವಾಗಿತ್ತು.

ವಿಷಯಕ್ಕೆ ಪೂರಕವಾಗಿ ಬಳಸಿಕೊಂಡ ಪ್ರಾಥಮಿಕ ಹಾಗೂ ಮಾಧ್ಯಮಿಕ ಆಕರಗಳ ಮಾಹಿತಿ

ಫ್ರಾನ್ಸಿಸ್ ಬುಕಾನನ್ ಅವರು ತಮ್ಮ ಕೃತಿಯಾದ 'A Journey from madras through the countries of Mysore, Canara and malabar ಎಂಬುವುದರಲ್ಲಿ ಕೃತಿಕಾರರು ರಾಮಗಿರಿ ದುರ್ಗಕ್ಕೆ ಬಂದಾಗ ಇರುಳಿಗರನ್ನು ಭೇಟಿ ಮಾಡಿದ್ದು, ಇವರನ್ನು ಕಾಡ್ ಇರುಳಿಗರು ಎಂದು ಕರೆದಿದ್ದಾರೆ. ಇವರು ಪರಸ್ಪರ ತಮ್ಮದೇ ಪ್ರತ್ಯೇಕ ಭಾಷೆಯನ್ನು ಮಾತನಾಡಿಕೊಳ್ಳುತ್ತಿದ್ದು, ತಮ್ಮನ್ನು ತಾವು Cad Chensu (ಕಾಡ್ ಚೈನ್ಸು) ಎಂದು ಕರೆದು ಕೊಳ್ಳುತ್ತಿದ್ದರು. ತುಂಡು ಬಟ್ಟೆಗಳಿಂದ ದೇಹ ಮುಚ್ಚಿಕೊಳ್ಳುವ ಇವರು ಮರದ ಎಲೆ, ತೊಗಟೆಗಳನ್ನು ವಸ್ತು ಮಾಡಿಕೊಂಡು ದೇಹವನ್ನು ರಕ್ಷಿಸಿಕೊಳ್ಳುತ್ತಿದ್ದರು. ಸಂಪೂರ್ಣವಾಗಿ ಇವರು ಕಾಡುವಾಸಿಗಳಾಗಿದ್ದು, ಬೇಟೆಯಾಧಾರಿತ ಜೀವನ ನಡೆಸುತ್ತಿದ್ದರು ಎಂಬುದಾಗಿ ವಿವರಿಸುತ್ತಾನೆ. ಎಡ್ಗರ್ ಥರ್ಸ್ಟನ್ ತನ್ನ ಕೃತಿಯಾದ 'Caste and Tribes Southern India'ದ ಎರಡನೆಯ ಸಂಪುಟದಲ್ಲಿ ಇರುಳ ಮತ್ತು ಇರುಳಾಸ್ ಎಂಬ ಹೆಸರಿನಿಂದ ಕರೆದು ಅವರು ಹುಟ್ಟು, ಸಾವು, ಮದುವೆ, ದೇವರು,

ಹಬ್ಬ ಮತ್ತು ಆ ಸಂದರ್ಭದ ಅವರ ಬದುಕಿನ ರೀತಿನೀತಿಗಳ ಬಗ್ಗೆ ಸವಿಸ್ತಾರವಾಗಿ ವಿವರಿಸುತ್ತಾನೆ. ಜೊತೆಗೆ ಉತ್ತರ ಆರ್ಕಾಟ್ ಮತ್ತು ದಕ್ಷಿಣ ಆರ್ಕಾಟ್‌ನ ಇರುಳಿಗರು ಮತ್ತು ಚಂಗಲ್‌ಪೇಟೆಯ ಇರುಳಿಗರು ಎಂದು ಪ್ರಾದೇಶಿಕವಾಗಿ ವಿಭಾಗಿಸಿ ಅಧ್ಯಯನ ಮಾಡಿದ್ದಾನೆ. ಎಚ್.ವಿ. ನಂಜುಂಡಯ್ಯ ಮತ್ತು ಎಲ್.ಕೆ. ಅನಂತಕೃಷ್ಣ ಅಯ್ಯರ್ ಅವರು ತಮ್ಮ ಕೃತಿಯಾದ 'Mysore tribes and Castes' Vol. III ರಲ್ಲಿ ಮೈಸೂರು ಪ್ರಾಂತ್ಯದ ಇರುಳಿಗರ ಜೀವನ ಕ್ರಮ ಬದುಕು ಆಚಾರ-ವಿಚಾರಗಳನ್ನು ವಿವರಿಸುತ್ತಾ ಇರುಳಿಗ, ಇರುಳ, ಇರುಳಾರ್ ಒಂದೇ ಆಗಿದ್ದು ಪ್ರಾದೇಶಿಕತೆಯ ಆಧಾರದ ಮೇಲೆ ಆಯಾ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ ಎನ್ನುತ್ತಾರೆ.

ಬಿ.ಲೂಯಿಸ್ ರೈಸ್ ಅವರು ತಮ್ಮ 'Mysore Gazetteer'ನಲ್ಲಿ ರಾಮಗಿರಿ, ಕನಕನಹಳ್ಳಿ, ಮಾಗಡಿ ಭಾಗದಲ್ಲಿ ವಾಸಿಸುತ್ತಿದ್ದ ಇರುಳಿಗರನ್ನು ಕುರಿತು ಮಾಹಿತಿ ನೀಡುತ್ತಾರೆ. ಮೈಸೂರು ಪ್ರಾಂತ್ಯದಲ್ಲಿದ್ದ ಇರುಳಿಗರ ಭಾಷೆ, ದೇವರು, ಹಬ್ಬ ಹರಿದಿನಗಳ ಬಗ್ಗೆ ಕೇಂದ್ರೀಕರಿಸಿ ಅಧ್ಯಯನ ಮಾಡಿದ್ದಾರೆ. ತೀ.ನಂ. ಶಂಕರನಾರಾಯಣ ರಾವ್ ಅವರು ತಮ್ಮ ಕೃತಿಯಾದ ಕಾಡುಗೊಲ್ಲರ ಸಂಪ್ರದಾಯ ಮತ್ತು ನಂಬಿಕೆಗಳು ಎಂಬ ಕೃತಿಯಲ್ಲಿ ದಕ್ಷಿಣ ಕರ್ನಾಟಕದ ಬುಡಕಟ್ಟುಗಳನ್ನು ಪರಿಚಯಿಸುವ ಸಂದರ್ಭದಲ್ಲಿ ಇರುಳಿಗರ ಬೇಟೆ ಪದ್ಧತಿಯನ್ನು ವಿವರಿಸುತ್ತಾರೆ. ಡಾ.ಕೆ.ಕೆಂಪೇಗೌಡ ಅವರು ತಮ್ಮ ಪಿಎಚ್.ಡಿ. ಸಂಶೋಧನಾ ಪ್ರಬಂಧವಾದ 'A Discriptive Analysis of Iruliga Diacect' ಎಂಬುವುದರಲ್ಲಿ ಇರುಳಿಗರ ಭಾಷೆಯ ಹುಟ್ಟನ್ನು ವಿವರಿಸುತ್ತಾ ಆ ಭಾಷೆಯಲ್ಲಿ ಬರುವ ಓಷ್ಠ್ಯಿಕೃತ, ನಿರೋಷ್ಠ್ಯಿಕೃತ, ವೈದೃಶ್ಯ ಮುಂತಾದ ಪದಪ್ರಯೋಗಗಳನ್ನು ಭೂತ ಮತ್ತು ವರ್ತಮಾನಗಳೊಂದಿಗೆ ಚರ್ಚಿಸಿದ್ದಾರೆ. ಹಾಗೂ ಇರುಳ ಭಾಷೆಯಲ್ಲಿ ಬಹುಭಾಗ ತಮಿಳಿನ ಪದಗಳಿದ್ದು, ಅವರದ್ದು ತಮಿಳಿನ ಉಪಭಾಷೆಯಾಗಿ ಕಂಡುಬರುತ್ತದೆ ಎಂದು ಕರೆಯಬಹುದಾದರೂ ಕನ್ನಡ ಸಾಂದರ್ಭಿಕತೆ ಹೆಚ್ಚಾಗಿ ಕಂಡುಬರುವುದರಿಂದ ಕನ್ನಡದ ಉಪಭಾಷೆಯೆಂದು ಕರೆಯಬಹುದು ಎನ್ನುವ ದ್ವಂದ್ವ ನಿಲುವುಗಳನ್ನು ಪ್ರತಿಪಾದಿಸುತ್ತಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಹೊರತಂದಿರುವ ಉಪಸಂಸ್ಕೃತಿ ಮಾಲೆ ಸಂಪುಟಗಳಲ್ಲಿ ಸಿದ್ಧಗಂಗಯ್ಯ ಕಂಬಾಳ ಬಿ. ಅವರು (೧೯೯೩) ತಮ್ಮ ಕೃತಿಯಾದ ಇಲ್ಲಿಗರ ಸಂಸ್ಕೃತಿ ಎಂಬುವುದರಲ್ಲಿ ಇರುಳಿಗರನ್ನು ಕುರಿತು ವಿವರಿಸುತ್ತಾ ಎಡ್ಗರ್ ಥರ್ಸ್ಟನ್ ಮತ್ತು. ಎಲ್.ಕೆ. ಅನಂತಕೃಷ್ಣ ಅಯ್ಯರ್ ಅವರು ಗುರುತಿಸುವ ಇರುಳಿಗರೇ ಬೇರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವಾಸಿಸುವ ಇಲ್ಲಿಗರೇ ಬೇರೆ ಎಂದು ಕೆಲವು ಸಾಂದರ್ಭಿಕ ಆಧಾರಗಳನ್ನು ಕೊಡುವ ಮೂಲಕ ಪ್ರತ್ಯೇಕತೆಯನ್ನು ಪ್ರತಿಪಾದಿಸುತ್ತಾರೆ. ಭೈರೇಗೌಡ ಎಂ. (೨೦೦೦) ಇವರು ಇರುಳಿಗರನ್ನು ಕುರಿತು ಇರುಳಿಗರ ಜಾನಪದ ಅಧ್ಯಯನ ಕೈಗೊಂಡು ಇರುಳಿಗರ ಬದುಕನ್ನು ಸವಿಸ್ತಾರವಾಗಿ ಮಾಹಿತಿ ನೀಡಿದ್ದಾರೆ. ಅವರು ನಡೆಸಿದ ಏಳು ವರ್ಷಗಳ

ಸಂಶೋಧನೆಯ ಫಲವಾಗಿ ಇರುಳಿಗರ ಸೂಕ್ಷ್ಮತೆಗಳನ್ನು ಗ್ರಹಿಸಿ ಸಮುದಾಯದವರ ಅಂತರಾಳದ ಅಂಶಗಳನ್ನು ಸಂಗ್ರಹಿಸುವುದರ ಜೊತೆಗೆ ಸಮುದಾಯದವರ ಆಡುಮಾತಿನಲ್ಲಿ ದಾಖಲಿಸುವ ಕೆಲಸ ಮಾಡಿದ್ದಾರೆ. ಕರ್ನಾಟಕ ಜಾಪನದ ಮತ್ತು ಯಕ್ಷಗಾನ ಅಕಾಡೆಮಿಯವರು ಹೊರತಂದಿರುವ ಕರ್ನಾಟಕದ ಬುಡಕಟ್ಟುಗಳು ಎಂಬ ಕೃತಿಯ ಎರಡನೇ ಸಂಪುಟದಲ್ಲಿ ಇಲ್ಲಿಗರು ಮತ್ತು ಇರುಳಿಗರನ್ನು ಪ್ರತ್ಯೇಕ ಬುಡಕಟ್ಟಾಗಿ ಅಭ್ಯಾಸಿಸಲಾಗಿದೆ. ಸಿದ್ಧಗಂಗಯ್ಯ ಕಂಬಾಳರು ಇಲ್ಲಿಗರ ಸಂಸ್ಕೃತಿ ಎಂಬ ಅಧ್ಯಯನ ಕೈಗೊಂಡರೆ, ಕುರುವ ಬಸವರಾಜು ಅವರು ಇರುಳಿಗರು ಎಂದು ಅಧ್ಯಯನ ಕೈಗೊಂಡಿದ್ದಾರೆ. ಆದರೆ ಇಬ್ಬರ ಕ್ಷೇತ್ರ ಒಂದೇ ಆಗಿದೆ. ಆದರೆ ಬೇರೆ ಹೆಸರಿನಿಂದ ಸೂಚಿಸಿದ್ದಾರೆ ಹೊರತು ಇಬ್ಬರ ಆಚರಣೆ, ಆಚಾರ, ವಿಚಾರಗಳಲ್ಲಿ ಯಾವುದೇ ಭಿನ್ನತೆ ಗಳೇನು ಕಾಣಲು ಸಾಧ್ಯವಿಲ್ಲ.

ಕೆ.ಎಸ್. ಸಿಂಗ್ ಅವರ 'ಪೀಪಲ್ ಆಫ್ ಇಂಡಿಯಾ, ಕರ್ನಾಟಕ ಹಾಗೂ ಟ್ರೈಬ್ಸ್ ಆಫ್ ಇಂಡಿಯಾ'ದಲ್ಲಿ (People of India Karnataka, Vol. III) ಇರುಳಿಗರ ಜೀವನ ವಿಧಾನ, ಬೇಸಾಯ, ಭಾಷೆಯ, ಸಮಾಜ ಮತ್ತು ಸಂಸ್ಕೃತಿಗಳ ಬಗ್ಗೆ ಎಡ್ಗರ್ ಥರ್ಸ್ಟನ್ ಹಾದಿಯಲ್ಲಿ ವಿವರಿಸುತ್ತಾರೆ.

ಚಂದ್ರಶೇಖರ ಕಂಬಾರ ಅವರು ಸಂಪಾದಿಸಿರುವ ಕನ್ನಡ ಜಾನಪದ ವಿಶ್ವಕೋಶ, ಸಂ.೧ರಲ್ಲಿ ಇರುಳಿಗರ ಸೃಷ್ಟಿ ಪುರಾಣದ ಜೊತೆಗೆ ಇರುಳಿಗ ಸಮುದಾಯದಲ್ಲಿ ಪ್ರಚಲಿತ ದಲ್ಲಿರುವ ತಂದೆ ಮಗಳು ಮದುವೆಯಾಗಿ ವಂಶಾಭಿವೃದ್ಧಿ ಮಾಡಿದ ಮಾಹಿತಿಯನ್ನು ಚರ್ಚಿಸಿದ್ದಾರೆ.

ಪ್ರಭಾಕರ್ ಎ.ಎಸ್., ಅವರು ಕನ್ನಡ ವಿಶ್ವವಿದ್ಯಾಲಯ ಧನಸಹಾಯ ಯೋಜನಾ ವರದಿಯಲ್ಲಿ ಕರ್ನಾಟಕದಲ್ಲಿ ಇರುಳಿಗರ ನೆಲೆಗಳು, ಅವರ ಭಾಷೆ, ಜನಸಂಖ್ಯೆ, ಮದುವೆ, ಶವಸಂಸ್ಕಾರ ಮುಂತಾದವುಗಳನ್ನು ಕುರಿತು ಮಾಹಿತಿ ನೀಡಿದ್ದಾರೆ.

ಭೈರೇಗೌಡ ಅವರು ಕಾಡು ಬಿಡಲೊಲ್ಲದವರು ಎಂಬ ಕೃತಿಯಲ್ಲಿ ಇರುಳಿಗರ ಸ್ಥಿತ್ಯಂತರದ ಹಾದಿಯನ್ನು ಕುರಿತು ಚರ್ಚಿಸಿದ್ದಾರೆ. ಜೊತೆಗೆ ಭಾರತದ ಬುಡಕಟ್ಟುಗಳ ಸಾಮಾಜೀಕರಣ ಸ್ಥಿತ್ಯಂತರಕ್ಕೆ ಪ್ರೇರಣೆಯಾದ ಅಂಶಗಳು ಇರುಳಿಗರ ಮೇಲೆ ಹೇಗೆ ಪರಿಣಾಮ ಬೀರಿದವು ಎಂಬುದನ್ನು ಕುರಿತು ವಿವರಿಸಿದ್ದಾರೆ.

ಅಸಿಫ್ ಶರೀಫ್ ಅವರು ತಮ್ಮ ಕೃತಿಯಾದ ರೇಷ್ಮೆ ನಗರ, (೨೦೦೬) ಎಂಬುವುದರಲ್ಲಿ ಇರುಳಿಗರು ಈ ದೇಶದ ಮೂಲನಿವಾಸಿಗಳಾಗಿದ್ದು ರಾಮನಗರ ಜಿಲ್ಲೆಯ ಅತ್ಯಂತ ಪ್ರಾಚೀನ ವರ್ಗ ಎಂದು ವಿವರಿಸುತ್ತಾರೆ. ಹಾಗೂ ಅವರ ವೃತ್ತಿ, ಭಾಷೆ ಮತ್ತು ಅವರ ವ್ಯವಸಾಯದ ಬಗ್ಗೆ ಮಾಹಿತಿ ನೀಡಿದ್ದಾರೆ.

ಮೇತ್ರಿ ಕೆ.ಎಂ. ಅವರು ಬುಡಕಟ್ಟು ಕುಲಕಸುಬುಗಳು ಎಂಬುವುದರಲ್ಲಿ ಇರುಳಿಗ ಮತ್ತು ಇರುಳ ಬುಡಕಟ್ಟುಗಳನ್ನು ಪ್ರತ್ಯೇಕ ಬುಡಕಟ್ಟುಗಳಾಗಿ ಅಧ್ಯಯನ ಮಾಡಿದ್ದಾರೆ.

ಚನ್ನ ಎಸ್.ಎಂ. ಅವರು ಸಂಪಾದಿಸಿರುವ ಎನ್‌ಸೈಕ್ಲೋಪಿಡಿಯಾ ಆಫ್ ಇಂಡಿಯನ್ ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್ ಕೃತಿಯಲ್ಲಿ ಇರುಳಿಗರ ಮೂಲ, ಭಾಷೆ, ಪರಂಪರೆ ಮತ್ತು ಪ್ರಾದೇಶಿಕ ಹಿನ್ನೆಲೆಯಲ್ಲಿಯೂ ಅಭ್ಯಸಿಸಿದ್ದಾರೆ. ಹಾಗೆಯೇ ಮಹೇಂದ್ರಕುಮಾರ ಎ.ಎಸ್. ಅವರು ಇರುಳಿಗ ಸಮುದಾಯದ ಸಾಮಾಜಿಕ, ಆರ್ಥಿಕ ಸ್ಥಿತಿಗಳ ಅಧ್ಯಯನ(ರಾಮನಗರ ಜಿಲ್ಲೆಯನ್ನು ಪರಿಗಣಿಸಿ) ಎಂಬುವುದರಲ್ಲಿ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯಲ್ಲಿ ರಾಮನಗರ ಜಿಲ್ಲೆಯ ಇರುಳಿಗರನ್ನು ಅಧ್ಯಯನ ಕೈಗೊಂಡು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಹೀಗೆ ಇನ್ನೂ ಹತ್ತಾರು ಕೃತಿಗಳು ಹಾಗೂ ಲೇಖನಗಳು ಇರುಳಿಗರ ಭಾಷೆ, ಆಚರಣೆ, ಐತಿಹ್ಯ ಪುರಾಣಗಳು, ಶವಸಂಸ್ಕಾರಗಳು ಮತ್ತು ಬೇಟೆಯ ಸಂದರ್ಭಗಳನ್ನೊಳಗೊಂಡಂತೆ ಜಾನಪದ, ಸಾಹಿತ್ಯ, ಬುಡಕಟ್ಟು, ಅರ್ಥಶಾಸ್ತ್ರ, ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಇರುಳಿಗರನ್ನು ಅಭ್ಯಸಿದ್ದಾರೆ. ಈ ಅಧ್ಯಾಯಗಳಲ್ಲಿ ಪ್ರಮುಖ ಅಂಶಗಳನ್ನು ಬಿಟ್ಟಿರುವುದು ಕಂಡುಬಂದಿದೆ. ಹಾಗೂ ಈ ಯಾವ ಅಧ್ಯಯನಗಳು ಚಾರಿತ್ರಿಕ ದೃಷ್ಟಿಕೋನಗಳಿಂದ ನೋಡದೆ ಇರುವ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಚರಿತ್ರೆಯ ವಿಧಿ ವಿಧಾನಗಳೊಂದಿಗೆ ಇರುಳಿಗ ಸಮುದಾಯವನ್ನು ಅಧ್ಯಯನಕ್ಕೊಳಪಡಿಸುವ ಇರಾದೆಯನ್ನು ಹೊಂದಲಾಗಿದೆ.

೧.೩. ಅಧ್ಯಯನದ ಸ್ವರೂಪ

ಇರುಳಿಗರು: ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ ಎಂಬ ಸಂಶೋಧನ ವಿಷಯಕ್ಕೆ ಸಂಬಂಧಿಸಿದಂತೆ ಎಂಟು ಅಧ್ಯಾಯಗಳನ್ನಾಗಿ ಮಾಡಿಕೊಳ್ಳಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ಮಹತ್ವದ ವಿಧಾನಗಳನ್ನು ಪರಿಚಯಿಸುವುದರ ಜೊತೆಗೆ ಚರಿತ್ರೆಯ ರಚನಾಶಾಸ್ತ್ರದ ಆಯಾಮಗಳನ್ನು ಭಾರತದ ಚರಿತ್ರೆಯಲ್ಲಿ ಬುಡಕಟ್ಟು ಮತ್ತು ಶೋಷಿತ ಸಮುದಾಯಗಳಿಗೆ ಕಾರಣವಾದ ಅಂಶಗಳನ್ನು ಚರ್ಚಿಸಿ ಅಧ್ಯಯನದ ಸ್ವರೂಪ, ವ್ಯಾಪ್ತಿ ಹಾಗೂ ಇಲ್ಲಿಯವರೆಗೂ ಇರುಳಿಗರನ್ನು ಕುರಿತು ಕೈಗೊಂಡಿರುವ ಪ್ರಮುಖ ಅಧ್ಯಯನಗಳ ಸಮೀಕ್ಷೆಯನ್ನು ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಅವಲೋಕನ ಮಾಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಇರುಳಿಗ ಜನಾಂಗದ ಹಿನ್ನೆಲೆ ಎಂಬ ಪ್ರಧಾನ ಉದ್ದೇಶವನ್ನಿಟ್ಟುಕೊಂಡು ಇರುಳಿಗ ಸಮುದಾಯದ ಮೂಲ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ಪ್ರಸ್ತುತ ಸಂದರ್ಭದ ಚರ್ಚೆಯ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಜೊತೆಗೆ ಇರುಳಿಗ ಸಮುದಾಯದವರ ಮೂಲದ ಬಗ್ಗೆ ಇದ್ದ ದ್ವಂದ್ವ ನಿಲುವನ್ನು ಚಾರಿತ್ರಿಕ ಸಂದರ್ಭ ಮತ್ತು

ವೈಧಾನಿಕ ಹಿನ್ನೆಲೆಯಲ್ಲಿ ಗುರುತಿಸುವ ಪ್ರಯತ್ನದೊಂದಿಗೆ ಇರುಳಿಗರ ಭೌಗೋಳಿಕ ವಾಸಸ್ಥಳಗಳು, ಪದನಿಷ್ಪತ್ತಿ ಹಾಗೂ ಕುಲ ಮತ್ತು ಕಸುಬುಗಳನ್ನು ಇತ್ತೀಚಿನ ಚರ್ಚೆ ಗಳೊಂದಿಗೆ ವಿಶ್ಲೇಷಣಾತ್ಮವಾಗಿ ಕಟ್ಟಿಕೊಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಇರುಳಿಗರ ಚಾರಿತ್ರಿಕ ಹಿನ್ನೋಟ ಎಂಬ ಪ್ರಮುಖ ಉದ್ದೇಶವನ್ನಿಟ್ಟುಕೊಂಡು ಇರುಳಿಗ ಸಮುದಾಯವು ಚರಿತ್ರೆಯ ವಿವಿಧ ಕಾಲಘಟ್ಟದಲ್ಲಿ ತಮ್ಮ ಅಸ್ಮಿತೆಯನ್ನು ಗುರುತಿಸಿಕೊಳ್ಳುವಲ್ಲಿ ಪುರಾಣ ಮತ್ತು ಐತಿಹ್ಯಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಹಾಗೆಯೇ ಬ್ರಿಟಿಷರ ಕಾಲಘಟ್ಟದಲ್ಲಿ, ಸ್ವಾತಂತ್ರ್ಯ ಭಾರತದ ನಂತರ ಕಾಲಘಟ್ಟದಲ್ಲಿ ಮತ್ತು ಪ್ರಸ್ತುತದ ರಾಜಕೀಯ ಸಂದರ್ಭದಲ್ಲಿ ಇರುಳಿಗರ ಐಡೆಂಟಿಟಿಯನ್ನು ಗುರುತಿಸುವ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಇರುಳಿಗರ ಸಾಂಸ್ಕೃತಿಕ ಪದ್ಧತಿಗಳನ್ನು ಚಾರಿತ್ರಿಕ ವಿಶ್ಲೇಷಣೆ ಮಾಡುವ ನಿಟ್ಟಿನಲ್ಲಿ ಇರುಳಿಗರ ಪಾರಂಪರಿಕ ಕಣಿ ಪದ್ಧತಿ, ಹುಟ್ಟು ಮತ್ತು ಸಾವಿನ ಸಂದರ್ಭಗಳಲ್ಲಿ ಇರುಳಿಗರು ಅನುಸರಿಸುವ ರೂಢಿ ಸಂಪ್ರದಾಯಗಳು ಹಾಗೂ ಮದುವೆ, ಕೂಟ್ಟೆ ಮತ್ತು ಇರುಳಿಗರ ನ್ಯಾಯ ತೀರ್ಮಾನಗಳನ್ನು ಚರಿತ್ರೆಯ ವಿವಿಧ ಆಯಾಮಗಳೊಂದಿಗೆ ಪ್ರಸ್ತುತ ಸಮಾಜದ ಅಗತ್ಯಗಳನ್ನು ಅನುಸಂಧಾನ ಮಾಡುವ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಾಯ ಐದರಲ್ಲಿ ಇರುಳಿಗರ ನಂಬಿಕೆ ಮತ್ತು ಆಚರಣೆಗಳನ್ನು ವಿಶ್ಲೇಷಿಸುವಾಗ ಪ್ರಮುಖವಾಗಿ ಇರುಳಿಗರ ಆಹಾರ ಪದ್ಧತಿ, ಅವರ ವೇಷಭೂಷಣ, ಅವರ ಹಬ್ಬ ಹರಿದಿನಗಳಲ್ಲಿ ಪಾರಂಪರಿಕವಾಗಿ ಉಳಿಸಿಕೊಂಡು ಬಂದಿರುವ ಮೌಲ್ಯಗಳು ಮತ್ತು ಅವರ ಪಾರಂಪರಿಕ ವೈದ್ಯಕೀಯ ಪದ್ಧತಿಯನ್ನು ಪ್ರಸ್ತುತದ ಅಗತ್ಯಗಳಿಗನುಗುಣವಾಗಿ ಚರ್ಚಿಸಿ ವೈಜ್ಞಾನಿಕ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ಆರರಲ್ಲಿ ಇರುಳಿಗರಲ್ಲಿ ಉಂಟಾದ ಸಾಂಸ್ಕೃತಿಕ ಬದಲಾವಣೆಯಿಂದ ಅವರಲ್ಲಿ ಸಂಭವಿಸಿದ ಸಾಮಾಜಿಕ ಸ್ಥಿತ್ಯಂತರಗಳು, ಆರ್ಥಿಕ ಸ್ಥಿತ್ಯಂತರಗಳು, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತ್ಯಂತರಗಳಿಗೆ ಕಾರಣವಾದ ಅಂಶಗಳೊಂದಿಗೆ ಚರ್ಚಿಸುವುದರ ಮೂಲಕ ಇರುಳಿಗರ ಬದುಕಿನ ಬದಲಾವಣೆಗಳನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಏಳರಲ್ಲಿ ಇರುಳರು ಮತ್ತು ಇತರ ಸಮುದಾಯಗಳಾದ ಸೋಲಿಗರು ಮತ್ತು ಅಡವಿ ಚೆಂಚರ ನಡುವಿನ ಸಾಮಾಜಿಕ, ಧಾರ್ಮಿಕ ಸಂಬಂಧಗಳನ್ನು ಪರಸ್ಪರ ಮುಖಾಮುಖಿಗೊಳಿಸಿ ವಿಶೇಷ ಮತ್ತು ಭಿನ್ನತೆಗಳೊಂದಿಗೆ ತೌಲನಿಕ ಅಧ್ಯಯನ ಮಾಡಲಾಗಿದೆ.

ಹಾಗೆಯೇ ಇರುಳಿಗ ಮತ್ತು ಇರುಳಾಸ್ ಎಂಬುದು ಬೇರೆಯೋ ಅಥವಾ ಒಂದೇ ಆಗಿದೆಯೇ ಎಂಬುವುದನ್ನು ಅಧ್ಯಾಯ ಏಳರಲ್ಲಿ ಚರ್ಚಿಸಲಾಗಿದೆ.

ಕೊನೆಯದಾಗಿ ಎಂಟನೆ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳನ್ನು ನೀಡಲಾಗಿದೆ. ಪ್ರಸ್ತುತ ಸಂದರ್ಭದ ಇರುಳಿಗರು, ಅವರ ಬದುಕಿನಲ್ಲಿರುವ ಸಮಸ್ಯೆಗಳು, ಅದಕ್ಕೆ ನನ್ನ ವಿವೇಚನೆಯ ಸಲಹೆಗಳನ್ನು ನೀಡುವ ಮೂಲಕ ಇಡೀ ಸಂಶೋಧನೆಯಿಂದ ಕಂಡುಕೊಂಡ ಕೆಲವು ಹೊಸ ಅಂಶಗಳನ್ನು ದಾಖಲಿಸಲಾಗಿದೆ. ಜೊತೆಗೆ ಅನುಬಂಧ ನೀಡಲಾಗಿದೆ.

೧.೪. ಅಧ್ಯಯನ ವ್ಯಾಪ್ತಿ

ಯಾವುದೇ ಒಂದು ನಿರ್ದಿಷ್ಟ ಹಾಗೂ ಉದ್ದೇಶಪೂರಿತವಾದ ಸಂಶೋಧನೆಯು ಯಶಸ್ಸು ಕಾಣಬೇಕಾದರೆ ಆ ಸಂಶೋಧನೆಗೊಂದು ವ್ಯಾಪ್ತಿ ಅಥವಾ ಮಿತಿ ಇರುವುದು ಮುಖ್ಯ ಇಲ್ಲದಿದ್ದರೆ ಅಧ್ಯಯನವು ಗೊಂದಲಮಯವಾಗಿ ಸಂಶೋಧಕನು ದಾರಿ ತಪ್ಪುವ ಸಾಧ್ಯತೆಗಳಿರುತ್ತವೆ. ನಿರ್ದಿಷ್ಟ ವ್ಯಾಪ್ತಿಯಲ್ಲಿ ರೂಪುಗೊಂಡ ಸಂಶೋಧನೆ ಮಾತ್ರ ಕ್ರಮಬದ್ಧವಾಗಿ ಮತ್ತು ಸ್ಪಷ್ಟವಾಗಿ ಫಲಿತಗಳನ್ನು ಕಟ್ಟುಕೊಡಲು ಸಾಧ್ಯ. ಆ ನಿಟ್ಟಿನಲ್ಲಿ ಇರುಳಿಗ ಎಂಬ ಪದನಿಷ್ಪತ್ತಿಯ ಆಧಾರದ ಮೇಲೆ ಅಧ್ಯಯನ ಕೈಗೊಂಡಾಗ ರಾಜ್ಯಕ್ಕೆ ಗಡಿ ಇದೆ. ಸಂಸ್ಕೃತಿಗೆ ಗಡಿ ಇಲ್ಲ ಎಂದು ಗೊತ್ತಾಯಿತು. ಹಾಗೆಯೇ ಇರುಳಿಗರು ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಆಂಧ್ರ ಪ್ರದೇಶದ ಗಡಿಪ್ರದೇಶಗಳಾದ ಕಾವೇರಿ ನದಿ ತಪ್ಪಲು ಪ್ರದೇಶಗಳಲ್ಲಿ ವಾಸ ಮಾಡುವುದು ಕಂಡುಬಂದಿದೆ. ಜೊತೆಗೆ ಹಿಂದುಳಿದ ವರ್ಗಗಳಿಗೆ ಸ್ಥಾನಮಾನ ನೀಡುವ ನಿಟ್ಟಿನಲ್ಲಿ ಜಸ್ಟೀಸ್ ಎಲ್.ಜಿ. ಹಾವನೂರು ಅವರನ್ನು ಹಿಂದುಳಿದ ವರ್ಗಗಳ ವರದಿ ನೀಡುವಂತೆ ಕರ್ನಾಟಕ ಸರ್ಕಾರ ಸೂಚಿಸಿತು. ಅದರಂತೆ ಅವರು ತಮ್ಮ ವರದಿಯನ್ನು ಸರ್ಕಾರಕ್ಕೆ ನೀಡಿದರು. ಅವರ ವರದಿಯಲ್ಲಿ ಇರುಳಿಗರು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಕೋಲಾರ, ಶಿವಮೊಗ್ಗ, ಮೈಸೂರು ಭಾಗದಲ್ಲಿ ಇರುವಿಕೆಯನ್ನು ಗುರ್ತಿಸಿದ್ದಾರೆ. ಹಾಗೆಯೇ ರಾಮನಗರ, ಚಾಮರಾಜನಗರ, ಕೊಡಗು, ಚಿಕ್ಕಮಗಳೂರುಗಳಲ್ಲೂ ಇರುಳಿಗರು ನೆಲೆಸಿದ್ದರಿಂದ ಈ ಎಲ್ಲಾ ಪ್ರದೇಶಗಳನ್ನು ಅಧ್ಯಯನ ವ್ಯಾಪ್ತಿಗೆ ಬಳಸಿಕೊಂಡು ಅಧ್ಯಯನ ಮಾಡಲಾಗಿದೆ.

೧.೫. ಅಧ್ಯಯನ ವಿಧಾನ

ಅಧ್ಯಯನಕ್ಕೆ ಚರಿತ್ರೆಯ ವೈಧಾನಿಕತೆಯನ್ನು ಅಳವಡಿಸಿಕೊಳ್ಳಲಾಗಿದೆ. ಮಾಹಿತಿ ಸಂಗ್ರಹ, ಆಂತರಿಕ ವಿಮರ್ಶೆ, ಬಾಹ್ಯ ವಿಮರ್ಶೆ, ವಿಶ್ಲೇಷಣೆಯ ಕಾರ್ಯ ಸೂತ್ರಗಳನ್ನು ಸಂಶೋಧನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಇರುಳಿಗರು: ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ ಎಂಬ ವಿಷಯವು ಭಾಷಾಶಾಸ್ತ್ರ, ಸಮಾಜಶಾಸ್ತ್ರ, ಭೌಗೋಳಿಕಶಾಸ್ತ್ರ, ಮಾನವಶಾಸ್ತ್ರ ಮತ್ತು ತತ್ವಶಾಸ್ತ್ರ

ಮುಂತಾದ ಶಿಸ್ತುಗಳ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಅಂದರೆ ಅಂತರ್‌ಶಿಸ್ತೀಯ ಹಾಗೂ ಬಹುಶಿಸ್ತೀಯ ಅಧ್ಯಯನ ಅಗತ್ಯವಿರುವ ಮಾಹಿತಿಗಳನ್ನು ಸಂಗ್ರಹಿಸಲು ಪ್ರಕಟಿತ ಮತ್ತು ಅಪ್ರಕಟಿತ ಗ್ರಂಥಗಳನ್ನು ಮತ್ತು ಅಧ್ಯಯನ ಪೂರಕವಾದ ಬಿಡಿ ಲೇಖನಗಳನ್ನು ಹಾಗೂ ಇತರೆ ಆಕರ ಸಾಮಗ್ರಿಗಳನ್ನು ಇಲ್ಲಿ ಬಳಸಿಕೊಂಡು ಅಲ್ಲಲ್ಲಿ ಅಗತ್ಯವಿದ್ದಲ್ಲಿ ವಿಶ್ಲೇಷಣೆಯನ್ನು ಮಾಡಲಾಗಿದೆ. ಇರುಳಿಗರನ್ನು ಕುರಿತು ಶಾಸನಗಳು, ಸರ್ಕಾರಿ ಕಡತಗಳು, ಪತ್ರಾಗಾರ ಇಲಾಖೆಯ ಮಾಹಿತಿಗಳು ಲಭ್ಯವಾಗದ ಕಾರಣ ಸಂಪೂರ್ಣ ಕ್ಷೇತ್ರಕಾರ್ಯ ಕೈಗೊಂಡು ಇರುಳಿಗರ ವಕ್ತೃಗಳು, ಅವರ ಐತಿಹ್ಯ ಪುರಾಣಗಳು ಮತ್ತು ಆಚಾರ ವಿಚಾರಗಳನ್ನು ಸಂಗ್ರಹಿಸಿಕೊಂಡು ಇವುಗಳನ್ನು ಇರುಳಿಗರ ಚರಿತ್ರೆ ನಿರ್ಮಾಣಕ್ಕೆ ಚಾರಿತ್ರಿಕ ಆಕರಗಳಾಗಿ ಬಳಸಿಕೊಂಡು ಮೌಖಿಕ ಚರಿತ್ರೆ ನೆಲೆಗಟ್ಟಿನಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ. ಇದರ ಜೊತೆಗೆ ನಿಯತಕಾಲಿಕೆಗಳು, ದಿನಪತ್ರಿಕೆಗಳು, ವಾರಪತ್ರಿಕೆಗಳು, ನಿಘಂಟುಗಳನ್ನು ಬಳಿಸಿಕೊಂಡು 'ಇರುಳಿಗರು: ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ'ವನ್ನು ಸಮಾಪ್ತಿಗೊಳಿಸಲಾಗಿದೆ.

೧.೫. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಮಂಗಳಾ ಶ್ರೀಧರ ಅವರ 'ಬುಡಕಟ್ಟು ವೈದ್ಯ ಸಂಸ್ಕೃತಿ' ಎಂಬ ಕೃತಿಯಲ್ಲಿ ಇತರೆ ಬುಡಕಟ್ಟುಗಳ ವೈದ್ಯಕೀಯ ಸಂಸ್ಕೃತಿಯನ್ನು ವಿವರಿಸುವ ಸಂದರ್ಭದಲ್ಲಿ ಇರುಳಿಗರ ನಾಟಿ ಔಷಧಿಗಳ ಬಗ್ಗೆ ಮಾಹಿತಿ ನೀಡುತ್ತಾರೆ.

ಅಂಕನಹಳ್ಳಿ ಪಾರ್ಥ ಅವರು 'ರಾಮನಗರ: ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಕೃತಿಯಲ್ಲಿ ಇರುಳಿಗರು ರಾಮನಗರ ಜಿಲ್ಲೆಯ ಮೂಲನಿವಾಸಿಗಳೆಂದು ಹೇಳಿ ಅವರ ಕಣಿ ಪದ್ಧತಿ, ಮದುವೆ, ನ್ಯಾಯ ತೀರ್ಮಾನಗಳ ಬಗ್ಗೆ ಮಾಹಿತಿ ನೀಡುತ್ತಾರೆ.

ಮೋಹಂತಿ ಅವರು 'ಕೊಯಮತ್ತೂರು ಜಿಲ್ಲಾ ಇರುಳಿಗ ಟ್ರೈಬಲ್ ಎಜುಕೇಶನ್ಸ್ ಇನ್ ಇಂಡಿಯಾ' ಎಂಬ ವರದಿಯನ್ನು ಮಾನವಶಾಸ್ತ್ರ ಅಧ್ಯಯನ ಸಂಸ್ಥೆ, ಮೈಸೂರು ಇವರಿಗೆ ಸಲ್ಲಿಸಿದ್ದಾರೆ. ಈ ವರದಿಯಲ್ಲಿ ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯಲ್ಲಿ ನೆಲೆಸಿರುವ ಇರುಳಿಗ ಸಮುದಾಯದ ಶೈಕ್ಷಣಿಕ, ಮಹಿಳಾ ಶಿಕ್ಷಣದ ಪ್ರಮಾಣ, ವೃತ್ತಿ ಮುಂತಾದವುಗಳ ಬಗ್ಗೆ ವಿವರಿಸುತ್ತಾರೆ.

ಬೋರಲಿಂಗಯ್ಯ ಹಿ.ಚಿ. ಅವರು 'ಬುಡಕಟ್ಟು ದೈವರಾಧನೆ', ಬುಡಕಟ್ಟು ಅಧ್ಯಯನ ಮಾಲೆ ೧ ಎಂಬ ಕೃತಿಯಲ್ಲಿ ಇರುಳಿಗ ಸಮುದಾಯದ ನಂಬಿಕೆ, ಆಚರಣೆ ಮತ್ತು ದೈವಗಳ ಬಗ್ಗೆ ಪರಿಚಯಿಸಿದ್ದಾರೆ.

ನಾಯಕ ಡಿ.ಬಿ.(ಸಂ), 'ಗಿರಿಜನ ಸಿರಿ ಡಾ.ಪಿ.ಕೆ.ಖಂಡೋಬಾ ಅಭಿನಂದನಾ ಸಂಪುಟದಲ್ಲಿ ಭಾರತದ ಬುಡಕಟ್ಟುಗಳ ಬಗ್ಗೆ ವಿವರಿಸುವ ಸಂದರ್ಭದಲ್ಲಿ ಇರುಳಿಗರನ್ನು ಕುರಿತು ಮಾಹಿತಿ ನೀಡುತ್ತಾರೆ.

ಸುರೇಶ್ ಕೆ.ಪಿ. 'ರಾಮನಗರ ಜಿಲ್ಲೆಯ ಸ್ಥಳನಾಮಗಳು'ಎಂಬ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧದಲ್ಲಿ ಇರುಳಿಗರ ದೈವಗಳು ಅವರ ನಾಟಿ ವೈದ್ಯಕೀಯ ಪದ್ಧತಿ ಹಾಗೂ ಇರುಳಿಗರು ವಾಸಿಸುವ ಪ್ರದೇಶಗಳ ಸ್ಥಳನಾಮಗಳನ್ನು ಕುರಿತು ಮಾಹಿತಿ ನೀಡುತ್ತಾರೆ.

ನಾಗೇಶ ಎಚ್.ವಿ. ಅವರು 'ಬುಡಕಟ್ಟು ಜನರ ನ್ಯಾಯ ತೀರ್ಮಾನಗಳು' ಎಂಬ ಕೃತಿಯಲ್ಲಿ ಇರುಳಿಗರಲ್ಲಿದ್ದ ನ್ಯಾಯ ವ್ಯವಸ್ಥೆ ಅವರ ಕಟ್ಟೆಮನೆ, ಕುಲಗೌಡ, ಕಟ್ಟೆಗೌಡ, ಕೋಲುಕಾರ ಗಡಿಗೌಡರ ಅಧಿಕಾರಗಳ ಬಗ್ಗೆ ವಿವರಿಸುತ್ತಾರೆ.

ಕೊಟ್ಟಿಕ್ ಸ್ಪಾಟ್ ಗೆಜೆಟಿಯರ್, ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್ ಗೆಜೆಟಿಯರ್‌ನಲ್ಲಿ ರಾಮನಗರದಲ್ಲಿರುವ ಇರುಳಿಗ ಸಮುದಾಯದವರ ಕಿರು ಪರಿಚಯ ಮಾಡಿಕೊಡಲಾಗಿದೆ.

ರಂಗಸ್ವಾಮಿ ಎ. ಅವರು 'ಬುಡಕಟ್ಟು ಜಾನಪದ' ಎಂಬ ಕೃತಿಯಲ್ಲಿ ಕಣಿಶಾಸ್ತ್ರದ ಪದ್ಧತಿಯನ್ನು ವಿವರಿಸುವ ಸಂದರ್ಭದಲ್ಲಿ ಇರುಳಿಗ ಬುಡಕಟ್ಟಿನ ಚಹರೆ, ವಾಸದ ನೆಲೆ, ಆಹಾರಗಳ ಬಗ್ಗೆ ವಿವರಿಸಿದ್ದಾರೆ.

ಪಳನಿದಾಸ್ ಅವರು ತಮ್ಮ ಕೃತಿಯಾದ 'ಇರುಳ ಭಾಷೆ'ಯಲ್ಲಿ ಇರುಳಿಗ ಭಾಷೆಯ ಲ್ಲಿ ಆದಿವಾಸಿಗಳಲ್ಲಿರುವ ಇತರೆ ಸಂವಾದಿ ಪ್ರಾದೇಶಿಕ ಭಾಷೆಯ ಪದಗಳ ಬಗ್ಗೆ ಸೂಕ್ಷ್ಮವಾಗಿ ಚರ್ಚಿಸಿದ್ದಾರೆ.

ಸಿಂಗ್ ಕೆ.ಎಸ್., 'ಟ್ರೈಬಲ್ ಮೂಮೆಂಟ್ ಇನ್ ಇಂಡಿಯಾ' ಎಂಬ ಕೃತಿಯಲ್ಲಿ ಭಾರತದ ಬುಡಕಟ್ಟುಗಳ ಬಗ್ಗೆ ಮಾಹಿತಿ ನೀಡುವ ಸಂದರ್ಭದಲ್ಲಿ ಇರುಳಿಗ ಬುಡಕಟ್ಟುಗಳ ಪರಿಚಯ ಮಾಡಿಕೊಡುತ್ತಾರೆ.

ಬೋರಲಿಂಗಯ್ಯ ಹಿ.ಚಿ., ಪ್ರಭಾಕರ್ ಎ.ಎಸ್., ಅವರು 'ಕರ್ನಾಟಕ ಬುಡಕಟ್ಟು ಚಿತ್ರ ಸಂಪುಟದಲ್ಲಿ ಕರ್ನಾಟಕದಲ್ಲಿ ವಾಸ ಮಾಡುವ ಬುಡಕಟ್ಟುಗಳ ಬಗ್ಗೆ ಛಾಯಾಚಿತ್ರಗಳ ಸಮೇತ ಮಾಹಿತಿ ನೀಡಿದ್ದಾರೆ.

ಮುನಿರಾಜಪ್ಪ ಇವರು ತಮ್ಮ ಕೃತಿಯಾದ 'ಮಾಗಡಿ ಸೀಮೆಯ ಇತಿಹಾಸ'ದಲ್ಲಿ ಇರುಳಿಗರ ಸಾಮಾಜಿಕ ಬದುಕು, ಆಹಾರ, ಪಾರಂಪರಿಕ ಜೀವನವನ್ನು ಕುರಿತು ಮಾಹಿತಿ ನೀಡುತ್ತಾರೆ.

ಲಿಂಗಯ್ಯ ಡಿ ಮತ್ತು ಚಕ್ಕರೆ ಶಿವಶಂಕರ್ ಅವರು 'ಸ್ಥಳನಾಮಗಳ ಅಧ್ಯಯನ ಸಂವಾದ' ಕೃತಿಯಲ್ಲಿ ಬೆಂಗಳೂರು ಗ್ರಾಮಾಂತರ ಪ್ರದೇಶದ ವ್ಯಾಪ್ತಿಗೆ ಬರುವ ಸ್ಥಳಗಳ ಬಗ್ಗೆ ವಿವರಿಸುವಾಗ ಇರುಳಿಗ ಸಮುದಾಯದ ಹಿರಿಯರ ಹೆಸರಿನಿಂದ ಕರೆಯುವ ಗ್ರಾಮ ಮತ್ತು ದೊಡ್ಡಿಗಳ ಮಾಹಿತಿ ನೀಡಿದ್ದಾರೆ.

ಮೋಹನ್ ಚಂದ್ರಗುತ್ತಿ ಅವರು ತಮ್ಮ 'ಸಮಪಾಲು' ಕೃತಿಯಲ್ಲಿ ಇರುಳಿಗರ ಸೃಷ್ಟಿ ಪುರಾಣವನ್ನು ಪ್ರಸ್ತಾಪಿಸಿ ವಿಶ್ಲೇಷಿಸಿದ್ದಾರೆ.

ರೇಣುಕಾ ಕೋಡಗುಂಟಿ(ಸಂ), 'ಕರ್ನಾಟಕದಲ್ಲಿ ಶವಸಂಸ್ಕಾರ' ಎಂಬ ಕೃತಿಯಲ್ಲಿ ಇರುಳಿಗರ ಕಲ್ಲುಸೇವೆ ಮತ್ತು ನಂತರದ ಆಚರಣೆಗಳನ್ನು ಕುರಿತು ಮಾಹಿತಿ ನೀಡುತ್ತಾರೆ.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಿದ್ಧಪಡಿಸಿರುವ 'ಕನ್ನಡ ವಿಷಯ ವಿಶ್ವಕೋಶ: ಜಾನಪದ' ಎಂಬ ಕೃತಿಯಲ್ಲಿ ಇರುಳಿಗ ಜಾನಪದ ಆಚರಣೆಗಳು, ದೈವಾರಾಧನೆಗಳು ಮತ್ತು ನಾಟಿ ವಿದ್ಯಗಳ ಬಗ್ಗೆ ಮಾಹಿತಿ ನೀಡುತ್ತಾರೆ.

ಚಿನ್ನಸ್ವಾಮಿ ಸೋಸಲೆ ಎನ್., ಅವರ 'ದಲಿತರ ಬದಕು–ಮೆಲಕು' ಎಂಬ ಕೃತಿಯಲ್ಲಿ ಬುಡಕಟ್ಟುಗಳಲ್ಲಿನ ಅಮಾನವೀಯ ಆಚರಣೆಗಳು ಮತ್ತು ಮೌಢ್ಯತೆಗಳನ್ನು ಆಚರಿಸುವುದನ್ನು ವಿರೋಧಿಸುವ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ.

ಚಿನ್ನಸ್ವಾಮಿ ಸೋಸಲೆ ಎನ್., ಅವರ 'ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದಲಿತರು' ಎಂಬ ಕೃತಿಯಲ್ಲಿ ಬುಡಕಟ್ಟುಗಳಿಗಾಗಿ ನಾಲ್ವಡಿ ಕೃಷ್ಣರಾಜ ಒಡೆಯರು ಜಾರಿಗೆ ತಂದ ಶೈಕ್ಷಣಿಕ ಸೌಲಭ್ಯಗಳು, ವಸತಿ ನಿಲಯಗಳು ಹಾಗೂ ವಿಶೇಷ ಅವಕಾಶಗಳನ್ನು ಕುರಿತು ಸಮಗ್ರವಾದ ಮಾಹಿತಿಯನ್ನು ನೀಡುತ್ತಾರೆ.

ಅಂಗಡಿ ಎಸ್.ಎಸ್., ಅವರ 'ಕರ್ನಾಟಕ ಬಡುಕಟ್ಟು ಭಾಷೆ' ಎಂಬ ಕೃತಿಯು ಇರುಳಿಗ ಸಮುದಾಯದ ಮಾಟ, ಮಂತ್ರ, ಕಣಿ ಹಿನ್ನೆಲೆಯಲ್ಲಿ ಭಾಷೆಯ ಸಾಮಾಜಿಕ ನೆಲೆಯ ಬಗ್ಗೆ ಹಾಗೂ ದೈವಾರಾಧನೆಯಲ್ಲಿ ಇರುಳಿಗರ ಭಾಷೆ ಬಗ್ಗೆ ಮಾಹಿತಿ ನೀಡಿದ್ದಾರೆ.

ಸಚ್ಚಿದಾನಂದನ್(ಸಂ), ಎನ್‌ಸೈಕ್ಲೋಪಿಡಿಯಾ ಅಫ್ ಇಂಡಿಯನ್ ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್' ಎಂಬ ಕೃತಿಯಲ್ಲಿ ಇರುಳಿಗರ ಪಾರಂಪರಿಕ ವೃತ್ತಿಗಳು ಮತ್ತು ಸಾಮಾಜಿಕ, ಆರ್ಥಿಕತೆಯ ಬಗ್ಗೆ ಮಾಹಿತಿ ನೀಡುತ್ತಾರೆ.

ಪ್ರಶಾಂತ್ ಎಚ್.ಡಿ. ಅವರು 'ಕರ್ನಾಟಕ ರಾಜ್ಯಕೋಶ–೪' ಜನಸಮುದಾಯ ಸಂಪುಟದಲ್ಲಿ ಇರುಳಿಗರು ಮತ್ತು ಇಲಿಗರು ಒಂದೇ ಆಗಿರುತ್ತವೆ ಎಂದು ಅಭಿಪ್ರಾಯಿಸಿ ಇರುಳಿಗರ ವಿವಾಹ, ನ್ಯಾಯ ತೀರ್ಮಾನ ಮತ್ತು ಸಾಮಾಜಿಕ ಜೀವನದ ಬಗ್ಗೆ ಮಾಹಿತಿ ನೀಡುತ್ತಾರೆ.

Indigenous Knowledge on Medicinal Plant among the Iruliga Tribal, Department of Anthropology, University of Mysore ಎಂಬ ಪುಸ್ತಕದಲ್ಲಿ ಪಶ್ಚಿಮ ಘಟ್ಟದಲ್ಲಿರುವ ವಿವಿಧ ರೀತಿಯ ಔಷಧಿಯ ಗಿಡಮೂಲಿಕೆ ಮತ್ತು ಇರುಳಿಗರ ಹೆಸರಿನ

ಮೂಲ, ಇತ್ತೀಚಿನ ಬದಲಾವಣೆ, ಸುಮಾರು ೧೭ಕ್ಕೂ ಹೆಚ್ಚು ರೋಗಗಳಿಗೆ ಇರುಳಿಗರು ನೀಡುವ ಔಷಧಿ ಮತ್ತು ನಾಟಿ ವೈದ್ಯಗಳ ಬಗ್ಗೆ ಮಾಹಿತಿ ನೀಡಿದ್ದಾರೆ.

ಕೆಂಪೇಗೌಡ ಕೆ. ಅವರು 'ಎ ಬ್ರೀಪ್ ಸರ್ವೆ ಆಫ್ ದ್ರಾವಿಡಿಯನ್ ಟ್ರೈಬಲ್ಸ್ ಲಾಂಗ್ವೇಜ್ ಆಫ್ ಕರ್ನಾಟಕ' ಎಂಬ ಕೃತಿಯಲ್ಲಿ ಕರ್ನಾಟಕದಲ್ಲಿ ಇರುಳಿಗ ಸಮುದಾಯದ ಜನರು ವಾಸಿಸುವ ನೆಲೆಗಳು ಹಾಗೂ ಭಾಷೆಯ ಬಗ್ಗೆ ಮಾಹಿತಿ ನೀಡುತ್ತಾರೆ.

ರಾಮಕೃಷ್ಣ ಆರ್. ಅವರು 'ಕರ್ನಾಟಕದ ಬುಡಕಟ್ಟುಗಳು', ೨೦೦೭, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಎಂಬ ಕೃತಿಯಲ್ಲಿ ಇರುಳಿಗರ ಸಾಮಾಜಿಕ ಬದುಕು, ಆಹಾರ ಪದ್ಧತಿ, ಅವರ ವಾಸಸ್ಥಳದ ಬಗ್ಗೆ ಹಾಗೂ ಇಲಿ ಬೇಟೆಯ ವಿವರಗಳು ಸಿಗುತ್ತವೆ.

ಮೈಸೂರು ರಾಜ್ಯ ಸರ್ಕಾರಿ ಪತ್ರ, ಸೆಪ್ಟೆಂಬರ್ ೨೮, ೧೯೫೦ರ ಪ್ರಕಾರ ಇರುಳಿಗರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲಾಗಿದೆ(ಸರ್ಕಾರಿ ಆದೇಶ ಸಂಖ್ಯೆ ಎಲ್.ಡಿ.೧೯೧೩-ಲಾಜಿಕ್-೫-೫೦-೧೬, ಬೆಂಗಳೂರು, ೨೦ನೇ ಸೆಪ್ಟೆಂಬರ್ ೧೯೫೦.

ವೆಂಕಟೇಶ್, ಬುಡಕಟ್ಟು ಸಾಮಾಜಿಕ ಬದಲಾವಣೆ(ಬೆಂಗಳೂರು ಗ್ರಾಮಾಂತರವನ್ನು ಅನುಲಕ್ಷಿಸಿ) ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ, ೨೦೧೧, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರು ಇರುಳಿಗರು ಮತ್ತು ಹಕ್ಕಿಪಿಕ್ಕಿ ಸಮುದಾಯದ ಅಧ್ಯಯನದ ಬಗ್ಗೆ ಚರ್ಚಿಸಿದ್ದಾರೆ.

ಹಂಪನಾಗರಾಜಯ್ಯ ಅವರ 'ದ್ರಾವಿಡ ಭಾಷಾ ವಿಜ್ಞಾನ' ಎಂಬ ಕೃತಿಯಲ್ಲಿ ಇರುಳಿಗ ಭಾಷೆಯನ್ನು ಕುರಿತು ಸೂಕ್ಷ್ಮವಾಗಿ ಚರ್ಚಿಸಿ, ಇರುಳಿಗ ಭಾಷೆ ಸ್ವತಂತ್ರ ಭಾಷೆ ಎಂದು ಒಪ್ಪಿಕೊಳ್ಳುತ್ತಾರೆ.

ಮೇತ್ರಿ ಕೆ.ಎಂ.ಅವರ ಕೃತಿಯಾದ 'ಸೂಕ್ಷ್ಮ ಆದಿವಾಸಿಗಳು' ಎಂಬ ಕೃತಿಯಲ್ಲಿ ಇರುಳ ಮತ್ತು ಇರುಳಿಗ ಬುಡಕಟ್ಟುಗಳನ್ನು ಒಟ್ಟಿಗೆ ಅಧ್ಯಯನ ಮಾಡಿ ಈ ಎರಡು ಬುಡಕಟ್ಟು ಪ್ರದೇಶದ ಭಿನ್ನತೆಯನ್ನು ಗುರುತಿಸುತ್ತಾರೆ.

ಕೆಂಪೇಗೌಡ ಕೆ. ಅವರ 'ದ್ರಾವಿಡ ಭಾಷಾ ವಿಜ್ಞಾನ' ಎಂಬ ಕೃತಿಯಲ್ಲಿ ಇರುಳಿಗರ ಭಾಷೆಯನ್ನು ಕುರಿತು ಚರ್ಚಿಸುತ್ತಾ ಇರುಳಿಗರ ಭಾಷೆಯನ್ನು ಕನ್ನಡ ಪದ ಬಳಕೆಯಾಗಿವೆ. ಆದ್ದರಿಂದ ಇದೊಂದು ಕನ್ನಡದ ಉಪಭಾಷೆ ಎಂದು ವಿವರಿಸುತ್ತಾರೆ.

ಬೈರೇಗೌಡ ಅವರ 'ಬಾಸಲೆಯಲ್ಲಿದ ಕಾಡುಕುಡಿಗಳು'ಎಂಬ ಕೃತಿಯಲ್ಲಿ ಇರುಳಿಗರ ವರ್ತಮಾನದ ಸ್ಥಿತಿಗತಿಗಳು, ಸಂಘಟನೆಯ ಹಾದಿಗಳ ಕುರಿತು ಮಾಹಿತಿ ನೀಡುತ್ತಾರೆ.

ಕೊನೆ ಟಿಪ್ಪಣಿಗಳು

೧. ಮೋಹನ್‌ಕೃಷ್ಣ ರೈ ಕೆ., ೨೦೦೪, ಪ್ರಭುತ್ವ ಮತ್ತು ಜನತೆ, ಪು.೬.

೨. ಬಾಲಗೋಪಾಲ್ ಕೆ. (ಮೂಲ), ಶ್ರೀಮತಿ ಹೆಚ್.ಎಸ್.(ಅನು), ೧೯೯೮, ಡಿ.ಡಿ.ಕೋಸಾಂಬಿ ಯವರ ಚಿಂತನೆಗಳು, ಪು.೭.

೩. ಮೋಹನ್‌ಕೃಷ್ಣ ರೈ ಕೆ., ೨೦೦೪, ಪ್ರಭುತ್ವ ಮತ್ತು ಜನತೆ, ಪು.೫.

೪. ರೋಮಿಲ ಥಾಪರ್(ಮೂಲ), ಉಮೇಶ್ ಹೆಚ್.ಎಸ್., ಶಶಿಕುಮಾರ್ ಮತ್ತು ದೀಪ, ೨೦೧೬, ಪ್ರಾಚೀನ ಭಾರತ ಉಗಮದಿಂದ ಕ್ರಿ.ಶ.೧೩೦೦ರವರೆಗೆ, ಪು.೧

೫. ಚಿನ್ನಸ್ವಾಮಿ ಸೋಸಲೆ, ಪ್ರಾಧ್ಯಾಪಕರು ಚರಿತ್ರೆ ವಿಭಾಗ ಚರ್ಚೆಯ ಸಂದರ್ಭ, ದಿನಾಂಕ ೨೦-೦೮-೨೦೧೭

೬. ಮೋಹನ್‌ಕೃಷ್ಣ ರೈ ಕೆ., ೨೦೦೪, ಪ್ರಭುತ್ವ ಮತ್ತು ಜನತೆ, ಪು.೫

೭. ಮೇಟಿ ಮಲ್ಲಿಕಾರ್ಜುನ, ೨೦೧೩, ಸಬಾಲ್ಟರ್ನ್ ಓದು, ಪು.೫

೮. ಅದೇ, ಪು.೫

೯. ಅದೇ, ಪು.೭

೧೦. ಮೋಹನ್‌ಕೃಷ್ಣ ರೈ ಕೆ.(ಸಂ)., ಗೋವಿಂದರಾಜು ಸಿ.ಆರ್.(ಲೇ), ೨೦೧೨, ಚರಿತ್ರೆ ಅಧ್ಯಯನ ಸಂಪುಟ-೦೭, ಸಂಚಿಕೆ ೨, ಪು.೧೬.

ಅಧ್ಯಾಯ: ಎರಡು

ಇರುಳಿಗ ಜನಾಂಗದ ಹಿನ್ನೆಲೆ

ಅಧ್ಯಾಯ: ಎರಡು

ಇರುಳಿಗ ಜನಾಂಗದ ಹಿನ್ನೆಲೆ

ಯಾವುದೇ ಬಡುಕಟ್ಟಿನ ಮೂಲವನ್ನು ಹುಡುಕಿ ನಿರ್ದಿಷ್ಟವಾಗಿ ಇಂತಹುದೇ ಎಂದು ಹೇಳುವುದು ಅತ್ಯಂತ ಕಷ್ಟಕರ ಕೆಲಸವಾಗಿದೆ. ಏಕೆಂದರೆ ಬುಡಕಟ್ಟುಗಳು ಜಲಸಂಪನ್ಮೂಲ, ದಟ್ಟ ಅರಣ್ಯ ಹಾಗೂ ಆಹಾರ ಸಿಗುವ ಕಡೆ ನೆಲೆಸಿರುತ್ತಾರೆ. ಇವುಗಳಿಗೆ ಕೊರತೆ ಉಂಟಾದರೆ ಸಿಗುವ ಕಡೆ ವಲಸೆ ಹೋಗುತ್ತಾರೆ. ಈ ವಲಸೆ ಸೀಮಿತ ಕಾಲದಲ್ಲಿ ಮಾತ್ರ ಕಂಡುಬಂದಿತು. ನಂತರ ಮಾನವ ಸ್ಥಿರವಾಗಿ ನೆಲೆ ನಿಲ್ಲಲು ಪ್ರಾರಂಭಿಸಿದ. ಜೀವ ಜಗತ್ತಿನ ಇತರೆ ಪ್ರಾಣಿಗಳಂತೆ ಮಾನವನು ಅನಾದಿಕಾಲದಿಂದಲೂ ತನ್ನ ಉಳಿವಿಗಾಗಿ ನಿರಂತರವಾಗಿ ಹೊಡೆದಾಡಿ ಗೆದ್ದು ತನ್ನ ಪಾರಂಪರಿಕ ಮನುಕುಲವನ್ನು ಸಮೃದ್ಧಿಗೊಳಿಸಿಕೊಂಡಿದ್ದಾನೆ.

ಪ್ರಪಂಚದ ಮಾನವರೆಲ್ಲರೂ ಒಂದೇ ಎಂಬುದು ಮೇಲುನೋಟಕ್ಕೆ ಕಂಡುಬಂದರೂ, ವಿಭಿನ್ನ ದೈಹಿಕ ಲಕ್ಷಣಗಳಿಂದ ಭಿನ್ನವಾಗಿ ಗುರುತಿಸಿಕೊಳ್ಳುತ್ತಾರೆ. ಬಹು ಮಟ್ಟಿಗೆ ವಾಣಿಕ ಮೂಲಾಧಾರದ ದೈಹಿಕ ಲಕ್ಷಣವಿರುವಂಥ ಮಾನವ ಅನ್ಯ ಸಸ್ತನಿ ಪ್ರಾಣಿಗಳಿಗಿಂತ ಅನನ್ಯವಾಗಿದ್ದಾನೆ. ಪ್ರಪಂಚದ ಪ್ರತಿಯೊಬ್ಬ ಮಾನವನು ಸ್ಥಳದಿಂದ ಸ್ಥಳಕ್ಕೆ, ಜನಾಂಗದಿಂದ ಜನಾಂಗಕ್ಕೆ ವೈವಿಧ್ಯತೆಯಿಂದಲೇ ಪ್ರಕಟಿಸುತ್ತಾನೆ. ಈ ವೈವಿಧ್ಯತೆಗಳನ್ನು ತಿಳಿದುಕೊಳ್ಳಲು ಪ್ರಪಂಚದ ಭೌತ ಮಾನವಶಾಸ್ತ್ರಜ್ಞರು, ಅಪರಾಧ ತಜ್ಞರು, ಜೀವಾಣುತಜ್ಞರು, ವಂಶವಾಹಿನಿಶಾಸ್ತ್ರಜ್ಞರು ಹಾಗೂ ರಕ್ತರಚನಾತಜ್ಞರು ಒಟ್ಟಾಗಿ ಅನೇಕ ಸಂಶೋಧನೆಗಳನ್ನು ನಡೆಸಿದರು. ಆದರೆ ನಿರ್ದಿಷ್ಟವಾಗಿ ಮಾನವ ಜನಾಂಗದ ಮೂಲ ಇದೆ. ಆ ನಂತರದಲ್ಲಿ ಇಲ್ಲಿಂದ ಮಾರ್ಪಾಡುಗೊಂಡಿದೆ. ಈ ಮಾರ್ಪಾಡಿಗೆ ಇದೇ ನಿರ್ದಿಷ್ಟವಾದ ಕಾರಣ ಎಂದು ಹೇಳಲು ಸಾಧ್ಯವಾಗದೇ ಹೋದಾಗ ಲಭ್ಯ ಸಾಕ್ಷ್ಯಾಧಾರಗಳ ಅಸಮಸ್ಯ ವ್ಯೂಹವನ್ನು ಭೇದಿಸಲು ಪ್ರಯತ್ನಿಸಿ ಇವರುಗಳು ಮಾನವನ ಬಾಹ್ಯಲಕ್ಷಣ ಸೂಚಕಗಳಾದ ಶರೀರದ ರೋಮ, ಚರ್ಮ, ಮೂಗು, ತುಟಿ, ತಲೆಕೂದಲು, ಹಣೆ, ಕಣ್ಣು, ಗಲ್ಲ, ಚರ್ಮದ ಬಣ್ಣ, ತಲೆ ಬುರುಡೆ, ದೇಹ, ಕೈಬೆರಳು, ಎತ್ತರ ಮುಂತಾದ

ಇತರೆ ಅಂಗೋಪಾಂಗಗಳಲ್ಲಿನ ವ್ಯಾತ್ಯಾಸಗಳನ್ನು ಸಂಗ್ರಹಿಸಿ ಅಭ್ಯಸಿಸಿದ ನಂತರ ಮಾನವನ ಮೂಲದ ಬಗ್ಗೆ ಹಲವಾರು ಅಭಿಪ್ರಾಯಗಳನ್ನು ನೀಡಿದ್ದಾರೆ.[೧]

ಇವರುಗಳಲ್ಲಿ ಮೊದಲಿಗನೆಂದರೆ 'ಲಿನ್ನೆಯಿಸ್'. ಇವನು ೧೮ ನೇ ಶತಮಾನದ ಮಧ್ಯಾವಧಿಯಲ್ಲಿ ಮಾನವ ಜನಾಂಗಗಳನ್ನು ಖಂಡಾನುಗುಣವಾಗಿ ವರ್ಗೀಕರಿಸುವ ಪ್ರಯತ್ನ ಮಾಡಿದನು. ಇದೊಂದು ಪ್ರಥಮ ಪ್ರಯತ್ನ ಎಂದೇ ಹೇಳಬಹುದು. ಇವನು ಮನುಕುಲವನ್ನು ವರ್ಣ ವೈವಿಧ್ಯತೆಗಳ ಆಧಾರದ ಮೇಲೆ ನಾಲ್ಕು ಜನಾಂಗಗಳೆಂದು ನಿರ್ಣಯಿಸಿ ಅವುಗಳನ್ನು ಕೆಳಕಂಡಂತೆ ವಿವರಿಸಿದನು.

ಐರೋಪ್ಯ ಶ್ವೇತರು, ಏಷ್ಯಾದ ಪೀತರು, ಅಮೆರಿಕಾದ ಗೌರರು ಮತ್ತು ಆಫ್ರಿಕಾದ ಕೃಷ್ಣರು. ಅನಂತರ ೧೭೭೫ರಲ್ಲಿ ಬ್ಲೂಮೆನ್‌ಬಾಬ್ ಎಂಬ ವಿದ್ವಾಂಸ ಲಿನ್ನೀಯಿಸ್ ಕ್ರಮವನ್ನೇ ಅನುಸರಿಸಿ ನಾಲ್ಕು ಜನಾಂಗಗಳ ವರ್ಗೀಕರಣಕ್ಕೆ ತೊಡಗಿದನು. ಅವುಗಳ ಜೊತೆಗೆ ಐದನೆಯದಾಗಿ ಸಾಗರಾಶ್ರಿತ ಜನಾಂಗ ಒಂದನ್ನು ಸೇರಿಸಿದನು. ಅವನ್ನು ಹೀಗೆ ನಾಮಕರಣ ಮಾಡಿದನು. ಕಕೇಷಿಯ, ಮಂಗೋಲಿಯ, ಇಥಿಯೋಪಿಯಾ, ಅಮೆರಿಕಾ ಮತ್ತು ಮಲಯ ಎಂಬುವುದಾಗಿ ಗುರುತಿಸಿ ಇವುಗಳನ್ನು ವಿಶ್ವ ಜನಾಂಗಿಕ ಭೂಪಟಗಳ ಮೇಲೆ ಬಿಳಿ, ಹಳದಿ, ಕಪ್ಪು ಮತ್ತು ಕಂದುಬಣ್ಣಗಳಿಂದ ಪ್ರತ್ಯೇಕಿಸಿ ತೋರಿಸುವ ಪ್ರಯತ್ನ ಮಾಡಿದನು. ಇದೇ ಇಂದಿಗೂ ಮುಂದುವರೆದುಕೊಂಡು ಬರುತ್ತಿದೆ.[೨]

ಆದರೆ ಕಾಲ ಬದಲಾದಂತೆ ಖಂಡಾಧಾರಿತ ಜನಾಂಗ ವರ್ಗೀಕರಣ ತತ್ವವು ಅಪರಿಪೂರ್ಣವಾದುದ್ದು ಎಂಬ ಅರಿವು ವಿದ್ವಾಂಸರಲ್ಲಿ ಮೂಡಿತು. ಜೊತೆಗೆ ಹಲವಾರು ಮಾನವಶಾಸ್ತ್ರಜ್ಞರು ವಿಶಿಷ್ಟ ಶಾರೀರಿಕ ಲಕ್ಷಣಗಳುಳ್ಳ ಆಸ್ಟ್ರೇಲಿಯನ್ನರು, ಬುಷ್ಮನರು ಮತ್ತು ಐನ್ ಮುಂತಾದ ಜನಸಮುದಾಯದಗಳನ್ನು ಸ್ವತಂತ್ರ ಜನಾಂಗಗಳೆಂದು ಪರಿಗಣಿಸಿ ಅವಕ್ಕೂ ಮುಖ್ಯ ಜನಾಂಗಗಳ ಮಾನ್ಯತೆಯನ್ನು ನೀಡಬೇಕೆಂದು ವಾದಿಸಿದರು. ಇದರ ಫಲವಾಗಿಯೇ ಅಮೆರಿಕಾದ ನಾಟ್ ಮತ್ತು ಗ್ಲೈಡನ್ ಎಂಬ ಲೇಖಕರು ಮಾನವ ಜನಾಂಗಗಳನ್ನು ಒಟ್ಟು ೭ ವರ್ಗಗಳಾಗಿ ವರ್ಗೀಕರಿಸಿದರು. ಅವುಗಳೆಂದರೆ ಐರೋಪ್ಯ, ಏಷ್ಯಾ, ನಿಗ್ರೋ, ಅಮೆರಿಕಾ, ಮಲೇಷಿಯ, ಆಸ್ಟ್ರೇಲಿಯ ಮತ್ತು ಉತ್ತರ ದ್ರುವ ಜನಾಂಗಗಳು ಇದು ಬ್ಲೂಮೆನ್‌ಬಾಬ್ ಅವರು ಮಾಡಿದ್ದ ಪಂಚವರ್ಗ ಜನಾಂಗಿಕ ಕ್ರಮಕ್ಕೆ ಆಸ್ಟ್ರೇಲಿಯ ಮತ್ತು ಎಸ್ಕಿಮೊ ಎಂಬೆರಡು ಜನಾಂಗಗಳನ್ನು ಸೇರಿಸಿ ಮಾಡಲಾದ ಏಳು ವರ್ಗ ಜನಾಂಗಿಕ ಕ್ರಮವೇ ಆಗಿತ್ತೆ ವಿನಃ ಹೊಸದೇನು ಇರಲಿಲ್ಲ.[೩]

ಡಬ್ಲ್ಯೂ ಸಿ.ಬಾಯ್ಡ್ ಎಂಬ ವಿದ್ವಾಂಸರು ೧೯೬೩ ಕಾಲಘಟ್ಟದಲ್ಲಿ ಕಂಡು ಬರುವಂತಹ ಸರಿಸುಮಾರು ಹದಿಮೂರು ಜನಾಂಗಗಳ ಪಟ್ಟಿಯನ್ನು ಸಿದ್ಧಪಡಿಸಿದ್ದಾರೆ. ಅವರು ಪ್ರಕಟಿಸಿದ ಜನಾಂಗ ವರ್ಗೀಕರಣ ಹೀಗಿದೆ.

೧. ಐರೋಪ್ಯ (ಉಪ) ಜನಾಂಗಗಳು ಒಟ್ಟು ೫

ಅ. ಆರಂಭದ ಐರೋಪ್ಯ ಜನಾಂಗ	ಕಕೇಷಿಯನ್ ಸ್ವರೂಪದ್ದು
ಆ. ಲ್ಯಾಪ್ಪಗಳು	ಕಕೇಷಿಯನ್ ಸ್ವರೂಪದ್ದು
ಇ. ಪೂರ್ವ ಹಾಗೂ ಮಧ್ಯ ಐರೋಪ್ಯರದು	ಕಕೇಷಿಯನ್ ಸ್ವರೂಪದ್ದು
ಈ. ವಾಯುವ್ಯ ಐರೋಪ್ಯರದು	ಕಕೇಷಿಯನ್ ಸ್ವರೂಪದ್ದು
ಉ. ಮೆಡಿಟರೇನಿಯರದು	ಕಕೇಷಿಯನ್ ಸ್ವರೂಪದ್ದು

೨. ಆಫ್ರಿಕಾದ ಜನಾಂಗಗಳು ೨(೩)

ಅ. ಉತ್ತರ ಆಫ್ರಿಕನ್ನರದು	ಕಕೇಷಿಯನ್ ಸ್ವರೂಪದ್ದು
ಆ. ಇತರ ಆಫ್ರಿಕನ್ನರವು	ಕಾಂಗೋ ಹಾಗೂ ಕಡೋ ಜನಾಂಗಗಳು

೩. ಏಷ್ಯಾದ ಜನಾಂಗಗಳು ೨

ಅ. ಏಷ್ಯಾದವರದು	ಮಂಗೋ ಜನಾಂಗ
ಆ. ಇಂಡೋ – ದ್ರಾವಿಡರದು	ಕಕೇಷಿಯ ಜನಾಂಗ

೪. ಅಮೆರಿಕಾ ಜನಾಂಗಗಳು ೧

ಅ. ಅಮೇರಿಕಾದ ಇಂಡಿಯನ್ನರದು	ಮಂಗೋ ಜನಾಂಗ[೮]

ಮಾನವ ಜನಾಂಗಗಳನ್ನು ಮೊದಮೊದಲು ಖಂಡಾನುಗುಣವಾಗಿ ವರ್ಗೀಕರಿಸುವ ಪ್ರಯತ್ನಗಳು ಮೇಲಿಂದ ಮೇಲೆ ನಡೆಯುತ್ತಲೇ ಬಂದಿವೆ. ಪ್ರಮುಖವಾಗಿ ೧೮ನೇ ಶತಮಾನ ಅತ್ಯಂತ ಹೆಚ್ಚು ಸಿದ್ಧಾಂತಗಳು ಮತ್ತು ಪ್ರಯೋಗಗಳು ಪ್ರಾರಂಭವಾದವು. ಇದರ ಫಲವಾಗಿಯೇ 'ಲಿನ್ನೇಯಸ್' ಎಂಬುವರು ಪ್ರಥಮವಾಗಿ ಇಡೀ ಮನುಕುಲವನ್ನು ವರ್ಣದ ವೈವಿಧ್ಯತೆಯ ಆಧಾರದ ಮೇಲೆ ನಾಲ್ಕು ಜನಾಂಗಗಳೆಂದು ವರ್ಗೀಕರಿಸಿದನು.

ಇವುಗಳಲ್ಲಿ ಐರೋಪ್ಯ ಶ್ವೇತರು, ಏಷ್ಯಾದ ಪೀತರು, ಅಮೆರಿಕಾದ ಗೌರರು ಮತ್ತು ಆಫ್ರಿಕಾದ ಕೃಷ್ಣರು ಮುಂದುವರೆದು ೧೭೭೫ ರಲ್ಲಿ ಬ್ಲೂಮೆನ್‌ಬಾಬ್ ಎಂಬ ವಿದ್ವಾಂಸ ಮೇಲೆ ಮಂಡಿಸಿದ 'ಲೇನಿಯಸ್' ಕ್ರಮವನ್ನು ಒಪ್ಪಿಕೊಳ್ಳುವುದರೊಂದಿಗೆ ಐದನೆಯದಾಗಿ ಸಾಗರಾಶ್ರಿತ ಜನಾಂಗ ಎಂಬ ಇನ್ನೊಂದು ಜನ ವರ್ಗವನ್ನು ಸೇರಿಸಿ, ಕಕೇಷಿಯಾ, ಮಂಗೋಲಿಯಾ, ಇಥಿಯೋಪಿಯಾ, ಅಮೆರಿಕಾ ಹಾಗೂ ಮಲಯ ಜನಾಂಗ ಎಂಬ ನಾಮಕರಣ ಮಾಡಿದನು. ಇವನು ಜನಾಂಗಗಳ ವರ್ಗೀಕರಣವನ್ನು ಭೂಪಟಗಳ ಮೇಲೆ ಬಿಳಿ, ಹಳದಿ ಕಪ್ಪು ಮತ್ತು

ಕಂದು ಬಣ್ಣಗಳಾಗಿ ತೋರಿಸಿ ವಿಸ್ತಾರವಾದ ತಿಳುವಳಿಕೆ ನೀಡಿದನು. ಇವನ ಈ ಪರಿಪಾಠವು ಇಂದಿಗೂ ಮುಂದುವರಿದುಕೊಂಡು ಬಂದಿದೆ.

ಹೀಗೆ ನಿರಂತರವಾಗಿ ಜನಾಂಗಗಳ ಮೇಲೆ ಪ್ರಯೋಗಗಳು ನಡೆದಂತೆಲ್ಲ. ಖಂಡಾಂತರ ಜನಾಂಗಿಕ ವರ್ಗೀಕರಣ ತತ್ವವನ್ನು ಅಪರಿಪೂರ್ಣವಾದದ್ದು ಎಂದು ನಿರ್ಧರಿಸಲಾಯಿತು. ಇದರ ಜೊತೆಗೆ ಇಡೀ ಮಾನವ ಜನಾಂಗದ ವರ್ಗೀಕರಣದಲ್ಲಿ ವಿಶಿಷ್ಟವಾದ ಶಾರೀರಿಕ ಗುಣಲಕ್ಷಣಗಳುಳ್ಳ ಆಸ್ಟ್ರೇಲಿಯನ್ನರು, ಬುಷ್ಮನ್ ಮತ್ತು ಐನು ಮುಂತಾದ ಜನಸಮುದಾಯಗಳನ್ನು ಸ್ವತಂತ್ರ ಜನಾಂಗಗಳೆಂದು ಪರಿಗಣಿಸಿ ಇತರೆ ಜನವರ್ಗಗಳಂತೆ ಪ್ರತ್ಯೇಕವಾದ ಮುಖ್ಯ ಜನಾಂಗಗಳ ಮಾನ್ಯತೆಯನ್ನು ನೀಡಬೇಕೆಂಬ ನಿಟ್ಟಿನಲ್ಲಿ ಅನೇಕ ವಾದಗಳನ್ನು ಮಂಡಿಸಿದರು. ಇದರ ಫಲವಾಗಿಯೇ ಅಮೆರಿಕಾದ ಮಾನವಶಾಸ್ತ್ರಜ್ಞರಾದ ನಾಟ್ ಮತ್ತು ಗಲೇಡನ್ ಎಂಬುವವರು ಮಾನ ಜನಾಂಗಗಳನ್ನು ಒಟ್ಟು ಏಳು ವರ್ಗಗಳಾಗಿ ವರ್ಗೀಕರಿಸಿದರು. ಅವುಗಳೆಂದರೆ ಐರೋಪ್ಯ, ಏಷ್ಯಾ, ನಿಗ್ರೋ, ಅಮೆರಿಕಾ, ಮಲೇಷಿಯಾ, ಆಸ್ಟ್ರೇಲಿಯಾ ಮತ್ತು ಉತ್ತರ ದ್ರುವ ಜನಾಂಗಗಳೆಂದು ಬ್ಲೂಮನ್‌ಬಾಬ್ ಎಂಬುವರು ಮಾಡಿದ್ದ ಪಂಚವರ್ಗ ಜನಾಂಗಿಕ ಕ್ರಮಕ್ಕೆ ಆಸ್ಟ್ರೇಲಿಯಾ ಮತ್ತು ಎಸ್ಕಿಮೋ ಎಂಬೆರಡು ಜನಾಂಗಗಳನ್ನು ಸೇರಿಸಿ ಮಾಡಲಾದ ಜನಾಂಗಿಕ ಕ್ರಮವಾಗಿತ್ತೆ ವಿನಹ ಹೊಸದೇನು ಆಗಿರಲಿಲ್ಲ ಎಂದು ವಿದ್ವಾಂಸರು ಅಭಿಪ್ರಾಯಿಸುತ್ತಾರೆ.[೫೫]

೫ ಪ್ರಶಾಂತ ಸಾಗರ ವಲಯ ಜನಾಂಗಗಳು

ಅ.	ಇಂಡೋನೇಷ್ಯನರದು	ಮಂಗೋಲ > ಆಫ್ರಿಕ ಜನಾಂಗ
ಆ.	ಮಲನೇಷ್ಯನರದು	ಆಫ್ರಿಕ > ಮಂಗೋಲ ಜನಾಂಗ
ಇ.	ಪಾರಿನೇಷ್ಯನರದು	ಮಂಗೋಲ > ಆಫ್ರಿಕ ಜನಾಂಗ
ಈ.	ಆಸ್ಟ್ರೇಲಿಯರದು	ಆಫ್ರಿಕಾ ಜನಾಂಗ[೬]

೧೯ನೇ ಶತಮಾನದ ಮಧ್ಯಾವಧಿಯ ಕಾಲದಲ್ಲಿ ಇಂತಹ ಅನೇಕ ವರ್ಗೀಕರಣಗಳು, ಸಿದ್ಧಾಂತ ಮತ್ತು ಅಭಿಪ್ರಾಯಗಳು ಬರಲಾರಂಭಿಸಿದವು. ಹಾಗೆ ಬಂದ ಹಲವಾರು ವರ್ಗೀಕರಣಗಳ ಸಾರ ಎಂಬಂತೆ ಫ್ರೆಂಚ್ ಭೌತ ಮಾನವಶಾಸ್ತ್ರಜ್ಞರು ಇಡೀ ಮನುಕುಲವನ್ನು ನಿಖರವಾಗಿ ಯಲ್ಲದಿದ್ದರೂ ತೃಪ್ತಿಕರವಾಗಿಯಾದರೂ ಮೂರು ಮುಖ್ಯ ವರ್ಗಗಳಾಗಿ ವಿಂಗಡಿಸಿದರು. ಅವುಗಳೆಂದರೆ, ಕಕೇಷಿಯಾ ಜನಾಂಗ, ನೀಗ್ರೋ ಜನಾಂಗ ಮತ್ತು ಮಂಗೋಲ ಜನಾಂಗ. ಆದರೆ ಕೆಲವು ವಿದ್ವಾಂಸರು ಟೀಕಿಸಿ ಆಸ್ಟ್ರೇಲಿಯ ಮತ್ತು ಪಾಲಿನೇಷ್ಯ ಜನಾಂಗಗಳನ್ನು ಸೇರಿಸಲು ಪ್ರಯತ್ನಿದರು.

ಒಟ್ಟಿನಲ್ಲಿ ಮೇಲಿನ ತ್ರಿವರ್ಗೀಯ ಜನಾಂಗಿಕ ವರ್ಗೀಕರಣ ಕ್ರಮವನ್ನು ಬಹುಸಂಖ್ಯಾತ ವಿದ್ವಾಂಸರು ಒಪ್ಪಿಕೊಂಡು ಹೆಚ್ಚು ಶ್ರಮವಿಲ್ಲದೆ ಸಕಲ ಮನುಕುಲವನ್ನು ಧರಿಸಬಲ್ಲ ವರ್ಗೀಕರಣವಾಗಿದೆ ಎಂದು ಶ್ಲಾಘಿಸಿದರು.

ಇದಾದನಂತರ ಕ್ರೋಬರ್ ಎನ್ನುವ ಮಾನವಶಾಸ್ತ್ರಜ್ಞ ಈ ಮೂರು ವರ್ಗೀಕರಣಕ್ಕೆ ಮತ್ತೆ ಮೂರು ಉಪ ಜನಾಂಗಗಳನ್ನು ಹೆಸರಿಸಿದರು. ಆದರೆ ಈಚೆಗೆ ಅಂದರೆ ೧೯೬೫ರಲ್ಲಿ ಪ್ರಮುಖ ಮಾನವಶಾಸ್ತ್ರಜ್ಞರಾದ ಪ್ರೊ. ಕೂನ್ ಮನುಕುಲದ ವರ್ಗೀಕರಣಕ್ಕೆ ತಮ್ಮದೇ ಆದ ನಿರ್ಣಯಗಳನ್ನು ನೀಡುತ್ತಾರೆ. ಅದೇನೆಂದರೆ ೪೦-೬೦ ವರ್ಷಗಳಿಂದ ಈಚೆಗೆ ವಂಶವಾಹಿನಿ ತಜ್ಞರು(Genetics) ಜನಾಂಗಿಕ ಅಧ್ಯಯನ ರಂಗದ ಕೇಂದ್ರದಲ್ಲಿದ್ದುಕೊಂಡು ಪ್ರಮುಖವಾಗಿ ಜನರ ರಕ್ತ ವರ್ಗಗಳನ್ನಾಧರಿಸಿ ಅಧ್ಯಯನ ನಡೆಸಿ ಮಿಕ್ಕೆಲ್ಲ ವಿಜ್ಞಾನಿಗಳಿಗಿಂತ ಭಿನ್ನ ಎಂದೆನಿಸಿಕೊಂಡಿದ್ದಾರೆ. ಇವರು ತಮ್ಮ ತೀರ್ಮಾನಗಳಲ್ಲಿ ಜನಸಮೂಹಗಳನ್ನು ವಿಭಾಗಿಸಿಕೊಂಡು ಅಧ್ಯಯನ ಮಾಡಬೇಕು ಎಂಬ ಕ್ರಮವನ್ನು ತೋರಿಸಿಕೊಟ್ಟು, ಅನಿವಾರ್ಯಕ್ಕೆ ತಕ್ಕಂತೆ ವಿಶ್ವ ಜನ ಸಮುದಾಯಗಳ ಜನಾಂಗಿಕ ಭೂಪಟಗಳನ್ನು ತಯಾರಿಸಿದ್ದಾರೆ. ಇವರ ವರ್ಗೀಕರಣವು ಪ್ರಮುಖವಾಗಿ ಮಾನವನ ಕಿವಿಯ ಗುಗ್ಗೆ, ದೇಹದ ಆಕಾರ, ಚರ್ಮದ ಬಣ್ಣ, ಕಣ್ಣಿನ ಆಕಾರ, ಗುಡ್ಡೆಯ ಗಾತ್ರ, ಮಸ್ತಿ, ರಕ್ತದ ವರ್ಗ, ಮೂಗಿನ ಆಕಾರ, ತಲೆಯ ಗಾತ್ರ ಮತ್ತು ಆಕಾರ, ಶಾರೀರಿಕ ಗಾತ್ರ ಮತ್ತು ಅಳತೆ, ಬಲಗಣ್ಣಿನ ಗಾತ್ರ ಮತ್ತು ಆಕಾರ, ಮುಖದ ಮಾಂಸಖಂಡಗಳ ರಚನೆ, ಬೆರಳುಗಳ ರಚನೆ ಮತ್ತು ಬೆರಳಿನಲ್ಲಿರುವ ರೇಖೆಗಳು, ಬಣ್ಣ, ಕುರುಡುತನ ರೋಚಕರು, ಆರೋಚಕರು ಕಾಯಿಲೆಗಳು ಮುಂತಾದ ಅಂಶಗಳ ಆಧಾರದ ಮೇಲೆ ಈ ಕೆಳಕಂಡ ವರ್ಗಗಳಾಗಿ ವಿಂಗಡಿಸಿದ್ದಾರೆ.

೧. ಕಕೇಷಿಯ ಜನಾಂಗ – Caucasoid

೨. ಮಂಗೋಲಾ ಜನಾಂಗ – Mongoloid

೩. ಆಸ್ಟ್ರೇಲಿಯ ಜನಾಂಗ – Austaloid

೪. ಕಾಂಗೋ ಜನಾಂಗ – Congoid

೫. ಕಪೋ ಜನಾಂಗ – Capoid[2]

೧. ಕಕೇಷಾಯ್ಡ್(ಕಕೇಷಿಯ ಜನಾಂಗ): ಕಾಕಸೆಸ್ ಪರ್ವತ ಪ್ರದೇಶದಲ್ಲಿ ಕಂಡು ಬಂದಂತಹ ಜನರನ್ನು ಕಕೇಷಿಯ ಜನಾಂಗ ಎಂದು ಕರೆಯುತ್ತಾರೆ. ಜೆ. ಎಫ್. ಬ್ಲೂಮನ್‌ಖಾನ್ ಎಂಬ ವಿದ್ವಾಂಸರು ಮೊದಲ ಬಾರಿಗೆ ಈ ಜನಾಂಗಕ್ಕೆ ಕಕೇಷಿಯನ್ ಜನಾಂಗ ಎಂದು ಹೆಸರಿಟ್ಟಿದ್ದಾರೆ. ಕಕೇಷಿಯನ್ ಜನಾಂಗದವರು ಯುರೋಪಿನಲ್ಲಿ ಬಹುಸಂಖ್ಯೆಯಲ್ಲಿ ಕಂಡು ಬರುವುದರಿಂದ ಇವರನ್ನು ಯುರೋಪಿಯನ್ನರು ಎಂತಲೂ ಕರೆಯುತ್ತಾರೆ.

ಯುರೋಪಿನ ಪಶ್ಚಿಮ ಏಷ್ಯಾ ಪ್ರಾಚೀನ ಚೌಕಟ್ಟಿನ ಭೂಶಿರ ಪಾತ್ರ ಮತ್ತು ಉತ್ತರ ಆಫ್ರಿಕಾ ಮೊದಲಾದೆಡೆಯಲ್ಲಿ ಪ್ರಾಚೀನ ಶಿಲಾಯುಗ ಮತ್ತು ಮಧ್ಯ ಶಿಲಾಯುಗ ಅಂದರೆ ಕ್ರಿಪೂ. ೬೫೦೦೦ ವರ್ಷದಿಂದ ಕ್ರಿ.ಪೂ.೧೧೦೦೦ ವರ್ಷ ನಡೆದ ಆಧುನಿಕ ಸಂಶೋಧನೆಯಲ್ಲಿ ದೊರೆತ ಕ್ರೋ- ಮ್ಯಾಗ್ನೇನ್ ಬಗೆಯ ಅಸ್ಥಿಪಂಜರದ ಆಧಾರದ ಮೇಲೆ ಇವರೇ ಐರೋಪ್ಯದ ಪೂರ್ವ ಜನರು ಎಂದು ನಂಬಲಾಗಿದೆ. ಸಹರಾ ಅರೇಬಿಯದಲ್ಲಿ ಸಿಕ್ಕಂತಹ ಅಸ್ಥಿ ಪಂಜರಗಳ ಅವಶೇಷಗಳನ್ನು ಆಧಾರವಾಗಿಟ್ಟುಕೊಂಡ ವಿದ್ವಾಂಸರು ಕಕೇಷಿಯನ್ ಜನಾಂಗಕ್ಕೆ ಸೇರಿದ ಬೇಟೆಗಾರರಾದ ಕೆಲವರು ಪಶ್ಚಿಮ ಏಷ್ಯಾದ ಪರ್ವತಗಳನ್ನು ದಾಟಿ ತುರ್ಕಿಸ್ಥಾನದಲ್ಲಿರುವ ಹುಲ್ಲುಗಾವಲು ಮತ್ತು ಅಲ್ಲಿನ ಮರುಭೂಮಿ ಪ್ರದೇಶಕ್ಕೆ ವಲಸೆ ಬಂದು ಅಲ್ಲಿಯೇ ವ್ಯವಸಾಯ, ಪಶುಸಂಗೋಪನೆ ಮಾಡಿಕೊಂಡು ಬದುಕುತ್ತಿದ್ದಾರೆ ಎಂದು ಅಭಿಪ್ರಾಯಿಸುತ್ತಾರೆ.

ಪಶ್ಚಿಮ ಏಷ್ಯಾದ ಕೇಂದ್ರದಿಂದ ಹೊರಟಂತಹ ಕಕೇಷಿಯನ್ ಜನಾಂಗದ ಮತ್ತೊಂದು ಗುಂಪು ಕಪ್ಪು ಸಮುದ್ರದ ಪ್ರದೇಶಗಳಿಂದ ತಮ್ಮ ವಲಸೆಯನ್ನು ಆರಂಭಿಸಿ ದುನುಬೆ ನದಿಯ ಕಣಿವೆಯ ಮೂಲಕ ಮಧ್ಯ ಹಾಗೂ ಪಶ್ಚಿಮ ಯೂರೋಪ್, ಮೆಡಿಟರೇನಿಯನ್ ಸಮುದ್ರದ ಉತ್ತರ ಕರಾವಳಿಯ ಸಿರಿಯಾ, ಪ್ಯಾಲಿಸ್ಟೀನಿ, ಈಜಿಪ್ಟ್, ಉತ್ತರ ಆಫ್ರಿಕಾ, ಸ್ಪೈನ್, ಪಶ್ಚಿಮ ಫ್ರಾನ್ಸ್, ಬ್ರಿಟನ್ ದ್ವೀಪ, ಪೂರ್ವ ಅಫ್‌ಘಾನಿಸ್ತಾನ, ಸಿಂಧೂ ಕಣಿವೆ, ತುರ್ಕಿಸ್ತಾನಗಳ ಬಯಸಿಸ್‌ಗಳಿಂದ ಚೀನಾದ ಪೀತನದಿ, ಅಪ್ಪರ್‌ಯೆಲ್ಲೊ ನದಿ, ಕೊರಿಯಾ ಒಳಗೊಂಡಂತೆ ಜಪಾನಿನವರೆಗೂ ಕಕೇಷಿಯನ್ ಜನಾಂಗ ವ್ಯಾಪಕವಾಗಿ ಸಂಚರಿಸಿ ಅಲ್ಲಲ್ಲಿ ನೆಲೆಬಿಟ್ಟಿದ್ದರು. ಪ್ರಮುಖವಾಗಿ ದುನಬೆ ನದಿಯಿಂದ ಆರಂಭಗೊಂಡ ಈ ವಲಸೆ ಕಕೇಷಿಯನ್ ಸ್ವರೂಪದ್ದು ರೈನ್ ನದಿಯ ಮೂಲಕ ಮೆಡಿಟರೇನಿಯ ಕರಾವಳಿಯನ್ನನುಸರಿಸಿ ಫ್ರಾನ್ಸ್‌ನ್ನು ತಲುಪಿದರು. ಅಲ್ಲಿಂದ ಮುಂದೆ ಇಂಗ್ಲಿಶ್ ಕಡಲ್ಗಾಲುವೆಯ ಮಾರ್ಗವಾಗಿ ಬ್ರಿಟನ್ ದ್ವೀಪಗಳಿಗೆ ಸಾಗಿದರು. ಇದರಿಂದ ಕಕೇಷಿಯ ಜನಾಂಗ ಇಡೀ ಪ್ರಪಂಚದ ಎಲ್ಲಾ ಭಾಗಗಳಲ್ಲೂ ಕಂಡು ಬರುವುದನ್ನು ನೋಬಹುದು.

ಕಕೇಷಿಯನ್ ಜನಾಂಗ ಇಡೀ ಪ್ರಪಂಚದಲ್ಲಿನ ಜನಸಂಖ್ಯೆಯಲ್ಲಿ ಅರ್ಧಭಾಗದಷ್ಟಿದ್ದಾರೆ. ಇವರು ೧೯೬೫ರ ಜನಸಂಖ್ಯೆಯ ವರದಿಯಲ್ಲಿ ೧೭೫.೭೦.೦೦.೦೦೦ ಇದ್ದು ಶೇ.೫೫.೭ ಇದ್ದಾರೆ. ಈ ಜನಾಂಗ ಭಾರತದಲ್ಲೇ ಸುಮಾರು ೧೦೦ ಕೋಟಿ ಜನರಿದ್ದಾರೆ. ಇದರ ಜೊತೆಗೆ ಏಷ್ಯಾ ಖಂಡದ ಅರ್ಧಭಾಗ ಉತ್ತರ ಆಫ್ರಿಕಾ, ದಕ್ಷಿಣಾ ಆಫ್ರಿಕಾ ಆಸ್ಟ್ರೇಲಿಯಾ ಮತ್ತು ಅಮೆರಿಕಾ ಖಂಡಗಳಲ್ಲಿ ಅಲ್ಲಲ್ಲಿ ಹಂಚಿಕೊಂಡಿದ್ದಾರೆ. ಇಡೀ ಪ್ರಪಂಚದಲ್ಲಿಯೇ ಮೊದಲ ಬಾರಿಗೆ ವ್ಯವಸಾಯ ಪಶುಪಾಲನೆಯನ್ನು ಆರಂಭಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಜಗತ್ತಿನ ಪ್ರಥಮ ನಾಗರಿಕತೆಯನ್ನು ಹುಟ್ಟುಹಾಕಿದ್ದು ಇವರೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಕಕೇಷಿಯನ್ ಜನಾಂಗಗಳಲ್ಲಿ ಕಂಡು ಬರುವ ಪ್ರಮುಖ ಉಪ ಪಂಗಡಗಳೆಂದರೆ ಐರೋಪ್ಯ ಕಕೇಷಿಯನ್ನರು, ನಾರ್ಡಿಕ್, ಅಲ್ಪೈನ್, ಮೆಡಿಟೇರಿಯನ್(೧೮೯೯ರಲ್ಲಿ ರಿಪ್ಲೆಯವರು ಸೂಚಿಸುತ್ತಾರೆ) ಆದರೆ ೧೯೦೦ರಲ್ಲಿ ಜೆ.ಡೆನಿಕರ್ ಈ ವಿಭಾಗವನ್ನು ಮತ್ತೆ ವಿಸ್ತರಿಸಿ ನಾರ್ಡಿಕ್ ಜನಾಂಗವನ್ನು ಯಥಾವತ್ತಾಗಿ ಒಪ್ಪಿಕೊಂಡು ಅಲ್ಪೈನ್‌ಗಳನ್ನು ಪೂರ್ವ ಐರೋಪ್ಯರು, ಡಿನಾರಿಕ್‌ಗಳಾಗಿ ವಿಂಗಡಿಸಿದ್ದಾರೆ. ಹಾಗೆಯೇ ಮೆಡಿಟರೇನಿಯನ್ ಜನಾಂಗದವರನ್ನು ಅಟ್ಲಾಂಟೊ ಮೆಡಿಟರೇನಿಯನ್ ಮತ್ತು ಐಬೆರೋ ಇನ್ಸುಲರ್‌ಗಳಾಗಿ ವರ್ಗೀಕರಿಸುತ್ತಾರೆ.[೮]

ಕಕೇಷಿಯನ್ ಜನಾಂಗದ ದೈಹಿಕ ಲಕ್ಷಣಗಳು ಐರೋಪ್ಯ ಜನರ ಮೈಬಣ್ಣ ಸುಂದರವಾಗಿರುತ್ತದೆ. ಆದರೆ ಪಶ್ಚಿಮ ಏಷ್ಯಾ, ಪಶ್ಚಿಮ ಸೈಬೀರಿಯ, ರಷ್ಯಾದ ತುರ್ಕಿಸ್ತಾನ್, ಟರ್ಕಿ, ಇರಾನ್, ಅರ್ಮೇನಿಯಾ, ಕಾಕಸಸ್ ಪ್ರದೇಶ, ಅಫಘಾನಿಸ್ಥಾನ ಮತ್ತು ಏಷ್ಯದ ಅರಬ್ ದೇಶಗಳು ಇಸ್ರೈಲ್ ಹಾಗೂ ಪಾಕಿಸ್ತಾನ, ಇಂಡಿಯಾ ದೇಶದಲ್ಲಿ ಈ ಜನರು ಮೈಬಣ್ಣ ಗಾಡವಾಗುತ್ತಾ ಸಾಗುತ್ತದೆ. ಪ್ರಮುಖವಾಗಿ ಬಂಗಾಳ ಮತ್ತು ದಕ್ಷಿಣ ಭಾರತದಲ್ಲಿ ಹೆಚ್ಚು ಕಡಿಮೆ ಕಪ್ಪು ಎಂಬಷ್ಟರಮಟ್ಟಿಗೆ ಗಾಢವಾಗುತ್ತ ಬರುತ್ತದೆ.

ತಲೆಗೂದಲು ಅತ್ಯಂತ ನೀಳವಾಗಿ ಸಮುದ್ರದ ಅಲೆಯ ರೀತಿಯಲ್ಲಿ ಸಮೃದ್ಧವಾಗಿ, ದಟ್ಟವಾಗಿ ಬೆಳೆಯುತ್ತದೆ. ಮುಖಲಕ್ಷಣವು ಕೋಲು ಮುಖ, ಅಗಲ ಮುಖಗಳು ಇರುತ್ತವೆ. ಮೂಗು ಗಿಳಿ ಮೂಗಿನಂತಿದ್ದು ಕೆಲವೊಮ್ಮೆ ಅಗಲ ಹಾಗೂ ಗಿಡ್ಡವಾಗಿರುತ್ತವೆ. ತುಟಿಗಳು ತೆಳುವಾಗಿದ್ದು ಅಲ್ಲೊಬ್ಬ ಇಲ್ಲೊಬ್ಬರಲ್ಲಿ ಉಬ್ಬಿಕೊಂಡಿರುವುದನ್ನು ಕಾಣಬಹುದು. ಹಲ್ಲುಗಳು ಸಣ್ಣ ಗಾತ್ರದಿಂದ ಹಿಡಿದು ಮಧ್ಯಮ ಗಾತ್ರದವರೆಗೂ ಕಂಡು ಬರುತ್ತವೆ. ದವಡೆ ಮೂಳೆಗಳು ಉಬ್ಬಿಕೊಂಡಿರದೆ ಸಾಮಾನ್ಯವಾಗಿರುತ್ತದೆ. ಗಲ್ಲವು ಉದ್ದವಾಗಿದ್ದು ಗಂಡಸರಲ್ಲಿ ಗಡ್ಡ ಹಾಗೂ ಶರೀರದ ರೋಮಗಳು ಧಾರಾಳವಾಗಿ ಕಂಡು ಬಂದು ಬೋಳು ತಲೆಯವರು ಈ ಜನಾಂಗಗಳಲ್ಲಿ ಅತ್ಯಂತ ವಿರಳವಾಗಿ ಕಂಡು ಬರುತ್ತಾರೆ. ಜೊತೆಗೆ ಬಿಳಿಕೂದಲು ಬೇಗನೆ ಬಂದು ಬಿಡುತ್ತವೆ. ಗಾತ್ರದಲ್ಲಿ ಇವರು ದಪ್ಪಪುಷ್ಪವಾಗಿ ಮೀನಿನ ಬಂಡಗಳಂತೆ ಇವರ ದೇಹ ಕಾಣುತ್ತದೆ. ಇವರು ಸಾಮಾನ್ಯವಾಗಿ ಒಳ್ಳೆಯ ಎತ್ತರವನ್ನು ಹೊಂದಿರುತ್ತಾರೆ.

೨. **ಮಂಗೋಲಾಯ್ಡ್–ಮಂಗೋಲ ಜನಾಂಗ:** ಚೀನಾ ಪ್ರದೇಶಗಳಲ್ಲಿ ಹುಟ್ಟಿ ಬೆಳೆದು ತನ್ನದೇ ಆದ ವಿಶಿಷ್ಟ ದೈಹಿಕ ಲಕ್ಷಣಗಳಿಂದ ಗುರುತಿಸಿಕೊಳ್ಳುವ ವಿಶಿಷ್ಟ ಜನಾಂಗವಾಗಿದ್ದಾರೆ. ಕಕೇಷಿಯನ್ ಜನಾಂಗವನ್ನು ಹೊರತುಪಡಿಸಿದರೆ ಜನಗತ್ತಿನ ಜನಸಂಖ್ಯೆಯಲ್ಲಿ ಕಂಡುಬರುವ ಎರಡನೇ ದೊಡ್ಡ ಜನಸಂಖ್ಯೆ ವರ್ಗವೆಂದರೆ ಮಂಗೋಲಾಯ್ಡ್.

ಮಂಗೋಲಾಯ್ಡ್ ಜನಾಂಗದ ಮೂಲ ಚೀನ ದೇಶವಾಗಿದೆ. ಚೀನಾದ ದಕ್ಷಿಣ ಶಾನ್ಸಿ ಪ್ರಾಂತದ ಎಲ ಪ್ರಾಂತ್ಯದಲ್ಲಿ ಹದಿನೈದು ಲಕ್ಷ ವರ್ಷಕ್ಕಿಂತ ಪ್ರಾಚೀನ ಶಿಲಾಯುಧಗಳು

ಕಂಡುಬಂದಿವೆ. ಹಾಗೆಯೇ ಚೀನಾದ ಚೌಕೌಟಿಯನ್ ಪ್ರಾಂತ್ಯದಲ್ಲಿ ಸುಮಾರು ೧೧ ಲಕ್ಷ ವರ್ಷಗಳಿಗೂ ಹಳೆಯದಾದ "ಚೈನಾ ಮಾನವನ" ಅಸ್ಥಿಪಂಜರಗಳು ಸಿಕ್ಕಿವೆ. ಈ ಸಂಶೋಧನೆಗಳ ಆಧಾರದ ಮೇಲೆ ಮಂಗೋಲಾಯ್ಡ್ ಆಗ್ನೇಯ ಜನಾಂಗದ ಮೂಲ ನೆಲೆ ಚೀನವಾಗಿದ್ದು ಜಪಾನ್, ಇಂಡೋನೇಷ್ಯಾದ ಆಗ್ನೇಯಾ ಹಾಗೂ ಪೌ ಪ್ರಾಂತ್ಯ ಹಾಗೂ ಏಷ್ಯಾದ ಹಲವು ದೇಶಗಳಲ್ಲಿ ಮಂಗೋಲಾಯ್ಡ್ ಜನಾಂಗದವರು ಕಂಡು ಬರುತ್ತಾರೆ.

ಭೌಗೋಳಿಕವಾಗಿ ಈ ಜನಾಂಗವು ಜನಾವೃತವಾದ ಭೂಮಂಡಲದಲ್ಲಿ ಅರ್ಧದಷ್ಟಿದ್ದಾರೆ. ಇವರು ರಷ್ಯಾದ ವೋಲ್ಗಾ ನದಿಯಿಂದ ಮಡಗಾಸ್ಕರ್ ಪಶ್ಚಿಮ ಅಮೆರಿಕಾ ದಕ್ಷಿಣ ಅಮೆರಿಕಾದಿ ಯಾಗಿ ತಿಯರ್ರನ ಡೆಲ್‌ಪುಗೋ ದ್ವೀಪದವರೆಗೂ ಸಂಚರಿಸಿ ನೆಲೆಸಿದ್ದಾರೆ.

ಮಂಗೋಲಾಯ್ಡ್ ಜನಾಂಗವು ೧೯೫೫ರ ವಿಶ್ವ ಜನಸಂಖ್ಯೆ ಪರಿಧಿಯ ಪ್ರಕಾರ ನಿರಂತರ ಏರಿಕೆ ಕಂಡುಬಂದಿದ್ದು ೧೮೮೮ರಲ್ಲಿ ೧೫೦ ಕೋಟಿ ೧೯೮೮ ರಲ್ಲಿ ೫೦೦ ಕೋಟಿ ಯಷ್ಟು ದಾಖಲಾಗಿದ್ದಾರೆ. ವಿಶ್ವದ ಸರಿಸುಮಾರು ಜನಸಂಖ್ಯೆಯಲ್ಲಿ ೨೦೦ ಕೋಟಿಗಿಂತಲೂ ಹೆಚ್ಚಾಗಿ ಮಂಗೋಲಾಯ್ಡ್ ಜನಾಂಗದವರು ಕಂಡು ಬರುತ್ತಾರೆ. ಚೀನಾ ದೇಶವೊಂದರಲ್ಲೇ ೧೯೮೮ರಲ್ಲಿ ೧೦೯ ಕೋಟಿ ೭೦ ಲಕ್ಷ ಜನರು ದಾಖಲಾಗಿದ್ದಾರೆ. ಹಾಗೆಯೇ ಭಾರತದ ಈಶಾನ್ಯ ಪ್ರದೇಶದ ಅಗ್ನೇಯ ಏಷ್ಯಾ ಮತ್ತು ಅಮೆರಿಕಾದ ರೆಡ್ ಇಂಡಿಯನ್‌ಗಳಾಗಿಯೂ ಗುರುತಿಸಿಕೊಂಡಿದ್ದಾರೆ.[೯]

ಮಂಗೋಲಾಯ್ಡ್ ಜನಾಂಗದಲ್ಲಿ ಕಂಡು ಬರುವ ಪ್ರಮುಖ ಉಪಪಂಗಡಗಳೆಂದರೆ, ಪೂರ್ವ ಏಷ್ಯಾ ಮಂಗೋಲರು (ಉತ್ತರ ಮಂಗೋಲರು) ದಕ್ಷಿಣ ಮಂಗೋಲರು, ಪಾಶ್ಚಾತ್ಯ ಮಂಗೋಲರು(ಅಮೆರಿಕಾದ ರೆಡ್ ಇಂಡಿಯನ್‌ರು).[೧೦]

ಮಂಗೋಲಾಯ್ಡ್ ಜನಾಂಗದ ಪ್ರಮುಖ ಲಕ್ಷಣಗಳೆಂದರೆ ಇವರ ಕಣ್ಣುಗಳು ಕಿರಿಗಣ್ಣುಗಳಾಗಿರುತ್ತದೆ(ಮಂಗೋಲ್ ಕಣ್ಣು). ಈ ಕಣ್ಣುಗಳು ಮಂಗೋಲ ಜನಾಂಗದ ಮೊದಲ ಐಡೆಂಟಿಟಿಯಾಗಿದೆ. ದೇಹದ ಬಣ್ಣವು ಶ್ವೇತ ವರ್ಣದಿಂದ ಹಿಡಿದು ರಕ್ತಕಂದು ಬಣ್ಣದವರೆಗೂ ಕಂಡು ಬರುತ್ತದೆ. ತಲೆಗೂದಲು ಕಡುಕಪ್ಪಾಗಿ ರೇಷ್ಮೆಯ ಎಳೆಗಳಂತೆ ಮಿಂಚುತ್ತಿರುತ್ತವೆ. ಇವರಲ್ಲಿ ಬೊಕ್ಕ ತಲೆ ಮತ್ತು ಬಿಳಿಕೂದಲಿನವರು ತೀರ ವಿರಳವಾಗಿದ್ದರೆ, ಕೆನ್ನೆ ಮೂಳೆಗಳು ಉಬ್ಬಿಕೊಂಡಿದ್ದು. ಮುಖ ಅಗಲವಾಗಿ ಅದರಲ್ಲಿ ಕಣ್ಣುಗಳನ್ನು ಕೊರೆದು ಮಾಡಿರುವಂತೆ ಕಂಡುಬರುತ್ತದೆ. ಮುಂಭಾಗದ ಹಲ್ಲುಗಳು ಗುಂಡಾಗಿದ್ದು ಕೋರೆ ಹಲ್ಲುಗಳು ಚೂಪಾಗಿ ಗುದ್ದಲಿಯಾಕಾರದಲ್ಲಿ ಕಂಡು ಬಂದು, ಮೂಗು ಗಿಣಿ ಮೂಗಿನಂತೆ ಕಾಣಿಸುತ್ತದೆ. ದಕ್ಷಿಣ ಚೀನಾ ಆಗ್ನೇಯ ಏಷ್ಯಾ, ಇಂಡೋನೇಷ್ಯಾ, ಸೈಬೀರಿಯಾ ಎಸ್ಕಿಮೋ ಮತ್ತು ದಕ್ಷಿಣ ಅಮೆರಿಕಾದ ಅಮೇಜಾನ್ ಪ್ರದೇಶಗಳಲ್ಲಿ ಕಂಡು ಬರುವ ಮಂಗೋಲಾಯ್ಡ್ ಜನಾಂಗದವರಿಗೆ

ಚಪ್ಪಟೆ ಮೂಗು ಕಂಡು ಬರುತ್ತದೆ. ಆದರೆ ಭಾರತದ ಅಸ್ಸಾಂ ಹಾಗೂ ನಾಗಲ್ಯಾಂಡ್‌ನಲ್ಲಿ ಕಂಡು ಬರುವ ಮಂಗೋಲಾಯ್ಡ್ ಜನಾಂಗದವರಿಗೆ ಗಿಳಿಮೂಗೆ ಕಂಡು ಬರುತ್ತದೆ. ಇವರ ತುಟಿಗಳು ತೆಳುವಾಗಿ ನೋಡಲು ಅಷ್ಟೊಂದು ಆಕರ್ಷಕವಾಗಿರುವುದಿಲ್ಲ. ಗಡ್ಡ ಚಿಕ್ಕದಾಗಿದ್ದು ದವಡೆ ಉಬ್ಬಿಕೊಂಡು ಉದ್ದವಾಗಿ ಕಾಣಿಸುತ್ತದೆ. ಇವರ ದೇಹವು ಗಿಡ್ಡ ಕಾಲುಗಳಿದ್ದು, ಉಗುರುಗಳು ಪಾರ್ಶ್ವ ನೋಟಕ್ಕೆ ಬಾಗಿದಂತೆ ತೋರುತ್ತದೆ.

೩. ಆಸ್ಟ್ರಲಾಯ್ಡ್ ಆಸ್ಟ್ರೇಲಿಯ ಜನಾಂಗ: ಆಸ್ಟ್ರೇಲಿಯಾ ಖಂಡದ ನ್ಯೂಗಿನಿ, ಬೋರಿಯಾ, ಮಡಗಾಸ್ಕರ್, ಸುಮಾತ್ರ ಹಾಗೂ ಇತರೆ ದ್ವೀಪ ಸಮುದಾಯಗಳಲ್ಲಿ ಕಂಡು ಬರುವ ಕಪ್ಪು ಮೈಬಣ್ಣ ಅಗಲ ಮೂಗು ಉದ್ದನೆಯ ಕಾಲು, ಸಣ್ಣ ತಲೆ ಮುಂಚಾಚಿದ ಮೇಲ್ದವಡೆ, ಗುಂಗುರು ಕೂದಲನ್ನೊಳಗೊಂಡ ಜನಸಮುದಾಯವೇ ಆಸ್ಟ್ರೋಲಾಯ್ಡ್ ಜನಾಂಗ

ಇದುವರೆಗಿನ ಸಂಶೋಧನೆಗಳ ಆಧಾರದ ಮೇಲೆ ಆಸ್ಟ್ರಲಾಯ್ಡ್ ಜನಾಂಗವು ಶೇ ೭೪೦೦೦ದಷ್ಟು ಕಂಡುಬಂದಿದೆ. ಆದರೆ ಮೂಲ ಆಸ್ಟ್ರಲಾಯ್ಡ್ ಜನಾಂಗವು ಅತ್ಯಂತ ವಿರಳಾಗಿದ್ದು ನ್ಯೂಗಿನಿ, ಆಸ್ಟ್ರೇಲಿಯ ಖಂಡ ಮತ್ತು ಪ್ಲಿಸ್ಟೊಸೀನ್ ತವರು ಮನೆಯಾಗಿದೆ. ಇದರೊಂದಿಗೆ ಕೆಲವು ಮಂಗೋಲಾಯ್ಡ್ ಜನಾಂಗದವರು ಚೀನಾದಿಂದ ಬಂದು ಆಕ್ರಮಿಸಿದ್ದರ ಫಲವಾಗಿ ಆಸ್ಟ್ರೋಲಾಯ್ಡ್ ಮತ್ತು ಮಂಗೋಲಾಯ್ಡ್ ಸಮ್ಮಿಶ್ರಣ ಹೊಂದಿದ್ದಾರೆ.

ಆಸ್ಟ್ರೋಲಾಯ್ಡ್ ಜನಾಂಗದವರು ಆಸ್ಟ್ರೇಲಿಯಾ ಖಂಡ, ಫಿಲಿಫೈನ್, ಮಡಗಾಸ್ಕರ್, ಬೋರ್ನಿಯಾ, ನ್ಯೂಗಿನಿ, ಪಾಲಿನೇಷ್ಯ, ಮೈಕ್ರೊನೀಷ್ಯಾ, ನ್ಯೂಕ್ಯಾಲಡೇನಿಯದಿಂದ ಹಿಡಿದು ಮಲೇಷ್ಯಾದವರೆಗೆ ಹರಡಿಕೊಂಡಿದ್ದಾರೆ. ಪ್ರೊ. ಕೂನ್ ಅವರು ಹೇಳುವಂತೆ ಅಸ್ಟ್ರಾಲಾಯ್ಡ್ ಮತ್ತು ಮಂಗೋಲಾಯ್ಡ್‌ಗಳ ಸಮ್ಮಿಶ್ರಣವೇ ಮಲೇಷಿಯ ಜನರಾಗಿದ್ದಾರೆ.[೧೧] ಮೂಲ ಅಸ್ಟ್ರಾಲಾಯ್ಡ್ ಜನಾಂಗದವರ ದೈಹಿಕ ಲಕ್ಷಣಗಳೆಂದರೆ ಸಾಮಾನ್ಯವಾಗಿ ೫.೪ರಿಂದ ೫.೧೧ರಷ್ಟು ಎತ್ತರವಾಗಿರುತ್ತಾರೆ. ವಾತಾವರಣಕ್ಕೆ ಸಂಬಂಧಿಸಿದಂತೆ ಕಪ್ಪು ಮತ್ತು ಕಂದು ಬಣ್ಣದಲ್ಲಿ ಕಂಡುಬರುತ್ತಾರೆ. ಇವರ ಕಣ್ಣುಗಳು ಕಂದು ಬಣ್ಣದಿಂದ ಕೂಡಿದ್ದು, ತಲೆಕೂದಲುಗಳು ಗುಂಗುರುಗಳಾಗಿದ್ದು ಕಪ್ಪಾಗಿರುತ್ತವೆ. ದವಡೆ ಮೂಳೆಗಳು ದಪ್ಪವಾಗಿದ್ದು ಮೇಲ್ದವಡೆ ಮುಂಚಾಚಿಕೊಂಡು ಹಲ್ಲುಗಳು ಮೊರದ ಆಕಾರಗಳಂತಿದ್ದು, ಕಣ್ಣುಗಳು ಒಳಗೆ ಹೋದಂತೆ ಕಂಡು ಬರುತ್ತವೆ. ತುಟಿಗಳು ಉಬ್ಬಿಕೊಂಡು ಮೂಗು ಅಗಲವಾಗಿ ಕಂಡುಬರುತ್ತದೆ. ಕೆಲವೊಂದು ಸಂದರ್ಭದಲ್ಲಿ ನೀಗ್ರೋಗಳನ್ನು ಹೋಲುವಂಥ ಜನಾಂಗವಾಗಿ ಕಂಡು ಬರುತ್ತಾರೆ. ಇವರಲ್ಲಿ ಬಿ ಗುಂಪಿನ ರಕ್ತ ಹೊಂದಿರುವವರು ಹೆಚ್ಚಾಗಿ ಕಂಡುಬಂದು ಎಂ.ಎನ್.ಎಸ್. ಬಗೆಯ ರಕ್ತವರ್ಗದವರೇ ಆಗಿದ್ದಾರೆ. ವಿಶೇಷವಾಗಿ ಇವರ ಬೆರಳ ತುದಿಯ ರೇಖೆಯು ಚಕ್ರಾಕೃತಿಯಲ್ಲಿ ಕಂಡು ಬರುತ್ತದೆ. ಸುಮಾರು ೨೬ ಸಾವಿರ ವರ್ಷಗಳಿಂದ ಆಸ್ಟ್ರೇಲಿಯಾದಲ್ಲಿ ಜನವಸತಿ ಕಂಡುಬಂದಿರಬೇಕೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಅಸ್ಟ್ರಲಾಯ್ಡ್ ಕಂಡು ಬರುವ ಪ್ರಮುಖ ಉಪಪಂಗಡಗಳೆಂದರೆ ನಿಗ್ರೋಟೋಗಳು. ಇವರು ಆಫ್ರಿಕಾದ ಪಿಗ್ಮಿಗಳನ್ನು ಹೋಲುವಂತಿರುತ್ತಾರೆ. ಅವರ ಜೊತೆಗೆ ಜೈವಿಕ ಸಂಬಂಧವನ್ನು ಹೊಂದಿದ್ದಾರೆ. ಇದೇ ದೈಹಿಕ ಲಕ್ಷಣಗಳನ್ನು ಹೊಂದಿರುವ ಜನರನ್ನು ಭಾರತದ ಕೇರಳ (ಕಾಪರ್), ಅಂಡಮಾನ್, ಮಲೆ ಪೆನಿನ್ಸುಲರ್, ಸೆಮಾಂಗ್, ಫಿಲಿಫೈನಿನ ಆಯೇಟರ್, ಸುಂಬದ ಹಾಗೂ ತೈಮೂರಿನ ಸಸ್ಯಗಳು ಕಾಂಬೋಜರು, ಮಲೇನೇಷ್ಯನರು, ಪಾಲಿನೇಷ್ಯರು, ಮೈಕ್ರೋನೇಷ್ಯರು ಹಾಗೂ ಮಡಗಾಸ್ಕರ್‌ನಲ್ಲಿನ ವಿವಿಧ ಪ್ರದೇಶ ಮತ್ತು ಜನಾಂಗಗಳಲ್ಲಿ ಕಂಡು ಬರುತ್ತಾರೆ.

೪. ನೀಗ್ರೋಯ್ಡ್–ನಿಗ್ರೋ ಜನಾಂಗ: ಮಾನವನ ಅಸ್ತಿತ್ವದ ವಿಷಯಕ್ಕೆ ಬಂದರೆ ಆದಿಮಾನವನಿಂದ ಆಧುನಿಕ ಮಾನವನವರೆಗೂ ಎಲ್ಲಾ ಮೂಲದ ಕುರುಹುಗಳು ಪತ್ತೆಯಾಗಿರುವುದು ಆಫ್ರಿಕಾ ಖಂಡದಲ್ಲೇ ಎಂಬುದು ಅತ್ಯಂತ ಮಹತ್ವವಾದುದು. ಅಚುಲಿಯನ್ ಹರಳಿನ ಕಲ್ಲಿನ ಆಯುಧದಿಂದ ಹಿಡಿದು ಇತರೆ ಎಲ್ಲಾ ಬಗೆಯ ಆಯುಧಗಳ ಆವಿಷ್ಕಾರವಾಗಿರುವುದು ಆಫ್ರಿಕಾ ಖಂಡದಲ್ಲೆ.

ಈ ಖಂಡದಲ್ಲಿ ೧೦ ಲಕ್ಷ ವರ್ಷಗಳ ಹಿಂದೆಯೇ ಮಾನವನು ವಾಸಿಸುತ್ತಿದ್ದುದರ ಬಗ್ಗೆ ಸಹರಾ ಮರುಭೂಮಿಯ ಆಸುಪಾಸಿನಲ್ಲಿ ಕುರುಹುಗಳು ಸಿಕ್ಕಿವೆ. ಏಷ್ಯಾ ಖಂಡದಂತೆಯೇ ಅತ್ಯಂತ ವೈಶಿಷ್ಟ್ಯಪೂರ್ಣ ಖಂಡವೆಂದರೆ ಅದು ಆಫ್ರಿಕಾ ಖಂಡವಾಗಿದೆ. ಎಲ್ಲಾ ವಿಜ್ಞಾನಿ ವಿದ್ವಾಂಸರು ಇಂದಿಗೂ ಮಾನವನ ವಿಕಾಸದ ಹಾದಿಯನ್ನು ತೋರಿಸುವುದೇ ಆಫ್ರಿಕಾ ಖಂಡದಲ್ಲಿ.

ವಿಶೇಷವಾಗಿ ಈ ಖಂಡವು ಸಮಭಾಜಕ ವೃತ್ತದಿಂದ ಕೆಳಗಡೆ ಕಂಡುಬರುವುದರಿಂದ ಏಷ್ಯಾ ಖಂಡಕ್ಕಿಂತಲೂ ಕಡಿಮೆ ಪ್ರಮಾಣದ ಬೆಟ್ಟಗುಡ್ಡಗಳನ್ನು ಹೊಂದಿದೆ. ಇಲ್ಲಿನ ಮೂಲ ನಿವಾಸಿಗಳ ಮೇಲೆ ಬೇರೆ ಜನಾಂಗಗಳ ಆಕ್ರಮಣ ಕಡಿಮೆಯಾದ್ದರಿಂದ ಇಂದಿಗೂ ತಮ್ಮ ಮೂಲಗುರುತುಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಆಫ್ರಿಕಾವನ್ನು ನೀಗ್ರೋಗಳ ತವರುಮನೆ ಎಂದೇ ಕರೆಯುತ್ತಾರೆ. ಇಲ್ಲಿ ಸ್ಥಳೀಯ ಆಫ್ರಿಕಾ ನೀಗ್ರೋಗಳು ಪಿಗ್ಮಿ ನಿಗ್ರಿಟೀಗಳು, ಕಾಂಗೋ, ಕಪೋಯ್ಡ್, ಉತ್ತರ ಆಫ್ರಿಕಾದ ಕಕೇಷಿಯನ್ನರು, ಇಥಿಯೋಫಿಯ ಹಾಗೂ ಪೂರ್ವ ಆಫ್ರಿಕಾದ ಪ್ರಸ್ಥಭೂಮಿ ಮಿಶ್ರ ಜನಾಂಗದವರು, ಪಿಗ್ಮಿಗಳು ನೀಗ್ರೋಗಳು, ಬುಷ್ಮನರು ಮತ್ತು ಹಾಟೆಂಟಾಗಳು ಎಂಬ ಉಪಜನಾಂಗಗಳು ಕಂಡು ಬರುತ್ತಾರೆ.

ನೀಗ್ರೋಯ್ಡ್ ದೈಹಿಕ ಲಕ್ಷಣಗಳೆಂದರೆ ಗಿಡ್ಡಮೂಗು, ಉಬ್ಬಿದ ತುಟಿ ಕಂಡು ಬರುತ್ತದೆ. ಪ್ರಮುಖವಾಗಿ ಮೇಲಿನ ಉಪಪಂಗಡಗಳಂತೆ ದೈಹಿಕ ಲಕ್ಷಣಗಳಲ್ಲೂ ಅನೇಕ ಭಿನ್ನತೆಗಳನ್ನು ಗುರುತಿಸಬಹುದು. ಪಿಗ್ಮಿ ನೀಗ್ರೋಗಳು (ಕುಳ್ಳ ದೇಹ) ಫಿಲಿಫೈನ್, ಮಲೆ ಪೆನಿನ್ಸುಲ್, ಅಂಡಮಾನ್ ದ್ವೀಪ ನ್ಯೂಗಿನಿಯಲ್ಲಿ ಕಂಡು ಬರುತ್ತಾರೆ. ಇವರು ದಪ್ಪ ತಲೆ, ಹಳದಿ ಕಂದು

ಬಣ್ಣ, ಸುಕ್ಕು ಚರ್ಮ, ಚಿಕ್ಕ ಚಪ್ಪಟೆ ಕಿವಿ, ಅಗಲವಾದ ಚಪ್ಪಟೆ ಮೂಗು, ಚಿಕ್ಕ ಪಾದ, ಸದೃಢ ದೇಹ ಮತ್ತು ನೇರ ಬೆನ್ನುಮೂಳೆ ಹೊಂದಿದ್ದಾರೆ. ತಲೆಕೂದಲು ಮೆಣಸಿನ ಕಾಳಿನಂತೆ ಗುಂಗುರು ಗುಂಗುರಾಗಿರುತ್ತವೆ. ಉಬ್ಬಿದ ದವಡೆ, ಉಬ್ಬಿದ ತುಟಿ, ಕಿರುಗಣ್ಣು ಇವರ ಪ್ರಮುಖ ಲಕ್ಷಣಗಳಾಗಿವೆ.

ಬುಷ್ಮನ್‌ನಿನ ನೀಗ್ರೊ ಇವರ ವಾಸದ ಪ್ರದೇಶವು ಪೊದೆಗಳಿಂದ ಆವೃತವಾಗಿದ್ದ ಕಾರಣ ಇವರನ್ನು ಪೊದೆ ಜನ ಎನ್ನುತ್ತಾರೆ. ಈ ಜನರು ಕಲಹರಿ ಮರುಭೂಮಿಯ ನಿವಾಸಿಗಳಾಗಿದ್ದ ಆಫ್ರಿಕಾದ ಬುಡಕಟ್ಟುಗಳು ಅತ್ಯಂತ ವಿಶಿಷ್ಟವಾದ ಮತ್ತು ಪ್ರಾಚೀನವಾದ ಬುಡಕಟ್ಟುಗಳಾಗಿವೆ.

ಇವರು ೪.೧೧ರಿಂದ ೫.೨ ಎತ್ತರವಿದ್ದು ಹಳದಿ ಮಿಶ್ರಿತವಾದ ಮೈಬಣ್ಣವನ್ನು ಹೊಂದಿದ್ದು, ಹೊರ ಮೈಬಣ್ಣ ಕಂದು ಬಣ್ಣಕ್ಕೆ ತಿರುಗುವ ಸಾಧ್ಯತೆಗಳಿರುತ್ತವೆ. ಕಣ್ಣುಗಳು ಮಧ್ಯಮ ಪ್ರಮಾಣದಲ್ಲಿದ್ದು ಹೊರಗಿನಿಂದ ಉಬ್ಬಿದ ಮಡಿಕೆಗಳಂತಹ ರೆಪ್ಪೆಗಳಿಂದ ಕೂಡಿರುತ್ತಾರೆ. ಶರೀರವು ರೋಮಗಳಿಲ್ಲದೆ ಇದ್ದು ತಲೆಗೂದಲುಗಳು ಗುಂಗುರಾಗಿರುತ್ತವೆ. ಅಗಲವಾದ ತಗ್ಗಾದ ಮುಖಚಹರೆಯನ್ನು ಹೊಂದಿದ್ದಾರೆ. ಕಿವಿಗಳು ಚಿಕ್ಕದಾಗಿದ್ದು ಹಸ್ತ ಮತ್ತು ಪಾದಗಳು ಭಿನ್ನವಾಗಿ ಕಂಡುಬರುತ್ತವೆ. ಆದರೆ ಹೂಟೆಂಟೋ ಜನ ಅತ್ಯಂತ ಎತ್ತರವಾದ ಜನವರ್ಗವಾಗಿದ್ದು ೫.೪ಕ್ಕಿಂತ ಹೆಚ್ಚಾಗಿರುತ್ತಾರೆ. ಮೇಲಿನ ಬುಸ್ಮಾನಿನ ಎಲ್ಲಾ ಗುಣಲಕ್ಷಣಗಳನ್ನು ಇವರು ಹೋಲುತ್ತಾರೆ.[೧೨]

ಒಟ್ಟಾರೆಯಾಗಿ ನೀಗ್ರೋ ಜನಾಂಗದಲ್ಲಿ ಹಲವಾರು ವಿಭಿನ್ನ ಲಕ್ಷಣಗಳನ್ನು ಗುರುತಿಸಬಹುದು. ಒಬ್ಬ ಆಫ್ರಿಕಾದ ನೀಗ್ರೋವಿನ ಮೂಗು ಗಿಡ್ಡವಾಗಿದ್ದರೆ, ಮಲೇಷ್ಯದ ನೀಗ್ರೋವಿನ ಮೂಗು ದಪ್ಪವಾಗಿರುತ್ತವೆ. ಮೈಬಣ್ಣದಲ್ಲಿ ಅಲ್ಪಸ್ವಲ್ಪ ಬದಲಾವಣೆ ಕಂಡರೂ ಕಿರುಗಣ್ಣು ಮೆಣಸಿನಕಾಳಿನಂತೆ ಇರುತ್ತದೆ. ಗುಂಗುರು ಕೂದಲು ಗಾಢವಾದ ಬಣ್ಣದಿಂದ ಕೂಡಿದ ಇವರನ್ನು ನೋಡಿದ ಕೂಡಲೇ ನೀಗ್ರೋಲಾಯ್ಡ್ ಎಂದು ಗುರುತಿಸಬಹುದು. ಇವರು ಬುಸ್ಮನ್‌ನಿನ ಕಲಹರಿ ಮರುಭೂಮಿಯಲ್ಲಿ ಕಂಡುಬರುವ ಒಂದು ಬುಡಕಟ್ಟು ಪ್ರಪಂಚದ ಎಲ್ಲಾ ಭಾಗಗಳಿಗೂ ಪಸರಿಸಿ ವಿಶ್ವ ಜನಾಂಗದ ಮೂಲನಿವಾಸಿಗಳೆಂದು ಕರೆಸಿಕೊಂಡಿದ್ದಾರೆ ಎಂಬುದನ್ನು ಸ್ಪೆನ್ಸರ್ ವಿಲ್ಸ್ ಹೇಳುತ್ತಾರೆ.[೧೩]

೨.೧. ಮೂಲ ಮತ್ತು ಚಾರಿತ್ರಿಕ ಹಿನ್ನೆಲೆ

ಭಾರತ ದೇಶವು ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಜನಾಂಗಿಕವಾಗಿ ಭಿನ್ನತೆಯನ್ನು ಗುರುತಿಸಿಕೊಳ್ಳುತ್ತಾ ಬಂದಿದೆ. ಇಲ್ಲಿ ಅತಿ ಹೆಚ್ಚು ಮಳೆ ಬೀಳುವ ಪ್ರದೇಶಗಳು ಇವೆ. ಮಳೆಯನ್ನು ಕಾಣದ ಪ್ರದೇಶಗಳು ಇವೆ. ದಟ್ಟವಾದ ಅರಣ್ಯ ಪ್ರದೇಶಗಳು ಇವೆ. ಹಾಗೆಯೇ

ಬಟಾಬಯಲು ಹೊಂದಿರುವ ಪ್ರದೇಶಗಳು ಇವೆ. ಫಲವತ್ತತೆ, ಬಂಜರು ಅತೀ ಉಷ್ಣಾಂಶ ಪ್ರದೇಶ ಹಿಮಾಲಯದಂತಹ ಶೀತ ಪ್ರದೇಶ ಮುಂತಾದ ವೈವಿಧ್ಯಮಯ ಅಂಶಗಳನ್ನು ಭಾರತದಲ್ಲಿ ಕಾಣಬಹುದು. ಭಾರತವನ್ನು ಪಾಕಿಸ್ತಾನ, ನೇಪಾಳ, ಭೂತಾನ್, ಸಿಕ್ಕಿಂ, ಶ್ರೀಲಂಕಾ ಮತ್ತು ಅಂಡಮಾನ್ ನಿಕೋಬಾರ್ ಮುಂತಾದ ದ್ವೀಪರಾಷ್ಟ್ರಗಳು ಆವರಿಸಿಕೊಂಡಿವೆ. ಈ ಎಲ್ಲಾ ಕಾರಣಗಳಿಂದ ವೈವಿಧ್ಯಮಯವಾದ ಜನಾಂಗಗಳು ಭಾರತದಲ್ಲಿ ಕಂಡು ಬರುತ್ತಾರೆ.

ಭಾರತದ ಜನಾಂಗಗಳ ಬಗ್ಗೆ ವಿದ್ವಾಂಸರುಗಳು ತಮ್ಮದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಪ್ರೊ. ಕೂನ್ ಅವರು ಹೇಳುವಂತೆ ಐರೋಪ್ಯದಲ್ಲಿರುವ ಏಷ್ಯಾ ಮೂಲದವರಾದ ಕಕೇಷಿಯಾ ಉಪಜನಾಂಗಿಕರು ಪ್ರಧಾನವಾಗಿ ನೆಲೆಸಿರುವ ಮತ್ತೊಂದು ಪ್ರದೇಶವೇ ಭಾರತವಾಗಿದೆ. ಈ ದೇಶದಲ್ಲಿ ಕಕೇಷಿಯ, ಆಸ್ಟ್ರೇಲಿಯ ಹಾಗೂ ಮಂಗೋಲ ಎಂಬ ಮೂರು ರೀತಿಯ ಜನವರ್ಗಗಳಿದ್ದಾರೆ. ಇವರ ಜೊತೆಗೆ ಯುರೇಷ್ಯ ಮಾನವೋಪ ಜಾತಿಗೆ ಸೇರಿದ ಜನರು ಇದ್ದಾರೆ. ಈ ಜನರ ಪೈಕಿ ಬಹುಸಂಖ್ಯಾತರು ಈಚೆಗೆ ಭಾರತವನ್ನು ಪ್ರವೇಶಿಸಿದವರೇ ಆಗಿದ್ದಾರೆ.

ಇಂಡೋ ಇರಾನಿಯ ಪರ್ಷಿಯ ಭಾಷಿಕರಾದ ಉತ್ತರ ಭಾರತದ ಆರ್ಯ ಹಿಂದೂ ಜನರು ಮುಖ್ಯವಾಗಿದ್ದಾರೆ. ಇವರಿಗಿಂತ ಮೊದಲು ಭಾರತಕ್ಕೆ ಬಂದವರು ದ್ರಾವಿಡ ಭಾಷಿಕರಾದ ಮೇಲ್ಜಾತಿಯ 'ಬ್ರಾಹುಇ' ಜನ. ಇವರನ್ನು ಹೊರತುಪಡಿಸಿದರೆ ದ್ರಾವಿಡ ಪ್ರಧಾನವಾಗಿ ದಕ್ಷಿಣ ಭಾರತದಲ್ಲಿ ನೆಲೆಸಿದ್ದವರೇ ಆಗಿದ್ದಾರೆ. ಈ ಎರಡು ಬಗೆಯ ಜನರು ಕಕೇಷಿಯ ಜನಾಂಗಿಕರಾಗಿದ್ದು ಮುಖ್ಯರಾಗಿದ್ದಾರೆ. ದ್ರಾವಿಡ ಭಾಷಿಕರು ನೈರುತ್ಯ ಏಷ್ಯಾದ ಪ್ರಾಚೀನ ನತುಫಿಯ ಜನರನ್ನು ಹೋಲುತ್ತಾರೆ ಎಂದಿದ್ದಾರೆ.[೧೪]

ಅವರು ಭಾರತೀಯ ಜನವರ್ಗಗಳನ್ನು ಕುರಿತು ಮತ್ತೊಬ್ಬ ಚಿಂತಕರಾದ ಲಕ್ಷ್ಮಿಪತಿ ಕೋಲಾರ ಈ ರೀತಿಯಾಗಿ ಅಭಿಪ್ರಾಯವನ್ನು ಮಂಡಿಸುತ್ತಾರೆ. ಮೊದಲನೆಯದು ಐವತ್ತು ಸಾವಿರ ವರ್ಷಗಳ ಹಿಂದೆ ಭಾರತಕ್ಕೆ ಮೊಟ್ಟಮೊದಲು ಕಾಲಿಟ್ಟ ದ್ರಾವಿಡ ಪೂರ್ವಜನ ಇವರನ್ನು ಆಂಥ್ರೋಪಾಲಿಕಲ್ ಟರ್ಮಿನಾಲಜಿಯಲ್ಲಿ ಪ್ರೋಟೋ ಆಸ್ಟ್ರೋಲಾಯ್ಡ್ ಮತ್ತು ಆಸ್ಟ್ರೋ ಏಷಿಯಾಟಿಕ್ಸ್ ಎಂದು ಕರೆಯುತ್ತಾರೆ. ಇವರೇ ಈ ದೇಶದ ಮೂಲನಿವಾಸಿಗಳು. ಇವರನ್ನು ಅಧ್ಯಯನದ ರೂಪಕತೆಗಾಗಿ ಲಿಂಗ ಸಂಸ್ಕೃತಿಯವರು ಎಂದು ಕರೆಯುತ್ತಾರೆ. ಇವರು ಪೂರ್ವಿಕ ಪಿತೃವಿನ ಆರಾಧಕರಾಗಿದ್ದರು. ಇವರನ್ನು ಆನ್ಸಿಪ್ಪಲ್ಸ್ ವರ್ಷಿಪರ್ಸ್ (Anciple worshipers) ಎನ್ನುತ್ತಾರೆ.

ಎರಡನೆಯ ವರ್ಗ : ೧೨ರಿಂದ ೧೫ ಸಾವಿರ ವರ್ಷಗಳ ಹಿಂದೆ ಭಾರತಕ್ಕೆ ಕಾಲಿಟ್ಟ ಮಾತೃಪಿತೃ ಆರಾಧಕರಾದ ದ್ರಾವಿಡ ಭಾಷೆಯನ್ನಾಡುವ ಆಸ್ಟ್ರೋಲಾಯ್ಡ್ ಜನಾಂಗ ಇವರು.

ಗುಜರಾತ್ ಭಾಗದಿಂದ ಭಾರತಕ್ಕೆ ಬಂದವರು ಇವರನ್ನು ಶಿವ ಸಂಸ್ಕೃತಿಯವರು ಎಂದು ಕರೆಯುತ್ತಾರೆ(ಅಧ್ಯಯನ ರೂಪಕವಾಗಿ). ಅರ್ಧನಾರೀಶ್ವರ ಕಲ್ಪನೆ ಇವರಿಂದಲೇ ಆರಂಭವಾಯಿತು ಎನ್ನುತ್ತಾರೆ.

ಮೂರನೆಯ ವರ್ಗ : ೩ ರಿಂದ ೩.೧/೨ ಸಾವಿರ ವರ್ಷಗಳ ಹಿಂದೆ ಭಾರತಕ್ಕೆ ಕಾಲಿಟ್ಟಂತ ಆರ್ಯ ಭಾಷೆಯನ್ನಾಡುವ ಯಜ್ಞಯಾಗಾದಿ ಮಾಡುವ ಯಜನ ಸಂಸ್ಕೃತಿಯ ಜನ ಇವರು. ಅಗ್ನಿ ಆರಾಧಕರಾಗಿದ್ದು ಯಜ್ಞ ಸಂಸ್ಕೃತಿಯನ್ನು ಅನುಸರಿಸುವ ಆರ್ಯರು, ಇವರನ್ನು ಕಕೇಷಿಯನ್ ಜನಾಂಗ ಎಂತಲು ಕರೆಯುತ್ತಾರೆ.

ಇವರು ರುದ್ರ ಸಂಸ್ಕೃತಿಯವರಾಗಿದ್ದು ಮಧ್ಯ ಏಷ್ಯಾದಿಂದ ಇರಾನ್‌ಗೆ ಬಂದು ಇರಾನಿನ ಮೂಲಕ ಅಫಘಾನಿಸ್ಥಾನ, ಪಾಕಿಸ್ತಾನದ ಮಾರ್ಗವಾಗಿ ಭಾರತದ ವಾಯುವ್ಯ ಭಾಗದಿಂದ ಬಂದವರಾಗಿದ್ದಾರೆ.[೧೫]

ಕ್ರೋಬರ್ ಎಂಬ ವಿದ್ವಾಂಸರು ಭಾರತೀಯ ಜನವರ್ಗಗಳನ್ನು ಕೆಳಕಂಡಂತೆ ವಿಭಾಗಿಸುತ್ತಾರೆ.

೧. ಹಿಂದೂ ಜನಾಂಗ.

೨. ನೀಗ್ರೋ ಅಥವಾ ಆಸ್ಟ್ರೇಲಿಯ.

೩. ಇಂಡೋ ಆಸ್ಟ್ರೇಲಿಯ ಜನಾಂಗ

೧. ಹಿಂದೂ ಜನಾಂಗ: ಇವರ ಸಣ್ಣ ತಲೆ ಗಾಡ ಮೈಬಣ್ಣಗಳನ್ನೊಳಗೊಂಡ ಕಕೇಷಿಯನ್ ಜನಾಂಗದವರಾಗಿದ್ದಾರೆ. ಮೆಡಿಟರಿಯನ್ ಜನಾಂಗದ ಸಮೀಪಾರ್ಥಿಗಳಾಗಿದ್ದು ಭಾರತಕ್ಕೆ ವಾಯುವ್ಯ ಮಾರ್ಗದಿಂದ ಬಂದವರಾಗಿದ್ದಾರೆ. ಹೀಗೆ ಬಂದ ಇವರು ಇಲ್ಲಿನ ನೀಗ್ರೋ, ಇಂಡೋ ಆಸ್ಟ್ರೇಲಿಯ ಜನರ ಜೊತೆ ಸಂಘರ್ಷಿಸಿ ಜಯಿಸಿ ಅವರೊಂದಿಗೆ ರಕ್ತ ಸಂಬಂಧ ಬೆಳೆಸಿ ಪೂರ್ಣಪ್ರಮಾಣದ ಮಿಶ್ರಣ ಕಂಡವರಾಗಿದ್ದಾರೆ.

ಇವರು ಕ್ರಿಪೂ ೧೫೦೦ ರಲ್ಲಿ ಏಷಿಯಾದ ಮೈನರ್, ಮೆಸಪೊಟೋಮಿಯಾ, ಇರಾನಿನ ಮೂಲಕ ಭಾರತವನ್ನು ಪ್ರವೇಶ ಮಾಡುವ ಮೊದಲು ಇಂಡೋ ಯುರೋಪ್ ಸಂಸ್ಕೃತಿಯವರಾಗಿದ್ದ ಇವು ಭಾರತಕ್ಕೆ ಬಂದ ಮೇಲೆ ಇಂಡೋ ಆರ್ಯನ್ ಆಗಿ ರೂಪಾಂತರ ಹೊಂದಿದರು. ಈ ಇಂಡೋ ಆರ್ಯನ್ನರು ಪ್ರಯಾಣದ ಸಂದರ್ಭದಲ್ಲಿ ತಮ್ಮ ಮೇಲೆ ಅನೇಕ ಸಂಸ್ಕೃತಿಗಳ ಪ್ರಭಾವ ಉಂಟಾದರೂ ತಮ್ಮ ಮೂಲ ಸಂಸ್ಕೃತಿಯನ್ನು ಬಿಟ್ಟುಕೊಡದೆ ಉಳಿಸಿಕೊಂಡು ಭಾರತವನ್ನು ಪ್ರವೇಶ ಮಾಡಿದರು.

ಅರೆ ಅಲೆಮಾರಿಗಳಾಗಿದ್ದ ಇವರು ತಮ್ಮ ಜಾತಿ ಪದ್ಧತಿಯನ್ನು ತಮ್ಮ ಮೂಲ ಸ್ಥಾನದಿಂದ ತಂದು ಭಾರತದಲ್ಲಿ ಪಸರಿಸಿದರು. ಭಾರತದ ಮೂಲ ನಿವಾಸಿಗಳಲ್ಲಿ ಪ್ರಾದೇಶಿಕ ಮತ್ತು ಸ್ಥಳೀಯ ಮಟ್ಟದಲ್ಲಿ ಭಿನ್ನತೆ ಇತ್ತು. ಆದರೆ ಜಾತಿ ಎಂಬ ಸಾಮಾಜಿಕ ವರ್ಗೀಕರಣ ಇರಲಿಲ್ಲ ಇದನ್ನು ಈ ಇಂಡೋ ಆರ್ಯನ್ (ಹಿಂದೂಗಳು) ಸಮುದಾಯದವರು ಮೊದಲು ಭಾರತದಲ್ಲಿ ಬಿತ್ತಿದ್ದರು.

ಈ ಇಂಡೋ ಆರ್ಯನ್ ಅಥವಾ ಹಿಂದೂ ಎಂಬ ಹೆಸರು ಬರಲು ಈ ಜನಾಂಗಕ್ಕೆ ಒಂದು ಪ್ರಮುಖ ಕಾರಣವಿದೆ. ಹಿಂದೂ ಎಂಬ ಶಬ್ದವು ಸಿಂಧೂ ಎಂಬ ಪದದಿಂದ ಬಂದಿದೆ. ಇದೇ ಪದ ಮುಂದುವರೆದು ಸಿಂಧೂ, ಹಿಂದೂ ಇಂಡೂ, ಇಂಡಿಯಾ ಆಗಿರುವ ಸಾಧ್ಯತೆಗಳಿವೆ. ಈ ಆರ್ಯ ಜನರು ತಮ್ಮನ್ನು ಹಿಂದೂ ಎಂದು ಕರೆದುಕೊಳ್ಳಲು ಪ್ರಮುಖ ಕಾರಣವೆಂದರೆ ಇವರು ಸಿಂಧೂ ಬಯಲಿನ ಪ್ರದೇಶದಲ್ಲಿ ಸ್ವಲ್ಪ ಕಾಲವಿದ್ದು ನಂತರ ಭಾರತದ ಕಡೆಗೆ ವಲಸೆ ಬಂದವರೇ ಆಗಿದ್ದಾರೆ. ಆದ ಕಾರಣ ಇವರು ತಮ್ಮನ್ನು ಹಿಂದೂಗಳು ಎಂದು ಕರೆದುಕೊಳ್ಳುತ್ತಾರೆ. ಅಂದ ಹಾಗೆ ಇವರೇನು ಸಿಂಧೂ ಬಯಲಿನ ತಪ್ಪಲಿನ ಮೂಲ ನಿವಾಸಿಗಳೇನು ಅಲ್ಲ. ಇವರು ಪಶ್ಚಿಮ ಏಷ್ಯಾದಿಂದ ಭಾರತಕ್ಕೆ ಬಂದವರಾಗಿದ್ದಾರೆ. ಇಲ್ಲಿಗೆ ಬರುವ ಮೊದಲು ಇವರು ಕೇವಲ ಆರ್ಯರಷ್ಟೇ ಆಗಿದ್ದರು. ಆದರೆ ಇಂದು ಹಿಂದೂ ಎಂಬ ದೊಡ್ಡ ಹಣೆಪಟ್ಟಿಕೊಂಡು ತಮ್ಮದೇ ಆದ ಸಂಸ್ಕೃತಿಯನ್ನು ಧರ್ಮವಾಗಿ ಪರಿವರ್ತಿಸಿಕೊಂಡು ಅದಕ್ಕೆ ಹಿಂದೂ ಧರ್ಮ ಎಂದು ಹೆಸರನ್ನಿಟ್ಟುಕೊಂಡು, ಪ್ರಚಾರ ಮಾಡಿ ಇಂದು ಆ ಧರ್ಮವನ್ನು ಭಾರತದ ಸನಾತನ ಧರ್ಮ ಎಂದು ಬಲವಂತವಾಗಿ ನಂಬಿಸುತ್ತಿದ್ದಾರೆ.

ಡಾ.ಎಸ್.ಎಸ್.ಸರ್ಕಾರ್ ಅವರು ಹೇಳುವಂತೆ 'ಭಾರತಕ್ಕೆ ಹೊರಗಡೆಯಿಂದ ವಲಸೆ ಬಂದ ಜನಾಂಗಗಳಲ್ಲಿ ಆರ್ಯ ಇಂಡೋ ಆರ್ಯನ್ ಅಥವಾ ಹಿಂದೂಗಳು ಆ ಕಾಲಘಟ್ಟಕ್ಕೆ ಬಹುಸಂಖ್ಯಾತರು. ಇವರು ಭಾರತದ ಮೂಲ ಜನಾಂಗಗಳ ಮೇಲೆ ಅತ್ಯಂತ ಗಂಭೀರ ಪರಿಣಾಮ ಉಂಟುಮಾಡಿದರು... ಕ್ರಿಪೂ ೧೨೦೦ರಲ್ಲಿ ಏರಲ್ ಕ್ಯಾಸ್ಪಿಯನ್(ಯೂರಾಲ್ ಕ್ಯಾಸ್ಪಿಯನ್) ಎಂಬ ನದಿಯ ತಪ್ಪಲಿನಿಂದಲೇ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಇಂಡೋ ಆರ್ಯನ್ ಬಂದಿದ್ದಾರೆ ಎಂಬುದಕ್ಕೆ ಪರ್ಶಿಯಾ ದೇಶದ(ಇರಾನ್) ಡಾಮ್‌ಘನ್‌ನಿನ ಹತ್ತಿರದಲ್ಲಿ ದೊರೆತಿರುವ ನವಶಿಲಾಯುಗದ ತಲೆ ಬುರುಡೆಗಳಿಂದ ಋಜುವಾತಾಗಿದೆ ಎನ್ನುತ್ತಾರೆ.[೧೬]

ಸಿಂಧೂ ನದಿಯ ದಂಡೆಯಲ್ಲಿ ಮಾತ್ರವಲ್ಲದೇ ಪಂಜಾಬ್, ರಾಜಸ್ಥಾನ ಮತ್ತು ಕಾಶ್ಮಿರದಲ್ಲಿಯು ಇದೇ ಹೋಲಿಕೆಯ ಗುಣಲಕ್ಷಣಗಳುಳ್ಳ ಜನಾಂಗದವರನ್ನು ಕಾಣಬಹುದು. ಇದರ ಜೊತೆಗೆ ಟಿಬೇಟ್ ಭಾರತದ ಪೂರ್ವಭಾಗ, ಪಶ್ಚಿಮಭಾಗದ ಗಂಗಾನದಿಯ ಪ್ರದೇಶ ಮತ್ತು ದಕ್ಷಿಣದ ನೀಲಗಿರಿ ಪರ್ವತ, ಕೇರಳವನ್ನೊಳಗೊಂಡಂತೆ ಸಿಂಹಳಕ್ಕೂ ಹೋಗಿರಬಹುದೆಂದು ವಿದ್ವಾಂಸರು ಅಭಿಪ್ರಾಯಿಸುತ್ತಾರೆ.

ಥಮಾಸ್ ಡಬ್ಲ್ಯೂ ಕ್ಲಾರ್ಕ್ ಅವರು ಹಿಂದೂ ಅಥವಾ ಇಂಡೋ ಆರ್ಯನ್‌ರ ಬಗ್ಗೆ ವಿವರಿಸುತ್ತಾ ಹೀಗೆ ಹೇಳುತ್ತಾರೆ. ಇಂಡೋ ಆರ್ಯರು ಎರಡು ಬಾರಿ ತಂಡೋಪ ತಂಡವಾಗಿ ಭಾರತಕ್ಕೆ ಆಗಮಿಸಿದರು. ಮೊದಲನೆ ಬಾರಿಗೆ ಬಂದ ಆರ್ಯನ್ ತಂಡವು ಪಶ್ಚಿಮ ಏಷ್ಯಾದಿಂದ ಹೊರಟು ಅಫ್ಘಾನಿಸ್ಥಾನವನ್ನು ದಾಟಿಕೊಂಡು ಕಾಶ್ಮೀರದ ಪಶ್ಚಿಮ ಹಿಮಾಲಯಗಳ ಮೂಲಕ ಭಾರತಕ್ಕೆ ಬಂದರು. ನಂತರ ಭಾರತದ ಎತ್ತರದ ಹಿಮಾಲಯಗಳಲ್ಲಿ ನೆಲೆಸಿ ಕುರಿ, ಹಸು ಸಾಕಾಣಿಕೆ ಮತ್ತು ಪಶುಪಾಲನೆಯೊಂದಿಗೆ ವ್ಯವಸಾಯ ಮಾಡಲಾರಂಭಿಸಿದರು. ನಂತರ ಬಂಗಾಳವನ್ನು ಆಕ್ರಮಿಸಿಕೊಂಡು ವಾಯುವ್ಯದ ಕೆಲವು ಭಾಗಗಳಲ್ಲೂ ನೆಲೆನಿಂತರು. ಇದರಿಂದಲೇ ಕಾಫೀರಿ ಭಾಷೆ, ಪ್ರಾಚೀನ ನೇಪಾಳಿ ಭಾಷೆ ಹಾಗೂ ಬಂಗಾಳಿ ಭಾಷೆಗಳಲ್ಲಿನ ಜಾತಿ ಪದಗಳು ಆರ್ಯ ಭಾಷೆಯೊಂದಿಗೆ ಸಮೀಕರಣಗೊಳ್ಳುತ್ತವೆ. ಗುಜರಾತಿ ಹಿಂದಿ ಪಂಜಾಬಿ ಮತ್ತು ರಾಜಸ್ತಾನಿ ಭಾಷೆಗಳು ಆರ್ಯಭಾಷೆಯ ಸೋದರ ಭಾಷೆಗಳು ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಹಾಗೆಯೇ ಎರಡನೇ ತಂಡವಾಗಿ ಬಂದ ಆರ್ಯರು ಸಂಪೂರ್ಣ ಪಶುಪಾಲಕರಾಗಿದ್ದು. ಭಾರತದ ವಾಯುವ್ಯ ಕಣಿವೆಗಳ ಮೂಲಕ ತಮ್ಮ ಕಮಾನು ಗಾಡಿಗಳೊಂದಿಗೆ ಕುಟುಂಬ ಸಮೇತರಾಗಿ ಬೃಹತ್ ಪ್ರಮಾಣದಲ್ಲಿ ಭಾರತಕ್ಕೆ ಬಂದರು. ಇವರು ಮೂಲತಃ ಆಕ್ರಮಣ ಕಾರರಾಗಿದ್ದು ಆಕ್ರಮಣಗಳ ಮೇಲೆ ಆಕ್ರಮಣ ಮಾಡುತ್ತಾ ಇವರು ಹೋದ ಪ್ರದೇಶಗಳಲ್ಲಿದ್ದ ಮೂಲನಿವಾಸಿಗಳನ್ನು ಚದುರುವಂತೆ ಮಾಡಿದರು. ಹೀಗೆ ತಮ್ಮ ಆಕ್ರಮಣದ ಪ್ರವಾಸವನ್ನು ಮುಂದುವರಿಸಿದ ಆರ್ಯನ್ ತಂಡಕ್ಕೆ ಭಾರತದ ಎತ್ತರದ ಬೆಟ್ಟಗಳು ಎದುರಾದಾಗ ತಮ್ಮ ಕಮಾನು ಗಾಡಿಗಳು ಬೆಟ್ಟ ಹತ್ತಲು ವಿಫಲವಾದವು. ಹಾಗೆ ಭಾರತದ ವಾಯುವ್ಯ ಹಾಗೂ ಭಾರತದ ತಪ್ಪಲು ಪ್ರದೇಶಗಳಲ್ಲೇ ನೆಲೆಗೊಂಡರು. ಹೀಗೆ ನೆಲೆಗೊಂಡ ಆರ್ಯರು ತಮ್ಮ ಮೂಲ ಸಂಸ್ಕೃತಿಯಾದ ಚಾತುರ್ವರ್ಣ ಮತ್ತು ವರ್ಗಭೇದ ಪದ್ಧತಿಯನ್ನು ಭಾರತದಲ್ಲಿಯು ಪಸರಿಸುವಂತೆ ಮಾಡಿದರು. ಇದರ ಫಲವಾಗಿಯೇ ಭಾರತದಲ್ಲಿ ವರ್ಣ ಪದ್ಧತಿ ಆರಂಭವಾಯಿತು. ಇವರ ಸೇವೆಗಳನ್ನು ಮಾಡಿಕೊಳ್ಳುವ ನಿಟ್ಟಿನಲ್ಲಿ ಇಲ್ಲಿನ ಮೂಲ ನಿವಾಸಿಗಳನ್ನು ಪಂಚಮರು ಎಂದು ಕರೆದು ತಮ್ಮ ಸೇವೆ ಮಾಡುವಂತೆ ನೋಡಿಕೊಂಡರು. ಇದರಿಂದಲೇ ಭಾರತದಲ್ಲಿ ಜಾತಿ ವ್ಯವಸ್ಥೆ ಆರಂಭವಾಯಿತು.[೧೭]

ಹಿಂದೂ ಆಥವಾ ಇಂಡೋ ಆರ್ಯನ್ನರ ಗುಣಲಕ್ಷಣಗಳು: ಆರ್ಯರ ಪುರುಷರಲ್ಲಿ ಸರಾಸರಿ ೫.೪ ೧/೨ ರಿಂದ ೫.೮ ರವರೆಗೆ ಎತ್ತರ ಕಂಡು ಬರುತ್ತಾರೆ. ತಲೆಯ ಸುತ್ತಳತೆಯು ೭೫ರಿಂದ ೮೦ ಸೆ.ಮೀ.ವರೆಗೆ ಇರುತ್ತದೆ. ತಲೆಕೂದಲುಗಳು ನೇರವಾಗಿದ್ದು ಹೊಳಪುಳ್ಳ ಕಪ್ಪು ಬಣ್ಣದಿಂದ ಕಂಗೊಳಿಸುತ್ತಿರುತ್ತವೆ. ಅಲ್ಲಲ್ಲಿ ಕಂದು ಬಣ್ಣದ ಕೂದಲುಗಳು ಕಂಡುಬಂದರೂ ಆಶ್ಚರ್ಯ ಪಡಬೇಕಾಗಿಲ್ಲ. ಆರ್ಯರು ತಮ್ಮ ಮೈಬಣ್ಣಕ್ಕೆ ಹೆಚ್ಚಿನ ಮಾನ್ಯತೆ ಕೊಡುತ್ತಾರೆ. ಇವರ

ದೇಹದ ಚರ್ಮವು ಕೆಂಪು ಅಥವಾ ಗಾಢವಾದ ಕಂದುಬಣ್ಣದಿಂದ ಕೂಡಿದ್ದು ನೀಳವಾದ ಮೂಗಿನೊಂದಿಗೆ ಅತ್ಯಂತ ಸೌಂದರ್ಯಯುತರೆಂದು ತಮ್ಮನ್ನು ತಾವೇ ಕರೆದುಕೊಂಡು ಹೆಮ್ಮೆ ಪಟ್ಟುಕೊಳ್ಳುತ್ತಾರೆ. ಇವರ ದೇಹದ ಬಣ್ಣವೇ ಇವರು ಭಾರತ ಮೂಲ ನಿವಾಸಿಗಳಲ್ಲವೆಂದೂ, ಪಾಶ್ಚಾತ್ಯರು ಎಂಬುದಕ್ಕೆ ಒಂದು ಸೂಕ್ತನಿದರ್ಶನ ಎಂದರೆ ತಪ್ಪಾಗಲಾರದು.

ದ್ರಾವಿಡರು ಅಥವಾ ಆಸ್ಟ್ರೋಲಾಯ್ಡ್-ಜನಾಂಗ: ದ್ರಾವಿಡರು ಮೂಲತಃ ಕಕೇಷಿಯಾ ಜನಾಂಗಕ್ಕೆ ಸೇರಿದವರೇ ಆಗಿದ್ದಾರೆ. ಆರ್ಯರು ಭಾರತಕ್ಕೆ ಬರುವುದಕ್ಕೆ ಮುಂಚೆಯೇ ಈ ದೇಶದಲ್ಲಿ ನೆಲೆಸಿ ಸುಂದರವಾದ ಮೊಹೆಂಜೋದಾರೋ, ಹರಪ್ಪಾ ನಗರವನ್ನು ಕಟ್ಟಿಕೊಂಡಿದ್ದರು. ಇವರು ಇಂದು ಸರಿಸುಮಾರು ೧೦ ಕೋಟಿಗೂ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದು ಕನ್ನಡ, ತೆಲುಗು, ಮಲೆಯಾಳಿ, ತಮಿಳು ಮತ್ತು ತುಳು ಭಾಷೆಯನ್ನಾಡುತ್ತಾ ಬೇರೆ ಬೇರೆ ಕಡೆಯಲ್ಲಿ ವಾಸ ಮಾಡುತ್ತಿದ್ದಾರೆ. ಈ ದ್ರಾವಿಡರು ಅನೇಕ ಧರ್ಮ ಸಂಸ್ಕೃತಿಗಳ ಹೊಡೆತಕ್ಕೆ ಸಿಕ್ಕಿ ಹಿಂದೂ, ಮುಸ್ಲಿಂ, ಸಿಖ್, ಕ್ರೈಸ್ತ ಮೂಲದವರಾಗಿ ಮಾರ್ಪಾಡುಗೊಂಡಿದ್ದಾರೆ.

ಈ ದ್ರಾವಿಡ ಜನಾಂಗದವರು ಮೇಲುನೋಟಕ್ಕೆ ಆದಿವಾಸಿಗಳಂತೆ ಕಂಡುಬಂದರೂ ಆದಿವಾಸಿಗಳಲ್ಲಿ ಕಂಡುಬರುವ ಅತಿಯಾದ ಕೆಂಪು ರಕ್ತ ಕಣಗಳು ಮತ್ತು ಇತರೆ ಕೆಲವು ವಂಶಪಾರಂಪರ್ಯ ಚಹರೆಗಳಿಂದ ಭಿನ್ನವಾಗಿ ಗುರುತಿಸಿಕೊಳ್ಳುತ್ತಾರೆ ಎಂದು ಪ್ರೊ. ಕೂನ್ ಅವರು ಹೇಳುತ್ತಾರೆ.[೧೮]

ದ್ರಾವಿಡರು ಭಾರತಕ್ಕೆ ವಾಯುವ್ಯ ಮಾರ್ಗದಿಂದ ಬಂದವರು. ಇವರು ಭಾರತಕ್ಕೆ ಬರುವ ವೇಳೆಗಾಗಲೇ ಕಂಚು ಮತ್ತು ಕಬ್ಬಿಣಯುಗಗಳು ಆರಂಭಗೊಂಡು ಅತ್ಯುನ್ನತ ಹಂತವನ್ನು ತಲುಪಿತ್ತು ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.[೧೯]

ಇದೇ ಸಂದರ್ಭದಲ್ಲಿಯೇ ಸಿಂಧೂ ನಾಗರಿಕತೆಯು ಆರಂಭವಾದದ್ದು, ಆದರೆ ಉತ್ತರ ಭಾರತದ ಮೇಲೆ ಆರ್ಯರು ದಾಳಿ ಮಾಡಿದಾಗ ಇದ್ದವರೇ ಈ ದ್ರಾವಿಡರು. ಈ ದಾಳಿಯು ದ್ರಾವಿಡ ಸಂಸ್ಕೃತಿಯನ್ನು ಸಂಪೂರ್ಣವಾಗಿ ನಾಶ ಮಾಡಿತು. ಈ ಆಕ್ರಮಣದಿಂದ ಹಲವಾರು ದ್ರಾವಿಡರು ಆರ್ಯ ಜನಾಂಗದೊಂದಿಗೆ ವಿಲೀನವಾದರೆ ಮತ್ತೆ ಕೆಲವರು ಮರಣ ಹೊಂದಿದರು ಮತ್ತು ಜನ ಆರ್ಯರ ಗುಲಾಮರಾಗಿ ಅವರ ಚಾತುರ್ವರ್ಣ ಪದ್ಧತಿಯನ್ನು ಒಪ್ಪಿಕೊಂಡು ಹಿಂದೂ ಧರ್ಮವನ್ನು ಪಾಲಿಸುವಂತಾದರು. ಇನ್ನುಳಿದವರು ದಕ್ಷಿಣದ ಕಡೆಗೆ ಮುಖಮಾಡಿ ಕಾಡು ಮೇಡುಗಳಲ್ಲಿ ವಾಸಿಸಲು ಪ್ರಾರಂಭಿಸಿದರು. ಆರ್ಯರ ಆಕ್ರಮಣದ ಪರಿಯನ್ನು ಸಿಂಧೂ ನಾಗರಿಕತೆಯ ಉತ್ಖನನದ ಸಂದರ್ಭದಲ್ಲಿ ಸಿಕ್ಕ ಅಸ್ಥಿಪಂಜರಗಳು ಹೇಳುತ್ತವೆ ಎಂದು ಚರಿತ್ರಾಕಾರರು ಅಭಿಪ್ರಾಯಪಡುತ್ತಾರೆ.

ಇಷ್ಟಕ್ಕೆ ಸುಮ್ಮನಾಗದ ಆರ್ಯರು ದ್ರಾವಿಡರ ಬೆನ್ನುಹತ್ತಿ ದಕ್ಷಿಣದ ಕಡೆಗೂ ಬಂದರು. ಇವರು ಮೊದಮೊದಲು ದಕ್ಷಿಣದ ಮೂಲನಿವಾಸಿಗಳೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸಿಕೊಂಡರು. ಆದರೆ ಈ ಸಂಬಂಧವನ್ನು ಕಾಲಾನಂತರದಲ್ಲಿ ನಿಲ್ಲಿಸಿ ತಮ್ಮ ವರ್ಣಾಶ್ರಮ ಪದ್ಧತಿಯನ್ನು ಇಲ್ಲಿಯೂ ಪಸರಿಸುವಂತೆ ಮಾಡಿದರು. ಇದರಿಂದ ತಮ್ಮನ್ನು ತಾವು ಶ್ರೇಷ್ಠ ಎಂದು ಕರೆದುಕೊಂಡರು. ಇದೇ ಕಾರಣದಿಂದಲೇ ದಕ್ಷಿಣದಲ್ಲಿ ಬ್ರಾಹ್ಮಣ, ಶೂದ್ರ ಮತ್ತು ಪಂಚಮ ಎಂಬ ಮೂರು ವರ್ಗಗಳು ಮಾತ್ರ ಕಂಡುಬಂದು ಮೂರನೆಯದಾದ ವೈಶ್ಯ ಎಂಬ ಇನ್ನೊಂದು ವರ್ಗ ಕಂಡುಬರುವುದಿಲ್ಲ. ಸಿಂಧೂನಾಗರಿಕತೆಯ ವಾರಸುದಾರರು ಅಸ್ಪೃಶ್ಯರಾದಂತೆ ದಕ್ಷಿಣ ಭಾರತದ ಮೂಲನಿವಾಸಿಗಳು ಶೂದ್ರ ಮತ್ತು ಪಂಚಮರಾಗಿ ರೂಪುಗೊಂಡರು.

ದ್ರಾವಿಡ ಜನಾಂಗದ ದೈಹಿಕ ಲಕ್ಷಣಗಳು: ದ್ರಾವಿಡ ಜನಾಂಗದ ದೇಹವು ೧೬೨ ರಿಂದ ೧೬೪ ಸೆ. ಮೀ ಅಥವಾ ೫ರಿಂದ ೫.೫ ಅಡಿಯ ವರೆಗಿನ ಎತ್ತರ ಕಂಡು ಬರುತ್ತದೆ. ತಮಿಳಿನ ವೆಲ್ಲಾರ ೫.೯ರಷ್ಟು ಎತ್ತರ ಕಂಡು ಬರುತ್ತಾರೆ. ಆದರೆ ಹರಿಜನರಲ್ಲಿ ಹಾಗೂ ಶಿನರು ೫.೩ ದೇಹದ ಎತ್ತರವನ್ನು ಹೊಂದಿರುತ್ತಾರೆ. ಇವರ ದೇಹದ ತೂಕವು ಸರಾಸರಿ ೫೬ ಕೆ.ಜಿ.ಯಿಂದ ಕೂಡಿರುತ್ತದೆ. ಆದರೆ ವಯಸ್ಕರ ತೂಕವು ಅವರು ತಿನ್ನುವ ಆಹಾರದ ಮೇಲೆ ನಿರ್ಧಾರವಾಗಿರುತ್ತದೆ. ದ್ರಾವಿಡರಲ್ಲಿ ಸಾಮಾನ್ಯವಾಗಿ ದೇಹದ ಬಣ್ಣವು ಎಣ್ಣೆಕೆಂಪು ಬಣ್ಣದಿಂದ ಶ್ವೇತವರ್ಣ, ಗಾಢ ಕಂದು ಬಣ್ಣ ಅಥವಾ ಮಧ್ಯಮ ಕಂದು ಬಣ್ಣ ಕಂಡುಬರುತ್ತದೆ. ಭಾರತದ ಪೂರ್ವ ಭಾಗದಲ್ಲಿ ನೆಲೆಸಿರುವ ತೆಲುಗರು ಗಾಢ ಕಂದುವಾಗಿದ್ದರೆ, ಕನ್ನಡಿಗರು ಹಾಗೂ ಪಡುಕರಾವಳಿ, ಮಲೆಯಾಳಿಗಳಲ್ಲಿ ಲಘುವಾಗಿ ಕಂಡುಬರುತ್ತದೆ. ತಮಿಳುನಾಡಿನ ಬ್ರಾಹ್ಮಣರು ಹಾಗೂ ವೆಲ್ಲಾಳರ ಮೈಬಣ್ಣವು ಕೆಳಜಾತಿಯವರಿಗಿಂತ ಸ್ವಲ್ಪ ಭಿನ್ನವಾಗಿ ಕಂಡುಬರುತ್ತದೆ. ಇವರ ಬಣ್ಣ ಸಾಮಾನ್ಯವಾಗಿ ಲಘುಕಂದು ಬಣ್ಣದಿಂದ ಅತಿಗಾಢ ಬಣ್ಣದವರೆಗೂ ಕಂಡು ಬರುತ್ತದೆ. ಇದೇ ಬಗೆಯ ಮೈಬಣ್ಣವು ಇತರೆ ದ್ರಾವಿಡ ಜಾತಿಗಳು ಮತ್ತು ಬುಡಕಟ್ಟುಗಳಲ್ಲಿಯೂ ಕಂಡು ಬರುತ್ತದೆ.

ದ್ರಾವಿಡರ ಕಣ್ಣಿನ ಬಣ್ಣವು ಗಾಢ ಕಂದು ಅಥವಾ ಕಪ್ಪು ಬಣ್ಣದಿಂದ ಕೂಡಿರುತ್ತದೆ. ಇದನ್ನು ಹೊರತುಪಡಿಸಿದರೆ ನೀಲಿಗಪ್ಪು ಕಣ್ಣುಗಳು ಕಂಡು ಬರುತ್ತವೆ. ಆದರೆ ಸಮ್ಮಿಶ್ರ ಅಥವಾ ಲಕ್ಷಣಗಳುಳ್ಳ ಕಣ್ಣಿನ ಮಾಟವು ದ್ರಾವಿಡರಲ್ಲಿ ಕಂಡುಬರುವುದಿಲ್ಲ. ತಲೆಗೂದಲು ಸುಂದರವಾಗಿ ಸಮುದ್ರದ ಅಲೆಗಳಂತೆ ನೇರವಾಗಿ ಕಂಡುಬರುತ್ತವೆ. ಗಂಡಸರಲ್ಲಿ ಗಡ್ಡ ಮತ್ತು ಶರೀರ ಇತರೆ ಭಾಗಗಳಲ್ಲಿ ರೋಮಗಳು ಕಂಡುಬರುತ್ತವೆ.

ಸಾಮಾನ್ಯವಾಗಿ ದ್ರಾವಿಡರಲ್ಲಿ ತಲೆಯ ಆಕಾರವು ವಾಸಿಸುವ ಪ್ರದೇಶಗಳಿಗೆ ಅನುಗುಣವಾಗಿ ವ್ಯತ್ಯಾಸವಿರುವುದು ಕಂಡು ಬರುತ್ತದೆ. ಕನ್ನಡಿಗರಲ್ಲಿ ೮೧ ಸೆ.ಮೀ ಇದ್ದರೆ, ಮಲೆಯಾಳಿಗಳಲ್ಲಿ

೭೩ರಷ್ಟು ಕಂಡುಬರುತ್ತದೆ. ಆದರೆ ಪೂರ್ವಭಾಗದ ತಮಿಳು ಮತ್ತು ತೆಲುಗಿನವರಲ್ಲಿ ೭೬ರಷ್ಟು ಕೆಳಗಿಳಿದಿರುತ್ತದೆ. ಈ ಮುಖ್ಯ ವ್ಯಾತ್ಯಾಸಗಳಿಗೆ ಅವರು ಇಂಡೋ ಯುರೋಪಿಯನ್ ಮೂಲದ ಭಾಷಿಕರೂ ಹಾಗೂ ಕನ್ನಡಿಗರ ಉತ್ತರ ಭಾಗದ ನೆರೆಯವರೂ ಆದ ಮರಾಠರಲ್ಲಿ ಲಂಬಶಿರೋ ಲಕ್ಷಣಗಳಿರುವುದನ್ನು ಕಾಣುತ್ತೇವೆ. ತೌಲನಿಕವಾಗಿ ಇದು ಉತ್ತರ ಭಾರತದ ಬ್ರಾಹ್ಮಣರ ಶಿರೋರೂಪದೊಂದಿಗೆ ಸಾಮ್ಯತೆ ಇದೆ ಎಂದು ತಿಳಿಸಿಕೊಟ್ಟರು. ಹಾಗೆಯೇ ತಮಿಳು ಮತ್ತು ಮಲೆಯಾಳಿ ಮೀನುಗಾರರ ಶಿರೋಲಕ್ಷಣಗಳು ಕೂಡ ಸಾಮ್ಯತೆ ಇದೆ ಎಂಬ ಅಭಿಪ್ರಾಯವಿದೆ.[೨೦]

ದ್ರಾವಿಡರಲ್ಲಿ ಮೂಗಿನ ವಿನ್ಯಾಸವು ಜಾತಿಯಿಂದ ಜಾತಿಗೆ ಭಿನ್ನವಾಗಿರುತ್ತದೆ. ಮೂಗಿನ ಭಾಗುವಿಕೆಯಲ್ಲಿ ೧೧ ರಿಂದ ೧೨ರಷ್ಟು ಕೆಳಗಡೆಯಿದ್ದು ಬಹುತೇಕ ಚಪ್ಪಟೆ ಮೂಗು ಕಂಡುಬರುತ್ತದೆ. ಇನ್ನು ಕೈಗಳಲ್ಲಿರುವ ರೇಖೆಗಳು ದ್ರಾವಿಡ ಮತ್ತು ಬ್ರಾಹ್ಮಣರಲ್ಲಿ ಶೇ. ೬೨ರಷ್ಟು ಅತಿ ಹೆಚ್ಚಿನ ಶೇಕಡವಾರು ಚಕ್ರಗಳನ್ನು ಹೊಂದಿದ್ದಾರೆ. ದ್ರಾವಿಡ ಹರಿಜನ ಮತ್ತು ಗಿರಿಜನರು ಕನಿಷ್ಠ ಶೇ.೫೦ರಷ್ಟು ಹೊಂದಿದ್ದಾರೆ. ದ್ರಾವಿಡರು ಅಧಿಕ 'ಬಿ' ರಕ್ತ ವರ್ಗವನ್ನು ಹೊಂದಿರುತ್ತಾರೆ.

ಒಲವಿಯರ್ ಅವರು ಹೇಳುವಂತೆ ಉತ್ತಮ ಜಾತಿಯ ದ್ರಾವಿಡರು ತಂಡೋಪತಂಡವಾಗಿ ವಾಯುವ್ಯ ದಿಕ್ಕಿನಿಂದ ಕಾಲಕಾಲಕ್ಕೆ ಆರ್ಯರಂತೆ ಆಕ್ರಮಣ ನಡೆಸುತ್ತಾ ದಕ್ಷಿಣ ಭಾರತಕ್ಕೆ ಬಂದು ನೆಲೆಸಿ ತಮ್ಮ ಕಕೇಷಿಯಾ ಜನಾಂಗಿಕ ಲಕ್ಷಣಗಳನ್ನು ಒಳ ಬಾಂಧವ್ಯ ಸಂಬಂಧಗಳ ಮುಖಾಂತರ ಸಂರಕ್ಷಿಸಿಕೊಂಡಿದ್ದಾರೆ. ಆದರೂ ದ್ರಾವಿಡರು ತಮ್ಮದೆ ಆದಂತಹ ಒಂದು ಕಕೇಷಿಯಾ ಉಪಜನಾಂಗ ವ್ಯವಸ್ಥೆಗೆ ಸೇರುವ ಜನರಂತೆ ತೋರುವರೇ ವಿನಃ ಇವರು ಇಂದಿನ ಮೆಡಿಟರೇನಿಯನ್ ಪ್ರಾಂತ ಮನೆಗಳಾದ ಮೂಲ ಕಕೇಷಿಯರನ್ನು ನೇರವಾಗಿ ಹೋಲುವಂತಿಲ್ಲ; ಬದಲಾಗಿ ಇವರು ಸಿಂಧೂ ಕಣಿವೆಯ ಉನ್ನತ ನಾಗರಿಕತೆಯ ಸೃಷ್ಟಿಕರ್ತರಿಗೆ ಸಮೀಪ ಸಂಬಂಧಿಗಳಾಗಿ ತೋರುತ್ತಾರೆ.[೨೧]

ಹೀಗೆ ಆರ್ಯರ ಆಕ್ರಮಣದಿಂದ ತತ್ತರಿಸಿ ಅವರ ಧರ್ಮ ಸಂಸ್ಕೃತಿಯನ್ನು ಒಪ್ಪಿಕೊಂಡು ಅವರ ಚಾತುರ್ವರ್ಣ ಪದ್ಧತಿಗೆ ಬಲಿಯಾಗಿ, ಹಿಂದೂ ಜನರ ದೇವರನ್ನು ಮತ್ತು ಧರ್ಮವನ್ನು ಅನುಸರಿಸುತ್ತಿರುವ ಈ ದೇಶದ ಮೂಲ ನಿವಾಸಿಗಳಲ್ಲಿ ಒಬ್ಬರಾದ ದ್ರಾವಿಡರು ಶಿವ ಸಂಸ್ಕೃತಿಯವರಾಗಿದ್ದು ಅರ್ಧನಾರೀಶ್ವರ(ಅಧ್ಯಯನದ ಅನುಕೂಲಕ್ಕಾಗಿ ಈ ರೂಪಕತೆಯನ್ನು ಬಳಸಲಾಗಿದೆ)ಕಲ್ಪನೆಯನ್ನು ಜಗತ್ತಿಗೆ ಪರಿಚಯಿಸಿದವರು ಇವರೇ ಆಗಿದ್ದಾರೆ.

'ಮಂಗೋಲಾಯ್ಡ್ ಅಥವಾ ಮಂಗೋ ಜನಾಂಗ'

ಆರ್ಯರು ಭಾರತಕ್ಕೆ ಬರುವುದಕ್ಕಿಂತ ಮೊದಲೇ ಮಂಗೋಲಿಯರು ಭಾರತದಲ್ಲಿ ಇದ್ದರು ಎಂದು ಪ್ರೊ. ಕೂನ್ ಹೇಳುತ್ತಾರೆ.[೨೨] ಸಿಂಧೂನದಿ ಕಣಿವೆಗಳಲ್ಲಿ ದೊರೆತ ಅಸ್ಥಿಪಂಜರಗಳು ಇದಕ್ಕೆ ಪುಷ್ಠಿ ನೀಡುತ್ತವೆ. ಈ ಜನಾಂಗದವರು ಅಫಘಾನಿಸ್ತಾನದಿಂದ ಹಿಡಿದು ಬರ್ಮಾದವರೆಗೂ

ಹಾಗೆಯೇ ಪಾಕಿಸ್ಥಾನ ನೇಪಾಳ, ಸಿಕ್ಕಿಂ, ಭೂತಾನ, ಈಶಾನ್ಯ ರಾಜ್ಯಗಳು ಮತ್ತು ಭಾರತದ ಹಲವು ಕಡೆ ನೆಲೆಸಿರುವುದನ್ನು ಕಾಣಬಹುದು.

ಮಂಗೋಲಾಯ್ಡ್ ಜನಾಂಗದಲ್ಲಿ ಪ್ರಮುಖವಾಗಿ ಎರಡು ವಿಧಗಳಾಗಿವೆ.

೧. ಮೊದಲನೆಯದು ಭೂತಿಯರು.

೨. ಎರಡನೆಯದು ಗಿರಿವಾಸಿಗಳು.

ಮೊದಲನೆಯವರಾದ ಭೂತಿಯರು ಟಿಬೆಟಿನವರಾಗಿದ್ದು ಇವರನ್ನು ಶರ್ಪರು ಭೂತಿಗಳು ಎಂದು ಕರೆಯುತ್ತಾರೆ. ಇವರು ಟಿಬೆಟಿನ ಮೂಲಿಗರಾಗಿದ್ದು ಗ್ಯಾಂಗ್‌ಟಾಕ್, ಡಾರ್ಜಲಿಂಗ್, ಪೆಡೊಂಗ್, ಲ್ಹಾಸ್ ಮತ್ತು ಪಶ್ಚಿಮ ಬಂಗಾಳದ ಕೆಲವು ಕಡೆ ಕಂಡುಬರುತ್ತಾರೆ. ಇವರು ಅತ್ಯಂತ ಎತ್ತರ ಪ್ರದೇಶಗಳಲ್ಲಿ ವಾಸಿಸಲು ಅಪೇಕ್ಷಿಸುತ್ತಾರೆ. ಇವರು ತಮ್ಮ ವಾಸ್ತವ್ಯಕ್ಕೆ ೪೦೦೦ ಅಡಿಗಿಂತ ಹೆಚ್ಚಿನ ಎತ್ತರದ ಪ್ರದೇಶವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

ಇವರ ದೈಹಿಕ ಲಕ್ಷಣಗಳನ್ನು ಗಮನಿಸುವುದಾದರೆ ಗಿಡ್ಡ ದೇಹ, ಉದ್ದವಾದ ತಲೆ ದುಂಡು ಅಥವಾ ಕೋಲು ಮುಖ, ಸುಕ್ಕು ಕಣ್ಣು, ಉದ್ದ ಕಾಲು ಅಗಲವಾದ ಕೈ ಮತ್ತು ಪಾದಗಳು, ಕೆಂಪು ಬಿಳಿಯ ಗಾಢಬಣ್ಣದಿಂದ ಕೂಡಿದ್ದು ಅಮೆರಿಕಾದ ರೆಡ್ ಇಂಡಿಯನ್ನರಂತೆ ಕಾಣಿಸುತ್ತಾರೆ. ಇವರ ಕೇಶವರ್ಣವು ಉದ್ದವಾಗಿ ಅತ್ಯಂತ ಸುಂದರವಾದ ಕಪ್ಪು ಬಣ್ಣದಿಂದ ಕೂಡಿದ ಸಮುದ್ರದ ಅಲೆಯಾಕಾರದಲ್ಲಿ ಕಂಡು ಬರುತ್ತದೆ.

ಎರಡನೆಯವರಾದ ಗಿರಿವಾಸಿಗಳಲ್ಲಿ ಬರುಷಾಸ್ಕಿಗಳು, ಲಹುಲಿಗಳು ಮಂಚಟಿಗಳು, ಕನವ್ರಿಗಳು ಕಾಫಿರ ಡೋಲಿಯ, ಮಗರ್, ಗುರುಂಗ್, ತಮಂಗ್, ಥರುರೈ, ಲಿಂಬು, ಸಿಕ್ಕಿಮ್ಮಿನ ಲೆಪ್ಚರು, ಪಶ್ಚಿಮ ಬಂಗಾಳದ ಗುಡ್ಡಗಾಡು ವಾಸಿಗಳಾದ ಟೊಟೊಗಳು, ಅಸ್ಸಾಮಿನ ಈಶಾನ್ಯ ಗಡಿ ಪ್ರಾಂತ್ಯಗಳು ಮತ್ತು ಬರ್ಮ ಗಡಿವಾಸಿಗಳಾದ ನಾಗಗಳು, ಪಶ್ಚಿಮ ನೇಪಾಳಿಗಳು ಎಂಬ ಹಲವಾರು ಬಗೆಯ ಗಿರಿಜನವಾಸಿಗಳು ಕಂಡು ಬರುತ್ತಾರೆ.

ಪ್ರೊ. ಕೂನ್ ಅವರು ಆಸ್ಟ್ರೋ ಏಷ್ಯಾ ಗಿರಿಜನರ ಗುಂಪಿಗೆ ಮುಂಡಹೋ ಮತ್ತು ಸಂತಾಲರು ಸೇರುತ್ತಾರೆ. ಇವರು ಗಿರಿವಾಸಿಗಳಾಗಿದ್ದು ಭಾರತದ ಮೊದಲ ಮೂಲನಿವಾಸಿಗಳ ಪಟ್ಟಿಗೆ ಸೇರಿಕೊಳ್ಳುತ್ತಾರೆ ಎಂದಿದ್ದಾರೆ.[೨೩]

ಭಾರತದಲ್ಲಿ ಕಂಡು ಬರುವ ಇನ್ನೊಂದು ಬಗೆಯ ಅಪರೂಪ ಜನವರ್ಗಗಳೆಂದರೆ ವೆಡ್ಡಾಗಳು. ಇವರು ಕೂಡ ಭಾರತಕ್ಕೆ ವಲಸೆ ಬಂದವರು. ಈ ನಾಲ್ಕು ವಲಸೆ ಜನಾಂಗಕ್ಕಿಂತ ಅತ್ಯಂತ ಪ್ರಮುಖವಾದವರು ಈ ದೇಶದ ಮೂಲ ನಿವಾಸಿಗಳು ಎಂದರೆ ತಪ್ಪಾಗಲಾರದು.

ಪ್ರಾಚೀನ ಯುಗಗಲ್ಲಿ ಆಮೆಯ ನಡಿಗೆಯಂತೆ ಅರಿವಿಗೆ ಬರದಂತೆ ತುಂಬ ಮಂದಗತಿಯಲ್ಲಿ ತಲೆದೂಡುವ ಭಾರತೀಯ ಜನಸಮುದಾಯಗಳ ಮತ್ತು ಸಂಸ್ಕೃತಿಗಳ ನಡುವಣ ಪರಿವರ್ತನೆಗಳ ಬಗೆಗೆ ಬಲ್ಲವರಾದ ನಮಗೆ ಆ ಆದಿವಾಸಿ ಮೂಲವಾಸಿ ಜನರೇ, ವಾಸ್ತವವಾಗಿ ಭಾರತಕ್ಕೆ ಇತರರು ವಲಸೆ ಬರುವುದಕ್ಕೂ ಮೊದಲಿನಿಂದಲೇ ಭಾರತದ ನಿವಾಸಿಗಳಾಗಿದ್ದರು ಎಂದು ಊಹಿಸಲು ಎಲ್ಲ ಹಕ್ಕು ಮತ್ತು ಅವಕಾಶಗಳು ಇವೆ.[೨೪]

ಪ್ರೊ. ಕೂನ್ ಅವರು ಹೇಳುವಂತೆ ಭಾರತದ ನಿಜವಾದ ಮೂಲನಿವಾಸಿಗಳಾದ ವೆಡ್ಡಾಗಳು ಇಂದಿಗೂ ಬೇಟೆಯಾಡುತ್ತಾ ಕಾಡುಮೇಡುಗಳಲ್ಲಿ ಅಹಾರ ಸಂಗ್ರಹಣೆಯನ್ನು ಮಾಡುವುದರಲ್ಲಿಯೇ ತೊಡಗಿಕೊಂಡಿದ್ದಾರೆ. ವಲಸೆ ಬಂದು ನೆಲೆನಿಂತ ಜನಸಮುದಾಯ ಮೂಲನಿವಾಸಿಗಳಾದ ಇವರನ್ನು ಭಾರತದ ತುತ್ತು ತುದಿಗೆ ಮತ್ತು ಶ್ರೀಲಂಕಾದ ದಟ್ಟ ಕಾಡು, ಬೆಟ್ಟ ಗುಡ್ಡ ಪ್ರಾಂತಗಳಿಗೆ ಹೋಗಿ ನೆಲೆಸುವಂತೆ ಮಾಡಿದ್ದಾರೆ.[೨೫]

ವೆಡ್ಡಾ ಜನಾಂಗಗಳಲ್ಲಿ ಕಕೇಷಿಯಾ ಮತ್ತು ಆಸ್ಟ್ರಲಾಯ್ಡ್ ಜನಾಂಗಗಳ ಆಸ್ಟ್ರೇಲಿಯ ಮಿಶ್ರಿತ ಲಕ್ಷಣಗಳನ್ನು ಕಾಣಬಹುದು. ವೆಡ್ಡಾಗಳಲ್ಲಿ ಆಸ್ಟ್ರಾಲಾಯ್ಡ್ ಜನಾಂಗಿಕ ಲಕ್ಷಣಗಳಿಗಿಂತ ಕಕೇಷಿಯ ಜನಾಂಗದ ಲಕ್ಷಣಗಳು ಹೆಚ್ಚಾಗಿ ಕಂಡು ಬರುತ್ತವೆ.

ಡಾ. ಎಸ್.ಎಸ್. ಸರ್ಕಾರರು ತಮ್ಮ "ಭಾರತದ ಮೂಲ ನಿವಾಸಿಗಳು" ಎಂಬ ಕೃತಿಯಲ್ಲಿ ವೆಡ್ಡಾ ಜನಾಂಗವು ಒಂದು ಸ್ವತಂತ್ರ ಜನಾಂಗ ಎಂದು ಪ್ರತಿಪಾದಿಸಿದ್ದಾರೆ. ಸರ್ವೇಸಾಮಾನ್ಯವಾಗಿ ಭಾರತದ ಮೂಲ ನಿವಾಸಿಗಳೆಲ್ಲರೂ ವಿವಿಧ ದರ್ಜೆಗಳಲ್ಲಿ ವೆಡ್ಡಾ ಜನಾಂಗದ ಮೂಲ ಲಕ್ಷಣಗಳನ್ನು ತೋರ್ಪಡಿಸುತ್ತಾರೆ. ಈ ವೆಡ್ಡಾಗಳು ಶ್ರೀಲಂಕಾದ ವ್ಯಾದರೇ ಮತ್ತು ಇವರು ಆಸ್ಟ್ರೇಲಿಯಾದ ಮೂಲ ನಿವಾಸಿಗಳು ಆಗಿದ್ದಾರೆ ಎಂದಿದ್ದಾರೆ.[೨೬]

ಜೊತೆಗೆ ಮಹೆಂಜೋದಾರೋ ಅಡಿತ್ತ, ನಲ್ಲೂರು, ನಾಲ್ ಇವೆ ಮೊದಲಾದ ಸ್ಥಳಗಳಲ್ಲಿ ನಡೆಸಲಾದ ಪ್ರಾಕ್ತನ ಭೂಸಂಶೋಧನೆಗಳಲ್ಲಿ ಕಂಡುಬಂದ ತಲೆ ಬುರುಡೆಗಳ ಲಕ್ಷಣಗಳು ವೆಡ್ಡ ಮೂಲ ಜನಾಂಗದವಾಗಿದ್ದನ್ನು ಸೂಚಿಸುತ್ತವೆ. ಈ ಮೇಲಿನ ಎಲ್ಲಾ ಅಧ್ಯಯನಗಳಿಂದ ತಿಳಿದು ಬರುವುದೇನೆಂದರೆ. "ವ್ಯಾಧ ಜನಾಂಗವು" (Veddid Pace) ಒಂದಾನೊಂದು ಕಾಲದಲ್ಲಿ ಈ ದೇಶದಲ್ಲೆಲ್ಲ ವಿಶಾಲ ವ್ಯಾಪ್ತಿಯಲ್ಲಿ ಪಸರಿಸಿದ್ದು ತನ್ನ ವಲಸೆ ಹೋಗುವ ಕಾಲಗತಿಯಿಂದ ಪ್ರಾಯಶಃ ಅಲ್ಲಿಂದ ಹೊರಟುಹೋಯಿತೆಂಬುದನ್ನು ತೋರಿಸುತ್ತದೆ. ಭಾರತದ ಹೊರಗೂ ಕೂಡ ಅನೇಕ ಸ್ಥಳಗಳಲ್ಲಿ ವ್ಯಾಧ ಜನಾಂಗದ ಪುಟ್ಟ ಪ್ರದೇಶಗಳಿರುವುದು ವರದಿಯಾಗಿದೆ.[೨೭]

ಪ್ರೊ. ಕೀತ್ ಅವರು ಹೇಳುವಂತೆ ವೆಡ್ಡಾ ಜನಾಂಗಗಳ ಮೇಲೆ ಆರ್ಯರ ಆಕ್ರಮಣವಾಗಿ ಆರ್ಯರು ವೆಡ್ಡಾಗಳ ಮೇಲೆ ತಮ್ಮ ಭಾಷೆಯನ್ನು ತರಲು ಪ್ರಯತ್ನಿಸಿದರು. ಆದರೆ ಇದರಲ್ಲಿ

ಆರ್ಯರು ಪೂರ್ಣಪ್ರಮಾಣದ ಯಶಸ್ಸನ್ನು ಗಳಿಸಲು ಸಾಧ್ಯವಾಗಲಿಲ್ಲ. ಬಹುತೇಕ ವೆಡ್ಡಾಗಳು ಆರ್ಯರ ಆಕ್ರಮಣವನ್ನು ಎದುರಿಸಿ ಅಥವಾ ಎದುರಿಸಲಾಗದೆ. ಸ್ಥಳಾಂತರಿಸಿದರೂ ಆರ್ಯರ ದಾಳಿಗೆ ಒಳಗಾದ ಕೆಲವು ವೆಡ್ಡಾಗಳು ಅಲ್ಲೇ ಉಳಿದರು. ಅವರೇ ಮುಂದೆ ದ್ರಾವಿಡರಾದರು ಎನ್ನುತ್ತಾರೆ.[೨೮]

ವೆಡ್ಡಾ ಜನಾಂಗದವರು ಭಾರತ ಮತ್ತು ಪ್ರಪಂಚದ ಇತರೆ ಪ್ರದೇಶಗಳಲ್ಲೂ ಕಂಡು ಬರುತ್ತಾರೆ. ಅವುಗಳೆಂದರೆ ಅಫ್ಘಾನಿಸ್ತಾನದ ಹೆಲ್ಮಾಂಡ್ ನದಿಯ ಜೌಗು ಪ್ರದೇಶ, ಆಸ್ಟ್ರೇಲಿಯಾದ ಮೂಲ ನಿವಾಸಿಗಳಾದ ಮುರ್ರೇಯೀನ್ ಹಾಗೆಯೇ ಭಾರತದ ಪೂರ್ವ ದಿಕ್ಕಿನ ಪ್ರದೇಶಗಳಲ್ಲಿನ ಮಲಯಾದ ಸಾಕೆನ್, ಸುಮಾತ್ರಾದ ಓರಂಗ್ ಮಾಮಕ್, ಓರಂಗ್ ಬಾತಿಶ, ಲೂಬು ಮತ್ತು ಊಲು ಜನಾಂಗಗಳು ನಿಯಾಸ್ ದ್ವೀಪವಾಸಿಗಳು, ಸೆಲೆಬಿಸ್ ದ್ವೀಪಗಳ ತೋಳರು, ಹಿಂದೂ ಚೀನ ಪರ್ವತ ಪ್ರದೇಶಗಳ ಮಾಯಿ ಜನಾಂಗ ಇವರೆಲ್ಲರೂ ವೆಡ್ಡಾ ಜನಾಂಗದ ಲಕ್ಷಣಗಳನ್ನು ಹೋಲುವಂತಿದ್ದಾರೆ.

ವೆಡ್ಡಾ ಜನಾಂಗದ ದೈಹಿಕ ಲಕ್ಷಣಗಳು: ವೆಡ್ಡಾಗಳು ಸರ್ವೇಸಾಮಾನ್ಯವಾಗಿ ಗಿಡ್ಡ ದೇಹವನ್ನು ಹೊಂದಿರುವವರೇ ಆಗಿದ್ದಾರೆ. ಇವರು ವಾಸಿಸುವ ಪ್ರದೇಶಕ್ಕೆ ತಕ್ಕಂತೆ ದೇಹದ ಎತ್ತರವನ್ನು ಹೊಂದಿದ್ದಾರೆ.

ಡಾ.ಎಸ್.ಎಸ್. ಸರ್ಕಾರ್ ಅವರ ಮತ್ತೊಂದು ಕೃತಿಯಾದ "ದ್ರಾವಿಡ ಜನಾಂಗದ ವಿಕಾಸ" ಎಂಬ ಶೀರ್ಷಿಕೆಯ ಲೇಖನದಲ್ಲಿ ದ್ರಾವಿಡರ ಹಾಗೂ ಇಂಡೋ ಆರ್ಯನ್ ಮೂಲ ಪೂರ್ವ ಪರಂಪರೆ ನಡುವೆ ಉಂಟಾದ ಜನಾಂಗಿಕ ಸಮ್ಮಿಶ್ರಣದ ಪರಿಣಾಮವಾಗಿದೆ. ದ್ರಾವಿಡರಾದ ಮಲೆಯರು, ಚೆಂಚರು, ತಮಿಳರು, ತೆಲುಗರು ಮತ್ತು ಕನ್ನಡಿಗರು ಮುಂತಾದವರಲ್ಲೂ ವೆಡ್ಡಾ ಜನಾಂಗದ ಶಾರೀರಿಕ ಲಕ್ಷಣಗಳನ್ನು ಕಾಣಬಹುದು. ಹಾಗೆಯೇ ಕೇರಳದ ನಂಬೂದರಿ ಬ್ರಾಹ್ಮಣರು ಮಾತ್ರ ತಮ್ಮ ಉತ್ತರ ಭಾರತ ಆರ್ಯ ಮೂಲವಾದ ಕಾರಣದಿಂದ ವಿದ್ವಾಂಸರು ಭಾರತಕ್ಕೆ ವಲಸೆ ಬಂದವರ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಆದರೆ ಅವರು ಒಂದು ಪ್ರಮುಖ ಚರ್ಚೆಯನ್ನು ಹುಟ್ಟುಹಾಕುತ್ತಾರೆ. ಭಾರತದಲ್ಲಿರುವ ಪ್ರತಿಯೊಂದು ಜನವರ್ಗವು ಬೇರೆ ಕಡೆಯಿಂದ ವಲಸೆ ಬಂದಿರುವವರೇ ಆಗಿದ್ದವರಾದರೆ ಈ ನೆಲದಲ್ಲಿ ಯಾರು ಹುಟ್ಟಿಲ್ಲವೇ ಎನ್ನುತ್ತಾರೆ. ಬೇರೆಯೇ ಆದ ಮೌಲ್ಯಗಳನ್ನು ಹೊಂದಿದ್ದಾರೆ ಎಂದು ಸೂಚಿಸುತ್ತಾರೆ.[೨೯]

ಪ್ರೊ. ಎ.ಬಿ. ಕೀತ್ ಅವರ ಅಭಿಪ್ರಾಯವನ್ನು ಗಂಭೀರವಾಗಿ ಪರಿಗಣಿಸಿ ಅಧ್ಯಯನ ಮಾಡಬೇಕಾದ ಜರೂರು ಇದೆ. ಏಕೆಂದರೆ ಭಾರತ ಹಲವಾರು ವೈವಿಧ್ಯಮಯವಾದ ಭೂ ಖನಿಜ, ಅರಣ್ಯ, ಪ್ರಾಣಿವರ್ಗ ಹೊಂದಿರುವ ನಾಡಾಗಿದೆ. ಇಲ್ಲಿ ವಾಸಿಸುತ್ತಿರುವ ಜನಾಂಗಗಳ ಬುಡಕಟ್ಟುಗಳ ದೈಹಿಕ ಲಕ್ಷಣಗಳು, ಆಚಾರ ವಿಚಾರಗಳು ಮೇಲಿನ ಎಲ್ಲಾ ಜನಾಂಗಗಳಿಗಿಂತ

ಭಿನ್ನವಾಗಿಯೇ ಇದೆ. ಪ್ರಪಂಚದ ಮಾನವನ ಉಗಮ ಸ್ಥಳ ದಕ್ಷಿಣ ಆಫ್ರಿಕಾ ಎಂಬುದು ಹಲವಾರು ವಿದ್ವಾಂಸರು ಅಭಿಪ್ರಾಯವು ಕೂಡ. ಅಂದಮಾತ್ರಕ್ಕೆ ದಕ್ಷಿಣ ಆಫ್ರಿಕಾದಲ್ಲಿ ಮಾತ್ರವೇ ಮಾನವ ವಿಕಾಸದ ವಾತಾವರಣವಿತ್ತು. ಅಲ್ಲೇ ಮಾನವ ಹುಟ್ಟಿದ್ದು ಎಂಬುದು ಸರಿಯಲ್ಲ ಎಂಬುವುದು ಒಂದು. ಭಾರತದ ವಿದ್ವಾಂಸರುಗಳಿಗೆ ಭಾರತದ ಜ್ಞಾನ, ತತ್ವ ಚಿಂತನೆಗಳು ಎಂದಿಗೂ ಗಂಭೀರವಾಗಿ ಕಂಡುಬರುವುದೇ ಇಲ್ಲ. ಏಕೆಂದರೆ ಭಾರತದಲ್ಲಿ ಆರ್ಯರು ಬಿತ್ತಿದ ಜಾತಿ ಎಂಬ ಸಾಮಾಜಿಕ ಅಸಮಾನತೆಯು ಇಂದಿಗೂ ಭಾರತದ ಎಲ್ಲ ರಂಗವನ್ನು ನಿಯಂತ್ರಿಸುತ್ತಿದೆ. ಆದ್ದರಿಂದಲೇ ಪಾಶ್ಚಿಮಾತ್ಯ ಚಿಂತನೆಯನ್ನು ಪರಮನೋಜ್ಞಾನ ವೆಂಬಂತೆ ಒಪ್ಪಿಕೊಳ್ಳುವ ಇವರುಗಳು ಭಾರತವು ಜನವರ್ಗಗಳ ಉಗಮ ಸ್ಥಾನ ಏಕಾಗಿರಬಾರದು ಎಂಬ ಆಲೋಚನೆಯನ್ನು ಎಲ್ಲಿ ಮಾಡಿಯಾರು.

ದಕ್ಷಿಣ ವಲಯದಲ್ಲಿ ಕಂಡು ಬರುವ ಜನಾಂಗವರ್ಗಗಳು

ದಕ್ಷಿಣ ವಲಯವು ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಗಳನ್ನು ಒಳಗೊಂಡಿದ್ದು ಈ ವಲಯದಲ್ಲಿ ಹೈದ್ರಾಬಾದ್, ಕೊಡಗು, ಮೈಸೂರು, ಕೊಚ್ಚಿನ್, ತಿರುವಾಂಕೂರು, ಆಂಧ್ರ, ಮದ್ರಾಸ್ ಪ್ರದೇಶಗಳಲ್ಲೂ ವಿಭಿನ್ನವಾದ ಜನವರ್ಗಗಳು ಕಂಡು ಬರುತ್ತಾರೆ. ಪ್ರಮುಖವಾಗಿ ಆಸ್ಟ್ರೋ ಏಷಿಯಾಟಿಕ್ಸ್ ನಿಗ್ರೋಟಾಯ್ಡ್, ದ್ರಾವಿಡ ಕಕೇಷಿಯನ್ ಮುಂತಾದ ಜನವರ್ಗಗಳನ್ನು ಕಾಣಬಹುದು. ಪ್ರಮುಖವಾಗಿ ತೋಡ, ಕೆನರಾ, ಕಾಡು ಕುರುಬ, ಉರಲಿ, ಜೇನುಕುರುಬ, ಕೊರಗ, ಸೋಲಿಗ, ಇರುಳಿಗ, ಯರವ ಕೋಯಾ, ತಿರುವಾ, ಬಡಗಾ, ಕೆನಿಸ್ಕಾರ, ಮಾಲ್ವಡನ್, ಕಾಡಾರ, ಚೆಂಚು ಮೂಲನಿವಾಸಿಗಳನ್ನು ಕಾಣಬಹುದಾಗಿದೆ.

ಬ್ರೂಸ್‌ಪೂಟ್ ಎಂಬುವರು ದಕ್ಷಿಣ ಭಾರತದ ಜನವರ್ಗಗಳ ಬಗ್ಗೆ ಹೀಗೆ ಹೇಳುತ್ತಾರೆ. ದಕ್ಷಿಣದಲ್ಲಿ ಮೂರು ಮುಖ್ಯ ಜನವರ್ಗಗಳನ್ನು ಕಾಣಬಹುದು. ಅವುಗಳೆಂದರೆ

೧. ದ್ರಾವಿಡ ಪೂರ್ವಜನ

೨. ದ್ರಾವಿಡರು.

೩. ಆರ್ಯನ್ನರು

ದ್ರಾವಿಡ ಪೂರ್ವಜನರಲ್ಲಿ ಇರುಳರು, ಕಾಡುಕುರುಬರು, ಸೋಲಿಗರು ಮತ್ತು ಕಾಡುಗೊಲ್ಲರು ಪ್ರಮುಖರು ಎನ್ನುತ್ತಾರೆ.[೩೦]

ಇರುಳಿಗರು ಭಾರತದ ಪ್ರಾಚೀನ ಜನಾಂಗಗಳಲ್ಲಿ ಪ್ರಮುಖ ಸ್ಥಾನದಲ್ಲಿ ಗುರುತಿಸಿಕೊಳ್ಳುತ್ತಾರೆ. ಇವರು ದ್ರಾವಿಡರಿಗೂ ಪೂರ್ವಜನರಾಗಿದ್ದ ವೆಡ್ಡ ಜನಾಂಗದ ದೈಹಿಕ ಲಕ್ಷಣಗಳೊಂದಿಗೆ ಸಾಮ್ಯತೆಯನ್ನು ಹೊಂದಿದ್ದಾರೆ. ಸಿಂಧೂನಾಗರಿಕತೆಯ ಪೂರ್ವದಲ್ಲಿನ ಜನವಾಸದ ಬಗ್ಗೆ

ಮಾಹಿತಿ ಸಿಗುವುದಾದರೆ ಅದು ಇರುಳಿಗರಲ್ಲಿ. ಇದಕ್ಕೆ ಸಂಬಂಧಿಸಿದಂತೆ ರಾಖಿಗರ್ಹಿಯಲ್ಲಿ ನಡೆದ DNA ಪರೀಕ್ಷೆಯಿಂದ ದೃಢಪಟ್ಟಿದೆ. ಈ ಪ್ರದೇಶದಲ್ಲಿ ಕೈಗೊಂಡ ಸಂಶೋಧನೆಯಿಂದ ಉತ್ತರ ಭಾರತದ ಜನಾಂಗಗಳಿಗಿಂತಲೂ ಪೂರ್ವಿಕರು ದಕ್ಷಿಣ ಭಾರತದ(Ancestral South India)ವರು ಎಂದು ತಿಳಿದುಬಂದಿದೆ. ಅದರಲ್ಲೂ ಪ್ರಮುಖವಾಗಿ ಅಂದರೆ ಉತ್ತರ ಭಾರತದ ಮೇಲ್ಜಾತಿಗಳಲ್ಲಿ ಕಂಡುಬರುವಂತಹ ಪೊಂಟಿಕ್ ಕ್ಯಾಸ್ಪಿಯನ್ ಸ್ಟೆಪ್ ಪ್ರದೇಶದ ಏಕವಂಶವಾಹಿ ಧಾರೆಯ Rla ಉಪವರ್ಗವಾದ Z-93 ಎಂಬ Y-ವಂಶವಾಹಿಯ ಚಹರೆಗಳು ರಾಖಿಗರ್ಹಿಯ DNAಗಳಲ್ಲಿ ಪೂರ್ತಿಯಾಗಿ ಗೈರಾಜರಾಗಿವೆ. ಅದರರ್ಥ ಹರಪ್ಪಾ ನಾಗರಿಕತೆಯಲ್ಲಿದ್ದ ಜನರಿಗೂ ಭಾರತದ ಇಂದಿನ ವೈದಿಕರಿಗೂ ಯಾವುದೇ ಸಂಬಂಧವಿಲ್ಲ ಎಂದು ಹೇಳುವ ಜೊತೆಗೆ ರಾಖಿಗರ್ಹಿಯ DNAವಿಶ್ಲೇಷಣೆಯ ಫಲಿತಾಂಶದ ವರದಿ ಮತ್ತು ತಮಿಳುನಾಡಿನ ನೀಲಗಿರಿ ಯಲ್ಲಿರುವ ದ್ರಾವಿಡ ಭಾಷಿಕರಾದ ಇರುಳರೆಂಬ ಬುಡಕಟ್ಟಿನೊಂದಿಗೆ ಅತ್ಯಂತ ನಿಕಟ ಸಂಬಂಧವಿದೆ. ಸುಮಾರು ೪,೫೦೦ ವರ್ಷಗಳ ಹಿಂದಿನ ರಾಖಿಗರ್ಹಿಯ ಅಸ್ಥಿಪಂಜರಗಳ ವಿನ್ಯಾಸಕ್ಕೂ ದಕ್ಷಿಣ ಭಾರತದ ಇರುಳಿಗರಿಗೆ ನಿಕಟ ಹೋಲಿಕೆ ಕಂಡುಬಂದಿದೆ.[೩೧] ಆದ್ದರಿಂದ ಭಾರತದ ಮೂಲ ಜನಾಂಗಗಳಲ್ಲಿ ಒಬ್ಬರಾದ ಇರುಳಿಗರು ದಕ್ಷಿಣ ಭಾರತದಲ್ಲಿ ಅದರಲ್ಲೂ ಕಾವೇರಿ ನದಿಯ ತಪ್ಪಲು ಪ್ರದೇಶದಲ್ಲಿ ಅತ್ಯಂತ ಹೆಚ್ಚಾಗಿ ಕಂಡುಬರುವ ಅಪರೂಪದ ಜನಾಂಗವಾಗಿದೆ.

ಇರುಳಿಗರ ದೈಹಿಕ ಲಕ್ಷಣಗಳು

ಇರುಳಿಗರ ದೇಹದ ಬಣ್ಣವು ಕಡುಕಪ್ಪು ಬಣ್ಣದಿಂದ ಕೂಡಿರುತ್ತದೆ. ಕೆಲವೊಮ್ಮೆ ಕಂಚಿನ ಬಣ್ಣಗಳಿಂದಲೂ ಇರುವುದನ್ನು ಕಾಣಬಹುದು. ಇವರ ತಲೆಯ ಕೂದಲು ಒಣಗಿದ ಗುಂಗುರು ಕೂದಲಾಗಿರುತ್ತದೆ. ತಲೆಯ ಭಾಗವು ಸಾಮಾನ್ಯವಾಗಿದ್ದು ತುಟಿಗಳು ದಪ್ಪವಾಗಿರುತ್ತವೆ. ದವಡೆ ಭಾಗವು ಉಬ್ಬಿಕೊಂಡು ಉಬ್ಬಿದ ಹಲ್ಲುಗಳನ್ನು ಕಾಣಬಹುದು. ಮೂಗು ದಪ್ಪವಾಗಿದ್ದು, ಅಗಲ ವಾದ ಹೊಳ್ಳೆಗಳಿಂದ ಕೂಡಿರುತ್ತದೆ. ಹಾಗೆ ಚಪ್ಪಟೆ ಮೂಗು ಇರುಳಿಗರಲ್ಲಿ ಸರ್ವೆ ಸಾಮಾನ್ಯ ವಾಗಿರುತ್ತದೆ.

Edger Thurston and K Rangachari ತಮ್ಮ Cast and Tribe of southern India ಕೃತಿಯಲ್ಲಿ ಇರುಳಿಗರ ದೈಹಿಕ ಲಕ್ಷಣಗಳ ಬಗ್ಗೆ ಹೀಗೆ ಹೇಳುತ್ತಾರೆ "charcoal would leave a white mark. The name Irula in fact means darkness or blackness ಎನ್ನುತ್ತಾರೆ.[೩೨]

ಎಲ್. ಕೆ. ಅನಂತಕೃಷ್ಣ ಅಯ್ಯರ್ ಅವರು "The Irulas, as their name indicates (irul- Black) is the darkest of the hill tribes of southern India, they possess the negroid traist short structure fat nose and promi next cheek bones, curly or wavy hair and narrow foreheds"[೩೩]

ಡಾ. ಎಂ. ಬೈರೇಗೌಡ ಅವರು ತಮ್ಮ 'ಇರುಳಿಗರು ಜಾನಪದ ಅಧ್ಯಯನ' ಎಂಬ ಕೃತಿಯಲ್ಲಿ ಇರುಳಿಗರು ಅತ್ಯಂತ ಸದೃಢ ದೇಹವನ್ನು ಹೊಂದಿದ್ದು ಕಾಡುಕುರುಬ, ಜೇನುಕುರುಬ, ಬಡಗ, ಸೋಲಿಗ, ಯರವ, ಪಣಿಯನ್, ಕಾಡಾರ್, ಕಟ್ಟುನಾಯಕನ್ ಮುಂತಾದ ಬುಡಕಟ್ಟಿನ ಅಂಗರಚನೆಯನ್ನು ಹೋಲುವಂತಿದ್ದಾರೆ, ತಲೆಕೂದಲು ಹೆಂಗಸು ಮತ್ತು ಗಂಡಸರಲ್ಲಿ ಗುಂಗುರು ಗುಂಗುರಾಗಿ ಕಂಡು ಬರುತ್ತವೆ.

ಗಂಡಸರ ಮುಖಗಳಲ್ಲಿ ದಟ್ಟವಾದ ಗಡ್ಡ ಮೀಸೆಗಳು ಕಂಡುಬರುವುದಿಲ್ಲ. ಬಲಿಷ್ಠವಾದ ಮಾಂಸಖಂಡಗಳಿಂದ ಕೂಡಿದವರಾಗಿದ್ದು ತುಂಬ ಬಲಶಾಲಿಗಳಾಗಿರುತ್ತಾರೆ. ಇವರ ಕಣ್ಣುಗಳು ತೀಕ್ಷ್ಣವಾಗಿದ್ದು, ಕಿವಿಗಳು ಅತ್ಯಂತ ಚುರುಕಾಗಿರುತ್ತವೆ.

ಅಳಿವಿನಂಚಿನಲ್ಲಿರುವ ಜನಾಂಗಗಳಲ್ಲಿ ಇರುಳಿಗ ಜನಾಂಗವು ಒಂದು. ಇವರ ಜನಸಂಖ್ಯೆ ವರ್ಷದಿಂದ ವರ್ಷಕ್ಕೆ ಇಳಿಮುಖವಾಗುತ್ತಾ ಸಾಗುತ್ತಿದೆ. ಎ.ಬಿ.ಕೀತ್ ಅವರ ಮಾತಿನಂತೆ ಭಾರತದಲ್ಲಿರುವ ಪ್ರತಿಯೊಂದು ಜನವರ್ಗವು ವಲಸೆ ಬಂದವರು ಎಂದು ಹೇಳಲಾಗಿದೆ. ಆದರೆ ಈ ದೇಶದಲ್ಲಿ ಯಾವ ಜನಾಂಗವು ಹುಟ್ಟಲಿಲ್ಲವೇ ಎಂಬ ಪ್ರಶ್ನೆಯನ್ನು ಎತ್ತುವ ಜೊತೆಗೆ ಭಾರತದಲ್ಲಿ ಇಲ್ಲಿಯವರೆಗೆ ಪಾಶ್ಚಿಮಾತ್ಯ ದೃಷ್ಟಿಕೋನಗಳಿಂದಲೇ ಜನವರ್ಗವನ್ನು ನೋಡಲಾಗಿದೆ. ಅದನ್ನು ಬಿಟ್ಟು ಭಾರತೀಯ ದೃಷ್ಟಿಕೋನಗಳಿಂದಲೂ ಭಾರತೀಯ ಜನವರ್ಗವನ್ನು ನೋಡುವ ಜರೂರು ಇದೆ ಎನ್ನುತ್ತಾರೆ.[೩೪] ಹಾಗೇ ನೋಡಿದಾಗ ಮಾತ್ರ ಇಂತಹ ಜನಾಂಗಗಳ ಮಹತ್ವ ತಿಳಿಯುತ್ತದೆ. ಇರುಳಿಗರನ್ನು ಕುರಿತು ಇಲ್ಲಿಯವರೆಗೆ ನಡೆದಿರುವ ಎಲ್ಲಾ ಅಧ್ಯಯನಗಳು ಇರುಳಿಗರು ಮೂಲತಃ ತಮಿಳುನಾಡಿನವರು ಎಂದು ಹೇಳಿದ್ದಾರೆ. ಈ ಹೇಳಿಕೆ ನೀಡಲು ಅವರು ಮುಖ್ಯವಾಗಿ ಇರುಳಿಗರ ಭಾಷೆಯಲ್ಲಿ ತಮಿಳಿನ ಪದಗಳು ಹೆಚ್ಚಾಗಿವೆ ಮತ್ತು ಸಮುದಾಯದ ಹಿರಿಯರನ್ನು ಮೂಲದ ಬಗ್ಗೆ ಕೇಳಿದರೆ ನಾವು ಅಣ್ಣಮಲೈ ಬೆಟ್ಟದವರು ಎಂದು ಹೇಳಿಕೊಳ್ಳುತ್ತಾರೆ ಎಂಬ ಕಾರಣಗಳನ್ನು ಕೊಟ್ಟು ಇರುಳಿಗರು ಮೂಲ ತಮಿಳುನಾಡಿನವರು ಎಂದು ದಾಖಲಿಸಿದ್ದಾರೆ. ಆದರೆ ಇಲ್ಲಿ ಚರ್ಚಿಸಬೇಕಾದ ವಿಷಯವೇನೆಂದರೆ ಪ್ರಸ್ತುತ ಸಂದರ್ಭದ ಗಡಿ ವಿಂಗಡಣೆಯ ಆಧಾರದ ಮೇಲೆ ಕರ್ನಾಟಕ ತಮಿಳುನಾಡು ಎಂದು ಹೇಳುವುದು ಸರಿಯಲ್ಲ. ಗಡಿ ವಿಂಗಡಣೆಯಿಂದ ಕರ್ನಾಟಕ ತಮಿಳುನಾಡು ಎಂಬುವುದು ಇತ್ತೀಚೆಗೆ ರಾಜಕೀಯ ಉದ್ದೇಶಕ್ಕಾಗಿ ಗಡಿರೇಖೆಯನ್ನು ಹಾಕಿಕೊಂಡಿದ್ದಾರೆ. ಆದರೆ ಇರುಳಿಗರು ಸುಮಾರು ೬ರಿಂದ ೭ ಲಕ್ಷ ವರ್ಷಗಳಿಂದಲೂ ಈ ನೆಲದ ಮೂಲನಿವಾಸಿಗಳೆಂದು ವಿದ್ವಾಂಸರು ಹೇಳುತ್ತಾರೆ. ಹಾಗಿದ್ದಾಗ ಇವರು ತಮಿಳುನಾಡಿನಿಂದ ಬಂದವರು ಎಂದು ಹೇಳುವುದು ಎಷ್ಟು ಸೂಕ್ತ? ಹಾಗೆಯೇ ಭಾರತಕ್ಕೆ ಸ್ವಾತಂತ್ರ್ಯ ಬಂದು ರಾಜ್ಯಗಳಾಗಿ ವಿಂಗಡಣೆಯಾಗುವ ಮೊದಲು ಊಟಿ ಮೈಸೂರು ಪ್ರಾಂತ್ಯಕ್ಕೆ ಸೇರಿದ ಪ್ರದೇಶವೇ ಆಗಿತ್ತು. ಹಾಗಾಗಿ ಊಟಿಗೆ ಉದಕಮಂಡಲ ಎಂಬ ಕನ್ನಡ ಹೆಸರು ಇರುವುದು ನೀಲಗಿರಿ ಪರ್ವತ ಶ್ರೇಣಿಯನ್ನು

ಈಗಲೂ ದೊಡ್ಡಬೆಟ್ಟ ಎಂದು ಕನ್ನಡದಲ್ಲಿಯೇ ಇದೆ. ಜೊತೆಗೆ ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಆಂಧ್ರಪ್ರದೇಶಗಳು ಸಂಧಿಸುವ ಗಡಿಭಾಗದಲ್ಲಿ ಕಾವೇರಿ ನದಿ ಹರಿಯುತ್ತದೆ. ಈ ಕಾವೇರಿ ನದಿಯ ತಪ್ಪಲಿನ ಪ್ರದೇಶ ಇರುಳಿಗರ ಮೂಲ ನೆಲೆಯಾಗಿಯೇ ನೋಡಬೇಕೇ ವಿನಃ ತಮಿಳುನಾಡು ಕೇರಳ ಎಂದು ವಿಭಾಗಿಸಿ ನೋಡುವುದಲ್ಲ.

ಇರುಳರಲ್ಲದೇ ಬಡಗರು, ತೋಡರು ಕೂಡ ಕನ್ನಡ ಮಾತನಾಡುತ್ತಾರೆ. ತೋಡರು ಮತ್ತು ಇರುಳರು ಮೂಲ ಕಾಡುನಿವಾಸಿಗಳಾದರೆ, ಬಡಗರು ಮೈಸೂರು ಸೀಮೆಯಿಂದ ಸುಮಾರು ೪೦೦ ವರ್ಷಗಳ ಹಿಂದೆ ವಲಸೆ ಹೋದವರೆ ಆಗಿದ್ದಾರೆ. ಇವರಲ್ಲದೆ ೫೦ ವರ್ಷಗಳ ಹಿಂದೆ ಬರಗಾಲ ಬಂದಾಗ ಮೈಸೂರು, ಮಂಡ್ಯ, ತುಮಕೂರು, ಹಾಸನದಿಂದ ಒಕ್ಕಲಿಗ ಕುಟುಂಬಗಳೂ ವಲಸೆ ಹೋಗಿ ನೆಲೆಸಿರುವುದನ್ನು ಕಾಣಬಹುದು. ತಮಿಳರ ಪ್ರಭಾವದಿಂದ ಈ ಪ್ರದೇಶ ತಮಿಳುನಾಡಿಗೆ ಸೇರಿದ ಬಳಿಕ ವ್ಯವಹಾರಿಕವಾಗಿ ಎಲ್ಲರೂ ತಮಿಳು ಮಾತನಾಡು ತ್ತಿದ್ದಾರೆ. ಆದರೆ ಮನೆಯಲ್ಲಿ ಪರಸ್ಪರ ಕನ್ನಡದಲ್ಲೇ ಮಾತನಾಡುತ್ತಾರೆ.

ಆದರೆ ಈ ಭಾಷಾವಾರು ಪ್ರದೇಶಗಳು ಯಾವಾಗ ವಿಂಗಡಣೆಯಾದವು ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಏಕೆಂದರೆ ಇವತ್ತು ನಾವು ತಮಿಳುನಾಡು, ಕೇರಳ, ಕರ್ನಾಟಕ ಎಂದು ರಾಜ್ಯವಾರು ಹೆಸರುಗಳನ್ನು ಕೊಟ್ಟುಕೊಂಡಿದ್ದೇವೆ. ಆದರೆ ಇರುಳರು ಶತಶತಮಾನ ಗಳಿಂದಲೂ ಆ ಪ್ರದೇಶ ವಾಸಿಗಳೇ ಆಗಿದ್ದಾರೆ. ಆದ್ದರಿಂದ ಇವತ್ತಿನ ಪ್ರಾದೇಶಿಕತೆಯ ಆಧಾರದ ಮೇಲೆ ಇರುಳಿಗರು ತಮಿಳುನಾಡು ಅಥವಾ ಕರ್ನಾಟಕದವರು ಎಂದು ಹೇಳುವುದು ಸರಿಯಾದುದಲ್ಲ. ಆದರೆ ಡಾ.ಕೆ. ಕೆಂಪೇಗೌಡ ಅವರು ಇರುಳಿಗರ ಭಾಷೆಯಲ್ಲಿ ಅತ್ಯಧಿಕವಾಗಿ ಕನ್ನಡ ಪದಗಳೇ ಇವೆ ಎಂಬ ವಾದವನ್ನು ಮಂಡಿಸುತ್ತಾರಾದರೂ ಅವರು ತಮಿಳುನಾಡಿನ ಮೂಲದವರೇ ಎಂದು ಹೇಳುತ್ತಾರೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಇರುಳಿಗರ ಭಾಷೆಯಲ್ಲಿ ತಮಿಳು, ಕನ್ನಡ, ಮಲೆಯಾಳಿ, ತೆಲುಗು ಭಾಷೆಗಳು ಸೇರಿಕೊಂಡಿವೆ ಎಂಬ ಇರುಳಿಗ ವಕ್ತೃಗಳ ಹೇಳಿಕೆಯನ್ನು ಗಮನಿಸಿದಾಗ ಒಂದು ಭಾಷೆಯ ಮೇಲೆ ಸಮೀಪ ಪ್ರದೇಶದ ಪ್ರಭಾವವಾಗುವುದು ಸರ್ವೆಸಾಮಾನ್ಯ. ಹಾಗಿದ್ದಾಗ ಅವರು ಇಂತಹುದೇ ಪ್ರದೇಶದವರು, ಆ ಪ್ರದೇಶದ ಮೂಲ ನಿವಾಸಿಗಳಾಗಿದ್ದು ಅಲ್ಲಿಂದ ಇಲ್ಲಿಗೆ ವಲಸೆ ಬಂದಿದ್ದಾರೆ ಎಂದು ಹೇಳುವುದು ಎಷ್ಟು ಸರಿ? ಇಡೀ ರಾಮನಗರ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯ ಮಾಡಿದಾಗ ಕಂಡು ಬಂದ ಪ್ರಮುಖ ಮಾಹಿತಿಗಳೆಂದರೆ ಇವರ ಐತಿಹ್ಯಗಳು, ಪುರಾಣ ಕತೆಗಳೆಲ್ಲವೂ ಕನ್ನಡದಲ್ಲೇ ಸಿಗುತ್ತವೆ. ಕೆಲವು ಪ್ರದೇಶದಲ್ಲಿ ಅಂದರೆ ರಾಮನಗರ, ಮಾಗಡಿ, ಚನ್ನಪಟ್ಟಣ, ಆನೇಕಲ್ ಭಾಗದಲ್ಲಿ ವಾಸಮಾಡುವ ಇರುಳಿಗರು ಮಾತ್ರ ಇರುಳಿಗ ಭಾಷೆಯನ್ನು ಮಾತನಾಡು ತ್ತಾರೆ. ಅದು ಕಡಿಮೆ ಸಂಖ್ಯೆಯಲ್ಲಿ; ಆದರೆ ಕನಕಪುರ ತಾಲ್ಲೂಕಿನಲ್ಲಿ ವಾಸ ಮಾಡುವ ಇರುಳಿಗರಿಗೆ ಭಾಷೆ ಗೊತ್ತೆ ಇಲ್ಲ; ಅಂದರೆ ಭಾಷೆ ಮಾತನಾಡುವವರು ಇರುಳಿಗರು ಉಳಿದವರು ಇರುಳಿಗರಲ್ಲ

ಎಂಬುವುದಲ್ಲ. ಏಕೆಂದರೆ ಒಂದು ಭಾಷೆ ಉಳಿಯಬೇಕಾದರೆ ಅದನ್ನು ಮಾತನಾಡುವ ಜನರು ಬದುಕಿರಬೇಕು, ಜೊತೆಗೆ ಆ ಭಾಷೆಯ ಅವಶ್ಯಕತೆ ಅಷ್ಟೇ ಮುಖ್ಯವಾಗುತ್ತದೆ ಎಂದು ತಜ್ಞರು ಅಭಿಪ್ರಾಯಪಡುತ್ತಾರೆ. ಆ ನಿಟ್ಟಿನಲ್ಲಿ ನೋಡುವುದಾದರೆ ಮಾಗಡಿ, ರಾಮನಗರ, ಚನ್ನಪಟ್ಟಣದ ಇರುಳಿಗರ ವಾಸದ ಸ್ಥಳಗಳು ಅರಣ್ಯದ ಮಧ್ಯಭಾಗದಲ್ಲಿ ಇದ್ದು, ಇವು ಗ್ರಾಮಗಳಿಂದ ದೂರದಲ್ಲಿ ಇವೆ. ಇವರು ವಾಸ ಮಾಡುವ ಸ್ಥಳಗಳಲ್ಲೇ ಇತರೇ ಸಮುದಾಯ ದವರು ಇಲ್ಲದೇ ಇರುವುದರಿಂದ ಇತರೇ ಸಮುದಾಯದ ಭಾಷೆಯ ಪ್ರಭಾವವಾಗದೆ ಇಂದಿಗೂ ಭಾಷೆ ಉಳಿದುಕೊಂಡಿರುವ ಸಾಧ್ಯತೆಗಳಿವೆ. ಹಾಗೆಯೇ ಕನಕಪುರ ಭಾಗದ ಇರುಳಿಗರು ವಾಸ ಮಾಡುವ ಪ್ರದೇಶಗಳು ಇತರೆ ಸಮುದಾಯದವರ ಗ್ರಾಮಗಳ ಜೊತೆಯಲ್ಲಿಯೇ ಇರುವುದರಿಂದ ಹಾಗೂ ಇವರು ಇತರೆ ಸಮುದಾಯದೊಂದಿಗೆ ಪ್ರತಿನಿತ್ಯ ವ್ಯವಹರಿಸಿಕೊಂಡು ಬದುಕುತ್ತಿದ್ದರಿಂದ ಇವರು ಭಾಷೆಯನ್ನು ಕಳೆದುಕೊಂಡಿರಬಹುದು. ಹಾಗೆಯೇ ಮಾಗಡಿ, ರಾಮನಗರ ಮತ್ತು ಚನ್ನಪಟ್ಟಣಗಳಲ್ಲಿ ಇಂದಿಗೂ ಭಾಷೆ ಉಳಿದುಕೊಂಡಿರಬಹುದು. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಇವತ್ತಿನ ಸಂದರ್ಭವನ್ನು ಮಾನದಂಡವಾಗಿಟ್ಟು ಕೊಂಡು ಕರ್ನಾಟಕ, ಕೇರಳ, ತಮಿಳುನಾಡು ಬೇರೆ ಬೇರೆ ಎಂದು ಹೇಳುತ್ತಾ ಇರುಳಿಗರು ಮಾತನಾಡುವ ಭಾಷೆಯಲ್ಲಿ ತಮಿಳು ಪದಗಳು ಹೆಚ್ಚಾಗಿವೆ. ಆದ್ದರಿಂದ ಅವರು ತಮಿಳುನಾಡಿನವರು ಅಥವಾ ಮಲಯಾಳಿ, ತೆಲುಗು ಪದಗಳಿವೆ ಎಂಬುದರ ಆಧಾರದ ಮೇಲೆ ಮೂಲವನ್ನು ವರ್ಗೀಕರಿಸಿರುವುದು ಸರಿಯಾದ ಕ್ರಮವಲ್ಲ. ಇರುಳಿಗರು ವಾಸಮಾಡುತ್ತಿರುವ ಪ್ರದೇಶಗಳು ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಆಂಧ್ರ ಪ್ರದೇಶದ ಗಡಿಭಾಗವೇ ಆಗಿದೆ. ಆದ್ದರಿಂದ ಆ ಭಾಷೆಯ ಪ್ರಭಾವವಾಗಿರಬಹುದು ಅಥವಾ ಇರುಳಿಗರು ಈ ದೇಶದ ಮೂಲ ಜನಾಂಗವಾದ್ದರಿಂದ ಅವರ ಭಾಷೆಯ ನಂತರವೇ ಇತರೆ ಭಾಷೆಗಳು ಹುಟ್ಟಿರುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಏಕೆಂದರೆ ಇವತ್ತು ಚರಿತ್ರೆಯಲ್ಲಿ ಧರ್ಮ, ಜಾತಿ, ಶ್ರೇಣೀಕರಣ ಮತ್ತು ಸೌಂದರ್ಯಗಳು ಚರಿತ್ರೆಯನ್ನು ನಿರ್ಧರಿಸುತ್ತಿವೆ. ಉಳ್ಳವರ ಚರಿತ್ರೆಯು ಮೇಲ್ಮಟ್ಟದಲ್ಲಿ ಗುರುತಿಸಿಕೊಂಡು ಇಲ್ಲದವರ ಚರಿತ್ರೆಯು ಮೂಲೆಗೊತ್ತಲ್ಪಡುತ್ತಿರುವುದು ನಮ್ಮ ಕಣ್ಣ ಮುಂದೆಯೇ ಇದೆ. ಈ ಸಂದಿಗ್ಧತೆಯಿಂದ ಇರುಳಿಗ ಜನಾಂಗ ಮತ್ತು ಅವರ ಭಾಷೆ ಮೂಲೆಗುಂಪಾಗಿರುವ ಸಾಧ್ಯತೆಗಳಿವೆ.

ಆದಕಾರಣ ಮೇಲಿನ ಕೆಲವು ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇರುಳಿಗರು ಮೂಲತಃ ತಮಿಳುನಾಡಿನವರೆಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಈ ಚರ್ಚೆಯು ಅಪ್ರಸ್ತುತವೆನಿಸುತ್ತದೆ. ಏಕೆಂದರೆ ಡಾ ಆಫೀಲ್ ಷರೀಫ್ ಅವರು ತಮ್ಮ ಕೃತಿಯಾದ 'ರೇಷ್ಮೆ ನಗರಿ' ಎಂಬುವುದರಲ್ಲಿ 'ಇರುಳಿಗರು' ರಾಮನಗರ ಜಿಲ್ಲೆಯ ಅತ್ಯಂತ ಪ್ರಾಚೀನ ಜನವರ್ಗ ಎಂದು ಹೇಳಿದ್ದಾರೆ. ಹಾಗೆಯೇ ಪ್ರಮುಖವಾಗಿ ರಾಮನಗರ (ಕರ್ನಾಟಕ)ದ ಇರುಳಿಗರು

ಮತ್ತು ತಮಿಳುನಾಡಿನ ಇರುಳಿಗರ ಭಾಷೆಗೂ ಅನೇಕ ವ್ಯತ್ಯಾಸಗಳಿವೆ. ಕರ್ನಾಟಕದಲ್ಲಿ ನೆಲೆಸಿರುವ ಇರುಳಿಗರ ಭಾಷೆ ಮೇಲೆ ಕನ್ನಡದ ಪ್ರಭಾವ ಹೆಚ್ಚಾಗಿದ್ದರೆ, ತಮಿಳುನಾಡಿನಲ್ಲಿ ವಾಸಿಸಲ್ಪಡುವ ಇರುಳಿಗರಲ್ಲಿ ತಮಿಳು ಭಾಷೆಯ ಪ್ರಭಾವ ಹೆಚ್ಚಾಗಿ ಕಂಡುಬರುತ್ತದೆ. ಇದು ಪ್ರಾದೇಶಿಕ ಪ್ರಭಾವ ಕಾರಣವಾಗಿರುತ್ತದೆ ಹೊರತು ಮೂಲ ನಿರ್ಧರಕವಲ್ಲ.

ಏಕೆಂದರೆ ಇರುಳಿಗರು ಭಾರತದ ಅತ್ಯಂತ ಪ್ರಾಚೀನ ಬುಡಕಟ್ಟಾಗಿದ್ದು ಇವರ ದೈಹಿಕ ಲಕ್ಷಣಗಳು ಹಾಗೂ ಆಚರಣೆಗಳು ಪ್ರಪಂಚದ ಮೊದಲ ವಲಸೆ ಹೋರಾಟ ಜನವರ್ಗದೊಂದಿಗೆ ಸಾಮ್ಯತೆ ಇದೆ ಎಂದು ಲಕ್ಷ್ಮಿಪತಿ ಕೋಲಾರ ಅಭಿಪ್ರಾಯಿಸುತ್ತಾರೆ. ಮುಂದುವರೆದು ಆಸ್ಟ್ರೇಲಿಯಾದ ಮೂಲನಿವಾಸಿಗಳಾದ ಬುಡಕಟ್ಟು ಜನರಿಗೆ ರಾಮನಗರ ಜಿಲ್ಲೆಯಲ್ಲಿ ವಾಸ ಮಾಡುವ ಇರುಳಿಗರಿಗೆ ಯಾವುದೇ ಭಿನ್ನತೆಗಳಿಲ್ಲ. ಈ ಎರಡೂ ಬುಡಕಟ್ಟು ಜನರ ದೇಹದ ಆಕಾರ, ರಚನೆ ಮತ್ತು ಸಂಸ್ಕೃತಿಯಲ್ಲಿ ಸಾಮ್ಯತೆ ಇದೆ. ಸ್ಯಾನಬುಸ್ಮ್‌ನ್‌ನಿಂದ ಆರಂಭವಾದ ವಲಸೆಯು ಭಾರತದ ಮೂಲಕ ಆಸ್ಟ್ರೇಲಿಯಾ ತಲುಪಿದ ಸಂದರ್ಭದಲ್ಲಿ ನೆಲೆನಿಂತ ಗುಂಪಿನಲ್ಲಿ ಇವರೂ ಒಬ್ಬರಾಗಿರುವ ಸಾಧ್ಯತೆಗಳಿವೆ ಎಂದು ಹೇಳುತ್ತಾರೆ.[೩೫]

ಡಾ. ಲಕ್ಷ್ಮಿಪತಿ ಕೋಲಾರ ಅವರು ಪ್ರಪಂಚದ ಮೂಲನಿವಾಸಿಗಳ ಬಗ್ಗೆ ಹೀಗೆ ಹೇಳುತ್ತಾರೆ. ಪ್ರಪಂಚದ ಬುಡಕಟ್ಟು ಸಮುದಾಯಗಳ ಅಧ್ಯಯನ ಮಾಡುವ ಭಾಷಿಕ ವಿಜ್ಞಾನಿಗಳಿಗೂ, ಇತಿಹಾಸತಜ್ಞರಿಗೂ, ಪುರಾತತ್ವಶಾಸ್ತ್ರಜ್ಞರಿಗೂ, ಜೀವ ವಿಜ್ಞಾನಿಗಳಿಗೂ, ಮಾನವ ಶಾಸ್ತ್ರಜ್ಞರಿಗೂ, ವಂಶವಾಹಿನಿ ತಜ್ಞರಿಗೂ ಬಹಳ ವರ್ಷದಿಂದ ಕಾಡುತ್ತಿದ್ದ ಸಮಸ್ಯೆ ಎಂದರೆ ಈ ಪ್ರಪಂಚದ ಮೂಲನಿವಾಸಿಗಳು ಯಾರು? ಇವರು ಎಲ್ಲಿಂದ ಬಂದರು? ಯಾವಾಗ ಬಂದರು? ಯಾಕಾಗಿ ಬಂದರು? ಎಂಬ ಪ್ರಮುಖ ಪ್ರಶ್ನೆಯೊಂದಿಗೆ ಅನೇಕ ಸಂಶೋಧನೆಗಳು ನಡೆದವು. ಈ ಸಂಶೋಧನೆಯಲ್ಲಿ ಬಹುಸಂಖ್ಯಾತರು ಒಪ್ಪಿಕೊಂಡಿದ್ದು "Out of African Theory" ಆಗಿದೆ. ಕ್ರಿಸ್ಟಿನ್ ಜರೋ ಹೇಳುವಂತೆ "We are African under The Skine" ಇವತ್ತು ಜಗತ್ತಿನಲ್ಲಿ ಅತ್ಯಧಿಕ ಮನುಷ್ಯರು ಅಂತ ಯಾರ್ಯಾರು ಎಲ್ಲೆಲ್ಲಿ ಇದ್ದಾರೋ ಅವರೆಲ್ಲರೂ ಕೂಡ ಆಫ್ರಿಕಾದ ನಮೀಬಿಯದಲ್ಲಿರುವ ಸ್ಯಾನ್ ಬುಸ್ಮನ್ ಎನ್ನುವಂತಹ ಬುಡಕಟ್ಟಿಗೆ ಸೇರಿರುವಂಥವರೇ ಆಗಿದ್ದಾರೆ ಎನ್ನುತ್ತಾರೆ.[೩೬]

ಸ್ಪೆನ್ಸರ್‌ವೆಲ್ ಎನ್ನುವ ವಂಶವಾಹಿನಿ ತಜ್ಞ ೬ಳ ದೇಶಗಳ ವಿಜ್ಞಾನಿಗಳ ತಂಡವನ್ನು ಕಟ್ಟಿಕೊಂಡು ಸುಮಾರು ೧೦೬ಳ ಪುರುಷರ ಡಿ.ಎನ್.ಎ ಮಾದರಿಗಳನ್ನು ಸಂಗ್ರಹಿಸಿ ಅದನ್ನು ಅನಾಲಿಸೀಸ್ ಮಾಡಿ ಆ ಮೂಲಕ ಒಂದು ತೀರ್ಮಾನಕ್ಕೆ ಬಂದನು. ಅದೇನೆಂದರೆ ೧೦೬ಳ ಪುರುಷರ ಡಿ.ಎನ್.ಎ.ಯಲ್ಲಿ ೨೦೦ ಮಾರ್ಕರ್‌ಗಳನ್ನು ವಿಶೇಷ ಎಂದು ಗುರುತಿಸಿ, ಅದರಲ್ಲಿ ಮಾರ್ಕರ್ ೧೩೦ ಅನ್ನು ಅತ್ಯಂತ ಪ್ರಾಚೀನ ಮಾರ್ಕರ್ ಎಂದು ಗುರುತು ಮಾಡುತ್ತಾನೆ.

ಈ ಮಾರ್ಕರ್ ೧೩೦ಯು ಇವತ್ತಿಗೂ ಸ್ಯಾನ್ ಬುಸ್ಮನ್ ಬುಡಕಟ್ಟಿನಲ್ಲಿ ಕಂಡುಬಂದಿತು. ಹಾಗೆಯೇ ತಮಿಳುನಾಡಿನ ಮಧುರೈನ ಕಳ್ಳರ್ ಬುಡಕಟ್ಟಿನ ವೀರಮಾಂಡಿ ಎನ್ನುವವನ ಡಿ.ಎನ್.ಎ.ನಲ್ಲಿ ಪತ್ತೆಯಾಯಿತು. ಹಾಗೆಯೇ ಡಾ. ಸ್ಪೆನ್ಸ್‌ರ್‌ವೆಲ್ ಸ್ಯಾನ್ ಬುಸ್ಮನ್ ಎನ್ನುವ ಬುಡಕಟ್ಟಿನ ಒಂದು ಗುಂಪು ಮೊಟ್ಟಮೊದಲ ಬಾರಿಗೆ ವಲಸೆ ಹೊರಟಿತು. ಆ ಸಂದರ್ಭದಲ್ಲಿ ಇಡೀ ಜಗತ್ತೇ ಹಿಮಯುಗದಿಂದ ಆವರಿಸಿತ್ತು. ಸಮುದ್ರಗಳು ೧೦೦ ಮೀಟರ್‌ಗಳಷ್ಟು ಕೆಳಮಟ್ಟದಲ್ಲಿದ್ದವು. ಇಂದಿನ ಸಮುದ್ರ ತೀರಗಳಿಂದ ೨೦೦ ಕಿ.ಲೋ. ಮೀಟರ್‌ಗಳಷ್ಟು ಒಳಗೆ ನೆಲವೇ ಇತ್ತು. ಶ್ರೀಲಂಕಾ ದಕ್ಷಿಣ ಭಾರತದ ತುತ್ತತುದಿಯಾಗಿತ್ತು. ಮಲಯದಿಂದ ಇಂಡೋನೇಷಿಯಾದವರೆಗಿನ ದ್ವೀಪ ಸಮೂಹಗಳ ಭಾಗದಲ್ಲೂ ನೀರಿರಲಿಲ್ಲ. ಆಸ್ಟ್ರೇಲಿಯಾ ಖಂಡವನ್ನು ತಲುಪಲು ಕೇವಲ ೨೫೦ ಕಿ.ಲೋ ಮೀಟರ್ ಸಮುದ್ರ ಭಾಗವನ್ನು ದಾಟಬೇಕಿತ್ತು ಎನ್ನುತ್ತಾನೆ. ಹಾಗೆಯೇ ಉತ್ತರ ದ್ರುವದಲ್ಲಿ ಹಿಮಪಟ್ಟಿಗಳು ಅಗಾಧವಾಗಿ ವಿಸ್ತರಿಸಿಕೊಂಡಿದ್ದು ಉಷ್ಣಾಂಶದಲ್ಲೂ ೧೦ ಡಿಗ್ರಿ ಸೆಲ್ಸಿಯಸ್‌ನಷ್ಟು ಇಳಿಮುಖವಾಗಿತ್ತು. ಆಫ್ರಿಕಾದಿಂದ ಆಸ್ಟ್ರೇಲಿಯದವರೆಗಿನ ಪ್ರಯಾಣದ ಅವಧಿ ಬಹುಶಃ ೧೦೦೦ ವರ್ಷಗಳಿದ್ದರಬಹುದು.

ಇಂತಹ ಸಂದರ್ಭದಲ್ಲಿ ಬುಸ್ಮನ್ ಬುಡಕಟ್ಟಿನ ಒಂದು ಗುಂಪು ಆಫ್ರಿಕಾದಿಂದ ವಲಸೆ ಹೊರಟು ಮಧ್ಯಪ್ರಾಚ್ಯ, ಮಧ್ಯಏಷ್ಯಾ, ಚೀನಾ, ಯುರೋಪ್, ಅಮೆರಿಕಾ ಮತ್ತು ದಕ್ಷಿಣ ಅಮೆರಿಕಾ ಹಾಗೂ ಏಷ್ಯಾ ಖಂಡಗಳವರೆಗೂ ಪ್ರವಾಸ ಮಾಡಿದ್ದಾರೆ ಎನ್ನುತ್ತಾರೆ. ಪ್ರಮುಖವಾಗಿ ದಕ್ಷಿಣ ಆಫ್ರಿಕಾದಿಂದ ಹೊರಟ ಈ ಬುಡಕಟ್ಟಿನವರು ಭಾರತದ ದಕ್ಷಿಣ ಕರಾವಳಿಯ ಮೂಲಕ ಪೂರ್ವ ಕರಾವಳಿಯನ್ನು ದಾಟಿಕೊಂಡು ಇಂಡೋನೇಷಿಯಾ, ಪಕ್ವಾನ್, ನ್ಯೂಗಿನಿ, ಆಸ್ಟ್ರೇಲಿಯಾ, ನಮೀಬಿಯಾಯಗಳನ್ನೊಳಗೊಂಡಂತೆ ಆಸ್ಟ್ರೇಲಿಯವನ್ನು ತಲುಪಿದರು. ಹೀಗೆ ವಲಸೆ ಹೋಗುವ ಸಂದರ್ಭದಲ್ಲಿ ತಾವು ಯಾವ ಯಾವ ಪ್ರದೇಶದಲ್ಲಿ ತಂಗಿದ್ದರೋ ಅಲ್ಲಲ್ಲಿ ಒಂದೊಂದು ಗುಂಪು ಉಳಿಯುತ್ತಾ ಹೋಯಿತು. ಈ ಗುಂಪಿನವರೇ ಆಯಾ ದೇಶದ ಮೂಲನಿವಾಸಿಗಳು ಎನ್ನುತ್ತಾನೆ.[೩೭]

ಈ ಹಿನ್ನೆಲೆಯಲ್ಲಿಯೇ ಇರುಳಿಗರನ್ನು ನೋಡಬೇಕಾಗಿದೆ. ಏಕೆಂದರೆ ಮೇಲೆ ತಿಳಿಸಿದಂತೆ ಲಕ್ಷ್ಮೀಪತಿ ಕೋಲಾರ ಅವರು ಹೇಳುವಂತೆ ಆಸ್ಟ್ರೇಲಿಯಾ ಮತ್ತು ರಾಮನಗರ ಜಿಲ್ಲೆಯ ಇರುಳಿಗರು ದೈಹಿಕವಾಗಿ ಮತ್ತು ಆಚರಣೆಯಲ್ಲಿ ಆಗಿರುವುದರಿಂದ ಆಫ್ರಿಕಾದಿಂದ ಹೊರಟ ಗುಂಪು ಭಾರತವನ್ನು ತಲುಪಿ ಭಾರತದ ದಕ್ಷಿಣ ಕರಾವಳಿಯಿಂದ ಪೂರ್ವ ಕರಾವಳಿಗೆ ಹೋಗುವಾಗ ಈ ಗುಂಪಿನ ಒಂದು ಬಳ್ಳಿ ಇವತ್ತಿನ ತಮಿಳುನಾಡಿನ ಸೇಲಂ, ಕೃಷ್ಣಗಿರಿ, ಧರ್ಮಪುರಿ ಜಿಲ್ಲೆ ಹಾಗೆಯೇ ಕರ್ನಾಟಕದ ರಾಮನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಉಳಿದುಕೊಂಡಿರಬಹುದು, ಅವರೇ ಈ ಇರುಳಿಗರಾಗಿರುವ ಸಾಧ್ಯತೆಗಳಿವೆ. ಏಕೆಂದರೆ ಇವರು ಆರಾಧಿಸುವ ದೈವಗಳು ಇವರ ಹಿರಿಯರೇ ಆಗಿದ್ದಾರೆ. ಇವರು ಸತ್ತ ತಮ್ಮ

ಹಿರಿಯರನ್ನು ತಮ್ಮ ದೈವಗಳಾಗಿ ಪೂಜಿಸುತ್ತಾರೆ. ಮತ್ತು ಇವರ ದೈವಗಳಿಗೆ ಇವತ್ತಿಗೂ ಆಕಾರಗಳಲ್ಲಿ ದುಂಡನೆಯ ಕರಿ ಕಲ್ಲನ್ನು ಅಥವಾ ಮರಗಿಡಗಳನ್ನೆ ದೈವಗಳಾಗಿ ಪೂಜಿಸುತ್ತಾರೆ. ಇವರ ದೈವಗಳೆಲ್ಲವೂ ಬೆಟ್ಟಗುಡ್ಡಗಳ ಮೇಲೆ ಕಲ್ಲು ಬಂಡೆಗಳ ಮೇಲೆ ಮರದ ಪೊಟರೆಗಳಲ್ಲಿ ಕಂಡುಬರುವುದು ವಿಶೇಷವಾಗಿದೆ. ಲಕ್ಷ್ಮೀಪತಿ ಕೋಲಾರ ಅವರು ಹೇಳುವಂತೆ ಆಫ್ರಿಕಾದ ಕೀನ್ಯಾದಲ್ಲಿರುವ ಗೀಗಿಯಾ ಎನ್ನುವ ಬುಡಕಟ್ಟಿನ ಜನರು 'ಮೌಂಟ್ ಆಫ್ ಕ್ಯಾನ್ಸ್' ಎಂಬ ಬೆಟ್ಟ ದೈವವನ್ನು ಪೂಜಿಸುತ್ತಾರೆ. ಅದನ್ನು ಅವರು ನಮ್ಮ ಪೂರ್ವಿಕ ಪಿತೃ ಎಂದು ಹೇಳಿಕೊಳ್ಳುತ್ತಾರೆ ಎಂದಿದ್ದಾರೆ. ಅಲ್ಲಿಯೂ ಆ ದೈವಕ್ಕೆ ಯಾವುದೇ ಆಕಾರವಿಲ್ಲ; ಒಂದು ಕರಿಯ ಕಲ್ಲನ್ನೇ ದೈವವೆಂದು ಪೂಜಿಸುತ್ತಾರೆ ಎಂದಿದ್ದಾರೆ.[೩೮] ಇದೇ ಮಾದರಿಯಲ್ಲಿ ಇರುಳಿಗರ ದೈವಾಚರಣೆಯು ಕಂಡು ಬರುತ್ತದೆ. ಹಾಗೆಯೇ ಮಧುರೈನ ಕಳ್ಳಾರ್ ಬುಡಕಟ್ಟಿನಂತೆ ಆಫ್ರಿಕಾದ ಬುಸ್ಮನ್‌ನಲ್ಲಿನ Amino Acid bandsನೊಂದಿಗೆ ತದ್ವತ್ತು ಹೋಲಿಕೆಯನ್ನು ಹೊಂದಿದ್ದು ದಕ್ಷಿಣ ಭಾರತದಲ್ಲೂ ಮಾರ್ಕ್‌ರ್ ೧೩೦ ಇರುವುದು ದೃಢಪಟ್ಟಿದೆ. ವೀರಮಾಂಡಿ ಅಥವಾ ಪಿರಮಲೈ ಕಳ್ಳಾರ್‌ಲ್ಲಷ್ಟೇ ಅಲ್ಲದೆ ದಕ್ಷಿಣ ಭಾರತದ ಅನೇಕ ಬುಡಕಟ್ಟುಗಳಲ್ಲೂ ಮಾರ್ಕ್‌ರ್ ೧೩೦ ಚಹರೆ ಇದ್ದಿರಬಹುದಾಗಿದೆ ಎನ್ನುತ್ತಾರೆ.[೩೯] ಜೊತೆಗೆ ಸ್ಯಾನ್ ಬುಸ್ಮನ್ ಬುಡಕಟ್ಟು ವಲಸೆ ಸಂದರ್ಭದಲ್ಲಿ ಉಳಿದುಕೊಂಡ ಒಬ್ಬರಲ್ಲಿ ಈ ಇರುಳಿಗರೂ ಒಬ್ಬರು ಎಂದೂ ಹೇಳುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಒಪ್ಪಿಕೊಳ್ಳುತ್ತಾರೆ.

ಆದ್ದರಿಂದ ಇರುಳಿಗರು ಕಾವೇರಿ ನದಿಯ ತಪ್ಪಲಿನವರಾಗಿದ್ದು, ಈ ಮಹಾವಲಸೆಯ ಸಂದರ್ಭದಲ್ಲಿ ಉಳಿದುಕೊಂಡಿರುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಅದು ಅಲ್ಲದೆ ಇರುಳಿಗರ ಮೂಲ ತಮಿಳುನಾಡೋ ಅಥವಾ ಕೇರಳವೋ ಎಂಬ ಚರ್ಚೆಯೇ ಅಪ್ರಸ್ತುತ. ಏಕೆಂದರೆ ಪ್ರೊ. ಎನ್. ಚಿನ್ನಸ್ವಾಮಿ ಸೋಸಲೆ ಅವರು ಹೇಳುವಂತೆ ಯಾವುದೇ ಜನಾಂಗಕ್ಕೆ ರಾಜಕೀಯವಾಗಿ ಗಡಿ ಇರುತ್ತದೆ. ಆದರೆ ಸಾಂಸ್ಕೃತಿಕವಾಗಿ ಗಡಿ ಇರುವುದಿಲ್ಲ. ಇವತ್ತಿನ ಸಂದರ್ಭದಲ್ಲಿ ತಮಿಳುನಾಡು, ಕೇರಳ, ಕರ್ನಾಟಕ ಎಂದು ಬೇರೆ ಬೇರೆಯಾಗಿರಬಹುದು. ಆದರೆ ಹಿಂದೆ ಇವೆಲ್ಲವೂ ಒಂದೇ ಆಗಿತ್ತು ಎಂಬುದು ಮರೆಯಬಾರದು ಎನ್ನುತ್ತಾರೆ.

ಪ್ರಸ್ತುತ ಅಧ್ಯಯನದಲ್ಲಿ ಇರುಳಿಗರ ಮೂಲವನ್ನು ಕರ್ನಾಟಕ, ಕೇರಳ, ತಮಿಳುನಾಡು ಅಥವಾ ಆಂಧ್ರಪ್ರದೇಶ ಎಂದು ಗುರುತಿಸದೇ ಕಾವೇರಿ ನದಿಯ ತಪ್ಪಲು ಪ್ರದೇಶವೆಂದು ಹೇಳುವುದು ಸೂಕ್ತವಾದದ್ದು ಎಂಬುದನ್ನು ಕ್ಷೇತ್ರಕಾರ್ಯ ಮತ್ತು ವಕ್ತೃಗಳ ಮಾಹಿತಿಯ ಮೇರೆಗೆ ಪ್ರಸ್ತುತಪಡಿಸಲಾಗಿದೆ. ಆದರೂ ಕೆಲವೊಂದು ಸಂದರ್ಭದಲ್ಲಿ ಪರಸ್ಪರ ವಲಸೆ ನಡೆದಿರಬಹುದು. ಏಕೆಂದರೆ ಧರ್ಮಪುರಿ ಜಿಲ್ಲೆ, ಡೆಂಕಣಿಕೋಟೆ ಮತ್ತು ಕೃಷ್ಣಗಿರಿ ಜಿಲ್ಲೆಯಲ್ಲಿ ವಾಸಿಸುತ್ತಿರುವ ಇರುಳಿಗರು ರಾಮನಗರ ಜಿಲ್ಲೆಯಿಂದ ವಲಸೆ ಹೋಗಿರವುದಾಗಿ ಹೇಳಿಕೊಳ್ಳುತ್ತಾರೆ.

೨.೨. ಭೌಗೋಳಿಕ ನೆಲೆಗಳು

ಒಳ್ಳೆಯ ಭೌಗೋಳಿಕ ಲಕ್ಷಣಗಳು ಎಲ್ಲಿ ಇರುತ್ತದೆಯೋ ಅಲ್ಲಿ ಮಾನವನ ವಿಕಾಸದ ಹಾದಿ ಮತ್ತಷ್ಟು ಸುಗಮವಾಗುತ್ತದೆ. ಮಾನವನ ಬದುಕನ್ನು ಪ್ರಕೃತಿಯಿಂದ ಬೇರ್ಪಡಿಸಿ ನೋಡಲು ಸಾಧ್ಯವೇ ಇಲ್ಲ. ಮಾನವನನ್ನು ಹುಟ್ಟಿನಿಂದ ಸಾಯುವವರೆಗೂ ಪ್ರಕೃತಿಯೇ ನಿಯಂತ್ರಿಸುತ್ತದೆ. ಅದು ಅವನ ಹಾವಭಾವ, ಗುಣಲಕ್ಷಣಗಳು, ಬೌದ್ಧಿಕ ಮಟ್ಟ, ಜೀವನ ನಿರ್ವಹಣ ವಿಧಾನ, ಎಲ್ಲದರಲ್ಲೂ ಪ್ರಕೃತಿಯ ಪ್ರಭಾವ ಕಂಡುಬರುತ್ತದೆ. ಮಾನವನ ಬದುಕು ರೂಪುಗೊಳ್ಳುವುದೇ ಪ್ರಕೃತಿಯೊಂದಿಗೆ ನಡೆಸುವ ಒಪ್ಪಂದ, ಹೊಂದಾಣಿಕೆ ಹಾಗೂ ಒಡಂಬಡಿಕೆಯ ಮೂಲಕ ನೈಸರ್ಗಿಕ ಪರಿಸರ ಹಾಗೂ ಮಾನವ ಪರಿಸರ ಒಂದಕ್ಕೊಂದು ಪೂರಕವಾಗಿಯೇ ಬೆಳೆದು ಬಂದಿರುತ್ತದೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಚರಿತ್ರೆಯಲ್ಲಿ ಭೌಗೋಳಿಕತೆ ಎಂಬುವುದನ್ನು ಔಪಚಾರಿಕವಾಗಿಯೇ ನೋಡಲಾಗು ತ್ತಿದೆ ಹೊರತು ಭೌಗೋಳಿಕತೆಯು ಮಾನವನ ಬದುಕಿನ ಮೇಲೆ ಬೀರುವ ಪರಿಣಾಮಗಳ ದೃಷ್ಟಿಯಿಂದ ನೋಡಲೇ ಇಲ್ಲ. ಚರಿತ್ರೆಯಲ್ಲಿ ಭೌಗೋಳಿಕತೆ ಎಂಬುದನ್ನು ಒಂದು ಪ್ರತ್ಯೇಕ ಭಾಗವಾಗಿಯೇ ಗ್ರಹಿಸಿ ಎಲ್ಲ ಅಧ್ಯಯನಗಳು ನಡೆದಿರುವುದನ್ನು ಕಾಣಬಹುದು. ಇದರಿಂದ ಪ್ರಕೃತಿಯ ಮಹತ್ವದ ಬಗ್ಗೆ ಚರಿತ್ರೆಯಲ್ಲಿ ಇಂದಿಗೂ ಅರಿವೇ ಆಗದಿರುವುದು ವಿಪರ್ಯಾಸವೇ ಸರಿ.

ಡಾ. ಎನ್. ಚಿನ್ನಸ್ವಾಮಿ ಸೋಸಲೆ ಅವರು ಹೇಳುವಂತೆ ಪ್ರತಿಯೊಬ್ಬ ವ್ಯಕ್ತಿಯ ಮೇಲೆ ಅಲ್ಲಿನ ಭೌಗೋಳಿಕತೆ ಅತ್ಯಂತ ಪ್ರಭಾವ ಅವನನ್ನು ಹುಟ್ಟಿನಿಂದ ಸಾಯುವವರೆಗೂ ನಿಯಂತ್ರಿಸುತ್ತದೆ. ಅದೇ ರೀತಿಯಲ್ಲಿ ಪ್ರದೇಶಗಳಿಗೆ ತಕ್ಕಂತೆ ಮಾನವನ ವಿಕಾಸವು ಆಗುತ್ತದೆ. ಆದ್ದರಿಂದ ಪ್ರಕೃತಿ ಮತ್ತು ಮಾನವನನ್ನು ಬೇರೆ ಬೇರೆ ಮಾಡಿ ಅಧ್ಯಯನ ಮಾಡುವ ಬದಲು ಒಟ್ಟಾಗಿ ಅಧ್ಯಯನ ಮಾಡಿದರೆ ಮಾನವನ ಚರಿತ್ರೆಯು ಪಕ್ವವಾಗುತ್ತದೆ ಎಂದಿದ್ದಾರೆ.[೪೦]

ಡಾ. ಕೆ. ಮೋಹನಕೃಷ್ಣ ರೈ ಅವರು ಹೇಳುವಂತೆ 'ರಾಜ ಪ್ರಭುತ್ವ ಹಾಗೂ ಧಾರ್ಮಿಕ ಪ್ರಭುತ್ವಗಳು ಪ್ರಕೃತಿಯನ್ನು ತಮ್ಮ ಸ್ವಾರ್ಥ ರಾಜಕಾರಣದ ನೆಲೆಯಲ್ಲಿ ಬಳಸಿಕೊಂಡ ಬಗ್ಗೆ ಚರ್ಚೆಯ ವಸ್ತು ಆಗಲೇ ಇಲ್ಲ. ಸಾಮಾಜಿಕ ಶ್ರೇಣೀಕರಣವನ್ನು ಕಾಯ್ದುಕೊಳ್ಳಲು ಪ್ರಕೃತಿಯನ್ನು ಬಳಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದರೂ ಅದು ಚರಿತ್ರೆಯ ಪುಟಗಳಿಗೆ ಪ್ರವೇಶ ಪಡೆಯಲೇ ಇಲ್ಲ. ಹೀಗಾಗಿ ಭೌಗೋಳಿಕತೆ ಎನ್ನುವುದು ಕೇವಲ ಭೂಮಿಯ ಮೇಲ್ಮೈ ಲಕ್ಷಣಗಳು ಹವಾಗುಣ ಇಷ್ಟಕ್ಕೆ ಸೀಮಿತವಾಗಿರದೆ ಮಾನವ ಪರಿಸರದಲ್ಲಿ ನಿರಂತರವಾಗಿ ನಡೆಯುವ ಸಾಂಸ್ಕೃತಿಕ ರಾಜಕಾರಣದ ವಿವಿಧ ಆಯಾಮಗಳಿಗೂ ಸಂಬಂಧಪಟ್ಟದ್ದಾಗಿದೆ ಎಂದು ನೋಡಲೇ ಇಲ್ಲ.[೪೧]

ಭೌಗೋಳಿಕ ಅಂಶಗಳು ಒಂದು ಪ್ರಭುತ್ವ ಉಗಮಕ್ಕೂ ಹಾಗೂ ಅವನತಿಗೂ ಕಾರಣವಾಗುತ್ತದೆ. ಅದೇ ರೀತಿಯಲ್ಲಿ ಭೌಗೋಳಿಕ ಅಂಶಗಳು ಒಂದು ಪ್ರದೇಶದ ಜನರ ವೃತ್ತಿ ಮತ್ತು ಜೀವನ ವಿಧಾನಗಳನ್ನು ನಿಯಂತ್ರಿಸುವಷ್ಟು ಪ್ರಭಾವಿತವಾಗಿರುತ್ತವೆ. ಏಕೆಂದರೆ ಸಮುದ್ರ ತೀರ ಪ್ರದೇಶದಲ್ಲಿ ವಾಸಿಸುವ ಜನರು ಸಮುದ್ರದ ಜೊತೆ ತನ್ನದೇ ಆದ ಒಡನಾಟವಿಟ್ಟುಕೊಂಡಿರುತ್ತಾರೆ. ಆ ವಾತಾವರಣಕ್ಕೆ ತಕ್ಕಂತೆಯೇ ಉಡುಗೆ, ತೊಡುಗೆ, ಆಹಾರ ಹಾಗೂ ಎಲ್ಲಾ ರೀತಿಯ ಜೀವನಕ್ರಮ ಹೆಣೆದುಕೊಂಡಿರುತ್ತಾರೆ. ಹೀಗಿದ್ದಾಗ ಸಮುದ್ರ ಪ್ರದೇಶದ ಜನರನ್ನು ಸಮುದ್ರದಿಂದ ಬೇರೆ ಮಾಡಿ ಅಧ್ಯಯನ ಮಾಡಲು ಸಾಧ್ಯವಿಲ್ಲ. ಆ ಪ್ರದೇಶದ ಜನರ ಬದುಕು ಸಮುದ್ರದೊಂದಿಗೆ ಬೇರೆತು ಹೋಗಿರುತ್ತದೆ. ಹಾಗೊಮ್ಮೆ ಅಧ್ಯಯನ ಕೈಗೊಂಡರೆ ಅದು ಪರಿಪಕ್ವವಾಗುವುದಿಲ್ಲ. ಆದರೆ ಚರಿತ್ರೆಯಲ್ಲಿ ಮಾತ್ರ ಭೌಗೋಳಿಕತೆಯನ್ನು ಮಾನವನಿಂದ ಬೇರ್ಪಡಿಸಿ ಒಂದು ಬೇರೆ ಅಧ್ಯಯನವಾಗಿಯೇ ನೋಡಲಾಗುತ್ತಿದೆ. ಭೌಗೋಳಿಕತೆ ಎಂಬುದು ಚರಿತ್ರೆಯಲ್ಲಿ ಮಾನವನ ಜೊತೆ ಜೊತೆಯಲ್ಲಿಯೇ ನೋಡಬೇಕಾದ ಜರೂರು ಇದೆ. ಆಗ ಚರಿತ್ರೆಯ ವಸ್ತುಸ್ಥಿತಿ ಅರ್ಥ ವಾಗಿ ಮಾನವನ ಚರಿತ್ರೆಯ ಪೂರ್ಣತೆ ನಮಗೆ ಅರ್ಥವಾಗುತ್ತದೆ.

ಭಾರತವು ವೈವಿಧ್ಯಮಯವಾದ ಭೌಗೋಳಿಕ ಲಕ್ಷಣಗಳನ್ನು ಹೊಂದಿದೆ. ಆ ಪ್ರದೇಶಕ್ಕೆ ತಕ್ಕಂತಹ ಜನ ವರ್ಗ ಮತ್ತು ಅವರ ಬದುಕಿನ ರೀತಿ ನೀತಿಗಳನ್ನು ಒಳಗೊಂಡಿದೆ. ಒಂದು ಭೂ ಪ್ರದೇಶದಲ್ಲಿ ಹುಟ್ಟಿ ಬೆಳೆದ ಜನವರ್ಗ ಇನ್ನೊಂದು ಭೂ ಪ್ರದೇಶಕ್ಕೆ ವಲಸೆ ಹೋದಾಗ ಅವರು ಮನಸೋ ಇಚ್ಚೆ ಆರಿಸಿಕೊಳ್ಳುವ ಭೂಪ್ರದೇಶ ತನ್ನ ಹಿಂದಿನ ಬದುಕಿನ ವಾತಾವರಣದ ಮಾದರಿಯಲ್ಲಿಯೇ ಇರುತ್ತದೆ ಎಂಬುದು ಬುಡಕಟ್ಟುಗಳ ಬದುಕನ್ನು ಕಂಡಾಗ ಅರಿವಿಗೆ ಬರುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಬುಡಕಟ್ಟುಗಳು ಬೇರೆ ಬೇರೆ ಕಾರಣಗಳಿಂದ ತಮ್ಮ ಮೂಲವನ್ನು ಬಿಟ್ಟು ಅನಿವಾರ್ಯವಾಗಿ ಬದುಕುತ್ತಿರುವುದು ಇನ್ನೊಂದು ಬಗೆಯ ಚರ್ಚಾವಿಷಯ. ಆದರೆ ತಮ್ಮ ಮೂಲ ನೆಲದಲ್ಲಿದ್ದ ಜೀವನ ವಿಧಾನ, ತಿನ್ನುವ ಆಹಾರ, ಉಡುಗೆ-ತೊಡುಗೆಯೆಲ್ಲವೂ ಮುಂದುವರೆದುಕೊಂಡು ಹೋಗುತ್ತಿವೆ. ಇದಕ್ಕೆ ಮೂಲ ಕಾರಣ ತಮ್ಮ ಹಿಂದಿನ ಜೀವನ ವಿಧಾನದ ಪ್ರಾದೇಶಿಕ ಪ್ರಭಾವವೇ ಆಗಿರುತ್ತದೆ. ಏಕೆಂದರೆ ತಿನ್ನುವ ಆಹಾರ, ಉಡುವ ಉಡುಗೆ-ತೊಡುಗೆ ಮತ್ತು ಜೀವನ ವಿಧಾನವು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದ್ದು, ಆಯಾ ಪ್ರದೇಶದ ವಾತಾವರಣಕ್ಕೆ ಹೊಂದಿಕೊಂಡಂತಿರುತ್ತದೆ. ಇದರಲ್ಲಿ ಸ್ವಲ್ಪವೇ ವ್ಯತ್ಯಾಸವಾದರೂ ಸಮಸ್ಯೆಗಳು ಉಂಟಾಗುತ್ತವೆ. ಏಕೆಂದರೆ ಕರಾವಳಿ ಭಾಗದಲ್ಲಿ ಕುರಿ, ಮೇಕೆ ಸಾಕಲು ಸಾಧ್ಯವಾಗುವುದಿಲ್ಲ. ಕಾರಣ ಅಲ್ಲಿನ ಪ್ರಕೃತಿ ಸಹಕರಿಸುವುದಿಲ್ಲ. ಇವತ್ತಿನ ಆಧುನಿಕ ತಂತ್ರಜ್ಞಾನದ ಸಹಾಯದಿಂದ ಸಾಧ್ಯವಾಗಿರಬಹುದು. ಆದರೆ ಪ್ರಕೃತಿ ಮತ್ತು ಭೌಗೋಳಿಕತೆ ಅದಕ್ಕೆ ಪೂರಕವಾಗಿ ಸ್ಪಂದಿಸುವುದಿಲ್ಲ.

ಇಲ್ಲಿ ಪ್ರಮುಖವಾಗಿ ಚರ್ಚಿಸಬೇಕಾದ ವಿಷಯವೆಂದರೆ, ಕರಾವಳಿಯಲ್ಲಿ ಕಂಡುಬರುವ ಬುಡಕಟ್ಟುಗಳು ಹಾಗೆಯೇ ಬಯಲು ಪ್ರದೇಶದಲ್ಲಿ ವಾಸಿಸುತ್ತಿರುವ ಬುಡಕಟ್ಟುಗಳು, ಮಲೆನಾಡು ಮತ್ತು ಅರೆ ಮಲೆನಾಡಿನಲ್ಲಿ ವಾಸಿಸುತ್ತಿರುವ ಬುಡಕಟ್ಟುಗಳು ಆ ಪ್ರದೇಶದಲ್ಲೇ ಯಾಕೆ ನೆಲೆಸಿವೆ ಎಂಬುದಾಗಿದೆ. ಮಧ್ಯೆ ಪ್ರಾಚ್ಯದಿಂದ ಬಂದಂತಹ ಆರ್ಯರು ಸಿಂಧೂ ನದಿಯ ಪ್ರದೇಶ ಹಾಗೆಯೇ ಉತ್ತರ ಭಾರತದ ಕೆಲವು ಪ್ರದೇಶಗಳಲ್ಲಿಯೇ ಯಾಕೆ ನೆಲೆಸಿದರು; ಇದಕ್ಕೆ ಕಾರಣ ಅವರು ವಾಸಿಸುತ್ತಿದ್ದ ಮೂಲ ಪ್ರದೇಶದ ವಾತಾವರಣವನ್ನು ಭಾಗಶಃ ಹೋಲುವ ಪ್ರದೇಶಗಳು ಇಲ್ಲಿ ಕಂಡುಬರುವುದರಿಂದಲೂ ಅಥವಾ ಪಾರಂಪರಿಕವಾಗಿ ಅವರಿಗೆ ಒಂದು ನಿರ್ದಿಷ್ಟ ನೆಲೆ ಇಲ್ಲದ ಕಾರಣ ಆಕ್ರಮಣ ಮಾಡಿಕೊಂಡು ಹೋದಲೆಲ್ಲಾ ವಾಸಿಸಲು ಪ್ರಾರಂಭಿಸಿದರು ಎಂಬುದು ಗಮನಿಸಬೇಕಾದ ಅಂಶವಾಗಿದೆ. ಅದೇ ರೀತಿಯಲ್ಲಿ ಕರಾವಳಿಯ ಭಾಗದಲ್ಲಿ ಕಂಡು ಬರುವ ಕೊರಗ, ಕೊರಚ, ಯರವ ಮುಂತಾದ ಬುಡಕಟ್ಟುಗಳು ಬಯಲು ಪ್ರದೇಶಗಳಲ್ಲಿ ಯಾಕೆ ವಾಸಿಸಲು ಇಚ್ಚಿಸಲಿಲ್ಲ. ಹಾಗೆಯೇ ಅರೆಮಲೆನಾಡಿನ ಹೆಬ್ಬಂಡೆಯ ಆಸುಪಾಸಿನಲ್ಲಿ ಕಂಡುಬರುವ ಇರುಳಿಗ, ಸೋಲಿಗರು ಕರಾವಳಿ ಭಾಗದಲ್ಲಿ ಯಾಕೆ ಕಂಡು ಬರುವುದಿಲ್ಲ. ಬಯಲು ಪ್ರದೇಶದಲ್ಲಿ ಕಂಡು ಬರುವ ಮ್ಯಾಸನಾಯಕ, ವಾಲ್ಮಿಕಿ ನಾಯಕ, ಹರಿಣ ಶಿಕಾರಿ ಮುಂತಾದವರು ಅರೆಮಲೆನಾಡು ಮತ್ತು ಕರಾವಳಿಯ ಭಾಗದಲ್ಲಿ ಯಾಕೆ ಕಂಡು ಬರುವುದಿಲ್ಲ ಎಂಬ ಹಲವಾರು ಪ್ರಶ್ನೆಗಳು ನಮ್ಮನ್ನು ಕಾಡದೆ ಇರಲಾರವು. ಕೆಲವೊಂದು ಸಂದರ್ಭದಲ್ಲೇ ವಲಸೆ ಹೋಗಿ ನೆಲೆಸಿರುವ ಸಾಧ್ಯಗಳಿರಬಹುದು. ಅದಕ್ಕೆ ಪ್ರಭುತ್ವ, ಆಹಾರ ಮತ್ತು ಉದ್ಯೋಗಗಳು ಕಾರಣವಾಗಿರಬಹುದು. ಆದರೆ ಬುಡಕಟ್ಟುಗಳು ಸ್ವಇಚ್ಛೆಯಿಂದ ವಾಸಿಸಲು ಆಯ್ಕೆ ಮಾಡಿಕೊಳ್ಳುವ ಸ್ಥಳಗಳಲ್ಲಿ ಅವರ ಮೂಲ ಪರಿಸರ ಪ್ರಭಾವ ಬೀರುತ್ತದೆ ಎಂಬುವುದಂತು ಸತ್ಯ. ಸ್ಪೆನ್ಸರ್‌ವೆಲ್ ಎನ್ನುವ ವಂಶವಾಹಿತಜ್ಞ ಪ್ರಪಂಚದ ಮಾನವರ ವಿಕಾಸದ ಆದಿಯನ್ನು ಹೀಗೆ ಹೇಳುತ್ತಾರೆ. ದಕ್ಷಿಣ ಆಫ್ರಿಕಾದ ಬುಸ್ಮನ್‌ನಿಂದ ಹೊರಟ ಬುಡಕಟ್ಟುಗಳು ತಾವು ವಲಸೆ ಹೋಗಿ ನೆಲೆಸಿದ ಪ್ರದೇಶವು ತಮ್ಮ ಮೂಲ ಪ್ರದೇಶದ ಪ್ರಭಾವದಿಂದಾಗಿಯೇ ಇತ್ತು ಎಂದಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಆಯಾ ಭೌಗೋಳಿಕತೆಯ ಆಧಾರದ ಮೇಲೆಯೇ ಆ ಪರಿಸರದ ಮಾನವ ಅಥವಾ ಪ್ರಾಣಿಗಳ ವಿಕಾಸವಾಗುತ್ತದೆ. ಜಿರಾಫೆಯ ಕತ್ತು ಉದ್ದವಾಗಲು ಆ ಪ್ರದೇಶದಲ್ಲಿ ಜಿರಾಫೆಗೆ ಸಿಗುತ್ತಿದ್ದ ಆಹಾರ ಕಾರಣ. ಎತ್ತರದಲ್ಲಿದ್ದರಿಂದ ಜಿರಾಫೆ ಆಹಾರ ತಿನ್ನಲು ಪ್ರತಿನಿತ್ಯ ಪ್ರಯತ್ನಿಸುತ್ತಿದ್ದರ ಫಲವಾಗಿ ಜಿರಾಫೆಯ ಕತ್ತು ಉದ್ದವಾಯಿತು ಎಂದು ಪ್ರಾಣಿಶಾಸ್ತ್ರಜ್ಞರು ಹೇಳುತ್ತಾರೆ. ಅದೇ ರೀತಿಯಲ್ಲಿ ಭೌಗೋಳಿಕತೆ ಎಂಬುದು ಪ್ರತಿಯೊಂದು ಜೀವರಾಶಿಯ ಮೇಲೂ ಪ್ರಭಾವ ಬೀರುತ್ತದೆ. ಇದರಿಂದಲೇ ಆಫ್ರಿಕಾದಲ್ಲಿರುವವರು ಎತ್ತರವಾಗಿ ಕಪ್ಪಾಗಿ ಮತ್ತು ಸದೃಢ ದೇಹದವರಾಗಿದ್ದಾರೆ. ಅದು ಆ ಭೌಗೋಳಿಕ ಲಕ್ಷಣವಾಗಿದೆ.

ಅಮೆರಿಕಾ, ಇಂಗ್ಲೆಂಡ್, ಫ್ರಾನ್ಸ್ ದೇಶದಲ್ಲಿ ಕಂಡುಬರುವ ಮಾನವರು ಕೆಂಪಾಗಿ ಅಥವಾ ಬಿಳಿಯಾಗಿ ಕಂಡು ಬರುತ್ತಾರೆ. ಅದು ಅಲ್ಲಿಯ ಭೌಗೋಳಿಕ ಲಕ್ಷಣವಾಗಿದೆ.

ಆದ್ದರಿಂದಲೇ ಸ್ಪೆನ್ಸರ್‌ವೆಲ್ ಎನ್ನುವ ವಂಶವಾಹಿತಜ್ಞರು ಹೇಳುವ ಪ್ರಕಾರ ಮೂಲಸ್ಥಳದಿಂದ ವಲಸೆ ಹೊರಟ ಮಾನವರು ವಾಸಿಸುವ ಪ್ರದೇಶಗಳಿಗೆ ತಕ್ಕಂತೆ ಕಾಲಾನಂತರದಲ್ಲಿ ಬದಲಾಗುತ್ತಾ ಸಾಗಿದರು. ಆದರೆ ಯಾರು ಇನ್ನೊಂದು ಸಮುದಾಯಗಳ ಜೊತೆ ಸಂಕರಗೊಳ್ಳದೆ ಉಳಿದರೋ ಅವರು ತಮ್ಮ ಮೂಲ ದೈಹಿಕ ಲಕ್ಷಣಗಳನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು. ಇದನ್ನು ಹೊರತುಪಡಿಸಿದರೆ ಪರಿಸರಕ್ಕೆ ತಕ್ಕಂತೆ ಬದಲಾವಣೆಗಳು ಕಂಡುಬಂದವು. ಭಾರತದಲ್ಲಿ ಕಂಡುಬರುವ ಬುಡಕಟ್ಟುಗಳು ಈ ಅನನ್ಯತೆಯನ್ನು ಇಂದಿಗೂ ಕಾಪಾಡಿಕೊಂಡು ಬಂದಿವೆ. ಅದರಲ್ಲೂ ದಕ್ಷಿಣ ಭಾರತದಲ್ಲಿ ಕಂಡುಬರುವ ಬಹುತೇಕ ಬುಡಕಟ್ಟು ತಮ್ಮ ಮೂಲ ಗುರುತುಗಳನ್ನು ಇಂದಿಗೂ ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದು ಎಂದಿದ್ದಾರೆ.[೪೨]

ಮಾನವ ವಿಕಾಸದ ಹಂತದಲ್ಲಿ ಭೌಗೋಳಿಕತೆ ಎಂಬುದು ಅತ್ಯಂತ ಪ್ರಧಾನ ಪಾತ್ರ ವಹಿಸುತ್ತದೆ. ಬಹುತೇಕ ಇರುಳಿಗರು ಯಾಕೆ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯಲ್ಲಿ ವಾಸಿಸುತ್ತಿದ್ದಾರೆ ಎಂಬುದನ್ನು ಚರ್ಚಿಸಬೇಕಾಗಿದೆ. ಅದಕ್ಕೂ ಮೊದಲು ಆ ಪ್ರದೇಶದ ಭೌಗೋಳಿಕ ಪರಿಸರದ ಸ್ಥೂಲ ಪರಿಚಯ ಮಾಡಿಕೊಳ್ಳುವುದು ಸೂಕ್ತವಾದುದ್ದು. ಭಾರತದ ಭೌಗೋಳಿಕ ಪರಿಸರ ಹಾಗೂ ಕರ್ನಾಟಕದ ಭೌಗೋಳಿಕ ಪರಿಸರವನ್ನು ಅಧ್ಯಯನ ಮಾಡಿ ನಂತರ ಇರುಳಿಗರು ವಾಸಿಸುವ ಭೌಗೋಳಿಕ ಪರಿಸರವನ್ನು ಅಧ್ಯಯನ ಮಾಡುವುದರಿಂದ ನಮ್ಮ ಚರ್ಚೆಗೆ ಉತ್ತರ ಸಿಗಬಹುದು ಎನ್ನುವ ನಿಟ್ಟಿನಲ್ಲಿ ಭಾರತದ ಭೌಗೋಳಿಕ ಪರಿಸರವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಭಾರತದ ಭೌಗೋಳಿಕ ಹಿನ್ನೆಲೆ

ಭಾರತದ ಭೂ ವಿವರಣೆಯ ಪರಿಚಯ ಮಾಡಿಕೊಳ್ಳದೆ ಭಾರತದ ಚರಿತ್ರೆಯ ಅರ್ಥ ಮಾಡಿಕೊಳ್ಳುವುದು ಸಾಧ್ಯವಿಲ್ಲ. ಇಡೀ ಉಪಖಂಡವು ಬಹುಮಟ್ಟಿಗೆ ಉಷ್ಣವಲಯದಲ್ಲಿದೆ. ಮುಂಗಾರು, ಹಿಂಗಾರು ಮಳೆಗಳು ಭಾರತದ ಚರಿತ್ರೆಯಲ್ಲಿ ತನ್ನದೇ ಆದ ಪಾತ್ರವನ್ನು ವಹಿಸುತ್ತಾ ಬಂದಿವೆ, ಜೂನ್ ಮತ್ತು ಅಕ್ಟೋಬರ್ ತಿಂಗಳುಗಳ ನಡುವೆ ಬೀಸುವ ನೈಋತ್ಯ ಮಾರುತಗಳು ಮುಂಗಾರು ಮಳೆ ತರುತ್ತವೆ. ಈ ಮಳೆಯು ದೇಶದ ಬಹುಭಾಗಕ್ಕೆ ನೀರುಣಿಸುತ್ತವೆ. ನವಂಬರ್‌ನಿಂದ ಮೇ ತಿಂಗಳವರೆಗೆ ಹಿಂಗಾರು ಮಳೆ ಆರಂಭವಾಗಿ ಮತ್ತಷ್ಟು ಪ್ರದೇಶಕ್ಕೆ ನೀರುಣಿಸುತ್ತವೆ. ಇನ್ನು ಈಶಾನ್ಯ ಮಾನ್ಸೂನ್ ಮಾರುತಗಳು ದಕ್ಷಿಣ ಭಾರತ ಮತ್ತು ಉತ್ತರ ಭಾರತಕ್ಕೂ ಮಳೆ ಒದಗಿಸುತ್ತವೆ

ಭಾರತದ ಉತ್ತರ ಭಾಗವು ಹಿಮಾಲಯ ಪರ್ವತ ಶ್ರೇಣಿಯಿಂದ ಆವೃತವಾಗಿದ್ದರೆ, ಇನ್ನುಳಿದ ಮೂರು ಭಾಗವು ಸಮುದ್ರಗಳಿಂದ ಆವೃತಗೊಂಡಿದೆ. ಹಿಂದೂಕುಷ್ ಪರ್ವತಗಳು

ಸಿಂಧೂ ನದಿ ಬಯಲು ಮತ್ತು ಆಕ್ಸಸ್ ನದಿಬಯಲುಗಳು ಸಾಂಸ್ಕೃತಿಕ ಸಂಪರ್ಕದ ರಹದಾರಿಗಳಂತಿವೆ. ಹಿಮಾಲಯದಲ್ಲಿರುವ ಕಾಶ್ಮೀರ ಮತ್ತು ನೇಪಾಳದ ಕಣಿವೆಗಳು, ಪಾಯಿರ್ ಪ್ರಸ್ಥಭೂಮಿಗಳಲ್ಲಿನ ಮೆಕ್ಕಲು ಮಣ್ಣು ಬಯಲು ಪ್ರದೇಶಗಳು ದಟ್ಟ ಕಾಡುಗಳಿಂದ ಕೂಡಿವೆ. ಇಲ್ಲಿ ಹುಟ್ಟಿ ಹರಿಯುವ ನದಿಗಳು ಬಹಳ ಕಿರಿದಾದ ಜಾಗದಲ್ಲಿ ಹರಿಯುತ್ತವೆ. ಈ ನದಿ ಪ್ರದೇಶಗಳಲ್ಲಿ ಪ್ರಾಚೀನ ಕಾಲದಿಂದಲೂ ಕೃಷಿ ವ್ಯವಸ್ಥೆಗಳು ನಡೆದಿರುವ ಬಗ್ಗೆ ಮಾಹಿತಿಗಳು ಸಿಗುತ್ತವೆ.

ಭಾರತದಲ್ಲಿ ಸಿಂಧೂ, ಗಂಗ, ಬ್ರಹ್ಮಪುತ್ರ, ಗೋದಾವರಿ, ನರ್ಮದಾ, ತಪತಿ, ಕೃಷ್ಣ, ಕಾವೇರಿ ಮುಂತಾದ ಜೀವನದಿಗಳು ಕಂಡುಬರುತ್ತವೆ. ಸಿಂಧೂ ನದಿಯ ಪ್ರದೇಶ, ಗಂಗಾ ನದಿಯ ಪ್ರದೇಶ, ಬ್ರಹ್ಮಪುತ್ರ ಬಯಲು ಪ್ರದೇಶ ಇವುಗಳನ್ನು ಭಾರತೀಯ ಇತಿಹಾಸದ ಕೇಂದ್ರ ಎಂದು ಹೇಳಬಹುದು. ಒರಿಸ್ಸಾದಲ್ಲಿ ಕಳಿಂಗ, ಮಹಾನದಿ, ಗೋದಾವರಿ ನದಿಗಳು ಹರಿಯುತ್ತವೆ. ದಕ್ಷಿಣ ಭಾರತದಲ್ಲಿ ಕೃಷ್ಣ ಗೋದಾವರಿ, ಕಾವೇರಿ, ವೈಗೈ ನದಿಗಳು ಕಂಡುಬರುತ್ತವೆ. ತಮಿಳುನಾಡಿನ ಪೂರ್ವ ಕರಾವಳಿ ಪ್ರದೇಶವನ್ನು ಕೋರಮಂಡಲ ತೀರ ಎನ್ನುತ್ತಾರೆ. ಇಲ್ಲಿ ಅರಿಕ್‌ವೇಡು, ಮಹಾಬಲಿಪುರ, ಕಾವೇರಿ ಪಟ್ಟಣಗಳು ಕಂಡುಬರುತ್ತವೆ. ಕರ್ನಾಟಕ ಎಂಬ ಪ್ರದೇಶವು ತಪತಿ ಅಥವಾ ದೂದ್ ಗಂಗಾ, ಭೀಮ, ಕೃಷ್ಣ, ತುಂಗಭದ್ರೆಯ ಪ್ರದೇಶದಲ್ಲಿ ಕಂಡುಬರುತ್ತದೆ. ಹಾಗೆಯೇ ಪಶ್ಚಿಮ ಕರಾವಳಿ ತೀರವನ್ನು ಮಲಬಾರ್ ತೀರ ಪ್ರದೇಶ ಎಂದು ಕರೆಯುತ್ತಾರೆ.

ಉತ್ತಮ ಭೌಗೋಳಿಕ ಲಕ್ಷಣಗಳಿದ್ದರೆ ಮಾನವನ ವಿಕಾಸ ಸಮೃದ್ಧವಾಗುತ್ತದೆ. ಪ್ರಕೃತಿ ಮತ್ತು ಮಾನವನನ್ನು ಯಾವುದೇ ಕಾರಣಕ್ಕೂ ಬೇರೆ ಬೇರೆಯಾಗಿ ನೋಡಿ ಅಭ್ಯಸಿಸಲು ಸಾಧ್ಯವಿಲ್ಲ. ಏಕೆಂದರೆ ಪ್ರಕೃತಿಯಲ್ಲಿಯೇ ಮಾನವ ರೂಪುಗೊಂಡಿದ್ದಾನೆ. ಮಾನವನ ಎಲ್ಲಾ ಆಂತರಿಕ ಬಾಹ್ಯ ಚಟುವಟಿಕೆಗೂ ಪ್ರಕೃತಿಯೇ ಕಾರಣವಾಗಿರುತ್ತದೆ. ಮಾನವನ ಮನಸ್ಸನ್ನು ಪ್ರಕೃತಿ ನಿಯಂತ್ರಿಸುತ್ತದೆ. ಪ್ರಕೃತಿಯ ಮತ್ತು ಮಾನವನ ನಡುವೆ ಅನೇಕ ಒಪ್ಪಂದ ಒಡಂಬಡಿಕೆ ಮತ್ತು ಹೊಂದಾಣಿಕೆಗಳು ನಡೆಯುತ್ತಲೇ ಬಂದಿವೆ. ಈ ನೈಸರ್ಗಿಕ ಪರಿಸರ ಹಾಗೂ ಮಾನವ ಪರಿಸರ ಒಂದಕ್ಕೊಂದು ಪೂರಕವಾಗಿಯೇ ಬೆಳೆದು ಬಂದಿವೆ.

ಚರಿತ್ರೆ ಎಂಬುವುದು ಮಾನವನ ಸುತ್ತಲು ಹೆಣೆದುಕೊಂಡಿರುವುದೇ ಆಗಿದೆ. ಮಾನವನ ಎಲ್ಲಾ ಆಟಗಳಿಗೂ ಪ್ರಕೃತಿ ಪಾತ್ರ ಅತೀ ಮುಖ್ಯವಾಗಿಯೇ ಕಂಡುಬರುತ್ತದೆ. ಅಂದಮೇಲೆ ಪ್ರಕೃತಿ ಮತ್ತು ಮಾನವನನ್ನು ವಿಭಾಗಿಸಿ ನೋಡಿದರೆ ಚರಿತ್ರೆ ಅಸ್ಪಷ್ಟವಾಗುತ್ತದೆ ಎಂಬುದಂತು ಸ್ಪಷ್ಟವಾಗಿದೆ. ಮಾನವನ ಎಲ್ಲಾ ಚಾರಿತ್ರಿಕ ಸಂದರ್ಭದಲ್ಲಿ ಪ್ರಕೃತಿ ಪ್ರಾಸಂಗಿಕವಾಗಿ ಬಂದು ಹೋಗುತ್ತದೆ. ಹಿಂದಿನ ಚರಿತ್ರೆ ಬರವಣಿಗೆಯ ಸಂದರ್ಭದಲ್ಲಿ ಭೌಗೋಳಿಕ ಲಕ್ಷಣಗಳನ್ನು ಮಾನವನ ಚರಿತ್ರೆಯಿಂದ ಬೇರೆಯಾಗಿಯೇ ನೋಡಲಾಗುತ್ತಿತ್ತು. ಭೌಗೋಳಿಕತೆ, ರಾಜಕೀಯತೆ, ಆರ್ಥಿಕತೆ ಮತ್ತು ಸಾಮಾಜಿಕತೆ ಸಂಬಂಧಗಳು ಹೇಗೆ ರೂಪುಗೊಂಡಿತು ಎಂಬುದು ಚರಿತ್ರೆಯ

ವಸ್ತುವಾಗಲೇ ಇಲ್ಲ. ಏಕೆಂದರೆ ಚರಿತ್ರೆಯಲ್ಲಿ ಪ್ರಕೃತಿಯನ್ನು ಸಾಮಾಜಿಕ ಶ್ರೇಣೀಕರಣದ ಬಲಪಡಿಸಿಕೊಳ್ಳುವಿಕೆಗೆ ಬಳಸಿಕೊಂಡರೇ ವಿನಃ ಭೌಗೋಳಿಕತೆಯನ್ನು ಚರಿತ್ರೆಯಿಂದ ದೂರವಿಟ್ಟೇ ನೋಡಲಾಯಿತು. ಭೌಗೋಳಿಕತೆ ಎಂಬುದು ಭೂಮಿಯ ಮೇಲ್ಮೈ ಲಕ್ಷಣಗಳಿಗೆ, ಹವಾಗುಣ ಗಳಿಗಷ್ಟೇ ಸೀಮಿತವಾದುದಲ್ಲ. ಏಕೆಂದರೆ ಮಾನವನ ವಿಕಾಸದ ಹಾದಿಯಲ್ಲಿ ಪ್ರಕೃತಿಯ ಪಾಲು ಅತ್ಯಂತ ದೊಡ್ಡದಿದೆ. ಮಾನವ ಪ್ರಕೃತಿಯಲ್ಲಿ ನಿರಂತರವಾಗಿ ನಡೆಯುತ್ತಿರುವ ಸಾಂಸ್ಕೃತಿಕ ರಾಜಕಾರಣದ ಪಾಲುದಾರನೇ ಆಗಿರುತ್ತಾನೆ ಎಂಬುದನ್ನು ತಿಳಿದುಕೊಳ್ಳಬೇಕು.

ಅಲೆಮಾರಿಯಾಗಿದ್ದ ಮಾನವ ತನ್ನ ಅಲೆಮಾರಿತನವನ್ನು ಬಿಟ್ಟು ಒಂದು ಕಡೆ ನೆಲೆ ನಿಂತಾಗಿನಿಂದ ಹಿಡಿದು ನಂತರ ಅವನ ಜೀವಮಾನದ ಸಾಧನೆಗಳನ್ನು ನೋಡುವುದರಲ್ಲಿಯೂ ಪ್ರಕೃತಿ ಪ್ರಮುಖ ಪಾತ್ರ ವಹಿಸುತ್ತದೆ. ಭೌಗೋಳಿಕ ಪರಿಸರ ಮತ್ತು ಮಾನವನ ಪರಿಸರ ಒಂದಕ್ಕೊಂದು ಪೂರಕವಾಗಿದ್ದರಿಂದಲೇ ಮಾನವನು ಪ್ರಕೃತಿಯಲ್ಲಿ ಹಂತ ಹಂತವಾಗಿ ವ್ಯವಸ್ಥಿತ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಯಿತು.

ಭೌಗೋಳಿಕ ಲಕ್ಷಣಗಳು ಮಾನವನ ಬದುಕಿನ ಆರಂಭದಿಂದ ಹಿಡಿದು ಅಂತ್ಯದವರೆಗೂ ತನ್ನದೇ ಆದ ಪ್ರಮುಖ ಪಾತ್ರವಹಿಸುತ್ತವೆ. ಆಯಾ ಭೌಗೋಳಿಕತೆಗೆ ತಕ್ಕಂತೆ ಮಾನವನ ಗುಣ ಧರ್ಮ, ನಡೆ, ನುಡಿ, ದೇಹದ ಬಣ್ಣ, ಆಚಾರ, ವಿಚಾರ, ಸಂಸ್ಕೃತಿ ಎಲ್ಲವೂ ನಿರ್ಧಾರಗೊಂಡಿವೆ. ಪ್ರಕೃತಿಯನ್ನು ದೈವೀ ಭಾವನೆಯಿಂದ ಕಂಡ ಬುಡಕಟ್ಟುಗಳು ತಮ್ಮ ಎಲ್ಲಾ ಪ್ರಯೋಗಗಳಿಗೆ ಪ್ರಯೋಗ ಶಾಲೆಯನ್ನಾಗಿಸಿಕೊಂಡಿದ್ದು, ಪ್ರಕೃತಿಯನ್ನೇ. ಇವರು ತಮ್ಮ ಅನುಕೂಲತೆಗಾಗಿ ಅನೇಕ ಪ್ರಯೋಗಗಳನ್ನು ನಡೆಸಿ ಅದರಿಂದ ಕಂಡುಕೊಂಡ ಅನುಭವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುತ್ತಾ ಸಾಗಿದರು. ಏಕೆಂದರೆ ಪ್ರಕೃತಿಯಲ್ಲಿನ ಬೆಂಕಿ, ಗಾಳಿ, ನೀರು, ಮಿಂಚು, ಗುಡುಗು, ಸಿಡಿಲು, ಮಳೆ, ಪ್ರವಾಹ ಮುಂತಾದವುಗಳನ್ನು ಕಂಡು ದಿಗ್ಭ್ರಾಂತನಾದ ಮಾನವ ಅವುಗಳನ್ನು ಭಯ ಭಕ್ತಿಯಿಂದ ನೋಡತೊಡಗಿದನು. ಮಾನವನು ಪ್ರಕೃತಿಯ ಋತುಮಾನಗಳಿಗೆ ತಕ್ಕಂತೆ ತನ್ನ ಬದುಕಿನ ಹೊಂದಾಣಿಕೆ ಮಾಡಿಕೊಂಡು ಬದುಕಲಾರಂಭಿಸಿ ಅದರಂತೆ ಅವನ ದೇಹ, ಮನಸ್ಸು, ಅವನು ಮಾಡುವ ಕೆಲಸ, ತಿನ್ನುವ ಆಹಾರ, ಬದುಕುವ ರೀತಿ–ನೀತಿಗಳು ಕೂಡ ಬದಲಾವಣೆಗೊಂಡವು. ಇದರ ಜೊತೆಗೆ ಮಾನವನ ದೈಹಿಕ ಲಕ್ಷಣಗಳ ಮೇಲೆ ಭೌಗೋಳಿಕ ಲಕ್ಷಣಗಳು ಪರಿಣಾಮ ಬೀರಿದವು. ಆದ್ದರಿಂದಲೇ ಬಡುಕಟ್ಟುಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನಭಿನ್ನವಾಗಿ ಕಂಡುಬರುತ್ತವೆ. ದಟ್ಟ ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿದ್ದ ಬುಡಕಟ್ಟುಗಳು ಕುರುಚಲು ಗಿಡ ಪ್ರದೇಶಗಳಲ್ಲಿ ವಾಸಿಸಲು ಇಚ್ಛಿಸುವುದಿಲ್ಲ. ಕುರುಚಲು ಗಿಡ ಪ್ರದೇಶದಲ್ಲಿ ವಾಸಿಸುತ್ತಿದ್ದ ಬುಡಕಟ್ಟುಗಳು ಬೆಟ್ಟ–ಗುಡ್ಡಗಳಲ್ಲಿ ವಾಸಿಸಲು ಇಚ್ಛಿಸುವುದಿಲ್ಲ. ಬೆಟ್ಟ–ಗುಡ್ಡಗಳಲ್ಲಿ ವಾಸಿಸುವ ಜನಾಂಗಗಳು ಈ ಎರಡು ಪ್ರದೇಶದಲ್ಲಿ ವಾಸಿಸಲು ಇಚ್ಛಿಸುವುದಿಲ್ಲ.

ಆದ್ದರಿಂದಲೇ ಭೌಗೋಳಿಕತೆ ಎಂಬುದು ಮಾನವ ಚರಿತ್ರೆಯ ಅತ್ಯಂತ ಪ್ರಮುಖ ಹಂತ ಎನ್ನಬಹುದು.

ಕರ್ನಾಟಕದ ಭೌಗೋಳಿಕ ಪರಿಸರ

ಕರ್ನಾಟಕ ರಾಜ್ಯವು ವೈವಿಧ್ಯಮಯವಾದ ಭೌಗೋಳಿಕ ಪರಿಸರ, ನೈಸರ್ಗಿಕ ಸಂಪನ್ಮೂಲ, ಶಿಲಾ ಪರ್ವತಗಳು, ವೈಪರಿತ್ಯಗಳನ್ನು ಜೊತೆಗೆ ವಿವಿಧ ಬಗೆಯ ಮಣ್ಣು, ಪಶ್ಚಿಮಘಟ್ಟ, ಪೂರ್ವಘಟ್ಟ, ಕಣಿವೆ, ಕಂದರ, ಹವಾಮಾನಗಳು ಕರ್ನಾಟಕದ ಜನಸಮುದಾಯಗಳನ್ನು ಹೊಂದಿವೆ. ಹಾಗೆಯೇ ಇದು ಕರ್ನಾಟಕದ ಚರಿತ್ರೆಯ ಮೇಲೆ ತಮ್ಮದೇ ಆದ ಪ್ರಭಾವವನ್ನು ಬೀರಿದೆ. ಯಾವುದೇ ಒಂದು ಪ್ರದೇಶದ ಜನರ ಜೀವನ ರೂಪುಗೊಳ್ಳುವಿಕೆಯ ಮೇಲೆ ಆ ಭಾಗದ ಭೌಗೋಳಿಕ ಪರಿಸರ, ಸಂಪನ್ಮೂಲಗಳು ಹಾಗೂ ಚಾರಿತ್ರಿಕ ಅಂಶಗಳು ಪ್ರಭಾವ ಬೀರುತ್ತವೆ.[೪೩]

ಸಾಮಾನ್ಯವಾಗಿ ಭೌಗೋಳಿಕ ಅಂಶಗಳೆಂದರೆ ಆ ಭಾಗದ ಮೇಲ್ಮೈ ರಚನೆ ಪ್ರಾಕೃತಿಕ ವಿಭಾಗಗಳು, ಅವುಗಳಲ್ಲದೆ ಕಂಡು ಬರುವ ಶಿಲೆಗಳು, ಖನಿಜಗಳು ಹಾಗೂ ಮಣ್ಣುಗಳು, ವಾಯುಗುಣಕ್ಕೆ ಸಂಬಂಧಿಸಿದ ಪ್ರಮುಖ ಅಂಶಗಳಾದ ಉಷ್ಣಾಂಶ, ಮಳೆ, ನದಿ, ಕಾಡು, ಸಸ್ಯವರ್ಗ, ಪ್ರಾಣಿವರ್ಗ, ನದಿಗಳು ಮುಂತಾದವುಗಳಾಗಿರುತ್ತವೆ.

ಇಂದಿನ ಕರ್ನಾಟಕದ ವಿಸ್ತಾರವು ೧೧° ಉತ್ತರ ಅಕ್ಷಾಂಶದಿಂದ ೧೮° ಉತ್ತರ ಅಕ್ಷಾಂಶದವರೆಗೆ ಕಂಡುಬರುತ್ತದೆ. ಪಶ್ಚಿಮ ಕರಾವಳಿಯಿಂದ ೭೪° ಪೂರ್ವ ರೇಖಾಂಶದಿಂದ ೭೮೦ ಪೂರ್ವ ರೇಖಾಂಶಗಳವರೆಗೆ ಇದೆ. ಇದರ ಒಟ್ಟು ವಿಸ್ತೀರ್ಣವು ೧,೯೧,೨೭೨ ಚ.ಕಿ.ಮೀಗಳಷ್ಟಿದೆ. ಕರ್ನಾಟಕ ರಾಜ್ಯವನ್ನು ಭೌಗೋಳಿಕವಾಗಿ ೩ ಭಾಗಗಳಾಗಿ ವಿಂಗಡಿಸಲಾಗಿದೆ. ೧. ಪಶ್ಚಿಮ ಕರಾವಳಿ. ೨. ಮಲೆನಾಡು/ ಪಶ್ಚಿಮ ಘಟ್ಟಗಳು. ೩. ಪೂರ್ವದ ಮೈದಾನ ಹಾಗೂ ಪ್ರಸ್ಥಭೂಮಿ ಭಾಗಗಳು.[೪೪]

ಪಶ್ಚಿಮ ಕರಾವಳಿ: ಕರ್ನಾಟಕದ ಪಶ್ಚಿಮ ಕರಾವಳಿಯು ೨೬೦ ಕಿ.ಮೀ.ನಷ್ಟು ವಿಸ್ತೀರ್ಣವನ್ನು ಹೊಂದಿದೆ. ಇದು ಅರಬ್ಬಿ ಸಮುದ್ರದಿಂದ ಮಲೆನಾಡಿನ ಪಶ್ಚಿಮ ಘಟ್ಟಗಳವರೆಗೂ ಹಬ್ಬಿಕೊಂಡಿದೆ. ಗೋವಾದಿಂದ ಮಹಾರಾಷ್ಟ್ರದ ರತ್ನಗಿರಿಯವರೆಗೆ ಈ ಕರಾವಳಿಯನ್ನು ಕಾಣಬಹುದು. ಇದನ್ನು ಕೊಂಕಣ ತೀರ ಎಂದು ಕರೆಯುತ್ತಾರೆ.

ಮಲೆನಾಡು/ ಪಶ್ಚಿಮ ಘಟ್ಟಗಳು: ಇದನ್ನು ಸಹ್ಯಾದ್ರಿ ಬೆಟ್ಟಗಳು ಎಂತಲೂ ಕರೆಯುತ್ತಾರೆ. ಇದು ಸುಮಾರು ೪೦೦ ಕಿ.ಮೀಗಳಷ್ಟು ವಿಸ್ತಾರವಾಗಿದೆ. ಇದು ಅತಿಯಾದ ದಟ್ಟಕಾಡುಗಳಿಂದ ಕೂಡಿದ ಬೆಟ್ಟಸಾಲುಗಳನ್ನು ಹೊಂದಿದೆ. ಇದು ದಟ್ಟ ಅರಣ್ಯ ಪ್ರದೇಶವಾದುದರಿಂದ ಇಲ್ಲಿ ಯಥೇಚ್ಛ ಪ್ರಾಣಿ ಸಂಕುಲಗಳು ಕಂಡು ಬರುತ್ತವೆ. ಇತಿಹಾಸದ ಮೊದಲ ದಿನಗಳಲ್ಲಿ ಈ

ಮಲೆನಾಡಿನ ಪ್ರದೇಶಗಳಿಗೆ ಪ್ರಭುತ್ವಗಳು ಹುಟ್ಟಿ ಬೆಳೆದು ಇತಿಹಾಸ ಸೃಷ್ಟಿಸಿದಂತೆ ಕಾಣಬರುವುದಿಲ್ಲ. ಏಕೆಂದರೆ ಇಲ್ಲಿ ಜನ ಜಂಗುಳಿಯೇ ಇಲ್ಲ. ಪ್ರಭುತ್ವಕ್ಕೆ ಬೇಕಾದ ಮಾನವ ಸಂಪನ್ಮೂಲ ಸಿಗದಿರುವುದರಿಂದ ಇಲ್ಲಿ ಯಾವುದೇ ಪ್ರಭುತ್ವ ರಾಜ್ಯ ಕಟ್ಟಿ ಆಳ್ವಿಕೆ ಮಾಡಿರುವುದಕ್ಕೆ ಕಾರಣ ಪಶ್ಚಿಮ ಘಟ್ಟಗಳಲ್ಲಿ ಮಳೆಯ ಪ್ರಮಾಣ ಹೆಚ್ಚಾಗಿದ್ದು ಅಧಿಕ ಕಾಡು ಅಥವಾ ವನ್ಯ ಪ್ರಾಣಿಗಳು ಕಂಡು ಬರುತ್ತವೆ. ಈ ಪ್ರಾಣಿಗಳನ್ನು ಪಳಗಿಸಲು ಮತ್ತು ಅರಣ್ಯ ಸಂಪನ್ಮೂಲವನ್ನು ಉಪಯೋಗಿಸಿ ಕೊಳ್ಳಲು ಅಲ್ಲಲ್ಲಿ ಕೋಟೆಕೊತ್ತಲಗಳನ್ನು ನಿರ್ಮಾಣ ಮಾಡಿಕೊಂಡು ಸಂಪನ್ಮೂಲಗಳ ರವಾನೆ ಕೇಂದ್ರಗಳಾಗಿ ಮಾಡಿಕೊಂಡಿದ್ದನ್ನು ಪ್ರಮುಖವಾಗಿ ಕಾಣಬಹುದು.

೧. ಪೂರ್ವ ಪ್ರಸ್ಥಭೂಮಿ ಹಾಗೂ ಮೈದಾನ ಪ್ರದೇಶಗಳು

ಪೂರ್ವ ಪ್ರಸ್ಥಭೂಮಿ ಹಾಗೂ ಮೈದಾನ ಭೌಗೋಳಿಕ ವಿಭಾಗವು ಇತರೆ ವಿಭಾಗಗಳಿಗಿಂತ ಅತಿ ವಿಸ್ತಾರವಾದ ಭೂ ವಿಸ್ತೀರ್ಣವನ್ನು ಹೊಂದಿದೆ. ಈ ಭೂಪ್ರದೇಶಗಳು ಮಳೆ ನೆರಳಿನ ಪ್ರದೇಶಗಳಾಗಿವೆ. ಈ ಭಾಗದಲ್ಲಿ ಆಷಾಢ ಮಾಸದಿಂದ ಮಳೆ ಆರಂಭವಾಗಿ ಅಶ್ವೀಜ ಮಾಸದವರೆಗೂ ಮಳೆ ಸುರಿಯುತ್ತದೆ. ಈ ಮಳೆಯು ಅನಿಶ್ಚಿತೆಯಿಂದ ಕೂಡಿರುತ್ತದೆ. ಇಲ್ಲಿ ರಾಜ ಮಹಾರಾಜರುಗಳು ಆಳ್ವಿಕೆ ಮಾಡಿರುವುದನ್ನು ಕಾಣಬಹುದು. ಅತೀ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಭಾಗ ಇದಾಗಿದೆ. ಇದು ಕೃಷಿಯೋಗ್ಯ ಭೂಮಿಯಾಗಿರುವುದರಿಂದ ರಾಜ ಮಹಾರಾಜರ ಆಳ್ವಿಕೆಯು ಈ ಪ್ರದೇಶದಲ್ಲಿ ಕಂಡು ಬರುತ್ತದೆ. ಈ ಪೂರ್ವ ಮೈದಾನವನ್ನು ಎರಡು ಭಾಗಗಳಾಗಿ ವಿಂಗಡಿಸಿ ಅಧ್ಯಯನ ಮಾಡಿದ್ದಾರೆ. ತುಂಗಭದ್ರ ನದಿಯಿಂದ ಉತ್ತರಕ್ಕಿರುವ ಉತ್ತರ ಕರ್ನಾಟಕ ಮೈದಾನ ೨. ತುಂಗಾಭದ್ರಾ ನದಿಯಿಂದ ದಕ್ಷಿಣ ಕರ್ನಾಟಕ ಮೈದಾನ.[೪೫]

ಉತ್ತರ ಕರ್ನಾಟಕದ ಮೈದಾನ: ಇದು ಸಮುದ್ರ ಮಟ್ಟದಿಂದ ೩೦೦ ರಿಂದ ೬೦೦ ಮೀಟರ್ ಅಡಿ ಎತ್ತರವಾಗಿದ್ದು ಚಿಕ್ಕಮಟ್ಟ ಬೆಟ್ಟಗಳನ್ನು ಹೊಂದಿರುವ ಭೂಭಾಗವಾಗಿದೆ. ಪ್ರಾಚೀನ ಕಾಲದಿಂದಲೂ ಮಾನವ ವಸತಿಗೆ ಯೋಗ್ಯವಾಗಿದ್ದು ಇಲ್ಲಿ ಕೋಟೆ ಕೊತ್ತಲಗಳು ನಿರ್ಮಾಣವಾಗಿರುವುದನ್ನು ಕಾಣಬಹುದು. ಈ ಭಾಗದಲ್ಲಿ ಕುರುಚಲು ಗಿಡ ಕಡಿಮೆ ಪ್ರಮಾಣದಲ್ಲಿ ಅರಣ್ಯ ಪ್ರದೇಶ ಕಂಡುಬರುತ್ತದೆ. ಇಲ್ಲಿ ಕಲ್ಲು ಬಂಡೆಗಳನ್ನು ಪುಡಿ ಮಾಡಿದ ರೂಪದಲ್ಲಿ ಕಂಡುಬರುತ್ತದೆ. ಆದ್ದರಿಂದ ಇಂತಹ ಶಿಲಾ ಪ್ರಕಾರಕ್ಕೆ ಹೊಂದಿಕೊಂಡಂತಹ ಜನವಸತಿ ಮತ್ತು ಜನವರ್ಗವನ್ನು ಕಾಣಬಹುದು. ಇಲ್ಲಿ ಪ್ರಧಾನವಾಗಿ ಕಂಡುಬರುವ ಬುಡಕಟ್ಟುಗಳೆಂದರೆ ಮ್ಯಾಸ ನಾಯಕ, ವಾಲ್ಮೀಕಿ ನಾಯಕ, ಪಾರ್ಧಿ, ಹರಣ ಶಿಕಾರಿ ಮುಂತಾದವುಗಳು.

ದಕ್ಷಿಣ ಪ್ರಸ್ಥಭೂಮಿ/ಮೈದಾನ ಪ್ರದೇಶ: ದಕ್ಷಿಣ ಪ್ರಸ್ಥಭೂಮಿ ಅಥವಾ ಮೈದಾನ ಪ್ರದೇಶವು ತುಂಗಾಭದ್ರಾ ನದಿಯಿಂದ ಕಾವೇರಿ ನದಿಯವರೆಗೂ ಹಬ್ಬಿಕೊಂಡಿದೆ. ಈ ಭಾಗದಲ್ಲಿ ಬಿಡಿ

ಬಿಡಿಯಾದ, ಎತ್ತರವಾದ ಮತ್ತು ಏಕಶಿಲಾ ಬೆಟ್ಟಗಳ ಸಾಲುಗಳನ್ನು ಕಾಣಬಹುದು. ಈ ಬೆಟ್ಟಸಾಲುಗಳು ಕಾಡುಗಳಿಂದ ಆವರಿಸಿದ ದುರ್ಗಮವಾದ ಪ್ರದೇಶವಾಗಿದೆ. ಈ ಪ್ರದೇಶದಲ್ಲಿ ಕೋಟೆ ಕೊತ್ತಲಗಳನ್ನು ನಿರ್ಮಾಣ ಮಾಡಲು ಬೇಕಾದ ಎಲ್ಲಾ ರೀತಿಯ ಅನುಕೂಲಗಳು ಇದ್ದುದರಿಂದ ಅತ್ಯಂತ ಹೆಚ್ಚಿನ ಕೋಟೆ ಕೊತ್ತಲಗಳನ್ನು ಕಾಣಬಹುದಾಗಿದೆ.

ಈ ಪ್ರದೇಶಗಳು ವಿಪರೀತ ಸೆಕೆ ಮತ್ತು ಅಷ್ಟೇ ಪ್ರಮಾಣದ ಚಳಿಯಿಂದ ಕೂಡಿರುತ್ತವೆ. ದಕ್ಷಿಣ ಕರ್ನಾಟಕದ ಪ್ರಸ್ಥಭೂಮಿಯ ಮಧ್ಯ ಭಾಗದಲ್ಲಿ ಕಂಡುಬರುವ ದಟ್ಟ ಅರಣ್ಯ ಪ್ರದೇಶದ ಎಲೆ ಉದುರುವ ಅರಣ್ಯ ಪ್ರದೇಶ ಇದಾಗಿದೆ. ಈ ಪ್ರದೇಶದಲ್ಲಿ ಇರುಳಿಗ, ಸೋಲಿಗ, ಜೇನು ಕುರುಬ, ಕಾಡು ಕುರುಬ ಮುಂತಾದ ಆದಿವಾಸಿಗಳು ಕಂಡು ಬರುತ್ತಾರೆ.

ಇರುಳಿಗ ವಾಸಿಸುವ ಪ್ರದೇಶಗಳ ಭೌಗೋಳಿಕ ಹಿನ್ನೆಲೆ

ಇರುಳಿಗರು ವಾಸಿಸುವ ಪ್ರದೇಶಗಳೆಂದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್, ರಾಮನಗರ ಜಿಲ್ಲೆಯ ಮಾಗಡಿ, ರಾಮನಗರ, ಕನಕಪುರ, ಚನ್ನಪಟ್ಟಣ ಹಾಗಿಯೇ ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ವಾಸಿಸುತ್ತಾರೆ. ಆದರೆ ಇವರು ಮೂಲತಃ ರಾಮನಗರದ ಮೂಲ ನಿವಾಸಿಗಳಾಗಿದ್ದು ಬರಗಾಲ–ಕ್ಷಾಮದ ಸಂದರ್ಭದಲ್ಲಿ ಆಹಾರ ಅಥವಾ ಉದ್ಯೋಗ ಹುಡುಕುತ್ತಾ ವಲಸೆ ಹೋದವರೇ ಆಗಿದ್ದಾರೆ ಎಂಬುದು ಕ್ಷೇತ್ರಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ.

ರಾಮನಗರ ಜಿಲ್ಲೆಯ ಭೌಗೋಳಿಕ ಅಂಶಗಳನ್ನು ಗಮನಿಸಿದಾಗ ಜಿಲ್ಲೆಯು ಏಕಶಿಲಾ ಬಂಡೆಗಳನ್ನು ಯಥೇಚ್ಛವಾಗಿ ಹೊಂದಿದೆ. ಮಹದೇಶ್ವರ ಬೆಟ್ಟ ಸಾಲಿನ ಮೂಲಕ ತಮಿಳುನಾಡು ಗಡಿಯನ್ನು ಸಮೀಪಿಸುತ್ತದೆ. ಇಡೀ ಜಿಲ್ಲೆಯ ವಿಸ್ತೀರ್ಣವು ೩,೫೭೫.೫೮ ಚ.ಕಿ.ಮೀ ಹಾಗೂ ೬೯,೭೭೬ ಹೆಕ್ಟೇರ್ ಅರಣ್ಯ ಪ್ರದೇಶವಿದೆ. ಕಣ್ವ, ವೃಷಭಾವತಿ ಅರ್ಕಾವತಿ, ಕಾವೇರಿ ನದಿಗಳು ಇಲ್ಲಿ ಪ್ರಮುಖವಾಗಿ ಹರಿಯುತ್ತವೆ.[೪೬]

ಇಲ್ಲಿನ ವಾಯುಗುಣ ಬೆಟ್ಟ–ಗುಡ್ಡಗಳಿಂದ ಆವೃತವಾಗಿರುವುದರಿಂದ ಮೈದಾನ ಪ್ರದೇಶ ಕಡಿಮೆಯಾಗಿದೆ. ಇಲ್ಲಿ ವಾರ್ಷಿಕವಾಗಿ ಬೀಳುವ ಮಳೆ ಅರ್ಧದಷ್ಟು ಮುಂಗಾರು ಮಳೆಯಿಂದ ಪಡೆದರೆ ಇನ್ನರ್ಧದಷ್ಟು ಬಂಗಾಳ ಕೊಲ್ಲಿಯ ವಾಯುಭಾರ ಕುಸಿತದಿಂದ ಪಡೆಯಲಾಗುತ್ತದೆ. ವಾರ್ಷಿಕವಾಗಿ ಶೇ.೮೦ರಷ್ಟು ಜೂನ್ ತಿಂಗಳಿಂದ ನವೆಂಬರ್ ತಿಂಗಳವರೆಗೂ ಆರು ತಿಂಗಳು ಮಳೆ ಬೀಳುತ್ತದೆ. ರಾಮನಗರ ಜಿಲ್ಲೆಯು ಮುಂಗಾರು ಮತ್ತು ಹಿಂಗಾರುಗಳಿಂದಲೂ ಮಳೆಯನ್ನು ಪಡೆಯುತ್ತದೆ.

ಒಟ್ಟಾರೆಯಾಗಿ ರಾಮನಗರ ಜಿಲ್ಲೆಯ ದೊಡ್ಡ ದೊಡ್ಡ ಏಕಶಿಲಾ ಬಂಡೆಗಳನ್ನು ಹೊಂದಿರುವುದರೊಂದಿಗೆ ದಟ್ಟವಾದ ಕಾಡನ್ನು ಹೊಂದಿದೆ. ಇದರಿಂದ ಗುಹೆಗಳು, ಕಂದಕಗಳು

ಹೆಚ್ಚಾಗಿ ಕಂಡುಬರುತ್ತವೆ. ಪ್ರಭುತ್ವಗಳು ಇಂತಹ ಪ್ರದೇಶಗಳನ್ನು ತಮ್ಮ ವಾಸಕ್ಕೆ ಯೋಗ್ಯವಾದ ಸ್ಥಳ ಎಂದು ಪರಿಗಣಿಸುತ್ತಾರೆ. ಇಲ್ಲಿಯೇ ಕೋಟೆ ಕೊತ್ತಲಗಳನ್ನು ಹೆಚ್ಚಾಗಿ ನಿರ್ಮಿಸುತ್ತಾರೆ. ಏಕಶಿಲಾ ಬೃಹತ್ ಬಂಡೆಗಳಾದ್ದರಿಂದ ಒಂದು ಬಂಡೆಯ ಮೇಲೆ ನಿಂತರೆ ತಮ್ಮ ಆಳ್ವಿಕೆಯ ಬಹುಭಾಗ ಪ್ರದೇಶಗಳನ್ನು ವೀಕ್ಷಿಸಬಹುದು. ಆದ್ದರಿಂದ ಈ ಬಂಡೆಗಳ ಮೇಲೆ ಸಾಮಾನ್ಯವಾಗಿ ಕೋಟೆಕೊತ್ತಲಗಳು ನಿರ್ಮಾಣವಾಗಿರುವುದನ್ನು ಕಾಣಬಹುದು. ಇದು ಅರೆ ಮಲೆನಾಡು ಪ್ರದೇಶವಾಗಿದ್ದರಿಂದ ದೈತ್ಯವಾದ ಕಾಡುಗಳನ್ನು ಹೊಂದಿದೆ. ಇಲ್ಲಿ ಅಧಿಕವಾಗಿ ಗಿಡಮೂಲಿಕೆ ಔಷಧಿ ಮತ್ತು ಆಹಾರ ಸಸ್ಯಗಳನ್ನು ಕಾಣಬಹುದು. ಈ ಪ್ರದೇಶದಲ್ಲಿ ಇರುಳಿಗ ಬುಡಕಟ್ಟು ಸಮುದಾಯ ಯಥೇಚ್ಛವಾಗಿ ವಾಸಿಸುವುದನ್ನು ಕಂಡುಬರುತ್ತದೆ. ಈ ವಾಸಸ್ಥಾನವು ಚಾರಿತ್ರಿಕ ಚರ್ಚೆಗೆ ಅವಕಾಶ ಮಾಡಿಕೊಡುತ್ತದೆ. ಏಕೆಂದರೆ ಕರ್ನಾಟಕದಲ್ಲಿ ಇರುಳಿಗರು ರಾಮನಗರ ಜಿಲ್ಲೆಯಲ್ಲಿಯೇ ಸುಮಾರು ೧೦೦ ಹಳ್ಳಿಗಳಲ್ಲಿ ೧೫ರಿಂದ ೧೮ ಸಾವಿರ ಜನಸಂಖ್ಯೆಯಲ್ಲಿ ಕಂಡುಬರುತ್ತಾರೆ. ಈ ಭೌಗೋಳಿಕ ಪರಿಸರ ಇರುಳಿಗರಿಗೆ ಪೂರಕವಾಗಿದೆ. ಜನವಸತಿಗೆ ಪೂರಕವಾಗಿರುತ್ತದೆ. ಒಂದು ವಾದದ ಪ್ರಕಾರ ವಾಸಿಸುವ ಭೌಗೋಳಿಕ ಪ್ರದೇಶದ ಅನುಗುಣವಾಗಿ ಮಾನವ ರೂಪುಗೊಳ್ಳುತ್ತಾನೆ. ಆದರೆ ಕೆಲವೊಂದು ಚರ್ಚೆಗಳು ಬುಡಕಟ್ಟುಗಳು (ಆದಿವಾಸಿಗಳು) ಯೋಗ್ಯವಾದ ಪ್ರದೇಶಗಳನ್ನು ತಾವೇ ಆಯ್ಕೆ ಮಾಡಿಕೊಳ್ಳುತ್ತವೆ ಎಂಬುದನ್ನು ಹೇಳುತ್ತವೆ. ಈ ಎರಡೂ ಚರ್ಚೆಗಳು ಇರುಳಿಗರ ವಾಸಸ್ಥಾನಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಏಕೆಂದರೆ ಇರುಳಿಗರು ಏಕೆ ರಾಮನಗರ ಜಿಲ್ಲೆಯಲ್ಲಿ ವಾಸಿಸುತ್ತಾರೆ ಎಂದರೆ ಅವರು ಬಂಡೆಗಳನ್ನು ಏರುವುದರಲ್ಲಿ ಅತ್ಯಂತ ಪರಿಣಿತರು ಈ ಕಲೆಯು ಅವರಿಗೆ ಆ ಪ್ರದೇಶದಿಂದ ಬಂದಿರಬಹುದು ಅಥವಾ ತಮ್ಮ ಮೂಲ ವೃತ್ತಿಯಿಂದ ಆ ಪ್ರದೇಶವನ್ನು ಆಯ್ಕೆ ಮಾಡಿಕೊಂಡಿರುವ ಸಾಧ್ಯತೆಗಳಿರಬಹುದು. ಈ ಬೆಟ್ಟಗಳ ಜೊತೆಯಲ್ಲಿಯೇ ತಮ್ಮ ಜೀವನದ ವೃತ್ತಿ, ಆಚರಣೆ ಮತ್ತು ಸಂಪ್ರದಾಯಗಳನ್ನು ರೂಪಿಸಿಕೊಂಡಿರುವಂತೆ ಕಂಡುಬರುತ್ತದೆ. ಈ ದುರ್ಗಮವಾದ ಪ್ರದೇಶವನ್ನು ಆಳುವ ಪ್ರಭುತ್ವಗಳು ತನ್ನ ಆಳ್ವಿಕೆಯ ಸಂದರ್ಭದಲ್ಲಿ ಕೋಟೆ ಕೊತ್ತಲಗಳನ್ನು ನಿರ್ಮಿಸಲು, ರಕ್ಷಿಸಲು ಇವರನ್ನು ಬಳಸಿಕೊಂಡಿರಬೇಕು

೨.೩ ಇರುಳಿಗ ಪದ ನಿಷ್ಪತ್ತಿ

ಭಾರತದ ಪ್ರತಿಯೊಂದು ಬುಡಕಟ್ಟುಗಳ ಪದನಿಷ್ಪತ್ತಿಯ ಹಿಂದೆ ಆ ಸಮುದಾಯದ ಚರಿತ್ರೆಯಿದೆ. ಈ ಪದನಿಷ್ಪತ್ತಿಯು ಸಮುದಾಯ ನಡೆದು ಬಂದ ದಾರಿ ಹಾಗೂ ಬದುಕಿನ ಹಿನ್ನೆಲೆಯನ್ನು ಹೇಳುತ್ತದೆ. ಕೆಲವು ಸಂದರ್ಭದಲ್ಲಿ ಸಮುದಾಯಗಳು ಮಾಡುವ ವೃತ್ತಿ, ಆಡುವ ಭಾಷೆ, ತಿನ್ನುವ ಆಹಾರ, ವಾಸಿಸುವ ಪ್ರದೇಶ ಮತ್ತು ದೇಹದ ಬಣ್ಣ ಆಕಾರಗಳಿಂದಲೂ ಸಮುದಾಯಕ್ಕೆ ಹೆಸರು ಬಳುವಳಿಯಾಗಿ ಬಂದಿರುವ ಸಾಧ್ಯತೆಗಳಿರುತ್ತವೆ. ಇವುಗಳ ಜೊತೆಗೆ ವೈದಿಕರು, ಬ್ರಿಟಿಶ್‌ರು, ಮುಸ್ಲಿಮರು ಹಾಗೂ ಆಧುನಿಕ ಸಮಾಜದ ಒತ್ತಡಗಳಿಂದಲೂ

ಬುಡಕಟ್ಟುಗಳು ತಮ್ಮ ಸಮುದಾಯದ ಮೂಲ ಹೆಸರನ್ನು ಕಳೆದುಕೊಂಡು ಇನ್ನೊಂದು ಹೆಸರಿನಿಂದ ಕರೆಸಿಕೊಳ್ಳುತ್ತಿರುವ ಸಾಧ್ಯತೆಗಳಿರುತ್ತವೆ.

ಸಮುದಾಯಗಳು ಹೊಂದಿರುವ ಸಾಮಾಜಿಕ ಹಣೆಪಟ್ಟಿಯನ್ನು ನಿರೂಪಿಸುವಾಗ ಸಂಶೋಧಕರು ಆ ನಾಮಪದ ಸಮುದಾಯದ ವೃತ್ತಿಗೆ ಅನುಗುಣವಾಗಿ ಬಂದಿದೆಯೇ ಅಥವಾ ಸ್ಥಳ ಪುರಾಣದಿಂದ ಬಂದಿದೆಯೇ ಎಂಬ ಸಾಮಾನ್ಯ ಜ್ಞಾನವಾದರೂ ಇರಬೇಕು ಇಲ್ಲವಾದರೆ ಸಮುದಾಯವನ್ನು ಮುಜುಗರಕ್ಕೆ ಈಡುಮಾಡುವ ಸಾಧ್ಯತೆಗಳಿರುತ್ತವೆ.

ಸಮುದಾಯಗಳ ಚರಿತ್ರೆಯನ್ನು ಆ ಸಮುದಾಯದ ಪದನಿಷ್ಪತ್ತಿಯಿಂದಲೇ ನೋಡುವ ಕ್ರಮ ಇತ್ತೀಚಿನ ದಿನಮಾನಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಸಮುದಾಯಗಳ ಬಗ್ಗೆ ಅಧ್ಯಯನ ಮಾಡುವ ವಿದ್ವಾಂಸರುಗಳು ಆ ಸಮುದಾಯದ ಭಾವನೆಯನ್ನು ಅರ್ಥ ಮಾಡಿಕೊಳ್ಳದೆ ಅವರ ಚಹರೆ, ಆಹಾರ, ವಾಸಿಸುವ ಭೂ ಪ್ರದೇಶ ಮತ್ತು ಬಣ್ಣಗಳ ಆಧಾರದ ಮೇಲೆ ಸಮುದಾಯದ ಹೆಸರನ್ನು ಅಂಕಿತಗೊಳಿಸಿದ್ದಾರೆ. ಇವರ ಗ್ರಹಿಕೆಗಳು ಆ ಸಮುದಾಯಕ್ಕೆ ಸ್ವಾಭಿಮಾನ ಹೆಚ್ಚಿಸುವ ಬದಲು ಮುಜುಗರವನ್ನುಂಟು ಮಾಡಿರುವುದನ್ನು ಕಾಣಬಹುದು.

ಬುಡಕಟ್ಟುಗಳು ತಮ್ಮ ಸಮುದಾಯದ ಪದನಿಷ್ಪತ್ತಿಯ ಬಗ್ಗೆ ಹೇಳುವ ಐತಿಹ್ಯ ಮತ್ತು ವ್ಯಾಖ್ಯಾನಗಳು ಮೇಲುನೋಟಕ್ಕೆ ಅಸ್ಪಷ್ಟ ಮತ್ತು ಉಹಾತ್ಮಕವಾಗಿ ಕಂಡುಬಂದರೂ ಅವುಗಳ ಅಂತರಾಳದಲ್ಲಿ ಆ ಬುಡಕಟ್ಟುಗಳು ಬದುಕಿ ಬಾಳಿದ ಚರಿತ್ರೆ ಅಡಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟು ಇರುಳಿಗ ಬುಡಕಟ್ಟಿನ ಪದನಿಷ್ಪತ್ತಿಯನ್ನು ಹಾಗೂ ಈ ಪದನಿಷ್ಪತ್ತಿಯ ಬಗೆಗೆ ಇರುಳಿಗರ ವಕ್ತೃಗಳು ಮತ್ತು ಇರುಳಿಗರನ್ನು ಕುರಿತ ಅಧ್ಯಯನ ಮಾಡಿರುವ ವಿದ್ವಾಂಸರ ಅಭಿಪ್ರಾಯಗಳನ್ನು ಈ ಕೆಳಕಂಡಂತೆ ಚರ್ಚಿಸಲಾಗಿದೆ.

'ಇರುಳಿಗ ಎಂಬ ಪದ ಬಂದುದರ ಬಗೆಗೆ ಇರುಳಿಗರು ಕೆಲವು ಕಾರ್ಯಕಾರಣ ಸಂಬಂಧವುಳ್ಳ ಐತಿಹ್ಯ ಮತ್ತು ವ್ಯಾಖ್ಯಾನ ನೀಡುತ್ತಾರೆ. ಅವುಗಳಲ್ಲಿ ಪ್ರಮುಖವಾದವುಗಳು ಈ ಕೆಳಕಂಡಂತಿವೆ.

ಐತಿಹ್ಯ ೧

ಸಮುದ್ರ 'ಉಕ್ಕಳ್ಳಿ' ನರಲೋಕವೆಲ್ಲ ಬರಿದಾಗಿ ಎಲ್ಲಾ ಜನ ಸತ್ತರು. ನಮ್ಮ ಇರುಳಿಗ ಬೇಟೆಗಾರ ಮತ್ತು ಅವನ ಮಗಳು ಸ್ವಾರೆ ಬುಂಡೇಲಿ ಕುಂತು ಬದುಕುಳಿತ್ತಾರೆ. ಆಗ ಶಿವ ಪಾರ್ವತಿ ಈ ತಂದೆ ಮಗಳಿಂದಲೇ ನರಲೋಕ ಸೃಷ್ಟಿಯಾಗಬೇಕೆಂದು ತಂದೆ ಮಗಳಿಗೆ ಮದುವೆ ಮಾಡ್ತಾರೆ. ಅದರಂತೆ ತಂದೆ ಮಗಳಿಗೆ ನೂರೊಂದು ಜನ ಮಕ್ಕಳಾಗುತ್ತವೆ. ಆಗ ಶಿವ ಮತ್ತೆ ಬಂದು ಈ ನೂರೊಂದು ಜನರ ಹುಟ್ಟಿಗೆ ಕಾರಣನಾದ ಯಜಮಾನನ್ನು ಕರೆದು ಒಬ್ಬೊಬ್ಬರ ಕಾರ್ಯವನ್ನು ತಿಳಿಸುವಂತೆ ಹೇಳುತ್ತಾನೆ. ಯಜಮಾನನ ಮಾತಿನಂತೆ ಅವರವರ

ವೃತ್ತಿಗಳ ಆಧಾರದ ಮೇಲೆ ಶಿವ ಜಾತಿಗಳನ್ನು ವಿಂಗಡಣೆ ಮಾಡುತ್ತಾನೆ. ಆದರೆ ನೂರೊಂದನೆ ಯವನಾದ 'ನಮ್ಮೋನನ್ನು' ಮರೆತು ಬಿಟ್ಟ ಯಜಮಾನ. ಶಿವ ಇನ್ಯಾರಾದರು ಇದಾರ ಎಂದು ಕೇಳಿದಾಗ ಯಜಮಾನ ಇನ್ಯಾರು ಇಲ್ಲ ಎಂದು ಬಿಡುತ್ತಾನೆ. ಆಗ ಶಿವನು ಹಿಂದಿರುಗಿ ಹೋಗಲು ಸಿದ್ಧನಾಗುತ್ತಾನೆ. ನನ್ನ ಸರಧಿ ಆಗ ಬರಬಹುದು, ಈಗ ಬರಬಹುದೆಂದು ಕಾಯುತ್ತಿದ್ದ ನಮ್ಮೋನು ಶಿವನನ್ನು ಸ್ವಾಮಿ ನನ್ನನ್ನು ಗುರುತಿಸಲಿಲ್ಲ ಅಂತಾನೆ. ಆಗ ಶಿವ 'ನಿಮ್ಮ ಗುಂಪಿನ ನಾಯಕ ಇನ್ಯಾರೂ ಇಲ್ಲ ಎಂದಿದ್ದಾನೆ, ಹಾಗಾಗಿ ನಾನೀಗ ನಿನ್ನನ್ನು ಇನ್ಯಾವ ಜಾತಿಗೂ ಸೇರಿಸಲಾಗದು; ನೀನು ಯಾವ ಜಾತಿಗೂ ಇಲ್ಲದ 'ಇಲ್ಲಗ' ಎನ್ನುತ್ತಾನೆ. ಆಗಿನಿಂದ ಈ ಇಲ್ಲಗವೇ ಮುಂದೆ ಜನ ಬಾಯಿಯಿಂದ ಬಾಯಿಗೆ ಹರಿದು ಇಲ್ಲದ, ಇಲ್ಲಿಗ, ಇರುಳಿಗ ಆಗಿದೆ ಎನ್ನುತ್ತಾರೆ.[೪೭]

ಇರುಳಿಗರ ಈ ಐತಿಹ್ಯವನ್ನು ಗಮನಿಸಿದಾಗ ಶಿವನು ಎಲ್ಲಾ ಬುಡಕಟ್ಟುಗಳಲ್ಲಿ ಕಂಡು ಬರುವಂತೆ ಇರುಳಿಗ ಬುಡಕಟ್ಟುಗಳಲ್ಲಿಯೂ ಪ್ರಸ್ತಾಪಗೊಂಡಿದ್ದಾನೆ. ಗುಂಪಿನ ನಾಯಕನ ಆಜ್ಞೆಯಂತೆ ಜಾತಿಯನ್ನು ಹಂಚುವುದು ವಿಶೇಷ. ಹಿಂತಿರುಗಿ ಹೋಗುತ್ತಿದ್ದ ಶಿವನನ್ನು ಇರುಳಿಗನು ನನಗೂ ಜಾತಿ ನೀಡುವಂತೆ ಕೇಳುತ್ತಾನೆ. ಆಗ ಶಿವ, ನಿನ್ನನ್ನು ನಿಮ್ಮ ಗುಂಪಿನ ನಾಯಕ ಗುರುತಿಸಿಲ್ಲ; ಹಾಗಾಗಿ ನಿನಗೆ ಜಾತಿ ನೀಡಲು ಸಾಧ್ಯವಿಲ್ಲ ಎನ್ನುತ್ತಾನೆ. ಈ ಮಾತು ಒಂದು ಊಹಾತ್ಮಕ ಹೇಳಿಕೆಯಂತೆ ಕಂಡರೂ ಭಾರತದ ಚರಿತ್ರೆಯ ಸಂದರ್ಭದಲ್ಲಿ ಒಂದು ಹೊಸ ದಾರಿಯನ್ನು ಸೂಚಿಸುತ್ತದೆ. ಏಕೆಂದರೆ ವೈದಿಕರು ತಮ್ಮ ಕರ್ಮ ಸಿದ್ಧಾಂತದ ಆಧಾರದ ಮೇಲೆ ಜಾತಿಯನ್ನು ಸೃಷ್ಟಿಸಿ ಇದು ಮಾನವ ಸೃಷ್ಟಿಸಿದ್ದಲ್ಲಾ ಅದು ದೇವರು ಸೃಷ್ಟಿಸಿದ್ದು ಎಂದು ನಂಬಿಸಿ ಅದಕ್ಕೆ ಒಂದು ವ್ಯಾಖ್ಯಾನವನ್ನೇ ನೀಡಿದರು. ಅದು ಬ್ರಹ್ಮನ ತಲೆಯಿಂದ ಬ್ರಾಹ್ಮಣ, ಭುಜದಿಂದ ಕ್ಷತ್ರಿಯಾ, ತೊಡೆಯಿಂದ ವೈಶ್ಯ, ಪಾದದಿಂದ ಶೂದ್ರ ಹುಟ್ಟಿದ್ದಾನೆ ಎಂದು ಪ್ರಚಾರ ಮಾಡಿ ಸಮಾಜವನ್ನು ನಂಬಿಸಿದ್ದಾರೆ. ಆದರೆ ಇರುಳಿಗರ ಈ ಐತಿಹ್ಯದಲ್ಲಿ ಜಾತಿಯು ವೃತ್ತಿಯ ಆಧಾರದ ಮೇಲೆ ಹುಟ್ಟಿಕೊಂಡಿದೆ. ಈ ಜಾತಿಯನ್ನು ಮಾನವ ತನ್ನ ಹಿತಾಸಕ್ತಿಗೆ ತಕ್ಕಂತೆ ಸೃಷ್ಟಿಸಿಕೊಂಡಿದ್ದಾನೆ ಎಂದು ಹೇಳುತ್ತಿರುವುದು ಈ ಜಾತಿಯು ಸಮಾಜದ ಮೇಲೆ ಪ್ರಭಾವ ಬೀರುತ್ತಿರುವ ಸಂದರ್ಭವನ್ನು ಪ್ರತಿನಿಧಿಸುಂತಿದೆ.

ಆದರೆ ಈ ಐತಿಹ್ಯದಲ್ಲಿ ಇರುಳಿಗರಿಗೆ 'ಜಾತಿ ಇಲ್ಲದಿದ್ದರಿಂದ' ಇಲ್ಲದ ಜಾತಿಯಾಗಿ ಇದು ಜನರ ಬಾಯಿಯಿಂದ ಬಾಯಿಗೆ ಹರಿದು ಇರುಳಿಗ ಆಗಿದೆ ಎಂಬದನ್ನು ಒಪ್ಪಲು ಸಾಧ್ಯವಿಲ್ಲದಿದ್ದರೂ, ಜಾತಿ ಸೃಷ್ಟಿಗೊಂಡ ಸಂದರ್ಭದಲ್ಲಿ ಇರುಳಿಗ ಬುಡಕಟ್ಟು ತಮ್ಮ ಇರುವಿಕೆಯನ್ನು ಇಂತಹ ಐತಿಹ್ಯಗಳ ಮೂಲಕ ಹೇಳಲು ಪ್ರಯತ್ನಿಸುತ್ತಿದ್ದಾರೆ. ಧರ್ಮ, ಪ್ರಭುತ್ವದ ಮೂಲಕ ವೃತ್ತಿಯ ಆಧಾರದ ಮೇಲೆ ಜಾತಿ ನಿರ್ಧರಿಸುವ ಕಾಲಘಟ್ಟದಲ್ಲಿ ನಿರ್ದಿಷ್ಟ ವೃತ್ತಿ ಇಲ್ಲದೇ ಕಾಡು-ಮೇಡುಗಳಲ್ಲಿ ಅಲೆದಾಡುತ್ತಿದ್ದ ಇಂತಹ ಬುಡಕಟ್ಟುಗಳನ್ನು ನಿರ್ಲಕ್ಷಿಸಿರುವುದನ್ನು

ಕಾಣಬಹುದು. ಹಾಗೆಂದು ಇರುಳಿಗರಿಗೆ ಜಾತಿ ನೀಡಿಲ್ಲ ಎಂಬುವುದು ನನ್ನ ವಾದವಲ್ಲ. ಇರುಳಿಗರಿಗೆ ತಮಗೂ ಒಂದು ಐಡೆಂಟಿಟಿ(ಗುರುತು, ಹೆಸರು) ಬೇಕೆಂಬ ಭಾವನೆ ಉಂಟಾದ ಸಂದರ್ಭವನ್ನು ಹಾಗೂ ತಮ್ಮ ಬುಡಕಟ್ಟಿನ ಪದನಿಷ್ಪತ್ತಿಯ ಬಗ್ಗೆ ಇತರರು ನೀಡುತ್ತಿದ್ದ ಹೆಸರುಗಳಿಂದ ಮುಜುಗರ ಉಂಟಾಗಿ ತಮ್ಮ ಜೀವತಾವಧಿಯಲ್ಲಿ ಕಂಡ ಜಾತಿ ಸೃಷ್ಟಿಯ ಸಂದರ್ಭವನ್ನು ಹೇಳುವ ಜೊತೆಗೆ ತಮ್ಮನ್ನು ಗೌರವಿಸಬೇಕೆಂದು ಈ ರೀತಿಯ ಐತಿಹ್ಯವನ್ನು ಸೃಷ್ಟಿಸಿಕೊಳ್ಳಲಾಗಿದೆ ಎನ್ನಬಹುದು.

ಐತಿಹ್ಯ ೨

ಕಾರಯ್ಯ ಬಿಲ್ಲಯ್ಯ ಮಾದಪ್ಪನ ಭಕ್ತರು ದನ ಮೇಯಿಸಲು ಕಾಡಿಗೆ ಹೋಗುತ್ತಿದ್ದರು. ಬಿಲ್ಲಯ್ಯ ಎಲ್ಲೋ ದೂರ ಹೋಗಿದ್ದನು. ಮಾದಪ್ಪನಿಗೆ ಏನೋ ಕೆಲಸ ಇತ್ತಂತೆ, ಏ ಬಿಲ್ಲಯ್ಯ ಎಂದು ಕರೆದರಂತೆ, ದೂರದಿಂದಲೇ ಬಿಲ್ಲಯ್ಯ ಸ್ವಾಮಿ ಇದೋ ಬಂದೇ ಎಂದನಂತೆ ಮಾದಪ್ಪನಿಗೆ ಕ್ವಾಪ ಬಂದು ಬಿಲ್ಲಯ್ಯ ಇನ್ನು ಮೇಲೆ ನಾನು ಕರೆದ ಕೂಡಲೇ ಓ ಅನ್ನಬೇಕು ಹಾಗಿದ್ದರೆ ನನ್ನ ಬಳಿ ಇರಬಹುದು. ಇಲ್ಲದಿದ್ದರೆ ನಿನ್ನ ದಾರಿ ನಿನಗೆ ಎಂದನಂತೆ. ಆಗ ಬಿಲ್ಲಯ್ಯ ಆಗಲಿ ಸ್ವಾಮಿ ಎಂದು ಎತ್ತಿನ ಇರುಳಲ್ಲಿ(ತಲೆ ಮತ್ತು ದೇಹದ ಮಧ್ಯಭಾಗ) ಸೇರಿಕೊಂಡು ಬಿಟ್ಟನು. ಮತ್ತೊಮ್ಮೆ ಸ್ವಾಮಿ ಅದೇ ರೀತಿಯಲ್ಲಿ ಬಿಲ್ಲಯ್ಯ ಎಂದು ಕರೆದಾಗ ಎತ್ತಿನ ಇರುಳಿನಲ್ಲಿದ್ದ ಬಿಲ್ಲಯ್ಯ ಅಲ್ಲಿಂದಲೇ ಸ್ವಾಮಿ ಬಂದೇ ಎಂದ ಆಗ ಮಾದಪ್ಪ ಎಂಥ ಭಕ್ತನಯ್ಯ ನೀನು ಇವತ್ತಿನಿಂದ ಎತ್ತಿನ ಇರುಳಿನಲ್ಲಿ ವಾಸಮಾಡುವ ಇರುಳಿಗ ಕಾಣಯ್ಯ, ಇನ್ಮೇಲೆ ಮೊದಲನೇ ಪೂಜೆ ನಿನಗೆ, ಎರಡನೇ ಪೂಜೆ ನನಗೆ, ಮೂರನೇ ಪೂಜೆ ಕಳ್ಳಕಾಕರಿಗೆ ಎಂದೂ ಆಶೀರ್ವದಿಸಿದನಂತೆ. ಅವತ್ತಿನಿಂದ ನಮ್ಮನ್ನು ಇರುಳಿಗ ಎನ್ನುತ್ತಾರೆ.[೪೭]

ಈ ಐತಿಹ್ಯವು ಪ್ರತಿಪಾದಿಸುವ ಹಾಗೆ ಮಾದಪ್ಪನಿಂದ ಇರುಳಿಗ ಎಂಬ ಹೆಸರು ಬಂದಿತು ಎಂಬುವುದನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಮಾದಪ್ಪನ ಕಾವ್ಯದ ಯಾವ ಭಾಗದಲ್ಲೂ ಇರುಳಿಗ ಪದದ ಉಲ್ಲೇಖ ಸಿಗುವುದಿಲ್ಲ. ಸೋಲಿಗ ಮತ್ತು ಇರುಳಿಗರ ಮೂಲ ಪುರುಷರು ಕಾರಯ್ಯ ಮತ್ತು ಬಿಲ್ಲಯ್ಯರಾಗಿದ್ದು ಇವರು ಶಂಕಮ್ಮನ ಮಕ್ಕಳು ಎಂಬ ನಂಬಿಕೆ ಇವರಲ್ಲಿದೆ. ಆದರೆ ಶಂಕಮ್ಮ ಸೋಲಿಗರು ಎಂದು ಅನೇಕ ದಾಖಲೆಗಳು ಸಿಗುತ್ತವೆ. ಹೀಗಾದರೆ ಇರುಳಿಗರ ಮೂಲ ಪುರುಷ ಬಿಲ್ಲಯ್ಯ ಹೇಗೆ ಆಗಲು ಸಾಧ್ಯ. ಹಾಗೊಮ್ಮೆ ಕಾರಯ್ಯ ಬಿಲ್ಲಯ್ಯರು ಸೋಲಿಗ ಮತ್ತು ಇರುಳಿಗರ ಮೂಲ ಪುರುಷರಾದರೆ ಅವರು ಶಂಕಮ್ಮನ ಮಕ್ಕಳು ಎಂಬುದು ಸುಳ್ಳಾಗುತ್ತದೆ. ಏಕೆಂದರೆ ಕಾರಯ್ಯ ಬಿಲ್ಲಯ್ಯ ಎಂಬುವರು ಮಾದಪ್ಪನಿಗಿಂತ ಮೊದಲೇ ಆ ಪ್ರದೇಶದಲ್ಲಿ ನೆಲೆಸಿದವರಾಗಿದ್ದು ಕಲ್ಯಾಣ ಕ್ರಾಂತಿಯ ನಂತರ ಉತ್ತರದಿಂದ ದಕ್ಷಿಣದ ಕಡೆಗೆ ಹಲವಾರು ಶರಣರು ಪಲಾಯನವಾದರು ಅದರಲ್ಲಿ ಮಾದಪ್ಪನು ಒಬ್ಬನಾಗಿದ್ದಾನೆ.

ಈ ಪ್ರದೇಶದಲ್ಲಿ ಅದಾಗಲೇ ಇದ್ದ ಕಾರಯ್ಯ ಬಿಲ್ಲಯ್ಯನನ್ನು ಮಾದಪ್ಪ ತನ್ನ ಸಂಸ್ಕೃತಿಗೆ ಸೇರಿಸಿಕೊಂಡಿದ್ದಾನೆ ಹೊರತು, ಮಾದಪ್ಪನ ವರದಿಂದ ಕಾರಯ್ಯ ಬಿಲ್ಲಯ್ಯ ಹುಟ್ಟಲಿಲ್ಲ. ಹಾಗೊಮ್ಮೆ ಶಂಕಮ್ಮನಿಂದಲೇ ಕಾರಯ್ಯ ಬಿಲ್ಲಯ್ಯನವರು ಹುಟ್ಟಿದ್ದವರಾಗಿದ್ದರೆ ಅವರು ಇರುಳಿಗ ಮತ್ತು ಸೋಲಿಗರ ಮೂಲ ಪುರುಷರಾಗಲೂ ಸಾಧ್ಯವಿಲ್ಲ.

ಒಟ್ಟಾರೆಯಾಗಿ ಮಾದಪ್ಪನಿಂದ ಇರುಳಿಗ ಎಂಬ ಶಬ್ದ ಬಂದಿರಲೂ ಸಾಧ್ಯವಿಲ್ಲ. ಏಕೆಂದರೆ ಮೈಸೂರು ಪ್ರಾಂತ್ಯದಲ್ಲಿ ಮಾದಪ್ಪ ಪ್ರಭಾವಿ ದೈವ. ಅವನ ಜೊತೆ ಸಾಂಸ್ಕೃತಿಕ ಸಂಬಂಧ ಹೊಂದಿರುವ ಇರುಳಿಗರು ಸುತ್ತಮುತ್ತಲಿನ ಜನರು ಇವರನ್ನು ಇಲ್ಲಿಗರು ಎಂಬ ಹೆಸರಿನಿಂದ ಕರೆಯುವುದು ಇವರಿಗೆ ಮುಜುಗರ ಉಂಟುಮಾಡುತ್ತಿದ್ದರಿಂದ ಹಾಗೂ ಎಲ್ಲರಂತೆ ಇವರು ಕೂಡ ಇಲಿ ತಿಂದರು ಇಲಿಯನ್ನು ಪ್ರಮುಖವಾಗಿಸಿಕೊಂಡು ಛೇಡಿಸುತ್ತಿದ್ದರಿಂದ ನೊಂದು ಮಾದಪ್ಪನ ಬಾಯಿಯಿಂದ ಹೇಳಿಸುವ ಸಲುವಾಗಿ ಇಂತಹ ಐತಿಹ್ಯವನ್ನು ಸೃಷ್ಟಿಸಿಕೊಂಡಿದ್ದಾರೆ ಎಂದರೆ ತಪ್ಪಾಗಲಾರದು ಎಂಬುದು ನನ್ನ ಗ್ರಹಿಕೆ.

ಐತಿಹ್ಯ ೩

ಕೂಳು (ಕೊಡಮೆ) ಎಂಬುದು ಕೆರೆಯ ಕೋಡಿಗೆ ಅಡ್ಡವಾಗಿಟ್ಟು ಅಥವಾ ಹೊಳೆಯಲ್ಲಿ ಮೀನು ಹಿಡಿಯಲು ಬಳಸುವ ಸಾಧನ. ಅದನ್ನು ತಯಾರು ಮಾಡಿದಾಗ ಮೀನುಗಳು ಒಳಗೆ ನಿಲ್ಲದೆ ಹೊರಗೆ ಹೋಗುತ್ತಿದ್ದವಂತೆ. ಆ ವೇಳೆಯಲ್ಲಿ ಅದರ ಒಳಭಾಗಕ್ಕೆ ತಿದಿಯೋ ಪಾದಿಯ ಒಂದು ಉಪಕರಣವನ್ನು ಇವರು ಅಳವಡಿಸಿಕೊಟ್ಟರಂತೆ. ಆ ಉಪಕರಣಕ್ಕೆ ಇರುಳ ಎಂದು ಕರೆಯುತ್ತಾರೆ. ಆದ್ದರಿಂದ ಆ ಇರುಳನ್ನು ಅಳವಡಿಸಿಕೊಟ್ಟಿದ್ದಕ್ಕೆ ನಮಗೆ ಇರುಳ ಎಂಬ ಹೆಸರು ಬಂತು ಎಂಬುವುದನ್ನು ಹೇಳುತ್ತಾರೆ.[೪೮]

ಈ ಐತಿಹ್ಯವು ಒಂದು ರೀತಿಯಲ್ಲಿ ಬೇರೆಯವರಿಂದ ಪ್ರಭಾವಿತರಾಗಿ ಬಂದಿರುವ ಹೇಳಿಕೆಯೇ ಹೊರತು ಸಮುದಾಯದವರಿಂದ ಬಂದ ಹೇಳಿಕೆಯಲ್ಲ ಎನ್ನಬೇಕಾಗುತ್ತದೆ. ಏಕೆಂದರೆ ಇರುಳಿಗರು ಮೀನು ಹಿಡಿಯಲು ಇನ್ನಿತರ ಯಾವುದೇ ಉಪಕರಣವನ್ನು ಬಳಸದೇ ಕತ್ತಾಳೆಬೇರು ಅಥವಾ ಮುಂಡಗಳ್ಳಿ ರಸವನ್ನು ತೆಗೆದುಕೊಂಡು ಮೀನು ಇರುವ ನೀರಿಗೆ ಹಾಕಿ ಬಿಡುತ್ತಿದ್ದರು. ಸ್ವಲ್ಪ ಸಮಯದಲ್ಲೇ ಮೀನುಗಳಿಗೆ ನಿಷಾ(ಮತ್ತು) ಬಂದು ಮೇಲಕ್ಕೆ ತೇಲುತ್ತವೆ; ಆಗ ಅವುಗಳನ್ನು ಹಿಡಿಯುತ್ತಾರೆ ಅನ್ನುವುದಾದರೆ ಇವರಿಗೆ ಆ ಉಪಕರಣದಿಂದ ಇರುಳಿಗ ಎಂಬ ಹೆಸರು ಹೇಗೆ ಬರಲು ಸಾಧ್ಯ? ಬದಲಾಗಿ ಇರುಳಿಗ ಮಾಡಿಕೊಟ್ಟ ಉಪಕರಣ ಇರುಳಿಗ ಮಾಡಿದ ಉಪಕರಣ ಎಂದು ಕರೆದಿರಬೇಕೇ ವಿನಃ ಉಪಕರಣದಿಂದ ಇರುಳಿಗ ಎಂಬ ಹೆಸರು ಬಂದಿದೆ ಎಂದು ಒಪ್ಪಲು ಸಾಧ್ಯವಿಲ್ಲ.

ವ್ಯಾಖ್ಯಾನ ೧

ಇರುಳಿಗ ಎಂಬ ಹೆಸರು ನಮ್ಮ ಜಾತಿಗೆ ಗೆಣಸಿನಿಂದ ಬಂದಿದೆ. ನಮ್ಮ ಜನರಿಗೆ ಗೆಣಸು ಬಹಳ ಪ್ರಿಯವಾದ ಆಹಾರ. ಅದರಲ್ಲೂ ಮುಳ್ಳುಗೆಣಸು ನಮಗೆ ಅನ್ನದ ಗೆಣಸು. ಎಷ್ಟೋ ಸಲ ಅದನ್ನೇ ತಿಂದು ನೀರು ಕುಡಿದು ಜೀವನ ಸಾಗಿಸಿದ್ದೇವೆ. ಈ ಗೆಣಸಿನ ಬಗ್ಗೆ ನಮಗೆ ಪೂಜ್ಯನೀಯ ಭಾವನೆ ಇದೆ. ನಮ್ಮ ತಾತ ಮುತ್ತಾಂದಿರು ನಮಗೆ ಮೊದಲು ಪರಿಚಯಿಸುವ ಗೆಣಸೆ ಈ ಮುಳ್ಳುಗೆಣಸು. ಇದರ ಬೇರಿಗೆ ಇರುಳಬೇರು ಎನ್ನುತ್ತಾರೆ. ಈ ಗೆಣಸನ್ನು ಕಿತ್ತುಕೊಂಡ ನಂತರ ಬೇರನ್ನು ಗೆಣಸಿನಿಂದ ತುಂಡುಮಾಡಿ ಭೂಮಿಯಲ್ಲೇ ಹೂತುಬಿಡುತ್ತೇವೆ. ಈ ಬೇರನ್ನು ಇರುಳ ಬೇರು ಅಥವಾ ತಾಯಿಬೇರು ಎನ್ನುತ್ತೇವೆ. ಈ ಬೇರನ್ನು ಕಿತ್ತು ಬಿಟ್ಟರೆ ಮತ್ತೆ ಗೆಣಸು ಬಿಡುವುದಿಲ್ಲ, ಹಾಗಾಗಿ ಆ ಬೇರನ್ನು ಭೂಮಿಯಲ್ಲೇ ಕೈಮುಗಿದು ಹೂತು ಬಿಡುತ್ತೇವೆ. ಈ ಬೇರಿನ ಬಗ್ಗೆ ನಾವು ಹೊಂದಿರುವ ಸಂಬಂಧದಿಂದಲೇ ನಮಗೆ ಇರುಳ, ಇರುಳಿಗ ಎಂಬ ಹೆಸರಿನಿಂದ ಕರೆಯಲಾಗಿದೆ.[೪೯]

ಈ ವ್ಯಾಖ್ಯಾನ ತಮಿಳುನಾಡು ಮತ್ತು ಕರ್ನಾಟಕದಲ್ಲಿರುವ ಇರುಳಿಗರ ಅಂತರಾಳದಲ್ಲಿರುವ ಅಭಿಮತವಾಗಿದೆ. ಆದರೆ ಇದಕ್ಕೆ ಯಾವುದೇ ರೀತಿಯ ಧಾರ್ಮಿಕ ಲೇಪನವಿಲ್ಲದಿದ್ದರಿಂದ ಇದನ್ನು 'ಸಮುದಾಯದವರು ಗಟ್ಟಿಯಾಗಿ ಪ್ರತಿಪಾದಿಸುವುದಿಲ್ಲ, ಆದರೆ ಈ ವ್ಯಾಖ್ಯಾನ ಸಮುದಾಯಕ್ಕೆ 'ಇರುಳ' ಹೆಸರು ಬರಲು ಪ್ರಮುಖ ಕಾರಣವಾಗಿದೆ. ಆದರೆ ಇದೇ ಮುಖ್ಯ ಕಾರಣ ಎಂದು ಇರುಳಿಗರು ಬಲವಾಗಿ ಪ್ರತಿಪಾದಿಸುವುದಿಲ್ಲ. ಏಕೆಂದರೆ ಸಮಾಜದಲ್ಲಿ ಜಾತಿ ಹೆಸರಿನ ಐತಿಹ್ಯಗಳು ದೇವರು, ಧರ್ಮದ ಹಿನ್ನೆಲೆಯಿಂದ ಬಂದರೆ ಹೆಚ್ಚು ಮನ್ನಣೆ ಸಿಗುತ್ತದೆ. ಆದರೆ ಈ ಪದ ನಿಷ್ಪತ್ತಿಯು ಪ್ರಕೃತಿ ಸೂಚಕವಾಗಿದ್ದರಿಂದ ಮನ್ನಣೆಯ ಸಮಸ್ಯೆಯಾಗಿ ಇಂತಹ ಮೂಲ ಹಿನ್ನೆಲೆಯನ್ನು ಬಿಟ್ಟು ದೇವರು ಧರ್ಮದ ಮೊರೆಹೋಗಿರುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು.

ವ್ಯಾಖ್ಯಾನ ೨

ಸೋಮಿನಾವ್ ಅಪ್ಪನ ಕಾಲ್ದಾಗಿನಿಂದಕಾಡ್ ಜನ ಕಾಡು ಪೂಜಾರಿಗಳಂತ ಆ ದೆಸಿಯಿಂದ ಹೇಳ್ತಾರೆ ನಾವ್ ವಟ್ಟೇಪಾಡಿಗೆ ಇಲಿ ಯಿಡುಕೊಂಡು ತಿಂತೀವಲ್ಲ ಅದ್ಕೆ ಇಲಿಗ್ರು ಇಲಿಗ್ರು ಅಂತ ಜನ ಕೂಗುತ್ತಾರೆ. ಇಲಿಗ್ರು ಅಂದರೆ ನಮ್ಮನ್ನ ಬೈದಂಗೆ ಅಂತ ತಿಳ್ಕಳಿ. ಬಡಜನ ಏನಂದ್ರು ಸುಮ್ಕಿರಿತೀವಿ ನಾ ಚಿಕ್ಕೋನಾಗಿದ್ದಾಗ ಯಾರ್ಸಾಮಿ ನಮ್ಮ ಗವೀ ಅತ್ರ ಬತ್ತಿದ್ದೋರು ಅಪ್ಪನ ಕಾಲ್ದಗೆ ಬಟ್ಟೆ ಇಕ್ಕಿದ ಜನ ಕಂಡರೆ ದಿಗಿಲುಬಿದ್ದು ಓಡಿ ಕಾಡಿನಾಗೆ ಮಕ್ಕೊಳತಿದ್ವು ನನ್ನ ಕಣ್ಣ ಮುಂದೇನೇ ಕಾಡು ಬಟಬಯಲಾಗಿ ಹೋಯ್ತು. ಕಾಡನಾಗೆ ಜೇನು, ಕಡ್ಡಿ ಜೇನು,

ತುಡುವೆ ಜೇನು, ಹೆಜ್ಜೇನು ಯಾವ್ದೂ ಸಿಗದಂಗಾಯ್ತು. ಬೆಂಕಿಬಿದ್ದು ಕಾಡಗೆಣಸು ನಾಶವಾಯ್ತು. ಇನ್ನೇನು ತಿನ್ನಾನ ಇಲಿ ಹಿಡಕೊಂಡೇ ತಿಂದ್ರೋ ಅದ್ಕೆ ಇಲಿಗ್ರು ಅಂತ ಕರಿತಾರೆ.[೫೦]

'ತಮ್ಮನ್ನು ಇಲ್ಲಿಗರು' ಎಂದು ಕರೆದರೆ ಬೈದಂಗೆ ಎನ್ನುತ್ತಾರೆ. 'ಇಲಿ ತಿನ್ನುವುದರಿಂದ 'ಇಲ್ಲಿಗರು' ಅನ್ನುವುದು ಸರಿಯಿಲ್ಲ. ಮೈಸೂರು ಪ್ರಾಂತ್ಯದ ಹೊಲೆಯರು, ವಡ್ಡರು ಕೂಡ ಇಲಿ ಅಥವಾ ತೋಡ(ತ್ವಾಡ)ವನ್ನು ತಿನ್ನುತ್ತಾರೆ ಹಾಗಾದರೆ ಅವರನ್ನು ಯಾಕೆ ಇಲಿಗರು ಎಂದು ಕರೆಯುವುದಿಲ್ಲ. ನಾವು ಪ್ರಬಲ ಜನಸಂಖ್ಯೆಯನ್ನು ಹೊಂದಿರುವವರಲ್ಲ; ಹಾಗೆಯೆ ನಾವು ಆರ್ಥಿಕವಾಗಿ ತೀರ ಹಿಂದುಳಿದಿದ್ದರಿಂದ ನಮ್ಮಂಥ ಅಸಹಾಯಕರನ್ನು ಏನೆಂದು ಕರೆದರು ಸುಮ್ಮನಿರುತ್ತೇವೆ.[೫೧]

ವ್ಯಾಖ್ಯಾನ ೩

ನಮ್ಮ ಜನರು ರಾತ್ರಿ ಹೊತ್ತಲ್ಲಿ ಜೇನು ಬೇಟೆ ಮುಂತಾದ ಕ್ರಿಯೆಗಳಲ್ಲಿ ತೊಡಗಿರುವುದರಿಂದ ಹಾಗೆಯೇ ರಾತ್ರಿಯ ಸಮಯದಲ್ಲಿ ಹೆಚ್ಚು ಚಟುವಟಿಕೆಯಿಂದ ಇರುವುದಕ್ಕಾಗಿ ಇರುಳರು, ಇರುಳಿಗರು ಎಂದು ಕರೆಯುತ್ತಾರೆ.[೫೨]

ಈ ಮೇಲಿನ ಅಭಿಪ್ರಾಯ ಅತ್ಯಂತ ವಿಶೇಷವಾದುದ್ದಾಗಿದೆ. ಏಕೆಂದರೆ ನಾನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿ ಹಾಗೆ ಇವರ ಎಲ್ಲಾ ಆಚರಣೆಗಳು ರಾತ್ರಿಯಲ್ಲೇ ಕಂಡುಬರುತ್ತವೆ. ಮದುವೆ ಕಣಿ, ಕೂಡಿಕೆ ಹಿರಿಯರ ಹಬ್ಬ ಮುಂತಾದವುಗಳನ್ನು ರಾತ್ರಿಯಲ್ಲೇ ಮಾಡಬೇಕೆಂಬುವುದು ಇವರ ನಂಬಿಕೆ. ಹಾಗೆಯೇ ಇವರು ರಾತ್ರಿ ಸಮಯದಲ್ಲಿಯೂ ಹಗಲಿ ನಂತೆಯೇ ಚಟುವಟಿಕೆಯಿಂದ ಕೂಡಿರುತ್ತಾರೆ. ಎಂತಹ ಕಾಡಲ್ಲಾದರೂ ಬರಿಗಾಲಿನಲ್ಲಿ ರಾತ್ರಿಯಿಡಿ ಸುತ್ತಿಬರುತ್ತಾರೆ. ಪ್ರಾನ್ಸಿಸ್ ಬುಕಾನನ್ ಇವರನ್ನು ಹುಲಿಯಿಂದ ಗ್ರಾಮಗಳನ್ನು ರಕ್ಷಣೆ ಮಾಡುವುದಕ್ಕೆ ಬಳಸಿಕೊಳ್ಳಲಾಗಿತ್ತು ಎಂದು ತಿಳಿಸಿದ್ದಾರೆ. ಈ ಎಲ್ಲಾ ಅಂಶಗಳ ಆಧಾರದ ಮೇಲೆ ರಾತ್ರಿ ಸಮಯದಲ್ಲಿ ಚಟುವಟಿಕೆಯಿಂದ ಕೂಡಿರುವ ಇವರನ್ನು ಇರುಳ ಇರುಳಿಗ ಇರುಳರ್‌ರು ಎಂದು ಕರೆದಿರುವ ಸಾಧ್ಯತೆಯನ್ನು ಸಾರಾಸಗಟಾಗಿ ಒಪ್ಪಲಾಗದಿದ್ದರೂ ತಿರಸ್ಕರಿಸಲು ಸಾಧ್ಯವಿಲ್ಲ.

ಇರುಳಿಗರ ಪದನಿಷ್ಪತ್ತಿಯ ಬಗ್ಗೆ ಅಧ್ಯಯನಕಾರರ ಅಭಿಪ್ರಾಯಗಳು

ಇರುಳಿಗ ಪದನಿಷ್ಪತ್ತಿಯ ಕುರಿತು ಚರ್ಚಿಸುವ ಸಮಯದಲ್ಲಿ ಇರುಳಿಗರನ್ನು ಕುರಿತ ಅಧ್ಯಯನ ಕೈಗೊಂಡಿರುವವರು ತಮ್ಮ ಅಭಿಪ್ರಾಯಗಳನ್ನು ಹಾಗೂ ಶಬ್ದಕೋಶಗಳು ಇರುಳಿಗ ಪದಕ್ಕೆ ಏನು ಹೇಳುತ್ತವೆ ಎಂಬುವುದನ್ನು ಈ ಕೆಳಕಂಡಂತೆ ಚರ್ಚಿಸಲಾಗಿದೆ.

ಏಕೆಂದರೆ ಸಮುದಾಯದ ಬಗ್ಗೆ ಅಧ್ಯಯನ ಮಾಡುವವರ ಮಾನಸಿಕ ಧೋರಣೆಗಳು ಬುಡಕಟ್ಟುಗಳ ಪದನಿಷ್ಪತ್ತಿಯ ಹಿಂದೆ ಕೆಲಸ ಮಾಡುತ್ತವೆ. ಎಲ್.ಕೆ.ಅನಂತಕೃಷ್ಣ ಅಯ್ಯರ್

ತಮ್ಮ ಕೃತಿಯಾದ Mysore Tribe and Cast ಕೃತಿಯಲ್ಲಿ ಇರುಳಿಗರ ಪದನಿಷ್ಪತ್ತಿಯ ಬಗ್ಗೆ ಹೀಗೆ ಹೇಳುತ್ತಾರೆ. ಈ ಬುಡಕಟ್ಟು ಜನರು ಇಲಿಯನ್ನು ತಿನ್ನುವುದರಿಂದ ಸುತ್ತಮುತ್ತಲಿನ ಜನ ಇಲಿಗರು ಎನ್ನುತ್ತಾರೆ. ಇಲಿಗರ ಪದದ ವಿರೂಪವೇ ಇರುಳಿಗ, ಇರುಳ ಆಗಿದೆ ಎನ್ನುತ್ತಾರೆ. ಇವರ ಹೇಳಿಕೆಯನ್ನು ಇರುಳಿಗ ಬುಡಕಟ್ಟು ಒಪ್ಪುವುದಿಲ್ಲ "ಇಲಿಯನ್ನು ಇರುಳಿಗರು ಮಾತ್ರ ತಿನ್ನುವುದಿಲ್ಲ, ನಮ್ಮ ಸುತ್ತಮುತ್ತಲಿನ ಹೊಲೆಯರು, ವಡ್ಡರು ತಿನ್ನುತ್ತಾರೆ. ಅವರಿಗೆ ಮಾತ್ರ ಯಾಕೆ ಇರುಳಿಗರು ಎನ್ನುವುದಿಲ್ಲ. ಇಲಿಯು ನಮ್ಮ ಮುಖ್ಯ ಆಹಾರವೇನು ಅಲ್ಲ ನಮ್ಮ ಬೇಟೆಗಾರಿಕೆಯ ಒಂದು ಭಾಗ ಅದು. ಇಲ್ಲಿಗ ಎಂದರೆ ನಮಗೆ ಬೈದಂತೆ ತಿಳ್ಕೋಳ್ಳಿ ಎನ್ನುತ್ತಾರೆ".[೫೩] ಇಂತಹ ಸಂದರ್ಭಗಳು ಬುಡಕಟ್ಟುಗಳ ಅಧ್ಯಯನದಲ್ಲಿ ಪದೇ ಪದೇ ಪುನರಾವರ್ತನೆಯಾಗುತ್ತಿವೆ.

ಈ ಎಲ್ಲಾ ಕಾರಣಗಳಿಂದ ಬುಡಕಟ್ಟುಗಳನ್ನು ಕುರಿತು ಅಧ್ಯಯನ ಮಾಡುವವರು ಬುಡಕಟ್ಟುಗಳ ಆಕಾರ, ವಾಸಿಸುವ ಪ್ರದೇಶ, ತಿನ್ನುವ ಆಹಾರ, ಇವರನ್ನು ಸುತ್ತಮುತ್ತಲಿನವರು ಸಂಬೋಧಿಸುವ ರೀತಿಯ ಆಧಾರದ ಮೇಲೆ ಪದನಿಷ್ಪತ್ತಿ ನೀಡಿ ಸಮುದಾಯ ಚರಿತ್ರೆ ಕಟ್ಟುವುದು ವಿಷಾದನೀಯ. ಈ ಹಿನ್ನೆಲೆಯಲ್ಲಿ ಎಚ್ಚರಿಕೆಯಿಂದ ಇರಬೇಕು. ಇರುಳಿಗರನ್ನು ಕುರಿತು ಇಲ್ಲಿಯವರೆಗೆ ಅಧ್ಯಯನ ಮಾಡಿರುವ ಅಧ್ಯಯನಕಾರರು ತಮ್ಮ ಅಧ್ಯಯನದಲ್ಲಿ ಇರುಳಿಗ ಪದನಿಷ್ಪತ್ತಿಯ ಬಗ್ಗೆ ಏನು ಹೇಳಿದ್ದಾರೆ ಎಂಬುದನ್ನು ನೋಡುವ ಪ್ರಯತ್ನ ಮಾಡಲಾಗಿದೆ.

ಫ್ರಾನ್ಸಿಸ್ ಬುಕಾನನ್ ಇವರು ತಮ್ಮ ಕೃತಿಯಾದ (೧೮೦೬ರಲ್ಲಿ) A Journey from madras through the countries of Mysore canara and malbarರಲ್ಲಿ ಇರುಳಿಗರ ಪದನಿಷ್ಪತ್ತಿಯನ್ನು ಹೀಗೆ ಹೇಳಿದ್ದಾರೆ. in this hilly tract there is a race of man called by the other natives cad Eriligaru; but who call themselves cot chensu.[೫೪]

೧೯೦೨ರಲ್ಲಿ ಎಡ್ಗರ್ ಥರಸ್ಟನ್ ತನ್ನ ಕೃತಿಯಾದ **Cast and Tribe Southern India** ದಲ್ಲಿ Irulas are the darkest skinned of the nilgiri tribe on some of whom, as has been said. charcoal would leave a white mark. The name Irula in Fact means darkness or blackness (irula), whether in reference to the dark jungle in which the Irula ಎನ್ನುತ್ತಾರೆ.[೫೫]

ಎಲ್.ಕೆ. ಅನಂತಕೃಷ್ಣ ಅಯ್ಯರ್ ತಮ್ಮ ಕೃತಿಯಾದ **"Mysore Tribes and Cast"**ದಲ್ಲಿ The tribe known as Iruliga or Iruliga which is sometimes corrupted in to Illigaru ಎಂದಿದ್ದಾರೆ.[೫೬]

ಕೆ.ಕೆಂಪೇಗೌಡರು ತಮ್ಮ ಕೃತಿಯಾದ **A Descriptive Analysis of the Irula Dialect** ನಲ್ಲಿ The term Irula may be derived from Irula whichmeans night or black. Hence, Irulas may be the darkest of the dravidian group of peoples since they belong to hill tribes, this may be taken to represent the dark hill tribes, perhaps from their dark colour. the tribe is known as Irula of Irualigas which is some times found as Illigas in some parts of Tamilnadu they are called by the names Irulas, Irula, Iruliga, Irul and Iriligas but in the Bangalore district of Mysore state they are called by the name Illigas.[೫೭]

ಸಿದ್ಧಗಂಗಯ್ಯ ಕಂಬಾಳ್ ಅವರು ತಮ್ಮ ಕೃತಿಯಾದ 'ಇಲ್ಲಿಗರ ಸಂಸ್ಕೃತಿ'ಯಲ್ಲಿ ಇಲ್ಲಿಗರು ಆರಾಧನೆಗೆ ತಮ್ಮ ಬದುಕಿನ ಅತಿ ಹೆಚ್ಚು ಭಾಗವನ್ನು ಮೀಸಲಿಡಬಯಸುವ ಮೂಲ ನಿವಾಸಿಗಳು, ನಯವಿಲ್ಲದ ಒರಟೊರಟಾದ ಭಾವದಿಂದ ಕೂಡಿರುವವರು. ಇವರು ಆಚರಿಸುವ ಆರಾಧನೆ, ಪೂಜೆಗಳಿಂದಾಗಿಯೇ ಈ ಜನಾಂಗವನ್ನು ಇಲ್ಲಿಗರೆಂದು ಕರೆದಿರಬಹುದು. ಕಾಡು ಎಂಬ ಪದಕ್ಕೆ ಅರಣ್ಯ, ಒರಟು, ಕ್ರೂರ ಎಂಬ ಅರ್ಥಗಳೂ ಇವೆ. ಈ ಎಲ್ಲಾ ಅರ್ಥಗಳಿಗೂ ಇವರು ಅನ್ವಯಿಸುತ್ತಾರೆ ಎಂದಿದ್ದಾರೆ.[೫೮]

ಎಂ. ಬೈರೇಗೌಡ ಇವರು ತಮ್ಮ ಕೃತಿಯಾದ 'ಇರುಳಿಗರು: ಜಾನಪದ ಅಧ್ಯಯನ'ದಲ್ಲಿ ಇರುಳಿಗರು ಎಂಬ ಹೆಸರು ಕತ್ತಲಿನ (Night-ಇರುಳ) ಸಂಕೇತ ಅಥವಾ ದಟ್ಟವಾದ ಕಾಡಿನ ಪ್ರದೇಶದಲ್ಲಿ ವಾಸಿಸುವುದರಿಂದ ಬಂದಿರಬಹುದು. ಮರೆಯಲ್ಲಿ ಬದುಕುವ ಜನ ಇವರಾಗಿರುವುದರಿಂದ ಕಪ್ಪು, ಮರೆಯ ಅಂದರೆ ಯಾರಿಗೂ ಏನೂ ಗೋಚರಿಸದೇ ಇರುವುದರ ಸಂಕೇತ; ಅಂದರೆ ಬೇರೆ ಜನರ ಕಣ್ಣಿಗೆ ಕಾಣಿಸಿಕೊಳ್ಳದಂತೆ ಮರೆಯಲ್ಲಿ ಜೀವಿಸುವ ಜನರಾದ್ದರಿಂದ ಇರುಳಿಗರು ಎಂಬುದು ಬಂದಿರಬಹುದು. ಕಪ್ಪನೆಯ ಮೈ ಬಣ್ಣದಿಂದ ಕೂಡಿರುವುದರಿಂದ ಅವರ ಬಣ್ಣ ಸೂಚಕವಾಗಿಯೂ ಕತ್ತಲೆಗೆ ಸಂವಾದಿಯಾದ ಕಪ್ಪು ಬಣ್ಣದ ರೂಪವೇ ಇರುಳು ಆಗಿ ಕನ್ನಡದ ಇಗ ಪ್ರತ್ಯಯ ಸೇರಿ ಇರುಳಿಗ ಆಗಿರುವ ಸಾಧ್ಯತೆಗಳಿವೆ.

ಜಕ್ಕ ಪಾರ್ಥಸಾರಥಿ ಅವರು ತಮ್ಮ ಕೃತಿ Sachedanda(ed) Encyclopaedea profile of India tribes ಯಲ್ಲಿ The Irular are one of the major tribal of Tamilnadu. They are also found in Karnataka and Keral state. the Irular are known by several names like Irulas, Irulan, Iruliga, Iruvan, Iriligaru, posari and villi ars, The name Irular is suppored to be derived from Tamil word Irul meaning daknes which may refer to their skin complexion ಎಂದಿದ್ದಾರೆ.[೫೯]

ಮೈತ್ರಿ ಕೆ.ಎಂ. ತಮ್ಮ ಕೃತಿ 'ಬುಡಕಟ್ಟು ಕುಲಕಸುಬುಗಳು' ಎಂಬುವುದರಲ್ಲಿ ಇರುಳಿಗ ಎಂಬ ಪದವು ಇರುಳ ಎಂಬ ಪದದಿಂದ ನಿಷ್ಪತ್ತಿಯಾಗಿದೆ. ಇರುಳ ಎಂಬ ಪದಕ್ಕೆ ರಾತ್ರಿ ಕತ್ತಲು ಕಪ್ಪು ಎಂಬ ಅರ್ಥಗಳಿವೆ. ಇವರ ಬಣ್ಣ ಕಪ್ಪಾಗಿರುವುದರಿಂದ ಈ ಹೆಸರು ಬಂದಂತಿದೆ. ಇರುಳ>ಇರುಳಿಗ; ಇಲಿ>ಇಲ್ಲಿಗ>ಇಲಿಗರೆಂದು ರೂಪಾಂತರಗೊಂಡಿದೆ. ಇವರು ಇಲಿ ಹಿಡಿದು ತಿನ್ನುವುದರಿಂದ ಇವರಿಗೆ ಜನಸಾಮಾನ್ಯರು ಇಲ್ಲಿಗರೆಂದು ಕರೆದರು. ಆದರೆ ಇವರು ತಮ್ಮನ್ನು ಇಲ್ಲಿಗರೆಂದು ಕರೆದುಕೊಳ್ಳಲು ಇಷ್ಟಪಡದೆ ಕಾಡುಪೂಜಾರಿಗಳೆಂದು ಕರೆದುಕೊಳ್ಳಲು ಇಷ್ಟ ಪಡುತ್ತಾರೆ. ಹಿಂದೆ ಗುಹೆಗಳೇ ಇವರ ವಾಸ ಕೇಂದ್ರಗಳಾಗಿದ್ದು ಇವರು ಕಾಡು ದೈವಗಳನ್ನು ಪೂಜಿಸುವವರಾಗಿರುವುದರಿಂದ ಇವರಿಗೆ ಕಾಡುಪೂಜಾರಿಗಳೆಂಬ ಹೆಸರು ಬಂದಿದೆ ಎನ್ನುತ್ತಾರೆ.[೬೦]

ಲಕ್ಕಪ್ಪಗೌಡ (ಪ್ರ.ಸಂ.) ಕರ್ನಾಟಕ ಬುಡಕಟ್ಟುಗಳು ಸಂಪುಟ-೩ (ಲೇ.) ಕುರುವ ಬಸವರಾಜು ಇರುಳಿಗರ ಪದನಿಷ್ಪತ್ತಿಯನ್ನು ಕುರಿತು ಇರುಳರು ಕಪ್ಪು ಬಣ್ಣದವರು 'ಇರುಳ್' ಎಂಬ ಪದವು ಅಲ್ಪಸ್ವಲ್ಪ ವ್ಯತ್ಯಾಸದಲ್ಲಿ ಕನ್ನಡ, ತಮಿಳು, ಮಲೆಯಾಳಮ್, ತುಳು, ತೆಲುಗುಗಳಲ್ಲಿದೆ. ಆದರೆ ಈ ಎಲ್ಲಾ ದ್ರಾವಿಡ ಭಾಷೆಗಳಲ್ಲಿ ರಾತ್ರಿ ಕತ್ತಲು ಎಂಬ ಅರ್ಥವು ಸಮನಾಗಿರುವುದು ವಿಶೇಷ. ಅಂದರೆ ಮೂಲ ದ್ರಾವಿಡ ಭಾಷೆಯಿಂದ ಇಲ್ಲವೆ ತಮಿಳಿನ ಕೆಲವು ಭಾಷೆಯಂತಿರುವ ಭಾಷೆ ಇವರದು. ಅಂದರೆ ಇಲ್ಲಿ ಇರುಳಿನಂತೆ ಇರುಳರ ಬಣ್ಣ ಕಪ್ಪು ಚಂಚು ಬಣ್ಣಕ್ಕಿರುವ ಬುಡಕಟ್ಟಿನ ಜನರನ್ನು 'ಚೆಂಚರು' ಎಂದು ಕರೆದಿರುವಂತೆ ಇರುಳ ಬಣ್ಣಕ್ಕಿರುವವರಾದ್ದರಿಂದ ಇವರನ್ನೂ ಇರುಳರೆಂದು ಕರೆದಿರಬಹುದು. ಅಲ್ಲದೆ ಈ ಇರುಳರ ಮುಖ್ಯ ಕಸುಬು ಜೇನು ಇಳಿಸುವುದು. ಈ ಜೇನು ಇಳಿಸುವುದನ್ನು 'ಇವರು ಇರುಳಲ್ಲಿ ಮಾಡುವುದು ಇದೆ. ಅಂದರೆ ಇರುಳಲ್ಲಿ ಓಡಾಡುವ ಇವರನ್ನು 'ಇರುಳರು' ಎಂದು ಕರೆದಿರಲೂ ಸಾಧ್ಯವಿದೆ ಎಂದಿದ್ದಾರೆ.[೬೧]

ಎ.ಎಸ್.ಪ್ರಭಾಕರ್ ಅವರು ವಿಶ್ವವಿದ್ಯಾಲಯದ ಧನ ಸಹಾಯ ಯೋಜನಾ ಇರುಳಿಗರ ಪದನಿಷ್ಪತ್ತಿಯ ಬಗ್ಗೆ ಹೀಗೆ ವಿವರಿಸಿದ್ದಾರೆ. A Few scholar debated on the synonym names of the Irular in karnataka. siddagangaiah feels that Irulas and Iligaru are not one and same tribe kuruva basavarj decided them as one tribe due to cultural similaraties K.S.Singh arested that the Iruliga of Karnakata. rurlar of Kerala and Irula of Tamil nadu are the same people ಎಂದಿದ್ದಾರೆ.[೬೨]

ಮಹೇಂದ್ರ ಕುಮಾರ್ ತಮ್ಮ ಕೃತಿ 'ಇರುಳಿಗ ಸಮುದಾಯದ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಅಧ್ಯಯನ'ದಲ್ಲಿ ಇರುಳಿಗರ ಪ್ರಕಾರ, ಅವರ ಸೃಷ್ಟಿ ಪುರಾಣದ ಪ್ರಕಾರ ಇರುಳಿನ ಮೂಲಕ್ಕೆ ತಂದೆ ಮಗಳ ದೈಹಿಕ ಸಂಬಂಧಗಳು ಪ್ರಮುಖವಾದಂತೆ ಇವುಗಳಿಂದಲೇ ಇರುಳಿಗ ಎಂಬ ಹೆಸರು ಬಂದಿದೆ ಎಂದು ಹೇಳುತ್ತಾ ನಿಖರವಾದ ಮಾಹಿತಿ ನೀಡುವುದಿಲ್ಲ.

ಒಟ್ಟಾರೆಯಾಗಿ ಈ ಮೇಲಿನ ಐತಿಹ್ಯ ಪುರಾಣಗಳು ಮತ್ತು ಇರುಳಿಗರನ್ನು ಕುರಿತು ಅಧ್ಯಯನ ಕೈಗೊಂಡಿರುವ ವಿದ್ವಾಂಸರುಗಳ ಅಭಿಪ್ರಾಯ. ಹಾಗೆಯೇ ಇರುಳಿಗರ ವಕ್ತೃಗಳ ಮಾಹಿತಿಗಳೆಲ್ಲವನ್ನು ಬಹಳ ಸೂಕ್ಷ್ಮವಾಗಿ ಗಮನಿಸಿದಾಗ ಪ್ರಮುಖವಾಗಿ ಕೆಲವು ಅಂಶಗಳು ಕಂಡುಬರುತ್ತವೆ. 'ಇರುಳಿಗ' ಎಂಬ ಪದ ನಿಷ್ಪತ್ತಿಯ ಬಗ್ಗೆ ಸಮುದಾಯದವರು ನಿಖರವಾದ ಉತ್ತರ ನೀಡಲಾಗದ ಸಂದರ್ಭದಲ್ಲಿ ಮತ್ತು ಇರುಳಿಗರನ್ನು ಇಲ್ಲಿಗರು, ಇಲಿ ತಿನ್ನುವವರು ಎಂದು ಛೇಡಿಸಿ ಸಂಬೋಧಿಸುವಾಗ ಇದರಿಂದ ತಪ್ಪಿಸಿಕೊಳ್ಳಲು ತಮ್ಮದೇ ಜ್ಞಾನ ಮಸ್ತಕದಿಂದ ಐತಿಹ್ಯಪುರಾಣಗಳನ್ನು ಕಟ್ಟುಕೊಂಡಿರುವ ಸಾಧ್ಯತೆಗಳಿವೆ. ಹಾಗೆಂದು ಅವರ ಎಲ್ಲ ಐತಿಹ್ಯ ಮತ್ತು ಪುರಾಣಗಳು ಕಲ್ಪನಾತ್ಮಕ ಕತೆಗಳು ಎಂದು ಹೇಳುತ್ತಿಲ್ಲ. ಆ ಎಲ್ಲ ಕಥೆಗಳು ಆ ಸಮುದಾಯ ಜೀವನ ವೃತ್ತಾಂತವೆ ಆಗಿವೆ. ಆದರೆ ತಮ್ಮ ಪದನಿಷ್ಪತ್ತಿಗೆ ಛೇಡಿಕೆಯ ಧೋರಣೆಗಳುಂಟಾದ ಸಂದರ್ಭದಲ್ಲಿ ಆ ಪ್ರದೇಶದ ದೇವರು, ಧರ್ಮ, ವೃತ್ತಿಯ ಮೊರೆ ಹೋಗಿರುವ ಸಾಧ್ಯತೆಗಳಿವೆ ಹಾಗೂ ಆ ಐತಿಹ್ಯ ಮತ್ತು ಪುರಾಣಗಳು ಇನ್ನೂ ಸೂಕ್ಷ್ಮವಾಗಿ ಅಧ್ಯಯನಕ್ಕೊಳಪಡಿಸಿದರೆ ಹೆಚ್ಚಿನ ಮಾಹಿತಿ ಸಿಗಬಹುದು. ಆದರೆ ಅಧ್ಯಯನಕಾರರಂತೂ ಈ 'ಇರುಳಿಗ'ಎಂಬ ಪದ ನಿಷ್ಪತ್ತಿಯನ್ನು ವಿವರಿಸಲೇಬೇಕು ಎಂಬ ಬರದಲ್ಲಿ ತಮ್ಮ ಜಾತಿ, ಅಧಿಕಾರ ಸಾಮಾಜಿಕ ಶ್ರೇಣೀಕರಣ ಅಥವಾ ಮಾನಸಿಕ ಧೋರಣೆಯ ಹಿನ್ನೆಲೆಯಲ್ಲಿ ವಿವರಿಸಿರುವುದು ಗೊತ್ತಾಗುತ್ತದೆ. ಏಕೆಂದರೆ ಸ್ವತಃ ಇರುಳಿಗ ಸಮುದಾಯದ ವ್ಯಕ್ತಿಯಾದ ನನಗೆ ಈ ಎಲ್ಲಾ ಅಧ್ಯಯನಕಾರರು ಪದನಿಷ್ಪತ್ತಿಯ ಸಂಶೋಧನೆಗೆ ಹೆಚ್ಚು ತಲೆ ಕೆಡಿಸಿಕೊಳ್ಳದೇ ಆ ಸಂದರ್ಭದ ಹೇಳಿಕೆಗಳಿಗೆ ಪದಪುಂಜಗಳನ್ನು ಸೇರಿಸಿ ವಿವರಿಸಿದಂತೆ ಕಂಡುಬರುತ್ತದೆ. ಇರುಳಿಗ ಎಂಬ ಪದವು ಕಪ್ಪು, ಕತ್ತಲೆ, ಇಲಿ ತಿನ್ನುವುದು ಅಥವಾ ಇನ್ನ್ಯಾವುದೋ ಜನರ ಅಭಿಪ್ರಾಯಕ್ಕೆ ತಕ್ಕಂತೆ ಬಂದಿರುವುದಲ್ಲ. ಅದು 'ಇರುಳಿಗ'ರ ಜೀವನ ವೃತ್ತಾಂತ ಚರಿತ್ರೆಯನ್ನು ಹೇಳುವುದಾಗಿದೆ. ಇದಕ್ಕೆ ಇನ್ನು ಹೆಚ್ಚಿನ ಸಂಶೋಧನೆಯ ಅವಶ್ಯಕತೆ ಇದೆ. ನಾನು ಸ್ವತಃ ಸಮುದಾಯದ ವ್ಯಕ್ತಿಯಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಕರ್ನಾಟಕ, ಕೇರಳ ಮತ್ತು ತಮಿಳುನಾಡಿನಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಬಹುಸಂಖ್ಯಾತ ಇರುಳಿಗರು ಒಪ್ಪಿಕೊಂಡ ತಮ್ಮ ಪದನಿಷ್ಪತ್ತಿಯ ಬಗೆಗಿನ ವಿವರಣೆಯೆಂದರೆ ಚೆಂಗಲ್‌ಪೇಟೆಯ ಕನ್ನಿಯಮ್ಮ ಅವರು ಹೇಳಿದ ಮಾತು "ನಮಗೆ ಇರುಳ ಬೇರಿನಿಂದ ಇರುಳಿಗ ಎಂಬ ಹೆಸರು ಬಂದಿದೆ. ಮುಳ್ಳು ಗೆಣಸಿನ ತಾಯಿ ಬೇರನ್ನು 'ಇರುಳ ಬೇರು' ಎನ್ನುತ್ತೇವೆ. ಇದು ನಮಗೆ ಅನ್ನದ ಬೇರಾಗಿದ್ದು, ಇದರಿಂದಲೇ ನಮ್ಮ ತಾತಾಮುತ್ತಾತಂದಿರು ಹೊಟ್ಟೆಹೊರೆದು ಬದುಕಿದ್ದಾರೆ. ಮುಳ್ಳು ಗೆಣಸನ್ನು ಬಗೆದನಂತರ ತಾಯಿಬೇರನ್ನು ಗೆಣಸಿನಿಂದ ಬೇರ್ಪಡಿಸಿ ಕೈಮುಗಿದು ಮತ್ತೆ ಅಲ್ಲಿಯೇ ಹೂತು ಬರುತ್ತೇವೆ. ಈ ಬೇರಿನಿಂದ ಮತ್ತೆ ನಮಗೆ ಹತ್ತಾರು ಗೆಣಸುಗಳು ಸಿಗುತ್ತವೆ. ಅದು ತಮಗೆ ದೇವರ ಸಮಾನ ಹಾಗೂ ನಮ್ಮ ಹಿರಿಯರ ಹಬ್ಬದ ಸಂದರ್ಭದಲ್ಲಿ ಈ ಗೆಣಸಿನ ಬೇರನ್ನು ತಂದು ಇಟ್ಟು ಪೂಜೆ ಮಾಡುತ್ತೇವೆ. ಆ

ಬೇರು ಇರುಲೇಬೇಕು. ಇಲ್ಲದಿದ್ದರೆ ನಮ್ಮ ಹಬ್ಬ ಸಂಪೂರ್ಣವಾಗುವುದಿಲ್ಲ. ಈ ಹಿನ್ನೆಲೆಯಿಂದ ಈ ಗೆಣಸಿನ ಇರುಳ ಬೇರಿಗೂ ನಮಗೂ ಇರುವ ಸಂಬಂಧದಿಂದ ನಮ್ಮನ್ನು ಇರುಳಿಗರು ಎಂದು ಕರೆಯುತ್ತಾರೆ.[೬೩] ಅದೇ ರೀತಿಯಲ್ಲಿ ಇರುಳಿಗರಿಗೂ ಗೆಣಸಿಗೂ ಇಂದಿಗೂ ಅಂತಹ ಪೂಜ್ಯನೀಯ ಸಂಬಂಧವಿದೆ. ಹಬ್ಬ ಹರಿದಿನ ಸಂದರ್ಭದಲ್ಲಿ ಕಾಡಿಗೆ ಹೋಗಿ ಆ ಗೆಣಸನ್ನು ತಂದು ಎಡೆ ಇಡಲೇಬೇಕು ಎಂಬ ನಂಬಿಕೆ ಇಂದಿಗೂ ಇರುಳಿಗರು ವಾಸಮಾಡುವ ಪ್ರದೇಶಗಳಲ್ಲೆಲ್ಲವೂ ಇದೆ. ಆದ್ದರಿಂದ ಇರುಳಿಗರಿಗೆ ಇರುಳಿಗರು ಎಂಬ ಹೆಸರು ಬಂದಿರಬಹುದಾದ ಸಾಧ್ಯತೆಗಳಿವೆ. ಇದಕ್ಕೆ ಇನ್ನು ಹೆಚ್ಚಿನ ಅಧ್ಯಯನದ ಅವಶ್ಯಕತೆ ಇದೆ ಎಂದೆನಿಸುತ್ತದೆ.

ಇರುಳಿಗರ ಭಾಷೆ

ಭಾರತ ಅಥವಾ ಭಾರತೀಯತೆಯ ಬಗೆಗೆ ಮಾತನಾಡುವ ಯಾರೇ ಆಗಲಿ ಭಾರತದಲ್ಲಿ ಅನೇಕ ಭಾರತಗಳಿವೆ ಎಂಬ ಮಾತನ್ನು ಗಮನದಲ್ಲಿಟ್ಟುಕೊಂಡಿರಬೇಕು. ನೂರಕ್ಕು ಹೆಚ್ಚು ಭಾಷೆಗಳು, ಹತ್ತು ಹಲವಾರು ಮಾನ್ಯತೆ ಪಡೆದ ಭಾಷೆಗಳು ಪ್ರಮುಖ ಹಾಗೂ ಮಾನ್ಯತೆ ಪಡೆಯದ ಸಾವಿರಾರು ಭಾಷೆಗಳು, ಲಿಪಿಗಳು, ಅಸಂಖ್ಯಾತ ಕುಲ ಪಂಗಡಗಳು ಅನೇಕ ಪ್ರಾಚೀನ ಮತ ಧರ್ಮಗಳು, ಸಾವಿರಾರು ವರ್ಷಗಳಿಂದ ನಡೆದಿರುವ ವರ್ಣ ಸಂಕರಗಳು, ಬಗೆ ಬಗೆಯ ಭೂ ಪ್ರದೇಶಗಳು, ನಾನಾ ತೆರನಾದ ಹವಾಗುಣಗಳು ಮುಂತಾದವುಗಳಿಂದಾಗಿ ಪರಂಪರೆ ಹಾಗೂ ವಿರುದ್ಧ ಪರಂಪರೆಗಳ ಜಾಲ ನಿರ್ಮಾಣವಾಗಿದೆ. ನೀವು ಭಾರತದ ಬಗ್ಗೆ ಇದು ಸತ್ಯ ಎಂದುಕೊಂಡರೆ ಅದರ ತಲೆಯ ಮೇಲೆ ಹೊಡೆದಂತಹ ಮತ್ತೊಂದು ಸತ್ಯ ಹೊರ ಬರುತ್ತದೆ ಭಾರತದಲ್ಲಿರುವ ಭಾಷೆಗಳ ವೈವಿಧ್ಯ ಇದಕ್ಕೊಂದು ಅತ್ಯುತ್ತಮ ನಿದರ್ಶನ

ಪ್ರಮುಖವಾಗಿ ನಮ್ಮಲ್ಲಿರುವ ಭಾಷಾ ವೈವಿಧ್ಯತೆಯನ್ನು ಅಧ್ಯಯನ ಕೈಗೊಂಡ ಭಾಷಾ ವಿಜ್ಞಾನಿಗಳು ಸುಮಾರು ೧೦೫ ಭಾಷೆಗಳನ್ನು ಅಧ್ಯಯನ ಮಾಡಿ, ಪಟ್ಟಿ ಮಾಡಿಕೊಂಡಿದ್ದಾರೆ. ಇವರು ಒಟ್ಟಾರೆ ಭಾಷೆಗಳನ್ನು ಇಂಡೋ–ಆರ್ಯನ್, ದ್ರಾವಿಡ, ಟಿಬೆಟೋ–ಬರ್ಮನ್ ಹಾಗೂ ಆಸ್ಟ್ರೋ–ವಿಶಿಯಾಟಿಕ್ ಎಂಬ ನಾಲ್ಕು ಭಾಷಾ ಪರಿವಾರಗಳಾಗಿ ವಿಂಗಡಿಸಿಕೊಂಡಿದ್ದಾರೆ ಒಟ್ಟು ಜನಸಂಖ್ಯೆಯಲ್ಲಿ ಶೇ.೫ ಕ್ಕಿಂತಲೂ ಕಡಿಮೆ ಜನರೂ ೧೦೫ ಭಾಷೆಗಳಲ್ಲೂ ೯೦ ಭಾಷೆಗಳನ್ನು ಆಡುವ ಗುಂಪಿಗೆ ಸೇರುತ್ತಾರೆ. ಇದರಲ್ಲೂ ೬೫ ಭಾಷೆಗಳು ಗುಡ್ಡಗಾಡು ಗುಂಪಿಗೆ ಸೇರಿಕೊಂಡಿವೆ.[೬೪] ಕೇವಲ ೧೫ ಭಾಷೆಗಳನ್ನು ಭಾರತದ ಜನಸಂಖ್ಯೆಯಲ್ಲಿ ಶೇ. ೯೦ರಷ್ಟು ಮಂದಿ ಮಾತನಾಡುತ್ತಾರೆ; ಜೊತೆಗೆ ಓದು ಹಾಗೂ ಬರಹಕ್ಕಾಗಿ ಬಳಸಿಕೊಳ್ಳುತ್ತಾರೆ.

ಇನ್ನುಳಿದ ಶೇ ೯೫ ಭಾಷೆಯು ಬಹುಸಂಖ್ಯಾತದ ಭಾಷೆಯಾಗಿದೆ. ಕೇವಲ ೧೫ ಭಾಷೆಗಳನ್ನು ಸಾಹಿತ್ಯ, ವಿಶ್ವವಿದ್ಯಾಲಯಗಳು ಬಳಸಿಕೊಳ್ಳುತ್ತಿವೆ. ೧೦೫ ಭಾಷೆಗಳಲ್ಲಿ ಸರಿಸುಮಾರು ೧೬೦೦ ಕ್ಕೂ ಹೆಚ್ಚು ಉಪಭಾಷೆಗಳು ಇವೆ. ಇವು ಪ್ರಚಾರ ಪಡೆದುಕೊಳ್ಳದೆ ಮಾತೃಭಾಷೆಗಳಾಗಿ

ಒಗಟು, ಗಾದೆಗಳು, ಹಾಡುಗಳು, ಲಾವಣಿ ಕತೆಗಳು, ಬೀದಿ ಬೀದಿಗಳಲ್ಲಿ, ಅಡುಗೆ ಮನೆ, ಗುಡ್ಡಗಾಡು, ಚಹಾದಂಗಡಿ, ಸೀಮಿತ ಜನ ಸಮುದಾಯದ ಒಳಗಡೆಯೇ ಗುನುಗುತ್ತಿವೆ. ಈ ಭಾಷೆಗಳು ಭಾರತದಲ್ಲಿ ಪಿರಮಿಡ್‌ನ ಆಕಾರದಲ್ಲಿವೆ. ಈ ಭಾಷಾ ಪಿರಮಿಡ್‌ಗಳನ್ನು ಅರ್ಥ ಮಾಡಿಕೊಂಡು ಅಧ್ಯಯನ ಮಾಡಿದರೆ ಭಾಷೆಯ ಅಧ್ಯಯನ ಪರಿಪಕ್ವವಾಗುತ್ತದೆ.

ಚರಿತ್ರೆಯಲ್ಲಿ ಭಾಷೆಯು ಅತ್ಯಂತ ಪ್ರಮುಖವಾದುದ್ದು. ಭಾಷೆ ಎನ್ನುವುದು ಮನುಷ್ಯ ಹಾಗೂ ಪ್ರಾಣಿ ಸಂಕುಲಗಳಲ್ಲಿಯೂ ಇದೆ. ಆದರೆ ಮನುಷ್ಯ ಭಾಷೆ ಇತರೆ ಪ್ರಾಣಿಗಳಿರುವ ಭಿನ್ನತೆಯನ್ನು ಸೂಚಿಸುತ್ತದೆ. ಅಂದಮಾತ್ರಕ್ಕೆ ಪ್ರಾಣಿಗಳಿಗೆ ಭಾಷೆ ಇಲ್ಲ ಎಂದಲ್ಲ; ಪ್ರಾಣಿಗಳಲ್ಲೂ ಒಂದು ರೀತಿಯ ಭಾಷಿಕ ಸಂಜ್ಞೆಗಳಿರುತ್ತವೆ. ಈ ಭಾಷೆಯು ಮನುಷ್ಯನ ಬದುಕನ್ನು ಕಟ್ಟುವ, ದಾಖಲಿಸುವ ಸುಖ, ದುಃಖ ದುಮ್ಮಾನಗಳನ್ನು ಪಸರಿಸುವ ಕಾರ್ಯವನ್ನು ಮಾಡುತ್ತದೆ. ಭಾಷೆಗಳಿಲ್ಲದೆ ಕೇವಲ ಸಂಜ್ಞೆಗಳ ಮೂಲಕ ನೋವಿನ ಅಥವಾ ಸಂತೋಷದ ಅನುಭವಗಳನ್ನು ವ್ಯಕ್ತಪಡಿಸಿದರೆ ಅಷ್ಟು ಭಾವನೆಗಳನ್ನು ತುಂಬಲು ಮಾನವನಿಗೆ ಸಾಧ್ಯವಾಗುವುದಿಲ್ಲ.

ಮಾತಿನ ಮೂಲಕವೇ ಪ್ರಾಣಿ ಪ್ರಪಂಚದಿಂದ ವಿಶೇಷವಾಗಿ ಗುರುತಿಸಿಕೊಳ್ಳುವ ಮಾನವ ಪ್ರಾಣಿ ಸಮುದಾಯಕ್ಕೆ ಇಲ್ಲದ ಒಂದು ಅನುಭವದ ಪಾಠ ಮನುಷ್ಯನಿಗೆ ಸಿಗುತ್ತದೆ. ಭಾಷೆ ಅಥವಾ ಮಾತು ಇದ್ದ ಕ್ಷಣ ನಿಜ ಮನುಷ್ಯನಾಗುವುದಿಲ್ಲ. ಮನುಷ್ಯ ರೂಪಿಯಾಗಿರಬಹುದಷ್ಟೆ; ಆದರೆ ಮನುಷ್ಯ ರೂಪಿಯೊಳಗೆ ಮಾತು ಮತೀಯವಾಗಬಹುದು; ಮತಿಹೀನವಾಗಬಹುದು. ಮೃಗೀಯವಾಗಬಹುದು. ಮಾತು ಮೃಗೀಯವಾಗಿದೆ ಎಂದರೆ ಈ ಮನುಷ್ಯ ರೂಪಿಯ ಒಳಗೆ ಮೃಗಸ್ಥಿತಿ ಇದೆ ಎಂದರ್ಥ.[೭೫]

ಭಾಷೆಯು ಪ್ರಾದೇಶಿಕತೆಗೆ ಅನುಗುಣವಾಗಿ ರೂಪುಗೊಳ್ಳುತ್ತದೆ. ಕನ್ನಡಕ್ಕೆ–ಕರ್ನಾಟಕ, ತಮಿಳಿಗೆ–ತಮಿಳುನಾಡು, ಮರಾಠಿಗೆ ಮಹಾರಾಷ್ಟ್ರ, ತೆಲುಗಿಗೆ ಆಂಧ್ರ ಆಗಿರುತ್ತದೆ. ಈ ಭಾಷೆಯು ಆಯಾ ಪ್ರದೇಶಗಳಿಗೆ ಸೀಮಿತವಾಗಿರುತ್ತದೆ. ಅದಲ್ಲದೆ ವಾತಾವರಣ ಮತ್ತು ವಾಸಿಸುವ ಪರಿಸರದ ಮೇಲೂ ಭಾಷೆಯು ಬದಲಾಗಿರುತ್ತದೆ. ಆದ್ದರಿಂದಲೇ ಭಾಷಿಕ ವಿಜ್ಞಾನಿಗಳು ಪ್ರತಿ ಹನ್ನೆರಡು ಕಿಲೋ ಮೀಟರ್‌ಗೊಮ್ಮೆ ಭಾಷೆ ಬದಲಾಗುತ್ತಾ ಹೋಗುತ್ತದೆ ಎಂದಿದ್ದಾರೆ.

ಭಾಷೆಯು ವಾಸಿಸುವ ಪ್ರದೇಶದ ಮೇಲೆ ನಿರ್ಧಾರವಾಗುತ್ತದೆ. ಜನ ನಿಬಿಡ ಪ್ರದೇಶ, ಗುಡ್ಡಗಾಡು ಪ್ರದೇಶ, ದಟ್ಟಾರಣ್ಯ ಪ್ರದೇಶ, ಹೆಬ್ಬಂಡೆಗಳ ಪ್ರದೇಶಗಳಿಗೆ ತಕ್ಕಂತೆ ಭಾಷೆಯು ಬದಲಾಗುವುದರ ಜೊತೆಗೆ ಭಾಷೆಯಲ್ಲಿನ ಶಬ್ದಗಳ ಏರಿಳಿತಗಳು ಬದಲಾಗುತ್ತಿರುತ್ತವೆ. ಬೆಂಗಳೂರು ನಗರದಲ್ಲಿ ವಾಸಿಸುವ ಜನರು ಮಾತನಾಡುವ ಭಾಷೆಯ ದಾಟಿಗೂ ಉತ್ತರ ಕರ್ನಾಟಕದಲ್ಲೂ ವಾಸಿಸುವ ಜನರು ಮಾತನಾಡುವ ಭಾಷೆಯದಾಟಿಗೂ ಅಜಗಜಾಂತರ ವ್ಯತ್ಯಾಸಗಳಿರುತ್ತವೆ. ಹೀಗೆ ವಾಸಿಸುವ ಪ್ರದೇಶಗಳಿಗೆ ಅನುಗುಣವಾಗಿ ಭಾಷೆಯು ಬದಲಾಗುತ್ತಾ ಹೋಗುತ್ತದೆ.

ಭಾಷೆ ಎಂಬುದು ಕೇವಲ ಸಂವಾದ ಮಾಧ್ಯಮವಾಗಿರದೆ ಇದೊಂದು ಮಾನವ ಅಥವಾ ಸಮುದಾಯದ ಜೀವನ ವೃತ್ತಾಂತವನ್ನು ಹೊತ್ತುತಂದ ದಾಖಲೆಗಳಾಗಿರುತ್ತದೆ. ಅದು ಲಿಖಿತವಾಗಿಯೇ ಆಗಿರಲಿ ಅಥವಾ ಮೌಖಿಕವಾಗಿಯೇ ಆಗಿರಲಿ, ಏಕೆಂದರೆ ಒಂದು ಭಾಷೆ ರೂಪುಗೊಳ್ಳಲು ಸಾವಿರಾರು ವರುಷಗಳ ಪರಿಶ್ರಮವಿರುತ್ತದೆ. ಸಮುದಾಯಗಳೊಂದಿಗಿನ ಸಂಘರ್ಷದಿಂದ, ಸನ್ನೆಗಳಿಂದ ಆರಂಭವಾಗಿ ಆ ಸನ್ನೆಗಳು ಪರಿಪಕ್ವಗೊಂಡು ಒಂದು ಭಾಷೆಯಾಗುವುದರಲ್ಲಿ ಸಮುದಾಯ ಎಷ್ಟು ಏರಿಳಿತಗಳನ್ನು ಕಂಡಿರದು ಹಾಗೂ ಎಷ್ಟು ಪ್ರದೇಶಗಳಿಂದ ಪ್ರದೇಶಗಳಿಗೆ ವಲಸೆ ನಡೆದಿರುತ್ತದೆ ಹಾಗೆಯೇ ಎಷ್ಟು ಭಾಷೆಗಳ ಹೊಡೆತಗಳಿಂದ ತಪ್ಪಿಸಿಕೊಂಡು, ಕೆಲವೊಮ್ಮೆ ಹೊಂದಾಣಿಕೆ ಮಾಡಿಕೊಂಡಿರುತ್ತದೆ ಎಂಬುವುದನ್ನು ಚಿಂತಿಸ ಬೇಕಾಗುತ್ತದೆ.

ಭಾಷೆಯು ಭಾರತದ ಚರಿತ್ರೆಯ ಸಂದರ್ಭದಲ್ಲಿ ತನ್ನದೇ ಆದ ಪ್ರಭಾವವನ್ನು ಉಂಟುಮಾಡಿದೆ. ಅಂದರೆ ಶಿಷ್ಟ, ಕನಿಷ್ಠ, ಶ್ರೇಷ್ಠ ಎಂಬಷ್ಟರಮಟ್ಟಿಗೆ ಚರ್ಚೆಯನ್ನು ಹುಟ್ಟುಹಾಕಿದೆ. ಆಳುವ ಪ್ರಭುತ್ವವು ತನ್ನ ಭಾಷೆಯನ್ನು ಶ್ರೇಷ್ಠ ಎಂದು ಕರೆದು ಅದನ್ನು ಆಡಳಿತ ಭಾಷೆ ಮಾಡಿಕೊಂಡು ಆ ಸಂದರ್ಭದಲ್ಲಿದ್ದ ಅಥವಾ ಸೋತ ರಾಜನ ಭಾಷೆಯನ್ನು ಕನಿಷ್ಠ ಎಂದು ಪ್ರಚಾರ ಮಾಡಿರುವುದಕ್ಕೆ ಭಾರತದ ಚರಿತ್ರೆಯಲ್ಲಿ ನಿದರ್ಶನಗಳು ಸಿಗುತ್ತವೆ. ಮಧ್ಯೆ ಪ್ರಾಚ್ಯದಿಂದ ಬಂದ ಆರ್ಯರು ತಮ್ಮ ಸಂಸ್ಕೃತ ಭಾಷೆಯನ್ನು ದೇವರ ಭಾಷೆ ಎಂದು ನಂಬಿಸಿ ಪ್ರಭುತ್ವಗಳ ಸಹಾಯದಿಂದ ಜನ ಸಾಮಾನ್ಯರ ಮೇಲೆ ಹೇರುವ ಕೆಲಸ ಮಾಡಿದರು. ಜೊತೆಗೆ ಸಂಸ್ಕೃತವು ದೇವರ ಭಾಷೆಯಾಗಿದ್ದು ಅಸ್ಪೃಶ್ಯರು ಶೋಷಿತರು ಈ ಭಾಷೆಯನ್ನು ಮಾತನಾಡುವುದಿರಲಿ, ಕೇಳಿಸಿಕೊಳ್ಳುವುದು ಮಹಾಪಾಪ ಎಂದು ಭಾಷೆಯ ಮೂಲಕ ಶೋಷಿಸಿರುವುದು ಕಾಣಬಹುದು. ಅದು ಇಂದಿಗೂ ಮುಂದುವರಿಯುತ್ತಲೇ ಇದೆ. ಹಿಂದೆ ಸಂಸ್ಕೃತ ಮಾತನಾಡುವುದೇ ಶ್ರೇಷ್ಠತೆ ಎನ್ನಲಾಗುತ್ತಿತ್ತು; ಇಂದು ಇಂಗ್ಲಿಷ್ ಮಾತನಾಡುವುದೇ ಶ್ರೇಷ್ಠತೆ, ಘನತೆ ಎಂಬ ವಾತಾವರಣ ನಿರ್ಮಾಣವಾಗಿದೆ. ಕಾರಣ ಭಾಷೆಯು ಪ್ರಭುತ್ವದ ಮನ್ನಣೆಗೆ ಸಮಾಜದ ಶ್ರೇಣೀಕರಣ ಮತ್ತು ಬಹುಸಂಖ್ಯಾತರ ಆಧಾರದ ಮೇಲೆ ಶ್ರೇಷ್ಠತೆ ಮತ್ತು ಕನಿಷ್ಠತೆ ನಿರ್ಧಾರವಾಗುತ್ತದೆ. ಭಾರತದಲ್ಲಿ ಒಂದೊಂದು ದಿನಕ್ಕೆ ಒಂದೊಂದು ಭಾಷೆ ಸಾಯುತ್ತಿದೆ ಎಂದು ಭಾಷಾ ವಿಜ್ಞಾನಿಗಳು ಹೇಳುತ್ತಾರೆ. ಇದಕ್ಕೆ ಅವರು ಕೊಡುವ ಕಾರಣ ಭಾಷೆಯ ಅವಶ್ಯಕತೆ, ಅನಿವಾರ್ಯತೆ ಮತ್ತು ಭಾಷೆ ಮಾತನಾಡುವವರು ನಾಶವಾಗುತ್ತಿರುವುದು ಎಂದಿದ್ದಾರೆ. ಹಾಗೆಯೇ ಕರ್ನಾಟಕದಲ್ಲಿನ ಕನ್ನಡ ಭಾಷೆಯು ಇಂಗ್ಲಿಷ್, ತೆಲುಗು, ತಮಿಳು, ಮರಾಠಿ ಭಾಷೆಗಳ ಪ್ರಭಾವದಿಂದ ತನ್ನ ಸತ್ವವನ್ನು ಕಳೆದುಕೊಳ್ಳುತ್ತಿದೆ ಎಂದು ಇದಕ್ಕೆ ವಿರುದ್ಧವಾಗಿ ಹಲವಾರು ಚರ್ಚೆಗಳು ಇವೆ. ಅದು ಈ ಸಂದರ್ಭಕ್ಕೆ ಅಗತ್ಯವೆನಿಸುವುದಿಲ್ಲ. ಇಲ್ಲಿ ಚರ್ಚೆಯ ವಿಷಯವೆಂದರೆ ಕನ್ನಡ ಭಾಷೆಯು ನೂರಾರು ಜನ ಸಮುದಾಯದ ಒಕ್ಕೂಟ ಭಾಷೆ ಮತ್ತು ಅನಿವಾರ್ಯ ಭಾಷೆ.

ಆದರೆ ಕರ್ನಾಟಕದೊಳಗಿರುವ ಹಲವು ಭಾಷೆಗಳು ಒಂದೊಂದು ಸಮುದಾಯಗಳ ಜೀವನ ವೃತ್ತಾಂತದ ಭಾಷೆಯಾಗಿರುತ್ತದೆ. ಕನ್ನಡ ಉಳಿಸಿ, ಕನ್ನಡ ಭಾಷೆಯನ್ನು ರಕ್ಷಿಸುವ ಬರದಲ್ಲಿ ಸಮುದಾಯದವರು ತಮ್ಮ ಭಾಷೆಯನ್ನೇ ಕಳೆದುಕೊಳ್ಳುತ್ತಿದ್ದಾರೆ. ಇಲ್ಲಿ ಕೇವಲ ಭಾಷೆ ಮಾತ್ರ ನಾಶವಾಗದೇ ಒಂದು ಸಮುದಾಯವು ತಮ್ಮ ತಮ್ಮ ಪೂರ್ವಿಕರ ವೃತ್ತಾಂತ್ತಗಳನ್ನು ಕಳೆದು ಕೊಳ್ಳುತ್ತಿವೆ ಎಂಬುದನ್ನು ಸ್ಮರಿಸಬಹುದು. ಅಂತೆಯೇ ಇಂದು ಕನ್ನಡ ಭಾಷೆಯ ಪ್ರಭುತ್ವದ ಸಹಾಯದಿಂದ ಕನ್ನಡದ ಅವಶ್ಯಕತೆ ಅನಿವಾರ್ಯತೆಯನ್ನು ಸೃಷ್ಟಿಸಿ ನೂರಾರು ಭಾಷೆಗಳ ನಾಶಕ್ಕೆ ಕಾರಣವಾಗುತ್ತಿದೆ. ಅಂದಮಾತ್ರಕ್ಕೆ ಕನ್ನಡ ಭಾಷೆಯ ವಿರುದ್ಧ ಮಾತಾನಾಡುತ್ತಿಲ್ಲ; ಕರ್ನಾಟಕ ದೊಳಗಿನ ಹಲವಾರು ಕರ್ನಾಟಕದ ಭಾಷೆಗಳನ್ನು ರಕ್ಷಿಸುವ, ಪೋಷಿಸುವ ಕೆಲಸವಾಗಬೇಕು. ಕನ್ನಡ ಭಾಷೆಯ ಹಿಂದೆ ಹಲವಾರು ಕನ್ನಡ ಭಾಷೆಗಳು ಗೋಚರಿಸುತ್ತವೆ. ಮತ್ತು ಕನ್ನಡ ಭಾಷೆಯನ್ನು ಕೇವಲ ಪ್ರಭುತ್ವದ ಹಿನ್ನೆಲೆಯಿಂದಲೇ ನೋಡಲಾಗುತ್ತಿದೆ. ಆದರೆ ಹಲವಾರು ಕನ್ನಡ ಭಾಷೆಗಳನ್ನು ನುಂಗಿ ಕನ್ನಡ ಭಾಷೆಯಾಗಿದೆ ಎಂದು ಮನದಲ್ಲಿಟ್ಟುಕೊಳ್ಳಬೇಕಾಗಿದೆ.

ಮೇಲಿನ ಎಲ್ಲಾ ಚರ್ಚೆಗಳನ್ನು ಗಮನಿಸಿದಾಗ ಭಾಷೆ ಎಂಬುದು ಅತ್ಯಂತ ಪ್ರಮುಖ ವಾದುದ್ದು. ಡಾ. ಚಿನ್ನಸ್ವಾಮಿ ಸೋಸಲೆ ಅವರು ಹೇಳುವಂತೆ "ಇಂದು ದಲಿತ, ಶೋಷಿತ ಮತ್ತು ಆದಿವಾಸಿಗಳ ಚರಿತ್ರೆ ಬರೆಯಲು ಆಕರಗಳು ಯಾವುದು ಎಂದರೆ ದಲಿತ ಶೋಷಿತರ ಅಸಹಾಯಕತೆಯ ಮಾತುಗಳು ಹಾಗೂ ಗೌಡರು, ಉಳ್ಳವರ ದರ್ಪದ ಮಾತುಗಳೇ ಆಗಿವೆ.[೬೬] ಅಂದರೆ ಭಾಷೆಯು ಒಂದೊಂದು ಸಮುದಾಯದ ಚರಿತ್ರೆಯನ್ನು ಹೊತ್ತು ತಂದಿರುವ ಚಾರಿತ್ರಿಕ ದಾಖಲೆಗಳಾಗಿರುತ್ತವೆ ಎಂದು ಹೇಳಲಾಗಿದೆ.

ಭಾಷೆಯ ಒಳಗಡೆ ಒಂದು ಪ್ರದೇಶ, ತಿನ್ನುವ ಆಹಾರ, ಬಳಸುವ ಉಡುಗೆ, ತೊಡುಗೆ, ಅವರ ಆಚಾರ ವಿಚಾರ ಮತ್ತು ಜೀವನ ವೃತ್ತಾಂಶಗಳು ಅಡಗಿಕೊಂಡಿರುತ್ತವೆ. ಇದನ್ನು ಪ್ರಭುತ್ವದ ಭಾಷೆಯಲ್ಲಿ ಕಾಣಲು ಸಾಧ್ಯವಾಗುವುದಿಲ್ಲ. ಏಕೆಂದರೆ ಪ್ರಭುತ್ವದ ಭಾಷೆಯಲ್ಲಿ ಇಂತಹ ಹಲವಾರು ಸಮುದಾಯಗಳ ಭಾಷೆಗಳು ಲೀನವಾಗಿರುತ್ತವೆ. ಆದರೆ ಸಮುದಾಯ ದೊಳಗಿನ ಭಾಷೆಗಳಲ್ಲಿ ಆ ಸಮುದಾಯದ ಬದುಕು ಅಡಗಿಸಿಕೊಂಡಿರುತ್ತದೆ. ಈ ಭಾಷೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಆ ಸಮುದಾಯ ಚರಿತ್ರೆಯೇ ನಮಗೆ ಸಿಗುತ್ತದೆ.

ಸ್ಪೆನ್ಸರ್ ವೆಲ್ ಎನ್ನುವ ವಂಶಾವಳಿ ತಜ್ಞ ಆಫ್ರಿಕಾದ ನಮೀಬಿಯಾದಲ್ಲಿರುವ ಸ್ಯಾನ್ ಬುಸಮನ್ ಬುಡಕಟ್ಟಿನ ಭಾಷೆಯನ್ನು ಅತ್ಯಂತ ಗಂಭೀರವಾಗಿ ತೆಗೆದುಕೊಂಡು ಆ ಸಮುದಾಯದ ಭಾಷೆಯಲ್ಲಿನ ಕ್ಲೀ ಸೀ, ಹೂ, ಕೂ ಮುಂತಾದ ಉಚ್ಚಾರಣೆಗಳ ಆಧಾರದ ಮೇಲೆ ಅಧ್ಯಯನ ನಡೆಸಿ ಇದೇ ದಾಟಿಯ ಪದಗಳ ಉಚ್ಚಾರಣೆಯನ್ನು ಆಸ್ಟ್ರೇಲಿಯಾದ ಬುಡಕಟ್ಟಿನಲ್ಲೂ ಗುರುತಿಸಿ ದನು. ನಂತರ ಭಾರತದ ಕರ್ನಾಟಕ, ತಮಿಳುನಾಡುಗಳಲ್ಲೂ ಕಂಡು ಬರುವ ಬುಡಕಟ್ಟುಗಳು ಇದೇ ಭಾಷಿಕ ಏರಿಳಿತಗಳನ್ನು ಹೊಂದಿವೆ ಎಂದು ಹೇಳಿದ್ದಾನೆ.[೬೭]

ಒಂದು ಜನಾಂಗವು ಮತ್ತೊಂದಕ್ಕಿಂತ ಭಿನ್ನವಾಗಿಸಲು ಅವರು ನಿಂತ ನೆಲೆ ಮತ್ತು ಕೈಗೊಂಡ ಕಸುಬುಗಳು ಕಾರಣ. ಉಳಿದೆಲ್ಲದವುಗಳಿಗಿಂತಲೂ ಭಾಷೆ ಮುಖ್ಯವಾಗಿರುತ್ತದೆ ಎಂದಿದ್ದಾರೆ.[೬೮]

ಈ ಹಿನ್ನೆಲೆಯಲ್ಲಿ ಇರುಳಿಗರ ಭಾಷೆಯನ್ನು ಕುರಿತು ಅಧ್ಯಯನ ಕೈಗೊಂಡಾಗ ಈ ಭಾಷೆಯು ನಶಿಸುವ ಹಂತಕ್ಕೆ ಬಂದಿದೆ. ಈ ಭಾಷೆಯ ಬಳಕೆಯ ಜನರೇ ಇಲ್ಲವಾಗುತ್ತಿದ್ದಾರೆ. ಭಾರತದ ಮೂಲ ನಿವಾಸಿಗಳಲ್ಲಿ ಒಬ್ಬರಾದ ಇರುಳಿಗರ ಭಾಷೆಯು ಪ್ರಭುತ್ವದ ಭಾಷೆಯ ಹೊಡೆತಕ್ಕೆ ಹಾಗೂ ನಾಗರಿಕತೆಯ ಹೊಡೆತಕ್ಕೆ ಸಿಕ್ಕಿ ನಾಶವಾಗುತ್ತಿರುವುದು ಗೊತ್ತಾಗುತ್ತದೆ. ಇರುಳಿಗರ ಭಾಷೆಯ ಆಧಾರದ ಮೇಲೆ ಅವರ ಮೂಲವನ್ನು ಹುಡುಕಲು ಅನೇಕ ವಿದ್ವಾಂಸರುಗಳು ಪ್ರಯತ್ನಿಸಿದ್ದಾರೆ. ಇರುಳಿಗ ಭಾಷೆಯನ್ನು ಕುರಿತ ವಿದ್ವಾಂಸರ ಅಭಿಪ್ರಾಯಗಳು ಈ ಕೆಳಕಂಡಂತೆ ಇದೆ.

ಫ್ರಾನ್ಸಿಸ್ ಬುಕಾನನ್ ತನ್ನ ಕೃತಿ "A journey from madras through the countries of mysore, canara and malbar"ನಲ್ಲಿ ಇರುಳಿಗರ ಭಾಷೆ ಕುರಿತು ಹೀಗೆ ಹೇಳುತ್ತಾರೆ. "the language of the chensu is a dialect of the tamil, with occasionally of few Karnataka or telinga words intermixed; but their accent is so different from that of madras. That my servants did not at first understand what they said. Their original country. They say is the Annimalai forest below the ghats, which is confirmed by their dialect".[೬೯]

ಇರುಳಿಗರು ತಮಿಳು ಭಾಷೆಯಲ್ಲಿ ಮಾತನಾಡುತ್ತಿದ್ದಂತೆ ಕಂಡು ಬರುತ್ತಿತ್ತು. ಜೊತೆಗೆ ಸ್ವಲ್ಪ ಕನ್ನಡ ಮತ್ತು ತೆಲುಗು ಪದಗಳನ್ನು ಉಪಯೋಗಿಸುತ್ತಿದ್ದರು. ಆದರೆ ಇವರ ಭಾಷೆಯು ಮದ್ರಾಸ್ ಭಾಷೆಗಿಂತ ಭಿನ್ನವಾಗಿತ್ತು. ಮತ್ತು ಇವರ ಭಾಷೆಯು ಅರ್ಥ ಮಾಡಿಕೊಳ್ಳಲು ನನ್ನ ಸಹಾಯಕರಿಗೆ ಕಷ್ಟವಾಗಿತ್ತು. ಇರುಳಿಗರು ತಮ್ಮ ಸ್ವಂತ ಸ್ಥಳ ಅಣ್ಣಾಮಲೈನ ಅರಣ್ಯ ಪ್ರದೇಶದ ಕೆಳಗಡೆಯ ಘಟ್ಟ ಪ್ರದೇಶ ಎಂದು ಹೇಳುತ್ತಿದ್ದರಿಂದ ನಮಗೆ ಗೊತ್ತಾಯಿತು ಎಂದಿದ್ದಾರೆ.[೭೦]

ಬುಕಾನನ್ ಇರುಳಿಗರ ಭಾಷೆಯನ್ನು ಮೊದಲು ತಮಿಳು ಎಂದು ಕರೆದಿದ್ದರು ಮಂದ್ರಾಸ್ ಭಾಷೆಗಿಂತ ಭಿನ್ನವಾಗಿದೆ ಎನ್ನುತ್ತಾನೆ. ಹಾಗೂ ಈ ಭಾಷೆಯ ಒಳಗಡೆ ಕನ್ನಡ ಮತ್ತು ತೆಲುಗು ಭಾಷೆಗಳಿರುವುದನ್ನು ಗುರುತಿಸಿ ಹೇಳುತ್ತಾರೆ. ಈ ಹೇಳಿಕೆಯನ್ನು ಗಮನಿಸಿದಾಗ ಇರುಳಿಗರೊಂದು ಸ್ವತಂತ್ರ ಭಾಷೆಯನ್ನು ಹೊಂದಿದ್ದರು ಎಂದು ಹೇಳುವುದಕ್ಕೆ ಯಾವುದೇ ಸಂಶಯವಿಲ್ಲ. ಏಕೆಂದರೆ ವಿದ್ವಾಂಸರ ಅಭಿಪ್ರಾಯದಲ್ಲಿ ಇವರ ಭಾಷೆಯಲ್ಲಿ ಕನ್ನಡ, ತೆಲುಗು ಮತ್ತು ತಮಿಳು ಭಾಷೆಯ ಪ್ರಭಾವವಾಗಿದೆ ಎನ್ನುವುದನ್ನು ಸೂಚಿಸುತ್ತದೆ.

ಎಡ್ಗರ್ ಥರ್ಸ್ಟನ್ ಅವರು ತಮ್ಮ ಕೃತಿಯಾದ Castes And Tribes of Southern India (vol 2) The Language of the Irulas is a Corrupt of Tamil ಹಾಗೆಯೇ ಎಲ್. ಕೆ. ಅನಂತಕೃಷ್ಣ ಅಯ್ಯರ್ ಅವರು ತಮ್ಮ ಕೃತಿಯಾದ Mysore Tribe and Caste ಕೃತಿಯಲ್ಲಿ ಇರುಳಿಗರ ಭಾಷೆ ಕುರಿತು ಹೀಗೆ ಹೇಳುತ್ತಾರೆ. The Iruligas are a jungle Tribe, Speaking a mixture of Canarese and Tamil ಎನ್ನುತ್ತಾರೆ. ಅರಣ್ಯವಾಸಿ ಬುಡಕಟ್ಟು ಸಮುದಾಯ ಗಳಾದ್ದರಿಂದ ಕನ್ನಡ ಮತ್ತು ತಮಿಳು ಮಿಶ್ರಿತ ಭಾಷೆಯನ್ನು ಮಾತನಾಡುತ್ತಾರೆ ಎಂದಿದ್ದಾರೆ.[೭೧]

ಸೂರ್ಯನಾಥ ಕಾಮತ್ ಅವರು Bangalore Rural District Gazetter of India ಕೃತಿಯಲ್ಲಿ ಇರುಳಿಗ ಭಾಷೆಯನ್ನು ಕುರಿತು "They speak a dialect mixed with Kannada Talugu and Tamil words " ಎಂದಿದ್ದಾರೆ. ಕೆ ಕೆಂಪೇಗೌಡ ಅವರು ತಮ್ಮ ಕೃತಿಯಾದ "A descriptive analysis of Irula Dialect' ಎಂಬುವುದರಲ್ಲಿ ಇರುಳಿಗರ ಭಾಷೆ ಕುರಿತು ಹೀಗೆ ಹೇಳುತ್ತಾರೆ. The illigas or Iruligas found in Karnataka say their ancestors were the native of niligiri Hills, However, The author of this paper has made a descriptive study of the Language of illigas of Karnataka. He has also attempted to account the socio economic life of this people. He has listed a number of interesting features regarding the phonology and grammer of irula language. Irula language lexically resembles tamil. More Karnatak then tamil grammatically it resembles Tamil.He has accounted all the phonological and morphological features in detail in his doctoral dissertation.[೭೨]

ಕೆಂಪೇಗೌಡ ಕೆ. ಅವರು A Discriptive analysis of irula Dialect ಕೃತಿಯಲ್ಲಿ ವಿವರಿಸುತ್ತಾ ಇರುಳಿಗರು ಮಾತನಾಡುವ ಭಾಷೆಯಲ್ಲೂ ಹೆಚ್ಚಾಗಿ ಕನ್ನಡ, ತೆಲುಗು ಮತ್ತು ತಮಿಳಿನ ಪದಗಳ ಪ್ರಯೋಗಗಳು ಉಂಟಾಗುತ್ತವೆ. ಇರುಳ ಅಥವಾ ಇರುಳಿಗರು ಇಂದು ಕರ್ನಾಟಕದ ಭಾಗದಲ್ಲಿ ಕಂಡುಬಂದರೂ ಇವರ ಹಿಂದಿನ (ಸ್ವಂತ) ಸ್ಥಳ ನೀಲಗಿರಿ ತಪ್ಪಲಿನ ಬೆಟ್ಟದ ಸಾಲಾಗಿತ್ತು. ಇರುಳಿಗರ ಭಾಷೆಯಲ್ಲಿ ಕನ್ನಡಕ್ಕಿಂತ ಹೆಚ್ಚಾಗಿ ತಮಿಳು ಭಾಷೆಯ ಪ್ರಭಾವವಿದೆ ಎಂದು ಹೇಳುತ್ತಾರೆ.

ಎಂ. ಬೈರೇಗೌಡ ಅವರು ಇರುಳಿಗರ ಜಾನಪದ ಅಧ್ಯಯನ ಎಂಬ ಕೃತಿಯಲ್ಲಿ ಇರುಳಿಗರ ಭಾಷೆಯನ್ನು ಕುರಿತು ಹೀಗೆ ಹೇಳುತ್ತಾರೆ "ಉತ್ತರ ಆರ್ಕಾಟ್ ಮತ್ತು ದಕ್ಷಿಣ ಆರ್ಕಾಟ್ ಕಡೆಯಿಂದ ಪ್ರಸಾರವಾದ ಇರುಳಿಗರು ಧರ್ಮಪುರಿ ಮತ್ತು ಪೆರಿಯಾರ್ ಜಿಲ್ಲೆಯಲ್ಲಿ

ನೆಲೆ ನಿಂತು ಅಲ್ಲಿ ವ್ಯಾಪಕವಾಗಿ ಹರಡಿಕೊಂಡಿರುವ ಅವರು ಕನ್ನಡ ಭಾಷೆಯನ್ನು ಕಲಿತು ಅವರ ಮುಂದಿನ ಪೀಳಿಗೆ ಅದನ್ನು ಉಳಿಸುವ ಸಾಧ್ಯತೆಗಳು ಹೆಚ್ಚಾಗಿವೆ. ಧರ್ಮಪುರಿ ಜಿಲ್ಲೆಯಲ್ಲಿ ವಾಸಿಸುವ ಶೇ. ೩೫ರಷ್ಟು ಜನರು ಕನ್ನಡವನ್ನು ಮಾತನಾಡುತ್ತಾರೆ. ಉಳಿದಂತೆ ತೆಲುಗನ್ನು ಮಾತನಾಡುತ್ತಾರೆ. ಇರುಳಿಗರು ಧರ್ಮಪುರಿ ಜಿಲ್ಲೆಯವರೇ ಆಗಿದ್ದರೆ ಅವರೂ ಸಹ ಕನ್ನಡ ಭಾಷೆಯ ಜೊತೆಗೆ ತೆಲುಗನ್ನು ಮಾತನಾಡಬೇಕಿತ್ತು. ಆದರೆ ತಮ್ಮ ತಮ್ಮಲ್ಲೇ ತಮಿಳು ಮಿಶ್ರಿತ ಭಾಷೆಯನ್ನು ಮಾತನಾಡುತ್ತಾರೆ. ಉಳಿದಂತೆ ಅವರ ಎಲ್ಲಾ ಸಾಹಿತ್ಯವೂ ಕನ್ನಡದಲ್ಲೇ ಸಿಗುತ್ತದೆ ಎಂದಿದ್ದಾರೆ.[೭೩]

ಯಾವುದೇ ಗಡಿಭಾಗದಲ್ಲಿ ವಾಸಿಸುವ ಜನರು ಎರಡು ಭಾಷೆಗಳಲ್ಲೂ ಮಾತನಾಡುವುದು ಸಹಜ ಹಾಗೆಯೇ ತಮಿಳು ಭಾಷೆಯ ಹಲವಾರು ಪದಗಳು ಇರುಳಿಗರ ಆಡು ಮಾತಿನಲ್ಲಿ ಕಾಣಸಿಗಬಹುದು. ಆದರೆ ಯಾವುದೇ ಅಧಿಕೃತ ಸಾಹಿತ್ಯ ದಾಖಲೆಗಳು ತಮಿಳಿನಲ್ಲಿ ಸಿಗುವುದಿಲ್ಲ. ಅವರಾಡುವ ಮಾತುಗಳು ತಮಿಳು ಸಂವಾದಿಯಾಗಿದ್ದರಿಂದ ಇವರ ಭಾಷೆಯು ತಮಿಳಿನ ಉಪಭಾಷೆ ಎಂದು ಕರೆಯುವುದು ಎಷ್ಟು ಸರಿ.

ಬೈರೇಗೌಡ ಅವರು ಇರುಳಿಗರ ಭಾಷೆಯನ್ನು ಕುರಿತು ಹೇಳುವ ಸಂದರ್ಭದಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಇರುಳ ಭಾಷೆಯಲ್ಲಿ ತಮಿಳಿನ ಪದಗಳು ಹೆಚ್ಚಾಗಿವೆ ಹಾಗೂ ಅವರೇ ಹೇಳಿಕೊಳ್ಳುವ ಹಾಗೆ ಇವರು ತಮಿಳುನಾಡಿನವರೇ ಎಂಬ ನಿರ್ಧಾರಕ್ಕೆ ಬರಬಹುದು. ಜೊತೆಗೆ ಧರ್ಮಪುರಿ ಪೆರಿಯಾರ್ ಜಿಲ್ಲೆಯಲ್ಲಿನ ಬಹುಸಂಖ್ಯಾತರು ಕನ್ನಡ ಮಾತನಾಡುತ್ತಾರೆ ಎಂದಿದ್ದಾರೆ. ಜೊತೆಗೆ ಈ ಪ್ರದೇಶದಲ್ಲಿ ಕಂಡು ಬರುವ ಇರುಳಿಗರು ಅದೇ ಪ್ರದೇಶದ ಮೂಲ ನಿವಾಸಿಗಳಾಗಿದ್ದಾರೆ. ಇರುಳಿಗರ ಭಾಷೆಯ ಮೇಲೆ ತೆಲುಗಿನ ಪ್ರಭಾವವಾಗಿರಬೇಕು ಆದರೆ ಇವರ ಭಾಷೆಯ ಮೇಲೆ ಅಲ್ಲಿನ ತೆಲುಗಿನ ಪ್ರಭಾವ ಕಂಡು ಬರುವುದಿಲ್ಲ. ಹಾಗೂ ಇಲ್ಲಿ ವಾಸಿಸುವ ಇರುಳಿಗ ಸಮುದಾಯದ ಐತಿಹ್ಯ, ಪುರಾಣಗಳು ಕನ್ನಡದಲ್ಲಿ ಕಂಡು ಬರುತ್ತದೆ. ಎಂಬ ಹಲವಾರು ಪ್ರಶ್ನೆಗಳನ್ನು ಹುಟ್ಟು ಹಾಕುತ್ತಾರಾದರೂ ಕೊನೆಗೆ ಇರುಳಿಗ ಭಾಷೆ ಎನ್ನುವುದು ತಮಿಳಿನ ಉಪಭಾಷೆ ಎನ್ನುತ್ತಾರೆ. ಆದರೆ ಬೈರೇಗೌಡ ಅವರೇ ಮೇಲೆ ಹೇಳಿದಂತೆ ಅರಸರ ಕಾಲದಲ್ಲಿ ಇವತ್ತಿನ ತಮಿಳುನಾಡಿನ ಅನೇಕ ಭಾಗಗಳು ಕರ್ನಾಟಕಕ್ಕೆ ಸೇರಿದ್ದವು ಮತ್ತು ಆ ಪ್ರದೇಶಗಳೆಲ್ಲೆಲ್ಲಾ ಕನ್ನಡ ಭಾಷೆಯೇ ಬಳಕೆಯಾಗುತ್ತಿತ್ತು ಎನ್ನುವುದಾದರೆ ಇರುಳಿಗರು ತಮಿಳುನಾಡಿನವರು ಅವರ ಭಾಷೆ ತಮಿಳಿನ ಉಪಭಾಷೆ ಎಂಬುದನ್ನು ಹೇಗೆ ಒಪ್ಪಿಕೊಳ್ಳುವುದು. ಆದ್ದರಿಂದ ಪ್ರಸ್ತುತ ಸಂದರ್ಭದಲ್ಲಿ ವಿಶ್ಲೇಷಿಸುವಾಗ ಬೈರೇಗೌಡ ಅವರು ಮೊದಲೇ ಇರುಳಿಗರು ಮೂಲ ತಮಿಳುನಾಡಿಂದ ಬಂದವರು ಎಂದು ಪೂರ್ವ ಗ್ರಹಿಕೆಯ ಆಧಾರದ ಮೇಲೆ ಇರುಳಿಗ ಭಾಷೆಯ ಅಧ್ಯಯನ ನಡೆಸಿದ್ದರಿಂದ ಅವರಿಗೆ ಇರುಳು ಭಾಷೆಯು ತಮಿಳಿನ ಉಪಭಾಷೆಯಾಗಿ ಕಂಡುಬಂದಿರುವುದರಲ್ಲಿ ತಪ್ಪಿಲ್ಲ.

ಏಕೆಂದರೆ ಇರುಳಿಗರು ತಮಿಳುನಾಡಿನ ಮೂಲದವರೇ ಆಗಿದ್ದರೇ ಅವರ ಐತಿಹ್ಯ ಅಥವಾ ಪುರಾಣಗಳು ತಮಿಳಿನಲ್ಲೇ ಸಿಗಬೇಕಾಗಿತ್ತು. ಆದ್ದರಿಂದ ಇರುಳಿಗರ ಭಾಷೆಯನ್ನು ತಮಿಳು, ತೆಲುಗು, ಕನ್ನಡ, ಮಲೆಯಾಳಿ ಭಾಷೆಯ ಪ್ರಭಾವದಿಂದ ನೋಡುವ ಬದಲು ಸ್ವತಂತ್ರ ಭಾಷೆ ಎಂದು ನೋಡಬೇಕಾದ ಅಗತ್ಯತೆ ಇದೆ.

ಸಿದ್ದಗಂಗಯ್ಯ ಕಂಬಾಳ್ ತಮ್ಮ ಕೃತಿ 'ಇಲ್ಲಿಗರ ಸಂಸ್ಕೃತಿ'ಯಲ್ಲಿ "ಕಾಡುಪೂಜಾರಿ ಅಥವಾ ಇಲ್ಲಿಗರು ಕನ್ನಡದ ಉಪ ಭಾಷೆಯಂತೆಯೇ ಗೋಚರವಾಗುವ ತಮಿಳಿನ ಸಂವಾದಿ ಶಬ್ದಗಳನ್ನು ಮಾತನಾಡುತ್ತಾರೆ. ಈ ಭಾಷೆಯ ಬಗ್ಗೆ ತಮ್ಮದೇ ಆದ ಒಂದು ದಂತಕತೆಯನ್ನು ಹೇಳುತ್ತಾರೆ. "ಎಲ್ಲಾ ಜಾತೀಯವ್ರೂ ದ್ಯಾವರ ಹತ್ರ ಹೋಗಿ ನಮಗೆ ಆಡಿಕೊಳ್ಳೋದಕ್ಕೆ ಮಾತುಕೊಡುವಂತೆ ಕೇಳಿದ್ರಂತೆ. ದ್ಯಾವರು ಎಲ್ಲಾ ಜಾತೇರಿಗೂ ಒಂದೊಂದು ಮಾತು ಆಡಿ ಕೊಳ್ಳಿ ಅಂತ ಹೇಳಿಕೊಟ್ಟ. ನಮ್ಮ ಜಾತೇನು ಕಾಡುಪೂಜಾರಿ ಇಲಿ ಹಿಡಕೊಂಡೋ, ಗೆಣಸು ಹುಡುಕುತಾನೋ, ಜೇನು ಕೀಳತಾ ಇದ್ದ ಅಂತ ಕಾಣುತ್ತದೆ. ದೇವರತ್ತಾಕೆ ತಡವಾಗಿ ಹ್ವಾದ, ನಂಗೂ ಒಂದು ಮಾತ್ನಕೊಡು ಅಂತ ಸ್ವಾಮಿನ್ನ ಕೇಳ್ದ. ದ್ಯಾವರು ಹೇಳ್ತು ಎಲ್ಲಾ ಭಾಸೀನೂ ಮುಗದೋದೋ ಇದ್ದಬ್ದ ಮಾತ್ನೆಲ್ಲ ಬಂದು ಬಂದು ಕೇಳ್ದೋರಿಗೆ ಕೊಟ್ಟಾಯ್ತು. ನೀನು ಎಲ್ಲಾ ಜಾತೇರ ಬಾಸೆನಿಂದಾನೂ ಒಂದೊಂದು ನುಡಿ ತಕ್ಕಂಡು ನೀನು ಆಡಿಕೋ ಹೋಗು ಅಂದನಂತೆ. ಅವತ್ನಿಂದ ನಾವು ಎಲ್ಲಾ ಜಾತೇರಿಂದ ಒಂದೊಂದು ನುಡಿ ತಕ್ಕಂಡು ಆಡಿಕೊಳ್ಳು ತ್ತಿದ್ದೀವಿ" ಎನ್ನುತ್ತಾರೆ[೭೪] ಎಂಬ ದಂತಕತೆಯನ್ನು ಜ್ಞಾಪಿಸುತ್ತಾ ಮನುಷ್ಯ ಪ್ರಾಥಮಿಕವಾಗಿ ಕಲಿಯ ಬೇಕಾಗಿರುವ ಕೆಲವು ಪ್ರಮುಖ ಶಬ್ದಗಳೆಂದರೆ ಅಂಗವಾಚಕಗಳು. ಇರುಳಿಗರ (ಇಲ್ಲಿಗರ) ಭಾಷೆಯಲ್ಲಿನ ಅಂಗವಾಚಕಗಳು ಕನ್ನಡದ ಸಂವಾದಿಯ ಶಬ್ದಗಳೇ ಆಗಿದ್ದರಿಂದ ಇರುಳಿಗ (ಇಲ್ಲಿಗರ)ರ ಭಾಷೆಯು ಕನ್ನಡದ ಉಪಭಾಷೆಯಾಗಿದ್ದು ಇದೊಂದು ಮೂಲ ದ್ರಾವಿಡ ಹಳಮೆಯನ್ನು ಉಳಿಸಿಕೊಂಡು ಬಂದಿರುವ ಭಾಷೆಯಾಗಿದೆ ಎನ್ನುತ್ತಾರೆ.

ಸಿದ್ದಗಂಗಯ್ಯ ಕಂಬಾಳ್ ಅವರು ಇರುಳಿಗ (ಇಲ್ಲಿಗರ) ಭಾಷೆಯನ್ನು ದ್ರಾವಿಡಭಾಷಾವರ್ಗದ ಗುಂಪಿನಿಂದ ನೋಡಿದ್ದರೂ ಕನ್ನಡದ ಉಪಭಾಷೆ ಎಂದು ಅಭಿಪ್ರಾಯಿಸುತ್ತಾರೆ. ಹಾಗೆಯೇ ತಮಿಳಿನ ಸಂವಾದಿ ಭಾಷೆಯೆಂಬುವುದನ್ನು ಸೂಚಿಸುತ್ತಾರೆ. ಹೀಗೆ ಮೇಲಿನ ಎಲ್ಲಾ ವಿದ್ವಾಂಸರು ಇರುಳಿಗ ಭಾಷೆಯ ಬಗ್ಗೆ ಒಂದು ನಿಖರ ನಿರ್ಧಾರಕ್ಕೆ ಬರದೇ ದ್ವಂದ್ವ ನಿಲುವುಗಳನ್ನು ತಾಳುತ್ತಾರೆ. ಕೇವಲ ಇರುಳಿಗ ಭಾಷೆಯೊಳಗಿನ ತಮಿಳು ಪದಗಳು, ಕನ್ನಡ ಪದಗಳು, ತೆಲುಗು ಪದಗಳ ಆಧಾರದ ಮೇಲೆ ಇದು ಕನ್ನಡದ ಉಪಭಾಷೆ, ಇದು ತಮಿಳಿನ ಉಪಭಾಷೆ, ತೆಲುಗಿನ ಉಪಭಾಷೆ ಎಂದು ಹೇಳಿದ್ದಾರೆ ಹೊರತು ಇರುಳಿಗ ಭಾಷೆಯನ್ನು ಒಂದು ಸ್ವತಂತ್ರ ಭಾಷೆಯಾಕಾಗಿರಬಾರದು ಎಂಬ ದೃಷ್ಟಿಕೋನದಿಂದ ನೋಡಿಲ್ಲ. ಆದರೆ

ಕೆಳಗಿನ ಭಾಷಾವಿಜ್ಞಾನಿಗಳು ಇರುಳ ಭಾಷೆಯ ಬಗ್ಗೆ ಒಂದಷ್ಟು ದೃಢನಿರ್ಧಾರಕ್ಕೆ ಬರುವುದನ್ನು ಈ ಕೆಳಕಂಡಂತೆ ಗಮನಿಸಬಹುದಾಗಿದೆ.

ಕಮಿಲ್ ಜ್ವೆಲೆಬಿಲ್ ಅವರು The irula Language (1973) ಎಂಬ ಕೃತಿಯಲ್ಲಿ ಇರುಳ ಎಂಬುದು ಒಂದು ಸ್ವತಂತ್ರ ದ್ರಾವಿಡಭಾಷೆ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ನೀಲಗಿರಿ ಅರಣ್ಯ ನಿಭಿಡ ಕಣಿವೆಗಳಲ್ಲಿ ಇರುಳ ಭಾಷಾ ಪ್ರದೇಶಕ್ಕೆ ಒಂದು ಕಡೆ ತೋದ, ಕೋತ, ಬಡಗ ಭಾಷೆಗಳವರು, ಇನ್ನೊಂದು ಕಡೆ ಕನ್ನಡ, ತಮಿಳು, ಮಲೆಯಾಳಂ ಭಾಷೆಗಳವರೂ ಹತ್ತಿರವಾಗಿದ್ದಾರೆ. ನೀಲಗಿರಿ ಪ್ರದೇಶಕ್ಕೆ ಇರುಳರು ಬರುವ ಮೊದಲೇ ತೋದವರು, ಕೋತರು ಬಂದಿರಬಹುದು. ಇರುಳ ಭಾಷೆ ಪೂರ್ವ ತಮಿಳು ಭಾಷೆಯಿಂದ, ತೋದರ ಭಾಷೆಯಾದ ಮೇಲೆ ಬೇರೆಯಾಗಿರಬಹುದು.[೨೫]

ಇರುಳ ಭಾಷೆಯ ಸ್ವರ ವ್ಯವಸ್ಥೆಯಲ್ಲಿ ಕಂಡುಬರುವ ವೈಶಿಷ್ಟ್ಯವನ್ನು. ಮಧ್ಯಸ್ವರ ಪ್ರದೇಶದಲ್ಲಿ ಓಷ್ಠಿಕೃತ, ನಿರೋಷ್ಠಿಕೃತ ವೈದೃಶ್ಯವಿದೆ. ಈ ಲಕ್ಷಣ ಕೊಡಗು, ಕೋತ, ತೋದ ಭಾಷೆಗಳಲ್ಲಿದೆ. ಸ್ವಲ್ಪಮಟ್ಟಿಗೆ ಘೋಷ್ ಅಘೋಷ್ ಸ್ಪರ್ಶಗಳಲ್ಲಿ ವೈದೃಶ್ಯವಿದೆ. ಈ ವ್ಯತ್ಯಾಸ ಇರುಳ ಭಾಷೆಯನ್ನು ತಮಿಳಿನಿಂದ ಪ್ರತ್ಯೇಕಿಸುತ್ತದೆ. ವರ್ತ್ಸ್ಯ ಅಘೋಷ–ಘೋಷ ಸ್ಪರ್ಶಗಳು ಇರುಳ ಭಾಷೆಯಲ್ಲಿ ಧ್ವನಿಮಾಗಳಾಗಿವೆ. ಮಲೆಯಾಳಂನಲ್ಲಿ ಸಹ ಸ್ವನಗಳಾಗಿವೆ. ಇರುಳದಲ್ಲಿ ತಾಲವ್ಯ, ಅನುನಾಸಿಕವಾಗಲೀ, ಕಂಠ್ಯ ಅನುನಾಸಿಕವಾಗಲೀ ಮಲೆಯಾಳಂನಂತೆ ಸ್ವತಂತ್ರ್ಯ ಧ್ವನಿಮಾಗಳಾಗದೆ ಸಹಸ್ವಗಳಷ್ಟೆ ಆಗಿದೆ. (ಕನ್ನಡದಂತೆ) ಮೂಲ ದ್ರಾವಿಡ ಶಬ್ದಾಂತ್ಯ 'ಆಯ್' ಇರುಳದಲ್ಲಿ 'ಎ' (ಕನ್ನಡದಂತೆ) ಆಗಿದೆ. ಇದು ಕನ್ನಡವಲ್ಲದೆ ಕೊಡಗು, ತುಳು ಭಾಷೆಯಲ್ಲೂ ಘಟಿಸುವ ವ್ಯತ್ಯಾಸ ತಮಿಳಿನಲ್ಲಿ ಹೀಗಿಲ್ಲ. ಅಲ್ಲಿ ಆಯ್ ಉಳಿದಿದೆ. ಇರುಳ ಭಾಷೆ ಕನ್ನಡದಿಂದ ಸಾಕಷ್ಟು ಪ್ರಭಾವಿತವಾಗಿದೆ.

ಕನ್ನಡ	ಇರುಳ
ನೆತ್ತರು–ರಕ್ತ	ಲತ್ತ
ಪಿಡಿ–ಹಿಡಿ' to catch	ಪಿಡಿ
ಭಾವ (ಸೋದರಿ ಗಂಡ)	ಬಾವ
ಬಾವಿ	ಬಾವಿ
ಬುರುಡೆ (ಈಜು, ತಲೆ)	ಬುರುಡೆ
ಕಿವಿ	ಚೆವಿ[೨೬]

ಡಾ. ಹಂಪ ನಾಗರಾಜಯ್ಯ ಅವರು ಸೂಚಿಸುವಂತೆ ಇರುಳ ಭಾಷೆಯು ತಮಿಳು ಭಾಷೆಗಿಂತ ಭಿನ್ನವಾಗಿದೆ. ಆದರೆ ಇಲ್ಲಿಯವರೆಗಿನ ಎಲ್ಲಾ ಅಧ್ಯಯನಗಳಲ್ಲಿ ಇರುಳ ಭಾಷೆಯು

ಭಾಗಶಃ ತಮಿಳು ಭಾಷೆಯೇ ಆಗಿದೆ ಎಂದು ಹೇಳಿದ್ದಾರೆ. ಆದರೆ ಹಂಪ ನಾಗರಾಜಯ್ಯ ಅವರು ಇದೊಂದು ಸ್ವತಂತ್ರ ದ್ರಾವಿಡ ಭಾಷೆ ಎಂದಿದ್ದಾರೆ. ಇರುಳ ಭಾಷೆಯಲ್ಲಿ ಕನ್ನಡ ಭಾಷೆಯ ಪ್ರಭಾವ ಹೆಚ್ಚಾಗಿದ್ದರೂ ಇದೊಂದು ಸ್ವತಂತ್ರಭಾಷೆಯೇ ಆಗಿದೆ ಎನ್ನುತ್ತಾರೆ. ಹಿಂದೆ ಚರ್ಚಿಸಿದಂತೆ ಇರುಳಿಗ ಭಾಷೆಯು ಕನ್ನಡ ತಮಿಳು ಭಾಷೆಗಿಂತ ಪ್ರಾಚೀನವಾದದ್ದು ಎಂಬುದಕ್ಕೆ ಪೂರಕವಾಗಿ ನಿಲ್ಲುತ್ತದೆ. ಇರುಳಿಗ ಭಾಷೆಯ ಮೇಲೆ ಕನ್ನಡ ತಮಿಳು ಭಾಷೆಗಳ ಪ್ರಭಾವ ಉಂಟಾಗಿದ್ದರೂ ಪಾರಂಪರಿಕ ಭಾಷೆಯನ್ನು ಇರುಳಿಗರು ಬಿಟ್ಟುಕೊಡದೇ ಇರುವುದನ್ನು ಕಾಣಬಹುದಾಗಿದೆ. ಆದ್ದರಿಂದಲೇ ಹಂಪನಾ ಅವರು ಹೇಳುವ ಇರುಳ ಭಾಷೆ ತಮಿಳಿನ ಪೂರ್ವ ಭಾಷೆ ಎಂಬ ಮಾತು ಅತ್ಯಂತ ಮಹತ್ವದ್ದು.

ಹಾಗೆಯೇ ಇರುಳಿಗರ ಭಾಷೆಯನ್ನು ಕುರಿತು ಕೆ. ಕೆಂಪೆಗೌಡ ಅವರು ತಮ್ಮ ಕೃತಿ "ದ್ರಾವಿಡ ಭಾಷಾ ವಿಜ್ಞಾನ" ದಲ್ಲಿ ಹೀಗೆ ಹೇಳಿದ್ದಾರೆ. "ದಕ್ಷಿಣ ದ್ರಾವಿಡ ಭಾಷೆಗಳ ಪಟ್ಟಿಯಲ್ಲಿ ತಮಿಳು, ಮಲೆಯಾಳಂ, ಕೋತ, ತೋದ, ಇರುಳ, ಕನ್ನಡ, ಬಡಗ, ಕೊಡಗು, ಹವ್ಯಕ, ಸೋಲಿಗ, ಮನ್ನೆ, ಸವಾರೆಂಬ, ಜುರಾಯ್, ಗೊಲ್ಲರಿದೊಂಬ ಮತ್ತು ವಡ್ಡ ಮುಂತಾದ ಭಾಷೆಗಳಿವೆ ಎಂದಿದ್ದಾರೆ. ಈ ಪಟ್ಟಿಯಲ್ಲಿ ಐದನೇ ಸ್ಥಾನವನ್ನು 'ಇರುಳ' ಭಾಷೆಗೆ ಕೊಟ್ಟು ಕನ್ನಡ ಮತ್ತು ತಮಿಳು ಭಾಷೆಯನ್ನು ಪ್ರತ್ಯೇಕ ಭಾಷೆಯಾಗಿ ಕೊಟ್ಟಿರುವುದು ಚರ್ಚೆಗೆ ಪೂರಕವಾದದ್ದು. ಈ ಪಟ್ಟಿಯ ಪ್ರಕಾರ ಕೆ.ಕೆಂಪೇಗೌಡ ಅವರು ಇರುಳ ಭಾಷೆಯು ದ್ರಾವಿಡ ಸ್ವತಂತ್ರಭಾಷೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಆದರೆ ನಂತರ ತಮಿಳು ಮಲೆಯಾಳಂ ಪಟ್ಟಿಯೊಳಗಡೆ ಮತ್ತೆ ಇರುಳಿಗ ಭಾಷೆಯನ್ನು ಸೇರಿಸಿ ದ್ವಂದ್ವ ನಿಲುವನ್ನು ತಾಳುತ್ತಾರೆ.

ಕೆ. ಕೆಂಪೇಗೌಡ ಅವರು ಇರುಳಿಗ ಭಾಷೆಯ ಬಗ್ಗೆ ವಿವರಿಸುತ್ತಾ ಹೀಗೆ ಹೇಳುತ್ತಾರೆ. ಇರುಳ ಭಾಷೆ ತಮಿಳು ಭಾಷೆಯನ್ನು ಹೋಲುತ್ತದೆ. ಇದರಲ್ಲೂ ಕನ್ನಡ ಭಾಷೆಗೆ ಸಂಬಂಧಿಸಿದ ಅನೇಕ ಅಂಶಗಳು ದೊರೆಯುತ್ತವೆ. ಇರುಳ ಭಾಷೆ ತಮಿಳು ಭಾಷೆಯ ಉಪಭಾಷೆ ಎಂದು ಭಾವಿಸಿದರೆ, ಮತ್ತೆ ಕೆಲವರು ತಮಿಳು ಮಲೆಯಾಳಂ ಮತ್ತು ಕನ್ನಡಗಳ ಮಿಶ್ರಣವಿರಬಹುದೆಂದು ಭಾವಿಸಿದ್ದಾರೆ. ಮತ್ತೆ ಕೆಲವರು ಇರುಳ ತಮಿಳು ಭಾಷೆಯಾಗಿದೆ ಎನ್ನುತ್ತಾರೆ. ಕಾರಣ ಇದರಲ್ಲಿ ಹಳೆಯ ತಮಿಳು, ತೆಲುಗು ಮತ್ತು ಕನ್ನಡ ಭಾಷೆಗಳ ಅನೇಕ ಶಬ್ದ ಇವೆ. ಇದರ ಜೊತೆಗೆ ತೋದ ಕೋತ, ಕುರುಬ, ಪಣಿಯ, ಬಡಗ ಮತ್ತು ಕಸಬ ಭಾಷೆಗಳ ಪ್ರಭಾವವು ಇದೆ ಎನ್ನುತ್ತಾರೆ.[೭೭]

ಕೆ. ಕೆಂಪೇಗೌಡರು ಇರುಳ ಭಾಷೆಯನ್ನು ಯಾವುದೇ ಭಾಷೆಯ ಜೊತೆ ಸೇರಿಸದೆ ಸ್ವತಂತ್ರಭಾಷೆಯಾಗಿ ನೋಡಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಮೇಲಿನ ವಿವರಣೆಯಲ್ಲಿ ಹಂಪನಾ ಅವರು ಗುರುತಿಸಿದಂತೆ ಪೂರ್ವ ಅಥವಾ ಹಳೆಯ ಭಾಷೆಯ ತಮಿಳು ಹೋಲಿಕೆ

ಅಥವಾ ಸಮೀಪ ಪದದಂತೆ ಇರುಳಿಗ ಭಾಷೆ ಕಂಡು ಬರುತ್ತದೆ ಎಂದು ಹೇಳಿದ್ದಾರೆ. ಹಂಪನಾ ಮತ್ತು ಕೆ. ಕೆಂಪೇಗೌಡರು ಭಾಷಾಶಾಸ್ತ್ರ ಹಿನ್ನೆಲೆಯಲ್ಲಿ ಇರುಳ ಭಾಷೆಯ ಮೂಲವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಇದೊಂದು ಸ್ವತಂತ್ರ ಭಾಷೆ ಎಂದು ಒಪ್ಪಿಕೊಳ್ಳುತ್ತಾರೆ. ಈ ಮೇಲಿನ ಎಲ್ಲಾ ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಿದಾಗ ಹಂಪನಾ ಅವರು ಇರುಳಿಗ ಭಾಷೆಯನ್ನು ಒಂದು ಸ್ವತಂತ್ರ ಭಾಷೆ ಎಂಬ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ನಾವು ಮೂಲದಲ್ಲಿ ಚರ್ಚಿಸಿದಂತೆ ಇರುಳಿಗರು ವಾಸಮಾಡುವ ಪ್ರದೇಶ ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳ ಗಡಿಭಾಗವೇ ಆಗಿದ್ದರಿಂದ ಇರುಳಿಗರ ಭಾಷೆಯ ಮೇಲೆ ಈ ಪ್ರದೇಶಗಳ ಪ್ರಭಾವವಾಗಿರುವುದನ್ನು ಅಲ್ಲಗಳೆಯಲಾಗದು. ಏಕೆಂದರೆ ಒಂದು ಪ್ರದೇಶದಲ್ಲಿ ವಾಸಿಸುತ್ತಿರುವ ಹಲವಾರು ಸಮುದಾಯ ಭಾಷೆ ಸಂಸ್ಕೃತಿ ಮತ್ತು ಆಚಾರ ವಿಚಾರಗಳಲ್ಲಿ ಉಳ್ಳವರು, ಬಹುಸಂಖ್ಯಾತರು ಮತ್ತು ಸಾಮಾಜಿಕ ಶ್ರೇಣೀಕರಣದಲ್ಲಿ ಮೇಲ್ಪಂಕ್ತಿಯಲ್ಲಿ ಗುರುತಿಸಿಕೊಳ್ಳುವರದ್ದೇ ಪ್ರಮುಖವಾಗಿ, ಉಳಿದವು ಕನಿಷ್ಠವಾಗಿ ಬಿಡುತ್ತವೆ. ಹೇಳಿಕೇಳಿ ಇರುಳಿಗರು ಹತ್ತರಿಂದ ಹದಿನೈದು ಸಾವಿರ ಜನಸಂಖ್ಯೆ ಹೊಂದಿರುವ ಅಲ್ಪಸಂಖ್ಯಾತ ಬುಡಕಟ್ಟು ಸಮುದಾಯ. ಇವತ್ತೇ ಈ ಪ್ರಮಾಣದ ಜನಸಂಖ್ಯೆಯನ್ನು ಹೊಂದಿರುವ ಈ ಬುಡಕಟ್ಟು ಹಿಂದೆ ಹೇಗಿದ್ದಿರಬೇಕೆಂಬುದನ್ನು ಊಹಿಸಿಕೊಳ್ಳಬಹುದು. ಕಾಡು ಮೇಡುಗಳಲ್ಲಿ ಗೆಡ್ಡೆಗೆಣಸು ಹುಡುಕಿ ತೆಗೆದು ಆಹಾರವಾಗಿ ಬಳಸಿಕೊಂಡು ಪ್ರಭುತ್ವದ ದನಕರುಗಳಿಗೆ ಆನೆ ಒಂಟೆಗಳಿಗೆ ಬೆಟ್ಟಗುಡ್ಡ ಸುತ್ತಾಡಿ ಹುಲ್ಲುಕೊಯ್ದು, ಪ್ರಭುತ್ವದ ಮೋಜು ಮಸ್ತಿಗಳಿಗೆ ಎಲೆಮರೆಯ ಕಾಯಿಯಂತೆ ದುಡಿದು ಅಂಚಿನಲ್ಲಿ ಉಳಿದ ಇವರ ಭಾಷೆ ಪ್ರಮುಖ ಭಾಷೆಯಾಗುವುದಾದರೂ ಹೇಗೆ?

ಏಕೆಂದರೆ ಚರಿತ್ರೆಯಲ್ಲಿ ನಾವು ಗಮನಿಸಿದಂತೆ ಪ್ರಭುತ್ವ ಜೊತೆ ಗುದ್ದಾಡಿ ಅಥವಾ ಅವರೊಂದಿಗೆ ಗುರುತಿಸಿಕೊಂಡವರು ಮಾತ್ರ ಚರಿತ್ರೆಯಲ್ಲಿ ಸ್ಥಾನ ಪಡೆದುಕೊಂಡರು. ಆದರೆ ಪ್ರಭುತ್ವ ಕಣ್ಣಿಗೆ ಬೀಳದೆ ಕಾಡು ಮೇಡು ಗುಹೆಗಳಲ್ಲಿ ವಾಸಿಸುತ್ತಿದ್ದ ಇವರ ಚರಿತ್ರೆಯಾಗಲಿ, ಭಾಷೆಯಾಗಲಿ ಚರಿತ್ರೆಯ ಕೇಂದ್ರಕ್ಕೆ ಬರಲು ಸಾಧ್ಯವಾಗಿಲ್ಲ?

ಇರುಳಿಗರು ಗಡಿ ಪ್ರದೇಶಗಳಲ್ಲಿ ವಾಸಿಸುತ್ತಿರುವುದರಿಂದ ಇರುಳಿಗ ಭಾಷೆಯ ಮೇಲೆ ಗಡಿ ಪ್ರದೇಶಗಳ ಪ್ರಭಾವ ಉಂಟಾಗಿದೆ. ತಮಿಳು ನಾಡಿನಲ್ಲಿ ವಾಸಿಸುವ ಇರುಳಿಗ ಭಾಷೆಯಲ್ಲಿ ತಮಿಳು ಭಾಷೆಯ ಪದಗಳು ಹೆಚ್ಚಾಗಿದ್ದರೆ, ಕರ್ನಾಟಕದಲ್ಲಿ ವಾಸಿಸುವ ಇರುಳಿಗರ ಭಾಷೆಯ ಮೇಲೆ ಕನ್ನಡದ ಪ್ರಭಾವ ಹೆಚ್ಚಾಗಿರುತ್ತದೆ. ಆದರೆ ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವಾಸಿಸುವ ಇರುಳಿಗರಲ್ಲಿನ ಐತಿಹ್ಯಗಳು ಕನ್ನಡದಲ್ಲಿ ಸಿಗುವಂತೆ ಧರ್ಮಪುರಿ, ಸೇಲಂ, ಪೆರಿಯಾರ್ ಜಿಲ್ಲೆ, ಕೃಷ್ಣಗಿರಿ ಜಿಲ್ಲೆಯಲ್ಲಿ ವಾಸಮಾಡುವ ಇರುಳಿಗರಲ್ಲಿನ ಐತಿಹ್ಯ ಮತ್ತು ಪುರಾಣಗಳು ಕನ್ನಡದಲ್ಲಿ ಸಿಗುತ್ತವೆ.

ಒಟ್ಟಾರೆಯಾಗಿ ಇರುಳಿಗರು ರಾಮನಗರ ಜಿಲ್ಲೆಯ ಮಾಗಡಿ ಪ್ರದೇಶದ ಮೂಲ ನಿವಾಸಿಗಳು ಎಂಬುದು ಕಂಡುಬರುತ್ತದೆ. ಬರಗಾಲ, ಕ್ಷಾಮ ಅಥವಾ ಆಹಾರ, ಉದ್ಯೋಗಗಳ ಉದ್ದೇಶದಿಂದ ಬೇರೆ ಬೇರೆ ಕಡೆ ಹೋಗಿ ನೆಲೆಸಿದ್ದಾರೆ. ಆದ್ದರಿಂದ ಆ ಪ್ರಾದೇಶಿಕತೆಗೆ ಅನುಗುಣವಾಗಿ ಕುಲಗಳು, ಬೆಡಗುಗಳು ಬೇರೆಯಾಗಿವೆ. ಅಂದಮಾತ್ರಕ್ಕೆ ಇವರ್‍ಯಾರು ಇರುಳಿಗರೆಂದಲ್ಲ. ಪ್ರಾದೇಶಿಕತೆಗೆ ತಕ್ಕಂತೆ ಕುಲಗಳು, ಬೆಡಗುಗಳು ಬಂದಿರುವ ಸಾಧ್ಯತೆಗಳಿವೆ. ಇರುಳಿಗ, ಇರುಳ್, ಇರುಳ ಎಲ್ಲವೂ ಒಂದೇ ಆಗಿದ್ದು, ಪ್ರಾದೇಶಿಕತೆಗೆ ತಕ್ಕಂತೆ ಬೇರೆ ಬೇರೆ ಹೆಸರನ್ನು ಪಡೆದುಕೊಂಡಿರುವ ಸಾಧ್ಯತೆಗಳಿವೆ. ಇವರ ಭಾಷೆ ಒಂದು ಸ್ವತಂತ್ರ ಭಾಷೆಯಾಗಿದ್ದು ಕನ್ನಡ, ತಮಿಳು, ಮಲೆಯಾಳಂ ಮತ್ತು ತೆಲುಗು ಭಾಷೆಗಳಿಗಿಂತಲೂ ಪ್ರಾಚೀನ ಭಾಷೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಇಲ್ಲಿಯವರೆಗೂ ಅಧ್ಯಯನ ಕೈಗೊಂಡಿರುವ ಅಧ್ಯಯನಕಾರರು ತಮ್ಮ ಪೂರ್ವ ಕಲ್ಪಿತ ಮನೋಧೋರಣೆಯಿಂದ ಸಮುದಾಯದ ಮೇಲೆ ಪ್ರಭಾವ ಬೀರಿ ತಮ್ಮ ಕಲ್ಪನೆಗೆ ಉತ್ತರವನ್ನು ಸಮುದಾಯದಲ್ಲಿ ಕಂಡುಕೊಂಡಿದ್ದಾರೆ ಎಂಬ ಅಭಿಪ್ರಾಯಕ್ಕೆ ಬರಬಹುದು.

ಈ ಹಿನ್ನೆಲೆಯಲ್ಲಿ ಇರುಳಿಗ ಭಾಷೆಯನ್ನು ಸಾಂಸ್ಕೃತಿಕ ಭೌಗೋಳಿಕ, ಚಾರಿತ್ರಿಕ ಹಿನ್ನೆಲೆಯಲ್ಲಿ ಪ್ರತ್ಯೇಕ ಅಧ್ಯಯನ ನಡೆಸಿದರೆ ಇನ್ನು ಹೆಚ್ಚಿನ ಮಾಹಿತಿ ಸಿಗಬಹುದೆಂಬ ಭರವಸೆಯಿದೆ.

೨.೪. ಕುಲ ಮತ್ತು ಕಸುಬುಗಳು

ಕುಲವೆಂದರೆ ಸಾಮಾನ್ಯವಾಗಿ ಒಂದು ಗೊತ್ತಾದ ಜಾಗ, ರಕ್ತ ಸಂಬಂಧಗಳ ಲೌಕಿಕ ಸಂಸ್ಕೃತಿ, ನಿಕಟವಾದ ಸಮಾನ ಸ್ಥಾನಮಾನ ಆಚಾರ ವಿಚಾರಗಳು ಹಾಗೂ ಮತಾಚರಣೆಯನ್ನು ಹಂಚಿಕೊಳ್ಳುವ ಜನಸಮೂಹವಾಗಿದೆ. ಈ ಕುಲಗಳು ಚರಿತ್ರೆಯಲ್ಲಿ ತನ್ನದೇ ಆದ ಪ್ರಭಾವ ಬೀರಿರುವುದನ್ನು ಕಾಣಬಹುದು.

ಈ ಕುಲ ಎನ್ನುವುದನ್ನು ಯುರೋಪಿನ ವಿದ್ವಾಂಸರು ಫಲ ಎನ್ನುವುದಾಗಿ ಅಭಿಪ್ರಾಯಿಸುತ್ತಾರೆ. ಮೊದಲ ಬಾರಿಗೆ ಲೀನಿಯಸ್ ಸಸ್ಯಗಳನ್ನು ಕುಲಗಳ ಆಧಾರದ ಮೇಲೆ ವರ್ಗೀಕರಣ ಮಾಡಿದನು. ಈ ಕುಲ ವಿಜ್ಞಾನ ಎಂಬುದು ಕಾಲ ನಂತರದಲ್ಲಿ, ಅದರಲ್ಲೂ ಚರಿತ್ರೆಯಲ್ಲಿ ತನ್ನದೇ ಆದ ಜ್ಞಾನ ಶಿಸ್ತಾಗಿ ಬೆಳವಣಿಗೆಗೊಂಡಿತು. ಅದು ಎಷ್ಟರ ಮಟ್ಟಿಗಾಯಿತು ಎಂದರೆ ಕುಲಗಳ ಆಧಾರದ ಮೇಲೆ ಶ್ರೇಷ್ಠತೆ, ಕನಿಷ್ಠ ಮತ್ತು ದೈವತ್ವ ಸ್ಥಾನಮಾನಗಳನ್ನು ನಿರ್ಧರಿಸುವ ಹಂತಕ್ಕೂ ತಲುಪಿತು. ಯುರೋಪಿನಲ್ಲಂತು ಈ ಕುಲಗಳ ಪ್ರಭಾವ ಹೆಚ್ಚಾಗಿದ್ದು, ಕುಲಗಳಿಗಾಗಿ ಮಹಾಯುದ್ಧಗಳೇ ನಡೆದು ಹೋದವು.

ಯುರೋಪಿಯನ್ನರು ತಮ್ಮ ಶ್ರೇಷ್ಠತೆಯ ಹಕ್ಕು ಸಾಧನೆ ಮಾಡಿಕೊಳ್ಳಲು ಬಳಸಿಕೊಂಡ ನಿರಂಕುಶ ಮಾದರಿಗಳಲ್ಲಿ ಕುಲವು ಒಂದಾಗಿತ್ತು. ಕುಲದ ನಡೆ ನುಡಿಯ ರೀತಿಯನ್ನು

ಅನಂತರದಲ್ಲಿ ಆಳವಡಿಸಿಕೊಂಡ ಸಾಮಾಜಿಕ ವ್ಯವಹಾರಗಳು ಬ್ರಿಟಿಶರು ತಮ್ಮ ಸಾಮ್ರಾಜ್ಯದೆಡೆಗೆ ತೋರಿದ ದಾರಿಯನ್ನು ನಿಶ್ಚಯಿಸಿದವು. ಈ ಸಂದರ್ಭದಲ್ಲಿ ಕೇವಲ ಕುಲದ ಆಧಾರದ ಮೇಲೆ ಅವರ ಸ್ಥಾನಮಾನವನ್ನು ನಿರ್ಧರಿಸಿ ಉನ್ನತ ಕುಲ ಎಂದು ಕರೆಯುವವರನ್ನು ಉನ್ನತ ಹುದ್ದೆಗೆ ಏರಿಸಿದ್ದಲ್ಲದೆ ಅವರಿಗೆ ವಿಶೇಷ ಸ್ಥಾನಮಾನ ನೀಡಲಾಯಿತು. ಇದೇ ಕುಲಹೀನರನ್ನು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿಯೂ ತುಳಿಯುವ ಕೆಲಸವನ್ನು ಮಾಡಲಾಯಿತು.

ಕುಲಗಳು ವಸಾಹತು ಕಾಲಘಟ್ಟದಲ್ಲಿ ಏಣಿಶ್ರೇಣಿಗಳಿಂದ ಉನ್ನತ ದರ್ಜೆ, ಕೀಳು ದರ್ಜೆಗಳೆಂಬ ತಾರತಮ್ಯದ ಪರಿಕಲ್ಪನೆಯನ್ನ ಹುಟ್ಟುಹಾಕಿದವು. ಇದು ವಸಾಹತುಕಾರರ ಸ್ಥಾನಮಾನವನ್ನು ಹೆಚ್ಚಿಸುವ ಅಥವಾ ಕುಗ್ಗಿಸುವ ಪರಂಪರೆಗಳನ್ನು ಕಲ್ಪಿಸಿಕೊಂಡು ಚರಿತ್ರೆ ಹಾಗೂ ಅಧಿಕಾರವನ್ನು ಕಾನೂನು ಸಮ್ಮತವಾಗಿಸುವ ಮೂಲಕ ಪ್ರಚಾರಗಿಟ್ಟಿಸಿಕೊಂಡಿತು. ಆದರೆ ಕುಲದ ಸಿದ್ಧಾಂತಗಳನ್ನು ಹೇಳುವವರು ನಾಗರಿಕತೆಗಳ ಸೃಷ್ಟಿಕರ್ತೃಗಳು ಎಂದು ನಂಬಿಸಲಾಯಿತು.

ಈ ಕುಲಗಳನ್ನು ಕಾಲಾನಂತರದಲ್ಲಿ ಜನಾಂಗೀಯ ಪ್ರತ್ಯೇಕತೆಯನ್ನು ಉಳಿಸಿಕೊಂಡು ಬರುವ ನಿಟ್ಟಿನಲ್ಲಿ ಅನೇಕ ತಂತ್ರಗಾರಿಕೆಗಳನ್ನು ನಡೆಸಲಾಯಿತು. ಈ ಕುಲಗಳ ಮೂಲಕ ಸಮಾಜವನ್ನು ನಿಯಂತ್ರಣ ಮಾಡುವುದು ಸಾಧ್ಯವಾಗದಿದ್ದಾಗ ತಮ್ಮ ಮೂಲ ಸ್ಥಾನದ ಶ್ರೇಣಿಕರಣ ವ್ಯವಸ್ಥೆಯ ಜೊತೆ ಸೇರಿಸಿಕೊಂಡು ಪ್ರಚಾರ ಮಾಡಲಾಯಿತು. ಇಲ್ಲಿ ಕುಲಗಳನ್ನು ಶ್ರೇಣಿಕರಣದ ಅಡಿಯಲ್ಲಿ ಜಾತಿಗಳಾಗಿ ಸೇರಿಸಿ ಸಮಾಜವನ್ನು ಸಾಮಾಜಿಕವಾಗಿ ನಿಯಂತ್ರಿಸುವ ಕೆಲಸ ಮಾಡಲಾಯಿತು.

ವೈದಿಕರಂತೂ ಕುಲಗಳ ಆಧಾರದ ಮೇಲೆ ದಾಸರು, ಆರ್ಯರು ಎಂದು ವಿಭಾಗಿಸಿ ಇವರ ದೈಹಿಕ ಲಕ್ಷಣಗಳು ಅದರಲ್ಲೂ ಚರ್ಮದ ಬಣ್ಣಕ್ಕೆ ಸಂಬಂಧಿಸಿದಂತೆ ಭಿನ್ನರೆಂದು ವಾದಿಸಿದರು. ಕುಲವು ಕಾಲನಂತರದಲ್ಲಿ ಜಾತಿಯ ವೈಜ್ಞಾನಿಕ ವಿವರಣೆ ಎಂಬುದಾಗಿ ಸಾರಲಾಯಿತು. ಈ ಕುಲಗಳು ನಾಲ್ಕು ಮುಖ್ಯ ಜಾತಿಗಳು ಅಥವಾ ವರ್ಣಗಳು ಹಾಗೆಯೇ ಪ್ರಮುಖ ಜನಾಂಗಿಯ ಸಮುದಾಯಗಳನ್ನು ಪ್ರತಿನಿಧಿಸುತ್ತವೆ ಎಂಬುದಾಗಿ ಹೇಳಲಾಯಿತು. ಅವರವರ ನಡುವೆ ತಾರತಮ್ಯಗಳು ಹೆಚ್ಚಾಗುವಂತೆ ಮಾಡಲಾಯಿತು.

ಒಂದು ಕಾಲಕ್ಕೆ ಕುಲಗಳು ಸಮುದಾಯಗಳ ವೃತ್ತಿಗಳ ಪ್ರತಿನಿಧೀಕರಣಗಳಾಗಿದ್ದರೆ, ಕಾಲಾನಂತರ ಕುಲಗಳೇ ಜಾತಿಗಳಾಗಿ ಪರಿವರ್ತನೆಗೊಂಡವು. ವೈದಿಕರ ಕಾಲಘಟ್ಟದಲ್ಲಿ ಕುಲಗಳು ಶ್ರೇಣಿಕರಣದ ಸಂಕೋಲೆಗಳಿಗೆ ಒಳಗಾಗಿ ಜಾತಿಯ ಬಣ್ಣವನ್ನು ಪಡೆದುಕೊಂಡವು.

ಸಾಮಾಜಿಕರಣದ ವ್ಯವಸ್ಥೆಯಲ್ಲಿ ಸಮಾಜ ಕಟ್ಟಲು ವ್ಯಕ್ತಿಯ ಅಭಿರುಚಿ ಮತ್ತು ಅನಿವಾರ್ಯತೆಗೆ ತಕ್ಕಂತೆ ಒಮ್ಮತ ಮನಸಿನಿಂದ ವಿವಿಧ ಕಾಯಕಗಳನ್ನು ಆಯ್ಕೆ ಮಾಡಿಕೊಂಡು

ಗ್ರಾಮ ಸಮಾಜದ ಬೆಳವಣಿಗೆಗೆ ಕಾರಣವಾದ ಕಸುಬು ಕಾಲಾನಂತರದಲ್ಲಿ ತಮ್ಮ ಸಮುದಾಯ ಅಥವಾ ವಂಶ ಪಾರಂಪರ್ಯ ಮುದ್ರೆ ಎಂಬಂತೆ ಕರೆಸಿಕೊಂಡಿತು. ಇದರ ಜೊತೆಗೆ ಕುಲಗಳು ಹುಟ್ಟಿನಿಂದ ಗುರುತಿಸಿಕೊಳ್ಳಲಾರಂಭಿಸಿದವು. ಹೀನ ಕುಲ ಶ್ರೇಷ್ಠ ಕುಲ ಎಂಬ ಹಣೆಪಟ್ಟಿಯನ್ನು ಕಟ್ಟಿಕೊಂಡು ಸಮಾಜದಲ್ಲಿ ಬೆಳೆಯಲಾರಂಭಿಸಿದವು. ಈ ಹಣೆಪಟ್ಟಿಯು ಎಷ್ಟರಮಟ್ಟಿಗೆ ಪ್ರಭಾವ ಬೀರಿತೆಂದರೆ ಶ್ರೇಷ್ಠ ಕುಲದ ವ್ಯಕ್ತಿಯಿಂದ ಸಂಭೋಗ ಮಾಡಿಸಿಕೊಂಡ ಹೀನ ಕುಲದ ಮಹಿಳೆಯರಲ್ಲಿ ಹುಟ್ಟಿದ ಮಗುವು ಶ್ರೇಷ್ಠ ಕುಲಕ್ಕೆ ಸೇರಿಕೊಳ್ಳುತ್ತಿತ್ತು ಹಾಗೆಯೇ ಶ್ರೇಷ್ಠ ಕುಲದ ಮಹಿಳೆಯು ಹೀನ ಕುಲದ ವ್ಯಕ್ತಿಯಿಂದ ಮಗು ಪಡೆದರೂ ಅದು ಹೀನ ಕುಲವೇ ಎಂಬುದಾಗಿ ಗುರುತಿಸಿಕೊಳ್ಳುವ ಮಟ್ಟಕ್ಕೆ ಕುಲವನ್ನು ಬಳಸಿಕೊಳ್ಳಲಾಯಿತು.

ಒಂದು ಸಮೂಹ ಒಂದೇ ರಕ್ತ, ಒಂದೇ ವಾಸಿಸುವ ಭೌಗೋಳಿಕ ಪ್ರದೇಶಗಳಲ್ಲಿ ವಾಸಿಸುವ ಜನರನ್ನು ಒಂದು ಕುಲ ಎಂದು ಕರೆದಿದ್ದಾರೆ. ವೈದಿಕರ ಕಾಲಘಟ್ಟದಲ್ಲಿ ಹುಟ್ಟಿನಿಂದ ಕುಲ ನಿರ್ಧರಿಸುವ ಮಟ್ಟಕ್ಕೆ ಪರಿವರ್ತನೆಯಾಯಿತು.

ಹೀಗೆ ಕುಲದಿಂದ ಜಾತಿಗೆ ಅಥವಾ ಕೆಲವೊಮ್ಮೆ ಕರೆಯುವ ಹಾಗೆ ಜನರಿಂದ ಜಾತಿಗೆ ಮತಾಂತರಗೊಳ್ಳುವುದು ಭಾರತೀಯ ಸಾಮಾಜಿಕ ಚರಿತ್ರೆಯ ಮೂಲಭೂತವಾಗಿ ಮಾರ್ಪಟ್ಟಿತ್ತು. ಇದು ಒಡಂಬಡಿ ಅಥವಾ ಮುಖಾಮುಖಿಯ ಫಲಿತಾಂಶವಾಗಿತ್ತೋ ಏನೋ, ಒಟ್ಟಿನಲ್ಲಿ ವ್ಯಕ್ತಿಗತ ಪರಿಸ್ಥಿತಿಗಳಿಂದ ವ್ಯತ್ಯಾಸಗೊಳ್ಳುತ್ತಿತ್ತು. ಇದು ಅವರ ಜೀವನದ ಎಲ್ಲಾ ಭಾಗಗಳ ಮೇಲೂ ಪರಿಣಾಮ ಬೀರುತ್ತಿತ್ತು. ಮೇಲ್ಜಾತಿಯ ಸ್ಥಾನಮಾನಗಳಿಗೆ ಸೇರಿಸಿಕೊಂಡಂತಹ ಬುಡಕಟ್ಟಿನ ಸದಸ್ಯರಿಗೆ ದನದ ಮಾಂಸ ಮುಂತಾದ ಆಹಾರ, ಮದ್ಯ ನಿಷಿದ್ಧವಾಗಿತ್ತು. ಕುಲಗಳಲ್ಲಿ ಬಾಂಧವ್ಯದ ರೂಪವಾಗಿದ್ದ ಸಹಭೋಜನವನ್ನು ಕೂಡ ನಿರಾಕರಿಸಲಾಯಿತು. ಹಾಗೆಯೇ ಆರಾಧಿಸುವ ಕೆಲವೊಂದು ದೇವತೆಗಳ ವಿಷಯದಲ್ಲೂ ಕೂಡ ಕುಲ ಪ್ರಭಾವ ಬೀರಿತ್ತು. ಈ ಜಾತಿಯತೆಯ ಏಣಿಶ್ರೇಣಿಯ ಕಲ್ಪನೆಗಳು ಕುಲದ ವಿಶಿಷ್ಟ ಲಕ್ಷಣವಾದ ಸಮಾನತಾ ಭಾವನೆಗಳನ್ನು ಬದಲಾಗಿಸಿ ವಿರುದ್ಧವಾಗಿ ನೋಡುವಂತೆ ಮಾಡಿತು.

ಒಂದು ಸಮುದಾಯದಲ್ಲಿ ಮರಗಿಡ, ಹೂ, ಮುಳ್ಳು ಮುಂತಾದ ಕುಲಗಳ ಹೆಸರುಗಳು ಪ್ರಸ್ತಾಪವಾದರೆ ಅದು ಪಾರಂಪರಿಕವಾಗಿ ಅರಣ್ಯವಾಸಿಗಳ ಸೂಚಕವೇ ಆಗಿರುತ್ತದೆ. ಇವುಗಳು ಹಿಂದೊಮ್ಮೆ ಆಯಾ ಸಮುದಾಯಗಳ ಅಂಕಿತ ಚಹರೆಯೇ ಆಗಿರುತ್ತದೆ. ನಾಗರಿಕ ಸಮಾಜ ಅವರ ಬೇಟೆಯ ಅಭ್ಯಾಸವನ್ನು ತಪ್ಪಿಸಿ ತಮ್ಮ ಕೂಲಿಯಾಳುಗಳನ್ನಾಗಿ ದುಡಿಯುವಂತೆ ಮಾಡಿದಾಗ ಅವರ ಸಮುದಾಯದ ಚಿಹ್ನೆಗಳು ಅವರ ಮನೆಯ ಚಿಹ್ನೆಗಳಾಗಿರುವ ಸಾಧ್ಯತೆಗಳಾಗಿರುತ್ತವೆ. ಆದ್ದರಿಂದ ಕುಲಗಳನ್ನು ಗಂಭೀರವಾಗಿ ಚರಿತ್ರೆಯಲ್ಲಿ ನೋಡಬೇಕು.

ಡಾ.ಎನ್.ಚಿನ್ನಸ್ವಾಮಿ ಸೋಸಲೆ ಅವರು ಕುಲದ ಬಗ್ಗೆ ಹೇಳುತ್ತ "ಮಾನವ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ಅಧ್ಯಯನ ಮಾಡುವ ಯಾರೇ ಆದರೂ ಕುಲ ಮತ್ತು ಕಸುಬುಗಳನ್ನು

ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು. ಏಕೆಂದರೆ ಕುಲಕಸುಬುಗಳು ಮಾನವನ ಜೊತೆ ಜೊತೆಗೆ ನೆರಳಿನಂತೆ ಹಿಂಬಾಲಿಸಿಕೊಂಡು ಬಂದಿರುತ್ತವೆ. ಮಾನವನ ಹುಟ್ಟಿನಿಂದ ಸಾಯುವವರೆಗೆ ಆಚರಣೆ ಸಂಪ್ರದಾಯಗಳ ವೃತ್ತಾಂತವನ್ನು ಕುಲಗಳು ಹೇಳುತ್ತಿರುತ್ತವೆ. ಆದಕಾರಣ ಕುಲ ಮತ್ತು ಕಸುಬುಗಳನ್ನು ಬಹಳ ಎಚ್ಚರಿಕೆಯಿಂದ ಗಮನಿಸಿದರೆ ಇವುಗಳೇ ಬುಡಕಟ್ಟು ಮತ್ತು ತಳಸಮುದಾಯಗಳ ಮೌಖಿಕ ದಾಖಲೆಗಳಾಗುವುದರಲ್ಲಿ ಯಾವುದೇ ಅನುಮಾನವಿಲ್ಲ" ಎಂದಿದ್ದಾರೆ.

ಪ್ರತಿಯೊಂದು ಸಮುದಾಯಗಳು ಕುಲಗಳನ್ನು ಅತ್ಯಂತ ಕಟ್ಟುನಿಟ್ಟಿನಿಂದ ಅನುಸರಿಸುತ್ತಾ ಬಂದಿರುತ್ತವೆ. ಇವರ ನಂಬಿಕೆ, ಆಚರಣೆ, ಸಂಪ್ರದಾಯಗಳು ಕುಲಗಳ ಆಧಾರದ ಮೇಲೆಯೇ ಅವಲಂಬಿತವಾಗಿರುತ್ತದೆ. "ಒಂದು ಕುಲದೊಳಗೆ ಒಂದೇ ದೈವ, ಒಂದೇ ಆಚರಣೆ, ವಾಸಿಸುವ ಪ್ರದೇಶಗಳು ಒಂದೇ ಆಗಿದ್ದು, ಒಂದೇ ರಕ್ತ ಸಂಬಂಧಗಳ ಸಮೂಹವಾಗಿರುತ್ತವೆ. ಈ ಗುಂಪು ಅಥವಾ ಸಮುದಾಯಗಳಲ್ಲಿ ಕೊಡುಕೊಳ್ಳುವ ಸಂಬಂಧ ಏರ್ಪಡುವುದಿಲ್ಲ. ಅಂದರೆ ಪರಸ್ಪರ ಹೆಣ್ಣನ್ನು ಕೊಟ್ಟು ಮದುವೆ ಆಗುವುದಿಲ್ಲ. ಆದರೆ ಇದು ಬುಡಕಟ್ಟುಗಳಲ್ಲಿ ಭಿನ್ನವಾಗಿ ಗುರುತಿಸಿಕೊಳ್ಳುತ್ತದೆ. ಏಕೆಂದರೆ ಬುಡಕಟ್ಟುಗಳಲ್ಲಿ ಒಂದೇ ಕುಲದಲ್ಲಿ ಕೊಡುಕೊಳ್ಳವಿಕೆ ಸಂಬಂಧವನ್ನು ಏರ್ಪಡಿಸಿಕೊಳ್ಳುತ್ತಾರೆ. ಆದರೆ ಬೇರೆ ಪಂಗಡಗಳ ಜೊತೆ ವೈವಾಹಿಕ ಸಂಬಂಧ ವನ್ನು ಮಾಡಿಕೊಳ್ಳುವುದಿಲ್ಲ.

ವೈದಿಕರಣಗೊಂಡ ಸಮುದಾಯಗಳಲ್ಲಿ ಕುಲಕುಲಗಳ ನಡುವೆ ಭಿನ್ನತೆ ಮತ್ತು ತಾರತಮ್ಯವನ್ನು ಆಚರಿಸುತ್ತವೆ. ಇವುಗಳಲ್ಲಿ ಕುಲ ಎಂದರೆ ಸಮುದಾಯದೊಳಗಿನ ಒಳಪಂಗಡ ವೆಂದು ಭಾವಿಸಿಕೊಂಡಿವೆ. ಆದರೆ ಬುಡಕಟ್ಟುಗಳಲ್ಲಿ ಕುಲ ಎಂದರೆ ಇಡೀ ಸಮುದಾಯವನ್ನು ಪ್ರತಿನಿಧಿಸುವುದೇ ಆಗಿರುತ್ತದೆ. ಕುಲಗಳು ಜಾತಿಯ ಏಣಿಶ್ರೇಣಿಕರಣದ ಮೂಲ ಎಂಬುದನ್ನು ಚರಿತ್ರೆಯಲ್ಲಿ ಹೇಳುತ್ತಾರೆ. ಏಕೆಂದರೆ ಸಿಂಧೂ ನಾಗರಿಕತೆಯ ಕಾಲಘಟ್ಟದಲ್ಲಿ ಹಾಗೂ ಆರ್ಯರ ಆಳ್ವಿಕೆಯ ಕಾಲಘಟ್ಟದವರೆಗೆ ಕುಲಗಳು ಒಂದು ಸಮುದಾಯದ ಒಟ್ಟಾರೆಯ ಪ್ರಾತಿನಿಧಿಕವಾಗಿತ್ತು. ಕುಲ ಎಂದರೆ ಒಂದು ಸಮೂಹ ಅಥವಾ ಸಮುದಾಯ ಎಂದು ಕರೆಯಲಾಗುತ್ತಿತ್ತು. ಆದರೆ ವೇದಗಳ ಕಾಲಘಟ್ಟದಲ್ಲಿ ಈ ಕುಲಗಳ ಮೇಲೆ ಜಾತಿಯ ಶ್ರೇಣಿಕರಣವನ್ನು ಏರಿ ಕುಲಗಳನ್ನು ಜಾತಿಯ ಒಳಗಡೆ ಸೇರಿಸಲಾಯಿತು. ಇದರಿಂದ ಜಾತಿ ಎಂಬುದು ಸಮುದಾಯವನ್ನು ಪ್ರತಿನಿಧಿಸುವ ಚಿಹ್ನೆಯಾಗಿ ಈ ಜಾತಿಯ ಒಳಗಡೆ ಕುಲ ಸೇರಿಕೊಂಡುಬಿಟ್ಟಿತು. ಆದಕಾರಣ ಕುಲ ಎಂಬ ಒಂದು ಸ್ವತಂತ್ರ ಪ್ರಾತಿನಿಧಿಕ ಚಿಹ್ನೆಯು ಜಾತಿಯ ಸಂಕೋಲೆಯೊಳಗಿನ ಒಂದು ಗುಂಪನ್ನು ಗುರುತಿಸುವ ಮಾದರಿಯಾಗಿ ಮಾರ್ಪಾಡುಗೊಂಡಿತು. ಈ ಕುಲಗಳು ನಂತರದ ಕಾಲಘಟ್ಟದಲ್ಲಿ ಕಸುಬಿನ ಆಧಾರದ ಮೇಲೆ ಅನೇಕ ಚರ್ಚೆಗಳನ್ನು ಹುಟ್ಟುಹಾಕಿದವು. ಇದನ್ನು ಮುಂದಿನ ಭಾಗದಲ್ಲಿ ಚರ್ಚಿಸಲಾಗಿದೆ.

ಜಾತಿಯ ಒಳಗಡೆಯ ಕುಲಗಳನ್ನು ಸೇರಿಸಿದಷ್ಟೆ ಅಲ್ಲದೆ ತಮ್ಮ ವೈದಿಕ ರಾಜಕಾರಣವನ್ನು ಮುಂದುವರಿಸಿ, ಕುಲಗಳಲ್ಲೂ ಮೇಲೂ ಕೀಳು ಎಂಬ ತಾರತಮ್ಯಗಳು ಉಂಟಾಗುವಂತೆ ಮಾಡಿದರು. ಮೂರು ಎಲೆ, ನಾಲ್ಕು ಎಲೆ, ಐದು ಎಲೆ ಪಡೆಯುವವರು ಆರು ಎಲೆ, ಎಂಟು ಎಲೆ ಪಡೆಯುವವರಿಗಿಂತ ಕನಿಷ್ಠ ಎಂದು ಪ್ರಚರಪಡಿಸಿ ಇದೇ ನಂಬಿಕೆಯು ಸಮಾಜದಲ್ಲಿ ಮುಂದುವರಿಯುವಂತೆ ಮಾಡಿದರು. ಪ್ರಸ್ತುತ ದಿನಮಾನಗಳಲ್ಲಿ ಜಾತಿಗಳು ಸಮಜದಲ್ಲಿ ಬಲವಾಗಿ ಬೇರೂರಿವೆ.

ಬುಡಕಟ್ಟುಗಳಲ್ಲಿ ಈ ಕುಲಗಳು ಇಂದಿಗೂ ವೈದಿಕರಣಗೊಳ್ಳದೆ ಹಾಗೆ ಉಳಿದುಕೊಂಡು ಬಂದಿವೆ. ಬುಡಕಟ್ಟುಗಳಲ್ಲಿ ಕುಲಗಳು ಅಷ್ಟು ಪ್ರಭಾವಿತವಾಗಿ ಕಂಡುಬರುವುದಿಲ್ಲ ಆದರೆ ಪ್ರಮುಖವಾಗಿ ಕುಲ ಎಂಬುದು ಬೇರೆಯದೇ ರೀತಿಯಲ್ಲಿ ಗುರುತಿಸಿಕೊಳ್ಳುತ್ತದೆ. ಬುಡಕಟ್ಟುಗಳಲ್ಲಿ ಕುಲ ಎನ್ನುವುದು ಇಡೀ ಸಮುದಾಯವನ್ನು ಪ್ರತಿನಿಧಿಸುವ ಗುರುತು(ಚಿಹ್ನೆ) ಎಂದೇ ಹೇಳಬಹುದು. ಇದು ವೈದಿಕರ ಜಾತಿ ಶ್ರೇಣೀಕರಣಕ್ಕೆ ಒಳಗಾಗದೆ ಇಂದಿಗೂ ಈ ಕುಲಗಳು ಬುಡಕಟ್ಟುಗಳಲ್ಲಿ ಯಾವುದೇ ಶ್ರೇಷ್ಠ ಹಾಗೂ ಕನಿಷ್ಠ ಎಂಬ ತಾರತಮ್ಯವನ್ನು ಉಂಟುಮಾಡದೇ ಇರುವುದನ್ನು ಕಾಣಬಹುದು. ವೈದಿಕರಣಕ್ಕೆ ಒಳಗಾದ ಜಾತಿಗಳಲ್ಲಿ ಕುಲಗಳು ಉಂಟಾಗುವ ವಿವಾಹದ ತೊಂದರೆಗಳನ್ನು ಬುಡಕಟ್ಟುಗಳಲ್ಲಿ ಕಾಣಲಾಗುವುದಿಲ್ಲ. ಏಕೆಂದರೆ ಬುಡಕಟ್ಟುಗಳಲ್ಲಿ ಜಾತಿಯ ಸಂಕೋಲೆ ಇರುವುದಿಲ್ಲ. ವೈದಿಕರಣದ ಜಾತಿಯ ಪ್ರಭಾವ ಬುಡಕಟ್ಟುಗಳಿಗೆ ಆಗದೇ ಇರುವುದರಿಂದ ಇತರೆ ಜಾತಿಗಳಲ್ಲಿ ಕುಲಗಳು ಪ್ರತಿನಿಧಿಸುವ ಮೊಂಡುತನವನ್ನು ಬುಡಕಟ್ಟುಗಳಲ್ಲಿನ ಕುಲಗಳು ತೊಂದರೆ ಉಂಟು ಮಾಡುವುದಿಲ್ಲ. ಬುಡಕಟ್ಟುಗಳಲ್ಲಿ ಕುಲಗಳಿದ್ದರೂ ಅವುಗಳು ಯಾವ ತಾರತಮ್ಯವನ್ನುಂಟು ಮಾಡದೇ, ಕುಲ ಎಂದರೆ ಒಟ್ಟಾರೆಯಾಗಿ ಸಮುದಾಯವನ್ನು ಸಂಬೋಧಿಸುವ ನಾಮಪದವೇ ಆಗಿದೆ. ಬುಡಕಟ್ಟುಗಳು ಕೂಡ ಹಾಗೆಯೇ ನಂಬಿಕೊಂಡಿದ್ದಾರೆ. ಆದ್ದರಿಂದಲೇ ಬುಡಕಟ್ಟುಗಳಲ್ಲಿ ತಪ್ಪು ಮಾಡಿದಾಗ ಕುಲದಿಂದ ಹೊರಗೆ ಹಾಕಲಾಗುವುದು ಎಂದು ಹೆದರಿಸುತ್ತಾರೆ. ಈ ಶಿಕ್ಷೆಯೇ ಬುಡಕಟ್ಟುಗಳಲ್ಲಿ ಅತ್ಯಂತ ಕಟ್ಟಕಡೆಯ ಶಿಕ್ಷೆಯಾಗಿರುತ್ತದೆ. ಇದಕ್ಕೆ ಬುಡಕಟ್ಟಿನವರು ಹೆಚ್ಚು ಭಯ ಪಡುವುದನ್ನು ಕಾಣಬಹುದು. ಜಾತಿಯ ಒಳಗಡೆಯ ಕುಲಗಳು ಪ್ರತಿನಿಧಿಸುವ ಹಾಗೇ ಬುಡಕಟ್ಟುಗಳಲ್ಲಿ ಒಕ್ಕಲುಗಳು ಪ್ರತಿನಿಧಿಸುತ್ತವೆ. ಆದರೆ ಯಾವುದೇ ತಾರತಮ್ಯವನ್ನು ಉಂಟುಮಾಡುವುದಿಲ್ಲ.

ಇರುಳಿಗರಲ್ಲಿ ಕುಲಗಳು ಅಷ್ಟೊಂದು ಪರಿಣಾಮಕಾರಿಯಾಗಿ ಕಂಡುಬರುವುದಿಲ್ಲ. ಇರುಳಿಗರಲ್ಲಿನ ಕುಲಗಳು ಅವರ ವೃತ್ತಿಯ ಆಧಾರದ ಮೇಲೆ ಬಂದವುಗಳೇ ಆಗಿವೆ ಅಥವಾ ಸುತ್ತಮುತ್ತಲ ಸಮುದಾಯದವರ ಪ್ರಭಾವವೇ ಆಗಿದೆ. ಇರುಳಿಗರಲ್ಲಿ ಕುಲ ಎಂದರೆ ಇಡೀ ಸಮುದಾಯದ ಪ್ರತಿನಿಧಿಕವೇ ಆಗಿದೆ. ಆದರೆ ಇರುಳಿಗರಲ್ಲಿ ಈ ಕೆಳಕಂಡ ಕುಲಗಳನ್ನು ಕಾಣ ಬಹುದು. ಚಿನ್ನದಕುಲ, ಬೆಳ್ಳಿಕುಲ, ಕಕ್ಕೆಕುಲ, ಆಲದಕುಲ, ಮುಳ್ಳಕುಲ, ದೇಶಭಾಗ ಎಂಬ

ಕುಲಗಳು ಕಂಡು ಬರುತ್ತವೆ. ಇರುಳಿಗರು ಮದುವೆಯ ಸಂದರ್ಭದಲ್ಲಿ ಈ ಕುಲಗಳನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ ಹಾಗೆಯೇ ಇತರೆ ಸಮುದಾಯಗಳ ರೀತಿಯಲ್ಲಿ ಮದುವೆಯ ಸಂದರ್ಭದಲ್ಲಿ ಅಡ್ಡಿಪಡಿಸುವುದಿಲ್ಲ.

ಕಕ್ಕೆಕುಲ ಮತ್ತು ಆಲದಕುಲಗಳು ಇರುಳಿಗರಲ್ಲಿ ಪ್ರಮುಖವಾಗಿ ಕಂಡುಬರುವ ಕುಲಗಳಾಗಿದ್ದು ಇವುಗಳು ಶೈವ ಮತ್ತು ವೈಷ್ಣವ ಪಂಥದ ಹಿನ್ನೆಲೆಯಲ್ಲಿ ಗುರುತಿಸಿಕೊಳ್ಳುತ್ತವೆ. ಕಕ್ಕೆಕುಲದವರು ದಾಸ(ಶ್ರೀವೈಷ್ಣವ)ಪಂಥದ ಅನುಯಾಯಿಗಳಾಗಿರುತ್ತಾರೆ. ಆಲದ ಕುಲದವರು ಶೈವ ಪಂಥದ ಅನುಯಾಯಿಗಳಾಗಿರುತ್ತಾರೆ. ಕಕ್ಕೆಕುಲದವರು ಕಕ್ಕೆ ಮರದ ಸೌದೆಯನ್ನು ಉರಿಸುವುದಿಲ್ಲ. ಹಾಗೆಯೇ ಆಲದ ಕುಲದವರು ಆಲದ ಮರದ ಸೌದೆಯನ್ನು ಉಪಯೋಗಿಸುವುದಿಲ್ಲ. ಚಿನ್ನದಕುಲದವರು ಚಿನ್ನವನ್ನು ಹಾಕಿಕೊಳ್ಳುವುದಿಲ್ಲ; ಬೆಳ್ಳಿ ಕುಲದವರು ಬೆಳ್ಳಿಯನ್ನು ತುಳಿಯುವುದಿಲ್ಲ. ಒಂದೇ ಕುಲದೊಳಗೆ ಕೊಡುಕೊಳ್ಳುವುದನ್ನು ಮಾಡಿಕೊಳ್ಳುತ್ತಾರೆ. ಹಾಗೆಯೇ ಇತರೆ ಕುಲದವರೊಂದಿಗೂ ವೈವಾಹಿಕ ಸಂಬಂಧವನ್ನು ಬೆಳೆಸುತ್ತಾರೆ. ಇರುಳಿಗರಲ್ಲಿ ಕುಲಗಳನ್ನು ಅಷ್ಟೊಂದು ಗಂಭೀರವಾಗಿ ಪರಿಗಣಿಸುವುದಿಲ್ಲ. ಸಮುದಾಯದ ಗುರುತಾಗಿ ಕುಲಗಳನ್ನು ಗುರುತಿಸುತ್ತಾರೆಯೇ ವಿನಃ ಸಮುದಾಯದ ಒಳಗಡೆಯೇ ಭಿನ್ನತೆಗಳಾಗಿ ನೋಡುವುದಿಲ್ಲ.

ಹಾಗೆಯೇ ಮುಳ್ಳುಕುಲ ಅಥವಾ ಕ್ಷತ್ರಿಯಕುಲ, ಚಿನ್ನದ ಕುಲ ಮತ್ತು ಬೆಳ್ಳಿಕುಲ ಹಾಗೂ ದೇಶಭಾಗದವರು ಎಂಬ ಕುಲಗಳು ಇರುಳಿಗರಲ್ಲಿ ಕಂಡುಬಂದರೂ ಇದು ಇತರೆ ಸಮುದಾಯದವರ ಪ್ರಭಾವದಿಂದ ಆಗಿದೆ. ದೇಶಭಾಗದವರಲ್ಲಿ ಸಾಮಾನ್ಯವಾಗಿ ಕಕ್ಕೆಕುಲ ಮತ್ತು ಆಲದಕುಲಗಳು ಮಾತ್ರ ಕಾಣಬಹುದು. ಇವು ಬುಡಕಟ್ಟುಗಳ ಪಾರಂಪರಿಕ ಸಂಕೇತಗಳನ್ನು ಪ್ರತಿನಿಧಿಸುವುದೇ ಆಗಿರುತ್ತವೆ. ಮೇಲಿನ ವಿದ್ವಾಂಸರು ಹೇಳಿದಂತೆ ಬುಡಕಟ್ಟು ಪಾರಂಪರಿಕವಾಗಿ ತಾವು ಬದುಕುತ್ತಿರುವ ಪರಿಸರ ಆಚರಣೆ, ನಂಬಿಕೆಗಳನ್ನು ತಮ್ಮ ಕುಲದ ನಾಮಾಂಕಿತಗಳನ್ನಾಗಿ ಪಡೆದುಕೊಂಡಿರುತ್ತಾರೆ.

ಮಾಗಡಿ, ರಾಮನಗರ ಮತ್ತು ಚನ್ನಪಟ್ಟಣ ಭಾಗದಲ್ಲಿ ವಾಸಿಸುವ ಇರುಳಿಗರು ಕ್ಷತ್ರಿಯ, ಚಿನ್ನ ಬೆಳ್ಳಿ ಕುಲಗಳನ್ನು ಹೊಂದಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಚರ್ಚಿಸಿದಾಗ ಅವರಲ್ಲಿ ಸೂಕ್ತ ಉತ್ತರ ದೊರೆಯುವುದಿಲ್ಲ. ತಮ್ಮ ಸುತ್ತಮುತ್ತಲಿನ ಇತರೆ ಸಮುದಾಯದವರ ಪ್ರಭಾವದಿಂದ ಉಂಟಾಗಿರುವುದಾಗಿ ಹೇಳಿಕೊಳ್ಳುತ್ತಾರೆ. ಆದರೆ ಆಲದಕುಲ ಮತ್ತು ಕಕ್ಕೆಕುಲದ ಬಗ್ಗೆ ತಮ್ಮದೇ ಆದ ನಂಬಿಕೆ ಮತ್ತು ಆಚರಣೆಯನ್ನು ತಿಳಿಸುತ್ತಾರೆ. ದೇಶ ಭಾಗದವರೆಂದರೆ ಈಗ ವಾಸಿಸುತ್ತಿರುವ ಪ್ರದೇಶದ ಮೂಲ ಆಗಿರುತ್ತದೆ. ಆದರೆ ಚಿನ್ನ, ಬೆಳ್ಳಿಕುಲದ ಮೂಲದ ಬಗ್ಗೆ ಮಾಹಿತಿ ಸಿಗುವುದಿಲ್ಲ ಎಂಬುದು ಕ್ಷೇತ್ರಕಾರ್ಯದಲ್ಲಿ ಕಂಡುಬಂದಿದೆ.

ಒಟ್ಟಾರೆಯಾಗಿ ಇರುಳಿಗರಲ್ಲಿ ಕಂಡುಬರುವ ಕುಲಗಳು ಸಮುದಾಯದ ಒಟ್ಟಾರೆಯಾಗಿ ಪ್ರಾತಿನಿಧಿತ್ವವೇ ಆಗಿರುವುದೇ ವಿನಃ ಸಮುದಾಯದ ಒಳಗಡೆಯ ಭಿನ್ನತೆಯ ಭಾಗವಾಗಿರುವುದಿಲ್ಲ.

ಈ ಭಿನ್ನತೆಯು ಕೇವಲ ನಂಬಿಕೆ, ಆಚರಣೆಗಳಲ್ಲಿ ಮಾತ್ರ ಕಂಡುಬರುತ್ತದೆಯೇ ವಿನಃ ವೈವಾಹಿಕ ಸಂದರ್ಭದಲ್ಲಿ ಅಡ್ಡಿಪಡಿಸುವುದಿಲ್ಲ.

ಕಸುಬುಗಳು

ಕುಲಕಸುಬುಗಳು ಒಂದು ಕಾಲಘಟ್ಟಕ್ಕೆ ಚರಿತ್ರೆಯ ದಿಕ್ಕನ್ನು ಬದಲಾಯಿಸುವುದರ ಜೊತೆಗೆ ಪ್ರಭುತ್ವವನ್ನು, ಧರ್ಮವನ್ನು ಹಾಗೆಯೇ ಸಂಸ್ಕೃತಿಯನ್ನು ನಿಯಂತ್ರಿಸಿದ್ದನ್ನು ಕಾಣಬಹುದು. ಅಲೆಮಾರಿಯಾಗಿದ್ದ ಮಾನವ ಒಂದು ಕಡೆ ನೆಲೆ ನಿಂತ ಮೇಲೆ ತನ್ನ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳಲು ಹಲವಾರು ಪ್ರಯೋಗಗಳ ಮುಖಾಂತರ ಒಂದು ಪರಿಪಕ್ವವಾದ ಕೌಶಲ್ಯಗಳನ್ನು ಕಂಡುಕೊಂಡನು. ಅದನ್ನು ತನ್ನ ಬದುಕಿನೊಂದಿಗೆ ಅಳವಡಿಸಿಕೊಂಡನು. ಹೀಗೆ ಒಂಟಿತನದಿಂದ ಆರಂಭವಾದ ಪಯಣ ಜಂಟಿತನಕ ಮುಂದುವರೆದು ಅದು ಸಮೂಹ, ಗ್ರಾಮಗಳಾಗಿ ಮಾರ್ಪಾಡುಗೊಂಡಿತು. ಈ ಸಂದರ್ಭದಲ್ಲಿ ತನ್ನ ಬಯಕೆಗಳಿಗೆ ಅನುಗುಣವಾಗಿ ತನ್ನ ಕೌಶಲ್ಯ ಅಭಿವೃದ್ಧಿಪಡಿಸಿಕೊಂಡು ಅದಕ್ಕೆ ತಕ್ಕಂತೆ ಬದುಕಲು ಎಲ್ಲಾ ತರಹದ ಕಸುಬುಗಳನ್ನು ಮಾಡಿಕೊಂಡಿದ್ದ ಮಾನವ ಸಮೂಹ ಮತ್ತು ಗ್ರಾಮದ ಸಮಾಜದ ವ್ಯವಸ್ಥೆಯಲ್ಲಿ ಕಸುಬುಗಳನ್ನು ಗ್ರಾಮದ ಒಳಿತಿಗಾಗಿ ಹಂಚಿಕೊಳ್ಳಲಾರಂಭಿಸಿದನು. ಇದು ಮೊದಮೊದಲು ಅವರವರ ಆಯ್ಕೆ ಮತ್ತು ಅಭಿವೃದ್ಧಿಗೆ ತಕ್ಕಂತೆ ಆಯ್ಕೆಗೊಂಡರು. ಕಾಲಾನಂತರದಲ್ಲಿ ಈ ಕೌಶಲ್ಯ ಕುಲ ಅಥವಾ ವಂಶ ಪಾರಂಪರ್ಯ ವೃತ್ತಿ (ಕಸುಬು) ಆಗಿ ಮಾರ್ಪಾಡುಗೊಂಡಿತು. ಈ ಸಂದರ್ಭದಲ್ಲಿ ಪ್ರತಿಯೊಬ್ಬರ ವೃತ್ತಿ ಕಸುಬುಗಳು ಗ್ರಾಮ ಸಮಾಜದ ಒಳಿತಿಗಾಗಿ ಸರಿಸಮಾನ ಸ್ಥಾನಮಾನಗಳಿಂದ ಗುರುತಿಸಿಕೊಳ್ಳುತ್ತಿತ್ತು. ಇದಕ್ಕೆ ಉದಾಹರಣೆಯಾಗಿ ಸಿಂಧೂನಾಗರಿಕತೆಯ ಸಂದರ್ಭದಲ್ಲಿದ್ದ ಕಸಬುಗಳಲ್ಲಿ ಕಾಣಬಹುದು. ಇಲ್ಲಿ ಎಲ್ಲಾ ಕಸುಬುಗಳನ್ನು ಸಮಾನಾಂತರವಾಗಿಯೇ ಗೌರವಿಸ ಲಾಗುತ್ತಿತ್ತು. ಇಲ್ಲಿ ಯಾವುದು ಮೇಲು ಯಾವುದು ಕೀಳು ಎಂದಿರಲಿಲ್ಲ. ಹಾಗೆಯೇ ಪರಸ್ಪರ ವೃತ್ತಿ ಬದಲಾವಣೆಯಾಗುತ್ತಿದ್ದರ ಬಗ್ಗೆ ವಿದ್ವಾಂಸರುಗಳು ಪ್ರಸ್ತಾಪಿಸುತ್ತಾರೆ. ಆದರೆ ಭಾರತಕ್ಕೆ ಆರ್ಯರ ಆಗಮನವಾದ ಮೇಲೆ ಈ ಕುಲಕಸುಬುಗಳು ಮೇಲು–ಕೀಳು, ಶ್ರೇಷ್ಠ–ಕನಿಷ್ಠ ಎಂಬ ಹಣೆಪಟ್ಟಿಯನ್ನು ಪಡೆದುಕೊಳ್ಳಲಾರಂಭಿಸಿದವು. ಹಿಂದೆ ತಂದೆಯ ಉದ್ಯೋಗವನ್ನು ಮಗ ಮಾಡುವಂತಹ ಯಾವ ಕಟ್ಟುನಿಟ್ಟಿನ ನಿಯಮವೇನು ಇರಲಿಲ್ಲ. ಆದರೆ ಆರ್ಯರ ಕಾಲಘಟ್ಟದಲ್ಲಿ ಈ ವೃತ್ತಿ ಕುಲಕಸುಬುಗಳು ಕಡ್ಡಾಯವಾಗುವುದರೊಂದಿಗೆ ಏಣಿಶ್ರೇಣಿಕರಣದ ಶ್ರೇಷ್ಠ–ಕನಿಷ್ಠ ಎಂಬ ಹೆಣಪಟ್ಟಿಯನ್ನು ಕಟ್ಟಿಕೊಂಡವು. ಚಪ್ಪಲಿ ಹೊಲಿಯುವನು, ಅಗಸ ಕೆಲಸ ಮಾಡುವವನ ಎದುರು ಕೀಳಾಗಿ ಕಂಡನು ಹಾಗೆಯೇ ಗಾಣಿಗ ಕೆಲಸ ಮಾಡುವವನು ಚರಂಡಿ ಸ್ವಚ್ಛಗೊಳಿಸುವವನನ್ನು ಕೀಳಾಗಿ ಕಾಣಲಾರಂಭಿಸಿದನು. ದೇವಸ್ಥಾನದಲ್ಲಿ ಪೂಜೆ ಮಾಡುವವನೆದುರು ಕನಿಷ್ಠಗೊಂಡರು ದೇವಸ್ಥಾನದ ಗರ್ಭಗುಡಿಯಲ್ಲಿರುವವನು ದೇವಸ್ಥಾನ ಹೊರಗಡೆ ಹೋಗುವ ವನಿಗಿಂತ ಶ್ರೇಷ್ಠತೆಯನ್ನು ಪಡೆದುಕೊಂಡನು. ಬೇಟೆಯಾಡಿ ಮಾಂಸ ತಿನ್ನುವವನು ವ್ಯವಸಾಯ

ಮಾಡಿ ಸಸ್ಯಹಾರಿ ತಿನ್ನುವವನೆದುರು ಕೀಳಾಗಿ ಗುರುತಿಸಿಕೊಳ್ಳಲಾರಂಭಿಸಿದನು. ಇದೆಲ್ಲವೂ ವೈದಿಕರ ವೃತ್ತಿಯನ್ನು ಮುಂದಿಟ್ಟುಕೊಂಡು ಮಾಡಿದ ರಾಜಕೀಯವಾಗಿದೆ. ಏಕೆಂದರೆ ಈ ವೃತ್ತಿಯ ಮೇಲೆ(ಕುಲಕಸುಬಿನ) ವೈದಿಕರಣದ ಪ್ರಭಾವ ಉಂಟಾಗಿ ಸಮಾನವಾಗಿ ಸ್ವಕೌಶಲ್ಯದಿಂದ ಆಯ್ಕೆ ಮಾಡಿಕೊಂಡಿದ್ದ ಕಸುಬುಗಳು ಇಡೀ ಸಮುದಾಯದ ಕಡ್ಡಾಯ ವೃತ್ತಿಯಾದುದ್ದಲ್ಲದೆ, ಶೋಷಣೆ ಅಸ್ಪೃಶ್ಯತೆ, ಕನಿಷ್ಠ, ಶ್ರೇಷ್ಠತೆಯ ರೂಪ ಪಡೆದುಕೊಂಡಿತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಭಾರತದಲ್ಲಿ ಹುಟ್ಟಿಕೊಂಡ ಬೌದ್ಧ ಮತ್ತು ಜೈನಧರ್ಮಗಳು ಈ ಕುಲಕಸುಬುಗಳಲ್ಲಿನ ಶ್ರೇಷ್ಠತೆ ಮತ್ತು ಕನಿಷ್ಠತೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಅನೇಕ ಪ್ರಯತ್ನ ಪಟ್ಟರು. ಸಂಪೂರ್ಣವಾಗಿ ಯಶಸ್ಸು ಕಾಣಲಿಲ್ಲ. ಆದರೆ ವಂಶಪಾರಂಪರ್ಯ ವೃತ್ತಿಗಳನ್ನು ಅಲ್ಪಸ್ವಲ್ಪ ವಿಚಲಿತಗೊಳಿಸುವ ಕೆಲಸವನ್ನಂತು ಮಾಡಿದವು. ತಂದೆಯ ಉದ್ಯೋಗವನ್ನು ಮಗ ಮುಂದು ವರೆಸಲು ಇಚ್ಚಿಸದಿದ್ದರೆ ಅನ್ಯ ಮಾರ್ಗವನ್ನು ಅನುಸರಿಸುವಂತಹ ವಾತಾವರಣವನ್ನುಂಟು ಮಾಡಿದರು. ಆದರೆ ಬಸವಣ್ಣ ಆರ್ಥಿಕ ಮಂತ್ರಿಯಾಗಿದ್ದ ಸಂದರ್ಭದಲ್ಲಿ ವಂಶಪಾರಂಪರ್ಯ ಕುಲಕಸುಬನ್ನು ಮತ್ತೆ ಸ್ಥಿರಗೊಳಿಸಿ ಖಜಾನೆಯನ್ನು ತುಂಬಿಸಿದನು. ಆದರೆ ಈ ಕುಲಕಸುಬಿನ ತಾರತಮ್ಯದ ಅರಿವಾಗಿ ವೃತ್ತಿಯಲ್ಲಿರುವ ಮೇಲು-ಕೀಳು, ಕನಿಷ್ಠ-ಶ್ರೇಷ್ಠ ಎಂಬ ಭಾವನೆಯನ್ನು ತೊಡೆಯುವ ನಿಟ್ಟಿನಲ್ಲಿ "ಕಾಯಕವೇ ಕೈಲಾಸ" ಎಲ್ಲಾ ಕೆಲಸವು ಒಂದೇ ಯಾವುದು ಮೇಲಲ್ಲ ಯಾವುದೇ ಕೀಳಲ್ಲ ವೃತ್ತಿಯು ಸಮಾಜದ ಒಳಿತಿಗಾಗಿ ಒಬ್ಬೊಬ್ಬರು ಹಂಚಿಕೊಂಡಿರುವ ಕರ್ತವ್ಯವಾಗಿದೆ. ಅದು ಸಮಾಜದ ಒಳಿತಿಗಾಗಿ ಮಾಡುವ ಭಗವಂತನ ಕೆಲಸ. ವೃತ್ತಿಗಳು ಕೌಶಲ್ಯದ ಮೇಲೆ ಬಂದಿದ್ದು ಇದರಲ್ಲಿ ಯಾವುದು ಮೇಲಲ್ಲ, ಯಾವುದು ಕೀಳಲ್ಲ ಎನ್ನುವ ನಿಟ್ಟಿನಲ್ಲಿ ಅನೇಕ ಕಾರ್ಯತಂತ್ರ ರೂಪಿಸಿ ಎಲ್ಲ ವೃತ್ತಿಗಳನ್ನು ಸರಿಸಮಾನವಾಗಿ ನೋಡುವಂತೆ ಮಾಡಲು ಪ್ರಯತ್ನ ಮಾಡುವುದು. ವೃತ್ತಿ, ವೃತ್ತಿಗಳ ನಡುವೆ ಇದ್ದ ತಾರತಮ್ಯವನ್ನು ಹೋಗಲಾಡಿ ಸಲು ಅನೇಕ ವೈಜ್ಞಾನಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡನಾದರೂ ಯಶಸ್ಸು ಕಾಣಲು ಸಾಧ್ಯವಾಗಲೇ ಇಲ್ಲ. ಬಸವಣ್ಣನ ನಂತರ ಈ ವೃತ್ತಿಗಳು ಇನ್ನಷ್ಟು ಗಂಭೀರವಾದ ಪರಿಣಾಮ ಪಡೆದುಕೊಂಡು ತಮ್ಮ ವೃತ್ತಿ ವಂಶ ಪಾರಂಪರ್ಯವಾಗಿಯೇ ಮುಂದುವರಿಸುವಂತಾಯಿತು. ಆದರೆ ಭಾರತಕ್ಕೆ ಬ್ರಟಿಷರ ಆಗಮನದಿಂದಾಗಿ ಈ ವಂಶಪಾರಂಪರ್ಯ ವೃತ್ತಿಗಳಿಗೆ ಕೊಡಲಿ ಪೆಟ್ಟು ಬಿದ್ದು ಸ್ವಲ್ಪಮಟ್ಟಿಗೆ ವೃತ್ತಿಗಳಲ್ಲಿನ ವಂಶವೃಕ್ಷ ಬದಲಾವಣೆ ಕಂಡಿತು. ಅಂದಮಾತ್ರಕ್ಕೆ ಈ ವೃತ್ತಿಯಲ್ಲಿನ ಅಸ್ಪೃಶ್ಯತೆ, ಶ್ರೇಷ್ಠ ಮತ್ತು ಕನಿಷ್ಠತೆಯ ತಾರತಮ್ಯಗಳು ಸಂಪೂರ್ಣವಾಗಿ ನಾಶವಾಯಿತು ಎಂದಲ್ಲಾ ಅದು ಇವತ್ತು ಹಾಗೆಯೇ ಮುಂದುವರಿಯುತ್ತಾ ಬರುತ್ತಿದೆ. ಆದರೆ ತಂದೆಯಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ ಹರಿದು ಬರುತ್ತಿದ್ದ ಕುಲ ಕಸುಬು ಕಡಿತಗೊಂಡು ತಂದೆಯ ಉದ್ಯೋಗವನ್ನು ಮಗ ಮುಂದುವರಿಸಬಹುದು ಅಥವಾ ಬಿಡಬಹುದು. ಅದು ಆತನ ವಿವೇಚನೆಗೆ ಬಿಟ್ಟಿದ್ದು ಎಂಬ ಕಾಲ ನಿರ್ಣಯವಾಯಿತು. ಇದರಿಂದ ಪರ್ಯಾಯವಾಗಿ ಇನ್ನೊಂದು ವೃತ್ತಿ ಆಯ್ಕೆ ಮಾಡಿಕೊಳ್ಳುವ ಅವಕಾಶ ಸಿಕ್ಕಿತು.

ಆದರೆ ಇಂದು ವೃತ್ತಿಗಳನ್ನು ಕೇವಲ ಆರ್ಥಿಕ ಹಿನ್ನೆಲೆಯಿಂದ ನೋಡದೆ ಸಾಮಾಜಿಕ ಹಿನ್ನೆಲೆಯಿಂದಲೂ ನೋಡುವ ಜರೂರು ಇದೆ. ಸಾಮಾಜಿಕ ಅಂಶಗಳಿಂದ ಮೇಲು ಕೀಳು ಎನ್ನದೇ ವೃತ್ತಿಗಳು ಇಂದು ಆರ್ಥಿಕತೆಯ ಹಿನ್ನೆಲೆಯಾಗಿ ದೇವಸ್ಥಾನದ ಪೂಜೆಗೆ ಸೀಮಿತವಾಗಿದ್ದವನು ಚಪ್ಪಲಿ ಅಂಗಡಿ ಮಾಲಿಕನಾಗಿದ್ದಾನೆ, ಚಪ್ಪಲಿ ಹೊಲಿಯುತ್ತಿದ್ದವನ್ನು ಪ್ರಭುತ್ವವನ್ನು ನಿರ್ಧರಿಸುವ ಹಂತಕ್ಕೆ ತಲುಪಿದ್ದಾನೆ. ಇದೆಲ್ಲವೂ ಶಿಕ್ಷಣ ಮತ್ತು ವಸಹಾತುಶಾಹಿಯ ಪ್ರಭಾವದಿಂದ ಸಾಧ್ಯವಾಗಿದೆ ಎಂದರೇ ತಪ್ಪಗಲಾರದು. ಇದಕ್ಕಾಗಿ ಬುದ್ಧ, ಬಸವ, ಅಂಬೇಡ್ಕರ್ ರಂತಹ ಸಮಾಜ ಸುಧಾರಕರು ಶ್ರಮಿಸಿರುವುದನ್ನು ಕಾಣಬಹುದು. ಆದರೆ ವೃತ್ತಿಗೆ ಅಂದು ಅಂಟಿಕೊಂಡಿದ್ದ ವೈದಿಕ ರಾಜಕಾರಣದ ಬಣ್ಣ ಬದಲಾಗಿಲ್ಲ. ಕೇವಲ ವೃತ್ತಿಯನ್ನು ಆದಾಯದ ಮೂಲವಾಗಿಯೇ ನೋಡಲಾಗುತ್ತಿದೆಯೇ ಹೊರತು, ಸಾಮಾಜಿಕ ಸಮಾನತೆಯ ಆಧಾರದ ಮೇಲೆ ನೋಡಲಾಗುತ್ತಿಲ್ಲ.

ಇದೊಂದು ಬಗೆಯ ಸಮಸ್ಯೆ ಎದುರಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಪಾರಂಪರಿಕ ವೃತ್ತಿಗಳನ್ನು ಉಳಿಸಿಕೊಂಡು, ಮುಂದುವರಿಸಿಕೊಂಡು ಹೋಗಬೇಕೆ ಅಥವಾ ಬೇಡವೇ ಎಂಬುದರ ಜೊತೆಗೆ ಈ ಪಾರಂಪರಿಕ ವೃತ್ತಿಗಳನ್ನು ಯಾಕೆ ಮುಂದುವರೆಸಬೇಕು ಎಂಬುವುದನ್ನು ಚರ್ಚಿಸುವುದಾಗಿದೆ. ಯಾರ ಅಡಿಯಾಳಾಗದೆ ಯಾವ ನಿಯಂತ್ರಣವೂ ಇಲ್ಲದೇ ತಮ್ಮ ಬದುಕನ್ನು ತಮ್ಮ ಶ್ರಮದ ಮೂಲಕ ಕಟ್ಟಿಕೊಂಡ ಸ್ವಚ್ಛಂದ ಸ್ವತಂತ್ರ ಬದುಕನ್ನು ನಡೆಸಿಕೊಂಡು ಬರುತ್ತಿದ್ದ ಬುಡಕಟ್ಟುಗಳು ಈ ವೃತ್ತಿಪಲ್ಲಟದಿಂದ ಬದುಕನ್ನು ಕಳೆದುಕೊಂಡಿರುವುದನ್ನು ಕಾಣಬಹುದು. ಇದನ್ನು ಯಾವ ದೃಷ್ಟಿಕೋನದಲ್ಲಿ ನೋಡಬೇಕು? ಇಲ್ಲಿ ಪಾರಂಪರಿಕ ವೃತ್ತಿ ಉಳಿಯಬೇಕೆಂದು ಚರ್ಚಿಸುವ ಅನಿವಾರ್ಯತೆ ಇದೆ; ಏಕೆಂದರೆ ಬುಡಕಟ್ಟುಗಳು ತಮ್ಮ ಬದುಕನ್ನು ಅರಣ್ಯದ ಜೊತೆ ಜೊತೆಗೆ ಸಾಗಿಸಿಕೊಂಡು ಬರುತ್ತಿದ್ದವು. ತಮ್ಮ ಬದುಕನ್ನು ಅರಣ್ಯದ ಮೂಲಕವೇ ಕಟ್ಟಿಕೊಂಡಿದ್ದವರು. ಆದರೆ ಬುಡಕಟ್ಟುಗಳಿಂದ ಅರಣ್ಯ ದೂರವಾದ ಮೇಲೆ ಈ ಸಮುದಾಯಗಳ ಬದುಕು ದುಸ್ತರವಾಗಿದೆ. ಒಂದು ಕಡೆ ತಮ್ಮ ಪಾರಂಪರಿಕ ವೃತ್ತಿಯನ್ನು ಬಿಡಲಾಗದೇ ಅಥವಾ ಇತರೆ ವೃತ್ತಿಗಳಿಗೆ ಒಗ್ಗಿಕೊಳ್ಳಲಾಗದೆ ನೀರಿನಿಂದ ಹೊರಗೆ ತೆಗೆದ ಮೀನಿನ ಸ್ಥಿತಿಯಂತೆ ನರಳುವಂತಾಗಿದೆ.

ತಮ್ಮ ಪಾರಂಪರಿಕ ವೃತ್ತಿಯನ್ನು ಬಿಡುವ ಮೂಲಕ ತಮ್ಮ ಸ್ವತಂತ್ರ ಬದುಕನ್ನು ಕಟ್ಟಿಕೊಂಡ ವರ್ಗಗಳು ಒಂದು ಕಡೆಯಾದರೆ ಮತ್ತೊಂದು ಕಡೆ ತಮ್ಮ ಪಾರಂಪರಿಕ ವೃತ್ತಿಯನ್ನು ಕಳೆದುಕೊಂಡು ಬದುಕು ನಡೆಸಲು ಕಷ್ಟಪಡುತ್ತಿರುವ ಜನ ವರ್ಗಗಳು ಇನ್ನೊಂದು ಕಡೆ. ಒಂದು ಕಡೆ ಸಂಸ್ಕೃತಿಯೂ ಹುಟ್ಟಿ ಬೆಳೆದು ನಗರೀಕರಣಗೊಂಡು ಮತ್ತೆ ಸಂಸ್ಕೃತಿಯ ಕಡೆಗೆ ಧಾವಿಸುತ್ತಿರುವ ಸಂದರ್ಭ. ಇನ್ನೊಂದೆಡೆ ಸಂಸ್ಕೃತಿಯಿಂದ ಆರಂಭಗೊಂಡು ನಗರೀಕರಣದ ಕಡೆ ಸಾಗುತ್ತಿರುವ ಸಂದರ್ಭ. ಆದ್ದರಿಂದ ಈ ಎರಡು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕುಲಕಸುಬುಗಳನ್ನು ಚರ್ಚಿಸಬೇಕಾದ ಅವಶ್ಯಕತೆಯಿದೆ. ಏಕೆಂದರೆ ಈ ಎರಡು ವರ್ಗಗಳಿಗೂ ಪರ್ಯಾಯ ಉತ್ತರ ಬೇಕಾಗಿದೆ. ಒಂದು ವರ್ಗ ನಗರೀಕರಣದ ಜೊತೆಜೊತೆಗೆ ಸಾಗಿ

ಪರ್ಯಾಯ ಉತ್ತರವನ್ನು ತಕ್ಕಮಟ್ಟಿಗೆ ಕಂಡುಕೊಂಡಿದ್ದರೂ ತಮ್ಮ ಪಾರಂಪರಿಕ ವೃತ್ತಿಯನ್ನು ಅಸ್ಪೃಶ್ಯತೆ ಶೋಷಣೆಯ ಕಾರಣದಿಂದ ಎಷ್ಟು ಆದಾಯವಿದ್ದರು ಬಿಟ್ಟುಕೊಡಲು ಸಿದ್ಧವಾಗಿದೆ. ವೈದಿಕರಣದ ರಾಜಕೀಯದಿಂದ ಈ ವೃತ್ತಿಗಳು ಶ್ರೇಷ್ಠ ಮತ್ತು ಕನಿಷ್ಠ ಎಂಬ ಹಣೆ ಪಟ್ಟಿಯನ್ನು ಪಡೆದುಕೊಂಡಿದ್ದವು. ಆದರೆ ಇಂದೂ ವೈದಿಕರ ರಾಜಕಾರಣ ಎಲ್ಲರಿಗೂ ಅರ್ಥವಾಗುವ ಹಂತದಲ್ಲಿದೆ. ಇದರ ತಿಳಿವಳಿಕೆಯ ಫಲವಾಗಿಯೋ ಅಥವಾ ಸಮಾಜ ಸುಧಾರಕರು ತಳಸಮುದಾಯದಲ್ಲಿ ಹುಟ್ಟಿ ಪ್ರಭುತ್ವದಲ್ಲಿ ಗುರುತಿಸಿಕೊಂಡಿದ್ದರ ಫಲವಾಗಿಯೇ. ಒಟ್ಟಿನಲ್ಲಿ ಈ ವರ್ಗದ ಬದುಕು ಸರಿಹೋಗುವ ಹಂತದಲ್ಲಿದೆ. ಆದರೆ ತಮ್ಮ ಪಾರಂಪರಿಕ ವೃತ್ತಿಯನ್ನು ಕಳೆದುಕೊಂಡು ದಿಕ್ಕು ತೋಚದೆ ನಿಂತಿರುವ ಬುಡಕಟ್ಟುಗಳ ಅಧ್ಯಯನ ಮಾಡಬೇಕಾದ ಅನಿವಾರ್ಯತೆ ಇದೆ.

ವೈದಿಕ ರಾಜಕಾರಣದಿಂದ ಕುಲಕಸುಬನ್ನು ಬದಲಾಯಿಸಿಕೊಂಡ ಇತರೆ ವರ್ಗಗಳು ಎಚ್ಚೆತ್ತುಕೊಂಡು ಪ್ರಭುತ್ವದ ಕಣ್ಣಿಗೆ ಬಿದ್ದು, ತಮ್ಮ ಬದುಕನ್ನು ತಕ್ಕಮಟ್ಟಿಗೆ ಸರಿಪಡಿಸಿಕೊಂಡಿದ್ದಾರೆ. ಆದರೆ ವೈದಿಕೀಕರಣ ಅಥವಾ ಪ್ರಭುತ್ವದ ಕಣ್ಣಿಗೆ ಬೀಳದ ಬುಡಕಟ್ಟುಗಳ ಬದುಕಿನ ಚರ್ಚೆಯೇ ಬೇರೆಯಾಗಿದೆ. ಈ ಬುಡಕಟ್ಟುಗಳು ಇಂದಿಗೂ ತಮ್ಮ ಪಾರಂಪರಿಕ ವೃತ್ತಿಯನ್ನು ಬಿಡಲಾರದೆ ಮುಂದುವರೆಸಿಕೊಂಡೇ ಬರುತ್ತಿದ್ದಾರೆ. ಅದರಂತೆಯೇ ಇರುಳಿಗರು ಮೂಲತಃ ಬೇಟೆ ಸಂಸ್ಕೃತಿಯ ವರ್ಗಕ್ಕೆ ಸೇರಿದವರೇ ಆಗಿದ್ದಾರೆ. ನಾವು ಮೇಲೆ ಚರ್ಚಿಸಿದಂತೆ ಇವರು ಎರಡನೇ ವರ್ಗಕ್ಕೆ ಸೇರುತ್ತಾರೆ. ಇವರು ಇಂದಿಗೂ ಅರಣ್ಯವನ್ನು ನಂಬಿಕೊಂಡು ಬದುಕುತ್ತಿದ್ದಾರೆ. ತಮ್ಮ ಆಹಾರ ಮತ್ತಿತರ ಅವಶ್ಯಕತೆಗಳಿಗಾಗಿ ಪ್ರಾಣಿಗಳನ್ನು ಬೇಟೆಯಾಡುತ್ತಾ ಜೀವನ ನಡೆಸುತ್ತಿದ್ದಾರೆ. ಇವರು ಬೇಟೆಯ ಸಂಸ್ಕೃತಿಯವರಾದ್ದರಿಂದ ಪ್ರಾಣಿಗಳನ್ನು ಸಾಕುವುದು ಅಥವಾ ಬೆಳೆ ಬೆಳೆಯುವುದು ಅವರ ಚಟುವಟಿಕೆಯ ಭಾಗವಾಗಿಲ್ಲ. ಇವರು ಕುರಿಕಾಯುವವರು ಅಥವಾ ಕೃಷಿಕರಿಗಿಂತ ಭಿನ್ನವಾಗಿಯೇ ಗುರುತಿಸಿಕೊಳ್ಳುತ್ತಾರೆ. ಅನಿವಾರ್ಯವಾಗಿ ತಮ್ಮದೇ ಆದ ಕಿತ್ಲು ಬೇಸಾಯ ಮಾಡುವ ಮೂಲಕ ತಮಗೆ ಬೇಕಾದ ಬೆಳೆಯನ್ನು ಬೆಳೆಯುತ್ತಾರೆ. ವೃತ್ತಿಯಲ್ಲಿ ಇವರು ಬೇಸಾಯಗಾರರಲ್ಲ; ಬೇಟೆಯ ಜೊತೆಜೊತೆಗೆ ಬೇಸಾಯವನ್ನು ರೂಢಿಸಿಕೊಂಡಿದ್ದಾರೆ.

ಇರುಳಿಗರು ಸಂಪೂರ್ಣವಾಗಿ ಅರಣ್ಯವಾಸಿಗಳಾಗಿದ್ದರಿಂದ ಕಾಡಿನಲ್ಲಿ ಸಿಗುವ ಕಾಡು ಪ್ರಾಣಿಗಳು, ಜೇನು, ಔಷಧಿ ಸಸ್ಯಗಳು ಮುಂತಾದ ಅರಣ್ಯ ಪರಿಕರಗಳನ್ನು ಕಾಡಿನಿಂದ ಸಂಗ್ರಹಿಸಿ ತಂದು ತಮ್ಮ ಅವಶ್ಯಕತೆಗೆ ಬೇಕಾದಷ್ಟನ್ನು ಇಟ್ಟುಕೊಂಡು ಉಳಿದಿದ್ದನ್ನು ಗ್ರಾಮ ಅಥವಾ ಪಟ್ಟಣಗಳಿಗೆ ಮಾರಾಟ ಮಾಡಿ ಹಣ ಅಥವಾ ಇತರೆ ಅಗತ್ಯ ವಸ್ತುಗಳನ್ನು ಪಡೆದುಕೊಂಡು ಬದುಕುತ್ತಿದ್ದರು. ಇದರೊಂದಿಗೆ ಕೆಲವು ಅನಿವಾರ್ಯ ಸಂದರ್ಭದಲ್ಲಿ ಬೇಟೆಯ ಜೊತೆ ಜೊತೆಗೆ ಬೇಸಾಯವನ್ನು ಮಾಡುತ್ತಿದ್ದರು. ಇವರು ಮಾಡುವ ಬೇಸಾಯವನ್ನು ಕಿತ್ಲು ಬೇಸಾಯ ಎಂದು ಕರೆಯುತ್ತಾರೆ. ಅಂದರೆ ಅರಣ್ಯದ ಸ್ವಲ್ಪ ಜಾಗದಲ್ಲಿದ್ದ ಮುಳ್ಳುಗಂಟಿಗಳನ್ನು

ಕಡಿದು ಹಸನು ಮಾಡಿಕೊಂಡು ಗುದ್ದಲಿಯಿಂದ ಅಗೆದು ಕೈಯಿಂದ ಬೆಳೆಯುವ ಬೆಳೆಯ ಬೀಜಗಳನ್ನು ಚೆಲ್ಲಿ ಬೆಳೆ ಬೆಳೆದು ಪ್ರಾಣಿಪಕ್ಷಿಗಳೆಲ್ಲ ತಿಂದು ಉಳಿದವನ್ನು ತಮ್ಮ ಬದುಕಿಗಾಗಿ ಬಳಸಿಕೊಳ್ಳುವುದು ಇದನ್ನು ಕಿತ್ಲು ಬೇಸಾಯ (Sifting cultivation) ಎಂದು ಕರೆಯುತ್ತಾರೆ. ಇದು ಸಾಂದರ್ಭಿಕ ಬೇಸಾಯದ ವಿಧಾನ ಮಾತ್ರವಾಗಿರುತ್ತದೆ. ಏಕೆಂದರೆ ಒಂದೇ ಪ್ರದೇಶದಲ್ಲಿ ಪುನಃ ಪುನಃ ಬೆಳೆಯುವುದಿಲ್ಲ. ಒಂದು ಅಥವಾ ಎರಡು ಬಾರಿ ಮಾತ್ರ ಬೆಳೆದು ನಂತರ ಜಾಗವನ್ನು ಬದಲಿಸುತ್ತಾರೆ. ಈ ಜಾಗವನ್ನು ಹುಡುಕಲು ತಮ್ಮ ಕುಲದ ಒಡೆಯನಲ್ಲಿ ಕಣಿ ಕೇಳಿಸಿ ಸೂಕ್ತ ಜಾಗವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಕಣಿಗಾರ ತೋರಿಸಿದ ಜಾಗವನ್ನು ತಮ್ಮ ಕಿತ್ಲು ಬೇಸಾಯಕ್ಕೆ ಬಳಸಿಕೊಳ್ಳುತ್ತಾರೆ. ಬೇಟೆಗಾರರಾದ ಇರುಳಿಗರು ಬೇಟೆಗಾರಿಕೆಯನ್ನು ನಂಬಿಕೊಂಡು ಬದುಕುತ್ತಿದ್ದಾರೆ. ಇವರು ಬೇಟೆಯನ್ನು ಎರಡು ಉದ್ದೇಶಗಳಿಗೆ ಅವಲಂಭಿಸಿಕೊಂಡಿದ್ದಾರೆ. ಮೊದಲನೆಯದಾಗಿ ಇವರು ಕಾಡಿನಲ್ಲಿ ಸಿಗುವ ಗೆಡ್ಡೆಗೆಣಸು, ಗಿಡಮೂಲಿಕೆ ಮತ್ತು ಔಷಧಿ ಸಸ್ಯಗಳನ್ನು ಸಂಗ್ರಹಿಸುವುದು ಹಾಗೂ ಅದನ್ನು ಮಾರಿಕೊಂಡು ಜೀವನ ನಡೆಸುವುದು.

ಎರಡನೆಯದಾಗಿ ಕಾಡು ಪ್ರಾಣಿಗಳನ್ನು ಬೇಟೆಯಾಡಿ ಆಹಾರಕ್ಕಾಗಿ ಬಳಸಿಕೊಂಡು ಹೆಚ್ಚುವರಿಯನ್ನು ಮಾರಿ ಬದುಕು ರೂಪಿಸಿಕೊಳ್ಳುವುದು. ಇವರ ಪ್ರಮುಖ ಕಸುಬಾಗಿತ್ತು. ಆದರೆ ಇಂದು ಅರಣ್ಯ ನೀತಿಗಳು ಇವರ ಬದುಕನ್ನು ಕಿತ್ತುಕೊಂಡಿವೆ. ಇರುಳಿಗರು ಬೇಟೆಯಲ್ಲಿ ನಿಪುಣರಾಗಿದ್ದು, ಇವರಿಗೆ ಅರಣ್ಯದ ನಾಡಿ ಮಿಡಿತದ ಅನುಭವವಿದೆ ಎಂದು ವಿದ್ವಾಂಸರುಗಳು ಒಪ್ಪಿಕೊಳ್ಳುತ್ತಾರೆ. ದಟ್ಟ ಅರಣ್ಯದಲ್ಲಿ ವಿರಾಜಮಾನವಾಗಿ ಬದುಕುವ ಇವರು ವಾಸನೆ ಹೆಜ್ಜೆ, ಶಬ್ದ, ಗಾಳಿ ಮತ್ತು ವಾತಾವರಣದ ಏರಿಳಿತ ಹಾಗೂ ಅರಣ್ಯದಲ್ಲಿನ ಬದಲಾವಣೆಯನ್ನು ಗುರುತಿಸಿ ಮುಂದಿನ ಆಗುಹೋಗುಗಳ ಬಗ್ಗೆ ತಿಳಿದುಕೊಳ್ಳುವ ಜ್ಞಾನ ಹೊಂದಿದ್ದಾರೆ. ಜೊತೆಗೆ ಕೇವಲ ಹೆಜ್ಜೆ ಮತ್ತು ವಾಸನೆಯಿಂದ ಇಂತಹವುದೇ ಪ್ರಾಣಿ ಅಥವಾ ವಸ್ತು ಎಂದು ನಿಖರವಾಗಿ ಹೇಳುತ್ತಾರೆ. ಬೇಟೆಯ ಸಂದರ್ಭದಲ್ಲಿ ತಮ್ಮ ಹಳೆಯ ಪರಿಕರಗಳನ್ನು ಇಂದಿಗೂ ಬಳಸುತ್ತಿರುವುದು ವಿಶೇಷವಾಗಿದೆ. ನಗರೀಕರಣದ ಯಾವ ಮಾರಣಾಂತಿಕ ಆಯುಧಗಳ ಮೊರೆಹೋಗದೆ ತಮ್ಮ ಹಳೆಯ ಮಾದರಿಯಲ್ಲಿ ಬೇಟೆಯಾಡಿ ಬದುಕುತ್ತಿರುವುದು ಇವರ ಪಾರಂಪರಿಕತೆಯನ್ನು ಸೂಚಿಸುತ್ತದೆ.

ಇರುಳಿಗರಿಗೂ ಜೇನು ಬೇಟೆಗೂ ಅತ್ಯಂತ ಅವಿನಾಭಾವ ನಂಟು ಇದೆ. ಇರುಳಿಗರು ಎತ್ತರವಾದ ಬಂಡೆಗಳನ್ನು ಲೀಲಾಜಾಲವಾಗಿ ಏರುತ್ತಾರೆ. ಜೇನು ಕೀಳುವುದರಲ್ಲಿ ತಮ್ಮದೆ ನೈಪುಣ್ಯತೆಯನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಇವರು ಜೇನಿನ ಬೇಟೆಯ ಸಂದರ್ಭದಲ್ಲಿ ಅನುಸರಿಸುವ ಮಾರ್ಗಗಳು ಇಂದಿಗೂ ಜೀವ ಸಂಕುಲದ ಉಳಿವಿನೊಂದಿಗೆ ಸಾಗಿದೆ. ಜೇನು ಬೇಟೆಯ ಜೊತೆಗೆ ಜೇನು ಸಂಕುಲವನ್ನು ಉಳಿಸುವ ಕೆಲಸವನ್ನು ಇರುಳಿಗರು

ಮಾಡುತ್ತಾರೆ. ಜೇನು ಕೀಳುವುದು ಒಂದು ಪವಿತ್ರ ಕಾರ್ಯ ಎಂದು ನಂಬಿಕೊಂಡಿದ್ದು, ಇದು ದೇವರು ನಮಗೆ ಕೊಟ್ಟಿರುವ ವರ ಎಂದು ಭಾವಿಸಿಕೊಂಡಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಇವರಲ್ಲಿ ಒಂದು ಐತಿಹ್ಯವಿದೆ. ಇದನ್ನು ಕರ್ನಲ್ ಮೆಕೆಂಜಿ ಸಂಗ್ರಹಿಸಿದ್ದಾರೆ. ಕಾಡಿನಲ್ಲಿ ಜೇನು ಹುಳುಗಳ ಕಾಟದಿಂದ ಜನಸಾಮಾನ್ಯರು ಬದುಕುವುದೇ ದುಸ್ತರವಾಗಿತ್ತು. ಪ್ರತಿನಿತ್ಯ ಭಯದಿಂದ ಬದುಕುತ್ತಾ ಈ ಸ್ಥಳದಲ್ಲಿ ವಾಸಿಸುವುದು ಬೇಡ ಎಂದು ನಿರ್ಧರಿಸಿ ತಾವು ವಾಸಮಾಡುವ ಜಾಗದಿಂದ ಗುಳೆ ಹೊರಡುತ್ತಿದ್ದರು. ಹೇಗಾದರೂ ಮಾಡಿ ಈ ಸಮಸ್ಯೆಗೆ ಪರಿಹಾರಕೊಂಡುಕೊಳ್ಳ ಬೇಕೆಂದು ಊರ ಗೌಡರಲ್ಲಿ ಚಿಂತಿಸಿ ಎಲ್ಲರೂ ಕುಲಕಟ್ಟೆಯಲ್ಲಿ ಪಂಚಾಯಿತಿ ಮಾಡಿ ಅರಣ್ಯ ದೇವತೆಯ ಬಳಿ ಹೋಗಿ ಕೇಳಿಕೊಂಡರಂತೆ. ವನದೇವತೆ ಪ್ರತ್ಯಕ್ಷಳಾಗಿ ನಿಮ್ಮ ಸಮಸ್ಯೆ ಏನು ಎಂದು ಕೇಳುತ್ತಾಳೆ. ಆಗ ಎಲ್ಲರೂ ತಮ್ಮ ಆಳಲನ್ನು ಹೇಳಿಕೊಳ್ಳುತ್ತಾ ತಾಯಿ ನಾವು ವಾಸ ಮಾಡಲು ನಿರ್ಧರಿಸಿದ ಜಾಗದಲ್ಲಿ ಜೇನು ಹುಳುಗಳು ಬಂದು ಗೂಡು ಕಟ್ಟಿಕೊಂಡು ನಮಗೆ ಪ್ರತಿನಿತ್ಯ ಕಚ್ಚಿ ಕಾಟಕೊಡುತ್ತವೆ. ಇದರಿಂದ ನಮಗೆ ಮುಕ್ತಿ ಕೊಡಬೇಕೆಂದು ಕೇಳಿಕೊಳ್ಳುತ್ತಾರೆ. ಆಗ ವನದೇವತೆ ತನ್ನ ಬೆವರಿನಿಂದ ಒಬ್ಬ ವ್ಯಕ್ತಿಯನ್ನು ಸೃಷ್ಟಿ ಮಾಡುತ್ತಾಳೆ. ಅವನು ರಾಕ್ಷಸರ ಮೂಲದವನಾಗಿದ್ದು, ಇರುಳಿಗರ ಮೂಲ ವ್ಯಕ್ತಿ. ಇವನು ಇರುಳಿಗರ ಮೂಲ ಪುರುಷನಾಗಿದ್ದಾನೆ. ಇವನ ದೇಹದ ಬೆವರಿನ ವಾಸನೆಯಿಂದಲೇ ಜೇನುಹುಳುಗಳನ್ನು ಓಡಿಹೋಗುತ್ತವೆ. ಇವನು ತಮ್ಮ ಕೈಗಳಿಂದ ಜೇನಿನ ಗೂಡಿನ ಮೇಲೆ ಕೈಯಾಡಿಸಿದರೆ ಸಾಕು ಹುಳುಗಳು ಹಾರಿ ಹೋಗುತ್ತವೆ ಎಂದು ದೇವತೆ ಅನುಗ್ರಹ ನೀಡಿ ಇರುಳಿಗರನ್ನು ಸೃಷ್ಟಿಸಿದರು ಎಂಬ ಕಥೆಯನ್ನು ಹೇಳುತ್ತಾರೆ.[೨೮]

ಮೆಕೆಂಜಿಯ ಈ ಕಥೆಯಂತೆಯೇ ಇರುಳಿಗರು ಕೂಡ ಜೇನು ಸಂಗ್ರಹಣೆಯಲ್ಲಿ ನಿಪುಣರಾಗಿದ್ದಾರೆ. ಇವರು ಎಂತಹ ಹೆಬ್ಬಂಡೆಗಳಿದ್ದರೂ ಕೇವಲ ಮಾಲ್‌ಗಳನ್ನು ಕಟ್ಟಿಕೊಂಡು ಯಾವುದರ ಸಹಾಯವಿಲ್ಲದೆಯೇ ಎಂತಹ ಜೇನುಗಳನ್ನಾದರೂ ಬಿಡಿಸುತ್ತಾರೆ. ಇವರಿಗೆ ಜೇನಿನ ವಿಷಯದಲ್ಲಿ ಸೂಕ್ಷ್ಮವಾದ ಪಾರಂಪರಿಕ ಜ್ಞಾನವಿದೆ. ಇವರು ಬಿಡಿಸುವ ಪ್ರಮುಖ ಜೇನುಗಳೆಂದರೆ ಹೆಜ್ಜೇನು, ಕಿರುಜೇನು, ನಸುರು, ತುಡುವೆ, ಎಮ್ಮೆಜೇನು, ಕೇಸರ ಮೂಲೆಜೇನು, ಹುತ್ತದಜೇನು, ಹೆಬ್ಬಂಡೆಜೇನು, ಮರಜೇನು, ಕೋಲುಜೇನು, ಕಿರುಂಟು, ನಾಯಿಜೇನು ಮುಂತಾದ ಜೇನುಗಳ ಬಗ್ಗೆ ತಿಳಿದುಕೊಂಡಿದ್ದಾರೆ. ಹಾರಾಡುವ ಜೇನಿನ ಹಿಂದೆ ಹೋಗಿ ಜೇನಿನ ಗೂಡು ಪತ್ತೆ ಹಚ್ಚುವ ಚಾಕಚಕ್ಯತೆ ಇದೆ. ಇರುಳಿಗರು ಮೂಲತಃ ಜೇನು ಸಂಗ್ರಹಕರಾಗಿದ್ದರು.[೨೯] ಎಲ್.ಕೆ.ಅನಂತಕೃಷ್ಣ ಅಯ್ಯರ್ ಅವರು ಇರುಳಿಗರ ಜೇನು ಸಂಗ್ರಹಣೆಯ ಕುರಿತು ಹೀಗೆ ಹೇಳುತ್ತಾರೆ. "The Iruligas civilng onhill slopes and in the forest of the plain engage themselves chinefly in gathering honey and collecting forest product honey gathering is their speciality"[೩೦] ಎಂದಿದ್ದಾರೆ.

ಇರುಳಿಗರು ಜೇನು ಕೀಳುವುದರಲ್ಲಿ ತಮ್ಮದೇ ಕೆಲವು ಪಾರಂಪರಿಕ ಮಾದರಿಗಳನ್ನು ಬಳಸಿಕೊಳ್ಳುತ್ತಾರೆ. ಹೆಜ್ಜೇನು ಕೀಳುವಾಗ ಇರುಳಿಗರು ಅನುಸರಿಸುವ ಸಾಹಸವು ಮೈನವಿರೇಳುತ್ತದೆ. ಏಕೆಂದರೆ ಹೆಜ್ಜೇನು ಸಾಮಾನ್ಯವಾಗಿ ದೊಡ್ಡ ದೊಡ್ಡ ಬಂಡೆಯ ಅತ್ಯಂತ ಕಡಿದಾದ ಭಾಗ(Slopes) ದಲ್ಲಿ ಕಂಡುಬರುತ್ತದೆ. ಇಲ್ಲವಾದರೆ ಎತ್ತರವಾದ ಮರದ ತುದಿಯಲ್ಲಿ ಕಟ್ಟಿರುತ್ತದೆ. ಇಂತಹ ಜೇನುಗಳನ್ನು ಇರುಳಿಗರು ಆಯಾಸವಿಲ್ಲದೆ ಕೀಳುತ್ತಾರೆ. ದೊಡ್ಡ ದೊಡ್ಡ ಬಂಡೆಯ ಮೇಲಿರುವ ಜೇನುಗಳನ್ನು ಕೀಳಲು ಮಾಲ್‌ಗಳನ್ನು ಕಟ್ಟಿಕೊಳ್ಳುತ್ತಾರೆ. ಈ ಮಾಲ್‌ಗಳೆಂದರೆ ಒಂದು ಬಿದಿರಿನ ದಬ್ಬೆಯನ್ನು ತೆಗೆದುಕೊಂಡು ಅದನ್ನು ಎರಡು ಅಡಿಗಳಂತೆ ಕತ್ತರಿಸಿಕೊಂಡು ತುಂಡು ಮಾಡಿಕೊಂಡ ಪ್ರತಿ ದಬ್ಬೆಗೆ ಒಂದುವರೆ ಅಡಿಯಷ್ಟು ಅಂತರ ಕಾಯ್ದುಕೊಂಡು ಹಗ್ಗದಿಂದ ಕಟ್ಟುತ್ತಾರೆ. ಹಿಂದೆ ಕತ್ತಾಳೆ ಅಥವಾ ಅರಣ್ಯದಲ್ಲಿ ಸಿಗುತ್ತಿದ್ದ ಇತರೆ ಹಂಬುಗಳನ್ನು ಬಳಸಿಕೊಂಡು ಮಾಲ್‌ಗಳನ್ನು ತಯಾರಿಸಿಕೊಳ್ಳುತ್ತಿದ್ದರಂತೆ.

ಹೀಗೆ ಮಾಲ್‌ಗಳನ್ನು ತಯಾರಿಸಿಕೊಂಡು ಬಂಡೆಯ ನೆತ್ತಿಯ ಮೇಲಿನಿಂದ ಹೆಜ್ಜೇನು ಕಟ್ಟಿರುವ ಜಾಗಕ್ಕೆ ಮಾಲ್ ಮೂಲಕ ಇಳಿದು ಬರುತ್ತಾರೆ. ಬಂಡೆಯ ನೆತ್ತಿಯ ಮೇಲೆ ಮಾಲ್‌ನ ತುದಿಯನ್ನು ಮರಕ್ಕೆ ಕಟ್ಟಿರುತ್ತಾರೆ. ಇಲ್ಲವಾದರೆ ನಾಲ್ಕರಿಂದ ಐದು ಜನ ಮಾಲ್‌ನ್ನು ಹಿಡಿದುಕೊಂಡು ನಿಲ್ಲುತ್ತಾರೆ. ಆದರೇ ಒಬ್ಬನು ತಕ್ಷಣ ತನ್ನ ಬಾಯಲ್ಲಿ ಬೆಂಕಿ ಹಚ್ಚಲು ಬೇಕಾದ ಪಂಜನ್ನು ಕಟ್ಟಿಕೊಂಡಿರುತ್ತಾನೆ. ಸೊಂಟಕ್ಕೆ ಹಗ್ಗವನ್ನು ಕಟ್ಟಿಕೊಂಡು ಮೇಲಿನಿಂದ ಇಳಿದು ಹೆಜ್ಜೇನು ಬಳಿಗೆ ಬರುತ್ತಾನೆ. ತಾನು ಬಾಯಲ್ಲಿ ಕಚ್ಚಿಕೊಂಡಿದ್ದ ಪಂಜು (ಸೂಟೆ)ಗೆ ಬೆಂಕಿಯನ್ನು ಹಚ್ಚಿಕೊಂಡು ಜೇನಿಗೆ ಹಿಡಿಯುತ್ತಾನೆ. ಇದರಿಂದ ಹುಳುಗಳು ಹಾರಿ ಹೋಗುತ್ತವೆ. ಇದಾದ ಮೇಲೆ ಏನಾದರೂ ಮಡಿಕೆ ಅಥವಾ ಪಾತ್ರೆಯ ಅವಶ್ಯವಿದ್ದರೆ ಹಗ್ಗ ಹಿಡಿದು ನಿಂತವರಿಗೆ ಕೊಡುವಂತೆ ಹೇಳುತ್ತಾನೆ. ಪಾತ್ರೆಯನ್ನು ಪಡೆದುಕೊಂಡು ತುಪ್ಪದ ಕೊಡವನ್ನು ಕುಡುಗೋಲಿನಿಂದ ಕೊಯ್ದು ಪಾತ್ರೆಯ ತುಂಬ ತುಂಬಿಸಿಕೊಳ್ಳುತ್ತಾನೆ. ಅವಶ್ಯವಿದ್ದರೆ ಇನ್ನೊಂದು ಪಾತ್ರೆಯನ್ನು ತರಿಸಿಕೊಳ್ಳುತ್ತಾನೆ. ರಾಡೆಯನ್ನು ಕೆಳಗಡೆಗೆ ಕೊಯ್ದು ಬಿಸಾಡಿ ಬರಿ ತುಪ್ಪವನ್ನು ಮಾತ್ರ ಸಂಗ್ರಹಿಸುತ್ತಾರೆ.

ಇರುಳಿಗರು ಜೇನಿಗೆ ಬೆಂಕಿ ಹಚ್ಚುವುದಕ್ಕೆ ಒಂದು ಸಾಂಪ್ರದಾಯಿಕ ನಂಬಿಕೆ ಇದೆ. ಜೇನುಹುಳುಗಳನ್ನು ಬೆಂಕಿಯಿಂದ ಸುಟ್ಟರೂ ಪರವಾಗಿಲ್ಲ, ಆದರೆ ಔಷಧಿಗಳನ್ನು ಸಿಂಪಡಿಸಿಕೊಂಡು ನಾವು(ಸವರಿಕೊಂಡು) ಜೇನು ಬಿಡಿಸುವುದಿಲ್ಲ ಎನ್ನುತ್ತಾರೆ. ಏಕೆಂದರೆ ಔಷಧಿ ಸಿಂಪಡಿಸಿಕೊಂಡು ಜೇನು ಕಿತ್ತರೆ ಇಡೀ ಜೇನು ಹುಳುವಿನ ಸಂತತಿಯೇ ನಾಶವಾಗಿ ಬಿಡುತ್ತದೆ. ಆದರೆ ಬೆಂಕಿ ಯಿಂದ ಕೆಲವು ಹುಳುಗಳು ಸತ್ತರೂ ಇನ್ನುಳಿದ ಹುಳುಗಳು ಸಂತಾನೋತ್ಪತ್ತಿ ಮಾಡಿಕೊಳ್ಳುತ್ತವೆ ಎನ್ನುವ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ.

ಆದ್ದರಿಂದಲೇ ಜೇನು ಕೀಳಲು ಅವರಿಗೆ ಎಲ್ಲ ರೀತಿಯ ಔಷಧಿಯ ಗಿಡ ಮೂಲಿಕೆಗಳು ಗೊತ್ತಿದ್ದರೂ ಅವನ್ನು ಬಳಸದೆ ಬೆಂಕಿಯಿಂದಲೇ ಜೇನನ್ನು ಸಂಗ್ರಹಿಸುವ ಕೆಲಸ ಮಾಡುತ್ತಾರೆ.

ಜೇನು ಮರದಲ್ಲಿದ್ದರೆ ಆ ಮರದ ಕೆಳಗಡೆ ತರಗು ಪುಳ್ಳೆಗಳಿಂದ ಬೆಂಕಿ ಹೊತ್ತಿಸಿ ಅದಕ್ಕೆ ಕಾಡುಮೆಣಸಿನ ಸೊಪ್ಪು, ಇಸ್ದರೆ ಸೊಪ್ಪು, ಬೇವಿನ ಸೊಪ್ಪು ಮುಂತಾದ ಸೊಪ್ಪುಗಳನ್ನು ಹಾಕಿ ಹೊಗೆ ಎಬ್ಬಿಸುತ್ತಾರೆ. ಈ ಹೊಗೆಯನ್ನು ತಾಳಲಾರದೆ ಹುಳುಗಳು ಹಾರಿ ಹೋಗುತ್ತವೆ ಅಥವಾ ಮತ್ತೆ ಕೆಲವು ಹುಳಗಳು ಬೆಂಕಿಗೆ ಬಂದು ಬೀಳುತ್ತವೆ. ಈ ವಿಧಾನದ ಮೂಲಕವು ಜೇನು ಸಂಗ್ರಹಿಸಿಕೊಳ್ಳುತ್ತಾರೆ. ಇನ್ನುಳಿದ ಇತರೆ ಜೇನುಗಳನ್ನು ನಿರಾಯಾಸವಾಗಿ ಕೀಳುವ ಕಲೆಯನ್ನು ಹೊಂದಿದ್ದಾರೆ.

ಪರಂಪರಾನುಗತವಾಗಿ ಜೇನು ಬೇಟೆ ಎಂಬುದು ಇರುಳಿಗರಲ್ಲಿ ಒಂದು ಕುಲ ವೃತ್ತಿಯಾಗಿ ಬಂದಿದೆ. ಇರುಳಿಗರು ಜೇನು ಕೀಳುವಾಗ ತಮ್ಮದೇ ಆದ ಕೆಲವು ನೀತಿ ನಿಯಮಗಳನ್ನು ಪಾಲಿಸುತ್ತಾರೆ. ಸೂತಕದವರು, ಮೈನೆರೆದವರು, ಜೇನಿನ ಬಳಿ ಹೋಗದಂತೆ ನೋಡಿಕೊಳ್ಳುತ್ತಾರೆ. ಹಾಗೆಯೇ ಜೇನು ಕಿತ್ತ ಕಡ್ಡಿಯನ್ನು ತಲೆಯ ಸುತ್ತ ಮೂರು ಸುತ್ತು ಸುತ್ತಿ ಮೆಳೆ ಅಥವಾ ಮರದ ಮೇಲೆ ಎಸೆಯುತ್ತಾರೆ. ಕೇಳಿದರೆ ಮತ್ತೆ ಜೇನು ಸಿಗುತ್ತದೆ ಎಂದು ಹೇಳುತ್ತಾರೆ. ತಮ್ಮ ಅತಿಥಿ ಸತ್ಕಾರವು ಜೇನು ನೀಡುವ ಮೂಲಕವೇ ನಡೆಯುತ್ತಿದ್ದರ ಬಗ್ಗೆ ಹೇಳುತ್ತಾರೆ. ಒಟ್ಟಾರೆಯಾಗಿ ಇರುಳಿಗರ ಪಾರಂಪರಿಕ ವೃತ್ತಿಯಾದ ಜೇನು ಬೇಟೆಯು ಇಂದು ಸಂಪೂರ್ಣವಾಗಿ ನಶಿಸುವ ಹಂತಕ್ಕೆ ಬಂದು ನಿಂತರೆ ಇದಕ್ಕೆ ಇರುಳಿಗರು ಕಾರಣರಲ್ಲ. ಇರುಳಿಗರು ಕಾಡು ಪ್ರಾಣಿಗಳನ್ನು ಬೇಟೆಯಾಡುವ ಕೆಲವು ಸಾಂಪ್ರದಾಯಿಕ ವಿಧಾನಗಳು ಹೀಗಿವೆ.

ಉಡದ ಬೇಟೆ(ಜಿವಾಜಿ): ಸಾಮಾನ್ಯವಾಗಿ ಉಡ ಕಲ್ಲು ಸಂದಿಗಳಲ್ಲೇ ಕಂಡುಬರುತ್ತದೆ. ಅಂದರೆ ಎರಡು ಹೆಬ್ಬಂಡೆಗಳ ನಡುವಿನ ಕಿರಿದಾದ ಜಾಗದಲ್ಲಿ ಉಡಗಳು ಹೆಚ್ಚಾಗಿ ಕಂಡು ಬರುತ್ತವೆ. ಉಡದ ಹೆಜ್ಜೆಯನ್ನು ಗಮನಿಸಿದ ಇರುಳಿಗರು ಅದು ಅಲ್ಲಿ ಇದೆಯೋ ಅಥವಾ ವಾಸವನ್ನು ಕೊನೆಗಾಣಿಸಿ ಹೊರಟು ಹೋಗಿದೆಯೇ ಎಂದು ಹೆಜ್ಜೆಯನ್ನು ನೋಡಿಯೇ ಖಚಿತಪಡಿಸಿಕೊಳ್ಳು ತ್ತಾರೆ. ಹೀಗೆ ಖಚಿತ ಪಡಿಸಿಕೊಂಡು ಒಂದು ಬದಿಯ ಜಾಗವನ್ನು ಮಾತ್ರ ಬಿಟ್ಟು ಉಳಿದೆಲ್ಲಾ ಜಾಗವನ್ನು ಕಲ್ಲು ಸೊಪ್ಪುಗಳಿಂದ ಮುಚ್ಚುತ್ತಾರೆ. ಒಂದು ಅಥವಾ ಎರಡು ಕಡೆ ಮಾತ್ರ ಹೊಗೆ ಹಾಕಲು ಜಾಗವನ್ನು ಬಿಟ್ಟುಕೊಂಡಿರುತ್ತಾರೆ. ಈ ಜಾಗವನ್ನು ಉಡಪಳೆ, ಅಡಪ, ಪುಡಬಂಗು ಎಂಬ ಹೆಸರುಗಳಿಂದ ಕರೆಯುತ್ತಾರೆ. ಈ ಜಾಗದಲ್ಲಿ ದೊಣ್ಣೆ ಅಥವಾ ಕುಡುಗೋಲನ್ನು ಹಿಡಿದು ಒಬ್ಬ ವ್ಯಕ್ತಿ ಕಾಯ್ದು ಕುಳಿತಿರುತ್ತಾನೆ.

ಈ ಉಡುಪಳೆ ಅಥವಾ ಪುಡಿಬಂಗು ಜಾಗದಲ್ಲಿ ಗುಂಡಿ ತೋಡಿ ಸುಮಾರು ಎರಡ ರಿಂದ ಮೂರು ಅಡಿ ಆಳದಲ್ಲಿ ಗುಂಡಿ ಮಾಡಿ ಪುಳ್ಳೆ ಸೌದೆಗಳನ್ನು ಹಾಕಿ ಬೆಂಕಿ ಹಚ್ಚುತ್ತಾರೆ.

ಹಾಗೆ ಬೆಂಕಿ ಹತ್ತಿದ ಕೂಡಲೇ ಅದಕ್ಕೆ ಸೊಪ್ಪು ಹಾಕಿ ಹೊಗೆ ಹಬ್ಬಿಸುತ್ತಾರೆ. ಹೊಗೆಯನ್ನು ದಟ್ಟವಾಗಿಟ್ಟು ಆ ಹೊಗೆಯು ಹೆಬ್ಬಂಡೆಯ ಕಲ್ಲು ಸಂದಿಗೆ ನುಗ್ಗುವ ವ್ಯವಸ್ಥೆ ಮಾಡಿರುತ್ತಾರೆ. ಈ ಹೊಗೆಯನ್ನು ತಾಳಲಾರದೆ ಅಲ್ಲಿರುವ ಉಡ ಹೊರಗೆ ಬರುತ್ತದೆ.

ಉಡ ಹೊರಗೆ ಬರುವ ಜಾಗದಲ್ಲಿ ಮೊದಲೇ ಖಾತರಿಪಡಿಸಿಕೊಂಡು ಕಾಯುತ್ತಾ ಇದ್ದವರು ಬಂದ ಕೂಡಲೇ ಹಿಡಿದುಕೊಳ್ಳುತ್ತಾರೆ. ಹೀಗೆ ಹಿಡಿದುಕೊಂಡ ಉಡವಿನ ಕಾಲನ್ನು ಮುರಿದು ಬಾಲವನ್ನು ಕೊಯ್ದು ಕಾಲಿನ ನರಕ್ಕೂ ಕುತ್ತಿಗೆಗೂ ಸೇರಿಸಿ ಕಟ್ಟುತ್ತಾರೆ. ಉಡದ ಚೂರು ಮಾಂಸವನ್ನು ಕತ್ತರಿಸಿ ಒಂದು ಎಲೆಯ ಮೇಲೆ ಇಟ್ಟು ಅದನ್ನು ಕಾಡು ದೇವತೆಗೆ ಅರ್ಪಿಸುತ್ತಾರೆ. ನಂತರ ಮನೆಗೆ ತೆಗೆದುಕೊಂಡು ಹೋಗಿ ಅಡುಗೆ ಮಾಡಿಕೊಂಡು ತಿನ್ನುತ್ತಾರೆ.

ಮೊಲದ ಬೇಟೆ(ಸೊಬ್ಬಿ): ಮೊಲವು ಸಾಮಾನ್ಯವಾಗಿ ರಾತ್ರಿ ಸಮಯದಲ್ಲಿ ಹಸಿರು ಹುಲ್ಲು ಮೇಯಲು ರಾಗಿ ಹೊಲಗಳ ಹತ್ತಿರ ಬರುತ್ತದೆ. ಇದನ್ನು ಹಿಡಿಯಲು ಇರುಳಿಗರು ಎರಡು ವಿಧಾನ ಬಳಸುತ್ತಾರೆ. ಒಂದು ಉಳು ಬಿಡುವುದು. ಮತ್ತೊಂದು ಬ್ಯಾಟರಿ ಹಾಕಿ ಹೊಡೆಯುವುದು. ಉರುಳು ಅಥವಾ ಬಿಡುವುದು ಎಂದರೆ ೧೩ರಿಂದ ೧೪ ಮೀಟರ್‌ನ ತಂತಿಯನ್ನು ತೆಗೆದುಕೊಂಡು ಅದನ್ನು ಉರುಳು ಮಾಡುತ್ತಾರೆ. ಅಂದರೆ ಮೊಲದ ತಲೆಯು ಆ ಉರುಳಿನ ಒಳಗೆ ಹೋದ ತಕ್ಷಣ ಮೊದಲು ಕುತ್ತಿಗೆಗೆ ಬೀರಿಕೊಳ್ಳುವಂತೆ ಉರುಳನ್ನು ಸಿದ್ಧಪಡಿಸಲಾಗುತ್ತದೆ. ಇದನ್ನು ಗದ್ದೆ ಅಥವಾ ರಾಗಿಯ ಹೊಲದ ತೆವರಿ(ಬದು)ಗಳಲ್ಲಿ ಎರಡು ಗೂಟವನ್ನು ನೆಟ್ಟು ತಂತಿಯ ಎರಡು ತುದಿಗಳನ್ನು ಗೂಟಕ್ಕೆ ಕಟ್ಟುತ್ತಾರೆ. ಮಧ್ಯ ಭಾಗದಲ್ಲಿ ಸುರುಳಿಯಾಕಾರದ ಗಂಟು ಬಿಟ್ಟಿರುತ್ತಾರೆ. ಮೊಲ ರಾಗಿಯ ಪೈರನ್ನು ತಿನ್ನಲು ಅಥವಾ ತಿಂದ ನಂತರ ಹೋಗುವ ಜಾಗವನ್ನು ಮೊದಲೇ ಖಾತರಿಪಡಿಸಿಕೊಂಡು ಉರುಳನ್ನು ಕಟ್ಟಿರುತ್ತಾರೆ. ಮೊಲ ಪೈರು ತಿಂದು ರಭಸವಾಗಿ ಹೊರ ಬರುವಾಗ ಒಳ ಬರುವಾಗ ಅಥವಾ ಉಳ್ಳಿನ ಕುಣಿಕೆಗೆ ತಲೆ ಹಾಕುತ್ತದೆ. ಆಗ ತಕ್ಷಣ ಆ ಉಳ್ಳು ಕುತ್ತಿಗೆಯನ್ನು ಬಿಗಿದುಕೊಳ್ಳುತ್ತದೆ. ಬೆಳಗ್ಗೆ ಬಂದು ಆ ಮೊಲವನ್ನು ತೆಗೆದುಕೊಂಡು ಹೋಗಿ ಅಡುಗೆ ಮಾಡಿಕೊಳ್ಳುತ್ತಾರೆ.

ಇನ್ನೊಂದು ಬಗೆ ಎಂದರೆ ಬ್ಯಾಟರಿಯನ್ನು ಬಳಸುವ ಮೂಲಕ ರಾತ್ರಿ ಸಮಯದಲ್ಲಿ ಮೊಲಕ್ಕೆ ಬ್ಯಾಟರಿ (ಬೆಳಕು) ಬಿಟ್ಟರೆ ಆ ಪ್ರಕಾಶಮಾನದ ಬೆಳಕಿಗೆ ಮೊಲದ ಕಣ್ಣು ಕಾಣದೆ ಅದು ಬ್ಯಾಟರಿ ಬೆಳಕಿನ ಕಡೆಗೆ ಬರುತ್ತದೆ ಅಥವಾ ನಿಂತಲ್ಲೇ ನಿಂತು ಬಿಡುತ್ತದೆ. ಆಗ ಅದನ್ನು ಹೊಡೆದು ಸಾಯಿಸುತ್ತಾರೆ.

ಕೂರ್ಗಾನ ಬೇಟೆ: ಕೂರ್ಗಾ ಎಂದರೆ ಕುರಿಯನ್ನು ಹೋಲುವ ಕಾಡುಪ್ರಾಣಿ; ಇದನ್ನು ಕಾಡು ಕುರಿ ಎಂತಲೂ ಕರೆಯುತ್ತಾರೆ. ಈ ಪ್ರಾಣಿಗಳನ್ನು ಇರುಳಿಗರು ಆಯಾಸವಿಲ್ಲದೆ ಹಿಡಿಯುತ್ತಾರೆ. ಏಕೆಂದರೆ ಕೂರ್ಗಾಗಳಿಗೆ ಒಂದು ಅಭ್ಯಾಸವಿದೆಯಂತೆ ಅದೇನೆಂದರೆ ಕೂರ್ಗಾ ಒಂದೆ ಕಡೆಯೇ ಹೇಲೋದು(ಕಕ್ಕಸು ಮಾಡೋದು) ಅದು ಎಲ್ಲಿಗೆ ಹೋಗಿ ಮೇಯಿಕೊಂಡು ಬಂದರೂ

ಮೊದಲು ಹೇತಿದ್ದ ಜಾಗದಲ್ಲಿ ಮತ್ತೆ ಬಂದು ಹೇಲುತ್ತದೆ (ಕಕ್ಕಸು). ಆದ್ದರಿಂದ ಇರುಳಿಗರು ಈ ಕೂರ್‍ಗಾ ಕಕ್ಕಸು ಮಾಡುವ ಜಾಗವನ್ನು ಮೊದಲು ಪತ್ತೆ ಹಚ್ಚಿ ಅದಕ್ಕೆ ಗೊತ್ತಾಗದ ರೀತಿಯಲ್ಲಿ ಅಲ್ಲಿಯೇ ಕಾದು ಕುಳಿತು ಅದು ಕಕ್ಕಸು ಮಾಡಲು ಬಂದರೆ ಅದನ್ನು ಅಲ್ಲೆ ಹೊಡೆದು ಸಾಯಿಸುತ್ತಾರೆ.

ಕಾಡುಕೋಳಿ ಬೇಟೆ(ಸೊಬ್ಬಿ): ಇರುಳಿಗರು ಕಾಡು ಕೋಳಿ, ಕಾಡು ಹುಂಜ, ಲಾವಗನ ಹಕ್ಕಿ, ಕಾಡಕ್ಕಿ, ಪಿಟ್ಟೆಕೋಳಿ ಮುಂತಾದವುಗಳನ್ನು ಹಿಡಿದು ಸುಟ್ಟು ತಿನ್ನುತ್ತಾರೆ. ಇದರ ಮೊಟ್ಟೆ ಸಿಕ್ಕರೆ ಹಸುವಿನ ಸಗಣಿಯೊಂದಿಗೆ ಸೇರಿಸಿ ಬೆಂಕಿ ಕೆಂಡದೊಂದಿಗೆ ಬೇಯಿಸಿ ತಿನ್ನುತ್ತಾರೆ. ಈ ಪಕ್ಷಿಗಳನ್ನು ಹಿಡಿಯಲು ಇರುಳಿಗರು ಪಾಜಿಯನ್ನು ತಯಾರಿಸಿಕೊಳ್ಳುತ್ತಾರೆ. ಕೆಲವೊಮ್ಮೆ ರಾಗಿ, ಅಕ್ಕಿ ಕೇರುವ ಮೊರವನ್ನು ಬಳಸುತ್ತಾರೆ.

ಬಿದಿರು ಮತ್ತು ಕತ್ತಾಳೆ ನಾರು ಅಥವಾ ಹಗ್ಗ ತೆಗೆದುಕೊಂಡು ಎರಡು ಅಡಿಯ ಬಿದಿನ ದಬ್ಬೆಗಳನ್ನು ಸಮಾನಾಂತರವಾಗಿ ಕಟ್ಟಿ ಅರ್ಧ ಅಡಿಯ ಬಿದಿರು ದಬ್ಬೆಗಳನ್ನು ಅಳವಡಿಸಿ ಸಾಲೆನಾರಿನ ಹುರಿಯಿಂದ ಬಿಗಿದು ಆಯತಾಕಾರದಲ್ಲಿ ನಿರ್ಮಿಸುತ್ತಾರೆ. ಇದನ್ನು ಸರಳವಾಗಿ ಮಡಚಿಕೊಳ್ಳಲು ಮತ್ತು ಸುಲಭವಾಗಿ ಕೊಂಡು ಹೋಗಲು ಅನುಕೂಲವಾಗುವಂತೆ ಝಡ್ ಆಕಾರದಲ್ಲಿ ನಿರ್ಮಿಸುತ್ತಾರೆ. ಹೀಗೆ ತಯಾರಿಸಿದ ಆಯತಾಕಾರದ ಚೌಕಟ್ಟಿನ ಒಳ ಅಳತೆ ಮುಕ್ಕಾಲು ಅಡಿಯಷ್ಟಿರುತ್ತದೆ. ಪ್ರತಿ ಚೌಕಟ್ಟುಗಳ ಮೇಲೆ ಕೆಳ ಮಧ್ಯಭಾಗದಿಂದ ನಾಲ್ಕು ಕಡೆಯ ಬೆಟ್ಟಗಳಿಗೆ ಸಂಬಂಧವೇರ್ಪಡುವಂತೆ ವಜ್ರಾಕೃತಿಯಲ್ಲಿ ನಾರಿನ ದಾರಗಳಿಂದ ಬಿಗಿದಿರುತ್ತಾರೆ. ಆ ವಜ್ರಾಕೃತಿಯ ಮೇಲುಭಾಗವು ತ್ರಿಕೋನದಂತಿದ್ದು, ಕುದುರೆ ಬಾಲದ ಕೂದಲಿನಿಂದ ಅಥವಾ ಎತ್ತಿನ ಬಾಲದ ಕೂದಲಿನಿಂದ ಹೊಸೆದು ಮಾಡಿದ ಗಟ್ಟಿ ಹುರುಳುಗಳನ್ನು ಪ್ರತಿಯೊಂದು ಚೌಕಟ್ಟಿಗೂ ಬಿಗಿದಿರುತ್ತಾರೆ. ಜೀರು ಗುಂಟ್ಟಿಗೆ ಮಾದರಿಯ ಹುರುಳುಗಳನ್ನು ಅಳವಡಿಸಿರುತ್ತಾರೆ.

ಈ ಪಾಜಿಯನ್ನು ಹಾಕುವುದಕ್ಕಿಂತ ಎರಡು ಮೂರು ದಿನಗಳಿಂದ ಆ ಭಾಗದಲ್ಲಿ ರಾಗಿ ಅಕ್ಕಿಯನ್ನು ಹಾಕಿ ಪಳಗಿಸುತ್ತಾರೆ. ಈ ಜಾಗದಲ್ಲಿ ಅಥವಾ ಪ್ರತಿದಿನ ಮೇಯಲು ಬರುತ್ತಿದ್ದ ಜಾಗದಲ್ಲಿ ಹಾಕುತ್ತಾರೆ. ಹೀಗೆ ಹಾಕಿ ಸ್ವಲ್ಪ ದೂರದಲ್ಲಿ ಕುಳಿತು ಆ ಪಕ್ಷಿಯಂತೆ ಶಬ್ದ ಮಾಡುತ್ತಾರೆ. ಶಬ್ದ ಮಾಡಿದ ತಕ್ಷಣ ಆ ಪಕ್ಷಿಗಳೆಲ್ಲವು ಪಾಜಿಯತ್ತಿರ ಬರುತ್ತವೆ. ಪಾಜಿಯ ಒಳಗೆ ಅಕ್ಕಿ ಅಥವಾ ರಾಗಿಯನ್ನು ಹಾಕಲಾಗಿರುತ್ತದೆ. ಇದನ್ನು ತಿನ್ನಲು ಎಲ್ಲಾ ಪಕ್ಷಿಗಳು ಅದರೊಳಕ್ಕೆ ಹೋಗುತ್ತವೆ. ಆಗ ಪಾಜಿ ಮುಚ್ಚಿಕೊಂಡು ಎಲ್ಲವು ಒಳಗಡೆ ಸೇರಿಕೊಳ್ಳುತ್ತವೆ. ಹೀಗೆ ಸಿದ್ಧಪಡಿಸಿ ಒಂದು ಸಲ ಕಾಡು ಹುಂಜದಂತೆ ಮತ್ತೊಂದು ಸಲ ಹ್ಯಾಟೆಯಂತೆ ಶಬ್ದ ಮಾಡುತ್ತಾನೆ. ಹಾಗ ಕಾಡುಕೋಳಿಗಳು ಆ ಪಾಜಿಯ ಹತ್ತಿರ ಬರುತ್ತವೆ, ಆಗ ಪಾಜಿಯ ಹುರುಳಿಗೆ ಸಿಕ್ಕಿ ಬಿಳುತ್ತವೆ.

ಮುಸ್ವನ ಸೊಬ್ನ(ಬೇಟೆ): ಮುಸ್ವ ಎಂದರೆ ನೋಡಲು ಕೋತಿಯಂತೆಯೇ ಇದ್ದರೂ ಮನುಷ್ಯನ ಲಕ್ಷಣಗಳನ್ನು ಹೋಲುತ್ತದೆ. ಇವುಗಳು ಕಾಡಿನಲ್ಲೇ ಅತಿ ಹೆಚ್ಚಾಗಿ ವಾಸಿಸುತ್ತವೆ. ಇವುಗಳನ್ನು ಇರುಳಿಗರು ಒಂದು ಗುಂಡಿಯನ್ನು ತೋಡಿಕೊಂಡು ಅದರ ಒಳಗೆ ತಿಂಡಿ ತಿನಿಸುಗಳನ್ನು ಹಾಕಿ ಅದರ ಮೇಲ್ಭಾಗದಲ್ಲಿ ಜೀರುಗುಂಡೆಯಾಕಾರದ ಉಳ್ಳುಗಳನ್ನು ಬಿಟ್ಟಿರುತ್ತಾರೆ. ಆ ಮುಸ್ವವು ಗುಂಡಿಯಲ್ಲಿರುವ ತಿನಿಸುಗಳನ್ನು ತಿನ್ನಲು ಬಂದು ಉರುಳಿಗ ಸಿಕ್ಕಿ ಬೀಳುತ್ತದೆ. ಆಗ ಅದನ್ನು ಹಿಡಿಯುತ್ತಾರೆ ಅಥವಾ ಭರ್ಜಿಯಿಂದ ತಿವಿದು ಸಾಯಿಸುತ್ತಾರೆ. ಇದರ ರಕ್ತವನ್ನು ಬಾಯಿ ಹಾಕಿ ಹೀರುತ್ತಾರೆ. ಹೀಗೆ ಹೀರಿ ಒಂದು ಕಿ.ಮೀ ನಷ್ಟು ಓಡುತ್ತಾರೆ. ಬೆವರು ಬರುವವರೆಗೂ ಓಡುತ್ತಾರೆ. ಇದರಿಂದ ಇವರಿಗೆ ಜೀವಮಾನದಲ್ಲಿ ದಮ್ಮ(ಕ್ಷಯ) ಬರುವುದಿಲ್ಲ ಎನ್ನುತ್ತಾರೆ.

ಇಲಿ ಬೇಟೆ(ಸೊಬ್ನ): ಇರುಳಿಗರು ಇಲಿ ಬೇಟೆ ಮಾಡುವುದರಲ್ಲಿ ನಿಸ್ಸೀಮರು. ಇಲಿಗಳು ಇತರೆ ಪ್ರಾಣಿಗಿಂತಲೂ ಬುದ್ಧಿವಂತವಾಗಿರುತ್ತವೆ. ಇವುಗಳನ್ನು ಹಿಡಿಯಲು ಇರುಳಿಗರು ತಮ್ಮದೇ ಆದ ಕಾರ್ಯ ತಂತ್ರವನ್ನು ರೂಪಿಸಿರುತ್ತಾರೆ. ಮೊದಲಿಗೆ ಬಿಲವನ್ನು ಪರೀಕ್ಷೆ ಮಾಡಿಕೊಳ್ಳುತ್ತಾರೆ. ಆ ಬಿಲ ಹೊಸದೇ ಅಥವಾ ಹಳೆಯದೇ ಎಂದು ಖಚಿತಪಡಿಸಿಕೊಳ್ಳುತ್ತಾರೆ. ಹೊಸದಾಗಿದ್ದರೆ ಹಸಿ ಜಿಡ್ಡಿಕಡ್ಡಿಯನ್ನು ತೆಗೆದುಕೊಂಡು ಅದರ ತುದಿಗೆ ಎಂಜಲನ್ನು ಸವರಿ ಬಿಲದ ಒಳಗಡೆ ಹಾಕುತ್ತಾರೆ. ಹಾಕಿ ಸ್ವಲ್ಪ ಕಾಲ ಕಡ್ಡಿಯನ್ನು ಗಮನಿಸುತ್ತಾರೆ. ಕಡ್ಡಿ ತಿರುಗುತ್ತಿದ್ದರೆ ಬಿಲದ ಒಳಗಡೆ ಇಲಿಗಳಿಲ್ಲ, ಹಾವಿದೆ ಎಂದು ಖಚಿತಪಡಿಸಿಕೊಳ್ಳುತ್ತಾರೆ. ಕಡ್ಡಿಯನ್ನು ಬಿಲದ ಒಳಗಡೆ ಹಾಕಿದ ಕೂಡಲೇ ಬಿಲದಲ್ಲಿ ಹಾವಿದ್ದರೆ ಕಡ್ಡಿಯನ್ನು ಸುತ್ತಿಕೊಳ್ಳುತ್ತದೆ ಆಗ ಕಡ್ಡಿ ತಿರುಗಲಾರಂಬಿಸುತ್ತದೆ. ಆಗ ಬಿಲದಲ್ಲಿ ಹಾವಿದೆ ಎಂದುಕೊಂಡು ಬೇರೆ ಬಿಲವನ್ನು ನೋಡಿಕೊಳ್ಳುತ್ತಾರೆ. ಇಲ್ಲವಾದರೆ ಕಡ್ಡಿಯನ್ನು ಹೊರಗೆ ತೆಗೆದು ನೋಡುತ್ತಾನೆ. ಮೊದಲೇ ಕಡ್ಡಿಗೆ ಎಂಜಲನ್ನು ಸವರಿರುತ್ತಾರೆ ಆ ಎಂಜಲಿಗೆ ಇಲಿಯ ರೋಮಗಳು ಅಂಟಿಕೊಂಡಿರುವುದನ್ನು ಗಮನಿಸುತ್ತಾರೆ. ಇಲಿಯ ರೋಮಗಳು ಇದ್ದರೆ ಅಲ್ಲಿ ಇಲಿಗಳಿವೆ ಎಂದು ಗುರುತು ಮಾಡಿಕೊಂಡು, ಹಾರೆ ಸನಿಕೆಯ ಸಹಾಯದಿಂದ ಎರಡರಿಂದ ಮೂರು ಅಡಿ ತೋಡುತ್ತಾರೆ. ನಂತರ ಆ ಬಿಲದ ಆಸುಪಾಸನ್ನು ಮತ್ತಾವುದಾದರೂ ಬಿಲಗಳು ಇವೆಯಾ ಎಂದು ನೋಡುತ್ತಾರೆ. ಹಾಗೊಮ್ಮೆ ಇದ್ದರೆ ಆ ಎಲ್ಲಾ ಬಿಲಗಳಿಗೂ ಕಲ್ಲು ಮಣ್ಣುಗಳಿಂದ ಮುಚ್ಚುತ್ತಾರೆ. ನಂತರ ಒಂದು ಮಡಿಕೆಯನ್ನು ತೆಗೆದುಕೊಂಡು ಅದರ ತಳ ಭಾಗಕ್ಕೆ ಸಣ್ಣ ತೂತೊಂದನ್ನು ಮಾಡಿ ಕೊಳ್ಳುತ್ತಾರೆ. ಮಡಿಕೆಯ ಒಳಗೆ ಜಿಡ್ಡ ಅಥವಾ ಇತರೆ ಹಸಿ ಸೊಪ್ಪಗಳನ್ನು ತುಂಬುತ್ತಾರೆ. ನಂತರ ಸ್ವಲ್ಪ ಸಗಣಿ ಬೆರಣಿಗಳನ್ನು ತೆಗೆದುಕೊಂಡು ಅದರ ಒಳಗೆ ಹಾಕಿ ಸ್ವಲ್ಪ ಒಣಗಿದ ಹುಲ್ಲಿನಿಂದ ಬೆಂಕಿ ಹಾಕುತ್ತಾರೆ. ಮಡಿಕೆಯ ತಳ ಭಾಗದ ತೂತಿನಿಂದ ಊದಿದರೆ ಮಡಿಕೆಯ ಬಾಯಿಯ ಭಾಗದಿಂದ ಹೊಗೆ ಬರುವಂತೆ ಸಿದ್ಧಪಡಿಸಿಕೊಂಡಿರುತ್ತಾರೆ. ನಂತರ ತೋಡಿದ

ಬಿಲದ ಬಾಯಿಗೆ ಮಡಿಕೆಯ ಬಾಯಿಯನ್ನು ಹಾಕಿ ಸುತ್ತಲೂ ಎಲ್ಲೂ ಹೊಗೆ ಬರದಂತೆ ನಿಗಾವಹಿಸಿ ಮಣ್ಣು ತುಂಬುತ್ತಾರೆ.

ಹೀಗೆ ಸಿದ್ಧಪಡಿಸಿದ ಮಡಿಕೆಯ ತಳದಿಂದ ಉಸಿರು ಬಿಗಿ ಹಿಡಿದು ಊದುತ್ತಾರೆ. ಮಡಿಕೆಯ ಬಾಯಿಯಿಂದ ರಭಸವಾಗಿ ಹೊಗೆ ಬಿಲದೊಳಕ್ಕೆ ಹೋಗುತ್ತದೆ. ಈ ಹೊಗೆಯನ್ನು ತಾಳಲಾರದೆ ಇಲಿಗಳು ಮಡಿಕೆಯ ಮುಂಬಾಗಕ್ಕೆ ಬಂದು ಉಸಿರುಗಟ್ಟಿ ಸಾಯುತ್ತವೆ. ನಂತರ ಮಡಿಕೆಯನ್ನು ಬಿಲದಿಂದ ತೆಗೆದು ಇಲಿಗಳನ್ನು ತೆಗೆದುಕೊಳ್ಳುತ್ತಾರೆ.

ಇಲಿಗಳು ಬಿಲದೊಳಗೆ ಸಣ್ಣ ಸಣ್ಣ ಬಿಲಗಳನ್ನು, ಗೋಡೆಗಳನ್ನು ನಿರ್ಮಿಸಿಕೊಂಡಿರುತ್ತವೆ. ಇವು ಬೇಟೆಗಾರನ ಗಮನ ಬೇರೆಯೆಡೆಗೆ ಸರಿಸಲು ಈ ರೀತಿ ಮಾಡಿಕೊಂಡಿರುತ್ತವೆ ಎಂದು ವಕ್ತೃಗಳು ಹೇಳುತ್ತಾರೆ. ಇರುಳಿಗರು ಎಲ್ಲಾ ಪ್ರಾಣಿಯ ಬೇಟೆಯಂತೆ(ಸೊಬ್ಬಿ) ಇಲಿ ಬೇಟೆಯಾಡುತ್ತಾರೆ. ಆದರೆ ಇರುಳಿಗ ಎಂಬ ಪದದ ಅರ್ಥ ತಿಳಿಯದ ವಿದ್ವಾಂಸರು, ಸಂಶೋಧಕರು ಮತ್ತು ಸುತ್ತಮುತ್ತಲಿನ ಜನಸಾಮಾನ್ಯರು ಇಲಿ ಬೇಟೆಯಾಡುವುದರಿಂದಲೇ, ಇರುಳಿಗರು ಎಂಬ ಪದ ಬಂದಿದೆ ಎಂದು ಹೇಳುತ್ತಾರೆ. ಆದರೆ ಇರುಳಿಗ ಎಂಬ ಪದದ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ಬೇಕಾಗಿದೆ. ಏಕೆಂದರೆ ಇಲಿಯ ಬೇಟೆಯನ್ನು ಇರುಳಿಗರು ಮಾತ್ರ ಆಡುವುದಿಲ್ಲ ಹೊಲೆಯರು, ವಡ್ಡರು, ಮ್ಯಾಸನಾಯಕರು ಎಲ್ಲರೂ ಆಡುತ್ತಾರೆ. ಆದರೆ ಅವರನ್ನು ಏಕೆ ಹಾಗೆ ಕರೆಯುವುದಿಲ್ಲ, ಇಲಿ ಬೇಟೆ ಇವರಿಗೆ ಸಾಮಾನ್ಯ ಬೇಟೆಯಂತೆ ಹೊರತು ಅದು ಪ್ರಧಾನ ವೃತ್ತಿಯಲ್ಲ.

ಇರುಳಿಗರು ತಮ್ಮ ಬೇಟೆಗಾರಿಕೆಯಲ್ಲಿ ತಮ್ಮದೇ ಆದ ನೈಪುಣ್ಯತೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಆದರೆ ಇಂದು ಇರುಳಿಗರಿಗೆ ತಮ್ಮ ಬೇಟೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅವರು ನೋಡುತ್ತಿದ್ದಂತೆಯೇ ಕಾಡು ಬಟಾಬಯಲಾಗುತ್ತಿದೆ. ದಟ್ಟ ಅರಣ್ಯದ ಒಳಗೆ ನಗರಗಳು ಹುಟ್ಟಿಕೊಂಡವು. ತಾವು ಉತ್ತು, ಬಿತ್ತು, ಬೆಳೆದ ಹೊಲ, ತಾವು ಆಚರಿಸಿಕೊಂಡು ಬಂದ ದೇವರುಗಳು ತಮ್ಮ ಕಣ್ಣೆದುರಿಗೆ ಇತರರ ಸ್ವತ್ತಾಗಿ ಹೋದವು. ಬೇಟೆಯನ್ನು ಅವಲಂಬಿಸಿಕೊಂಡಿದ್ದ ಇರುಳಿಗರನ್ನು ಕಾಡಿನಿಂದ ಹೊರಗೆ ಹಾಕಲಾಯಿತು. ಅರಣ್ಯದ ಒಳಗಡೆ ಇವರಿಗೆ ಪ್ರವೇಶವೇ ಇಲ್ಲದಂತಾಯಿತು. ಇದರಿಂದ ಬದುಕುವುದಕ್ಕಾಗಿ ಬೇಟೆಗಾರಿಕೆಯನ್ನು ಬಿಟ್ಟು ಇತರೆ ವೃತ್ತಿಗಳ ಕಡೆ ಹೋಗುವಂತಾಯಿತು.

ಅರಣ್ಯದಲ್ಲಿ ಸ್ವತಂತ್ರವಾಗಿದ್ದ ಇರುಳಿಗರು ನಾಗರಿಕ ಸಮಾಜದಲ್ಲಿ ಅಧೀನವಾಗು ವಂತಾಯಿತು. ನಾಗರಿಕರು ಎಂದು ಕರೆದುಕೊಳ್ಳುವವರಿಗೂ ಮತ್ತು ನಗರ ಇರುಳಿಗರಿಗೂ ಹಾಗೂ ಇತರೆ ಬುಡಕಟ್ಟಿನೊಂದಿಗೆ ಮುಖಾಮುಖಿಯಾದ ಮೂರು ಬಗೆಯಲ್ಲಿ ಪರೀಕ್ಷೆಗಳು ಸಂಭವಿಸಿದವು.

೧. ನಗರವಾಸಿಗಳು, ಅರಣ್ಯವಾಸಿಗಳಾದ ಬುಡಕಟ್ಟುಗಳನ್ನು ಅವರ ವಾಸಸ್ಥಾನಗಳಿಂದ ಒಕ್ಕಲೆಬ್ಬಿಸುವ ಮೂಲಕ ಅಥವಾ ಬಲಪ್ರಯೋಗದಿಂದ ಅವರನ್ನು ಗುಲಮರನ್ನಾಗಿ ಮಾಡಿಕೊಳ್ಳಲಾಯಿತು. ನಂತರ ಪಾರಂಪರಿಕ ಪದ ಅವರ ವಾಸಸ್ಥಾನಗಳನ್ನು ನಗರವಾಸಿಗಳು ಆಕ್ರಮಿಸಿಕೊಂಡರು.

೨. ಅರಣ್ಯವಾಸಿಗಳಿಗೆ ವ್ಯವಸಾಯವನ್ನು ಕಲಿಸಿ, ಅವರನ್ನು ಕೃಷಿಕರನ್ನಾಗಿಸಿ ತಮ್ಮ ನಾಗರಿಕ ಸಮಾಜದ ಕೆಳಸ್ತರದಲ್ಲಿ ಅವರನ್ನು ಶ್ರಮಿಕವರ್ಗವಾಗಿ ಸೇರಿಸಿಕೊಳ್ಳುವುದು.

೩. ಅವರಲ್ಲಿಯೂ ಸಹ ವರ್ಗ ವಿಭಜನೆ ಪ್ರವೇಶಿಸುವಂತೆ ಮಾಡಿ, ಕೆಲವರನ್ನು ಕೃಷಿಕರೆಂದು, ಕೆಲವರನ್ನು ಪಾಲಕರೆಂದು ವಿಭಜಿಸಿ ಆ ಮೂಲಕ ಕೃಷಿ ಸಮಾಜವನ್ನು ವಿಸ್ತರಣೆ ಮಾಡುವುದು.

ಈ ಮೂರರಲ್ಲಿ ಮೊದಲನೆಯದಕ್ಕಿಂತ ಎರಡು ಮತ್ತು ಮೂರನೆಯದು ಬುಡಕಟ್ಟುಗಳ ಮೇಲೆ ಹೆಚ್ಚಾಗಿ ಪ್ರಭಾವ ಬೀರಿರುವುದು ಎಂದು ಡಿ.ಡಿ.ಕೋಸಂಬಿ ಅವರು ಅಭಿಪ್ರಾಯ ಪಡುತ್ತಾರೆ.[೮೧]

ಹೀಗೆ ನಾಗರಿಕತೆಯ ಹೊಡೆತಕ್ಕೆ ಸಿಕ್ಕ ಇರುಳಿಗರು ಬದುಕಲು ಇನ್ನೊಬ್ಬರ ಮನೆಯಲ್ಲಿ ಜೀತದಾಳುಗಳಾಗಿ ಹೊಲಗದ್ದೆಗಳಲ್ಲಿ ಕೂಲಿಯಾಳುಗಳಾಗಿ ಇಟ್ಟಿಗೆ ಫ್ಯಾಕ್ಟರಿ, ಎಸ್ಟೇಟ್‌ಗಳಲ್ಲಿ ದುಡಿದು ಜೀವನ ನಡೆಸುತ್ತಿದ್ದಾರೆ. ಅತಿಯಾದ ಅರಣ್ಯ ನೀತಿಯಿಂದ ತಮ್ಮ ಪಾರಂಪರಿಕ ಕುಲಕಸುಬನ್ನು ಕಳೆದುಕೊಂಡು ಅತ್ಯಂತ ಧಾರುಣ ಪರಿಸ್ಥಿತಿಯಲ್ಲಿ ತಿನ್ನಲು ಆಹಾರವಿಲ್ಲದೆ ಇಂದು ಇರುಳಿಗರು ಬದುಕುವಂತಾಗಿದೆ.

ತಾವು ಹುಟ್ಟಿ ಬೆಳೆದು ಸ್ವಚ್ಛಂಧವಾಗಿ ಓಡಾಡಿದ ಅರಣ್ಯ ಪ್ರವೇಶಕ್ಕೆ ಅರಣ್ಯ ಇಲಾಖೆಯು ನಿಷೇಧಿಸಿದ್ದರಿಂದ ತಾವು ಹುಟ್ಟಿ ಬೆಳೆದ ಜಾಗಕ್ಕೆ ತಾವೇ ಕದ್ದುಮುಚ್ಚಿ ಓಡಾಡುವ ಪರಿಸ್ಥಿತಿ ನಿರ್ಮಾಣವಾಯಿತು. ಈ ಸಂದರ್ಭದಲ್ಲಿ ಅಧಿಕಾರಿಗಳ ಕೈಗೆ ಸಿಕ್ಕರೆ 'ಇರುವ ಎಲ್ಲ ಕೇಸುಗಳನ್ನು ದಾಖಲಿಸಿ ಜೈಲಿಗೆ ಅಟ್ಟಿರುವ ನಿದರ್ಶನಗಳಿವೆ. ಇನ್ನು ಕೆಲವು ಸಂದರ್ಭದಲ್ಲಿ ಯಾರೇ ತಪ್ಪು ಮಾಡಿದ್ದರು. ಇವರನ್ನು ಜೈಲಿಗೆ ಕಳುಹಿಸಿರುವ ಬಗ್ಗೆಯೂ ವಕ್ತೃಗಳು ಹೇಳುತ್ತಾರೆ. ಅನಕ್ಷರಸ್ಥ ಅಲ್ಪಸಂಖ್ಯಾತರಾದ ಇವರು ತಮ್ಮ ನೋವುಗಳನ್ನು ತಾವೇ ನುಂಗಿಕೊಂಡು ಜೀವಿಸುತ್ತಿದ್ದಾರೆ.

ಇನ್ನುಳಿದ ಕೆಲವು ಇರುಳಿಗರು ಈಗಲೂ ಕಾಡಿನಿಂದ ಸೌದೆ, ಇದ್ದಿಲನ್ನು ಸಂಗ್ರಹಿಸಿಕೊಂಡು ಬಂದು ಗ್ರಾಮ ಪಟ್ಟಣಗಳಲ್ಲಿ ಮಾರಾಟ ಮಾಡಿ ಬಂದ ಹಣದಿಂದ ಹೊಟ್ಟೆ ಹೊರೆಯುತ್ತಿದ್ದಾರೆ. ಕೆಲವರು ಬಿದುರಿನ ಬುಟ್ಟಿಯನ್ನು ಎಣೆದು ಮಾರಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಇನ್ನೂ ಕೆಲವರು ತೆಂಗಿನ ಗರಿಯ ನಾರುಗಳನ್ನು ಎಳೆದು ಪೊರಕೆ ಮಾಡಿಕೊಂಡು ಅಥವಾ

ಬೆಟ್ಟಗುಡ್ಡ ಸುತ್ತಾಡಿ ಪೊರಕೆ ಕಟ್ಟಿಗೆಗಳನ್ನು ಸಂಗ್ರಹಿಸಿಕೊಂಡು ಮಾರಾಟ ಮಾಡಿಕೊಂಡು ಬದುಕುತ್ತಿದ್ದಾರೆ.

ಒಟ್ಟಾರೆಯಾಗಿ ಅರಣ್ಯ ನೀತಿ ಮತ್ತು ನಾಗರಿಕತೆಯ ಹೊಡೆತದಿಂದ ಇರುಳಿಗರು ತಮ್ಮ ಪಾರಂಪರಿಕ ವೃತ್ತಿಗಳ ಜೊತೆಗೆ ತಮ್ಮ ಸ್ವಚ್ಛಂಧ ಸ್ವತಂತ್ರ ಬದುಕನ್ನು ಕಳೆದುಕೊಂಡಿದ್ದಾರೆ. ಅರಣ್ಯ ಇಲಾಖೆ ಹಾಗೂ ಸರ್ಕಾರದ ದೃಷ್ಟಿಯಲ್ಲಿ ಕಳ್ಳರಂತೆ ಬದುಕುವ ಪರಿಸ್ಥಿತಿ ನಿರ್ಮಾಣ ವಾಗಿದೆ. ತಮ್ಮ ಪಾರಂಪರಿಕ ಕಸುಬನ್ನು ಬಿಟ್ಟುಕೊಡದೆ ಆಧುನಿಕ ಬದುಕಿಗೆ ಒಗ್ಗಿಕೊಳ್ಳದೆ ನೀರಿನಿಂದ ಹೊರಗೆ ಬಿಟ್ಟ ಮೀನಿನ ಪರಿಸ್ಥಿತಿಯನ್ನು ಇರುಳಿಗರು ಅನುಭವಿಸುತ್ತಿದ್ದಾರೆ. ಸರ್ಕಾರದ ಯಾವ ಯೋಜನೆಗಳೂ ಇವರಿಗೆ ತಿಳಿದಿಲ್ಲ. ಜೊತೆಗೆ ಇವರಿಗೆ ತಿಳಿಸುವ ಯಾವ ಯೋಜನೆಗಳನ್ನೂ ಸರ್ಕಾರ ಮಾಡಿಲ್ಲ. ಇಂದಿಗೂ ಸಾವಿರಾರು ಕುಟುಂಬಗಳಿಗೆ ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿ, ಜಾತಿ ಪ್ರಮಾಣ ಪತ್ರ ಮುಂತಾದ ಯಾವ ಸರ್ಕಾರಿ ದಾಖಲೆಗಳೂ ಇಲ್ಲದಾಗಿವೆ. ತಾವು ತಲೆತಲಾಂತರದಿಂದ ಬದುಕುತ್ತಿದ್ದ ಸ್ಥಳದಿಂದ ಇಂದು ಅರಣ್ಯ ಇಲಾಖೆಯವರು ಹಾಗೆಯೇ ಭೂಮಾಲೀಕರು ಒಕ್ಕಲೆಬ್ಬಿಸುವ ಕೆಲಸಕ್ಕೆ ಕೈಹಾಕಿದ್ದಾರೆ. ಇವರಿಗೆ ಕಾನೂನಿನ ಅರಿವು ಇಲ್ಲದೆ ಇರುವುದರಿಂದ ಸರ್ಕಾರವೇ ತಮ್ಮ ಕಡೆ ಗಮನಹರಿಸಿ ನ್ಯಾಯ ಒದಗಿಸುತ್ತದೆ ಎಂಬ ಭರವಸೆಯಿಂದ ಪ್ರತಿನಿತ್ಯ ಕಾಯುತ್ತಿದ್ದಾರೆ.

ಕೊನೆ ಟಿಪ್ಪಣಿಗಳು

೧. ತಪಸ್ವಿಕುಮಾರ ನಂ., ೨೦೦೦, ಸಂಸ್ಕೃತಿ ವಿಕಾಸ, ಪು.೧೮೦

೨. ಅದೇ, ಪು.೧೮೦

೩. ಅದೇ, ಪು.೧೮೧

೪. ಅದೇ, ಪು.೧೮೨

೫. ಅದೇ, ಪು.೧೮೪

೬. ಅದೇ, ಪು.೧೮೩

೭. ಅದೇ, ಪು.೧೮೮

೮. ಅದೇ, ಪು.೨೨೮

೯. ಅದೇ, ಪು.೨೨೯

೧೦. ಅದೇ, ಪು.೨೩೦

೧೧. ಅದೇ, ಪು.೨೭೮

೧೨. ಅದೇ, ಪು.೨೫೫

೧೩. ಅಂತರ್ಜಾಲ ಸಂಗ್ರಹಿಸಿದ ಮಾಹಿತಿ(ಜರ್ನಿ ಆಫ್ ದಿ ಮ್ಯಾನ್)

೧೪. ತಪಸ್ವಿಕುಮಾರ ನಂ., ೨೦೦೦, ಪೂರ್ವೋಕ್ತ, ಪು.೨೦೩

೧೫. ಲಕ್ಷ್ಮೀಪತಿ ಕೋಲಾರ, ಚರ್ಚೆಯ ಸಂದರ್ಭ, ಗಿರಿಜನ ಉತ್ಸವ, ಮೂಡಗೆರೆ, ಚಿಕ್ಕಮಗಳೂರು ಜಿಲ್ಲೆ(೨೯-೦೧-೨೦೧೫)

೧೬. ತಪಸ್ವಿಕುಮಾರ ನಂ., ೨೦೦೦, ಪೂರ್ವೋಕ್ತ, ಪು.೨೦೭

೧೭. ಅದೇ, ಪು.೨೦೮

೧೮. ಅದೇ, ಪು.೨೧೬

೧೯. ಅದೇ, ಪು.೨೧೭

೨೦. ಅದೇ, ಪು.೨೧೯

೨೧. ಅದೇ, ಪು.೨೨೦

೨೨. ಅದೇ, ಪು.೨೩೯

೨೩. ಅದೇ, ಪು.೨೪೩

೨೪. ಅದೇ, ಪು.೨೨೧

೨೫. ಅದೇ, ಪು.೨೨೧

೨೬. ಅದೇ, ಪು.೩೨೩

೨೭. ಅದೇ, ಪು.೩೨೪

೨೮. ಅದೇ, ಪು.೨೨೫

೨೯. ಅದೇ, ಪು.೨೨೬

೩೦. ನಾಗೇಗೌಡ ಎಚ್.ಎಲ್.(ಸಂ), ೧೯೯೮, ಪ್ರವಾಸಿ ಕಂಡ ಇಂಡಿಯಾ, ಸಂ.೮, ಪು.೨೬೯

೩೧. ಲಕ್ಷೀಪತಿ ಕೋಲಾರ, ಸುರೇಶ ಭಟ್ ಬಾಕ್ರ ಬೈಲು, ೨೦೧೯, ಹರಪ್ಪ DNA ನುಡಿದ ಸತ್ಯ, ಪು.೨೮

೩೨. ರಂಗಾಚಾರಿ, ೧೯೦೯, ಎಡ್ಗರ್ ಥರ್ಸ್ಟನ್, ಕ್ಯಾಸ್ಟ್ ಆ್ಯಂಡ್ ಟ್ರೈಬ್ಸ್ ಸದರನ್ ಇಂಡಿಯಾ, ವ್ಯಾಲ್ಯೂಮ್ ೨, ಪು.೨೭೨

೩೩. ನಂಜುಂಡಯ್ಯ ಎಚ್.ವಿ., ಅನಂತಕೃಷ್ಣ ಅಯ್ಯರ್ ಎಲ್.ಕೆ., ೧೯೩೦, ಮೈಸೂರು ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್, ವ್ಯಾಲೂಮ್ ೩, ಪು.೩೯೨

೩೪. ತಪಸ್ವಿಕುಮಾರ ನಂ., ೨೦೦೦, ಪೂರ್ವೋಕ್ತ, ಪು.೨೦೬

೩೫. ಲಕ್ಷ್ಮೀಪತಿ ಕೋಲಾರ, ಚರ್ಚೆಯ ಸಂದರ್ಭ, ಗಿರಿಜನ ಉತ್ಸವ, ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ(೨೯-೦೧-೨೦೧೫)

೩೬. ಅದೇ

೩೭. ಅಂತರ್ಜಾಲ ಸಂಗ್ರಹಿಸಿದ ಮಾಹಿತಿ(ಜರ್ನಿ ಆಫ್ ದಿ ಮ್ಯಾನ್)

೩೮. ಲಕ್ಷ್ಮೀಪತಿ ಕೋಲಾರ, ೨೦೧೬, ಕಸಿಮಡಿಗಿದ ಕಣ್ಣು, ಪು.೧೯೦

೩೯. ಅದೇ, ಪು.೧೮೩

೪೦. ಚಿನ್ನಸ್ವಾಮಿ ಸೋಸಲೆ ಎನ್., ಪ್ರಾಧ್ಯಾಪಕರು, ಚರಿತ್ರೆ ವಿಭಾಗ, ಚರ್ಚೆಯ ಸಂದರ್ಭ ದಿನಾಂಕ ೨೨-೦೬-೨೦೧೮

೪೧. ಮೋಹನ್‌ಕೃಷ್ಣ ರೈ ಕೆ., ೨೦೧೨, ತುಳುನಾಡಿನ ಕನ್ನಡ ನುಡಿ, ಪು.೩೫

೪೨. ಅಂತರ್ಜಾಲ ಸಂಗ್ರಹಿಸಿದ ಮಾಹಿತಿ(ಜರ್ನಿ ಆಫ್ ದಿ ಮ್ಯಾನ್)

೪೩. ಚಂದ್ರಶೇಖರ್ ಎಸ್., ಸುರೇಂದ್ರರಾವ್ ಬಿ.(ಸಂ), ೨೧೦೬, ಕರ್ನಾಟಕ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆ ಕೆಲವು ನೆಲೆಗಳು, ಪು.೧

೪೪. ಅದೇ, ಪು.೩

೪೫. ಅದೇ, ಪು.೭

೪೬. ಅಂತಾರ್ಜಾಲದಿಂದ ಸಂಗ್ರಹಿಸಿದ ಮಾಹಿತಿ(ರಾಮನಗರ ಜಿಲ್ಲೆ)

೪೭. ಚಿಕ್ಕದೊಳಯ್ಯ, ೭೯, ಕೂತಗಾನಹಳ್ಳಿ, ಕನಕಪುರ ತಾಲೂಕು, ರಾಮನಗರ ಜಿಲ್ಲೆ(೨೪-೧೨-೨೦೧೬)

೪೮. ಭೈರೇಗೌಡ ಎಂ., ೨೦೦೦, ಇರುಳಿಗರ ಜಾನಪದ ಅಧ್ಯಯನ, ಪು.೩೩

೪೯. ಭಂಗಯ್ಯ, ೭೮, ಗುರಿಕಾರದೊಡ್ಡಿ, ಕನಕಪುರ ತಾಲೂಕು, ರಾಮನಗರ ಜಿಲ್ಲೆ(೨೪-೦೧-೨೦೧೭)

೫೦. ಕನ್ನಿಯಮ್ಮ, ೭೫, ಮಣಿಮಂಗಲ್ಯೆ, ಚೆನ್ನೈ ಜಿಲ್ಲೆ, ತಮಿಳುನಾಡು, ೨೩-೦೪-೨೦೧೬

೫೧. ಭೈರೇಗೌಡ ಎಂ., ೨೦೦೦, ಪೂರ್ವೋಕ್ತ, ಪು.೧೧

೫೨. ಶಿವಣ್ಣ ಡಿ., ೩೨, ಕೂತಗಾನಹಳ್ಳಿ, ಕನಕಪುರ ತಾಲೂಕು, ರಾಮನಗರ ಜಿಲ್ಲೆ(೨೬-೦೩-೨೦೧೭)

೫೩. ಬಾಲನ್, ೬೯, ಕುತ್ತುಕೋಟೆ, ಕೃಷ್ಣಗಿರಿ ತಾಲೂಕು, ಧರ್ಮಪುರಿ ಜಿಲ್ಲೆ(೩೦-೦೫-೨೦೧೬)

೫೪. ಫ್ರಾನಿಸ್ಸ್ ಬುಕಾನನ್, ೧೮೦೬, ಎ ಜರ್ನಿ ಫ್ರಂ ಮದರಾಸ್ ಥ್ರೂ ಔಟ್‌ದಿ ಕಂಟ್ರಿಸ್ ಆಫ್ ಮೈಸೂರು ಕೆನರಾ ಆ್ಯಂಡ್ ಮಲಬಾರ್, ವ್ಯಾಲೂಮ್ ೨, ಪು.೧೬೭

೫೫. ರಂಗಾಚಾರಿ, ಎಡ್ಗರ್ ಥರ್ಸ್ಟನ್, ಕ್ಯಾಸ್ಟ್ ಆ್ಯಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ, ವ್ಯಾಲೂಮ್ ೩, ಪು.೩೭೮

೫೬. ನಂಜುಂಡಯ್ಯ ಎಚ್.ವಿ., ಅನಂತಕೃಷ್ಣ ಅಯ್ಯರ್ ಎಲ್.ಕೆ., ಮೈಸೂರು ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್, ವ್ಯಾಲೂಮ್ ೩, ಪು.೩೯೨

೫೭. ಕೆಂಪೇಗೌಡ ಕೆ., ೨೦೦೦, A Desriptive Analysis of the Irula Dialect, Unpublished Ph.D.Thesis, ಪು.೩

೫೮. ಸಿದ್ದಗಂಗಯ್ಯ ಕಂಬಾಳ್ ಬಿ., ೧೯೯೩, ಇಲಿಗರ ಸಂಸ್ಕೃತಿ, ಪು.೧೦

೫೯. ಮಹೇಂದ್ರಕುಮಾರ್ ಎ.ಎಸ್., ೨೦೧೬, ಇರುಳಿಗರ ಸಾಮಾಜೋ ಆರ್ಥಿಕ ಅಧ್ಯಯನ, (ರಾಮನಗರ ಜಿಲ್ಲೆಯನ್ನು ಅನುಲಕ್ಷಿಸಿ), ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ, ಪು.೬೪

೬೦. ಮೇತ್ರಿ ಕೆ.ಎಂ., ಬುಡಕಟ್ಟು ಕುಲಕಸಬುಗಳು, ಪು.೯೪

೬೧. ಲಕ್ಕಪ್ಪಗೌಡ ಎಚ್.ಜೆ.(ಸಂ), ಕರ್ನಾಟಕ ಬುಡಕಟ್ಟುಗಳು, ಸಂಪುಟ ೨, ಪು.೬೦

೬೨. ಪ್ರಭಾಕರ್ ಎ.ಎಸ್., ಕನ್ನಡ ವಿಶ್ವವಿದ್ಯಾಲಯದ ಧನಸಹಾಯ ಯೋಜನಾ ವರದಿ, ಪು.೬೪

೬೩. ಕನ್ನಿಯಮ್ಮ, ೭೫, ಮಣಿಮಂಗಲೈ, ಚೆನ್ನೈ ಜಿಲ್ಲೆ, ತಮಿಳುನಾಡು, ೨೩-೦೪-೨೦೧೬

೬೪. ರಾಮಾನುಜಂ ಎ.ಕೆ.(ಮೂಲ), ಮಹಾಬಲೇಶ್ವರ ರಾವ್(ಅನು), ೨೦೦೦, ಭಾರತೀಯ ಜನಪದ ಕಥೆಗಳ ಸಂಗ್ರಹ, ಪು.೨೦

೬೫. ಸಿದ್ದಗಂಗಯ್ಯ ಕಂಬಾಳ್ ಬಿ., ೧೯೯೩, ಪೂರ್ವೋಕ್ತ, ಪು.೧೦

೬೬. ಚಿನ್ನಸ್ವಾಮಿ ಸೋಸಲೆ ಎನ್., ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಚರ್ಚೆಯ ಸಂದರ್ಭ ೧೩-೭-೨೦೧೮

೬೭. ಅಂತರ್ಜಾಲ ಸಂಗ್ರಹಿಸಿದ ಮಾಹಿತಿ(ಜರ್ನಿ ಆಫ್ ದಿ ಮ್ಯಾನ್)

೬೮. ಶೆಟ್ಟರ್ ಷ., ೨೦೦೭, ಸಂಗಂ ತಮಿಳಗಂ ಮತ್ತು ಕನ್ನಡನಾಡು ನುಡಿ, ಪು.೨೭

೬೯. ಫ್ರಾನಿಸ್ಸ್ ಬುಕಾನನ್, ೧೮೦೬, ಪೂರ್ವೋಕ್ತ, ಪು.೧೬೭

೭೦. ಅದೇ, ಪು.೧೬೭

೭೧. ಭೈರೇಗೌಡ ಎಂ., ೨೦೦೦, ಪೂರ್ವೋಕ್ತ, ಪು.೮೭

೭೨. ಅದೇ, ೮೮

೭೩. ಅದೇ, ಪು.೯೧

೭೪. ಸಿದ್ದಗಂಗಯ್ಯ ಕಂಬಾಳ್ ಬಿ., ೧೯೯೩, ಪೂರ್ವೋಕ್ತ, ಪು.೩೬

೭೫. ಹಂಪ ನಾಗರಾಜಯ್ಯ, ೧೯೬೬, ದ್ರಾವಿಡ ಭಾಷಾವಿಜ್ಞಾನ, ಪು.೧೦೫

೭೬. ಅದೇ, ಪು.೧೦೬

೭೭. ಕೆಂಪೇಗೌಡ ಕೆ., ೧೯೯೬, ದ್ರಾವಿಡ ಭಾಷಾವಿಜ್ಞಾನ, ಪು.೭೧

೭೮. ಹಲಗಯ್ಯ, ೮೦, ಮರಳವಾಡಿ, ಕನಕಪುರ ತಾಲೂಕು, ರಾಮನಗರ ಜಿಲ್ಲೆ ೨-೬-೨೦೧೬

೭೯. ಕೆಂಪೇಗೌಡ ಕೆ., ೨೦೦೦, ಪೂರ್ವೋಕ್ತ, ಪು.೫

೮೦. ನಂಜುಂಡಯ್ಯ ಎಚ್.ವಿ., ಅನಂತಕೃಷ್ಣ ಅಯ್ಯರ್ ಎಲ್.ಕೆ., ೧೯೩೦, ಪೂರ್ವೋಕ್ತ, ಪು.೩೮೯

ಅಧ್ಯಾಯ: ಮೂರು

ಇರುಳಿಗರ ಚಾರಿತ್ರಿಕ ಹಿನ್ನೋಟ

೩.೧. ಪುರಾಣ ಮತ್ತು ಐತಿಹ್ಯಗಳು

೩.೨. ಬ್ರಿಟಿಶರ ಕಾಲಘಟ್ಟದಲ್ಲಿ

೩.೩. ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿ

೩.೪. ಪ್ರಸ್ತುತ ರಾಜಕೀಯದಲ್ಲಿ

ಅಧ್ಯಾಯ: ಮೂರು

ಇರುಳಿಗರ ಚಾರಿತ್ರಿಕ ಹಿನ್ನೋಟ

ಒಂದೊಂದು ಯುಗದಲ್ಲೂ ಒಂದೊಂದು ರಾಜಕೀಯ ಶಕ್ತಿಯು ತನ್ನ ಇತಿಹಾಸವನ್ನು ಹಾಗೂ ತನಗೆ ಸಂಬಂಧಪಟ್ಟವರ ಇತಿಹಾಸವನ್ನು ತನ್ನ ರಾಜಕೀಯ ಆಶೋತ್ತರಗಳ ಉದ್ದೇಶದಿಂದ ಮರು ಪರಿಶೀಲನೆ ಮಾಡುತ್ತಾ ಬಂದಿದೆ. ಈ ಸಂದರ್ಭದಲ್ಲಿ ವಿದ್ಯೆ ಅಧಿಕಾರ ಇರುವ ಪ್ರಬಲ ಸಮುದಾಯಗಳು ತಮ್ಮ ತಮ್ಮ ಚರಿತ್ರೆ ಮತ್ತು ಐಡೆಂಟಿಟಿಯನ್ನು ಇತಿಹಾಸದ ಪುಟಗಳಲ್ಲಿ ಗುರ್ತಿಸುವ ಕೆಲಸ ಮಾಡಿಕೊಂಡವು. ಆದರೆ ಸಾವಿರಾರು ವರ್ಷಗಳಿಂದ ಪ್ರಭುತ್ವದ ಜೀವನಕ್ಕೆ ಬೆನ್ನುಕೊಟ್ಟು ದುಡಿದ ಸಮುದಾಯಗಳ ಚರಿತ್ರೆಯನ್ನು ಮಾತ್ರ ಕಾಣಲು ಸಾಧ್ಯವಾಗಲೇ ಇಲ್ಲ. ಏಕೆಂದರೆ ಭಾರತದ ಚರಿತ್ರೆ ಎಂಬುದು ಒಂದು ಕಾಲಕ್ಕೆ ಕೇವಲ ಅರಮನೆ ಮತ್ತು ಗುರುಮನೆಗೆ ಸೀಮಿತವಾಗಿತ್ತು. ಪ್ರಭುತ್ವದ ಜೊತೆ ಗುದ್ದಾಡಿ ಹೊಗಳಿಸಿಕೊಂಡು, ತೆಗಳಿಸಿಕೊಂಡು ಪ್ರಭುತ್ವದ ಕಣ್ಣಿಗೆ ಅಥವಾ ಪ್ರಭುತ್ವದ ಚರಿತ್ರೆ ರಚಿಸುವವರ ಕಣ್ಣಿಗೆ ಬಿದ್ದ ಸಮುದಾಯಗಳ ಚರಿತ್ರೆಯಲ್ಲಿ ದಾಖಲೆಗಳಾಗಿ ಉಳಿದುಕೊಂಡರು.

ಈ ಸಮುದಾಯಗಳು ಚರಿತ್ರೆಯ ಮರುಪರಿಶೀಲನೆಯ ಸಂದರ್ಭದಲ್ಲಿ ತಮ್ಮ ತಮ್ಮ ಚರಿತ್ರೆಯನ್ನು ರಚಿಸಿಕೊಂಡವು. ಆದರೆ ಕಾಡಿನಲ್ಲೇ ಹುಟ್ಟಿ ಕಾಡಿನಲ್ಲೇ ಬೆಳೆದು ಕಾಡಿನಲ್ಲಿ ಬದುಕು ಕಂಡುಕೊಳ್ಳಲು ನಿರಂತರವಾಗಿ ಹೊಡೆದಾಡುತ್ತಾ, ಪ್ರಭುತ್ವದ ದನಕರುಗಳಿಗೆ ಆನೆ, ಒಂಟೆ, ಕುದುರೆಗಳಿಗೆ ಬೆಟ್ಟ ಗುಡ್ಡ ಸುತ್ತಾಡಿ ಹುಲ್ಲು ಕೊಯ್ದು, ಜೇನು ಸಂಗ್ರಹಿಸಿ ತಮ್ಮ ಹೊಟ್ಟೆ ಪಾಡಿನ ಜೊತೆಯಲ್ಲಿ ಪ್ರಭುತ್ವದ ಮೋಜು ಮಸ್ತಿಗಳಿಗೆ ಜೀವ ತೇಯ್ದ ಬುಡಕಟ್ಟುಗಳ ಚರಿತ್ರೆ ಮಾತ್ರ ಬರೆಯಲು ಸಾಧ್ಯವಾಗದೆ ಹೋಗಿದೆ. ಇತ್ತೀಚಿನ ಚರಿತ್ರೆ ಬರವಣಿಗೆಯೂ ಇಂತಹ ಅಲಕ್ಷಿತ ಜನರ ಕಡೆ ಕೇಂದ್ರೀಕರಿಸುತ್ತಿರುವುದು ಅಶಾದಾಯಕವಾದದ್ದು.

ಡಾ.ಎನ್.ಚಿನ್ನಸ್ವಾಮಿ ಸೋಸಲೆ ಅವರು ಹೇಳುವಂತೆ 'ಭಾರತದ ಶ್ರೇಣೀಕೃತ ಸಮಾಜದಲ್ಲಿ ಕೇವಲ ಮೇಲ್ವರ್ಗದವರ ಬದುಕಿನ ರೀತಿ ನೀತಿಗಳಷ್ಟೇ ಸಂಸ್ಕೃತಿ ಎಂದು ಪರಿಭಾವಿಸಿಕೊಂಡು

ಶಿಷ್ಟ ಲಿಖಿತ ಎನ್ನುವ ಪರಂಪರೆಯ ಮೂಲಕವಷ್ಟೆ ಭಾರತದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಲಾಯಿತು. ಇದನ್ನೇ ಭಾರತದ ಸಂಸ್ಕೃತಿ ಎಂದು ನಿರ್ದಿಷ್ಟಗೊಳಿಸಿ ಪ್ರಚಾರ ಮಾಡಲಾಯಿತು. ವೇದ ಉಪನಿಷತ್ತುಗಳು ಸ್ಮೃತಿ ಧರ್ಮಶಾಸ್ತ್ರಗಳನ್ನು ಆಕರಗಳಾಗಿ ಸ್ವೀಕರಿಸಿ, ಮೌಲ್ಯಗಳನ್ನೇ ಸಂಸ್ಕೃತಿಯ ಮಾನದಂಡಗಳನ್ನಾಗಿ ಮಾಡಿ, ತಮ್ಮದಲ್ಲದಿದ್ದನ್ನು ಕನಿಷ್ಠವೆಂದು ಅಥವಾ ಅನಾಗರಿಕವೆಂದು ನಂಬಿಸಲಾಯಿತು. ಇದರಿಂದ ಇಡೀ ನಾಡಿನ ಬಹುಸಂಖ್ಯಾತರ ಚರಿತ್ರೆಯನ್ನು ಹೇಳಬೇಕಿದ್ದ ಇತಿಹಾಸದ ಪುಟಗಳು ಕೇವಲ ಕೆಲವೇ ವರ್ಗಕ್ಕೆ ಸೀಮಿತವಾಗುವಂತಾಯಿತು. ಚರಿತ್ರೆ ಎಂದರೆ ಭಾವನೆಗಳ ಆಧಾರದ ಮೇಲೆ ಕಟ್ಟಿಕೊಳ್ಳುವುದಲ್ಲ ಅದು ಪ್ರತಿಯೊಂದು ಸಮುದಾಯದ ಜೀವನ ವೃತ್ತಾಂತವಾಗಿದೆ ಎಂಬುದನ್ನು ಹೇಳಬೇಕಾಗಿದೆ. ಭಾರತವು ಎಂದಿಗೂ ಒಂದು ಬಗೆಯ ಸಂಸ್ಕೃತಿಯಿಂದ ಗುರುತಿಸಿಕೊಳ್ಳದೆ, ಹಲವಾರು ಬಗೆಯ ಸಂಸ್ಕೃತಿಯೊಂದಿಗೆ ಗುರುತಿಸಿಕೊಳ್ಳುತ್ತದೆ. ಆದರೆ ಏಕ ಸಂಸ್ಕೃತಿಯ ಪ್ರತಿಪಾದಕ ವರ್ಗಗಳು ಒಂದೇ ಸಂಸ್ಕೃತಿ, ಒಂದೇ ಧರ್ಮ ಎಂಬುದನ್ನು ಬಲವಂತವಾಗಿ ಒಪ್ಪಿಸುವ ಕೆಲಸಕ್ಕೆ ಮುಂದಾಗುತ್ತಿವೆ.[೧]

ಡಿ.ಡಿ.ಕೊಸಾಂಬಿಯವರು ಚರಿತ್ರೆಯ ಕುರಿತು ಹೀಗೆ ಹೇಳುತ್ತಾರೆ "ಚರಿತ್ರೆ ಎನ್ನುವುದು ಮಹಾರಾಜರುಗಳು, ಮಹಾಗ್ರಾಮಗಳ ಪಟ್ಟಿಯಲ್ಲ. ಬದಲಾಗಿ ಉತ್ಪಾದನಾ ಶಕ್ತಿಗಳ, ಉತ್ಪಾದನಾ ಸಂಬಂಧಗಳ ಕ್ರಮಾನುಗತ ಪರಿಣಾಮಗಳ ವಿವರಣೆಯಾಗಿದೆ. ಇಂತಹ ಪರಿಣಾಮಗಳ ಕುರುಹುಗಳನ್ನು ಶೋಧಿಸುವ ವಿಶಿಷ್ಟ ಅಧ್ಯಯನ ವಿಧಾನ ಸಾಹಿತ್ಯಿಕ ಆಧಾರಗಳನ್ನು ರಾಜರುಗಳ ವಂಶಾವಳಿಗಳನ್ನು ಪತ್ತೆ ಹಚ್ಚಲು ಬಳಸಲಾಗುತ್ತಿತ್ತು. ಆದರೆ ಈಗ ಆಕರಗಳನ್ನು ಸಾಮಾಜಿಕ ಪರಿಣಾಮಗಳ ಕುರುಹುಗಳನ್ನು ಪತ್ತೆ ಹಚ್ಚುವ ಅಧ್ಯಯನಗಳಿಗೆ ಬಳಸಬೇಕಾದ ಅನಿವಾರ್ಯತೆ ಇದೆ. ಅಂದಮಾತ್ರಕ್ಕೆ ಈ ಎರಡು ಆಕರಗಳೇ ಚರಿತ್ರೆಯನ್ನು ನಿರ್ಧರಿಸುವ ಮಾನದಂಡಗಳು ಎಂದೆಲ್ಲಾ ಗತಕಾಲದ ಪರಿಣಾಮಗಳ ಸಂಶೋಧನೆಯಲ್ಲಿ ಗತಕಾಲದ ಸಾಹಿತ್ಯ ಸಾಧನಗಳಾಗಲಿ, ಪುರಾತತ್ವ ಸಾಧನ ಸಲಕರಣೆಗಳಾಗಲಿ ದೊರಕದೆ ಇರುವ ಎಷ್ಟೋ ಬುಡಕಟ್ಟು, ದಲಿತ ಸಮುದಾಯಗಳನ್ನು ನಾವು ಚರಿತ್ರೆಯಲ್ಲಿ ಕಾಣಬಹುದು. ಇದು ನಮ್ಮ ದೇಶದ ಜನಜೀವನ ಚರಿತ್ರೆಯ ಶಾಪವೂ ಹೌದು. ವರವೂ ಹೌದು. ಇಂತಹ ಸಮುದಾಯಗಳು ತಮ್ಮ ಮೂಲದ ಚರಿತ್ರೆಯೊಳಗಣ ಎಲ್ಲಾ ಸ್ಥಿತ್ಯಂತರಗಳು ಅವುಗಳಲ್ಲಿನ ಸಂಘರ್ಷಗಳನ್ನು ತಮ್ಮ ಕುರುಹುಗಳನ್ನಾಗಿ ತಮ್ಮ ಸಮಾಜದಲ್ಲಿ ಉಳಿಸಿಕೊಂಡು ಬಂದಿರುತ್ತವೆ. ಅವುಗಳು ಸಮುದಾಯದ ಸುತ್ತ ಸದಾ ಗಿರಕಿ ಹೊಡೆಯುತ್ತಿರುತ್ತವೆ. ಇವುಗಳನ್ನು ಸೂಕ್ಷ್ಮವಾಗಿ ಗ್ರಹಿಸುವ ತಾಳ್ಮೆ ಸಂಶೋಧಕರಿಗಿರಬೇಕು.[೨]

ಈ ಹಿನ್ನೆಲೆಯಲ್ಲಿ ಚರಿತ್ರೆಯಿಂದ ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟ ಬುಡಕಟ್ಟುಗಳನ್ನು ಚರಿತ್ರೆಯ ಕೇಂದ್ರಕ್ಕೆ ತರುವ ಪ್ರಯತ್ನ ಮಾಡಲಾಗಿದೆ. ಬುಡಕಟ್ಟುಗಳಲ್ಲಿನ ಐತಿಹ್ಯ, ಪುರಾಣಗಳನ್ನು ವಿಶ್ಲೇಷಣೆಗೊಳಪಡಿಸುವ ಮೂಲಕ ಚರಿತ್ರೆಯಲ್ಲಿ ನಿರ್ಮಾಣಗೊಂಡಿರುವ ಕಂದಕಗಳನ್ನು ಸಾಧ್ಯವಾದ ಮಟ್ಟಿಗೆ ಚರಿತ್ರೆ ರಚನೆಗೆ ಕಾರಣೀಭೂತರಾದ ಬುಡಕಟ್ಟುಗಳು, ದಲಿತರು ಮತ್ತು

ಶೋಷಿತರ ಐತಿಹ್ಯ ಪುರಾಣ, ಜನಪದಗೀತೆ, ವೀರಗೀತೆ, ಲಾವಣಿ ಸೋಬಾನೆ ಪದಗಳ ಮೂಲಕ ತುಂಬುವ ಕೆಲಸ ಮಾಡಬೇಕಾಗಿದೆ.

೩.೧. ಐತಿಹ್ಯ ಮತ್ತು ಪುರಾಣಗಳು

ಐತಿಹ್ಯ ಮತ್ತು ಪುರಾಣಗಳು ಅನಾದಿಕಾಲದಿಂದಲೂ ಹಾಸುಹೋಕ್ಕಾಗಿ ಜನರ ಬದುಕಿನೊಂದಿಗೆ ಬೆರೆತು ಬಂದಿರುತ್ತವೆ. ಇವುಗಳು ಆಯಾ ಜನಾಂಗದಲ್ಲಿ ಉಂಟಾದ ಸಮಸ್ಯೆಗಳಿಗೆ ಅವರೇ ಕಂಡುಕೊಂಡ ಉತ್ತರಗಳೇ ಆಗಿರುತ್ತವೆ. ಯಾವುದೇ ಒಂದು ಬುಡಕಟ್ಟಿನ ಚರಿತ್ರೆ, ಸಂಪ್ರದಾಯ ಮತ್ತು ನಂಬಿಕೆಗಳ ಅಧ್ಯಯನದಲ್ಲಿ ಆ ಬುಡಕಟ್ಟಿನ ಪುರಾಣಗಳು ಮತ್ತು ಐತಿಹ್ಯಗಳು ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ.

ಈ ಐತಿಹ್ಯ ಮತ್ತು ಪುರಾಣಗಳು ಬುಡಕಟ್ಟುಗಳ ಅಧ್ಯಯನದಲ್ಲಿ ತೊಡಗುವ ಇತರೆ ಜ್ಞಾನ ಶಿಸ್ತುಗಳಾದ ಇತಿಹಾಸ, ಮಾನಶಾಸ್ತ್ರ, ಮನಃಶಾಸ್ತ್ರ, ಭಾಷಾಶಾಸ್ತ್ರ, ಸಮಾಜಶಾಸ್ತ್ರ ಇನ್ನಿತರ ಶಾಖೆಗಳ ಅಧ್ಯಯನಕ್ಕೆ ನೆರವಾಗುತ್ತವೆ.

ಐತಿಹ್ಯ ಮತ್ತು ಪುರಾಣಗಳು ಬುಡಕಟ್ಟುಗಳ ನಂಬಿಕೆ ಮತ್ತು ಸಂಪ್ರದಾಯಗಳ ಒಟ್ಟು ಮೊತ್ತವೇ ಆಗಿರುತ್ತದೆ. ಇವುಗಳು ವೈಶಿಷ್ಟ್ಯವೂ ವೈವಿಧ್ಯಮಯವು ಆದ ಬುಡಕಟ್ಟುಗಳ ಸಂಸ್ಕೃತಿಯನ್ನು ವಿವರಿಸುವ ಚಾರಿತ್ರಿಕ ದಾಖಲೆಗಳಾಗಿರುತ್ತವೆ. ಆದ್ದರಿಂದ ಬುಡಕಟ್ಟುಗಳ ಅಧ್ಯಯನವನ್ನು ಮಾಡಲಿಚ್ಚಿಸುವ ಯಾರೇ ಆಗಲಿ ಬುಡಕಟ್ಟುಗಳಲ್ಲಿರುವ ಐತಿಹ್ಯ ಮತ್ತು ಪುರಾಣಗಳನ್ನು ಎಚ್ಚರಿಕೆಯಿಂದ ಗಮನಿಸಬೇಕು. ಏಕೆಂದರೆ ಈ ಐತಿಹ್ಯ ಮತ್ತು ಪುರಾಣಗಳು ಆ ಬುಡಕಟ್ಟುಗಳ ಜೀವನದ ವೃತ್ತಾಂತಗಳಾಗಿರುತ್ತವೆ. ಹಾಗೆಯೇ ಒಂದು ಬುಡಕಟ್ಟಿನ ಐತಿಹ್ಯ ಮತ್ತು ಪುರಾಣವನ್ನು ಅಧ್ಯಯನ ಮಾಡಿದರೆ ಇಡೀ ಬುಡಕಟ್ಟಿನ ಸ್ವರೂಪವನ್ನು ಅರ್ಥ ಮಾಡಿಕೊಳ್ಳಬಹುದು.[೩]

ಐತಿಹ್ಯ ಎಂದರೆ ವ್ಯಕ್ತಿಗಳಿಗೆ, ಸ್ಥಳಗಳಿಗೆ ಮತ್ತು ಘಟನೆಗಳಿಗೆ ಸಂಬಂಧಿಸಿದ ಸತ್ಯವಾದ ಅಥವ ಕಾಲ್ಪನಿಕವಾದ ನಂಬಿಕೆಗಳನ್ನು ಒಳಗೊಂಡ ಕಥನವಾಗಿರುತ್ತದೆ. ಹಾಗೆಯೇ ಪುರಾಣವೆಂದರೆ ದೇವತೆಗಳಿಗೆ, ಉಪ ದೇವತೆಗಳಿಗೆ, ಸಾಂಸ್ಕೃತಿಕ ವೀರರಿಗೆ ಸಂಬಂಧಿಸಿದ ಕಥೆಯಾಗಿರುತ್ತದೆ. ಇಲ್ಲಿ ವಿಶ್ವ ಸೃಷ್ಟಿ, ಅದರ ವ್ಯವಸ್ಥೀಕರಣ ಒಂದು ದೇಶ ಒಂದು ಜನಾಂಗದ ಅಥವಾ ಒಂದು ಬುಡಕಟ್ಟಿನ ಮೂಲ ಅಥವಾ ಒಂದು ಸಂಸ್ಕೃತಿಯ ಮೂಲ ಇವುಗಳನ್ನು ಕುರಿತ ಕಥೆಗಳನ್ನು ಪುರಾಣಗಳೆಂದೇ ಕರೆಯಲಾಗಿದೆ.[೪]

ಈ ಪುರಾಣ ಮತ್ತು ಐತಿಹ್ಯಗಳಲ್ಲಿ ಬುಡಕಟ್ಟು ಸಮುದಾಯಗಳು ತಮ್ಮ ನೋವು, ಅವಮಾನ, ಸುಖ-ದುಃಖ, ದುಮ್ಮಾನಗಳನ್ನು ಅಡಗಿಸಿಕೊಂಡಿರುತ್ತಾರೆ. ಇವುಗಳನ್ನು ಕೆದಕಿದಾಗ ಮಾತ್ರ ಅದರ ಸ್ವರೂಪ ಅರ್ಥವಾಗುತ್ತದೆ. ಬರವಣಿಗೆ ಮತ್ತು ಅಧಿಕಾರ ಹೊಂದಿದ್ದ ವರ್ಗ

ತಮ್ಮ ಚರಿತ್ರೆಯನ್ನು ಶಾಸನಗಳಲ್ಲಿ, ಹಸ್ತಪ್ರತಿಗಳಲ್ಲಿ, ವೇದ ಉಪನಿಷತ್ತುಗಳಲ್ಲಿ ಬರೆಯಿಸಿ ಚರಿತ್ರೆಯ ದಾಖಲೆಗಳಾಗಿಸಿಕೊಂಡು, ಚರಿತ್ರೆಯ ಮರುಪರಿಶೀಲನೆಯ ಸಂದರ್ಭದಲ್ಲಿ ತಮ್ಮ ಚರಿತ್ರೆಯನ್ನು ಬರೆಯುವವರಿಗೆ ಲಿಖಿತ ದಾಖಲೆಗಳಾದ ಈ ಎಲ್ಲವನ್ನು ಕೊಟ್ಟು ತಮ್ಮ ಚರಿತ್ರೆಯನ್ನು ವೈಭವಪ್ರೇರಿತರಾಗಿ ಬರೆಯಿಸಿಕೊಂಡಿತು. ನಂತರ ಇದಷ್ಟೆ ಭಾರತದ ಚರಿತ್ರೆ ಎಂದು ಬಿಂಬಿಸಿ ನಂಬಿಸಲಾಯಿತು. ಆದರೆ ಈ ವರ್ಗಗಳು ಸುಖವಾಗಿ ಬದುಕಲು ಮತ್ತು ಪ್ರಭುತ್ವ ಸರಾಗವಾಗಿ ಹೋಗಲು ಬೆನ್ನುಕೊಟ್ಟು ದುಡಿದ ಬುಡಕಟ್ಟುಗಳು, ದಲಿತ ಶೋಷಿತರು ಮಾತ್ರ ಚರಿತ್ರೆಯ ಮರುಪರಿಶೀಲನೆಯ ಸಂದರ್ಭದಲ್ಲಿ ಲಿಖಿತ ಆಕರಗಳು ಇಲ್ಲದೆ ಚರಿತ್ರೆಯಿಂದ ದೂರವೇ ಉಳಿಯುವಂತಾಯಿತು. ಆದರೆ ಬುಡಕಟ್ಟುಗಳು, ಶೋಷಿತರು ಮತ್ತು ದಲಿತರು ತಮ್ಮ ಜೀವನದ ವೃತ್ತಾಂತವನ್ನು ಇಂತಹ ಐತಿಹ್ಯ ಮತ್ತು ಪುರಾಣಗಳಲ್ಲಿ ಬದಲಾದ ಚರಿತ್ರೆಯ ರಚನೆಯ ಪ್ರಸ್ತುತ ಸಂದರ್ಭದಲ್ಲಿ ತಮ್ಮ ಜೀವಮಾನದಿಂದ ಹೊತ್ತು ತಂದ ಐತಿಹ್ಯ ಮತ್ತು ಪುರಾಣಗಳನ್ನೇ ಚರಿತ್ರೆಯ ಆಕರಗಳಾಗಿಸಿಕೊಂಡು ತಮ್ಮ ತಮ್ಮ ಚರಿತ್ರೆಯನ್ನು ಬರೆಸಿಕೊಳ್ಳಲು ಇಚ್ಚಿಸುತ್ತಿವೆ. ಈ ಸಮುದಾಯಗಳು ಹೇಳುವ ಕಥೆಗಳಲ್ಲಿ ಕ್ರಿಯಾಶೀಲವಾದ ಸಾಂಸ್ಕೃತಿಕ ಶಕ್ತಿ ಇರುತ್ತದೆ. ಇದನ್ನು ಗಂಭೀರವಾಗಿ ಪರಿಗಣಿಸಿ ಅಭ್ಯಸಿಸಬೇಕಾದ ಜರೂರು ಇಂದು ಇದೆ. ಬುಡಕಟ್ಟುಗಳ ಪುರಾಣಗಳು ಮತ್ತು ಐತಿಹ್ಯಗಳನ್ನು ನಾಗರಿಕತೆಯ ಆರಂಭದಿಂದ ಇಲ್ಲಿಯವರೆಗೂ ನಿರ್ಲಕ್ಷಿಸುತ್ತಲೇ ಬರಲಾಗಿದೆ. ಆದರೆ ಬುಡಕಟ್ಟುಗಳು ಮಾತ್ರ ತಮ್ಮ ಅಸ್ತಿತ್ವವನ್ನು ಬಿಡದೆ ಉಳಿಸಿಕೊಂಡೇ ಬಂದಿವೆ. ಏಕೆಂದರೆ ಈ ಪುರಾಣ ಮತ್ತು ಐತಿಹ್ಯಗಳ ಮೂಲವನ್ನು ಹುಡುಕುವುದರಿಂದ ಭಾರತದ ಚರಿತ್ರೆ ಹಾದುಹೋದ ಪ್ರತಿಯೊಂದು ಹಂತದ ಗುರುತುಗಳು ಈ ಬುಡಕಟ್ಟುಗಳ ಐತಿಹ್ಯ ಮತ್ತು ಪುರಾಣಗಳಿಂದ ಗೋಚರವಾಗುತ್ತವೆ. ಏಕೆಂದರೆ ಕೇವಲ ಲಿಖಿತ ಆಕರವನ್ನು ಮಾನದಂಡವಾಗಿಟ್ಟುಕೊಂಡು ಬರವಣಿಗೆಯಿಂದ ಅಲ್ಪಸಂಖ್ಯಾತರ ಚರಿತ್ರೆಯನ್ನು ಒಟ್ಟಾರೆ ಭಾರತದ ಚರಿತ್ರೆಯೆಂದು ನಂಬಿಸಿ ಬರೆಯಲಾಗಿದೆ. ಆದರೆ ಅವುಗಳನ್ನು ವಿಮರ್ಶಿಸಿದರೆ ಒಂದಕ್ಕೊಂದು ಸಂಬಂಧವಿಲ್ಲದ ಅಸ್ಪಷ್ಟ ಚಾರಿತ್ರಿಕ ಘಟನೆಗಳು ಕಂಡುಬರುತ್ತವೆ. ಈ ರೀತಿಯ ಅಸ್ಪಷ್ಟ ಸಂಬಂಧವಿಲ್ಲದ ಘಟನೆಗಳ ಪೂರ್ಣ ಮಾಹಿತಿಯು ಬುಡಕಟ್ಟುಗಳ ಐತಿಹ್ಯ ಮತ್ತು ಪುರಾಣಗಳಿಂದ ಸಿಗುತ್ತವೆ ಎಂದರೆ ತಪ್ಪಾಗಲಾರದು. ಆದುದ್ದರಿಂದಲೇ ಡಿ.ಡಿ ಕೊಸಾಂಬಿಯವರು ತಮ್ಮ ಕೃತಿಯಾದ "ಪುರಾಣ ಮತ್ತು ವಾಸ್ತವ" ದಲ್ಲಿ ಹೀಗೆ ಹೇಳಿದ್ದಾರೆ.[೫]

ಕೆಲವು ಭಾರತೀಯ ಪುರಾಣಗಳು ಮತ್ತು ಆಚರಣೆಗಳು ನಾಗರಿಕತೆಯ ಪ್ರಾರಂಭದಿಂದ ಇಂದಿನವರೆಗೂ ಮೂಲೆ ಗುಂಪಾಗಿವೆ. ಆದರೆ ಇವುಗಳು ಇಂದಿಗೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿವೆ. ನಾವುಗಳು ಅಂತಹ ಪುರಾಣ ಮತ್ತು ಆಚರಣೆಗಳನ್ನು ಆದಿಮ ಮೂಲವನ್ನು ಹುಡುಕಬೇಕಾಗಿದೆ. ಇದೇ ನಮ್ಮ ಈ ಅಧ್ಯಯನದ ಉದ್ದೇಶ. ಇಂಥ ಹುಡುಕಾಟ ತೀರ ಕಷ್ಟದ ಕೆಲಸವೇನಲ್ಲ. ಏಕೆಂದರೆ ಚರಿತ್ರೆ ಹಾದು ಹೋದ ಪ್ರತಿಯೊಂದು ಹಂತದ ಗುರುತುಗಳನ್ನು ನಮ್ಮ ದೇಶದ ಸಮಕಾಲೀನ ಸಮಾಜ ಇಂದಿಗೂ ಉಳಿಸಿಕೊಂಡು ಬಂದಿದೆ.

ಈ ಬಗೆಯ ಅಧ್ಯಯನ ತೀರ ಅನಿವಾರ್ಯ. ಏಕೆಂದರೆ ಇಂಥ ವಿಶ್ಲೇಷಣೆಯನ್ನು ನಿರ್ಲಕ್ಷಿಸಿಬಿಟ್ಟರೆ ಭಾರತದ ಚರಿತ್ರೆಯು ಹಾಸ್ಯಾಸ್ಪದವೆನಿಸುವಷ್ಟು ವಿಕೃತವಾಗಿಬಿಡುತ್ತದೆ ಮತ್ತು ಭಾರತೀಯ ಸಂಸ್ಕೃತಿಯನ್ನು ಕುರಿತ ನಮ್ಮ ಗ್ರಹಿಕೆಯೇ ತಪ್ಪಾಗಿಬಿಡುತ್ತದೆ. ನವುರಾದ ಮತ ಧರ್ಮಶಾಸ್ತ್ರದಿಂದಾಗಲೀ, ಭೌತಿಕವಾದವನ್ನು ಮೀರಿಕೊಂಡಿದ್ದೇವೆ ಎಂಬ ಹೆಗ್ಗಳಿಕೆಯಿಂದಾಗಲೀ ಈ ತಪ್ಪುಗ್ರಹಿಕೆಯನ್ನು ಸರಿಪಡಿಸಲು ಸಾಧ್ಯವಾಗುವುದಿಲ್ಲ ಎಂದಿದ್ದಾರೆ.[೬]

ಏಕೆಂದರೆ ಇತಿಹಾಸವು ಬುಡಕಟ್ಟುಗಳ ಜೀವನವನ್ನು ಕಾಲದಿಂದ ಕಾಲಕ್ಕೆ ಹೇಗೆ ಬದಲಾಗಿಸಿದೆ ಎಂಬುದರ ತಿಳುವಳಿಕೆಯನ್ನು ತಂದುಕೊಟ್ಟರೆ, ಪುರಾಣ ಮತ್ತು ಐತಿಹ್ಯಗಳು ಬುಡಕಟ್ಟಿನ ಅಸ್ತಿತ್ವಕ್ಕೆ ಅಗತ್ಯವಾದ ಕ್ರಿಯೆಯನ್ನು ಸೂಚಿಸುತ್ತವೆ. ಪುರಾಣ ಮತ್ತು ಐತಿಹ್ಯಗಳು ಕೆಲವು ಸಂದರ್ಭದಲ್ಲಿ ಒಂದೇಯಾಗಿ ಕಂಡುಬಂದು ಇವುಗಳಲ್ಲಿನ ವ್ಯತ್ಯಾಸಗಳನ್ನು ಗುರುತಿಸಲು ಕಷ್ಟವಾಗಬಹುದು. ಆಗ ಯಾವ ಕಥನಗಳಲ್ಲಿ ಧಾರ್ಮಿಕ ಅಂಶಗಳನ್ನು ಒಳಗೊಂಡ, ಉಪಾಸನೆಗಳಿಗೆ ಸಂಬಂಧಿಸಿರುತ್ತದೆಯೋ ಅದನ್ನು ಪುರಾಣ ಎಂದು, ಹಾಗೆಯೇ ಯಾವ ಕಥನಗಳಲ್ಲಿ ಲೌಕಿಕ ಅಂಶಗಳಿಂದ ಜನರು, ಪ್ರಾಣಿ, ನದಿ, ಪ್ರಕೃತಿ ಮುಂತಾದ ಅಂಶಗಳು ಬಿಂಬಿತಗೊಂಡಿರುತ್ತವೆಯೋ ಅವುಗಳನ್ನು ಐತಿಹ್ಯಗಳೆಂದು ಕರೆಯಬಹುದಾಗಿದೆ.

ಚರಿತ್ರೆಗೂ ಐತಿಹ್ಯ ಮತ್ತು ಪುರಾಣಗಳಿಗೂ ತನ್ನದೇ ಆದ ಕೆಲವು ವ್ಯತ್ಯಾಸಗಳಿವೆ ಅವುಗಳನ್ನು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸಬೇಕಾಗಿದೆ. ಚರಿತ್ರೆ ಮತ್ತು ಐತಿಹ್ಯದಲ್ಲಿ "ವ್ಯಕ್ತಿಗಳಿಗೆ, ಸ್ಥಳಗಳಿಗೆ ಮತ್ತು ಘಟನೆಗಳಿಗೆ ಸಂಬಂಧಿಸಿದ ಸತ್ಯವಾದ ಅಥವಾ ಕಾಲ್ಪನಿಕವಾದ ನಂಬಿಕೆಗಳನ್ನು ಒಳಗೊಂಡ ಕಥಾನಕಗಳನ್ನು ಐತಿಹ್ಯಗಳೆಂದು ಕರೆಯುತ್ತಾರೆ" ಐತಿಹ್ಯಗಳು ಪರಂಪರಾನುಗತವಾಗಿ ಬಂದಿರುವ ಕಥೆಯಾಗಿರುತ್ತವೆ. ಇವುಗಳಲ್ಲಿ ಬರುವ ಘಟನೆಗಳು ಕಾಲ್ಪನಿಕವಾಗಿರಬಹುದು ಅಥವಾ ನೈಜವಾಗಿರಬಹುದು. ಆದರೆ ಯಾವುದೇ ಘಟನೆ ಖಚಿತವಾಗಿ ನಡೆದಿರುವುದೆಂದು ಹೇಳಲು ಸಾಧ್ಯವಿಲ್ಲ. ಇದೇ ಮಾತನ್ನು ವ್ಯಕ್ತಿಗಳಿಗೂ ಪ್ರದೇಶಗಳಿಗೂ ಅನ್ವಯಿಸಬಹುದು. ಆದರೆ ಇತಿಹಾಸ ಒಂದು ಘಟನೆ ಖಚಿತವಾಗಿ ನಡೆದುದ್ದಕ್ಕೆ ಆಧಾರಗಳನ್ನು ಕೊಟ್ಟು ಸ್ಪಷ್ಟಪಡಿಸುತ್ತದೆ. ಹಾಗೆಯೇ ವ್ಯಕ್ತಿಗಾಗಲಿ ಪ್ರದೇಶಗಳಿಗಾಗಲಿ ಇತಿಹಾಸದಲ್ಲಿ ಆಕರಗಳು ದೊರೆಯುತ್ತವೆ.[೭]

ಬುಡಕಟ್ಟಿನ ಜನರ ಜೀವನವು ಕಾಲದಿಂದ ಕಾಲಕ್ಕೆ ಹೇಗೆ ಬದಲಾವಣೆಗೊಂಡಿದೆ ಮತ್ತು ಗೊಳ್ಳುತ್ತಿದೆ ಹಾಗೂ ಅದರ ಪ್ರೇರಣೆ ಮತ್ತು ಪ್ರಭಾವ ಎಷ್ಟಿದೆ ಎಂಬುದನ್ನು ಚರಿತ್ರೆ ಹೇಳಿದರೆ, ಪುರಾಣ ಬುಡಕಟ್ಟಿನ ಅಸ್ತಿತ್ವಕ್ಕೆ ಅಗತ್ಯವಾದ ಕ್ರಿಯೆಯನ್ನು ಸೂಚಿಸುತ್ತದೆ. ಆದ್ದರಿಂದಲೇ ಬುಡಕಟ್ಟುಗಳು ತಮ್ಮ ಜೀವಮಾನದ ವೃತ್ತಾಂತವನ್ನು ಕೇಳಿದರೆ ಚರಿತ್ರೆಯನ್ನು ಹೇಳುವುದನ್ನು ಬಿಟ್ಟು ಪುರಾಣವನ್ನು ಹೇಳುತ್ತಾರೆ. ಅವರಿಗೆ ತಮ್ಮ ಇತಿಹಾಸಕ್ಕಿಂತ ಪುರಾಣಗಳೇ ಪ್ರಮುಖವಾದವುಗಳಾಗಿರುತ್ತವೆ. ಏಕೆಂದರೆ ಚರಿತ್ರೆಯು ಬುಡಕಟ್ಟಿನ ಸ್ವಾತಂತ್ರ್ಯ, ಸ್ವಾಭಿಮಾನ ಜೀವನವನ್ನು

ಸಾರುವ ಬದಲು ಅಸ್ಪೃಶ್ಯತೆ ಶೋಷಣೆಯನ್ನು ಸಾರುವುದೇ ಹೆಚ್ಚಾಗಿರುತ್ತದೆ. ಆದ್ದರಿಂದಲೇ ಬುಡಕಟ್ಟುಗಳು ಪುರಾಣಗಳ ಮೇಲೆಯೇ ಅವಲಂಬಿತವಾಗಿರುತ್ತಾರೆ.

ಪುರಾಣಗಳಿಗೆ ಸಂಬಂಧಿಸಿದಂತೆ ಹಲವಾರು ವಿದ್ವಾಂಸರು ತಮ್ಮದೇ ಆದ ಅಭಿಪ್ರಾಯ ಗಳನ್ನು ನೀಡಿದ್ದಾರೆ.

ಸರ್ ಜೇಮ್ಸ್ ಫ್ರೇಜರ್ ಅವರು ಪುರಾಣಗಳನ್ನು ಕುರಿತು ಹೀಗೆ ಹೇಳುತ್ತಾರೆ. "ಪುರಾಣಗಳಿಗೆ ಮಾಟವೇ ಮೂಲ. ಅನೇಕ ಚಿತ್ರಕ ಘಟನೆಗಳನ್ನು ಅವು ಅಲಂಕಾರಿಕ ಭಾಷೆಯಲ್ಲಿ ಹೇಳುತ್ತವೆ ಮತ್ತು ಆ ಘಟನೆಗಳನ್ನು ಪುನಃ ಸೃಷ್ಟಿಸುತ್ತವೆ. ಹಲವು ಪ್ರಸಂಗಗಳಲ್ಲಿ ಆಚರಣೆಗಳು ಅಳಿದರೂ ಪುರಾಣ ಉಳಿಯುತ್ತದೆ. ಹಾಗೆಯೇ ಮಲಿನೋವ್ ಸ್ಕಿ ಅವರು ಪುರಾಣ ಕುರಿತು 'ಪುರಾಣ ಹೇಳಿದ್ದು ಕಥೆಯಲ್ಲ ಅದೊಂದು ಕ್ರಿಯಾಶೀಲವಾದ ಸಾಂಸ್ಕೃತಿಕ ಶಕ್ತಿ ಎನ್ನುತ್ತಾರೆ.[೮] ಸಿದ್ದಲಿಂಗಯ್ಯ ಅವರು ಪುರಾಣವನ್ನು ಹೀಗೆ ಹೇಳುತ್ತಾರೆ. ಒಂದು ಪುರಾಣ ಬಿತ್ತುವ ಸಂದೇಶವನ್ನು ಅದು ಒಂದು ಕಾಲಕ್ಕೆ, ನಿರ್ದಿಷ್ಟ ಜನವರ್ಗಕ್ಕೆ ಹೇಳಿದ ಸತ್ಯವೆಂದು ಗ್ರಹಿಸಬೇಕಾಗುತ್ತದೆ. ದೇವತೆಗೆ ಸಂಬಂಧಿಸಿದ ಸೈದ್ಧಾಂತಿಕ ಭಾಗ ಪುರಾಣವಾಗಿರುತ್ತದೆ. ಒಬ್ಬ ಪುರೋಹಿತರ ಅಥವಾ ವೈದ್ಯ ಮಳೆ ತರಿಸಲು ಅಥವಾ ಧಾನ್ಯ ಬೆಳೆಸಲು ಮಾಡಿದ ಮಾಂತ್ರಿಕ ಆಚರಣೆಯನ್ನು ಕುರಿತಾದ ಕಥೆಯೇ ಪುರಾಣವಾಗುತ್ತದೆ.[೯]

ಹಾಗೆಯೇ ಮತ್ತೊಬ್ಬ ಹರ್ಸ್ ಕೋವಿಟ್ಸ್ ಅವರು ಹೀಗೆ ಹೇಳುತ್ತಾರೆ Myth is the charter of belief and gives point and meaning to the ritualistic behaviour that derives from its sanction"[೧೦] ಎಂದಿದ್ದಾರೆ

ಮೇಲಿನ ಎಲ್ಲಾ ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಿದಾಗ ಪುರಾಣ ಎಂಬುದು ಅಲೌಖಿಕ ಅಂಶಗಳಿಂದ ಕೂಡಿದ್ದಾಗಿದೆ. ಸಮುದಾಯಗಳು ಮೂಲಗಳನ್ನು ಅಥವಾ ಬದಲಾವಣೆ ಗಳನ್ನು ಸೃಷ್ಟಿಸಿಕೊಂಡಿರುವ ಸಾಧ್ಯತೆಗಳಿವೆ. ಏಕೆಂದರೆ ಪುರಾಣಗಳನ್ನು ವೈದಿಕರು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡು ತಾವು ಪರಮಶ್ರೇಷ್ಠರು, ತಾವು ಬದುಕಿರುವುದೇ ಜನಸಾಮಾನ್ಯರ ಉದ್ಧಾರಕ್ಕಾಗಿ, ಅವರನ್ನು ಸ್ವರ್ಗಕ್ಕೆ ಸೇರಿಸುವ ಸಲುವಾಗಿ ಎಂದು ನಂಬಿಸುವ ನಿಟ್ಟಿನಲ್ಲಿ ಹಲವಾರು ಪುರಾಣಗಳನ್ನು ಸೃಷ್ಟಿಸಿಕೊಂಡು ಪ್ರಚಾರಪಡಿಸಿದರು. ಪ್ರಸ್ತುತ ಭಾರತದ ಸಂದರ್ಭ ದಲ್ಲೂ ಪುರಾಣಗಳನ್ನು ಅಧ್ಯಯನ ಮಾಡುವವರು ಆ ಭ್ರಮೆಯಿಂದ ಹೊರಗೆ ಬಂದಿರುವುದನ್ನು ಕಾಣುತ್ತಿದ್ದೇವೆ. ಏಕೆಂದರೆ ವೈದಿಕರು ಮತ್ತು ಪ್ರಭುತ್ವಗಳು ತಮ್ಮ ಸ್ವಾರ್ಥಸಾಧನೆಗಾಗಿ ಅಧಿಕಾರದ ಲಾಭಿಗಾಗಿ, ಇನ್ನೊಬ್ಬರನ್ನು ಓಲೈಸಿಕೊಳ್ಳಲು ಮತ್ತು ಮತ್ತೊಬ್ಬರನ್ನು ಅಧೀನ ಮಾಡಿಕೊಳ್ಳಲು ಈ ಪುರಾಣಗಳನ್ನು ಸೃಷ್ಟಿಸಿಕೊಂಡಿರುವುದನ್ನು ಕಾಣಬಹುದು. ಇದಕ್ಕೆ ಸಂಬಂಧಿಸಿದಂತೆ ಡಿ.ಡಿ.ಕೊಸಾಂಬಿಯವರು ಹೀಗೆ ಹೇಳುತ್ತಾರೆ: "ಪುರಾಣಗಳು ಕ್ರಿಶ ೬ ಮತ್ತು ಹನ್ನೆರಡನೆಯ

ಶತಮಾನದ ಸಂದರ್ಭದಲ್ಲಿ ಹೆಚ್ಚಾಗಿ ರಚನೆಗೊಂಡವು(ಸೃಷ್ಟಿಗೊಂಡವು) ಅಥವಾ ಕ್ರಮಬದ್ಧವಾಗಿ ಪುನಃ ರಚಿಸಲಾಯಿತು. ನಂತರ ಇದಕ್ಕಿಂತ ಸ್ವಲ್ಪ ಮೇಲ್ಮಟ್ಟದ ಹಂತದಲ್ಲಿ ದೇವತಾಶಾಸ್ತ್ರ, ಆಧ್ಯಾತ್ಮಿಕ ವ್ಯಾಖ್ಯಾನ, ಅನುಭವ ಹಾಗೂ ಸಾಮಾಜಿಕ ಸುಧಾರಣೆಗಳು ಹೆಚ್ಚಾದಂತೆ ಜನರು ತಮ್ಮ ಅಸ್ಮಿತೆಯನ್ನು ಮತ್ತು ತಮ್ಮ ಹಿಂದಿನ ಕುಲದ ಪ್ರತ್ಯೇಕತೆಯನ್ನು ಉಳಿಸಿಕೊಳ್ಳಲು ಈ ರೀತಿಯ ಪುರಾಣಗಳನ್ನು ಸೃಷ್ಟಿಸಿಕೊಂಡರು. ಇದಕ್ಕೆ ನಿರುದ್ಯೋಗಿಗಳಾಗಿದ್ದ ಬ್ರಾಹ್ಮಣರ ಪ್ರೋತ್ಸಾಹವು ಹೆಚ್ಚಾಗಿತ್ತು ಎಂದಿದ್ದಾರೆ.[೧೧]

ಹೀಗೆ ಬ್ರಾಹ್ಮಣರು ತಮ್ಮ ಸ್ವಾರ್ಥಕ್ಕಾಗಿ ಪುರಾಣಗಳನ್ನು ಸೃಷ್ಟಿಸಿಕೊಂಡರೆ ಪ್ರಭುತ್ವಗಳು ತಮ್ಮ ತಪ್ಪನ್ನು ಮುಚ್ಚಿಕೊಳ್ಳಲು ಪುರಾಣಗಳನ್ನು ಸೃಷ್ಟಿಸಿಕೊಂಡವು. ಆದ್ದರಿಂದ ಪುರಾಣಗಳನ್ನು ನೂರಕ್ಕೆ ನೂರು ನಂಬಲು ಸಾಧ್ಯವಿಲ್ಲ ಎಂದೆಲ್ಲಾ ಹೇಳಿದ್ದಾರೆ.

ಹಾಗೆಂದು ಸಂಪೂರ್ಣವಾಗಿ ಪುರಾಣಗಳನ್ನು ಅಲ್ಲಗಳೆಯುವುದಕ್ಕೂ ಸಾಧ್ಯವಾಗುವುದಿಲ್ಲ. ಏಕೆಂದರೆ ಪುರಾಣಗಳಲ್ಲಿ ಉಲ್ಲೇಖಿತವಾದ ವಿಚಾರಗಳ ಹಿಂದೆ ಅದರದ್ದೇ ಆದ ಅಜೆಂಡಾಗಳಿರುತ್ತದೆ. ಆ ಅಜೆಂಡಾಗಳು ಚರಿತ್ರೆಯ ಪ್ರತಿಯೊಂದು ಹಂತದಲ್ಲೂ ಸಕ್ರಿಯವಾಗಿರುತ್ತವೆ. ಅವು ಚರಿತ್ರೆಯ ವರ್ತಮಾನವನ್ನು ಆಕ್ರಮಿಸುವ ಹಾಗೂ ನಿಯಂತ್ರಿಸುವ ಪ್ರಯತ್ನವನ್ನು ಸದಾ ಮಾಡುತ್ತಾ ಸಾಗುತ್ತಿರುತ್ತವೆ. ಪುರಾಣಗಳಲ್ಲಿ ಉಲ್ಲೇಖಿತಗೊಂಡಿರುವ ವ್ಯಕ್ತಿನಾಮಗಳು, ಘಟನೆಗಳು ಹಾಗೂ ಪ್ರದೇಶಗಳು ಮಾನವನ ವರ್ತಮಾನದ ಬದುಕಿನಲ್ಲಿ ನೇರವಾಗಿ ಸಂಬಂಧಪಟ್ಟಿಲ್ಲವಾದರೂ ಅವುಗಳನ್ನು ಮಾನವನ ಬದುಕಿನ ಭಾಗವಾಗಿರುವ ಪ್ರಯತ್ನಗಳು ಸದಾ ಕಾಲದವರೆಗೂ ನಡೆಯುತ್ತಾ ಬಂದವು. ಪುರಾಣಗಳು ದೇವರು, ಧರ್ಮ, ಮಂತ್ರ ಮತ್ತು ತಂತ್ರಗಳೆಂಬ ಅಲೌಕಿಕ ನೆಲೆಯಲ್ಲಿ ಮಾನವನನ್ನು ಸಾಂಸ್ಕೃತಿಕ ಮತ್ತು ಮಾನಸಿಕವಾಗಿ ನಿಯಂತ್ರಿಸುವ ಹಾಗೂ ಅಧಿಕಾರ ಸ್ಥಾಪಿಸುವ ಉದ್ದೇಶವನ್ನು ಹೊಂದಿರುತ್ತವೆ.

ಪುರಾಣಗಳಲ್ಲಿ ಕಂಡುಬರುವ ಭೂಮಿಯ ಉಗಮ, ಪ್ರಭುತ್ವದ ಹುಟ್ಟು ಹಾಗೂ ನಾಶ ಎಂಬ ಅಂಶಗಳು ಕೇವಲ ಧಾರ್ಮಿಕ ಹಿನ್ನೆಲೆಯಲ್ಲಿ ಕಂಡು ಬರುವ ಅಂಶಗಳಾಗಿರುವುದಿಲ್ಲ. ಬದಲಿಗೆ ಅವುಗಳು ಬುಡಕಟ್ಟು ಸಮುದಾಯಗಳು ತಮ್ಮ ಜೀವಿತದ ಅವಧಿಯಲ್ಲಿ ಅನುಭವಿಸಿದ ಸಾವು ನೋವುಗಳು ದುಃಖ ದುಮ್ಮಾನಗಳ ಮೊತ್ತವೇ ಆಗಿರುತ್ತವೆ. ಆದರೆ ಅವುಗಳು ನೋಡಲು ಧಾರ್ಮಿಕ ಹಿನ್ನೆಲೆಯ ಅಂಶಗಳಂತೆಯೇ ಕಾಣಿಸುತ್ತವೆ. ವೈದಿಕರ ಸೃಷ್ಟಿಯ ಪುರಾಣಗಳಲ್ಲಿ ರೋಮಾಂಚನ ಅತಿಮಾನುಷ ಶಕ್ತಿಗಳಿಂದ ಕೂಡಿರುತ್ತದೆ. ಆದರೆ ಜನಸಾಮಾನ್ಯರು ರಚಿಸಿ(ಸೃಷ್ಟಿಸಿಕೊಂಡ)ಕೊಂಡಿರುವ ಪುರಾಣಗಳಲ್ಲಿ ಸಾವು ನೋವು, ನಗು, ಅಳು, ದೈನಂದಿನ ಬದುಕುಗಳು ಕಂಡು ಬಂದು ಶಿವ ಪಾರ್ವತಿಯರು ಸಾಮಾನ್ಯ ಜನರಂತೆ ಅನ್ನ ಊಟ ಮಾಡಿ ಮಲ, ಮೂತ್ರ ಮಾಡುವುದು, ಬಂಜೆತನ, ತಾಯ್ತನ ಸೂತಕ ಉದ್ರೇಕ ಸಂಭೋಗ,

ಜಗಳ, ಬೈಗುಳ ಮುಂತಾದವುಗಳನ್ನು ಮಾಡುವುದಾಗಿ ವಿವರಿಸಲಾಗುತ್ತದೆ. ಇವು ವರ್ತಮಾನದ ಬದುಕಿನ ಚಿತ್ರಣದ ಪ್ರತಿಬಿಂಬಗಳಂತೆ ಹಾಗೂ ವಾಸ್ತವ ಬದುಕಿನ ಮುಖಾಮುಖಿಯಂತೆ ಕಂಡು ಬರುತ್ತಿರುತ್ತವೆ.

ವೈದಿಕ ಹಾಗೂ ವೈದಿಕೇತರ ಸುರ ಹಾಗೂ ಅಸುರ, ದೇವತೆಗಳು ಹಾಗೂ ರಾಕ್ಷಸರು ಎನ್ನುವ ಎರಡು ತಂಡಗಳ ರಚನೆ ಈ ಭೂಮಿಯ ಮೇಲಿನ ಅಧಿಕಾರದ ಪ್ರಶ್ನೆಗಳ ಹಿನ್ನೆಲೆಯಿಂದಲೇ ಹುಟ್ಟಿಕೊಂಡಿತು. ಅಸುರರಿಗೆ ಮೋಕ್ಷವನ್ನು ಕರುಣಿಸುವುದು. ದೈವತ್ವಕ್ಕೇರಿಸುವುದು ಮುಂತಾದ ವೈದಿಕತೆಯನ್ನು ಸಾಧಿಸುವ ಅ ವೈದಿಕತೆಯನ್ನು ಮೀರುವ ಹಲವಾರು ಪ್ರಸಂಗಗಳನ್ನೂ ಪುರಾಣಗಳು ಸೃಷ್ಟಿಸಿದವು. ಈ ಬಗೆಯ ಪ್ರಸಂಗಗಳನ್ನು ನಾವು ಚರಿತ್ರೆಯುದ್ದಕ್ಕೂ ಸೃಷ್ಟಿಸುತ್ತಲೇ ಹೋದೆವು. ಒಟ್ಟಾರೆಯಾಗಿ ಪುರಾಣಗಳು ಸೃಷ್ಟಿಯ ಮೂಲವನ್ನು ತಮ್ಮಿಂದಲೆ ಅಸ್ತಿತ್ವದಲ್ಲಿದ್ದ ವ್ಯವಸ್ಥೆಯನ್ನು ತಮ್ಮದಾಗಿಸಿಕೊಳ್ಳುವ ಪ್ರಯತ್ನವನ್ನು ನಡೆಸಿದವು.[೧೨]

ಒಟ್ಟಾರೆಯಾಗಿ ಹೇಳುವುದಾದರೆ ಬುಡಕಟ್ಟು ಸಮುದಾಯಗಳಿಗೆ ಜನಪದ ಕಥೆಗಳಿಗಿಂತ ಐತಿಹ್ಯಗಳು ಹೆಚ್ಚು ಆತ್ಮೀಯವಾಗುತ್ತದೆ. ಐತಿಹ್ಯಗಳಿಗಿಂತ ಪುರಾಣಗಳು ಹೆಚ್ಚು ಆತ್ಮೀಯವಾಗುತ್ತದೆ. ಆದ್ದರಿಂದ ಒಂದು ಬುಡಕಟ್ಟಿನ ಸಮಗ್ರ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಲು ಆ ಬುಡಕಟ್ಟಿನಲ್ಲಿರುವ ಐತಿಹ್ಯ ಮತ್ತು ಪುರಾಣಗಳ ಮೂಲಗಳ ಅಧ್ಯಯನ ಮಾಡಬೇಕಾಗಿದೆ. ಆ ನಿಟ್ಟಿನಲ್ಲಿ ಇರುಳಿಗರ ಐತಿಹ್ಯ ಪುರಾಣಗಳನ್ನು ಈ ಕೆಳಕಂಡಂತೆ ಚರ್ಚಿಸಲಾಗಿದೆ.

ಐತಿಹ್ಯ ೧

ಶ್ರವಣ ಅನ್ನೂನು ಬಂಕಾಪುರ ಅನ್ನೂ ಭೂಲೋಕ್ದಲ್ಲಿ ಸೇರ್ಕೊಬುಟ್ಟ, ದೇವ ಮಾನ್ಯುರ್ನೆಲ್ಲ ಸೆರೆ ಆಕ್ಕೊಬುಟ್ನಂತೆ ಕೃಷ್ಣ ಪರಮಾತ್ಮನ್ನು ಬುಡ್ಲಿಲ್‌ವಂತೆ ಅವ್ನು ಕುಂತ್ಕೊಳೊ ಸಿಂಹಾಸ್ನುದ್ ಕೆಳಗಡೆ ಮಲ್ಲಸ್ಕೊ ಬುಟ್ಟಿದ್ನಂತೆ. ಏನೇ ಆಗ್ಲಿ ಆಶ್ರವಣನ್ ಮ್ಯಾಲೆಯಿದ್ದ ಮಾಡ್‌ಬೇಕು ಅಂದುದ್ದೆ ಹೊರುಟ್‌ಬುಟ್ನಂತೆ ಶಿವ.

ಪಾರ್ವತಿದ್ದೋಳು "ಸ್ವಾಮಿ ಅಂತ ದೇವಮಾನ್ಯುರ್ನೆಲ್ಲಾ ಸೆರೆಯಿಕ್ಕೊಂಡಿರೋನು ನಿಮ್ಮುನ್ ಬುಟ್ಟಾನೇ? ನೀವಿಂದಿರುಗ್ ಬತ್ತಿರ ಅಂತ ಏನ್ ಗ್ಯಾರಂಟಿ?" ಅಂದ್ಲಂತೆ" ಇಲ್ಲ ಪಾರ್ವತಿ ನೀನು ಈ ಮರುದ್ ಕೋವೆವೊಳುಗ್ ಕುಂತಿರು. ನಾನೋಗಿ ಅವುನ್ನ ಸಾಯಿಸ್ತಿನಿ. ಅವುನ್ ಮುಗಿಸಬೇಕು". ಅಂತ ತೀರ್ಮಾನ ತಕೊಬುಟ್ನಂತೆ ಅವಾಗ ಸ್ವಾಮಿ ಮದೇಶ್ವರ್‌ರಾಗಿ ಈ ತುಂಟಾಟುದ್ ನೀಲೇಗೌಡ್ನತ್ರುಕ್ಕೆ ಭಿಕ್ಷೆಗೋದುದ್ದು ಈ ಸಂಕಮ್ಮ ನೀಲೇಗೌಡ ಗಂಡ ಹೆಂಡ್ರೂ ಕಡಿಂದ ಕಾರಯ್ಯ ಬಿಲ್ಲಯ್ಯ ಸಿಸು ಮಕ್ಕುನ ದಾನನ ತಕೋಂಡು ಹೊರುಡ್ತಾನೆ. ಆಸಿಸು ಮಕ್ಕುನ ಎತ್ಕೊಂಡು ಈ ಮಾದೇವು ಅಜ್ಜಜ್ಜಿ ಮುದುಕ್‌ನಾಗಿ ದೊಣ್ಣೆ ಊರ್ಕೊಂಡು ಗಡಗಡ ಅಂತ ನಡಿಕೊಂಡು ಹೋಯ್ತಿದ್ದುದ್ನ ಪಾರ್ವತಿ ನೋಡ್ಬುಟ್ಟು "ಇವ್ರು ಶ್ರವ್ಣುನ್ ಮ್ಯಾಲೆ

ಯಿದ್ಮುಕ್ಕೋಯ್ತಾ ಅವ್ರು ಇಂದಿರುಗ್ ಬತ್ತಾರ್ಯೆ? ದೇವ್ ಮಾನ್ಯುರೆಲ್ಲ ಓದ್ರು ಆಗ್ಲಿಲ್ಲ ಇವುರ್ನ ಉಳಿಸ್ಕೋಬೇಕು" ಅಂತ ಅನ್ಕೋಂಡು ಎದ್ರುಗ್ ಬಂದುದ್ದೇ" ಸ್ವಾಮಿ ನಿಂತ್ಕೊಳ್ಳಿ ಅಲ್ಲೆ" ಅಂದ್ರಂತೆ ಸಿವಕ್ಷಾಪಸ್ಕೊಂಡು "ಅಲ್ಲ ಪಾರ್ವತಿ ನಾನು ಅಷ್ಟು ವಿಧವಾಗೇಳಿದ್ದೀನಿ ನೀನು ಆ ಮರುದ್‌ಕೋವೆ ಬುಟ್‌ಬುಟ್ ಬಂದ್ಬುಟ್ಟಲ್ಲ" ಅಂದ "ಸ್ವಾಮಿ ನೀವೋಗೊದಾದ್ರೆ ನನಗೆ ಗಂಡನ್‌ಕೊಟ್ಟುಟ್ಟೋಗಿ" ಅಂದ್ಲು ಎಲಾ ಎಲಾ ಹೆಣ್ಣೆ ಹೋಗೋಕ್ ಮೊದ್ಲೆ ಗಂಡುನ್ ಕೊಡು ಅಂತಾಳಲ್ಲ ನನ್ ವಿಶ್ವರೂಪಾನೆ ಕೊಟ್ರು ಇವ್ಳು ಒಪ್ಪೊಲ್ಲು ಎನ್ ಮಾಡೊದ್" ಅನ್ಕೊಂಡು ಆಗೇಳುದ್ರಂತೆ ಒಂದು ವೇಳೆ ನಾನೇದ್ರು ಹೋಗ್ಬುಟ್ರೆ; ಮೂಡ್ಲಾಗುಟ್ ಬಂದಿರೋ ನಂಜುಂಡಾನೆ ನಿನ್‌ಗಂಡ, ನಾನ್ ಬದ್ಕಿರ್ ಬೇಕು ಇಲ್ಲ ಅವುನ್ ಬದುಕ್‌ಬೇಕು ಅವುನ್ ಮ್ಯಾಲೆಯಿದ್ಯ ಮಾಡ್ಲೆಬೇಕು. ಈಗ ನೀನೋಗು ಅಂದ. ಈ ಶ್ರವಣ ನಮ್ಮ ಇಡೀ ಕರ್ನಾಟಕುತ್ತುಂಬೆಲ್ಲಾ ರಾಕ್ಷಸ್ರುನೇ ಕಾವ್ಲಿಟ್ಟಿದ್ನಂತೆ ಈ ರಾಕ್ಷಸರು ನರ ಮನುಸ್ರು ಗಮ್ಲು ಬಂದ್ರೆ ಇಂತೋರೆ ಹೋಯ್ತಾ ಅವ್ರೆ ಅಂತ ವಾಸ್ನೇಲೆ ಕಂಡ್ಕೊಳ್ಳೊರಂತೆ. ಈ ಮಾದೇವ ಹಳೇ ಜೋಡೊಂದ್ ಜೊತೆ ಕೈಲಿಡ್ಕೊಂಡು ದೊಣ್ಣೆ ಊರ್ಕೊಂಡು ಈ ಸಿಸು ಮಕ್ಳುನ ಜೋಳ್ಗೆಲೆತ್ಕೊಂಡೊಯ್ತಿದ್ದ. ರಾಕ್ಷಸ್ರು ಬಂದು ಯಳ್ಕೊಂಡೋಗಿ ಶ್ರವಣನ್ ಮುಂದೆ ನಿಲ್ಸಿದ್ರು. "ಎಯ್ ಮುದ್ಯ ಯಾವುನೋ ನೀನು? ಲೋಪರ್ ನನ್ಮಗ್ನೆ ನಿನ್ನೋಡುದ್ರೆ ಸತ್ತೋಗ್ವಂಗಿದ್ದಿ ಈ ಮಕ್ಳುಬ್ಯಾರೆ ಕೇಡೇನಲೇ ನಿನ್ಗೆ ಯಾರೋವೋ ಈ ಮಕ್ಳು? ಅಂದ. ನನ್ ಮಗ್ಳೋವು ಸ್ವಾಮಿ" ಎಲ್ಲೋ ನಿನ್ ಮಗ್ಳು ತೀರೋಗ್ ಬುಟ್ಳು ಸ್ವಾಮಿ" ಈ ಮಕ್ಳಪ್ಪ ಎಲ್ಲೋ? ಅವ್ನು ತೀರೋಗಾವ್ನೆ ಸ್ವಾಮಿ" ಎಲಾ ಕೆಟ್ ನನ್ ಮಗ್ನೆ ಏನೋ ನಿನ್ನೆಸ್ರು" ನನ್ನೆಸ್ರೂ ಮಾದ ಸ್ವಾಮಿ" ಮುದುಗ್ ನನ್ ಮಗ್ನೆ "ಏ ಮಾದ್ಗ ನಾಳೆ ಅನ್ನೆರುಡ್ ಗಂಟೆ ಹೊತ್ಗೆ ಒಂದು ಜೊತೆ ಬೂಡ್ಸ್ ಮಾಡಿ ತಕೋ ಬಾರೋ. ಈ ಪಟ್ಣದಲೆಲ್ಲ ತಿರ್ಕೊಂಡು ತಿನ್ಕೊಂಡು ಬಿದ್ದಿರು ಹೋಗು" ಅಂತೇಳುದ್ನಂತೆ. ಬೂಡ್ಸ್ ಮಾಡಿ ಕೊಡಬೇಕಲ್ಲಾ ಎನ್ ಮಾಡೋದು ಅಂತ ಬಾರಿ ಯೋಚ್ನೆ ಮಾಡ್ಕೊಂಡು ಕ್ವಾಪ ಬಂದ್ಬುಟ್ಟು ಬಿರುಗಾಳಿ ಆಗಿಹೋಯ್ತು ಅವ್ನೆ ಅರಟ್ಯಾದಲ್ಲಿ ನಾನ್ ಯಾವ ರೀತಿಲಿ ಇವನ್ಗೆ ಬೂಡ್ಸ್ ಮಾಡ್‌ಕೊಡ್ಲಿ ನಾನು ಬದ್ಕಿದ್ರೇನು? ಸತ್ರೇನು? ಅಂತ ನಿರುಗಾಳಿ ಹೋದಂಗೊಯ್ತಾ ಇರಬೇಕಾದ್ರೆ ಬೆವರು ತೊಟ ತೊಟ ಅಂತ ತೊಟ್ಟಿಕ್ತಿತ್ತಂತೆ ಆ ಬೆವ್ರುರ್ನ ಆ ಕಡೆ ತಗುಂದ್ ಬಿಸಾಕುದ್ನಂತೆ ಮಾದುಗ್ರ ಹರಳಯ್ಯ ಹುಟ್ಟುದ್ನಂತೆ. ಈ ಕಡೆ ಕಿತ್ತಿ ಬಿಸಾಕ್ವಾಗ ಮಾದುಗ್ರ ಹೊನ್ನಮ್ಮ ಹುಟ್ಟುದ್ಳಂತೆ. ಎಡ್ಡೇಲಿ ಹುಟ್ಟೋಳು ಎಡ್ತಿ, ಬಲ್ದೇಲುಟ್ಟೋನು ಗಂಡ ಅವಾಗ ಆಗಂಡ ಹೆಡ್ತಿ ಹೇಳುದ್ರಂತೆ "ಸ್ವಾಮಿ ನಿಮ್ ಕಷ್ಟನಾ ನಾವ್ ಪರಿಹಾರ ಮಾಡ್ತೀವಿ ನಿಂತ್ಕೋಳ್ಳಿ ಶ್ರವಣ ಹೇಳ್ದಂಗೆ ಬೂಡ್ಸ್ ನಾವೊಲ್ಕೊಡ್ತೀವಿ" ಅಂದ್ರಂತೆ ಮಾದೇಶ್ವರುನ್ಗೆ?" ಎಲ್ಲೋ ಶ್ರವಣಾನೆ ನನ್ನ ಪರೀಕ್ಷೆ ಮಾಡುಕ್ಕೆ ಮಾಯಾದ್ ಯ್ಯಾಸ್ ಆಕ್ಕೊಂಡು ಬಂದವ್ನೆ ಇವ್ನು ಏನೋ ಒಂದ್ ಕತೆ ಮಾಡ್ತಾನೆ ನನ್ನ "ಅಂತ ಅನುಮಾನ ಬಂದ್ಬುಡ್ತು ಆಗ ಆ ಕಡೆ

ಹರಳಯ್ಯ ಈ ಕಡೆ ಹೊನ್ನಮ್ಮ ಬಂದುದ್ದೇ ನಿಂತ್ಕೊಂಡು "ಸ್ವಾಮಿ ನಾವು ನಿಮ್ಮ ಬೆವ್ರುಲ್ಲಿ ಹುಟ್ಟೋರು ನಾವು ನಿಮ್ ಕಷ್ಟ ಪರಿಹಾರ ಮಾಡ್ತೀವಿ" ಅಂದ್ರಂತೆ" ಓಹೋ ಇರಬೋದು ನನ್ ಬೆವ್ರು ಹನೀಲಿ ಹುಟ್ಟಿದೋರು ಈ ಮಾದುಗ್ರು "ಅಂತ ಯೋಚ್ನೆ ಮಾಡಿ ದಿವ್ಯ ದೃಷ್ಟಿಲಿ ನೋಡ್ದ" ಹರಳಯ್ಯ ನನ್ ಬೆವರು ಹನಿಲುಟ್ಟೋನು ನೀನೆ ಆಗಿದ್ರೆ ಎತ್ಕೋ ಆ ಕುಡ್ಲುವ ಕೈಗೆ ಕಡಿ ನಿನ್ನೆಡ್ತಿನ" ಅಂದ್ರಂತೆ ಆಗ ಅವ್ನು ಒಂದೇ ಏಟ್ಗೆ ಕುಡ್ಲೆತ್ತುದ್ದೆ ಕುತ್ಗೆಗೊಡುದ್ನಂತೆ. ಒಂದೇ ಏಟ್ಗಾಗರೋಯ್ತು ಕತ್ತು. ರಕ್ತ ಸುರಿತಿತ್ತಲ್ಲ ಒಂದ್ ಗುಂಡಿಗಿಡ್ಕೊಂಡ್ರಂತೆ" ಈ ರಕ್ತದೆಲೆ ಚಮ್ಮಾವ್ಗೆ ಆಗ್ಬೇಕು ಮೂಗೂಂಡ್ಗ ಅರಗು ತಯಾರ್‌ಗ್‌ಬೇಕು ಅದ್ರೆಲೆ ಬೂಡ್ಸ್ ತಯಾರಾಗ್‌ಬೇಕು. ಅಂದ್ರಂತೆ ಅದ್ರಂತೆನೆ ಆ ಅರಗು ಪಾಸಿಲೇನೆ ಬೂಡ್ಸ್ ತಯಾರ ಮಾಡುದ್ನಂತೆ ಅರಳಯ್ಯ ಮಾರನೆ ದಿನ ಹನ್ನೆರುಡ್‌ಗಂಟೆ ಹೊತ್ಗೆ ಬೂಡಸ್ನ ತಕೊಂಡೋಗಿ ಮಾದೇವ್ರನ ಕೈಲಿ ಕೊಟ್ನಂತೆ.

ರಣರಂಗುದ್ ಭೂಮಿಲ್ ನಿಂತ್ಕೊಂಡು ಕೂಗೇಳುದ್ರಂತೆ ಮಾದೇವ್ರು ಶ್ರವಣನದೂತ್ರಗೆ" ಎಯ್ ಬರೇಳ್ರೋ ನಿಮ್ ಶ್ರವ್ಣನ್ನ ಅಂತ. ದೂತ್ರು "ಸ್ವಾಮಿ ಶ್ರವಣಪ್ನೋರ ರನರಂಗುದ್ ಭೂಮಿಲ್ ನಿಂತ್ಕೊಂಡು ಬರುಕ್ಕೇಳ್ರೋ ನಿಮ್ ಶ್ರವಣುನ್ನ ಅಂತಾವ್ನೆ ಆ ಮಾದ್ಗ ಮುದಿ ನನ್ಮಗ "ಎಲಾ ಕೆಟ್ ನನ್ ಮಗನೆ ರಣರಂಗುದ್ ಭೂಮಿಲ್ ನಿಂತ್ಕೊಂಡು ನನ್ನ ಯಿದ್ಯಕ್ಕೂಗ್ತಾಯಿದ್ದಾನೆ." ಅಂತ ಕೆಂಡುದ್ ಕ್ವಾಪ ಮಾಡ್ಕೊಂಡು ಕೇಳ್ದ "ಇಲ್ಲ ಸ್ವಾಮಿ ಬೂಡ್ಸಾಕ್ಕೊಳುಕ್ಕೆ ಅಂತ ಕೂಗ್ತಾ ಅವ್ನೆ" ಅಂದ್ರು ದೂತ್ರು. ಆಗ ಬಂದೋನೆ ಶ್ರವಣ" ಎಯ್ ಮುಧ್ಯ, ಮಾದ್ಗ ನೀನು ನನ್ನ ರಣರಂಗುದ್ ಭೂಮಿಲ್ ನಿಂತ್ಕೊಡ್ ಕೂಗ್ತಾಯಿದ್ದಿಯೇನೋ, ನನ್ ಮ್ಯಾಲೆ ಯುದ್ಧ ಮಾಡ್ತಿಯೇನೋ" ಅಂದ "ಇಲ್ಲ ಬನ್ನಿ ಶ್ರವಣಪ್ನೋರೆ ನಾನು ಮುದ್ಕ ನಿಮ್ ಮ್ಯಾಲುದ್ದಮಾಡೋದುಂಟೆ. ಬೂಡ್ನಾಕ್ತೀನಿ ಬನ್ನಿ ಕಾಲ್ಗೆ" ಅಂದ. ಮಾದೇವ್ರು "ಎಯ್ ದೂತ ಎತ್ಕೊಬಾರೋ ಸಿಂಹಾಸ್ನಾನ ಅಲ್ಗೇನೆ ಅಂತೇಳಿ ಬಂದ್ ಕುರ್ಚಿ ತರ್ಸಾಕ್ಕೊಂಡ ಕೂತ್ಕೊಂಡುದ್ದೆ ರಣರಂಗುದ್ ಭೂಮಿವೊಳ್ಗೆ, ಬೂಡುತ್ನ ಮಾದೇವ್ನೆ ತೊಡಿಸ್ದ ಕಾಲ್ಗೆ.

ಈ ಶ್ರವಣ ಬೂಡ್ಸಾಕ್ಕೊಂಡು ಎದ್ದೊಗ್ಬುಟ್ನಂತೆ ಆರೆಜ್ಜೆ ಹೋದ್ನಂತೆ ಏಳನೆ ಹೆಜ್ಜೆಗೆ ಭೂಮೀನೆ ಭಾಗ ಆಗ್ಬುಟ್ಟು ಜಲುದ್ ಕಣ್ಗೆ ಹೊಂಟೋದ್ನಂತೆ ಜಲುದ್ ಕಣ್ಣೇಲಿ ಬೂಡ್ಸ್ ಸಹಿತ ತಗ್ಲಾಕ್ಕೊಬುಟ್ಟ ಜಲುದ್ ಕಣ್ಣೊಲೆ ಬೂಡಸ್ನ ಬುಟ್ಬುಟ್ಟು ಕಾಲೀಚುಗ್ ತಕೊಂಡು ಮಾದೇವ್ರನ್ಗೆ ಹೊಡುದ್ರೆ ಮುಗುಲ್ಗೋಗ್ ಬರೋನಂತೆ ಶ್ರವಣ ಹೊಡ್ದೇಟ್ಗೆ ಮ್ಯಾಲೇಳ್‌ಲೋಕ, ಕೀಳೇಳುಲೋಕ ಬಡಬಡ ಅಂತ ಬಡ್ಗುಟ್ಟೋವಂತೆ ಪರಾಕ್ರಮಿ. ಶಿವ ಏನ್ ಸಾಮಾನ್ಯವಾದೋನೆ/ ಇಬ್ರು ಹೊಡ್ದಾಟಕ್ ನಿಂತ್ರಂತೆ ಹೊಡ್ದಾಡ್ತ ಹೊಡ್ದಾಡ್ತ ಈ ಶ್ರವಣ ಅಗ್ನಿ (ಆಗ್ನೇಯ) ಮೂಲೆ ಕಡೆ ತಲೆ ಹಾಕ್ಕೊಂಡು ಕೆಳುಕ್ ಬಿದ್ದೋದ್ನಂತೆ.

ಈ ಕಾರಯ್ಯ ಬಿಲ್ಲಯ್ಯ ಸಿಸು ಮಕ್ಳು ಮಾದುಪ್ಪನ್ ಜೋಳ್ಗೇಲೆ ಕೂತಿದ್ವಲ" ಲೋ ಬಿಲ್ಲಯ್ಯ ಇವಾಗ ನಮ್ ತಂದೇನ ಸಾಯಿಸ್ ಬುಡ್ತಾನೆ ಕಾಣೋ ಈ ಶ್ರವಣ" ಅಂದ್ನಂತೆ ಕಾರಯ್ಯ ಲೇ ಕಾರಯ್ಯ ಎದ್ದೋಗ್ ತುಳಿಲ ಅವುನ್ನ, ಇನ್ನೇನು ಎದ್ ಬುಡ್ತಾನೆ" ಅಂದ್ನಂತೆ ಬಿಲ್ಲಯ್ಯ ಅವಾಗೇನ್ ಮಾಡುದ್ನಂತೆ ಬಿಲ್ಲಯ್ಯ ಎಡ್‌ಗಾಲ್ ಎದ್ಬೆಟ್ನ ಮಡಿಚ್ಕೊಂಡು ಕಾಲ ಎದೆ ಮ್ಯಾಲೆ ಮಡುಗುದ್ನಂತೆ ಶ್ರವ್ಣನ್ಗೆ ಶ್ರವ್ಣನೆದೆ ಮ್ಯಾಲೆ ಈ ಬಿಲ್ಲಯ್ಯನ್ ಕಾಲು ಏಳ್ ಭೂಮಿ ತೂಕ ಕಾಣೋದಂತೆ ಆಗ ಶ್ರವಣ ಹೇಳುದ್ನಂತೆ "ನೋಡಿ ನಿಮ್ಗೆ ಶಾಪ ಕೊಟ್ ಬುಡ್ತೀನಿ ನೀವು ಇವತ್ತು ಸಂಪಾದ್ನೆ ಮಾಡಿದ್ದು ನಾಳೆಗಿಲ್ಲ, ನಾಳೆ ಸಂಪಾದ್ನೆ ಮಾಡುದ್ದು ನಾಡಿಧ್ಗಿಲ್ಲ, ಸಂದೆಗದ(ಸಂಜೆಗೆ ಹದ) ಮಾಡ್ಕೊಂಡ್ರೆ ನಾಳೆಗಿಲ್ಲುಕ್ಕ ಇಲ್ಲ, ಅಂಗಾಗ್ಬುಡ್ತದೆ. ನನ್ನೆದೆ ಮ್ಯಾಲಿಂದ ಕಾಲೆತ್ತು ನೀವ್ ಚೆನ್ನಾನೆ ತಿಂದು ಚೆನ್ನಾನೆ ಏಲ್ಬೇಕು ಅಷ್ಟು ದ್ರವ್ಯ, ಸಂಪತ್ತು ಕೋಡ್ತಿನಿ ನಾನು" ಅಂದ ಆ ಕಡೆ ದತ್ತು ತಂದೆ ಅವುನ್ ಮಾತ್ ಮೀರಿ ನಾನು ಕಾಲೆತ್‌ಬಾರ್ದು ಅಂತ ಇನ್ನ ಬಲವಾಗಿ ಅದ್ಮುದ್ನಂತೆ ಅವಾಗ ಶ್ರವಣ ಕೊಟ್ ಸಾಪ ನಮ್ಗೆ, ಇನ್ನೂ ವರ್ಗೇ ಪರಿಹಾರ ಆಗ್ಲಿಲ್ಲ. ನಾವು ಬಡುವ್ರಾಗೆ ಇದ್ದೀವಿ. ಅಷ್ಟೊತ್ಗೆ ದೇವಮಾನುವ್ರುನೆಲ್ಲ ನಾರದ ಕರ್ಕೊ ಬಂದ್ನಂತೆ ಸೆರೆ ಬುಡ್ಸಿ ಅವ್ರೆಲ್ಲ ತಲಾಗೊಂದೊಂದ್ ಕಲ್ಲಾಕಿ ಕಲ್‌ಮಲ್ಲಯ್ಯನ್ ಮಾಡ್‌ಬುಟ್ರಂತೆ.

ಕಲ್ಮಲ್ಲಯ್ಯಾನ್ ಮಾಡ್ಬುಟ್ಟು ಈ ಏಳ್ ಭೂಮಿ ಕೆಳಗಡೆ ಬಿದ್ದಿರು ಅಂತ ಬುಟ್ರಂತೆ ಆ ಶ್ರವಣನ್ ಕೊಲೆ ಆಗಿರೋ ಜಾಗ್ದೇಲಿ ಏನ್ ಬೆಳೆದ್ರು ವಿಷಾನೆ ಅಂತೆ. ಈಗ್ಲೂನು ಅಲ್ಲಿ ಬಂಕಾಪುರ ಅಂತ ಊರು ಬೆಳುದ್ ಪದಾರ್ಥನ ಮಾಡ್ವಂಗೆ ಇಲ್ಲಂತೆ. ಬ್ಯಾರೆ ಕಡೆ ತಕೊಂಡೋಗಿ ಮಾರಾಟ ಮಾಡಿ ಇನ್ನ ಬ್ಯಾರೆ ತಂದು ಅಲ್ಲಿಯೋರು ಊಟ ಮಾಡೋದು. ಬೇರೆ ಕಡೆ ಮಾಡುದ್ರೆ ಅವುರ್ಗೆ ವಿಷಯಿಲ್ವಂತೆ ಬೆಳೆದೋರೆ ತಿಂದ್ರೆ ಮಾತ್ರ ವಿಷವಂತೆ.[೧೩]

ಈ ಐತಿಹ್ಯಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ಘಟನೆ ವಿಜಯನಗರ ಸಾಮ್ರಾಜ್ಯ ಪತನದ ನಂತರದ ಕಾಲಘಟ್ಟದಲ್ಲಿ ನಡೆದ ಬಹುದೊಡ್ಡ ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ಸಂಘರ್ಷ ಇದಾಗಿದೆ ಎಂದೆನಿಸುತ್ತದೆ. ಶ್ರವಣ ದೊರೆ ಬಂಕಾಪುರವನ್ನು ಆಳ್ವಿಕೆ ಮಾಡುತ್ತಿದ್ದ ಬಗ್ಗೆ ಈ ಬುಡಕಟ್ಟುಗಳ ಐತಿಹ್ಯಗಳಲ್ಲಿ ಪ್ರಸ್ತಾಪಿಸುತ್ತದೆ. ಈ ಐತಿಹ್ಯ ಹೇಳುವಂತೆ ಶ್ರವಣ ಅನ್ನೋನು ಚಾರಿತ್ರಿಕ ವ್ಯಕ್ತಿಯನ್ನೋ, ರಾಜನನ್ನೋ ಅಥವಾ ಆ ಕಾಲದಲ್ಲಿ ಆ ಭಾಗದಲ್ಲಿ ಪ್ರಚಲಿತದಲ್ಲಿದ್ದ ಒಂದು ಧರ್ಮವನ್ನು ಪ್ರತಿನಿಧಿಸುವಂತಿದೆ. ಇಲ್ಲಿ ಹೇಳುವಂತೆ ಒಂದು ಕಾಲಘಟ್ಟದಲ್ಲಿ ನಡೆದಿರಬಹುದಾದ ಘಟನೆ ಮತ್ತು ವ್ಯಕ್ತಿಗೆ ಸಂಬಂಧಿಸಿದ ಚರಿತ್ರೆಯು ಐತಿಹ್ಯ ಮತ್ತು ಪುರಾಣಗಳಲ್ಲಿ ಮಿಶ್ರಣವಾಗಿರುವುದು ಕಂಡು ಬರುತ್ತದೆ. ಶ್ರವಣ ಎನ್ನುವನು ಜೈನ ಧರ್ಮವನ್ನೋ, ಜೈನ ರಾಜನನ್ನೋ ಅಥವಾ ಗುರುವನ್ನೋ ಪ್ರಸ್ತಾಪಿಸುತ್ತದೆ.

ಮಹದೇಶ್ವರನ ಕಾಲಘಟ್ಟಕ್ಕಾಗಲೇ ಜೈನಮತಕ್ಕೆ ಕರ್ನಾಟಕದಲ್ಲಿ ರಾಜಮನೆತನಗಳು ಸಾಕಷ್ಟು ಪ್ರೋತ್ಸಾಹವನ್ನು ಕೊಟ್ಟಿದ್ದವು. ತಲಕಾಡಿನ ಗಂಗರಂತೂ ಕರ್ನಾಟಕದಲ್ಲಿ ಜೈನಧರ್ಮದ ಆಧಾರಸ್ತಂಭಗಳಾಗಿ ನಿಂತಿದ್ದರು. ಇದರ ಜೊತೆಗೆ ರಾಷ್ಟ್ರಕೂಟರು, ಚಾಳುಕ್ಯ ಯುಗದಲ್ಲಿ ಜೈನಧರ್ಮ ಮತ್ತಷ್ಟು ಪ್ರಬಲಗೊಂಡಿತ್ತು. ಕರ್ನಾಟಕದಲ್ಲಿ ಜೈನಧರ್ಮ ಒಂದು ಕಾಲಘಟ್ಟದಲ್ಲಿ ಉಚ್ಛ್ರಾಯ ಸ್ಥಿತಿ ತಲುಪಿದ್ದ. ಶೈವ ಮತ್ತು ವೈಷ್ಣವ ಪಂಥಗಳು ಪ್ರಬಲವಾದಂತೆ ಜೈನಧರ್ಮ ಕ್ಷೀಣಿಸುತ್ತ ಹೋಯಿತು. ವಿಪರ್ಯಾಸವೆಂದರೆ ಜೈನಧರ್ಮದ ಆರಂಭದ ಮತ್ತು ಉತ್ತುಂಗ ಸ್ಥಿತಿಯ ಬಗ್ಗೆ ಸಿಗುವಷ್ಟು ದಾಖಲೆಗಳು ಅದರ ಅವನತಿಯ ಬಗೆ ಸಿಗದಿರುವುದನ್ನು ಕಾಣಬಹುದು. ಇದಕ್ಕೆ ಪ್ರಮುಖವಾದ ಕಾರಣವೆಂದರೆ ಸಮಾಜದ ಶ್ರೇಣೀಕರಣದಲ್ಲಿನ ಮೇಲ್ಭಾಗದಲ್ಲಿ ಗುರುತಿಸಿಕೊಳ್ಳುವ ಅಕ್ಷರಸ್ಥ ಬ್ರಾಹ್ಮಣವರ್ಗ. ತಮ್ಮ ಅಸ್ತಿತ್ವ ಹೆಚ್ಚಿಸಿಕೊಂಡು ಪ್ರಭುತ್ವದಲ್ಲಿ ಸ್ಥಾನ ಗಿಟ್ಟಿಸಿಕೊಳ್ಳಲು ಜೈನ ಧರ್ಮಕ್ಕೆ ಸಂಬಂಧಿಸಿದ ಶಾಸನಗಳು ಹಸ್ತಪ್ರತಿಗಳನ್ನು ಬರೆದುಕೊಟ್ಟರು. ಆದರೆ ಇವರಿಗೆ ನಿರೀಕ್ಷಿಸಿದಷ್ಟು ಸುಖಭೋಗಗಳು ಸಿಗದಿದ್ದ ಕಾರಣಕ್ಕೆ ತಮ್ಮ ಪಲಾಯನ ತತ್ವವನ್ನು ಅನುಸರಿಸಿ ಇನ್ನೊಂದು ಧರ್ಮವನ್ನು, ಪ್ರಭುತ್ವವನ್ನು ಓಲೈಸಲು ಮುಂದಾದರು. ಆದ್ದರಿಂದಲೇ ಜೈನಧರ್ಮದ ಅವನತಿಗೆ ಕಾರಣವಾದ ಅಂಶಗಳ ಬಗ್ಗೆ ಹೇಳಿಕೊಳ್ಳುವಷ್ಟು ದಾಖಲೆಗಳು ಸಿಗದಿರುವುದನ್ನು ಕಾಣಬಹುದು.

ರಾಮಾನುಜಾಚಾರ್ಯರ ಕಾಲಘಟ್ಟದಲ್ಲಿ ಮೈಸೂರು ಪ್ರಾಂತ್ಯದಲ್ಲಿ(ಮಹಿಷನ ನಾಡು) ಪ್ರಭುತ್ವದ ಮನ್ನಣೆಯನ್ನು ಕಳೆದುಕೊಂಡ ಜೈನಧರ್ಮ ಮಾದಪ್ಪನ ಕಾಲಘಟ್ಟದಲ್ಲಿ ಜನಸಾಮಾನ್ಯರಿಂದಲೂ ದೂರ ಸರಿಯಿತು.

ಕರ್ನಾಟಕದಲ್ಲಿ ಜೈನ ಧರ್ಮ ಪ್ರಬಲಗೊಳ್ಳುವಲ್ಲಿ ನಾಡಿನ ಸ್ತ್ರಿಯರು ಆಳರಸರು, ಸಾಮಂತ ದೊರೆಗಳು, ಅಧಿಕಾರಿಗಳು, ಸಂಘ ಸಂಸ್ಥೆಗಳು ಪ್ರಮುಖ ಪಾತ್ರವಹಿಸಿದ್ದವು. ಚಾಳುಕ್ಯ, ರಾಷ್ಟ್ರಕೂಟ, ಗಂಗ, ಹೊಯ್ಸಳರು ಹಾಗೆಯೇ ಸಾಮಂತ ವರ್ಗಕ್ಕೆ ಸೇರಿದ ರಟ್ಟರು ಬಂದು ಜೈನ ಧರ್ಮಕ್ಕೆ ಪ್ರೋತ್ಸಾಹಕೊಟ್ಟು ರಕ್ಷಿಸಿ ಪೋಷಿಸಿದ್ದರು.

ಆದರೆ ಹದಿಮೂರು ಮತ್ತು ಹದಿನಾಲ್ಕನೆಯ ಶತಮಾನದ ಕಾಲಘಟ್ಟದ ಕರ್ನಾಟಕದಲ್ಲಿ ಧರ್ಮ ಪ್ರಸರಣ ಎಂಬುದು ಬರದಿಂದ ಸಾಗಿತ್ತು. ಈ ಸಂದರ್ಭದಲ್ಲಿ ಪಂಥ ಪ್ರಸರಣ ಎಂಬುದು ದಿನೇ ದಿನೇ ಪೈಪೋಟಿಯ ಹಂತ ತಲುಪಿ ಬಸವಣ್ಣ ಮತ್ತು ಅವನ ಅನುಯಾಯಿಗಳು ತಮ್ಮ ವೀರಶೈವ ಧರ್ಮವನ್ನು ಪ್ರತಿಪಾದಿಸುವ ನಿಟ್ಟಿನಿಂದ ದಕ್ಷಿಣಕ್ಕೆ ಹೆಚ್ಚಾಗಿ ಬರತೊಡಗಿದ್ದರು. ಇದರ ಭಾಗವಾಗಿಯೇ ಮಾದಪ್ಪ ದಕ್ಷಿಣಕ್ಕೆ ಬಂದಿದ್ದಾನೆ ಎಂಬುವುದನ್ನು ಗ್ರಹಿಸಬಹುದು.

ಆದರೆ ಅದಾಗಲೇ ಶ್ರವಣ ಎನ್ನುವ ಜೈನ ಸನ್ಯಾಸಿಯ ನೇತೃತ್ವದಲ್ಲಿ ಜೈನಧರ್ಮ ಮೈಸೂರು ಪ್ರಾಂತ್ಯದಲ್ಲಿ ಹೆಚ್ಚು ಪ್ರವರ್ದಮಾನಕ್ಕೆ ಬಂದಿತ್ತು. ಶ್ರವಣ ದೊರೆ ಜೈನನಾದುದರಿಂದ

ಆಸ್ತಿಕ ದೇವತೆಗಳನ್ನು ಮತ್ತು ಧರ್ಮವನ್ನು ವಿರೋಧಿಸಿದನು. ಇದರಿಂದ ಆ ಪ್ರದೇಶ ಮತ್ತು ಆ ಸಂದರ್ಭದಲ್ಲಿ ಜೈನಧರ್ಮದ ಪ್ರಾಮುಖ್ಯತೆ ಹೆಚ್ಚಾಗಿ ಆಸ್ತಿಕ ದೇವತೆಗಳು ಮತ್ತು ಧರ್ಮಗಳು ಗೌಣಗೊಳ್ಳುತ್ತಿದ್ದವು. ಶ್ರವಣನ ಆಳ್ವಿಕೆಯ ನಂತರ ಜೈನಧರ್ಮ ಮೈಸೂರು ಪ್ರಾಂತ್ಯದಲ್ಲಿ ನಶಿಸುವ ಹಂತಕ್ಕೆ ತಲುಪಿತ್ತು. ಇದೇ ಸಂದರ್ಭದಲ್ಲಿ ಶೈವ ಮತ್ತು ವೀರಶೈವ ಅನುಯಾಯಿಯಾದ ಮಾದಪ್ಪ ತನ್ನ ಪಂಥ ಪ್ರಚಾರಕ್ಕೆ ಮೈಸೂರು ಪ್ರಾಂತ್ಯಕ್ಕೆ (ದಕ್ಷಿಣಕ್ಕೆ) ಬಂದಿದ್ದಾನೆ. ಇದನ್ನೇ ಇರುಳಿಗರಲ್ಲಿನ ಐತಿಹ್ಯವು "ಶ್ರವಣ ಅನ್ನೋನು ದೇವ ಮಾನ್ಯುರೆಲ್ಲ ಸೆರೆ ಅಕ್ಕೊಬುಟ್ಟಿದ್ನಂತೆ" ಈ ದೇವಾನುದೇವತೆಗಳನ್ನು ಸೆರೆಯಿಂದ ಬಿಡಿಸಲು ಬರುತ್ತಾನೆ ಎಂದು ಹೇಳುತ್ತಾರೆ.

"ಉತ್ತರ ದೇಶದಿಂದ ಬಂದ ಮಾದಿಗರ ಹುಡುಗ ಶ್ರವಣ ದೊರೆಗೆ ಚಪ್ಪಲಿ ಹಾಕಿಕೊಡುವ ನೆಪದಲ್ಲಿ ಕೊಲೆ ಮಾಡುತ್ತಾನೆ. ಇದನ್ನೇ ದೇವಚಂದ್ರ ವಿರಚಿತ ರಾಜಾವಳಿ ಸಾರದಲ್ಲಿ ಹೀಗೆ ಹೇಳಿದ್ದಾರೆ "ಇತ್ತ ಹದಿನಾಡಾ ಮುಂತಾದ ಆರು ನಾಡುಗಳು ಸೋಮವಂಶದ ಸಮ್ಯಗ್ದೃಷ್ಟ ಅಭಿಚಂದ್ರನಾಳುತ್ತಿರೆ ಕುಂತೂರು ಮಠದೊಳು ನಂಜಯ್ಯನೆಂಬ ಜೋಳಿಗೆ ಒಡೆಯರಿರಲಲ್ಲಿಗೆ ಬಡಗಸೀಮೆಯಿಂದೋರ್ವ ಮಾದಿಗರ ಹುಡುಗಂ ಪೂರ್ವಜನ್ಮ ಸಂಸ್ಕಾರ .ವ್ಯಂತರದೇವತಾ ಒಲುಮೆಯಿಂ ದೇಶಾಂಪರಂ ಬಂದಾ ಮಠಮಂ ಸೇರಿ ದನಮಂ ಕಾಯ್ದುಕೊಂಡಿರ್ದು ಹೂವಂ ತರಲ್‌ಪೋಗಿ ಹೇರಳೆ ಚಂಡಂ ಮೊದಲಾದಾಟ ದೊಳಿರ್ದಾ ಕರಡಗಡಯೊಳೆ ಸಿಕ್ಕಿದ ಪ್ರಾಣಿ ಜೋಳಿಗೆ ನಂಜ ಒಡೆಯಂಗೆ ದೊರೆತನ ಮಾಡಿಕೊಡುವೆನೆಂದು ನಂಬಿಸಿಯಾ ನಾಡರಸಪ್ಪ ದೇವಚಂದ್ರನೊಳು ಕಪಟ ಸ್ನೇಹದಿಂದಾಪ್ತನಾಗಿಯು ಮಂತ್ರಿ ಪ್ರಧಾನಗಳೆಲ್ಲರಂ ವಶಂ ಮಾಡಿಕೊಂಡಿರ್ದಾ ಮಲೆಯನಾಡ ಬೆಟ್ಟದ(ಬೊಳರೆ) ಯೊಳಷ್ಟಾಹ್ನಿಕ ದಷ್ಟೊ ಪವಾಸದಿಂ ಯೋಗಕ್ಕೆನಿಂದ ಲಾಕ್ಷವ ಪಾದುಕಮಂ ತೊಡಿಸಿ ಕಾಸಿದರೆಯ ಮೇಲೆ ನಿಲಿಸಿ ಅಲ್ಲೆ ಪರಿಹರಿಸಿಬಿಟ್ಟ ನಂಜರಾಜ ಒಡೆಯಂಗೆ ಪಟ್ಟಂಗಟ್ಟಿ ತಾನು ಗುಡ್ಡನಾಗಿರ್ದು ಪರ್ವತದ ಬೋಳರೆಯೊಳು ಯೋಗದೊಳಿರ್ದು ಶ್ರವಣಮುನಿಯಂ ಪಾಪಕ್ಕಳುಕದೆ ಕೊಂದಾ.[೧೪]

ಅಂದರೆ ಉತ್ತರ ದೇಶದಿಂದ ಬಂದ ಮಾದಿಗರ ಹುಡುಗ ಮಾದಯ್ಯ ಶ್ರವಣ ದೊರೆಗೆ ಚಪ್ಪಲಿ ಹಾಕುವ ನೆಪದಲ್ಲಿ ಕೊಲೆ ಮಾಡುತ್ತಾನೆ. ಇದು ವ್ಯಕ್ತಿನಾಶಕ್ಕಿಂತ ಧರ್ಮನಾಶದ ಪ್ರಕ್ರಿಯೆ ಆಗಿತ್ತು. ಆದ್ದರಿಂದ ಈ ಘಟನೆ ತಕ್ಷಣಕ್ಕೆ ಅಂತ್ಯಗೊಂಡಂತೆ ಕಂಡುಬರದೆ ನಿಧಾನಗತಿಯಲ್ಲಿ ಮುಂದುವರೆದಿದೆ ಎಂಬುದು ಗೊತ್ತಾಗುತ್ತದೆ. ಮಾದಿಗರ ಮಾದಯ್ಯ ತನ್ನ ಪಂಥ ಪ್ರಚಾರ ಮಾಡಿ ಜೈನಧರ್ಮವನ್ನು ಮೈಸೂರು ಪ್ರಾಂತ್ಯದಲ್ಲಿ ನಶಿಸುವಂತೆ ಮಾಡಲು ಕಾಡುವಾಸಿಗಳಾಗಿದ್ದ ಇರುಳಿಗ ಮತ್ತು ಸೋಲಿಗರನ್ನು ಬಳಸಿಕೊಂಡಿದ್ದಾನೆ. ಆದರೆ ಇದು ಯಾವ ಲಿಖಿತ ದಾಖಲೆಗಳಲ್ಲೂ ದಾಖಲಾಗದಿರುವುದನ್ನು ಕಾಣಬಹುದು.

ಇಂದಿಗೂ ಜೈನ ಧರ್ಮ ಕುರಿತ ಬರಹ ಮತ್ತು ಭಾಷಣಗಳೆಲ್ಲವೂ ಜೈನ ಧರ್ಮದ ಕತೆ, ಕಾದಂಬರಿ, ನಾಟಕ ಮತ್ತು ಜೈನಧರ್ಮದ ವೈಭವ ಪ್ರೇರಿತ ಅಂಶಗಳ ಸುತ್ತ ಗಿರಕಿ

ಹೊಡೆಯುತ್ತಲೇ ಇವೆ. ಪ್ರಾರಂಭದಲ್ಲಿ ಜೈನಧರ್ಮ ವೈದಿಕರ ಕಠಿಣ ಮತ್ತು ಭಯಭೀತ ಜೀವನ ಕ್ರಮಗಳಿಂದ ಬೇಸತ್ತ ಜನಸಾಮಾನ್ಯರನ್ನು ಸರಳ ಮತ್ತು ಸ್ವಾತಂತ್ರ್ಯ ಬದುಕಿನ ಕಡೆ ಕೊಂಡೊಯ್ಯಲು ಕೆಲವು ಮಾರ್ಗೋಪಾಯದ ಜೀವನ ವಿಧಾನವನ್ನು ತೋರಿಸಿಕೊಟ್ಟು ಹೆಚ್ಚು ಪ್ರಚಾರ ಹಾಗೂ ಜನ ಮನ್ನಣೆ ಪಡೆದುಕೊಂಡಿತು. ಆದರೆ ಕಾಲಾನಂತರದಲ್ಲಿ ಜೈನಧರ್ಮ ಜನಸಾಮಾನ್ಯರನ್ನು ಬಿಟ್ಟು ಪ್ರಭುತ್ವ ಮತ್ತು ಪ್ರಭುತ್ವ ಕೇಂದ್ರಿತ ವರ್ಗಕ್ಕೆ ಸೀಮಿತಗೊಂಡಿತ್ತು. ಇದಕ್ಕೆ ಪ್ರಮುಖ ಕಾರಣ, ಜೈನಧರ್ಮ ಯಾರ ವಿರುದ್ಧ ಮತ್ತು ಯಾವ ವ್ಯವಸ್ಥೆಯ ವಿರುದ್ಧ ಹುಟ್ಟಿಕೊಂಡಿತ್ತೋ ಅದೇ ವರ್ಗದ ಸಾರಥ್ಯದಲ್ಲಿ ಮುಂದುವರಿಯಲಾರಂಭಿಸಿತು. ಇದರಿಂದ ಜೈನಧರ್ಮ ವೈದಿಕ ಧರ್ಮದ ಭಾಗವೇ ಆಗಿ ಹೋಯಿತು.

ಡಾ.ಎನ್.ಚಿನ್ನಸ್ವಾಮಿ ಸೋಸಲೆ ಅವರು ಹೀಗೆ ಹೇಳುತ್ತಾರೆ "ಜೈನಧರ್ಮ ಒಂದು ವಿಧದಲ್ಲಿ ವೈದಿಕ ಸಂಪ್ರದಾಯದ ಭಾಗವೇ ಆಗಿದೆ. ವೈದಿಕರು ಯಜ್ಞ, ಯುಗಾದಿ ಪೂಜೆ ಪುನಸ್ಕಾರ ಮತ್ತು ವ್ರತಾಚರಣೆಯ ಮೂಲಕ ಜನಸಾಮಾನ್ಯರನ್ನು ನಿರಂತರವಾಗಿ ಶೋಷಿಸುವ ಹಾಗೆ ಜೈನಧರ್ಮ ವೈದಿಕರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಧರ್ಮದ ಹೆಸರಿನಲ್ಲಿ ಜೀವ ತೆಗೆಯುವ ಹಂತ ತಲುಪಿದೆ. ಒಂದೇ ಆಶಯದೊಂದಿಗೆ ಹುಟ್ಟಿಕೊಂಡ ಬೌದ್ಧ ಮತ್ತು ಜೈನ ಧರ್ಮಗಳಲ್ಲಿ ಬೌದ್ಧಧರ್ಮ ವೈದಿಕರ ಸಂಪ್ರದಾಯವನ್ನು ವಿರೋಧಿಸುತ್ತಲೇ ಕ್ಷೀಣತೆ ಕಂಡರೆ ಜೈನಧರ್ಮ ವೈದಿಕರ ಸಂಪ್ರದಾಯವನ್ನು ಒಪ್ಪಿಕೊಂಡು ಹೆಚ್ಚು ಪ್ರಚಾರ ಪಡೆದುಕೊಂಡು ಭಾರತದಲ್ಲಿ ಉಳಿದುಕೊಂಡಿತು.[೧೫]"

ಒಟ್ಟಾರೆ ಈ ಲೇಖನದಲ್ಲಿ ತಿಳಿದುಕೊಳ್ಳುವುದೇನೆಂದರೆ ಜೈನ ಧರ್ಮ ಮತ್ತು ಬೌದ್ಧ ಧರ್ಮಗಳು ಸಮಾಜದ ಕೆಳಸ್ಥರದ ವರ್ಗಗಳಲ್ಲಿ ಬೇರೂರಿದ್ದವು. ಆದರೆ ಕಾಲಾನಂತರದಲ್ಲಿ ಶೈವ, ವೈಷ್ಣವ ಪಂಥಗಳ ಪ್ರಬಲ ದಾಳಿಯಿಂದ ಪರಿವರ್ತನೆಗೊಂಡು ಶೈವ ಮತ್ತು ವೈಷ್ಣವ ಪಂಥದ ಅನುಯಾಯಿಗಳಾಗಿರುವುದು ಕಂಡುಬರುತ್ತದೆ.

ಜೈನಧರ್ಮ ಮತ್ತು ಬೌದ್ಧಧರ್ಮಗಳು ಈ ದೇಶದ ತಳಸಮುದಾಯಗಳ ಆಶಯಗಳಂತೆ ಹುಟ್ಟಿಕೊಂಡಿದ್ದವು. ಆಯುರ್ವೇದ ಉಪನಿಷತ್ತು ಮತ್ತು ಧರ್ಮದ ನೆಪದಲ್ಲಿ ಜನಸಾಮಾನ್ಯರಲ್ಲಿ ಪಾಪ, ಪುಣ್ಯ, ಕರ್ಮ ಮೋಕ್ಷ, ಸ್ವರ್ಗ ನರಕ ಮತ್ತು ಪುನರ್ಜನ್ಮದ ಭಯವುನ್ನುಂಟುಮಾಡಿ ತಮ್ಮ ಕಪಿಮುಷ್ಠಿಯಲ್ಲಿಡಿದುಕೊಂಡಿದ್ದರು. ಇಂತಹ ಭಯಭೀತ ಜೀವನ ವಿಧಾನದಿಂದ ಮುಕ್ತಿ ನೀಡುವ ಉದ್ದೇಶದೊಂದಿಗೆ ಈ ಧರ್ಮಗಳು ಜನಿಸಿದವು. ಆದರೆ ಇಂದು ಜೈನಧರ್ಮ ತನ್ನ ಮೂಲ ಆಶಯವನ್ನು ಬಿಟ್ಟು ವೈದಿಕ ಸಂಪ್ರದಾಯಕ್ಕಿಂತಲೂ ಮಾರಕವಾಗಿ ಇನ್ನು ಬದುಕಿ ಬಾಳಬೇಕಾದ ಯುವ ಜನತೆಯನ್ನು ಸಲ್ಲೇಖನ ವ್ರತದಂಥ ಆಚರಣೆಯ ಮೂಲಕ ಸಾವಿಗೆ ದೂಡುತ್ತಿದೆ. ಜೊತೆಗೆ ವೈದಿಕ ಧರ್ಮದಂತೆ ಪಾಪ, ಪುಣ್ಯ, ಮೋಕ್ಷ, ಸ್ವರ್ಗ, ನರಕ ಎಂಬ ಮೂಢನಂಬಿಕೆಗಳನ್ನು ಪ್ರಚಾರ ಮಾಡುತ್ತಿದೆ.

ಐತಿಹ್ಯ ೨

ಒಮ್ಮೆ ಬಿಲ್ಲಯ್ಯನ ವಂಶದ(ಇರುಳಗ)ವನೊಬ್ಬ ಕಾರಚ್ಚಪ್ಪ'ಯನ್ನು (ಕತ್ತಾಳೆಬಾರು ಹಗ್ಗ ಮಾಡಲು ಬಳಸುವ ಗಿಡ) ಮಣ್ಣಿನ ದೊಡ್ಡ ಹಳಗೆಯೊಂದರಲ್ಲಿ ಹಾಕಿ ಬೇಯಿಸುತ್ತಿರುತ್ತಾನೆ. ಆ ಸಮಯಕ್ಕೆ ಸರಿಯಾಗಿ ಕಾರಯ್ಯನ ವಂಶದ (ಸೋಲಿಗ)ವನೊಬ್ಬ ಅಲ್ಲಿಗೆ ಬರುತ್ತಾನೆ. ಇಬ್ಬರು ಮಾತನಾಡುತ್ತಿರುವಾಗ ಬಂದವನಿಗೆ ಬೇಯುತ್ತಿರುವ ಕಾರಚ್ಚು ಪಟ್ಟ ಮಾಂಸದ ವಾಸನೆಯನ್ನು ಬೀರುತ್ತದೆ. ಬರಿ ಬಾಯಿಮಾತಿನಲ್ಲಿ ಕಾಲ ಕಳೆಯುತ್ತಿದ್ದಾನೆ. ನನ್ನನ್ನು ಊಟಕ್ಕೆ ಕರೆಯುತ್ತಿಲ್ಲವಲ್ಲ ಎಂದು ತುಂಬಾ ಸಿಟ್ಟುಗೊಂಡು ಅದಕ್ಕೆ ಹೊರಗೆ ತೋಡಿಕೊಳ್ಳಲಾಗದೆ" ಬರ್‍ಲ್ಲಾ ಅಣ್ಣ ಅಷ್ಟುದೂರ ಓಡಾಡಿಕೊಂಡು ಬರ್‍ವಾ" ಅಂತಾನೆ. ಅದಕ್ಕೆ ಸರಿ ಎಂದು ಬಿಲ್ಲಯ್ಯನ ವಂಶದವನು ಹೊರಟು ಮಾತಾಡ್ತಾ ಮಾತಾಡ್ತ ದೂರ ಹೋಗ್ತಾರೆ. ಆಗ ಬಿಲ್ಲಯ್ಯನಿಗೆ ಕರಚ್ಚು ಪೇಟ್ಟ(ಕಿತ್ತಾಳೆ ಬಾರು) ಮಡಕೆಯಲ್ಲಿ ಹಾಕಿ ಬೇಯಿಸುತ್ತಿರುವುದು ಗ್ಯಾನ ಬಂದು 'ತಮ್ಮಯ್ಯ ಕರಚುಪಟ್ಟಿಯನ್ನು ಅರಬಿಯಲ್ಲಿ (ಮಡಕೆ)ಯಲ್ಲಿ ಹಾಕಿ ಬೇಸ್ತಾ ಇದ್ದೆ ಮಾತನ್ ಮಧ್ಯೆ ಮರ್ತೆ ಹೋಯ್ತು ವಂಚೂರು ಇರು ಬಂದೆ ಅಂತಾನೆ. ಆಗ ಕಾರಯ್ಯನಿಗೆ ತನ್ನ ತಪ್ಪು ಅರಿವಾಗಿ. ಅಣ್ಣ ನೀನು ಮಾಂಸ ಬೇಯ್ತಾ ಇದ್ರು ಬಾಯ್ ಮಾತ್ಗು ನನ್ನ ಕರಿಲಿಲ್ಲ ಅಂತ ನಿನ್ನ ಮುಗ್ಬೆ ಬಿಡವ ಅಂತ ಇಲ್ಲಿಗೆ ಕರ್‍ಕೊಂಡು ಬಂದೆ. ಅಂತನೆ ಇದನ್ನೆ ಮನಸಿನಲ್ಲಿಟ್ಟುಕೊಂಡ ಬಿಲ್ಲಯ್ಯ ಕೊಂಗಮಚ್ಚು ಹಿಡ್ಕೊಂಡು ಕಾರಯ್ಯನ್ನು ಕೊಂದ್ಬಿಡಬೇಕು ಅಂತ ಬತ್ತಿದ್ನಾಂತೆ ಇದನ್ನೆ ತಿಳ್ಕೊಂಡ ಶಿವ ಮಾಯ್ಯದ್ ವ್ಯಾಸ ತಾಳಿ ಕಾರಯ್ಯನಿಗೆ ಹೇಳ್ತಾನೆ "ನೋಡ್ಕಾಗ್ಗಿ ಕಾರಯ್ಯ ಬಿಲ್ಲಯ್ಯ ನಿನ್ನ ಮುಗ್ಸಿ ಬಿಡ್ಲು ರವ ರುದ್ರನಾಗಿ ಕೊಂಗಮಚ್ಚು ಇಡ್ಕೊಂಡು ಬಂತ್ಹಾವನ್ನೆ ಈ ಕೂಡ್ಲೆ ಕಳ್ಳೆಸ್ವಾಲೆ (ಕರಳೆ ಬೆಳೆದಿರುವ ಗುಂಪು) ಸೇರ್‍ಕೊಂಡು ಪ್ರಾಣವುಳ್ಕೋ ಅಂತನೆ. ಆಗ ಕಾರಯ್ಯ ಹಂಗೆ ಮಾಡ್ತಾನೆ. ಅದೇ ಶಿವ ಇತ್ತಾಗು ಬಂದು ಕಾರಯ್ಯ ತನ್ನ ವಂಶದವರನ್ನೂ ಕಡ್ಕುಂಡು ಕೊಂಗ ಮಚ್ಚು ಇಡ್ಕೊಂಡ ನಿನ್ನ ಕೊಂದಾಕೋಕೆ ಬತ್ತಾವ್ನ ನೀನು ಎತ್ತಿನ ಇರುಳಲ್ಲಿ ಸೇರ್‍ಕೋ ಅಂತಾನೆ ಸೇರ್‍ಕೋತಾನೆ. ಹಿಂಗೆ ಪರಶಿವನೇ ಬಂದೇ ತಾಯಿಯ ಮಕ್ಕಳಾದ ನಮ್ಮ ಬ್ಯಾರೆ ಬ್ಯಾರೆ ಮಾಡ್ಬುಟ್ಟ ಎನ್ನುತ್ತಾರೆ.[೧೬]

ಐತಿಹ್ಯ ೩

ಇದೇ ಕಾರಯ್ಯ ಬಿಲ್ಲಯ್ಯರಿಗೆ ಮಹದೇಶ್ವರರು ಲಿಂಗ ದೀಕ್ಷೆಯನ್ನು ಕೊಡುತ್ತಾರೆ. ಸಸ್ಯಹಾರಿಗಳಾಗಿದ್ದ ಇವರು ಮಾಂಸಹಾರಿಗಳಾದ ಬಗೆಯನ್ನು ಹೇಳುತ್ತ ನಮ್ಮದು ಹುಟ್ಟುಲಿಂಗ, ಲಿಂಗಾಯಿತರದು ಕಟ್ಟುಲಿಂಗ ಎಂದು ವಿವರಗಳನ್ನು ತೆರೆದಿಡುತ್ತಾರೆ. "ಹಿಂದೆ ನಮ್ಮೋನು ತೊರೆ ದಾಟ್ ಬೇಕಾಗಿತ್ತಂತೆ ಆವಾಗ ಸ್ವಾಮಿ ಇವರ ಸತ್ವ ಪರೀಕ್ಷೆ ಮಾಡ್ಬೇಕಂತ ಹೇಳಿ ನೀರ್‍ನ್ನೇಲ್ಲಾ ಸುಂಡಿಸ್‌ಬುಟ್ಟು ಹಾಗ ತೊರೆಲಿದ್ದ ಮೀನ್‌ಯಲ್ಲಾ ವಿಲ ವಿಲ ಅಂತ ಒದ್ದಾಡೋಕ್ಕಾ

ಸುರು ಮಾಡ್ಕೋ ಬುಟ್ಬೋ ಹಾಗ ನಮ್ಮೋದು ಅವನ್ನತ್ರ ಇದ್ದ ಲಿಂಗನು ಕಲ್ದಾ ಬೇಪ್ಪಾಲೆ ಮರ್ಕೆ ನ್ಯಾತಾಕೀ ಮೀನ್ ಆಯ್ಕೋಳಕ್ಕೆ ನಿಂತ್ನಂತೆ ಅವಾಗ ಲಿಂಗಾಯಾತ್ರಿದ್ರಲ್ಲಾ ಆ ಲಿಂಗಾನ ಎತ್ಕೊಂಡು ಕಟ್ಕೋಬುಟ್ರಂತೆ ಆವ್ರತ್ರ ಎಲ್ಲಿತ್ತು ಲಿಂಗ ನಮ್ಮ ಎತ್ಕೊಂಡು ಕಟ್ಕೊಂಡಿರೋದು ಎನ್ನುತ್ತಾರೆ.

ಈ ಎರಡು ಐತಿಹ್ಯಗಳನ್ನು ಗಮನಿಸಿದಾಗ ಈ ಎರಡು ಬುಡಕಟ್ಟುಗಳನ್ನು ಬೇರ್ಪಡಿಸುವುದು ಕಂಡುಬರುತ್ತದೆ. ಏಕೆಂದರೆ ಮಾದಪ್ಪನ್ನು ತನ್ನ ಲಿಂಗಧಾರಣೆಯ ಮೂಲ ಒಂದು ನಿರ್ದಿಷ್ಟ ಆಚರಣೆ ಒಂದು ದೇವರು ಅಥವಾ ಒಂದು ಆರಾಧನೆಯ ಕಡೆಗೆ ಸೆಳೆಯಲು ತಂತ್ರಗಳನ್ನು ರೂಪಿಸಿರುವುದು ಕಂಡುಬರುತ್ತದೆ. ಮಾದಪ್ಪನಿಂದ ಲಿಂಗಧಾರಣೆಯನ್ನು ಮಾಡಿಸಿಕೊಂಡು ತಮ್ಮ ಪಾರಂಪರಿಕ ಆಚರಣೆಯನ್ನು ಬಿಟ್ಟು ಕೊಡದ ಇರುಳಿಗ ಸಮುದಾಯದವರು ಲಿಂಗವನ್ನು ಬೀಪ್ಪಾಲೆ ಮರ(ಬಿಳಿ ಆಲದ ಮರ)ಕ್ಕೆ ನೇತು ಹಾಕಿ ಮೀನು ಹಿಡಿಯಲು ಹೋಗುತ್ತಾರೆ. ಆದ್ದರಿಂದಲೇ ಏನೋ ಇರುಳಿಗರೂ ಇಂದಿಗೂ ಕೂಡ(ಶೈವ ಪಂಥದವರು ಯುಬೂತಿ) ಆಲದ ಸೌದೆ ಉರಿಸುವುದಿಲ್ಲ ಹಾಗೂ ಆಲದ ಮರವನ್ನು ಪೂಜಿಸುತ್ತಾರೆ. ಇದೇ ಲಿಂಗವನ್ನು ಹಾಕಿಕೊಂಡವರೇ ಈಗಿನ ಬೇಡಗಂಪಣರು ಯಾಕಾಗಿರಬಾರದು? ಏಕೆಂದರೆ 'ಬುಡಕಟ್ಟಿನ ಎಲ್ಲಾ ರೀತಿಯ ಲಕ್ಷಣಗಳನ್ನು ಹೊಂದಿರುವ ಬೇಡಗಂಪಣರು ತಾವು ಲಿಂಗಾಯಿತ ಎಂದೂ ಹೇಳಿಕೊಳ್ಳುತ್ತಾರೆ. ಹಾಗೆಯೇ ಇರುಳಿಗರಂತೆಯೇ ಎಲ್ಲಾ ಹೋಲಿಕೆಗಳು ಕಂಡುಬರುತ್ತವೆ. ವಿಶೇಷ ಕೊಡುತ್ತಾರೆ.

ಇರುಳಿಗ ಸಮುದಾಯವು ಮಾದಪ್ಪನು ತನ್ನ ಒಕ್ಕಲು ಮಾಡಿಕೊಳ್ಳಲು ಒಂದು ನಿರ್ದಿಷ್ಟ ಆಚರಣಾ ಕ್ರಮಕ್ಕೆ ಒಳಪಡಿಸುವ ಕೆಲಸ ಬಹಳ ನಿರ್ದಾಕ್ಷಿಣ್ಯವಾಗಿ ಮಾಡಿದ್ದಾರೆ. ನೀಲೇಗೌಡ ಹೆಜ್ಜೇನು ಬೇಟೆಗೆ ಹೋಗಿ ಬರುವುದೊಳಗಾಗಿ ಸಂಕಮ್ಮನಿಗೆ ಮಕ್ಕಳ ಭಾಗ್ಯ ನೀಡಿರುತ್ತಾನೆ. ಇದನ್ನು ನೋಡಿದ ನೀಲೇಗೌಡ ಪ್ರತಿಭಟಿಸುತ್ತಾನೆ. ಹಾಗೆ ತನ್ನ ಮಕ್ಕಳನ್ನೇ(ಕಾರಯ್ಯ-ಬಿಲ್ಲಯ್ಯ) ಮುಂದಿಟ್ಟುಕೊಂಡು ಅಪ್ಪನಾದ ನೀಲೇಗೌಡನ ಬಾಯಿ ಮುಚ್ಚಿಸುವ ಕೆಲಸ ಮಾಡುತ್ತಾನೆ. ಈ ಬುಡಕಟ್ಟುಗಳ ಪ್ರತಿರೋಧವು ಪ್ರಬಲವಾಗಿ ನಮಗೆ ಕಂಡುಬಂದಿದ್ದು ಬೇವಿನಹಟ್ಟಿ ಕಾಳಮ್ಮನ ಸಂಧಿಯಲ್ಲಿ. ಏಕೆಂದರೆ ಬುಡಕಟ್ಟುಗಳು ತಮ್ಮದೇ ಆದ ಆಚಾರ-ವಿಚಾರಗಳಿಂದ ಸ್ವತಂತ್ರವಾಗಿ ಬದುಕಿದ್ದ ಜನರು. ಮದ್ಯ, ಮಾಂಸ, ಭಂಗಿ, ಮೈಥುನಗಳಿಂದ ಚೈತನ್ಯಮಯವಾದ ವಿಚಾರಗಳನ್ನು ಎಂದೂ ತ್ಯಜಿಸಿದವರಲ್ಲ. ಬಲವಂತವಾಗಿ ತ್ಯಜಿಸಿದ್ದರೂ ಅದು ತಾತ್ಕಾಲಿಕ; ಹಾಗೆಯೇ ಯಾವುದೇ ಕಟ್ಟ ನಿಯಂತ್ರಣದ ಬಂಧನಕ್ಕೆ ಒಳಗಾದವರಲ್ಲ; ಇವರು ರಾಜಕೀಯ ಪ್ರಭುತ್ವವನ್ನು ಒಪ್ಪುತ್ತಾರಾದರೂ ಸಾಂಸ್ಕೃತಿಕ ಪ್ರಭುತ್ವವನ್ನು ಒಪ್ಪುವರಲ್ಲ.[೧೭]

ಆದರೆ ಮಲೆಮಾದಪ್ಪನು ಯುಬೂತಿ, ಮಂತ್ರದಿಂದ ಮಕ್ಕಳಾದೋ ಎಂಬ ಮಾತನ್ನು ನೀಲಯ್ಯ ಒಪ್ಪುವುದಿಲ್ಲ. ಅಂದರೆ ಅವನಿಗೆ ವಾಸ್ತವದಲ್ಲಿ ಯಾವುದೇ ಮಂತ್ರ ತಂತ್ರದಿಂದ

ಮಕ್ಕಳಾಗದು ಎಂಬ ವಾಸ್ತವಾಂಶ ಗೊತ್ತಿತ್ತು. ಆದರೆ ಮಾದಪ್ಪ ಅವನನ್ನು ನಂಬಿಕೆ ದೇವರು ಮಂತ್ರ ತಂತ್ರ ಎಂಬ ಸುಳ್ಳು ಕೂಪಕ್ಕೆ ತಳ್ಳುತ್ತಾನೆ. ಇದರ ಜೊತೆ ಬೇವಿನಹಟ್ಟಿ ಕಾಳವ್ವ ಮಾದಪ್ಪನನ್ನು ವಿರೋಧಿಸುವ ಪರಿಯನ್ನು ಗಮನಿಸಿದರೆ ಬುಡಕಟ್ಟುಗಳ ಮೇಲೆ ಮಾದಪ್ಪನ ಧರ್ಮ ಹೇರಿಕೆಯ ವಿಧಾನವನ್ನು ಬಹಳ ಸೂಕ್ಷ್ಮವಾಗಿ ವಿರೋಧಿಸುತ್ತಾಳೆ. ಏಕೆಂದರೆ ಬುಡಕಟ್ಟು ಸಂಸ್ಕೃತಿ ಎಂಬುದು ಮಾತೃ ಪ್ರಧಾನ ವ್ಯವಸ್ಥೆಯಾಗಿರುತ್ತದೆ. ಬೇವಿನಹಟ್ಟಿ ಕಾಳವ್ವ ಮಾತೃ ಪ್ರಧಾನ ವ್ಯವಸ್ಥೆಯ ಪ್ರತೀಕವಾಗಿ ಮಾದಪ್ಪನು ಬಲಾಢ್ಯ ಕುಳಗಳನ್ನು ಹಿಡಿದುಕೊಂಡು ತನ್ನ ಪ್ರಭಾವ ವಲಯದಲ್ಲಿ ಆಕರ್ಷಿಸಿ ತನ್ನ ಒಕ್ಕಲುಗಳನ್ನಾಗಿ ಪರಿವರ್ತಿಸಿಕೊಳ್ಳುವ ಮೂಲಕ ತನ್ನ ಪಂಥವನ್ನು ಬಲಪಡಿಸುವುದು ಮಾದೇಶ್ವರನ ಉದ್ದೇಶ. ಇದು ಸುಲಭದಲ್ಲಿ ಸಾಧ್ಯವಾಗದೇ ಹೋದಾಗ ತನ್ನ ಮಾಯ, ಮಂತ್ರ, ಮಾಟಗಳಂತಹ ಎಲ್ಲ ಕುಟಿಲ ತಂತ್ರಗಳನ್ನು ಬಳಸಿ ಒಕ್ಕಲು ಮಾಡಿಕೊಳ್ಳುವ ಕೆಲಸ ಮಾಡುತ್ತಿದ್ದನು. ಇದಕ್ಕೆ ಬುಡಕಟ್ಟು ಸಂಸ್ಕೃತಿಯ ಪ್ರತೀಕವಾದ ಕಾಳಮ್ಮ "ದೇವ್ರು ದಿಂಡ್ರು ಅಂತ್ಹೇಳಿ ಜೀವ ಹಾಕೊ ಕಳ್ಮಕ್ಕುಳ್ಗೆ, ಪಾದು ಪೂಜೆ ಮಾಡಿ ಕ್ವಾರಣ್ಯ ಕೊಟ್ಟು ನನ್ನ ಬದುಕೆ ಆಳ್ಮಾದ್ತೆಯ" ಎಂದು ಬಯ್ಯುತ್ತಾಳೆ. ಇದರ ಜೊತೆಗೆ ತನ್ನ ಗಂಡನಾದ ಕೆಂಪೇಗೌಡನನ್ನು ಹುಲಿ ಹಿಡಿದು ರಕ್ತ ಕುಡಿದು. ಅವನ ಖಂಡವನ್ನು ತುಂಡು ತುಂಡು ಮಾಡಿ ಎಸೆಯುವಂತೆ ಮಾಡುವ ಮೂಲಕ ತಾನು ಮುಂಡೆಯಾದರೂ" ಭಿಕ್ಷೆ ಕೊಡುವುದಿಲ್ಲ.

"ಆನೆ ಗಾತ್ರದ ಕಿಡಿ ಹಾರ್ಬಂದು
ನನ್ನ ಅರವತ್ಮೊಳದ ಗರೀಸೀರೆ ಮೇಲೆ ಕೂತ್ರು ಸರಿಯೇ
ಕುದ್ರ ಗಾತ್ರ ಕಿಡಿ ಕುಪ್ಪುಸಿ ಬಂದು

ನಾನುಟ್ಟಿದ ಸೀರೆ ರವ್ಕೆ ಸುಟ್ಬೋಗಿ, ಉಡೋದ್ಕೆ ಸೀರೆ ಇಲ್ದೆ ಹುಟ್ಟುದ ನಿರ್ವಾಣದಲ್ಲಿ ನಾನು ದಾರೀಲಿ ಕೂತ್ಕೊಂಡ್ರೂ ಸರಿಯೇ ನಿಗ್ಗೆಭಿಕ್ಷಾ ಕೊಡುವಂತ ಮಗಳಲ್ಲ ಕಾಣಪ್ಪ"

ಇಲ್ಲಿ ಕಾಳವ್ವನಿಗೆ ನನ್ ಗಂಡ ಹುಲಿ ಬಾಯಿಗ ಸಿಕ್ಕಿ ತುಂಡು ತುಂಡಾಗಲಿ ಅದು ಮುಖ್ಯವಲ್ಲ. ತನ್ನ ಬೆಳೆ ಹಾಗೂ ಅದರ ರಕ್ಷಣೆ ಮುಖ್ಯ ಗಂಡನ ಅಸ್ತಿತ್ವವಾಗಲೀ ಗಂಡಸರು ಆರೋಪಿಸುವ 'ಮಾನವ ರಕ್ಷಣೆ'ಯಾಗಲೀ ಇಲ್ಲಿ ಮುಖ್ಯವಲ್ಲ. ಕಾಳವ್ವನ ಸ್ವಾಭಿಮಾನ ಒಂದು ಮಹತ್ವದ ವಿಚಾರ. ಮಾತೃ ಪ್ರಧಾನ್ಯತೆಗೆ ಬಲವಾದ ಸಾಕ್ಷಿ ಈ ಪ್ರಸಂಗ. ಭಿಕ್ಷೆಯಿಂದ ಅವಳ ಧಾನ್ಯ ಕಡಿಮೆಯಾಗುತ್ತದೆ ಅನ್ನುವುದಕ್ಕಿಂತ ಭಿಕ್ಷೆ ಕೊಡುವ ಮೂಲಕ ಮಾದಯ್ಯನ ಹೆಚ್ಚಳತನಕ್ಕೆ ಬಗ್ಗುವುದಿಲ್ಲ, ಶರಣಾಗುವುದಿಲ್ಲ ಎಂಬ ಹಠ ಇಲ್ಲಿ ಗಮನ ಸೆಳೆಯುತ್ತದೆ. ಈ ಹಠವನ್ನು ಕಾವ್ಯಗಳಲ್ಲಿ ಜೀಪುಣುತನ ಎಂದು ವರ್ಣಿಸಲಾಗಿದೆಯಾದರೂ ಅದು ಅವಳ ಸ್ವಾಭಿಮಾನವಾಗಿಯೇ ಮೆರೆಯುತ್ತದೆ.[೧೮]

ಯಾವ ಕಾರಣಕ್ಕೂ ತನ್ನ ಅಸ್ತಿತ್ವವನ್ನು ಬಿಟ್ಟುಕೊಡಲೊಪ್ಪದ ಕಾಳಮ್ಮನ ಸ್ವಾಭಿಮಾನ ಮಾದೇಶ್ವರನಿಗೆ ಅಹಂಕಾರವಾಗಿ, ಸೊಕ್ಕಾಗಿ ಕಾಣುತ್ತದೆ. ಇಲ್ಲಿ ಮಾದಪ್ಪ ಮೋಸದ ಹಾದಿಯನ್ನು ಹಿಡಿಯುತ್ತಾನೆ. ಕಾಳಮ್ಮನ ಮನೆಗೆ ಬೆಂಕಿ ಹಾಕುತ್ತಾನೆ. ಅವಳ ಕುಪ್ಪಸ ಬೆಂದು ಅವಳನ್ನು ಅರೆ ಬೆತ್ತಲಾಗಿ ನಿಲ್ಲುವಂತೆ ಮಾಡುತ್ತಾನೆ. ಭಿಕ್ಷೆ ಕೊಡದಿದ್ದಕ್ಕೆ ಅವಳ ಮಾನ ತೆಗೆಯುತ್ತಾನೆ. ಇದನ್ನು ಒಬ್ಬ ದೇವರು ಎಂದು ಕರೆಸಿಕೊಂಡಿರುವ ಮಾದಪ್ಪ ಮಾಡುತ್ತಾನೆ. ಇಡೀ ಬೇವಿನಹಟ್ಟಿಯನ್ನು ನಾಶಮಾಡುತ್ತಾನೆ. ಅವಳ ಮನೆ ನಾಶ ಮಾಡಿ ಓಡಾಡುವ ದಾರಿ ಮಾಡುತ್ತಾನೆ. ಇಂದಿಗೂ ಇರುಳಿಗರು ಈ ಭಾಗದಲ್ಲಿ ಇಳಿದು ಕೈಮುಗಿದು ಹೋಗುವುದು ಪ್ರತೀತಿ ಇದೆ. "ಮಾತೃ ಮೂಲ ಕುಟುಂಬದ ಪಳೆಯುಳಿಕೆಯಾಗಿ ಕಂಡು ಬರುವ ಈ ಕಾಳಮ್ಮ ಹಟ್ಟಿಯ ನಾಶ ಎಂದರೆ ಅದು ಮಾತೃಮೂಲದ ಪ್ರತೀಕಗಳಾದ ಗ್ರಾಮ ದೇವತೆಯ ಆರಾಧಕರ ನಾಶ ಎಂದೇ ಅರ್ಥ; ಪೂರಕವೆಂಬಂತೆ ಮಾದೇಶ್ವರನ ಇದೇ ಕಾವ್ಯದಲ್ಲಿ 'ಮಾರಿ'ಗೆ ಸಂಬಂಧಿಸಿದ ದೇವತೆಗಳನ್ನು ಅತ್ಯಂತ ನಿಕೃಷ್ಟವಾಗಿ ಕಾಣಿಸಲಾಗಿದೆ. ತನ್ನ ಕೆಲಸಗಳಿಗಾಗಿ ಮಾದೇವ ಮಾರಿಯರ ಜುಟ್ಟು ಹಿಡಿದು ಎಳೆ ತರುತ್ತಾನೆ. ಇದರ ಆಶಯ ಆ ಸಂಸ್ಕೃತಿ ಮಾದೇಶ್ವರನಿಗೆ ಅಧೀನವಾಗಿರಬೇಕು ಎಂಬುದೇ ಹೊರತು ಬೇರೇನಲ್ಲ. ಸ್ಥಳೀಯವಾಗಿ ಮತ್ತು ಹೊರಗಿನಿಂದ ಬಂದ ಎರಡು ಸಂಸ್ಕೃತಿಯ ನಡುವಿನ ಸಂಘರ್ಷ"[೧೯] ಎಂದು ಹಿ.ಚಿ. ಬೋರಲಿಂಗಯ್ಯ ಅವರು ಅಭಿಪ್ರಾಯ ಪಡುತ್ತಾರೆ.

ಹೀಗೆ ಮಾದಪ್ಪನು ಇರುಳಿಗ ಬುಡಕಟ್ಟು ಸಮುದಾಯದ ಮೇಲೆ ನಿರಂತರವಾಗಿ ತನ್ನ ಪಂಥವನ್ನು ಬಲವಂತವಾಗಿ ಹೇರುತ್ತಾ ಬಂದಿದ್ದಾನೆ. ಇಂದಿಗೂ ಕೂಡ ಇರುಳಿಗರು ಮಾದಪ್ಪನನ್ನು ಭಯದಿಂದಲೇ ಆಚರಿಸುವುದನ್ನು ಕಾಣಬಹುದು.

ಐತಿಹ್ಯ ೪

ಬಹಳ ಪ್ರೀತಿಸಿ ಮದುವೆಯಾದ ನೀಲಯ್ಯ ತನ್ನ ಅಣ್ಣತಮ್ಮಂದಿರ ಜೊತೆ ಜಗಳ ಮಾಡಿಕೊಂಡು ಪ್ರತ್ಯೇಕವಾಗಿ ವಾಸ ಮಾಡಲು ಆರಂಭಿಸಿದನು. ಹಾಗೆ ಕುಲದ ವಾಡಿಕೆಯಂತೆ ಬೇಟೆಗೆ ಹೋಗುವ ಪ್ರಸಂಗ ಎದುರಾದಾಗ ಸಂಕಮ್ಮ ಒಬ್ಬಳನ್ನೇ ಬಿಟ್ಟು ಹೋಗಲು ಅನುಮಾನ ಪಟ್ಟು ಅವಳಿಗೆ ಚಿತ್ರಹಿಂಸೆ ಕೊಡುತ್ತಿರುವಾಗ ತಾಯಿಯ ರೋಧನೆಯನ್ನು ನೋಡಲಾರದ ಕಾರಯ್ಯ, ಬಿಲ್ಲಯ್ಯರು ತಂದೆಯ ವಿರುದ್ಧ ತಿರುಗಿ ಬಿದ್ದು ತಂದೆಯನ್ನು ಕೊಲ್ಲಲು ಮುಂದಾಗುತ್ತಾರೆ. ಕಲ್ಲು ಹಿಡಿದ ಕಾರಯ್ಯ ಸೋಲಿಗರ ವಂಶಸ್ಥನಾದನು. ಹಾಗೆಯೇ ಬಿಲ್ಲು ಹಿಡಿದ ಬಿಲ್ಲಯ್ಯ ಇರುಳಿಗರ ವಂಶಸ್ಥನಾದ ಎನ್ನುತ್ತಾರೆ.

ಐತಿಹ್ಯ ೫

ದಟ್ಟಾರಣ್ಯದಲ್ಲಿ ಗೆಡ್ಡೆ, ಗೆಣಸು, ಜೇನು, ಉಡ, ಮೊಲ ಮುಂತಾದವುಗಳ ಬೇಟೆಯಾಡು ತ್ತಿದ್ದಾಗ ನಮ್ಮ ಕಣ್ಣಿಗೆ ಮಾದಪ್ಪ ಬಿದ್ದ. ಅವನು ಜಡೆ ಬುಡ್ಕೊಂಡು ಬರಿ ಬೂದಿ ಬಟ್ಟೆಯನ್ನು

ಕಟ್ಟಿಕೊಂಡು ತಿರುಗುತ್ತಿದ್ದ. ಹಾಗೆ ನಮ್ಮನ್ನು ಕಂಡು ನಮ್ ಜೊತೆನೆ ಸೇರ್‍ಕೊಂಡ. ಒಂದಿನ ಈಜಾಡೋಕೆ ಹೋದಾಗ ನಮ್ಮವರು ತಮ್ಮತ್ರ ಇದ್ದ ನೂರೊಂದು ಲಿಂಗಾನ ಕಳ್ಳು ದಂಡೆಯಲ್ಲಿಟ್ರು ಹಾಗೆ ಮಾದಪ್ಪನು ತನ್ನ ಬೂದಿಬಟ್ಟೆಯನ್ನು ಕಳ್ಳು ದಂಡೆಯಲ್ಲಿಟ್ಟ, ಬೇಗ ಸ್ನಾನ ಮಾಡಿಕೊಂಡು ಬಂದ ಮಾದಪ್ಪ ನಮ್ಮ ನೂರೊಂದು ಲಿಂಗನ ಹಾಕ್ಕೊಂಡು ಬಿಟ್ಟು ನೋಡ್ರೋ ಕಾರಯ್ಯ, ಬಿಲ್ಲಯ್ಯ ಈ ಲಿಂಗಗಳು ನಂಗೆಯ್ಯಾಂಗೆ ಕಾಣ್ತವೆ ಎಂದನಂತೆ ಆಗ ನಮ್ಮೋರು ಸ್ವಾಮಿ ಅವು ನಿಂಗೆ ಚೆನ್ನಾಗಿ ಕಾಣ್ತವೆ ನೀವೇ ಆಕೊಳ್ಳಿ ಎಂದರಂತೆ. ಅವನ ಬೂದಿ ಬಟ್ಟೆಯನ್ನು ನಮ್ಮೋರು ಆಕೊಂಡು ಬಂದ್ರಂತೆ. ಹಿಂದೆಲ್ಲಾ ಬೂದಿ ಬಟ್ಟೆಯನ್ನು ನಾವು ಹಾಕೊಂಡು ದೇವರ ದರ್ಶನಕ್ಕೆ ಹೋದರೆ ನಮ್ಮನ್ನು ನೇರವಾಗಿ ಬಿಡುತ್ತಿದ್ದರು. ಈಗಲೂ ಮಾದಪ್ಪನ ಎಡ ಬಲದಲ್ಲಿ ಬೂದಿ ಬಟ್ಟೆಯನ್ನು ಧರಿಸಿರುವ ಇಬ್ಬರು ಸೇವಕರು ಕುಳಿತಿರುವುದನ್ನು ಮಾದಪ್ಪನ ಬೆಟ್ಟದಲ್ಲಿ ಕಾಣಬಹುದು.[೨೦]

ಐತಿಹ್ಯ ೬

ಬಹಳ ಹಿಂದೆ ನಮ್ಮೋನ್ ಒಬ್ಬ ಹಳ್ಳ(ತೊರೆ) ದಾಟಬೇಕಾದ ಪ್ರಸಂಗ ಎದುರಾಗುತ್ತದೆ. ಆಗ ಸ್ವಾಮಿ ಇವನ ದೃಢ ನಿಷ್ಠೆ ಪರೀಕ್ಷೆ ಮಾಡಬೇಕಲ್ಲ ಅಂತ ಹೇಳಿ ತೊರೆಯ ನೀರಲ್ಲೇ ಸುಂಡಿಸ್ ಬಿಟ್ನಂತೆ. ಆಗ ತೊರೆಲಿದ್ದ ಮೀನುಗಳು ವಿಲಿ ವಿಲಿ ಅಂತ ಒದ್ದಾಡೋಕೆ ಸುರುಮಾಡಿದವಂತೆ. ಆಗ ನಮ್ಮೋನು ತನ್ನತ್ರ ಇತ್ತಲ್ಲಾ ಲಿಂಗ ಅದನ್ನಾ ಕಳ್ಳು ಬೆಪ್ಪಾಲೆ ಮರಕ್ಕೆ ಕಟ್ಟಿ ಮೀನು ಹಿಡಿಯೋಕೆ ಸುರುಮಾಡಿದನಂತೆ. ಆಗ ಈ ಲಿಂಗಾಯಿತ್ರು ಇದನ್ನು ನೋಡ್ಕೊಂಡು ಲಿಂಗಾನ ಎತ್ತಿ ತಾವು ಹಾಕೋಬುಟ್ರಂತೆ. ಅವತ್ತಿನಿಂದ ಲಿಂಗ ಅವರತ್ರ ಹೊಂಟ್ಹೋಯ್ತು ಅವುರತ್ರ ಎಲ್ಲಿತ್ತು ಲಿಂಗ" ಅವರದ್ದು ಕಟ್ಟುಲಿಂಗ ನಮ್ಮದು ಹುಟ್ಟುಲಿಂಗ.[೨೧]

ಐತಿಹ್ಯ ೭

ಕಾರಯ್ಯ ಬಿಲ್ಲಯ್ಯರು ಮಾದಪ್ಪನ ಭಕ್ತರು. ಇಬ್ಬರು ದನ ಮೇಯಿಸೋಕೆ ಕಾಡಿಗೆ ಹೋಗಿದ್ರಂತೆ. ಆಗ ಮಾದಪ್ಪನಿಗೆ ಏನೋ ಬೇಕಾಗಿ ಬಂದು 'ಏ ಬಿಲ್ಲಯ್ಯಾ' ಎಲ್ಲಿಯೋ ಅಂತ ಕರದಾಗ ಬಿಲ್ಲಯ್ಯ ದೂರದಿಂದಲೇ ಸ್ವಾಮಿ ಬಂದೆ ಎಂದನಂತೆ. ಸ್ವಾಮಿಗೆ ಕೋಪ ಬಂತು ನಾನು ಕರೆದಾಗ ಎಲ್ಲೆಲ್ಲಿಗೋ ಹೋಗಿರ್‍ತಿಯ; ನೀನು ನನ್ನ ಹತ್ತಿರ ಇರಬೇಡ ಹೋಗು ಎಂದರಂತೆ ಸ್ವಾಮಿ. ಆಗ ಬಿಲ್ಲಯ್ಯ ಸ್ವಾಮಿ ನನ್ನ ತಪ್ಪು ಮನ್ನಿಸಬೇಕು, ಇನ್ನೊಂದು ಬಾರಿ ಈ ತರಹದ ತಪ್ಪು ನಡೆಯದಂತೆ ನೋಡಿಕೊಳ್ಳುತ್ತೇನೆ ಎಂದನಂತೆ'. ಮತ್ತೊಮ್ಮೆ ಸ್ವಾಮಿ ಬಿಲ್ಲಯ್ಯ ಎಂದ ಕೂಡಲೇ ಸ್ವಾಮಿ ಇಲ್ಲೇ ಇದ್ದೀನಿ ಎಂದು ಎತ್ತಿನ ಇರುಳುನಿಂದಲೆ (ಕುತ್ತಿಗೆ ಮತ್ತು ಬೆನ್ನಿನ ಮಧ್ಯಭಾಗದಲ್ಲಿ ಹುಬ್ಬಿಕೊಂಡಿರುವ ಭಾಗ) ಸ್ವಾಮಿ ಇದೋ ಬಂದೆ ಎಂದನಂತೆ ಆಗ ಮಾದಪ್ಪ ಆಹಾ ಎಂತ ಶಿಷ್ಯ ನೀನು ಎತ್ತಿನ ಇರುಳಿನಿಂದಲೇ ಓ ಎಂದಿದ್ದಕ್ಕೆ ಇನ್ನು

ಮುಂದೆ ನಿನ್ನ ವಂಶ ಇರುಳಿಗರು ಎಂದು ಕರೆಯುವಂತಾಗಲೀ; ಮೊದಲನೆ ಪೂಜೆ ನನಗಾದರೆ ಎರಡನೇ ಪೂಜೆ ನಿನಗೆ ಮೂರನೇ ಪೂಜೆ ಕಳ್ಳಕಾಕರಿಗೆ ಎಂದನಂತೆ.[೨೨]

ಐತಿಹ್ಯ ೮

ತಾಳಬೆಟ್ಟದ ಹತ್ತಿರ ನಮ್ಮೋಳಾದ ಕಾಳಮ್ಮ ಅಂತ ಇದ್ಲಂತೆ ಬೇಕಾದಂಗೆ ದನ, ಕುರಿ, ನಗನಾಣ್ಯ ಇಟ್ಕೊಂಡು ಜೋರಾಗಿ ಬದುಕುತ್ತಾ ಇದ್ಲಂತೆ. ಅವಳಿಗೆ ಸಾಧು ಸನ್ಯಾಸಿ ಕಂಡರೆ ಆಗ್ತ ಇರ್ಲಿಲ್ವಂತೆ. ಆಗ ಮಾದಪ್ಪ ಭಿಕ್ಷೆ ಕೇಳೊಕೇ ಹೊದ್ನಂತಲ್ಲಾ ಅವನಿಗೆ ಬಯ್ದು ಒಂದು ಹಿಡಿ ರಾಗಿಕಾಳು ಕೊಡ್ದೆ ತಳ್ಬುಟ್ಲಂತೆ. ಸ್ವಾಮಿ ಸುಮ್ನೆ ಬಿಟ್ಟಾನ ಅವಳ ಮನೆನೆಲ್ಲಾ ಆಳ್ ಮಾಡಿ ಅವಳ ಮೈಮೇಲೆ ಬಟ್ಟೆ ಇಲ್ದಂಗೆ ಮಾಡಿ, ಅವಳಿದ್ದ ಮನೇನ ಅವನು ತಿರುಗಾಡೋ ದಾರಿ ಮಾಡ್ಕೋ ಬಿಡ್ನಂತೆ. ಆಗ ಅವಳು ಆ ದೇಶವನ್ನು ಬಿಟ್ಟು ಈ ಕಬ್ಬಾಳ್ ಬೆಟ್ಟದಲ್ಲಿ ಕಬ್ಬಾಳಮ್ಮ ಆಗಿ ಕುಂತಿರೋದು. ಇವಳೇ ಕಾಳಮ್ಮ ಕಬ್ಬಾಳಮ್ಮ ಆಗಿರೋದು.[೨೩]

ಈ ಮೇಲಿನ ಎಲ್ಲಾ ಐತಿಹ್ಯಗಳನ್ನು ಗಮನಿಸಿದಾಗ ಲಿಂಗದ ಪ್ರಸ್ತಾಪ ಮಾದಪ್ಪ ಲಿಂಗಾಯಿತ ಏಳುಮಲೆ(ಮಹದೇಶ್ವರ ಬೆಟ್ಟದ ಪ್ರದೇಶ) ಮುಂತಾದವುಗಳ ಪ್ರಸ್ತಾಪಗಳು ಹೆಚ್ಚಾಗಿ ಕಂಡುಬರುತ್ತದೆ. ಲಿಂಗ ಎಂಬುದು ಇರುಳಿಗರಲ್ಲಿದ್ದು ಮಾದಪ್ಪ ಅದನ್ನು ಕಟ್ಟಿಕೊಂಡಿದ್ದರ ಬಗ್ಗೆ ಪ್ರಸ್ಥಾಪವಾಗುತ್ತದೆ. ಹಾಗೆಯೇ ಇವತ್ತಿನ ಲಿಂಗಾಯಿತರು ಇವರಿಂದ ಮೋಸದಿಂದ ಲಿಂಗವನ್ನು ಪಡೆದುಕೊಂಡಿದ್ದರ ಬಗ್ಗೆ ವಿವರಗಳು ಸಿಗುತ್ತವೆ. ಅಂದರೆ ಮಾದಪ್ಪನಿಗೂ ಲಿಂಗಕ್ಕೂ ಅಂತರವಿರುವುದು ಗೊತ್ತಾಗುತ್ತದೆ. ಲಿಂಗ ಮಾದಪ್ಪನಿಂದ ಬಂದಿಲ್ಲ ಮಾದಪ್ಪನಿಗೂ ಮುಂಚೆ ಇರುಳಿಗರಲ್ಲೂ ಲಿಂಗವಿದ್ದಿರಬಹುದು ಎಂಬ ಅಂಶ ಈ ಐತಿಹ್ಯದಿಂದ ಗೊತ್ತಾಗುತ್ತದೆ.

ಹಾಗೆಯೇ ಮಾದಪ್ಪ ಇವರಿಗೆ ಲಿಂಗದೀಕ್ಷೆ ನೀಡಿದ್ದ. ಆದರೆ ಇವರ ಮಾಂಸಾಹಾರ ಪದ್ಧತಿಯಿಂದ ಅದನ್ನು ಬೆಪ್ಪಾಲ ಮರಕ್ಕೆ ಕಟ್ಟಿ ಮೀನು ಹಿಡಿಯುತ್ತಾರೆ. ಆಗ ಲಿಂಗಾಯಿತರು ಕಟ್ಟಿಕೊಂಡರು ಎನ್ನುವ ಪ್ರಸ್ತಾಪ ಬರುತ್ತದೆ. 'ಇರುಳಿಗರ ವಕ್ತೃಗಳು ಹೇಳುವ ಪ್ರಕಾರ ನಮ್ಮಲ್ಲಿ ಐದು ಪಣಗಳಿದ್ದವು. "ಇರುಳಿಗ, ಸೋಲಿಗ, ಲಿಂಗಾಯಿತ, ಕಾಡುಕುರುಬ ಮತ್ತು ಜೇನುಕುರುಬರು. ಲಿಂಗಾಯಿತರು ಅಂದರೇ ಅದೇ ಮಾದಪ್ಪ ಬೆಟ್ಟದಲ್ಲಿ ವಾಸ ಮಾಡುವ ನಮ್ಮವರೇ ಆಗಿದ್ದರು. ಮಾಂಸ ತಿನ್ನದವರಾದ ಲಿಂಗಾಯಿತ ಆಥವಾ ಬ್ಯಾಡ್ರುದಿಣ್ಣರು(ಬೇಡಗಂಪಣರು) ಅಂತಾರೆ, ಮಾಂಸ ತಿನ್ನುವ ನಾವು ನಮ್ಮ ತಾತನ ಕಾಲದಲ್ಲಿ ಈ ದೇಶಕ್ಕೆ ಬಂದೆವು ಈ ಬೇಡರ ಕಣ್ಣಪ್ಪ ಅಂತ ಬತ್ತಾನಲ್ಲ ಅವನು ನಮ್ಮೋನೆ ಅವನ ಹೆಸರು ಕುನ್ನಯ್ಯ ನಾವು ಬೇಟೆ ಆಡಿಕೊಂಡಿದ್ದರಿಂದ ಬೇಡರ ಕುನ್ನಯ, ಕಣ್ಣಯ್ಯ, ಕಣ್ಣಪ್ಪ ಅಂತ ಕರ್ಕೊಂಡಿದ್ದಾರೆ ಎನ್ನುತ್ತಾರೆ.[೨೪]

ಇಡೀ ದೇಶದಲ್ಲಿ ಆರ್ಯ ಮತ್ತು ದ್ರಾವಿಡಸಂಸ್ಕೃತಿಗಳು ಸಂಧಾನ ಮಾಡಿಕೊಳ್ಳುವ ಮೂಲಕ ಸಮ್ಮಿಲನಗೊಂಡಿದ್ದರಿಂದ ಶಿವ ಮತ್ತು ಅಗ್ನಿ ಸಂಸ್ಕೃತಿಗಳು ಒಂದಾಗಿ 'ಲಿಂಗ

ಸಂಸ್ಕೃತಿಯನ್ನು ನುಂಗಿ ಹಾಕಿದವು. ಬೌದ್ಧ, ಜೈನ, ಲೋಕಾಯುತ ವಜ್ರಯಾನ, ಕಾಳಮುಖ ಪಂಥಗಳು ಶಿವ ಮತ್ತು ಅಗ್ನಿ ಸಂಸ್ಕೃತಿಯನ್ನು ಸ್ವಲ್ಪ ಕಾಲದ ಮಟ್ಟಿಗೆ ಲಿಂಗ ಸಂಸ್ಕೃತಿಯಿಂದ ಬೇರ್ಪಡಿಸುವ ಕೆಲಸ ಮಾಡಿತ್ತಾದರೂ ಇಂತಹ ಪ್ರಬಲ ಸಂಸ್ಕೃತಿಯೊಂದಿಗೆ ಸ್ಪರ್ಧಿಸಲಾರದೇ ಸೋತುಹೋದವು. ಅಂದಿನಿಂದ ಲಿಂಗ ಸಂಸ್ಕೃತಿಯು ಶಿವ ಸಂಸ್ಕೃತಿಯ ಮತ್ತು ಅಗ್ನಿ ಸಂಸ್ಕೃತಿಯ ಪೂರ್ವರೂಪ ಎಂದು ಬಿಂಬಿಸಿ ಶಿವನೇ ಲಿಂಗ, ಲಿಂಗವೇ ಶಿವ ಎಂದು ನಂಬಿಸಲಾಯಿತು.

ಕರ್ನಾಟಕದಲ್ಲಿ ಲಿಂಗ ಸಂಸ್ಕೃತಿಯ ಬುಡಕಟ್ಟುಗಳ ಮೇಲೆ ಹೆಚ್ಚು ಪ್ರಭಾವ ಬೀರಿದವರಲ್ಲಿ ರಾಮಾನುಜಾಚಾರ್ಯ ಮತ್ತು ಮಲೆಮಾದಪ್ಪ ಪ್ರಮುಖರು. ಈ ಇಬ್ಬರು ತಮ್ಮ ಅಗ್ನಿ ಮತ್ತು ಶಿವ ಸಂಸ್ಕೃತಿಯನ್ನು ಲಿಂಗ ಸಂಸ್ಕೃತಿಯ ಇರುಳಿಗರ ಮೇಲೆ ಹೇರುವುದು ಮತ್ತು ಅದಕ್ಕೆ ಅವರು ಅನುಸರಿಸಿದ ಮಾರ್ಗ ಮಾನವೀಯತೆಯಿಂದ ಕೂಡಿತ್ತು. ಮಲೆಮಾದಪ್ಪ ತನ್ನ ಪಂಥದ (ಒಕ್ಕಲು) ಹೇರಿಕೆಯನ್ನು ಬೇವಿನ ಹಟ್ಟಿ ಕಾಳಮ್ಮನ ಮೇಲೆ ಹೇರಿದ ರೀತಿಯನ್ನು ಹಿ.ಚಿ ಬೋರಲಿಂಗಯ್ಯ ಹೀಗೆ ವಿವರಿಸುತ್ತಾರೆ. "ದೈವ ಇಲ್ಲಿ ದಾರಿ ತಪ್ಪುತ್ತದೆ. ಸಂಕಮ್ಮನ ಪ್ರಸಂಗದಲ್ಲಿ ಕರುಣೆಯಾಗಿ, ವಿವೇಕಿಯಾಗಿ ಕಾಣಿಸಿಕೊಂಡ ಮಾದಪ್ಪ ಇಲ್ಲಿ ವಿವೇಕ ತಪ್ಪುತ್ತಾನೆ. ನಿಷ್ಕರುಣಿಯಾಗುತ್ತಾನೆ. ತನ್ನ ಮಾಟ-ಮಂತ್ರಗಳಿಂದ ಕಾಳಮ್ಮನ ಇಡೀ ಹಟ್ಟಿ ಉರಿಯುವಂತೆ ಮಾಡುತ್ತಾನೆ. ಕಾಳಮ್ಮನ ಸೀರೆ ಕುಪ್ಪಸ ಬೆಂದು ಅವಳು ಬೆತ್ತಲೆಯಾಗಿ ಅಲೆಯುವಂತೆ ಮಾಡುತ್ತಾನೆ. ಕೇವಲ ತನಗೆ ಭಿಕ್ಷೆ ನೀಡಲಿಲ್ಲ ಎಂಬ ಕಾರಣಕ್ಕೆ ಕಾಳಮ್ಮನ ವಸ್ತ್ರ ಸುಟ್ಟು ಮಾನ ತೆಗೆಯುತ್ತಾನೆ. ಕಾಳಮ್ಮನ ಸರ್ವನಾಶ ಮಾಡಿ ಅವಳ ಹಟ್ಟಿಯನ್ನು ತನ್ನ ಭಕ್ತರು ಓಡಾಡುವ ದಾರಿಯಾಗಿ ಪರಿವರ್ತಿಸುತ್ತಾನೆ."[೨೫]

ಈ ಮೇಲಿನ ಪ್ರಸಂಗವನ್ನು ಗಮನಿಸಿದಾಗ ಅಗ್ನಿ ಮತ್ತು ಶಿವ ಸಂಸ್ಕೃತಿಗಳ ತಮ್ಮ ಪಂಥದ ಪ್ರಚಾರಕ್ಕೆ ಎಂತಹ ಮಾರ್ಗವನ್ನಾದರೂ ತೆಗೆದುಕೊಳ್ಳಲು ಹಾಗೂ ಅಮಾನವೀಯ ಕೆಲಸ ಮಾಡಲು ಸಿದ್ದರಿದ್ದರು ಎಂಬುದನ್ನು ತೋರಿಸುತ್ತದೆ. ಅಗ್ನಿ ಮತ್ತು ಶಿವ ಸಂಸ್ಕೃತಿಯವರಿಗೆ ಪ್ರಚಾರವೊಂದೇ ಗುರಿಯಾಗಿತ್ತು. ಅದಕ್ಕೆ ಇವರ ಯಾವ ಮಾರ್ಗವನ್ನು ಅನುಸರಿಸುತ್ತಿದ್ದರು ಎನ್ನುವುದು ತಿಳಿಸುತ್ತದೆ. ಇಂತಹ ಸಾವಿರಾರು ಸಾಂಸ್ಕೃತಿಕ ಹೊಡೆತಗಳಿಂದ ನೆಲದ ಸಂಸ್ಕೃತಿಯನ್ನು ಉಳಿಸಿಕೊಂಡು ಶಿವ ಮತ್ತು ಅಗ್ನಿ ಸಂಸ್ಕೃತಿಯ ಮೇಲರಿಮೆಯನ್ನು ಒಪ್ಪಿಕೊಂಡು ಬದುಕುತ್ತಿದ್ದಾರೆ. ಲಿಂಗ ಸಂಸ್ಕೃತಿಯನ್ನು ಸಮಾಜಮುಖಿಗೊಳಿಸಿ ಅಧ್ಯಯನ ಮಾಡುವ ಅನಿವಾರ್ಯತೆ ಇಂತಹ ಐತಿಹ್ಯಗಳ ಮೂಲಕ ಆಗಬೇಕಾಗಿದೆ.. ಈ ಕಾರ್ಯಕ್ಕೆ ಬುಡಕಟ್ಟುಗಳ ಸೂಕ್ಷ್ಮ ಸಂವೇದನೆ ಬಹಳ ಮುಖ್ಯವಾಗುತ್ತದೆ.

ಇರುಳಿಗರ ಆಚಾರ ವಿಚಾರ ಸಂಸ್ಕೃತಿಯನ್ನು ಗಮನಿಸಿದಾಗ ಮೇಲುನೋಟಕ್ಕೆ ಶಿವ ಮತ್ತು ಅಗ್ನಿ ಸಂಸ್ಕೃತಿಯಂತೆಯೇ ಗೋಚರಿಸುತ್ತದೆ. ಇಂತಹ ಎಷ್ಟೇ ದಾಳಿಗಳು ನಡೆದರೂ

ತಮ್ಮ ಮೂಲ ಪರಂಪರೆಯನ್ನು ಬಿಟ್ಟುಕೊಡದ ಇರುಳಿಗರು ತಮ್ಮ ಆಚರಣೆ, ನಂಬಿಕೆ, ಐತಿಹ್ಯ, ಸೋಬಾನೆ ಗೀತೆ ಮತ್ತು ಜಾನಪದ ಗೀತೆಗಳ ಮೂಲಕ ತಮ್ಮ ಪಾರಂಪರಿಕ ನಂಬಿಕೆ ಆಚರಣೆಗಳನ್ನು ಹೊರಜಗತ್ತಿಗೆ ಹೇಳಲು ಪ್ರಯತ್ನಿಸಿರುತ್ತಾರೆ. ಈ ಇರುಳಿಗ ಬುಡಕಟ್ಟು ಸಮುದಾಯದ ಮೂಲವನ್ನು ಗಮನಿಸಿದಾಗ ಸುಮಾರು ೫೦ ಸಾವಿರ ವರ್ಷಗಳ ಹಿಂದೆ ಭಾರತಕ್ಕೆ ಮೊಟ್ಟಮೊದಲು ಕಾಲಿಟ್ಟ ಘೋಟೋ, ಅಸ್ಟೋಲಾಯ್ಡ್ ಮತ್ತು ಅಸ್ಟ್ರೋ ಏಷಿಯಟಿಕ್ಸ್ ಎಂದು ಕರೆಯುವ ಲಿಂಗ ಸಂಸ್ಕೃತಿಯ ಜನಾಂಗಕ್ಕೆ ಸೇರಿದವರೇ ಆಗಿದ್ದಾರೆ ಎಂಬುದು ಗೊತ್ತಾಗುತ್ತದೆ. ಏಕೆಂದರೆ ಇವರು ಕೂಡ ಪೂರ್ವಿಕ ಪಿತೃವಿನ ಆರಾಧಕರಾಗಿದ್ದ ನಿರ್ದಿಷ್ಟ ಸಂಪ್ರದಾಯವಿಲ್ಲದ ನಿರಾಕಾರವಾದ ದೈವದ ಕಲ್ಪನೆಯನ್ನು ಹೊಂದಿದ್ದಾರೆ. ಲಿಂಗ ಮತ್ತು ಶಿವನು ಬೇರೆ ಬೇರೆ, ಲಿಂಗವು ನಮ್ಮ ಹತ್ತಿರ ಇತ್ತು. ನಂತರ ಕಸಿದುಕೊಳ್ಳಲಾಯಿತು ಎಂಬುದನ್ನು ತನ್ನದೇ ಆದ ಐತಿಹ್ಯಗಳ ಮೂಲಕ ಸಮಾಜಕ್ಕೆ ಲಿಂಗದ ವಾರಸುದಾರತ್ವವನ್ನು ಹೇಳಲು ಪ್ರಯತ್ನಿಸುತ್ತಾರೆ.

ಈ ಮೇಲಿನ ಐತಿಹ್ಯಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ತೀರ ಇತ್ತೀಚಿನವುಗಳು ಎಂಬಂತೆ ಕಂಡುಬಂದರೂ ತಮ್ಮ ಪಾರಂಪರಿಕವಾದ 'ಲಿಂಗ'ದ ವಾರಸುದಾರಿಕೆಯನ್ನು ಹೇಳುತ್ತಿವೆ. ಮಾದಪ್ಪ ಬರುವುದಕ್ಕಿಂತ ಮುಂಚೆಯಿಂದಲೂ ನಮ್ಮ ಹತ್ತಿರ ಲಿಂಗವಿದ್ದು, ಮಾದಪ್ಪನಿಗೂ ನಾವೇ ಲಿಂಗ ಕೊಟ್ಟಿದ್ದು ಎಂಬುದು ಚರ್ಚೆಗೆ ಗ್ರಾಸವಾಗಿದೆ. "ಒಂದು ಸಮುದಾಯ ತನ್ನ ಚರಿತ್ರೆಯನ್ನು ಬರವಣಿಗೆಗೆ ಗೊತ್ತಿಲ್ಲದ ಸಂದರ್ಭದಲ್ಲಿ ಐತಿಹ್ಯ ಪುರಾಣಗಳ ಮೂಲಕ ನೆನಪಿಟ್ಟುಕೊಂಡು ತಲೆತಲಾಂತರದವರೆಗೂ ಉಳಿಸಿಕೊಂಡು ಬಂದಿರುತ್ತದೆ. ಇದೇ ರೀತಿಯಲ್ಲಿ ಇರುಳಿಗ ಬುಡಕಟ್ಟಿನವರು ತಮ್ಮಲ್ಲಿದ್ದ ಲಿಂಗವನ್ನು ಆಹಾರದ ಕಾರಣಕ್ಕಾಗಿ ಅಂದರೆ ಮೀನು ತಿನ್ನುವುದಕ್ಕಾಗಿ ಕಳೆದುಕೊಂಡಿರುವುದಾಗಿ ಹೇಳುತ್ತಾರೆ. ಮತ್ತೊಂದು ಕಡೆ ತೊರೆ(ನದಿ) ದಾಟಬೇಕಾದ ಸಂದರ್ಭದಲ್ಲಿ ತಮ್ಮಲ್ಲಿದ್ದ ಲಿಂಗವನ್ನು ಕಳೆದುಕೊಂಡ ಬಗ್ಗೆ ಹೇಳುತ್ತಾರೆ. ಇರುಳಿನ ಮೂಲದ ಬಗೆಗಿನ ಪುರಾಣದಲ್ಲಿಯೂ ಕೂಡ ತೊರೆಯ ಪ್ರಸ್ತಾಪ ಬಂದು ಸೋರೆ ಬುರುಡೆಯಲ್ಲಿ ಕುಳಿತು ಜೀವ ಉಳಿಸಿಕೊಂಡಿದ್ದರ ಬಗ್ಗೆ ಹೇಳುತ್ತಾರೆ. ಈ ಹಿನ್ನೆಲೆಯಿಂದ ಇರುಳಿಗರು ತನ್ನ ಲಿಂಗಕಾರದ ಪೂರ್ವಿಕ ಪಿತೃತ್ವವನ್ನು ನದಿ ದಾಟುವ ಸಂದರ್ಭದಲ್ಲಿ ಕಳೆದುಕೊಂಡಿರುವ ಸಾಧ್ಯತೆಗಳಿವೆ. ಈ ನದಿಯು ಎರಡು ವಿಭಿನ್ನ ಸಂಸ್ಕೃತಿಗಳನ್ನು ವಿವರಿಸುತ್ತದೆ. ಅಂದರೆ ನದಿಯ ಭಾಗದಲ್ಲಿ ಮಾಂಸ ಆಹಾರವು ಲಿಂಗವು ಜೊತೆ ಜೊತೆಯಾಗಿದ್ದು, ನದಿಯ ಭಾಗದಲ್ಲಿ ಮಾಂಸ ಆಹಾರವು ಲಿಂಗವು ಬೇರೆ ಬೇರೆ ಎಂಬ ಭಾವನೆ ಉಂಟಾಗಿದೆ. ಲಿಂಗವನ್ನು ಹಾಕಿಕೊಂಡವರು ಮಾಂಸ ತಿನ್ನುವಂತಿಲ್ಲ ಎಂಬುದು ವೀರಶೈವ ಪಂಥದ ಪ್ರತೀತಿ. ಆದರೆ ಲಿಂಗವನ್ನು ಕಳೆದು ಮಾಂಸವನ್ನು ತಿನ್ನಬಹುದು ಎಂಬುದು ಇರುಳಿಗರ ಪ್ರತೀತಿ. ಮಾದಪ್ಪನೇ ಇವರಿಗೆ ಲಿಂಗ ದೀಕ್ಷೆ ಮಾಡಿ, ಅವನು ದೃಢ ಪರೀಕ್ಷೆ ಮಾಡಲು

ಅಥವಾ ಇರುಳಿಗರಿಂದ ಲಿಂಗವನ್ನು ಕಿತ್ತುಕೊಳ್ಳುವ ಹುನ್ನಾರದಿಂದಲೇ ಈ ಕಾರ್ಯಕ್ಕೆ ಕೈ ಹಾಕಿದ್ದಾನೆಯೇ ಯೋಚಿಸಬೇಕಾಗಿದೆ. ಏಕೆಂದರೆ ಇರುಳಿಗರು ಮೂಲತಃ ಬೇಟೆ ಸಂಸ್ಕೃತಿಯ ಜನ. ಇವರ ಆಹಾರ ಪದ್ಧತಿಯು ನಿರಂತರ ಮಾಂಸವೇ ಆಗಿರುತ್ತದೆ. ಹಾಗಿದ್ದರೂ ಮಾದಪ್ಪ ಇವರಿಗೆ ಲಿಂಗ ಕಟ್ಟುವ ಅನಿವಾರ್ಯತೆ ಇರಲಿಲ್ಲ. ಜೊತೆಗೆ ಇರುಳಿಗರು ಮಾದಪ್ಪನನ್ನು ತಮ್ಮ ಐತಿಹ್ಯಗಳಲ್ಲಿ ಮಾದಿಗ ಸಮುದಾಯದವರೆಂದು ಹೇಳುತ್ತಾರೆ. ಇರುಳಿಗರ ಕೆಲವು ಕತೆಗಳಲ್ಲಿ ಇರುಳಿಗರು ಮಾದಪ್ಪನವರ ಪ್ರಸಾದದಿಂದ ಹುಟ್ಟಿದ ಕಾರಯ್ಯನ ವಂಶಸ್ಥರು ಎಂದು ಹೇಳುತ್ತಾರೆ. ಆದರೆ ಮಾದಪ್ಪ ಸಂಕಮ್ಮನ ಮನೆಯ ದೇವರಾಗಿರುತ್ತಾನೆ. ಹಾಗಾದರೆ ಸೋಲಿಗರ ಸಂಕಮ್ಮನ ಮಕ್ಕಳಾದ ಕಾರಯ್ಯ ಇರುಳಿಗರ ಮೂಲ ವಂಶದವನಾಗಲೂ ಹೇಗೆ ಸಾಧ್ಯ. ಲಿಂಗಾಯಿತರು ಇರುಳಿಗರಲ್ಲಿರುವ ಲಿಂಗವನ್ನು ಕದ್ದು ಹಾಕಿಕೊಂಡಿದ್ದರಿಂದ ಲಿಂಗಾಯಿತ ರಾದರು. ಈ ಲಿಂಗಾಯಿತರು ಎಂಬುದನ್ನು ಮೇಲೆ ಚರ್ಚಿಸಲಾಗಿದೆ. ಇರುಳಿಗರ ಲಿಂಗವನ್ನು ಕಸಿದುಕೊಂಡ ಲಿಂಗಾಯಿತರು ಬೇಡಗಂಪರು ಎಂದು ಮೇಲೆ ತಿಳಿಸಲಾಗಿದೆ. "ನಮ್ಮಪ್ಪನ ಕಾಲದಿಂದ ನಾವು ಯಂಟ್ರೋಣ ಸ್ವಾಮಿಯ ಒಕ್ಕಲು, ತಲಾತಲಾಂತರದಿಂದ ನಾವು ಅದಕ್ಕೆ ನಡ್ಕೊಳ್ಳುತ್ತ ಇದೀವಿ. ವರ್ಷಕೊಮ್ಮೆ ಕೋಳಿ ಕೊಯ್ದು ವೆಂಕ್ರೋನ್ ಸ್ವಾಮಿಗೆ ಎಡೆ ಇಡ್ತೀವಿ. ನಮ್ಮ ವಂಶದಲ್ಲಿರೊರೆಲ್ಲರು ಹೆಸರಿಡಬೇಕಾದ್ರೆ 'ಯಂಕ್ಟ, ವೆಂಕ್ಟಿ, ಯಂಟ್ಸಾಮಿ, ವೆಂಕಸ್ವಾಮಿ, ಯಂಕ್ಟಿ ಎಂಬ ಹೆಸರನ್ನು ಇಟ್ಕುಂಡು ಬತ್ತಿದಿವೆ' ತಿರುಪತಿ ತಿಮ್ಮಪ್ಪ, ಶ್ರೀನಿವಾಸ ಎಂಬದು ನಮಿಗೆ ಗೊತ್ತಿಲ್ಲ, 'ನಮ್ ದೇವ್ರು ಯಂಕ್ಟೋನ್‌ಸ್ವಾಮಿ" ಇವನ್ನ ಅಂಗೆಲ್ಲಾ ಕರಿತಿರಬೇಕು.[೨೬] ತಿರುಪತಿಯಲ್ಲಿರುವುದು ಯಂಕ್ಟ್ರೋನ್ ಸ್ವಾಮಿ ಎಂದು ನಂಬಿಕೊಂಡಿದ್ದಾರೆ. ಇಲ್ಲಿನ ತಿಮ್ಮಪ್ಪ ಶ್ರೀನಿವಾಸ ಎಂಬ ಹೆಸರು ಇವರಲ್ಲಿ ಅಷ್ಟು ಪರಿಚಿತವಿಲ್ಲ. ಏಕೆಂದರೆ ಪಾರಂಪರಿಕ ಕಾಲದಿಂದಲೂ ತಮ್ಮ ಸಮುದಾಯ ನಡೆದುಕೊಳ್ಳುತ್ತಿರುವುದನ್ನು ಹೇಳುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಲಕ್ಷ್ಮಿಪತಿ ಕೋಲಾರ ಅವರು ಹೀಗೆ ಹೇಳುತ್ತಾರೆ. "ಪ್ರಾಚೀನ ಕಾಲದಲ್ಲಿ 'ವೇಂಗೈ' ಎಂಬ ಮರದ ತುಂಡಿನಿಂದ 'ಲಿಂಗ'ವನ್ನು ಮಾಡುತ್ತಿದ್ದರಂತೆ. ಅದನ್ನು ಅಟುಂಬು ಎಂಬ ವೃಕ್ಷದ ಕೆಳಗಿಟ್ಟು ಪೂಜೆ ಮಾಡುತ್ತಿದ್ದರು ಆದ್ದರಿಂದ ಆ ಲಿಂಗಕ್ಕೆ ವೇಂಗೈಪತಿ, ವೆಂಕಣಪತಿ ಎಂದು ಕರೆಯುತ್ತಾರೆ". ಈ ಮೇಲಿನ ಐತಿಹ್ಯ ಮತ್ತು ಲಕ್ಷ್ಮಿಪತಿ ಕೋಲಾರ ಅವರ ಮಾತನ್ನು ಗಮನಿಸಿದಾಗ ಇರುಳಿಗ ಬುಡಕಟ್ಟು ಸಮುದಾಯವು ಮಾದಪ್ಪನಿಂದ ಲಿಂಗಧಾರಣೆ ಮಾಡಿಸಿಕೊಂಡಿಲ್ಲ. ಹಾಗೆಯೇ ಐತಿಹ್ಯ ಹೇಳುವಂತೆ ಮಾದಪ್ಪನಿಗಿಂತ ಮೊದಲೇ ಇವರಲ್ಲಿ ಲಿಂಗವಿತ್ತು. ಅದು ಅವರ ಪೂರ್ವಿಕರಿಂದ ಬಂದಂಥ ಪಿತೃವಿನ ಸಂಕೇತವಾಗಿರಬೇಕು. ಇರುಳಿಗರು ಇಂದಿಗೂ ಪೂಜಿಸುವ ದೇವರುಗಳೆಲ್ಲರೂ ಅವರ ಪೂರ್ವಿಕ ಪಿತೃಗಳೇ ಆಗಿದ್ದಾರೆ. ಮದ್ದೂರಮ್ಮ, ಬಾಣಂತಿಮಾರಮ್ಮ ಮುಂತಾದವರು ಇವರ ಪೂರ್ವಿಕ ಪಿತೃಗಳೆಂದರೆ, ಇರುಳಿಗರು ಮೂರು ನಾಲ್ಕು ಗುಂಡುಕಲ್ಲುಗಳನ್ನು ಇಟ್ಟು ಪೂಜಿಸುತ್ತಾರೆ. ಇದೇ ರೀತಿಯ ಪೂಜಿಗ

ವಿಧಾನ ಬಗ್ಗೆ ಲಕ್ಷ್ಮೀಪತಿ ಕೋಲಾರ ಅವರು ವಿವರಿಸುತ್ತಾರೆ. ಆಫ್ರಿಕಾದ ಕೀನ್ಯ ದೇಶದಲ್ಲಿನ ಮೌಂಟ್ ರೇ ಕ್ಯಾನ್ಸ್ ಎಂಬ ಬೆಟ್ಟದ ದೈವವಿದ್ದು, ಇದನ್ನು ಇಲ್ಲಿನ ಗಿಗಿಯ ಜನರು ಪೂರ್ವಿಕ ಪಿತೃ ಎಂದು ಪೂಜಿಸುತ್ತಾರೆ. ಇಲ್ಲಿಯೂ ಈ ದೇವರಿಗೆ ಯಾವುದೇ ಆಕಾರವಿಲ್ಲ. ಒಂದು ಗುಂಡು ಕಲ್ಲನ್ನು ದೇವರಾಗಿ ಪೂಜಿಸುತ್ತಾರೆ. ತಿರುಪತಿ ಎನ್ನುವ ಹೆಸರೇ ಸೂಚಿಸುವಂತೆ 'ತಿರು' ಎಂಬುದು ತಮಿಳಿನ ಪದ, 'ಪತಿ' ಎನ್ನುವುದು ಸಂಸ್ಕೃತ ಪದ ಹೇಗೆ ಹೊಂದಾಣಿಕೆಯಾಗಲು ಸಾಧ್ಯ. ಹಾಗಾಗಿ ತಿರುಪತಿಯ ಮೂಲ ಹೆಸರು ತಿರುಪತ್ತಾಯ್. ತಿರು ಎಂದರೆ ಶ್ರೀ ಅಥವ ಪವಿತ್ರ, ಪತ್ತಾಯ್ ಎಂದರೆ "ಕಂಡೋನ್ಮೆಂಟ್". ಮುರುಗನ್ 'ಪವಿತ್ರ' ಪತ್ತಾಯ್ ಎಂದರೆ ಆಯುಧ ಪಿತ ಇರುವ ಸ್ಥಳ. ಶ್ರೀಲಂಕದಲ್ಲಿ ಇವತ್ತಿಗೂ ಕರತಗಾಮ ಎಂಬ ಗ್ರಾಮದಲ್ಲಿ ಅತೀ ಪ್ರಾಚೀನವಾದ ಮುರುಗನ್ ದೇವಾಲಯವಿದೆ. ಅದನ್ನು ಈಗಲೂ ತಿರುಪತ್ತಾಯ್ ವೀಟು ಎಂದೇ ಕರೆಯುತ್ತಾರೆ. ಇದನ್ನು ಸಿಂಪಲ್ ಆಗಿ ಪತ್ತಾಯ್ ವಿಟ್ಟು ಎಂದು ಕರೆಯುತ್ತಾರೆ.[೨೭]

ತಿರುಪತಿಯಲ್ಲಿರುವುದು ಕೂಡ ಮುರುಗನೇ ಆದರೆ ರಾಮಾನುಜರ ಕಾಲದಲ್ಲಿ ಅದಕ್ಕೆ ಶಂಕು, ಚಕ್ರಗಳು ಬಂದು ವೈಷ್ಣವೀಕರಿಸಲಾಯಿತು. ಉಡುಪಿಯ ಕೃಷ್ಣನು ಕೂಡ ಮುರುಗನೇ. ಏಕೆಂದರೆ ಸಮಬಂಗಿಯಲ್ಲಿರುವ ಕೃಷ್ಣನ ವಿಗ್ರಹ ಉಡುಪಿಯಲ್ಲಿ ಬಿಟ್ಟರೆ ಭಾರತದ ಯಾವ ಭಾಗದಲ್ಲಿಯೂ ಕಂಡುಬರುವುದಿಲ್ಲ. ಕೃಷ್ಣನನ್ನು ತಿದ್ದಬೇಕಾದರೆ ಶಿಲ್ಪಶಾಸ್ತ್ರಜ್ಞರ ಪ್ರಕಾರ ತ್ರಿಭಂಗಿಯಲ್ಲಿ ತಿದ್ದಬೇಕು, ಅವನಿಗೆ ಕಡೆಗೋಲು, ನವಿಲುಗರಿ ಮುಂತಾದ ಹತ್ತು ಹಲವು ಆಭರಣಗಳಿರಬೇಕು. ಆದರೆ ಕೇವಲ ಲೀಲೆ ಇರುವ ಉಡುಪಿ ಕೃಷ್ಣ ಮುರುಗನ್ ಆಗಿದ್ದಾನೆ.

ಭಾರತದ ಪ್ರಾಚೀನ ದೇವರುಗಳ ಪ್ರದೇಶಗಳು ಯಾವ್ಯಾವು ಇದೆಯೋ ಅವೆಲ್ಲ ಒಂದು ಕಾಲಕ್ಕೆ ಮುರುಗನದ್ದೇ ಆಗಿದ್ದವು. ಒಂದು ಕಾಲಘಟ್ಟದಲ್ಲಿ ಮುರುಗನ್ ಸಂಸ್ಕೃತಿ ಇಡೀ ಭಾರತದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಅಗ್ನಿ ಮತ್ತು ಶಿವ ಸಂಸ್ಕೃತಿಗಳ ಆಕ್ರಮಣದಿಂದ ಲಿಂಗ ಸಂಸ್ಕೃತಿಯ ಬುಡಕಟ್ಟುಗಳು ತಮ್ಮ ಪಾರಂಪರಿಕ ಆಚರಣೆ ಮತ್ತು ನಂಬಿಕೆಯ ಪೂರ್ವಿಕ ಪಿತೃವನ್ನು ಕಳೆದುಕೊಳ್ಳುವಂತಾಯಿತು. ಒಟ್ಟಾರೆಯಾಗಿ ಬುಡಕಟ್ಟುಗಳು ಈ ನೆಲದ ಯಾವುದೇ ಪ್ರಧಾನ ಸಂಸ್ಕೃತಿಗಾಗಲಿ, ಧರ್ಮಕ್ಕಾಗಲಿ ಸೇರಿದವರಲ್ಲ, ಅವರಿಗೆ ಅವರದ್ದೇ ಆದ ಧರ್ಮವಿದೆ. ಅವರಿಗೆ ಅವರದ್ದೇ ಆದ ಸಂಸ್ಕೃತಿ, ನಂಬಿಕೆ, ಆಚರಣೆಗಳಿವೆ. ಪ್ರಧಾನ ಸಂಸ್ಕೃತಿಯನ್ನು ಎದುರಿಸಿ ಸ್ಪರ್ಧಿಸಿ ಎದುರಿಸಲಾಗದೇ ಇವರುಗಳು ಪ್ರಧಾನ ಸಂಸ್ಕೃತಿಯ ಮೇಲರಿಮೆಯನ್ನು ಒಪ್ಪಿಕೊಂಡು ಶರಣಾಗಿ ಪ್ರಧಾನ ಸಂಸ್ಕೃತಿಯ ಜೊತೆ ಕೂಡಿಕೊಂಡು ಅವರೊಡನೆ ಅವರಂತೆಯೇ ಬದುಕುತ್ತಿದ್ದಾರೆ.

ಇಂದು ಇರುಳಿಗರ ನಂಬಿಕೆ ಆಚರಣೆಗಳು ಮೇಲುನೋಟಕ್ಕೆ ಶೈವ, ವೈಷ್ಣವ ಪಂಥದಂತೆ ಕಂಡುಬಂದರು ಇವರದ್ದೇ ಆದ ಧರ್ಮ ಪಂಥವಿದೆ ಎಂಬುದು ಗೊತ್ತಾಗುತ್ತದೆ. ಇರುಳಿಗ

ಬುಡಕಟ್ಟು ಸಮುದಾಯವು ಇಂದೂ ಅಗ್ನಿ ಮತ್ತು ಶಿವ ಸಂಸ್ಕೃತಿಯ ಪ್ರಭಾವದಿಂದ ತಮ್ಮ ತಮ್ಮಲ್ಲಿ ದಾಸರುಗಳನ್ನು, ಗುಡ್ಡರುಗಳನ್ನು ಮಾಡಿಕೊಂಡು ದಾಸರು ಅಗ್ನಿ(ವೈಷ್ಣವ) ಸಂಸ್ಕೃತಿಗಳಿಗೆ ನಡೆದುಕೊಳ್ಳುತ್ತಾರೆ. ಹಾಗೆಯೇ ಗುಡ್ಡರು ಶಿವ(ಶೈವ) ಸಂಸ್ಕೃತಿಗಳಿಗೆ ನಡೆದುಕೊಳ್ಳುತ್ತಿದ್ದಾರೆ. ಇದು ಬಲಿಷ್ಠ ಸಂಸ್ಕೃತಿಯ ಮೇಲರಿಮೆಯನ್ನು ಒಪ್ಪಿಕೊಂಡಿರುವುದೇ ಆಗಿದೆ.

ಅಲ್ಪಸಂಖ್ಯಾತರಾದ ಇರುಳಿಗರು ಪ್ರಧಾನ ಸಂಸ್ಕೃತಿಯ ಜೊತೆ ಸ್ಪರ್ಧಿಸಲಾರದೇ ಪ್ರಧಾನ ಸಂಸ್ಕೃತಿಯ ತೆಕ್ಕೆಗೆ ಸೇರಿಕೊಂಡಿದ್ದಾರೆ. ಇರುಳಿಗರದ್ದು ಪಾರಂಪರಿಕ ಸಂಸ್ಕೃತಿಯ ಸಮುದಾಯವಾಗಿದ್ದು ಇವರ್‍ಯಾರು ಹಿಂದೂಗಳಲ್ಲ ಅಥವಾ ಹಿಂದು ಪ್ರಬಲ ಸಂಸ್ಕೃತಿ ಎಂದು ಗುರುತಿಸುವ ಅಗ್ನಿ ಮತ್ತು ಶಿವ ಸಂಸ್ಕೃತಿಗೆ ಸೇರಿದವರಲ್ಲ.

ಐತಿಹ್ಯ ೧೦

ನಮ್ಮೋದೋ ಈರೇಗೌಡನ ದೊಡ್ಡಿ ಅಂತ ಒಂದು ಊರಿದೆ. ಅಲ್ಲಿ ನಮ್ಮ ಜನರು ಇದ್ದಾರೆ ಅದು ಮುದುವಾಡಿಯ ಅತ್ರ ಬರುತ್ತದೆ. ಅಲ್ಲಿದ್ದೋರೆಲ್ಲಾ ಬರೀ ಬೇಟೆನೆ ಆಡೋದು ಒತ್ತಾರೆ ಎದ್ರು ಅಂದ್ರೆ ಇಲಿ ಬುಂಡೆ ಆರೆಕೋಲು ಗುದ್ಲಿ ಸನ್ಕೆ ತಕೋಂಡು ಕಾಡ್ಗೆ ಹೊರಟರಂದ್ರೆ ಏನಾದ್ರು ಬೇಟೆ ಆಡ್ಕೊಂಡೆ ಬರೋದು ಹಿಂಗೆ ನಮ್ ತಾತನ್ ತಾತನೋರ ಕಾಲ್ದೇಲಿ ಕಾಟಯ್ಯ ಅನ್ನೋನು ಇವತ್ತಿನ ರೇವಣೊಪ್ಪನ ಬೆಟ್ಟ ಇದೆಯಲ್ಲಾ ಅದರ ಕೆಳಗಡೆ ಒಂದು ಕೊಣ ಇದೆ ಅದರತ್ರ ದಿನ ಒಂದು ಜಿವಾಜಿ(ಉಡ) ಬಂದು ಮೇಯೋದಂತೆ ಎಷ್ಟೆಷ್ಟೊ ದಿನ ಹಿಡಿಬೇಕೆಂದು ಪ್ರಯತ್ನ ಪಟ್ರು ಸಿಕ್ತಾನೆ ಇಲ್ವಂತೆ ಇವನಿಗೂ ಕ್ವಾಪ ಅತ್ಬುಡ್ತು ಕಾಡೆಲ್ಲಾ ಅಲೆದ್ರು ಒಂದು ಜೇನು ಗೆಡ್ಡೆಗೆಣಸು ಏನು ಸಿಕ್ಕಿಲ್ಲಾ ಯಾಂಗಾದರೂ ಮಾಡಿ ಈ ಉಡಾನ ಇವತ್ತು ಹಿಡಿಯಲೇ ಬೇಕೆಂದು ಕಾದುಕುಂತ್ಕೊ ಬುಟ್ಟ ಆ ಉಡ ಎಂದಿನಂತೆ ಬಂದು ಮೇಯ್ತ ಇತ್ತು ಇವನು ಮೆಲ್ಲಗೆ ಹಿಡಿಯಲು ಹೋದ ಉಡ ಏನ್ ಮಾಡ್ತು ಆ ಬೆಟ್ಟದ ತಿಬ್ಲೆ(ಬಂಡೆಯ ಮೇಲೆ) ಹತ್ತಕ್ಕ ಸುರು ಮಾಡ್‌ಬುಡ್ತು ಇವ್ನು ಏನಾದ್ರು ಹಿಡಿಲೇಬೇಕೆಂದು ಆ ಬಂಡೆಯ ಮೇಲೆ ಮುಂದೆ ಹಂಬು ಹಬ್ಬಿತ್ತಲ್ಲಾ ಅದನ್ನು ಹಿಡಿದುಕೊಂಡು ಉಡದ ಹಿಂದೆನೆ ಹತ್ತುಬಿಟ್ಟ ಆ ಉಡ ಬೆಟ್ಟದ ನೆತ್ತಿಲಿರುವ ಗುಹೆಗೆ ಹೋಯಿತು. ಇದನ್ನು ಬೆಂಬಿಡದ ನಮ್ಮೋನು ಉಡದ ಹಿಂದೆನೆ ಗವಿಯ ಒಳಗೆ ಹೋದ ಆ ಉಡ ಸಿದಾ ರೇವಣ್ಣಪ್ಪನ ಹತ್ತಿರ ಹೋಗಿ ಸೆರ್‍ಕೊಬುಡ್ತು ಇವ್ನು ಅವರ್‍ನಾ ನೋಡ್ಲೇ ಇಲ್ಲ ಉಡನ ಹಿಡಿಯೋಕೆ ಮುಂದಾದ ಆಗ ಸ್ವಾಮಿ ಏ ನರಮನ್ಸ ಅದು ನನ್ನ ವಾಹನ ಅದನ್ನಾ ಬಿಟ್ಟು ಬಿಡು ನಿನಗೆ ಬೇಕಾದಷ್ಟು ಚಿನ್ನವನ್ನು ತಗೋಂಡು ಹೋಗು ಎಂದು ಚಿನ್ನ ಬಿದ್ದಿದ್ದ ರಾಶಿಯ ಕಡೆ ಕೈತೋರಿಸಿದರಂತೆ ಈ ಚಿನ್ನ ತಗೋಂಡೋಗಿ ಚೆನ್ನಾಗಿ ಬದ್ಕು ಕೆರೆ ಕಟ್ಸು, ಬಾವಿಕಟ್ಸು ಬೇಕಾದಂಗೆ ಬದ್ಕು ಆದರೆ ನಾನು ಇಲ್ಲಿರೋ ವಿಷ್ಯ ಮಾತ್ರ ಯಾರ್ಗು ಹೇಳಬೇಡ ಹಾಗೊಮ್ಮೆ ಮಾತು ತಪ್ಪಿ ಹೇಳಿಬಿಟ್ರೆ

ನಿನ್ನ ಸಾಸಾಣ" ಆಗುತ್ತೆ ಎಂದು ಹೇಳಿಕಳಿಸಿದರಂತೆ ಅದರಂತೆ ಇವನು ತನ್ನಲ್ಲಿದ್ದ ತುಂಡು ಬಟ್ಟೆಯ ಒಳಗೆ ಎಷ್ಟು ಹಿಡಿಸುತ್ತದೆಯೋ ಅಷ್ಟನ್ನು ತುಂಬುಕೊಂಡು ಬಂದು ಇವಯ್ಯನ ಮಾತನ್ನು ಯ್ಯಾಂಗೆ ನಂಬೋದು ಎಂದು ಒಂದು ಎತ್ತರ ಕಲ್ಲಿನ ಮೇಲೆ ನಿಂತು ತೂರಿಬಿಟ್ನಂತೆ ಗಾಳಿಗೆ ಎಲ್ಲಾ ಚಿನ್ನದ ನಾಣ್ಯಗಳು ತೂರಿಹೋಗಿ ಒಂದೇ ಒಂದು ನಾಣ್ಯ ಮಾತ್ರ ಕಲ್ಲಿಡೆಲಿ ತಗಳಾಕೊಂಡಿತ್ತಂತೆ ಆಗ ಎಲಾ ಅವಯ್ಯ ನಂಗೆ ಮೋಸ ಮಾಡಿ ಬಿಟ್ನಲ್ಲಾ ಬರಿ ಜಳ್ಳನೆ ಕೊಟ್ಟಿದ್ದಾನೇ ಅಂತ ಮತ್ತೆ ಸ್ವಾಮಿ ಮುಂದೆ ಹೋಗಿ ಸ್ವಾಮಿ ನೀವು ನಂಗೆ ಇಂತ ಮೋಸ ಮಾಡಬಹುದಾ ನಂಗೆ ಎಲ್ಲಾ ಜಳ್ಳು ಕೊಟ್ಟಿದ್ದಿರಲ್ಲಾ ಸರೀನಾ ಎಂದು ಕೇಳಿದನಂತೆ ಅದಕ್ಕೆ ಸ್ವಾಮಿ ಎಲಾ ದಡ್ಡ ಯಾರಾದ್ರು ಚಿನ್ನಾವ ತೂರ್ತಾರ ತಗೋ ಈ ಗಟ್ಟಿಕಾಸನೇ ಅಂತೇಳಿ ಮತ್ತಷ್ಟು ಚಿನ್ನದ ಹಣ ಕೊಟ್ನಂತೆ ಆಗ ಮನೆಗೆ ಬಂದ ಕಾಟಯ್ಯ ಮನೆಗೆ ಬೇಕಾದ ದವಸ ಧಾನ್ಯವನ್ನು ತಂದ. ಆಗ ಅವನ ಹೆಂಡ್ತಿ ಚಿನ್ನದ ಗಂಟನ್ನು ನೋಡಿ ಎಲ್ಲಿಂದ ತಂದ್ರಿ ಎಂದೂ ಕೇಳೋಕೆ ಸುರು ಮಾಡ್‌ಬುಟ್ಲು ಅವನು ನಿಂಗ್ಯಾಕೆ ನೀನು ಬೇಕಾದಂಗೆ ಇರು. ಎಲ್ಲಿಂದ ಬಂತು ಗಿಂತು ಅಂತ ಕೇಳ್ಬೇಡ ಅಂತ ಗದರಿಸಿದ. ಹೆಂಡತಿಗೆ ಕುತೂಹಲ ತಿಳ್ಕೊಬೇಕು ಅಂತ. ಇವರ ವೈಭೋಗನೆಲ್ಲ ನೋಡಿದ ಅಕ್ಕಪಕ್ಕದವರೆಲ್ಲಾ ಹೆಂಡತಿ ನೀರಿಗೆ ಹೋದಾಗಲೆಲ್ಲ ಕೇಳೊಕೆ ಸುರು ಮಾಡಿದ್ರು ಇವಳಿಗೆ ಕ್ವಾಪ ಹತ್ತಿಬಿಟ್ತು. ಗಂಡನ ಎಲ್ಲಿ ತಂದ್ರಿ ಕದ್ದುಕೊಂಡು ಬಂದಿರಾ ಅಥವಾ ಯಾರ್ ತಲೆ ಹೊಡೆದು ತಂದ್ರಿ ಅಂತ ಏಳ್‌ಬೇಕು ಇಲ್ಲ ಅಂದರೆ ಈ ಕುಡುಗೋಲಿನಿಂದ ಕತ್ತು ಕೊಯ್ಕೊತಿನಿ ಅಂತ ಕತ್ತಿಗೆ ಕುಡುಗೋಲನ್ ಇಟ್ಕೊಂಡು ನಿಂತ್ಕೊಂಡ್ಳು ಆಗ ಗಂಡ ಏನೂ ತೋಚದೆ ಆ ಬೆಟ್ಟದ್ ಮೇಲೆ ರೇವಣಪ್ಪ ಅಂತ ಇದಾರೆ ಅಂದನಂತೆ. ಅವನ ತಲೆ ಸಾಸಣ ಆಗಿ ಬಿದ್ತಂತೆ ಈ ವಿಷ್ಯ ತೆಂಗಿನಕಲ್ ರಾಜನಾದ ಚಾಮರಸನಿಗೆ ಗೊತ್ತಾಗಿ ಸ್ವಾಮಿನ ಕರೆದು ಗೌರವಿಸಿ ಪೂಜಿಸಿ ಅಲ್ಲಿ ಗುಡಿಕಟ್ಟಿಸಿಕೊಟ್ನಂತೆ ಈ ಕಾಟಯ್ಯನ ನೆನಪಿಗಾಗಿ ಅಲ್ಲಿ ಕಾಟಯ್ಯ ಶಿಲೆ ಕೆತ್ತಿಸಿದ್ದಾನೆ ಅದು ಬೆಟ್ಟ ಹತ್ತಲು ಪ್ರಾರಂಭಿಸುವ ಮೆಟ್ಟಿಲ ಪಕ್ಕದಲ್ಲಿ ಇಂದಿಗೂ ಇದೆ.[೨೮]

ಈ ಐತಿಹ್ಯವು ೧೨ ರಿಂದ ೧೩ ನೇ ಶತಮಾನಕ್ಕೆ ಸಂಬಂಧಪಟ್ಟಿದ್ದಾಗಿ ಕಂಡು ಬರುತ್ತದೆ. ಉತ್ತರ ರಾಜ್ಯದಲ್ಲೂ ಬಸವ ಕ್ರಾಂತಿಯಾದ ಮೇಲೆ ಅಥವಾ ಬಸವಣ್ಣನ ಕೊಲೆಯಾದ ಮೇಲೆ ಅವನ ಅನುಯಾಯಿಗಳು ತಲೆಮರೆಸಿಕೊಳ್ಳಲು ದಕ್ಷಿಣಕ್ಕೆ ಪಲಾಯನ ಬಯಸಿ ಯಾರಿಗೂ ಕಾಣದೆ ಹೀಗೆ ಗುಹೆ ಕಂದರಗಳಲ್ಲಿ ವಾಸಿಸುತ್ತಿದ್ದರು. ಅಪ್ಪಟ ಅರಣ್ಯವಾಸಿಗಳಾದ ಇರುಳಿಗರು ಬೇಟೆಯ ಸಂದರ್ಭದಲ್ಲಿ ಇವರನ್ನು ಕಂಡುಹಿಡಿದಿದ್ದಾರೆ ಎನ್ನಬಹುದು. ಏಕೆಂದರೆ ಯಾರಿಗೂ ಹೇಳಬೇಡ ಎನ್ನುವ ಮಾತು ಮರೆಮಾಚಿಕೊಂಡಿದ್ದರ ಸಂಕೇತವೇ ಆಗಿರುತ್ತದೆ. ಇರುಳಿಗರಿಗೆ ಈ ರೀತಿಯಲ್ಲಿ ಹಲವಾರು ಸಂತರು ಶರಣರು ಎದುರಾಗಿದ್ದಾರೆ. ರಾಮಾನುಜರು ಮಾದಪ್ಪ, ಸಿದ್ದಶರಣರು ಹೀಗೆ ಹಲವರು ಸಿಕ್ಕಿರುವ ಬಗ್ಗೆ ಅನೇಕ ಐತಿಹ್ಯಗಳು ಸಿಗುತ್ತವೆ.

ಬೆಂಗಳೂರಿನಿಂದ ಮೈಸೂರಿಗೆ ಹೋಗುವ ಮಾರ್ಗ ಮಧ್ಯೆ ರಾಮನಗರ ಸಿಗುತ್ತದೆ. ರಾಮನಗರದಿಂದ ಕನಕಪುರಕ್ಕೆ ಹೋಗುವ ಮಾರ್ಗದ ಮಧ್ಯೆ ಆರೇಳು ಕಿ.ಮೀ. ಸಾಗಿದರೆ ಈ ರೇವಣಸಿದ್ದ ಬೆಟ್ಟ ಕಂಡು ಬರುತ್ತದೆ. ಇದು ಗುನ್ನೂರು ಹೋಬಳಿಯ ಅವೇರಳ್ಳಿಯ ಸಮೀಪದಲ್ಲಿ ಕಂಡು ಬರುತ್ತದೆ. ಇದಕ್ಕೆ ಭೀಮಾದ್ರಿ ಎಂತಲೂ ಕರೆಯುತ್ತಾರೆ. ಇತ್ತೀಚೆಗೆ ಇಲ್ಲಿ ರೇವಣ ಸಿದ್ದರ ಹಿತ್ತಾಳೆ ಮೂರ್ತಿಯು ಸಿಗುತ್ತದೆ. ಅಲ್ಲದೆ ಅಗಸ್ತ್ಯರನ್ನು ಕಂಡು ಮಲೆಯ ಪರ್ವತದಲ್ಲಿಯ ನೆಲೆಮಲೆ ಊರು ಇದೆ. ಇಲ್ಲಿಯು ಅಗಸ್ತ್ಯನಿಗೆ ಜಡೆಮುನಿ ಎಂದು ಕರೆಯುತ್ತಾರೆ. ಆ ಬೆಟ್ಟದ ಮೇಲೆ ರೇವಣಸಿದ್ಧರ ಲಿಂಗದಿಂದ ಗುರುತಿಸಲಾಗಿದೆ. ಲಿಂಗದ ಮುಂಭಾಗದಲ್ಲಿ ಜಡೆಗಳಿಂದ ಕೂಡಿದ ಮುನಿಯ ವಿಗ್ರಹವು ಕಂಡುಬರುತ್ತದೆ. ರೇವಣ ಸಿದ್ಧರು ಜಡೆ ಮುನಿಯಪ್ಪನೊಡನೆ ಇದ್ದರು ಎಂದು ವಿದ್ವಾಂಸರು ಒಪ್ಪಿಕೊಳ್ಳುತ್ತಾರೆ. 'ಈ ಜಡೆಮುನಿಯನ್ನು ಇರುಳಿಗರು ಸೋಲಿಗರು ತಮ್ಮ ಮನೆಯ ಆರಾಧ್ಯದೈವ ಎಂದು ಪೂಜಿಸಿಕೊಂಡು ಬರುತ್ತಿದ್ದಾರೆ. ವರ್ಷಕ್ಕೊಮ್ಮೆ ಕೋಳಿ ಕೊಯ್ದು ಕಾರ್ಯಮಾಡಿಕೊಂಡು ಬರುತ್ತಾರೆ. ಪ್ರಸ್ತುತ ಈ ಮೇಲಿನ ಗ್ರಾಮದಲ್ಲಿ ಜಡೆಮುನಿ ಮತ್ತು ರೇವಣಪ್ಪನವರು ಸಂಧಿಸಿರುವ ಸಾಧ್ಯತೆಗಳಿವೆ. ಇದರಿಂದಾಗಿಯೇ ಜಡೆಮುನಿಯಪ್ಪ ಮತ್ತು ರೇವಣ ಸಿದ್ಧರು ಸಹವರ್ತನವು ಚಾರಿತ್ರಿಕವಾಗಿ ನಿರ್ಧರಿಸಲಿಕ್ಕೆ ಸಹಾಯಕವಾಗುತ್ತದೆ.

ಈ ಜಡೆಮುನಿಯಪ್ಪನ ಮಗ ಅಥವಾ ಶಿಷ್ಯನಾದ ಶಾಸನೋಕ್ತ ಮುಸಕುಂದ ಮಹಾರುಸಿಯ ಜಡೆಮುನಿಯಪ್ಪನಷ್ಟೆ ಪ್ರೀತಿ, ಅಭಿಮಾನವನ್ನು ರೇವಣಸಿದ್ಧರಲ್ಲಿ ಇರಿಸಿಕೊಂಡಿದ್ದ ಆತನನ್ನು ಪಿತಮಹಾ (ಅಜ್ಜ) ಎಂದೇ ಸ್ವೀಕರಿಸಿದ್ದನು. ಇವನು ರೇವಣ ಸಿದ್ಧರ ನೆಲೆನಿಂತ ಸ್ಥಳಗಳಲ್ಲಿ ಪೂಜನೀಯ ಎಂದು ಕರೆದು ಆ ಸ್ಥಳದಲ್ಲಿ ಶಾಸನವನ್ನು ಬರೆಯಿಸಿದ್ದಾನೆ ಇದಕ್ಕೆ ಪೂರಕವೆಂಬಂತೆ ಅಲ್ಲೊಂದು ಶಾಸನ ಹಾಕಿಸಿದ್ದಾನೆ. 'ಆನಂದ ಸಂವತ್ಸರದ ಅಗೋರತ್ತಗೆ ಎಂಬ ಶಾಸನವನ್ನು ಹಾಕಿಸಿದ್ದಾನೆ. ಕ್ರಿಸ್ತಶಕ ೧೧೯೨ ರ ಶಾಸನ

ಹಜರಗವಿ ಬಗಿಲ ತೆಗೆದು ಮುಲೋ
ಕರಿನಹಿ ಪವಡವ ತೋರಿದರು
ರೇವಣಸಿದ್ಧೇಶ್ವರನ ಮಗ ಮರುಳ್

ರೇವಣಸಿದ್ಧರ ಸಮಾಜದ ಕಾಲವನ್ನು ಕಲ್ಯಾಣಿ ಚಾಲುಕ್ಯರ ಅವಧಿಯ ಕ್ರಿ.ಶ.೧೧೨೭, ಕಿಕ್ಕೇರಿ ಶಾಸನ ಕ್ರಿಶ ೧೧೫೫, ಯಂಡ್ರಾಮಿ ಶಾಸನ, ಕ್ರಿ.ಶ.೧೧೯೬ರ ಕೊಲ್ಲೂರು ಶಾಸನ, ಕ್ರಿಶ ೧೧೩೫ರ ಹೊತಗಲ್ಲು ಶಾಸನ, ಕ್ರಿ.ಶ.೧೧೭೬ರ ಏಪೂರು ಶಾಸನ, ಕ್ರಿ.ಶ.೧೧೮೭ರ ಬಹಿರತ್ರಿ ಶಾಸನ, ಕ್ರಿ.ಶ. ೧೧೮೦ರ ಕೋಲಕೂರು ಶಾಸನ, ಕ್ರಿ.ಶ. ೧೨೦೦ರ ನಡಾಲ ಮತ್ತು

ಮಳೇಜಿ ಶಾಸನ ಕ್ರಿ.ಶ.೧೩೪೬ರ ತೊಂಡವಾಡಿ ಶಾಸನ ಕ್ರಿ.ಶ.೧೩೧೩ರ ಸಿರಿವಾಳ ಶಾಸನ ಕ್ರಿ.ಶ ೧೧೮೭ ರಲ್ಲಿ ರೇವಣ ಸಿದ್ಧರ ಬೆಟ್ಟದಲ್ಲಿ ಕಂಡುಬಂದಿರುವ ಶಾಸನವಾಗಿದೆ.[೩೦]

ಒಟ್ಟಾರೆಯಾಗಿ ಈ ಮೇಲಿನ ಕಾಲಘಟ್ಟದಲ್ಲಿ ಸಿದ್ಧ ಪರಂಪರೆಯವರು ತಮ್ಮ ಪಂಥ ಪ್ರಚಾರದ ಹಿನ್ನೆಲೆಯಲ್ಲಿಯೋ ಅಥವಾ ಜೀವ ಉಳಿಸಿಕೊಳ್ಳುವ ನೆಪದಲ್ಲಿಯೋ ಕಾಡುಮೇಡು ಗವಿ, ಗುಡಾರಗಳಲ್ಲಿ ವಾಸಿಸಲಾರಂಭಿಸಿದ್ದರು. ಬೇಟೆಗಾರರಾದ ಇರುಳಿಗರಿಗೆ ಈ ಸಿದ್ಧರು ಸಿಕ್ಕಿದ್ದಾರೆಂದು ಹೇಳಬಹುದು. ಇಲ್ಲಿ ಚರ್ಚಿಸಬಹುದಾದ ಇನ್ನೊಂದು ವಿಚಾರವೆಂದರೆ ಈ ಸಿದ್ಧರುಗಳಲ್ಲಿ ಬೌದ್ಧ ಸಿದ್ಧರು, ಜೈನ ಸಿದ್ಧರು, ಶೈವ ಸಿದ್ಧರು, ನಾಥ ಸಿದ್ಧರು, ರಸ ಸಿದ್ಧರು, ಮಹೇಶ್ವರ ಸಿದ್ಧರು ಎಂಬ ಹಲವಾರು ಸಿದ್ಧರುಗಳು ಕಂಡು ಬರುತ್ತಾರೆ.[೩೧]

ಈ ಸಿದ್ಧರಲ್ಲಿ ಇರುಳಿಗರಿಗೆ ಸಿಕ್ಕಿದವರು ಯಾವ ಸಿದ್ಧರು ಎಂಬುದರ ಬಗ್ಗೆ ಸೂಕ್ತ ಮಾಹಿತಿ ಇಲ್ಲ. ಆದರೆ ಇರುಳಿಗರು ಇಂತಹ ಹಲವಾರು ಸಿದ್ಧರನ್ನು ಸಮಾಜಕ್ಕೆ ಪರಿಚಯಿಸಿರುವುದು ಸತ್ಯ. ಆದರೆ ಅ ಸ್ಥಳಗಳಲ್ಲಿ ಇರುಳಿಗರಿಗೆ ಸ್ಥಾನವಿಲ್ಲ. ಅಲ್ಲಿಂದ ಇವರನ್ನು ಹೊರ ಹಾಕಿರುವುದನ್ನು ಕಾಣಬಹುದು. ರೇವಣಸಿದ್ಧರನ್ನು ಪತ್ತೆ ಹಚ್ಚಿಸಿದ ನೆನಪಿಗಾಗಿ ಇರುಳಿಗನಾದ ಕಾಟಯ್ಯನ ಶಿಲಾಮೂರ್ತಿಯನ್ನು ಕೆತ್ತಲಾಗಿತ್ತು ಹಾಗೂ ಅವನ ಹೆಸರಿನಲ್ಲಿ ಶಾಸನವನ್ನು ಹಾಕಿಸಿದ್ದರೆಂದು ವಕ್ತೃಗಳು ಹೇಳುತ್ತಾರೆ. ಈ ಶಾಸನದ ಕಲ್ಲಿಗೆ ಇಂದಿಗೂ ನೆಲೆಮಲೆ ವಡ್ಡರಹಳ್ಳಿಯ ಮಧ್ಯ ಕಂಡುಬರುತ್ತಿದ್ದು, ಇರುಳಿಗರು ವರ್ಷಕ್ಕೊಮ್ಮೆ ಪೂಜೆ ಮಾಡಿ ಎಡೆ ಹಿಡಿಯುತ್ತಾರೆ. ಆದರೆ ರಸ್ತೆ ಕಾಮಗಾರಿಯ ಸಂದರ್ಭದಲ್ಲಿ ಈ ಕಲ್ಲನ್ನು ಮುಚ್ಚಲಾಗಿದೆ. ಆ ಕಲ್ಲು ಇತ್ತು ಎಂದು ಗುರುತು ಸಿಗದಂತೆ ಮಾಡಿದ್ದಾರೆ. ರಸ್ತೆಯ ಪಕ್ಕದಲ್ಲಿ ಸಾಮಾನ್ಯ ಕಲ್ಲಿನಂತೆ ತುದಿಯ ಭಾಗ ಮಾತ್ರ ಛತ್ರದ ಪಕ್ಕದ ರಸ್ತೆಯಲ್ಲಿ ಸಿಗುತ್ತದೆ.

ಒಟ್ಟಾರೆಯಾಗಿ ಇರುಳಿಗರು ಚರಿತ್ರೆಯ ಪ್ರತಿಯೊಂದು ಸಂದರ್ಭದಲ್ಲೂ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಂಡು ಬಂದಿದ್ದಾರೆ. ಅದರಲ್ಲು ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲೂ ಇರುಳಿಗರು ಅಗ್ರಸ್ಥಾನದಲ್ಲಿ ಬಂದು ನಿಲ್ಲುತ್ತಾರೆ. ವಿಪರ್ಯಾಸ ಎಂದರೆ ಇವರ ಬಗ್ಗೆ ಯಾವುದೇ ಲಿಖಿತ ದಾಖಲೆಗಳು ಇಲ್ಲ; ಮೌಖಿಕ ಆಕರಗಳಲ್ಲಿವೆ.

ಪ್ರಳಯದಿಂದ ಯಲವಾದ ಪ್ರಪಂಚದ ಮರುಹುಟ್ಟು ಹೇಗಾಯಿತೆಂಬುದಕ್ಕೆ ಇರುಳಿಗರಲ್ಲಿ ಒಂದು ದಂತಕಥೆ ಇದೆ. ಇರುಳಿಗ ಬೇಟೆಗಾರನೊಬ್ಬ ಕಾಡುಹಂದಿಯೊಂದರ ಮೇಲೆ ಬಾಣ ಬಿಡಲು ತನ್ನ ಬಿಲ್ಲಿಗೆ ಹೆದೆಯೇರಿಸಿ ಗುರಿಯಿಟ್ಟಿರುತ್ತಾನೆ. ಆ ಹಂದಿಯು ತನ್ನ ಮರಿಗಳಿಗೆ ಹೇಳುತ್ತದೆ. ಮಕ್ಕಳೇ ಇನ್ನು ದಿನ ಒಪ್ಪತ್ತಿನಲ್ಲಿ (ಒಂದುವರೆ ದಿನ) ಸಮುದ್ರ ಉಕ್ಕಿ ಎಲ್ಲವನ್ನೂ ಇಲ್ಲವಾಗಿಸುತ್ತದೆ. ಉಳಿದಿರುವ ಅಲ್ಪ ಸಮಯವನ್ನು ಆನಂದದಿಂದ ಕಳೆದು ಬಿಡಿ ಎನ್ನುತ್ತದೆ. ಬಿಲ್ಲಿಗೆ ಹೂಡಿ ಹಂದಿಗೆ ಗುರಿಯಿಟ್ಟು ಬಿಡಬೇಕೆಂದಿದ್ದ ಬಾಣವನ್ನು ಹಾಗೆಯೇ ಹಿಡಿದುಕೊಂಡು

ಬೇಟೆಗಾರ ಆ ಹಂದಿಯ ಮಾತುಗಳನ್ನು ಆಲಿಸುತ್ತಾನೆ. ಆಟವಾಡುತ್ತಿದ್ದ ಮರಿಗಳಲ್ಲಿ ಒಂದು ಕೇಳುತ್ತದೆ. "ಅಮ್ಮಾ ನಾವು ಉಳಿದುಕೊಳ್ಳಲು ಬೇರೆ ದಾರಿಯೇ ಇಲ್ಲವೇ" ಈ ಮಾತಿಗೆ ತಾಯಿ ಹಂದಿ "ಇದೆ ಮಗು ಹೇಗೆಂದರೆ. ಒಂದು ಸೋರೆಬುರುಡೆಯನ್ನು ಹುಡುಕಿ ತಂದು ಅದರೊಳಗಿರುವ ತಿರಳನ್ನು ತೆಗೆದು ಒಂದಿಷ್ಟು ಮುಚ್ಚಿಟ್ಟುಕೊಂಡು, ಜೇನು ಮೇಣದಿಂದ ಸಂದುಗಳನ್ನು ಮುಚ್ಚಿಕೊಂಡರೆ ನಾವು ಬದುಕುಳಿಯಬಹುದು. ಆದರೆ ಅದು ನಮ್ಮಂಥ ಪ್ರಾಣಿಗಳಿಂದ ಸಾಧ್ಯವೆ? ಎನ್ನುತ್ತದೆ.

ಇದಿಷ್ಟನ್ನು ಕೇಳಿದ ಬೇಟೆಗಾರ ತನ್ನ ಬೇಟೆಯನ್ನು ಮರೆತು ಮನೆಗೆ ಹಿಂತಿರುಗುತ್ತಾನೆ. ಮನೆಯಲ್ಲಿದ್ದ ತನ್ನ ಒಬ್ಬಳೇ ಮಗಳನ್ನು ಕರೆದು ಹಂದಿ ಹೇಳಿದ ವಿವರಗಳನ್ನು ತಿಳಿಸಿ ಸೋರೆಬುರುಡೆಯೊಂದನ್ನು ಹುಡುಕಿ ತರಲು ಕಳುಹಿಸಿದನು. ಗೌಡನೊಬ್ಬನ ಮನೆಯ ಹಿತ್ತಲಿನಲ್ಲಿದ್ದ ಸೋರೆಬುರುಡೆಯನ್ನು ಆ ಹುಡುಗಿ ಕೇಳುತ್ತಾಳೆ. ಆ ಗೌಡ ಸೋರೆಬುರುಡೆಯನ್ನು ತೆಗೆದುಕೊಂಡು ಹೋಗು ಆದರೆ ಅದರೊಳಗಿರುವ ತಿರುಳುಗಳನ್ನು ನನಗೆ ತೆಗೆದುಕೊಟ್ಟು ಹೋಗು ಎನ್ನುತ್ತಾನೆ. ಹಾಗೆಯೇ ಆಗಲಿ ಎಂದು ಹುಡುಗಿಯು ತಿರುಳುಗಳನ್ನು ಗೌಡನಿಗೆ ತೆಗೆದುಕೊಟ್ಟು ಖಾಲಿ ಬುರುಡೆಯನ್ನು ಮನೆಗೆ ತರುತ್ತಾಳೆ. ತಂದೆ ಮಗಳಿಬ್ಬರೂ ಆ ಬುರುಡೆಯೊಳಗೆ ಒಂದಿಷ್ಟು ಕಾಳು ಕಡ್ಡಿ, ದವಸ-ಧಾನ್ಯ, ಆಹಾರ ಪದಾರ್ಥಗಳನ್ನು ತುಂಬಿಕೊಂಡು ತಾವೂ ಆ ಸೋರೆಬುರುಡೆಯ ಒಳಕ್ಕೆ ಸೇರಿಕೊಂಡು ತೆಗೆದಿದ್ದ ಮುಚ್ಚಳದ ಬಾಯಿಯನ್ನು ಹೆಜ್ಜೇನು ಮೇಣದಿಂದ ಮುಚ್ಚಿಕೊಳ್ಳುತ್ತಾರೆ. ಹಂದಿಯ ಮಾತಿನಂತೆ ಪ್ರಳಯವಾಯಿತು. ಸಮುದ್ರ ಉಕ್ಕಿ ಹರಿದು ಉಪಶಮನವಾಯಿತು. ಬರಿಲೋಕವಾಗಿರುವ ನರಲೋಕ ಹೇಗಿರುತ್ತದೆಂದು ನೋಡ ಬೇಕೆಂದು ಶಿವ ಪಾರ್ವತಿಸಹಿತ ನವಿಲು ವಾಹನರೂಢನಾಗಿ ಸಂಚರಿಸುವಾಗ ಸಮುದ್ರದ ಮೇಲೆ ತೇಲಾಡುತ್ತಿದ್ದ ಸೋರೆ ಬುರುಡೆಯೊಂದರಿಂದ ಹಂಚಿ ಕಡ್ಡಿ ಗಾತ್ರ ಹೊಗೆ ಹೊರಬರು ತ್ತಿರುವುದು ಕಾಣುತ್ತದೆ. ಕೂಡಲೇ ತಮ್ಮ ರಥವನ್ನು ಆ ಸೋರೆಬುರುಡೆಯ ಹತ್ತಿರ ಇಳಿಸುತ್ತಾರೆ. ಆ ಸೋರೆಬುರುಡೆಯ ಮುಚ್ಚಳವನ್ನು ತೆರೆದು ನೋಡುವಲ್ಲಿ ತಂದೆ ಮತ್ತು ಮಗಳು ಕಾಣುತ್ತಾರೆ. ಹೇಗೆ ಬದುಕಿದಿರಿ? ಎಂದು ಶಿವನು ವಿಚಾರಿಸಲು ನಡೆದ ವೃತ್ತಾಂತದ ವಿವರಗಳನ್ನು ಹೇಳುತ್ತಾರೆ. ಆಗ ಶಿವನು ಬರಿಲೋಕವಾಗಿರುವ ಈ ನರಲೋಕ ನಿಮ್ಮಿಂದಲೇ ಮರುಹುಟ್ಟು ಪಡೆದು ಎಂದಿನಂತಾಗಲಿ ನಿಮಗೆ ನೂರೊಂದು ಮಕ್ಕಳಾಗುತ್ತವೆ ಆಗ ನನ್ನನ್ನು ಕರಿಯಿರಿ ನಾನು ಬಂದು ಜಾತಿಯನ್ನು ಹಂಚಿಕೆ ಮಾಡುತ್ತೇನೆಂದು ಹೇಳಿ ಗಂಡ ಹೆಂಡತಿಗೂ ಆಶೀರ್ವದಿಸಿ ತಮ್ಮ ನವಿಲು ವಾಹನದಲ್ಲಿ ಕುಳಿತು ಹೊರಟರಂತೆ"[೨]

ಇದೇ ಕಥೆಯನ್ನು ಮುಂದುವರಿಸುತ್ತಾ ತಮ್ಮ ಕಸುಬುಗಳಿಗೆ ಸಂಬಂಧಿಸಿದಂತೆ ಜಾತಿಗಳನ್ನು ವಿಂಗಡಿಸಲು ಮತ್ತೆ ಶಿವನೇ ಬರಬೇಕಾಯಿತು ಎನ್ನುತ್ತಾರೆ. ಹಾಗೆ ಬಂದ ಶಿವನು ನೂರೊಂದು ಮಕ್ಕಳ ಹುಟ್ಟಿಗೆ ಕಾರಣವಾದ ಯಜಮಾನನನ್ನು ಕರೆದು ಒಬ್ಬೊಬ್ಬರ ಕಾಯಕವನ್ನು ಹೇಳುವಂತೆ

ಕೇಳುತ್ತಾನೆ. ಅವರು ಮಾಡುತ್ತಿರುವ ವೃತ್ತಿಗಳ ಆಧಾರದ ಮೇಲೆ ನೂರು ಜಾತಿಗಳನ್ನು ಶಿವನು ಹೇಳುತ್ತಾನೆ. ನೂರೊಂದನೆಯವನನ್ನು ಈ ಗುಂಪಿನ ನಾಯಕ ಗಮನಿಸದೆ ಇನ್ಯಾರಾದರೂ ಇದ್ದಾರೆಯೇ ಎಂದು ಕೇಳಿದ ಶಿವನ ಮಾತಿಗೆ ಇಲ್ಲ ಎಂದು ಉತ್ತರಿಸುತ್ತಾನೆ. ಯಾವುದೇ ಜಾತಿಗೂ ಸೇರದ ತನ್ನ ಸರದಿ ಆಗ ಬರಬಹುದು. ಈಗ ಬರಬಹುದು ಎಂದು ಕಾಯುತ್ತಿದ್ದ ಆ ನೂರೊಂದನೆಯವನು ಶಿವನು ಹಿಂದಿರುಗುವ ಸೂಚನೆ ಕಂಡುಬಂದಾಗ ಸ್ವಾಮಿ ನಾನೊಬ್ಬನಿದ್ದೇನೆ. ನನ್ನ ಜಾತಿ ಯಾವುದೆಂದು ಅಪ್ಪಣೆಯಾಗಲಿಲ್ಲ ಎನ್ನುತ್ತಾನೆ. ಶಿವನು ನಿಮ್ಮ ಗುಂಪಿನ ನಾಯಕ ಇನ್ಯಾರೂ ಇಲ್ಲವೆಂದಿದ್ದಾನೆ. ನಾನೀಗ ನಿನ್ನನ್ನು ಯಾವುದೇ ಜಾತಿಗೂ ಸೇರಿಸಲಾಗದು. ನೀನು ಯಾವುದೆ ಜಾತಿಯೂ ಇಲದ 'ಇಲ್ಲಗ" ಎಂದು ಕರೆಯುತ್ತಾನೆ. ಇಲ್ಲಗ ಎಂಬ ರೂಪವೇ ಪರಿವರ್ತನೆಯಾಗಿ ಇಲ್ಲಿಗ, ಇರ್ಲಿಗ, ಇರುಳಿಗ ಎಂದಾಗಿದೆ ಎಂದು ವಕ್ತೃಗಳೇ ಹೇಳುತ್ತಾರೆ.

ಬಡತನ ಬಂದ ಬಗೆಗಿನ ಐತಿಹ್ಯವೊಂದರ ಸಂಕ್ಷಿಪ್ತ ರೂಪ

ಪ್ರಪಂಚದ ಮರುಸೃಷ್ಟಿ ಮಾಡಿದ ಶಿವನು ಇರುಳಿಗರು ಕಾಡಿನಲ್ಲಿ ಗೆಡ್ಡೆ ಬಗೆದು ಪ್ರಾಣಿವರ್ಗಗಳ ಬೇಟೆಯಾಡಿ ಬದುಕುವುದನ್ನು ನೋಡಲಾರದೆ ಹಣದ ರಾಶಿಯನ್ನು ತೋರಿಸಿ ತುಂಬಿಕೊಂಡು ಹೋಗು ಎನ್ನುತ್ತಾರೆ. ಹಾಗೆ ತುಂಬಿಕೊಂಡು ಬಂದದ್ದು ಹಣವೆಂದು ಗೊತ್ತಿರದೆ ಧಾನ್ಯವಿರಬಹುದು ಎಂದುಕೊಂಡು ನಂತರದ ಗುಂಡು ಕಲ್ಲಿನ ಮೇಲೆ ನಿಂತು ಮೊರದಲ್ಲಿ ರಾಗಿ ತೂರಿದಂತೆ ಎಲ್ಲವನ್ನು ತೂರಿದ ರಬಸಕ್ಕೆ ಎಲ್ಲಾ ಹೋಗಿ ಒಂದು ನಾಣ್ಯ ಮಾತ್ರ ಒಂದು ಕಲ್ಲಿನ ಅಡಿಗೆ ಸಿಕ್ಕಿ ಹಾಕಿಕೊಂಡಿತಂತೆ. ಎಲ್ಲಾ ಮೋಸಗಾರ ಒಂದು ಘಟ್ಟಿಕೊಟ್ಟು ಉಳಿದೆಲ್ಲವನ್ನು ಜಳ್ಳುಗಳನ್ನು ತುಂಬಿ ಮೋಸ ಮಾಡಿದ್ದಾನೆ ಎಂದು ಬಯ್ದುಕೊಳ್ಳುತ್ತ ಶೆಟ್ಟಿಯ ಅಂಗಡಿಗೆ ಬಂದು ಕಡಲೇಪುರಿಯನ್ನು ಕೇಳುತ್ತಾನೆ. ಆಗ ಶೆಟ್ಟಿಯೂ ಈ ಚಿನ್ನದ ನಾಣ್ಯವನ್ನು ನೋಡಿ ವಿಚಾರಿಸಿದಾಗ ನಡೆದ ವೃತ್ತಾಂತವನ್ನೆಲ್ಲ ಶೆಟ್ಟಿಗೆ ಹೇಳುತ್ತಾನೆ. ಆಗ ಶೆಟ್ಟಿ ಇನ್ನೊಂದು ಸೇರು ಕಡ್ಲೆಪುರಿಯನ್ನು ಟವಲ್‌ಗೆ ಹಾಕಿ ಆ ಜಾಗವನ್ನು ತೋರಿಸುವಂತೆ ಹೇಳುತ್ತಾನೆ. ಆಗ ನಮ್ಮೋನು ಅವನಿಗೆ ಆ ಜಾಗ ತೋರಿಸುತ್ತಾನೆ. ಅಲ್ಲಿದ್ದ ಎಲ್ಲಾ ಚಿನ್ನದ ನಾಣ್ಯವನ್ನು ತುಂಬಿಕೊಂಡ ಶೆಟ್ಟಿ ಈ ಜಳ್ಳುಗಳು ನನಗೆ ಬೇಕು ನಿನಗೆ ಬೇಕಾದರೆ ಇನ್ನಷ್ಟು ಕಡ್ಲೆಪುರಿ ದವಸಧಾನ್ಯ ತೆಗೆದುಕೊಂಡು ಹೋಗು ಎಂದು ಮತ್ತಷ್ಟು ಕಡ್ಲೆಪುರಿ ಮತ್ತು ದವಸ ಧಾನ್ಯಗಳನ್ನು ಕೊಟ್ಟು ಕಳುಹಿಸುತ್ತಾನೆ. ಆಗ ಪರಶಿವನು ಅಯ್ಯೋ ಇದರಲ್ಲಿಯ್ಯೂ ಕೆಟ್ಟೆಯಲ್ಲೊ ಎಂದು ಇನ್ನೊಂದು ಅವಕಾಶ ಕೊಡುತ್ತಾನೆ. ಸುರದ್ರೂಪಿ ಹೆಣ್ಣುಗಳನ್ನು ಸೃಷ್ಟಿಸಿ ನಿನಗೆ ಬೇಕಾದನ್ನು ಆರಿಸಿಕೊಳ್ಳುವಂತೆ ಹೇಳುತ್ತಾನೆ. ಹೆದರಿಕೊಂಡು ಕಡೆಯಲ್ಲೆಲ್ಲೊ ತಲೆಯೆಲ್ಲಾ ಕೆದರಿಕೊಂಡು ಮೂಗಿನಲ್ಲಿ ಸಿಂಬಳ ಸುರಿಸಿಕೊಂಡು ಹಳೆಬಟ್ಟೆಗಳನ್ನು ಧರಿಸಿಕೊಂಡು ನಿಂತಿದ್ದ ಹೆಣ್ಣನ್ನು ಕರೆದುಕೊಂಡು ಹೋದನಂತೆ. ಅದಕ್ಕಾಗಿ ಶಿವನು ನಿಮ್ಮ ಹೆಂಡತಿಯರ ತಲೆಯ ಕೂದಲಿನಲ್ಲಿ

ಕಡೇ ಪಕ್ಷ ಎರಡೆರಡು ಕೂದಲುಗಳಾದರೂ ಗುಂಗುರು ಗುಂಗುರಾಗಿರಲಿ ಎಂದು ಶಾಪ ಕೊಟ್ಟನಂತೆ.

ಇನ್ನೂ ಒಂದು ಬಾರಿ ಇವರಿಗೆ ಏನನ್ನಾದರೂ ಕೊಟ್ಟು ಉದ್ಧಾರ ಮಾಡಬೇಕೆಂದು ಯೋಚಿಸಿದ ಶಿವನು. ಕಾಮದೇನುವಿನಂಥ ಗೋವುಗಳ ಹಿಂಡನ್ನು ಸೃಷ್ಟಿಸಿ ಇವುಗಳಲ್ಲಿ ನಿಮಗೆ ಯಾವುದು ಬೇಕೋ ಹಿಡಿದುಕೊಂಡು ಹೋಗಿ ಎಂದಾಗ. ಆ ಗೋವುಗಳು ಬರುವ ರಭಸಕ್ಕೆ ಹೆದರಿ ಎಲ್ಲಿಯೋ ಆಹಾರವಿಲ್ಲದೆ ಒದ್ದಾಡುವ ಸ್ಥಿತಿಯಲ್ಲಿದ್ದ ಗೂಬೆ ರೋಗದ ಹಸುಗಳನ್ನು ಹಿಡಿದುಕೊಂಡರಂತೆ. ನಿಮ್ಮ ಹಣೆಬರಹವೇ ಇಷ್ಟು, ನೀವು ಸಾಕುವ ರಾಸುಗಳೆಲ್ಲ ಗೂಬೆ ರೋಗದಿಂದ ಕೂಡಿದ್ದು ಬಡಕಲಾಗಿರಲಿ ಎಂದು ಶಾಪ ಕೊಟ್ಟು ಹೋದನಂತೆ.

ಅಯ್ಯೊ ಪಾಪಿ ಇದರಲ್ಲೂ ಕೆಟ್ಟೆಯಾ ಎಂದು ಕಾಡಿನಲ್ಲಿ ಗೆಣಸು ಗೆಡ್ಡೆಗಳನ್ನು ಸೃಷ್ಟಿಸಿದನಂತೆ. ಬೇಕಾದಷ್ಟು ಗೆಡ್ಡೆಗಳನ್ನು ಕಿತ್ತು ಅಲ್ಲಿಯೇ ಬೆಂಕಿ ಹಾಕಿ ಸುಡುವಾಗ ಇವನ ದೃಢತೆಯನ್ನು ಪರೀಕ್ಷಿಸಲೆಂದು ಶಿವನು ವೇಷ ಮರೆಸಿಕೊಂಡು ಇಲ್ಲಿಗೆ ಬಂದನಂತೆ. ಶಿವ ಬರುವುದನ್ನು ದೂರದಲ್ಲಿಯೇ ನೋಡಿದ ಇರುಳಿಗ ಅವನು ಬಂದರೆ ಪಾಲು ಕೊಡಬೇಕಾಗುತ್ತದೆ ಎಂದು ಮೆಳೆ, ಕಲ್ಲುಗಳ ಸಂದು ಗೊಂದಿಗಳಲ್ಲಿ ಬಿಸಾಡಿದನಂತೆ. ಇದನ್ನರಿತ ಶಿವನು ಎಲ್ಲೆಲ್ಲಿ ಎಸೆದಿ ರುವೆಯೋ ಅಲ್ಲಲ್ಲಿಯೇ ಬೆಳೆದುಕೊಳ್ಳಲಿ ಬೆಳಗಿನಿಂದ ಸಂಜೆ ತನಕ ಶಿಕ ಮ್ಯಾಕ್ ಮಾಡ್ಕೊಂಡ್ ಬಗುದ್ರು ಒಂದೊತ್ಗೆ ಎಷ್ಟು ಬೇಕೊ ಅಷ್ಟು ಮಾತ್ರ ಸಿಕ್ಲಿ ಎಂದು ಶಾಪ ಕೊಟ್ಟನಂತೆ. ಆ ಕಾರಣದಿಂದಲೇ ಕಾಡು ಗೆಣಸುಗಳು ಕಲ್ಲು ಪೊಟರೆ ಮರಗಳ ಸಂದು ಗೊಂದುಗಳಲ್ಲಿ ಬೆಳೆಯುವುದು ಎನ್ನುತ್ತಾರೆ.

ಹೀಗೆಯೇ ಜೇನು ಸೃಷ್ಟಿಮಾಡಿ ಪರೀಕ್ಷಿಸಿದಾಗ ಅದರಲ್ಲಿ ಉತ್ತೀರ್ಣನಾಗಿ ಜೇನು ಮಾತ್ರ ಎಲ್ಲಿದ್ದರೂ ಕಣ್ಣಿಗೆ ಕಾಣುವಂತಾಗಲಿ ಎಂಬ ವರವನ್ನು ಶಿವನೇ ಕೊಟ್ಟ. ಇದರಿಂದ ಯಾವುದೇ ಬೇಲಿ, ಬೆಟ್ಟ ಮರಗಳ ಪೊಟರೆಯಲ್ಲಿರಲಿ ಜೇನನ್ನು ಮಾತ್ರ ಅನಾಯಾಸವಾಗಿ ತೆಗೆಯುವ ಜಾಣ್ಮೆಯ ಇರುಳಿಗರು ಬಹಳ ಮಂದಿ ಇದ್ದಾರೆ. ಶಿವನ ವರದಿಂದಲೇ ಜೇನು ನಮಗೆ ಸುಲಭವಾಗಿ ಸಿಗುತ್ತದೆಂದು ಬಹಳವಾಗಿ ನಂಬುತ್ತಾರೆ. ಮತ್ತೊಂದು ಬಾರಿ ಏನಾದರೂ ಮಾಡಿ ಇವರನ್ನು ಉದ್ಧಾರ ಮಾಡಬೇಕೆಂದು ಪೆನ್ನು, ಕಾಗದ, ಚಿನ್ನ ಬಳ್ಳಿ, ಕತ್ತಿ, ಗುರಾಣಿ, ರಥ, ಪಲ್ಲಕ್ಕಿ, ಕುದುರೆ, ಅರಮನೆ ಏನೆಲ್ಲಾಬೇಕೋ ಅದೆನ್ನೆಲ್ಲ ಸೃಷ್ಟಿಸಿ ನಿನಗ್ಯಾವುದು ಬೇಕೋ ಅದನ್ನು ತೆಗೆದುಕೋ ಎಂದನಂತೆ. ಇದಕ್ಕೆ ನಮ್ಮ ಮನೆ ಹಾರೆಕೋಲು ಗುದ್ಲಿ, ಅಸನಿಕೆ ಮತ್ತು ಇಲಿಬುಂಡೆ ಕುಡುಗೋಲು ಎಂದಕೊಂಡನಂತೆ. ಶಿವನು ನೀಡಿದ ಯಾವುದನ್ನು ಬಯಸದೆ ಇಂದಿಗೂ ಬಡತನದಲ್ಲಿ ಉಳಿಯುವಂತಾಗಿದೆ ಎನ್ನುತ್ತಾರೆ.

ಇರುಳಿಗರು ತಮಗೆ ಬಡತನ ಬಂದ ಬಗೆಯನ್ನು ಈ ಐತಿಹ್ಯಗಳ ಮೂಲಕ ಸಮರ್ಥಿಸಿ ಕೊಳ್ಳುತ್ತಾರೆ. ಅಥವಾ ತಾತ್ಸಾರ ಭಾವದಿಂದ ಕೂಡಿರುತ್ತಾರೋ ಎಂದು ಗೊಂದಲ ಸೃಷ್ಟಿ

ಮಾಡುತ್ತಾರೆ. ಇವರ ಒಂದೊಂದು ವಿವರಣೆಗಳು ದಂತಕಥೆಗಳು, ಐತಿಹ್ಯಗಳು ಒಂದೊಂದಕ್ಕೆ ಪೂರಕವಾಗಿರುತ್ತವೆ. ಇದು ಹೀಗೆಯೇ ಇರಬೇಕೆಂದು ಇಕ್ಕಟ್ಟಿಗೆ ಸಿಲುಕಿಸುವಂತಿರುತ್ತದೆ. ಹೀಗೆ ಕಥೆಗಳನ್ನು ಕಟ್ಟಿ ಹೇಳುವ ಕ್ರಿಯೆ ಇರುಳಿಗರಿಗೆ ಕರತಲಾಮಲಕವಾಗಿದೆ.

ಈ ಎಲ್ಲಾ ಐತಿಹ್ಯಗಳು ಇರುಳಿಗ ಬುಡಕಟ್ಟು ಸ್ವಾಭಿಮಾನ ನಿರಾಶದಾಯಕತೆ, ಸ್ವಾತಂತ್ರ್ಯ ಮತ್ತು ಹಣ ಆಸ್ತಿ ಸಂಪತ್ತಿನ ಮೇಲಿನ ಕಿಂಚಿತ್ತು ಆಸೆ ಇಲ್ಲದ ಬದುಕನ್ನು ಪ್ರತಿನಿಧಿಸುವಂತಿದೆ. ಈ ಮೇಲಿನ ಎಲ್ಲಾ ಐತಿಹ್ಯಗಳನ್ನು ಗಮನಿಸಿದಾಗ ಪ್ರಪಂಚದ ಯಾವುದೇ ಧರ್ಮ ಬೋಧಿಸದ ಸಂದೇಶಗಳನ್ನು ಇರುಳಿಗರ ಬದುಕಿನ ಐತಿಹ್ಯ ಪುರಾಣಗಳು ಪ್ರತಿನಿಧಿಸುವುದನ್ನು ಕಾಣಬಹುದು.

ಇರುಳಿಗರು ವಾಸಮಾಡುವ ಪ್ರದೇಶಗಳು ಭಾಗಶಃ ಕಾವೇರಿನದಿಯ ಆಸುಪಾಸುಗಳಲ್ಲಿ ಇರುತ್ತದೆ. ಕಾವೇರಿನದಿಯ ಪ್ರವಾಹಕ್ಕೆ ಸಿಕ್ಕಿ ತನ್ನವರೆಲ್ಲವನ್ನು ಕಳೆದುಕೊಂಡು ಸೋರೆಕಾಯಿಯ ದೋಣಿಯನ್ನು ನಿರ್ಮಿಸಿಕೊಂಡು ಬದುಕಿದ ತಂದೆ ಮಗಳೇ ಮದುವೆಯಾಗಿ ವಂಶ ಬೆಳಗಿಸಿದಂತಿದೆ. ಆದಿವಾಸಿಗಳಿಗೆ ಪ್ರಕೃತಿಯ ಸೂಕ್ಷ್ಮತೆಗಳು ತಿಳಿದಿರುವಂತೆ ಇವರಿಗೆ ಪ್ರವಾಹದ ಮುನ್ಸೂಚನೆ ತಿಳಿದಿದೆ. ಅದರಂತೆ ಸೋರೆ ಬುಂಡೆಯ ದೋಣಿ ನಿರ್ಮಿಸಿಕೊಂಡು ಬದುಕುಳಿದಿರುವ ಸಾಧ್ಯತೆಗಳಿವೆ. ಪ್ರವಾಹದಿಂದ ತನ್ನವರೆಲ್ಲವನ್ನು ಕಳೆದುಕೊಂಡಿದ್ದ ಇವರು ಬೇರೆ ಜನವರ್ಗಗಳ ಜೊತೆ ಶಂಕರಗೊಳ್ಳಲು ಇಷ್ಟವಿಲ್ಲದೆ ತಂದೆ ಮಗಳೇ ಕೂಡಿ ವಂಶಾಭಿವೃದ್ಧಿ ಮಾಡಿರುವ ಸೂಚನೆಗಳಿವೆ. ಏಕೆಂದರೆ ಇರುಳಿಗರು ಮದುವೆಗೆ ಅಥವಾ ಕೂಡಿಕೆಗೆ ಸಂಬಂಧಗಳನ್ನು ಅಷ್ಟೊಂದು ಗಂಭೀರವಾಗಿ ಪರಿಗಣಿಸದೇ ಇರುವುದನ್ನು ನಾನು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಗಮನಿಸಿದ್ದೇನೆ. ಈ ಸಮುದಾಯದಲ್ಲಿನ ತೊಂಬತ್ತು ಭಾಗದ ಮದುವೆಗಳು ಓಡಿಹೋಗಿ ಆಗಿರುವುದೇ ಹೆಚ್ಚು. ಅದರಲ್ಲಿ ಅಕ್ಕ ತಮ್ಮ, ಚಿಕ್ಕಪ್ಪನ ಮಗಳು, ದೊಡ್ಡಪ್ಪನ ಮಗ, ಚಿಕ್ಕಮ್ಮ ಮುಂತಾದ ಸಂಬಂಧಗಳೇ ಹೆಚ್ಚಾಗಿರುತ್ತವೆ. ಹೀಗೆ ಓಡಿ ಹೋದವರು ಕೂಡಿಗೆ ಮಾಡಿಕೊಳ್ಳುತ್ತಾರೆ. ಅಂದ ಮಾತ್ರಕ್ಕೆ ಇದೊಂದು ಕೆಟ್ಟಚಾಲಿ ಎಂದು ನನ್ನ ಅಭಿಪ್ರಾಯವಲ್ಲ. ಇದೊಂದು ಬುಡಕಟ್ಟಿನ ರೀತಿ ನೀತಿ ಎಂದು ತಿಳಿಸುವುದೇ ಆಗಿದೆ. ಆ ಹಿನ್ನೆಲೆಯಲ್ಲಿ ತಂದೆ ಮಗಳು ಮದುವೆಯಾಗಿ ವಂಶಾಭಿವೃದ್ಧಿ ಮಾಡಿರುವ ಸಾಧ್ಯತೆಗಳನ್ನು ಈ ಐತಿಹ್ಯವು ಪ್ರಸ್ತಾಪಿಸುತ್ತದೆ.

ಪ್ರಮುಖವಾಗಿ ಶಿವಪಾರ್ವತಿಯರು ನವಿಲ ಮೇಲೆ ಬಂದಿರುವ ಪ್ರಸ್ತಾಪವು ಅತ್ಯಂತ ಕುತೂಹಲಕಾರಿಯಾಗಿದೆ. ಶಿವನ ವಾಹನ ನಂದಿ ಆದರೆ ನವಿಲು ಹೇಗಾಯಿತು. ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಮಯೂರ ಎಂದರೆ ನವಿಲು ಈ ಪದ ದ್ರಾವಿಡಪೂರ್ವ ಮುಂಡಾಗಳ ಭಾಷೆಯದ್ದಾಗಿದೆ. ತಮಿಳಿನಲ್ಲಿ ನವಿಲನ್ನು ಮಯಿಲ್ ಎಂದೇ ಕರೆಯಲಾಗುತ್ತದೆ. ಮಯಿಲ್ ಮತ್ತು ಆಡು ಮತ್ತು ತುರೈ ಎಂಬ ಮಯಿಲಾಂಡ ತುರೈ ಎಂಬ ಊರೆ ಈ ತಂಜಾವೂರಿನ ಬಳಿಯ ಮಯಾವರಂ ಎಂಬ ಆಧುನಿಕ ಹೆಸರಿನಲ್ಲಿ ಚಾಲ್ತಿಯಲ್ಲಿದೆ.[೩೩] ಆದ್ದರಿಂದ ನವಿಲಿಗೂ

ಇರುಳಿಗರಿಗೂ ಏನೋ ಸಂಬಂಧವಿರಬೇಕು ಅಷ್ಟಲ್ಲದೆ ಶಿವ ವಾಹನವಾದ ನಂದಿಯನ್ನು ಬಿಟ್ಟು ನವಿಲಿನ ಪ್ರಸ್ತಾಪ ಬರುತ್ತಿರಲಿಲ್ಲ.

ಒಟ್ಟಾರೆಯಾಗಿ ಈ ಐತಿಹ್ಯವು ಭಾರತದಲ್ಲಿ ಮೊದಲು ಪ್ರಚಲಿತದಲ್ಲಿದ್ದ ದೇವರನ್ನು ಹೆಕ್ಕಿ ತೆಗೆಯುವ ಇರಾದೆಯನ್ನು ಹೊಂದಿದೆ. ಎಂದರೆ ತಪ್ಪಾಗಲಾರದು. ಏಕೆಂದರೆ ಐತಿಹ್ಯಗಳು ಒಂದು ಬುಡಕಟ್ಟಿನ ಚಾರಿತ್ರಿಕ ದಾಖಲೆಗಳಾಗುತ್ತವೆ. ಎಂಬುದು ಹಲವಾರು ವಿದ್ವಾಂಸರು ಅಭಿಪ್ರಾಯಿಸುತ್ತಾರೆ.

೩.೨. ಬ್ರಿಟಿಶ್‌ರ ಕಾಲಘಟ್ಟದಲ್ಲಿ ಇರುಳಿಗರು

೧೪೫೩ರಲ್ಲಿ ಆಟೋಮನ್ ಟರ್ಕ(ತುರ್ಕಿ)ರು ಕಾನ್ಸ್ಟೆಂಟಿನೋಪಾಲನ್ನು ವಶಪಡಿಸಿಕೊಂಡ ಮೇಲೆ ಪೂರ್ವ ಮತ್ತು ಪಶ್ಚಿಮ ದೇಶಗಳ ನಡುವೆ ನಡೆಯುತ್ತಿದ್ದ ಭೂ ಮಾರ್ಗದ ವ್ಯಾಪಾರೀಕರಣ ಸ್ಥಗಿತಗೊಂಡಿತು. ಪೂರ್ವದೇಶದ ವ್ಯಾಪರೀಕರಣಕ್ಕೆ ಮಾರು ಹೋಗಿದ್ದ ಪಶ್ಚಿಮ ದೇಶಗಳ ಆಸೆಗೆ ತಣ್ಣೀರು ಎರಚಿದಂತಾಗಿತ್ತು. ಅದರಲ್ಲೂ ಮುಖ್ಯವಾಗಿ ಭಾರತದೊಂದಿಗೆ ವ್ಯಾಪಾರ ಮಾಡುವುದು ಪಶ್ಚಿಮ ದೇಶಗಳಿಗೆ ಆಕರ್ಷಣೀಯ ಗುರಿಗಳಲ್ಲಿ ಒಂದಾಗಿತ್ತು.

ಟರ್ಕರು ಕಾನ್‌ಸ್ಟೆಂಟಿನ್‌ನೋಪಾಲನ್ನು ವಶಪಡಿಸಿಕೊಂಡ ಮೇಲಂತೂ ಪೂರ್ವದೇಶಗಳ ವ್ಯಾಪಾರೀಕರಣ ಸಂಪೂರ್ಣ ನಿಂತುಹೋಯಿತು. ಭಾರತದಿಂದ ಸರಕು ಸಾಗಾಣಿಕೆ ಮಾರ್ಗಗಳಲ್ಲಿ ತುರ್ಕಿ ಸಾಮ್ರಾಜ್ಯದ ಅಧೀನದಲ್ಲಿದ್ದವು. ತುರ್ಕಿಯ ಪಶ್ಚಿಮ ತೀರದ ಬಂಧುಗಳ ಮೂಲಕ ಮಾತ್ರ ಈ ವ್ಯಾಪಾರ ಸಾಗುತ್ತಿದ್ದು, ಆ ದೇಶವು ಈ ವಿಚಾರದಲ್ಲಿ ಏಕಾಧಿಪತ್ಯ ಪಡೆದಿತ್ತು. ಜೊತೆಗೆ ನಾಲ್ಕು ಶತಮಾನಗಳ ಹೋರಾಟ ನಡೆಸಿಯೂ ತುರ್ಕಿಯ ಬಲವನ್ನು ಕುಂದಿಸಲಾಗಲಿಲ್ಲ. ಇದರಿಂದ ಬುದ್ಧಿ ಕಲಿತ ಪೂರ್ವ ದೇಶಗಳು ಅದರಲ್ಲೂ ಯುರೋಪಿನ ದೇಶಗಳು ಪರ್ಯಾಯ ಮಾರ್ಗವನ್ನು ಕಂಡುಹಿಡಿಯಲು ಪ್ರತಿನಿತ್ಯ ಹವಣಿಸುತ್ತಿದ್ದವು. ಅನೇಕ ಹೊಸ ಹೊಸ ಪ್ರಯತ್ನಗಳನ್ನು ಮಾಡಲಾರಂಭಿಸುತ್ತಿದ್ದವು. ಅದರಲ್ಲೂ ಪೋರ್ಚುಗಲ್ ದೇಶವು ಅತ್ಯಂತ ಹೆಚ್ಚಿಗೆ ಕಾರ್ಯತತ್ಪರಿತ ವಾಗಿ ಭಾರತಕ್ಕೆ ಹೊಸ ಮಾರ್ಗವನ್ನು ಕಂಡುಹಿಡಿಯಲು ಮುಂದಾಯಿತು. ಆಗ ಅದು ಹೊಸ ಜಲ ಮಾರ್ಗವನ್ನು ಕಂಡು ಹಿಡಿಯುವ ತೀರ್ಮಾನ ಕೈಗೊಂಡಿತ್ತು. ಇಡೀ ಪೋರ್ಚುಗಲ್‌ನ ಪ್ರಭುತ್ವ ಬೆನ್ನು ಕೊಟ್ಟು ನಿಂತಿತು. ಇದರ ಫಲವಾಗಿ ೧೪೯೮ರಲ್ಲಿ ವಾಸ್ಕೋಡ ಗಾಮ ಎಂಬುವನು ಪೋರ್ಚುಗಲ್‌ನಿಂದ ಭಾರತದ ಕಲ್ಲಿಕೋಟೆಗೆ ತಲುಪಿ ಪೂರ್ವ ಮತ್ತು ಪಶ್ಚಿಮ ದೇಶಗಳಿಗೆ ಒಂದು ಹೊಸ ಜಲ ಮಾರ್ಗವನ್ನು ತೆರೆದಿಟ್ಟನು. ಇಲ್ಲಿಂದ ಭಾರತದ ರಾಜಕೀಯ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಂಶಗಳು ಬದಲಾವಣೆಗೊಂಡವು. ಭಾರತಕ್ಕೆ ಪೋರ್ಚುಗೀಸರು, ಹಾಲೆಂಡಿನ ಡಚ್ಚರು ನಂತರ ಬ್ರಿಟಿಶ್‌ರು ಪ್ರವೇಶ ಮಾಡಿದರು. ಇವರ ವ್ಯಾಪಾರ ಉದ್ದೇಶವನ್ನು ಬಿಟ್ಟು ರಾಜಕೀಯ ಪ್ರಭುತ್ವಕ್ಕೆ ಸನ್ನದ್ಧರಾಗಿ ಪರಸ್ಪರ ಯುದ್ಧ

ಮಾಡಿಕೊಂಡರು. ಇದರಲ್ಲಿ ಗೆದ್ದ ಬ್ರಿಟಿಶರು ಭಾರತದಲ್ಲಿ ಉಳಿದುಕೊಂಡರು. ಇತರೆ ಯುರೋಪ್ ದೇಶದವರಿಗೆ ಗೇಟ್‌ಪಾಸ್ ನೀಡಿ ಭಾರತದಲ್ಲಿದ್ದ ಅರಾಜಕತೆಯನ್ನು ಅಸ್ತ್ರವನ್ನಾಗಿ ಮಾಡಿಕೊಂಡು ಇಡೀ ಭಾರತವನ್ನು ತಮ್ಮ ಕಪಿಮುಷ್ಠಿಗೆ ತೆಗೆದುಕೊಂಡರು.

೧೬೦೦ರಲ್ಲಿ ಈಸ್ಟ್ ಇಂಡಿಯ ಕಂಪನಿಯನ್ನು ಆರಂಭಿಸಿಕೊಂಡು ವ್ಯಾಪಾರಗಳ ಜೊತೆಜೊತೆಗೆ ರಾಜಕೀಯ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಹವಣಿಸುತ್ತಿದ್ದ ಬ್ರಿಟಿಶ್‌ರಿಗೆ ೧೭೫೭ ಮತ್ತು ೧೭೬೪ರ ಪ್ಲಾಸಿ ಮತ್ತು ಬಕ್ಸರ್ ಕದನಗಳು ಇಡೀ ಭಾರತವನ್ನು ಕಂಪನಿ ಸರ್ಕಾರದ ಮುಂದೆ ತಂದು ಇಟ್ಟವು. ಇದರಿಂದ ಕೇವಲ ವ್ಯಾಪಾರ ವ್ಯವಹಾರಗಳಿಗೆ ಬಂದಿದ್ದ ಬ್ರಿಟಿಶ್‌ರು ಭಾರತದ ರಾಜಕೀಯ ಆಡಳಿತವನ್ನು ಪಡೆದುಕೊಂಡು ಇಡೀ ಭಾರತವನ್ನು ಬ್ರಿಟಿಷ್ ಏಕ ಚಕ್ರಾಧಿಪತ್ಯಕ್ಕೆ ತಂದುಕೊಂಡರು. ಇಲ್ಲಿಂದ ಭಾರತದ ಚರಿತ್ರೆ ಬದಲಾವಣೆಗೊಳ್ಳುತ್ತಾ ಸಾಗಿತು. ಏಕೆಂದರೆ ಬ್ರಿಟಿಶ್‌ರು ಭಾರತಕ್ಕೆ ಬಂದಿದ್ದ ಉದ್ದೇಶವನ್ನು ಅರಿತುಕೊಳ್ಳುವಂತೆ ಮಾಡಿತು. ಎಲ್ಲೆಲ್ಲಿ ಯಾವ ಯಾವ ಸಂಪತ್ತು ಇದೆ ಎಂದು ಮೊದಲೇ ತಿಳಿದುಕೊಂಡಿದ್ದ ಬ್ರಿಟಿಶ್‌ರಿಗೆ ರಾಜಕೀಯ ಆಡಳಿತ ಕೈಗೆತ್ತಿಕೊಂಡ ಮೇಲೆ ಈ ಸಂಪತ್ತು ಹೇಗೆ ಪಡೆಯಬೇಕೆಂಬ ಜ್ಞಾನವು ದಕ್ಕಿತ್ತು. ಆದರೆ ಅವರಿಗೆ ೧೮೦೦ರಿಂದ ೧೮೫೭ರ ನಡುವೆ ನಡೆದ ಕೆಲವು ದಂಗೆಗಳ ಬಗ್ಗೆ ಆತಂಕವಿತ್ತು. ಈ ದಂಗೆಗಳಲ್ಲಿ ಬ್ರಿಟಿಶ್‌ರು ಅಸಹಾಯಕರಾಗಿ ಹೋಗಿದ್ದರು. ಏಕೆಂದರೆ ಈ ದಂಗೆಗಳನ್ನು ಬುಡಕಟ್ಟುಗಳು ನಡೆಸಿದ್ದರು. ಬುಡಕಟ್ಟುಗಳ ತತ್‌ಕ್ಷಣದ ದಾಳಿ ಮತ್ತು ಗೆರಿಲ್ಲಾ ಮಾದರಿಯ ಯುದ್ಧ ತಂತ್ರಗಳು ಬ್ರಿಟಿಷ್ ಪ್ರಭುತ್ವಗಳಿಗೆ ನಡುಕ ಹುಟ್ಟಿಸಿದ್ದವು. ಆದ್ದರಿಂದಲೇ ಬುಡಕಟ್ಟುಗಳ ವಿಷಯದಲ್ಲಿ ಬ್ರಿಟಿಷ್ ಪ್ರಭುತ್ವ ಬಹಳ ಎಚ್ಚರಿಕೆಯ ಹೆಜ್ಜೆಯನ್ನಿಡಲಾರಂಭಿಸಿತು. ಈ ಬುಡಕಟ್ಟುಗಳ ನಾಡಿಮಿಡಿತವನ್ನು ತಿಳಿದುಕೊಳ್ಳಲು ಪ್ರಯತ್ನಿಸಿದರು. ಅದಕ್ಕಾಗಿಯೇ ಹಲವಾರು ಮಾರ್ಗೋಪಾಯಗಳನ್ನು ಕೈಗೊಂಡರು. ಅವುಗಳೆಂದರೆ ಬುಡಕಟ್ಟುಗಳು ವಾಸ ಮಾಡುವ ಪ್ರದೇಶಗಳಿಗೆ ವಿಶೇಷ ಅಧಿಕಾರಿಗಳನ್ನು ನೇಮಿಸಿ ಹೆಚ್ಚಿನ ನಿಗಾವಹಿಸುವಂತೆ ಮಾಡುವುದು. ಅರಣ್ಯ ರಕ್ಷಣೆಯ ನೆಪವೊಡ್ಡಿ ಅನೇಕ ಕಾಯ್ದೆ ಕಾನೂನುಗಳನ್ನು ತಂದು ಬುಡಕಟ್ಟುಗಳನ್ನು ಅರಣ್ಯದೊಳಗಡೆ ಹೋಗದಂತೆ ನೋಡಿಕೊಳ್ಳುವುದು, ಹಾಗೆಯೇ ಅಪರಾಧಿ ಬುಡಕಟ್ಟು ಎಂಬ ಹೆಸರುಕೊಟ್ಟು ಬುಡಕಟ್ಟುಗಳನ್ನು ಒಕ್ಕಲೆಬ್ಬಿಸಿ ತಮ್ಮ ಸೈನ್ಯ ಬಿಡಾರಗಳಿರುವ ಕಡೆ(ಕಂಟೋನ್ಮೆಂಟ್)ಗಳಲ್ಲಿ ಕೂಡಿಹಾಕುವುದು, ಕೊನೆಯ ಮಾರ್ಗೋಪಾಯವೆಂದರೆ ಬುಡಕಟ್ಟುಗಳನ್ನು ಕುರಿತು ಮಾಹಿತಿ ಸಂಗ್ರಹಿಸುವುದು. ಈ ಎಲ್ಲಾ ವಿಧಾನಗಳನ್ನು ಅತ್ಯಂತ ತ್ವರಿತ ಮತ್ತು ಗಂಭೀರವಾಗಿ ಮಾಡುವಂತೆ ಕಂಪನಿ ದಕ್ಷ ಮತ್ತು ಬುದ್ಧಿವಂತನನ್ನು ಮಾನವಶಾಸ್ತ್ರದ ವೇಷ ಹಾಕಿ ಕಳುಹಿಸಿಕೊಡಲಾಯಿತು. ಈ ಮಾಹಿತಿ ಸಂಗ್ರಹಕಾರರು ಅರಣ್ಯ ಮತ್ತು ಬುಡಕಟ್ಟುಗಳು ಅರಣ್ಯ ಮತ್ತು ಹಿಂದಿನ ಪ್ರಭುತ್ವದೊಂದಿಗೆ ಇಟ್ಟುಕೊಂಡಿದ್ದ ಸಂಬಂಧ, ಬುಡಕಟ್ಟುಗಳು ಮತ್ತು ಇತರೆ ಸುತ್ತಮುತ್ತಲು ವಾಸಿಸುವ ಜನ ವರ್ಗಗಳೊಡನೆ ಹೊಂದಿರುವ

ಸಂಬಂಧವನ್ನು ಕುರಿತು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸಿ ಪಟ್ಟಿ ಮಾಡಿ ಕಂಪನಿ ಸರ್ಕಾರಕ್ಕೆ ಒಪ್ಪಿಸುವಂತೆ ವಿದ್ವಾಂಸರನ್ನು ನೇಮಕ ಮಾಡುವುದು, ಹಾಗೆಯೇ ಹಲವಾರು ಮಾರ್ಗಗಳ ಮೂಲಕ ಬುಡಕಟ್ಟುಗಳನ್ನು ನಿಯಂತ್ರಿಸುವ ಕೆಲಸವನ್ನು ಬ್ರಿಟಿಷ್ ಪ್ರಭುತ್ವ ಮಾಡಿತು.

ಇದಲ್ಲದೆ ಬ್ರಿಟಿಶ್‌ರು ತಮ್ಮ ಸಂಸ್ಕೃತಿ ಭಾಷೆ ಹಾಗೂ ಆಡಳಿತವನ್ನು ಜಗತ್ತಿಗೇ ಮಾದರಿ ಮಾಡಬೇಕೆಂಬ ನಿಟ್ಟಿನಲ್ಲಿ ಹಾಗೂ ಅತ್ಯಂತ ಶ್ರೇಷ್ಠ ಎನ್ನುವ ಸ್ವಘೋಷಣೆಯೊಂದಿಗೆ ಅಧ್ಯಯನಗಳನ್ನು ಪ್ರಾರಂಭಿಸಿತು. ಜಗತ್ತಿನ ಇತರೆ ದೇಶಗಳ ಭಾಷೆ, ಸಂಸ್ಕೃತಿ ಹಾಗೂ ಪ್ರಭುತ್ವ ತಮಗಿಂತ ಭಿನ್ನ ಎಂದು ನೋಡದೆ ತಮಗಿಂತ ಕೆಳಮಟ್ಟದ್ದು, ಅನಾಗರಿಕವಾದುದ್ದು, ಅದನ್ನು ಸರಿಪಡಿಸುವುದು ನಮ್ಮ ಹೊಣೆ ಎಂಬ ಭ್ರಮನಿರಸನದಲ್ಲಿ ಮುಂದುವರೆಯಿತು. ಬ್ರಿಟಿಶ್ ಪ್ರಭುತ್ವ ಕೇವಲ ವ್ಯಾಪಾರ, ವಾಣಿಜ್ಯ ಮತ್ತು ಆಡಳಿತದ ಮೇಲಷ್ಟೇ ತಮ್ಮ ಪ್ರಭಾವವನ್ನು ಬೀರಿದೆ. ಸದ್ದಿಲ್ಲದೆ ಸ್ಥಳೀಯ ಸಂಸ್ಕೃತಿ, ಸಾಹಿತ್ಯ, ಚರಿತ್ರೆ ಹಾಗೂ ಭಾಷೆಗಳು ಮತ್ತು ಪ್ರದೇಶಗಳ ಮೇಲೂ ತನ್ನ ಹಿಡಿತವನ್ನು ಸಾಧಿಸಿಕೊಂಡಿತು.

ಯಾವುದೇ ಒಂದು ಪ್ರದೇಶ ಗುರುತಿಸಿಕೊಳ್ಳುವುದು ಅಲ್ಲಿನ ಸಂಸ್ಕೃತಿ, ಸಾಹಿತ್ಯ ಚರಿತ್ರೆ ಹಾಗೂ ಭಾಷೆಯ ಮೂಲಕ; ಇದನ್ನು ಸಮಗ್ರವಾಗಿ ಸಂಸ್ಕೃತಿ ಎಂಬ ಒಂದೇ ಚೌಕಟ್ಟಿನಲ್ಲಿಯೂ ನೋಡಬಹುದು ಅಥವಾ ಬಿಡಿ ಬಿಡಿಯಾಗಿಯೂ ನೋಡಬಹುದು. ಬ್ರಿಟಿಶ್‌ರು ಹಳ್ಳಿ, ಹಳ್ಳಿಯ ಜನಜೀವನವನ್ನು ಅರ್ಥೈಸಿ ತಮ್ಮ ವಿಭಜಿಸಿ ಆಳುವ ನೀತಿಯ ಅನುಷ್ಠಾನವನ್ನು ಸುಲಭವಾಗಿಸಿಕೊಂಡರು.[೩೪]

ಬ್ರಿಟಿಶ್ ಪ್ರಭುತ್ವದ ಆಳ್ವಿಕೆಯನ್ನು ಕೇವಲ ರಾಜಕೀಯ ಹಿನ್ನೆಲೆಯಿಂದಷ್ಟೇ ನೋಡಬಾರದು. ಅದನ್ನು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಹಿನ್ನೆಲೆಯಿಂದ ನೋಡುವ ಅನಿವಾರ್ಯತೆ ಇದೆ.

ಭಾರತವನ್ನು ಬ್ರಿಟಿಶ್‌ರು ವಶಪಡಿಸಿಕೊಂಡ ನಂತರ ಇಡೀ ಭಾರತವನ್ನು ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಏಕ ಚಕ್ರಾಧಿಪತ್ಯಕ್ಕೆ ತರುವ ನಿಟ್ಟಿನಲ್ಲಿ ಕಾರ್ಯ ರೂಪಿಸಿ ಯಶಸ್ವಿಯಾದರು. ಇದು ಕೇವಲ ಮನವೊಲಿಕೆಯಿಂದ ಸಾಧ್ಯವಾಗಲಿಲ್ಲ; ಬದಲಾಗಿ ಬಲವಂತವಾಗಿಯೂ ಮಾಡಲಾಯಿತು. ಇದರಿಂದ ಹಿಂದಿನ ರಾಜ ಪ್ರಭುತ್ವದಲ್ಲಿದ್ದ ಎಲ್ಲಾ ಭೌಗೋಳಿಕ ಮೇರೆಗಳನ್ನು ಒಡೆದು ಒಂದು ಭಾರತವನ್ನು ಕಟ್ಟುವಲ್ಲಿ ಯಶಸ್ವಿಯಾದರು. ಈ ಒಂದು ಭಾರತವನ್ನು ಮೂರು ಪ್ರೆಸಿಡೆನ್ಸಿಗಳ ಮೂಲಕ ಆಳ್ವಿಕೆ ಮಾಡಲು ಪ್ರಾರಂಭಿಸಿದರೂ ಮೊದಲಿಗೆ ಕಲ್ಕತ್ತಾ ಪ್ರೆಸಿಡೆನ್ಸಿ, ಬಾಂಬೆ (ಮುಂಬೈ) ಪ್ರೆಸಿಡೆನ್ಸಿ ಮತ್ತು ಮದ್ರಾಸ್ ಪ್ರೆಸಿಡೆನ್ಸಿ. ಈ ಮೂರು ಮುಖ್ಯ ಪ್ರೆಸಿಡೆನ್ಸಿಗಳ ಮೂಲಕ ಭಾರತದ ಎಲ್ಲಾ ಪ್ರದೇಶಗಳನ್ನು ಒಂದು ಆಡಳಿತದ ಚೌಕಟ್ಟಿಗೆ ತರಲಾಯಿತು. ಹೀಗೆ ತಮ್ಮ ಆಳ್ವಿಕೆಯಲ್ಲಿ ಭಾರತವನ್ನು ಮೂರು ಭಾಗವನ್ನಾಗಿ ಮಾಡಿ

ವಿಭಜಿಸಿ ಆಳ್ವಿಕೆ ಮಾಡಲಾಯಿತು. ವಿಭಜನೆಯು ಕೇವಲ ಆಡಳಿತಾತ್ಮಕವಾಗಿರದೆ ಬೌದ್ಧಿಕ, ಮಾನಸಿಕ, ಆರ್ಥಿಕ ಮತ್ತು ಧಾರ್ಮಿಕ ಹಿನ್ನೆಲೆಯನ್ನು ಹೊಂದಿತ್ತು ಎಂದು ವಿದ್ವಾಂಸರು ಹೇಳುತ್ತಾರೆ. ಇದು ಮುಂದೆ ಭಾರತದ ಚರಿತ್ರೆಯ ಸಂದರ್ಭದಲ್ಲಿ ತಮ್ಮದೇ ಆದ ಪರಿಣಾಮವನ್ನು ಬೀರಿತು.

ಭಾರತಕ್ಕೆ ಬ್ರಿಟಿಶ್‌ರ ಆಗಮನದಿಂದ ಏನೆಲ್ಲಾ ದುಷ್ಪರಿಣಾಮಗಳಾದವು ಎಂದು ವಿದ್ವಾಂಸರು ಚರ್ಚಿಸಿದರು; ಕೆಲವು ಧಾರ್ಮಿಕ ಸುಧಾರಣಾ ಕಾರ್ಯಗಳು ನಡೆದವು ಎಂದು ಒಪ್ಪಿಕೊಳ್ಳುತ್ತಾರೆ. ಪರಂಪರೆಯಿಂದ ದೇವರು, ಧರ್ಮ ಮತ್ತು ಜಾತಿಯ ಹೆಸರಲ್ಲಿ ನಡೆಸಿಕೊಂಡು ಬಂದಿದ್ದ ಅಸ್ಪೃಶ್ಯತೆ, ಮೂಢನಂಬಿಕೆ, ಸತಿಸಹಗಮನ ಪದ್ಧತಿ, ಬಾಲ್ಯವಿವಾಹ, ನಿರ್ದಿಷ್ಟ ಜಾತಿಯವರು ಶಿಕ್ಷಣ ಪಡೆಯಬೇಕೆಂಬ ನಿಯಮಗಳ ರಚನೆಗಳನ್ನು ನಾಶ ಮಾಡಿ, ಶಿಕ್ಷಣ, ಜ್ಞಾನ, ತಿಳುವಳಿಕೆ, ಆರೋಗ್ಯ, ಕೈಗಾರಿಕೆಗಳನ್ನು ಸಮಾನತೆ, ಮುಂತಾದ ಕ್ರಾಂತಿಗಳನ್ನು ಮಾಡಿದರು. ಇವುಗಳ ಹಿಂದೆ ಯಾವ ಕಾರಣಗಳಿದ್ದರೂ ಕೆಲವೊಂದು ಪ್ರಯೋಜನಗಳಾಗಿವೆ ಎಂಬುದನ್ನು ಯಾರು ಅಲ್ಲಗಳೆಯಲಾಗದು.

ಬ್ರಿಟಿಶ್‌ರ ಕಾಲಘಟ್ಟವನ್ನು ಅಧ್ಯಯನ ಮಾಡುವ ಯಾರೇ ಆಗಲಿ ಬ್ರಿಟಿಶ್‌ರ ಕಾಲಘಟ್ಟದಲ್ಲಿ ರಚನೆಯಾದ ವರದಿಗಳು ಹಾಗೂ ದಾಖಲೆಗಳನ್ನು ಅವಲಂಬಿತವಾಗಿ ಪ್ರಾಥಮಿಕ ಆಕರಗಳೆಂದು ನಂಬಿಕೊಂಡು ಅಧ್ಯಯನ ಮಾಡುವುದು ಸಹಜ. ಆದರೆ ಹೀಗೆ ಅಧ್ಯಯನ ನಡೆಸುವಾಗ ಅಧ್ಯಯನಕಾರರಿಗೆ ತಮ್ಮದೇ ಆದ ಸ್ಪಷ್ಟ ದೃಷ್ಟಿಕೋನಗಳ ಅತ್ಯವಶ್ಯಕ ಇಲ್ಲವಾದರೆ ಆಕರಗಳ ನಿರ್ಮಾಣದ ಹಿಂದಿರುವ ಧೋರಣೆಗಳು ಅರ್ಥವಾಗುವುದಿಲ್ಲ. ಇವುಗಳು ಅಧ್ಯಯನಕಾರರನ್ನು ದಾರಿ ತಪ್ಪಿಸುತ್ತದೆ. ಅದರಲ್ಲೂ ಬ್ರಿಟಿಶ್‌ರ ಕಾಲಘಟ್ಟದ ಬಗ್ಗೆ ಅಧ್ಯಯನ ಮಾಡುವವರಿಗೆ ಬ್ರಿಟಿಶ್‌ರ ಧೋರಣೆಯ ಪರಿಜ್ಞಾನ ಇರಬೇಕು. ಇಲ್ಲವಾದರೆ ಬ್ರಿಟಿಶ್‌ರ ಗರಡಿಯಲ್ಲಿ ಬೆಳೆದ ಕೆಲವು ಭಾರತದ ಚರಿತ್ರೆಕಾರರು ಬ್ರಿಟಿಶ್‌ರು ಹಾಕಿಕೊಟ್ಟ ಹಾದಿಯಲ್ಲಿ ಭಾರತದ ಚರಿತ್ರೆಯನ್ನು ಬರೆದು ಭಾರತದ ರಾಷ್ಟ್ರೀಯ ಚರಿತ್ರೆ ಎಂದು ಕರೆದಂತಾಗುತ್ತದೆ. ಬ್ರಿಟಿಶ್‌ರು ಇದೇ ಭಾರತೀಯ ಜನರನ್ನು ಒಂದು ಭಾಗವಾಗಿ ನೋಡಿದರೆ, ಅದರಲ್ಲಿ ಬುಡಕಟ್ಟುಗಳನ್ನು ಒಂದು ಭಾಗವಾಗಿ ತಾವು ಭಾರತದಲ್ಲಿರುವವರೆಗೆ ಎಚ್ಚರಿಕೆಯಿಂದಲೇ ನೋಡುತ್ತಾ ಬಂದಿದ್ದರು. ಅದಕ್ಕಾಗಿ ಅವರು ಹಲವಾರು ಕಾನೂನು ಕ್ರಮಗಳನ್ನು ರೂಪಿಸಿದರು. ಅದರಲ್ಲೂ ಬುಡಕಟ್ಟುಗಳ ಅಧ್ಯಯನದ ಬಗ್ಗೆ ತೋರಿದ ಕಾಳಜಿ ಗಮನಾರ್ಹವಾದುದು.

ಪುನರುಜ್ಜೀವನದ ಕಾಲದ ನಂತರ ಯುರೋಪಿನ ಶೈಕ್ಷಣಿಕ ಕ್ಷೇತ್ರದಲ್ಲಿ ಉಂಟಾದ ಜ್ಞಾನಕ್ರಾಂತಿಯು ಕೇವಲ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಬದಲಾವಣೆ ಉಂಟುಮಾಡದೆ, ಶೈಕ್ಷಣಿಕ ಸಮಾಜ ವಿಜ್ಞಾನದ ಕ್ಷೇತ್ರದಲ್ಲೂ ಹೊಸ ಹೊಸ ಸಿದ್ಧಾಂತಗಳನ್ನು ಹುಟ್ಟುಹಾಕಿತು.

ಇಂತಹ ಆವಿಷ್ಕಾರದ ಫಲವಾಗಿಯೇ ಹೊಸ ಹೊಸ ಜಲಮಾರ್ಗಗಳನ್ನು ಕಂಡುಹಿಡಿಯಲು ಯೋಜನೆಗಳು ಆರಂಭವಾದವು. ಇದು ಒಂದು ಹವ್ಯಾಸದ ರೀತಿಯಲ್ಲಿ ಮಾರ್ಪಾಡು ಹೊಂದಿದ್ದರೂ ಇದರ ಹಿಂದೆ ಯುರೋಪಿನಲ್ಲಿ ಉತ್ಪಾದನೆಗೊಳ್ಳುತ್ತಿದ್ದ ಸರಕುಗಳನ್ನು ಮಾರುವ ಮತ್ತು ಉತ್ಪಾದನೆಯನ್ನು ಹೆಚ್ಚಿಸುವ ಇರಾದೆಯು ಇತ್ತು. ಈ ಎಲ್ಲಾ ಧ್ಯೇಯೋದ್ದೇಶಗಳ ಫಲವಾಗಿಯೇ ಹೊಸ ಹೊಸ ಜಲಮಾರ್ಗಗಳು ಆವಿಷ್ಕಾರಗೊಂಡವು. ಹೀಗೆ ಹೊಸ ಜಲಮಾರ್ಗಗಳ ಮೂಲಕ ಹೋದ ಕಡೆಗಳಲ್ಲೆಲ್ಲ ತಮ್ಮ ಸೈನ್ಯವನ್ನು ಬಳಸಿ ತಮ್ಮದೇ ಆದ ವಸಾಹತುಗಳನ್ನು ನಿರ್ಮಾಣ ಮಾಡಿದರು. ಸೋತು ಅಧೀನವಾದ ದೇಶಗಳಲ್ಲಿ ತಮ್ಮ ರಾಜಕೀಯ ಆಳ್ವಿಕೆ ನಿರಂತರವಾಗಿಸಿಕೊಳ್ಳಲು ಅನೇಕ ಚಿಂತನೆಗಳನ್ನು ನಡೆಸಿದರು. ಇದರ ಫಲವಾಗಿಯೇ ಸಮಾಜ ವಿಜ್ಞಾನದ ಅನೇಕ ಜ್ಞಾನ ಶಿಸ್ತುಗಳನ್ನು ರೂಪಿಸಿದರು. ಈ ಜ್ಞಾನ ಶಿಸ್ತುಗಳ ಮೂಲಕ ತಮ್ಮ ಅಧೀನಕ್ಕೊಳಪಟ್ಟ ಜನ ಮತ್ತು ಸಮಾಜವನ್ನು ಅಧ್ಯಯನ ಮಾಡಲಾರಂಭಿಸಿದರು.

ಪ್ರಮುಖವಾಗಿ ರಾಜಕೀಯ ಉದ್ದೇಶಗಳ ಈಡೇರಿಕೆಗಾಗಿಯೇ ರೂಪಿಸಿಕೊಂಡ ಇವರ ಶೈಕ್ಷಣಿಕ ವಿಧಾನವು ಅತ್ಯಂತ ಗಂಭೀರ ಮತ್ತು ಮಹತ್ವದಾಗಿತ್ತು. ಏಕೆಂದರೆ ಈ ವಿಧಾನವು ಕೇವಲ ರಾಜಕೀಯ ಅಂಶಗಳ ಜೊತೆಗೆ ಸಾಮಾಜಿಕ ಜೀವನ ವಿಧಾನವನ್ನು ಮತ್ತು ಜನರ ಅನಿವಾರ್ಯತೆ ಹಾಗೂ ಅವಲಂಬನೆಯನ್ನು ಕೂಡ ಅಧ್ಯಯನ ಮಾಡಲಾರಂಭಿಸಿತು. ರಾಜಕೀಯ ಉದ್ದೇಶಗಳ ಮಾಹಿತಿ ಸಂಗ್ರಹಕ್ಕೆ ಬಂದ ಕೆಲವು ಮೇಧಾವಿಗಳು ಮೂಲತಃ ಶೈಕ್ಷಣಿಕ ಕ್ಷೇತ್ರದ ತಜ್ಞರುಗಳಾಗಿರದೆ ಇವರು ಬೇರೆ ಬೇರೆ ಉದ್ದೇಶಗಳಿಗಾಗಿ ಭಾರತಕ್ಕೆ ಬಂದು ಬ್ರಿಟಿಶ್ ಇಂಡಿಯಾ ಕಂಪನಿಯಲ್ಲಿ ಸೇವೆ ಸಲ್ಲಿಸುತ್ತಿದ್ದವರಾಗಿದ್ದರು. ಹೀಗೆ ವಿಭಿನ್ನ ಕ್ಷೇತ್ರದಲ್ಲಿ ಪರಿಣತಿ ಪಡೆದ ಕಂಪನಿ ಅಧಿಕಾರಿಗಳನ್ನು ಭಾರತದ ಸಮಾಜವನ್ನು ಅಧ್ಯಯನ ಮಾಡಲು (ಜನರನ್ನು)ಮಾನವಶಾಸ್ತ್ರಜ್ಞರಾಗಿ ರೂಪಾಂತರಿಸಿ ಕಳುಹಿಸಲಾಯಿತು. ಹೀಗೆ ರೂಪಾಂತರಗೊಂಡು ಬಂದವರಲ್ಲಿ ಪ್ರಮುಖರೆಂದರೆ ರಿಸ್ಲೆ, ಎಂಥೋವನ್, ಥರ್ಸ್ಟನ್ ಮತ್ತು ಪಾಸೆಟ್ ಮುಂತಾದವರು.

ಇದರ ಭಾಗವಾಗಿಯೇ ಮ್ಯೂಸಿಯಂ ನೋಡಿಕೊಂಡಿದ್ದು ಥರ್ಸ್ಟನ್ ರಾತ್ರೋರಾತ್ರಿ ಮಾನವಶಾಸ್ತ್ರಜ್ಞನಾದ ಮತ್ತು ಪೋಲೀಸ್ ಅಧಿಕಾರಿಯಾಗಿದ್ದ ಪಾಸೇಟ್ ಮಾನವಶಾಸ್ತ್ರಜ್ಞನಾದನು. ಹಾಗೆಯೇ ರ್‍ಯಾಡ್ ಕ್ಲಿಪ್ ಬ್ರೋನ್ ಅಂಡಮಾನ್ ದ್ವೀಪ ನಿವಾಸಿಗಳ ಸಂಸ್ಕೃತಿಯ ಬಗ್ಗೆ ಅಧ್ಯಯನ ನಡೆಸಿದನು. ರಿವರ್ಸ್ ಅವರು ೧೯೦೬ರಲ್ಲಿ ಭಾರತದ ನೀಲಗಿರಿ ಬೆಟ್ಟದಲ್ಲಿ ವಾಸಿಸುವ ತೋಡರ ಬಗ್ಗೆ ಅಧ್ಯಯನ ನಡೆಸಿದರು. ಸಿ.ಜಿ. ಸೆಲಿಗ್ ಮನ್ ಮತ್ತು ಬ್ರೆಂಡ್ ಅವರು ಸಿಲೋನಿನ ವೆಡ್ಡಗಳ ಬಗ್ಗೆ ಅಧ್ಯಯನ ನಡೆಸಿದರು. ಫ್ರಾನ್ಸ್ ಬೋ ಆಸ್ ಅವರು ಕ್ವಾಕಿಯೂಟಲ್ ಇಂಡಿಯನ್ ಬುಡಕಟ್ಟಿನ ಧರ್ಮದ ಬಗ್ಗೆ ಅಧ್ಯಯನ ನಡೆಸಿದರು. ಲೋವಿ ಕ್ರೋ ಅವರು ಇಂಡಿಯನ್ ಬುಡಕಟ್ಟಿನ ಬಗ್ಗೆ ಅಧ್ಯಯನ ನಡೆಸಿದರು. ಪಾರ್ಜೂನ್ ಅವರು

ಡೋಬು ದ್ವೀಪದ ಬುಡಕಟ್ಟು ಜನ ಮಾಟ-ಮಂತ್ರ ಮತ್ತು ಮಾಟಗಾರರನ್ನು ಕುರಿತು ಅಧ್ಯಯನ ನಡೆಸಿದರು. ಐಸಾಕ್ ಶೇಪೇರಾ ಅವರು ಆಫ್ರಿಕಾದ ಬುಡಕಟ್ಟಿನ ಬಗ್ಗೆ ಅಧ್ಯಯನ ನಡೆಸಿದರು. ಮ್ಯಾಲಿನೋಸ್ಕಿ ಅವರು ಟ್ರೋಬ್ರಿಯಾಂಡ್ ದ್ವೀಪದ ಬುಡಕಟ್ಟಿನ ಬಗ್ಗೆ ಅಧ್ಯಯನ ನಡೆಸಿದರು. ಕೀರ್ತಿ ಎವೆನ್ಸ್ ಪ್ರಿಚರ್ಡ್ ಅವರು ನೂಯರ್ ಮತ್ತು ಆ ಜಾಂಡೆ ಬುಡಕಟ್ಟಿನ ಬಗ್ಗೆ ಅಧ್ಯಯನ ನಡೆಸಿದರು. ರೇಮೆಂಡ್ ಫರ್ತ್ ಅವರು ಪೆಸಿಫಿಕ್ ಸಾಗರದಲ್ಲಿದ್ದ ಪಾಲಿನೇಷಿಯಕ್ಕೆ ಸೇರಿದ ಟಕೋಪಿಯಾ ಬುಡಕಟ್ಟಿನ ಬಗ್ಗೆ ಅಧ್ಯಯನ ನಡೆಸಿದರು. ನಾಡೆಲ್ ಅವರು ಸೂಡಾನ್ ನೂಬಾ ಪರ್ವತಗಳಲೂ ವಾಸ ಮಾಡುತ್ತಿದ್ದ ಹೀಬಾನ್, ಬಡೆರೋ, ಟೈರಾ, ಕೊರಾಂಗೋ, ಟುಲ್ಲಿಷಿ, ಮೆಸಾಕಿನ ಮೋರೋ, ಕೊಯಾಲಿಬ್, ಸ್ಕೀಮಾ ಮತ್ತು ಡಿಲ್ಲಿಂಗ್ ಎಂಬ ಹತ್ತು ಬುಡಕಟ್ಟುಗಳ ಸಾಂಸ್ಕೃತಿಕ ಅಧ್ಯಯನಗಳನ್ನು ಮಾಡಿದರು.

ಹೀಗೆ ಕಂಪನಿ ಆಡಳಿತದ ಆಜ್ಞೆಯ ಮೇರೆಗೆ ಮಾನವಶಾಸ್ತ್ರಜ್ಞರಾಗಿ ರೂಪಾಂತರಗೊಂಡ ಈ ಅಧಿಕಾರಿಗಳು ಭಾರತದ ವೈವಿಧ್ಯಮಯವಾದ ಜನ ಸಮುದಾಯಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಸೋತರು. ಇವರು ತಮಗೆ ತೋಚಿದ ಮತ್ತು ತಮ್ಮ ಬೌದ್ಧಿಕ ಆಲೋಚನೆಗಳಿಗೆ ಒಲಿದ ದೃಷ್ಟಿಕೋನಗಳಿಂದ ಸಮುದಾಯಗಳನ್ನು ಗ್ರಹಿಸಲು ಮುಂದಾದ್ದು ನಾವು ಬಂದಿರುವುದೇ ಇವರ ಉದ್ಧಾರ ಮಾಡಿ ನಾಗರಿಕರನ್ನಾಗಿ ಮಾಡುವುದಕ್ಕೆ ಎಂಬ ಭ್ರಮನಿರಶನ ಉದ್ದೇಶದಿಂದ ಭಾರತದ ಪ್ರತಿಯೊಂದು ಸಂಸ್ಕೃತಿಯನ್ನು ಅಭ್ಯಸಿಸಲು ಪ್ರಾರಂಭಿಸಿದರು. ಸಂಸ್ಕೃತಿಯ ಸೂಕ್ಷ್ಮ ಎಳೆಗಳನ್ನು ಗ್ರಹಿಸಿದ ಇವರು ತಮ್ಮ ಕಣ್ಣ ಮುಂದೆ ಕಂಡ ಕೆಲವು ಉಳ್ಳ ಸಮಾಜದ ಮೇಲ್ವರ್ಗದವರ ಸಂಸ್ಕೃತಿಯನ್ನು ನೋಡಿ ಇದೇ ಭಾರತೀಯ ಸಂಸ್ಕೃತಿ ಎಂದು ಭಾವಿಸಿ ದಾಖಲಿಸಿದರು.

ಏಕೆಂದರೆ ಆಡಳಿತಾತ್ಮಕ ಅನುಕೂಲಕ್ಕಾಗಿ ರೂಪಾಂತರ ಹೊಂದಿದ ಮಾನವ ಶಾಸ್ತ್ರಜ್ಞರಾದ ಇವರ ಪರಿಕಲ್ಪನೆಗಳು ಶುದ್ಧಾಂಗವಾಗಿ ಒಂದು ಶೈಕ್ಷಣಿಕ ಅಥವಾ ಸಂಸ್ಕೃತಿ ಮೀಮಾಂಸೆಯಿಂದ ಬಂದದ್ದಾಗಿರಲಿಲ್ಲ. ಇವರು ಕೇವಲ ತಮ್ಮ ಆಡಳಿತಾತ್ಮಕ ಅನೂಕೂಲತೆಗಳಿಗೆ ತಕ್ಕಂತೆ ಸಮುದಾಯ ಗಳನ್ನು ಅಧ್ಯಯನ ಮಾಡಲು ಮುಂದಾದರು.

ಆದರೆ ಈ ರೂಪಾಂತರ ಮಾನವಶಾಸ್ತ್ರಜ್ಞರಿಗೆ ಸಮುದಾಯದ ಜನರನ್ನು ಅವರ ನಡವಳಿಕೆ, ತಿಳುವಳಿಕೆ ಮತ್ತು ಜ್ಞಾನಮಟ್ಟವನ್ನು ಅರ್ಥೈಸಿಕೊಂಡು ಹಾಗೆಯೇ ಒಂದು ಸೈದ್ಧಾಂತಿಕ ಹಿನ್ನೆಲೆಯಿಂದ ಜಗತ್ತಿಗೆ ಪರಿಚಯಿಸುವ ತುರ್ತು ಇರಲಿಲ್ಲ. ಆದ್ದರಿಂದಲೇ ಒಂದು ಸೃಜನಶೀಲ ಶೈಕ್ಷಣಿಕ ಆ ಕೃತಿಯನ್ನು ಮಾನವಕುಲಶಾಸ್ತ್ರ (Ethnography) ದಿಂದ ನೋಡಲೆತ್ನಿಸದೆ. ಈ ಜ್ಞಾನಶಿಸ್ತನ್ನು ಆಕ್ರಮಣಕಾರಿ ಆಳ್ವಿಕೆಯ ವಿಸ್ತರಣೆಗೆ ಆಯುಧದಂತೆ ಬಳಸಿಕೊಂಡರು.

ಹೀಗೆ ಭಾರತದ ಸಮುದಾಯಗಳನ್ನು ಅಧ್ಯಯನ ಮಾಡಲು ರೂಪಾಂತರಗೊಂಡ ಅಧಿಕಾರಿಗಳು ತಮ್ಮ ಉದ್ದೇಶದ ಈಡೇರಿಕೆಗಾಗಿ ಕಾರ್ಯಪ್ರವೃತ್ತರಾದರು. ೧೭೭೪ರಲ್ಲಿ ವಿಲಿಂ ಜೋನ್ಸ್ ಎಂಬುವರು "ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್" ಎಂಬ ವಸಾಹತು ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯು ಕಂಪನಿ ಮತ್ತು ಬ್ರಿಟಿಷ್ ಮಿಲಿಟರಿ ಆಡಳಿತಕ್ಕೆ ಮಾಹಿತಿ ಒದಗಿಸುವ ಅಂಗಸಂಸ್ಥೆಯಾಗಿ ಮಾರ್ಪಟ್ಟಿತ್ತು.

ನಂತರ ಹರ್ಬರ್ಟ್ ರಿಸ್ಲೆ ಅವರ ನಾಯಕತ್ವದಲ್ಲಿ "Ethnographical Surve of India" ಎಂಬ ಸಂಸ್ಥೆಯು ಆರಂಭಗೊಂಡಿತು. ಇದು ಕೂಡ ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಸಂಸ್ಥೆಯ ಕಾರ್ಯ ವೈಖರಿಯನ್ನು ಮುಂದುವರಿಸಿತು. ಈ ಸಂಸ್ಥೆಗಳಿಂದ ನಿಯೋಜನೆಗೊಂಡ ಅಧಿಕಾರಿಗಳು (ಮಾನವಶಾಸ್ತ್ರಜ್ಞರು) ಜನರನ್ನು ಕೇವಲ ಮಾಹಿತಿ ವಸ್ತುಗಳಾಗಿ ಪರಿಗಣಿಸಿ ಇವರ ಬದುಕಿನ ಪಾರಂಪರಿಕ ಜ್ಞಾನ ಮತ್ತು ಕೌಶಲ್ಯಗಳನ್ನು ಗುರುತಿಸುವ ಕಿಂಚಿತ್ತು ಕಾಳಜಿ ತೋರಲಿಲ್ಲ. ಇಂತಹ ವ್ಯವಸ್ಥೆಯಲ್ಲಿಯೇ ಅಬೆದುಬಾಯಿಸ್ ಮತ್ತು ಎರಿಯರ್ ಎಲ್ವಿನ್ ಎಂಬ ಮಾನವಶಾಸ್ತ್ರಜ್ಞರು ವಿಭಿನ್ನವಾಗಿ ಗುರುತಿಸಿಕೊಂಡರು. ಇವರು ಕಂಪನಿಯ ಧ್ಯೇಯೋದ್ದೇಶಗಳನ್ನು ಬದಿಗೊತ್ತಿ ಪಾರಂಪರಿಕ ಜನ ಸಮುದಾಯಗಳ ಜ್ಞಾನ ಕೌಶಲ್ಯಗಳನ್ನು ಗುರುತಿಸಿ ಅವುಗಳನ್ನು ದಾಖಲಿಸುವ ಜೊತೆಗೆ ಸಂರಕ್ಷಿಸಿ ಮುಂದಿನ ಪೀಳಿಗೆಗೆ ಉಳಿಯುವಂತೆ ಮಾಡಲು ಪ್ರಯತ್ನಿಸಿದರು. ಇವರು ಸಮುದಾಯಗಳ ಅಥವಾ ಬುಡಕಟ್ಟುಗಳ ಮಾನವೀಯ ಮೌಲ್ಯಗಳನ್ನು ಸಮಸ್ತರು ಅನುಸರಿಸುವಂತೆ ಮನವಿ ಮಾಡಿಕೊಂಡು, ಇಂತಹ ಆದಿವಾಸಿ ಜನಸಮುದಾಯಗಳನ್ನು ಗೌರವದಿಂದ ಬದುಕುವಂತೆ ಮಾಡುವ ನಿಟ್ಟಿನಲ್ಲಿ ಅನೇಕ ಪ್ರಯತ್ನಗಳನ್ನು ಮಾಡಿದರು. ಆದರೆ ಲೂಯಿಡು ಮೋನೋ, ಅರ್ನಾಲ್ಡ್, ಎಸ್.ಸಿ.ರಾಯ್, ಮುಜುಂದಾರ್, ಆರ್.ಅ.ಚಂದ್ರಕಾಂತ ಅವರು ಬ್ರಿಟಿಶ್ಇಂಡಿಯಾ ಕಂಪನಿ ಮತ್ತು ಮಿಲಿಟರಿ ಆಡಳಿತಕ್ಕೆ ಅನುಕೂಲವಾಗುವಂತೆ ರೂಪಾಂತರಗೊಂಡ ಮಾನವಶಾಸ್ತ್ರಜ್ಞರ ಹೆಚ್ಚು ಗುರುತುಗಳ ಮೇಲೆ ಸ್ವಲ್ಪವು ಭಂಗ ಬಾರದಂತೆ ಹೆಜ್ಜೆಯಿಡುತ್ತಾ ಸಾಗಿದರು ಹಾಗೂ ಯುರೋಪಿನ ಕ್ಲಾಸಿಕಲ್ ಮಾನವಶಾಸ್ತ್ರದ ಶೈಕ್ಷಣಿಕ ವಿಧಾನವನ್ನು ಚಾಚೂತಪ್ಪದೆ ಪಾಲಿಸಿಕೊಂಡು ಕಂಪನಿ ಸರ್ಕಾರದಿಂದ ಶಹಬ್ಬಾಷ್‌ಗಿರಿಯನ್ನು ಪಡೆದುಕೊಂಡರು.[೩೫]

ಹೀಗೆ ತಮ್ಮ ಆಡಳಿತದ ಅನುಕೂಲತೆಗಳಿಗೆ ಅನುಗುಣವಾಗಿ ಮಾನವಶಾಸ್ತ್ರಜ್ಞರಾಗಿ ರೂಪಾಂತರಗೊಂಡ ಮೇಲಿನ ಅಧಿಕಾರಿಗಳು ನೀಡಿದ ಮಾಹಿತಿಯ ಆಧಾರದ ಮೇಲೆ ಎಚ್ಚೆತ್ತುಕೊಂಡ ಬ್ರಿಟಿಶ್ ಈಸ್ಟ್ ಇಂಡಿಯಾ ಕಂಪನಿ ಸರ್ಕಾರ ತಮ್ಮ ಆಡಳಿತಕ್ಕೆ ಪ್ರತಿರೋಧ ನೀಡುತ್ತಿದ್ದ ಬುಡಕಟ್ಟು ಸಮುದಾಯಗಳನ್ನು ೧೮೭೪ ರಲ್ಲಿ "Criminal tribe" ಎಂಬ ಹೆಸರುಕೊಟ್ಟು "Criminal tribe act"ನ್ನು ಜಾರಿಗೆ ತಂದು ಸಮುದಾಯಗಳನ್ನು ನಿಯಂತ್ರಿಸಲು ಪ್ರಾರಂಭಿಸಿದರು.

ಭಾರತದಲ್ಲಿ ಬುಡಕಟ್ಟುಗಳ ಅಧ್ಯಯನ ಕೈಗೊಂಡವರಲ್ಲಿ ಅನೇಕ ವರ್ಗಗಳನ್ನು ಕಾಣಬಹುದಾಗಿದೆ. ಮಾನವ ವಿಜ್ಞಾನದಲ್ಲಿ ಪರಿಣಿತಿ ಪಡೆದವರು ಒಂದು ವರ್ಗವಾದರೆ 'ಬ್ರಿಟಿಶ್‌ಈಸ್ಟ್ ಇಂಡಿಯಾ ಕಂಪನಿ ಮತ್ತು ಮಿಲಿಟರಿ ಆಡಳಿತದ ಅನುಕೂಲಕ್ಕಾಗಿ ರೂಪಾಂತರ ಗೊಂಡ ಮಾನವಶಾಸ್ತ್ರರು ಒಂದು ವರ್ಗ; ಹಾಗೆಯೇ ಧರ್ಮ ಪ್ರಚಾರಕರು ಹವ್ಯಾಸಿಗಳು ಮುಂತಾದ ವರ್ಗದವರು ಭಾರತದ ಬುಡಕಟ್ಟುಗಳನ್ನು ಅಧ್ಯಯನ ಮಾಡಿದರು.

ಈ ಮೇಲಿನ ಎಲ್ಲಾರು ತಮ್ಮ ಅಧ್ಯಯನದ ಅನುಕೂಲಕ್ಕಾಗಿ ಇದೇ ಭಾರತ ಬುಡಕಟ್ಟುಗಳನ್ನು ಮೂರು ಭಾಗಗಳಾಗಿ ವಿಂಗಡಿಸಿಕೊಂಡರು ಅವುಗಳೆಂದರೆ.

೧. ಈಶಾನ್ಯ ವಲಯದಲ್ಲಿ ಕಂಡು ಬರುವ ಬುಡಕಟ್ಟುಗಳು

೨. ಮಧ್ಯ ವಲಯದಲ್ಲಿ ಕಂಡು ಬರುವ ಬುಡಕಟ್ಟುಗಳು

೩. ದಕ್ಷಿಣ ವಲಯದಲ್ಲಿ ಕಂಡು ಬರುವ ಬುಡಕಟ್ಟುಗಳು

ಈಶಾನ್ಯ ವಲಯದಲ್ಲಿ ಕಂಡು ಬರುವ ಬುಡಕಟ್ಟುಗಳೆಂದರೆ ಈಶಾನ್ಯ ಪ್ರದೇಶದ ಅಸ್ಸಾಂ, ನಾಗಲ್ಯಾಂಡ್, ಮಣಿಪುರ, ತ್ರಿಪುರ ಮುಂತಾದವುಗಳಲ್ಲಿ ಛಾರಿಗೆ, ಯಚುಯಿ, ತುಕೋಮಿ, ಅಖಾಸ್, ಡಫ್ಲಾಸ್, ಮಿಕಿರ್, ಮಿರಿಸ್, ಅಬೋರ್, ಮಿಷ್ಮಿಸ್, ಕುಕಿಸ್, ನಾಗಾ (ಕಾಚಾನಾಗಾ, ಅಂಗಾಮಿ ನಾಗಾ, ರಂಗ್ಮಾ ನಾಗಾ, ಲೋಟಾ ನಾಗಾ, ಸೇಮಾ ನಾಗಾ, ಅವೋನಾಗಾ) ಮುಂತಾದವುಗಳನ್ನು ಕುರಿತು ಅನೇಕ ಅಧ್ಯಯನಗಳು ನಡೆದಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಹಟ್ಟನ್ ಅವರು ಅಂಗಾಮಿ ನಾಗಾ ಹಾಗೂ ಸೇಮಾನಾಗಾಗಳನ್ನು ಕುರಿತು ಅಧ್ಯಯನ ನಡೆಸಿದರು. ಮಿಲ್ಸ್ ಅವರು ಲ್ಹೋಟಾನಾಗಾ, ಅವೋನಾಗಾ ಹಾಗೂ ರೆಂಗ್ಮಾನಾಗಾಗಳನ್ನು ಕುರಿತು ಅಧ್ಯಯನ ನಡೆಸಿದ್ದಾರೆ. ಇದರ ಜೊತೆಗೆ ಆವೋ ನಾಗಾ ಬುಡಕಟ್ಟಿನ ಬಗ್ಗೆ ಸ್ಮಿತ್ ಮತ್ತು ಮಜುಂದಾರ್ ಅಧ್ಯಯನ ಮಾಡಿದ್ದಾರೆ ಮತ್ತು ವಾನ್ ಫ್ಯೂರರ್ ಹೈಮತ್ ಡಾಫ್ಮ್ ಅವರು ನೇಕೆಡ್‌ನಾಗಾ ಬುಡಕಟ್ಟಿನ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಇವುಗಳ ಜೊತೆಗೆ ನಾಗಾಗಳ ಜೀವನ ವಿಧಾನ, ನೇಫಾ ಪ್ರದೇಶದ ಬುಡಕಟ್ಟುಗಳ ಜೀವನಕ್ರಮಗಳು ಮತ್ತು ಸರ್ಕಾರದ ನೀತಿ ನಿಯಮಗಳು ಹಾಗೂ ಯಾವ ರೀತಿಯ ನಿಯಮಗಳ ಅವಶ್ಯಕತೆ ಇದೆ, ನೇಫಾ ಬುಡಕಟ್ಟಿನ ಪುರಾಣ ಕಥೆಗಳು ಇವರ ಮೇಲೆ ನಡೆದ ಧರ್ಮಪ್ರಚಾರಗಳು ಹಾಗೂ ಪ್ರವಾಸಿಗರ ಪ್ರಭಾವಗಳು ಎಂತವು ಎಂಬೆಲ್ಲಾ ಅಂಶಗಳನ್ನಿಟ್ಟುಕೊಂಡು ಎರಿಯರ್ ಎಲ್ವಿನ್ ಅಧ್ಯಯನ ನಡೆಸಿದರು.[೩೬]

ಮಧ್ಯವಲಯದಲ್ಲಿ ಕಂಡು ಬರುವ ಬುಡಕಟ್ಟುಗಳೆಂದರೆ: ಸಂತಾಲ್, ಬಿಲ್, ಖೋಂಡ, ಹೋ, ಮುಂಡಾ, ಬರೆಯಾನ್, ಬೈಗಾ, ಅಗೇರಿಯಾ, ಸವೋರ ಭೂಮಿಯೇ, ಬಿರ್‌ಹಾರ್, ಖರಿಯಾ, ಕೋಲ್, ಮುಂತಾದ ಬುಡಕಟ್ಟುಗಳು ಮಧ್ಯಪ್ರದೇಶ, ಒರಿಸ್ಸಾ, ರಾಜಸ್ಥಾನ,

ಬಿಹಾರಗಳಲ್ಲಿ ಕಂಡು ಬರುತ್ತವೆ. ಈ ಬುಡಕಟ್ಟುಗಳು ಇಂದು ತಮ್ಮ ಆಚಾರ ವಿಚಾರವನ್ನು ಬಲು ಬೇಗನೇ ಕಳೆದುಕೊಳ್ಳುತ್ತಾ ಇವೆ. ಇವುಗಳ ಮೇಲೆ ಅನೇಕ ಧರ್ಮಗಳು ನಿರಂತರ ದಾಳಿ ಮಾಡುತ್ತಾ ಬರುತ್ತಿವೆ.

ಮಧ್ಯವಲಯದ ಬುಡಕಟ್ಟುಗಳನ್ನು ಕುರಿತು ನಡೆದಿರುವ ಪ್ರಮುಖ ಅಧ್ಯಯನಗಳೆಂದರೆ ಭಿಲ್ ಬುಡಕಟ್ಟಿನ ಬಗ್ಗೆ ಟಿ.ಬಿ. ನಾಯಕ್ ಅಧ್ಯಯನ ನಡೆಸಿದ್ದಾರೆ. ಗ್ರಿಗ್‌ಸನ್ ಅವರು ಒಸ್ತಾರಿನ, ಮೇರಿಯಾ ಗೋಡ್ ಬುಡಕಟ್ಟಿನ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಕಲ್‌ಷಾ ಮತ್ತು ಬಿಸ್ವಾಸ್ ಅವರು ಸಂತಾಲ್ ಬುಡಕಟ್ಟಿನ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಪ್ಯೂರರ್ ಹೈಮೆನ್ ಢಾರ್ಫ್ ಅವರು ರಾಜಗೊಂಡ್ (ಅದಿಲಾಬಾದ್) ಬುಡಕಟ್ಟು ಬಗ್ಗೆ ಅಧ್ಯಯನ ಮಾಡಿದ್ದಾರೆ. ಬೈಸನ್ ಅವರು ಮುಂಡಾ, ಒರೆಯನ್, ಭೂಮಿಯಾ ಹಾಗೂ ಖರಿಯಾ ಮತ್ತು ರೆಡ್ಡಿ ಬುಡಕಟ್ಟಿನ ಬಗ್ಗೆ ಅಧ್ಯಯನ ನಡೆಸಿದ್ದಾರೆ.

ದಕ್ಷಿಣ ವಲಯದಲ್ಲಿ ಕಂಡು ಬರುವ ಬುಡಕಟ್ಟುಗಳೆಂದರೆ ತೋಡ, ಕಳ್ಳಾರ್, ಇರುಳಾಸ್, ಇರುಳಿಗ, ಚೆಂಚು, ಉರುಳಿ, ಜೇನುಕುರುಬ, ಕೊರಗ, ಸೋಲಿಗ, ಪಣಿಯನ್, ಕಾಡರ್, ಅಡಿಯಾನ್ ಕೋಟಾ, ಮ್ಯಾಸನಾಯಕ ಗೊಂಡ ಮುಂತಾದವುಗಳು. ಇವುಗಳನ್ನು ಕುರಿತು ನಡೆದಿರುವ ಪ್ರಮುಖ ಅಧ್ಯಯನಗಳೆಂದರೆ ಕಮಾರ್ ಬುಡಕಟ್ಟಿನ ಬಗ್ಗೆ ಅಬೆದುಬೆ ಅವರು ಅಧ್ಯಯನ ನಡೆಸಿದ್ದಾರೆ. ಎವರ್ಸ್ ಅವರು ತೋಡ ಬುಡಕಟ್ಟಿನ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಕಾಪರ್ ಬುಡಕಟ್ಟಿನ ಬಗ್ಗೆ ಎಹುನ್ ಪೆಲ್ಸ್ ಅವರು ಅಧ್ಯಯನ ನಡೆಸಿದ್ದಾರೆ, ಸಾವೆ ಅವರು ವರ್ಲಿ ಬುಡಕಟ್ಟಿನ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಎಲ್. ಕೆ ಅನಂತಕೃಷ್ಣ ಅಯ್ಯರ್ "ಮೈಸೂರಿನ ಬುಡಕಟ್ಟುಗಳನ್ನು ಕುರಿತು ಅಧ್ಯಯನ ನಡೆಸಿದ್ದಾರೆ. (Mysore Tribe Cast), ಎಡ್ಗರ್ ಥರ್‌ಸ್ಟನ ದಕ್ಷಿಣ ಭಾರತದ ಬುಡಕಟ್ಟುಗಳನ್ನು ಅಧ್ಯಯನ ಮಾಡುವ ನಿಟ್ಟಿನಲ್ಲಿ "Cast and Tribe Southern India" ಎಂಬ ಕೃತಿಯನ್ನು ರಚಿಸಿ ಅಧ್ಯಯನ ಮಾಡಿದ್ದಾರೆ. ಕೆ.ಎಸ್.ಸಿಂಗ್ ಅವರು ಭಾರತ ಒಟ್ಟು ಬುಡಕಟ್ಟುಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಬುಕಾನಾನ್ ತನ್ನ ಜರ್ನಿ ಕೃತಿಯಲ್ಲಿ ಹಲವಾರು ಬುಡಕಟ್ಟುಗಳನ್ನು ಗುರುತಿಸುವ ಕೆಲಸ ಮಾಡಿದ್ದಾರೆ.

ಹೀಗೆ ಬ್ರಿಟಿಶ್‌ರು ಭಾರತಕ್ಕೆ ಬಂದು ರಾಜಕೀಯ ಅಧಿಕಾರ ಪಡೆದುಕೊಂಡ ನಂತರ ತಮ್ಮ ಆಡಳಿತದ ಅನುಕೂಲಕ್ಕಾಗಿ ತನ್ನ ಯುರೋಪ್‌ನ ಕ್ಲಾಸಿಕಲ್ ಜ್ಞಾನ ಶಿಸ್ತಿನ ಅನ್ವಯ ಅನೇಕ ಅಧ್ಯಯನಗಳನ್ನು ಮಾಡಿಸಿದರು. ಇಲ್ಲಿ ವಿಷಯವಾರು ಪರಿಣಿತ ಪಡೆದಿರುವುದಕ್ಕಿಂತ ಕಂಪನಿ ಆಡಳಿತದ ಪರವಾಗಿ ದುಡಿಯಬೇಕೆಂಬ ನಿಯಮವಿತ್ತು. ಪ್ರಮುಖವಾಗಿ ಬ್ರಿಟಿಶ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಮಿಲಿಟರಿ ಆಡಳಿತಕ್ಕೆ ತೊಂದರೆಯಾಗುತ್ತಿದ್ದ ಪ್ರದೇಶಗಳು ಮತ್ತು ಜನಸಮುದಾಯಗಳನ್ನು ಹಾಗೂ ಹಿಂದಿನ ದೇಶಿಯ ಅರಸರುಗಳಿಗೆ ಈ ಬುಡಕಟ್ಟುಗಳು

ಹೊಂದಿದ್ದ ಸಂಬಂಧಗಳು ಮತ್ತು ಆಡಳಿತದ ಅನುಕೂಲತೆಗಳಿಗೆ ಇವರುಗಳ ಸಹಭಾಗಿತ್ವದ ಮಹತ್ವವನ್ನು ತಿಳಿದುಕೊಳ್ಳುವ ನಿಟ್ಟಿನಲ್ಲಿ ತಮ್ಮ ಆಡಳಿತಾದ ಕೆಲವು ವಿಭಾಗದ ಮುಖ್ಯ ಅಧಿಕಾರಿಗಳನ್ನು ಕೆಲವು ನೀತಿ ನಿಯಮಗಳನ್ನು ಪರಿಪಾಲಿಸುವ ನಿಟ್ಟಿನಲ್ಲಿ ಬುಡಕಟ್ಟುಗಳ ಅಧ್ಯಯನಕ್ಕೆ ತೊಡಗಿಸಿಕೊಳ್ಳಲಾಯಿತು. ಇವರ ಅಧ್ಯಯನ ಚಾಚೂ ತಪ್ಪದೆ ಪಾಲಿಸದ ಅಧಿಕಾರಿಗಳು ಪ್ರಮುಖವಾಗಿ ಭಾರತದಲ್ಲಿ ಬುಡಕಟ್ಟುಗಳು ತೊಂದರೆಗಳಿಗೆ ಒಳಗಾಗಿದ್ದು ಬ್ರಿಟಿಶ್ ಬಂದ ನಂತರವೇ ಅಂದರೆ ತಪ್ಪಾಗಲಾರದು. ಬ್ರಿಟಿಶರು ಭಾರತಕ್ಕೆ ಬರುವುದಕ್ಕಿಂತ ಮೊದಲಿನ ಮುಸ್ಲಿಂ ಮತ್ತು ದೇಶಿ ಅರಸರುಗಳ ಕಾಲದಲ್ಲಿ ಬುಡಕಟ್ಟಿನ ಸಮುದಾಯಗಳು ಅಂತಹ ತೊಂದರೆಗಳಿಗೆ ಒಳಗಾಗಲಿಲ್ಲ. ಏಕೆಂದರೆ ಇವರುಗಳು ತಮ್ಮ ಆಡಳಿತ ಅನುಕೂಲಗಳಿಗೆ ಬುಡಕಟ್ಟುಗಳ ಹಕ್ಕುಗಳನ್ನು ಗೌರವಿಸುವುದರ ಜೊತೆಗೆ ಬಳಸಿಕೊಂಡರೆ ವಿನಃ ಗಂಭೀರವಾಗಿ ಬುಡಕಟ್ಟುಗಳನ್ನು ಹತ್ತಿಕ್ಕಲು ಪ್ರಯತ್ನಿಸಲಿಲ್ಲ. ಪ್ರಮುಖವಾಗಿ ಆಡಳಿತದ ಅನುಕೂಲತೆಗೆ (ಆದಿವಾಸಿ) ಬುಡಕಟ್ಟುಗಳ ಅನಿವಾರ್ಯತೆ ಏನೆಂಬುವುದನ್ನು ಅರಿತಿದ್ದರು. ಹಾಗೂ ಬುಡಕಟ್ಟುಗಳ ವಿರೋಧಕಟ್ಟಿಕೊಂಡು ಆಡಳಿತ ನಡೆಸುವುದು ಕಷ್ಟಕರ ಕೆಲಸ ಎಂದು ಅವರುಗಳು ಮನನ ಮಾಡಿಕೊಂಡಿದ್ದರು.

ಆದರೆ ಬ್ರಿಟಿಶ್‌ರು ಭಾರತಕ್ಕೆ ಬಂದು ರಾಜಕೀಯ ಅಧಿಕಾರವನ್ನು ಪಡೆದುಕೊಂಡು ಏಕ ಚಕ್ರಾಧಿಪತ್ಯವನ್ನು ಸಾಧಿಸುವ ನಿಟ್ಟಿನಲ್ಲಿ ಏಕರೂಪ ಕಾನೂನುಗಳನ್ನು ಜಾರಿಗೆ ತಂದರು. ಹಾಗೆಯೇ ತಮ್ಮ ಆಡಳಿತದ ಅನುಕೂಲತೆಗಳಿಗಾಗಿ ಬುಡಕಟ್ಟುಗಳನ್ನು ಒಕ್ಕಲೆಬ್ಬಿಸಿ ಅವರ ವಾಸಸ್ಥಳಗಳನ್ನು ಬದಲಾಯಿಸಿದರು. ಜೊತೆಗೆ ಆಡಳಿತದ ಅನುಕೂಲಕ್ಕಾಗಿ ರೈಲ್ವೆ, ರಸ್ತೆಗಳನ್ನು ಆರಂಭಿಸಿ ಕಾಡನ್ನು ನಾಶ ಮಾಡಿದರು. ಇದರಿಂದ ದಟ್ಟ ಅರಣ್ಯ ಪ್ರದೇಶದಲ್ಲಿ ತಮ್ಮ ಸ್ವಚ್ಛಂದ, ಸ್ವತಂತ್ರವಾಗಿ ಬದುಕುತ್ತಿದ್ದ ಬುಡಕಟ್ಟುಗಳ ಬದುಕು ತಲ್ಲಣಗೊಂಡಿತು. ಏಕರೂಪ ಕಾನೂನು ಬುಡಕಟ್ಟುಗಳ ಜೀವನವನ್ನು ಕಸಿದುಕೊಂಡಿತು.

ಅರಣ್ಯ ಮಧ್ಯಭಾಗದಲ್ಲಿ ವಾಸಿಸುತ್ತಿದ್ದ ಬುಡಕಟ್ಟುಗಳು ಜನರ ಸಂಪರ್ಕಕ್ಕೆ ಬರುವಂತಾಯಿತು. ಅರಣ್ಯ ಪ್ರದೇಶವೇ ತಮ್ಮ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುವ ನೆಪದಲ್ಲೂ ಅರಣ್ಯ ಮತ್ತು ಬುಡಕಟ್ಟುಗಳ ಸಹಭಾಗಿತ್ವಕ್ಕೆ ಕೊಡಲಿ ಪೆಟ್ಟು ಕೊಟ್ಟರು. ಇದೆಲ್ಲವನ್ನು ವಿರೋಧಿಸಿದವರನ್ನು ಕ್ರಿಮಿನಲ್ ಟ್ರೈಬ್ ಎಂದು ಕರೆಯಲಾಯಿತು. ಅರಣ್ಯ ಸಂಪನ್ಮೂಲಗಳನ್ನು ದೋಚುವ ಉದ್ದೇಶದಿಂದ ಬುಡಕಟ್ಟುಗಳನ್ನು ಒಕ್ಕಲೆಬ್ಬಿಸಲಾಯಿತು. ದೈವತ್ವ ಕಲ್ಪನೆಯಿಂದ ತಲತಲಾಂತರದಿಂದ ಕಾಯ್ದುಕೊಂಡು ಬಂದಿದ್ದ ಖನಿಜ ಸಂಪತ್ತುಗಳಿದ್ದವು. ಬುಡಕಟ್ಟುಗಳು ವಾಸಿಸುವ ಪ್ರದೇಶಗಳಲ್ಲಿ ಗಣಿಗಾರಿಕೆ ಆರಂಭಿಸಿ ಅವರ ನಂಬಿಕೆ ಮತ್ತು ದೈವಗಳನ್ನು ನಾಶ ಮಾಡಿದರು.

ತಮ್ಮ ಆಡಳಿತದ ಅನುಕೂಲಕ್ಕಾಗಿ ಸೈನಿಕರ ಸಹಾಯದೊಂದಿಗೆ ಒಕ್ಕಲೆಬ್ಬಿಸಿದ ಬುಡಕಟ್ಟು ಗಳಿಗೆ ತಾತ್ಕಾಲಿಕ ಮನೆಗಳನ್ನು ನಿರ್ಮಿಸಿ ಇವರಿಗೂ ಕಾಡುಗಳಲ್ಲಿ ಸಂಬಂಧವಿರದಂತೆ ಬಂಧಿಸಿಡಲಾಯಿತು. ಬುಡಕಟ್ಟುಗಳು ಹಸಿವು ಮತ್ತು ಕಷ್ಟ ಕಾರ್ಪಣ್ಯಗಳನ್ನು ಬಂಡವಾಳ

ಮಾಡಿಕೊಂಡು ತಮ್ಮ ಧರ್ಮ ಪ್ರಚಾರ ಮಾಡಿ ತಮ್ಮ ಧರ್ಮಕ್ಕೆ ಮತಾಂತರ ಮಾಡಿಸಿಕೊಂಡರು. ಮತ್ತೆ ಕೆಲವರನ್ನು ಟೀ. ಕಾಫಿ ತೋಟಗಳಲ್ಲಿ ಜೀತದಾಳುಗಳನ್ನಾಗಿ ದುಡಿಸಿಕೊಳ್ಳಲಾರಂಭಸಿದರು. ಇದರಿಂದ ಬುಡಕಟ್ಟುಗಳು ತಮ್ಮ ಸ್ವಾತಂತ್ರ್ಯದ ಬದುಕನ್ನು ಕಳೆದುಕೊಂಡರು. ಕಾಡಿನ ಜೊತೆ ಸಂಪರ್ಕ ಕಳೆದುಕೊಂಡಂತೆಲ್ಲಾ ತಮ್ಮ ಮೂಲ ಸಂಸ್ಕೃತಿಯನ್ನು ಕಳೆದುಕೊಳ್ಳುವಂತಾಯಿತು. ದಿನನಿತ್ಯದ ಹೊತ್ತಿನ ಊಟಕ್ಕೂ ಗತಿ ಇಲ್ಲದ ಪರಿಸ್ಥಿತಿ ನಿರ್ಮಾಣವಾಯಿತು. ತಮ್ಮ ತುತ್ತಿನ ಚೀಲ ತುಂಬಿಸಿಕೊಳ್ಳಲು ತಮ್ಮಲ್ಲಿದ್ದ ಅಲ್ಪಸ್ವಲ್ಪ ಭೂಮಿಯನ್ನು ಮಾರಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಬದುಕುವುದಕ್ಕಾಗಿ ಅರಣ್ಯದಲ್ಲಿ ತಮ್ಮ ಆಹಾರಗಳನ್ನು ಹುಡುಕಲು ಕಳ್ಳತನದ ಮಾರ್ಗವನ್ನು ಹಿಡಿಯಬೇಕಾಯಿತು. ಬ್ರಿಟಿಶ್‌ರ ಕಾಲಘಟ್ಟದಲ್ಲಿ ಬುಡಕಟ್ಟುಗಳು ಅನೇಕ ಸ್ಥಿತ್ಯಂತರಗಳಿಗೆ ಒಳಗಾಗಬೇಕಾಯಿತು.

ಭಾರತಕ್ಕೆ ಬ್ರಿಟಿಶ್‌ರು ಬರುವುದಕ್ಕಿಂತ ಮುಂಚಿನ ಬುಡಕಟ್ಟಿನ ಜನರು ಬದುಕುವುದನ್ನು ನೋಡುವುದಾದರೆ ಬುಡಕಟ್ಟುಗಳಿಗೆ ಅಂತಹ ನಿರ್ಬಂಧಗಳೇನು ಇರಲಿಲ್ಲ. ಜಾರ್ಖಂಡ್, ಗೊಂಡ್ವಾನ್, ಬಿರ್ಸಾ ಪ್ರದೇಶಗಳಲ್ಲಿ ಪ್ರತ್ಯೇಕ ರಾಷ್ಟ್ರ ನಿರ್ಮಾಣದ ಕಲ್ಪನೆಯ ಕ್ರಿಯೆಗಳು ನಡೆಯುತ್ತಾ ಇದ್ದವು. ಈ ಪ್ರದೇಶಗಳಲ್ಲಿ ಅವರದೇ ನ್ಯಾಯ, ಅವರದೇ ಸಂಸ್ಕೃತಿ, ಸಂಪ್ರದಾಯ ಆಚರಣೆಗಳ ಮೂಲಕ ತಮ್ಮದೇ ಯಜಮಾನ ವಿಧಾನದಲ್ಲಿ ಅವರದ್ದೇ ಆದ ಆರ್ಥಿಕ ಸಾಮಾಜಿಕ ರಾಜಕೀಯ ಪರಿಕಲ್ಪನೆಗಳಿದ್ದವು. ಇಲ್ಲಿ ಭೂಮಿಯೇ ಅವರ ಒಡೆತನದಲ್ಲಿತ್ತು. ಯಜಮಾನನ ಸಮ್ಮುಖದಲ್ಲಿ ಅವನ ಅಪ್ಪಣೆಯ ಮೇರೆಗೆ ಕುಮ್ರಿ ಬೇಸಾಯದ ಮೂಲಕ ವರ್ಷಕ್ಕೊಂದು ಬೆಳೆಯಂತೆ ಬೆಳೆದುಕೊಂಡು ವಂಶಪಾರಂಪರ್ಯವಾಗಿ ಉಳಿಸಿಕೊಂಡು ಬಂದಿದ್ದರು. ಇಲ್ಲಿ ಭೂಮಿಯು ಯಾರೊಬ್ಬರ ಸ್ವತ್ತಾಗಿರದೆ ಸಾಮೂಹಿಕ ಸ್ವತ್ತು ಎಂಬ ಕಲ್ಪನೆ ಇವರದಾಗಿತ್ತು.

ಪ್ರತಿಯೊಬ್ಬರು ತಮಗೆ ಅವಶ್ಯಕತೆಯಿದ್ದಷ್ಟು ತಾವು ಉತ್ತು ಬಿತ್ತು ಬೆಳೆಯುವಷ್ಟು ಭೂಮಿಯನ್ನು ಮಾತ್ರ ಇಟ್ಟುಕೊಂಡಿದ್ದರೆ ವಿನಃ ಯಥೇಚ್ಚವಾಗಿ ಕ್ರೋಢೀಕರಿಸುವ ಮನೋಭಾವ ವಿರಲಿಲ್ಲ. ಒಂದು ಸಂಸಾರಕ್ಕೆ ಇಂತಿಷ್ಟು ಭೂಮಿ ಇತ್ತು. ಹೊಸದಾಗಿ ಮದುವೆಯಾದರೆ ಅವನು ಪ್ರತ್ಯೇಕ ಸಂಸಾರಕ್ಕಾಗಿ ಅವನಿಗೆ ಪ್ರತ್ಯೇಕ ಭೂಮಿ ಸಿಗುತ್ತಿತ್ತು. ಯಥೇಚ್ಚವಾಗಿ ಕಾಡು ಕಡಿದು ವ್ಯವಸಾಯದ ಭೂಮಿಯಾಗಿ ಮಾಡುವಂತಿರಲಿಲ್ಲ. ಒಂದು ನಿರ್ದಿಷ್ಟ ಪ್ರದೇಶದಲ್ಲೇ ತಮ್ಮ ಬೇಸಾಯ ಮಾಡಿಕೊಳ್ಳುತ್ತಿದ್ದರು. ಅವರವರ ಶಕ್ತಿಗೆ ಅನುಸಾರ ಭೂಮಿ ಮಾಡಿಕೊಳ್ಳುವ ಅವಕಾಶವೂ ಇತ್ತು. ಒಂದೇ ಪ್ರದೇಶದಲ್ಲಿ ನಿರಂತರವಾಗಿ ಬೇಸಾಯ ಮಾಡುವಂತಿರಲಿಲ್ಲ. ಏಕೆಂದರೆ ಒಂದೇ ಸ್ಥಳದಲ್ಲಿ ಹಲವಾರು ಬೇಸಾಯ ಮಾಡಿದರೆ ಭೂಮಿ ಬಂಜರಾಗುತ್ತದೆ ಎಂದು ನಂಬಿಕೊಂಡಿದ್ದರು.

ಉತ್ಪಾದನೆಗಳನ್ನು ಶೇಖರಿಸಿಟ್ಟುಕೊಳ್ಳುವ ಪರಿಕಲ್ಪನೆ ಕಡಿಮೆ ಇತ್ತು. ಇವರು ವಾಸಿಸುವ ಹಾಡಿಗಳು ವೃತ್ತಾಕಾರದಲ್ಲಿದ್ದು, ರಾತ್ರಿ ಸಮಯದಲ್ಲಿ ಎಲ್ಲರು ಒಟ್ಟಿಗೆ ಸೇರಿ ಕುಣಿದು ಹಾಡುತ್ತಿದ್ದರು. ಇವರು ಭೂಮಿಯನ್ನು ತಾಯಿ ಎಂದು ನಂಬಿಕೊಂಡಿದ್ದರು. ಅರಣ್ಯದ ಪ್ರಾಣಿ ಪಕ್ಷಿಗಳು ತಮ್ಮಂತೆ ಸರಿಸಮನಾದ ಜೀವಿಗಳು ಎಂದು ನಂಬಿಕೊಂಡಿದ್ದರು. ಯಾವುದೇ ವಸ್ತುವನ್ನಾಗಲಿ ಭೂಮಿ ಮತ್ತು ಪರಿಸರದಿಂದ ಕಿತ್ತುಕೊಳ್ಳಬೇಕೆಂಬ ಮನೋಭಾವ ಇವರಿಗಿರಲಿಲ್ಲ. ಕಾಡಿನಲ್ಲಿ ಒಂದು ಮರ ಕಡಿಯಬೇಕೆಂದರೂ ಅದರ ಅವಶ್ಯಕತೆ ಹೆಚ್ಚಾಗಿದ್ದರೆ ಮಾತ್ರ ಕಡಿಯುತ್ತಿದ್ದರು. ಕಡಿಯುವ ಮೊದಲು ಪೂಜೆ ಮಾಡಿ ಅದು ಮತ್ತೊಮ್ಮೆ ಬೆಳೆಯಬೇಕು ಎನ್ನುವ ಸ್ಥಿತಿ ನಿರ್ಮಾಣ ಮಾಡಿ ಕಡಿದುಕೊಳ್ಳುತ್ತಿದ್ದರು. ಬುಡಕಟ್ಟುಗಳು ವ್ಯಕ್ತಿಯ ದೌರ್ಬಲ್ಯವನ್ನು ಬಂಡವಾಳ ಮಾಡಿಕೊಳ್ಳುತ್ತಿರಲಿಲ್ಲ.

ಸಾಮಾಜಿಕ ರಚನೆಯನ್ನು ಗಮನಿಸುವುದಾದರೆ ಇಲ್ಲಿ ಬಡವ ಶ್ರೀಮಂತ, ಮೇಲು, ಕೀಳು, ಶಕ್ತಿವಂತ, ಶಕ್ತಿಹೀನ ಎಂಬ ಭೇದ ಭಾವವಿಲ್ಲದೆ ಸಮಾನತೆ, ಹಂಚಿಕೆ, ಸ್ಪರ್ಧೆ ರಹಿತ ವ್ಯವಸ್ಥೆ ಇದ್ದು ಸಮುದಾಯವೇ ಮುಖ್ಯವಾಗಿತ್ತು. ಇಲ್ಲಿ ಸಾಮುದಾಯಿಕ ಆಚರಣೆಗಳು ರೂಢಿಯಲ್ಲಿದ್ದು ಭೂಮಿಯು ತನ್ನ ಸ್ವಂತ ಆಸ್ತಿ ಎಂಬ ಕಲ್ಪನೆ ಇರದೇ ಎಲ್ಲಾ ಭೂಮಿಯು ತಮ್ಮದೇ ಎಂಬ ಸಮಷ್ಠಿ ಭಾವನೆ ಇತ್ತು. ಯಾರಾದರೂ ಕೈಲಾಗದವರು ಇದ್ದರೆ ಅವನನ್ನು ವೈಯಕ್ತಿಕವಾಗಿ ನೋಡದೆ ಸಮುದಾಯದ ಹಿನ್ನೆಲೆಯಿಂದ ನೋಡಿ ಅವನಿಗೆ ಸಹಾಯ ಮಾಡಲಾಗುತ್ತಿತ್ತು. ಭೂಮಿ ಮತ್ತು ಅರಣ್ಯವು ನಮ್ಮ ಹಿರಿಕರು ನಮಗೆ ಕೊಟ್ಟಿರುವ ಕೊಡುಗೆ ಎಂದು ನಂಬಿಕೊಂಡಿದ್ದರು. ತಮ್ಮ ಮಕ್ಕಳನ್ನು ಕಾಳಜಿ ಮಾಡುವಂತೆ ಅರಣ್ಯ ಮತ್ತು ಪ್ರಾಣಿ ಪಕ್ಷಿಗಳನ್ನು ನೋಡಿಕೊಳ್ಳುತ್ತಿದ್ದರು.

ತಮ್ಮದೇ ಒಂದು ಸಾಮಾಜಿಕ ವ್ಯವಸ್ಥೆಯನ್ನು ರೂಢಿಸಿಕೊಂಡು ತಮಗೆ ಬೇಕಾದ ಒಬ್ಬ ವ್ಯಕ್ತಿನ್ನು ತಮ್ಮ ಯಜಮಾನನ್ನಾಗಿ ಮಾಡಿಕೊಂಡು ಅವರ ಆಜ್ಞೆಯನ್ನು ಪರಿಪಾಲನೆ ಮಾಡಿಕೊಂಡು ಬದುಕುತ್ತಿದ್ದರು. ಆ ಯಜಮಾನನ್ನು ಕೂಡ ಸಮುದಾಯದ ಒಳಿತಿಗಾಗಿಯೇ ಬದುಕುತ್ತಿದ್ದುದನ್ನು ಕಾಣಬಹುದಾಗಿತ್ತು.

ಇಲ್ಲಿ ಸಾಮಾಜಿಕ ಜೀವನ ಪದ್ಧತಿಯು ರೂಢಿಯಲ್ಲಿದ್ದು ಇವತ್ತಿನ ಸಾಮಾಜಿಕ ವ್ಯವಸ್ಥೆಯಂತೆ ತ್ರಿಕೋನ ಅಧಿಕಾರ ವ್ಯವಸ್ಥೆಯಾಗಿರಲಿಲ್ಲ. ಯಜಮಾನನು ಆ ಊರಿನ ಸಾಮಾನ್ಯ ವ್ಯಕ್ತಿಯು ಆಗಿದ್ದನು. ಸಂದರ್ಭ ಬಂದಾಗ ಮಾತ್ರ ಆ ವ್ಯಕ್ತಿ ಯಜಮಾನ ಆಗುತ್ತಿದ್ದನು. ಇಲ್ಲವಾದರೆ ಅವನು ಒಬ್ಬ ಸಾಮಾನ್ಯ ವ್ಯಕ್ತಿಯಂತೆ ಬದುಕುತ್ತಿದ್ದನು. ಈ ಯಜಮಾನಿಕೆಯು ವಂಶ ಪಾರಂಪರ್ಯವಾಗಿರಲಿಲ್ಲ.

ಹೀಗೆ ಬ್ರಿಟಿಶ್‌ರು ಭಾರತಕ್ಕೆ ಬರುವುದಕ್ಕಿಂತ ಮುಂಚೆ ಅರಣ್ಯದೊಂದಿಗೆ ತಮ್ಮದೇ ಆದ ಸ್ವಚ್ಛಂದವಾದ ಬದುಕನ್ನು ಕಂಡುಕೊಂಡು ತಮ್ಮ ಅವಶ್ಯಕತೆಗೆ ತಕ್ಕಂತೆ ಅರಣ್ಯವನ್ನು ಬಳಸಿಕೊಂಡು

ಜೊತೆಗೆ ಅರಣ್ಯವನ್ನು ರಕ್ಷಣೆ ಮಾಡಿಕೊಂಡು ಬದುಕುತ್ತಿದ್ದರು. ತಮಗೆ ಅನಿವಾರ್ಯವಿದ್ದರೆ ಮಾತ್ರ ಬೇಟೆಗಾರಿಕೆ, ಮರ ಕಡಿಯುವುದು ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಅರಣ್ಯದಲ್ಲಿದ್ದ ಖನಿಜ ಸಂಪನ್ಮೂಲವನ್ನು ತಮ್ಮ ವನದೇವತೆ ಎಂದು ನಂಬಿಕೊಂಡು ವರ್ಷಕ್ಕೊಮ್ಮೆ ಹಬ್ಬ ಹರಿದಿನಗಳನ್ನು ಮಾಡಿಕೊಂಡು ಪೂಜಿಸುತ್ತಿದ್ದರು. ಜೊತೆಗೆ ಅದನ್ನು ರಕ್ಷಣೆಯನ್ನು ಮಾಡಿಕೊಂಡು ಬದುಕುತ್ತಿದ್ದರು. ರಾಜ ಪ್ರಭುತ್ವದಲ್ಲಿ ಬುಡಕಟ್ಟುಗಳ ಬದುಕಿಗೆ ಯಾವ ತರಹದ ದೊಡ್ಡ ಸಮಸ್ಯೆಯುಂಟಾಗದಿರುವುದನ್ನು ಕಾಣಬಹುದು. ರಾಜ ಪ್ರಭುತ್ವಗಳು ಅರಣ್ಯವಾಸಿಗಳ ಮೂಲಕ ತಮ್ಮ ಪ್ರಭುತ್ವದ ಅವಶ್ಯಕತೆಯನ್ನು ಈಡೇರಿಸಿಕೊಂಡು ಬದುಕುತ್ತಿದ್ದರೇ ವಿನಃ ಇವರನ್ನು ನಿಯಂತ್ರಿಸುವ ಕೆಲಸಕ್ಕೆ ಹೋದವರಲ್ಲ. ಇದರಿಂದ ಬುಡಕಟ್ಟುಗಳು ತಮ್ಮದೇ ಆದ ಸ್ವತಂತ್ರ ಬದುಕಿನ ಜೊತೆ ಸರ್ವರಿಗೂ ಸಮಬಾಳು ಸಮಪಾಲು ಎನ್ನುವ ನಂಬಿಕೆಯಿಂದ ಬದುಕುತ್ತಿದ್ದರು.

ಆದರೆ ಭಾರತಕ್ಕೆ ಬ್ರಿಟಿಶ್‌ರು ಬಂದ ಮೇಲೆ ಇಡೀ ಬುಡಕಟ್ಟುಗಳ ಜೀವನ ಚಿತ್ರಣವೇ ಬದಲಾಗಿಹೋಯಿತು. ಬುಡಕಟ್ಟುಗಳು ತಾವು ವಾಸ ಮಾಡುವ ಭೂಮಿ ಮತ್ತು ಆಹಾರ ಬೆಳೆಯುವ ಪ್ರದೇಶಗಳೆಂದು ಎರಡು ರೂಪವನ್ನು ಮಾಡಿಕೊಂಡಿರುವುದನ್ನು ಕಾಣಬಹುದಾಗಿದೆ. ಆದರೆ ಬ್ರಿಟಿಶ್‌ರು ಬಂದ ನಂತರ ವ್ಯವಸಾಯ ಮಾಡುವ ಸ್ಥಳದ ಮೇಲೆ ಒಂದು ನೀತಿ, ಅದು ಎಲ್ಲಾ ರೀತಿಯ ಭೂಮಿ ಆಧಾರಿತ ಪದಾರ್ಥಗಳು ರಾಜನ ಆಡಳಿತಕ್ಕೆ ಒಳಪಡಬೇಕು. ಎಲ್ಲಾ ರೆಕಾರ್ಡ್ ಒಬ್ಬರ ಹೆಸರಿನಲ್ಲಿರಬೇಕು. ಅರಣ್ಯದ ಸಾಮೂಹಿಕ ಸಂಪನ್ಮೂಲದ ಮೇಲೆ ಒಂದು ನೀತಿ; ಅದು ಕಾಡು ಸರ್ಕಾರದ ಒಡೆತನಕ್ಕೆ ಸೇರಿದ್ದು ಎಂಬ ವಿದೇಶಿ ನೀತಿಯನ್ನು ಆಚರಣೆಗೆ ತಂದರು. ಇದರಿಂದ ಹಿಂದೆ ಬುಡಕಟ್ಟುಗಳಲ್ಲಿದ್ದ ಸಾಮೂಹಿಕ ಆಸ್ತಿ ಎಂಬ ಪರಿಕಲ್ಪನೆ ಅಳಿಸಿ, ಇದು ಸಮುದಾಯದಲ್ಲೂ ಸರ್ಕಾರದ್ದು ನಮ್ಮ ಅರಣ್ಯ ಪ್ರದೇಶವು ಕೂಡ ಸರ್ಕಾರಕ್ಕೆ ಸೇರಿದ್ದು ಎಂದು ಘೋಷಿಸಿಕೊಂಡರು. ವ್ಯವಸಾಯ ಭೂ ಪ್ರದೇಶಕ್ಕೆ ಪಟ್ಟವನ್ನು ಅದೂ ಗಂಡಸರ ಹೆಸರಿನಲ್ಲಿ ಕೊಟ್ಟರು. ಇದರಿಂದ ಆದ ದುಷ್ಪರಿಣಾಮಗಳೆಂದರೆ ಆ ಗ್ರಾಮ ಸಮುದಾಯ ಕಲ್ಪನೆ ನಾಶವಾಯಿತು. ಗಂಡು ಹೆಣ್ಣು ತೊಂದರೆಗೆ ಸಿಲುಕುವಂತೆ ಮಾಡಿದರು. ಮಹಿಳೆಯನ್ನು ಬಲಿ ಕೊಡುವ ಪದ್ಧತಿ, ಭೂಮಿ ಪಟ್ಟೊತ್ತೆಯಿಡೋದು. ಭೂಮಿಯು ಸ್ವಂತ ಆಸ್ತಿ ಎಂಬ ಪರಿಕಲ್ಪನೆ ಬೆಳೆದು ಭೂಮಿಯ ಒಡೆತನ ಸಂಪೂರ್ಣ ಗಂಡಸನ ಕೈಸೇರಿ ಹೆಣ್ಣು ಭೂಮಿ ಒಡೆತನದಿಂದ ವ್ಯವಸಾಯದಿಂದ ದೂರ ಉಳಿದು, ಕೂಲಿ ಆಳುಗಳ ರೀತಿಯಲ್ಲಿ ಮಾರ್ಪಡು ಗೊಂಡಳು. ವ್ಯವಸಾಯವನ್ನು ಹುಟ್ಟು ಹಾಕಿದ ಮಹಿಳೆಯೇ ಇದರಿಂದ ದೂರ ಉಳಿಯು ವಂತಾಯಿತು. ಗಂಡ ಬೇಟೆಗೆ ಹೋದ ಸಂದರ್ಭದಲ್ಲಿ ತಾವು ವಾಸ ಮಾಡುವ ಜಾಗದಲ್ಲಿ ಸ್ವಲ್ಪ ಜಾಗವನ್ನು ಹಸನು ಮಾಡಿಕೊಂಡು ಬೆಳೆ ಬೆಳೆಯುವ ಮೂಲಕ ಬೇಸಾಯ ಆರಂಭಿಸಿದ ಮಹಿಳೆಯು ಬ್ರಿಟಿಶ್‌ರ ಕಾಲದಲ್ಲಿ ವ್ಯವಸಾಯದ ಹಕ್ಕುಬಾಧ್ಯತೆಗಳನ್ನು ಕಳೆದುಕೊಂಡಳು. ಭೂಮಿಯು ಕೇವಲ ಅವಶ್ಯಕತೆಗೆ ತಕ್ಕಂತೆ ಬಳಕೆಯಾಗುತ್ತಿದ್ದದು ಮಾನವನ

ದುರಾಸೆಗೂ ಬಲಿಯಾಗುವಂತಾಯಿತು. ಭೂಮಿ ಪಡೆಯುವುದೆ ಸ್ಪರ್ಧಾತ್ಮಕ ಭಾವನೆ ಬೆಳೆದು ಭೂಮಿ ನಮ್ಮದು ಎಂಬ ಕಲ್ಪನೆ ಕಣ್ಮರೆಯಾಗಿ ನನ್ನದು ಎಂಬ ಭಾವನೆ ಬೆಳೆಯತೊಡಗಿತ್ತು. ಸಾಮೂಹಿಕ ವಾಗಿ ರಾಜಕೀಯವಾಗಿ, ಆರ್ಥಿಕವಾಗಿ ಬುಡಕಟ್ಟುಗಳ ಬದುಕು ಅನಿವಾರ್ಯವಾಗಿ ಬದಲಾಗು ವಂತಾಯಿತು. ಪರಸ್ಪರ ಸ್ವಾರ್ಥ, ಮೇಲೂ-ಕೀಳೂ ಎಂಬ ಭಾವನೆ ಮೂಡತೊಡಗಿತು.

ಆದಿವಾಸಿಗಳ ನಾಡೆಂದೇ ಪ್ರಖ್ಯಾತ ಪಡೆದುಕೊಂಡಿದ್ದ ಬಿಲ್. ದಂಡಕಾರಣ್ಯ, ಜಾರ್ಖಂಡ್, ಕಾಟನಾಡು, ನೀಲಗಿರಿ, ವೈನಾಡುಗಳಲ್ಲಿ, ಬುಡಕಟ್ಟುಗಳನ್ನು ಒಕ್ಕಲೆಬಿಸುವ ಕಾರ್ಯ ಆರಂಭ ಮಾಡಲಾಯಿತು. ಕರ್ನಾಟಕದಲ್ಲಿ ಬುಡಕಟ್ಟುಗಳ ಸಮಾನವಾದ ಸಾಮಾಜಿಕ ರಾಜಕೀಯ ವ್ಯವಸ್ಥೆಯೇ ಇತ್ತು. ಆದರೆ ಬ್ರಿಟಿಶ್‌ರ ಆಗಮನದಿಂದ ಇಡೀ ಬುಡಕಟ್ಟುಗಳ ಜೀವನವೇ ಬದಲಾವಣೆಗೊಂಡು ಉಸಿರುಗಟ್ಟುವ ವಾತಾವರಣ ಉಂಟಾಗಿ ನೋಡನೋಡುತ್ತಿದ್ದಂತೆ ತಮ್ಮ ಕಣ್ಣಮುಂದಿದ್ದ ಮರಗಿಡಗಳು, ಅರಣ್ಯ ಪ್ರದೇಶ ತಮ್ಮ ದೇವತೆಗಳು ಇನ್ನೊಬ್ಬರ ಹಿಡಿತಕ್ಕೆ ಒಳಗಾಯಿತು. ಸ್ವತಂತ್ರವಾಗಿ ತಮ್ಮದೇ ಜೀವನ ನಡೆಸುತ್ತಿದ್ದ ಬುಡಕಟ್ಟುಗಳನ್ನು ನಿಯಂತ್ರಿಸಿ ಹೀಗೆಯೇ ಬದುಕಬೇಕು ಎಂಬ ನಿಯಮಗಳನ್ನು ಬ್ರಿಟಿಶರು ಜಾರಿಗೆ ಬಂದವು. ಇದನ್ನು ಸಹಿಸಿಕೊಳ್ಳಲಾಗದೆ ಬುಡಕಟ್ಟುಗಳ ಬ್ರಿಟಿಶ್ ವಿರುದ್ಧ ತಿರುಗಿಬಿದ್ದರು. ಆ ಸಂದರ್ಭದಲ್ಲಿ ಅನೇಕ ಹೋರಾಟಗಳು ನಡೆದವು ಹಲವಾರು ಬುಡಕಟ್ಟುಗಳು ನಾಶವಾದವು. ಮತ್ತೆ ಕೆಲವು ಬುಡಕಟ್ಟುಗಳು ಒತ್ತೆಯಾಳುಗಳಾಗಿ ಬದುಕಬೇಕಾದ ಅನಿವಾರ್ಯತೆ ಉಂಟಾಯಿತು. ತಮ್ಮ ಸ್ವತಂತ್ರ ಜೀವನವನ್ನು ಪಡೆಯುವ ನಿಟ್ಟಿನಲ್ಲಿ ಬ್ರಿಟಿಶ್ ಪ್ರಭುತ್ವದ ಮೇಲೆ ನಿರಂತರ ದಾಳಿಯನ್ನು ಮಾಡಲಾರಂಸಿದರು. ಬ್ರಿಟಿಶರಿಗೂ ಬುಡಕಟ್ಟುಗಳ ಹೋರಾಟಗಳಿಂದ ನೆಮ್ಮದಿ ಕೆಟ್ಟಿತು. ಇವರನ್ನು ಹೋರಾಡಿ ಗೆಲ್ಲಲಾಗುವುದಿಲ್ಲ ಎಂದು ಅರಿತುಕೊಂಡ ಬ್ರಿಟೀಷರು ಇವರನ್ನು ಅಧ್ಯಯನ ಮಾಡಿ ಅರಿತುಕೊಳ್ಳುವ ಮನೋಭಾವನೆ ತಾಳಿದರು. ಇದಕ್ಕೆ ಸಂಬಂಧಿಸಿದಂತೆ ಅನೇಕ ಅಧ್ಯಯನದ ಕಾರ್ಯಕ್ರಮಗಳನ್ನು ರೂಪಿಸಲಾರಂಭಿಸಿದರು. ಅನೇಕ ವಿದ್ವಾಂಸರುಗಳನ್ನು ಇದಕ್ಕಾಗಿ ನೇಮಿಸಿ ಬುಡಕಟ್ಟುಗಳು ಮತ್ತು ಅರಣ್ಯದೊಂದಿಗಿನ ಸಂಬಂಧ, ಅವರ ಹಬ್ಬ ಆಚರಣೆ ಸಂಸ್ಕೃತಿ, ಅವರ ಶಕ್ತಿ, ಯುಕ್ತಿ ಮುಂತಾದವುಗಳನ್ನು ಅಧ್ಯಯನ ಮಾಡಿಸುವ ನಿರ್ಧಾರಕ್ಕೆ ಬಂದರೂ ಇದಕ್ಕೆ ಬ್ರಿಟಿಶ್‌ಪ್ರಭುತ್ವವು ಬೆಂಬಲವನ್ನು ನೀಡಿತು. ಅದರ ಫಲವಾಗಿಯೇ ಭಾರತದಲ್ಲಿ ಬುಡಕಟ್ಟುಗಳ ಅಧ್ಯಯನಗಳು ಆರಂಭವಾದವು.

ಬ್ರಿಟಿಶರ ಕಾಲಘಟ್ಟದಲ್ಲಿ ಇರುಳಿಗರ ಬದುಕು ಸಂಪೂರ್ಣವಾಗಿ ಬದಲಾವಣೆಗೆ ಒಳಗಾಗು ವಂತಾಯಿತು. ಬ್ರಿಟಿಶ್‌ರಿಗೂ ಪೂರ್ವಕಾಲಘಟ್ಟದಲ್ಲಿ ಅಂದರೆ ರಾಜಪ್ರಭುತ್ವದ ಸಂದರ್ಭದಲ್ಲಿ ತಮ್ಮ ಪಾರಂಪರಿಕ ವೃತ್ತಿಗಳಿಂದ ತಮ್ಮದೇ ಅಸ್ಮಿತೆಯನ್ನು ಉಳಿಸಿಕೊಂಡು ಬಂದಿದ್ದ ಇರುಳಿಗರು ರಾಜ ಪ್ರಭುತ್ವ ಅಥವಾ ಅವತ್ತಿನ ಸಮಾಜಕ್ಕೆ ಬೇಕಾದ ಜೇನು, ಸೌದೆ, ಔಷಧಿ ಸಸ್ಯ ಗಿಡಗಳು, ಆಹಾರ ಗಿಡ ಸಸ್ಯಗಳು ಮತ್ತು ಪ್ರಾಣಿಗಳನ್ನು ಹಾಗೂ ಇನ್ನಿತರ ಅರಣ್ಯೋಪಕರಣಗಳನ್ನು

ಕಾಡಿನಿಂದ ಸಂಗ್ರಹಿಸಿ ನಗರ ಗ್ರಾಮಗಳ ದಲ್ಲಾಳಿಗಳಿಗೆ ಮಾರಾಟ ಮಾಡುತ್ತಿದ್ದರು. ಹಾಗೆಯೇ ಪ್ರಭುತ್ವಗಳ ಆನೆ, ಒಂಟೆ, ಕುದುರೆಗಳಿಗೆ ಬೇಕಾದ ಹುಲ್ಲು, ಬಿದಿರು ಇನ್ನಿತರ ಅರಣ್ಯ ಪರಿಕರಗಳನ್ನು ಒದಗಿಸಿಕೊಟ್ಟು ತಮ್ಮ ಹೊಟ್ಟೆ ಹೊರೆದುಕೊಳ್ಳುತ್ತಿದ್ದುದರ ಬಗ್ಗೆ ಹೇಳುತ್ತಾರೆ. ಹಾಗೆಯೇ ಕೋಟೆ ಕೊತ್ತಲುಗಳನ್ನು ಕಟ್ಟುವ ಸಂದರ್ಭದಲ್ಲಿ ತಮ್ಮ ಪಾರಂಪರಿಕ ವೃತ್ತಿಯಾದ ದೂಲ್‌ಗಳನ್ನು ಕಟ್ಟಿಕೊಟ್ಟು ಸ್ವತಃ ಪ್ರಭುತ್ವದ ರಕ್ಷಣೆಯ ಕೋಟೆ ಅರಮನೆ ಗ್ಯಾಲರಿಗಳ ನಿರ್ಮಾಣದಲ್ಲಿ ದುಡಿದಿರುವುದಾಗಿ ವಿವರಿಸುತ್ತಾರೆ. ಪ್ರಭುತ್ವವು ವ್ಯಾಪಾರ ಮಾಡುವಾಗ ಸರಕುಗಳನ್ನು ಸಾಗಿಸುವ ಸಂದರ್ಭದಲ್ಲಿ ಬೇಕಾದ ರಕ್ಷಣೆಗಳನ್ನು ಒದಗಿಸಿದ್ದರ ಬಗ್ಗೆ ತಿಳಿಸುತ್ತಾರೆ. ಏಕೆಂದರೆ ರಾಮಗಿರಿ ದುರ್ಗ ಮತ್ತು ಸಾವನದುರ್ಗದ ಮೂಲಕವೇ ಮೈಸೂರು ಮದ್ರಾಸ್, ಪಾಂಡಿಚೇರಿ ಇನ್ನು ಮುಂತಾದ ಪ್ರದೇಶಗಳಿಗೆ ರಫ್ತು ಆಮದು ಮಾಡಲಾಗುತ್ತಿದ್ದು, ಇದೊಂದು ರಹದ್ದಾರಿಯಾಗಿತ್ತು. ಈ ಮಾರ್ಗ ಅತ್ಯಂತ ದುರ್ಗಮಯ ಪ್ರದೇಶವಾಗಿದ್ದರ ಜೊತೆಗೆ ಕಾಡು ಪ್ರಾಣಿಗಳು, ಕಳ್ಳಕಾಕರು ಹಣ ದೋಚುವ ಉಪಟಳ ಅತಿಯಾಗಿ ಕಂಡುಬರುತ್ತಿತ್ತು. ಇಂತಹ ಸಂದರ್ಭದಲ್ಲಿ ಅವುಗಳಿಗೆ ಬೇಕಾದ ರಕ್ಷಣೆಯನ್ನು ಒದಗಿಸಿ ತಮ್ಮ ತುತ್ತಿನ ಚೀಲವನ್ನು ತುಂಬಿಸಿಕೊಳ್ಳುತ್ತಿದ್ದರ ಬಗ್ಗೆ ಇರುಳಿಗರ ವಕ್ತೃಗಳ ಹೇಳಿಕೊಳ್ಳುತ್ತಾರೆ. ಆದರೆ ಇದಕ್ಕೆ ಸಂಬಂಧಿಸಿದಂತೆ ಯಾವುದೊಂದು ದಾಖಲೆಗಳಿಲ್ಲದೆ ಇರುವುದು ವಿಪರ್ಯಾಸದ ಸಂಗತಿಯಾಗಿದೆ. ಇರುಳಿಗರು ತಮ್ಮ ಸಂಪೂರ್ಣವಾದ ಬದುಕನ್ನು ಕಾಡಿನೊಂದಿಗೆ ಕಟ್ಟಿಕೊಂಡಿದ್ದರು. ಬೆಳಿಗ್ಗೆಯಿಂದ ರಾತ್ರಿಯ ವರೆಗೂ ಕಾಡಿನೊಂದಿಗೆ ಇವರ ಜೀವನ ಸಾಗುತ್ತಿತ್ತು. ತಮ್ಮ ಹೊತ್ತಿನ ಅವಶ್ಯಕತೆಗೆ ತಕ್ಕಂತೆ ಅರಣ್ಯೋತ್ಪನ್ನಗಳನ್ನು ಸಂಗ್ರಹಿಸಿಕೊಂಡು ತಂದು ನಗರ ಹಾಗೂ ಗ್ರಾಮಗಳ ದಲ್ಲಾಳಿಗಳಿಗೆ ಅಂಗಡಿಗಳಿಗೆ ಮಾರಿ ಅವರಿಗೆ ಬೇಕಾದ, ರಾಗಿ, ಅಕ್ಕಿ, ಕಾಳುಕಡ್ಡಿಗಳನ್ನು ತೆಗೆದುಕೊಂಡು ಹೋಗಿ ಜೀವನ ಸಾಗಿಸುತ್ತಿದ್ದರು. ಜೊತೆಗೆ ತಮ್ಮದೇ ಆದ ಕುಲಪಂಚಾಯಿತಿ, ನ್ಯಾಯ ತೀರ್ಮಾನ, ದೇವರುದಿಂಡರು ಆಚರಣೆಗಳನ್ನು ಅರಣ್ಯದ ನಡುವೆ ನಡೆಸಿಕೊಂಡು ಬದುಕುತ್ತಿದ್ದರು. ಇರುಳಿಗರು ಶಾಂತಿ ಪ್ರಿಯರು; ಇವರಿಗೆ ಯುದ್ಧ ಹೋರಾಟದ ಮನೋಭಾವ ಇಲ್ಲ ಎಂಬುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬರುತ್ತದೆ. ಪ್ರಸ್ತುತ ದಿನದಲ್ಲಿಯೂ ಹೊಸ ಬಟ್ಟೆ ಹಾಕಿಕೊಂಡು ಯಾರಾದರೂ ಹೊಸಬರನ್ನು ಕಂಡರೆ ಬೆಟ್ಟ ಹತ್ತಿ ಕುಳಿತು ಬಿಡುತ್ತಾರೆ. ಮತ್ತೆ ನಾವು ಹೋಗುವವರೆಗೂ ಹೊರಗೆ ಬರುವುದಿಲ್ಲ. ಇತರೆ ವರ್ಗದವರನ್ನು ಕಂಡರೆ ಹೆಚ್ಚು ಭಯ ಪಡುತ್ತಾರೆ. ಇದನ್ನು ಬಂಡವಾಳ ಮಾಡಿಕೊಂಡು ಇವತ್ತು ಇತರೆ ಸಮುದಾಯಗಳು ಇವರನ್ನು ಗುಲಾಮರಾಗಿ ದುಡಿಸಿಕೊಳ್ಳುತ್ತಿರುವುದನ್ನು ಕಾಣಬಹುದು.

ಒಟ್ಟಾರೆಯಾಗಿ ರಾಜ ಪ್ರಭುತ್ವದ ಸಂದರ್ಭದಲ್ಲಿ ಇರುಳಿಗರ ಜೀವನವು ಯಾವ ಅಡೆತಡೆಗಳಿಲ್ಲದೆ ನಡೆದುಕೊಂಡು ಹೋಗುತ್ತಿದ್ದರ ಬಗ್ಗೆ ವಕ್ತೃಗಳಿಂದ ತಿಳಿಯಬಹುದು. ಇವರಿಗೆ ರಾಜ ಪ್ರಭುತ್ವ ಗೊತ್ತಿಲ್ಲ. ಬ್ರಿಟಿಶ್‌ಪ್ರಭುತ್ವವು ಗೊತ್ತಿಲ್ಲ. ಆದರೆ ನಮ್ಮ ತಾತ ಮುತ್ತಾನ ಕಾಲದಲ್ಲಿ

ದೊಣ್ಣೆ ಹಿಡಿದುಕೊಂಡು ಕೆಲವು ಪೊಲೀಸ್‌ನವರು ನಮ್ಮ ಹಾಡಿಗಳಿಗೆ ನುಗ್ಗಿ ನಮ್ಮ ದನಕರುಗಳು, ರಾಗಿ ಜೋಳಗಳನ್ನು ಎತ್ತಿಕೊಂಡು ಓಂಟೋಗೋರು. ಪ್ರತಿದಿನದ ಕೊಟ್ಟಿಗೆಗೆ ಬಂದು ಸ್ಥಳ ಪರೀಕ್ಷೆ ಮಾಡುತ್ತಿದ್ದರು. ಹಾರೆಯಿಂದ ಕೊಟ್ಟಿಗೆಯ ರಾಗಿ ಗುಳಿಗಳಿಸಿಯೇ ಎಂದು ಪರೀಕ್ಷೆ ಮಾಡುತ್ತಿದ್ದರು. ಹಾಗೇನಾದರು ಸಿಕ್ಕಿದರೆ ಎಲ್ಲವನ್ನು ತುಂಬಿಕೊಂಡು ಹೊಂಟೋಗೋರು; ನಮ್ಮತೆಯಾ ಚಡ್ಡಿ ಹಾಕಿಕೊಂಡರ್ ನಾ ನೋಡ್ ಬುಟ್ರೆ ಬೆಟದಡಿ ಬೆಳಪೋಯಾ ಎಂದು ಚಿಕ್ಕದೊಳ್ಳಯ್ಯದೊಳವು ಹೇಳಿಕೊಳ್ಳುತ್ತಾರೆ.[೩೭]

ಇವರಿಗೆ ಬ್ರಿಟಿಶರು ಅಥವಾ ರಾಜ ಪ್ರಭುತ್ವ ಎಂದು ಗೊತ್ತಿಲ್ಲದೇ ಇದ್ದರೂ ಆ ಕಾಲ ಘಟ್ಟದಲ್ಲಿ ಅನುಭವಿಸಿದ ನೋವುಗಳನ್ನು ಮರೆತವರಲ್ಲ ಬ್ರಿಟಿಶರ ಕಾಲಘಟ್ಟದಲ್ಲಿ ಇರುಳಿಗರು ಅನೇಕ ಕಷ್ಟಕಾರ್ಪಣ್ಯಗಳಿಗೆ ಒಳಗಾಗಿರುವುದನ್ನು ಕಾಣಬಹುದಾಗಿದೆ.

ಆಡಿ Francis Buchanan ತನ್ನ ಕೃತಿಯಾದ Ajourney From Madras Through The Countries Of Mysore, Canara and Malbar ಎನ್ನುವ ಕೃತಿಯಲ್ಲಿ ಇರುಳಿಗರ ವಾಸದ ಸ್ಥಳಗಳಿಗೆ ಬೇಟಿ ನೀಡಿದ ಸಂದರ್ಭದಲ್ಲಿ ಹೀಗೆ ವಿವರಿಸುತ್ತಾನೆ' ಇರುಳಿಗರನ್ನು ಕಾಡ್ ಚೆನ್ಸು ಅಥವಾ ಕಾಡ್ ಇರುಲಿಗರು (Cad Eriligaru, But Who call Themselves Cat chensu) ಎಂದು ಕರೆಯುತ್ತಿದ್ದರು ಎನ್ನುತ್ತಾನೆ. ಇವರು ಸರಿಯಾಗಿ ಬಟ್ಟೆಗಳನ್ನು ಹಾಕಿಕೊಳ್ಳದೆ ಅರೆಬೆತ್ತಲೆಯಾಗಿ ಬದುಕುತ್ತಿದ್ದರು. ಕೆಲವು ಸಂದರ್ಭದಲ್ಲಿ ಎಲೆಗಳಿಂದ ದೇಹದ ಕೆಲವು ಭಾಗಗಳನ್ನು ಮುಚ್ಚಿಕೊಳ್ಳುತ್ತಿದ್ದುದುಂಟು ಎಂದು ಹೇಳುತ್ತಾನೆ. ಇವರು ಸಣ್ಣ ಸಣ್ಣ ಗುಡಿಸಲುಗಳನ್ನು ಕಟ್ಟಿಕೊಂಡು ಬದುಕುತ್ತಿದ್ದರು. ಇವರ ವಾಸದ ಮನೆಗಳು ವೃತ್ತಾಕಾರದಲ್ಲಿದ್ದವು. ಇವರು ಸಣ್ಣ ಪ್ರಮಾಣದಲ್ಲಿ ಕುರಿ ದನಗಳನ್ನು ಸಾಕುತ್ತಿದ್ದರು. ಅವುಗಳ ರಕ್ಷಣೆಗಾಗಿ ಈ ರೀತಿಯ ವೃತ್ತಾಕಾರದ ಮನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದಿರಬೇಕು ಎಂದಿದ್ದಾನೆ. ಹಾಗೆಯೇ ಇವರು ತಮಿಳು, ತೆಲುಗು ಮತ್ತು ಕನ್ನಡ ಭಾಷೆಯೊಳಗೊಂಡ ಮಿಶ್ರಿತ ಭಾಷೆಯಯನ್ನು ಮಾತನಾಡುತ್ತಿದ್ದರು, ಮೊದಮೊದಲು ಈ ಭಾಷೆ ಅರ್ಥವಾಗಲಿಲ್ಲ. ನಂತರ ಅವರ ಪೂರ್ವಪರವನ್ನು ವಿಚಾರಿಸಿದಾಗ ನಮಗೆ ಗೊತ್ತಾಯಿತು ಎಂದಿದ್ದಾರೆ.

ಇರುಳಿಗರು ಸರ್ಕಾರಕ್ಕೆ Trifling capitin tex ಎಂಬ ತಲೆಗಂದಾಯ ಕಟ್ಟುತ್ತಿದ್ದರು; ಇದರ ಜೊತೆಗೆ ಅರಣ್ಯಗಳಿಂದ ಔಷಧಿ ಸಸ್ಯಗಳು, ಜೇನು ಮುಂತಾದವುಗಳನ್ನು ಸಂಗ್ರಹಿಸಿ ತಂದು, ಗ್ರಾಮಗಳಲ್ಲಿ ಅಥವಾ ನಗರಗಳಲ್ಲಿ ಮಾರಾಟ ಮಾಡಿ ರಾಗಿ, ಅಕ್ಕಿ, ಕಾಳು ಕಡ್ಡಿ ಉಪ್ಪು, ಎಣ್ಣೆ ಇನ್ನಿತರ ಅಡುಗೆಯ ಉಪಕರಣಗಳನ್ನು ಪಡೆದುಕೊಳ್ಳುತ್ತಿದ್ದರು. ಇದಕ್ಕಾಗಿ ಇವರು Poll- tax (ತಲೆಗಂದಾಯ)ವನ್ನು ವರ್ಷಕ್ಕೆ ೧೫ ಪಣಗಳನ್ನು ಅಥವಾ ೧೦.೫, ೦೩/೪ಜ ಪ್ರತಿ ಕುಟುಂಬಗಳು ಸರ್ಕಾರಕ್ಕೆ ಕಟ್ಟುತ್ತಿದ್ದರು.

ಇರುಳಿಗರ ಜೇನುಸಂಗ್ರಹಣೆಯಲ್ಲಿ ಎರಡು ಬಗೆಗಳಿವೆ. ಚಿಕ್ಕಜೇನು ಈ ಜೇನು ಗಿಡ, ಚಿಕ್ಕ ಮರಗಳಲ್ಲಿ ಕಟ್ಟುತ್ತಿದ್ದು, ಇದನ್ನು ಆಯಾಸವಿಲ್ಲದೆ ಬಿಡಿಸಿಕೊಳ್ಳುತ್ತಿದ್ದರು. ಆದರೆ ಇನ್ನೊಂದು ಕಲ್ಲು ಬಂಡೆಗಳಲ್ಲಿ ಅಥವಾ ಎತ್ತರ ಪ್ರದೇಶಗಳಲ್ಲಿ ಕಟ್ಟುತ್ತಿದ್ದ ಜೇನು ಇದನ್ನು ಹೆಜ್ಜೇನು ಎಂದು ಕರೆಯುತ್ತಾರೆ. ಇದಕ್ಕೆ ಹೆಚ್ಚಿನ ಶಕ್ತಿ ಮತ್ತು ಸಮಯ ವ್ಯಯ ಮಾಡಬೇಕಿತ್ತು. ಈ ಎರಡು ರೀತಿಯ ಜೇನಿಗೂ ಬೇರೆ ಬೇರೆ ರೀತಿಯ ಬೆಲೆ ನಿಗದಿಮಾಡಿಕೊಂಡಿದ್ದರು. ಇದಕ್ಕೆ ಬುಕನಾನ್ ಹೀಗೆ ಹೇಳುತ್ತಾರೆ. "The wax Sells at 2 ½ seors for The Fanam or 11.8s 4d mndred weight. The honey sells at 2 seers for The Fanam" ಎಂದಿದ್ದಾನೆ.[೩೮]

ಇರುಳಿಗರು ಅರಣ್ಯದಿಂದ "Agulusenti ಮತ್ತು Heggnuntigay ಅಗಲು ಶುಂಠಿ ಮತ್ತು ಹೆಗ್ಗುಂಟೆ ಕಾಯಿಯಿಂದ ಔಷಧಿಯನ್ನು ತಯಾರಿಸುತ್ತಿದ್ದರು. ಜೊತೆಗೆ ಈಸ್ಪಿರಿ ಬೇರು ಮಾಕಳಿಬೇರು ಮುಂತಾದವುಗಳನ್ನು ಬಳಸಲಾಗುತ್ತಿತ್ತು. ಇರುಳಿಗರು ಪ್ರಮುಖ ಬಣ್ಣ ತಯಾರಿ ಸುತ್ತಿದ್ದರ ಬಗ್ಗೆಯು ಬುಕಾನನ್ ವಿವರಿಸುತ್ತಾನೆ. ಪ್ರಮುಖವಾಗಿ ಇರುಳಿಗರು ಸಂಪೂರ್ಣವಾದ ಬೇಟೆಗಾರಿಕೆಯ ಸಮುದಾಯವಾಗಿಯೂ ತಮ್ಮ ಬದುಕನ್ನು ಕಾಡಿನೊಂದಿಗೆ ಹೊಸೆದುಕೊಂಡಿದ್ದಿರುವುದು ಗೊತ್ತಾಗುತ್ತದೆ.

ಕಾಡಿನಲ್ಲಿ ಸಿಗುವ ಕೆಲವು ಎಲೆಗಳು ಮತ್ತು ಹಣ್ಣುಗಳ ಸಹಾಯದಿಂದ ಕೆಂಪು ಬಣ್ಣವನ್ನು ತಯಾರಿಸುತ್ತಿದ್ದರು. ಇದಕ್ಕೆ ಭಾರಿ ಬೇಡಿಕೆ ಇದ್ದುದಾಗಿಯೂ ತಿಳಿದುಬರುತ್ತದೆ. ಇದನ್ನು ಅವರು ಬೆಂಗಳೂರು, ಕೋಲಾರ ಮುಂತಾದ ಕಡೆ ಸಾಗಿಸುತ್ತಿದ್ದರು. It The red dust shaken from The frait of The Rotleria Tinctoria, The marchants of Bangalore and colar buy up these articles, paying to the chonsu a Fanam for 32 seers of popli, and maddi or 35 10 1/2d a hudred wight and a fanam for an seer of capily podi pr is 1 ¼ d a pomd ಎಂದಿದ್ದಾರೆ.[೩೯]

ಪ್ರಮುಖವಾಗಿ ಇರುಳಿಗರು ಮರದಿಂದ ಸ್ರವಿಸುವ ಗೋಂದನ್ನು ಸಂಗ್ರಹಿಸುತ್ತಿದ್ದರು. ಜೊತೆಗೆ ಕಲ್ಲಿನ ನಾರು ಮಾಕಳೆ ಬೇರು ಈಸ್ಪಿರಿಬೇರು, ಕಣಗಲ ಬೇರು ಮುಂತಾದ ಗಿಡ ಮೂಲಿಕೆಯ ಜೊತೆಗೆ ದಿಂಡುಗಾ, ಬೇವು, ಮೂಸಿ, ಮುರಕಲು, ಮಾವಿನ ಮರಗಳು ಒಣ ಅವರೆಕಾಯಿ, ನುಗ್ಗೆಕಾಯಿ, ಬ್ಯಾಲದಕಾಯಿ, ಪುಳ್ಳಣ್ಣು, ಬೇಲದಕಾಯಿ, ಬೆಟ್ಟದ ತಾವರೆ ಮುಂತಾದವುಗಳನ್ನು ಸಂಗ್ರಹಿಸುತ್ತಿದ್ದರು. ಪ್ರಮುಖವಾಗಿ ಬಿದಿರನ್ನು ಅತೀ ಹೆಚ್ಚಾಗಿ ಬಳಸಿಕೊಳ್ಳತ್ತಿದ್ದು ಇದರಿಂದ ಬುಟ್ಟಿ, ನೆರೆಕೆ, ಮನೆ ಬಾಗಿಲು ಭಾವಣಿ ಮುಂತಾದವುಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಹಾಗೆಯೇ ಬಿದರ ಅಕ್ಕಿಯನ್ನು ಆಹಾರಕ್ಕಾಗಿ ಇನ್ನಿತರ ಕಾಡು ಹಣ್ಣು, ದ್ರಾಕ್ಷಿ ಗಿಡ ಸಸ್ಯಗಳನ್ನು ಬಳಸಿಕೊಳ್ಳುತ್ತಿದ್ದುದರ ಬಗ್ಗೆ ಬುಕಾನನ್ ತಿಳಿಸುತ್ತಾರೆ.

ಬುಕಾನನ್‌ನ ಕೃತಿಯನ್ನು ಗಮನಿಸಿದಾಗ ಬ್ರಿಟಿಶ್ ಪ್ರಭುತ್ವದ ಸಂದರ್ಭದಲ್ಲಿ ಇರುಳಿಗರು ಸಂಪೂರ್ಣವಾಗಿ ಬೇಟೆಗಾರಿಕೆಯನ್ನು ಬಿಟ್ಟು ಪ್ರಭುತ್ವ ಕೆಲಸಗಳಲ್ಲೂ ಭಾಗವಹಿಸಿದ್ದರು. ಅಂದಿನ ಸಂದರ್ಭದಲ್ಲಿ ಮೈಸೂರು ಅತ್ಯಂತ ಸಂಪದ್ಭರಿತ ರಾಜ್ಯವಾಗಿದ್ದ ಎಲ್ಲಾ ರಫ್ತು ಮತ್ತು ಆಮದುಗಳು ರಾಮಗಿರಿಯ ಮೂಲಕವೇ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಸರಕುಗಳನ್ನು ತುಂಬಿಕೊಂಡು ಹೋಗುತ್ತಿದ್ದ ಎತ್ತಿನ ಗಾಡಿಗಳ ಮೇಲೆ ಕಳ್ಳಕಾಕರು ದಾಳಿ ಮಾಡುತ್ತಿದ್ದರಿಂದ ಇದರ ರಕ್ಷಣೆಗೆ ಕೂಲಿಯಾಳುಗಳಾಗಿ ಇರುಳಿಗರನ್ನು ನೇಮಿಸಿಕೊಂಡಿರಬೇಕು ಅಥವಾ ಹಸುವಿಗೆ ಬೇಕಾಧ ಹುಲ್ಲುಗಳನ್ನು ಬೆಟ್ಟಗುಡ್ಡ ಸುತ್ತಾಡಿ ಸಂಗ್ರಹಿಸಿಕೊಟ್ಟು ಹೊಟ್ಟೆ ಹೊರೆತುಕೊಳ್ಳುತ್ತಿದ್ದ ಬಗ್ಗೆ ಇರುಳಿಗ ವಕ್ತೃಗಳು ವಿವರಿಸುತ್ತಾರೆ. ಟಿಪ್ಪುವಿನ ಕಾಲದಲ್ಲಿ ಪ್ರಭುತ್ವ ಕೆಲಸಗಳಿಗೆ ಬಳಕೆಯಾದ ಇರುಳಿಗ ಬುಡಕಟ್ಟಿನವರು ವಸಹಾತುಶಾಹಿ ಕಾಲಘಟ್ಟದಲ್ಲೂ ಮುಂದವರಿದ್ದರು ಹಾಗೂ ತಮ್ಮ ಪಾರಂಪರಿಕ ವೃತ್ತಿಯಾದ ಬೇಟೆಗಾರಿಕೆಯನ್ನು ಮಾಡುತ್ತಿದ್ದು ಇದಕ್ಕೆ ಸಂಬಂಧಿಸಿ ತೆರಿಗೆಗಳನ್ನು ಕಟ್ಟುತ್ತಿದ್ದುದರ ಬಗ್ಗೆ ಮಾಹಿತಿಗಳು ಸಿಗುತ್ತವೆ.

೧೮೦೦ರಲ್ಲಿ ಫ್ರಾನ್ಸಿಸ್ ಬುಕಾನಾನ್ ತನ್ನ ವರದಿಯನ್ನು ಕಂಪನಿ ಸರ್ಕಾರಕ್ಕೆ ನೀಡಿದ ನಂತರ ಬುಡಕಟ್ಟುಗಳ ನಿಯಂತ್ರಣಕ್ಕೆ ಅನೇಕ ಕ್ರಮಗಳನ್ನು ತೆಗೆದುಕೊಳ್ಳಲು ಕಂಪನಿ ಸರ್ಕಾರ ಆಲೋಚನೆ ಮಾಡಿತು. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೇನೆಂದರೆ ಬುಡಕಟ್ಟುಗಳು ಟಿಪ್ಪುಸುಲ್ತಾನನ ಆಳ್ವಿಕೆಯ ಸಂದರ್ಭದಲ್ಲಿ ಪ್ರಭುತ್ವಗಳೊಂದಿಗೆ ಯಾವ ರೀತಿಯ ಸಂಬಂಧಪಟ್ಟ ಕೊಂಡಿದ್ದವು ಮತ್ತು ಟಿಪ್ಪುವಿನ ತಂತ್ರಜ್ಞಾನದ ಹಿಂದಿರುವ ಅಂಶಗಳಾವುವು ಎಂಬುದನ್ನು ತಿಳಿದುಕೊಳ್ಳುವುದೇ ಆಗಿತ್ತು. ಅವನನ್ನು ಮೋಸದಿಂದ ಕೊಂದ ಅವನ ಆರ್ಥಿಕತೆ, ಸಾಮಾಜಿಕತೆ, ರಾಜಕೀಯ ಅಂಶಗಳು ಮುಂತಾದವುಗಳನ್ನು ತಿಳಿದುಕೊಳ್ಳುವ ನೆಪದಲ್ಲಿ ಫ್ರಾನ್ಸಿನ ಬುಕಾನ್‌ನನ್ನು ಈ ಕೆಲಸಕ್ಕೆ ನೇಮಕ ಮಾಡಿದ್ದರು ಅದರಂತೆ ಕೊಟ್ಟ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಬುಕಾನನ್ ತನ್ನ ಜರ್ನಿಯಲ್ಲಿ ಕಂಡುಬಂದ ಎಲ್ಲ ಸಮುದಾಯಗಳು ಮತ್ತು ಬುಡಕಟ್ಟುಗಳ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಮಾಹಿತಿ ಸಂಗ್ರಹಿಸಿ ಕಂಪನಿಗೆ ನೀಡಿದನು. ಬುಕಾನನ್ನು ತಾನು ಪ್ರವಾಸದ ಮಾರ್ಗವನ್ನು ಆಯ್ಕೆ ಮಾಡಿಕೊಂಡಿದ್ದು ಪ್ರಮುಖವಾಗಿ ಟಿಪ್ಪುವಿನ ಆಳ್ವಿಕೆಯ ಪ್ರದೇಶಗಳನ್ನೆ ಬುಡಕಟ್ಟುಗಳು ಮತ್ತು ತಳಸಮುದಾಯಗಳು ಟಿಪ್ಪುವಿನೊಂದಿಗೆ ಬೆಂಗಾವಲಾಗಿದ್ದರು. ಆದ್ದರಿಂದಲೇ ಬುಕನಾನ್ ಸಂಚರಿಸಿದನು. ತಾನು ಹೋದಲ್ಲೆಲ್ಲ ತನಗೆ ಸಿಕ್ಕಷ್ಟು ಮಾಹಿತಿಗಳನ್ನು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸಿ ಪರಿಶೀಲಿಸಿ ಅರ್ಥ ಮಾಡಿಕೊಂಡು ಸಂಗ್ರಹಿಸಿದನು.

ಬುಕಾನನ್ ವರದಿಯನ್ನಾಧರಿಸಿ ಕಂಪನಿ ಸರ್ಕಾರ ಅನೇಕ ಕಾಯ್ದೆ ಕಾನೂನುಗಳನ್ನು ಜಾರಿಗೆ ತಂದಿತು. ಅರಣ್ಯ ಪ್ರದೇಶಗಳು ಇನ್ನು ಮುಂದೆ ಸರ್ಕಾರದ ಸ್ವತ್ತು ಎಂದು ಆದೇಶ

ಹೊರಡಿಸಿ ಅದರ ರಕ್ಷಣೆಗೆ ಸರ್ಕಾರ ಅರಣ್ಯ ಅಧಿಕಾರಿಗಳನ್ನು ನೇಮಕ ಮಾಡಿತು. ಬುಡಕಟ್ಟುಗಳನ್ನು ಅರಣ್ಯದಿಂದ ನಿಯಂತ್ರಿಸುವ ಹಲವಾರು ಕಾರ್ಯ ತಂತ್ರಗಳನ್ನು ರೂಪಿಸಿಟ್ಟು ಅನೇಕ ಅರಣ್ಯ ಕಾಯ್ದೆಗಳನ್ನು ಜಾರಿಗೆ ತಂದರು ಈ ಅರಣ್ಯ ಕಾಯ್ದೆಗಳು ಕಂಪನಿ ಸರ್ಕಾರದ ಪರವಾಗಿದ್ದು ಬುಡಕಟ್ಟುಗಳನ್ನು ಅರಣ್ಯದಿಂದ ಹೊರ ಹಾಕಿ ಅರಣ್ಯದಲ್ಲಿದ್ದ ಸಂಪನ್ಮೂಲಗಳನ್ನು ದೋಚುವುದೇ ಆಗಿತ್ತು. ಅವರ ಈ ಕೆಲಸಕ್ಕೆ ಅಡ್ಡವಾಗಿದ್ದರಿಂದ ಅವರನ್ನು ಒಕ್ಕಲೆಬ್ಬಿಸಿ ಅವರನ್ನು ತಂದು ತಮ್ಮ ಸೈನ್ಯ ತುಕಡಿಗಳಿರುವ ಜಾಗದಲ್ಲಿ ಗೃಹ ಬಂದನದಲ್ಲಿಟ್ಟರು. ಹೀಗೆ ಬುಡಕಟ್ಟುಗಳ ಸಂಪೂರ್ಣ ಸ್ವತಂತ್ರವನ್ನು ಕಸಿದುಕೊಂಡರು. ನೋಡು ನೋಡುತ್ತಿದ್ದಂತೆಯೇ ತಮ್ಮ ಭೂಮಿ, ದೇವರು, ತಮ್ಮ ತಂದೆ ತಾತಂದಿರ ಸಮಾಧಿಗಳ ಹತ್ತಿರ ಹೋಗದಂತಾಯಿತು. ತಾವು ಹುಟ್ಟಿ ಬೆಳೆದ ಜಾಗವೇ ತಮ್ಮದಲ್ಲದಂತಾಯಿತು ಇದರಿಂದ ಬುಡಕಟ್ಟುಗಳ ಪರಿಸ್ಥಿತಿ ಚಿಂತಾಜನಕವಾಯಿತು. ಅದರಲ್ಲೂ ಅರಣ್ಯವನ್ನು ನಂಬಿಕೊಂಡಿದ್ದ ಇರುಳಿಗರು ತಮ್ಮ ಜೀವನವನ್ನು ಕಳೆದುಕೊಂಡಂತಾದರು.

ಒಟ್ಟಾರೆಯಾಗಿ ಬ್ರಿಟಿಶ್‌ರ ಕಾಲಾವಧಿಯಲ್ಲಿ ಇರುಳಿಗರ ಬದುಕು ಮೂರಾಬಟ್ಟೆಯಾಯಿತು. ತಾವು ಹುಟ್ಟಿ ಬೆಳೆದ ಕಾಡು ಬ್ರಿಟಿಶರ ಕಾಲದಲ್ಲಿ ಅನೇಕ ಕಾಯ್ದೆಗಳಿಗೆ ಒಳಗಾಗಿ ಇರುಳಿಗರನ್ನು ಹೊರಹಾಕಿತು. ತಮ್ಮ ತಾತ ಮುತ್ತಾತಂದಿರ ಸಮಾಧಿಗಳು, ದೈವಗಳು ಅರಣ್ಯದೊಳಗಡೆ ಸೇರಿಕೊಂಡು ಅರಣ್ಯದೊಳಗಡೆ ಹೋಗದಂತಾಯಾಯಿತು. ಅರಣ್ಯ ವೃತ್ತಿಯನ್ನು ಬಿಟ್ಟು ಏನೂ ಗೊತ್ತಿರದ ಇರುಳಿಗರು ತಮ್ಮ ಪಾರಂಪರಿಕ ವೃತ್ತಿಯನ್ನು ಕದ್ದುಮುಚ್ಚಿ ಮಾಡಿಕೊಂಡು ಅಪರಾಧಿಗಳ ಪಟ್ಟವನ್ನು ಕಟ್ಟಿಕೊಂಡು ಬದುಕುವಂತಾಯಿತು. ಇದು ಸ್ವಾತಂತ್ರ್ಯ ನಂತರವು ಬದಲಾಗಲಿಲ್ಲ. ಇರುಳಿಗ ಬುಡಕಟ್ಟುಗಳು ಶಾಂತಿಪ್ರಿಯರು. ಇವರಿಗೆ ಯುದ್ಧ ಹೋರಾಟದ ಅನುಭವಿಲ್ಲ. ಬ್ರಿಟಿಶರ ಕಾಯ್ದೆಗಳಿಗೆ ಯಾವ ರೀತಿಯ ಪ್ರತಿರೋಧವನ್ನು ವ್ಯಕ್ತಪಡಿಸಿರುವುದನ್ನು ಕಾಣಬಹುದು.

ಇರುಳಿಗರ ಆರ್ಥಿಕತೆಯ ಮೇಲೆ ದೊಡ್ಡ ಹೊಡೆತ ಬದ್ದಿತ್ತು ರಾಜ ಪ್ರಭುತ್ವದಲ್ಲಿ ಅನುಭವಿಸಿದ ನೋವುಗಳನ್ನು ಬ್ರಿಟಿಶ್ ಪ್ರಭುತ್ವದಲ್ಲಿ ಅನುಭವಿಸಿರುವುದು ಗೊತ್ತಾಗುತ್ತದೆ. ಸ್ವತಂತ್ರರಾಗಿ ಯಾರ ಹಂಗಿಲ್ಲದ ಬದುಕಿದ್ದು ಇರುಳಿಗರು ಜೀತದಾಳುಗಳಾಗಿ ತುತ್ತು ಅನ್ನಕ್ಕಾಗಿ, ಬಿದಿರಕ್ಕಿ, ಸಾಮೆ, ಕಳಳೆ, ಸೊಪ್ಪು ಸದೆಗಳನ್ನು ತಿಂದು ಊಟಕ್ಕಾಗಿ ಇನ್ನೊಬ್ಬರ ಮನೆ ಜೀತಕ್ಕೆ ಸೇರಿಕೊಂಡಿರುವುದಾಗಿ ವಕ್ತೃಗಳು ಹೇಳುತ್ತಾರೆ. ಇವರಿಗೆ ಬ್ರಿಟಿಶ್ ರಾಜ ಪ್ರಭುತ್ವ ಮತ್ತು ಸ್ವಾತಂತ್ರದ ಬಗ್ಗೆ ಅರಿವೇನು ಇಲ್ಲದಿರಬಹುದು ಆದರೆ ಆ ಸಂದರ್ಭದಲ್ಲಿ ಅನುಭವಿಸಿದ ನೋವುಗಳನ್ನು ತಮ್ಮಲ್ಲಿ ಪುಸ್ತಕದ ಚರಿತ್ರೆಯಲ್ಲಿ ಇಂದಿಗೂ ಅಡಗಿಸಿಕೊಂಡಿದ್ದಾರೆ. ಸ್ವಾತಂತ್ರ್ಯ ನಂತರವು ಇವರು ಇದೇ ಪರಿಸ್ಥಿತಿಯಲ್ಲಿ ಬದುಕುತ್ತಿರುವುದನ್ನು ಕಾಣಬಹುದು.

೩.೩. ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿ ಇರುಳಿಗರು

೧೭೯೯ರಲ್ಲಿ ಟಿಪ್ಪುವಿನಿಂದ ಆರಂಭವಾದ ಭಾರತದ ಸ್ವಾತಂತ್ರ್ಯ ಚಳುವಳಿಯನ್ನು ೧೮೫೭ರವರೆಗೆ ಮುನ್ನಡೆಸಿದ ಕೀರ್ತಿ ಬುಡಕಟ್ಟುಗಳಿಗೆ ಸಿಗುತ್ತದೆ. ೧೬೦೦ರಲ್ಲಿ ಈಸ್ಟ್ ಇಂಡಿಯಾ ಕಂಪನಿಯನ್ನು ಆರಂಭಿಸಿ ೧೭೫೭ ಮತ್ತು ೧೭೬೪ರಲ್ಲಿ ಪ್ಲಾಸಿ ಮತ್ತು ಬಕ್ಸಾರ್ ಕದನಗಳನ್ನು ಮಾಡುವ ಮೂಲಕ ಇಡೀ ಭಾರತದ ರಾಜಕೀಯ ಚುಕ್ಕಾಣಿಯನ್ನು ಬ್ರಿಟಿಶ್ ಪ್ರಭುತ್ವ ಹಿಡಿದುಕೊಂಡಿತು. ೧೬೦೦ರಲ್ಲಿ ಈಸ್ಟ್ ಇಂಡಿಯಾ ಕಂಪನಿ ಆರಂಭವಾಗಿ ಅನೇಕ ಯುದ್ಧಗಳನ್ನು ಗೆದ್ದಿದ್ದ ಬ್ರಿಟಿಶರಿಗೆ ೧೮೦೦ ರಿಂದ ೧೮೫೭ರವರೆಗೆ ಕಾಲವು ಅತ್ಯಂತ ಕಷ್ಟದ ಸಮಯವಾಗಿ ಪರಿಣಮಿಸಿತು. ಏಕೆಂದರೆ ಈ ಅವಧಿಯಲ್ಲಿ ಭಾರತದ ಹಲವಾರು ಬುಡಕಟ್ಟುಗಳು ಬ್ರಿಟಿಶರ ವಿರುದ್ಧ ಯುದ್ಧ ಸಾರಿದ್ದರು. ಇದಕ್ಕೆ ಪ್ರತ್ಯುತ್ತರ ನೀಡಲಾಗದೇ ಬ್ರಿಟಿಶರು ಅನೇಕ ಸಮಸ್ಯೆಗಳನ್ನು ಅನುಭವಿಸುವಂತಾಯಿತು. ಇದರಿಂದ ಯುದ್ಧದ ಮೂಲಕ ಗೆಲ್ಲುವುದು ಕಷ್ಟ ಎಂಬುದು ಅವರಿಗೆ ಅರಿವಾಯಿತು. ಏಕೆಂದರೆ ತಮ್ಮ ಕುತಂತ್ರ ನೀತಿಗಳಿಂದ ಯುದ್ಧಗಳನ್ನು ಗೆದ್ದಿದ್ದು ಬ್ರಿಟಿಷರಿಗೆ ಈ ಕುತಂತ್ರ ನೀತಿ ಬುಡಕಟ್ಟುಗಳಲ್ಲಿ ಕೆಲಸ ಮಾಡಲಿಲ್ಲ. ಏಕೆಂದರೆ ಬುಡಕಟ್ಟುಗಳಲ್ಲಿ ಪ್ರಾಮಾಣಿಕತೆ, ಸತ್ಯ, ಸಹಬಾಳ್ವೆ ಮತ್ತು ಸಮುದಾಯಗಳ ಕಟ್ಟುಕಟ್ಟಲೆಗಳಿಗೆ ಬದ್ಧವಾಗಿದ್ದರಿಂದ ಬ್ರಿಟಿಷರ ವಸಾಹತುಶಾಹಿ ನೀತಿ ಕೆಲಸ ಮಾಡದೆ ಇದ್ದುದ್ದರಿಂದ ಬ್ರಿಟಿಷರು ಬುಡಕಟ್ಟುಗಳ ಮೂಲವನ್ನು ಪತ್ತೆ ಹಚ್ಚುವ ಕೆಲಸಕ್ಕೆ ಮುಂದಾದರು. ಇವರ ಫಲವೇ ಬುಡಕಟ್ಟುಗಳನ್ನು ಕುರಿತ ಅಧ್ಯಯನಗಳಿಗೆ ಎಡೆ ಮಾಡಿಕೊಟ್ಟಿತು. ಈ ಅಧ್ಯಯನಗಳು ಬುಡಕಟ್ಟುಗಳ ಅಂತರಾಳವನ್ನು ಹೆಕ್ಕಿ ತೆಗೆದಿದ್ದರಿಂದ ಬ್ರಿಟಿಷರಿಗೆ ಬುಡಕಟ್ಟುಗಳನ್ನು ಕಟ್ಟಿ ಹಾಕಲು ಅರಣ್ಯದಿಂದ ಹೊರಹಾಕುವುದೊಂದೇ ಮಾರ್ಗ ಎಂದು ನಿರ್ಧರಿಸಿ ಅನೇಕ ಕಾಯ್ದೆ ಕಾನೂನುಗಳನ್ನು ರೂಪಿಸಿ ತಮ್ಮ ಕೆಲಸದಲ್ಲಿ ಯಶಸ್ವಿಯಾಗಿ ಬುಡಕಟ್ಟುಗಳನ್ನು ನಿಯಂತ್ರಿಸುವಲ್ಲಿ ಮೇಲುಗೈ ಸಾಧಿಸಿದರು.

ಹೀಗೆ ಬುಡಕಟ್ಟುಗಳನ್ನು ಅನೇಕ ರೀತಿಯಲ್ಲಿ ಕಟ್ಟಿಹಾಕಿ ಬುಡಕಟ್ಟುಗಳ ಹೋರಾಟವನ್ನು ಹತ್ತಿಕ್ಕಿದರು. ಇದಕ್ಕೆ ಹೆಚ್ಚಾಗಿ ಬೆಂಬಲ ಕೊಟ್ಟವರು ದೇಶೀಯ ಮಧ್ಯವರ್ತಿಗಳು. ಇವರು ಬುಡಕಟ್ಟುಗಳನ್ನು ಕ್ರಿಮಿನಲ್‌ಗಳಾಗಿ ನಡೆಸಿಕೊಳ್ಳಲಾರಂಭಿಸಿದರು.ಇದು ಇಂದಿಗೂ ಮುಂದುವರಿಯುತ್ತಲೇ ಇದೆ. ೧೯೩೫ರವರೆಗೆ ಇಂತಹ ಅನೇಕ ಹೋರಾಟಗಳು ಅಣಬೆಗಳಂತೆ ಅಲ್ಲೊಂದು ಇಲ್ಲೊಂದು ನಡೆಯುತ್ತಲೇ ಇತ್ತು. ೧೯೩೫ರಲ್ಲಿ ಒಂದು ವಿದ್ಯಮಾನ ಪ್ರಾರಂಭವಾಯಿತು. ಅದೇನೆಂದರೆ ಇಲ್ಲಿಯವರೆಗೆ ಬ್ರಿಟಿಷರ ಜೊತೆ ನಿಂತಿದ್ದ ಭಾರತೀಯ ಮಧ್ಯವರ್ತಿ ಶ್ರೀಮಂತರಿಗೆ ಅಂದುಕೊಂಡಷ್ಟು ಲಾಭ ಸಿಗಲಿಲ್ಲ. ಹಾಗೂ ಬ್ರಿಟಿಷರು ಭಾರತದಲ್ಲಿ ಹೆಚ್ಚು ಆದಾಯ ಗಳಿಸುತ್ತಿದ್ದುದನ್ನು ಸಹಿಸಿಕೊಳ್ಳಲಾಗದೇ ಇಡೀ ಮಧ್ಯವರ್ತಿ ಶ್ರೀಮಂತ ವರ್ಗ ಒಂದಾಯಿತು. ಭಾರತದಿಂದ ಬ್ರಿಟಿಷರನ್ನು ಓಡಿಸಬೇಕು ಎಂದು ಚೀರುತ್ತಾ ಬ್ರಿಟಿಷರ ವಿರುದ್ಧ ಬೀದಿಗಿಳಿದರು. ಇದರಿಂದ ಇವರ ಮನೆಗಳಲ್ಲಿ ಜೀತಕ್ಕಾಗಿ ಕೂಲಿಗಾಗಿ ಅಥವಾ ಇವರ ಮಾತುಗಳನ್ನು

ಕೇಳುತ್ತಿದ್ದವು. ಹೋರಾಟದಲ್ಲಿ ತೊಡಗಿಕೊಂಡರು. ಶ್ರೀಮಂತರ ಹೋರಾಟದ ಹಿಂದೆ ಬ್ರಿಟಿಷರು ಭಾರತದಿಂದ ಕಚ್ಚಾವಸ್ತುಗಳನ್ನು ತೆಗೆದುಕೊಂಡು ಹೋಗಿ ಸಿದ್ಧವಸ್ತುಗಳನ್ನಾಗಿ ಮಾಡಿ ತಂದು ಮಾರಾಟ ಮಾಡಿ ಲಾಭ ಮಾಡಿಕೊಳ್ಳುತ್ತಿದ್ದರು. ಆದರೆ ಎರಡನೆಯ ಮಹಾಯುದ್ಧದ ನಂತರ ಬ್ರಿಟಿಷರು ಭಾರತದಿಂದ ಕಚ್ಚಾವಸ್ತುಗಳನ್ನು ತೆಗೆದುಕೊಂಡು ಹೋಗಲು ತೊಂದರೆಯಾಗತೊಡಗಿತು. ಈ ಸಂದರ್ಭದಲ್ಲಿ ಕಾಯುತ್ತಿದ್ದ ಮಧ್ಯವರ್ತಿ ಶ್ರೀಮಂತರಿಗೆ ಭಾರತದಿಂದ ಬ್ರಿಟಿಷರನ್ನು ಒದ್ದೋಡಿಸುವ ನಿಟ್ಟಿನಲ್ಲಿ ಭಾರತದ ಮಧ್ಯವರ್ತಿ ಶ್ರೀಮಂತರು ೧೯೪೦ರಲ್ಲಿ ಭಾರತ ಬಿಟ್ಟು ತೊಲಗಿ ಚಳುವಳಿಯನ್ನು ಆರಂಭಿಸಿದರು. ಈ ಸಂದರ್ಭದಲ್ಲಿ ಭಾರತದ ಮಧ್ಯವರ್ತಿ ಶ್ರೀಮಂತ ವರ್ಗ ಒಟ್ಟಾಗಿ ಸೇರಿ ಭಾರತದಲ್ಲಿ ತಮ್ಮ ಕೈಗಾರಿಕೋದ್ಯಮ ಅಭಿವೃದ್ಧಿಪಡಿಸುವುದು ಹೇಗೆ ಎಂದು ಆಲೋಚಿಸಲು ಶುರು ಮಾಡಿದರು. ಇದಕ್ಕೆ ತಡೆಯಾಗಿದ್ದ ಬ್ರಿಟಿಷರನ್ನು ಓಡಿಸುವ ಎಲ್ಲಾ ಕಾರ್ಯತಂತ್ರವನ್ನು ಕ್ಷಿಪ್ರವಾಗಿ ಕೈಗೊಂಡು ೧೯೪೭ರಲ್ಲಿ ಭಾರತದಿಂದ ಬ್ರಿಟಿಷರನ್ನು ಓಡಿಸಿದರು. ೧೯೪೫ರಲ್ಲಿ ಭಾರತದಿಂದ ಬ್ರಿಟಿಷರನ್ನು ಓಡಿಸಿದ ಮೇಲೆ ಭಾರತದ ಆರ್ಥಿಕ ವ್ಯವಸ್ಥೆ ಹೇಗಿರಬೇಕು ಎಂದು ಚಿಂತಿಸಿದರು. ಈ ಯೋಜನೆಯು ಭಾರತದ ಸ್ವಾತಂತ್ರ್ಯ ನಂತರದಲ್ಲಿ ಅಂದರೆ ೧೯೫೦ರ ಯೋಜನೆಯ ಅಡಿಯಲ್ಲಿ ಸೇರ್ಪಡೆಗೊಂಡಿತು. ಏಕೆಂದರೆ ೧೯೪೫ರಲ್ಲಿ ಬಾಂಬೆಯಲ್ಲಿ ತೆಗೆದುಕೊಂಡಿದ್ದ ನಿರ್ಣಯ ೧೯೫೦ರ ನಂತರದ ಭಾರತದ ಆರ್ಥಿಕ ಯೋಜನೆಯಾಗಿ ಮಾರ್ಪಟ್ಟು ಭಾರತದಲ್ಲಿ ಅಭಿವೃದ್ಧಿ ಎಂಬುದು ಕೈಗಾರಿಕೀಕರಣದ ಮೂಲಕವೇ ಆಗಬೇಕೆಂದು ಸ್ವಾತಂತ್ರ್ಯ ಭಾರತದ ಆರ್ಥಿಕತಜ್ಞ ಸಮಿತಿ ನಿರ್ಧರಿಸಿತು. ಇದಕ್ಕೆ ಪೂರಕವಾಗಿ ಬೇಕಾದ ವಸ್ತುಗಳು ಮತ್ತು ಕಚ್ಚಾ ಪದಾರ್ಥಗಳು ಶೇ. ೯೦ರಷ್ಟು ಬುಡಕಟ್ಟು ಪ್ರದೇಶದಲ್ಲಿ ಇದೆ ಎಂಬುದು ಇವರಿಗೆ ತಿಳಿದಿತ್ತು. ಆದ್ದರಿಂದಲೇ ಭಾರತದ ಕೈಗಾರಿಕಾ ಕ್ರಾಂತಿಯ ಹೆಸರಿನಲ್ಲಿ ಕಾರ್ಖಾನೆ ನಿರ್ಮಾಣ, ನಗರೀಕರಣ, ನೀರಾವರಿ ಮುಂತಾದ ಪ್ರಸ್ತಾಪಗಳನ್ನು ಮುಂದಿಟ್ಟು ಗಣಿಗಾರಿಕೆಯನ್ನು ಆರಂಭಿಸಿದರು. ಹೀಗೆ ಬುಡಕಟ್ಟು ಪ್ರದೇಶಗಳು ವಾಸಿಸುವ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಆರಂಭಿಸಿದ್ದರಿಂದ ನಗರೀಕರಣ ಪ್ರಕ್ರಿಯೆ ಆರಂಭವಾಗಿ ಬುಡಕಟ್ಟುಗಳಿದ್ದ ಪ್ರದೇಶಗಳಿಗೆ ಇತರೆ ಜನಸಮುದಾಯದವರು ಬಂದು ಸೇರಿಕೊಳ್ಳುವಂತಾಯಿತು. ಈ ನಗರೀಕರಣ ಮತ್ತು ಕೈಗಾರಿಕೆಗಳು ಬುಡಕಟ್ಟುಗಳ ಪ್ರದೇಶದಲ್ಲಿ ಆರಂಭವಾಗಿ ಅನೇಕ ತೊಂದರೆ ಕೊಡಲಾರಂಭಿಸಿದರು. ಇದಕ್ಕೆ ಪ್ರತಿಭಟಿಸಿದ ಬುಡಕಟ್ಟುಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಈ ವರ್ಗ ಚಿಂತಿಸಿ ಕೈಗಾರಿಕೆಗಳಿಗೆ, ನಗರೀಕರಣಕ್ಕೆ ಮತ್ತು ದೇಶದ ಅಭಿವೃದ್ಧಿಗೆ ನೀರಿನ ಅವಶ್ಯಕತೆ ಹೆಚ್ಚಾಗಿದೆ. ಅದಕ್ಕೆ ಅಣೆಕಟ್ಟುಗಳು ನಿರ್ಮಾಣ ತ್ವರಿತವಾಗಿ ಆಗಬೇಕೆಂದು ಹೇಳಿ ೧೯೫೬ರಲ್ಲಿ ಎರಡನೇ ಯೋಜನೆ ಸಿದ್ಧಪಡಿಸಿತು. ಈ ಯೋಜನೆಯನ್ನು ಸಂಪೂರ್ಣವಾಗಿ ವ್ಯವಸಾಯಕ್ಕೆ ಮೀಸಲಿರಿಸಿದೆ ಎಂದು ಭಾರಿ ಅಣೆಕಟ್ಟುಗಳ ನಿರ್ಮಾಣದ ಕೆಲಸಕ್ಕೆ ಕೈಹಾಕಿದರು. ಇದರಿಂದ ಲಕ್ಷಾಂತರ ಬುಡಕಟ್ಟುಗಳು ತಮ್ಮ ನೆಲೆ ಕಳೆದುಕೊಳ್ಳುವಂತಾಯಿತು. ದೇಶದ

ಜನತೆಗೆ ಅಭಿವೃದ್ಧಿಯ ಮಂತ್ರ ಹೇಳಿ ಇಡೀ ಬುಡಕಟ್ಟುಗಳ ಸಮಾಧಿಯ ಮೇಲೆ ಡ್ಯಾಂಗಳೆಂಬ ನೆಹರೂ ಅವರ ದೃಷ್ಟಿಯ ದೇವಾಲಯಗಳನ್ನು ಕಟ್ಟಲಾಯಿತು. ತಮ್ಮ ನೆಲೆಗಳನ್ನು ಕಳೆದುಕೊಂಡು ಬುಡಕಟ್ಟು ಪ್ರದೇಶಗಳಿದ್ದ ಸಂಪನ್ಮೂಲಗಳನ್ನು ದೋಚಿಕೊಂಡರು. ಇದರಿಂದ ಬುಡಕಟ್ಟುಗಳಿಗೆ ೧೯೪೭ರವರೆಗೆ ಬ್ರಿಟಿಷರ ವಸಾಹತುಶಾಹಿ ಶೋಷಣೆ ಅನುಭವಿಸಿದರೆ ೧೯೪೭ರ ನಂತರ ಆಂತರಿಕ ವಸಾಹತುಶಾಹಿಗಳ ಶೋಷಣೆ ಅನುಭವಿಸುವಂತಾಯಿತು. ಇದು ದಕ್ಷಿಣ ಭಾರತದ ಕಡೆ ಎಸ್ಟೇಟ್‌ಗಳು ಉಗಮಗೊಂಡು ವಸಾಹತುಶಾಹಿ ಶೋಷಣೆಯನ್ನು ಮುಂದುವರಿಸಿ, ಆ ಬುಡಕಟ್ಟುಗಳನ್ನು ಸಂಪತ್ತುಗಳಾಗಿ ಭಾವಿಸಿಕೊಂಡು ಅವರು ವಾಸಿಸುವ ಪ್ರದೇಶಗಳಿಗೆ ಅನೇಕ ಷಡ್ಯಂತ್ರಗಳನ್ನು ರೂಪಿಸಿ ಬುಡಕಟ್ಟುಗಳ ಭೂಮಿಯನ್ನು ಕಿತ್ತುಕೊಂಡು ಅವರನ್ನು ಆ ಪ್ರದೇಶದಲ್ಲಿ ಜೀತದಾಳುಗಳನ್ನಾಗಿ ಮಾಡಿಕೊಳ್ಳಲಾಯಿತು. ಹೀಗೆ ಬ್ರಿಟಿಷರ ನಂತರ ಆಂತರಿಕ ಮಧ್ಯವರ್ತಿ ಭಾರತದ ಶ್ರೀಮಂತರುಗಳು ಬುಡಕಟ್ಟುಗಳನ್ನು ಕ್ರೂರವಾಗಿ ನಡೆಸಿಕೊಳ್ಳಲಾರಂಭಿಸಿದರು. ಬ್ರಿಟಿಷರು ಬುಡಕಟ್ಟುಗಳ ಮೇಲೆ ವಿಧಿಸಿದ್ದ ಎಲ್ಲಾ ಕಾನೂನು ಕ್ರಮಗಳನ್ನು ಇವರು ಮುಂದುವರಿಸಿ ನಿಯಂತ್ರಿಸುವ ಕೆಲಸವನ್ನು ಮಾಡಿದರು. ಬಿಳಿಮುಖದವರು ಬಂದಾಗ ಇವರು ನಮ್ಮವರಲ್ಲ ಎಂದುಕೊಂಡು ಅವರ ವಿರುದ್ಧ ಹೋರಾಡಿದ ಬುಡಕಟ್ಟುಗಳಿಗೆ ಕರಿಮುಖದವರು ಬಂದು ಈ ಭೂಮಿ ನಿಮ್ಮದು ಈ ಜಲ ನಿಮ್ಮದು, ಈ ಪ್ರದೇಶ ನಿಮ್ಮದು ಮತ್ತು ಈ ಮಣ್ಣು ನಿಮ್ಮದು ಎಂದು ನಂಬಿಸಿ ಸರ್ಕಾರದ ವಿರುದ್ಧ ತಿರುಗಿ ಬೀಳದಂತೆ ನೋಡಿಕೊಂಡು ಬುಡಕಟ್ಟುಗಳ ಮೇಲೆ ಮಿಲಿಟರಿ ಪಡೆಯನ್ನು ಕಳುಹಿಸಿ ಹತ್ತಿಕ್ಕುವ ಕೆಲಸ ಮಾಡಿದರು. ಇವರ ವಿರುದ್ಧ ತಿರುಗಿ ಬಿದ್ದವರನ್ನು ಭಯೋತ್ಪಾದಕರು, ನಕ್ಸಲರು, ಮಾವೋವಾದಿಗಳು ಎಂದು ಕರೆದು ಕೊಂದು ಹಾಕಿದನು.

ಇದರ ಜೊತೆಗೆ ರಾಷ್ಟ್ರ ನಿರ್ಮಾಣದ ಹೆಸರಿನಲ್ಲಿ ಸಮನಾಂತರವಾಗಿ ಬದುಕುತ್ತಿದ್ದ ಬುಡಕಟ್ಟುಗಳನ್ನು ಒಕ್ಕಲೆಬ್ಬಿಸಿ ಒಡೆಯುವ ತಂತ್ರಗಾರಿಕೆಯನ್ನು ಈ ಶ್ರೀಮಂತರು ಮಾಡಿದರು. ಬೇರೆ ಬೇರೆ ಸಂಸ್ಕೃತಿ ಭಾಷೆ, ಆಚಾರ, ವಿಚಾರಗಳಿಂದ ಬದುಕುತ್ತಿದ್ದ ಕೋಟ್ಯಾಂತರ ಬುಡಕಟ್ಟು ಗಳನ್ನು ಒಂದು ಭಾಷೆ ಮತ್ತು ಒಂದು ಸಂಸ್ಕೃತಿಯ ತೆಕ್ಕೆಗೆ ತೆಗೆದುಕೊಳ್ಳಲು ಅನೇಕ ಕಾರ್ಯತಂತ್ರ ರೂಪಿಸಿದರು. ಇದರಿಂದ ಬುಡಕಟ್ಟುಗಳು ತಮ್ಮ ಪಾರಂಪರಿಕ ಸಂಸ್ಕೃತಿ ಮತ್ತು ಭಾಷೆಯನ್ನು ಕಳೆದುಕೊಳ್ಳುವಂತಾಯಿತು. ಹಿಂದು ಮತ್ತು ಹಿಂದಿಯ ಹೆಸರಿನ ರಾಜಕಾರಣದಿಂದ ವಸಾಹತುಶಾಹಿ ಬ್ರಿಟಿಷರ ಮತಾಂತರ ನೀತಿಯನ್ನು ಅನುಸರಿಸಿ ಎಲ್ಲರನ್ನು ಒಂದೇ ಧರ್ಮ ಭಾಷೆಗೆ ಸೇರಿಕೊಳ್ಳುವಂತೆ ಮಾಡುವ ಷಡ್ಯಂತ್ರವನ್ನು ರಾಷ್ಟ್ರ ನಿರ್ಮಾಣ ಕಾರ್ಯ ಎಂದು ನಂಬಿಸಿದರು. ಇದರಿಂದ ಬುಡಕಟ್ಟು ದೈವಗಳು ಶೇ. ೮೦ರಷ್ಟು ಜನರ ದೈವವಾದ ರಾಮನ ಎದುರು ಬುಡಗಳ ಮಾರಿಮಸಣಿಯರು ಬಿಳಿಗಿರರಂಗ, ಕುಕ್ಕೆ ಸುಬ್ರಮಣ್ಯ, ಅಯ್ಯಪ್ಪ, ಬದರಿ, ಕೇದರಿನಾಥ, ಅಮರನಾಥ ಮುಂತಾದ ದೈವಗಳು ವೈದಿಕೀಕರಣಗೊಂಡವು.

೧೯೫೧ರ ಜನಗಣತಿಯಲ್ಲಿ ೧೦೦ಕ್ಕೂ ೮೦ ಆದಿವಾಸಿ ಧರ್ಮ, ೧೯೮೧ರ ಜನಗಣತಿಯೊತ್ತಿಗೆ ೧೦೦ರಲ್ಲಿ ೮೦ರಷ್ಟು ಹಿಂದೂ ಧರ್ಮ ಆಗಿತ್ತು. ಹಾಗೆಯೇ ಮುಂದುವರಿದು ೧೯೯೧ರಲ್ಲಿ ಶೇ. ೭೦ ಹಿಂದೂ ಧರ್ಮವಾಗಿ ನಿರಂತರವಾಗಿ ಇಳಿಮುಖವಾಗುತ್ತ ಬಂದಿತು.[೪೦] ಧರ್ಮವು ಬದಲಾಗುತ್ತ ಸಾಗಿತು. ಇದರಿಂದ ಬುಡಕಟ್ಟುಗಳು ತಮ್ಮ ಹೆಸರು ಮೂಲ ಆಚರಣೆಯನ್ನು ಬಿಟ್ಟು ಈ ಹಿಂದೆ ಧರ್ಮ ಚೌಕಟ್ಟಿಗೆ ಬರುವ ಕೆಲಸ ಮಾಡಿದರು. ಹೀಗೆ ಸ್ವಾತಂತ್ರ್ಯ ನಂತರ ನಮ್ಮವರಿಂದಲೇ ಅನೇಕ ಕಷ್ಟನಷ್ಟಗಳಿಗೆ ಒಳಗಾಗುವಂತಾಯಿತು.

ಇದೇ ನಿಟ್ಟಿನಲ್ಲಿ ಇರುಳಿಗರು ಸ್ವಾತಂತ್ರ್ಯ ನಂತರದಲ್ಲಿ ಅಟಕ್ಕುಂಟು ಲೆಕ್ಕಕ್ಕಿಲ್ಲದಂತಾದರು. ೧೯೫೨ರಲ್ಲಿ ಮೊದಲ ಸಾರ್ವತ್ರಿಕ ಚುನಾವಣೆಯ ಗೋಜಿಗೆ ಹೋಗಲಿಲ್ಲ. ಸಂಪೂರ್ಣವಾಗಿ ೧೯೮೨–೮೭ರ ತನಕ ಕಟ್ಟಹಾಕುವ ಸೋಜಿಗೆ ಹೋಗಲಿಲ್ಲ. ಸಂಪೂರ್ಣವಾಗಿ ಅರಣ್ಯ ವಾಸಿಗಳಾದ ಇರುಳಿಗರಿಗೆ ಸ್ವಾತಂತ್ರ್ಯ ಬಂದದ್ದು ಹೋದದ್ದು ಅಥವಾ ಅಧಿಕಾರದ ಯಾವ ಪರಿಜ್ಞಾನವು ಇರಲೇ ಇಲ್ಲ. ಏಕೆಂದರೆ ಇವರು ಗ್ರಾಮ ಮತ್ತು ನಗರಗಳಿಂದ ದೂರ ಉಳಿದು ತಮ್ಮದೇ ಧರ್ಮ, ನಂಬಿಕೆ, ಆಚರಣೆ, ನ್ಯಾಯ ತೀರ್ಮಾನಗಳಲ್ಲಿ ಬದುಕುತ್ತಿದ್ದರು. ಬ್ರಿಟಿಶರ ಕಾಲದಲ್ಲಿ ಅರಣ್ಯ ನೀತಿಗಳು ಇರುಳಿಗರು ಮೇಲೆ ಅಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಲಿಲ್ಲ. ಆದರೆ ಸ್ವಾತಂತ್ರ್ಯನಂತರದಲ್ಲಿ ಅರಣ್ಯ ನೀತಿಯ ಪ್ರಭಾವ ಹೆಚ್ಚಾಗಿ ಇರುಳಿಗರನ್ನು ಅರಣ್ಯ ಸಂರಕ್ಷಣೆಯ ಹೆಸರಿನಲ್ಲಿ ಒಕ್ಕಲೆಬ್ಬಿಸಲಾಗಿದೆ. ಅರಣ್ಯದಿಂದ ಹೊರಗಡೆ ಬಂದ ಇರುಳಿಗರು ಗ್ರಾಮ ಮತ್ತು ನಗರಗಳ ಸಂಪರ್ಕ ಬೆಳೆದಂತೆ ಇವರಿಗೂ ಸರ್ಕಾರಿ ದಾಖಲೆಗಳ ಅರಿವಾಯಿತು. ತಾವು ಕಾಡನ್ನು ಕಡಿದು ಅಷ್ಟೇ ಹಸನು ಮಾಡಿಕೊಂಡಿದ್ದ ಜಾಗಕ್ಕೆ ಪಹಣೆ ಪಟ್ಟಿ ಮಾಡಿಕೊಳ್ಳಬೇಕೆಂಬ ಅರಿವು ಬಂದಿತು. ನಮ್ಮ ಅಪ್ಪನ ಕಾಲದಿಂದ ಮಾತ್ರ ಈ ಪಹಣೆ ಪಟ್ಟಿ ಬಂದಿದೆ. ನಮ್ಮ ತಾತನಿಗೆ ಈ ಯಾವ ಪುರಾವೆ ಇರಲಿಲ್ಲ ಎಂದು ರಾಮಸ್ವಾಮಿ ಎಂಬ ಇರುಳಿಗ ವಕ್ತೃ ಹೇಳುತ್ತಾನೆ. ನಾನು ಒಂದು ಬರಗಾಲವನ್ನು ಕಂಡಿದ್ದೇನೆ. ನಮ್ಮ ಅಪ್ಪ ಎರಡು ಬರಗಾಲವನ್ನು ಕಂಡಿದ್ದ ಎಂದು ಹೇಳುತ್ತಿದ್ದರು. ಈ ಬರಗಾಲದ ಸಂದರ್ಭದಲ್ಲಿ ನಮಗೆ ಯಾವ ಸರ್ಕಾರವಾಗಲಿ ಸಹಾಯ ಮಾಡಲಿಲ್ಲ. ನಾವು ಕಾಡುಮೇಡು ಅಲೆದು ಬಿದರಕ್ಕಿ, ಗೆಣಸು, ಸೊಪ್ಪು ಸದೆ ತಿಂದು ಜೀವ ಉಳಿಸಿಕೊಂಡಿರುವುದಾಗಿ ಹೇಳುತ್ತಾರೆ. ನಮ್ಮ ಅಪ್ಪನ ಕಾಲಕ್ಕೆ ಪಹಣಿ ಪಟ್ಟಿ ಬೇಕೆಂಬ ಜ್ಞಾನ ಬಂದು ಅದನ್ನು ಪಡೆಯಲು ಹೋದಾಗ ಅರಣ್ಯ ಇಲಾಖೆಯವರು ನಾವು ಇರುವ ಜಾಗದಿಂದಲೆ ಒಕ್ಕಲೆಬ್ಬಿಸುವ ಕೆಲಸ ಮಾಡಿದರು. ನಾವು ಹಾಕಿಕೊಂಡಿದ್ದ ಗುಡಿಸಲುಗಳಿಗೆ ಬೆಂಕಿ ಹಾಕಿದ್ದರ ಬಗ್ಗೆ ಹೇಳುತ್ತಾರೆ.

ಇರುಳಿಗರಿಗೆ ಸ್ವಾತಂತ್ರ್ಯ ಭಾರತದ ಆಡಳಿತ ವ್ಯವಸ್ಥೆ ಅಥವಾ ಬ್ರಿಟಿಷರ ಆಳ್ವಿಕೆಯಲ್ಲಿ ಯಾವುದೇ ವ್ಯತ್ಯಾಸ ಕಾಣುತ್ತಿಲ್ಲ. ಎರಡೂ ಆಡಳಿತದಲ್ಲಿ ಒಂದೇ ಸಾಮಾಜಿಕ ವ್ಯವಸ್ಥೆಯನ್ನು ಅನುಭವಿಸುತ್ತಿದ್ದಾರೆ. ಯಾವುದೇ ವಿಶೇಷತೆ ಇಲ್ಲ ಎಂಬುದು ಇವರ ಮಾತುಗಳಿಂದ ಗೊತ್ತಾಗುತ್ತದೆ.

೧೯೭೫ರಲ್ಲಿ ಮೊದಲ ಬಾರಿಗೆ ಎಲ್.ಜಿ. ಹಾವನೂರು ಆಯೋಗವು ಇರುಳಿಗರನ್ನು ಹಿಂದುಳಿದ ಕೋಮು ಪಟ್ಟಿಗೆ ಸೇರಿಸಿತು. ಅದು ಈಡಿಗರ ಸಮುದಾಯವನ್ನು ಗುರುತಿಸುವಾಗ ಇಲ್ಲಿ ಎಂದು ಪ್ರಸ್ತಾಪಿಸಿದ್ದು ಬಿಟ್ಟರೆ ಇರುಳಿಗರನ್ನು ಕುರಿತು ಹಿಂದಿನ ಯಾವ ದಾಖಲೆಗಳು ಸಿಗದೇ ಇರುವುದು ಕಾಣಬಹುದು. ಅದು ಈಡಿಗರನ್ನು ಗುರುತಿಸುವಾಗ ಆ ಪದನಾಮಕ್ಕೆ ಸಂವಾದಿಯಾಗಿರುವ ರೂಟ್ಟಿಕದಲ್ಲಿನ ಇತರೆ ಪದನಾಮಗಳು ಹುಡುಕುವಾಗ ಇಲ್ಲಿನ ಎಂದು ಸೇರಿಸಲಾಗಿದೆ ಎನ್ನುವುದು ಅರ್ಥವಾಗುತ್ತದೆ. ಆದರೆ ವಸಾಹತುಶಾಹಿ ಕಾಲಘಟ್ಟದಲ್ಲಿ ಎಲ್.ಕೆ. ಅನಂತಕೃಷ್ಣ ಅಯ್ಯರ್ ತಮ್ಮ ಕೃತಿಯಾದ ಮೈಸೂರು ಟ್ರೈಬ್ ಅಂಡ್ ಕಾಸ್ಟ್ ಕೃತಿಯಲ್ಲಿ ಮೈಸೂರು ರಾಜ್ಯದ ಬುಡಕಟ್ಟುಗಳಲ್ಲಿ ಪ್ರಮುಖವಾಗಿ ಇರುಳಿಗರನ್ನು ಗುರುತಿಸಿದ್ದಾರೆ. ಅದನ್ನು ಹೊರತುಪಡಿಸಿದರೆ ೧೯೭೫ರ ತನಕ ಇರುಳಿಗರ ಬಗ್ಗೆ ಯಾವುದೇ ದಾಖಲೆಗಳು ಸಿಗದೆ ಇರುವುದನ್ನು ಕಾಣಬಹುದು.

ಸ್ವಾತಂತ್ರ್ಯಪೂರ್ವದಲ್ಲಿ ಇರುಳಿಗರಿಗೆ ಕಾಡಿನೊಂದಿಗೆ ಅಲ್ಪಸ್ವಲ್ಪ ನಂಟು. ಸ್ವಾತಂತ್ರ್ಯ ನಂತರದಲ್ಲಿ ಈ ಸಂಬಂಧ ಸಂಪೂರ್ಣವಾಗಿ ಕಡಿತಗೊಂಡಿತು. ಇದರಿಂದ ಇರುಳಿಗರು ತಮ್ಮ ಪಾರಂಪರಿಕ ಉದ್ಯೋಗಗಳನ್ನು ಬಿಟ್ಟು ಇತರೆ ವೃತ್ತಿಗಳ ಕಡೆ ಮುಖ ಮಾಡುವಂತಾಯಿತು.

೩.೪. ಪ್ರಸ್ತುತ ಸಾಂಸ್ಕೃತಿಕ ಕಾಲಘಟ್ಟದಲ್ಲಿ

ಭಾರತ ದೇಶವು ೧೯೪೭ರಲ್ಲಿ ಸ್ವಾತಂತ್ರ್ಯ ಪಡೆದು ೧೯೫೦ರಲ್ಲಿ ಪ್ರಪಂಚವೇ ಮೆಚ್ಚುವಂಥ ಬೃಹತ್ ಸಂವಿಧಾನವನ್ನು ರಚಿಸಿಕೊಂಡಿತು. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಪ್ರಪಂಚದ ಎಲ್ಲಾ ದೇಶಗಳ ಸಂವಿಧಾನವನ್ನು ಪರಾಮರ್ಶಿಸುವುದರ ಜೊತೆಗೆ ಪ್ರಪಂಚದ ಎಲ್ಲಾ ದೇಶಗಳ ಸಾಮಾಜಿಕ ಜೀವನವನ್ನು ಅರ್ಥೈಸಿಕೊಂಡು, ಜಾತಿಯತೆ ಮತ್ತು ಸಮಾನತೆಯ ಸೋಗಿನಲ್ಲಿ ನರಳುತ್ತಿದ್ದ ಭಾರತಕ್ಕೆ ಸಮಾನತೆ ಮತ್ತು ಭ್ರಾತೃತ್ವ ಪ್ರತಿಪಾದಿಸುವ ಸಂವಿಧಾನವನ್ನು ರಚಿಸಿಕೊಟ್ಟರು. ಈ ಸಂವಿಧಾನವು ಭಾರತದಲ್ಲಿದ್ದ ಅಜ್ಞಾನ, ಅಸ್ಪೃಶ್ಯತೆ, ಅಮಾನವೀಯತೆ, ದೌರ್ಜನ್ಯ, ದಬ್ಬಾಳಿಕೆ ಮತ್ತು ಮೂಢನಂಬಿಕೆಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಕಾನೂನುಗಳ ಮೂಲಕ ಕಾರ್ಯತಂತ್ರ ರೂಪಿಸಿತು. ತಲತಲಾಂತರದಲ್ಲಿ ಅಜ್ಞಾನ, ಅಸ್ಪೃಶ್ಯತೆ ಮತ್ತು ಜಾತಿಯತೆ ಯನ್ನು ತೊಲಗಿಸಲು ಬುದ್ಧ ತನ್ನ ಜೀವನವನ್ನು ಪಣವಾಗಿಟ್ಟು 'ಸಂದೇಶ'ಗಳ ಮೂಲಕ ಮನ ಪರಿವರ್ತಿಸಲು ಪ್ರಯತ್ನಿಸಿದನು. ಅದೇ ರೀತಿಯಲ್ಲಿ ಬಸವಣ್ಣ ತನ್ನ ರಾಜತಾಂತ್ರಿಕತೆಯ ಸಹಾಯದಿಂದ ಅಸಮಾನತೆಯ ಸಮಾಜವನ್ನು ಪರಿವರ್ತಿಸಲು ಪ್ರಯತ್ನಿಸಿ ಉಳ್ಳ ಮೇಲ್ವರ್ಗ ದವರಿಗೆ ಬಲಿಯಾಗಿ ಹೋದನು. ಈ ಎಲ್ಲಾ ಚಾರಿತ್ರಿಕ ಸಂವೇದನಗಳನ್ನು ಹೊಂದಿದ್ದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಭಾರತದ ಅಸ್ಪೃಶ್ಯತೆ, ಅಸಮಾನತೆ ಮತ್ತು ಜಾತೀಯತೆಗೆ ಬುದ್ಧನ ಸಂದೇಶಗಳ ಮನಪರಿವರ್ತನೆಯ ಮೂಲಕವಾಗಲೀ ಅಥವಾ ಬಸವಣ್ಣನ ಸಂಧಾನಗಳ

ಮೂಲಕವಾಗಲೀ ಸಾಧ್ಯವಾಗದು ಎಂಬುದನ್ನು ಭಾರತದ ಚರಿತ್ರೆ ಬಾಬಾ ಸಾಹೇಬರಿಗೆ ಕಲಿಸಿತು. ಅದಕ್ಕಾಗಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಕಾನೂನುಗಳ ಮೂಲಕ ಇವುಗಳ ನಾಶಕ್ಕೆ ಪಣತೊಟ್ಟು ನಿಂತರು. ವಿದ್ಯೆ ಮತ್ತು ಅಧಿಕಾರವೆಂಬುದು ಕೆಲವೇ ಜನವರ್ಗಕ್ಕೆ ಸೀಮಿತವಾದುದ್ದು. ಈ ಅಲ್ಪಸಂಖ್ಯಾತ ವರ್ಗ ಆಳುವುದಕ್ಕೆ ಯೋಗ್ಯರು, ಉಳಿದ ಬಹುಸಂಖ್ಯಾತರು ಆಳಿಸಿಕೊಳ್ಳುವುದಕ್ಕೆ ಯೋಗ್ಯರು ಎನ್ನುವ ಮಾನಸಿಕ ಧೋರಣೆಯನ್ನು ಹೊಡೆದು ಹಾಕಿ, ಅಧಿಕಾರ ವಿಕೇಂದ್ರೀಕರಣ ಮಾಡುವ ಸಲುವಾಗಿ ಪ್ರತಿಯೊಬ್ಬ ವ್ಯಕ್ತಿಗೂ ಆಳುವ ಹಕ್ಕಿದೆ ಎಂಬುವುದನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸಂವಿಧಾನದ ಮೂಲಕ ಜಾರಿಗೆ ತಂದರು. ಈ ದೇಶ ಪ್ರಜೆಗಳಿಂದ ಪ್ರಜೆಗಳಿಗಾಗಿ, ಪ್ರಜೆಗಳೇ ನಡೆಸುವ ಪ್ರಜಾಪ್ರಭುತ್ವದ ರಾಷ್ಟ್ರವಾಗಬೇಕು. ಇಲ್ಲಿ ನಿರ್ಗತಿಕನಾಗಲಿ, ಆಗರ್ಭ ಶ್ರೀಮಂತನಾಗಲೀ ಒಂದೇ ಎನ್ನುವಂತಾಗಿ ವಾದಿಸಿದರು. ಸಮಾಜದ ಎಲ್ಲಾ ವರ್ಗಗಳನ್ನು ಒಳಗೊಳ್ಳುವಂತಾಗ ಬೇಕೆಂದು ಸಾರ್ವತ್ರಿಕ ಚುನಾವಣಾ ವ್ಯವಸ್ಥೆಯನ್ನು ಸಂವಿಧಾನದ ಮೂಲಕ ಜಾರಿಗೊಳಿಸಿದರು. ಇದರಿಂದ ಸಮಾಜದ ಕಟ್ಟಕಡೆಯ ವ್ಯಕ್ತಿಯು ಅಧಿಕಾರದ ಚುಕ್ಕಾಣಿ ಹಿಡಿಯುವಂತಹ ಅವಕಾಶ ಸಿಕ್ಕಿತು. ಕೇವಲ ಹಣ, ಆಸ್ತಿ ಮತ್ತು ಜಾತಿಯ ಮೂಲಕ ಅಧಿಕಾರ ಪಡೆಯುತ್ತಿದ್ದಂತಹ ವ್ಯವಸ್ಥೆಯ ಪರ್ಯಾಯವಾಗಿ ಇವುಗಳಾವುವು ಇಲ್ಲದೆಯೂ ಅಧಿಕಾರ ಪಡೆದುಕೊಳ್ಳುವುದಕ್ಕೆ ಚುನಾವಣೆ ಎಂಬುದನ್ನು ಜಾರಿಗೆ ತಂದು ಇದಕ್ಕೆ ಎಲ್ಲರೂ ಅರ್ಹರು ಎಂದು ಹೇಳುವ ನಿಟ್ಟಿನಲ್ಲಿ ಓಟು ಹಾಕುವ ಪರಂಪರೆಯನ್ನು ಪ್ರಾರಂಭಿಸಿದರು. ಅಧಿಕಾರ ಪಡೆಯಲಿಚ್ಚಿಸುವ ಯಾರೇ ಆದರೂ ಚುನಾವಣೆಯಲ್ಲಿ ಆಯ್ಕೆಯಾಗಬೇಕೆಂದು ನಿರ್ಧರಿಸಲಾಯಿತು. ಇದಕ್ಕೆ ಸಮಸ್ತ ಪ್ರಜೆಗಳೆಲ್ಲ ಓಟು ಹಾಕುವಂತಹ ವ್ಯವಸ್ಥೆ ಮಾಡಲಾಯಿತು. ಈ ಓಟಿನಲ್ಲೂ ಯಾವುದೇ ಜಾತಿ, ಧರ್ಮ, ಹಣ, ಆಸ್ತಿ, ಪಾಸ್ತಿ ಯಾವ ತಾರತಮ್ಯವು ಇಲ್ಲದೇ ಕೋಟಿ ಕೋಟಿ ಇಟ್ಟವನಿಗೂ ಒಂದೇ ಓಟು ಬಿಡಿಗಾಸು ಇಲ್ಲದವನಿಗೂ ಒಂದೇ ಓಟು ಮಾಡುವ ಮೂಲಕ ಪ್ರಜಾಪ್ರಭುತ್ವದ ಆಶಯವನ್ನು ಸಾಕಾರಗೊಳಿಸಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳನ್ನು ಕಲ್ಪಿಸಬೇಕೆಂದು ಹೋರಾಡಿದರು. ಸಂವಿಧಾನದ ಮೂಲಕ ಪಾರಂಪರಿಕವಾಗಿ ಶೋಷಣೆಗೆ ಒಳಗಾಗಿ ಸಮಾಜದಿಂದ ದೂರ ಉಳಿದಿದ್ದಂತಹ ಸಮುದಾಯಗಳಿಗೆ ಎಲ್ಲರೊಡನೆ ಬದುಕುವಂತೆ ಮಾಡಲು ಕೆಲವು ಪೂರಕವಾದ ಅವಕಾಶಗಳನ್ನು ಮಾಡಿಕೊಟ್ಟರು. ಅವರ ಕನಸಿನಂತೆ ಈ ದೇಶದ ಕಟ್ಟಕಡೆಯ ವ್ಯಕ್ತಿ ಈ ದೇಶ ಆಳುವಂತಾಗಬೇಕು ಎನ್ನುವ ಆಶಯವನ್ನು ಸಾಕಾರಗೊಳಿಸಲು ಚುನಾವಣೆಗೆ ವಿಶೇಷ ಪ್ರಾತಿನಿಧ್ಯತೆ ನೀಡಲಾಯಿತು. ಇದರಿಂದ ತಲತಲಾಂತರದಿಂದ ಆಳ್ವಿಕೆಗೆ ಒಳಗಾಗಿದ್ದ ವರ್ಗ ಆಳ್ವಿಕೆ ನಡೆಸುವಂತಾಯಿತು. ಇದೊಂದು ಭಾರತದ ಕ್ರಾಂತಿ ಎಂದರೆ ತಪ್ಪಾಗಲಾರದು.

ಆದರೆ ಬಾಬಾ ಸಾಹೇಬ್‌ರು ಹಾಕಿಕೊಟ್ಟ ಏಣಿಯಲ್ಲಿ ಹತ್ತಿ ಬಂದ ನಂತರ ಪೀಳಿಗೆ ಅವರ ಏಣಿಯನ್ನು ಒದಿಯುವಂತಹ ಕೆಲಸವನ್ನು ಮಾಡಿದರು. ಜೊತೆಗೆ ಬಾಬಾ ಸಾಹೇಬರು ಯಾರ ಪರವಾಗಿ ಸಂವಿಧಾನದಲ್ಲಿ ಪ್ರಾತಿನಿಧ್ಯ ನೀಡಿದರೋ ಅವರೇ ಬಾಬಾ ಸಾಹೇಬರನ್ನು ದೂಷಿಸುವಂತಾದರೂ, ತಲತಲಾಂತರದ ತಮ್ಮ ಪಾರಂಪರಿಕ ಅಧಿಕಾರವನ್ನು ಕಿತ್ತುಕೊಂಡು ಬಾಬಾಸಾಹೇಬರು ಮತ್ತು ಸಂವಿಧಾನವನ್ನು ಮೂಲೆಗುಂಪು ಮಾಡುವ ಕ್ರಿಯೆಯಲ್ಲಿ ತೊಡಗಿದರು. ಅವರಂತೆ ಬಾಬಾ ಸಾಹೇಬರು ಬರೆದ ಸಂವಿಧಾನವನ್ನು ಯಥಾವತ್ತಾಗಿ ಜಾರಿ ಮಾಡದೇ ತಮ್ಮ ರಾಜಕೀಯ ಹಿತಾಸಕ್ತಿಗೆ ತಕ್ಕಂತೆ ಬಳಸಿಕೊಳ್ಳಲಾರಂಭಿಸಿದರು. ಆದ್ದರಿಂದ ಬಾಬಾ ಸಾಹೇಬರು 'ಒಂದು ಉತ್ತಮ ರೀತಿಯ ಸಂವಿಧಾನ ಒಬ್ಬ ಉತ್ತಮ ವ್ಯಕ್ತಿ ಕೈ ಸೇರಿದರೆ ಉತ್ತಮವಾಗಿ ಪ್ರತಿಪಾದನೆಗೊಳ್ಳುತ್ತದೆ. ಆದರೆ ಒಬ್ಬ ಭ್ರಷ್ಟನ ಕೈಗೆ ಎಷ್ಟೇ ಉತ್ತಮವಾದ ಸಂವಿಧಾನ ಕೊಟ್ಟರೂ ಅದು ಉಪಯುಕ್ತವಾಗುವುದಿಲ್ಲ ಎನ್ನುತ್ತಾರೆ. ಇದೇ ದಾರಿಯಲ್ಲಿ ಪ್ರಸ್ತುತ ಪ್ರಜಾಪ್ರಭುತ್ವ ವ್ಯವಸ್ಥೆ ಸಾಗುತ್ತಿರುವುದು ಕಂಡುಬರುತ್ತದೆ. ಭಾರತದ ಸಂವಿಧಾನವನ್ನು ರಾಜಕೀಯ ಪಕ್ಷಗಳು ಅವರ ವಿವೇಚನೆಗೆ ತಕ್ಕಂತೆ ಬಳಸಿಕೊಳ್ಳುತ್ತಿದ್ದಾರೆ. ಸಂವಿಧಾನದ ಆಶಯಗಳನ್ನು ಮತ್ತು ಕಡ್ಡಾಯವಾಗಿ ಮಾಡಲೇಬೇಕಾದ ಸೌಲಭ್ಯಗಳನ್ನು ಪಕ್ಷದ ಅಜಂಡಾವಾಗಿಸಿ, ಚುನಾವಣೆಯ ಪ್ರಣಾಳಿಕೆಗೆ ಸೇರಿಸಿಕೊಳ್ಳುತ್ತಿದ್ದಾರೆ. ಆದರೆ ಅಧಿಕಾರಕ್ಕೆ ಬಂದ ನಂತರ ಪಕ್ಷದ ಪ್ರಣಾಳಿಕೆಯಾಗಿ ಮಾಡಿಕೊಂಡಿರುವುದನ್ನು ಮತ್ತೆ ಸಂವಿಧಾನಕ್ಕೆ ಸೇರಿಸಿ ಬಿಡುತ್ತಿದ್ದಾರೆ. ಇಷ್ಟೇ ಅಲ್ಲದೆ ಪ್ರಸ್ತುತ ಸಂದರ್ಭದಲ್ಲಿ ಸಂವಿಧಾನವನ್ನು ಬದಲಿಸುವ ಮತ್ತು ಪ್ರಶ್ನೆ ಮಾಡುವ ಅತಿರೇಕಗಳು ಕಂಡುಬರುತ್ತಿವೆ. ಅದು ಸಾಧ್ಯವಾಗದೇ ಇದ್ದಾಗ ಅಸಂವಿಧಾನಕ್ಕೆ ಹಲವಾರು ತಿದ್ದುಪಡಿಗಳನ್ನು ತಂದು ವಿರೂಪಗೊಳಿಸುತ್ತಿದ್ದಾರೆ. ಇದು ಕೇವಲ ಸಂವಿಧಾನಕ್ಕೆ ಆಗುತ್ತಿರುವ ತಿದ್ದುಪಡಿಗಳಲ್ಲೂ ಬಾಬಾ ಸಾಹೇಬರ ಆಶಯದಲ್ಲಿದ್ದ ಸಮಾನತೆ, ಸೋದರತೆ ಮತ್ತು ಸರ್ವರಿಗೂ ಸಮಪಾಲು, ಸರ್ವರಿಗೂ ಸಹಬಾಳುಗಳ ವಿರೂಪವೇ ಆಗಿದೆ.

ಪ್ರಾರಂಭದ ಕಾಲಘಟ್ಟದ ರಾಜಕೀಯಕ್ಕೂ ಪ್ರಸ್ತುತ ಸಂದರ್ಭದ ರಾಜಕೀಯಕ್ಕೂ ಅಜಗಜಾಂತರ ವ್ಯತ್ಯಾಸಗಳಿವೆ. ಹಿಂದೆ ದಕ್ಷತೆ ಪ್ರಾಮಾಣಿಕತೆ ಸಮಾಜಮುಖಿ ಚಿಂತನೆ ಮತ್ತು ಕಾರ್ಯಕ್ರಮಗಳು ಚುನಾವಣೆ ಗೆಲ್ಲಲು ಬೇಕಾದ ಮಾನದಂಡಗಳಾಗಿದ್ದವು. ಆದರೆ ಇಂದು ಹಣ, ಜಾತಿ ಪ್ರಮುಖವಾಗಿವೆ. ಇದರಿಂದ ಪ್ರತಿಯೊಂದು ಪಕ್ಷವು ಹಣ ಮತ್ತು ಜಾತಿಯ ಲೆಕ್ಕಚಾರದಲ್ಲೇ ತೊಡಗಿವೆ. ಇಂತಹ ಸಂದರ್ಭದಲ್ಲಿ ಈ ಯಾವ ಮಾನದಂಡಗಳು ಇಲ್ಲದ ಇರುಳಿಗರ ಪರಿಸ್ಥಿತಿಯನ್ನು ಊಹಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಇಡೀ ಕರ್ನಾಟಕದಲ್ಲಿ ಇರುಳಿಗ ಸಮುದಾಯದ ಜನಸಂಖ್ಯಾ ಹದಿನೈದು ಸಾವಿರದಿಂದ ಹದಿನೆಂಟು ಸಾವಿರ ಇದೆ ಹಾಗೂ ಇವರ ವಾಸದ ಸ್ಥಳಗಳು ಅಲ್ಲೊಂದು ಇಲ್ಲೊಂದರಂತಿವೆ. ಇದು ಸಮುದಾಯದವರ ಲೆಕ್ಕಾಚಾರವಾಗಿದೆ. ಸರ್ಕಾರ ತನ್ನ ವರದಿಯಲ್ಲಿ ಇರುಳಿಗರ ಜನಸಂಖ್ಯೆಯನ್ನು ಈ ಕೆಳಕಂಡಂತೆ ವಿವರಿಸಿದೆ. ೨೦೦೧ರ ಜನಗಣತಿ ವರದಿ, ಕರ್ನಾಟಕ ಸರ್ಕಾರ, ೨೦೦೧ರಂತೆ

ಕ್ರಸಂ.	ಜಿಲ್ಲೆ	ಇರುಳಿಗರ ಜನಸಂಖ್ಯೆ		
		ಗಂಡು	ಹೆಣ್ಣು	ಒಟ್ಟು
೧.	ಬೆಂಗಳೂರು ಗ್ರಾಮಾಂತರ	೨೯೩೯	೨೭೦೬	೫೬೪೫
೨.	ಬೆಂಗಳೂರು ನಗರ	೭೩೮	೬೫೧	೧೩೮೯
೩.	ಬಾಗಲಕೋಟೆ	೧೫	೧೫	೩೦
೪.	ಬಳ್ಳಾರಿ	೫	೮	೧೩
೫.	ಬೆಳಗಾವಿ	೪೪	೪೦	೮೪
೬.	ಬೀದರ್	೯೦	೮೫	೧೭೫
೭.	ವಿಜಯಪುರ	೦೩	೮	೧೧
೮.	ಚಿಕ್ಕಮಗಳೂರು	೦೨	೦೨	೪೪
೯.	ದಾವಣಗೆರೆ	೦೧	೦೨	೦೩
೧೦.	ಧಾರವಾಡ	೨೯	೨೭	೫೬
೧೧.	ಗದಗ	೧೯	೧೩	೩೨
೧೨.	ಕಲಬುರ್ಗಿ	೧೮೯	೧೮೭	೩೭೬
೧೩.	ಹಾಸನ	೦೫	೦೯	೧೪
೧೪.	ಹಾವೇರಿ	೪೦	೪೧	೮೧
೧೫.	ಕೊಡಗು	೦೧	೦೨	೦೩
೧೬.	ಕೋಲಾರ	೪೩	೪೩	೮೬
೧೭.	ಕೊಪ್ಪಳ	೬೬	೭೮	೧೪೪
೧೮.	ಮಂಡ್ಯ	೦೭	೦೭	೧೪
೧೯.	ಮೈಸೂರು	೦೪	೦೧	೦೫
೨೦.	ರಾಯಚೂರು	೩೪	೩೨	೮೬
೨೧.	ಶಿವಮೊಗ್ಗ	೧೦	೦೨	೧೨
೨೨.	ತುಮಕೂರು	೧೦೩	೧೦೩	೨೦೬
೨೩.	ಉಡುಪಿ	೦೩	೦೩	೦೬
೨೪.	ಉತ್ತರ ಕನ್ನಡ	೦೨	೦೮	೧೦
	ಒಟ್ಟು	೪೩೯೨	೪೦೯೪	೮೪೮೬

ಕೃಪೆ: ಜನಗಣತಿ ವರದಿ ೨೦೦೧, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೧

ಎಂದು ಜನಗಣತಿ ವರದಿಯಲ್ಲಿ ದಾಖಲೆಗಳು ಸಿಗುತ್ತವೆ. ಇದಕ್ಕೆ ಸಂಬಂಧಿಸಿದಂತೆ ಇರುಳಿಗ ವಕ್ತೃಗಳು ಹೇಳುವ ಮಾತೇ ಬೇರೆ "ನಮ್ಮ ಜಾತಿ ಜನ ಮಾಗಡಿ ದೇಶ(ರಾಮನಗರ ಜಿಲ್ಲೆ) ಬೆಂಗಳೂರು ದೇಶ(ಬೆಂಗಳೂರು ಗ್ರಾಮಾಂತರ ಮತ್ತು ನಗರ) ಮೈಸೂರು, ಮಂಡ್ಯ, ಕೊಳ್ಳೇಗಾಲ(ಚಾಮರಾಜನಗರ ಜಿಲ್ಲೆ) ಕಡೆ ನೆಲೆಸಿದ್ದಾರೆ. ಅವರೆಲ್ಲ ಮೂಲತಃ ಇಲ್ಲಿಂದ ಹೋದವರೇ(ಮಾಗಡಿ ಸೀಮೆ). ಬರಗಾಲದ ಟೈಮ್‌ನಲ್ಲಿ ಕೆಲ್ಸಗಿಲ್ಸ ಹುಡುಕಿಕೊಂಡು ಹೋಗಿ ನೆಲೆ ನಿಂತರೋ ಅಲ್ಲಿ. ಕೊಡಗು ಚಿಕ್ಕಮಂಗಳೂರು ಕಡೆಗೂ ಹೋಗಿರಬೇಕು. ಆದ್ರೆ ಉತ್ತರ ದೇಶಕ್ಕೆ ನಮ್ ಜನ ಹೋಗಲ್ಲಾ, ಅವ್ರು ನಮ್ ಜನ ಅಲ್ಲ ಬಿಡಿ. ಯಾಕಂದ್ರೆ ಇಡೀ ದೇಶದಲ್ಲಿ ನಮ್ಮನ(ಇರುಳಿಗರು) ಎಲ್ಲೆ ಇದ್ರು ಯತ್ತಾ ಕಡೆಯಿಂದಾದ್ರು ಸಂಬಂಧನೇ ಇರ್‍ತಾವೆ. ಹೀಗೆ ನೋಡಿ ತಮಿಳ್‌ನಾಡು, ಕೇರಳ, ಆಂಧ್ರಪ್ರದೇಶದಲ್ಲಿ ನಮ್ ಜನ ಆವ್ರೆ, ಅವರಿಗೂ ನಮ್ಗೂ ಕೊಡೋ, ಕೊಳ್ಳೊ ಸಂಬಂಧ ಇನ್ನೂ ನಡಿತ್ತಾನೆ ಇದೆ. ಆದ್ರೆ ಉತ್ತರ ದೇಶ್‌ದಲ್ಲಿ ಬರೋರು ನಮ್ಮವರಲ್ಲ ಬಿಡಿ" ಎನ್ನುತ್ತಾರೆ.[೪೧] ಇರುಳಿಗರ ವಕ್ತೃಗಳು ಹೇಳುವಂತೆ ಇರುಳಿಗರ ಜನಸಂಖ್ಯೆ ೧೫ ರಿಂದ ೧೮ ಸಾವಿರ. ಆದರೆ ೨೦೦೧ರ ಜನಗಣತಿಯಲ್ಲಿ ಒಟ್ಟು ೮೪೮೬ ಜನ ಎಂದು ದಾಖಲಿಸಿಕೊಂಡಿದೆ ಎಂದಾದರೆ ಇನ್ನು ೯೦ರಷ್ಟು ಜನರು ಸರ್ಕಾರಿ ದಾಖಲೆಗಳೇ ಹೊಂದದೆ ಇರುವುದು ಗೊತ್ತಾಗುತ್ತದೆ. ಅಥವಾ ಇವರ‍್ಯಾರು ತಮ್ಮ ಮೂಲ ನೆಲೆಯಲ್ಲಿರದೇ ಎಸ್ಟೇಟ್‌ಗಳಲ್ಲಿ, ಇಟ್ಟಿಗೆ ಫ್ಯಾಕ್ಟರಿಗಳಲ್ಲೋ ಅಥವಾ ಇನ್ಯಾರ ಮನೆಯಲ್ಲಿ ಜೀತಕ್ಕೆ ದುಡಿಯುತ್ತಿರಬೇಕು. ಏಕೆಂದರೆ ತಮ್ಮ ವಾಸಸ್ಥಳಗಳಲ್ಲಿ ನೆಲೆಸಿದ್ದರೆ ಜನಗಣತಿಯ ಮಾಡುವವರಿಗೆ ಸಿಕ್ಕಿರಲೇ ಬೇಕಲ್ಲವೇ. ಇನ್ನೊಂದು ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಈ ಜನಗಣತಿ ವರದಿಯಲ್ಲಿರುವ ಉತ್ತರ ಕರ್ನಾಟಕದ ಭಾಗದ ಜಿಲ್ಲೆಯಲ್ಲಿ ಇರುಳಿಗರು ಎಂದು ಗುರುತಿಸಿಕೊಳ್ಳುವವರು ಯಾರು ಎಂಬ ಪ್ರಶ್ನೆ ಮೂಡುತ್ತದೆ. ಏಕೆಂದರೆ ಇರುಳಿಗರ ವಕ್ತೃಗಳು ಉತ್ತರ ಕರ್ನಾಟಕಕ್ಕೂ ನಮಗೂ ಕೊಡುಕೊಳ್ಳುವ ಸಂಬಂಧಗಳಿಲ್ಲ. ಹಾಗೆಯೇ ನಮ್ಮ ಜನ ಕಾಡುವಾಸಿಗಳು, ಕಾಡಿನ ಪರಿಸರಕ್ಕೆ ಹೊಂದಿಕೊಂಡವರು. ಅವರ ವಾಸದ ನೆಲೆಗಳು ಅದೇ ಪರಿಸರವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಎನ್ನುತ್ತಾರೆ. ಜೊತೆಗೆ ತಮಿಳುನಾಡು, ಕೇರಳ, ಆಂಧ್ರದಲ್ಲಿರುವ ಇರುಗಳಿಗರೊಂದಿಗೆ ಕೊಡುಕೊಳ್ಳುವ ಸಂಬಂಧ ಮಾಡಿರುವ ಇರುಳಿಗರು ಉತ್ತರ ಕರ್ನಾಟಕದಲ್ಲಿ ಇರುಳಿಗ ಎಂದು ಗುರುತಿಸಿಕೊಳ್ಳುತ್ತಿರುವವರು ಇರುಳಿಗರೇ ಆಗಿದ್ದಾರೆ. ಕೊಡುಕೊಳ್ಳುವ ಸಂಬಂಧವಿರಲೇಬೇಕಲ್ಲವೇ ನನಗೂ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ಯಾವ ಕುರುಹುಗಳು ಸಿಗಲಿಲ್ಲ. ಕರ್ನಾಟಕದ ಬಹುಭಾಗದಲ್ಲಿ ವಾಸಿಸುತ್ತಿದ್ದ ಇರುಳಿಗರನ್ನು ಸಂದರ್ಶಿಸುವ ಸಂದರ್ಭದಲ್ಲಿ ಅವರೆಲ್ಲರೂ ಮಾಗಡಿ ಸೀಮೆಯಿಂದ ಹೋಗಿರುವುದಾಗಿಯೇ ಹೇಳುತ್ತಾರೆ. ಆದರೆ ಅವರ‍್ಯಾರು ಉತ್ತರ ಕರ್ನಾಟಕದ ಕಡೆ ಹೋಗಿರುವುದಾಗಲೀ ಅಥವಾ ಸಂಬಂಧಿಕರಿರುವುದಾಗಲೀ ಪ್ರಸ್ತಾಪಿಸುವುದಿಲ್ಲ. ಇದೆಲ್ಲ ನೋಡಿದರೆ ಇರುಳಿಗರ ಹೆಸರಿನಲ್ಲಿ ಇನ್ಯಾರೋ 'ಪ್ರಮಾಣ ಪತ್ರ

ಪಡೆದುಕೊಳ್ಳುತ್ತಿರಬೇಕು ಎಂದೆನಿಸುತ್ತದೆ. ಇದರ ಜೊತೆಗೆ ಇನ್ನೂ ಎಷ್ಟೋ ಕುಟುಂಬಗಳು ಸರ್ಕಾರ ಮತ್ತು ಸಮಾಜದ ಜೊತೆ ಮುಖಾಮುಖಿಗೊಳ್ಳಲಿಲ್ಲವೇನೋ ಎಂಬುದು ಗೊತ್ತಾಗುತ್ತದೆ. ಹೀಗಿದ್ದಾಗ ಪ್ರಸ್ತುತ ಹಣ ಮತ್ತು ಜಾತಿ ಲೆಕ್ಕಚಾರದಲ್ಲಿ ನಡೆಯುತ್ತಿರುವ ಚುನಾವಣೆಯ ಸಂದರ್ಭದಲ್ಲಿ ಇರುಳಿಗರ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿದೆ.

ಇತ್ತ ಆರ್ಥಿಕವಾಗಿ ಸಬಲರಿಲ್ಲದೆ, ತುತ್ತಿನ ಚೀಲಕ್ಕೆ ಜೀತಗಾರಿಕೆ ಮಾಡುತ್ತಿರುವ ಇರುಳಿಗರು ಹಾಗೆಯೇ ಜನಸಂಖ್ಯೆಯಲ್ಲೂ ಪ್ರಬಲರಿಲ್ಲದ್ದರಿಂದ ಇವರನ್ನೂ ಸಮಾಜ ಮತ್ತು ಪ್ರಸ್ತುತ ರಾಜಕಾರಣಿಗಳು ಲೆಕ್ಕಕ್ಕೆ ತೆಗೆದುಕೊಳ್ಳದೆ ಇರುವುದನ್ನು ಕಾಣಬಹುದು. ಒಂದು ಸಮಾಧಾನದ ವಿಷಯವೆಂದರೆ, ರಾಮನಗರ ಜಿಲ್ಲೆಯಲ್ಲಿ '೯ ರಿಂದ ೧೦ ಸಾವಿರ ಇರುಳಿಗರು ಕಂಡುಬರುತ್ತಾರೆ. ಇದರಿಂದ ಒಂದಿಷ್ಟು ರಾಜಕಾರಣಿಗಳ ಕಣ್ಣಿಗೆ ಬಿದ್ದು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗೆ ಆಯ್ಕೆಯಾಗಿರುವುದನ್ನು ಕಾಣಬಹುದು.' ಹೀಗೆ ಆಯ್ಕೆಯಾದವರ ಪರಿಸ್ಥಿತಿಯು ಹೇಳತೀರದು. ಚುನಾವಣೆಯ ಸಂದರ್ಭದಲ್ಲಿ ಪರಿಶಿಷ್ಟ ಪಂಗಡಕ್ಕೆ ಮೀಸಲಾತಿಯು ಬಂದರೆ ಪ್ರದೇಶದಲ್ಲಿ ವಾಸವಿರುವ ಇರುಳಿಗರನ್ನು ಹುಡುಕಿ ಚುನಾವಣೆಗೆ ಬೇಕಾದ ಓಟುಕಾರ್ಡ್‌ನ್ನು ಸಿದ್ಧಪಡಿಸಿ ನಾಮನಿರ್ದೇಶನ ಮಾಡಿಸಿ ಗೆಲ್ಲಿಸಿಕೊಂಡು ಅವರು ಹೇಳಿದಂತೆ ಕೇಳುವ ಹಾಗೆ ಇಟ್ಟುಕೊಳ್ಳುತ್ತಾರೆ. ರಾಮನಗರ ಜಿಲ್ಲೆಯಲ್ಲಿ ಆಯ್ಕೆಯಾದವರ ವಿವರ ಈ ಕೆಳಕಂಡಂತಿದೆ.

ಇಡೀ ರಾಮನಗರ ಜಿಲ್ಲೆಯಲ್ಲಿ ನಾಲ್ಕು ತಾಲ್ಲೂಕುಗಳು ಕಂಡುಬರುತ್ತವೆ. ಈ ನಾಲ್ಕು ತಾಲ್ಲೂಕು ಪಂಚಾಯಿತಿಯಿಂದ ೮೪ ಸದಸ್ಯರುಗಳನ್ನು ಆಯ್ಕೆ ಮಾಡುತ್ತಾರೆ. ಹಾಗೆಯೇ ೨೨ ಜಿಲ್ಲಾ ಪಂಚಾಯಿತಿ ಸ್ಥಾನಗಳಿದ್ದು, ಇವುಗಳಲ್ಲಿ ಪರಿಶಿಷ್ಟ ಜಾತಿಗೆ ನಾಲ್ಕು(೪) ಸ್ಥಾನಗಳು, ಪರಿಶಿಷ್ಟ ಪಂಗಡದವರಿಗೆ ಒಂದು(೧) ಸ್ಥಾನವನ್ನು ಮೀಸಲಿರಿಸಲಾಗಿದೆ. ಹಾಗೆಯೇ ೮೪ ತಾಲ್ಲೂಕು ಪಂಚಾಯಿತಿ ಸದಸ್ಯರುಗಳಲ್ಲಿ ಪರಿಶಿಷ್ಟ ಜಾತಿಗೆ ೧೭ ಸ್ಥಾನಗಳು ಮತ್ತು ಪರಿಶಿಷ್ಟ ಪಂಗಡದವರಿಗೆ ೪ ಸ್ಥಾನಗಳಿರುತ್ತವೆ. ಜಿಲ್ಲೆಯಲ್ಲಿ ೧೩೦ ಗ್ರಾಮ ಪಂಚಾಯಿತಿಗಳಿದ್ದು, ೪೩೨ ಪರಿಶಿಷ್ಟ ಜಾತಿಯವರು ಹಾಗೂ ೧೨೪ ಜನ ಪರಿಶಿಷ್ಟ ಪಂಗಡದವರು ಕಂಡುಬರುತ್ತಾರೆ. ಇಡೀ ರಾಮನಗರ ಜಿಲ್ಲೆಯಲ್ಲಿ ಗ್ರಾಮ ಪಂಚಾಯತಿ, ತಾಲೂಕು ಪಂಚಾಯತಿ, ಜಿಲ್ಲಾ ಪಂಚಾಯಿತಿಗಳಲ್ಲಿ ಮಹಿಳೆಯರು ಅಧಿಕವಾಗಿ ಕಂಡುಬರುತ್ತಾರೆ. ಇರುಳಿಗರ ಸಮುದಾಯಕ್ಕೆ ಸೇರಿದವರೆ ಅಧಿಕವಾಗಿದ್ದಾರೆ. ಏಕೆಂದರೆ ರಾಮನಗರದ ಪರಿಶಿಷ್ಟ ಪಂಗಡ ಜನಸಂಖ್ಯೆಯಲ್ಲಿ ಹೆಚ್ಚಾಗಿ ಇರುಳಿಗರು ಕಂಡುಬರುತ್ತಾರೆ. ಇರುಳಿಗರ ಇತಿಹಾಸದಲ್ಲೇ ಮೊದಲ ಬಾರಿಗೆ ಮಹಾದೇವಮ್ಮ ಕನಕಪುರ ತಾಲ್ಲೂಕಿನ ದೊಡ್ಡ ಆಲಹಳ್ಳಿ ಜಿಲ್ಲಾ ಪಂಚಾಯಿತಿಯ ಕ್ಷೇತ್ರದಿಂದ ಆಯ್ಕೆಯಾಗಿ, ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅದನ್ನು ಹೊರತುಪಡಿಸಿದರೆ ಸರೋಜಮ್ಮ ರಾಮಸ್ವಾಮಿಯವರು ತಾಲ್ಲೂಕು ಪಂಚಾಯಿತಿ ಸದಸ್ಯರಾಗಿ

ಆಯ್ಕೆಯಾಗಿದ್ದರು. ಇನ್ನುಳಿದಂತೆ ಹೆಚ್ಚಾಗಿ ಗ್ರಾಮ ಪಂಚಾಯಿತಿಯಿಂದ ಆಯ್ಕೆಯಾದವರೆ ಆಗಿದ್ದಾರೆ.

ಇವರೆಲ್ಲರೂ ಕೂಡ ಸ್ವಸಾಮರ್ಥ್ಯದಿಂದ ಚುನಾವಣೆಗೆ ಸ್ಪರ್ಧಿಸಿದವರಲ್ಲ, ಊರಿನ ಗೌಡ ಅಥವಾ ಭೂಮಾಲೀಕರು ಚುನಾವಣೆಯ ಸಂದರ್ಭ ಪರಿಶಿಷ್ಟ ಜನಾಂಗಕ್ಕೆ ಬಂದ ಮೀಸಲಾಯ ಫಲವಾಗಿ ಆಯ್ಕೆಯಾದರು.

ರಾಮನಗರ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಾಗಿದ ಇರುಳಿಗರು ಈ ಕೆಳಕಂಡಂತಿದ್ದಾರೆ

	ಗಂಡು	ಹೆಣ್ಣು	ಒಟ್ಟು
೧. ಚನ್ನಪಟ್ಟಣ	–	–	೧
೨. ಕನಕಪುರ	೧	೧೮	೧೯
೩. ರಾಮನಗರ	–	೧	೧
೪. ಮಾಗಡಿ	೦೨	೦೪	೦೬
ಒಟ್ಟು	೦೩	೨೨	೨೭

ಕೃಪೆ: ರಾಮನಗರ ಜಿಲ್ಲೆಯ ನಾಲ್ಕು ಪಂಚಾಯಿತಿ ಕಾರ್ಯಾಲಯಗಳ ಮಾಹಿತಿ, ಜುಲೈ ೧೩, ೨೦೧೫.

ತಾಲ್ಲೂಕು	ಗ್ರಾಮ ಪಂಚಾಯಿತಿಯ ಹೆಸರು	ಚುನಾವಣಾ ಕ್ಷೇತ್ರ	ಚುನಾಯಿತಿ ಸದಸ್ಯರುಗಳ ಹೆಸರು
ಚನ್ನಪಟ್ಟಣ	ಮಾಕಳಿ	–	ಬರಗಮ್ಮ
ಕನಕಪುರ	ಅರೆಕೆರೆ	ಹಂಚಕುಳಿ	ಶಿವಲಿಂಗಮ್ಮ
	ಅಚ್ಚಲು	ವಡ್ಡೇಗೌಡನದೊಡ್ಡಿ	ನಾಗಮ್ಮ
	ಅಳ್ಳಿಮಾರನಹಳ್ಳಿ	ಅಳ್ಳಿಮಾರನಹಳ್ಳಿ	ಮಂಗಳ
	ಬನವಾಸಿ	ತಟ್ಟಾಕೆ-೨	ಮಹಾಲಕ್ಷ್ಮಿ
	ಬೂದಿಗುಪ್ಪೆ	ಬರದನಹಳು	ಮುತ್ತಮ್ಮ
	ಚಿಕ್ಕಮುದುವಾಡಿ	ತಿಮ್ಮೇಗೌಡನದೂಡಿ	ಚಿಕ್ಕಮಾದಮ್ಮ
	ದೊಡ್ಡ ಮುದವಾಡಿ	ದೊಡ್ಡಮುದವಾಡಿ	ಕುಮದು
	ಹೊನ್ನಿಗನಹಳ್ಳಿ	ಸಾಸಾಲಪುರ	ಶಿವಲಿಂಗಮ್ಮ
	ಹೊಸದುರ್ಗ	ಸಾಲುಬನ್ನಿ	ಮುತ್ತಮ್ಮ
	ಹೊಸನಹಳು	ತಟ್ಟಾಕೆ-೪	ಮಹದೇವಮ್ಮ

ತಾಲ್ಲೂಕು	ಗ್ರಾಮ ಪಂಚಾಯಿತಿಯ ಹೆಸರು	ಚುನಾವಣಾ ಕ್ಷೇತ್ರ	ಚುನಾಯಿತಿ ಸದಸ್ಯರುಗಳ ಹೆಸರು
	ಐ.ಗೊಲ್ಲಹಳ್ಳಿ	ಶಿವನಗೌಡನದೊಡ್ಡಿ	ಮುತ್ತಮ್ಮ
ಕನಕಪುರ	ಕಲ್ಲಹಳ್ಳಿ	ಹೊಸಕೋಟೆ	ಚಿಕ್ಕತಾಯಮ್ಮ
	ಕಬ್ಬಾಳು	ಗುರುವಿನಪುರ	ಶಿವಮ್ಮ ಬರಗಮ್ಮ
	ನಾರಾಯಣಪುರ	ಬೊಮ್ಮಸಂದ್ರ	ಜಯಲಕ್ಷ್ಮಿ
	ಟಿ.ಬೇಕುಪ್ಪ	ಹೊರಳಗಲ್ಲು	ಪಾರ್ವತಮ್ಮ
	ಸೋಮದ್ಯಾಪನಹಳ್ಳಿ	ಕೂತಗಾನಹಳ್ಳಿ-೨	ಗಿರಿಜಮ್ಮ
	ಶಿವನಹಳ್ಳಿ	ರಾಮನಹಳ್ಳಿ	ಗೌರಮ್ಮ
	ಯಲಚವಾಡಿ	ದೊಡ್ಡಬಿಜ್ಜನಹಳ್ಳಿ	ಗೌರಮ್ಮ
	ಯಲಚವಾಡಿ	ಯಲಚವಾಡಿ	ಕಾಳಯ್ಯ
ಮಾಗಡಿ	ಮಾಡಬಾಳ್	ಜೇನುಕಲ್ಲು ಪಾಳ್ಯ	ಮುತ್ತಮ್ಮ
ರಾಮನಗರ	ಮಾಯಗನಹಳ್ಳಿ	ಬಸವನಪುರ-೨	ಲಕ್ಷ್ಮಮ್ಮ
	ಕೈಲಂಚ	ಕೈಲಂಚ	ಈರಮ್ಮ
	ಬನ್ನಿಕುಪ್ಪೇ(ಕೈ)	ಬನಿಕುಪ್ಪೆ(ಕೈ)	ಲಕ್ಷ್ಮಮ್ಮ
	ಹರಿಸಂದ್ರ	ಹರಿಸಂದ್ರ	ವೆಂಕಟೇಶ
	ಕೂಟಗಲ್	ಇರುಳಗರದೊಡ್ಡಿ	ಬಿಳಿಯಪ್ಪ
	ಹುಣಸನಹಳ್ಳಿ	ಅಚ್ಚಲು	ಕಬ್ಬಾಳಿ

ಕೃಪೆ: ರಾಮನಗರ ಜಿಲ್ಲೆಯ ನಾಲ್ಕು ತಾಲ್ಲೂಕು ಪಂಚಾಯಿತಿ ಕಾರ್ಯಾಲಯ ಮಾಹಿತಿ, ೧೩-೨೦೧೫

ಉಳಿದಂತೆ ಪರಿಶಿಷ್ಟ ಪಂಗಡಕ್ಕೆ ಇರುಳಿಗರು ಬರುವುದರಿಂದ ಸರ್ಕಾರಿ ಅಧಿಕಾರಿಗಳು ಈ ಸಮುದಾಯವನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾರೆ. ಪರಿಶಿಷ್ಟ ಪಂಗಡಕ್ಕೆ ಬರುವ ಸೌಲಭ್ಯಗಳನ್ನು ಇರುಳಿಗರಿಗೆ ಕೊಡಿಸುತ್ತಿದ್ದೇವೆ ಎಂದು ದಾಖಲು ಮಾಡಿಕೊಂಡು ಇವರ ಹೆಸರಿನಲ್ಲಿ ಸಾವಿರ ರೂ.ಬಿಡಿಸಿಕೊಂಡು ಹತ್ತು ರೂಪಾಯಿ ಇವರ ಜೇಬಿಗೆ ಹಾಕಿ ಕಳುಹಿಸುತ್ತಿದ್ದಾರೆ. ಇವರಿಗೂ ಏನೂ ಇಲ್ಲದವನನ್ನು ಕರೆದು ಕೊಟ್ಟರಲ್ಲ ಎಂಬ ಕೃತಜ್ಞತೆಯಿಂದ ಅವರು ಕರೆದಾಗಲೆಲ್ಲ ಹೋಗಿ ಸಹಿ ಮಾಡಿ ಬರುತ್ತಿರುತ್ತಾರೆ. ಇರುಳಿಗರು ಸಂಘಟನೆ, ಶಿಕ್ಷಣದ ಅರಿವಿಲ್ಲದ ಕಾರಣ ಪೊಲೀಸ್ ಅಧಿಕಾರಿಗಳಿಗೆ ತಮ್ಮ ಕೇಸಗಳನ್ನು ಹಾಕಿಸಿಕೊಳ್ಳಲು ಸಿಕ್ಕಿರುವ ಮಿಕಗಳಾಗಿದ್ದಾರೆ. ತಪ್ಪು ಯಾರೇ ಮಾಡಿದರೂ ಇವರನ್ನು ಕರೆದುಕೊಂಡು ಹೋಗಿ ಕೇಸು ದಾಖಲಿಸಿರುವ

ಹಲವಾರು ನಿದರ್ಶನಗಳನ್ನು ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡಿದ್ದೇನೆ. ಇದನ್ನು ಬಂಡವಾಳ ಮಾಡಿಕೊಂಡಿರುವ ಭೂಮಾಲೀಕರು ಪೋಲೀಸರಿಂದ ಬಿಡಿಸಿ ತಮ್ಮ ಮನೆಯಲ್ಲಿ ಜೀತಕ್ಕೆ ಇರಿಸಿಕೊಳ್ಳುತ್ತಿದ್ದಾರೆ. ಇನ್ನೊಂದು ಕಡೆ ಎನ್.ಜಿ.ಒ.ಗಳು ಕಾಡಿನ ಪ್ರಾಣಿಗಳಂತೆ ಫೋಟೋ ತೆಗೆದು ಹಣ ಗಳಿಸಿಕೊಳ್ಳುತ್ತಿದ್ದಾರೆ.

ಒಟ್ಟಾರೆ ಪ್ರಸ್ತುತ ರಾಜಕೀಯ ಸಂದರ್ಭದಲ್ಲಿ ಇರುಳಿಗರು ಸಾಮುದಾಯಿಕವಾಗಿ ದಿನದಿಂದ ದಿನಕ್ಕೆ ಜನಸಂಖ್ಯೆಯಲ್ಲಿ ಕಡಿಮೆಯಾಗುತ್ತಿದ್ದು, ಪೋಲೀಸರು, ಭೂಮಾಲೀಕರು, ಬಂಡವಾಳ ಶಾಹಿಗಳು ಮತ್ತು ರಾಜಕಾರಣಿಗಳಿಗೆ ಬಲಿಕುರಿಗಳಾಗಿದ್ದಾರೆ. ಭಾರತಕ್ಕೆ ಪ್ರಥಮವಾಗಿ ಕಾಲಿಟ್ಟ ಸಮುದಾಯಗಳಲ್ಲಿ ಪ್ರಮುಖರಾಗಿದ್ದು, ಇರುಳಿಗರು ಸಿಂಧೂನಾಗರಿಕತೆಯ ಪೂರ್ವಿಕರೆಂದು ಚರಿತ್ರೆಯಲ್ಲಿ ಗುರುತಿಸಿಕೊಂಡು ಸಂತೋಷ ಮತ್ತು ಹೆಮ್ಮೆ ಪಟ್ಟುಕೊಳ್ಳುತ್ತಿದ್ದಾರೆಯೇ ವಿನಃ ಅವರ ಜೀವನ ಸ್ಥಿತಿಯು ಶೋಚನೀಯವಾದದ್ದನ್ನು ಕುರಿತು ಅಧ್ಯಯನ ಕೈಗೊಂಡಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಬಂದು ೬೯ವರ್ಷಗಳು ಕಳೆದಿದ್ದರೂ ಇಂದಿಗೂ ಒಬ್ಬ ಸರ್ಕಾರಿ ನೌಕರಿಯನ್ನು ಕಾಣಲು ಸಾಧ್ಯವಾಗಿಲ್ಲ. ಇದು ಪ್ರಜಾಪ್ರಭುತ್ವ ಅವನತಿ ಎಂದು ಭಾವಿಸಿದರೂ ತಪ್ಪಾಗಲಾರದು.

ಕೊನೆ ಟಿಪ್ಪಣಿಗಳು

೧. ಚಿನ್ನಸ್ವಾಮಿ ಸೋಸಲೆ ಎನ್., ಪ್ರಾಧ್ಯಾಪಕರು, ಚರಿತ್ರೆ ವಿಭಾಗ, ಚರ್ಚೆಯ ಸಂದರ್ಭ ದಿನಾಂಕ ೨೩-೭-೨೦೧೭

೨. ಕೊಸಾಂಬಿ ಡಿ.ಡಿ.(ಮೂಲ), ಕನ್ನಡಕ್ಕೆ ಟಿ.ಎಸ್.ವೇಣುಗೋಪಾಲ್, ಶೈಲಜಾ, ೨೦೧೧, ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರಿಕತೆ, ಪು.೮೮.

೩. ಚಿನ್ನಸ್ವಾಮಿ ಸೋಸಲೆ ಎನ್., ಪ್ರಾಧ್ಯಾಪಕರು, ಚರಿತ್ರೆ ವಿಭಾಗ, ಚರ್ಚೆಯ ಸಂದರ್ಭ ದಿನಾಂಕ ೨೩-೭-೨೦೧೭

೪. ಶಂಕರನಾರಾಯಣರಾವ್ ಎನ್., ೧೯೮೨, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆ, ಪು.೭೫)

೫. ಕೊಸಾಂಬಿ ಡಿ.ಡಿ.(ಮೂಲ), ವೇಣುಗೋಪಾಲ ಟಿ.ಎಸ್., ಶೈಲಜಾ(ಅನು), ೨೦೦೩, ಪುರಾಣ ಮತ್ತು ವಾಸ್ತವ, ಪು.೨೧

೬. ಅದೇ, ಪು.೨೧

೭. ಅದೇ, ಪು.೭೭

೮. ಸಿದ್ಧಲಿಂಗಯ್ಯ, ೨೦೦೦, ಗ್ರಾಮದೇವತೆಗಳು ಜಾನಪದೀಯ ಅಧ್ಯಯನ, ಪು.೨

೯. ಅದೇ, ಪು.೩

೧೦. ಶಂಕರನಾರಾಯಣರಾವ್ ಎನ್., ೧೯೮೨, ಪೂರ್ವೋಕ್ತ, ಪು.೭೬

೧೧. ಕೊಸಾಂಬಿ ಡಿ.ಡಿ.(ಮೂಲ), ವೇಣುಗೋಪಾಲ ಟಿ.ಎಸ್., ಶೈಲಜಾ(ಅನು), ೨೦೦೩, ಪ್ರಾಚೀನ ಭಾರತ ಸಂಸ್ಕೃತಿ ಮತ್ತು ನಾಗರಿಕತೆ ಚಾರಿತ್ರಿಕ ರೂಪುರೇಷೆ, ಪು.೮೮

೧೨. ಮೋಹನ್‌ಕೃಷ್ಣ ರೈ ಕೆ., ೨೦೧೨, ತುಳುನಾಡು ಕನ್ನಡನುಡಿ, ಪು.೫೭

೧೩. ಬೈರೇಗೌಡ ಎಂ., ೨೦೦೦, ಇರುಳಿಗರು: ಜಾನಪದ ಅಧ್ಯಯನ, ಪು.೧೦೯.

೧೪. ಸಣ್ಣಯ್ಯ ಬಿ.ಎಸ್.(ಸಂ), ೧೯೮೮, ಜೀವಚಂದ್ರ ವಿರಚಿತ ರಾಜಾವಳಿ ಕಥಾಸಾರ ಪು.೨೦೩).

೧೫. ಚಿನ್ನಸ್ವಾಮಿ ಸೋಸಲೆ ಎನ್., ಪ್ರಾಧ್ಯಾಪಕರು, ಚರಿತ್ರೆ ವಿಭಾಗ, ಚರ್ಚೆಯ ಸಂದರ್ಭ ದಿನಾಂಕ ೧೦-೧೦-೨೦೧೭

೧೬. ಮಾದಮ್ಮ ೯೨, ಮಡಿವಾಳ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ಕ್ಷೇತ್ರಕಾರ್ಯದ ದಿನಾಂಕ ೨೬-೬-೨೦೧೬.

೧೭. ಬೋರಲಿಂಗಯ್ಯ ಹಿ.ಚಿ., ೧೯೯೫, ಕಾಡುಕಾಂಕ್ರೀಟ್ ಮತ್ತು ಜನಪದ, ಪು.೫೦.

೧೮. ಅದೇ, ಪು.೬೬

೧೯. ಅದೇ, ಪು.೬೭

೨೦. ಧಮ್ಮಯ್ಯ, ೭೦, ಇರುಳಿಗರ ಕಾಲೋನಿ, ಕನಕಪುರ ತಾಲೂಕು, ರಾಮನಗರ ಜಿಲ್ಲೆ

೨೧. ಅಟ್ಟ ಬರಿಯಪ್ಪ ಜೋಡುಗಟ್ಟಿ ಮಾಗಡಿ ತಾಲೂಕು, ರಾಮನಗರ ಜಿಲ್ಲೆ, ೩-೬-೨೦೧೬

೨೨. ಮಾಸ್ತಮ್ಮ ೬೯, ಲಕ್ಷ್ಮಿಪುರ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ, ೨೯-೬-೨೦೧೬.

೨೩. ಭಂಗಯ, ೮೮. ಕುರುಬಳ್ಳಿ ದೊಡ್ಡಿ(ನವಿಲ್‌ಕಲ್‌ದೊಟ್ಟ) ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ೨೩-೦೬-೨೦೧೬

೨೪. ಚಿಕ್ಕದೊಳ್ಳಯ, ೯೨, ಕೂತಗಾನಹಳ್ಳಿ, ಕಸಬಾ ಹೋ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ೨೩-೦೬-೨೦೧೬

೨೫. ಡಾ.ಹಿ.ಚಿ.ಬೋರಲಿಂಗಯ್ಯ, ೧೯೯೫, ಪೂರ್ವೋಕ್ತ, ಪು.೬೬

೨೬. ವೆಂಕಟಲಕ್ಷ್ಮಮ್ಮ, ೭೫, ವಡ್ಡರಹಳ್ಳಿ, ರಾಮನಗರ ತಾಲೂಕು, ರಾಮನಗರ ಜಿಲ್ಲೆ, ೫-೬-೨೦೧೬

೨೭. ಲಕ್ಷ್ಮಿಪತಿ ಕೋಲಾರ ಅವರೊಂದಿಗಿನ ಚರ್ಚೆಯ ಸಂದರ್ಭ, ಗಿರಿಜನ ಉತ್ಸವ, ಮೂಡಗೆರೆ, ೨೯-೦೧-೨೦೧೫.

೨೮. ಸಿದ್ಧರಾಮ, ಇರುಳಿಗರ ಕಾಲೋನಿ ೩೮ ವರ್ಷ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ೨೬-೬-೨೦೧೬

೨೯. ಶಂಕುತಲ ಗೋಪಶೆಟ್ಟಿ, ರೇವಣ ಸಿದ್ಧರು ಒಂದು ಅಧ್ಯಯನ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಪು.೪೨

೩೦. ಅದೇ, ಪು.೬

೩೧. ಅದೇ, ಪು.೧೦.

೩೨. ಚಿಕ್ಕದೊಳ್ಳಯ್ಯ ೮೩, ಕೂತಗಾನಹಳ್ಳಿ, ಕನಕಪುರ ತಾಲೂಕು, ರಾಮನಗರ ಜಿಲ್ಲೆ, ೨೫-೦೬-೨೦೧೬

೩೩. ಲಕ್ಷ್ಮಿಪತಿ ಕೋಲಾರ, ೨೦೧೬, ಕಸಿಮಡಗಿದೆ ಕಣ್ಣು, ಪು.೧೯೨

೩೪. ಮೋಹನ್‌ಕೃಷ್ಣ ರೈ ಕೆ., ೨೦೧೦, ಕೆನರಾ ವಿಭಜನೆ: ಹತ್ತಿ ರಾಜಕೀಯ ವಿಶ್ಲೇಷಣೆ, ಪು.೨)

೩೫. ಪ್ರಭಾಕರ್ ಎ.ಎಸ್.(ಸಂ), ೨೦೦೬, ಆದಿವಾಸಿ ಆಖ್ಯಾನ, ಪು.೧೯

೩೬. ಅದೇ, ಪು.

೩೭. ಚಿಕ್ಕದೊಳ್ಳಯ್ಯ, ೮೦ ಕೂತಗಾನಹಳ್ಳಿ, ಕನಕಪುರ ತಾಲೂಕು, ರಾಮನಗರ ಜಿಲ್ಲೆ, ೨೬-೦೬-೨೦೧೬

೩೮. ಫ್ರಾನ್ಸ್ ಬುಕಾನನ್, ೧೮೦೬, A Journey from Madras through the Countries of Mysore, Canara and Malbar, Vol.II, ಪು.೧೬೩)

೩೯. ಅದೇ, ಪು.೧೬೩

೪೦. ಭೈರೇಗೌಡ ಎಂ.(ಸಂ), ೧೯೯೯, ಬಾಡಲೊಲ್ಲದ ಕಾಡಕೂಟಿಗಳು, ಪು.೧೨

೪೧. ಮುನಿಯಪ್ಪ, ೩೯, ಜೋಡುಗಟ್ಟಿ ಗ್ರಾಮ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ ೨೬-೩-೨೦೧೭

ಅಧ್ಯಾಯ: ನಾಲ್ಕು

ಇರುಳಿಗರ ಸಾಂಸ್ಕೃತಿಕ ಪದ್ಧತಿಗಳ ಚಾರಿತ್ರಿಕ ವಿಶ್ಲೇಷಣೆ

೪.೧. ಕಣಿ

೪.೨. ಹುಟ್ಟು ಮತ್ತು ಸಾವಿನ ಸಂದರ್ಭದ ಆಚರಣೆಗಳು

೪.೩. ಮದುವೆ ಮತ್ತು ಕೂಟ್ಕೆ(ಕೂಡಿಕೆ)

೪.೪. ನ್ಯಾಯ ತೀರ್ಮಾನ

ಅಧ್ಯಾಯ: ನಾಲ್ಕು

ಇರುಳಿಗರ ಸಾಂಸ್ಕೃತಿಕ ಪದ್ಧತಿಗಳ ಚಾರಿತ್ರಿಕ ವಿಶ್ಲೇಷಣೆ

ಮಾನವ ಜನಾಂಗದ ಬದುಕಿನ ಏರಿಳಿತಗಳ ಪ್ರತಿಬಿಂಬವೇ ಚರಿತ್ರೆ, ಕೇವಲ ಯುದ್ಧ ಒಪ್ಪಂದ, ರಾಜ ಮಹಾರಾಜರ ವೈಭವದ ಜೀವನ, ಆಡಳಿತದ ಕ್ರಮಗಳ ಕುರಿತಾದ ಚರಿತ್ರೆಯಲ್ಲ, ಸಾಮಾನ್ಯವಾಗಿ ಚರಿತ್ರೆಯ ರಚನೆಯಲ್ಲಿ ಜನಾಂಗಗಳ ಸೂಕ್ಷ್ಮಸ್ತರ, ಜೀವನ ವಿಧಾನದ ವಿಚಾರಗಳನ್ನು ಕಡೆಗಣಿಸಲಾಗಿದೆ. ಇದನ್ನೇ ಪ್ರಸಿದ್ಧ ಚರಿತ್ರೆಕಾರ ಆರ್ನಾಲ್ಡ್ ಟಾಯನ್ ಬೀ 'ಸಂಸ್ಕೃತಿಯ ಅಧ್ಯಯನವೇ ಚರಿತ್ರೆ' ಎಂದಿದ್ದಾರೆ.

ಜೀವಿಗೆ ಜೀವಕೋಶವೆಷ್ಟು ಮುಖ್ಯವೋ ಚರಿತ್ರೆಗೆ ಜನಾಂಗದ ಸಮಷ್ಠಿ ರೂಪದ ಸಾಂಸ್ಕೃತಿಕ ಅಂಶಗಳೂ ಅಷ್ಟೇ ಮುಖ್ಯ "ಸಾಂಸ್ಕೃತಿಕ ಏಳಿಗೆಗಳಿಲ್ಲದ ಚರಿತ್ರೆ ಮಾಂಸ ಖಂಡಗಳಿಲ್ಲದ ಕೇವಲ ಎಲುಬಿನ ಗೂಡಿನಂತಷ್ಟೆ" ಎಂಬುವುದು ಚರಿತ್ರೆಗಾರರ ಅಭಿಪ್ರಾಯ. ಭಾರತದ ಚರಿತ್ರೆಯ ಮಟ್ಟಿಗಂತೂ ಈ ಮಾತು ಸತ್ಯಕ್ಕೆ ಹತ್ತಿರವಾಗಿದೆ. ಭಾರತದ ಸಾಂಸ್ಕೃತಿಕ ಚರಿತ್ರೆಗೆ ಮೂಲ ಆಕರಗಳಾದ ಭಾಷೆ, ಆಚಾರ, ವಿಚಾರ, ನಂಬಿಕೆ, ರೂಢಿ, ಪದ್ಧತಿ ಮುಂತಾದ ಸಾಂಸ್ಕೃತಿಕ ಆಚರಣೆಗಳನ್ನು ನೋಡಿ ಆನಂದಿಸಲಾಗುತ್ತಿದೆಯೇ ಹೊರತು, ಅವುಗಳ ಮೂಲ ಸ್ವರೂಪವನ್ನು ಕುರಿತು ಅಧ್ಯಯನ ನಡೆಸುವ ಪ್ರಯತ್ನಗಳು ವ್ಯಾಪಕವಾಗಿ ನಡೆದಿಲ್ಲ. ಈ ಕುರಿತು ಇತ್ತೀಚಿನ ಕೆಲವು ವಿದ್ವಾಂಸರ ಪ್ರಯತ್ನಗಳು ಆಶಾದಾಯಕ. ಭಾರತದ ಮಾರ್ಕ್ಸಿಸ್ಟ್ ಚರಿತ್ರೆಕಾರರಾದ ಡಿ.ಡಿ.ಕೋಸಾಂಬಿಯವರು ಸಾಂಸ್ಕೃತಿಕ ಎಳೆಗಳು ಬಿಡಿಸುವ ಕ್ಷೇತ್ರಕಾರ್ಯದ ಮೂಲಕ, ಭಾರತದ ಗಟ್ಟಿಯಾದ ಚರಿತ್ರೆ ಕಟ್ಟುವಂತೆ ಕರೆ ಕೊಡುತ್ತಾರೆ. ಈ ಹಿನ್ನೆಲೆಯಲ್ಲಿ ಭಾರತ ಮೂಲ ಜನಾಂಗಗಳಲ್ಲೊಂದಾದ ಇರುಗಳಿಗರ ಸಾಂಸ್ಕೃತಿಕ ಜೀವನ ಕುರಿತು ಅಧ್ಯಯನ, ಭಾರತದ ಸಾಂಸ್ಕೃತಿಕ ಚರಿತ್ರೆಯನ್ನು ಶ್ರೀಮಂತಗೊಳಿಸುವ ಒಂದು ಪ್ರಯತ್ನ.

ಭಾರತದ ಮೂಲ ನಿವಾಸಿಗಳ ವರ್ಗಕ್ಕೆ ಹತ್ತಿರವಾದ ಇರುಳಿಗರು ಪ್ರಕೃತಿದತ್ತವಾದ ನೈಜ ಜೀವನಕ್ಕೆ ಜೋತುಬಿದ್ದ ಅಪರೂಪ ಬುಡಕಟ್ಟು ಜನಾಂಗ. ಪ್ರಕೃತಿಯನ್ನು ದೇವರೆಂದು

ನಂಬಿರುವ ಇವರ ನಂಬಿಕೆ ಜಗತ್ತಿನ ಎಲ್ಲಾ ಧರ್ಮಗಳಿಗೂ ಮೀರಿದ ನಂಬಿಕೆಯಾಗಿದೆ. ಜಗತ್ತಿನ ಪ್ರಾಚೀನ ನಾಗರಿಕತೆಗಳಲ್ಲಿ ಒಂದಾದ ಸಿಂಧೂ ಜನರ ನಂಬಿಕೆಗಳೊಂದಿಗೆ ಹಾಗೂ ದ್ರಾವಿಡ ಸಂಸ್ಕೃತಿಯೊಂದಿಗೂ ಸಮೀಕರಿಸಿ ಅದಕ್ಕೂ ಪೂರ್ವ ಸ್ಥಿತಿಯನ್ನು ಇರುಳಿಗರ ನಂಬಿಕೆ ಮತ್ತು ಆಚರಣೆಗಳಲ್ಲಿ ನೋಡಬಹುದಾಗಿದೆ

ಜಗತ್ತಿನ ಯಾವ ವೈಜ್ಞಾನಿಕ ಆಯಾಮಗಳ ಅನುಕರಣೆಗೂ ತಲೆಬಾಗದೇ ತಮ್ಮದೇ ಆದ ಮೂಲ ಆಚಾರ ವಿಚಾರಗಳನ್ನೇ ಜೀವನದಲ್ಲಿ ಅಳವಡಿಸಿಕೊಂಡು ಬದುಕುತ್ತಿರುವ ಇರುಳಿಗರೂ ಹಣ, ಅಂತಸ್ತು, ಸಂಪತ್ತು ಆಮಿಷಗಳಿಂದಲೂ ಏಕೆ ದೂರ ಸರಿದರು ಎಂಬ ಅಂಶ ಚರ್ಚೆಯ ಮುಖ್ಯ ವಸ್ತುವಾಗುತ್ತದೆ. ಇವರದೊಂದು ರೀತಿಯ ಸಮನ್ವಯ ಸಾರುವ ಸೂಫಿ ಧರ್ಮವಾಗಿದೆ ಎಂದು ಇತ್ತೀಚಿನ ಸಮಾಜವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಆದರೆ ಇದು ಹೇಗೆ ಸರಿಹೊಂದುತ್ತದೆ ಎಂಬುವುದು ಚರಿತ್ರೆ ವಿದ್ಯಾರ್ಥಿಯಾದ ಪ್ರತಿಯೊಬ್ಬರಿಗೂ ಕಾಡುವ ಪ್ರಶ್ನೆ. ಭಾರತದ ಮೂಲ ಸಂಸ್ಕೃತಿಯನ್ನು ಅರಿಯಲು ಪ್ರಯತ್ನಿಸುವ ಯಾರೇ ಆದರೂ ಇವರ ಜೀವನ ಕ್ರಮಗಳತ್ತ ಕಣ್ಣಾಡಿಸಲೇಬೇಕಾಗಿದೆ. ಸ್ತ್ರೀಪುರುಷರು ಸಮಾನವಾದ ಅವಕಾಶಗಳನ್ನು ಹಂಚಿಕೊಳ್ಳುತ್ತಾರೆ. ಸ್ತ್ರೀಯರು ಪುರುಷರಷ್ಟೇ ಸಮಾನವಾದ ಕೌಟುಂಬಿಕ ವೃತ್ತಿಗಳೊಂದಿಗೆ ಜೀವನ ನಿರ್ವಹಣೆಗೆ ಸಹಕರಿಸುತ್ತಾರೆ.

ಪ್ರಕೃತಿಯೊಂದಿಗೆ ವಿರಾಜಮಾನವಾಗಿ ಬದುಕುವ ಕಲೆಯನ್ನು ರೂಢಿಸಿಕೊಂಡಿರುವ ಇರುಳಿಗರು ಅರಣ್ಯದ ಅಪರೂಪದ ಗಿಡಮೂಲಿಕೆಯ ಮಹತ್ವವನ್ನು ಅರಿತು ಅದನ್ನು ಮುಂದಿನ ಜನಾಂಗದ ಒಳಿತಿಗಾಗಿ ಬಳಸಿಕೊಳ್ಳಲು ನೆರವಾಗುತ್ತಾರೆ. ಭಾರತದ ಪ್ರಾಚೀನ ಜನಾಂಗಗಳ ಮೂಲಭೂತ ಕಸುಬಾದ ಬೇಟೆಯನ್ನರಿಸಿ ಜೀವನೋಪಾಯ ಮಾಡುತ್ತಾರೆ. ಅರಣ್ಯ, ಪ್ರಾಣಿಗಳು ನಡೆದಾಡುವ ದಾರಿ, ಪಕ್ಷಿಗಳ ದಿನಚರಿಗಳ ಕುರಿತು ಇಂದು ವೈಜ್ಞಾನಿಕ ದೃಷ್ಟಿಯಿಂದ ಅಧ್ಯಯನಗಳು ಪ್ರಪಂಚದಾದ್ಯಂತ ನಡೆದಿವೆ. ನಡೆಯುತ್ತಿವೆ. ಇವುಗಳೆಲ್ಲವುದಕ್ಕೂ ಪೂರಕವಾಗಿ ಇರುಳಿಗರಿಗೆ ಅರಣ್ಯ, ಪ್ರಾಣಿ–ಪಕ್ಷಿಗಳ ಬದುಕು, ಸಂಪನ್ಮೂಲಗಳ ಉಪಯುಕ್ತತೆಯ ಬಗ್ಗೆ ಆಳವಾದ ಜ್ಞಾನವುಂಟು. ಪ್ರಾಣಿ, ಪಕ್ಷಿ, ಜೀವಜಂತುಗಳ ಹುಟ್ಟು ಬೆಳವಣಿಗೆ ಚಲನವಲನ ಪ್ರಯೋಜನ ಇತ್ಯಾದಿ ವಿಚಾರಗಳಲ್ಲಿ ಇವರು ತಜ್ಞರಾಗಿದ್ದು, ಅರಣ್ಯದಿಂದ ದೊರೆಯುವ ಸ್ವಾಭಾವಿಕ ಉತ್ಪನ್ನಗಳನ್ನು ಜೀವನೋಪಾಯಕ್ಕೆ ಬಳಕೆ ಮಾಡುತ್ತಾರೆ.

ಉತ್ತಮ ಜನಪದ ವೈದ್ಯರಾದ ಇವರು ಮರದಿಂದ ಶ್ರವಿಸುವ ದ್ರವದಿಂದ ಗೋಂದು ಉತ್ಪಾದಿಸುವ ಬಗೆಯನ್ನು ತಿಳಿದವರು. ಪ್ರಾಚೀನ ಕಾಲದ ಬಣ್ಣಗಳ ತಯಾರಿಕೆಯಲ್ಲಿ ಇವರ ಪಾತ್ರವನ್ನು ಅಲ್ಲಗೆಳೆಯಲಾಗದು. ಅರಣ್ಯದಲ್ಲೇ ಬಾಳಿ ಬದುಕುವ ಇರುಳಿಗರು ಎಂದಿಗೂ ಅರಣ್ಯಕ್ಕೆ ಅಪಾಯಕಾರಿಯಲ್ಲ. ಇವರ ನ್ಯಾಯ ಪದ್ಧತಿಯು ಇಂದಿನ ಪ್ರಜಾಪ್ರಭುತ್ವ

ನ್ಯಾಯವ್ಯವಸ್ಥೆಯನ್ನು ನಾಚಿಸುವಂತಿದೆ. ಇವರು ತಮ್ಮ ಜೀವನದಲ್ಲಿ ಸಮಾನತೆಗೆ ಆದ್ಯತೆ ನೀಡಿದವರು. ಆದಿಮಾನವರೆಂದರೆ ಹೀಗೂ ಅರ್ಥೈಸಿಸಬಹುದು. ಕಾಡು ಪ್ರಾಣಿಗಳ ಬೇಟೆಯೊಂದಿಗೆ ಗೆಡ್ಡೆ ಗೆಣಸು ತಿಂದು ಮರದ ತೊಗಟೆ ಎಲೆಗಳಿಂದ ಮೈ ಮುಚ್ಚಿಕೊಂಡು ಗವಿಗಳಲ್ಲೋ, ಮರದ ಪೊಟರೆಗಳಲ್ಲೋ ವಾಸಿಸುತ್ತಿದ್ದವರೇ ಆದಿಮಾನವರು ಎನ್ನುವುದಕ್ಕೆ ಇರುಳಿಗರನ್ನು ಸಮೀಕರಿಸಬಹುದು.

ಈ ಮೇಲಿನ ಎಲ್ಲಾ ಲಕ್ಷಣಗಳನ್ನು ಹೊಂದಿ ತಮ್ಮದೇ ಸಾಂಸ್ಕೃತಿಕ ಮೌಲ್ಯಗಳೊಂದಿಗೆ ಕಾಡಿನ ತಪ್ಪಲಿನಲ್ಲಿಅಥವಾ ಮರ ಮತ್ತು ಬಂಡೆಯ ಬುಡಗಳಲ್ಲಿ ವಾಸಿಸುತ್ತಾ ಪ್ರತ್ಯೇಕ ಜೀವನ ಕ್ರಮದಿಂದ ಬದುಕುತ್ತಿರುವ ಜನಾಂಗವೇ ಇರುಳಿಗರು. ಇವರು ಪಾರಂಪರಿಕವಾಗಿ ನಡೆಸಿಕೊಂಡು ಬಂದಿರುವ ನಂಬಿಕೆ ಮತ್ತು ಸಂಪ್ರದಾಯಗಳನ್ನು ವೈಜ್ಞಾನಿಕ ಹಿನ್ನೆಲೆಯಿಂದ ಚರ್ಚಿಸಿ ವಿಶ್ಲೇಷಣೆಗೊಳಪಡಿಸಿ ಪ್ರಸ್ತುತ ಬದುಕಿಗೆ ಪರ್ಯಾಯವಾದ ಜೀವನ ವಿಧಾನವನ್ನು ತೋರಿಸುವ ನಿಟ್ಟಿನಲ್ಲಿ ಇರುಳಿಗರ ಸಾಂಸ್ಕೃತಿಕ ನಂಬಿಕೆ, ಆಚರಣೆಗಳನ್ನು ಅಭ್ಯಸಿಸಲಾಗಿದೆ.

೪.೧. ಕಣಿ ಕಟ್ಟುವುದು

ಭಾರತ ತನ್ನಲ್ಲಿ ಅಪಾರ ಜ್ಞಾನವನ್ನು ಹುದುಗಿಸಿಕೊಂಡಿದೆ. ಆದರೆ ಆ ಜ್ಞಾನವನ್ನು ಬಳಸಿಕೊಳ್ಳುತ್ತಿಲ್ಲವೆಂಬುದು ಹಲವರ ಅಭಿಪ್ರಾಯವಾಗಿದೆ. ಆದರೆ ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಸಮಾನತೆಯು ಈ ಜ್ಞಾನವನ್ನು ಒಪ್ಪಿಕೊಳ್ಳಲು ಸಿದ್ದವಿಲ್ಲ. ಹಾಗೆಯೇ ಆ ಜ್ಞಾನವನ್ನು ಹೊರಗೆ ಪಸರಿಸಲು ಬಿಡುತ್ತಿಲ್ಲ. ಏಕೆಂದರೆ ಭಾರತದಲ್ಲಿ ಬಹುಸಂಖ್ಯಾತರು ತಲತಲಾಂತರದಿಂದ ಆಳಿಸಿಕೊಳ್ಳುವುದಕ್ಕೆ ಸೀಮಿತವಾಗಿದ್ದು ಅಲ್ಪಸಂಖ್ಯಾತರು ಆಳುತ್ತಲೇ ಇದ್ದಾರೆ. ಈ ಅಲ್ಪಸಂಖ್ಯಾತರು ತಮ್ಮ ಆರ್ಥಿಕ ಮತ್ತು ಜಾತಿ ಬಲದಿಂದ ತಳವರ್ಗಗಳ ಜ್ಞಾನವನ್ನು ಸಮಾಜಕ್ಕೆ ಗೊತ್ತಾಗದಂತೆ ಮುಚ್ಚಿಟ್ಟು ನಿರ್ಲಕ್ಷಿಸುತ್ತಿದ್ದಾರೆ.

ಭಾರತದಲ್ಲಿ ಸಾಮಾಜಿಕ ವ್ಯವಸ್ಥೆ ಅಸಮಾನತೆಯಿಂದ ಕೂಡಿದ್ದು ಇದು ಜ್ಞಾನವನ್ನು ಜಾತಿವಾರು, ವರ್ಗವಾರು ಮತ್ತು ಅಂತಸ್ಥಿನ ಆಧಾರದಲ್ಲಿ ವರ್ಗೀಕರಿಸಿದೆ. ಅಲ್ಪಸಂಖ್ಯಾತ ವೈದಿಕರು ತಮ್ಮ ಹಣ ಬಲ ಮತ್ತು ಜಾತಿ ಬಲದಿಂದ ತಮ್ಮ ಜ್ಞಾನವನ್ನು ಪರಮಾನೋಜ್ಞಾನ ಎಂದು ಬಿಂಬಿಸಿ ನಂಬಿಸುವುದರೊಂದಿಗೆ ಕೆಳವರ್ಗದ ಜ್ಞಾನವನ್ನು ತುಳಿಯುತ್ತಲೇ ಬಂದಿದ್ದಾರೆ. ಅಲ್ಪಸಂಖ್ಯಾತ ವೈದಿಕ ಮತ್ತು ಮೇಲ್ವರ್ಗವು ಭಾರತದ ಕೆಳವರ್ಗದ ಜ್ಞಾನವನ್ನು ಒಪ್ಪಲು ಇಂದಿಗೂ ಸಿದ್ಧವಿಲ್ಲ. ಇವರು ಬುಡಕಟ್ಟುಗಳ ಜ್ಞಾನವನ್ನು ತಮ್ಮ ಜ್ಞಾನ ಎಂದು ನಂಬಿಸಿ ಅದಕ್ಕೆ ಪಾಶ್ಚಿಮಾತ್ಯದ ರೂಪಗಳನ್ನು ಕೊಟ್ಟು ಹೊಸ ಆವಿಷ್ಕಾರ ಎಂದು ಸಮಾಜಕ್ಕೆ ಪರಿಚಯಿಸುತ್ತಿದ್ದಾರೆ. ಇದನ್ನು ಅದ್ಭುತ ಪರಮನೋಜ್ಞಾನ ಎಂದು ಬಾಚಿತಬ್ಬಿಕೊಂಡ ಮೇಲ್ವರ್ಗ ಮತ್ತು ವಿದ್ಯಾವಂತವರ್ಗ ಈ ಜ್ಞಾನವನ್ನೇ ಭಾರತದಲ್ಲಿ ಪ್ರಚಾರ ಮಾಡುತ್ತಾ ಬರುತ್ತಿದೆ. ಆದರೆ

ಇದೇ ಜ್ಞಾನವನ್ನು ರಸ್ತೆಯಲ್ಲಿ ಗುಡಿಗುಡ್ಡದಲ್ಲಿ ಕುಳಿತು ಪ್ರತಿನಿತ್ಯ ಕೆಳವರ್ಗಗಳು ಸಾರುತ್ತಿದ್ದರೂ ಅದನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲ. ಈ ವಿಜ್ಞಾನವನ್ನು ಸುಂದರವಾದ ಕೋಟೆಯೊಂದರಲ್ಲಿ ಕುಳಿತು ಅಥವಾ ಮಠಮಂದಿರದಲ್ಲಿ ಕುಳಿತು ಹೇಳಿದರೆ ವಿದ್ಯಾವಂತ ವರ್ಗ ಶಿರಸಾವಹಿಸಿ ಒಪ್ಪಿಕೊಳ್ಳುತ್ತಾರೆ. ಇದರಿಂದಲೇ ಬ್ರಾಡ್ಲೆಯನ್ನು ವಿಶ್ವವಿಖ್ಯಾತ ಮನೋವಿಜ್ಞಾನಿ ಎಂದೂ ಒಪ್ಪಿಕೊಂಡು ಪ್ರಚಾರ ಮಾಡಿ ನಮ್ಮ ಪಕ್ಕದಲ್ಲಿದ್ದ ದೊಳ್ಳಯ್ಯನು ತಿಮ್ಮಯ್ಯನ ಅರಳೆಕಾಯಿ ಪಾಂಡಿತ್ಯವನ್ನು ಕಡೆಗಣಿಸುತ್ತಾರೆ.

ಹಲವಾರು ಪ್ರಯೋಗಗಳ ಮೂಲಕ ದೇಹದ ಸಮಸ್ಯೆಯನ್ನು ಹೇಳುವ ವೈದ್ಯರನ್ನು ನಂಬುವ ಈ ಸಮಾಜ ಕೇವಲ ಮುಖ ನೋಡಿ ಇಂತಹದೇ ಸಮಸ್ಯೆ ಎಂದು ಹೇಳುವುದನ್ನು ನಂಬುವುದಿಲ್ಲ. ೨೦೦೫ರಲ್ಲಿ ಅಂಡಮಾನ್ ದ್ವೀಪದಲ್ಲಿ ಸಂಭವಿಸಿದ ಸುನಾಮಿಯಿಂದ ಲಕ್ಷಾಂತರ ಜನ ಪ್ರಾಣ ಕಳೆದುಕೊಂಡರು. ಇದರ ಪರಿಣಾಮ ಭಾರತದಲ್ಲೂ ಸಾವಿರಾರು ಮಂದಿ ಜೀವ ಕಳೆದುಕೊಳ್ಳಬೇಕಾಯಿತು. ಸುನಾಮಿ ಸಂಭವಿಸುವ ಮುಂಚೆ ಪ್ರಪಂಚದ ಯಾವ ಭೂಗೋಳ ಶಾಸ್ತ್ರಜ್ಞರಿಗಾಗಲೀ, ಜಲತಜ್ಞರಾಗಲಿ ಅಥವಾ ಖಗೋಳಶಾಸ್ತ್ರಜ್ಞರಿಗಾಗಲಿ ಗೊತ್ತಾಗಲಿಲ್ಲ. ಆದರೆ ಅಂಡಮಾನ್ ನಿಕೋಬಾರಿನ ಜಾರುವ ಬುಡಕಟ್ಟಿನ ಒಬ್ಬ ಹಿರಿಯ ಸಮುದ್ರವನ್ನು ನೋಡಿ ಸಮುದ್ರದಲ್ಲಿ ಮೀನುಗಳು, ಪಕ್ಷಿಗಳು ಚೆಲ್ಲಾಪಿಲ್ಲಿಯಾಗಿ ದಡದ ಕಡೆ ಬರುತ್ತಿರುವುದನ್ನು ಕಂಡು ಸಮುದ್ರದಿಂದ ನಮಗೆ ಅಪಾಯವಿದೆ ಎಂದು ತಿಳಿದು, ಎಲ್ಲರನ್ನು ಎತ್ತರದ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಯಾರೊಬ್ಬರಿಗೂ ಏನು ಆಗದಂತೆ ಬದುಕುಳಿದರು. ಯಾವ ಭೂಗೋಳಶಾಸ್ತ್ರಜ್ಞರಿಗೂ ಇದು ಗೊತ್ತಾಗಲಿಲ್ಲ. ಆದರೆ ಈ ಜ್ಞಾನವನ್ನು ಇವತ್ತಿನ ಭೌಗೋಳಿಕ ಶಾಸ್ತ್ರಜ್ಞರು ಒಪ್ಪಿಕೊಳ್ಳಲು ಸಿದ್ಧರಿಲ್ಲ. ಇವರುಗಳು ಬುಡಕಟ್ಟುಗಳಲ್ಲಿನ ಈ ಜ್ಞಾನವನ್ನು ಜ್ಞಾನ ಎಂದೇ ಪರಿಗಣಿಸದೆ ಸದಾ ತಾತ್ಸಾರದಿಂದಲೇ ನೋಡುತ್ತಾರೆ. ಇದು ಭಾರತದ ವ್ಯವಸ್ಥೆ.

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಬುಡಕಟ್ಟುಗಳನ್ನು ಕಡೆಗಣಿಸುತ್ತಲೇ ಬರಲಾಗಿದೆ. ಭಾರತದ ಸಂಸ್ಕೃತಿ ಬುಡಕಟ್ಟುಗಳಿಂದಲೇ ಇನ್ನು ಉಳಿದುಕೊಂಡಿದೆ ಎಂದು ಹೇಳಿ ನಂಬಿಸಿ ಅವರನ್ನು ರಸ್ತೆಯಲ್ಲಿ ಕುಳ್ಳಿರಿಸಿ ಅವರಿಗೆ ವೇಷಭೂಷಣಗಳನ್ನು ಹಾಕಿಸಿ, ಕುಣಿಸಿ ಮನೋರಂಜನೆ ಪಡೆಯಲಾಗುತ್ತಿದೆ.

ಬುಡಕಟ್ಟುಗಳು ಕಾಡಿನಲ್ಲೇ ಹುಟ್ಟಿ ಕಾಡಿನಲ್ಲೆ ಬೆಳೆದುದ್ದರಿಂದ ಪ್ರಕೃತಿಯ ನಾಡಿಮಿಡಿತವನ್ನು ಅರಿತವರಾಗಿದ್ದಾರೆ. ನೆರಳನ್ನು ನೋಡಿ ಸಮಯ ಹೇಳುವಂತೆ, ರಾತ್ರಿ ಚಂದ್ರನನ್ನು ನೋಡಿ ಮಳೆ ಬರುತ್ತದೆಯೇ ಅಥವಾ ಇಲ್ಲವೆಂದೂ ಹೇಳುವ ಜ್ಞಾನ ಇವರಲ್ಲಿದೆ. ಪ್ರಕೃತಿಯ ಅಂತರಂಗವನ್ನು ಅರಿತಿರುವ ಬುಡಕಟ್ಟುಗಳು ತಮ್ಮ ಎಲ್ಲಾ ಕೆಲಸವನ್ನು ಪ್ರಕೃತಿಯ ಒಪ್ಪಿಗೆಯಂತೆ ಮಾಡುತ್ತಾರೆ. ಅವರ ನಂಬಿಕೆಗಳು ಪ್ರಕೃತಿಯನ್ನು ಎಂದಿಗೂ ಮೀರಿರುವುದಿಲ್ಲ. ಈ ಹಿನ್ನೆಲೆಯಿಂದ ಪ್ರಕೃತಿಯ ಬದಲಾವಣೆಯ ಮೂಲಕ ಸಮಾಜದ ಬದಲಾವಣೆಯನ್ನು ಗುರುತಿಸುವ

ರೀತಿಯಲ್ಲಿಯೇ ವ್ಯಕ್ತಿಯನ್ನು ನೋಡಿ ಅವನ ಭಾವನೆಯನ್ನು ಅರ್ಥಮಾಡಿಕೊಳ್ಳುವ ವಿಶೇಷ ಶಕ್ತಿ ಇವರಲ್ಲಿದೆ. ಇದನ್ನು ಹೇಳಲು ಕಣಿ, ಭವಿಷ್ಯ, ಮಾಟ, ಮಂತ್ರ ಮುಂತಾದವುಗಳ ಸಹಾಯ ಪಡೆದುಕೊಂಡಿದ್ದಾರೆ ಅಷ್ಟೆ. ಈ ಜ್ಞಾನವು ಬುಡಕಟ್ಟುಗಳಿಗೆ ಜೀವಿತದ ಸಹಜ ಕ್ರಿಯೆಯಾಗಿ ಕಂಡುಬಂದರೆ ನಾಗರಿಕ ಪ್ರಪಂಚಕ್ಕೆ ವಿಶೇಷ ವಿದ್ಯೆಯಾಗಿ ಗೋಚರಿಸುತ್ತದೆ. ಇದರಿಂದಲೇ ಏಕಲವ್ಯನ ಬಿಲ್ವಿದ್ಯೆಯನ್ನು ಅರ್ಜುನ ಶಬ್ದವೇದಿ ವಿದ್ಯೆ ಎಂದು ತಿಳಿದು ದ್ರೋಣಾಚಾರ್ಯರ ಮೂಲಕ ಅವನ ಹೆಬ್ಬೆರಳು ಕತ್ತರಿಸಿಕೊಂಡಿದ್ದು. ಅದೇ ರೀತಿಯಲ್ಲಿ ಇಂದೂ ಬುಡಕಟ್ಟುಗಳ ಜ್ಞಾನವನ್ನು ಪತಂಜಲಿ, ಆಯುರ್ವೇದ, ಹಿಮಾಲಯನ್ ಎಂಬ ಹೆಸರಿನಲ್ಲಿ ಕಿತ್ತುಕೊಂಡು ಪ್ರಚಾರ ಮಾಡಿ ಬುಡಕಟ್ಟುಗಳ ಜ್ಞಾನವನ್ನು ನಾಶಮಾಡಲು ಹೊರಟಿದ್ದಾರೆ.

ಬುಡಕಟ್ಟುಗಳಲ್ಲಿರುವ ವಿಶೇಷ ಜ್ಞಾನದಲ್ಲಿ ಕಣಿ ಹೇಳುವುದು ಒಂದಾಗಿದೆ. ಕಣಿ ಎಂಬ ಪದವು ಇಂಗ್ಲೀಷ್‌ನ divination ಎಂಬ ಪದದಿಂದ ಬಂದಿದೆ. ಮಾನವ ತನ್ನ ಪಂಚೇಂದ್ರಿಯಗಳ ಮೂಲಕ ತಿಳಿಯಲು ಸಾಧ್ಯವಾಗದ, ಆದರೆ ಅತೀಂದ್ರಿಯ ಶಕ್ತಿಯಿಂದ ತಿಳಿಯಲು ಸಾಧ್ಯವಾಗುವ ಕ್ರಮವನ್ನೇ ಕಣಿ ಎಂದು ಕರೆಯುತ್ತಾರೆ.[೧] ಪಂಚೇಂದ್ರಿಯಗಳ ಸಹಾಯದಿಂದ ಕಣಿ ಕಟ್ಟುವುದು ಆ ಬುಡಕಟ್ಟುಗಳ ಒಳಿತಿಗೆ ಪೂರಕ ಆಗಿರುತ್ತದೆ. ಬಹುಕಾಲದವರೆಗೂ ಇದನ್ನು ವಿಜ್ಞಾನಿಗಳು ಒಪ್ಪಿಯೇ ಇರಲಿಲ್ಲ. ಮನುಷ್ಯ ತನ್ನ ಗ್ರಹಿಕೆಯ ಶಕ್ತಿಯಿಂದ ಇನ್ನೊಬ್ಬರ ಮನದಲ್ಲಿ ಏನಿದೆ ಎಂಬುವುದನ್ನು ಹೇಳಲು ಸಾಧ್ಯ ಎಂದು ಹಲವಾರು ಪ್ರಯೋಗಗಳ ಮೂಲಕ ದೃಢಪಡಿಸಿದಾಗ, ಆಧುನಿಕ ಸಮಾಜ ಒಪ್ಪಿಕೊಳ್ಳಲಾರಂಭಿಸಿತು. ಆದರೆ ಈ ಜ್ಞಾನವನ್ನು ಶತಮಾನಗಳ ಹಿಂದೆಯೇ ಬುಡಕಟ್ಟುಗಳು ತಮ್ಮ ಬದುಕಿನಲ್ಲಿ ಸಹಜವಾಗಿ ಅಳವಡಿಸಿಕೊಂಡು ತಮ್ಮ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಿದ್ದರು. ಆದರೆ ಆಧುನಿಕ ಜಗತ್ತು ಇದನ್ನು ಇತ್ತೀಚಿನ ದಿನಗಳಲ್ಲಿ "ಅತೀಂದ್ರಿಯ ಜ್ಞಾನ" (Extrasensory perception) ಎಂದು ಕರೆದುಕೊಂಡು ಮೂರು ರೀತಿಯಲ್ಲಿ ವಿಭಾಗಿಸಿಕೊಂಡಿದೆ. ಪಂಚೇಂದ್ರಿಯಗಳ ಸಹಾಯವಿಲ್ಲದೆ ಬೇರೊಬ್ಬ ವ್ಯಕ್ತಿಯ ಮನಸ್ಸಿನಲ್ಲಿರುವ ಆಲೋಚನೆಗಳನ್ನು ತಿಳಿಯುವುದು. ಅನ್ಯಮನೋದರ್ಶನ (telepathy) ಎಂದು. ಪಂಚೇಂದ್ರಿಯಗಳ ಸಹಾಯವಿಲ್ಲದೆ ಬಹುದೂರದಲ್ಲಿ ನಡೆದ ಘಟನೆಗಳನ್ನು ತಿಳಿಯುವುದು. ಅನ್ಯವಸ್ತು ದರ್ಶನ (clairvoyance) ಎಂದೂ ಹಾಗೆಯೇ ಪಂಚೇಂದ್ರಿಯಗಳ ಸಹಾಯವಿಲ್ಲದ ಮುಂದೆ ನಡೆಯುವುದನ್ನು ತಿಳಿಯುವುದನ್ನು ಭವಿಷ್ಯದರ್ಶನ (pre congnition) ಎಂದು ಕರೆಯಲಾಗಿದೆ. ಮಾನವನಲ್ಲಿ ಈ ಶಕ್ತಿ ಇರುವುದು ಸುಳ್ಳಲ್ಲ ಸತ್ಯವಾದುದ್ದು ಎಂಬುವುದನ್ನು ಪ್ರಯೋಗಗಳಿಂದ ಸಾಧಿಸಿ ತೋರಿಸಿದ್ದರಿಂದ ಕಣಿ ಹೇಳುವ ಪದ್ಧತಿ ಮುರ್ಖತನದಿಂದ ಕೂಡಿದ್ದು ಎನ್ನುವ ವಾದವನ್ನು ತಳ್ಳಿ ಹಾಕಿ ಅದರ ಬಗ್ಗೆ ಗಂಭೀರವಾಗಿ ಆಲೋಚನೆ

ಮಾಡಲಾಯಿತು. ಕಣಿ ಹೇಳುವ ಕೆಲವು ವ್ಯಕ್ತಿಗಳಲ್ಲಿ ಇಂತಹ ಅತೀಂದ್ರಿಯ ಜ್ಞಾನ ಇದ್ದರೆ ಆಶ್ಚರ್ಯಪಡದೆ ಒಪ್ಪಲೇಬೇಕಾಗುತ್ತದೆ.[೨]

ಇರುಳಿಗ ಸಮುದಾಯದಲ್ಲಿ ಕಣಿ ಹೇಳುವ ಪರಂಪರೆ ಬಹಳ ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಇದನ್ನು ದೇವರು ಕರೆಯುವುದು, ಕಣಿ ಹಾಕಿಸುವುದು ಎಂಬ ಹೆಸರಿನಿಂದ ಕರೆಯುತ್ತಾರೆ. ಯಾವುದಾದರೂ ಶುಭಕಾರ್ಯ ಮಾಡುವ ಮೊದಲು ಕಣಿ ಹಾಕಿಸುತ್ತಾರೆ. ಹಾಗೆಯೇ ಸತ್ತವ್ಯಕ್ತಿಯ ತಿಥಿಯ ಸಂದರ್ಭದಲ್ಲಿ ಅನಾರೋಗ್ಯಪೀಡಿತನಾದ ಸಂದರ್ಭದಲ್ಲಿ ಕೂಡ ಕಣಿ ಹಾಕಿಸುವ ರೂಢಿ ಇರುಳಿಗರಲ್ಲಿದೆ.

ಸಾಮಾನ್ಯವಾಗಿ ಇರುಳಿಗರಲ್ಲಿ ಕಣಿಯನ್ನು ಸಮುದಾಯದ ಕಟ್ಟುಕಾರ ಹೇಳುವವನಾಗಿರುತ್ತಾನೆ. ಇದು ಕೆಲವೊಮ್ಮೆ ವಂಶಪರಂಪರೆಯಾಗಿ ಬಂದಿರುತ್ತದೆ ಅಥವಾ ಕುಲದ ಕಟ್ಟು ತಿಳಿದವನು ಮಾತ್ರ ಕಣಿ ಹಾಕುವ ಕೆಲಸದಲ್ಲಿ ನಿರತನಾಗಿರುತ್ತಾನೆ. ಕಣಿ ಹೇಳುವುದರಲ್ಲಿ ಎರಡು ವಿಧಾನಗಳಿವೆ. ಮೊದಲನೆಯದು ಆಂತರಿಕ ವಿಧಾನ ಎರಡನೆಯದು ಬಾಹ್ಯವಿಧಾನ. ಆಂತರಿಕ ವಿಧಾನದಲ್ಲಿ ಅಂಜನ ಹಚ್ಚಿ ನೋಡುವುದು. ಗಣೆ ಊದಿ ಶಾಸ್ತ್ರ ಹೇಳುವುದು. ಬಾಹ್ಯ ವಿಧಾನದಲ್ಲಿ ಕವಡೆ ಹಾಕಿ ಶಾಸ್ತ್ರ ಹೇಳುವುದು, ಮೊರದಲ್ಲಿ ಅಕ್ಕಿಕಾಳನ್ನು ಎಣಿಸುತ್ತಾ ಶಾಸ್ತ್ರ ಹೇಳುವುದು, ಹಾಗೆಯೇ ವೀಳ್ಯದೆಲೆಯಲ್ಲಿ ಶಾಸ್ತ್ರ ಹೇಳುವುದು ಕಂಡುಬರುತ್ತವೆ.[೩]

ಆದರೆ ಇರುಳಿಗರಲ್ಲಿ ವಿಶೇಷವಾಗಿ ತಮಟೆ ಬಾರಿಸುತ್ತಾ ಕಣಿ ಹೇಳುವುದು ಮತ್ತು ಮೊರದಲ್ಲಿ ಬೂದಿ ಹಾಕಿಕೊಂಡು, ಬೂದಿಯನ್ನು ತಿಕ್ಕುತ್ತಾ ಕಣಿ ಹೇಳುವುದು ವಿಶೇಷತೆ ಕಂಡುಬರುತ್ತದೆ. ಜೊತೆಗೆ ಬಿಂದಿಗೆಗೆ ಕೈ ಹಾಕಿಕೊಂಡು ಕಣಿ ಹೇಳುವುದನ್ನು ಕಾಣಬಹುದು. ಮೊರದಗಣಿ ಮತ್ತು ತಮಟೆ ಕಣಿಯು ಇರುಳಿಗರಲ್ಲಿ ಹೆಚ್ಚು ಪ್ರಚಾರದಲ್ಲಿವೆ. ಮುಂದಿನ ಭವಿಷ್ಯ ಏನಾಗುತ್ತದೆ? ಎಂದು ಇರುಳಿಗರಲ್ಲಿ ಕಣಿ ಹೇಳುವುದಿಲ್ಲ, ಬದಲಾಗಿ ಬೇರೊಬ್ಬರ ಮನಸ್ಸಿನಲ್ಲೇನಿದೆ ಎಂಬುದು ತಿಳಿಸುತ್ತದೆ. ಕಳೆದುಹೋಗಿರುವ ವಸ್ತುಗಳು ಎಲ್ಲಿವೆ. ದೇಹಕ್ಕೆ ಯಾವ ತೊಂದರೆಯಾಗಿದೆ. ಸತ್ತವ್ಯಕ್ತಿ ಎಲ್ಲಿದ್ದಾನೆ? ಎಂಬ ಉದ್ದೇಶಗಳಿಂದ ಕಣಿ ಹೇಳುವುದನ್ನು ಕಾಣಬಹುದು. ಕಣಿಗಾರ ಕಣಿ ಹೇಳುವ ಮೂಲಕ ವ್ಯಕ್ತಿಯ ದೇಹದ ಮತ್ತು ಮಾನಸಿಕ ಸಮಸ್ಯೆಯನ್ನು ಗ್ರಹಿಸಿ ನಾಟಿ ಔಷಧಿ ಕೊಟ್ಟು ಗುಣಪಡಿಸುತ್ತಾನೆ ಅಥವಾ ಮಾನಸಿಕ ಕಾಯಿಲೆಯಾಗಿದ್ದ ಅವನ ಮನಸ್ಸನ್ನು ಪರಿವರ್ತಿಸಿ ಗುಣಪಡಿಸುತ್ತಾನೆ.

ಪ್ರಮುಖವಾಗಿ ಇರುಳಿಗ ಸಮುದಾಯದಲ್ಲಿ ಕಣಿ ಹೇಳುವವನು ಸಮುದಾಯದ ಕಟ್ಟುಕಾರನೇ ಆಗಿರುತ್ತಾನೆ. ಇವನು ಕಣಿ ಹೇಳುವ ಸಂದರ್ಭದಲ್ಲಿ ಸ್ನಾನ, ಮಡಿ ಮಾಡಿಕೊಂಡು ಮೈಮೇಲೆ ವಿಭೂತಿಯನ್ನು ಹಾಕಿಕೊಂಡು, ದೇಹದ ಮೇಲೆ ಕಚ್ಚೆಯೊಂದು ಬಿಟ್ಟು ಇನ್ನಾವುದೇ ವಸ್ತ್ರವನ್ನು ಹಾಕಿಕೊಳ್ಳುವುದಿಲ್ಲ. ಹಿಂದೆ ಕಣಿ ಹೇಳುವ ವ್ಯಕ್ತಿ ನಗ್ನನಾಗಿ ಹೇಳುತ್ತಿದ್ದರ ಬಗ್ಗೆ

ಉಲ್ಲೇಖಗಳು ಸಿಗುತ್ತವೆ. ಕಣಿ ಹೇಳುವ ವ್ಯಕ್ತಿ ತಮಟೆಯನ್ನು ಹದವಾಗಿ ಕಾಯಿಸಿಕೊಳ್ಳುತ್ತಾನೆ. ತನ್ನ ಚರ್ಮದ ಚೀಲದಲ್ಲಿರುವ ದೇವರುಗಳಾದ ತ್ರಿಶೂಲ, ಬೆಳ್ಳಿ ಕಾಸಿನಸರ, ಖಡ್ಗ ಮುಂತಾದವುಗಳನ್ನು ತೊಪ್ಪೆಯಿಂದ ತಾರಿಸಿ ರಂಗೋಲೆ ಬಿಟ್ಟು ರಾಗಿಯನ್ನು ಹಾಕಿ ಹಸೆ ಮಾಡಿರುವ ಜಾಗದಲ್ಲಿ ಇಡುತ್ತಾನೆ. ಕಣಿಗಾರ ಕುಳಿತುಕೊಳ್ಳುವ ಜಾಗವನ್ನು ಹಸುವಿನ ಗಂಜಲ, ತೊಪ್ಪೆಯಿಂದ ತಾರಿಸಿ ರಂಗೋಲೆ ಬಿಟ್ಟಿರುತ್ತಾರೆ. ಅದರ ಮೇಲೆ ಕುಳಿತುಕೊಂಡು ತನ್ನ ಬಲಭಾಗಕ್ಕೆ ಸೆಗಣಿ ಉಂಡೆಯೊಂದನ್ನು ಮಾಡಿಕೊಂಡು ಅದಕ್ಕೆ ಗಂಧದಕಡ್ಡಿ(ಊದುಬತ್ತಿ) ಯನ್ನು ಇಟ್ಟುಕೊಳ್ಳುತ್ತಾನೆ ಹೊಸ ಕೈ ಹಂಚನ್ನು ತೆಗೆದುಕೊಂಡು ಅದಕ್ಕೆ ಕೆಂಡ ಹಾಕಿ ಅದರ ಮೇಲೆ ದೂಪ ಉದುರಿಸಿ ಹೊಗೆ ಎಬ್ಬಿಸುತ್ತಾನೆ. ಧೂಪದ ಹೊಗೆಯಿಂದ ತಂದಿರುವ ದೇವರುಗಳಿಗೆ ಪೂಜೆ ಮಾಡುತ್ತಾನೆ. ನಂತರ ತನ್ನ ಹಸೆಯ ಮೇಲೆ ಪದ್ಮಾಸನದಲ್ಲಿ ಕುಳಿತುಕೊಂಡು ತಮಟೆಯನ್ನು ತನ್ನ ಎರಡು ಕಾಲುಗಳ ಮಧ್ಯಕ್ಕೆ ಸಿಕ್ಕಿಸಿಕೊಂಡು ಎದೆಯ ಭಾಗಕ್ಕೆ ಬರುವಂತೆ ಬಗ್ಗಿಸಿ ಎರಡು ಕೈಗಳಿಂದ ನಿಧಾನವಾಗಿ ತಮಟೆಯನ್ನು ಭಾರಿಸುತ್ತಾನೆ. ಈ ಶಬ್ದ ಏರಿಕೆಯ ಕ್ರಮದಲ್ಲಿ ಹೆಚ್ಚಾಗುತ್ತದೆ. ಕಣಿಕಾರನ ತಮಟೆಯ ಶಬ್ದ ಹೆಚ್ಚಾದಂತೆ ಇವನ ಮಾತಿನ ಶಬ್ದವು ಹೆಚ್ಚಾಗಿ, ಜೋರಾಗಿ ದೇವರುಗಳ ಹೆಸರನ್ನು ಹೇಳಲಾರಂಭಿಸುತ್ತಾನೆ. ಹೀಗೆ ಕಣಿಗಾರ ತಮಟೆಯ ಶಬ್ದದಂತೆ ಅವನ ಮಾತಿನ ಶಬ್ದವು ಹೆಚ್ಚಾಗಿ ಕ್ಷಣಾರ್ದದಲ್ಲೇ ಕಣಿಗಾರ ಇಹಲೋಕದ ಜ್ಞಾನವನ್ನು ಕಳೆದುಕೊಳ್ಳುತ್ತಾನೆ. ಆ ಸಂದರ್ಭದಲ್ಲಿ ಅವನ ಹೆಸರಿಡಿದು ಕೂಗಿದರೂ ಅವನಿಗೆ ಗೊತ್ತಾಗುವುದಿಲ್ಲ. ದೇಹವನ್ನು ತಮಟೆಯ ಶಬ್ದದೊಂದಿಗೆ ಅಲುಗಾಡಿಸುತ್ತಾನೆ. ಆಗ ಪಕ್ಕದಲ್ಲಿ ಕುಳಿತಿರುವ ವ್ಯಕ್ತಿಯು "ಬೆಂಕಿ ಕೆಂಡಕ್ಕೆ ಧೂಪ ಹಾಕಿ ಹೊಗೆ ಎಬ್ಬಿಸಿ ಪ್ರಶ್ನೆಗಳನ್ನು ಕೇಳಲು ಅವಕಾಶ ಮಾಡಿಕೊಡುತ್ತಾನೆ. ಕಣಿ ಕೇಳಲು ಬರುವವರು ಎಲೆ ಅಡಿಕೆ, ಅರಿಶಿಣ ಕುಂಕುಮ ತೆಂಗಿನಕಾಯಿ ಹತ್ತು ರೂಪಾಯಿಗಳ ಕಾಣಿಕೆಯನ್ನು ಕಣಿಗಾರನ ಮುಂದಿಟ್ಟು ಕುಳಿತುಕೊಳ್ಳುತ್ತಾರೆ. ಆಗ ಕಣಿಗಾರ ಮುಂದೆ ಕೂತವರ ಸಮಸ್ಯೆಯನ್ನು ಹೇಳುತ್ತಾನೆ. ಅದಕ್ಕೆ ಅವರು ಸರಿ ಎಂದರೇ ಅವರಿಗೆ ಆಗುವ ತೊಂದರೆಗಳೆಲ್ಲವನ್ನು ವಿವರವಾಗಿ ತಿಳಿಸುತ್ತಾನೆ. ನಂತರ ಅದಕ್ಕೆ ಪರಿಹಾರವನ್ನು ಕೂಡ ಸೂಚಿಸುತ್ತಾನೆ. ಹೀಗೆ ಬಂದಿರುವ ಎಲ್ಲರಿಗೂ ಸಮಸ್ಯೆಗಳನ್ನು ಹೇಳಿ ಪರಿಹಾರವನ್ನು ನೀಡುತ್ತಾನೆ. ಕಣಿಕಾರ ಬಾರಿಸುವಂಥ ತಮಟೆಯ ಮೇಲೆ ಸೂರ್ಯ, ಚಂದ್ರ, ನಾಗರಹಾವೂ, ನಕ್ಷತ್ರದ ಚಿತ್ರವನ್ನು ಬಿಳಿನಾಮದಿಂದ ಬರೆದಿರುತ್ತಾರೆ. ಕಣಿ ಹೇಳುವಾಗ ಅವನು ಪ್ರಾರಂಭದಲ್ಲಿ ಈ ಕೆಳಕಂಡ ಪದಗಳನ್ನು ಉಚ್ಛರಿಸುತ್ತಾನೆ.

ಆಕಾಶವಾಣಿ। ಭೂಮಿತಾಯಿ, ಚಂದ್ರ ಸುರಾದಿಗಳೇ। ವಿಷ್ಣು ಈಸ್ಪುರ ನಿನ್ನ ಪಾದ ಪದ್ಮಗಳ ಬಾಹುಗಳಲ್ಲಿಟ್ಟುಕೊಂಡು। ವಿದ್ಯಾಗುರು–ಬುದ್ದಿಗುರು ಜೋಡು ಮಾಡಿಗುರು ನಿನ್ನ ಪಾದವೇಗತಿ। ನಿನ್ನ ಪಾದಗಳಿಗೆ ತಾಯಿ ಸರಸತಿ ಜಡೆ ಮಂಜರಿ ನಿನ್ನ ದೀನ ಕಾಣೆ ತಾಯಿ ದೀನೇಶ್ವರಿ ನಿನ್ನಾದೀಶ ಶಿವಶಿವ ನೆನುದೆನಮ್ಮ ಶಿವನು ಪಾದಕೆ ಶರಣು ಮಾಡಿದೆನಲ್ಲವೋ...

ಹರಹರ ನೆನೆದೆನಮ್ಮ ಹರನ ಪಾದ ಸ್ಮರಣೆ ಮಾಡಿದೆನನಲ್ಲವೋ...। ಶರಣರ ಬೀದಿ ಒಳಗೆ ಶರಣು ಮಾಡಿ ಬಂದೆನಲ್ಲಮ್ಮ! ಕಾಲಿಗೆ ಶರಣು ಮಾಡಿದೆ. ಕೋಲಿಗೆ ಜಪ ಮಾಡಿದೆನಲ್ಲಮ್ಮ ತಾಯೇ...। ಇವತ್ತಿನೊಳಗೆ ಜಗದ ಆನಂದದಿಂದ ಕೊಂಚುಪಟ್ಟ ನಿಂದಲ್ಲವ್ವ ನಿಂತು ಪಟ್ಟ ನಿಂದಲ್ಲವ್ವ ಪೋಗುಬಟ್ಟ ನಿಂದಲ್ಲಿ ಕೋಲು ನಿಂದಲ್ಲೇ ತಾಯೀ...। ಇಂದಾಗಿ ನಿಂತರೆ ನೋಡಮ್ಮ ನನಗಾಜ್ಞೆ ಮಾಡಿ। ನನಗೆ ಸನ್ನೆ ಮಾಡಿ ನನ್ನ ಮಂಡೆ ಮೇಲೆ ನಿಲ್ಲುವುದಲ್ಲಮ್ಮ! ನಿನ್ನ ಕೊರಳಾಗಿದ್ದದುಂಡ ಮಲ್ಲೆಗೊಳಾ ಉಯನ್ನು ಮಲ್ಲಿಗೊಳಾದಿ ನಿಮ್ಮ ಕೊರಳಿಗೆ ದಾರವ್ರತವಾಗಿ ನಿಲ್ಲುವಳಲ್ಲೇ ತಾಯಿ ನನ್ನವ್ವೋ...। ರಾಮರಾಮ ತಮ್ಮ ಪಾದಕೆ ಸರಣು ಮಾಡಿದೆನಲ್ಲೇ ತಾಯಿ ರಾಮರಾಮಾತ್ಮನ ಪಾದ ಸರಣು ಮಾಡಿದೆ। ರಾಮರ ಪೂಜೆ ಮಾಡಿ ರಾಮರ ಇನ್ನೆಂಗೆಲ್ಲಿ ಗೊಂಡಾಗ ಅವ್ವ ಶರಣು ಮಾಡಿ ಬಂದೆನಲ್ಲವೋ...। ಅವ್ವ ಶರಣು ಬೀದಿ ಒಳಗೆ ಎವ್ವೋ...।.

ಮೊರದ ಕಣಿ ಹೇಳುವಾಗ ಕಣಿಗಾರನ ಮುಂಭಾಗದಲ್ಲಿ ನೆಲ, ಸಾರಿಸಿ, ರಂಗೋಲಿ ಬಿಟ್ಟು ಬೇವಿನ ಸೊಪ್ಪು ಹರಡಿ ಮರದ ದೀಪಸ್ತಂಭವಿಟ್ಟು ಜ್ಯೋತಿ ಬೆಳಗಿಸಲಾಗುತ್ತದೆ. ಮತ್ತೊಂದು ಜಾಗದಲ್ಲಿ ಹಸುವಿನ ಗಂಜಲ ಮತ್ತು ಸೆಗಣಿಯಿಂದ ಸಾರಿಸಿ ರಂಗೋಲಿ ಬಿಡಲಾಗುತ್ತದೆ. ನಂತರ ರಾಗಿಯನ್ನು ತಂದು ಅಸೆಮಾಡಿ(ರಾಗಿಯನ್ನು ಸಮನಾಗಿ ಚೆಲ್ಲುವುದು) ಗದ್ದುಗೆಯನ್ನು ಸಿದ್ಧಪಡಿಸಿ ಅದರ ಮೇಲೆ ಚರ್ಮದ ಚೀಲದಲ್ಲಿರುವ ದೇವರುಗಳ ವಿಗ್ರಹ ಮತ್ತು ಆಯುಧಗಳನ್ನು ಹಾಗೂ ಕರಗವನ್ನು ಇಡಲಾಗುತ್ತದೆ. ಈ ಕರಗದ ಹೊರ ಮೇಲ್ಮೈಯನ್ನು ಅನೇಕ ಕೆತ್ತನೆಗಳಿಂದ ಸಿಂಗಾರಗೊಳಪಡಿಸಲಾಗಿರುತ್ತದೆ. ಇವುಗಳನ್ನು ರಾಗಿಯ ಗದ್ದುಗೆಯ ಮೇಲೆ ಇಡಲಾಗುತ್ತದೆ. ಕಣಿಗಾರನ ಪಕ್ಕದಲ್ಲಿ ತೊಪ್ಪೆಯ ಉಂಡೆ ಮಾಡಿ ಅದಕ್ಕೆ ಗಂಧದ ಕಡ್ಡಿಯನ್ನು ಸಿಕ್ಕಿಸುತ್ತಾರೆ. ಹಾಗೆ ಹೊಸ ಕೈ ಹಂಚಿನಲ್ಲಿ ಕೆಂಡ ಹಾಕಿಧೂಪವನ್ನು ಉದುರಿಸಿ ಹೊಗೆ ಎಬ್ಬಿಸುತ್ತಾರೆ. ಈ ಹೊಗೆಯಿಂದಲೇ ದೇವರುಗಳನ್ನು ಪೂಜೆ ಮಾಡಿ ನಂತರ ತನ್ನ ಹಸೆಯಲ್ಲಿ ಕುಳಿತುಕೊಂಡು ಮೊರವೊಂದನ್ನು ತೆಗೆದುಕೊಳ್ಳುತ್ತಾನೆ. ಮೊರಕ್ಕೆ ಹುಬ್ಬೆ ಮೊರದ ಬೂದಿ ಅಥವಾ ರಾಗಿ ಹಿಟ್ಟನ್ನು ಹಾಕಿಕೊಂಡು ಬಲಗೈಯಿಂದ ಬೂದಿಯನ್ನು ಉಜ್ಜುತ್ತಾ ಕಣಿ ಹೇಳಲು ಪ್ರಾರಂಭಿಸುತ್ತಾನೆ. ಮೊದಲು ತನ್ನೂರಿನ ಸುತ್ತಮುತ್ತಲಿನ ದೇವರುಗಳನ್ನು ಕರೆಯುತ್ತಾನೆ. ನಂತರ ಕುಲದೇವರುಗಳನ್ನು, ಗಡಿಕಾಯುವ ಹಿರಿಯರು, ಕುಲದ ಹಿರಿಯರು ಹಾಗೂ ತನಗೆ ಗೊತ್ತಿರುವ ಎಲ್ಲಾ ದೇವರುಗಳನ್ನು ಕರೆದುಕೊಳ್ಳುತ್ತಾನೆ. ಎಲ್ಲರೂ ನನ್ನ ಎದುರಿಗೆ ಬಂದು ನಿಂತಿದ್ದಾರೆ. ನಿಮ್ಮ ಪ್ರಶ್ನೆ ಕೇಳಿ ಎಂದು ಹೇಳುತ್ತಾನೆ. ಅವರ ಪ್ರಶ್ನೆ ಮತ್ತು ಅವರಿಗಿರುವ ಸಮಸ್ಯೆಯನ್ನು ತಿಳಿದುಕೊಂಡು ಪರಿಹಾರವನ್ನು ಕೊಡುತ್ತಾನೆ.

ಇರುಳಿಗರಲ್ಲಿ ಸಾವಿನ ಸಂದರ್ಭದ ಕಣಿಯು ಅತ್ಯಂತ ಸ್ವಾರಸ್ಯಕರ ರೀತಿಯಲ್ಲಿ ಕಂಡು ಬರುತ್ತದೆ. ಕಣಿಕಾರನು ತನ್ನ ಸುತ್ತಮುತ್ತಲಿನ ದೇವರುಗಳು ಕುಲದ ಹಿರಿಯರು, ಗಡಿಯ

ಹಿರಿಯರನ್ನು ಕರೆದು ಎದುರುಗಡೆ ನಿಲ್ಲಿಸಿರುವುದಾಗಿ ಹೇಳಿ ನಿಮ್ಮ ಮನೆಯ ದೇವರು, ಸತ್ತ ವ್ಯಕ್ತಿಯನ್ನು ಕರೆದುಕೊಂಡು ಬರುತ್ತಾರೆಂದು ಹೇಳುತ್ತಾನೆ. ಕ್ಷಣಕಾಲ ಸುಮ್ಮನಿದ್ದು ಸತ್ತವ್ಯಕ್ತಿಯೂ ಈಗ ನನ್ನ ಎದುರುಗಡೆ ನಿಂತಿದ್ದಾನೆ ಎಂದು ತಿಳಿಸಿ ಆ ವ್ಯಕ್ತಿಗೆ ನಿಮ್ಮ ಸಂಬಂಧಿಕರ ಮೇಲೆ ಬಂದು ನಿನ್ನ ಬಯಕೆಯನ್ನು ತಿಳಿಸುವಂತೆ ಸೂಚಿಸುತ್ತಾನೆ. ಆಗ ಸತ್ತ ವ್ಯಕ್ತಿಯು ಸಂಬಂಧಿಕರ ಯಾರ ಮೇಲಾದರು ಆಹ್ವಾನವಾಗಿ ತನ್ನ ಸಾವಿಗೆ ಕಾರಣ ಮತ್ತು ಇನ್ನೂ ಮುಂದಿನ ಜೀವನದ ಮಾರ್ಗದರ್ಶನ ನೀಡಿ ನೀವ್ಯಾರು ಭಯಪಡಬೇಡಿ ನಾನು ನಿಮ್ಮ ಜೊತೆಯಲ್ಲಿಯೇ ಇರುತ್ತೇನೆ. ಈಗ "ನಾನು ನಮ್ಮ ಹಿರಿಯರ ಜೊತೆಯಲ್ಲೆ ಇದ್ದೀನಿ ಭಯಪಡಬೇಡಿ ದುಃಖಿಸಬೇಡಿ ಕುಲದ ಕಟ್ಟನ್ನು ಮೀರಬೇಡಿ, ಕುಲಕಟ್ಟನ್ನು ಕಾಪಾಡಿ ಎಂದು ಹೇಳಿ ಹೋಗುತ್ತಾನೆ. ನಂತರ ಕಣಿಗಾರ ಜೋರಾಗಿ ತಮಟೆ ಸದ್ದುಮಾಡಿಕೊಂಡು ಯಥಾಸ್ಥಿತಿಗೆ ಮರಳುತ್ತಾನೆ.

ಕಣಿ ಹೇಳುವ ಕಣಿಗಾರ ಬಹಳ ಶಿಸ್ತಿನಿಂದ ಬದುಕುತ್ತಾನೆ. ಅಂಟುಮುಂಟು ಮಾಡಿಕೊಳ್ಳದೆ ಪರಿಶುದ್ಧನಾಗಿರುತ್ತಾನೆ. ನೋಡಲು ಮಾಟಗಾರನಂತೆ ಕಾಣುತ್ತಾನೆ. ತಮಟೆಯನ್ನು ಬಾರಿಸುತ್ತ ವ್ಯಕ್ತಿಯ ಗಮನವನ್ನು ತನ್ನೆಡೆಗೆ ಸೆಳೆದುಕೊಂಡು ತನ್ನ ಮೇಲೆ ಭಯದ ಭಕ್ತಿ ಉಂಟಾಗುವಂತೆ ಮಾಡಿ ಅವನ ಮಾತನ್ನು ನಂಬುವಂತೆ ವ್ಯಕ್ತಿಯ ಮನಸ್ಸನ್ನು ಪರಿವರ್ತಿಸಿ ಕಣಿ ಹೇಳುತ್ತಾನೆ. ಕಣಿಕಾರನೇ ನನ್ನ ಕಣಿಯಲ್ಲಿ ಅರ್ಧಸುಳ್ಳು ಅರ್ಧ ಸತ್ಯ ಇದೆ ಎಂದು ಹೇಳುತ್ತಾನೆ. ಅದರಂತೆ ಇರುಗಳಿಗರು ನಂಬಿಕೊಂಡಿದ್ದಾರೆ.

ಈ ಕಣಿಗಾರನು ನಾಟಿವೈದ್ಯ ಪಂಡಿತನಾಗಿದ್ದು ಸಮಸ್ಯೆಗಳಿಗೆ ತನ್ನದೇ ಆದ ಔಷಧಿ ಕೊಟ್ಟು ಬಗೆಹರಿಸುತ್ತಾನೆ. ತನ್ನ ಕೈಲಿ ಸಾಧ್ಯವಾಗದ ಕಾಯಿಲೆಗಳಾಗಿದ್ದರೆ ಇದು ಪ್ಯಾಟೆ ಕಾಯಿಲೆಯಾಗಿದ್ದು ಅಲ್ಲಿಗೆ ಹೋಗಿ ಬಗೆಹರಿಸಿಕೊಳ್ಳುವಂತೆ ಸೂಚಿಸುತ್ತಾನೆ. ಕಣಿಗಾರನು ಪ್ರಮುಖವಾಗಿ ದೆವ್ವ ಬಿಡಿಸುವ ಕೆಲಸ ಮಾಡುತ್ತಾನೆ. ದೆವ್ವ ಬಿಡಿಸುವುದು ಅಥವಾ ಗಾಳಿ ಮೆಟ್ಟಿಕೊಳ್ಳುವುದು ಎಂಬ ಕಾಯಿಲೆಯು ಮಾನಸಿಕ ಕಾಯಿಲೆಯಾಗಿದ್ದು ಈ ಕಾಯಿಲೆಯನ್ನು ಕಣಿಗಾರ ಅರ್ಧಗಂಟೆಯಲ್ಲಿ ಬಗೆಹರಿಸಿಬಿಡುತ್ತಾನೆ. ಈ ಕಾಯಿಲೆ ಬಿಡಿಸುವುದರಲ್ಲಿ ಆಧುನಿಕ ವೈದ್ಯಕೀಯ ಪ್ರಪಂಚ ಸೋತಿರುವುದು ಕಾಣಬಹುದು. 'ಇರುಳಿಗರು ತಮ್ಮ ಮೇಲೆ ದೆವ್ವ ಬಂದಿದೆ ಎಂದರೆ ಭಯ ಪಡದೆ ಹಿರಿಯ ಆಗಮನವಾಗಿದೆ ಅಥವಾ ತಮ್ಮ ಮೇಲೆ ಪ್ರೀತಿ ಹೆಚ್ಚಾಗಿರುವವರು ಬಂದಿರುತ್ತಾರೆಂದು ತಿಳಿದುಕೊಂಡು ಅವರಿಗೆ ವಿಧವಿಧ ತಿಂಡಿ ತಿನಿಸುಗಳನ್ನು ಮಾಡಿ ತಿನಿಸಿ ಕಾಯಿಲೆ ನಿವಾರಿಸಿಕೊಳ್ಳುತ್ತಾರೆ.

ಮಾನವನಿಗೆ ತನ್ನ ಬಯಕೆ ಈಡೇರದೆ ಇದ್ದರೆ ಅವನ ಮನಸ್ಸು ಈ ರೀತಿಯ ದೆವ್ವ ಪೀಡೆಯ ಮೊರೆಹೋಗುತ್ತದೆ ಎಂದು ಮನೋವಿಜ್ಞಾನಿಗಳು ಹೇಳುತ್ತಾರೆ. ಇದನ್ನು ಬುಡಕಟ್ಟುಗಳು ಮೊದಲೇ ತಿಳಿದುಕೊಂಡು ಬಯಕೆಯನ್ನು ಈಡೇರಿಸಿ ಸಮಸ್ಯೆ ಪರಿಹರಿಸಿಕೊಳ್ಳುವುದನ್ನು ಕಾಣಬಹುದು. ಇದನ್ನು ಇರುಳಿಗರು ಚೆನ್ನಾಗಿ ಅರಿತುಕೊಂಡಿದ್ದಾರೆ. ಆದ್ದರಿಂದಲೇ ಇಂತಹ

ಕಾಯಿಲೆ ಬಂದವರಿಗೆ ಕಷ್ಟವನ್ನು ಕೊಡದೆ ಚಂದದ ಅಡುಗೆ ಮಾಡಿ ಸಂತೃಪ್ತಿಗೊಳಿಸಿ ಬಗೆಹರಿಸಿಕೊಳ್ಳುತ್ತಾರೆ.

೪.೨. ಹುಟ್ಟಿನ ಸಂದರ್ಭದಲ್ಲಿನ ಆಚರಣೆಗಳು

ಇರುಳಿಗರು ಕಾಡುವಾಸಿಗಳಾದ್ದರಿಂದ ಇವರ ವಾಸ ಇಂದಿಗೂ ಕಾಡೇ ಆಗಿದೆ. ಸದಾಕಾಲ ಬೇರೆ ಸಮುದಾಯದಿಂದ ದೂರವಿರಲು ಇಚ್ಛಿಸುತ್ತಾರೆ. ತಮ್ಮ ತಮ್ಮವರ ಜೊತೆ ಮಾತ್ರ ಬಾಳಲು ಅಪೇಕ್ಷಿಸುವ ಸಮುದಾಯವಾಗಿವೆ. ತಮ್ಮದೇ ಆದ ಕಟ್ಟುಪಾಡು, ರೀತಿ ರಿವಾಜುಗಳ ಚೌಕಟ್ಟನ್ನು ಹಾಕಿಕೊಂಡು ಸ್ವತಂತ್ರವಾಗಿ ಕುಲಕಟ್ಟಿಗೆ ಬದ್ಧರಾಗಿ ಬದುಕುತ್ತಾರೆ. ಪ್ರಕೃತಿಯೊಂದಿಗೆ ಇವರ ಹೊಂದಾಣಿಕೆಯು ಹುಟ್ಟಿನಿಂದ ಸಾಯುವವರೆಗೂ ಮುಂದುವರಿಯುತ್ತವೆ. ಇವರಲ್ಲಿ ಗರ್ಭಿಣಿಯಾದ ಹೆಣ್ಣನ್ನು ಸಹಜವಾಗಿ ಎಲ್ಲಾ ಮಹಿಳೆಯರಂತೆ ಪರಿಗಣಿಸುತ್ತಾರೆ. ಸದಾಕಾಲ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಂಡಿರುವಂತೆಯೇ ಹೇಳುತ್ತಾರೆ. ಸೀಮಂತ ತರಹದ ಯಾವ ಆಚರಣೆಗಳು ಕಂಡುಬರುವುದಿಲ್ಲ. ಒಂಬತ್ತು ತಿಂಗಳು ಆದಮೇಲೆ ತಾಯಿ ಮನೆಯವರು ಗಂಡನ ಮನೆಗೆ ಬಂದು ಮಗಳನ್ನು ಕರೆದುಕೊಂಡು ಹೋಗುತ್ತಾರೆ. ಬರುವಾಗ ಐದು ಜನ ಅಥವಾ ಏಳು ಜನ ಬರಬೇಕೆಂಬ ಪ್ರತೀತಿ ಇದೆ. ಗರ್ಭಿಣಿ ಹೆಂಗಸಿಗೆ ಹೊಸ ಸೀರೆ, ಜಾಕೇಟ್ ತೆಗೆದುಕೊಂಡು ಗರ್ಭಿಣಿಯನ್ನು ಕರೆದುಕೊಂಡು ಬರಲು ಹೋಗುತ್ತಾರೆ. ಸಂಜೆಯಾಗುವುದರೊಳಗಾಗಿ ಮಗಳ ಮನೆ ತಲುಪಿ ರಾತ್ರಿ ಮಗಳ ಮನೆಯಲ್ಲಿ ತಯಾರಿಸಿದ ಅನ್ನ ಪಾಯಿಸ, ಒಬ್ಬಟ್ಟು ಊಟ ಮಾಡಿಕೊಂಡು, ಬೆಳಿಗ್ಗೆ ಮುಂಜಾನೆ ಎದ್ದು ತಮ್ಮ ಮಗಳನ್ನು ಮನೆಗೆ ಕರೆದುಕೊಂಡು ಬರುತ್ತಾರೆ. ಇರುಳಿಗರಲ್ಲಿ ತುಂಬ ಕಡೆ ಗಂಡನ ಮನೆಯಲ್ಲಿ ಬಾಣಂತನ ಮಾಡುವುದನ್ನು ಕಾಣುತ್ತೇವೆ. ಮನೆಗೆ ಬಂದ ಗರ್ಭಿಣಿಯನ್ನು ಮನೆಯ ಬಾಗಿಲಿನಲ್ಲಿ ನಿಲ್ಲಿಸಿ, ಮೂಲೆ ಕಸ, ಸುಣ್ಣ, ಮೆಣಸಿನಕಾಯಿ, ಅರಿಶಿಣ ಮತ್ತು ನೀರು ಎಲ್ಲವನ್ನು ಕಲಸಿ ರತ್ನದ ನೀರನ್ನು ಸಿದ್ಧಪಡಿಸಿ ಗರ್ಭಿಣಿಯ ಮುಖಕ್ಕೆ ಇಳಿ ತೆಗೆದು ಬಾಗಿಲಿಗೆ ಅಡ್ಡಲಾಗಿ ಚೆಲ್ಲಿ ಅದನ್ನು ದಾಟಿಕೊಂಡು ಒಳಗೆ ಬರುವಂತೆ ಹೇಳುತ್ತಾರೆ. ಇದನ್ನು ದಾಟಿ ಮನೆಯ ಒಳಗೆ ಗರ್ಭಿಣಿ ಬರಬೇಕು.

ಗರ್ಭಿಣಿಗೆ ಒಂದು ಕಡೆ ಕುಳಿತುಕೊಳ್ಳಲು ಬಿಡದೆ ಸಣ್ಣಪುಟ್ಟ ಕೆಲಸವನ್ನು ಮಾಡಿಕೊಂಡಿರುವಂತೆ ಹೇಳುತ್ತಲೇ ಇರುತ್ತಾರೆ. ಇಲ್ಲವಾದರೆ ಮಗುವಿನ ಜನನದ ಸಂದರ್ಭದಲ್ಲಿ ಕಷ್ಟವಾಗುತ್ತದೆ. ಸಣ್ಣಪುಟ್ಟ ಕೆಲಸ ಮಾಡಿದರೆ ಸರಾಗವಾಗಿ ಆಗುತ್ತದೆ ಎಂದು ನಂಬಿಕೊಂಡಿದ್ದಾರೆ. ಪ್ರತಿದಿನ ಎಲೆ, ಅಡಿಕೆ, ಸಿದ್ಧ ಮಣ್ಣು ಉಂಡೆ (ಮಣ್ಣನ್ನು ಬೆಂಕಿಯಿಂದ ಬೇಯಿಸಿ ತಯಾರಿಸಿರುತ್ತಾರೆ) ತಿನ್ನಿಸುತ್ತಾರೆ. ಹುಟ್ಟುವ ಮಗು ಕೆಂಪಾಗಿ ಹುಟ್ಟಲಿ ಎಂದು ಸಿದ್ಧಮಣ್ಣು ಉಂಡೆ ತಿನ್ನಿಸುತ್ತಾರೆ. ಗಂಡ ಆಗಾಗ ಬಂದು ಗರ್ಭಿಣಿಯ ಇಷ್ಟವಾದ ಬಯಕೆಗಳನ್ನು ಈಡೇರಿಸಿ ಹೋಗುತ್ತಾನೆ. ಗರ್ಭಿಣಿ ಬಯಕೆಯನ್ನು ಈಡೇರಿಸಿಯೇ ತೀರುವುದು ಇರುಳಿಗರಲ್ಲಿ ಕಾಣುತ್ತೇವೆ.

ಗಂಡ ಬರುವಾಗ ಬ್ಯಾಲದಕಾಯಿ, ಮಾವಿನಕಾಯಿ, ಕಾಡುನೆಲ್ಲಿಕಾಯಿ, ಹುಣಸೆಕಾಯಿಯನ್ನು ತಂದು ಕೊಡುತ್ತಾನೆ. ಇವುಗಳೆಲ್ಲವನ್ನು ಚೆಚ್ಚಿ ಚಟ್ನಿ ಮಾಡಿ ಗರ್ಭಿಣಿಗೆ ಕೊಡುತ್ತಾರೆ. ಗರ್ಭಿಣಿಗೆ ಹೊಟ್ಟೆನೋವು ಬಂದು ಪ್ರಹಸನ ಉಂಟಾದರೆ ಸಮುದಾಯದರವರಲ್ಲಿನ ಸೂಲಗಿತ್ತಿಯನ್ನು ಮನೆಗೆ ಕರೆದುಕೊಂಡು ಬಂದು ಮನೆಯ ಗಂಡಸರೆಲ್ಲರೂ ಹೊರಗೆ ಹೋಗುತ್ತಾರೆ. ಸೂಲಗಿತ್ತಿ ಮನೆಯ ತೀರು ಅಥವಾ ಗಳಕ್ಕೆ ಒಂದು ನಿಲುವಾದ ಹಗ್ಗವನ್ನು ಕಟ್ಟಿ ಅದನ್ನು ಗರ್ಭಿಣಿ ಹಿಡಿದು ನಿಲ್ಲುವಂತೆ ಸೂಚಿಸುತ್ತಾಳೆ. ಸದಾ ಅತ್ತಿಂದಿತ್ತ ಓಡಾಡಿಕೊಂಡಿರಬೇಕು. ಯಾವುದೇ ಕಾರಣಕ್ಕೂ ಕೂರುವುದಕ್ಕೆ ಅವಕಾಶ ಕೊಡುವುದಿಲ್ಲ. ಹೀಗೆ ಮಾಡುತ್ತಲೇ ಮಗು ಬರುವುದು ಗೊತ್ತಾದ ಕೂಡಲೇ ಕೆಳಗೆ ಮಲಗಿಸಿ ಪ್ರಸೂತಿ ಕಾರ್ಯಮಾಡಿಸುತ್ತಾಳೆ.

ಮಗು ಹೊರಗೆ ಬಂದ ಮೇಲೆ ಹೊಸ ಅರೆಕುಡ್ಲುನಿಂದ ಮಗುವಿನ ಹೊಕ್ಕಲು ಬಳ್ಳಿಯನ್ನು ಕತ್ತರಿಸಿ ಗಂಟು ಹಾಕುತ್ತಾಳೆ. ಮಗುವಿನ ಬಾಯಿಯಲ್ಲಿ ಬೆರಳಾಕಿ ಬಾಯಲ್ಲಿರುವ ಲೋಳೆಯನ್ನು ತೆಗೆದು ಹಾಕುತ್ತಾಳೆ. ಹಾಗೆಯೇ ಮೂಗಿನಿಂದಲೂ ತೆಗೆಯುತ್ತಾಳೆ. ನಂತರ ಮಗುವಿನ ಮೂಗು ಮತ್ತು ಹಣೆಯನ್ನು ಸಮನಾಕಾರದಲ್ಲಿರಲು ಬಿತ್ತುವುದು ಮತ್ತು ಎತ್ತು ಕಾರ್ಯ ಮಾಡುತ್ತಾಳೆ. ಹರಳೆಣ್ಣೆಯ ದೀಪದಿಂದ ಸೂಜಿಯನ್ನು ಚೆನ್ನಾಗಿ ಕಾಯಿಸಿ ಹೊಕ್ಕಳುಸುತ್ತ ಚೌಕಾಕಾರದಲ್ಲಿ ಬರೆ ಹಾಕುತ್ತಾಳೆ. ಹಾಗೆಯೇ ಕಿಬ್ಬೊಟ್ಟೆ, ಎದೆ ಮತ್ತು ಮರ್ಮಾಂಗದ ಮೇಲೆ ಕತ್ತರಿಯಾಕಾರದಲ್ಲಿ ಬರೆಹಾಕುತ್ತಾಳೆ. ಕೈಯಣೆ(ಹರಳೆಣ್ಣೆ)ಯನ್ನು ಬೆರಳಲ್ಲಿ ಅದ್ದಿಕೊಂಡು ಮಗುವಿನ ಬಾಯಿಗಿಟ್ಟು ಚೀಪಿಸುತ್ತಾಳೆ. ಎರಡರಿಂದ ಮೂರು ದಿನದವರೆಗೂ ತಾಯಿ ಹಾಲನ್ನು ಕೊಡುವುದಿಲ್ಲ, ಗಿಣ್ಣು ಹಾಲು ಕುಡಿದರೆ ಮಗುವಿಗೆ ಮಂದವಾಗುತ್ತದೆ ಎಂದು ನಂಬಿದ್ದಾರೆ. ಜೊತೆಗೆ ಬಿಸಿನೀರಿನಲ್ಲಿ ಬಟ್ಟೆಯನ್ನು ಒದ್ದೆಮಾಡಿ ಮಗುವಿನ ಮೈ ಒರೆಸುತ್ತಾರೆ. ಬಾಣಂತಿ ಮನೆಯಲ್ಲಿ ಈ ಕೆಳಕಂಡ ಹಲವಾರು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಹೊರಗಡೆಯಿಂದ ಓಡಾಡಿ ಬಂದವರು ಮನೆಗೆ ಹೋಗುವ ಮೊದಲು ಹಸುವಿನ ಸೆಗಣಿಯನ್ನು ತುಳಿದು ಒಳಗೆ ಬರಬೇಕು. ಮಗು ಮತ್ತು ಬಾಣಂತಿಯ ಮುಂದೆ ಬಿರುಸಾಗಿ ಓಡಾಡಬಾರದು. ಮಾಂಸ ಮಡ್ಡಿ ನಿಷೇದಿತವಾಗಿರುತ್ತದೆ. ಈ ರೀತಿಯ ಕೆಲವು ನಿರ್ಬಂಧಗಳನ್ನು ಬಾಣಂತಿಯ ಮನೆಯಲ್ಲಿ ಹಾಕಿರುತ್ತಾರೆ. ಮಗು ಹುಟ್ಟಿದ ಕೂಡಲೇ ಕಾಡಂಕಾಲೆ ಸೊಪ್ಪನ್ನು ತಂದು ಮನೆಯಲ್ಲಿ ಇಡುತ್ತಾರೆ. ಹುಟ್ಟಿದ ಮೂರು ದಿನಗಳವರೆಗೂ ತಾಯಿ ಹಾಲು ಕುಡಿಸುವುದಿಲ್ಲ. ಕೇವಲ ಹರಳೆಣ್ಣೆಯನ್ನು ಚೀಪಿಸುತ್ತಾರೆ. ಏಕೆಂದರೆ ಗಿಣ್ಣಾಲು ಕುಡಿಸಿದರೆ ಮಗುವಿಗೆ ಮಂದವಾಗಿ ಜ್ವರ ಬರುತ್ತವೆ ಎಂದು ಭಯಪಡುತ್ತಾರೆ.

ಮಗು ಹುಟ್ಟಿದ ಮೂರು ಅಥವಾ ಐದನೇ ದಿನಕ್ಕೆ ಬೇವಿನಸೊಪ್ಪು ಮತ್ತು ಅರಿಶಿಣವನ್ನು ನುಣ್ಣಗೆ ಅರೆದು ಬಿಸಿ ಬಿಸಿ ನೀರಿನಿಂದ ತಾಯಿ ಮತ್ತು ಮಗುವಿಗೆ ಸ್ನಾನ ಮಾಡಿಸುತ್ತಾರೆ.

ಮಗುವಿಗೆ ಸ್ನಾನ ಮಾಡಿಸಲು ಅನುಭವವಿರುವವರನ್ನೇ ಕರೆತರಲಾಗುತ್ತದೆ. ಏಕೆಂದರೆ ಮಗುವಿನ ಬಾಯಿ ಮತ್ತು ಮೂಗಿಗೆ ನೀರು ಹೋಗದಂತೆ ಸ್ನಾನ ಮಾಡಿಸಬೇಕು. ಇದರಿಂದ ಸ್ನಾನ ಮಾಡಿಸುವಾಗ ಹಣೆಯ ಭಾಗವನ್ನು ಕೈಯಿಂದ ಹಿಡಿದುಕೊಂಡು ತಲೆಯ ಮೇಲೆ ಹಾಕಿದ ನೀರು ಮುಖಕ್ಕೆ ಹೋಗದಂತೆ ನೋಡಿಕೊಳ್ಳುತ್ತಾರೆ. ಸ್ನಾನ ಮಾಡಿಸುವ ಪ್ರತಿಬಾರಿಯು ಮಗುವಿನ ಮೂಗು ಮತ್ತು ಹಣೆಯನ್ನು ಒತ್ತುವ ಮತ್ತು ಎತ್ತುವ ಕೆಲಸ ಮಾಡುತ್ತಾರೆ. ಆರು ದಿನಗಳ ನಂತರ ಮಗುವನ್ನು ಮೊರದಿಂದ ತೊಟ್ಟಿಲಿಗೆ ಹಾಕುತ್ತಾರೆ. ತೊಟ್ಟಿಲಿಗೆ ಹಾಕುವಾಗ ತಲೆಯ ಕೆಳಭಾಗಕ್ಕೆ ಮರಳಿನಿಂದ ದಿಂಬು ಮಾಡಿ ಇಡುತ್ತಾರೆ. ಕಾರಣ ಕೇಳಿದರೆ ತಲೆ ಸವೆಯಬೇಕು ಎನ್ನುತ್ತಾರೆ.

ಬಾಣಂತಿಗೆ ಮಗು ಹುಟ್ಟಿದ ಐದು ದಿನಕ್ಕೆ ಸ್ನಾನ ಮಾಡಿಸುತ್ತಾರೆ. ಸ್ನಾನದ ಹಳಗೆಗೆ ಬೆಂಕಿ ಹಾಕಿ, ಮಗ್ಗಾರೆ ಸೌದೆಯಿಂದ ನೀರನ್ನು ಗಣಿಗಣಿಯಾಗಿ ಕಾಯಿಸಿ ಅದಕ್ಕೆ ಕಿರಿಳಿಕಾಯಿ, ನಿಂಬೆಕಾಯಿ, ಕಹಿಬೇವು, ಕಲಕಿ ಮತ್ತು ಚೌಡಂಗಿ ಸೊಪ್ಪನ್ನು ನೀರಿಗೆ ಹಾಕಿ ಸೆಕೆ ನೀರು ತಯಾರಿಸುತ್ತಾರೆ. ಇದನ್ನು ಬಾಣಂತಿಗೆ 'ಇಳಿಯಾ ಮುಳಿಯಾ' ಸ್ನಾನ ಮಾಡಿಸುತ್ತಾರೆ. ಮೂರು ದಿನಗಳಾದ ಮೇಲೆ ಬಿಸಿ ಬಿಸಿ ರಾಗಿ ಮುದ್ದೆ ಮಾಡಿ ನಸುಕಾರದ ಜೊತೆಗೆ ಬೆಳೆ ಉಪ್ಪುಸಾರು ಕೊಡುತ್ತಾರೆ. ಯಾವುದೇ ರೀತಿಯ ಎಣ್ಣೆ ಪದಾರ್ಥವನ್ನು ತಿನ್ನಿಸುವುದಿಲ್ಲ. ತಿಳಿಸಾರು, ಮೆಣಸಿನಕಾಯಿ, ಬೆಳ್ಳುಳ್ಳಿ, ಹುಣಸೆಕಾಯಿ, ಕರಿ ಮೆಣಸಿನಕಾಳು, ಜೀರಿಗೆ ಹಾಕಿ ಒಣ ಮೆಣಸಿನಕಾಯಿಯ ಕಾರ ಅರೆದು ಬಿಸಿ ಬಿಸಿ ಮುದ್ದೆಗೆ ಸೇರಿಸಿಕೊಡುತ್ತಾರೆ. ಮಗುವಿಗೆ ಅಜೀರ್ಣವಾಗುತ್ತದೆ ಎಂದು ಯಾವುದೇ ಸೊಪ್ಪು ತರಕಾರಿಯನ್ನು ಕೊಡುವುದಿಲ್ಲ. ಅನ್ನ ಮಾಡಿ ಅದಕ್ಕೆ ಹುಚ್ಚೆಳ್ಳೆಣ್ಣೆಯನ್ನು ಹಾಕಿಕೊಡುತ್ತಾರೆ. ಬೇಕೆಂದರೆ ಸ್ವಲ್ಪ ಮೆಣಸಿನ ಸಾಂಬಾರು ಮಾಡಿಕೊಡುತ್ತಾರೆ. ದಿನ ತುಂಬುವವರೆಗೂ ಬಾಣಂತಿಗೆ ಹೊಟ್ಟೆ ತುಂಬ ಊಟ ಕೊಡುವುದಿಲ್ಲ. ಇದರ ಮಧ್ಯೆ ಮಗುವಿಗೆ ಸೀತ ನೆಗಡಿ, ಕೆಮ್ಮು, ಜ್ವರ ಇತ್ಯಾದಿ ಯಾವುದಾದರೂ ಸಮಸ್ಯೆ ಕಾಣಿಸಿಕೊಂಡರೆ ತಾಯಿ ಅನೇಕ ಪಥ್ಯ ಇರಬೇಕಾಗುತ್ತದೆ.

ಮಗು ಹುಟ್ಟಿದಾಗಿನಿಂದ ಐದು ಅಥವಾ ಏಳು ದಿನಗಳವರೆಗೆ ಮನೆಯಲ್ಲಿ ಸೂತಕವಾಗಿರುತ್ತದೆ. ಇವರು ಯಾರ ಮನೆಗೂ ಹೋಗುವ ಹಾಗಿಲ್ಲ. ಹಾಗೆಯೇ ಇವರ ಮನೆಗೆ ಯಾರೂ ಬರುವಂತಿಲ್ಲ. ಐದನೇ ದಿನಕ್ಕೆ ಅಥವಾ ಏಳನೇ ದಿನಕ್ಕೆ ಸೂತಕ ಕಳೆದುಕೊಳ್ಳಲು ಆಚರಣೆ ಮಾಡುತ್ತಾರೆ. ಇದನ್ನು "ಮಡಿಕೆ ಇಕ್ಕುವುದು, ಸೂತಕ ತೆಗೆಯುವುದು" ಎಂದು ಕರೆಯುತ್ತಾರೆ. ಮನೆಯಲ್ಲಿನ ಹಳೆಯ ಮಡಿಕೆಗಳನ್ನು ಹಾಗೂ ಇಲ್ಲಿಯತನಕ ಬಳಸುತ್ತಿದ್ದ ಎಲ್ಲಾ ಮಡಿಕೆಗಳನ್ನು ತೆಗೆದು ಹೊರಗಡೆ ಕಾಳು ಕಟ್ಟಿ ಹಾಕಿಕೊಳ್ಳಲು ಇಟ್ಟುಕೊಳ್ಳುತ್ತಾರೆ. ಹೊಸ ಹೊಸ ಮಡಿಕೆಗಳನ್ನು ಅಡುಗೆ ಮಾಡಲು, ನೀರು ಕಾಯಿಸಿಕೊಳ್ಳಲು ಬಳಸುತ್ತಾರೆ. ಇಡೀ ಮನೆಯನ್ನು ಸ್ವಚ್ಛಗೊಳಿಸಿ ಹಸುವಿನ ಸೆಗಣಿಯಿಂದ ಮನೆಯನ್ನು ಸಾರಿಸಿ ರಂಗೋಲಿ ಹಾಕುತ್ತಾರೆ. ರಾತ್ರಿಯಲ್ಲಿ ಅನ್ನ

ಪಾಯಿಸ ಮಾಡಿ ದಾಸಯ್ಯನ ಒಕ್ಕಲಾದರೆ ದಾಸಪ್ಪನನ್ನು ಮಾದಪ್ಪನ ಒಕ್ಕಲಾದರೆ ಗುಡ್ಡರನ್ನು ಕರೆಸಿ ದೇವರೊಡ್ಡಿಸುತ್ತಾರೆ. ನಂತರ ಸಮುದಾಯದವರೆಲ್ಲರನ್ನು ಕರೆದು ಊಟ ಹಾಕಿಸುತ್ತಾರೆ.

ಇದೇ ದಿನವೇ ಮಗುವಿಗೆ ಹೆಸರನ್ನು ಇಡುವ ಕಾರ್ಯಕ್ರಮ ನಡೆಯುತ್ತದೆ. ಕುಲದ ಹಿರಿಯರು ನಾಡಗೌಡ, ಕಟ್ಟುಗೌಡ, ಕೋಲುಕಾರಾದಿಯಾಗಿ ಬಂದು ಮಗುವಿಗೆ ಅವರ ಕುಟುಂಬದ ದೇವರು, ಹಿರಿಯರ ಹೆಸರುಗಳನ್ನು ಇಡುತ್ತಾರೆ. ಇವರಿಡುವ ಹೆಸರುಗಳು ಆ ಸಮುದಾಯದ ಅಥವಾ ಆ ಕುಟುಂಬದ ಚರಿತ್ರೆಯನ್ನು ಸೂಚಿಸುತ್ತಿರುತ್ತದೆ. ಇರುಳಿಗರಲ್ಲಿ ಕಂಡುಬರುವ ಪ್ರಮುಖ ಹೆಸರುಗಳೆಂದರೆ ಯಂಕ್ಟ, ಯಂಕ್ಟಿ ಎಳೆಯ ಬರಿಯ, ಹಲಗ, ಹಲಗಮ್ಮ ಬರಿಯಪ್ಪ, ಮಾಸ್ತಯ್ಯ, ಮಾಸ್ತಮ್ಮ, ದೊಳ್ಳ, ದೊಡ್ಡದೊಳ್ಳಯ್ಯ, ಚಿಕ್ಕದೊಳ್ಳಯ್ಯ, ಬೈರಾ, ಭಂಗಯ್ಯ ನಾಗ, ಶಿವ, ಶಿವಮಾದ, ಶಿವನಂಕರ, ಕುನ್ನ, ಮೋಟ, ನವಣ, ಮಾರನಾಯ್ಕ, ತಿಮ್ಮನಾಯ್ಕ, ಎಳಿನಾಯ್ಕ, ದಾಸನಾಯ್ಕ, ದ್ಯಾವರಾಳಿ, ಜವಟಿ, ಕಾರಯ್ಯ, ವೀರಮಾಸ್ತಿ, ಮುನಿಂಗ, ಮುನಿಯ, ಚಾಮುಂಡಿ, ಕಬ್ಬಾಳ, ಕಬ್ಬಾಳಿ ಮುಂತಾದವುಗಳು.

ನಾಮಕರಣ ಸಂದರ್ಭದಲ್ಲಿನ ಆಚರಣೆಗಳು

ಇರುಳಿಗರಲ್ಲಿ ತೊಟ್ಟಿಲು ಶಾಸ್ತ್ರವನ್ನು ಮಡಿಕೆ ಇಕ್ಕುವ ದಿನವೇ ಮಾಡಲಾಗುತ್ತದೆ. ಹೆಸರಿಟ್ಟ ಮೇಲೆ ಮಗುವನ್ನು ತಾಯಿಯು ತೊಡೆಯ ಮೇಲೆ ಹಾಕಿಕೊಂಡಿರುತ್ತಾಳೆ. ಮೂರು ಜನ ಮುತ್ತೈದೆಯರು ಬಂದು ಬಿದಿರಿನ ತೊಟ್ಟಿಲನ್ನು ತಂದು ಅದಕ್ಕೆ ಕಕ್ಕೆ ಹೂ ಅಣ್ಣೆಹೂ, ಕಣಗಲು ಹೂ ಮುಂತಾದವುಗಳನ್ನು ಹಾಕಿ ತೊಟ್ಟಿಲನ್ನು ಸಿಂಗಾರಗೊಳಿಸುತ್ತಾರೆ. ಬಂದಿರುವ ಮುತ್ತೈದೆಯರು ಪೂಜೆ ಮಾಡಿದರೆ ತೊಟ್ಟಿಲುಶಾಸ್ತ್ರ ಮುಗಿಯುತ್ತದೆ. ನಂತರ ಮಗುವನ್ನು ತೊಟ್ಟಿಲಲ್ಲಿ ಮಲಗಿಸುತ್ತಾರೆ. ಮಗು ಬೆಳೆದು ದೊಡ್ಡದಾದ ಮೇಲೆ ಮಗು ಓಡಾಡಿ ಹೊಸ್ತಿಲನ್ನು ದಾಟಿ ಬಿಟ್ಟರೆ ಹೊಸ್ತಿಲು ದಾಟುವ ಶಾಸ್ತ್ರವನ್ನು ಮಾಡುತ್ತಾರೆ.

ಋತುಮತಿ ಸಂದರ್ಭದಲ್ಲಿನ ಆಚರಣೆಗಳು

ಇರುಳಿಗರಲ್ಲಿ ಹೆಣ್ಣು ಮೈನೆರೆದರೆ ಮೊದಲು ಅವಳನ್ನು ಹಿತ್ತಲಿಗೆ ಕರೆದುಕೊಂಡು ಹೋಗಿ ಅರಿಶಿಣದ ನೀರಿನಿಂದ ಸ್ನಾನ ಮಾಡಿಸುತ್ತಾರೆ. ಈ ಕಾರ್ಯಕ್ಕೆ ಮೈನೆರೆಯುವುದು, ಋತಿಮತಿ ಆಗುವುದು, ವೃಶಾಂತೆಯಾಗುವುದು, ದೊಡ್ಡವಳಾದಳು ಎಂಬ ಹೆಸರಿನಿಂದ ಕರೆಯುತ್ತಾರೆ. ಈ ಸಂದರ್ಭದಲ್ಲಿ ದೊಡ್ಡವಳಾದ ಮನೆಯವರು ಸೂತಕಕ್ಕೆ ಒಳಪಡುತ್ತಾರೆ. ಆ ಮನೆಯ ಗಂಡು ಸಂಬಂಧಿಗಳು ಅಂದರೆ ಅಣ್ಣತಮ್ಮಂದಿರು ಎಲ್ಲೇ ಇದ್ದರೂ ಸೂತಕಕ್ಕೆ ಒಳಪಡುತ್ತಾರೆ. ಹುಡುಗಿಯ ಸೋದರಮಾವನಿಗೆ ಹೇಳಿ ಕರೆಸಿ ಅವನಿಂದ ಅಂಕಾಲೆ, ಬೇವು, ಹೊಂಗೆಸೊಪ್ಪನ್ನು ತರಿಸಿ ಗುಡ್ಲ ಹಾಕುತ್ತಾರೆ. ಈ ಗುಡ್ಲನ್ನು ಮನೆಯ ಪಡಶಾಲೆಯಲ್ಲೋ ಅಥವಾ ಮೂಲೆಯಲ್ಲಿಯೋ ಸರ್ವೇಸಾಮಾನ್ಯವಾಗಿ ಹಾಕುತ್ತಾರೆ. ಸೋದರಮಾವ ಗುಡ್ಲು

ಹಾಕಿದ ನಂತರ ಗುಡ್ಲಿನ ಒಳಗಡೆ ಎರಡು ಬಾಳೆಹಣ್ಣನ್ನು ಎಸೆದು ಇಬ್ಬರು ಹುಡುಗರ ಕೈಲಿ ಎತ್ತಿಸಿ ತಿನ್ನಿಸುತ್ತಾರೆ. ನಂತರದ ದಿನಗಳಲ್ಲಿ ಹುಡುಗಿಯ ಒಸಗೆ ಹಾಕುವವರೆಗೂ ಗುಡ್ಲಿನಲ್ಲಿಯೇ ಇರಬೇಕು. ಅವಳಿಗೆ ಪ್ರತಿನಿತ್ಯ ಪೌಷ್ಠಿಕ ಆಹಾರವಾದ ಚಿಗಳಿ, ತಂಬಿಟ್ಟು, ಕೊಬ್ಬರಿ, ಬೆಲ್ಲ, ಸಕ್ಕರೆ ಅಚ್ಚುಗಳು, ಕಲ್ಯಾಣ ಸೇವೆ, ತೆಂಗಿನಕಾಯಿ, ಎಲೆ, ಅಡಿಕೆ ಮುಂತಾದವುಗಳನ್ನು ಪ್ರತಿನಿತ್ಯ ನೀಡುತ್ತಾರೆ. ಇದರ ಜೊತೆಗೆ ಕಾಡಿನಿಂದ ಪುಳ್ಳಣ್ಣು, ಕಾರೆಕಾಯಿ, ಗೊರಣ್ಣು, ನೆಲ್ಲಿಕಾಯಿ ಮುಂತಾದ ಹಣ್ಣುಗಳನ್ನು ತಂದುಕೊಡುತ್ತಾರೆ. ಪ್ರತಿದಿನ ಬಿಸಿ ನೀರಿನಿಂದ ಸ್ನಾನ ಮಾಡಿಸುತ್ತಾರೆ. ಏಕೆಂದರೆ ತಮ್ಮ ದೇಹದಲ್ಲಾದ ರಕ್ತಸ್ರಾವದಿಂದ ಹುಡುಗಿ ಭಯಗೊಂಡಿರುತ್ತಾಳೆ. ಇಂತಹ ಭಯದಿಂದ ಹೊರಗೆ ಬರಲು ಪೂರಕವಾದ ವಾತಾವರಣವನ್ನು ನಿರ್ಮಿಸುತ್ತಾರೆ.

ಆರ್ಥಿಕವಾಗಿ ಸಬಲರಿದ್ದವರು ಹನ್ನೊಂದು ಅಥವಾ ಹದಿನೇಳನೇ ದಿನಕ್ಕೆ ಒಸಗೆ ಹಾಕುವ ಶಾಸ್ತ್ರ ಮಾಡುತ್ತಾರೆ. ಇಲ್ಲವಾದರೂ ಮದುವೆಯ ಹಿಂದಿನ ದಿನ ಒಸಗೆ ಹಾಕುವುದಾಗಿ ಲೆಕ್ಕ ಹಾಕಿಕೊಂಡು ಕೇವಲ ಮಡಿಕೆ ಇಟ್ಟುಕೊಳ್ಳುತ್ತಾರೆ. ಅಂದರೆ ಸೂತಕ ಕಳೆದುಕೊಳ್ಳುತ್ತಾರೆ. ಒಸಗೆ ಹಾಕುವಾಗ ಹುಡುಗಿಗೆ ಸ್ನಾನ ಮಡಿ ಮಾಡಿಸಿ ಹೊಸ ಸೀರೆಯುಡಿಸಿ ಸೋದರಮಾವ ಎತ್ತಿಕೊಂಡು ಒಸಗೆಗೆ ಸಿದ್ಧಪಡಿಸಿರುವ ಜಾಗದಲ್ಲಿ ಕೂರಿಸುತ್ತಾನೆ. ಹುಡುಗಿಯ ಮುಂದೆ ತಂಬಿಟ್ಟು, ಎಳ್ಳುಂಡೆ, ಕೊಬ್ಬರಿ, ಕಲ್ಯಾಣ ಸೇವೆ, ಸಕ್ಕರೆ, ಅಚ್ಚು, ಬೆಲ್ಲ, ಎಲೆ, ಅಡಿಕೆ ಎಲ್ಲವೂ ತಟ್ಟೆಯಲ್ಲಿ ಜೋಡಿಸಿಡುತ್ತಾರೆ. ಮುತ್ತೈದೆಯರು ಬಂದು ಅರಿಶಿಣ, ಕುಂಕುಮ ಇಟ್ಟು, ಹೂ ಮುಡಿಸಿ ಅರಿಶಿಣದ ಅಕ್ಕಿಕಾಳುಗಳನ್ನು ತೊಡೆ ಮತ್ತು ತಲೆಯ ಮೇಲೆ ಹಾಕಿ ಇಳಿತೆಗೆಯುತ್ತಾರೆ. ಇದೇ ರೀತಿಯಲ್ಲಿ ಬಂದಿರುವ ಪ್ರತಿಯೊಬ್ಬರೂ ಮಾಡುತ್ತಾರೆ. ಅತ್ತ ಕಡೆ ಸೋಬಾನೆ ಹಾಡುಗಳನ್ನು ಹಾಡಲಾಗುತ್ತದೆ.

ಒಸಗೆ ಹಾಕದೇ ಇರುವವರು ಕೇವಲ ಮಡಿಕೆ ಇಡುತ್ತಾರೆ. ಅಂದರೆ ಮನೆ ಕೋಣೆಯನ್ನು ಹಸುವಿನ ಸಗಣಿ ಮತ್ತು ಗಂಜಲದಿಂದ ಗುಡಿಸಿ ರಂಗೋಲಿ ಬಿಟ್ಟು ಹಳೆಯ ಮಡಿಕೆಗಳೆಲ್ಲವನ್ನು ಹೊರಗೆ ಹಾಕಿ ಹೊಸ ಮಡಿಕೆಗಳನ್ನು ತಂದು ಅವುಗಳಿಂದ ಅಡುಗೆ ಮಾಡುತ್ತಾರೆ. ದಾಸಪ್ಪನ ಒಕ್ಕಲಾದರೆ ದಾಸಯ್ಯನನ್ನು ಕರೆದು ದೇವರೊಡ್ಡಿಸಿಕೊಳ್ಳುತ್ತಾರೆ. ಯೂಬೂತಿಯವರಾದರೆ ಗುಡ್ಡರನ್ನು ಕರೆದು ಸೂತಕ ಕಳೆದುಕೊಳ್ಳುತ್ತಾರೆ. ಬಂದ ಪೂಜಾರಿಗಳು ತಮ್ಮ ಚೀಲದಲ್ಲಿ ದೇವರ ಮೂರ್ತಿ, ವಿಗ್ರಹಗಳನ್ನು ರಾಗಿಯ ಹಸೆಯ ಮೇಲೆ ಅದರ ಮೇಲೆ ಹೊಸ ಬಟ್ಟೆಯನ್ನು ಹಾಸಿ ಅದರ ಮೇಲೆ ತಂದಿರುವ ದೇವರುಗಳನ್ನು ಇಟ್ಟು ಪೂಜೆ ಮಾಡಿ ಮನೆಗೆಲ್ಲ ತೀರ್ಥ ಹಾಕುತ್ತಾರೆ. ಈ ತೀರ್ಥವನ್ನು ಸೂತಕದ ಪ್ರತಿ ಮನೆಗೂ ಹಾಕಿದ ಮೇಲೆಯೇ ಸೂತಕ ಕಳೆದುಹೋಯಿತು ಎಂದು ನಂಬಿಕೊಳ್ಳುತ್ತಾರೆ. ಈ ಸೂತಕವನ್ನು ಅತ್ಯಂತ ಕೆಟ್ಟ ಸೂತಕ ಎಂದೇ ಇರುಳಿಗರು ಭಾವಿಸಿಕೊಂಡಿದ್ದಾರೆ. ಈ ಸಂದರ್ಭದಲ್ಲಿ

ಸೂತಕದ ಮನೆಯವರು ಇನ್ನೊಬ್ಬರ ಮನೆಗೆ ಹೋಗುವುದಾಗಲಿ ಅಥವಾ ಬೇರೆಯವರೂ ಈ ಮನೆಗೆ ಬರುವುದಾಗಲಿ ಮಾಡುವುದಿಲ್ಲ.

ಒಸಗೆಯ ಸಂದರ್ಭದಲ್ಲಿ ಹಾಡುವ ಸೋಬಾನೆ ಹಾಡಿನ ಒಂದು ಪದ ಈ ಕೆಳಕಂಡಂತಿದೆ.

ಯಾವಾಗ ಮೈನೆರೆದೆ ಅತಿರೆಂಬೆ
ಅರಿಶಿಣ ಕಾಲಾಗೆ ಯಾವಾಗ ಮೆನೆರೆದೆ
ದೀಪವಳಿಗೆ ಹೊಂಬಾಳೆ ಒಡೆಯ ತತವೀಗೆ ||
ನಿಂಬೆ ಗಿಡದಾಡೆ ರೆಂಬೆ ಮೈನೆರೆದಾಳೆ
ನಿಂಬೇಯ ಮರವೇ ಚಿಗಳೀಯ | ತಂಬಿಟ್ಟನುಂಡೆ
ಬಾಲೇಗೆ ಮಡುಲುಗಿಡುದಾವೆ ||
ಬಾಳೆ ಗಿಡುದಡಿ ಬಾಲೆ ಮೈನೆರುದಾಳು
ಬಾಳೆಯ ಮರವೇ ಚಿಗಳೀಯ | ತಂಬಿಟ್ಟಿನುಂಡೆ
ಬಾಲೇಯ ಮಡಲು ಗಿಡುದಾವೂ ||
ಬಾಲೆ ಮೈನೆರೆದೂ ಬಾಗಿಲಾಚೆ ತಳುಗ್ಯಾಳೆ
ಬಾನಿಗೂಡ್ಯಾವೆ ಮಳೆ ಮೋಡ | ಅವರಣ್ಣ
ನೀಲದ ಗುಡಾರ ವೊಡ್ಡಿಸ್ಯಾನೆ ||
ಅತ್ತಿ ಆಲದ ಸೊಪ್ಪು ಮತ್ತೆ ಬೇವಿನಸೊಪ್ಪು
ಅತ್ತೇಯ ಮಗನೇ ತರಬೇಕು | ತಂದ ಅಂಕೋಲೆ ಸೊಪ್ಪು
ಒಪ್ಪುರುಕೆ ಮುಂದೆ ನಿಲಬೇಕು ||
ಉತ್ತುರ ನಾಡೋರಂತೆ ತಾಯೇ ಸ್ವಾದ್ರೂವಂತೆ
ಆನೆಯ ಮ್ಯಾಲೆ ಒಸುಗೆಯಾ | ಏರಿಕೊಂಡು
ಅವುರ್ ತಾಯಮ್ ಮಾಡವಳೆ ಒಸುಗೆಯಾ ||
ನಚ್ಚುಗ್ ನುರೀ ಅಕ್ಕಿ ನುಪ್ಪುಗ್ ಬಾಳೇಹಣ್ಣು
ತಟ್ಟೇಲಿ ಅವೆ ಬಗೆ ಬಗೇ | ಹೆಣ್ಣಮ್ಮ
ಹೆಣ್ಣಾದ ಬಾಲೆ ಮಡುಲೊಡ್ಡೆ ||
ಯಾಲಕ್ಕಿ ಎಳ್ಳು ಗೊನೆಯ ಬಾಳೆಹಣ್ಣು

ಅರುವಾಣುದೊಲವೇ ಬಗೆ ಬಗೇ |ಹೆಣ್ಣಮ್ಮ
ಅರಿಯಾದ ಬಾಲೆ ಮಡುಲೊಡ್ಡೆ ||
ಯಾವಾಗ ಮೈನೆರೆದೆ ಅತಿರಂಬೆ
ಅರಿಶಿಣ ಕಾಲಾಗೆ ಯಾವಾಗ ಮೈನೆರೆದೆ ಅತಿರಂಬೆ
ದೀವಳಿಗೆ ಒಂಬಾಳೆ ಒಡೆಮ ತತವೀಗೆ||[3]

ಸಾವಿನ ಸಂದರ್ಭದಲ್ಲಿನ ಆಚರಣೆಗಳು

ಹುಟ್ಟು-ಸಾವುಗಳು ಮನುಷ್ಯ ಜೀವನದ ಎರಡು ಪ್ರಮುಖವಾದ ಘಟ್ಟಗಳು; ಒಂದು ಅತ್ಯಂತ ಸಂತೋಷವನ್ನು ತಂದುಕೊಟ್ಟರೆ ಮತ್ತೊಂದು ಸಹಿಸಲಾರದ ವೇದನೆಯನ್ನು ತಂದೊಡ್ಡುತ್ತದೆ. ಒಂದನ್ನು ನಮ್ಮ ಇಚ್ಛೆಯಂತೆ ಪಡೆಯಬಹುದು. ಆದರೆ ಸಾವನ್ನು ನಾವು ನಿರೀಕ್ಷಿಸಿದಿದ್ದರೂ ನಮ್ಮನ್ನು ಆವರಿಸುತ್ತದೆ.

ಸಾವು ಎಂಬುದು ಕೇವಲ ಒಂದು ಘಟನೆ ಮಾತ್ರವಲ್ಲ ಅಥವಾ ಮಾಹಿತಿ ಸುದ್ದಿಯಲ್ಲ ಅದು ಮಾನವ ಸಮಾಜದ ಸಮಗ್ರ ಜೀವನದ ಒಂದು ಭಾಗವಾಗಿದೆ. ಹುಟ್ಟು ಎಂಬುವುದನ್ನು ನಾವು ಬೇಕೆಂದರೆ ಬೇಕು, ಬೇಡವೆಂದರೆ ಬೇಡ. ಆದರೆ ಸಾವೆಂಬುವುದು ಬೇಡವೆಂದರೂ ಬರುತ್ತದೆ. ಇಂದಿನ ಆಧುನಿಕ ಡಿಜಿಟಲ್ ಪ್ರಪಂಚದಲ್ಲಿ ಹುಟ್ಟನ್ನು ನಿಲ್ಲಿಸಬಹುದು. ಹುಟ್ಟದಿದ್ದರೂ ಹುಟ್ಟಿಸುವ ತಂತ್ರಜ್ಞಾನವನ್ನು ಕಂಡುಹಿಡಿಯಲಾಗಿದೆ. ಆದರೆ ಸಾವನ್ನು ತಡೆಯುವ ಯಾವ ಸಾಧನವೂ ಇನ್ನೂ ಹುಟ್ಟಿಕೊಂಡಿಲ್ಲ. ಬೇಕೆಂದರೆ ಸಾವನ್ನು ಸ್ವಲ್ಪ ಮುಂದಕ್ಕೆ ತಳ್ಳಬಹುದೇ ವಿನಃ ಸಾವನ್ನು ತಡೆಯಲು ಇಂದಿಗೂ ಸಾಧ್ಯವೇ ಆಗಿಲ್ಲ.

ಈ ಜಗತ್ತಿನಲ್ಲಿ ಹುಟ್ಟಿದ ಪ್ರತಿಯೊಂದು ಜೀವಿಯೂ ಸಾಯಲೇಬೇಕು. ಸತ್ತ ಮೇಲೆ ಮಣ್ಣೆ ಎಂಬುದು ಚಾರುವಾಹಕರ ಅಭಿಪ್ರಾಯ ಆದರೆ ಆದಿವಾಸಿ ಜಗತ್ತು ಈ ಸಾವನ್ನು ಮನುಷ್ಯನ ಕೊನೆ ಎಂದು ಒಪ್ಪಿಕೊಂಡಿಲ್ಲ. ಪ್ರಾಣಿ, ಪಕ್ಷಿ, ಹುಳು, ಹುಪ್ಪಟೆಗಳಾಗಿ ಸತ್ತವ್ಯಕ್ತಿಗಳು ನಮ್ಮನ್ನು ಕಾಯುತ್ತ ಸದಾ ನಮ್ಮ ಜೊತೆಯಲ್ಲಿಯೇ ಇರುತ್ತದೆ ಎಂದು ನಂಬಿಕೊಂಡಿದ್ದಾರೆ. ಆದಿ ಮಾನವನು ತನ್ನ ಮಾತಿನ ಪ್ರತಿಧ್ವನಿ, ನೀರಿನಲ್ಲಿ ಕಾಣುತ್ತಿದ್ದ ಪ್ರತಿಬಿಂಬ, ತನ್ನನ್ನು ಬೆಂಬಿಡದೆ ಹಿಂಬಾಲಿಸುತ್ತಿದ್ದ ನೆರಳುಗಳನ್ನು ಆತ್ಮದ ಪರಿಕಲ್ಪನೆಯಾಗಿ ಗ್ರಹಿಸಿಕೊಂಡನು. ಮನುಷ್ಯ ಸತ್ತ ಮೇಲೆ ದೈಹಿಕವಾಗಿ ಮಾಡುತ್ತಿದ್ದ ಕೆಲಸ ನಿಲ್ಲುತ್ತದೆ. ಆದರೆ ಸತ್ತವ್ಯಕ್ತಿ ತನ್ನ ಕುಟುಂಬ ವರ್ಗದವರಿಗೆ ಮಾನಸಿಕ ಮಾರ್ಗದರ್ಶನಗಳನ್ನು ನೀಡುತ್ತಾನೆ. ಈ ಮಾರ್ಗದರ್ಶನಗಳು ಸಮುದಾಯದ ಒಳಿತಿಗೆ ಅವಶ್ಯಕ ಎಂಬ ಗಾಢವಾದ ನಂಬಿಕೆಯನ್ನು ಹೊಂದಿದ್ದಾರೆ. ಆದ್ದರಿಂದಲೇ ಸತ್ತ ವ್ಯಕ್ತಿಯನ್ನು ಅತ್ಯಂತ ಗೌರವಯುತವಾಗಿ ಅನೇಕ ವಿಧಿ-ವಿಧಾನಗಳ ಮೂಲಕ

ಶವಸಂಸ್ಕಾರವನ್ನು ಮಾಡುತ್ತಾರೆ. ಆದಿವಾಸಿಗಳಲ್ಲಿ ಶವ ಸಂಸ್ಕಾರಗಳು ವಿಶಿಷ್ಟವಾಗಿದ್ದು ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿರುತ್ತವೆ.

ಸತ್ತ ವ್ಯಕ್ತಿಯು ಈ ಹಿಂದೆ ಸತ್ತಿರುವ ತಮ್ಮ ಹಿರಿಯರನ್ನು ಸೇರಿಸಿಕೊಳ್ಳುತ್ತಾನೆ ಎಂಬ ನಂಬಿಕೆ ಇಟ್ಟುಕೊಂಡಿದ್ದರಿಂದ ಇವರಲ್ಲಿ ದುಃಖದ ಭಾವನೆಯ ಜೊತೆಗೆ ನೆಮ್ಮದಿ ಇರುತ್ತದೆ. ಇವರ ಅಂತ್ಯಸಂಸ್ಕಾರವು ಪ್ರಕೃತಿಯೊಡಗಿನ ಸಂಬಂಧವನ್ನು ಎತ್ತಿ ತೋರಿಸುತ್ತಿರುತ್ತದೆ. ಪ್ರಕೃತಿಯೊಡನೆ ಅನಿವಾರ್ಯವಾದ ಸಂಬಂಧವನ್ನು ಹೊಂದಿರುವ ಮಾನವ ತನ್ನ ಹಿತಾಶಕ್ತಿಗಳಿಗಾಗಿ ಅನೇಕ ಕಟ್ಟುಪಾಡುಗಳನ್ನು ಮಾಡಿಕೊಂಡನು.

ಭಾರತದ ಚರಿತ್ರೆಯ ಸಂದರ್ಭದಲ್ಲಿ ಕೇವಲ ಮೇಲ್ವರ್ಗದ ಸಾವಿನ ವಿಧಿ-ವಿಧಾನಗಳನ್ನು ಶ್ರೇಷ್ಠತೆಯಿಂದ ಸಂಗ್ರಹಿಸಿ ಲಿಖಿತರೂಪದಲ್ಲಿ ಪ್ರಚಾರಪಡಿಸಲಾಯಿತು. ಆದರೆ ಕೆಳವರ್ಗದ ಸಾವಿನ ಸಂದರ್ಭದ ಯಾವ ವಿಧಿ-ವಿಧಾನಗಳನ್ನು ಸಂಗ್ರಹಿಸುವ ಗೋಜಿಗೆ ಹೋಗಲಿಲ್ಲ. ಆದ್ದರಿಂದ ಕೆಳವರ್ಗಗಳ ಅಥವಾ ಆದಿವಾಸಿಗಳ ಸಾವಿನ ಸಂದರ್ಭದ ವಿಧಿ-ವಿಧಾನಗಳನ್ನು ಸಂಗ್ರಹಿಸಿಬೇಕಾದ ಅನಿವಾರ್ಯತೆ ಇಂದು ಇದೆ. ಈ ಹಿನ್ನೆಲೆಯಲ್ಲಿ ಇರುಳಿಗ ಬುಡಕಟ್ಟಿನ ಸಾವಿನ ಸಂದರ್ಭದ ಆಚರಣೆಗಳನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಇರುಳಿಗರಲ್ಲಿ ಸತ್ತವ್ಯಕ್ತಿಯನ್ನು ಮನೆಯ ಪಡಶಾಲೆಗೆ ತಂದು ದಕ್ಷಿಣಕ್ಕೆ ತಲೆ ಮಾಡಿ ಉತ್ತರಕ್ಕೆ ಕಾಲು ಮಾಡಿ ಮಲಗಿಸಿ ಕೈಕಾಲುಗಳನ್ನು ಮುರಿಯುತ್ತಾರೆ. ಅಂದರೆ ಎರಡು ಕಾಲುಗಳನ್ನು ಮಡಚಿ ಕೈಗಳನ್ನು ಎದೆ ಮೇಲೆ (ಪದ್ಮಾಸನದಲ್ಲಿ) ಇಡುತ್ತಾರೆ. ಕೋಲುಕಾರ ಸತ್ತ ಸುದ್ಧಿಯನ್ನು ಸುತ್ತಮುತ್ತಲಿನ ಸತ್ತವ್ಯಕ್ತಿಯ ಸಂಬಂಧಿಕರ ಊರುಗಳಿಗೆ ಹೋಗಿ ವಿಷಯ ಮುಟ್ಟಿಸಿ ಬರುತ್ತಾನೆ. ಸತ್ತವ್ಯಕ್ತಿಯ ಮನೆಯ ಮುಂದೆ ಬೆಂಕಿ ಹಾಕಿ ಅದು ಹೊಗೆಯಾಡುವಂತೆ ನೋಡಿಕೊಳ್ಳುತ್ತಾರೆ. ಇದನ್ನು 'ತಲೆಕೊಳ್ಳಿ' ಎಂದು ಕರೆದು ಹೆಣವನ್ನು ಶವಯಾತ್ರೆ ಕೊಂಡೊಯ್ಯು ವಾಗ ತಂದೆಯಾದರೆ ದೊಡ್ಡಮಗ, ತಾಯಿಯಾದರೆ ಚಿಕ್ಕ ಮಗನ ಕೈಯಲ್ಲಿ ತ್ರಿಭುಜ ಬಿದಿರಿನ ತೆಕ್ಕೆ ಮಾಡಿ ಅದನ್ನು ದಾರದಿಂದ ತೂಗಿ ಬಿಟ್ಟು ಅದರ ಮೇಲೆ ಒಂದು ಮಡಿಕೆಯನ್ನಿಟ್ಟು ಅದಕ್ಕೆ ಈ ತಲೆಕೊಳ್ಳಿಯನ್ನು ಹಾಕಿ ಹೆಣದ ಮುಂದೆ ಹಿಡಿದುಕೊಂಡು ಹೋಗುತ್ತಾರೆ.

ಸತ್ತವ್ಯಕ್ತಿಯ ಬಾಯಿಗೆ ವೀಳ್ಯದೆಲೆ ಮತ್ತು ಅಡಿಕೆಯನ್ನು ಜಜ್ಜಿ ಹಾಕುತ್ತಾರೆ. ಹೆಣದ ಪಕ್ಕದಲ್ಲಿ ಸೇರನ್ನು (ರಾಗಿ, ಭತ್ತವನ್ನು ಅಳೆಯುವ ಸಾಧನ) ತಲೆಕೆಳಗಾಗಿಯಿಟ್ಟು ಅದರ ಮೇಲೆ ಸೆಗಣಿಯ ಉಂಡೆ ಮಾಡಿ ಇಟ್ಟು, ಅದರ ಮೇಲೆ ಮಣ್ಣಿನ ಸೊಡರನ್ನು ಇಟ್ಟು ಎಣ್ಣೆಹಾಕಿ ಅದು ಸದಾ ಉರಿಯುವಂತೆ ನೋಡಿಕೊಳ್ಳುತ್ತಾರೆ. ಈ ಸೊಡರು ಹೆಣವನ್ನು ಮಣ್ಣುಮಾಡಿ ಬರುವವರೆಗೂ ಉರಿಯುತ್ತಿರಬೇಕು. ಮಣ್ಣುಮಾಡಿ ಬರುವವರು ಈ ದೀಪವನ್ನು ನೋಡಿಯೇ ತಮ್ಮ ಮನೆಗಳಿಗೆ ತೆರಳುತ್ತಾರೆ.

ಸಂಬಂಧಿಕರಿಗೆಲ್ಲ ಹೇಳಲು ಹೋಗಿದ್ದ ಕೋಲುಕಾರ ಮತ್ತು ಸಂಬಂಧಿಕರೆಲ್ಲ ಬಂದಿರುವುದನ್ನು ಖಾತ್ರಿಪಡಿಸಿಕೊಂಡು ಬಂದನಂತರ ಹೆಣಕ್ಕೆ ಸ್ನಾನ ಮಾಡಿಸಲು ಪ್ರಾರಂಭಿಸುತ್ತಾರೆ. ಮನೆಯ ಪಕ್ಕದಲ್ಲಿ ಒಂದು ಹೊಸ ಒಲೆಯನ್ನೊಡ್ಡಿ ಅದರ ಮೇಲೆ ಮಣ್ಣಿನ ಅಳಗೆಯೋ, ಕಂಚಿನ ಅಥವಾ ಹಿತ್ತಾಳೆ ಹಂಡೆಯನ್ನಿಟ್ಟು ಉಗುರು ಬೆಚ್ಚಗೆ ನೀರನ್ನು ಕಾಯಿಸುತ್ತಾರೆ. ಈ ಸ್ನಾನದ ನೀರನ್ನು ಯಾರು ತುಳಿಯಬಾರದೆಂದು, ಸ್ನಾನ ಮಾಡಿಸಿದ ನೀರು ಗುಂಡಿಗೆ ಹೋಗುವಂತೆ ವ್ಯವಸ್ಥೆ ಮಾಡಿರುತ್ತಾರೆ. ಸ್ನಾನದ ನಂತರ ಆ ಗುಂಡಿಯನ್ನು ಮುಚ್ಚಿಬಿಡುತ್ತಾರೆ.

ಸಂಬಂಧಿಕರೆಲ್ಲರೂ ಬಂದಿದ್ದನ್ನು ಖಚಿತಪಡಿಸಿಕೊಂಡು ಹೆಣವನ್ನು ಸ್ನಾನಕ್ಕೆ ಸಿದ್ಧಪಡಿಸಿರುವ ಜಾಗದಲ್ಲಿ ಕೂರಿಸುತ್ತಾರೆ. ಮೊದಲು ಸೀಗೆಕಾಯಿಯನ್ನು ತಲೆಗೆ ಹಚ್ಚಿ ಅರಿಶಿಣವನ್ನು ಕೈ ಕಾಲು ದೇಹಕ್ಕೆಲ್ಲಾ ತಿಕ್ಕಿ ನೀರು ಹೊಯ್ಯುತ್ತಾರೆ. ಮೊದಲು ಸತ್ತಮನೆಯವರು ಅರಿಶಿಣ ತಿಕ್ಕಿ ನೀರು ಹೊಯ್ದ ನಂತರ ಬಂದಿರುವ ಸಂಬಂಧಿಕರೆಲ್ಲರೂ ಅರಿಶಿಣ ತಿಕ್ಕಿ ಸ್ನಾನ ಮಾಡಿಸುತ್ತಾರೆ.

ಸ್ನಾನ ನಡೆಯುತ್ತಿದ್ದಾಗಲೇ ಮತ್ತೊಂದು ಕಡೆ ಚಟ್ಟ ಸಿದ್ಧಗೊಳ್ಳುತ್ತಿರುತ್ತದೆ. ಆರುಅಡಿ ಉದ್ದದ ಎರಡು ಬಿದಿರಿನ ಬೊಂಬುಗಳನ್ನು ತಂದು ಎರಡರ ಮಧ್ಯೆ ಮೂರು ಅಡಿ ಅಂತರವಿರುವಂತೆ ಇಡುತ್ತಾರೆ. ಈ ಬೊಂಬುಗಳ ಮೇಲೆ ನಾಲ್ಕು ಅಡಿ ಇರುವಂತೆ ಬಿದಿರುಗಳನ್ನು ಸಿಗಿದು ಒಂದೊಂದು ಚೆಕ್ಕೆಗೆ ಅರ್ಧ ಅಡಿ ಇರುವಂತೆ ಬೊಂಬಿನ ಮೇಲೆ ಇಟ್ಟು ಸುತ್ತಿಲಿದಾರ ಅಥವಾ ಕತ್ತಾಳೆ ಬೇರಿನಿಂದ ಕಟ್ಟುತ್ತಾರೆ. ಇದರ ಮೇಲೆ ಆಲೆಸೊಪ್ಪು, ಕಕ್ಕೆಸೊಪ್ಪು ಅಥವಾ ತೆಂಗಿನ ಗರಿಯನ್ನು ಹೆಣೆದು ಹಾಸುತ್ತಾರೆ. ಇಲ್ಲವಾದರೆ ರಾಗಿ ಹುಲ್ಲನ್ನು ಹಾಸಿಬಿಡುತ್ತಾರೆ. ಇದರ ಮೇಲೆ ಬಿಳಿಯ ಬಟ್ಟೆಯನ್ನು ಹಾಕಿ ಅದರ ನಾಲ್ಕು ತುದಿಗಳನ್ನು ಚಟ್ಟಕ್ಕೆ ಕಟ್ಟಿಬಿಡುತ್ತಾರೆ.

ಹೀಗೆ ಸಿದ್ಧಪಡಿಸಿದ ಚಟ್ಟಕ್ಕೆ ನಾಲ್ಕು ಭಾಗದಲ್ಲೂ(ಮೂಲೆಯಲ್ಲಿ) ಎಳನೀರನ್ನು (ತೆಂಗಿನಕಾಯಿ) ಕಟ್ಟುತ್ತಾರೆ. ಇತ್ತ ಕಡೆ ಸ್ನಾನ ಮಾಡಿಸಿದ ಹೆಣವನ್ನು ಒಂದು ಮಣೆಯ ಅದರ ಮೇಲೆ ಕೂರಿಸಿ ಹೆಣಕ್ಕೆ ಹೊಸಬಟ್ಟೆ ವಿಭೂತಿಯನ್ನು ಹಚ್ಚಿ ಸಿಂಗರಿಸುತ್ತಾರೆ. ನಂತರ ಹೆಣದ ಪಕ್ಕದಲ್ಲಿ ಹೆಂಡತಿ ಅಥವಾ ಗಂಡನನ್ನು ಕೂರಿಸಿ ಪೂಜೆಮಾಡುತ್ತಾರೆ. ನಂತರ ಹೆಣವನ್ನು ಚಟ್ಟದ ಮೇಲೆ ಮಲಗಿಸಿ ಹೆಣದ ಮೇಲೆ ಕಕ್ಕೆ ಹೂ, ಚೆಂಡು ಹೂ, ಕಣಗಲ ಹೂ ಹಾಗೂ ಸಂಬಂಧಿಕರೆಲ್ಲರೂ ತಂದಿರುವ ಹೂಗಳನ್ನು ಮುಡಿಸಿದ ಮೇಲೆ ಬಿಳಿಬಟ್ಟೆಯನ್ನು ಹಾಸಿ ಬಿಳಿಯ ಬಟ್ಟೆಯ ಮೇಲೆ ಹಾಕುತ್ತಾರೆ. ಹೂಗಳನ್ನು ಹಾಕಿದ ನಂತರ ಚಟ್ಟಕ್ಕೆ ನಾಲ್ಕು ಜನರು ಹೆಗಲುಕೊಟ್ಟು ಹೆಣ ಉಳಲು ಸಿದ್ಧಪಡಿಸಿರುವ ಜಾಗಕ್ಕೆ ಶವಯಾತ್ರೆ ಆರಂಭವಾಗುತ್ತದೆ. ಹೆಣದ ಮುಂದೆ ತಲೆಕೊಳ್ಳಿ ಹಿಡಿದು ಕಿರಿಮಗ ಅಥವಾ ಹಿರಿಮಗ ಮುಂದೆ ಸಾಗುತ್ತಾನೆ. ಅವನ ತಲೆಯ ಮೇಲೆ ಬಟ್ಟೆ ಹಾಕಿ ಸಂಬಂಧಿಕರಲ್ಲಿ ಯಾರಾದರೊಬ್ಬರು ತಲೆಕೊಳ್ಳಿಯಿಂದ ಒಂದು ಕೊಳ್ಳಿಯನ್ನು ಹಿಡಿದುಕೊಂಡು ತಲೆಕೊಳ್ಳಿ ಹಿಡಿದುಕೊಂಡವನ ಜೊತೆಯಲ್ಲಿ ಹೋಗುತ್ತಾನೆ.

ಹೆಣ ಹೂಳುವ ಜಾಗ ಸಮೀಪಿಸುತ್ತಿದ್ದಂತೆ ಒಂದು ಜಾಗದಲ್ಲಿ ಇಟ್ಟು ಎಲ್ಲರೂ ಒಂದೊಂದು ಕಲ್ಲನ್ನು ಎತ್ತಿಕೊಂಡು ಒಂದು ಕಡೆ ಗುಡ್ಡೆ ಹಾಕುತ್ತಾರೆ. ಈ ಗುಡ್ಡೆಯನ್ನು "ತಲೆಕಲ್ಲು ಗುಡ್ಡೆ" ಎಂದು ಕರೆಯುತ್ತಾರೆ. ಈ ಸಂಪ್ರದಾಯ ಇರುಳಿಗರಲ್ಲಿ ಅತ್ಯಂತ ವಿಶಿಷ್ಟವಾಗಿದೆ. ಇರುಳಿಗರ ಈ ತಲೆಕಲ್ಲುಗುಡ್ಡೆಯೇ ಮುಂದೆ ಸತ್ತ ವ್ಯಕ್ತಿಯ ಸಮಾಧಿಯ ಗುರುತಾಗಿರುತ್ತದೆ. ಮುಂದೆ ಅವರ ಸಂಬಂಧಿಕರು ವರ್ಷಕ್ಕೊಮ್ಮೆ ಪೂಜಿಸುವಾಗ ಈ ತಲೆಕಲ್ಲಿಗೆ ಪೂಜಿಸುತ್ತಾರೆಯೇ ವಿನಃ ಸಮಾಧಿಯ ಬಳಿ ಹೋಗುವುದಿಲ್ಲ. ಈ ತಲೆಕಲ್ಲು ಗುಡ್ಡೆಗೆ ನೀರಾಕಿ ತೊಳೆದು ಕುಂಕುಮ ಅರಿಶಿಣ ಹಚ್ಚಿ ಕಾಯಿ ಒಡೆದು ಪೂಜೆ ಮಾಡುತ್ತಾರೆ. ನಂತರ ಹೆಣವನ್ನು ಮುಂದಕ್ಕೆ ಸಾಗಿಸಲು ಮುಂದಾಗುತ್ತಾರೆ. ಚಟ್ಟಕ್ಕೆ ಹೆಗಲು ಕೊಟ್ಟರು ತಲೆಕಲ್ಲುಗುಡ್ಡೆಯಿಂದ ಹಿಂದಿನವರು ಮುಂದಕ್ಕು ಮುಂದಿನವರು ಹಿಂದಕ್ಕು ಹೆಗಲು ಬದಲಿಸಿಕೊಳ್ಳುತ್ತಾರೆ. ಅದಾಗಲೇ ಅಲ್ಲಿ ಆರು ಉದ್ದ, ಮೂರು ಅಡಿ ಅಗಲದ ಗುಂಡಿ ಸಿದ್ಧವಾಗಿರುತ್ತದೆ. ಗುಂಡಿಯ ದಕ್ಷಿಣ ಭಾಗದಲ್ಲಿ ಕೊವೆ ರೂಪದಲ್ಲಿ ಜಾಗ ಸಿದ್ಧಪಡಿಸಿರುತ್ತಾರೆ. ಸತ್ತ ವ್ಯಕ್ತಿಯ ತಲೆಯ ಭಾಗವನ್ನು ಕೊವೆಯೊಳಗೆ ಸೇರಿಸಿಬಿಡುತ್ತಾರೆ. ತಂದ ಹೆಣವನ್ನು ಗುಂಡಿಯ ಸುತ್ತ ಮೂರು ಸಾರಿ ಸುತ್ತಿಸಿ ಕೆಳಗೆ ಇಡುತ್ತಾರೆ. ನಂತರ ಬಂದ ಎಲ್ಲಾ ಸಂಬಂಧಿಕರು ಶವಕ್ಕೆ ಪೂಜೆ ಮಾಡುತ್ತಾರೆ. ಎಲ್ಲರೂ ಪೂಜೆ ಮಾಡಿದ ನಂತರ ಗುಂಡಿಯ ಒಳಗಡೆ ಕಕ್ಕೆ ಸೊಪ್ಪು ಆಲದ ಸೊಪ್ಪನ್ನು ಹಾಕುತ್ತಾರೆ. ಎಲ್ಲರೂ ಪೂಜೆ ಮಾಡಿದ ನಂತರ ಹೆಣವನ್ನು ಗುಂಡಿಯಲ್ಲಿ ಮಲಗಿಸುತ್ತಾರೆ. ದೇಹದ ಮೇಲೆ ಯಾವ ವಸ್ತ್ರವು ಇಲ್ಲದಂತೆ ಕೊಯ್ದು ಬೆತ್ತಲೆ ಮಾಡುತ್ತಾರೆ. ಹೆಣ ಮಲಗಿಸಿದ ಮೇಲೆ ಮೊದಲು ಸಂಬಂಧಿಕರು ಮಣ್ಣನ್ನು ಮೂರು ಬೊಗಸೆ ಹಾಕುತ್ತಾರೆ. ನಂತರ ನೆರೆದಿರುವ ಎಲ್ಲರೂ ಮೂರುಮೂರು ಬೊಗಸೆ ಮಣ್ಣನ್ನು ಹಾಕುತ್ತಾರೆ. ಸನಿಕೆ ಮತ್ತು ಗುದ್ದಲಿಯ ಸಹಾಯದಿಂದ ಗುಂಡಿ ತುಂಬಿಸಿ ದುವ್ವೆ ಸಿದ್ಧಪಡಿಸುತ್ತಾರೆ. ಇಲ್ಲಿ ಸನಿಕೆಯಿಂದ ಮಣ್ಣು ಎಳೆಯುವವರು ಯಾವುದೇ ಕಾರಣಕ್ಕೂ ಕಾಲಿನ ಸಂದಿಯಿಂದ ಮಣ್ಣನ್ನು ಎಳೆಯದಂತೆ ಎಚ್ಚರಿಕೆ ನೀಡುತ್ತಾರೆ. ಸಮಾಧಿ ಮಾಡಿದ ಮೇಲೆ ಸನಿಕೆ ಮತ್ತು ಗುದ್ದಯ ಕಾವುಗಳನ್ನು ಕಳೆದು ತಲೆಕೆಳಗೆ ಮಾಡಿ ಸಮಾಧಿಯ ಆ ಬದಿಯಿಂದ ಈ ಬದಿಗೆ ಈ ಬದಿಯಿಂದ ಆ ಬದಿಗೆ ಎಸೆಯುತ್ತಾರೆ. ಹೆಣದ ಮೇಲೆ ಹಾಕಿದ್ದ ಎಲ್ಲ ಹೂಗಳನ್ನು ದಿವ್ವೆ ಮೇಲೆ ಹಾಕಿ ಸಿಂಗರಗೊಳಿಸುತ್ತಾರೆ. ಹಿಂದಿರುಗಿ ಬರುವಾಗ ಕೊನೆಯಲ್ಲಿ ಬರುವವನು ಒಂದು ಕೋಳಿಯನ್ನು ದಿವೆಯ ಮೇಲೆ ಎಸೆದು ಮೂರು ಗೆರೆಯನ್ನು ಎಳೆದು ಬರುತ್ತಾನೆ. ಹೀಗೆ ಬರುವಾಗ ಜನರೆಲ್ಲರೂ ನೀರು ಇರುವ ಕಡೆ ಕಾಲು ಮುಖ ತೊಳೆದುಕೊಂಡು ತಲೆಯ ಮೇಲೆ ನೀರು ಹಾಕಿಕೊಂಡು ಸತ್ತಮನೆಯ ದೀಪವನ್ನು ನೋಡಲು ಬರುತ್ತಾರೆ.

ಅದಾಗಲೇ ಸತ್ತವ್ಯಕ್ತಿ ಮಲಗಿಸಿದ ಜಾಗವನ್ನು ಹಸುವಿನ ಸೆಗಣಿಯಿಂದ ಸಾರಿಸಿ ರಂಗೋಲೆ ಹಾಕಿ ದೀಪವನ್ನು ಇಡಲಾಗುತ್ತದೆ. ಬಂದ ಜನರೆಲ್ಲರೂ ತಂದಿರುವ ಹುಲ್ಲು

ಗರಿಕೆಯನ್ನು ದೀಪದ ಮುಂದೆ ಎಸೆದು ಕೈ ಮುಗಿದು ತಮ್ಮ ತಮ್ಮ ಊರಿಗೆ ಹೊರಡುತ್ತಾರೆ. ಸತ್ತ ಸುದ್ದಿಗೆ ಬಂದವರೂ ಯಾರು ಉಳಿದುಕೊಳ್ಳಬಾರದೆಂಬ ನಂಬಿಕೆ ಇವರಲ್ಲಿದೆ. ಆದ್ದರಿಂದ ಯಾರು ಉಳಿದುಕೊಳ್ಳದೆ ಹೊರಟುಹೋಗುತ್ತಾರೆ.

ಇರುಳಿಗರಲ್ಲಿ ಶವಸಂಸ್ಕಾರವು ಹಿಂದೆ ಗುಂಡಿ ಹಾಕುವುದಾಗಲಿ, ಸುಡುವುದಾಗಲಿ ಇರಲಿಲ್ಲ. ವ್ಯಕ್ತಿ ಸತ್ತ ಮೇಲೆ ಕೋಲುಕಾರ ಎಲ್ಲ ಜನರಿಗೆ ತಿಳಿಸಿ ಬರುತ್ತಿದ್ದನು. ನಾಡಗೌಡ, ಕಟ್ಟುಗೌಡ, ಗಡಿಗೌಡರಾಧಿಯಾಗಿ ಎಲ್ಲರೂ ಸತ್ತವ್ಯಕ್ತಿಗೆ ಪೂಜೆ ಪುನಸ್ಕಾರಗಳನ್ನು ಮಾಡಿ ಕಲ್ಲುಸೇವೆ ಮಾಡಲು ತೆಗೆದುಕೊಂಡು ಹೋಗುತ್ತಿದ್ದರು. ಇದನ್ನು ಕಲ್ಲುಮಲ್ಲಯ್ಯ ಎಂದು ಕರೆಯುತ್ತಿದ್ದರು. ಕಲ್ಲುಮಲ್ಲಯ್ಯ ಅಥವಾ ಕಲ್ಲುಸೇವೆ ಎಂದರೆ ಇರುಳಿಗರು ಸತ್ತ ತಮ್ಮ ಹಿರಿಯರನ್ನು ಒಂದು ಕಡೆ ಹಾಕುವ ರೂಢಿಯಿದೆ. ಅದಕ್ಕಾಗಿ ಕಲ್ಲಿನ ಗುಡಿಗಳನ್ನು ನಿರ್ಮಾಣ ಮಾಡಿಕೊಳ್ಳುತ್ತಿದ್ದರು. ಈ ಕಲ್ಲು ಗುಡಿಗಳು ವಂಶಕ್ಕೆ ಅಥವಾ ಕುಟುಂಬಕ್ಕೆ ಒಂದರಂತೆ ಸಿದ್ಧಗೊಳಿಸಿಕೊಂಡಿರುತ್ತಿದ್ದರು.

ಅಗಲವಾದ ಅರೆಕಲ್ಲು (ಅಗಲವಾದ ಬಂಡೆ)ನ ಮೇಲೆ ನಾಲ್ಕು ಮೊಳ ಅಗಲ, ಆರು ಅಡಿ ಆಳವಿರುವಂತೆ ಕಲ್ಲನ್ನು ಜೋಡಿಸಿ ಪೂರ್ವ ದಿಕ್ಕಿಗೆ ಮಾತ್ರ ಒಂದು ಕಿಂಡಿಯನ್ನು ಬಿಟ್ಟು ಸುತ್ತಲು ಕಲ್ಲು ಕಟ್ಟುತ್ತಿದ್ದರು(ಹೂತುತ್ತಿದ್ದರು) ನಂತರ ಇದರ ಮೇಲೆ ತೆಳುವಾದ ಚಪ್ಪಡಿ ಕಲ್ಲನ್ನು ಹಾಸಿಬಿಡುತ್ತಿದ್ದರು. ಇದೇ ಇರುಳಿಗರ ಶವಾಗಾರ ಅಥವಾ ಕಲ್ಲು ಸೇವೆಯ ಸ್ಥಳವಾಗಿತ್ತು. ತಂದ ಹೆಣವನ್ನು ಆ ಕಲ್ಲುಗೋರಿಯ ಒಳಗೆ ಹಾಕಿಬಿಟ್ಟು ಒಂದು ಬಕರೆಯ ಚೂರಿನಿಂದಲೂ (ಒಡೆದ ಮಡಿಕೆ ಚೂರು)ಯ ನೀರಿಟ್ಟು ಬಂದುಬಿಡುತ್ತಿದ್ದರು. ಮತ್ತೆ ಯಾರೆ ಸತ್ತರೂ ಅದೇ ಕಲ್ಲಿನ ಗುಡಿಗೆ ಹಾಕುತ್ತಿದ್ದರು. ಹಾಗೆ ಹಿಂದಿನ ಶವದ ಅಸ್ಥಿಯನ್ನು ಪಕ್ಕಕ್ಕೆ ಸರಿಸಿ ತಂದ ಹೆಣವನ್ನು ಹಾಕುತ್ತಿದ್ದರು. ಇದರಿಂದ ಸತ್ತ ಹಿರಿಯರ ಜೊತೆ ಇವರು ಸೇರಿಕೊಳ್ಳುತ್ತಾರೆ ಎಂಬ ನಂಬಿಕೆಯನ್ನು ಹೊಂದಿದ್ದಾರೆ.

ಕೆಲವೊಂದು ಸಮಯದಲ್ಲಿ ಕಲ್ಲುಗೋರಿಗಳಲ್ಲಿ ಹಿಂದಿನ ಮೂಳೆಗಳು ತುಂಬಿಹೋಗಿದ್ದರೆ ಅವುಗಳನ್ನು ದೊಣ್ಣೆಯಿಂದ ಪುಡಿಮಾಡಿ ಮೂಲೆಗೆ ಸರಿಸಿ ಹೊಸ ಶವವನ್ನು ಇಡುತ್ತಿದ್ದರು. ಈ ಪುಡಿ ಮಾಡುವಾಗ ಅತ್ಯಂತ ಜಾಗರೂಕತೆಯಿಂದ ಇರಬೇಕೆಂದು ಹೇಳುತ್ತಾರೆ. ಕಾರಣ ಈ ಸಂದರ್ಭದಲ್ಲಿ ಮೂಳೆಗಳು ತಗಲಿ ಗಾಯವಾದರೆ ಯಾವ ಕಾರಣಕ್ಕೂ ವಾಸಿಯಾಗದೆಂಬ ನಂಬಿಕೆ, ಇವರಲ್ಲಿದೆ. ತಾತನಿಗೆಂದೂ ಕಟ್ಟಲಾದ ಕಲ್ಲುಗೋರಿಯಲ್ಲಿ ಆತನ ಮಗ ಮೊಮ್ಮಗ ಅನುಕ್ರಮವಾಗಿ ಹಾಕುವ ಪದ್ಧತಿ ಇವರಲ್ಲಿದೆ. ಹೆಣ್ಣು ಮತ್ತು ಗಂಡನ್ನು ಒಟ್ಟಿಗೆ ಹಾಕುವುದಿಲ್ಲ ಬದಲಾಗಿ ಹೆಣ್ಣಿಗೆ ಬೇರೆ ಮತ್ತು ಗಂಡಿಗೆ ಬೇರೆ ಬೇರೆ ಕಲ್ಲು ಗುಹೆಗಳು ಇರುವಂತೆ ನೋಡಿಕೊಳ್ಳುತ್ತಾರೆ. ಇರುಳಿಗರಲ್ಲಿರುವ ಈ ಕಲ್ಲುಸೇವೆ ಅಥವಾ ಕಲ್ಲು ಮಲ್ಲಯ್ಯ ಪದ್ಧತಿಯೂ ಭಾರತದಲ್ಲಿ ಆದಿಮಾನವ ಶವಸಂಸ್ಕಾರವನ್ನು ಪ್ರತಿನಿಧಿಸುತ್ತದೆ. ಭಾರತದ ಮೂಲನಿವಾಸಿಗಳಾದ

ಇರುಳಿಗರು ತಮ್ಮ ಸಾವಿನ ಸಂದರ್ಭದ ಕಲ್ಲುಸೇವೆ ಮತ್ತು ತಲೆಕಲ್ಲು ಸಂಪ್ರದಾಯವನ್ನು ಹಿಂದಿನಿದಂಲೂ ಉಳಿಸಿಕೊಂಡು ಬಂದಿದ್ದಾರೆ. ಇಂದಿಗೂ ಇರುಳಿಗ ಸಮುದಾಯದವರು ವಾಸಿಸುವ ಪ್ರದೇಶದಲ್ಲಿ ಅತೀ ಹೆಚ್ಚಿನ ಕಲ್ಲುಗೋರಿಗಳು ಕಂಡುಬರುತ್ತವೆ. ಆದರೆ ಭಾರತದ ಪುರಾತತ್ವ ಶಾಸ್ತ್ರವು ಇವುಗಳನ್ನು ಬೃಹತ್ ಶಿಲಾಯುಗದ ಗೋರಿಗಳೆಂದು ಕರೆದು ಇರುಳಿಗರ ಮೂಲ ಸಮಾಧಿಗಳನ್ನು ಕಳೆದುಕೊಳ್ಳುವಂತೆ ಮಾಡಿದ್ದಾರೆ. ಅರಣ್ಯ ಇಲಾಖೆಯವರು ಈ ಗೋರಿಗಳನ್ನು ಬೃಹತ್ ಶಿಲಾಸಮಾಧಿಗಳೆಂದು ಕರೆದು ಆ ಸ್ಥಳದಿಂದ ಈ ಸಮುದಾಯದವರನ್ನು ಒಕ್ಕಲೆಬ್ಬಿಸುತ್ತಿದ್ದಾರೆ.

ಇರುಳಿಗರು ಕಲ್ಲುಸೇವೆಯನ್ನು ಮಾಡಲು ಕೆಲವು ಕಾರಣಗಳನ್ನು ನೀಡುತ್ತಾರೆ. ಅವುಗಳು ವಾಸ್ತವಕ್ಕೆ ಎಷ್ಟು ಹತ್ತಿರವಿದೆ ಎಂಬುದು ಬೇರೆ ಬಗೆಯ ಚರ್ಚೆ. ಆದರೆ ಅವರ ನಂಬಿಕೆ ಈ ಕೆಳಗಿನಂತಿವೆ. ಮಣ್ಣಿನಲ್ಲಿ ಹೂಳುವುದರಿಂದ ನಮ್ಮ ಹಿರಿಯರ ನೆನಪುಗಳು ನಮಗೆ ಸಿಗುವುದಿಲ್ಲ. ಆದರೆ ಕಲ್ಲು ಮಲ್ಲಯ್ಯನನ್ನು ಮಾಡಿದರೆ ಅವರ ಮೂಳೆಗಳಿಂದಾದರು ನಮಗೆ ನಮ್ಮ ಹಿರಿಯರ ನೆನಪಾಗುತ್ತದೆ. ಹಾಗೆಯೇ ಮನುಷ್ಯ ಬದುಕಿರುವವರೆಗೂ ಅನೇಕ ಪಾಪದ ಕೆಲಸ ಮಾಡಿರುತ್ತಾನೆ ಸತ್ತಮೇಲಾದರು ನಾಕಾರು ಪ್ರಾಣಿ ಪಕ್ಷಿಗಳಿಗೆ ಆಹಾರವಾಗ್ಲಿ ಎನ್ನುವ ನಂಬಿಕೆ ಇವರದು.

ಒಟ್ಟಿನಲ್ಲಿ ಇರುಳಿಗರಲ್ಲಿರುವ ಕಲ್ಲು ಸೇವೆಯು ಇತ್ತೀಚಿನ ದಿನಗಳಲ್ಲಿ ಕಾಣೆಯಾಗುತ್ತಿದೆ. ಅಲ್ಲೊಂದು ಇಲ್ಲೊಂದರಂತೆ ಉಳಿದುಕೊಂಡಿದ್ದರೂ ಅರಣ್ಯ ಇಲಾಖೆಯವರು ಇವುಗಳನ್ನು ಮಾಡಲು ಬಿಡುತ್ತಿಲ್ಲ. ಇದರಿಂದ ಇತರೆ ಸಮುದಾಯಗಳಂತೆ ಮಣ್ಣಿಗೆ ಹೂಳುವುದನ್ನು ಹೆಚ್ಚಾಗಿ ರೂಢಿಸಿಕೊಳ್ಳುತ್ತಿದ್ದಾರೆ. ತಮ್ಮ ಪಾರಂಪರಿಕ ನಂಬಿಕೆಯಾದ ಕಲ್ಲು ಸೇವೆಯನ್ನು ಬಿಟ್ಟುಕೊಡದ ಇರುಳಿಗರು ತಲೆಕಲ್ಲು ಆಚರಣೆಯ ಮೂಲಕ ಇಂದಿಗೂ ತಮ್ಮ ಪರಂಪರೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಇವರ ಹಿಂದಿನ ಸಮಾಧಿಗಳನ್ನು ಸುತ್ತಮುತ್ತಲಿನ ಜನ ಪಾಂಡವರ ಗುಳಿ ಎಂದು ಕರೆದು, ನಿಧಿ ಸಿಗಬಹುದೆಂಬ ಆಸೆಯಿಂದ ದಿನನಿತ್ಯ ಅಗೆದು ನಾಶ ಮಾಡುತ್ತಿದ್ದಾರೆ. ಇವುಗಳಿಗೆ ಸರಿಯಾದ ರಕ್ಷಣೆ ನೀಡದಿದ್ದರೆ ಇರುಳಿಗರ ಕುರುಹುಗಳೇ ಇಲ್ಲದೆ ನಾಶವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಇರುಳಿಗರಲ್ಲಿ ಎಳೆ ಮಕ್ಕಳು ಸತ್ತಿದ್ದರೆ ಕಲ್ಲು ಸೇವೆ ಮಾಡಿದರುಂಟು ಇಲ್ಲವಾದರೆ ಮಣ್ಣಿಗೆ ಹಾಕಿ ಮೂರೆ ದಿನಕ್ಕೆ ತಿಥಿ ಮಾಡಿಕೊಳ್ಳುತ್ತಾರೆ. ಮಾಂಸ ಮಡ್ಡಿ ಮಾಡುವುದಿಲ್ಲ; ಸಿಹಿ ಅಡುಗೆ ಮಾಡಿ ಊಟ ಮಾಡುತ್ತಾರೆ. ತುಂಬು ಗರ್ಭಿಣಿ ಸತ್ತಿದ್ದರೆ ಅವಳ ಹೆಣವನ್ನು ಜನರ್‍ಯಾರು ಓಡಾಡದ ಜಾಗದಲ್ಲಿ ಕೂರಿಸಿ ಕುತ್ತಿಗೆಗೆ ಕಾವೆಕೋಲುಗಳನ್ನಿಟ್ಟು ಹೊಸ ಬಟ್ಟೆ ಉಡಿಸಿ ಕುಂಕುಮ ಅರಿಶಿಣ ಹೂ, ಮುಡಿಸಿ ಅದರ ಮುಂದೆ ಒಂದು ಮಡಿಕೆಯಲ್ಲಿ ನೀರಿಟ್ಟು ಬಂದುಬಿಡುತ್ತಾರೆ. ಹಾಗೆಯೇ ತೊನ್ನು ಇರುವವರು

ಸತ್ತರೆ ಅವರನ್ನೂ ಯಾವುದೇ ಕಾರಣಕ್ಕೆ ಹೂಳುವುದಿಲ್ಲ ಬದಲಿಗೆ ಸುಟ್ಟುಬಿಡುತ್ತಾರೆ. ಕಾರಣ ಇವರನ್ನು ಹೂತಿದ್ದರೆ ಮಳೆ ಬರುವುದಿಲ್ಲ ಎಂಬ ನಂಬಿಕೆ ಇವರದು.

ಶವ ಸಂಸ್ಕಾರ ಮಾಡಿ ಬಂದು ಮನೆಯ ಮುಂದೆ ನಾಡಗೌಡ, ಕಟ್ಟಗೌಡ, ಕೋಲುಕಾರ ಮತ್ತು ಕುಲಗೌಡರ ಸಹಯೋಗದಲ್ಲಿ ತಿಥಿಯ ಬಗ್ಗೆ ಮಾತನಾಡುತ್ತಾರೆ. ಸತ್ತ ವ್ಯಕ್ತಿಯ ಅಣ್ಣ ತಮ್ಮಂದಿರು ಹಾಗೂ ಸಂಬಂಧಿಕರೆಲ್ಲರೂ ಸೇರಿಕೊಂಡು ತಿಥಿ ಹೇಗೆ ಮಾಡಬೇಕು ಯಾರ ಪಾಲು ಏನು ಎಂದು ಚರ್ಚೆ ಮಾಡಿ ಹನ್ನೊಂದನೇ ದಿನಕ್ಕೆ ನಿಗದಿಪಡಿಸಿಕೊಳ್ಳುತ್ತಾರೆ.

ಸತ್ತ ದಿನದಿಂದ ಸತ್ತವರ ಅಣ್ಣತಮ್ಮಂದಿರು ಮತ್ತು ಸತ್ತ ಮನೆಯವರನ್ನು ಸೂತಕದವರು ಎಂದು ಕರೆಯುತ್ತಾರೆ. ತಿಥಿ ಆಗುವವರೆಗೂ ಇವರ ಮನೆಗೆ ಯಾರು ಬರುವಂತಿಲ್ಲ. ಅವರು ಇನ್ನೊಬ್ಬರ ಮನೆಗೆ ಹೋಗುವುದಿಲ್ಲ. ಈ ಸೂತಕವನ್ನು ಕೆಟ್ಟ ಸೂತಕ ಎಂದು ಭಾವಿಸಿ ದೇವಸ್ಥಾನಕ್ಕೆ, ಸಾರ್ವಜನಿಕ ಸ್ಥಳಗಳಿಗೆ ಹೋಗುವುದಿಲ್ಲ. ತಿಥಿಯಾಗುವವರೆಗೂ ಮಾಂಸ ಮಡ್ಡಿ ತಿನ್ನುವಂತಿಲ್ಲ. ಆರನೇ ದಿನಕ್ಕೆ ಕೋಲುಕಾರ ಅಥವಾ ಸತ್ತ ಮನೆಯವರು ಎಲ್ಲರಿಗೂ ಸೌದೆ ಕಡಿಯಲು ಹೇಳುತ್ತಾರೆ. ಮನೆಗೆ ಒಂದಾಳಂತೆ ಎಲ್ಲರೂ ಬಂದು ಸೌದೆ ಕಡಿದುಕೊಡುವುದು ಇರುಳಿಗರಲ್ಲಿದೆ. ಹತ್ತನೆಯ ದಿನ ವಾಮ ಪುನೋಜನ ಕಾರ್ಯಕ್ರಮ ನಡೆಯುತ್ತದೆ. ಮನೆಯಲ್ಲಿರುವ ಹಳೆಯ ಮಡಿಕೆ ಕುಡಿಕೆಗಳನ್ನು ಹೊರಗೆ ಎಸೆದು ಹಸುವಿನ ಸಗಣಿಯಿಂದ ಮನೆಯನ್ನೆಲ್ಲ ಸಾರಿಸಿ ರಂಗೋಲಿ ಬಿಟ್ಟು ಮನೆಯವರೆಲ್ಲರೂ ಸ್ನಾನ ಮಾಡಿಕೊಂಡು ದೇವಸ್ಥಾನಕ್ಕೆ ಅಕ್ಕಿಪಡಿ ನೀಡುತ್ತಾರೆ. ಒಂದು ಸೇರು ಅಕ್ಕಿ ಬೆಲ್ಲ, ಬಾಳೆ, ಹಣ್ಣು, ಹೂ ಕಡ್ಡಿ, ಕರ್ಪೂರವನ್ನು ಕೊಟ್ಟು ಪೂಜೆ ಮಾಡಿಸುತ್ತಾರೆ. ದೇವಸ್ಥಾನದಿಂದ ತಂದ ತೀರ್ಥವನ್ನು ಮನೆಗೆಲ್ಲ ಎರಚುತ್ತಾರೆ. ಅಲ್ಲಿಗೆ ಇವರ ಮನೆಯ ಸೂತಕ ಕಳೆದಂತೆ, ಹೀಗೆ ಇವರ ಅಣ್ಣ ತಮ್ಮಂದಿರ ಮನೆಗೂ ಎರಚಿ ಸೂತಕ ಕಳೆದುಕೊಳ್ಳುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಪುರೋಹಿತ(ಓಸ್ಟುಮಾ)ರನ್ನು ಕರೆಸಿ ಹೋಮ ಮಾಡಿಸಿ ಆ ನೀರನ್ನು ಮನೆಗೆಲ್ಲ ಎರಚಿ ಸೂತಕ ಕಳೆದುಕೊಳ್ಳುತ್ತಿದ್ದಾರೆ.

ಮಾರನೇಯ ದಿನ ಅಂದರೆ ಸತ್ತ ದಿನಕ್ಕೆ ಸರಿಯಾಗಿ ಹನ್ನೊಂದನೇ ದಿನಕ್ಕೆ ಮನೆಯಲ್ಲಿ ತಯಾರಿಸಿದ ಇಡ್ಲಿ, ಕಜ್ಜಾಯ, ಒಬ್ಬಟ್ಟು, ವಡೆ, ಬೊಂಡ, ಸೇಬು, ದಾಳಿಂಬೆ ಕೋಸಂಬರಿ ಇನ್ನು ಅನೇಕ ತಿಂಡಿ ತಿನಿಸುಗಳನ್ನು ಎತ್ತಿಕೊಂಡು ಎಲ್ಲರೂ ದಿವ್ವೆಯ ಹತ್ತಿರ ಹೋಗುತ್ತಾರೆ.

ಅಷ್ಟರಲ್ಲಿ ತಂದೆ ಸತ್ತಿದ್ದರೆ ಹಿರಿಮಗ, ತಾಯಿ ಸತ್ತಿದ್ದರೆ ಕಿರಿಮಗನ ತಲೆ ಬೋಳಿಸುವ ಕೆಲಸ ನಡೆಯುತ್ತದೆ. ತಲೆ ಬೋಳಿಸುವ ಕ್ಷೌರಿಕನಿಗೆ ಒಂದು ಹೊಸ ಮೊರದಲ್ಲಿ ಹೊಸ ಬಟ್ಟೆ, ಅಕ್ಕಿ, ರಾಗಿ, ಕಾರದಪುಡಿ, ತರಕಾರಿಗಳು, ಹೊಸ ಚಪ್ಪಲಿ ಇಂತಿಷ್ಟು ಹಣವನ್ನು ಕೊಡುತ್ತಾರೆ. ತಲೆ ಬೋಳಿಸಿಕೊಂಡವನು ಎಡಗೈಯಲ್ಲಿ ಕೂಳು ಬೇಯಿಸಿದ ಮಡಕ್ಕೆ ಮತ್ತು ಬಲಗೈಯಲ್ಲಿ ಉರಿಕೊಳ್ಳಿಯನ್ನು ಹಿಡಿದು ತಲೆಕಲ್ಲು ಗುಡ್ಡೆಯ ಹತ್ತಿರ ಬರುತ್ತಾರೆ. ಬಂದ ಜನರೆಲ್ಲರೂ

ತಲೆಕಲ್ಲು ಗುಡ್ಡಕ್ಕೆ ನೀರನ್ನು ಹಾಕಿ ಶುಚಿಗೊಳಿಸಿ ಅರಿಶಿಣ ಕುಂಕುಮ ಹೂಗಳನ್ನು ಹಾಕಿ ಪೂಜೆ ಮಾಡಿ, ತಲೆಕಲ್ಲು ಗುಡ್ಡಕ್ಕೆ ಎಡೆ ಇಡುತ್ತಾರೆ. ನಂತರ ಎಳನೀರಿನ ಬಾಯಿಯನ್ನು ತೆರೆದಿಟ್ಟು ಹೊಂಬಾಳೆಯ ಸಿವುಡುಗಳನ್ನು ತಲೆಕಲ್ಲು ಗುಡ್ಡೆಯ ಮೇಲೆ ತಗಳಾಕುತ್ತಾರೆ. ಕೈ ಅಂಚಿನ ಒಳಗೆ ಕೆಂಡವನ್ನು ಹಾಕಿ ಧೂಪವನ್ನು ಕೆಂಡದ ಮೇಲೆ ಉದುರಿಸಿ ಹೊಗೆ ಹಾಕಿ ಪೂಜೆ ಮಾಡುತ್ತಾರೆ. ಎಲ್ಲರೂ ತಲೆಕಲ್ಲಿಗೆ ಅಡ್ಡಬಿದ್ದು ದಿವೆ (ಸಮಾಧಿ)ಯ ಹತ್ತಿರ ಹೋಗುತ್ತಾರೆ.

ದಿವೆಯ ಮೇಲೆ ಸಮವಾದ ವೇದಿಕೆ ಮಾಡಿ ಸತ್ತ ವ್ಯಕ್ತಿಯ ತಲೆಯಿರುವ ಕಡೆ ಒಂದು ಕಲ್ಲನ್ನು ಇಟ್ಟು ಅದಕ್ಕೆ ಹೂ ಕುಂಕುಮ, ಅರಿಶಿಣ, ವಿಭೂತಿ ಹಚ್ಚುತ್ತಾರೆ. ಹಾಗೆಯೇ ಕಲ್ಲಿನ ಮೇಲೆ ಹೊಂಬಾಳೆಯನ್ನಿಟ್ಟು ಪಕ್ಕದಲ್ಲಿ ಎಳೆನೀರನ್ನು ಕೊಚ್ಚಿ ಇಡುತ್ತಾರೆ. ಬಾಳೆ ಎಲೆಗಳನ್ನು ದಿವೆಯೆ ಮೇಲೆ ಹಾಸುತ್ತಾರೆ. ತಂದಿರುವ ಎಲ್ಲಾ ತಿಂಡಿತಿನಿಸುಗಳನ್ನು ಬಾಳೆ ಎಲೆಯ ಮೇಲೆ ಹಾಕುತ್ತಾರೆ. ಹೆಣ ತಂದಿರುವ ಚಟ್ಟಕ್ಕೆ ಬೆಂಕಿಯಿಟ್ಟು ಕೈ ಅಂಚಿನಲ್ಲಿ(ನಾಟಿ ಅಂಚು) ಕೆಂಡವನ್ನು ಹಾಕಿ ಅದರ ಮೇಲೆ ಧೂಪವನು ಉದುರಿಸಿ ಹೊಗೆ ಎಬ್ಬಿಸುತ್ತಾರೆ. ನಂತರ ಎಲ್ಲರೂ ಆ ಹಂಚನ್ನು ಕೈಯಲ್ಲಿ ಹಿಡಿದು ಪೂಜೆ ಮಾಡುತ್ತಾರೆ. ತಂದೆ ಸತ್ತಿದ್ದರೆ ಹಿರಿಮಗ ಮೊದಲು ಹಾಲು ತುಪ್ಪವನ್ನು ಇಟ್ಟಿರುವ ಕಲ್ಲಿನ ಮೇಲೆ ಬಿಡುತ್ತಾನೆ. ಸರದಿಯಾಗಿ ಎಲ್ಲಾ ಸಂಬಂಧಿಕರು ಹಾಲು ತುಪ್ಪ ಬಿಟ್ಟು ತಂದಿರುವ ತಿನಿಸುಗಳನ್ನು ಹಂಡೆಯಲ್ಲಿ ಹಾಕಿ ಎಲ್ಲವನ್ನು ಕಲಸುತ್ತಾರೆ. ನಂತರ ಎಲ್ಲರಿಗೂ ಈ ತಿನಿಸುಗಳನ್ನು ನೀಡಲಾಗುತ್ತದೆ. ಯಾವುದೇ ಕಾರಣಕ್ಕೂ ಮಹಿಳೆಯರಿಂದ ಹಾಲುತುಪ್ಪ ಬಿಡಿಸುವುದಿಲ್ಲ.

ಸಮಾಧಿಯ ಮೇಲೆ ಸ್ವಲ್ಪ ತಿನಿಸುಗಳನ್ನು ಬಿಟ್ಟು ಉಳಿದೆಲ್ಲವನ್ನು, ತುಂಬಿಕೊಂಡು ಸಮಾಧಿಯಿಂದ ಸ್ವಲ್ಪ ದೂರದಲ್ಲಿ ಕುಳಿತು ಸಮಾಧಿಯ ಮೇಲಿನ ತಿನಿಸುಗಳನ್ನು ಕಾಗೆ, ಹದ್ದುಗಳು ತಿನ್ನುವುದೆಂದು ಕಾತರದಿಂದ ನೋಡುತ್ತಾರೆ. ಹದ್ದು ಕಾಗೆಯೇ ಸತ್ತ ವ್ಯಕ್ತಿಯ ದಿವೆಯ ಮೇಲಿನ ತಿನಿಸುಗಳನ್ನು ತಿನ್ನಬೇಕು ಇಲ್ಲವಾದರೆ ವ್ಯಕ್ತಿ ಪಾಪ ಮಾಡಿದ್ದ ನರಕಕ್ಕೆ ಹೋಗುತ್ತಾನೆ ಎಂದು ತಿರ್ಮಾನಿಸಿಕೊಳ್ಳುತ್ತಾರೆ. ಇರುಳಿಗರು ಕುಂಬಾರ ಕೋಳಿಯು ದಿವಿಯ ಮೇಲಿನ ತಿನಿಸನ್ನು ತಿಂದರೆ ದೇವರೇ ಬಂದು ತಿಂದಷ್ಟು ಖುಷಿಪಡುತ್ತಾರೆ. ಹೀಗೆ ದಿವೆಯ ಮೇಲಿನ ತಿನಿಸನ್ನು ಕಾಗೆ ಅಥವಾ ಹದ್ದು ಬಂದು ತಿಂದರೆ ಎಲ್ಲರೂ ತಿನ್ನುತ್ತಾರೆ. ಇಲ್ಲವಾದರೆ ತಿನ್ನುವವರೆಗೂ ಕಾಯ್ದು ಬರುತ್ತಾರೆ. ದಿವೆಯ ತಿನಿಸುಗಳನ್ನು ಸ್ವಲ್ಪ ಉಳಿಸಿಕೊಂಡು ಅಡುಗೆ ಮನೆಯಲ್ಲಿರುವ ಕೋಲುಕಾರನಿಗೂ ಕೊಡುತ್ತಾರೆ. ಕೋಲುಕಾರ ಅಡುಗೆ ಮನೆಯಲ್ಲಿದ್ದವರೆಲ್ಲ ಹಂಚಿ ತಿನ್ನುತ್ತಾನೆ. ದಿವೆಯಿಂದ ತಂದಿರುವ ತೀರ್ಥವನ್ನು ಅಡುಗೆಯ ಮೇಲೆ ಎರಚುತ್ತಾನೆ.

ಇತ್ತ ಕಡೆ ಮನೆಯಲ್ಲಿ ಸತ್ತ ವ್ಯಕ್ತಿಯ ಫೋಟೋವನ್ನು ಇಟ್ಟು ಮಾಡಿರುವ ವಿಧವಿಧ ತಿನಿಸುಗಳು ಹಾಗೂ ಸತ್ತವ್ಯಕ್ತಿಗೆ ಪ್ರಿಯವಾದ ತಿನಿಸುಗಳನ್ನು, ಅವನು ಬಳಸುತ್ತಿದ್ದ ಎಲ್ಲಾ

ವಸ್ತುಗಳನ್ನು ಎಡೆ ಇಡುತ್ತಾರೆ. ನಂತರ ಬಾಗಿಲು ಹಾಕಿಕೊಂಡು ಹೊರಗಡೆ ಬಂದು ಸುಮಾರು ಹತ್ತರಿಂದ ಹದಿನೈದು ನಿಮಿಷ ಒಳಗೆ ಹೋಗುವುದೇ ಇಲ್ಲ. ನಂತರ ಬಾಗಿಲನ್ನು ತಟ್ಟಿ ಒಳಗೆ ಬರುತ್ತಿದ್ದೇವೆ ಎಂದು ಹೇಳಿ ಒಳಗಡೆ ಹೋಗುತ್ತಾರೆ. ಈ ಸಮಯದಲ್ಲಿ ಸತ್ತವ್ಯಕ್ತಿ ತಮ್ಮ ಹಿರಿಯರ ಜೊತೆಯಲ್ಲಿ ಬಂದು ಎಡೆ ಇಟ್ಟಿರುವ ತಿನಿಸುಗಳ ರುಚಿ ನೋಡಿಕೊಂಡು ಹೋಗಿರುತ್ತಾನೆ ಎಂದು ನಂಬುತ್ತಾರೆ. ಕಟ್ಟುಗೌಡನು ಸತ್ತ ವ್ಯಕ್ತಿಗೆ ಹೆಗಲು ಕೊಟ್ಟಿದ್ದವರಿಗೆ "ಹೆಗಲು ತೊಳೆಯುವ ಶಾಸ್ತ್ರ" ಮಾಡುತ್ತಾನೆ. ಒನಕೆಯನ್ನು ಅಡ್ಡಲಾಗಿಟ್ಟು ಅದರ ಮೇಲೆ ಹೆಗಲುಕೊಟ್ಟವರನ್ನು ಹಿಮ್ಮಡಿ ಒನಕೆಯ ಮೇಲೆ ಇರುವಂತೆ ಕುಕ್ಕರ ಕಾಲಲ್ಲಿ ಕೂರಿಸುತ್ತಾರೆ. ಪೂರ್ವ ದಿಕ್ಕಿಗೆ ಮುಖಮಾಡಿ ಕೂರಿಸಿ ಬಟ್ಟೆ ತೆಗೆಯುವಂತೆ ಹೇಳುತ್ತಾನೆ. ಬಟ್ಟೆ ತೆಗೆದ ನಂತರ ಅವರ ಹೆಗಲನ್ನು ಸೀಗೆಕಾಯಿ, ಹಸುವಿನ ಗಂಜಲ, ಎಳನೀರು, ಹಾಲು, ಜೇನುತುಪ್ಪ, ಹಸುವಿನ ತುಪ್ಪ ಮುಂತಾದವುಗಳನ್ನು ಗರಿಕೆಯ ಸಹಾಯದಿಂದ ಹೆಗಲಿಗೆ ಸವರಿ ನೀರಿನಿಂದ ತೊಳೆಯುತ್ತಾರೆ. ಹೀಗೆ ತೊಳೆಯುವಾಗ ಕಟ್ಟುಗೌಡ ಒನಕೆಯ ಮೇಲೆ ಕುಂತವರಿಗೆ ನೀನ್ ಬಾರಾ 'ನೀನ್ ತಕೋ ಹೂಬಾರಾ ನನ್‌ಕೊಡು' ಎಂದು ಹೇಳಿಕೊಡುತ್ತಾನೆ. ಹೀಗೆ ಮೂರು ಬಾರಿ ಹೇಳುವಂತೆ ಹೇಳುತ್ತಾನೆ. ಕಟ್ಟುಗೌಡ ಮೂರು ಬಾರಿ ಗರಿಕೆಯಿಂದ ಹೆಗಲು ಸವರಿದಾಗಲೆಲ್ಲ ಒನಕೆ ಮೇಲೆ ಕುಳಿತವರು ಕಟ್ಟುಗೌಡ ಹೇಳಿಕೊಟ್ಟಂತೆ ಹೇಳುತ್ತಾರೆ. ನಂತರ ನಾಡಗೌಡನ ಅಪ್ಪಣೆ ಪಡೆದು ಒನಕೆ ಮೇಲೆ ಕುಳಿತವರು ಒನಕೆಯನ್ನು ಹಿಂದಕ್ಕೆ ತಳ್ಳಿ ತಿರುಗಿ ನೋಡದಂತೆ ಹೋಗಬೇಕು. ಅಲ್ಲಿಗೆ ಸತ್ತವರಿಗೆ ಹೆಗಲುಕೊಟ್ಟು ಋಣ ತೀರಿಸಿಕೊಳ್ಳಲಾಗಿದೆ ಎಂದುಕೊಳ್ಳುತ್ತಾರೆ.

ಒನಕೆ ಶಾಸ್ತ್ರ ಮುಗಿದ ಮೇಲೆ ಎಲ್ಲರೂ ಅಡುಗೆ ಮನೆಯ ಕಡೆ ಹೋಗುತ್ತಾರೆ. ಬಂದ ಜನರೆಲ್ಲರನ್ನು ಪಂಕ್ತಿಯಲ್ಲಿ ಕೋಲುಕಾರ ಕೂರಿಸುತ್ತಾನೆ. ಅವರೆಲ್ಲರಿಗೂ ಎಲೆ ಕೊಟ್ಟು ಊಟ ಹಾಕಿಸುತ್ತಾನೆ. ಎಲ್ಲರೂ ಕೋಲುಕಾರನ ಅಪ್ಪಣೆಯನ್ನು ಕಾಯುತ್ತಿರುತ್ತಾರೆ. ಕೋಲುಕಾರ ಕೈ ಹಂಚಿನಲ್ಲಿ ಕೆಂಡಹಾಕಿ ಅದಕ್ಕೆ ಧೂಪ ಉದುರಿಸಿಕೊಂಡು ಹೊಗೆ ಎಬ್ಬಿಸಿಕೊಂಡು ಪಂಕ್ತಿಯಲ್ಲಿ ಹೋಗುತ್ತಾನೆ. ಪಂಕ್ತಿಗೆಲ್ಲಾ ಹೊಗೆಯನ್ನು ತೋರಿಸಿದ ನಂತರ ಎಲ್ಲರೂ ಊಟ ಮಾಡ್ರಪ್ಪೊ ಎನ್ನುತ್ತಾನೆ. ಆಗ ಎಲ್ಲರೂ ಊಟ ಮಾಡಲು ಪ್ರಾರಂಭಿಸುತ್ತಾರೆ ಮತ್ತೆ ಅವನು ಎಲ್ಲರ ಊಟ ಮುಗಿದಿದೆ ಎಂದು ಖಚಿತಪಡಿಸಿಕೊಂಡ ನಂತರ ಎಲ್ಲರೂ ಮೇಲೇಳಬಹುದು ಎಂದಾಗ ಮಾತ್ರ ಎಲ್ಲರೂ ಹೇಳಬೇಕು ಇಲ್ಲವಾದರೆ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.

ಎಲ್ಲರ ಊಟ ಮುಗಿದ ಮೇಲೆ ಕೋಲುಕಾರನಿಗೆ "ಋಣ ತೀರಿಸಬೇಕು" ಅಂದರೆ ಸತ್ತ ಮನೆಯವರು ಹೊಸ ಕರಿಯ ಕಂಬಳಿ, ಕಾರದ ಪುಡಿ ಅಕ್ಕಿ, ರಾಗಿ, ತರಕಾರಿಗಳು ಇಂತಿಷ್ಟು ದುಡ್ಡು ಅವರವರ ಅನುಕೂಲತೆಗೆ ತಕ್ಕಂತೆ ಕುರಿ ಅಥವಾ ಆಡಿನ ಒಂದು ಚಪ್ಪೆ ಮತ್ತು ಒಂದು ಗುಡ್ಡೆ ಮಾಂಸವನ್ನು ಹೊಸ ಮೊರದಲ್ಲಿ ಹಾಕಿ ಕೋಲುಕಾರನಿಗೆ ಕೊಡುತ್ತಾನೆ.

ಇದನ್ನು "ಋಣ ತೀರಿಸುವುದು" ಎಂದು ಕರೆಯುತ್ತಾರೆ. ಊಟ ಮುಗಿಸಿದ ಎಲ್ಲಾ ಜನರು ರಾತ್ರಿ ಹೇಳುವ ಕಣಿಗಾಗಿ ಕಾಯುತ್ತಾ ರಾತ್ರಿ ಅಲ್ಲೇ ಉಳಿದುಕೊಳ್ಳುತ್ತಾರೆ.

ಇರುಳಿಗರಲ್ಲಿ ಕಂಡುಬರುವ ಪ್ರಮುಖವಾದ ಕೆಲವು ಆಚರಣೆಗಳೆಂದರೆ ದಕ್ಷಿಣಕ್ಕೆ ತಲೆಮಾಡಿ, ಉತ್ತರಕ್ಕೆ ಕಾಲು ಮಾಡಿ, ಕಾಲುಗಳನ್ನು ಪದ್ಮಾಸನದಲ್ಲಿ ಮಡಚಿ ಎದೆಯ ಮೇಲೆ ಕೈ ಇಡುವುದು, ಚಟ್ಟಕ್ಕೆ ಕಕ್ಕೆ ಮತ್ತು ಆಲದ ಸೊಪ್ಪು ಹಾಕುವುದು. ಹೆಣವನ್ನು ಮಣ್ಣು ಮಾಡುವ ತನಕ ನಾಲ್ಕೆ ಜನರು ಹೆಗಲುಕೊಡುವುದು. ತಲೆಕಲ್ಲು ಗುಡ್ಡೆ ನಿರ್ಮಿಸುವುದು, ಸತ್ತವ್ಯಕ್ತಿಯನ್ನು ಕಲ್ಲುಸೇವೆ ಮಾಡುವುದು, ಒನಕೆ ಶಾಸ್ತ್ರ ಮಾಡುವುದು, ಸತ್ತ ವ್ಯಕ್ತಿ ಯಾವ ಪಂಗಡಕ್ಕೆ (ದಾಸಕುಲ, ಶೈವಕುಲ)ಸೇರಿದ್ದರೂ ವಿಭೂತಿ ಹಚ್ಚುವುದು. ಸತ್ತವ್ಯಕ್ತಿಯ ಮನೆಯಲ್ಲಿ ದೀಪ ನೋಡಲು ಬರುವುದು ಮತ್ತು ಗರಿಕೆಯನ್ನು ತಂದು ದೀಪದ ಮುಂದೆ ಎಸೆಯುವುದು, ದಿವೆಯ ಮೇಲಿನ ತಿನಿಸನ್ನು ಹದ್ದು ಕಾಗೆ ತಿನ್ನಲೇಬೇಕೆಂದು ಕಾಯುವುದು ಮತ್ತು ಕುಂಬಾರ ಕೋಳಿ ತಿಂದರೆ ದೇವರೆ ತಿಂದಂತೆ ಎಂದು ನಂಬುವುದು, ಕಣಿ ಹೇಳುವುದು, ಸತ್ತ ವ್ಯಕ್ತಿಯು ಮನೆಯವರ ಮೇಲೆ ಬಂದು ಸತ್ತ ಕಾರಣ ಮತ್ತು ಕುಲದ ಕಟ್ಟು ಕಾಪಾಡಿಕೊಂಡು ಹೋಗುವಂತೆ ಹೇಳುವುದು ಇವೆಲ್ಲವುಗಳು ಇರುಳಿಗರಲ್ಲಿ ಕಂಡುಬರುವ ವಿಶಿಷ್ಟ ಆಚರಣೆಗಳಾಗಿವೆ.

ಇರುಳಿಗ ಸಮುದಾಯವು ಅತ್ಯಂತ ಪ್ರಾಚೀನ ಬುಡಕಟ್ಟುಗಳಲ್ಲೊಂದಾಗಿದ್ದರಿಂದ ಭಾರತದ ಹಲವಾರು ಪಾರಂಪರಿಕ ಆಚರಣೆಗಳು ಇಂದಿಗೂ ಉಳಿಸಿಕೊಂಡು ಬಂದಿದೆ. ಆದರೆ ಇವರ ನಂಬಿಕೆ ಆಚರಣೆಗಳನ್ನು ಅನುಸರಿಸಲು ಮಾಡಿಕೊಂಡ ಆಧುನಿಕ ಜಗತ್ತು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲಾಗುತ್ತಿದೆ. ಕೆಲವು ಸಂದರ್ಭದಲ್ಲಿ ಮೂಢನಂಬಿಕೆ ಎಂದು ಜರಿದು ಅವುಗಳನ್ನು ಕಡೆಗಣಿಸಲಾಗುತ್ತಿದೆ.

೪.೩. ಮದುವೆ ಸಂದರ್ಭದಲ್ಲಿನ ಆಚರಣೆಗಳು ಹಾಗೂ ಕೂಟ್ಕೆ(ಕೂಡಿಕೆ)

ಆದಿಮ ಸಮಾಜದಲ್ಲಿ ಮನುಷ್ಯರು ಕಾಡು ಮೇಡುಗಳಲ್ಲಿ ಗುಂಪುಗುಂಪಾಗಿ ವಾಸಿಸುತ್ತಿದ್ದರು. ಜೊತೆ ಜೊತೆಯಾಗಿ ಆಹಾರ ಸಂಗ್ರಹಿಸಿ ಒಟ್ಟಾಗಿ ತಿನ್ನುತ್ತಿದ್ದರು. ಹಸಿದಾಗ ತಿನ್ನುವಂತೆ ಉದ್ರೇಕ ಉಂಟಾದಾಗ ಉಳಿದೆಲ್ಲಾ ಪ್ರಾಣಿಗಳಂತೆಯೇ ಮುಕ್ತ ಲೈಂಗಿಕ ಸಂಬಂಧವನ್ನು ಹೊಂದಿ ಸೃಷ್ಟಿ ಕ್ರಿಯೆಯಲ್ಲಿ ತಮಗರಿವಿಲ್ಲದಂತೆ ತೊಡಗುತ್ತಿದ್ದರು. ಇಂದು ಮನುಷ್ಯ ಜೊತೆಗೂಡಲು ಇರುವ ನಿಯಮಗಳಂತೆ ಹಿಂದೆ ಇರಲಿಲ್ಲ. ಪ್ರಾಣಿಗಳ ವರ್ತನೆಯಂತೆ ಮನುಷ್ಯ ವರ್ತನೆಯೂ ಇತ್ತು. ಪ್ರಾಣಿಗಳು ತಮ್ಮ ಸಂಭೋಗಕ್ಕೆ ಇಷ್ಟ ಅನಿಷ್ಟ ಅಂದ-ಚಂದ, ಆಚಾರ-ವಿಚಾರ, ಸಂಬಂಧ ಭೇದ ಮತ್ತು ಆಕಾಂಕ್ಷೆಗಳೆಂಬ ಯಾವ ಮಾನದಂಡಗಳು ಇಲ್ಲದೆ ಸ್ವೇಚ್ಛೆಯಾಗಿ ತಮ್ಮ ಕಾಮದ ವಾಂಛೆಯನ್ನು ತೀರಿಸಿಕೊಳ್ಳುವ ಹಾಗೆಯೇ ಮನುಷ್ಯನು ಪ್ರಕೃತಿ ಸಹಜ ಕ್ರಿಯೆಯಾದ ಸಂಭೋಗದಲ್ಲಿ ತೊಡಗುತ್ತಿದ್ದನು.

ಪ್ರಕೃತಿಯಲ್ಲಿರುವ ಪ್ರಾಣಿಗಳು, ಪಕ್ಷಿಗಳು, ಹುಳು, ಹುಪ್ಪಟೆ, ಕ್ರಿಮಿ ಕೀಟಗಳಾದಿಯಾಗಿ ಪ್ರಕೃತಿಯ ನಿಯಮದಂತೆ ಉದ್ರೇಕ ಉಂಟಾದಾಗ ಸಂಭೋಗಿಸಿ ಸಂತಾನೋತ್ಪತ್ತಿ ಮಾಡಿ ತಮ್ಮ ಮರಿಗಳನ್ನು ದೊಡ್ಡವುಗಳಾಗಿ ಮಾಡುವ ತನಕ ಜೊತೆಯಾಗಿ ಇರುತ್ತವೆ. ಆದರೆ ಮನುಷ್ಯ ಮಾತ್ರ ಮದುವೆಯ ನಂತರವೇ ಈ ಎಲ್ಲಾ ಕ್ರಿಯೆಯಲ್ಲಿ ತೊಡಗುವುದು ವಿಶೇಷವಾಗಿದೆ. ಈ ಸಂಭೋಗಕ್ಕೆ ನಿರ್ದಿಷ್ಟ ಪರವಾನಗಿ ಮದುವೆ ಎಂಬ ಕಟ್ಟುಪಾಡು ಯಾವಾಗಿನಿಂದ ಬಂದಿತು ಎಂಬುವುದು ಕುತೂಹಲಕಾರಿ ಸಂಗತಿಯಾಗಿದೆ.

ಈ ಮದುವೆ ಎಂಬುವುದನ್ನು ಹಲವರು ಹಲವಾರು ರೀತಿಯಲ್ಲಿ ಅಭಿಪ್ರಾಯಪಡುತ್ತಾರೆ. ಮದುವೆ ಎಂಬುದು ಪರವಾನಗಿ ಸಂಭೋಗ ಕ್ರಿಯೆ, ಹೆಣ್ಣಿನ ಕನ್ಯಾಸೆರೆ ಬಿಡಿಸುವ ಆಚರಣೆ, ಸಂತಾನೋತ್ಪತ್ತಿಯ ಮೂಲಕ ವಂಶಾಭಿವೃದ್ಧಿ ಮಾಡುವ ಪ್ರಕ್ರಿಯೆ ಹಾಗೆಯೇ ಸತ್ತ ಮೇಲೆ ಸ್ವರ್ಗಕ್ಕೆ ಹೋಗುವ ದಾರಿ ಮದುವೆಯಾಗಿದೆ ಎಂಬೆಲ್ಲಾ ನಂಬಿಕೆಗಳು ಸಮಾಜದಲ್ಲಿವೆ. ಆದರೆ ಸಂಭೋಗಕ್ಕಾಗಿಯೇ ಮದುವೆ ಎನ್ನುವುದಾದರೆ ಸಂಭೋಗ ಎನ್ನುವುದು ಶಾಶ್ವತವಾದುದ್ದಲ್ಲ, ಅದು ಕೇವಲ ನಿಮಿಷಗಳವರೆಗೆ ಇರುವಂತಹದ್ದು. ವಂಶಾಭಿವೃದ್ಧಿ ಮಾಡಲು ಮದುವೆಯೇ ಆಗಬೇಕೆಂದಿಲ್ಲ; ಪ್ರಾಣಿ ಪಕ್ಷಿಗಳು ಮದುವೆ ಇಲ್ಲದೆ ವಂಶಾಭಿವೃದ್ಧಿ ಮಾಡುತ್ತವೆ. ಮದುವೆ ಆಗದಿದ್ದರೂ ಸಂಭೋಗದಿಂದ ಮಕ್ಕಳಾಗುವುದನ್ನು ನಾವು ಕಾಣುತ್ತೇವೆ. ಹಾಗಾದರೆ ಈ ಮದುವೆ ಹೇಗೆ ಬಂತು ಯಾರು ಇದನ್ನು ಹುಟ್ಟು ಹಾಕಿದರು ಎಂಬುದು ನಮ್ಮಂಥ ಸಂಶೋಧಕರನ್ನು ಕಾಡಬೇಕಾದ ಪ್ರಶ್ನೆಯಾಗಿದೆ. ತಾಪಿ ಧರ್ಮರಾವ್ ತಮ್ಮ ಕೃತಿ 'ವಿವಾಹ ಮತ್ತು ಪೂರ್ವೋತ್ತರ'ದಲ್ಲಿ ಮದುವೆಯ ಬಗ್ಗೆ ಹೀಗೆ ಹೇಳುತ್ತಾರೆ. "ಈ ಮದುವೆ ಎಂಬುದು ಆಚಾರ್ಯ ಮಹಾಶಯರ ಮೋಸದ ತಂತ್ರವಾಗಿದೆ. ತಮ್ಮ ಹಿತಾಶಕ್ತಿ ಸಾಧಿಸಿಕೊಳ್ಳಲು ಮದುವೆ ಎಂಬ ಆಚರಣೆಯನ್ನು ಸೃಷ್ಟಿಸಿ ಜನಸಾಮಾನ್ಯರ ಮೇಲೆ ಹೇರಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ಮನುಷ್ಯ ಹುಟ್ಟಿದ ಮೇಲೆ ಮದುವೆಯಾದರೆ ಮಾತ್ರ ಸ್ವರ್ಗಕ್ಕೆ ಹೋಗುತ್ತಾನೆ, ಹೆಣ್ಣು ತನ್ನ ಕನ್ಯಾಸೆರೆಯನ್ನು ಬಿಡಿಸಿಕೊಳ್ಳಲು ಇರುವ ಒಂದೇ ಮಾರ್ಗ ಮದುವೆ, ಇಲ್ಲವಾದರೆ ಸ್ವರ್ಗಕ್ಕೆ ಹೋಗದೆ ನರಕ ಸೇರುತ್ತಾಳೆ ಎಂಬ ಪೊಳ್ಳು ನಂಬಿಕೆಗಳನ್ನು ಜನಸಾಮಾನ್ಯರಲ್ಲಿ ತುಂಬಿ ಮದುವೆ ಎಂಬ ಡಾಂಭಿಕ ಆಚರಣೆಯನ್ನು ಕಡ್ಡಾಯವಾಗಿಸಿ, ಉಳಿಸಿಕೊಂಡು ಬಂದಿದ್ದಾರೆ. ಪ್ರಕೃತಿಯಲ್ಲೇ ಹುಟ್ಟಿ, ಪ್ರಕೃತಿಯಲ್ಲೇ ಬೆಳೆದು ಪ್ರಕೃತಿಯಂತೆ ಬದುಕುವ ನಮಗೆ ಸ್ವರ್ಗ ನರಕದ ಮಾತೆಲ್ಲಿ! ಇದೆಲ್ಲ ಕೆಲವೇ ಕೆಲವು ವರ್ಗಗಳು ತಮ್ಮ ಹಿತಕ್ಕಾಗಿ ಸೃಷ್ಟಿಸಿಕೊಂಡ ಬಂಡವಾಳದ ಮಾರ್ಗ"[೬] ಎನ್ನುತ್ತಾರೆ.

ಮದುವೆಯ ಚರಿತ್ರೆಯನ್ನು ಗಮನಿಸಿದರೆ ಇದರಂತ ಅಮಾನವೀಯ ಆಚರಣೆ ಮತ್ತೊಂದಿಲ್ಲ ಎನಿಸುತ್ತದೆ. ಕಾರಣ ಮದುವೆ ಎಂಬುದು ಇಂದಿನ ಕಲ್ಪನೆಯ ರೀತಿಯಲ್ಲಿ ಇರಲಿಲ್ಲ. ಮದುವೆ ಮಾಡಿಕೊಳ್ಳುವ ಮೊದಲು ಮದುವಣಗಿತ್ತಿ ಮದುಮಗನ ಸ್ನೇಹಿತರು,

ಸಮುದಾಯದ ಮುಖಂಡರು ಹಾಗೂ ಇನ್ನೂ ಹತ್ತಾರು ಜನರ ಜೊತೆ ಸಂಪರ್ಕ ಮಾಡಬೇಕಿತ್ತು. ಮದುವೆ ಮಾಡಿಕೊಂಡ ಗಂಡ ಹೆಂಡತಿಯನ್ನು ಎಷ್ಟು ಜನರ ಹತ್ತಿರ ಸಂಭೋಗ ಮಾಡಿದ್ದಿ? ಎಂದು ಕೇಳಿ ಅವಳು ಹೇಳುವವರ ಮನೆಗಳಿಗೆಲ್ಲ ಮದುಮಗನೇ ಹೋಗಿ ಕುರಿ, ಮೇಕೆಗಳನ್ನು ಪಡೆದುಕೊಂಡು ಬರುತ್ತಿದ್ದನು. ಇದಕ್ಕೆ ಮದುವಣಗಿತ್ತಿಯ ಜೊತೆ ಸಂಭೋಗ ಮಾಡಿದವರೆಲ್ಲರೂ ಕುರಿಮೇಕೆಗಳನ್ನು ಕೊಡಬೇಕಿತ್ತು. ಹೆಣ್ಣಿನ ಶೀಲತ್ವವು ಅವಳು ಮದುವೆಗೂ ಮುಂಚೆ ಸಂಭೋಗ ಬೆಳೆಸಿದ ಆಧಾರದ ಮೇಲೆ ನಿರ್ಧಾರವಾಗುತ್ತಿತ್ತು. ಹೆಚ್ಚು ಜನರ ಜೊತೆ ಸಂಭೋಗ ಮಾಡಿದ್ದರೆ ಹೆಚ್ಚಿನ ಮನ್ನಣೆ ನೀಡಲಾಗುತ್ತಿತ್ತು. ಇಲ್ಲವಾದರೆ "ನಾಯಿ ಮೂಸದ ಮಡಿಕೆ" ಎಂದು ಕರೆದು ಕೀಳಾಗಿ ಕಾಣಲಾಗುತ್ತಿತ್ತು.

ಪ್ರಸ್ತುತ ಸಂದರ್ಭದಲ್ಲಿ ಜಾರಿಯಲ್ಲಿರುವ ನಮ್ಮ ರೀತಿ ರಿವಾಜುಗಳು ಮಹಿಳೆಯ ಶೀಲದ ಪ್ರಶ್ನೆಗಳು ಹಿಂದೆ ಇರಲಿಲ್ಲ. ಅಂದಿನ ಮದುವೆ ಪದ್ಧತಿಗಳು ಇಂದು ನಮಗೆ ಸಮಾಜಘಾತುಕ ಆಶ್ಚರ್ಯಕರ ಮತ್ತು ಕಾನೂನು ಬಾಹಿರ ಎಂಬಂತೆ ಕಂಡರೂ ಆ ಕಾಲಕ್ಕೆ ಸಮಾಜದ ಒಪ್ಪಿತದೊಂದಿಗೆ ನಡೆಯುತ್ತಿದ್ದವು.

ಪರಿವರ್ತನಾತ್ಮಕ ಜಗತ್ತಿನಲ್ಲಿ ಎಲ್ಲಾ ವಸ್ತುಗಳು ಪರಿವರ್ತನೆಗೊಂಡಂತೆ ನಮ್ಮ ಗ್ರಹಿಕೆ, ನಂಬಿಕೆ ಮತ್ತು ಆಚರಣೆಗಳು ಬದಲಾವಣೆಗೊಂಡವು. ಆಯಾ ಕಾಲದಲ್ಲಿ ಕೆಲವು ನಡವಳಿಕೆಗಳು ನೀತಿಯುತವಾಗಿಯೇ ಕಂಡುಬರುತ್ತವೆ. ಕಾಲ ಬದಲಾವಣೆಯಾದಂತೆ ಸಮಾಜದಲ್ಲಿನ ಅಂತರ ಘರ್ಷಣೆ ಅಥವಾ ಬಾಹ್ಯ ಪ್ರೇರಣೆಯಿಂದ ಹಳೆಯ ನಂಬಿಕೆ ರೂಢಿ ಸಂಪ್ರದಾಯಗಳು ನೀತಿಬಾಹಿರವಾಗಿ ಅಥವಾ ವಿಚಿತ್ರವಾಗಿ ಸಮಾಜದ ದೃಷ್ಟಿಯಲ್ಲಿ ಖಂಡನೀಯವೆನಿಸಿಕೊಳ್ಳುತ್ತವೆ. ಈ ಖಂಡನೀಯವು ಸಮಾಜದ ದೃಷ್ಟಿಯಿಂದಲೇ ವಿನಃ ಅನುಸರಿಸುತ್ತಿರುವ ಸಮುದಾಯದ ದೃಷ್ಟಿಯಿಂದಲ್ಲ ಎಂಬುವುದನ್ನು ನಾವು ನೀವು ಅರಿತುಕೊಳ್ಳಬೇಕಾಗಿದೆ. ಏಕೆಂದರೆ ಬುಡಕಟ್ಟುಗಳಲ್ಲಿನ ನಂಬಿಕೆ ಮತ್ತು ಆಚರಣೆಗಳನ್ನು ಪರಮಾನೋಜ್ಞಾನ ಎಂದು ಒಪ್ಪಿಕೊಳ್ಳುವ ಬುದ್ಧಿಜೀವಿ ಸಮಾಜ, ಬುಡಕಟ್ಟುಗಳಲ್ಲಿನ ಕೆಲವು ಆಚರಣೆಗಳನ್ನು ಮಾತ್ರ ಅಮಾನವೀಯ ಮತ್ತು ಅನಿಷ್ಟ ಎಂದು ಜರಿದು ಅವಮಾನಿಸುತ್ತಿದೆ. ಇವರು ಗುರುತು ಮಾಡಿ ಛೇಡಿಸಿ ತೋರಿಸುತ್ತಿರುವ ಬುಡಕಟ್ಟುಗಳಲ್ಲಿನ ನಂಬಿಕೆ ಮತ್ತು ಆಚರಣೆಗಳು ಸಮುದಾಯಗಳ ದೃಷ್ಟಿಯಲ್ಲಿ ಸಹಜ ಕ್ರಿಯೆಯಾಗಿದೆ.

ಇರುಳಿಗ ಬುಡಕಟ್ಟಿನಲ್ಲಿ ಮದುವೆ ಎಂಬ ನಿರ್ದಿಷ್ಟ ಆಚರಣೆಗಳು ತೀರಾ ವಿರಳವಾಗಿ ಕಂಡುಬರುತ್ತವೆ. ಪ್ರಕೃತಿಯ ಮಕ್ಕಳಾದ ಇವರು ಪ್ರಕೃತಿಯ ಎಲ್ಲಾ ಪ್ರಾಣಿಗಳಂತೆಯೇ ತಮಗಿಷ್ಟ ಬಂದ ಗಂಡು ಹೆಣ್ಣುಗಳನ್ನು ಆಯ್ಕೆ ಮಾಡಿಕೊಂಡು ಹಾಡಿ ಬಿಟ್ಟು ಓಡಿ ಹೋಗಿ ಕೆಲದಿನಗಳು ಕಾಡಿನಲ್ಲೇ ವಾಸ ಮಾಡಿ ನಂತರ ಹಿಂದಿರುಗುತ್ತಾರೆ. ಒಮ್ಮೊಮ್ಮೆ ಕೈಯಲ್ಲಿ ಮಕ್ಕಳನ್ನು

ಹಿಡಿದುಕೊಂಡು ಬಂದರು ಆಶ್ಚರ್ಯಪಡಬೇಕಾಗಿಲ್ಲ. ಇದಕ್ಕೆ ಸಮುದಾಯದವರ ಸಂಪೂರ್ಣ ಒಪ್ಪಿಗೆಯಿದೆ. ತಾಳಿ, ಕುಂಕುಮ, ಕಾಲುಂಗುರ ಮುಂತಾದ ಯಾವ ಗುರುತುಗಳು ಮುಖ್ಯವಾಗುವುದಿಲ್ಲ. ತಮಗಿಷ್ಟ ಬಂದಷ್ಟು ದಿನ ಜೊತೆಗಿದ್ದು ಭಿನ್ನಾಭಿಪ್ರಾಯಗಳುಂಟಾದರೆ ಇನ್ನೊಬ್ಬರ ಜೊತೆ ಓಡಿ ಹೋಗುತ್ತಾರೆ. ಇದು ಸಮುದಾಯದಲ್ಲಿ ಸಹಜವಾಗಿ ಕಂಡುಬರುವ ಕ್ರಿಯೆಯಾಗಿದೆ. ಇವರಲ್ಲಿ ಹೆಣ್ಣಿನ ಶೀಲತ್ವ, ಹೆಣ್ಣಿನ ಮೇಲಿನ ಶಾಶ್ವತ ಹಕ್ಕು ಮುಂತಾದ ಯಾವ ಸಂಕೋಲೆಗಳನ್ನು ಕಾಣಲು ಸಾಧ್ಯವಿಲ್ಲ. ಇಂದಿಗೂ ಬಹುಸಂಖ್ಯಾತ ಇರುಳಿಗರು ಈ ಮಾರ್ಗದಲ್ಲೇ ಮದುವೆಯಾಗುತ್ತಿರುವುದನ್ನು ಕಾಣಬಹುದು. ಸಮುದಾಯದಲ್ಲಿ ಈ ರೀತಿಯ ಮದುವೆ ಸಹಜ ಕ್ರಿಯೆಯೇ ಆಗಿದೆ. ಆದರೆ ಸುತ್ತಮುತ್ತಲಿನ ಜನ ಮಾತ್ರ ಇದೊಂದು ಇಡೀ ಸಮುದಾಯದ ಕೆಟ್ಟ ಚಾಳಿ ಎಂದು ಛೇಡಿಸಿ ನಿರಂತರವಾಗಿ ಅವಮಾನಿಸುತ್ತಲೇ ಇದ್ದಾರೆ.

ರಾಮಾಯಣ ಮಹಾಭಾರತ ಮತ್ತು ವೇದ ಉಪನಿಷತ್ತುಗಳಲ್ಲಿ ಕಂಡುಬರುವ ಇದೇ ರೀತಿಯ ಮದುವೆಗಳನ್ನು ಅಥವಾ ಸಂಬಂಧಗಳನ್ನು ಹೆಮ್ಮೆ ಶ್ರೇಷ್ಠತೆಯಿಂದ ಒಪ್ಪಿಕೊಳ್ಳುವ ನಮ್ಮ ಸಮಾಜ ತಮ್ಮ ಹಿಂದಿನ ಹಿರಿಯರು ಕೂಡ ಇಂತಹದೇ ಹಾದಿಯನ್ನು ತುಳಿದು ಬಂದಿದ್ದಾರೆ ಎಂಬುದು ಮರೆತು ಹೋದಂತೆ ಕಾಣುತ್ತದೆ. ಏಕೆಂದರೆ ಮಹಾಭಾರತದಲ್ಲಿ, ಕುಂತಿ ಮದುವೆಗೆ ಮುಂಚೆ ಕರ್ಣನಿಗೆ ಜನ್ಮ ನೀಡುತ್ತಾಳೆ. ಹಾಗೆಯೇ ದ್ರೌಪದಿಗೆ ಐದು ಜನ ಗಂಡಂದಿರು ಇರುತ್ತಾರೆ. ಹಾಗೆಯೇ ಬ್ರಹ್ಮ ತನ್ನ ಮಗಳನ್ನೆ ಮದುವೆಯಾಗುತ್ತಾನೆ. ಇನ್ನು ವೈದಿಕರ ವಿವಿಧ ಪಟ್ಟಿಗಳನ್ನು ನೋಡಿದರೆ ಮಹಿಳೆಯರ ಸ್ಥಿತಿ ಚಿಂತಾಜನಕವಾಗಿ ಕಂಡುಬರುತ್ತದೆ. ಇವುಗಳನ್ನು ಒಪ್ಪಿಕೊಂಡು ಗೌರವಿಸಿ ಪೂಜಿಸುವ ನಮ್ಮ ಸಮಾಜ ಮಹಿಳೆಯರಿಗೆ ಮದುವೆಯಲ್ಲಿ ಮುಕ್ತ ಸ್ವಾತಂತ್ರ್ಯ ನೀಡುವ ಇರುಳಿಗರ ಮದುವೆ ಪದ್ಧತಿಯನ್ನು ಟೀಕಿಸುವುದರಲ್ಲಿ ಯಾವ ನ್ಯಾಯವಿದೆ.

ಇರುಳಿಗರಲ್ಲಿ ಕಾಡಿಗೆ ಓಡಿಹೋದ ಜೋಡಿಗಳನ್ನು ನಾಡಗೌಡ, ಕಟ್ಟುಗೌಡ, ಕೋಲುಕಾರ ಮತ್ತು ಕುಲಗೌಡನ ಸಮ್ಮುಖದಲ್ಲಿ ತಂದು ನಿಲ್ಲಿಸಲಾಗುತ್ತಿತ್ತು. ನಾಡಗೌಡ ಇಬ್ಬರನ್ನು ವಿಚಾರಿಸುತ್ತ "ನೀವಿಬ್ಬರು ಪರಸ್ಪರ ಬದುಕಲು ಇಷ್ಟಪಡುವಿರಾ, ನಿನ್ನನ್ನು ಸಾಕುವ ಯೋಗ್ಯತೆ ಇವನಿಗಿದೆಯೇ" ಎಂಬ ಪ್ರಶ್ನೆ ಕೇಳುತ್ತಾನೆ. ಇದಕ್ಕೆ ಹುಡುಗಿ ಒಪ್ಪಿಕೊಂಡರೆ ಅವರಿಬ್ಬರ ಕೈಗಳನ್ನು ಹಿಡಿಸಿ ಅರಳಿಮರ ಅಥವಾ ಆಲದ ಮರವನ್ನು ಸುತ್ತುವಂತೆ ಹೇಳುತ್ತಾನೆ. ಹಾಗೇ ಸುತ್ತಿದರೆ ಮದುವೆ ಆದಂತೆ, ಇಲ್ಲಿ ಯಾವ ತಾಳಿ ಕಾಲುಂಗುರ ಕಾಲ ಘಳಿಗೆಯ ಒಪ್ಪಿಗೆ ಹಾಕಿರುವುದಿಲ್ಲ. ಬಂದ ನಂಟರಿಷ್ಟರಿಗೆ ಮದುವೆ ಮಾಡುವವರು ಕುರಿ ಅಥವಾ ಮೇಕೆ ಕೊಯ್ದು ಊಟ ಹಾಕಿಸುತ್ತಾರೆ. ಇದಕ್ಕೆ ತಗಲುವ ವೆಚ್ಚವನ್ನು ಗಂಡಿನ ಕಡೆಯವರೇ ಭರಿಸಬೇಕಾಗುತ್ತದೆ. ಅಲ್ಲಿಗೆ ಮದುವೆ ಪ್ರಕ್ರಿಯೆಯೇ ಮುಗಿಯುತ್ತದೆ. ಈ ಎಲ್ಲಾ ಆಚರಣೆಗಳು ರಾತ್ರಿ ಸಮಯದಲ್ಲಿ ಕಂಡುಬರುತ್ತಿರುವುದು ವಿಶೇಷವಾಗಿದೆ.[೭]

ಇತ್ತೀಚಿನ ದಿನಮಾನಗಳಲ್ಲಿ ಇರುಳಿಗರಲ್ಲೂ ಸಮಾಜದ ಪ್ರೇರಣೆಯಿಂದಲೋ, ಆಧುನಿಕ ಪ್ರಭಾವದಿಂದಲೋ ಅಥವಾ ತಮ್ಮ ಆಚರಣೆಗಳ ಬಗ್ಗೆ ಮುಜುಗರ ಉಂಟಾಗಿಯೇ ಮದುವೆ ಎಂಬ ನಿರ್ದಿಷ್ಟ ಆಚರಣೆ ಒಳಗಾಗುತ್ತಿದ್ದಾರೆ. ಅದು ಸುತ್ತಮುತ್ತಲು ವಾಸಿಸುವ ಬೇರೆ ಬೇರೆ ಸಮುದಾಯದವರ ಪ್ರಭಾವವೋ ಅಥವಾ ತಮ್ಮ ಮದುವೆಯ ರೀತಿಯ ಬಗ್ಗೆ ಅವರಿಗೆ ಉಂಟಾದ ಕೀಳರಿಮೆಯೋ ಗೊತ್ತಿಲ್ಲ. ಮದುವೆಯನ್ನು ಒಂದು ಕ್ರಮಬದ್ಧವಾಗಿ ಮಾಡಲು ಪ್ರಾರಂಭಿಸಿದ್ದಾರೆ. ಆದರೆ ಈ ಮದುವೆಯೂ ಗ್ರಾಮದಲ್ಲಿ ಇಬ್ಬರು ಅಥವಾ ಮೂರು ಮಂದಿಯಲ್ಲಿ ಮಾತ್ರ ಕಾಣಬಹುದು. ಉಳಿದೆಲ್ಲರೂ ತಮ್ಮ ಪರಂಪರೆಯನ್ನು ಮುಂದುವರಿಸಿಕೊಂಡು ಓಡಿ ಹೋಗಿ ಮದುವೆಯಾಗುವುದೇ ಹೆಚ್ಚಾಗಿದೆ.

ಇರುಳಿಗರಲ್ಲಿ ಹೆಣ್ಣು ನೋಡುವುದು

ಇರುಳಿಗರಲ್ಲಿ ಹೆಣ್ಣು ನೋಡುವ ಸಂಪ್ರದಾಯ ಬಹುತೇಕವಾಗಿ ರಾತ್ರಿ ಸಮಯದಲ್ಲೇ ಕಂಡುಬರುತ್ತದೆ. ಹೆಣ್ಣು ನೋಡುವ ಮುಂಚಿನ ದಿನ 'ಉಗುನಿ ಹಂಬಿನ ಕುಡಿಯನ್ನು ಚಿವುಟಿ (ಕಿತ್ತು) ಅದಕ್ಕೆ ಅರಿಶಿಣ, ಕುಂಕುಮ ಮೆತ್ತಿ ತೇವದ ಬಟ್ಟೆಯಿಂದ(ಒದ್ದೆ ಬಟ್ಟೆ) ಕಟ್ಟಿ ಬಂದು ಬಿಡುತ್ತಾರೆ(ಇದು ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿಲ್ಲ). ಬೆಳಿಗ್ಗೆ ಹೊತ್ತಿಗೆ ಆ ಹಂಬಿನ ಕುಡಿಯು ಚಿಗುರೊಡೆದರೆ, ಹೋದ ಕೆಲಸ ಕೈಗತ್ತುವುದು ಎಂದು ನಂಬುತ್ತಾರೆ. ರಾತ್ರಿ ಸಮಯಕ್ಕೆ ಸರಿಯಾಗಿ ಹೆಣ್ಣಿನ ಮನೆ ಸೇರಿ ಅವರ ಮನೆಯಲ್ಲಿ ಊಟ ತಿಂಡಿ ಮಾಡಿ ಬಂದಿರುವ ಉದ್ದೇಶವನ್ನು ತಿಳಿಸುತ್ತಾರೆ. ಹಿಂದೆ ಹೆಣ್ಣು ಒಪ್ಪಿಗೆಯಾದರೆ ಮಾತ್ರ ಅವರ ಮನೆಯಲ್ಲಿ ಊಟ ಮಾಡುತ್ತಿದ್ದರು. ಇಲ್ಲವಾದರೆ ಹೋಗುವಾಗ ಮೊದಲೇ ಬುತ್ತಿ ಕಟ್ಟಿಕೊಂಡು ಹೋಗಿ ರಾತ್ರಿ ಅದನ್ನೇ ತಿಂದು ಮಲಗುತ್ತಿದ್ದರು; ಹೆಣ್ಣಿನ ಮನೆಯಲ್ಲಿ ಏನೂ ತಿನ್ನುತ್ತಿರಲಿಲ್ಲ. ಪರಸ್ಪರ ಇಬ್ಬರಿಗೂ ಒಪ್ಪಿಗೆಯಾದರೆ ಮಾತ್ರ ಊಟ ಮಾಡುತ್ತಿದ್ದರು. ಒಪ್ಪಿಗೆಯಾದ ಮೇಲೆ ಹೆಸರು ಬಲ ಕೇಳಿ ಬರುತ್ತಿದ್ದರು. ಸರಿಯಾಗಿ ಬಂದರೆ ಮದುವೆಗೆ ಸಿದ್ಧಮಾಡಿಕೊಳ್ಳುತ್ತಿದ್ದರು. ಇದಕ್ಕೂ ಮುಂಚಿತವಾಗಿ ಹೆಣ್ಣಿನವರು ಮೂರು, ಐದು ಅಥವಾ ಏಳು ಬೆಸ ಸಂಖ್ಯೆಯ ಜನರು ಗಂಡಿನ ಮನೆಯನ್ನು ನೋಡಲು ಹೋಗುತ್ತಾರೆ. ಹೆಸರು ಬಲ ಸರಿ ಬಂದು ಗಂಡಿನ ಮನೆಯವರಿಗೆ ಇಷ್ಟವಾದರೆ ಪರಸ್ಪರ ಇಬ್ಬರು ಹೆಸರು ಬಲ ಬರುವವರೆಗೂ ಬಿಡದೆ ಸರಿಮಾಡಿಸಿ ಮದುವೆಯ ಕಾರ್ಯದಲ್ಲಿ ಮುಂದುವರಿಯುತ್ತಾರೆ.

ಮದುವೆ

ಇರುಳಿಗರಲ್ಲಿ ಮದುವೆ ಕಾರ್ಯವು ಎರಡರಿಂದ ಮೂರು ದಿನಗಳಲ್ಲಿ ಕಂಡುಬರುತ್ತದೆ. ಮೊದಲನೆ ದಿನ ಮನೆಗೆ ಒಂದು ಆಳುಗಳಂತೆ ಕೋಲುಕಾರ ಬಂದು ಕರೆದುಕೊಂಡು ಬರುತ್ತಾನೆ. ಬಂದ ಜನರು ಹೊಂಗೆಸೊಪ್ಪು ರೋಡ್‌ಬಾಗೆ ಹೂ, ಬಾಳೆಕಂಬ, ತೆಂಗಿನಗರಿ,

ಮಾವಿನ ಸೊಪ್ಪು, ಎಳನೀರು ತಂದು ಚಪ್ಪರ ಹಾಕುತ್ತಾರೆ. ಈ ಚಪ್ಪರವು ಚೌಕಾಕಾರದಲ್ಲಿದ್ದು ನೈರುತ್ಯ ದಿಕ್ಕಿನ ಕಡೆ ಒಂದು ಕಂಬವನ್ನು ಗಂಡಿನ ಕೈಲಿ ನೆಡೆಸುತ್ತಾರೆ. ಆ ಕಂಬಕ್ಕೆ ಗಂಡು ಹೂ ಕುಂಕುಮ ಕಡ್ಡಿ ಕರ್ಪೂರದಿಂದ ಪೂಜೆ ಮಾಡಿ ಹಾಲು ಹೊಯ್ದು ಪೂಜೆ ಮಾಡುತ್ತಾನೆ. ನಂತರ ಬಿದಿರುಗಳಿಂದ ಚಪ್ಪರ ನಿರ್ಮಿಸಿ ಅದಕ್ಕೆ ಮೇಲಿನ ಎಲ್ಲಾ ಸೊಪ್ಪು ಹೂಗಳಿಂದ ಸಿಂಗರಿಸುತ್ತಾರೆ. ಚಪ್ಪರದ ಮಧ್ಯಭಾಗದಲ್ಲಿ ದಾರೆ ಹೊಯ್ಯುವ ಸ್ಥಳ ನಿರ್ಮಿಸುತ್ತಾರೆ. ಮಣ್ಣಿನಿಂದ ಚೌಕಾರದಲ್ಲಿ ಕುಪ್ಪೆಯನ್ನು ಮಾಡಿ ಮಧ್ಯಭಾಗದಲ್ಲಿ ಹಾಲಗಂಭ ನಿಲ್ಲಿಸುತ್ತಾರೆ. ಅದಕ್ಕೆ ಅಂಕಾಲೆ ಸೊಪ್ಪು, ಹೂ ಅರಿಶಿಣ, ಕುಂಕುಮ ಹಚ್ಚುತ್ತಾರೆ. ಇದರ ಮುಂದೆಯೇ ಧಾರೆಕಾರ್ಯ ನಡೆಯುತ್ತದೆ. ಮಧ್ಯಾಹ್ನದ ಹೊತ್ತಿಗೆ ಚಪ್ಪರದ ಕೆಲಸ ಮುಗಿಸುತ್ತಾರೆ. ಸಾಯಂಕಾಲ ನಾಲ್ಕರಿಂದ ಐದು ಗಂಟೆಯ ಹೊತ್ತಿಗೆ ಐದು ಅಥವಾ ಏಳು ಜನ ಮುತ್ತೈದೆಯರು "ಗಂಡಿಗೆ ಸ್ನಾನ ಮಾಡಿಸಲು ನೀರು ತರುವುದಕ್ಕಾಗಿ ಹೋಗುತ್ತಾರೆ. ಕೆರೆ, ಬಾವಿ, ನಲ್ಲಿಯ ಮುಂದೆ ಐದು ಬಿಂದಿಗೆ(ಕೊಡ)ಗಳನ್ನಿಟ್ಟು ಅವುಗಳಿಗೆ ಅರಿಶಿಣ, ಕುಂಕುಮ ಹಚ್ಚಿ ಹಾಗೆಯೇ ನಲ್ಲಿಗೂ ಕಂಕುಮ ಹಚ್ಚಿ ನವಧಾನ್ಯದ ಗಂಟನ್ನು ಕಟ್ಟುತ್ತಾರೆ. ಹಾಗೆಯೇ ಕೊಡದ ಕೊರಳಿಗೂ ಮತ್ತು ನಲ್ಲಿಗೂ ನವಧಾನ್ಯದ ಗಂಟನ್ನು ಕಟ್ಟುತ್ತಾರೆ. ಈ ಗಂಟಿನಲ್ಲಿ ಭತ್ತ, ರಾಗಿ, ಜೋಳ, ತೊಗರಿ ಮುಂತಾದ ಧಾನ್ಯಗಳನ್ನು ಹಾಕಿ ಅರಿಶಿಣ ಮೆತ್ತಿದ್ದ ಬಿಳಿ ಬಟ್ಟೆಯಲ್ಲಿ ಗಂಟು ಹಾಕುತ್ತಾರೆ. ನಲ್ಲಿಗೂ ಮತ್ತು ತಂದಿರುವ ಬಿಂದಿಗೆಗೂ ಕಟ್ಟಿ ಪೂಜೆ ಮಾಡುತ್ತಾರೆ. ಈ ಸಂದರ್ಭದಲ್ಲಿ ಸೋಬಾನೆ ಪದಗಳನ್ನು ಹಾಡುತ್ತಾರೆ.

> ಚಿಗುರು ಚಿತ್ತಾರದಲೆಗಬ್ಬದ್ಹೊಂಬಾಳೆ
> ತಂದಿರಿಸೆ ನಾರಿ ಕಳಸಕ್ಕೆ । ಸೋಬಾನವೆ
> ಕೇದಗೆ ವನಬಳಸಿ ಬಳಲಿದ ಗಂಗವ್ವನ॥
> ಆಂಗಾಲದಾಟಿ ಹೊಳೆದಾಟಿ। ಸೋಬಾನವೇ
> ತಂದಿರಿಸೆನಾರಿ ಕಳಸಕ್ಕೆ
> ಅಂಗಾಲದಾಟಿ ಆ ನೀರು
> ಬಾಳೆವಾಲಾಡಿ ಬೆಳೆದಾವೆ । ಮೂಡಲದ ನೀರು
> ತಂದಿರಿಸೆ ನಾರಿ ಕಳಸಕ್ಕೆ ಸೋಬಾನವೆ.[೮]

ತಂದಿರುವ ಕಳಸಕ್ಕೆ ಪೂಜೆ ಮಾಡಿದ ನಂತರವೇ ನೀರನ್ನು ಬಿಂದಿಗೆಗೆ ತುಂಬಿಸಿಕೊಳ್ಳಲು ಪ್ರಾರಂಭಿಸುತ್ತಾರೆ. ನಂತರ ನೀರನ್ನು ಮದುವೆ ಮನೆಗೆ ತಂದು ಹೊಸ ಒಲೆಯ ಮೇಲೆ ಇಟ್ಟಿರುವ ಹಂಡೆ ಅಥವಾ ಮಣ್ಣಿನ ಮಡಿಕೆಯಲ್ಲಿ ಹಾಕುತ್ತಾರೆ. ನಂತರ ನೀರನ್ನು ಹದವಾಗಿ ಕಾಯಿಸಿ ನಂತರ ಐದು ಅಥವಾ ಏಳು ಜನರು ಕುಟ್ಟಿದ ಅರಿಶಿಣವನ್ನು ಗಂಡು ಅಥವಾ

ಹೆಣ್ಣಿಗೆ ಮೈಗೆಲ್ಲಾ ತಿಕ್ಕಿ ತಲೆಗೆ ಸೀಗೆಕಾಯಿ ಹಾಕಿ ಸ್ನಾನ ಮಾಡಿಸುತ್ತಾರೆ. ಮುತ್ತೈದೆಯರಾಗಿ ಎಲ್ಲಾ ಸಂಬಂಧಿಕರು ಬಂದು ಅರಿಶಿಣ ತಿಕ್ಕಿ ತಲೆಗೆ ಸೀಗೆಕಾಯಿ ಹಾಕಿ ಸ್ನಾನ ಮಾಡಿಸುತ್ತಾರೆ. ಹೀಗೆ ಸ್ನಾನ ಮಾಡಿಸುವ ಸಂದರ್ಭದಲ್ಲಿ ಸೋಬಾನೆ ಹಾಡುತ್ತಿರುತ್ತಾರೆ. ಅರಿಶಿಣ ಸ್ನಾನವಾದ ಮೇಲೆ ಹೆಣ್ಣಾಗಲಿ, ಗಂಡಾಗಲಿ ಮನೆಯಿಂದ ಹೊರಗೆ ಹೋಗಕೂಡದು. ಅದರಲ್ಲೂ ಹುಣಸೆ ಮರದ ಕೆಳಗೆ ಹೋಗಲೇಬಾರದೆಂದು ಕಟ್ಟಪ್ಪಣೆ ಮಾಡುತ್ತಾರೆ. ವೈಜ್ಞಾನಿಕವಾಗಿ ಹುಣಸೆಮರ ಹೆಚ್ಚು ಆಮ್ಲಜನಕ ತೆಗೆದುಕೊಂಡು ಇಂಗಾಲದ ಡೈ ಆಕ್ಸೈಡ್‌ನ್ನು ಬಿಡುವುದರಿಂದ ಉಸಿರಾಟಕ್ಕೆ ಸಮಸ್ಯೆಯಾಗುತ್ತದೆ ಎಂಬುದನ್ನು ಅರಿತ ಇವರು ತಮ್ಮದೇ ರೀತಿಯಲ್ಲಿ ಗ್ರಹಿಸಿಕೊಂಡಿದ್ದಾರೆ.

ರಾತ್ರಿಯಲ್ಲಿ ಚಪ್ಪರ ಹಾಕಿದವರೆಲ್ಲರನ್ನೂ ಕರೆದು ಊಟ ಹಾಕುತ್ತಾರೆ. ಇದನ್ನು ಚಪ್ಪರದೂಟ ಎನ್ನುತ್ತಾರೆ. ರಾತ್ರಿ ಮದುವೆ ನಡೆಯುವ ಸ್ಥಳಕ್ಕೆ ಹೋಗಿ ಗಂಡಿನ ಕಡೆಯವರು ಹೆಣ್ಣಿಗೆ ತಂದಿರುವ ಬಟ್ಟೆ ಬರೆ ಹಾಗೆಯೇ ಹೆಣ್ಣಿನ ಕಡೆಯವರು ಗಂಡಿಗೆ ತಂದಿರುವ ಬಟ್ಟೆಯನ್ನು ಕೊಟ್ಟು ಒಸಗೆ ಸಾಮಾನುಗಳೊಂದಿಗೆ ಗಂಡು ಹೆಣ್ಣನ್ನು ಕೂರಿಸಿ ಒಸಗೆ ಹಾಕುತ್ತಾರೆ. ಈ ಸಂದರ್ಭದಲ್ಲಿ ಹೆಣ್ಣಿನವರು ಗಂಡಿನ ಕಡೆಯವರಿಗೆ, ಗಂಡಿನ ಕಡೆಯವರು ಹೆಣ್ಣಿನ ಕಡೆಯವರಿಗೆ ಜರಿಯೋ ಹಾಡುಗಳನ್ನು ಹಾಡುತ್ತಾರೆ

ಸೋ ಎನ್ನಿರೇ ಸೋಬಾನಾ ಬನ್ನಿರೇ
ಸೋಬಾನ್ ಎಳ್ಬನ್ನಿ ಸೊಬಗಿನ್ ಮುತ್ತೈದೆರ
ಹೋದೋ ತಮ್ಮಯ್ಯ ಮದುವೆಗೇ ಗಂಡವರೇ
ಒನಕೆಗಾತುರದ ಕಣಕಾಲ ಬುಟ್ಟುಕೊಂಡು
ಗಣಿಕೇಯ ಸೊಪ್ಪ ಮುಡುಕೊಂಡು॥
ಹೆಣ್ಣಾವ್ರವ್ವ ಪುಣಕಪುಣಕಾನೆನೆ ನೆಗೆದಾಳೋ
ಕಕ್ಕೆ ಮರದಡೀಲಿ ಕುಕ್ಕಿ ಎಣಿಯೋ ನ್ಯಾರೋ,
ಕೊಕ್ಕರ ಮೀಸೆ ಕೊಣಾಮೀಸೆ॥ ಗಂಡವ್ರಪ್ಪನ
ಮೀಸೆ ಇದ್ದವೆರಡು ಮೀಸೆ ಇಲಿ ಮೇದೋ॥[೮]

ಹೀಗೆ ಹಲವಾರು ಹಾಸ್ಯಾಸ್ಪದ ಹಾಡನ್ನು ಹಾಡುತ್ತಾರೆ. ಹೆಣ್ಣಿನವರು ಗಂಡಿನವರನ್ನು, ಗಂಡಿನವರು ಹೆಣ್ಣಿನವರನ್ನು ಜರಿದು ರಾತ್ರಿಯೆಲ್ಲ ಖುಷಿಯಿಂದ ಪರಸ್ಪರ ನಕ್ಕುನಲಿಯುತ್ತಾರೆ.

ಬೆಳಗಿನ ಜಾವ ಹೆಣ್ಣಿನ ಕಡೆಯವರು, ಹಾಗೆಯೇ ಗಂಡಿನ ಕಡೆಯವರು ಹೆಣ್ಣು ಗಂಡು ಪರಸ್ಪರ ನೋಡದಂತೆ ಯಾರದೋ ಮನೆಯಲ್ಲಿ ಅಥವಾ ಇನ್ಯಾರದೋ ಪಡಸಾಲೆಯಲ್ಲಿ ಗಂಡು ಹೆಣ್ಣುಗಳನ್ನು ಕೂರಿಸುತ್ತಾರೆ. ಗಂಡಿನ ಜೊತೆ ಒಂದು ತಟ್ಟೆಯಲ್ಲಿ ಅಕ್ಕಿ, ಬೆಲ್ಲ, ಕೊಬ್ಬರಿ, ಚಿಕ್ಕ ಕನ್ನಡಿ, ಕಳಸ, ಕಳಸಕ್ಕೆ ಎಲೆಯಿಂದ ಸಿಂಗರಿಸಿ ಹೂ ಮುಡಿಸಿರುತ್ತಾರೆ.

ಇದನ್ನು ಗಂಡಿನ ಅಕ್ಕ ಅಥವಾ ತಂಗಿ ಹಿಡಿದುಕೊಂಡು ಕುಂತಿರುತ್ತಾಳೆ. ಅದೇ ರೀತಿಯಲ್ಲಿ ಹೆಣ್ಣಿನ ಜೊತೆಯಲ್ಲಿ ಹೆಣ್ಣಿನ ಅಕ್ಕ ಅಥವಾ ತಂಗಿ ಹಿಡಿದುಕೊಂಡು ಕುಂತಿರುತ್ತಾಳೆ. ಗಂಡಿಗೆ ಅದಾಗಲೇ ಕಂಕಣವನ್ನು ಗಂಡಿನ ಮಾವನಿಂದ ಕಟ್ಟಿಸಿರುತ್ತಾರೆ. ಗಂಡಿನ ಕೈಗೆ ಬೀಸಣಿಗೆಯನ್ನು ಕೊಟ್ಟು ತಲೆಗೆ ಮೈಸೂರು ಪೇಟವನ್ನು ಹಾಕುತ್ತಾರೆ. ಗಂಡಿಗೆ ಹೆಣ್ಣಿನ ತಮ್ಮ ಚಪ್ಪಲಿ ಹಾಕುವ ಶಾಸ್ತ್ರ ಪ್ರಾರಂಭವಾಗುತ್ತದೆ. ಹೆಣ್ಣಿನ ತಂದೆ ತಾಯಿಯರು ಗಂಡಿನ ಪಾದ ತೊಳೆದು, ಹೆಣ್ಣಿನ ತಮ್ಮನಿಂದ ಚಪ್ಪಲಿ ಹಾಕಿಸುತ್ತಾರೆ. ಆಗ(ಚಪ್ಪಲಿ ಹಾಕಿದವನಿಗೆ) ಮಾವ ಬಾಮೈದುನನಿಗೆ ಕಾಣಿಕೆಯನ್ನು ಕೊಡಬೇಕು. ನಂತರ ಮೂರು ಅಥವಾ ಐದು ಜನ ಮುತ್ತೈದೆಯರು ಗಂಡಿಗೆ ಶಾಸ್ತ್ರ ಮಾಡುತ್ತಾರೆ. ಗಂಡಿನ ಹಣೆಗೆ ವಿಭೂತಿ ಕುಂಕುಮ ಹಚ್ಚಿ, ಮಂಡಿ, ತೊಡೆ, ಭುಜ ಹಾಗೂ ತಲೆಯ ಮೇಲೆ ಅಕ್ಕಿ ಕಾಳನ್ನು ಹಾಕಿ ಶಾಸ್ತ್ರ ಮಾಡುತ್ತಾರೆ. ಶಾಸ್ತ್ರ ಮುಗಿದ ಮೇಲೆ ಕೂರಿಸಿರುವ ಜಾಗದಿಂದ ಧಾರೆಗೆ ನಿಗದಿಮಾಡಿರುವ ಸ್ಥಳಕ್ಕೆ ಕರೆದುಕೊಂಡು ಬರುತ್ತಾರೆ. ಹೀಗೆ ಬರುವಾಗ ಹೊಸಕರಿಯ ಕಂಬಳಿಯನ್ನು ಕೊಡೆ(ಛತ್ರಿ)ಯ ಸಹಾಯದಿಂದ ಮೇಲಕ್ಕೆ ಎತ್ತಿ ಕಂಬಳಿಯ ನಾಲ್ಕು ಕುಡಿಗಳನ್ನು ನಾಲ್ಕು ಜನ ಹಿಡಿದುಕೊಂಡು ಅದರ ಕೆಳಗೆ ಗಂಡನ್ನು ಕರೆದುಕೊಂಡು ಬರುತ್ತಾರೆ. ಇದಕ್ಕೂ ಮೊದಲು ಧಾರೆಯ ಜಾಗಕ್ಕೆ ನೀರು ತರುವ ಶಾಸ್ತ್ರ ಮಾಡಿಸುತ್ತಾರೆ. ಏಳರಿಂದ ಹನ್ನೊಂದು ಜನರಾದಿಯಾಗಿ ಹೊಸ ಗಡಿಗೆಯಲ್ಲಿ ನೀರು ತರಲು ಹೋಗುತ್ತಾರೆ. ನಲ್ಲಿ ಅಥವಾ ಬಾವಿಯ ಮುಂದೆ ಗಡಿಗೆಗಳನ್ನು ಇಟ್ಟು ಅವುಗಳಿಗೆ ಅರಿಶಿಣ ಮತ್ತು ಕುಂಕುಮ ಹಚ್ಚಿ ನವಧಾನ್ಯಗಳ ಗಂಟನ್ನು ಕಟ್ಟುತ್ತಾರೆ. ಈ ಗಡಿಗೆಗಳಿಗೆ ಹೊಂಬಾಳೆಯನ್ನು ಹಾಕಿ ಕರಗದ ರೀತಿಯಲ್ಲಿ ಸಿದ್ಧಪಡಿಸುತ್ತಾರೆ. ಇದಕ್ಕೆ ಮಾಡಿವಾಳ ಶೆಟ್ಟಿ ಬಂದು ತನ್ನ ಪಂಜಿನ ಸೇವೆ ಮಾಡಿದ ನಂತರವೇ ಕರಗದಲ್ಲಿ ನೀರು ತರಲಾಗುತ್ತದೆ. ತಂದ ನೀರನ್ನು ಧಾರೆ ನಡೆಯುವ ಸ್ಥಳದಲ್ಲಿಡುತ್ತಾರೆ. ನಂತರ ಗಂಡು ಹಾಗೂ ಹೆಣ್ಣನ್ನು ಹಸೆಮಣೆಗೆ ಕರೆದುಕೊಂಡು ಬರುತ್ತಾರೆ.

ಹಸೆಮಣೆಗೆ ಬಂದ ಗಂಡಿಗೆ ಶಾಸ್ತ್ರದ ನೀರು ತಂದ ಮುತ್ತೈದೆಯರು ಅಕ್ಷತೆ ಮತ್ತು ವಿಭೂತಿ ಹಚ್ಚಿ ಅಕ್ಷತೆ ಹಾಕುತ್ತಾರೆ. ಇರುಳಿಗರಲ್ಲಿ ಇತ್ತೀಚಿನ ದಿನಗಳಲ್ಲಿ ಮಾತ್ರ ಪುರೋಹಿತರ ಪ್ರವೇಶವಾಗಿದೆ. ಹೆಣ್ಣನ್ನು ಹಸೆಮಣೆಗೆ ಕರೆತಂದು ಶಾಸ್ತ್ರ ಮಾಡುತ್ತಾರೆ. ಹೆಣ್ಣು ಮತ್ತು ಗಂಡು ಹಸೆಮಣೆಗೆ ಬರುವವರೆಗೂ ಪರಸ್ಪರ ಮುಖ ನೋಡದಂತೆ ಬಿಳಿಯ ಪರದೆಯನ್ನು ಹಿಡಿದಿರುತ್ತಾರೆ. ಗಂಡಿನ ಅಕ್ಕ ತಂದಿದ್ದ ಎಳ್ಳು ಜೀರಿಗೆಯನ್ನು ಹೆಣ್ಣು ಗಂಡಿಗೆ ಕೊಟ್ಟು ಪರಸ್ಪರ ಇಬ್ಬರೂ ತಲೆಯ ಮೇಲೆ ಹಾಕುವಂತೆ ಹೇಳುತ್ತಾರೆ. ತೆರೆಯ ಮರೆಯಲ್ಲೇ ಗಂಡು ಹೆಣ್ಣಿನ ತಲೆಯ ಮೇಲೆ ಹಾಗೆಯೇ ಹೆಣ್ಣು ಗಂಡಿನ ತಲೆ ಮೇಲೆ, ಎಳ್ಳು ಜೀರಿಗೆ ಸುರಿಯುತ್ತಾರೆ. ಇದೇ ಸಮಯದಲ್ಲೇ ಗಂಡಿನ ತಂದೆ ತಾಯಿ ಮತ್ತು ಹೆಣ್ಣಿನ ತಂದೆ ತಾಯಿಗಳು ಧಾರೆ ಎರೆಯುತ್ತಾರೆ. ನಂತರ ತಾಳಿ ಕಟ್ಟುವ ಕ್ರಿಯೆ ಪ್ರಾರಂಭವಾಗುತ್ತದೆ. ಇರುಳಿಗರಲ್ಲೂ ತಾಳಿ ಕಟ್ಟುವ ಸಂಪ್ರದಾಯ

ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿದೆ. ಹಿಂದೆ ತಾಳಿ ಕಟ್ಟುತ್ತಿರಲಿಲ್ಲವೆಂದು ಹಿರಿಯರು ವಿವರಿಸುತ್ತಾರೆ. ತಾಳಿ ಕಟ್ಟುವಾಗ ಸೋಬಾನೆ ಪದಗಳನ್ನು ಹಾಡಲಾಗುತ್ತದೆ.

ತಾಳಿ ಕಟ್ಟಿದ ನಂತರ 'ಇರುಳಿಗ'ರಲ್ಲಿ 'ತಣಿಗೆ ಶಾಸ್ತ್ರ' ಮಾಡುತ್ತಾರೆ. ಹೆಣ್ಣು ಗಂಡುಗಳನ್ನು ಸೇರಿಸಿ ಮೂರು ಜನ ಮುತ್ತೈದೆಯರಿಗೆ ದಾರವನ್ನು ಸುತ್ತಲಾಗುತ್ತದೆ. ಆ ದಾರದ ಒಳಗೆ ಗಂಡು ಹೆಣ್ಣು ಹಾಗೂ ಮೂರು ಜನ ಮುತ್ತೈದೆಯರು ನಿಂತು ಹಿತ್ತಾಳೆ ಅಥವಾ ಕಂಚಿನ ತಟ್ಟೆಯ ಹಿಂದಕ್ಕೆ ವೀಳ್ಯದೆಲೆ ಇಟ್ಟು ಇದರ ಮೇಲೆ ಚಿನ್ನದ ಕಾಸನ್ನು ಅಂಟಿಸಿ ತಟ್ಟೆಯನ್ನು ತಲೆಕೆಳಗಾಗಿ ಹಿಡಿದು ಮೂರು ಜನ ಮುತ್ತೈದೆಯರು ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಇಳಿ(ದೃಷ್ಟಿ) ತೆಗೆಯುತ್ತಾರೆ. ದಾರದಿಂದ ಹೊರಗಡೆ ಇರುವವರು ಮೂರು ಜನ ಮುತ್ತೈದೆಯರು ಮತ್ತು ಗಂಡು ಹೆಣ್ಣು ದಾರದಿಂದ ಹೊರಬರದಂತೆ ನೋಡಿಕೊಳ್ಳುತ್ತಾರೆ. ಮತ್ತೊಬ್ಬ ಹೆಂಗಸು ದಾರದ ಒಳಗಿರುವ ಎಲ್ಲರಿಗೂ ಚೊಂಬಿನಲ್ಲಿರುವ ಶಾಸ್ತ್ರದ ನೀರನ್ನು ವೀಳ್ಯದೆಲೆಯ ಸಹಾಯದಿಂದ ಮೂರು ಬಾರಿ ಚಿಮುಕಿಸುತ್ತಾಳೆ. ನಂತರ ಮುತ್ತೈದೆಯರನ್ನು ಮತ್ತು ಗಂಡು ಹೆಣ್ಣು ಸುತ್ತುವರಿದಿರುವ ದಾರವನ್ನು ತೆಗೆದು ಆ ದಾರವನ್ನು ಕಂಬಕ್ಕೆ ಸುತ್ತಿ ಕಟ್ಟುತ್ತಾರೆ. ಇಲ್ಲಿಗೆ ತಣಿಗೆ ಶಾಸ್ತ್ರ ಮುಗಿಯುತ್ತದೆ.

ಇದಾದ ನಂತರ ಇರುಳಿಗರಲ್ಲಿ ಅತ್ಯಂತ ಪ್ರಮುಖವಾದುದ್ದ 'ವೀಳ್ಯ ತಿದ್ದುವುದು' ಎಂಬ ಆಚರಣೆ ಮಾಡುತ್ತಾರೆ. ಈ ವೀಳ್ಯ ತಿದ್ದುವುದು ಎಂದರೆ ಮದುವೆಗೆ ಬಂದ ಎಲ್ಲಾ ಯಜಮಾನರು, ಪಂಚಮರು, ಗಡಿಗೌಡ, ನಾಡಗೌಡ, ಕಟ್ಟುಗೌಡ ಮಡಿವಾಳ, ಚಲವಾದಿ, ಪುರೋಹಿತ, ಕೋಲುಕಾರ, ಕಟ್ಟುಕಾರ ಮತ್ತು ಕುಲಗೌಡರನ್ನು ಸ್ಮರಿಸಿ ಅವರಿಗೆ ತೆರ ಕೊಡುವುದಾಗಿದೆ. ಇದರಲ್ಲಿ ಮೂರು ಎಲೆ, ಮೂರು ಅಡಿಕೆ ಬಾಳೆಹಣ್ಣು, ಎಪ್ಪತ್ತೈದು ಅಥವಾ ಐವತ್ತೊಂದು ರೂಪಾಯಿಗಳನ್ನು ಇಟ್ಟಿರುತ್ತಾರೆ. ಇದು ಅವರವರ ಶಕ್ತಿಗೆ ಅನುಗುಣವಾಗಿರುತ್ತದೆ.

ಹೊಸ ಕರಿಯ ಕಂಬಳಿಯ ಮೇಲೆ ಆಗಮಿಸಿದ ಗೌರವಾನ್ವಿತರಿಗೆ ತಕ್ಕಂತೆ ಎಲೆ, ಅಡಿಕೆ, ಹಣ್ಣುಗಳ ಗುಡ್ಡೆಗಳನ್ನು ಇಡುತ್ತಾರೆ. ಚೆನ್ನಾಗಿ ಸಾರಿಸಿ ರಂಗೋಲೆ ಇಟ್ಟ ಸ್ಥಳದಲ್ಲಿ ಕಂಬಳಿಯನ್ನು ಹಾಸಿ, ಮಧ್ಯಭಾಗದಲ್ಲಿ ವಿಭೂತಿಯಿಂದ ಮೂರು ವೃತ್ತಗಳನ್ನು ಒಂದರ ಒಳಗೆ ಒಂದು ಬರುವಂತೆ ಹಾಕುತ್ತಾರೆ. ನಂತರ ನಾಲ್ಕು ಮೂಲೆಗಳಲ್ಲೂ ಒಂದೊಂದು ವೃತ್ತಗಳನ್ನು ಹಾಕಿ ಅವುಗಳ ಒಳಗೆ ಅರಿಶಿಣ ಕುಂಕುಮ ಹಾಕುತ್ತಾರೆ. ನಂತರ ಕಂಬಳಿಯ ಮೇಲೆ ಕಾಣಿಕೆಗಳನ್ನು ಇಡುತ್ತಾರೆ. ಕೋಲುಕಾರ ಬಂದಿರುವ ಎಲ್ಲಾ ಗೌರವಾನ್ವಿತರನ್ನು ಬಹಳ ಮರ್ಯಾದೆಯಿಂದ ಕರೆದು ಆ ಕಂಬಳಿಗೆ ಪೂಜೆ ಮಾಡಿ ಒಂದೊಂದಾಗಿ ಕೊಡಲು ಪ್ರಾರಂಭಿಸುತ್ತಾನೆ. ಪಂಚಮರಿಗೆ, ಗಡಿಗೌಡರಿಗೆ, ನಾಡಗೌಡ, ಕಟ್ಟುಗೌಡ ಮುಂತಾದರನ್ನು ಸರದಿಯಾಗಿ ಕರೆದು ಕಾಣಿಕೆ ಕೊಡುತ್ತಾನೆ.

ಮೊದಲು ವಿಘ್ನೇಶ್ವರ, ಸರಸ್ವತಿಗೆಂದು ಎರಡು ವೀಳ್ಯವನ್ನು ತೆಗೆಯುತ್ತಾನೆ. ನಂತರ ಗಂಡಿನ ಮನೆಯ ದೇವರು ಮತ್ತು ಹೆಣ್ಣಿನ ಮನೆಯ ದೇವರ ವೀಳ್ಯವೆಂದು ತೆಗೆದು, ಗಂಡು ಮತ್ತು ಹೆಣ್ಣಿನ ತಂದೆ ತಾಯಿಯರ ಕೈಗೆ ಕೊಡುತ್ತಾರೆ. ಸಾಲೂರ ಮಠಕ್ಕೆ ಒಂದು ವೀಳ್ಯ ಊರಿನ ದೇವಸ್ಥಾನಕ್ಕೆ ಒಂದು ವೀಳ್ಯ ಯಜಮಾನರಿಗೆ ಒಂದು ವೀಳ್ಯ ಸೋಬಾನೆ ಹಾಡಿದವರಿಗೆ ಒಂದೊಂದರಂತೆ ಕೊಡುತ್ತಾರೆ. ನಾಲ್ಕು ಗಡಿಯ ಗೌಡರುಗಳಿಗೆ, ದೂರದಿಂದ ಬಂದವರಿಗೆ ವೀಳ್ಯ ಕೊಟ್ಟನಂತರ ನಾಡಗೌಡನ ಅನುಮತಿಯನ್ನು ಪಡೆದುಕೊಂಡು ಒಂದೊಂದು ವೀಳ್ಯವನ್ನು ಕೈಯಲ್ಲಿಡಿದುಕೊಂಡು ಮೊದಲು ಪಂಚಮರ ಹೆಸರುಗಳನ್ನು ಜೋರಾಗಿ ಕೂಗಿ ಅವರಿಗೆ ಅಥವಾ ಅವರ ಪ್ರತಿನಿಧಿಗಳ ಕೈಗೆ ಕೊಡುತ್ತಾರೆ. ನಂತರ ಮದುವೆಗೆ ಆಗಮಿಸಿದ ಇತರೆ ಗ್ರಾಮಗಳ ಮುಖ್ಯಸ್ಥರ ಹೆಸರನ್ನು ಕರೆದು ಅವರಿಗೂ ವೀಳ್ಯ ಕೊಡುತ್ತಾನೆ. ಚಲವಾದಿ, ಮಡಿವಾಳ, ವಾದ್ಯದವರಿಗೆ, ಪಂಚಾಂಗ ವೀಳ್ಯ, ಅಡುಗೆ ಮನೆಯವರಿಗೆ ಮರ್ಯಾದೆ ವೀಳ್ಯ ಎಂದು ಕೊಡುತ್ತಾನೆ. ಸಭೆಯ ವೀಳ್ಯವೆಂದು ಒಂದನ್ನು ತೆಗೆದು ಮದುವೆ ಮಾಡಿಸಲು ಬಂದ ಪುರೋಹಿತರ ಕೈಗೆ ಕೊಡುತ್ತಾರೆ. ವೀಳ್ಯ ಪಡೆದ ಎಲ್ಲರೂ ಗದ್ದುಗೆಗೆ ಅಡ್ಡ ಬಿದ್ದು ಗೌರವ ಸೂಚಿಸುತ್ತಾರೆ. ಒಂದು ವೀಳ್ಯವನ್ನು ಗಂಡು ಹೆಣ್ಣಿಗೆ ಕೊಟ್ಟು ಹಸೆಮಣೆಯಿಂದ ಮೇಲೇಳುವಾಗ ದೇವ ಮೂಲೆಯಲ್ಲಿ ನಿಂತು ವೀಳ್ಯವನ್ನು ಭಾಗ ಮಾಡಿ ತಲೆಯ ಮೇಲಿಟ್ಟುಕೊಂಡು ಹಾಲುಗಂಭ ಸುತ್ತಿದ ಮೇಲೆ ಮದುವೆ ಮಂಟಪದಿಂದ ಹೊರನಡೆಯಲು ಅನುಮತಿ ನೀಡುತ್ತಾರೆ. ವೀಳ್ಯ ತಿದ್ದುವುದು ಅವರ ಕುಲಕ್ಕೆ ಕುಲದ ಕಟ್ಟುಗಳಿಗೆ ತೋರಿದ ಗೌರವ ಎಂದು ನಂಬಿ ಕೊಂಡಿದ್ದಾರೆ. ಇದರ ಜೊತೆಗೆ ಮದುವೆಗೆ ಆಗಮಿಸಿದವರಿಗೆ, ಕುಲದ ಯಜಮಾನರಿಗೆ, ಇತರೆ ಜಾತಿಯ ದೊಡ್ಡ ಮನುಷ್ಯರಿಗೂ ವೀಳ್ಯ ತಿದ್ದುವುದು ಅವರಿಗೆ ತೋರಿದ ಗೌರವ ಎಂದು ಭಾವಿಸುತ್ತಾರೆ. ವೀಳ್ಯ ತಿದ್ದುವ ಕೋಲುಕಾರನಿಗೆ ಹೆಣ್ಣು ಅಥವಾ ಗಂಡಿನ ಕಡೆಯವರು ತಲಾ ಒಂದಾಣೆ, ನಾಲ್ಕಾಣೆ, ಒಂದು ರೂಪಾಯಿ ಹತ್ತು ರೂಪಾಯಿ ಇಪ್ಪತ್ತೈದು ರೂಪಾಯಿ ಹೀಗೆ ಅವರವರ ಶಕ್ತಿ ಅನುಸಾರ ನೀಡುತ್ತಾರೆ. ಇತ್ತೀಚೆಗೆ ನೂರವೊಂದು ರೂಪಾಯಿಗಳನ್ನು ಕೊಡುತ್ತಾರೆ. ವೀಳ್ಯ ತಿದ್ದುವಾಗ ಹಾಡುವ ಕೆಲವು ಸೋಬಾನೆ ಹಾಡುಗಳು ಹೀಗಿವೆ.

ಒಂದು ಕರಿಯ ಕಂಬ್ಳಿ ಒಂದು ಬಿಳಿಯ ಕಂಬ್ಳಿ
ಒಂದೋರ(ಬಂದ್ವಾರ) ಗೇದ ರತ್ನಗಂಬಳಿ
ಎಲೆಯ ತನ್ನಿರೆಲೆಯಾ/ಸುರವೊನ್ನ ನಂದೀಯ ತ್ವಾಟದೆಲೆಯಾ
ಒಂದೊರ ಗೇದ ರತ್ನಗಂಬ್ಳಿಮ್ಯೂಲೆ ಕೂತವರೆ
ನಮ್ಮ ಕುಲದೋರು / ಎಲೆಯ ತನ್ನಿರೆಲೆಯಾ
ಸುರುವನ್ನು ನಂದೀಯ ತ್ವಾಟದೆಲೆಯಾ
ಕೂತವರೆ ನಮ್ಮ ಕುಲದು ಗೌಡ್‌ಗೋಳ

ದೇವರಿಳ್ಳೆವ ತಗುದಾರೋ। ಎಲೆಯ ತನ್ನಿರೆಲೆಯಾ
ನಂದಿಯ ಸುರವೊನ್ನೆ ತ್ವಾಟದಿಲೆಯಾ
ಎರಡು ಕರಿಯ ಕಂಬ್ಳಿ ಎರಡು ಬಿಳಿಯಕಂಬ್ಳಿ
ಎರಡೋರ ಗೇದ ರತ್ನಗಂಬ್ಳಿ। ಎಲೆಯ ತನ್ನಿರೊ
ನಂದಿಯ ಸುರವೊನ್ನ ತ್ವಾಟದಿಲೆಯಾ
ಎರಡೋರ ಗೇದ ರತ್ನಗಂಬ್ಳಿಮ್ಯಾಲೆ
ಕೂತವರೆ ನಮ್ಮ ಕುಲದೋರು। ಎಲೆಯ ತನ್ನಿರೆಲೆಯಾ
ಸುರವೊನ್ನ ನಂದಿಯ ತ್ವಾಟದೆಲೆಯಾ
ಕುಂತವರೆ ನಮ್ಮ ಕುಲದಾಗೌಡ್ರುಗೋಳ್
ದೇವರಿಳ್ಳೆದ ತಗುದರೋ। ಎಲೆಯ ತನ್ನಿರೆಲೆಯಾ
ಸುರುವೊನ್ನೆ ಗಂದೀಯ ತ್ವಾಟದೆಲೆಯಾ[೧೦]

ವೀಳ್ಯ ತಿದ್ದಿದ ನಂತರ ಎಲ್ಲರೂ ಊಟದ ಮನೆಯ ಕಡೆಗೆ ನಡೆಯುತ್ತಾರೆ. ಹಿಂದೆ ಕುರಿ, ಕೋಳಿ ಮತ್ತು ಆಡುಗಳನ್ನು ಕೊಯ್ದು ಅಡುಗೆ ಮಾಡಲಾಗುತ್ತಿತ್ತು. ಆದರೆ ಕಾಲ ಬದಲಾದಂತೆ ಇಂದು ಸಸ್ಯಹಾರಿ ಅಡುಗೆಯನ್ನು ಮಾಡಲಾಗುತ್ತಿದೆ. ಸಿದ್ಧವಾಗಿರುವ ಅಡುಗೆಗೆ ಕೋಲುಕಾರ ತೀರ್ಥ ಹಾಕುವ ತನಕ ಯಾರೂ ಊಟಕ್ಕೆ ಕೂರುವಂತಿಲ್ಲ; ಊಟಕ್ಕೆ ಕುಂತಮೇಲೂ, ಕೋಲುಕಾರನ ಆಜ್ಞೆ ಆಗುವ ತನಕ ಯಾರೂ ಊಟ ಮಾಡುವಂತಿಲ್ಲ. ಹಾಗೊಮ್ಮೆ ಮಾಡಿದರೆ ಅದು ಶಿಕ್ಷಾರ್ಹ ಅಪರಾಧ ಎಂದು ಸಮುದಾಯದವರು ನಂಬಿದ್ದಾರೆ. "ಕೋಲುಕಾರ ಊಟಮಾಡ್ರಪ್ಪೊ" ಎಂದ ಮೇಲೆ ಎಲ್ಲರೂ ಊಟ ಮಾಡಲು ಪ್ರಾರಂಭಿಸುತ್ತಾರೆ. ಮತ್ತೆ ಕೋಲುಕಾರ ಹೇಳುವ ತನಕ ಯಾರೂ ಪಂಕ್ತಿಯಿಂದ ಮೇಲೇಳುವಂತಿಲ್ಲ. ಹಾಗೊಮ್ಮೆ ಎದ್ದರೆ ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸಲಾಗುತ್ತದೆ. ಅಂಥವರಿಗೆ ದಂಡಹಾಕುವುದು ಅಥವಾ ಮಂಕರಿಯನ್ನು ಹಿಡಿದು ಊಟ ಮಾಡುವವರ ಮುಂದೆ ಹೋಗಿ ಅವರ ಎಲೆಯನ್ನು ಎತ್ತಿಕೊಂಡು ಮಂಕರಿಯಲ್ಲೆ ಅವರಿಗೆ ಕೈ ತೊಳೆಸಿಕೊಂಡು ಬರಬೇಕು ಹೀಗೆ ಪಂಕ್ತಿಯಲ್ಲಿ ಕುಳಿತ ಎಲ್ಲರ ಬಳಿಗೂ ಹೋಗಿ ಕೈ ತೊಳಿಸಿ ಆ ನೀರನ್ನು ಹೊರಗೆ ಚೆಲ್ಲುವ ಶಿಕ್ಷೆ ನೀಡಲಾಗುತ್ತದೆ. ಆದ್ದರಿಂದ ಯಾರು ಕೂಡ ಪಂಕ್ತಿಯಿಂದ ಎದ್ದು ಓಡಾಡುವುದಾಗಲಿ, ಊಟದ ಮಧ್ಯದಲ್ಲಿ ಎದ್ದೇಳುವುದಾಗಲಿ ಮಾಡುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಇರುಳಿಗರಲ್ಲಿರುವ ಕೆಲವು ನಂಬಿಕೆಗಳೆಂದರೆ ಕೆಲವರು ನಾಚಿಕೆಯ ಸ್ವಭಾವದವರಿದ್ದು ಅವರು ಊಟ ಮಾಡುವುದು ತಡವಾಗುತ್ತದೆ. ಬೇಗ ಬೇಗ ಊಟ ಮಾಡಿ ಎದ್ದುಬಿಟ್ಟರೆ, ಅವರು ಸರಿಯಾಗಿ ಊಟ ಮಾಡುವುದಿಲ್ಲ. ಮತ್ತೆ ಕೆಲವರು ನಿಧಾನಗತಿಯಲ್ಲಿ ಊಟ ಮಾಡುತ್ತಾರೆ. ಅಂಥವರಿಗೆ

ತೊಂದರೆಯಾಗಬಾರದೆಂದು ಹೀಗೆ ಮಾಡುವುದಾಗಿ ವಕ್ತೃಗಳು ಹೇಳುತ್ತಾರೆ.[೧೧] ಊಟದ ಕಾರ್ಯ ಮುಗಿದ ನಂತರ ಶಾಸ್ತ್ರಕ್ಕಾಗಿ ತಂದಿರುವ ಕಳಸ, ಗಡಿಗೆ ನೀರುಗಳನ್ನು ಮರದ ಬುಡಕ್ಕೋ ಅಥವಾ ಬಾವಿ, ಕೆರೆಗೋ ಹಾಕುವ ಶಾಸ್ತ್ರ ಮಾಡುತ್ತಾರೆ. ಹೀಗೆ ಹಾಕುವಾಗ 'ಗಂಗೆ' ಪೂಜೆ ಎಂದು ಮಾಡುತ್ತಾರೆ.

ಮದುವೆಯಾದ ಮೂರು ದಿನಗಳ ನಂತರ ನೆರವಿ (ಬೀಗರೂಟ) ಮಾಡುತ್ತಾರೆ. ಮದುವೆಯನ್ನು ಗಂಡಿನ ಮನೆಯವರು ಮಾಡಿದರೆ ನೆರವಿ, ಹೆಣ್ಣಿನ ಕಡೆಯವರು ಮಾಡುತ್ತಾರೆ. ಹೆಣ್ಣಿನ ಕಡೆಯವರು ಮದುವೆ ಮಾಡಿದರೆ ಗಂಡಿನ ಕಡೆಯವರು ನೆರವಿ ಮಾಡುತ್ತಾರೆ. ಮದುವೆ ಮುಗಿದ ರಾತ್ರಿ ಗಂಡಿನ ಮನೆಯಲ್ಲಿ ಒಸಗೆ ಹಾಕುವ ಶಾಸ್ತ್ರ ಮಾಡುತ್ತಾರೆ. ಗಂಡು ಹೆಣ್ಣುಗಳನ್ನು ಪಡಸಾಲೆಯ ಮೇಲೆ ಕೂರಿಸಿ ಅವರ ಮುಂದೆ ಅನೇಕ ಬಗೆಯ ತಿನಿಸುಗಳನ್ನು ಇಟ್ಟು ಮುತ್ತೈದೆಯರ ಕೈಯಿಂದ ಅಕ್ಷತೆ ಹಾಕಿಸುತ್ತಾರೆ. ಮೂರು ಜನ ಅಥವಾ ಏಳು ಜನ ಮುತ್ತೈದೆಯರು ಗಂಡು ಹೆಣ್ಣಿನ ಹಣೆಗೆ ಕುಂಕುಮ ಹಚ್ಚಿ ಅವರ ತೊಡೆ, ಭುಜ ಮತ್ತು ತಲೆಯ ಮೇಲೆ ಅಕ್ಷತೆ ಕಾಳುಗಳನ್ನು ಹಾಕಿ ಆಶೀರ್ವದಿಸುತ್ತಾರೆ. ಆಗ ಸೋಬಾನೆ ಪದಗಳನ್ನು ಹಾಡುತ್ತಲೇ ಇರುತ್ತಾರೆ; ಇದೇ ರಾತ್ರಿಯಲ್ಲಿ ಪ್ರಸ್ಥ ನಡೆಯುತ್ತದೆ.

ಹೆಣ್ಣಿನ ಜೊತೆಯಲ್ಲಿ ಹೆಣ್ಣಿನ ಸ್ನೇಹಿತೆ, ತಂಗಿ ಅಥವಾ ಸಂಬಂಧಿಕರ ಹೆಣ್ಣು ಮಕ್ಕಳು ಗಂಡಿನ ಮನೆಗೆ ಬಂದಿರುತ್ತಾರೆ. ಅವರನ್ನು 'ಬಡದೂಳಿಗಳು' ಎಂದೂ ಕರೆಯುತ್ತಾರೆ. ಮದುವೆ ಮುಗಿದ ರಾತ್ರಿ ಹೆಣ್ಣಿನ ಜೊತೆ ಗಂಡಿನ ಮನೆಗೆ ಬಂದವರು ಅದೇ ರೀತಿಯೇ ನೆರವಿ ಮುಗಿಸಿ ಗಂಡು ಹೆಣ್ಣಿನ ಮನೆಗೆ ಹೋದರೆ ಗಂಡಿನ ಜೊತೆ ಗಂಡಿನ ಸ್ನೇಹಿತರು ಹೋಗುತ್ತಾರೆ. ಇವರನ್ನು ಬಡದೂಳಿಗಳು ಎನ್ನುತ್ತಾರೆ. ಹೀಗೆ ಬಂದ ಬಡದೂಳಿಗಳಿಗೆ ಹೆಣ್ಣಿನ ಅಥವಾ ಗಂಡಿನ ಮನೆಯಲ್ಲಿ, ಹೆಣ್ಣಿನ ಮನೆಯಲ್ಲಿ ಗಂಡಿನ ಜೊತೆ ಬಂದವರಿಗೆ ಹಾಗೆಯೇ ಗಂಡಿನ ಮನೆಯಲ್ಲಿ ಹೆಣ್ಣಿನ ಜೊತೆ ಬಂದವರಿಗೆ ನಿರಂತರ ಕೀಟಲೇ ಮಾಡುತ್ತಲೇ ಇರುತ್ತಾರೆ. ಅವರು ಮಲಗಿದಾಗ ಕಪ್ಪೆಗಳ ಹಾರ ಮಾಡಿ ಹಾಕುವುದು, ಟೀ, ಕಾಫಿಯಲ್ಲಿ ಉಪ್ಪುಕಾರ ಹಾಕಿಕೊಡುವುದು ಮುಂತಾದ ಮನರಂಜನೆ ಕೀಟಲೆಗಳನ್ನು ಮಾಡಲಾಗುತ್ತದೆ. ಈ ಎಲ್ಲಾ ಸಡಗರಗಳೊಂದಿಗೆ ಮದುವೆ ಮುಕ್ತಾಯವಾಗುತ್ತದೆ.

ಮೂಲ ನಿವಾಸಿಗಳಾದ ಇರುಳಿಗರು ವೈದಿಕ ವಿವಾಹ ಪದ್ಧತಿ ಅಥವಾ ಹಿಂದೂ ವಿವಾಹ ಪದ್ಧತಿಗಳನ್ನು ಅನುಸರಿಸುವುದಿಲ್ಲ. ಅಗ್ನಿ ಸಾಕ್ಷಿ ವಿವಾಹ, ವೇದೋಕ್ತ ವಿವಾಹ, ಆಗಮೋಕ್ತ ವಿವಾಹಗಳ ನೆರಳು ಇಲ್ಲಿ ಸುಳಿದಾಡಲು ಸಾಧ್ಯವಿಲ್ಲ. ಇರುಳಿಗರಲ್ಲಿರುವ ಸೋಬಾನೆ ಹಾಡುಗಳು ಅನ್ಯ ಜನರಿಂದ ಬಂದ ಬಳುವಳಿಯಾಗಿರಬಹುದು. ಏಕೆಂದರೆ ಇರುಳಿಗರಲ್ಲಿರುವ ಸೋಬಾನೆ ಪದಗಳು ಮೂಲ ಇರುಳಿಗ ಸಮುದಾಯದವರದ್ದು ಎಂದು ಹೇಳಲು ಸಾಧ್ಯವಾಗುವುದಿಲ್ಲ. ಕಾರಣ ಇರುಳಿಗ ಭಾಷೆಯಲ್ಲಿ ಈ ಸೋಬಾನೆ ಪದಗಳಿರದೆ ಕನ್ನಡ

ಭಾಷೆಯಲ್ಲಿವೆ. ಜೊತೆಗೆ ಈ ಸೋಬಾನೆ ಪದಗಳಿಗೂ ಇವರ ಆಚರಣೆಗಳಿಗೂ ಸಂಬಂಧವೆ ಇಲ್ಲ. ಇವರ ಸೋಬಾನೆ ಪದವು ಅಕ್ಕಪಕ್ಕದ ಜನರಿಂದ ಅನುಕರಣೆಯಾಗಿ ಬಂದಿರುವುದನ್ನು ಕಾಣಬಹುದು. ಮದುವೆಯ ಆಚರಣೆಯಲ್ಲಿ ಇರುಳಿಗರು ತಮ್ಮದೇ ಕೆಲವು ಪಾರಂಪರಿಕ ಕುರುಹುಗಳನ್ನು ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದು.

ಹಿಂದೂ ವಿವಾಹದ ಬಗ್ಗೆ ಅಕ್ಷರಸ್ಥ ವರ್ಗ ತನ್ನದೇ ಆದ ರೀತಿಯಲ್ಲಿ ನಿರೂಪಿಸುತ್ತ ಬಂದಿದೆ. "ಮಾನವನಿಗೆ ಹಸಿವು ನಿದ್ದೆಯಂತೆ ಲೈಂಗಿಕ ಅಪೇಕ್ಷೆಯು ಸಹಜವಾದುದ್ದೇ ಆಗಿದೆ. ವ್ಯಕ್ತಿಯು ಇದಕ್ಕಾಗಿ ಜೀವದ ಹಂಗಿಲ್ಲದೆ ವರ್ತಿಸಬಹುದು. ಇಂತಹ ಪ್ರವೃತ್ತಿಯನ್ನು ಹತೋಟಿಯಲ್ಲಿಡಲು ಹಾಗೂ ಇಡೀ ಸಮಾಜದ ಹಿತಕ್ಕೆ ಭಂಗ ಬಾರದಂತೆ ನೋಡಿಕೊಳ್ಳಲು ಪ್ರತಿಯೊಂದು ಸಮಾಜವು ಕಟ್ಟು ಕಟ್ಟಲೆಗಳನ್ನು ರೂಪಿಸಿಕೊಂಡು ಬಂದಿದೆ. ಅದು ಗಂಡು ಹೆಣ್ಣುಗಳನ್ನು ಒಂದು ವ್ಯವಸ್ಥಿತ ನೆಲೆಯಲ್ಲಿ ಕೂಡಿಬಾಳಬೇಕೆಂಬ ಉದ್ದೇಶದಿಂದ ನಿಯಮ, ನಿಷಿದ್ಧತೆಗಳನ್ನು ರೂಪಿಸಿ ಅವರು ಒಂದಾಗಿ ಬಾಳಲು ಅವಕಾಶ ಕಲ್ಪಿಸಿರುತ್ತದೆ. ಹೀಗೆ ಎಲ್ಲಾ ಸಮ್ಮತಿಯೊಂದಿಗೆ ನಡೆಸುವ ಆಚರಣೆಯೇ ಮದುವೆ ಎನ್ನುತ್ತಾರೆ."[೧೨]

ಇಂತಹ ಶಿಷ್ಟ, ಅಕ್ಷರಸ್ಥ ನಿರೂಪಣೆಗಳೇ ಇಂದೂ ಸಮಾಜವನ್ನು ಆಳುತ್ತಿವೆ. ಆದ್ದರಿಂದ ಉಳಿದೆಲ್ಲಾ ನಂಬಿಕೆಗಳು ಅಮಾನವೀಯ ಅಶಿಷ್ಟವಾದುದಾಗಿ ಬಿಂಬಿತಗೊಳ್ಳುತ್ತಿವೆ. ಈ ನಿರೂಪಣೆಯಲ್ಲಿ ನನಗೆ ಕಂಡುಬಂದಿರುವುದೇನೆಂದರೆ ಸಮಾಜದ ಒಳಿತಿಗೆ ಭಂಗ ಬರಬಾರದೆಂದು 'ಮದುವೆ' ಎಂಬ ಆಚರಣೆ ಜಾರಿಗೆ ತರಲಾಗಿದೆ. ಇದು ಕೇವಲ ಗಂಡಸಿನ ನಿರ್ಧಾರವಾಗಿ ಕಂಡುಬರುತ್ತದೆ. ಆದರೆ ಇಲ್ಲಿ ಹೆಣ್ಣು ಸ್ವಾತಂತ್ರ್ಯ ಕಳೆದುಕೊಳ್ಳುವುದನ್ನು ಕಾಣಬಹುದು. ಡಾ.ಬಿ.ಆರ್.ಅಂಬೇಡ್ಕರ್ ಹೇಳುವಂತೆ ದೇಶದ ಸ್ವಾತಂತ್ರ್ಯಕ್ಕಿಂತ ವ್ಯಕ್ತಿ ಸ್ವಾತಂತ್ರ್ಯ ಅತ್ಯಂತ ಪ್ರಮುಖವಾದುದ್ದು. ಏಕೆಂದರೆ ಮದುವೆಯಿಂದ ಮಹಿಳೆಯ ಮೇಲೆ ಪುರುಷನ ಶಾಶ್ವತ ಯಜಮಾನಿಕೆ ಉಂಟಾಗುತ್ತದೆ. ಇಲ್ಲಿ ಮಹಿಳೆ ತನ್ನೆಲ್ಲ ಇಷ್ಟ ಕಷ್ಟಗಳನ್ನು ಬದಿಗೊತ್ತಿ ಗಂಡನ ಜೊತೆ ಜೀವನ ನಡೆಸಬೇಕಾದ ಅನಿವಾರ್ಯತೆ ಕಂಡುಬರುತ್ತದೆ.

ಆದರೆ ಬುಡಕಟ್ಟುಗಳಲ್ಲಿ ಮಹಿಳೆ ಸಂಪೂರ್ಣ ಸ್ವಾತಂತ್ರ್ಯ. ಗಂಡನನ್ನು ಆಯ್ಕೆ ಮಾಡಿಕೊಳ್ಳುವುದರಿಂದ ಆರಂಭವಾಗಿ ಹೊಂದಾಣಿಕೆಯಾಗದಿದ್ದಾಗ ಬದಲಿಸಿಕೊಳ್ಳುವ ತನಕವು ಮಹಿಳೆಗೆ ಸ್ವಾತಂತ್ರ್ಯವನ್ನು ಬುಡಕಟ್ಟುಗಳಲ್ಲಿ ನೀಡಲಾಗಿದೆ. ಶಿಷ್ಟ ಸಮಾಜ ಹಾಗೂ ಅಕ್ಷರಸ್ಥ ಬುದ್ಧಿವಂತ ವರ್ಗ ಬುಡಕಟ್ಟುಗಳಲ್ಲಿರುವ ವಿವಾಹವನ್ನು ಅಶಿಷ್ಟ, ಅಮಾನವೀಯ ಎಂದೂ ಬದಿಗೊತ್ತುತ್ತಿವೆ. ಬುಡಕಟ್ಟುಗಳಲ್ಲಿನ ಲೈಂಗಿಕ ಅಪೇಕ್ಷೆಗೆ ಸಂಬಂಧದ ಅರಿವು ಕಂಡುಬರುವುದಿಲ್ಲ. ಇದನ್ನು ನಮ್ಮಂಥ ಸಂಶೋಧಕರು ಹೇಗೆ ಗ್ರಹಿಸಿಬೇಕು ಎಂಬುದು ಯಕ್ಷ ಪ್ರಶ್ನೆಯಾಗಿ ನಿಲ್ಲುತ್ತದೆ. ಏಕೆಂದರೆ ರಾಮಾಯಣ, ಮಹಾಭಾರತ ಮತ್ತು ವೇದ ಉಪನಿಷತ್ತುಗಳಲ್ಲಿ ಗಂಡನಿಲ್ಲದೆ ಮಕ್ಕಳಾಗುವುದು, ಅಪ್ಪ ಮಗಳನ್ನು ಮದುವೆಯಾಗುವುದು. ಒಬ್ಬ ಹೆಂಡತಿ ಐದು ಜನ

ಗಂಡಂದಿರಾಗುವುದನ್ನು ಒಪ್ಪಿಕೊಳ್ಳುವ ಸಮಾಜ ಮತ್ತು ನಮ್ಮಂಥ ಸಂಶೋಧಕರು ಬುಡಕಟ್ಟುಗಳಲ್ಲಿ ಸೋದರ ಮದುವೆ, ಅಪ್ಪ ಮಗಳ ಮದುವೆಯನ್ನು ಮಾತ್ರ ಅಮಾನವೀಯ, ಸಮಾಜಘಾತುಕ ಕ್ರಿಯೆ ಎಂದು ಬಿಂಬಿಸುತ್ತಿದ್ದಾರೆ. ಆದರೆ ಈ ಮನೋಧೋರಣೆ ನಾಗರಿಕ ಎಂದು ಕರೆದುಕೊಳ್ಳುವವರದ್ದೇ ಹೊರತು ಆ ಬುಡಕಟ್ಟಿನದಲ್ಲ. ಆ ಸಮುದಾಯ ಇದನ್ನು ಮಾನ್ಯ ಮಾಡಿರುತ್ತದೆ. ಆ ಸಮುದಾಯವೇ ಒಪ್ಪಿದ ಮೇಲೆ ಅದನ್ನು ದೂಷಿಸುವುದು ಸರಿಯಲ್ಲ. ಅದನ್ನು ಸಮಾಜದ ಕೆಟ್ಟ ವ್ಯವಸ್ಥೆ ಎಂದು ಬಿಂಬಿಸಿ ಆ ಸಮುದಾಯವನ್ನು ಕೀಳಾಗಿ ನೋಡುವಂತೆ ಮಾಡುವುದು ಸರಿಯಾದ ಕ್ರಮವಲ್ಲ.

ವಿಚ್ಛೇದನ/ಕೂಟ್ಕೆ ಸಂದರ್ಭದಲ್ಲಿನ ಆಚರಣೆಗಳು

ಪ್ರಸ್ತುತ ಸಮಾಜದಲ್ಲಿ ವಿಚ್ಛೇದನಗಳು ದಿನದಿಂದ ದಿನಕ್ಕೆ ಅತೀ ಹೆಚ್ಚಾಗಿ ಕಂಡುಬರುತ್ತಿವೆ. ಅದಕ್ಕೆ ಸಂಬಂಧಿಸಿದಂತೆ ಕಾರಣಗಳನ್ನು ಗಮನಿಸಿದಾಗ ಕ್ಷುಲ್ಲಕ ವಿಚಾರಗಳೇ ಹೆಚ್ಚಾಗಿ ಕಂಡುಬರುತ್ತವೆ. ಸ್ವಾತಂತ್ರ್ಯ, ಮುಕ್ತತೆ, ನಿರ್ಬಂಧ, ಯೋಗ್ಯತೆ, ನಾಜೂಕುತನ(ನಾಗರಿಕತೆ) ಭಾಷೆ ಮುಂತಾದವುಗಳು ವಿಚ್ಛೇದನಗಳ ಮಾನದಂಡಗಳಾಗಿವೆ. ಇವತ್ತಿನ ಡಿಜಿಟಲ್ ಸಂದರ್ಭದಲ್ಲಿ ಸಂಬಂಧಗಳು ಗೌಣವಾಗಿ ಪರಸ್ಪರ ಪ್ರೀತಿ, ವಿಶ್ವಾಸಗಳು ಮರೆಯಾಗಿವೆ. ಕೇವಲ ಅವಶ್ಯಕತೆಗೆ ತಕ್ಕಂತೆ ಅನಿವಾರ್ಯವಾಗಿ ಬದುಕುವ ಸಂದರ್ಭಗಳು ನಿರ್ಮಾಣಗೊಳ್ಳುತ್ತಿವೆ.

ಬುಡಕಟ್ಟು ಸಮುದಾಯಗಳಲ್ಲಿ ವಿಚ್ಛೇದನಗಳು ನಾಗರಿಕತೆ ಎಂದು ಹೇಳುವ ಪ್ರಸ್ತುತ ಸಮಾಜದಲ್ಲಿ ಮೇಲಿನ ಕ್ಷುಲ್ಲಕ ಕಾರಣಗಳಿಂದಾಗಿರದೇ ಅತ್ಯಂತ ಗಂಭೀರ ಕಾರಣಗಳನ್ನು ಹೊಂದಿರುತ್ತವೆ. ಪ್ರಬಲವಾದ ಕಾರಣಗಳಿಲ್ಲದೇ ವಿಚ್ಛೇದನ ಸಾಧ್ಯವೇ ಇಲ್ಲ. ಅದರಲ್ಲೂ ಮಕ್ಕಳಿರುವ ದಂಪತಿಗಳು ವಿಚ್ಛೇದನ ಪಡೆಯುವುದು ಅತ್ಯಂತ ಕಠಿಣ ಮತ್ತು ವಿರಳವಾಗಿ ಕಂಡುಬರುತ್ತವೆ. ಆದಿವಾಸಿಗಳಲ್ಲಿ ವಿಚ್ಛೇದನವು ಕುಲಪಂಚಾಯಿತಿಗಳಿಂದ ಇತ್ಯರ್ಥವಾಗುತ್ತಿದ್ದು ಕಾರಣ ಬಲವಾಗಿ, ನ್ಯಾಯಯುತವಾಗಿದ್ದರೆ ಮಾತ್ರ ವಿಚ್ಛೇದನ ನೀಡಲಾಗುತ್ತದೆ. ವಿಚ್ಛೇದನಕ್ಕೆ ಇಬ್ಬರ ಒಪ್ಪಿಗೆಯ ಅವಶ್ಯಕವಿದ್ದು ವಿಚ್ಛೇದನೆ ಬಯಸುವವರು ಬಿಟ್ಟುಕೊಡುವ ಹೆಂಡತಿ ಅಥವಾ ಗಂಡನಿಗೆ ಜೀವನಾಂಶ ನೀಡಬೇಕಾಗುತ್ತದೆ. ವಿಚ್ಛೇದನಗಳು ಆದಿವಾಸಿಗಳಲ್ಲಿ ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಕಂಡುಬರುತ್ತವೆ.

ಇರುಳಿಗರಲ್ಲಿ ವಿಚ್ಛೇದನವು ತೀರ ವಿರಳ. ಪರಸ್ಪರ ಅರಿತು ಬಾಳುವ ಹೊಂದಾಣಿಕೆಯ ಮನೋಭಾವನೆಯೇ ಹೆಚ್ಚಾಗಿ ಕಂಡುಬರುತ್ತವೆ. ಹಾಗೊಮ್ಮೆ ವಿಚ್ಛೇದನ ನಡೆಯಲೇಬೇಕೆಂದರೆ ವಿಚ್ಛೇದನ ಪಡೆಯಲು ಬಯಸುವ ವ್ಯಕ್ತಿ ಕೋಲುಕಾರನ ಗಮನಕ್ಕೆ ತರುತ್ತಿದ್ದನು. ಕೋಲುಕಾರ ತನ್ನ ವ್ಯಾಪ್ತಿ ಮತ್ತು ತನ್ನ ಅನುಭವದ ಆಧಾರದ ಮೇಲೆ ಇಬ್ಬರಿಗೂ ಬುದ್ಧಿ ಹೇಳಿ ತನ್ನ ಜೀವನದದಲ್ಲಿ ಕಂಡ ಅನುಭವಗಳನ್ನು ತಿಳಿಸಿ ಹೇಳಿ ಬಗೆಹರಿಸಲು ನೋಡುತ್ತಾನೆ. ಅದು

ಸಾಧ್ಯವಾಗದಿದ್ದರೆ ನಾಡಗೌಡ, ಕಟ್ಟಗೌಡ, ಕುಲಗೌಡರ ಗಮನಕ್ಕೆ ತರುತ್ತಾನೆ. ಇವರೆಲ್ಲರೂ ದಂಪತಿಗಳಲ್ಲಿ ಉಂಟಾಗಿರುವ ಸಮಸ್ಯೆಯನ್ನು ಬಗೆಹರಿಸಿ, ಮನವೊಲಿಸಲು ಪ್ರಯತ್ನಿಸುತ್ತಾರೆ. ಇದು ಸಾಧ್ಯವಾಗದಿದ್ದರೆ ಮಾತ್ರ ಕುಲಪಂಚಾಯಿತಿಗೆ ಇಡುತ್ತಾರೆ. ಕೋಲುಕಾರ ಸಮುದಾಯದ ಪ್ರತಿಯೊಬ್ಬರನ್ನು ಕಟ್ಟೆ ಮನೆಯ ಬಳಿ ಬರುವಂತೆ ಹೇಳುತ್ತಾನೆ. ಅದರಂತೆಯೇ ನಾಡಗೌಡ ಕಟ್ಟೆಗೌಡ ಕೋಲುಕಾರ, ಕುಲಗೌಡರ ಸಮಕ್ಷಮದಲ್ಲಿ ಸಮುದಾಯದ ಎಲ್ಲರೂ ಬಂದು ಸೇರುತ್ತಾರೆ. ಕುಲ ಪಂಚಾಯಿತಿಯಲ್ಲಿ ಸಮಸ್ಯೆಯನ್ನು ಕುರಿತು ಕೋಲುಕಾರ, ಯಜಮಾನರು ಹಾಗೂ ಸೇರಿರುವ ಸಮುದಾಯದವರ ಗಮನಕ್ಕೆ ತರುತ್ತಾನೆ. ನೆರೆದ ಜನರು ತಮ್ಮ ತಮ್ಮ ಜೀವನದ ಅನುಭವಗಳನ್ನು ಹೇಳುವ ಮೂಲಕ ಸಮಸ್ಯೆಯುಂಟಾದ ದಂಪತಿಗಳ ಮನವೊಲಿಸಲು ನೋಡುತ್ತಾರೆ. ಸಾಧ್ಯವಾಗದಿದ್ದ ಪಕ್ಷದಲ್ಲಿ ನಾಡಗೌಡ, ಕಟ್ಟಗೌಡ, ಕುಲಗೌಡ, ಕೋಲುಕಾರರು ಸಮಸ್ಯೆಯ ಬಗ್ಗೆ ಇಬ್ಬರಿಂದ ಸಂಪೂರ್ಣ ಮಾಹಿತಿ ಪಡೆದುಕೊಳ್ಳುತ್ತಾರೆ. ವಿಚ್ಛೇದನದ ಉದ್ದೇಶ ಬಲವಾಗಿದ್ದರೆ ಮಾತ್ರ ಪರಿಹಾರದ ಜೊತೆಗೆ ಬೇರ್ಪಡಿಸುವ ಕೆಲಸ ಮಾಡುತ್ತಾರೆ. ವಿಚ್ಛೇದನದಲ್ಲಿ ಬಂಜೆತನ, ಅನೈತಿಕ ಸಂಬಂಧ, ರೋಗಬಾಧೆ ಅಥವಾ ಲೈಂಗಿಕ ಅತೃಪ್ತಿ ಪ್ರಮುಖ ಕಾರಣವಾಗಿರುತ್ತವೆ. ವರದಕ್ಷಿಣೆ ಇತರೆ ಸಣ್ಣಪುಟ್ಟ ಕಲಹಗಳು ಕಾರಣವಾಗಿದ್ದರೆ ವಿಚ್ಛೇದನ ನೀಡದೆ ಬೈದು ಬುದ್ಧಿ ಹೇಳಿ ಕಳುಹಿಸುತ್ತಾರೆ.

ದಂಪತಿಗಳಿಗೆ ಮಕ್ಕಳಾಗದೆ ಗಂಡ ವಿಚ್ಛೇದನ ಬಯಸಿದ್ದರೆ ಹೆಂಡತಿಯ ಸಂಪೂರ್ಣ ಒಪ್ಪಿಗೆಯಿರಬೇಕು. ಅದೇ ರೀತಿಯಲ್ಲಿ ಹೆಂಡತಿಗೆ ಗಂಡನಿಂದ ಲೈಂಗಿಕ ಅತೃಪ್ತಿಯಾಗಿದ್ದರೆ ಇದಕ್ಕೆ ಗಂಡನ ಒಪ್ಪಿಗೆ ಇದ್ದು ನ್ಯಾಯಬದ್ಧವಾಗಿರಬೇಕು. ಹಾಗೆಯೇ ರೋಗ ಬಾಧೆಯಲ್ಲೂ ರೋಗಗ್ರಸ್ಥ ವ್ಯಕ್ತಿಯ ಸಂಪೂರ್ಣ ಒಪ್ಪಿಗೆಯಿದ್ದರೆ ಮಾತ್ರ ವಿಚ್ಛೇದನ ಸುಲಭವಾಗುತ್ತದೆ. ಇಲ್ಲವಾದರೆ ಕುಲಪಂಚಾಯಿತಿ ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ. ಇರುಳಿಗರಲ್ಲಿ ವಿಚ್ಛೇದನವು ಸ್ವತಂತ್ರವಾಗಿರದೆ ಕುಲಪಂಚಾಯಿತಿಯ ನಿರ್ಣಯ ಅಂತಿಮವಾಗಿರುತ್ತದೆ.

ಆದರೆ ಅನೈತಿಕ ಸಂಬಂಧಕ್ಕೆ ಸಂಬಂಧಿಸಿದಂತೆ ಅತ್ಯಂತ ಕಟ್ಟುನಿಟ್ಟಾಗಿ ಕುಲ ಪಂಚಾಯತಿ ವರ್ತಿಸಿ ವಿಚ್ಛೇದನವನ್ನು ನೀಡುತ್ತದೆ. ಅನೈತಿಕ ದಾರಿ ಹಿಡಿದ ಗಂಡ ಅಥವಾ ಹೆಂಡತಿಯನ್ನು ಬಿಡುಗಡೆ ಮಾಡಿ ಇನ್ನೊಂದು ಮದುವೆಗೆ ಅವಕಾಶ ಮಾಡಿಕೊಡುತ್ತದೆ. ಇಲ್ಲಿ ಅನೈತಿಕ ಸಂಬಂಧ ಹೊಂದಿರುವ ವ್ಯಕ್ತಿಗೆ ಯಾವುದೇ ರಿಯಾಯಿತಿಯನ್ನು ನೀಡದೆ ಕುಲದಿಂದ ಹೊರಗೆ ಹಾಕಲಾಗುತ್ತದೆ.

ಹಾಗೊಮ್ಮೆ ವಿಚ್ಛೇದನ ಅನಿವಾರ್ಯವಾದರೆ ವಿಚ್ಛೇದನ ಬಯಸುವವರು ಕುಲಸ್ಥರ ಎದುರು ವಿಚ್ಛೇದನದ ಉದ್ದೇಶವನ್ನು ಪ್ರಸ್ತಾಪಿಸಬೇಕು. ಈ ಅಭಿಪ್ರಾಯಕ್ಕೆ ಸಂಬಂಧಿಸಿದಂತೆ ಎರಡು ಕಡೆಯವರ ಅಭಿಪ್ರಾಯಗಳನ್ನು ನಾಡಗೌಡ, ಕಟ್ಟುಗೌಡ, ಕೋಲುಕಾರ ಮತ್ತು ಗಡಿಗೌಡರು ಗಮನಿಸುತ್ತಾರೆ. ನಂತರ ಆ ಸಭೆಯಲ್ಲಿ ನೆರೆದಿದ್ದ ತಮ್ಮ ಸಮುದಾಯದವರ

ಅಭಿಪ್ರಾಯಗಳನ್ನು ಕೇಳುತ್ತಾರೆ. ಜನರ ಬಹುಮತಗಳ ನಿರ್ಣಯ ಮತ್ತು ಕುಲಗೌಡರುಗಳ ನಿರ್ಣಯಗಳ ಆಧಾರದ ಮೇಲೆ ತೀರ್ಪನ್ನು ಕೋಲುಕಾರ ಪ್ರಸ್ತಾಪಿಸುತ್ತಾನೆ. ಇದಕ್ಕೆ ವಿಚ್ಛೇದನ ಬಯಸುವ ದಂಪತಿಗಳು ಬದ್ಧರಾಗಿರಲೇಬೇಕು.

ವಿಚ್ಛೇದನವೂ ಅನೈತಿಕ ಸಂಬಂಧದ ಕಾರಣವಾಗಿದ್ದರೆ, ವಿಚ್ಛೇದನ ಪಡೆಯುವ ಗಂಡು ಅಥವಾ ಹೆಣ್ಣು ಯಾವುದೇ ಜೀವನಾಂಶವನ್ನು ನೀಡುವ ಅವಶ್ಯಕತೆ ಇರುವುದಿಲ್ಲ. ಅನೈತಿಕ ಸಂಬಂಧ ಹೊರತುಪಡಿಸಿ ಇನ್ನಾವುದೇ ಪ್ರಕರಣಕ್ಕಾಗಿ ವಿಚ್ಛೇದನ ಪಡೆಯಲಿಚ್ಚಿಸುವ ಗಂಡು ಅಥವಾ ಹೆಣ್ಣು ಜೀವನಾಂಶವನ್ನು ಕಟ್ಟಿಕೊಡುವ ಅವಶ್ಯಕತೆ ಇರುತ್ತದೆ. ಕುಲಪಂಚಾಯಿತಿ ಒಪ್ಪಿದರೆ ಮಾತ್ರ ವಿಚ್ಛೇದನ ಪೂರ್ಣಗೊಳ್ಳುತ್ತದೆ.

ಕುಲಪಂಚಾಯತಿಯು ವಿಚ್ಛೇದನವನ್ನು ನೀಡುವಾಗ ದಂಪತಿಗಳಲ್ಲಿ ವಿಚ್ಛೇದನದ ಕಾರಣವನ್ನು ಸ್ಪಷ್ಟಪಡಿಸಿಕೊಳ್ಳುತ್ತದೆ. ವಿಚ್ಛೇದನ ಪಡೆದುಕೊಳ್ಳುವ ದಂಪತಿಯಲ್ಲಿ ಮಕ್ಕಳಾಗಲಿಲ್ಲ ಎಂಬ ಕಾರಣವಾಗಿದ್ದರೆ ವಿಚ್ಛೇದನ ಬಯಸುವ ಪತಿ ವಿಚ್ಛೇದಿಸುವ ಪತ್ನಿಗೆ ಜೀವನಾಂಶವನ್ನು ತುಂಬಿಕೊಡಬೇಕು. ಏಕೆಂದರೆ ಅವಳ ಮುಂದಿನ ಜೀವನದ ಗತಿ ಏನು? ಯಾರಾದರೂ ಅವಳನ್ನು ಮದುವೆ (ಕೂಡಿಕೆ) ಮಾಡಿಕೊಂಡರೆ ಸರಿ ಇಲ್ಲವಾದರೆ ತಂದೆಯ ಮನೆಯವರಿಂದ ದೂರವಾದ ಅವಳ ಬದುಕು ಮೂರಾಬಟ್ಟೆಯಾಗುತ್ತದೆ ಎಂಬ ಹಲವಾರು ಕಾರಣಗಳಿಂದಾಗಿ ವಿಚ್ಛೇದಿತ ಮಹಿಳೆಗೆ ವಿಚ್ಛೇದನ ನೀಡುವ ಗಂಡ ಜೀವನಾಂಶ ಕಟ್ಟಿಕೊಡಬೇಕು ಎಂದು ಕಟ್ಟಪ್ಪಣೆ ಮಾಡುತ್ತಾರೆ. ವಿಚ್ಛೇದನಕ್ಕೆ ಆ ಮಹಿಳೆ ಒಪ್ಪಿದರೆ ಮಾತ್ರ ಕುಲಪಂಚಾಯಿತಿ ಅನುಮತಿ ನೀಡುತ್ತದೆ. ಇಲ್ಲವಾದರೆ ವಿಚ್ಛೇದನ ಸಾಧ್ಯವೇ ಇಲ್ಲ. ಇಂತಹ ಸಂದರ್ಭದಲ್ಲಿ ಬಂಜೆಯಾದ ಮಹಿಳೆಯ ಜೀವನಕ್ಕೆ ಆಧಾರ ಮಾಡಿ ಇನ್ನೊಂದು ಮದುವೆ ಮಾಡಿಕೊಳ್ಳಬೇಕು ಮದುವೆಯಾದ ನಂತರವೂ ಇಬ್ಬರನ್ನು ಸರಿಸಮವಾಗಿಯೇ ನೋಡಿಕೊಳ್ಳಬೇಕು. ಮೊದಲ ಹೆಂಡತಿಗೆ ವಿಶೇಷ ಸೌಲಭ್ಯವನ್ನು ಕಲ್ಪಿಸಿಕೊಡಬೇಕು. ಹೀಗೆ ಹತ್ತಾರು ಷರತ್ತುಗಳನ್ನು ಮುಂದಿಡುತ್ತಾರೆ. ಇದಕ್ಕೆ ವಿಚ್ಛೇದನ ಬಯಸುವವರು ಒಪ್ಪಿಗೆ ನೀಡಿ ಕುಲಸ್ಥರು ಮತ್ತು ನೆರೆದಿದ್ದ ಜನರಲ್ಲಿ ಆಣೆ ಪ್ರಮಾಣ ಮಾಡಿ ಒಪ್ಪಿದರೆ ಮಾತ್ರ ವಿಚ್ಛೇದನಕ್ಕೆ ಅವಕಾಶ ಕಲ್ಪಿಸಿಕೊಡಬೇಕಾಗುತ್ತದೆ.

ಹೆಂಡತಿಯನ್ನು ಸಾಕಲಾಗದೆ ಓಡಿಹೋದ ಗಂಡನು ಸುಮಾರು ವರ್ಷ ಬರದಿದ್ದರೆ ಹೆಂಡತಿಗೆ ಕುಲಪಂಚಾಯಿತಿಯು ಗಂಡನಿಗೆ ವಿಚ್ಛೇದನ ನೀಡಿ ಇನ್ನೊಂದು ಮದುವೆ ಆಗುವಂತೆ ಆಜ್ಞಾಪಿಸುತ್ತದೆ. ಪುನಃ ಆ ಗಂಡ ಬಂದು ಹೆಂಡತಿ ಜೊತೆ ಬಾಳಲು ಇಚ್ಚಿಸಿ ಕುಲಪಂಚಾಯಿತಿಗೆ ನ್ಯಾಯಕ್ಕೆ ಇಟ್ಟರೆ ಅವನಿಗೆ ಕುಲಪಂಚಾಯಿತಿಯೇ ವಿಚ್ಛೇದನದ ವಿಚಾರ ತಿಳಿಸಿ ಅವಳ ತಂಟೆಗೆ ಹೋಗದಂತೆ ನೋಡಿಕೊಳ್ಳುತ್ತದೆ.

ಒಟ್ಟಾರೆಯಾಗಿ ಇರುಳರಲ್ಲಿ ವಿಚ್ಛೇದನ ಎಂಬುದು ತೀರ ವಿರಳವಾಗಿ ಕಂಡು ಬರುತ್ತದೆ. ಮೇಲಿನ ಯಾವುದಾದರೂ ಒಂದು ಕಾರಣಗಳಿಗಾಗಿ ಅಥವಾ ಬಾಳಲು ಇಷ್ಟವಿಲ್ಲದೆ ಓಡಿ

ಹೋದರೆ ಹಿಂದೆ ಮಾಡಿಕೊಂಡಿದ್ದ ಮದುವೆಗೆ ವಿಚ್ಛೇದನ ಸಿಗುತ್ತದೆ. ಹಿಂದೆ ಕಟ್ಟಿರುವ ತಾಳಿಯನ್ನು ಕುಲಪಂಚಾಯಿತಿಯ ಸಮ್ಮುಖದಲ್ಲೇ ವಿಚ್ಛೇದನ ಕ್ರಿಯೆ ನಡೆದರೆ ಮಾತ್ರ ಹಿಂದಿನ ಗಂಡನಿಗೆ ಅವನು ಕಟ್ಟಿರುವ ತಾಳಿಯನ್ನು ಹಿಂದಿರುಗಿಸುತ್ತಾರೆ. ಇಲ್ಲವಾದರೆ ಅದನ್ನು ಕಿತ್ತು ಹಾಕಿ ಹೊಸ ಗಂಡನಿಂದ ತಾಳಿಯನ್ನು ಕಟ್ಟಿಸಿಕೊಳ್ಳುತ್ತಾರೆ. ವಿಚ್ಛೇದನ ಪಡೆಯಲು ಇಚ್ಛಿಸುವ ಗಂಡು ಕೂಟ್ಕೆ ಮಾಡಿಕೊಳ್ಳುವ ಹೆಣ್ಣಿಗೆ ತೆರವನ್ನು ಕೊಡಬೇಕು ಮತ್ತು ನೆರೆದಿರುವ ಎಲ್ಲರಿಗೂ ಊಟ ಹಾಕಿಸಬೇಕು. ಆದ್ದರಿಂದಲೇ ಓಡಿಹೋಗುವವರು ಕುಲಪಂಚಾಯತಿಗೆ ಸೇರದೆ ಹಿಂದೆ ಗಂಡ ಕಟ್ಟಿದ ತಾಳಿಯನ್ನು ಕಿತ್ತು ಹಾಕಿ ಹೊಸ ಗಂಡನಿಂದ ತಾಳಿಯನ್ನು ಹಾಕಿಕೊಳ್ಳುವುದುಂಟು.

ವಿಚ್ಛೇದನ ಕ್ರಿಯೆ ಎಂಬುವುದು ಆದಿವಾಸಿಗಳಲ್ಲಿ ಅತ್ಯಂತ ಸರಳವಾಗಿ ಕಂಡುಬರುವ ಕ್ರಿಯೆಯಾಗಿದ್ದು, ನ್ಯಾಯಯುತವಾಗಿರುತ್ತದೆ. ನಗರಗಳಲ್ಲಿ ಕಂಡುಬರುವಂತೆ ಯಾವುದೇ ವಕೀಲರನ್ನು ಬಳಸಿ ಅಥವಾ ಹಣದ ಆಮಿಷದಿಂದ ನ್ಯಾಯ ತೀರ್ಮಾನವಾಗುವುದಿಲ್ಲ. ಆದಿವಾಸಿಗಳಲ್ಲಿ ಇಂದಿಗೂ ಜೀವನದ ಅನುಭವಗಳ ಮೂಲಕ ಒಳಿತನ್ನು ಸಾರುವ ಹಿನ್ನೆಲೆಯಲ್ಲಿ ಒಂದಾಗಿ ಬಾಳುವಂತೆ ಮಾಡಲು ಪ್ರಯತ್ನಿಸುತ್ತಾರೆ. ಹಾಗೊಮ್ಮೆ ಕೊನೆಯದಾಗಿ ವಿಚ್ಛೇದನವಿಲ್ಲದೆ ಬೇರೆ ದಾರಿಯೇ ಇಲ್ಲವೆಂದಾಗ ಮಾತ್ರ ಕುಲಪಂಚಾಯಿತಿ ವಿಚ್ಛೇದನ ತೀರ್ಮಾನವನ್ನು ನೀಡುತ್ತದೆ. ಈ ವಿಚ್ಛೇದನದಲ್ಲಿ ನಾಡಗೌಡ, ಕುಲಗೌಡ, ಕಟ್ಟುಗೌಡ, ಕೋಲುಕಾರ, ಸಂಬಂಧಿಕರಿಗೆ ನ್ಯಾಯ ತೀರ್ಮಾನದಲ್ಲಿ ಇವರು ಯಜಮಾನರಾಗಿ ಕುಳಿತುಕೊಳ್ಳುವುದಿಲ್ಲ. ಬದಲಾಗಿ ಲಿಂಗಾಯಿತ ಅಥವಾ ಒಕ್ಕಲಿಗ ಸಮ್ಮುಖದಲ್ಲಿ ನ್ಯಾಯ ತೀರ್ಮಾನಗಳನ್ನು ಮಾಡಿಸಿಕೊಳ್ಳಲಾಗುತ್ತದೆ. ಇದು ಆದಿವಾಸಿಗಳಲ್ಲಿನ ಪಾರದರ್ಶಕತೆಯನ್ನು ಸೂಚಿಸುತ್ತದೆ. ಆದ್ದರಿಂದಲೇ ಇಂದಿಗೂ ಹಳ್ಳಿಯ ಕಟ್ಟೆಯ ಮೇಲೆ ತೀರ್ಮಾನವಾಗುವ ಎಷ್ಟೋ ಪ್ರಕರಣಗಳು ಸುಪ್ರೀಂಕೋರ್ಟ್‌ಗಳಲ್ಲೂ ಬಗೆ ಹರಿಯದೇ ಉಳಿದಿರುವುದನ್ನು ಕಾಣಬಹುದು.

ಕೂಡಿಕೆ, ಕೊಟ್ಕೆ-ಕೂಡಾವಳಿ

ಇರುಳಿಗರಲ್ಲಿರುವ ಮರುಮದುವೆಯನ್ನು ಕೂಡಾವಳಿ ಕೂಟ್ಕೆ ಅಥವಾ ಕೂಡಿಕೆ ಎಂಬ ಹೆಸರುಗಳಿಂದ ಕರೆಯುತ್ತಾರೆ. ಗಂಡ ಸತ್ತ ಹೆಂಡತಿ, ಹೆಂಡತಿ ಸತ್ತ ಗಂಡ ಮುಂದಿನ ಜೀವನಕ್ಕಾಗಿ ಇನ್ನೊಬ್ಬ ಗಂಡು ಅಥವಾ ಹೆಣ್ಣಿನ ಜೊತೆ ಸೇರುವುದನ್ನು ಕೂಟ್ಕೆ ಎಂದು ಕರೆಯುತ್ತಾರೆ. ಇದೊಂದು ಸಮುದಾಯ ಒಪ್ಪಿ ಇಬ್ಬರನ್ನು ಬಾಳಲು ಅವಕಾಶ ಮಾಡಿಕೊಡುವ ಪದ್ಧತಿಯಾಗಿದೆ. ಹೆಂಡತಿ ಸತ್ತ ಗಂಡ ಇನ್ನೂ ಮದುವೆಯಾಗದ ಹೆಣ್ಣನ್ನು ಕೂಟ್ಕೆ ಮಾಡಿ ಕೊಳ್ಳುವಂತಿಲ್ಲ. ಅದೇ ರೀತಿಯಲ್ಲಿ ಗಂಡ ಸತ್ತ ಹೆಂಡತಿ(ಹೆಣ್ಣು) ಮದುವೆಯಾಗದ ಹುಡುಗನನ್ನು ಕೂಟ್ಕೆ ಮಾಡಿಕೊಳ್ಳುವಂತಿಲ್ಲ. ಬಹುತೇಕ ಕೂಟ್ಕೆಗಳು ಲೈಂಗಿಕ ಅತೃಪ್ತಿ ಅಸಮಾಧಾನಗಳೇ ಆಗಿರುತ್ತವೆ. ಈ ಕೂಟ್ಕೆಯಲ್ಲಿ ತಾಳಿ ಕಾಲುಂಗರ ಶಾಸ್ತ್ರ ಸಂಪ್ರದಾಯಗಳಾವುವು ಕಂಡುಬರುವುದಿಲ್ಲ.

ಪರಸ್ಪರ ಒಪ್ಪಿದ ಜೋಡಿಗಳನ್ನು ಕೋಲುಕಾರ ಸಮುದಾಯದ ಎಲ್ಲರನ್ನು ಕೂಟ್ಕೆ ಮಾಡಿಕೊಳ್ಳುವ ಜಾಗಕ್ಕೆ ಕರೆತರುತ್ತಾನೆ. ಇದಕ್ಕೂ ಮೊದಲು ಈ ವಿಷಯದ ಬಗ್ಗೆ ನಾಡಗೌಡ ಕಟ್ಟುಗೌಡ, ಕೋಲುಕಾರ, ಗಡಿಗೌಡ ಮತ್ತು ಕುಲಗೌಡರ ಗಮನಕ್ಕೆ ತಂದು ಅವರ ಹತ್ತಿರ ಒಪ್ಪಿಗೆ ಪಡೆದುಕೊಂಡಿರುತ್ತಾನೆ. ರಾತ್ರಿ ಸಮಯದಲ್ಲಿ ಅರಳಿಮರದ ಕೆಳಗೋ ಅಥವಾ ಸಮುದಾಯದ ದೇವಸ್ಥಾನದ ಕೆಳಗೋ ಕೂಟ್ಕೆ ಕ್ರಿಯೆ ನಡೆಯುತ್ತದೆ. ನಾಡಗೌಡ ಮತ್ತು ಕಟ್ಟಗೌಡರು ಬಂದಿರುವ ಎಲ್ಲಾ ಜನರಿಗೂ ಕೈ ಮುಗಿದು ತಮಗೆ ಸಿದ್ಧಪಡಿಸಿರುವ ಆಸನದಲ್ಲಿ ಕುಳಿತುಕೊಳ್ಳುತ್ತಾರೆ. ನಂತರ ಗಡಿಗೌಡ ಕುಲಗೌಡರನ್ನು ವೇದಿಕೆಗೆ ನಾಡಗೌಡ ಕರೆಯುತ್ತಾನೆ. ಕೋಲುಕಾರ ವೇದಿಕೆಯ ಮುಂದೆ ದೊಣ್ಣೆ ಹಿಡಿದು ನಿಂತು ಕೂಟ್ಕೆ ಮಾಡಿಕೊಳ್ಳುವ ಜೋಡಿಯನ್ನು ಹಾಗೂ ಅವರ ಸಂಬಂಧಿಕರನ್ನು ಮುಂದಕ್ಕೆ ಬರುವಂತೆ ಕರೆಯುತ್ತಾನೆ. ಬಂದ ಜೋಡಿಗಳ ಪರಿಚಯವನ್ನು ನಾಡಗೌಡ ಕಟ್ಟುಗೌಡ, ಕುಲಗೌಡ ಮತ್ತು ಗಡಿಗೌಡರ ಜೊತೆಯಲ್ಲಿ ನೆರೆದ ಸಮಸ್ತ ಸಮುದಾಯದವರಿಗೂ ಕೋಲುಕಾರನೇ ಪರಿಚಯ ಮಾಡಿಕೊಡುತ್ತಾನೆ.

ನಾಡಗೌಡ ಜೋಡಿಗಳನ್ನು ನೀವಿಬ್ಬರೂ ಬಾಳಲು ಒಪ್ಪಿಗೆ ಇದೆಯಾ ಎಂದು ಕೇಳುತ್ತಾನೆ. ಇಬ್ಬರು ಸಮ್ಮತಿ ಸೂಚಿಸಿದರೆ ಮಾತ್ರ ಕೂಟ್ಕೆ ಮಾಡಿಕೊಡುತ್ತಾರೆ. ಕೆಲವೊಂದು ಸಂದರ್ಭದಲ್ಲಿ ಇಷ್ಟವಿಲ್ಲದಿದ್ದರೂ ಸಂಬಂಧಕ್ಕೋ, ಇನ್ನಾವುದೋ ಆಮಿಷಕ್ಕೆ ಕಟ್ಟುಬಿದ್ದು ಕೂಟ್ಕೆ, ಮಾಡಿಕೊಳ್ಳುವ ಕೆಲಸಕ್ಕೆ ಕೈ ಹಾಕಿಕೊಳ್ಳಲಾಗಿರುತ್ತದೆ. ಆದ್ದರಿಂದಲೇ ಕೋಲುಕಾರ ನಿಮಗೆ ಬಾಳಲು ಇಷ್ಟ ಇದೆಯಾ ಹಾಗೆಯೇ ಪರಸ್ಪರ ಬಾಳಲು ಒಪ್ಪಿಗೆ ಇದೆಯಾ ಎಂದು ಕೇಳುತ್ತಾನೆ. ಪರಸ್ಪರ ಒಪ್ಪಿಗೆ ಸೂಚಿಸಿದ ಮೇಲೆಯೇ ಹೆಣ್ಣಿಗೆ ಅಥವಾ ಗಂಡಿಗೆ ಈಗಾಗಲೇ ಇರುವ ಮಕ್ಕಳ ಬಗ್ಗೆ ವಿಚಾರಿಸುತ್ತಾರೆ. ಆ ಮಕ್ಕಳು ಯಾರ ಜೊತೆ ಹೋಗಲು ಇಷ್ಟ ಪಡುತ್ತವೆಯೋ ಆವರ ಜೊತೆ ಕಳುಹಿಸಲು ಪ್ರಯತ್ನಿಸುತ್ತಾರೆ. ಗಂಡ ಸತ್ತ ಅಥವಾ ಗಂಡ ಬೇಡವಾದ ಹೆಂಡತಿಗೆ ಇರುವ ಮಕ್ಕಳನ್ನು ಕೂಟ್ಕೆ ಮಾಡಿಕೊಳ್ಳುವ ಗಂಡ ಸಾಕಬೇಕು. ಅದೇ ರೀತಿಯಲ್ಲಿ ಹೆಂಡತಿ ಸತ್ತು ಅಥವಾ ಹೆಂಡತಿ ಬಿಟ್ಟುಹೋಗಿರುವ ಮಕ್ಕಳನ್ನು ಕೂಟ್ಕೆ ಮಾಡಿಕೊಳ್ಳುವ ಹೆಣ್ಣು ತಮ್ಮ ಮಕ್ಕಳಂತೆ ಸಾಕಬೇಕು. ಮಕ್ಕಳಿಗೆ ಮಲತಾಯ ಭಾವನೆ ಬಾರದಂತೆ ನೋಡಿಕೊಳ್ಳಬೇಕು. ಹಾಗೊಮ್ಮೆ ಬಂದರೆ ಕುಲದ ಕಟ್ಟಳೆಯಂತೆ ಶಿಕ್ಷೆ ವಿಧಿಸಲಾಗುವುದು ಎಂಬ ಎಚ್ಚರಿಕೆಯಿಂದ ಮಕ್ಕಳು ಯಾರ ಕಡೆ ಹೋಗುತ್ತವೆಯೋ ಅವರ ಕಡೆ ಕಳುಹಿಸಿಕೊಡಲಾಗುತ್ತದೆ. ಎಲ್.ಕೆ. ಅನಂತಕೃಷ್ಣ ಅಯ್ಯರ್ ಕೂಟ್ಕೆಯ ಬಗ್ಗೆ ಹೀಗೆ ವಿವರಿಸುತ್ತಾರೆ: A divorce can be obtained the pleasure of either party and is evidence by taking back the 'tali given to the woman. If a married women is found living with a stranger, she can be divorced and is allowed to marry her paramour in the Kudike from in the event to his pouging

the marriage expenses of her former husband and feeding the tribes men. If the husband of a woman who elopes with another likes to live with her, he may retain her also by feeding the tribes men, Is the parmour of a married, of unmarried women is a man of the same or higher cast she is married to him. If he is of an inferior cast she is excomunileted.[೧೩]

ಕೂಡಿಕೆಯು ಸ್ವಜಾತಿಯವರಲ್ಲಿ ಮಾತ್ರ ಕಂಡುಬರುತ್ತದೆ. ಕೂಡಿಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಗಂಡು ಕೂಟ್ಕೆಗೆ ತಗಲುವ ಎಲ್ಲಾ ವೆಚ್ಚವನ್ನು ಬರಿಸಬೇಕಾಗುತ್ತದೆ. ಬಂದ ಎಲ್ಲರಿಗೂ ಕೋಳಿ, ಕುರಿ ಅಥವಾ ಮೇಕೆ ಕೊಯ್ದು ಊಟ ಹಾಕಿಸಬೇಕು. ಕೂಟ್ಕೆಯಲ್ಲಿ ಒಂದಾದ ಜೋಡಿಗಳನ್ನು ಪರಸ್ಪರ ಕೈ ಹಿಡಿಸಿ ಸಮುದಾಯ ಕಟ್ಟುಕಟ್ಟಳೆಗಳನ್ನು ತಿಳಿಸಿ ನಾಡಗೌಡ, ಗಡಿಗೌಡ, ಕಟ್ಟುಗೌಡ, ಕೋಲುಕಾರ ಮತ್ತು ಕುಲಗೌಡರ ಸಮ್ಮುಖದಲ್ಲಿ ಸಮಸ್ತ ಸಮುದಾಯದವರ ಎದುರಿಗೆ ಗಂಡ ಹೆಂಡತಿ ಎಂದು ತಿಳಿಸಲಾಗುತ್ತದೆ. ಈ ಜೋಡಿಗಳನ್ನು ಸಮುದಾಯದ ಪ್ರತಿಯೊಬ್ಬರು ಯಾವುದೇ ಕೊಂಕುಗಳಿಲ್ಲದೆ ಗೌರವಯುತವಾಗಿ ನಡೆಸಿಕೊಳ್ಳಬೇಕು ಎಂದು ಕುಲಪಂಚಾಯಿತಿ ಘೋಷಿಸುತ್ತದೆ. ಇಲ್ಲಿಗೆ ಕೂಟ್ಕೆ ಮುಗಿದು ಎಲ್ಲರೂ ಊಟಕ್ಕೆ ಹೊರಡುತ್ತಾರೆ.

ಒಟ್ಟಾರೆಯಾಗಿ ಇರುಳಿಗರಲ್ಲಿರುವ ಈ ಕೂಟ್ಕೆ ಸಮುದಾಯದಲ್ಲಿನ ಗಂಡ ಸತ್ತ ಹೆಂಡತಿ ಹೆಂಡತಿ ಸತ್ತ ಗಂಡ ಅಥವಾ ಲೈಂಗಿಕ ತೃಪ್ತಿ ನೀಡದ ಹೆಂಡತಿ ಅಥವಾ ಗಂಡ ಹಾಗೆಯೇ ರೋಗಗ್ರಸ್ಥ ಹೆಂಡತಿ ಪರಸ್ಪರ ಹೊಂದಾಣಿಕೆಯಿಲ್ಲದ ಜೋಡಿಗಳು ತಮಗಿಷ್ಟ ಬಂದವರ ಜೊತೆ ಮುಂದಿನ ಜೀವನ ನಡೆಸಲು ಸಮುದಾಯವೇ ಒಪ್ಪಿ ಮುಂದೆ ನಿಂತು ಕಳುಹಿಸಿಕೊಡುವ ಒಂದು ಸುಂದರ ಅವಕಾಶವಾಗಿರುತ್ತದೆ.

ಆದ್ದರಿಂದ ಇರುಳಿಗರಲ್ಲಿ ಯಾವೊಬ್ಬ ಮಹಿಳೆಯೂ ಗಂಡ ಸತ್ತ ನಂತರ ಕೊರಗುವ ಅವಶ್ಯಕತೆಯಿಲ್ಲ. ನಮ್ಮಿಂದ ಸಂಪ್ರದಾಯ ಕಟ್ಟುನಿಟ್ಟುಗಳು ಹುಟ್ಟಿಕೊಂಡಿವೆಯೇ ವಿನಃ ಅವುಗಳಿಂದ ನಾವು ಹುಟ್ಟಿಲ್ಲ ಎಂಬ ನೀತಿಯಂತೆ ಗಂಡ ಸತ್ತ ನಂತರ ಅವಶ್ಯಕತೆಯನ್ನು ಬಯಸುವ ಮನಸ್ಸನ್ನು ಅರಿತಿರುವ ಇರುಳಿಗರು ಇನ್ನೊಬ್ಬರನ್ನು ಆರಿಸಿಕೊಳ್ಳುವ ಅವಕಾಶವನ್ನು ಒದಗಿಸುತ್ತವೆ. ಇಂತಹ ಅನೇಕ ಸೂಕ್ಷ್ಮತೆಗಳನ್ನು ಸಮುದಾಯ ತನ್ನ ಕಟ್ಟಳೆಯಾಗಿಸಿಕೊಂಡಿರುವುದು ಅತ್ಯಂತ ವಿಶಿಷ್ಟವಾದುದಾಗಿದೆ. ಕೆಲವೊಮ್ಮೆ ಹೊಂದಾಣಿಕೆಯಿಲ್ಲದ ಸಂಸಾರದಲ್ಲಿ ಹೆಣ್ಣು ಅಥವಾ ಗಂಡು ಬಲವಂತವಾಗಿ ಬದುಕುವುದನ್ನು ಕಾಣುತ್ತೇವೆ. ಆದರೆ ಬುಡಕಟ್ಟುಗಳಲ್ಲಿ ಪ್ರತಿಯೊಬ್ಬರು ಸ್ವಾತಂತ್ರ್ಯರು. ಅವರು ಸ್ವತಂತ್ರವಾಗಿ ಬದುಕಬೇಕೆಂದೇ ಇಂತಹ ಹಲವಾರು ಕಟ್ಟಳೆಗಳನ್ನು ಹಾಕಿಕೊಂಡಿದ್ದಾರೆ

ಎಂಬ ಅಭಿಪ್ರಾಯ ಮೂಡುತ್ತದೆ. ಹೀಗೆ ಕೂಟ್ಕೆ ಮಾಡಿಕೊಂಡ ಜೋಡಿಗಳನ್ನು ಯಾವುದೇ ನಿರ್ಲಕ್ಷ್ಯವಿಲ್ಲದೆ ಎಲ್ಲರಂತೇ ಸರಿಸಮವಾಗಿ ಕಾಣಬೇಕೆಂದು ಕುಲಪಂಚಾಯಿತಿಯೇ ಮಾರ್ಗದರ್ಶನ ನೀಡುತ್ತದೆ.

೪.೪. ಇರುಳಿಗರ ನ್ಯಾಯ ತೀರ್ಮಾನಗಳು

ಪ್ರಾರಂಭದಲ್ಲಿ ಮನುಷ್ಯ ಪ್ರಕೃತಿಯಲ್ಲಿ ಸಿಗುತ್ತಿದ್ದ ಆಹಾರ ಪದಾರ್ಥಗಳನ್ನು ತಿಂದು ಬದುಕುತ್ತಿದ್ದ. ನಂತರ ಬೇಟೆಯಾಡಲು ಪ್ರಾರಂಭಿಸಿ ಪ್ರಕೃತಿಯಲ್ಲಿ ಸಿಗುತ್ತಿದ್ದ ಕಲ್ಲು, ದೊಣ್ಣೆಗಳನ್ನು ಬಳಸಿಕೊಳ್ಳಲಾರಂಭಿಸಿದ. ಹೀಗೆ ಪ್ರಾಣಿಗಳ ಜೊತೆ ನಿರಾಯುಧನಾಗಿ ಹೋರಾಡಿ ಕೊಂದು ತಿನ್ನುತ್ತಿದ್ದ. ಇಲ್ಲವಾದರೆ ಹೋರಾಟದಲ್ಲಿ ತನ್ನ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದ. ಇಂತಹ ಹತ್ತಾರು ಪ್ರಯೋಗಗಳನ್ನು ಪ್ರಕೃತಿಯೊಂದಿಗಿನ ನಿರಂತರ ಸೆಣಸಾಟದಲ್ಲಿ ಮಾಡುತ್ತಾ ಮನುಷ್ಯ ಎರಡು ಅತ್ಯಂತ ಪ್ರಮುಖ ವಸ್ತುಗಳನ್ನು ಆವಿಷ್ಕರಿಸಿಕೊಂಡನು. ಒಂದು ಕಲ್ಲಿನ ಆಯುಧ ಇನ್ನೊಂದು ಬೆಂಕಿ ಹಿಡಿಯಲ್ಲಿ ಹಿಡಿಯಬಹುದಾದ ಮತ್ತು ಹರಿತವಾದ ಕಲ್ಲಿನ ಆಯುಧಗಳಿಂದ ಪ್ರಾಣಿಗಳನ್ನು ಕೊಲ್ಲಲು ಪ್ರಾರಂಭಿಸಿದ ಮತ್ತು ಅದೇ ಹರಿತವಾದ ಆಯುಧಗಳಿಂದ ಭೂಮಿಯನ್ನು ಅಗೆದು ಭೂಮಿ ಒಳಗೆ ಸಿಗುತ್ತಿದ್ದ ಗೆಡ್ಡೆ ಗೆಣಸುಗಳನ್ನು ತೆಗೆದು ತಿನ್ನಲು ಪ್ರಾರಂಭಿಸಿದನು. ಹೀಗೆ ಒಂದು ಕಡೆ ನೆಲೆ ನಿಂತ ಮಾನವ ಪ್ರಕೃತಿಯನ್ನು ತನ್ನ ಅವಶ್ಯಕತೆಗೆ ತಕ್ಕಂತೆ ಬಳಸಿ ಕೊಳ್ಳಲಾರಂಭಿಸಿದನು. ಇಂತಹ ಸಂದರ್ಭದಲ್ಲಿ ಶಕ್ತಿ ಒಂದು ಪ್ರಮುಖ ಸಾಧನವಾಗಿತ್ತು. ಶಕ್ತಿ ಇದ್ದ ಬಲಾಢ್ಯನು ಶಕ್ತಿ ಇಲ್ಲದವರನ್ನು ಆಳಲು ಪ್ರಾರಂಭಿಸಿದನು. ಆಗಲೇ ಹುಟ್ಟಿಕೊಂಡಿದ್ದೇ ಈ ಪಾಪ ಪುಣ್ಯಗಳು, ದೇವರು ದಿಂಡಿರುಗಳೆಂಬ ನಂಬಿಕೆಗಳು. ಇವುಗಳೇ ಮುಂದೇ ಮನುಷ್ಯನನ್ನು ನಿಯಂತ್ರಿಸುವ ಕಾನೂನುಗಳಾಗಿ ಪರಿವರ್ತನೆಗೊಂಡವು. ಆದರೆ ಕಾಲಾನಂತರದಲ್ಲಿ ಮನುಷ್ಯ ದೇವರು ದಿಂಡರು, ಪಾಪಪುಣ್ಯಗಳಿಗೆ ಹೆದರದೆ ಹೋದಾಗ ಮತ್ತೆ ಶಕ್ತಿ ಪ್ರಯೋಗ ದಿಂದಲೇ ನಿಯಂತ್ರಿಸುವ ಪದ್ಧತಿ ರೂಢಿಗೆ ಬಂದಿತು. ಇದೇ ಪ್ರಸ್ತುತ ಸಮಾಜವನ್ನು ನಿಯಂತ್ರಿಸು ತ್ತಿರುವುದು.

ಆದರೆ ಬುಡಕಟ್ಟುಗಳಲ್ಲಿ ಇಂದಿಗೂ ಪಾಪ, ಪುಣ್ಯ, ದೇವರು, ಧರ್ಮ, ಕರ್ಮಗಳೇ ಕಾನೂನುಗಳಾಗಿ ನಿಯಂತ್ರಿಸುತ್ತಿವೆ. ಕುಲಕ್ಕೆ ಅಥವಾ ತಮ್ಮ ಕಟ್ಟಳೆಗೆ ಅಪಚಾರವಾದರೆ ಎಂದಿಗೂ ಸಹಿಸದ ಆದಿವಾಸಿಗಳು ಕೇವಲ ಒಗಟು, ಗಾದೆ ಜೀವನದ ಅನುಭವದ ಮೂಲಕ ನ್ಯಾಯ ತೀರ್ಮಾನ ಮಾಡಿ ಉಳ್ಳವರು ಇಲ್ಲದವರು ಶಕ್ತಿಶಾಲಿ, ದುರ್ಬಲ ಮಹಿಳೆ, ಪುರುಷ ಸರಿಸಮವಾಗಿ ಜೀವನ ನಡೆಸಿಕೊಂಡು ಹೋಗುವಂಥ ವಾತಾವರಣವನ್ನು ನಿರ್ಮಿಸಿಕೊಂಡು ಬದುಕುತ್ತಿದ್ದಾರೆ.

ಬುಡಕಟ್ಟುಗಳಲ್ಲಿ ನ್ಯಾಯ ಪದ್ಧತಿ ಎಂಬುದು ಅತ್ಯಂತ ವಿಶಿಷ್ಟವಾದುದ್ದಾಗಿದ್ದು, ಬಹಳ ಕಟ್ಟುನಿಟ್ಟಾಗಿ ಪರಿಪಾಲನೆಗೊಳ್ಳುತ್ತದೆ. ತಮ್ಮಲ್ಲೇ ಒಬ್ಬನನ್ನು ನಾಯಕನನ್ನಾಗಿ ಆಯ್ಕೆ ಮಾಡಿಕೊಂಡು

ಅವನ ಮುಖಾಂತರ ತಮ್ಮ ಒಳಜಗಳಗಳನ್ನು ಬಗೆಹರಿಸಿಕೊಳ್ಳುತ್ತಾರೆ. ಈ ಆಯ್ಕೆಯು ನಿಷ್ಪಕ್ಷಪಾತವಾಗಿ, ಪಾರದರ್ಶಕತೆಯಿಂದ ನಡೆಯುತ್ತದೆ. ಹಾಡಿಯ ಹಿರಿಯ ನಾಡಗೌಡ, ಕಟ್ಟುಗೌಡ, ಕೋಲುಕಾರರಾಗಿ ಗುರುತಿಸಿಕೊಳ್ಳುತ್ತಾರೆ. ಇಲ್ಲಿ ವಿದ್ಯೆ ಶಕ್ತಿಗಿಂತ ಅನುಭವ ಪ್ರಮುಖವಾಗಿರುತ್ತದೆ. ಆಯ್ಕೆಗೊಳ್ಳುವ ವ್ಯಕ್ತಿ ತನ್ನ ಹಿತಕ್ಕಿಂತ ಹೆಚ್ಚಾಗಿ ಸಮುದಾಯದ ಹಿತಕ್ಕಾಗಿ ದುಡಿಯುತ್ತಿರುತ್ತಾನೆ. ಇಡೀ ಹಾಡಿಯೇ ಅವನ ಮಾತನ್ನು ದೇವರ ಮಾತಿನಂತೆ ಗೌರವಿಸುತ್ತದೆ.

ಬುಡಕಟ್ಟುಗಳಲ್ಲಿ ನ್ಯಾಯ ವ್ಯವಸ್ಥೆಯು ಅತ್ಯಂತ ಕಟ್ಟುನಿಟ್ಟಿನಿಂದ ಕೂಡಿರುತ್ತದೆ. ತಪ್ಪುಗಳಿಗೆ ಅನುಗುಣವಾಗಿ ಶಿಕ್ಷೆಯನ್ನು ವಿಧಿಸಲಾಗುತ್ತದೆ. ಈ ಶಿಕ್ಷೆಯು ತಪ್ಪು ಮಾಡಿದ ವ್ಯಕ್ತಿ ಮತ್ತೊಮ್ಮೆ ಅಂತಹ ತಪ್ಪನ್ನು ಮಾಡದೆ ಮುಂದಿನ ಜೀವನ ರೂಪಿಸಿಕೊಳ್ಳುವ ರೀತಿಯಲ್ಲಿ ಆಗಿರುತ್ತದೆ. ಕೆಲವು ಸಂದರ್ಭದಲ್ಲಿ ಸಮಸ್ಯೆಗಳು ಬಗೆಹರಿಯದೆ ಇದ್ದಾಗ ಅಥವಾ ನ್ಯಾಯ ಹೇಳುವ ನಾಯಕನಿಗೆ ಸಂಬಂಧಿಸಿದ ಪ್ರಕರಣಗಳಾದರೆ ಬೇರೊಂದು ಸಮುದಾಯದ ನ್ಯಾಯಕಟ್ಟೆಯಲ್ಲಿ ಇಟ್ಟು ಬಗೆಹರಿಸಿಕೊಳ್ಳುತ್ತಾರೆ.

ಬುಡಕಟ್ಟು ಸಮುದಾಯಗಳಲ್ಲಿ ಬಹುತೇಕ ನ್ಯಾಯ ತೀರ್ಮಾನವು ಸಮಸ್ಯೆ ಬಗೆಹರಿಸಿ ಒಂದಾಗಿಸುವ ಉದ್ದೇಶವನ್ನು ಹೊಂದಿರುತ್ತಿತ್ತೆ ಹೊರತು ವಿಘಟಿಸುವ ಕೆಲಸ ಮಾಡುವುದಿಲ್ಲ. ಇಲ್ಲಿನ ನ್ಯಾಯ ನಿರ್ಣಯಗಳಿಗೆ ಯಾವ ಲಿಖಿತ ದಾಖಲೆಗಳೂ ಸಿಗುವುದಿಲ್ಲ. ಪರಂಪರೆಯಿಂದ ನಂಬಿಕೊಂಡು ಬಂದ ಜೀವನ ಮೌಲ್ಯಗಳಾದ ಮಾನವೀಯತೆ, ಸಹಕಾರ, ನಡವಳಿಕೆ, ಸ್ವಭಾವ, ಸಂಪ್ರದಾಯ ಮತ್ತು ಆಚರಣೆಯ ರೀತಿ–ರಿವಾಜುಗಳನ್ನೇ ಗಮನದಲ್ಲಿಟ್ಟುಕೊಂಡು ನ್ಯಾಯ ತೀರ್ಮಾನ ಮಾಡಲಾಗುತ್ತದೆ. ಇಲ್ಲಿ ಗಾದೆಗಳೇ ಕಾನೂನು ಹಾಗೂ ವಿಧಿಗಳಾಗಿ ತಪ್ಪಿಗೆ ಶಿಕ್ಷೆ ನೀಡುತ್ತವೆ.

ಇರುಳಿಗ ಬುಡಕಟ್ಟುಗಳಲ್ಲಿ ನ್ಯಾಯ ತೀರ್ಮಾನವು ಅತ್ಯಂತ ಕಟ್ಟುನಿಟ್ಟಿನಿಂದ ಕೂಡಿಬರುತ್ತವೆ. ಬಹಳ ಮುಂಗೋಪಿಗಳಾದ ಇವರು ಸಣ್ಣ ಸಣ್ಣ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸುತ್ತಾರೆ. ಬೇಟೆಯಾಡಿ ಬಂದ ಪ್ರಾಣಿಯನ್ನು ಪರಸ್ಪರ ಹಂಚಿಕೊಳ್ಳುವುದನ್ನು ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡಿರುವ ಒಂದು ಅನುಭವವನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ. ಕಾಡುಹಂದಿಯನ್ನು ಬೇಟೆಯಾಡಿ ಬರಲಾಗಿತ್ತು. ಹೊಡೆದವನಿಗೆ ತಲೆ ಮತ್ತು ಒಂದು ಚಪ್ಪೆ ಒಂದು ಗುಡ್ಡ ಮಾಂಸವನ್ನು ಕೊಡಲಾಯಿತು. ಹಂಚಿಕೆ ಮಾಡುವವನು ಬಂದಿರುವ ಎಲ್ಲರನ್ನು ಲೆಕ್ಕ ಮಾಡಿ ಒಂದು ಹಿಡಿ(ಹಿಡಿಯೆಂದರೆ ಒಬ್ಬ ಮನುಷ್ಯ ತನ್ನ ಎರಡು ಕೈಗಳಲ್ಲಿ ಬಲವಂತವಾಗಿ ಮಾಂಸವನ್ನು ಗೋರಿ ಹಿಡಿದುಕೊಳ್ಳುವಷ್ಟು) ಕೈಯನ್ನು ಗೋರಿ ಹಾಕುತ್ತಾನೆ. ಹೀಗೆ ಹಾಕುವಾಗ ಹಿಡಿಯಿಂದ ಒಂದು ಚೂರು ನೇತಾಡುತ್ತಿದ್ದರೂ ಅದನ್ನು ಕಿತ್ತು ಸರಿಯಾದ ಪ್ರಮಾಣದಲ್ಲಿ

ಹಾಕುತ್ತಾನೆ. ಕೇಳಿದರೆ ನಮ್ಮ ಜಾತಿಯಲ್ಲಿ ಮಾಂಸಕ್ಕಾಗಿ ಹೋರಾಟ ನಡೆದಿದೆ ಎನ್ನುತ್ತಾರೆ. ಆದ್ದರಿಂದ ಎಲ್ಲರಿಗೂ ಸಮಪಾಲು ಬರುವಂತೆ ಹಾಕುತ್ತೇವೆ. ಅದು ಒಬ್ಬ ಚಿಕ್ಕವನಿರಲಿ ದೊಡ್ಡವನಿರಲಿ ಬೇಟೆಗೆ ಬಂದವನಿರಲಿ ಹೊಡೆದ ಸಂದರ್ಭದಲ್ಲಿ ಓಡಿ ಬಂದವನಿರಲಿ ಎಲ್ಲರಿಗೂ ಪಾಲು ಹಾಕುತ್ತೇವೆ ಎಂದರು.[೧೪]

ಇರುಳಿಗರು ವಾಸ ಮಾಡುವ ಸ್ಥಳಗಳನ್ನು ದೊಡ್ಡಿಗಳು, ಕಾಲೋನಿಗಳು, ಹಳ್ಳಿಗಳು ಎಂಬ ಹೆಸರುಗಳಿಂದ ಕರೆಯುತ್ತಾರೆ. ಇವರು ತಮ್ಮಲ್ಲಿ ನಾಡಗೌಡ ಕಟ್ಟುಗೌಡ ಕೋಲುಕಾರ ಮತ್ತು ಕುಲಗೌಡನನ್ನು ನೇಮಕ ಮಾಡಿಕೊಂಡಿರುತ್ತಾರೆ. ಇವರಲ್ಲಿ ಒಂದು ಊರಿಗೆ ಅಥವಾ ಹತ್ತು ಹಳ್ಳಿಗೆ ಒಬ್ಬರಂತೆ ಯಜಮಾನರನ್ನು ನೇಮಿಸಿಕೊಂಡು ಅವರನ್ನು ಗಡಿಗೌಡ, ನಾಡಗೌಡ ಎಂದು ಕರೆಯುತ್ತಾರೆ. ಸಮುದಾಯ ಬೆಳೆದು ವಾಸಿಸುವ ಪ್ರದೇಶಗಳು ದೂರದೂರವಾದ ಮೇಲೆ ಗಡಿಗಳನ್ನು ನೇಮಕ ಮಾಡಿಕೊಂಡು ಆಯಾ ಗಡಿಯ ಒಳಗೆ ನಾಡಗೌಡ, ಕಟ್ಟುಗೌಡ ಮತ್ತು ಕೋಲುಕಾರರನ್ನು ನೇಮಿಸಲಾಗುತ್ತದೆ. ಇವರ ಕಾರ್ಯನ್ನು ಈ ಕೆಳಕಂಡಂತೆ ಕೊಡಲಾಗಿದೆ.

ನಾಡಗೌಡ: ಇವನು ಇರುಳಿಗರಲ್ಲಿ ಬಹಳ ಪ್ರಮುಖ ವ್ಯಕ್ತಿಯಾಗಿರುತ್ತಾನೆ. ಈ ಸ್ಥಾನಕ್ಕೆ ಬರಲು ಸಮುದಾಯದಲ್ಲಿನ ಹಿರಿಯನಾಗಿರಬೇಕು. ಸಮುದಾಯದ ರೀತಿ ರಿವಾಜುಗಳನ್ನು ತಿಳಿದುಕೊಂಡು ಸಭ್ಯನಾಗಿ ಧೈರ್ಯದಿಂದ ಬದುಕುತ್ತಿರಬೇಕು. ಎಲ್ಲವನ್ನು ಸರಿದೂಗಿಸಿಕೊಂಡು ಹೋಗುವಂತಹ ಗುಣ ಹೊಂದಿರಬೇಕು. ನಾಡಗೌಡನಾಗಲು ಎಲ್ಲರೂ ಹೆದರುತ್ತಾರೆ. ಇವನಿಗೆ ಕಣಿ, ಕಲ್ಲುಸೇವೆ ಸಮುದಾಯದ ಪ್ರತಿಯೊಂದು ಕಟ್ಟಲೆಗಳು ತಿಳಿದಿರಬೇಕು. ನಾಡಗೌಡನ ಮಾತನ್ನು ಸಮುದಾಯದ ಯಾರೊಬ್ಬರು ಮೀರದಿರುವುದರಿಂದ ಇಡೀ ಸಮುದಾಯವನ್ನು ಉತ್ತಮವಾಗಿ ಯಾವುದೇ ತೊಂದರೆಯಿಲ್ಲದೆ ನಡೆಸಿಕೊಂಡು ಹೋಗಬೇಕಾದ ಜವಾಬ್ದಾರಿ ಇವನ ಮೇಲೆ ಇರುತ್ತದೆ.

ನಾಡಗೌಡನ ಹುದ್ದೆಯು ಕೆಲವು ಸಂದರ್ಭದಲ್ಲಿ ವಂಶಪಾರಂಪರ್ಯವಾಗಿ ಬಂದರೆ ಮತ್ತೆ ಕೆಲವು ಸಂದರ್ಭದಲ್ಲಿ ಅರ್ಹತೆ ಮತ್ತು ಗುಣಸ್ವಭಾವಗಳಿಂದ ದೊರೆಯುತ್ತಿತ್ತು. ನಾಡಗೌಡನ ಮರಣದ ನಂತರ ಆತನ ಮಗ ಆ ಹುದ್ದೆಯನ್ನು ಅಲಂಕರಿಸುತ್ತಿದ್ದನು. ಇದಕ್ಕೆ ಸಮುದಾಯದವರ ಒಪ್ಪಿಗೆ ಅತ್ಯವಶ್ಯಕವಾಗಿತ್ತು. ಆ ವ್ಯಕ್ತಿಗೆ ಸಮುದಾಯದಲ್ಲಿ ಭಿನ್ನಾಭಿಪ್ರಾಯವಿದ್ದರೆ ಬೇರೆಯವರನ್ನು ನೇಮಿಸಲಾಗುತ್ತಿತ್ತು.

ನಾಡಗೌಡನ ಅಪ್ಪಣೆಯಿಲ್ಲದೆ ಸಮುದಾಯದ ಯಾವ ಶುಭ ಸಮಾರಂಭಗಳು ನಡೆಯುವುದಿಲ್ಲ. ಅವನೇ ಮುಂದೆ ನಿಂತು ಎಲ್ಲಾ ಶುಭ ಸಮಾರಂಭಗಳನ್ನು ನಡೆಸಿಕೊಡಬೇಕು. ನಾಡಗೌಡ ಸಮುದಾಯಗಳಲ್ಲಿ ಉಂಟಾಗುವ ವ್ಯಾಜ್ಯ ಹೊಡೆದಾಟ, ಕುಲಭ್ರಷ್ಟತೆ ಜಾತಿಭ್ರಷ್ಟತೆ, ಹೋಟೆಲ್‌ನಲ್ಲಿ ತಿನ್ನುವುದು, ಸಾರಾಯಿ ಸೇವನೆ, ಚಪ್ಪಲಿಯಲ್ಲಿ ಹೊಡೆದಾಡುವುದು, ಹಾದರತನ ಮಾಡುವುದು, ಅನ್ಯಜಾತಿಯವರೊಂದಿಗೆ ಲೈಂಗಿಕ ಸಂಬಂಧ ಮತ್ತು ಮದುವೆ ಮಾಡಿಕೊಳ್ಳುವುದು,

ಮಾತಿಗೆ ತಪ್ಪಿ ನಡೆಯುವುದು ಮುಂತಾದ ಘಟನೆಗಳಿಗೆ ಸಂಬಂಧಿಸಿದಂತೆ ಕಂಡುಬಂದರೆ ನಾಡಗೌಡ ಮುಂದೆ ನಿಂತು ತೀರ್ಮಾನ ಮಾಡುತ್ತಾನೆ. ಇವನ ಮಾತನ್ನು ಸಮುದಾಯದ 'ಕುಲಗೌಡ, ಕೋಲುಕಾರ, ಗಡಿಗೌಡರಾದಿಯಾಗಿ ಯಾರೂ ಮೀರದಂತೆ ಪಾಲಿಸುತ್ತಾರೆ. ನಾಡಗೌಡ ವಿಧಿಸಿದ ಶಿಕ್ಷೆಯನ್ನು ಯಾರೂ ಪ್ರಶ್ನೆ ಮಾಡದೆ ಎಲ್ಲರೂ ಗೌರವಿಸುತ್ತಾರೆ. ಶಿಕ್ಷೆಗಳಿಗೆ ಒಳಗಾದ ವ್ಯಕ್ತಿಗೆ ಕುಲಕಟ್ಟು ಮೀರಿ ಸಹಾಯ ಮಾಡುವಂತಿಲ್ಲ; ಅಂಥವರನ್ನು ಕೂಡ ಕುಲದಿಂದಲೇ ಹೊರ ಹಾಕುವ ಶಿಕ್ಷೆ ನೀಡಲಾಗುತ್ತಿತ್ತು.

ನಾಡಗೌಡನು ಮರಣ ಹೊಂದಿದ್ದರೆ ಅವನ ಸಾವಿನ ಆಚರಣೆಯನ್ನು ಸಮುದಾಯದ ಪ್ರತಿಯೊಬ್ಬರು ಖರ್ಚಾಕಿ ನಡೆಸಿಕೊಡಬೇಕು. ಹೊಸ ಕರಿಯ ಕಂಬಳಿ ತಂದು ಬಹಳ ಗೌರವ, ಭಯ ಭಕ್ತಿಯಲ್ಲಿ ಅಂತ್ಯಸಂಸ್ಕಾರ ಮಾಡುತ್ತಾರೆ.

ಕಟ್ಟುಗೌಡ: ಇವನು ಇರುಳಿಗರಲ್ಲಿ ನಾಡಗೌಡನ ನಂತರದ ಸ್ಥಾನವನ್ನು ಪಡೆದುಕೊಳ್ಳುತ್ತಾನೆ. ಇವನು ನಾಡಗೌಡನಿಗಿಂತ ಕಡಿಮೆ ಸ್ಥಾನಮಾನಗಳನ್ನು ಹೊಂದಿದ್ದರೂ ಸಮುದಾಯಕ್ಕೆ ಅತ್ಯಂತ ಪ್ರಮುಖ ವ್ಯಕ್ತಿಯಾಗಿರುತ್ತಾನೆ. ನಾಡಗೌಡ ಕೇವಲ ಆದೇಶ ಮತ್ತು ಉಸ್ತುವಾರಿ ನೋಡಿಕೊಂಡರೆ ಕಟ್ಟುಗೌಡ ಅದನ್ನು ಕಾರ್ಯಗತಗೊಳಿಸುವ ಕೆಲಸವನ್ನು ಮಾಡುತ್ತಾನೆ. ಕೆಲವು ಸಂದರ್ಭದಲ್ಲಿ ಸಮುದಾಯದ ಕಟ್ಟಳೆಗಳಿಗೆ ಸಂಬಂಧಿಸಿದಂತೆ ನಾಡಗೌಡ ಇವನಲ್ಲಿ ಮಾಹಿತಿ ಕೇಳುತ್ತಿರುತ್ತಾನೆ. ಆದ್ದರಿಂದ ಕಟ್ಟುಗೌಡನನ್ನು ಆಯ್ಕೆ ಮಾಡುವಾಗ ಸಮುದಾಯದ ಬಗೆಗಿನ ಎಲ್ಲಾ ಕಟ್ಟಳೆಗಳನ್ನು ತಿಳಿದುಕೊಂಡಿರುವವನನ್ನೇ ನೇಮಕ ಮಾಡಲಾಗುತ್ತದೆ. ನ್ಯಾಯದ ಸಂದರ್ಭದಲ್ಲಿ ಇಂತಹ ತಪ್ಪಿಗೆ ಶಿಕ್ಷೆ ಇಂತಹದೇ ಎಂಬುದನ್ನು ನಾಡಗೌಡನಿಗೆ ಇವನೇ ತಿಳಿಸುತ್ತಾನೆ. ಆದ್ದರಿಂದ ಕಟ್ಟುಗೌಡನ ಆಯ್ಕೆಯಲ್ಲಿ ಇಡೀ ಸಮುದಾಯವೇ ಅತ್ಯಂತ ಜಾಗರೂಕತೆಯಿಂದ ವರ್ತಿಸುವುದನ್ನೂ ಕಾಣಬಹುದು.

ಇವನ ಆಯ್ಕೆ ಅತ್ಯಂತ ವಿಜೃಂಭಣೆಯಿಂದ ನಡೆಯುತ್ತದೆ. ಇದು ಸಾಮಾನ್ಯವಾಗಿ ರಾತ್ರಿ ಸಮಯದಲ್ಲಿ ನಡೆಯುತ್ತಿತ್ತು. ಇರುಳಿಗರ ಕುಲದೇವರುಗಳಾದ ಬಾಣಂತಿ ಮಾರಮ್ಮ, ಎಳೆಯಮ್ಮ, ಬರಿಯಮ್ಮ, ಮದ್ದೂರಮ್ಮ, ವೀರಮಾಸ್ತಿ ಕೆಂಪಮ್ಮ, ಮಾಸ್ತಮ್ಮ, ದ್ಯಾವರಾಳಪ್ಪ, ರತ್ನಗಿರಿಯಮ್ಮ, ದಂಡಿನ ಮಾರಮ್ಮ, ಕ್ವಾಣದ ಮಾರಮ್ಮ, ಬಿಸಲಮ್ಮ ಮುಂತಾದವರಿಗೆ ಪೂಜೆ ಮಾಡಿ ನಾಡಗೌಡನ ಅಧ್ಯಕ್ಷತೆಯಲ್ಲಿ ಕಟ್ಟುಗೌಡನ ಆಯ್ಕೆ ಕಾರ್ಯಕ್ರಮ ನಡೆಯುತ್ತಿತ್ತು. ಬಂದ ಜನರೆಲ್ಲಾ ಕುರಿ, ಕೋಳಿ ಕೊಯ್ದು ಅಡುಗೆ ಸಿದ್ಧಪಡಿಸುತ್ತಾರೆ. ಕಟ್ಟುಗೌಡನ ಆಯ್ಕೆಯ ಪಟ್ಟಿಯಲ್ಲಿರುವವರಲ್ಲಿ ಉತ್ತಮನನ್ನು ಆಯ್ಕೆ ಮಾಡಲಾಗುತ್ತದೆ. ಇದಕ್ಕೆ ಕುಲಗೌಡರ ಒಪ್ಪಿಗೆ, ಸಮುದಾಯದ ಒಮ್ಮತ ಅಭಿಪ್ರಾಯ ಮತ್ತು ಕಟ್ಟುಗೌಡನಾಗುವವನ ಜೀವನ ವಿಧಾನ ಮತ್ತು ವೈಯಕ್ತಿಕ ಅಭಿಪ್ರಾಯಗಳನ್ನು ಸಂಗ್ರಹಿಸಿ ಕೊನೆಯದಾಗಿ ನಾಡಗೌಡನ ಅಭಿಪ್ರಾಯದೊಂದಿಗೆ ಕಟ್ಟುಗೌಡನನ್ನು ಆಯ್ಕೆ ಮಾಡುತ್ತಾರೆ.

ಕಾಕಡ, ಕನಕಾಂಬರಿ, ಉಗುನಿ ಹಣ್ಣೆ, ದಾಸವಾಳ, ಚೆಂಡು ಹೂ, ಏಳುಸುತ್ತಿನ ಮಲ್ಲಿಗೆ, ದುಂಡು ಮಲ್ಲಿಗೆ, ಸೂಜಿಮಲ್ಲಿಗೆ, ಜಾಲರ ಹೂ, ಕಾಡಮಲ್ಲಿಗೆ, ಬೆಪ್ಪಾಲೆ ಹೂ, ಕಣಗಲೆ ಮತ್ತು ಸಂಕ್ರಾಂತಿ ಹೂಗಳನ್ನು ತಂದು ಹಾರ ಮಾಡಿ ಆಯ್ಕೆಯಾದ ಕಟ್ಟುಗೌಡನ ಕೊರಳಿಗೆ ನಾಡಗೌಡನ ಕೈಯಿಂದ ಹಾಕಿಸಿ ಗೌರವಿಸಲಾಗುತ್ತದೆ. ಅಲ್ಲಿಗೆ ಕಟ್ಟುಗೌಡನ ಆಯ್ಕೆ ಮುಗಿದು ಅವನು ಅಧಿಕಾರ ವಹಿಸಿಕೊಂಡ ಆ ದಿನದಿಂದಲೇ ಸಮುದಾಯದ ಸೇವೆಗೆ ಸಿದ್ಧನಾಗುತ್ತಾನೆ. ಸಮುದಾಯದಲ್ಲಿ ಸಂಭವಿಸಿದ ತಪ್ಪುಗಳು ಕುಲವಿರೋಧಿ ಕಾರ್ಯಗಳನ್ನು ಬರೆದುಕೊಂಡು ಅಥವಾ ತಿಳಿದುಕೊಂಡು ಕೋಲುಕಾರನ ಮೂಲಕ ಎಲ್ಲಾ ಗಡಿಗೌಡರಿಗೆ ಮತ್ತು ಸುತ್ತಮುತ್ತಲಿನ ಸಂಬಂಧಿಕರಿಗೆ ವಿಷಯ ತಿಳಿಸುತ್ತಾನೆ. ಕುಲಾಚಾರ್ಯ ಮಾಡಿ ಶಿಕ್ಷೆಗೆ ಗುರಿಯಾಗಿದ್ದರೆ, ಅಂಥವನಿಗೆ ಅನ್ನ ನೀರು ನೀಡುವಂತಿಲ್ಲಾ ಅವನಿಗೆ ಎಲೆ ಮೇಲೆ ಹಿಟ್ಟು ಅಥವಾ ಕೈ ಮೇಲೆ ನೀರು ಬಿಟ್ಟುಕೊಡಿ, ಅವನಿಗೆ ಅಥವಾ ಅವರ ಕುಟುಂಬದಲ್ಲಿ ಹೆಣ್ಣು ತರುವುದಾಗಲಿ ಕೊಡುವುದಾಗಲಿ ಮಾಡದಂತೆ ತಿಳಿಸುತ್ತಾರೆ. ಹಾಗೆಯೇ ಅವರನ್ನು ಮನೆಗೆ ಸೇರಿಸಿಕೊಳ್ಳುವಂತಿಲ್ಲ. ಜೊತೆಗೆ ಮಾತಾನಾಡುವುದಾಗಲಿ, ಮುಟ್ಟಿಸಿಕೊಳ್ಳುವುದಾಗಲಿ ಮಾಡದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಅಲ್ಲಿನ ಗಡಿಗೌಡರಿಗೆ ತಿಳಿಸಿಕೊಡುತ್ತಾನೆ. ಇದನ್ನು ಅಷ್ಟೇ ಗೌರವಯುತವಾಗಿ ಗಡಿಗೌಡನು ನಿರ್ವಹಿಸುತ್ತಾನೆ.

ಹೀಗೆ ಆಯ್ಕೆಗೊಂಡ ಕಟ್ಟುಗೌಡ ಅನೇಕ ನಿಷ್ಠುರದ ಕೆಲಸವನ್ನು ಸಮುದಾಯದ ಒಳಿತಿಗಾಗಿ ಮಾಡಬೇಕಾಗುತ್ತದೆ. ಆದರೂ ಇವನು ನಾಡಗೌಡನ ಮಾತು ಮೀರುವಂತಿಲ್ಲ. ನಾಡಗೌಡನಿಗೆ ಸಲಹೆ ಅವಶ್ಯಕತೆ ಇದ್ದರೆ ಮಾತ್ರ ಸಲಹೆಯನ್ನು ನೀಡಬಹುದಷ್ಟೆ, ಹೊರತು ನಾಡಗೌಡನಿಗೆ ಆಜ್ಞೆ ಮಾಡುವ ಯಾವ ಅಧಿಕಾರವು ಇವನಿಗಿರುವುದಿಲ್ಲ. ನಾಡಗೌಡ ಇಲ್ಲದ ಸಮಯದಲ್ಲಿ, ನಾಡಗೌಡನಿಗೆ ಅವಮಾನವಾಗುವ ರೀತಿಯಲ್ಲಿ ಸಮುದಾಯದವರಲ್ಲಿ ಯಾರಾದರೂ ವರ್ತಿಸಿದರೆ ಅಂಥವರ ವಿರುದ್ಧ ಶಿಕ್ಷೆ ನೀಡುವ ಅಧಿಕಾರವನ್ನು ಹೊಂದಿರುತ್ತಾನೆ.

ಆದ್ದರಿಂದ ನಾಡಗೌಡನ ಆಯ್ಕೆಯು ಅತ್ಯಂತ ಜಾಗರೂಕತೆಯಿಂದ, ಸಂಯಮ ವ್ಯವಧಾನದಿಂದ, ಸಮುದಾಯದವರ ಸಂಪೂರ್ಣ ಒಪ್ಪಿಗೆಯನ್ನು ಪಡೆದು ಕಟ್ಟುಗೌಡ ಆಗಬಯಸುವವನ ಚಾರಿತ್ರಿಕತೆಯನ್ನು ಪರಿಶೀಲಿಸಿ ಆಯ್ಕೆ ಮಾಡಲಾಗುತ್ತದೆ. ಏಕೆಂದರೆ ಒಂದು ಸಮುದಾಯವು ಗಟ್ಟಿಯಾಗಿ ನಿಲ್ಲಲು ಆ ಸಮುದಾಯದ ಕಟ್ಟಳೆಗಳು ಬಹಳ ಮುಖ್ಯ. ಈ ಕಟ್ಟಳೆಗಳು ಉಳಿದುಕೊಳ್ಳಲು ಸಮುದಾಯದ ಕಟ್ಟುಗೌಡ ಬಹಳ ಮುಖ್ಯ ಎಂದು ಇವರು ನಂಬಿಕೊಂಡಿದ್ದಾರೆ.

ಕೋಲುಕಾರ ಅಥವಾ ಉದ್ದಾರಿ : ಕೋಲುಕಾರ ಎಂದರೆ ಇರುಳಿಗರಲ್ಲಿ ಭಯಪಡಿಸುವ ವ್ಯಕ್ತಿ, ಇವನು ನೋಡಲು ದಷ್ಟಪುಷ್ಟನಾಗಿ ಎತ್ತರದ ಬಲವಾದ ದೇಹವನ್ನು ಹೊಂದಿದ್ದು, ಯಾವಾಗಲೂ ಕೈಯಲ್ಲಿ ಕೋಲು ಹಿಡಿದಿರುತ್ತಾನೆ. ಯಾವ ಶುಭ ಸಮಾರಂಭಗಳಲ್ಲೂ ಮುಂದೆ ನಿಂತು

ಕೆಲಸ ಮಾಡುತ್ತಿರುತ್ತಾನೆ. ಕೋಲು ಹಿಡಿದು ಊರಿಂದ ಊರಿಗೆ, ಗಡಿಯಿಂದ, ಗಡಿಗೆ ಓಡಾಡುವುದರಿಂದ ಇವನನ್ನು ಕೋಲುಕಾರ ಅಥವಾ ಉದ್ದಾರಿ ಅಥವಾ ಸಾರುವಯ್ಯ ಎಂಬ ಹೆಸರಿನಿಂದ ಕರೆಯುತ್ತಾರೆ. ಇರುಳಿಗರಲ್ಲಿನ ನಾಡಗೌಡ ಮತ್ತು ಕಟ್ಟುಗೌಡರು ಪೂಜಿಸುವ ಕೋಲನ್ನು ಕೈಯಲ್ಲಿ ಹಿಡಿದುಕೊಂಡ ಕೋಲುಕಾರ ನಾಡಗೌಡನ ಆಜ್ಞೆಯಂತೆ ಕಟ್ಟುಗೌಡ ಬರೆದುಕೊಟ್ಟ ಅಥವಾ ಹೇಳಿದ ಮಾತನ್ನು ಊರಿಂದ ಊರಿಗೆ, ಗಡಿಯಿಂದ ಗಡಿಗೆ ತಿಳಿಸುವ ಕೆಲಸವನ್ನು ಮಾಡುತ್ತಾನೆ. ಈ ಕೆಲಸವು ಅತ್ಯಂತ ಪ್ರಮುಖವಾಗಿದ್ದು; ಅತ್ಯಂತ ಕಷ್ಟದಾಗಿದ್ದರಿಂದ ಯುವಕರನ್ನು ಈ ಕೆಲಸಕ್ಕೆ ಹೆಚ್ಚು ನೇಮಿಸುತ್ತಾರೆ. ದಷ್ಟಪುಷ್ಟವಾಗಿರುವ ಯುವಕರಿಗೆ ಈ ಕೆಲಸ ವಹಿಸಿ ಅವನಿಗೆ ಕುಲದ ಕಟ್ಟುಪಾಡು, ಸಮುದಾಯದ ರೀತಿ ನೀತಿಗಳನ್ನು ತಿಳಿಸಲಾಗುತ್ತದೆ. ಇದರ ಜೊತೆಗೆ ಪ್ರಮುಖವಾಗಿ ಇರುಳಿಗ ಸಮುದಾಯದವರು ವಾಸ ಮಾಡುವ ಪ್ರತಿಯೊಂದು ಊರುಗಳನ್ನು, ಗಡಿಗಳನ್ನು ತಿಳಿಸುತ್ತಿದ್ದರು.

ಇರುಳಿಗ ಸಮುದಾಯದಲ್ಲಿ ನಡೆಯುವ ಮದುವೆ ಮುಂಜಿ, ತಿಥಿ, ಸಾವು, ಮಗು ಹುಟ್ಟಿದ್ದು ಎಲ್ಲಾ ರೀತಿಯ ಶುಭಕಾರ್ಯಗಳಲ್ಲಿ ಹಾಗೂ ಅಶುಭ ಕಾರ್ಯಕ್ಕೆ ಕೋಲುಕಾರನೇ ಮುಂದೆ ನಿಂತು ನಡೆಸಿಕೊಡುತ್ತಾನೆ. ಹಾಗೆಯೇ ನಾಡಗೌಡ ಮತ್ತು ಕಟ್ಟುಗೌಡರಿಗೆ ವಿಷಯ ತಿಳಿಸಿ ಅವರ ಅಪ್ಪಣೆ ಪಡೆದು ಸಮಾರಂಭದ ಸ್ಥಳಕ್ಕೆ ಬಂದು ಒಲೆಯೊಡ್ಡುವುದರಿಂದ ಹಿಡಿದು ಅಡುಗೆಯ ಮನೆಯ ಎಲ್ಲಾ ಜವಾಬ್ದಾರಿಯನ್ನು ವಹಿಸಿಕೊಂಡು ನಿರ್ವಹಿಸುತ್ತಾನೆ. ಯಾವುದೇ ಶುಭ ಸಮಾರಂಭದಲ್ಲೂ ಕೋಲುಕಾರನ ಅನುಮತಿ ಇಲ್ಲದೆ ಬೆಂಕಿ ಹತ್ತಿಸುವಂತಿಲ್ಲ. ಸಿದ್ಧವಾದ ಅಡುಗೆಯನ್ನು ಜನರಿಗೆ ಕೋಲುಕಾರನ ಅಪ್ಪಣೆ ಇಲ್ಲದೆ ನೀಡುವಂತಿಲ್ಲ. ಹಾಗೆಯೇ ಅವನ ಒಪ್ಪಿಗೆಯಿಲ್ಲದೆ ತಿನ್ನುವಂತಿಲ್ಲ, ತಿಂದು ಮೇಲೇಳುವಂತಿಲ್ಲ. ಅವನು ನಾಡಗೌಡ ಕಟ್ಟುಗೌಡರ ಒಪ್ಪಿಗೆ ಪಡೆದು ಸಿದ್ಧವಾದ ಅಡುಗೆಯನ್ನು ಪಂಕ್ತಿಯಲ್ಲಿ ಕುಳಿತ ಜನರಿಗೆ ಬಡಿಸುವಂತೆ ಹೇಳುವತನಕ ನೀಡುವುದಿಲ್ಲ. ಮೊದಲು ಕೋಲುಕಾರ ಗಂಧದ ಕಡ್ಡಿ ಅಥವಾ ಧೂಪದ ಹೊಗೆ ತೋರಿಸಿ ಅಡುಗೆಗೆ ಪೂಜೆ ಮಾಡಿ ತೀರ್ಥ ಎರಚಿದ ನಂತರ ಊಟ ಮಾಡುವಂತೆ ಸೂಚಿಸುತ್ತಾನೆ. ಎಲ್ಲರೂ ಊಟ ಮಾಡ್ರಪ್ಪ ಎಂದು ಅಪ್ಪಣೆ ಕೊಟ್ಟ ನಂತರವೇ ಊಟ ಮಾಡಲು ಪ್ರಾರಂಭಿಸಬೇಕು. ಊಟ ಎಲ್ಲ ಮುಗಿದರೂ ಪಂಕ್ತಿಯಲ್ಲಿರುವ ಯಾರೂ ಕೋಲುಕಾರನ ಅಪ್ಪಣೆಯಿಲ್ಲದೆ ಮೇಲೇಳುವಂತಿಲ್ಲ. ಕೋಲುಕಾರ ಎಲ್ಲರದ್ದೂ ಊಟ ಆಯ್ತು ಸ್ವಾಮಿ ಎಂದು ಕೇಳುತ್ತಾನೆ. ಆಗ ಎಲ್ಲರೂ ಆಯ್ತು ಅಂತ ಒಪ್ಪಿಗೆ ಕೊಟ್ಟರೆ ಕೋಲುಕಾರ "ಎಳ್ರಪ್ಪಾ ಊಟ ಆಯ್ತು ಅಂತಾನೆ ಆಗ ಮಾತ್ರ ಏಳಬೇಕು". ಪಂಕ್ತಿಯಲ್ಲಿ ಎಲ್ಲರೂ ಊಟ ಮಾಡುತ್ತಿದ್ದಾಗ ಹೇಳುವುದು, ಕೋಲುಕಾರ ಧೂಪದ ಹೊಗೆ ತೋರಿಸುವ ಮುಂಚೆ ಊಟಕ್ಕೆ ಕೂರುವುದು ಊಟ ಮಾಡುವುದನ್ನು ಕಂಡರೆ ಅಂಥವರಿಗೆ ಕೋಲುಕಾರ ಶಿಕ್ಷೆ ವಿಧಿಸುತ್ತಾನೆ.

ಮದುವೆ ಸಮಾರಂಭದಲ್ಲಿ ಕೋಲುಕಾರನ ಕೆಲಸ ಹೆಚ್ಚಾಗಿರುತ್ತದೆ. ಒಂದು ದಿನ ಮೊದಲೇ ಕೋಲುಕಾರ ಮದುವೆ ಮನೆಗೆ ಹೋಗಿ ಎಲ್ಲ ರೀತಿಯ ಕೆಲಸಕಾರ್ಯಗಳನ್ನು ಮಾಡುತ್ತಾನೆ. ತಾಳಿ ಕಟ್ಟಿದ ನಂತರ ಗದ್ದುಗೆ ಪೂಜೆ ಮಾಡಿ ತಂದಿರುವ ಹೊಸ ಕಂಬಳಿ ಅಥವಾ ಹೊಸ ಕಂಬಳಿ ತರಲು ಸಕ್ತರಾಗದ ಬಡವರಾದರೆ ತನ್ನ ಹೆಗಲ ಮೇಲಿರುವ ಕರಿಯ ಕಂಬಳಿಯನ್ನು ನೆಲದ ಮೇಲೆ ಹಾಸಿ ಹಸೆ ಬರೆದು ವೀಳ್ಯ ತಿದ್ದುತ್ತಾನೆ. ಮದುವೆಯ ದಿನ ಬಂದಿರುವ ಎಲ್ಲ ಗೌಡರಿಗೂ, ಬೇರೆ ಬೇರೆ ಪ್ರದೇಶದಿಂದ ಬಂದ ಗಡಿಗೌಡ, ನಾಡಗೌಡ, ಕಟ್ಟುಗೌಡ, ಕೋಲುಕಾರರಿಗೆ ಕಾಣಿಕೆಯನ್ನು ನಾಡಗೌಡನ ಅಪ್ಪಣೆ ಪಡೆದು ನೀಡುತ್ತಾನೆ. ಊಟ ಮುಗಿದ ನಂತರ ತಂದಿರುವ ಪಾತ್ರೆ ಪಗಡೆಗಳನ್ನು ತೊಳೆದು ಮೂಲ ಸ್ಥಾನಕ್ಕೆ ಸೇರಿಸುವ ತನಕ ಅವನೇ ಮುಂದೆ ನಿಂತು ಓಡಾಡುತ್ತಾನೆ. ಕೆಲಸವೆಲ್ಲ ಮುಗಿದ ನಂತರ ಮದುವೆ ಮಾಡಿದ ಮನೆಯವರು ಒಂದು ಹೊಸ ಮೊರದಲ್ಲಿ ಎಲೆ ಅಡಿಕೆ, ಅಕ್ಕಿ, ರಾಗಿ, ಕಾಳು ಕಾರದಪುಡಿ, ಎಣ್ಣೆ, ನಾಕಾಣೆ ದುಡ್ಡು ಹೊಸ ಕರಿಯ ಕಬಳಿಯನ್ನು ಇಟ್ಟು ಕೊಡುತ್ತಾರೆ. ಹೀಗೆ ಕೊಟ್ಟ ದವಸ ಧಾನ್ಯಗಳನ್ನು ತನ್ನ ಜೊತೆ ಸಹಕರಿಸಿದ ಎಲ್ಲರಿಗೂ ಕೊಟ್ಟು ತಾನು ಸ್ವಲ್ಪ ಭಾಗ ಮತ್ತು ಕರಿಯ ಕಂಬಳಿಯನ್ನು ತಾನಿಟ್ಟುಕೊಳ್ಳುತ್ತಾನೆ. ಹಾಗೆಯೇ ನಾಡಗೌಡ ವಿಧಿಸಿದ ಶಿಕ್ಷೆಯನ್ನು ನೀಡುವುದು ಇವನೇ ಆಗಿರುತ್ತಾನೆ. ತಪ್ಪು ಮಾಡಿದವನಿಗೆ ಹುಣಸೆ ಚಬ್ಬೆಯಿಂದ ಹೊಡೆಯುವುದು, ನಗ್ನದ ಮುಳ್ಳು ತುಳಿಸುವುದು ಮುಂತಾದ ಶಿಕ್ಷೆಯನ್ನು ಕೊಡುತ್ತಾನೆ.

ಮದುವೆಯ ಸಂದರ್ಭದಲ್ಲಿ ಇವನಿಗೆ ಹೊಸ ಬಟ್ಟೆ, ಕರಿಕಂಬಳಿ ಅಕ್ಕಿ, ರಾಗಿ, ಕಾರದ ಪುಡಿ, ಎಣ್ಣೆ ಎಲ್ಲವನ್ನು ಮೊರದಲ್ಲಿಟ್ಟು ಕೊಡುತ್ತಾರೆ. ಅದೇ ರೀತಿಯಲ್ಲಿ ತಿಥಿಯ ಸಂದರ್ಭದಲ್ಲಿ ಕುರಿ ಅಥವಾ ಮೇಕೆಯ ಚಪ್ಪೆಯನ್ನು ಮೇಲಿನ ಎಲ್ಲಾ ವಸ್ತುಗಳ ಜೊತೆ ಸೇರಿಸಿಕೊಡುತ್ತಾರೆ. ಇದಿಷ್ಟೇ ಇವನು ಸಮುದಾಯಕ್ಕೆ ಸೇವೆ ಮಾಡುವುದರಿಂದ ಸಿಗುವ ಪ್ರತಿಫಲ. ಆದರೆ ಫಲಾಪೇಕ್ಷೆಯನ್ನು ಬಯಸದ ಈ ಕೋಲುಕಾರ ಸಾಯುವವರೆಗೆ ಸಮುದಾಯಕ್ಕೆ ನಿಷ್ಠೆಯಿಂದ ದುಡಿಯುತ್ತಾನೆ.

ಕುಲದ ಗೌಡ: ಈ ಹುದ್ದೆಯು ಅಷ್ಟೇನು ಪ್ರಾಮುಖ್ಯತೆ ಹೊಂದದಿದ್ದರೂ ಎಲ್ಲಾ ಗೌಡರಿಗೆ ಮುಖ್ಯಸ್ಥನಾಗಿರುತ್ತಾನೆ. ಇವನಲ್ಲಿ ನಾಡಗೌಡರು, ಗಡಿಗೌಡರು ಕಟ್ಟುಗೌಡರು ಮಾಹಿತಿಗಳನ್ನು ಪಡೆದು ಸಮುದಾಯದ ಕಟ್ಟಳೆಗಳನ್ನು ರೂಪಿಸುತ್ತಾರೆ. ನಾಡಗೌಡನಿಂದ ಬಗೆಹರಿಯದ ಸಮಸ್ಯೆಯನ್ನು ಕುಲಗೌಡನ ಮುಂದೆ ಇಡಲಾಗುತ್ತಿತ್ತು. ಇವನಿಂದಲೂ ಬಗೆಹರಿಯದೆ ಹೋದರೆ ಕಟ್ಟೆಮನೆಯ ಕಡೆಗೆ ಹೋಗುತ್ತಾರೆ. ಕುಲಗೌಡನು ಸಮುದಾಯದ ಹಿರಿಯಜ್ಜನಾಗಿರುತ್ತಾನೆ. ಇಡೀ ಸಮುದಾಯದ ಚರಿತ್ರೆ ಅವರು ಬದುಕಿ ಬಾಳಿ ಬಂದ ದಾರಿಯ ಎಲ್ಲ ಮಾಹಿತಿ ಇವನಿಗೆ ಗೊತ್ತಿರುತ್ತದೆ. ತಮ್ಮ ಗ್ರಾಮಗಳಿಗೆ ಗೌಡರನ್ನು (ಮುಖ್ಯಸ್ಥರನ್ನು) ನೇಮಕ ಮಾಡುವುದರಲ್ಲಿ

ಇವನ ಪಾತ್ರ ಹೆಚ್ಚಾಗಿರುತ್ತಿತ್ತು. ಇವನು ಸದಾ ಸಮುದಾಯದ ಆಗು ಹೋಗುಗಳನ್ನು ಅರಿತು ನಾಡಗೌಡನಿಗೆ ಮಾರ್ಗದರ್ಶನ ಮಾಡುತ್ತಿರುತ್ತಾನೆ.

ಗಡಿಗೌಡ : ಪ್ರತಿಯೊಂದು ಗಡಿಗೆ ಒಬ್ಬ ಗಡಿಗೌಡರು ಇರುತ್ತಾರೆ. ಹತ್ತು ಹಳ್ಳಿ ಅಥವಾ ಒಂದು ಪ್ರದೇಶಕ್ಕೆ ಸಂಬಂಧಪಟ್ಟಂತೆ ಒಬ್ಬೊಬ್ಬ ಗಡಿ ಗೌಡನನ್ನು ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಈ ಗಡಿಗೌಡನು ಆ ಗ್ರಾಮದ ಗೌಡಿಕೆ ಮಾಡುತ್ತಿದ್ದವನಾಗಿರುತ್ತಿದ್ದನು. ಇವನು ಎಲ್ಲೆಯ ಮೇಲ್ವಿಚಾರಕ ನಾಗಿ ಒಂದು ಪ್ರದೇಶಕ್ಕೂ, ಮತ್ತೊಂದು ಪ್ರದೇಶಕ್ಕೂ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಾನೆ. ಇವನು ಆಯಾ ಗಡಿಯ ಒಳಗೆ ನಡೆಯುವ ಶಿಕ್ಷೆ ಅಪರಾಧಗಳಿಂದ ತಪ್ಪಿಸಿಕೊಂಡು ಪಲಾಯನ ಮಾಡುವವರನ್ನು ಹಿಡಿದು ನಾಡಗೌಡ, ಕೋಲುಕಾರನಿಗೆ ತಿಳಿಸುವ ಕೆಲಸ ಮಾಡುತ್ತಾನೆ. ಸಮುದಾಯದ ಗಡಿಯಲ್ಲಿ ನುಸುಳುವ ತೊಂದರೆಗಳ ಮಾಹಿತಿ ನೀಡುತ್ತಾನೆ. ಜೊತೆಗೆ ಗಡಿಗಳಲ್ಲಿ ಹಬ್ಬಹರಿದಿನಗಳು ಶುಭ, ಅಶುಭ ಕಾರ್ಯಕ್ರಮದಲ್ಲಿ ಭಾಗವಹಿಸಿ ತನ್ನ ಗಡಿಯಿಂದ ಆಚೆಗೂ ವಿಷಯಗಳನ್ನು ತಲುಪುವಂತೆ ನೋಡಿಕೊಳ್ಳುತ್ತಾನೆ.

ಇರುಳಿಗರ ನ್ಯಾಯಪದ್ಧತಿಯು ಆಧುನಿಕ ನ್ಯಾಯ ಪದ್ಧತಿಯನ್ನು ನಾಚಿಸುವಂತಿದೆ. ಇದೊಂದು ಸುಸಜ್ಜಿತ ನ್ಯಾಯಾಂಗ ವ್ಯವಸ್ಥೆಯಾಗಿದೆ. ಒಬ್ಬೊಬ್ಬನು ತನ್ನ ಕೆಲಸವನ್ನು ದೇವರ ಕೆಲಸವೆಂದು ಮಾಡುತ್ತಾನೆ. ಇವರ ಆಯ್ಕೆಗಳು ಪಾರದರ್ಶಕತೆಯಿಂದ ಕೂಡಿರುತ್ತವೆ. ಕೋಲುಕಾರನು ನಾಡಗೌಡನಿಗೆ ನೀಡುವ ವಿಧೇಯತೆಯು ಅದೇ ರೀತಿಯೇ ನಾಡಗೌಡನು ಕೋಲುಕಾರನಿಗೆ ತೋರುವ ಗೌರವವು ಸರಿಸಮನಾಗಿರುತ್ತವೆ. ಅವರ ಕೆಲಸವು ಅವರಿಗೆ ಶ್ರೇಷ್ಠತೆಯನ್ನು ತೋರಿಸುತ್ತದೆ. ತಮ್ಮ ಜವಾಬ್ದಾರಿಯ ಕೆಲಸವನ್ನು ಭಯಭಕ್ತಿಯಿಂದ ನಡೆಸಿಕೊಂಡು ಹೋಗುತ್ತಾರೆ.

ನ್ಯಾಯ ನಿರ್ಣಯ ಮಾಡುವುದು ಮತ್ತು ಶಿಕ್ಷೆ ಕೊಡುವ ವಿಧಾನ

ಇರುಳಿಗ ಬುಡಕಟ್ಟು ಸಮುದಾಯದಲ್ಲಿ ನ್ಯಾಯ ನಿರ್ಣಯ ಕೆಲಸವು ಸಂಜೆ ಅಥವಾ ರಾತ್ರಿ ಸಮಯದಲ್ಲೇ ನಡೆಯುತ್ತದೆ. ಅಲ್ಲಿ ಇಲ್ಲಿ ಕೆಲಸಕ್ಕೆ ಹೋಗಿದ್ದವರೆಲ್ಲರೂ ಕೋಲುಕಾರನ ಅಪ್ಪಣೆಯಂತೆ ರಾತ್ರಿ ಬಂದು ಸೇರುತ್ತಾರೆ. ಅದಾಗಲೇ ಕೋಲುಕಾರನು ನಾಡಗೌಡ, ಕುಲಗೌಡ, ಕಟ್ಟುಗೌಡ, ಗಡಿಗೌಡರನ್ನು ಕರೆತಂದಿರುತ್ತಾನೆ. ಇವರು ಕುಳಿತುಕೊಳ್ಳುವ ಜಾಗವನ್ನು ಸಗಣಿಯಿಂದ (ಹಸುವಿನ ತೊಪ್ಪೆ) ಸಾರಿಸಿ, ರಂಗೋಲಿ ಹಾಕಿ ಸಿದ್ಧಗೊಳಿಸಿರುತ್ತಾರೆ. ಈ ನ್ಯಾಯ ನಿರ್ಣಯವು ದೇವಸ್ಥಾನದ ಹತ್ತಿರ ಅಥವಾ ಮರದ ಕೆಳಗೆ ನಡೆಯುತ್ತದೆ.

ಒಂದು ಕಡೆ ಕೋಲುಕಾರ ತನ್ನ ಕರಿಯ ಕಂಬಳಿಯನ್ನು ಚೌಕಾಕಾರದಲ್ಲಿ ಮಡಚಿ ಗದ್ದುಗೆ ಮಾಡುತ್ತಾನೆ. ಅದರ ಮೇಲೆ ಒಂದು ಚೊಂಬಿನಲ್ಲಿ ನೀರಿಟ್ಟು ಅದರ ಮೇಲೆ ವಿಭೂತಿ ಉಂಡೆಯನ್ನಿಡುತ್ತಾರೆ. ಕಂಬಳಿಯ ನಾಲ್ಕು ಮೂಲೆಯಲ್ಲೂ ಹಸುವಿನ ಸಗಣಿಯ ಉಂಡೆಗಳನ್ನು

ಮಾಡಿ ಅದಕ್ಕೆ ಹೂ ಮತ್ತು ಅರಿಶಿಣ, ಕುಂಕುಮದಿಂದ ಸಿಂಗರಿಸುತ್ತಾರೆ. ಇದಕ್ಕೆ ವಿಘ್ನೇಶ್ವರ ಎನ್ನುತ್ತಾರೆ. ನಾಡಗೌಡ ಅಥವಾ ಕಟ್ಟುಗೌಡ ಈ ಕರಿಯ ಕಂಬಳಿಯ ಗದ್ದುಗೆಗೆ ಪೂಜೆ ಮಾಡಿ ಬಂದಿದ್ದ ಎಲ್ಲರಿಗೂ ತೀರ್ಥ ಕೊಡುತ್ತಾರೆ. ನಂತರ ಕೋಲುಕಾರ ನ್ಯಾಯ ಸೇರಿರುವ ಉದ್ದೇಶವನ್ನು ಸೇರಿರುವ ಎಲ್ಲರ ಮುಂದೆ ಹೇಳುತ್ತಾನೆ. ಇವನು ಅಥವಾ ಇವಳು ಈ ಅಪರಾಧವನ್ನು ಎಸಗಿದ್ದಾರೆ. ಅದಕ್ಕಾಗಿ ನಾಡಗೌಡರು, ಕಟ್ಟುಗೌಡರುಗಳು ತಪ್ಪು ಒಪ್ಪು ಪರೀಕ್ಷೆ ಮಾಡಿ ನ್ಯಾಯ ತೀರ್ಮಾನ ನೀಡಬೇಕೆಂದು ಕೇಳಿಕೊಳ್ಳುತ್ತಾನೆ.

ನಾಡಗೌಡರು ಅಪರಾಧ ಮಾಡಿರುವವರನ್ನು ಮಾತನಾಡಲು ಬಿಡುತ್ತಾರೆ. ಎರಡು ಕಡೆಯ ವಾದ ವಿವಾದಗಳನ್ನು ಗಮನಿಸಿ ತಪ್ಪಿಗೆ ತಕ್ಕ ಶಿಕ್ಷೆ ನೀಡುತ್ತಾರೆ. ಇದಕ್ಕೆ ತಪ್ಪಿತಸ್ಥ ವಿರೋಧ ವ್ಯಕ್ತಪಡಿಸಿದರೆ ಅವನನ್ನು ಕುಲದಿಂದಲೇ ಹೊರಹಾಕುವ ತೀರ್ಮಾನವನ್ನು ಕೊಡಲಾಗುತ್ತದೆ. ಇಲ್ಲಿಗೆ ಕುಲಪಂಚಾಯಿತಿ ಮುಗಿಯುತ್ತದೆ. ಬಂದಿರುವ ಎಲ್ಲ ಗೌಡರಿಗೂ ಕೋಲುಕಾರ ವೀಳ್ಯ ತಿದ್ದುತ್ತಾನೆ. ಅವರವರ ಹೆಸರನ್ನು ಕರೆದು ವೀಳ್ಯವನ್ನು ನೀಡುತ್ತಾನೆ. ಎಲ್ಲರೂ ವೀಳ್ಯ ತೆಗೆದುಕೊಂಡು ಈಗಾಗಲೇ ಸಿದ್ಧಪಡಿಸಿರುವ ಕುಲದೂಟದ ಕಡೆಗೆ ನಡೆಯುತ್ತಾರೆ. ಯಾವ ಗೌಡನಾದರೂ ಬರಲು ಸಾಧ್ಯವಾಗದಿದ್ದರೆ ಅವನ ಪರವಾಗಿ ಇನ್ನೊಬ್ಬರನ್ನು ಕಳುಹಿಸಿ ಕೊಡಬೇಕು. ಇವನು ಆ ಗೌಡನ ವೀಳ್ಯವನ್ನು ತೆಗೆದುಕೊಳ್ಳುತ್ತಾನೆ. ತಪ್ಪು ಮಾಡಿರುವ ವ್ಯಕ್ತಿಯು ಬಂದಿರುವ ಎಲ್ಲರಿಗೂ ಊಟ ಹಾಕಿಸಬೇಕು. ಇದರ ಎಲ್ಲಾ ಖರ್ಚನ್ನು ಅವನೇ ನೋಡಿಕೊಳ್ಳಬೇಕೆಂಬ ನಿಯಮವಿದೆ.

ತಪ್ಪು ಮಾಡಿದವರಿಗೆ ಇರುಳಿಗರಲ್ಲಿ ನೀಡುವ ಶಿಕ್ಷೆಗಳು

ಮದುವೆಯಾಗಿ ಹೆಣ್ಣಿಗೆ ದ್ರೋಹ ಮಾಡಿದರೆ, ನಿರಂತರವಾಗಿ ಹೆಂಡತಿಗೆ ಕಿರುಕುಳ ನೀಡುತ್ತಿದ್ದರೆ ಅಥವಾ ಮದುವೆ ಮಾಡಿಕೊಂಡು ಪರ ಹೆಣ್ಣಿನ ಸಂಪರ್ಕದಲ್ಲಿದ್ದರೆ ಅಥವಾ ಹಾದರ ಮಾಡಿದರೆ ಅಂಥವರನ್ನು ಕುಲಪಂಚಾಯಿತಿಯಲ್ಲಿ ಚರ್ಚಿಸಿ ಕುಲದಿಂದ ಹೊರ ಹಾಕುವುದು. ಹಾಗೆಯೇ ಒಂದು ಬಿದಿರಿನ ಮಂಕರಿಯ ಒಳಗೆ ಕಲ್ಲು ತುಂಬಿ ಅದನ್ನು ಹೊತ್ತುಕೊಂಡು ನಗ್ನದ ಮುಳ್ಳಿನ ಮೇಲೆ ನಡೆಯುವಂತಹ ಶಿಕ್ಷೆಯನ್ನು ನೀಡುತ್ತಾರೆ. ಇಲ್ಲವಾದರೆ ಕೋಲುಕಾರ ಹುಣಸೆ ಚಬ್ಬೆಯಿಂದ ತಪ್ಪು ಮಾಡಿರುವ ವ್ಯಕ್ತಿಗೆ ಹೊಡೆಯುಂತಹ ಶಿಕ್ಷೆಗಳನ್ನು ನೀಡುತ್ತಾರೆ. ಇದರ ಜೊತೆಗೆ ನೂರು, ಹತ್ತು, ಐದು ರೂಪಾಯಿಗಳ ದಂಡವನ್ನು ವಿಧಿಸಲಾಗುತ್ತದೆ.

ತಪ್ಪು ಮಾಡಿರುವ ವ್ಯಕ್ತಿಯನ್ನು ಮತ್ತೆ ಕುಲಕ್ಕೆ ಸೇರಿಸಿಕೊಳ್ಳುವ ಪ್ರಸಂಗ ಬಂದರೆ ಕೋಲುಕಾರ, ನಾಡಗೌಡನ ಒಪ್ಪಿಗೆ ಪಡೆದು ಚಿನ್ನದ ಅಥವಾ ಬೆಳ್ಳಿಯ ಕಡ್ಡಿಯನ್ನು ದೀಪದಿಂದ ಕೆಂಪಾಗಿ ಕಾಯಿಸಿ ನಾಲಿಗೆಯ ಮೇಲೆ ಬರೆ ಎಳೆಯುತ್ತಾನೆ. ನಂತರ ಹಸುವಿನ ಗಂಜಲ ಮತ್ತು ಸೀಗೆಕಾಯಿ ಪುಡಿಯನ್ನು ಕಲಸಿ ತಪ್ಪು ಮಾಡಿದ ವ್ಯಕ್ತಿಯ ಬಾಯಿಗೆ ಐದು ಬಾರಿ

ಹಾಕಿದರೆ ಕುಲಚಾರವಾದಂತೆ ಎಂದು ತೀರ್ಮಾನಿಸುತ್ತಾರೆ. ನಂತರ ಕೋಲುಕಾರನು ಎಲ್ಲಾ ಗಡಿಗೌಡರಿಗೆ ಕುಲಾಚಾರಕ್ಕೆ ಒಳಪಡಿಸಲಾಗಿದೆ. ಇವನನ್ನು ಇನ್ನು ಮುಂದೆ ಸಮುದಾಯದ ಎಲ್ಲಾ ಶುಭ ಸಮಾರಂಭಗಳಿಗೂ ಸೇರಿಸಿಕೊಳ್ಳಬಹುದು. ಮನೆಯ ಒಳಗೆ ಕರೆದು ಊಟ ಕೊಡಬಹುದು ಮತ್ತು ಅವರ ಮನೆಯಲ್ಲಿ ಕೊಡುಕೊಳ್ಳುವ ಸಂಬಂಧವನ್ನು ಮಾಡಿಕೊಳ್ಳ ಬಹುದೆಂದು ಎಲ್ಲ ಗಡಿಗಳಿಗೂ ತಿಳಿಸಿಬಿಡುತ್ತಾನೆ. ಕುಲಾಚಾರಕ್ಕೆ ಒಳಪಡದೆ ಹೋದ ಪಕ್ಷದಲ್ಲಿ ಮೇಲಿನ ಎಲ್ಲ ಸಂದರ್ಭದಲ್ಲಿ ಅವನನ್ನು ನಿಷೇಧಿಸುವಂತೆ ತಿಳಿಸಿಬಿಡುತ್ತಾನೆ.

ಇರುಳಿಗರಲ್ಲಿ ಕೆಲವು ನಡವಳಿಕೆಗಳನ್ನು ನಿಂದಾರ್ಹ ಅಪರಾಧಗಳೆಂದು ನಂಬಿಕೊಂಡಿದ್ದಾರೆ. ಈ ನಡವಳಿಕೆಗಳು ಕುಲಕ್ಕೆ ತೊಂದರೆಯ ಜೊತೆಗೆ ಬೇರೆಯವರಿಗೂ ತೊಂದರೆಯುಂಟು ಮಾಡುತ್ತವೆ ಎನ್ನುತ್ತಾರೆ. ಇಂತಹ ನಡವಳಿಕೆಯನ್ನು ತಪ್ಪು ಎಂದು ನಿರ್ಧರಿಸಿ ಶಿಕ್ಷೆಗೆ ಗುರಿಪಡಿಸುತ್ತಿದ್ದರು. ಅಂಥವುಗಳಲ್ಲಿ ಪ್ರಮುಖವಾದವುಗಳೆಂದರೆ, ಚಪ್ಪಲಿ ತೋರಿಸುವುದು ಅದರಲ್ಲಿ ಹೊಡೆಯುವುದು, ಮಾತಿಗೆ ಕುಳಿತಿದ್ದ ಗುಂಪಿನಿಂದ ಏಕಾಏಕಿ ಮೇಲೇಳುವುದು, ನಾಡಗೌಡ, ಕಟ್ಟಗೌಡ, ಕೋಲುಕಾರನನ್ನು ನಿಂದಿಸುವುದು, ಕುಲವನ್ನು ನಿಂದಿಸುವುದು, ಜಾತಿಯನ್ನು ಹೀಯಾಳಿಸಿ ಮಾತನಾಡುವುದು, ಪಂಕ್ತಿಯಲ್ಲಿ ಊಟಕ್ಕೆ ಕುಳಿತು ಕೋಲುಕಾರನ ಅಪ್ಪಣೆ ಇಲ್ಲದೆ ಊಟ ಮಾಡುವುದು, ಅವನ ಅಪ್ಪಣೆಯಿಲ್ಲದೆ ಮೇಲೇಳುವುದ, ಅನ್ಯ ಜಾತಿಯೊಡನೆ ಸಂಪರ್ಕ ಬೆಳೆಸುವುದು, ಹೊಟೆಲ್‌ನಲ್ಲಿ ಊಟ ಮಾಡುವುದು, ಸಾರಾಯಿ ಕುಡಿಯುವುದು, ಮಾಂಸ ತಿಂದು ದೇವಸ್ಥಾನಕ್ಕೆ ಹೋಗುವುದು, ಕಿರಿಯರು, ಹಿರಿಯರು ಎಂದು ತಿಳಿಯಿದೆ ಮಾತನಾಡುವುದು ಇರುಳಿಗರಲ್ಲಿ ಶಿಕ್ಷಾರ್ಹ ಅಪರಾಧಗಳಾಗುತ್ತವೆ. ಮಕ್ಕಳಿಗೆ ಇವುಗಳಲ್ಲಿ ಕೆಲವೊಂದನ್ನು ರಿಯಾಯಿತಿ ನೀಡಲಾಗುತ್ತದೆ. ಯಾರಿಗಾದರೂ ಬಯ್ಯಬೇಕಾದರೆ ಜನರ ಮಧ್ಯೆ ಬಯ್ಯುವಂತಿಲ್ಲ ಅವನು ಏನೇ ತಪ್ಪು ಮಾಡಿದರೂ ಪಕ್ಕಕ್ಕೆ ಕರೆದು ಬಯ್ಯಬೇಕು ಇಲ್ಲವಾದರೆ ಆ ತಪ್ಪು ಬೈದವನ ಮೇಲೆಯೇ ಬರುತ್ತದೆ. ತಂದೆ ಮಗನಿಗೆ ಬಯ್ಯಬೇಕಾದರೂ ಕೂಡ ತುಂಬಿದ ಜನರ ಮಧ್ಯೆ ಬಯ್ಯುವಂತಿಲ್ಲ ಇವೆಲ್ಲವೂಗಳನ್ನು ಇರುಳಿಗರು ಶಿಕ್ಷಾರ್ಹ ಅಪರಾಧಗಳು ಎಂದು ಪರಿಗಣಿಸುತ್ತಾರೆ.

ಇವರ ನ್ಯಾಯ ವ್ಯವಸ್ಥೆಯನ್ನು ನೋಡಿದಾಗ ಒಬ್ಬ ಮನುಷ್ಯ ತನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ಬಾರದಂತೆ ಅಥವಾ ಇನ್ನೊಬ್ಬರ ಸ್ವಾತಂತ್ರ್ಯಕ್ಕೂ ಧಕ್ಕೆ ಮಾಡದಂತೆ ಬದುಕುವ ನೀತಿ ನಿಯಮಗಳೇ ಆಗಿವೆ. ಇಂತಹ ನಂಬಿಕೆ ನಡವಳಿಕೆಗಳನ್ನು ಪ್ರಸ್ತುತ ಸಮಾಜ ಅಳವಡಿಸಿಕೊಳ್ಳ ಬೇಕಾದ ಅನಿವಾರ್ಯತೆ ಇದೆ. ಇವರು ಅಪರಾಧ ಎಂದು ಪರಿಗಣಿಸುವ ಸಂದರ್ಭದಲ್ಲಿ ಮಾನವೀಯ ಮೌಲ್ಯಗಳು ಪ್ರಮುಖ ಪಾತ್ರವಹಿಸುತ್ತವೆ. ಪಂಕ್ತಿಯಲ್ಲಿ ಊಟಕ್ಕೆ ಕುಳಿತಾಗ ಕೆಲವರು ಸಂಕೋಚದ ಸ್ವಭಾವದವರಾಗಿದ್ದು ನಿಧಾನವಾಗಿ ಊಟ ಮಾಡುವವರಿರುತ್ತಾರೆ. ಪಂಕ್ತಿಯಲ್ಲಿ ಕುಳಿತು ಬೇಗೆ ಬೇಗ ಊಟ ಮಾಡಿ ಎದ್ದು ಬಿಟ್ಟರೆ ಈ ಸಂಕೋಚದ ವ್ಯಕ್ತಿಗಳು

ಸರಿಯಾಗಿ ಊಟ ಮಾಡದೆ ಎದ್ದುಬಿಡುತ್ತಾರೆ. ಆದ್ದರಿಂದ ಪಂಕ್ತಿಯಿಂದ ಮೇಲೇಳಲು ಕೋಲುಕಾರನ ಅಪ್ಪಣೆಯಾಗಬೇಕು ಎಂಬ ನಿಯಮ ಮಾಡಿಕೊಂಡಿರುವುದಾಗಿ ಹೇಳುತ್ತಾರೆ. ಹಾಗೆಯೇ ಗುಂಪಿನಲ್ಲಿ ಬೈಯ್ಯುವುದರಿಂದ ಬೈಯಿಸಿಕೊಂಡವರಿಗೆ ಅವಮಾನವಾಗಿ ಅಪಾರ ನೋವನ್ನು ಅನುಭವಿಸುತ್ತಾರೆಂದು ಗುಂಪಿನಲ್ಲಿ ಬೈಯ್ಯಬಾರದೆಂದು ಹೇಳುತ್ತಾರೆ.

ಚಪ್ಪಲಿಯಿಂದ ಹೊಡೆಯುವುದನ್ನು ದೊಡ್ಡ ಅಪರಾಧ ಎಂದು ಭಾವಿಸಿ 'ಚಪ್ಪಲಿಯಿಂದ ಹೊಡೆದರೆ ಕುಲಕೆಟ್ಟು ಹೋಗುತ್ತದೆ ಎಂದು ನಂಬಿಕೊಂಡಿದ್ದಾರೆ' ಆದ್ದರಿಂದ ಚಪ್ಪಲಿ ತೋರಿಸುವುದನ್ನು ಕೂಡ ಅಷ್ಟೇ ಪ್ರಮಾಣದ ಅಪರಾಧ ಎಂದು ಭಾವಿಸುತ್ತಾರೆ. ಹಾಗೊಮ್ಮೆ ಚಪ್ಪಲಿಯಿಂದ ಹೊಡೆದುಬಿಟ್ಟರೆ ಆ ಪ್ರಕರಣವೂ ಕಟ್ಟೆ ಮನೆಯ ಹೊರಗೂ ಹೋಗಿ ಹೊಡೆದ ವ್ಯಕ್ತಿ ಎಲ್ಲರಿಗೂ ಊಟ ಹಾಕಿಸಿ, ಹೊಡೆಸಿಕೊಂಡವನಿಗೆ ಕುಲಚಾರ ಮಾಡಿಸಿಕೊಡಬೇಕು. ಇದಕ್ಕೆ ತಗಲುವ ಎಲ್ಲಾ ವೆಚ್ಚವನ್ನು ಅವನೇ ಭರಿಸಬೇಕಾಗುತ್ತದೆ. ಬಂದ ಜನರಿಗೆ ಮತ್ತು ಯಜಮಾನರುಗಳಿಗೆ ಕುರಿ ಕೊಯ್ದು ಊಟ ಹಾಕಲೇಬೇಕು. ಇಲ್ಲವಾದರೆ ಚಪ್ಪಲಿಯಿಂದ ಹೊಡೆದ ವ್ಯಕ್ತಿಯನ್ನು ಕುಲದಿಂದ ಹೊರಗೆ ಹಾಕಿ ದಂಡ ಕಟ್ಟಿಸುತ್ತಾರೆ.

ಒಟ್ಟಾರೆಯಾಗಿ ಇರುಳಿಗರ ನ್ಯಾಯ ತೀರ್ಮಾನವನ್ನು ಗಮನಿಸಿದಾಗ ಒಂದು ಸುಂದರ ಸಮಾಜ ಸಂತೋಷದಿಂದ ಬದುಕಲು ಬೇಕಾದ ಎಲ್ಲ ರೀತಿಯ ಕಾನೂನು ಕಟ್ಟಳೆಗಳು ಈ ಸಮುದಾಯ ತನ್ನ ಕಟ್ಟಳೆಗಳಾಗಿ ಮಾಡಿಕೊಂಡಿದೆ. ಪ್ರಮುಖವಾಗಿ ಇವರ ತೀರ್ಮಾನಗಳೆಲ್ಲವೂ ಜೀವನ ಮುಂದುವರಿಸಲು ಅನುಗುಣವಾಗಿರುತ್ತವೆಯೇ ಹೊರತು ಮುರಿದು ಹೋಗುವಂತಿರುವುದಿಲ್ಲ. ಮಾನವನ ಜೀವನವು ಪ್ರಕೃತಿಯ ನಿಯಮದಂತೆ ನಡೆಯಬೇಕು. ಈ ಭೂಮಿಯ ಮೇಲೆ ಬಡವ ಶ್ರೀಮಂತ, ಶಕ್ತಿವಂತ, ದುರ್ಬಲ, ಮಹಿಳೆ ಪುರುಷ, ಕಪ್ಪು ಬಿಳುಪು ಎಂಬ ಯಾವ ಭೇದಭಾವಗಳು ಇಲ್ಲದೆ ಇರುವ ಸಮಾಜ ನಿರ್ಮಾಣದ ಆಶಯಗಳೊಂದಿಗೆ ಇವರ ನ್ಯಾಯಾಂಗ ವ್ಯವಸ್ಥೆ ರೂಪುಗೊಂಡಿದೆ ಎಂದರೆ ತಪ್ಪಾಗಲಾರದು. ಒಂದು ಸಂಸಾರದಲ್ಲಿ ಮಹಿಳೆ ಪುರುಷರ ಸಮಾನ ಸಹಭಾಗಿತ್ವವನ್ನು ಕುಲಪಂಚಾಯತಿಯಲ್ಲಿ ಒಗಟು, ಗಾದೆ ಮತ್ತು ಜೀವನದ ಅನುಭವಗಳ ಮೂಲಕ ವಿವರಿಸುತ್ತಾರೆ. ಆದರೆ ಇಂದಿನ ಮಹಿಳಾ ಚಿಂತನೆಗಳು ಗಂಡ ಹೆಂಡತಿಯ ನಡುವಿನ ಸಂಬಂಧವನ್ನು ಅರ್ಥ ಮಾಡಿಕೊಳ್ಳದೆ ತಾರತಮ್ಯದ ಹಿನ್ನೆಲೆಯಲ್ಲಿಯೇ ನೋಡುತ್ತಿರುವುದು ವಿಷಾದನೀಯ.

ಆದಿವಾಸಿಗಳಲ್ಲಿ ಶಕ್ತಿ ಇದ್ದವನನ್ನು ನಾಯಕನನ್ನಾಗಿ ಮಾಡಿ ಅವನಿಂದ ಸಮುದಾಯ ರಕ್ಷಣೆಯ ಕೆಲಸವನ್ನು ಮಾಡಿಸಿಕೊಂಡು, ಇಡೀ ಸಮುದಾಯದವರು ಅವನಿಗೆ ಗೌರವಯುತವಾಗಿಯೇ ನಡೆದುಕೊಂಡು ಪ್ರಕೃತಿಯ ನಿಯಮದಂತೆ ತಮ್ಮ ತಮ್ಮದೇ ನ್ಯಾಯವ್ಯವಸ್ಥೆಗಳನ್ನು ನಿರ್ಮಿಸಿಕೊಂಡು ಬದುಕುತ್ತಿದ್ದಾರೆ.

ಕಟ್ಟೆಮನೆಗಳು

ಕಟ್ಟೆಮನೆ ಎಂಬುದು ಬುಡಕಟ್ಟುಗಳಲ್ಲಿ ಕಂಡುಬರುವ ವಿಶೇಷ ನ್ಯಾಯಾಂಗ ವ್ಯವಸ್ಥೆ. ಇದು ಇವತ್ತಿನ ಸರ್ವೋಚ್ಚ ನ್ಯಾಯಾಲಯದ ರೀತಿಯಲ್ಲಿ ಕಂಡುಬರುತ್ತಿತ್ತು. ಇದು ಎಲ್ಲಾ ಬುಡಕಟ್ಟುಗಳಲ್ಲೂ ಕಂಡುಬರುವ ಹಾಗೆಯೇ ಇರುಳಿಗರಲ್ಲೂ ಕಂಡುಬರುತ್ತದೆ. 'ಇರುಳಿಗರಲ್ಲಿ ಬಗೆಹರಿಯದ ಸಮಸ್ಯೆಯನ್ನು ಕಟ್ಟಮನೆಗೆ ತರುತ್ತಿದ್ದರು. ಕೋಲುಕಾರ ಕಟ್ಟಮನೆಯ ಯಜಮಾನನಿಗೆ ಒಂದು ವಾರದ ಮುಂಚೆಯೇ ಪ್ರಕರಣಕ್ಕೆ ಕಾರಣವಾದ ಅಂಶಗಳು, ಇದಕ್ಕೆ ಎರಡು ಕಡೆಯ ವಾದ-ವಿವಾದಗಳನ್ನು ತಿಳಿಸುತ್ತಿದ್ದನು. ಇದಕ್ಕೆ ಕಟ್ಟೆಮನೆ ಇವರ ಸಮಸ್ಯೆಯನ್ನು ಆಲಿಸಿ ಒಂದು ದಿನ ಗೊತ್ತುಮಾಡಿಕೊಂಡು ನಾಡಗೌಡ, ಕಟ್ಟುಗೌಡ, ಗಡಿಗೌಡರ ಜೊತೆಯಲ್ಲಿ ತಪ್ಪು ಮಾಡಿದವರು ಅಥವಾ ಸಮಸ್ಯೆ ಇರುವ ಎರಡು ಗಂಪಿನ ಕಡೆಯವರನ್ನು ಕರೆದುಕೊಂಡು ಬರುವಂತೆ ಕೋಲುಕಾರನಿಗೆ ತಿಳಿಸುತ್ತಿದ್ದನು.

ಈ ಕಟ್ಟೆಮನೆಯ ನ್ಯಾಯ ನಿರ್ಣಾಯಕರು ಒಕ್ಕಲಿಗ ಮತ್ತು ಲಿಂಗಾಯಿತರಾಗುತ್ತಿದ್ದರು. ತಪ್ಪಿತಸ್ಥರಿಂದ ಕಾಳುಕಡ್ಡಿ, ಹಣ ವಸೂಲಿ ಮಾಡುತ್ತಿದ್ದರು. ಕಟ್ಟೆಮನೆಗೆ ಬಂದ ನ್ಯಾಯವು ಅಂತಿಮವಾಗಿದ್ದು ಇವರ ಮಾತನ್ನು ಯಾರೂ ಮೀರುತ್ತಿರಲಿಲ್ಲ. ಅವರು ಹೇಳಿದ್ದೇ ತೀರ್ಪಾಗಿತ್ತು. ಅದನ್ನು ಪ್ರಶ್ನೆ ಮಾಡುವಂತಿರಲಿಲ್ಲ. ಕಟ್ಟೆಮನೆಯ ನ್ಯಾಯ ಎಂದರೆ ಇರುಳಿಗರು ಹೆದರುತ್ತಿದ್ದರು.

ಕಟ್ಟೆಮನೆಯ ಯಜಮಾನರು ನ್ಯಾಯತೀರ್ಮಾನಕ್ಕೆಂದು ಬಂದಾಗ ಆ ನ್ಯಾಯಕ್ಕೆ ಸೇರಿದವರಿಗೆ ಕಾಳೆಸರು, ಅನ್ನ, ಪಾಯಸ ಅಥವಾ ಮರಿ ಕಡಿದು ಮಾಂಸದ ಊಟ ಹಾಕಿಸಬೇಕಿತ್ತು. ಕಟ್ಟೆಮನೆಯ ಯಜಮಾನರಿಗೆ ಹೆದರಿ "ವಿಭೂತಿ ಇಕ್‌ಬುಡ್ರಿ ನೀವು ಕೇಳಿದಷ್ಟು ದಂಡ ಕೊಡ್ತಿವಿ, ನಮ್ಮನ್ ಕುಲಕ್ ಸೇರಿಸ್ ಬುಡ್ರಿ" ಎಂದು ಅಂಗಲಾಚುತ್ತಿದ್ದರಂತೆ; ಗುರುಗಳ ಎದುರಿಗೆ ತಪ್ಪನ್ನು ಒಪ್ಪಿಕೊಳ್ಳಲೇಬೇಕು. ಆಗ ಗುರುಗಳು ರೆಕಾರ್ಡ್ ಮಾಡಿಕೊಳ್ಳುತ್ತಿದ್ದರಂತೆ ಇವನು ಇಂಥ ತಪ್ಪು ಮಾಡಿ ಕುಲಗೆಟ್ಟು ಹೋಗಿದ್ದು, ಇವತ್ತು ಕುಲಸ್ತ್ರುಗೋಳು, ಕಟ್ಟೆಮನೆ ಯಜಮಾನ್ರು ಸೇರಿ ವಿಭೂತಿ ಇಕ್ಕಿ ಮತ್ತೆ ಕುಲಕ್ಕೆ ಸೇರಿಸಿಕೊಂಡಿದ್ದೇವೆ ಎಂದು ಹೇಳುತ್ತಿದ್ದರು. ಒಂದು ಮದುವೆಯಾದರೆ ಕಟ್ಟೆಮನೆಗೆ ಹನ್ನೆರಡಾಣೆ ಅಥವಾ ಎಪ್ಪತ್ತೈದು ಪೈಸೆ ಕಾಣಿಕೆ ನೀಡುತ್ತಿದ್ದರಂತೆ. ಇಂದು ಐದು ರೂಪಾಯಿಗಳಾಗಿವೆ.[೧೫]

ಕನಕಪುರ ತಾಲ್ಲೂಕಿನ ಇರುಳಿಗರಿಗೆಲ್ಲ ಅಚ್ಚಲು ಕಟ್ಟೆಮನೆಯಾಗಿತ್ತು; ಇಂದಿಗೂ ಈ ಮನೆಯಿದ್ದು ಆದರೆ ಹಿಂದಿನ ಕಟ್ಟೆಮನೆಯ ಯಾವ ಕುರುಹುಗಳೂ ಕಾಣದಂತಾಗಿವೆ. ಕಟ್ಟೆಮನೆಯ ಯಜಮಾನರ ಮಕ್ಕಳು ಊರು ಬಿಟ್ಟು ಬೆಂಗಳೂರಿನಲ್ಲಿ ನೆಲೆಸಿದ್ದು ಹಿಂದಿನ ವಿಷಯಗಳ ಬಗ್ಗೆ ನಮಗೆ ತಿಳಿದಿಲ್ಲ ಎಂಬ ಉತ್ತರ ನೀಡುತ್ತಾರೆ.

ಮಾಗಡಿ, ಚನ್ನಪಟ್ಟಣ ಮತ್ತು ರಾಮನಗರಕ್ಕೆ ಮಾಗಡಿ ಕಟ್ಟಮನೆಯಾಗಿದ್ದವು. ಕಟ್ಟೆಮನೆಗಳಲ್ಲಿ ನಿರಂತರವಾಗಿ ನ್ಯಾಯ ತೀರ್ಮಾನ ನಡೆಯುತ್ತಿದ್ದವು. ಇರುಳಿಗರು ವಾಸಿಸುವ ಪ್ರತಿಯೊಂದು ಭಾಗದಲ್ಲೂ ಒಂದೊಂದು ಕಟ್ಟಮನೆಗಳನ್ನು ಹೊಂದಿರುವುದನ್ನು ಕಾಣಬಹುದು. ಈ ಕಟ್ಟೆಮನೆಯನ್ನು ಗಮನಿಸಿದಾಗ ಈ ಸಮುದಾಯ ಪ್ರಾಚೀನ ಕಾಲದಿಂದಲೂ ತನ್ನದೇ ಆದ ರೀತಿ ರಿವಾಜುಗಳ ಮೂಲಕ ಬದುಕಿ ಬಂದಿರುವುದು ತಿಳಿಯುತ್ತದೆ.

ಇಡೀ ಸಮುದಾಯದ ನ್ಯಾಯ ವ್ಯವಸ್ಥೆಯು ಒಂದು ಪ್ರಬುದ್ಧ ನ್ಯಾಯಾಂಗಕ್ಕೆ ಯಾವುದೇ ರೀತಿಯಲ್ಲೂ ಕೊರತೆಯಿಲ್ಲದಂತೆ ಕಂಡುಬರುತ್ತದೆ. 'ಕೋಲುಕಾರನ ಆಯ್ಕೆಯಿಂದ ನಾಡಗೌಡನ ಆಯ್ಕೆಯವರೆಗೂ ಇರುಳಿಗರಲ್ಲಿರುವ ಕಟ್ಟಿಮನೆಯನ್ನು ಗಮನಿಸಿದಾಗ ಚೋಳ, ಪಲ್ಲವ, ಚೇರ ಸಾಮ್ರಾಜ್ಯಗಳು ತಮ್ಮ ಆಳ್ವಿಕೆಯ ಸಂದರ್ಭದಲ್ಲಿ ಅನುಸರಿಸಿಕೊಂಡು ಬರುತ್ತಿದ್ದ ನ್ಯಾಯಾಂಗದ ವ್ಯವಸ್ಥೆಯನ್ನು ಮೀರಿಸುವಂತಿವೆ. ಅಂದಮಾತ್ರಕ್ಕೆ ಇರುಳಿಗರು ಜೋಳ ಚೋರರಾಗಿದ್ದರೆ ಎಂದು ನನ್ನ ಅರ್ಥ ಅಲ್ಲ, ಈ ಸಮುದಾಯ ಭಾರತಕ್ಕೆ ವಲಸೆ ಬಂದ ಮೊದಲ ಮಾನವ ತಳಿಯಾದ ಹೋಮೋ ಸೆಫಿಯನ್, ಸೆಫಿಯನ ವರ್ಗಕ್ಕೆ ಸೇರಿದ ಜನರಾಗಿದ್ದಾರೆ. ಭಾರತದ ಮೂಲನಿವಾಸಿಗಳಲ್ಲಿ ಇವರು ಕೂಡ ಒಬ್ಬರೆಂದರೆ ತಪ್ಪಾಗಲಾರದು. ಸ್ಪೆನ್ಸರ್ ವೆಲ್ಸ್ ಎಂಬ ವಂಶವಾಹಿನಿ ತಜ್ಞರೂ ಕೂಡ ಇರುಳ ಬುಡಕಟ್ಟು ಸಮುದಾಯದವರು ಭಾರತಕ್ಕೆ ಮೊದಲು ಕಾಲಿಟ್ಟ ಮಾನವ ಸಂತತಿ ಎಂದು ಹೇಳುತ್ತಾನೆ.[೧೬] ಇರುಳಿಗರು ತಮ್ಮ ಎಲ್ಲಾ ಜೀವನ ನಿರ್ವಹಣೆಯು ಭಾರತದ ಮೂಲ ಪರಂಪರೆಯನ್ನೆ ಬಿಂಬಿಸುತ್ತಿರುತ್ತವೆ.

ಕೊನೆ ಟಿಪ್ಪಣಿಗಳು

೧. ಶಂಕರನಾರಾಯಣ ರಾವ್ ತಿ.ನಂ., ೧೯೯೨, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪು.೧೭೫

೨. ಅದೇ, ಪು.೧೭೬

೩. ಅದೇ, ಪು.೧೭೪

೪. ಭೈರೇಗೌಡ ಎಂ., ೨೦೦೦, ಇರುಳಿಗರ ಜಾನಪದ ಅಧ್ಯಯನ, ಪು.೨೫೫

೫. ಕೆಂಪಮ್ಮ, ೭೨, ಕೋಣನದೊಡ್ಡಿ(ಹೊಸಕೋಟೆ), ಕನಕಪುರ ತಾಲೂಕು, ರಾಮನಗರ ಜಿಲ್ಲೆ, ೨೫-೭-೨೦೧೭

೬. ತಾಪಿಧರ್ಮರಾವ್(ಮೂಲ), ರವಿಬೆಳಗೆರೆ(ಅನು), ೧೯೮೩, ವಿವಾಹ ಹುಟ್ಟು ಮತ್ತು ಪೂರ್ವೋತ್ತರ, ಪು.೪೧

೭. ರಾಮಸ್ವಾಮಿ, ೬೭, ಕೂತಗಾನಹಳ್ಳಿ, ಕನಕಪುರ ತಾಲೂಕು, ರಾಮನಗರ ಜಿಲ್ಲೆ, ೧೫-೧೨-೨೦೧೬

೮. ರೇಣುಕಮ್ಮ, ೪೮, ಕೂತಗಾನಹಳ್ಳಿ, ಕನಕಪುರ ತಾಲೂಕು, ರಾಮನಗರ ಜಿಲ್ಲೆ, ೧೫-೧೨-೨೦೧೬

೯. ಚಿಕ್ಕೊಳಮ್ಮ, ೬೪, ಇರುಳಿಗರ ಕಾಲೋನಿ, ಕನಕಪುರ ತಾಲೂಕು, ರಾಮನಗರ ಜಿಲ್ಲೆ, ೧೫-೧೨-೨೦೧೬

೧೦. ಭೈರೇಗೌಡ ಎಂ., ೨೦೦೦, ಪೂರ್ವೋಕ್ತ, ಪು.೧೮೭

೧೧. ವೆಂಕಟರಮಣ, ೪೮, ಇರುಳಿಗರ ಕಾಲೋನಿ, ಮಾಗಡಿ ತಾಲೂಕು, ರಾಮನಗರ ಜಿಲ್ಲೆ, ೨೦-೪-೨೦೧೬

೧೨. ಅನುಪಮಾ ಪ್ರಿಯದರ್ಶಿನಿ, ೨೦೧೩, ಗೌಳಿಗರು: ಒಂದು ಅಧ್ಯಯನ, ಪು.೧೭೯

೧೩. ನಂಜುಂಡಯ್ಯ ಎಚ್.ವಿ., ಅನಂತಕೃಷ್ಣ ಅಯ್ಯರ್ ಎಲ್.ಕೆ., ೧೯೩೦, Mysore Tribes and Caste, Vol.3 ಪು.೩೨೮

೧೪. ಹೊಲಸಾಲಯ್ಯ, ೫೩, ಇರುಳಿಗರ ಕಾಲೋನಿ, ಮಾಗಡಿ ತಾಲೂಕು, ರಾಮನಗರ ಜಿಲ್ಲೆ, ೨೬-೬-೨೦೧೫

೧೫. ಭೈರೇಗೌಡ ಎಂ., ೨೦೦೦, ಪೂರ್ವೋಕ್ತ, ಪು.೭೨

೧೬. ಅಂತಾರ್ಜಾಲ ಸಂಗ್ರಹಿಸಿದ ಮಾಹಿತಿ

ಅಧ್ಯಾಯ: ಐದು

ಇರುಳಿಗರ ನಂಬಿಕೆ ಮತ್ತು ಆಚರಣೆಗಳು

೫.೧. ಆಹಾರ ಪದ್ಧತಿ

೫.೨. ವೇಷಭೂಷಣ

೫.೩. ಹಬ್ಬ ಹರಿದಿನಗಳು

೫.೪. ವೈದ್ಯಕೀಯ ಪದ್ಧತಿ

ಅಧ್ಯಾಯ: ಐದು

ಇರುಳಿಗರ ನಂಬಿಕೆ ಮತ್ತು ಆಚರಣೆಗಳು

ಬುಡಕಟ್ಟುಗಳ ಮೇಲೆ ವೈದಿಕ ಮತ್ತು ಅವೈದಿಕ ಜನರ ದಾಳಿಯ ನಂತರ ವರ್ಗ ಮತ್ತು ಜಾತಿ ವ್ಯವಸ್ಥೆ ಆರಂಭವಾಯಿತು. ಇದರಿಂದ ಬುಡಕಟ್ಟುಗಳ ಮೂಲ ಸ್ವರೂಪದಲ್ಲಿ ಬದಲಾವಣೆ ಕಾಣಿಸಿಕೊಂಡಿತು. ಅಂದರೆ ಬುಡಕಟ್ಟುಗಳ ಮೇಲೆ ಉಂಟಾದ ಆಂತರಿಕ ಮತ್ತು ಬಾಹ್ಯ ಒತ್ತಡಗಳಿಂದ ಚಾರಿತ್ರಿಕ ಚಲನೆಗೆ ಒಳಗಾಗುವಂತಾಯಿತು. ಅಷ್ಟು ಸುಲಭವಾಗಿ ಹೊರಗಿನಿಂದ ಬಂದ ಪ್ರಭಾವಗಳನ್ನು ಒಪ್ಪಿಕೊಳ್ಳದ ಬುಡಕಟ್ಟುಗಳು ಅವುಗಳನ್ನು ಸದಾ ಅನುಮಾನ ಮತ್ತು ತಿರಸ್ಕಾರದಿಂದಲೇ ನೋಡಿ ತಮ್ಮ ಸಂಸ್ಕೃತಿ ಮತ್ತು ಸ್ವಭಾವದ ಅನನ್ಯತೆಯನ್ನು ಉಳಿಸಿಕೊಳ್ಳಲು ನಿರಂತರವಾಗಿ ಹೋರಾಡುತ್ತಲೇ ಇವೆ. ಆದರೆ ಈ ಒತ್ತಡಗಳು ದಿನದಿಂದ ದಿನಕ್ಕೆ ಹೆಚ್ಚಾದ್ದರಿಂದ ಅನಿವಾರ್ಯವಾಗಿ ತಮ್ಮನ್ನು ತಾವೇ ಒಡ್ಡಿಕೊಳ್ಳುವ ವಾತಾವರಣ ನಿರ್ಮಾಣವಾಗಿದೆ.

ಬುಡಕಟ್ಟುಗಳ ಪ್ರತಿದಿನದ ಬದುಕಿನಲ್ಲಿ ಅಳವಡಿಸಿಕೊಂಡಿರುವ ಕ್ರಿಯೆಗಳು ಮತ್ತು ಆಚರಣೆಗಳು ಸಂಪ್ರದಾಯದ ರೂಪದಲ್ಲಿ ಮುಂದುವರಿಯುತ್ತ ಬಂದಿವೆ. ಶೋಷಕ ಮೇಲ್ವರ್ಗದ ಸೈದ್ಧಾಂತಿಕ ಅಸ್ತ್ರವಾದ ಜಾತಿ ಮತ್ತು ಧರ್ಮ ಬುಡಕಟ್ಟುಗಳ ನಂಬಿಕೆ, ಆಚರಣೆಗಳನ್ನು ವಿಚಲಿತಗೊಳಿಸುತ್ತ ಬಂದಿವೆ. ಏಕೆಂದರೆ ಈ ಧರ್ಮದ ಅಸ್ತ್ರದಲ್ಲಿ ಆಧ್ಯಾತ್ಮಿಕತೆ, ಪರಲೋಕ, ಪುನರ್ಜನ್ಮ, ಪಾಪ, ಪುಣ್ಯ, ಪರಮಾತ್ಮ ಎಂಬ ವೈಭವೋಪಿತ ಕಲ್ಪನೆ ಹಾಗೂ ವಿಫುಲ ಪರಿಭಾಷೆಗಳ ಮುಂದೆ ಬುಡಕಟ್ಟುಗಳ ಕಣಿ, ಮಾಟ, ಮಂತ್ರ, ದೇವರು, ದೆವ್ವ, ತಡೆ, ನಾಟಿವಿದ್ಯೆಗಳು ಸ್ಪರ್ಧಿಸಲಾರದೆ ಮೂಲೆಗೆ ಸರಿಯುವಂತಾಯಿತು.

ಏಕೆಂದರೆ ಸಂಪ್ರದಾಯ ಎಂಬ ಪದವನ್ನೇ ತಿರಸ್ಕಾರದಿಂದ ನೋಡುವ ಬುದ್ಧಿಜೀವಿ ಸಮಾಜ ಸಂಪ್ರದಾಯವನ್ನು ಮೂಢನಂಬಿಕೆ, ಕಂದಾಚಾರ ಅವೈಜ್ಞಾನಿಕತೆ ಸೂಚಿಸುವ ವಿಧಾನ ಎಂಬ ಹಣೆಪಟ್ಟಿ ಕಟ್ಟಿ ಜನರಿಂದ ಅಳಿಸಿ ಹೋಗುವಂತೆ ಮಾಡುತ್ತಿದ್ದಾರೆ. ಇದು ಕೇವಲ ನಿನ್ನೆ ಮೊನ್ನೆಯ ಪ್ರಕ್ರಿಯೆಯಾಗಿರದೆ ತಲತಲಾಂತರದಿಂದಲೂ ನಡೆದು ಬಂದಿರುವುದೇ ಆಗಿದೆ.

ಚರಿತ್ರೆಯಲ್ಲಿ ಶಿಷ್ಟ-ಪರಿಶಿಷ್ಟ ಎಂದು ವರ್ಗೀಕರಿಸಿ ಲಿಖಿತ ವೈದಿಕ ಸಂಪ್ರದಾಯ ಮತ್ತು ಆಚರಣೆಗಳನ್ನು ಶಿಷ್ಟ ಸಂಪ್ರದಾಯ ಎಂದು ವೈಭವೀಕರಿಸಿ ದಾಖಲಾಯಿತು. ಆದರೆ ಬುಡಕಟ್ಟುಗಳ ಸಂಪ್ರದಾಯ ಮತ್ತು ನಂಬಿಕೆಗಳನ್ನು ಮೂಢನಂಬಿಕೆ ಎಂದು ಕರೆದು ಮೂಲೆಗುಂಪು ಮಾಡಲಾಯಿತು.

ವೈದಿಕ ಸಂಪ್ರದಾಯದಲ್ಲಿರುವ ದೇವರು, ದೇವ ಎಂಬ ಆಧ್ಯಾತ್ಮವಾದಿ ಪರಿಕಲ್ಪನೆ ಬುಡಕಟ್ಟುಗಳಲ್ಲಿ ಕಾಣಲು ಸಾಧ್ಯವಾಗಲಿಲ್ಲ. ಏಕೆಂದರೆ ಇಲ್ಲಿ ದೇವರು ಎಂದರೆ ಅವರ ಪೂರ್ವಿಕರು ಅಥವಾ ಅವರ ತಂದೆ ತಾಯಿಗಳು ಆಗಿರುತ್ತಾರೆ. ಇದು ಭಾರತೀಯ ಮೂಲ ಸಂಸ್ಕೃತಿಯೂ ಕೂಡ ಹೌದು. ಆದರೆ ಆತ್ಮ, ಪರಮಾತ್ಮ, ಮೋಕ್ಷ, ಪಾಪ, ಪುಣ್ಯ, ಕರ್ಮ, ಪುನರ್ಜನ್ಮ, ಪರಲೋಕ, ಇಹಲೋಕ ಎಂಬ ಬ್ರಾಹ್ಮಣ ಆಧ್ಯಾತ್ಮವಾದಿ ಪರಿಭಾಷೆಯ ದಟ್ಟ ಪ್ರಭಾವದಿಂದಾಗಿ ನಾವು ನಮ್ಮತನವನ್ನು ಕಳೆದುಕೊಂಡು ನಮ್ಮ ಸಂಸ್ಕೃತಿ ಪರಂಪರೆ ಮತ್ತು ತತ್ವಜ್ಞಾನಿಯ ಪರಂಪರೆಯ ಸತ್ವವನ್ನು ತಿಳಿಯದೇ ಕಂಗಾಲಾಗಿದ್ದೇವೆ.

ಇದಕ್ಕೆ ಪ್ರಮುಖ ಕಾರಣವೆಂದರೆ ಲಿಖಿತ ಪರಂಪರೆಯ ಬಗ್ಗೆ ನಮಗಿರುವ ಅತಿಯಾದ ವ್ಯಾಮೋಹ ಮತ್ತು ಅವಲಂಬನೆ. ಬುಡಕಟ್ಟುಗಳಲ್ಲಿರುವ ಅಮ್ಮ ಮತ್ತು ಅಪ್ಪ ಎಂಬ ದೈವದ ಕಲ್ಪನೆಗಳು ಅವರ ನಿತ್ಯ ಬದುಕಿನ ಆಶಯಗಳನ್ನು ಪ್ರತಿನಿಧಿಸುತ್ತಿರುತ್ತವೆ. ಅವರಲ್ಲಿ ಹುಟ್ಟುವ ಹಾಡುಗಳು, ಪಾಲಿಸುವ ಆಚರಣೆಗಳು ನಡೆದುಕೊಳ್ಳುವ ಕಟ್ಟು ನಿಟ್ಟಿನ ಕ್ರಮಗಳು ಅವರ ಇಡೀ ಬದುಕಿನ ಅನುಭವದ ಫಲವೇ ಆಗಿರುತ್ತವೆ. ಇಲ್ಲಿ ಪ್ರತಿಯೊಂದು ವಸ್ತುಗಳನ್ನು ಅಥವಾ ಆಗು-ಹೋಗುಗಳನ್ನು ತಮ್ಮ ಹಿರಿಯರ ಪರಿಕಲ್ಪನೆಯ ಮೂಲಕವೇ ಗ್ರಹಿಸಲು ಪ್ರಯತ್ನಿಸುತ್ತಾರೆ. ಇಂದಿನ ಧರ್ಮದ ಕಲ್ಪನೆಯ ಮಟ್ಟಕ್ಕೆ ವಿರಾಮ ಹೇಳಿ ತಮ್ಮದೇ ಆದ ತಾತ್ವಿಕ ಮಟ್ಟದಲ್ಲಿ ಆಚರಣೆ, ನಂಬಿಕೆ ಮತ್ತು ರೂಢಿ ಪದ್ಧತಿಗಳನ್ನು ಉಳಿಸಿಕೊಂಡು ಬರುತ್ತಿದ್ದಾರೆ.

ಬುಡಕಟ್ಟುಗಳು ದೈವಗಳ ಪರಿಕಲ್ಪನೆಯನ್ನು ತಾಯಿ ಕರುಣೆಯ ಹಿನ್ನೆಲೆಯಲ್ಲಿಯೇ ಕಾಣುತ್ತಾರೆ. ಮಕ್ಕಳನ್ನು ಪಾಲನೆ, ಪೋಷಣೆ ಮಾಡುವಂತೆ ಜಗತ್ತನ್ನು ಕಾಪಾಡುತ್ತಾಳೆ. ಕೋಪ ಬಂದಾಗ ಹೊಡೆದು ಬಡಿದು ಮಾಡುವಂತೆ ರೋಗ-ರುಜಿನ, ಸಾವು-ನೋವುಗಳನ್ನು ಕೊಡುವುದರ ಮೂಲಕ ತನ್ನ ಸಿಟ್ಟುಗಳನ್ನು ತೋರಿಸಿಕೊಳ್ಳುತ್ತಾಳೆ. ಇದನ್ನು ಪೂಜಾರಿಯ ಮೈದುಂಬಿ ಬಂದು ವ್ಯಕ್ತಪಡಿಸುತ್ತಾಳೆ. ಆಗ ತಾಯಿಯನ್ನು ಶಾಂತಿ ಮಾಡಲು ಬಲಿ, ನೈವೇದ್ಯ, ಹರಕೆಗಳನ್ನು ಕೊಡುವ ಮೂಲಕ ಶರಣಾಗುತ್ತಾರೆ. ಇಂತಹ ನಂಬಿಕೆಗಳ ಮೇಲೆಯೇ ಬುಡಕಟ್ಟುಗಳು ಇಂದಿಗೂ ಬದುಕುತ್ತಿವೆ.

ಬುಡಕಟ್ಟುಗಳಲ್ಲಿ ಕಂಡುಬರುವ ದೈವಗಳೆಂದರೆ ಅವರು ತಮ್ಮ ಬುಡಕಟ್ಟುಗಳಿಗಾಗಿ ಒಂದಿಲ್ಲೊಂದು ಕಾರಣಕ್ಕಾಗಿ ಸತ್ತ ಹಿರಿಯರೇ ಆಗಿರುತ್ತಾರೆ. ಹಾಗಾಗಿ ಲೌಕಿಕ, ಪರಲೋಕ,

ಅಭೌತಿಕ, ಅಧ್ಯಾತ್ಮಿಕ ಮುಂತಾದ ನಂಬಿಕೆಗಳು ಬೆಳೆಯಲಿಲ್ಲ. ಇಲ್ಲಿ ಇದ್ದು ಹೋದವರೇ ಬೇರೆ ರೂಪದಲ್ಲಿ ಇದ್ದುಕೊಂಡು ತಮ್ಮನ್ನು ಕಾಪಾಡುತ್ತಾರೆ ಎಂಬ ನಂಬಿಕೆಯೇ ಇವರ ಜೀವಾಳವಾಗಿದೆ. ಈ ಲೋಕ ದೃಷ್ಟಿಯ ಹಿನ್ನೆಲೆಯಲ್ಲಿಯೇ ಬುಡಕಟ್ಟುಗಳ ಹುಟ್ಟು, ಸಾವು, ಋತುಮತಿ, ಮದುವೆ, ಕಣಿ, ಹಬ್ಬ ಹರಿದಿನ, ಜಾತ್ರೆ ಉತ್ಸವಗಳು ಹುಟ್ಟಿ ನಡೆದುಕೊಂಡು ಬರುತ್ತಿವೆ.

ಭಾರತದ ಮೂಲ ನಿವಾಸಿಗಳ ಪಟ್ಟಿಯಲ್ಲಿ ಪ್ರಮುಖವಾಗಿ ಗುರುತಿಸಿಕೊಳ್ಳುವ ಇರುಳಿಗ ಬುಡಕಟ್ಟಿನವರು ತಮ್ಮ ಆಚರಣೆ ಮತ್ತು ಸಂಪ್ರದಾಯಗಳಲ್ಲಿ ತಮ್ಮದೇ ಆದ ಅನನ್ಯತೆಯನ್ನು ಗುರುತಿಸಿಕೊಂಡು ಬರುತ್ತಿದ್ದಾರೆ. ಇವರ ಹುಟ್ಟು, ಸಾವು, ಮದುವೆ, ಋತುಮತಿ ಶಾಸ್ತ್ರ, ಹಬ್ಬ, ಜಾತ್ರೆ, ಉತ್ಸವಗಳಲ್ಲಿ ನಿರ್ದಿಷ್ಟ ಕ್ರಮ ಮತ್ತು ಆಂತರಿಕ ಸಂಬಂಧವನ್ನು ಉಳಿಸಿಕೊಂಡು ಬರುತ್ತಿದ್ದಾರೆ. ಖಾಸಗಿ ಒಡೆತನದ ಹಂಗಿಲ್ಲದ ಇವರು ಸಂಪ್ರದಾಯ ಮತ್ತು ಆಚರಣೆಯಲ್ಲಿ ಗಂಡು, ಹೆಣ್ಣು ಎಂಬ ಭೇದಭಾವವಿಲ್ಲದೆ ಸಮಾನತೆ ಕಾಯ್ದುಕೊಂಡು ಬರುತ್ತಿದ್ದಾರೆ. ಆದರೆ ವರ್ಣಜಾತಿಯ ಪ್ರಭಾವದಿಂದ ತೀವ್ರ ಬಾಧೆಗೆ ಒಳಗಾಗುವಂತಾಗಿದೆ.

ಬದಲಾದ ರಾಜಕೀಯ, ಆರ್ಥಿಕ ಸನ್ನಿವೇಶಕ್ಕೆ ತಕ್ಕಂತೆ ಮತ್ತು ಹೊರ ಮತ್ತು ಒಳ ಪ್ರಭಾವಗಳಿಂದ ಮೇಲ್ಮಟ್ಟದಲ್ಲಿ ರೂಪಾಂತರವಾದಂತೆ ಕಂಡರೂ ಅಂತರಾಳದಲ್ಲಿ ತಮ್ಮ ಆದಿಮ ಅವಶೇಷಗಳನ್ನು ಉಳಿಸಿಕೊಂಡು ಬರುತ್ತಿದ್ದಾರೆ. ಸಾವಿನ ಸಂದರ್ಭದ ಆಚರಣೆಯಲ್ಲಿ ವಿಧವೆ ಸ್ತ್ರೀ, ಅಗಸೆ, ಮಡಿಕೆ, ಅನ್ನ, ಸಮಾಧಿ, ಪೂಜೆ, ಹೆಣದ ಪೂಜೆ, ದೀಪ ಹೊತ್ತಿಸುವುದು, ಅಮವಾಸ್ಯೆಕಾರ್ಯ, ಬಿಳಿಯ ಬಟ್ಟೆ ಮುಂತಾದವು ಪ್ರವೇಶ ಪಡೆದಿದ್ದರೂ ಅಂತರಾಳದ ಆಚರಣೆಗಳಿಂದ ಇವುಗಳು ದೂರನೇ ಉಳಿಯುತ್ತವೆ. ಮಾಟ, ಮಂತ್ರ, ತಂತ್ರಗಳು ತಮ್ಮ ಕಷ್ಟ ಕಾರ್ಪಣ್ಯಗಳ ಪರಿಹಾರಕ್ಕೆ ಅಸ್ತ್ರಗಳೇ ಹೊರತು ಲಾಭ ಗಳಿಕೆಗೆ ಉಪಯೋಗವಾಗುವುದಿಲ್ಲ. ಆದರೆ ಈ ಸಂದರ್ಭದಲ್ಲಿ ಬಳಸುವ ಪದಕೋಶ ಇರುಳಿಗ ಸಮುದಾಯ ಚಾರಿತ್ರಿಕ ಹಿನ್ನೆಲೆಯನ್ನು ಪ್ರತಿನಿಧಿಸುತ್ತದೆ.

ಒಟ್ಟಾರೆಯಾಗಿ ಬುಡಕಟ್ಟುಗಳ ಲೋಕದೃಷ್ಟಿ ಹಲವಾರು ಪರಿಮಿತಿಗಳಿಂದ ಕೂಡಿವೆ ಎಂಬುವುದನ್ನು ಒಪ್ಪಲೇಬೇಕು. ಇಂಥ ಪರಿಮಿತಿಗಳಿಗೆ ಕಾಲ, ದೇಶದ ಸ್ಥಿತಿಗಳು, ಸಾಮಾಜಿಕ ಬೆಳವಣಿಗೆಯ ಮಟ್ಟ ಕಾರಣವಾಗಿರುತ್ತದೆ. ತಾಂತ್ರಿಕತೆ ಮತ್ತು ವೈಜ್ಞಾನಿಕ ಬೆಳವಣಿಗೆ ಕೆಳಮಟ್ಟದಲ್ಲಿದ್ದಾಗಿದ್ದು ಪರಿಮಿತಿ ಅನಿವಾರ್ಯವೇ ಆಗಿರುತ್ತದೆ. ಆದರೆ ಶೋಷಕ ವರ್ಗಗಳು ಮತ್ತು ಆಳುವ ವರ್ಗಗಳು ಹುಟ್ಟಿಸಿದ ಮೋಸದ ಲೋಕದೃಷ್ಟಿಗಳಂತೆ ಬುಡಕಟ್ಟುಗಳ ನಂಬಿಕೆ ಮತ್ತು ತಾತ್ವಿಕ ಕಣ್ಣೋಟಗಳು ಅಪಾಯಕಾರಿಗಳಾಗಿರುವುದಿಲ್ಲ. ಇವು ತಮ್ಮ ಸಂಪ್ರದಾಯ ಮತ್ತು ಆಚರಣೆಗಳ ಮೇಲೆ ಉಂಟಾಗುವ ವೈದಿಕ, ಅವೈದಿಕರ ಯಜಮಾನಿಕೆಯನ್ನು ವಿರೋಧಿಸುತ್ತಲೇ ಬಂದಿವೆ.

೫.೧. ಆಹಾರ ಪದ್ಧತಿ

ಇರುಳಿಗರು ಆಹಾರಕ್ಕಾಗಿ ನಿರಂತರವಾಗಿ ದುಡಿಯುತ್ತಾ ಬಂದಿದ್ದಾರೆ. ಹೊಟ್ಟೆ ತುಂಬ ಊಟ ಸಿಕ್ಕರೆ ಸಾಕು. ಆಸ್ತಿ-ಪಾಸ್ತಿ ನಗನಾಣ್ಯ ಏನೂ ಬೇಡ ಎಂಬ ಅಳಲು ಈ ಸಮುದಾಯದಲ್ಲಿ ಕಂಡು ಬರುತ್ತದೆ. ಇವರ ಆಹಾರ ಹುಡುಕಾಟದ ಕತೆಯ ಹಿಂದೆ ಇಡೀ ಸಮುದಾಯದ ಚರಿತ್ರೆಯೇ ಅಡಗಿದೆ. ಕೇವಲ ಆಹಾರದ ಹುಡುಕಾಟಕ್ಕಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗಿರುವುದಕ್ಕೆ ಅನೇಕ ಐತಿಹ್ಯ ಮತ್ತು ಪುರಾಣಗಳು ಪುರಾವೆಗಳನ್ನು ನೀಡುತ್ತವೆ.

ಇರುಳಿಗರು ಬರಗಾಲದ ಪ್ರಸಂಗವನ್ನು ನೆನಪಿಸಿಕೊಳ್ಳುತ್ತ ಹೀಗೆ ಹೇಳುತ್ತಾರೆ. ಹಸಿವಿನ ಚೀಲ ತುಂಬಿಸಿಕೊಳ್ಳಲು ಕಾಡುಮೇಡು ಅಲೆದು ಬಿದರಕ್ಕಿ, ಪುಳ್ಳಣ್ಣು, ಸೀಗೆಸೊಪ್ಪು, ಅಣ್ಣೆಸೊಪ್ಪು, ಗೆಂಡೆ(ಕೆರೆಯ ಕೆಸರಿನಲ್ಲಿ ಬೆಳೆಯುವ ಗೆಡ್ಡೆ) ಕಾಡಗೆಣಸು, ನವಣೆ, ಸಜ್ಜೆಗಳಿಂದ ಅಡುಗೆ ಮಾಡಿಕೊಂಡು ಜೀವ ಉಳಿಸಿಕೊಂಡಿರುವುದಾಗಿ ಹೇಳುತ್ತಾರೆ.[೧]

ಇತ್ತೀಚೆಗೆ ಸಂಪೂರ್ಣವಾಗಿ ರಾಗಿಯನ್ನು ಪ್ರಮುಖವಾಗಿ ಬೆಳೆಯಾಗಿ ಬೆಳೆದು ಪ್ರತಿನಿತ್ಯ ಮುದ್ದೆ ಸೇವಿಸುತ್ತಾರೆ. ಇದರ ಜೊತೆಗೆ ಕಾಡುಗೆಣಸು, ಕಾಡುಪ್ರಾಣಿ ಮಾಂಸ, ಸೊಪ್ಪು ಸದೆಗಳನ್ನು ತಿನ್ನುತ್ತಾರೆ. ಇರುಳಿಗರಲ್ಲಿ ಸಸ್ಯಹಾರ ಮತ್ತು ಮಾಂಸ ಆಹಾರದ ವ್ಯತ್ಯಾಸವೇನು ಇಲ್ಲ. ಇರುಳಿಗರಲ್ಲಿ ರಾಗಿಯು ಪ್ರಮುಖ ಆಹಾರವಾಗಿ ಕಂಡುಬರುತ್ತಿದ್ದು ಅದರಲ್ಲಿ ಕೆಂಪುರಾಗಿ, ಕರಿರಾಗಿ, ಮಳೆರಾಗಿ(ಮಳೆಯಲ್ಲಿನೆಂದು ತೊಯ್ದ ರಾಗಿ ಇದರಿಂದ ಮುದ್ದೆ ಮಾಡಿದರೆ ಸರಿಯಾಗಿ ಆಗುವುದಿಲ್ಲ ಜಿರಕಲು ಆಗುತ್ತದೆ) ಎಂಬ ವಿಭಾಗಗಳಿವೆ.

ಕರಿರಾಗಿ(ಕಪ್ಪುರಾಗಿ) ಅತ್ಯಂತ ಸತ್ವಯುತ ರಾಗಿ ಎಂದು ಇವರು ಹೇಳುತ್ತಾರೆ. ಒಕ್ಕಣಿಕೆ ಮಾಡಿದ ರಾಗಿಯನ್ನು ರಾಗಿ ಬೀಸುವ ಕಲ್ಲಿನಿಂದ ಬೀಸಿ ಹಸಿಹಿಟ್ಟು ಮಾಡಿಕೊಂಡು(ರಾಗಿಯನ್ನು ಪುಡಿ ಮಾಡಿಕೊಂಡು) ಸಂಗ್ರಹಿಸಿಟ್ಟುಕೊಳ್ಳುತ್ತಾರೆ. ಮನೆಯ ಅಗ್ನಿ ಮೂಲೆಯ ಸ್ವಲ್ಪ ಭಾಗವನ್ನು ಅಡುಗೆ ಮಾಡಲು ಮೀಸಲಿಟ್ಟುಕೊಳ್ಳುತ್ತಾರೆ. ಇದನ್ನು ನಡುಮನೆಯಿಂದ ಬೇರ್ಪಡಿಸಲು ಒಂದು ಮೋಟು ಗೋಡೆಯನ್ನು ಹಾಕಿರುತ್ತಾರೆ. ಈ ಅಡುಗೆ ಮಾಡುವ ಜಾಗವನ್ನು "ಕ್ವಾಣೆ" ಎಂಬ ಹೆಸರಿನಿಂದ ಕರೆಯುತ್ತಾರೆ. ಈ ಕ್ವಾಣೆಯ ಒಂದು ಭಾಗದಲ್ಲಿ ಒಲೆಯನ್ನು ಮಾಡುತ್ತಾರೆ. ಒಂದು ದೊಡ್ಡ ಒಲೆ ಮತ್ತೊಂದು ಚಿಕ್ಕ ಓಲೆ(ವಾಗಲೇ) ಮುಖ್ಯ ಒಲೆಯ ಎಡಭಾಗದಲ್ಲಿ ಚಪ್ಪಡಿಯಾಕಾರದ ಮಂದವಾದ ೭x೪ ಅಡಿಯ ಕಲ್ಲನ್ನು ಇಟ್ಟಿರುತ್ತಾರೆ. ಇದನ್ನು ಹಸೆಕಲ್ಲು ಎಂದು ಕರೆಯುತ್ತಾರೆ. ಮುಖ್ಯ ಒಲೆಯ ಮೇಲೆ ಮಡಿಕೆಯಲ್ಲಿ ಹಿಟ್ಟು ಬೇಯಿಸಿದ ನಂತರ ಹಸೆಕಲ್ಲಿನ ಮೇಲೆ ಹಾಕಿ ಮುದ್ದೆ ಕಟ್ಟುತ್ತಾರೆ.

ಮುಖ್ಯ ಒಲೆಯ ಮೇಲೆ ಮಡಿಕೆಯನ್ನು ಇಟ್ಟು ಅದರ ಅರ್ಧ ಭಾಗದವರೆಗೂ ನೀರು ಹಾಕುತ್ತಾರೆ. ನಂತರ ಹಸಿಹಿಟ್ಟನ್ನು ಸ್ವಲ್ಪ ಉದುರಿಸಿ ಮಡಿಕೆಯ ಮುಚ್ಚಳವನ್ನು ಮುಚ್ಚುತ್ತಾರೆ. ಕೆಳಗಡೆಯಿಂದ ಉರಿಯನ್ನು ಹೆಚ್ಚಿಸುತ್ತಾರೆ. ಸ್ವಲ್ಪ ಸಮಯದ ನಂತರ ನೀರು ಕುದಿದು ಮೇಲಿನ ಮುಚ್ಚಳವನ್ನು ಬೀಳಿಸುತ್ತದೆ. ಆಗ "ಹಿಟ್ನಸ್ರು" ಬಂತು ಎಂದು ತಿಳಿಸುತ್ತಾರೆ. ಉರಿಯನ್ನು ಸ್ವಲ್ಪ ಕಡಿಮೆ ಮಾಡಿ "ಕಾವ್ಗೆಲ್"(ಚಿಕ್ಕದಾದ ಕವಡು)ನಿಂದ ಮಡಿಕೆಯ ಕೊರಳನ್ನು ಹಿಡಿದುಕೊಳ್ಳುತ್ತಾರೆ. ಅದರ ತಳಭಾಗವನ್ನು ಕಾಲಿನಿಂದ ಮೆಟ್ಟಿಕೊಳ್ಳುತ್ತಾರೆ. ನಂತರ ಹಿಟ್ಟಿನ ದೊಣ್ಣೆಯನ್ನು ತೆಗೆದುಕೊಂಡು ನಿಧಾನವಾಗಿ ಹಸಿಹಿಟ್ಟನ್ನು ಉದುರಿಸುತ್ತಾ ಅಷ್ಟೇ ಆಯಾವಾಗಿ ಹಿಟ್ಟಿನ ದೊಣ್ಣೆಯಿಂದ ತಿರುಗಿಸುತ್ತಾ ಹೋಗುತ್ತಾರೆ. ಹಸಿಹಿಟ್ಟು ಹಾಕಿದಂತೆ ದೊಣ್ಣೆಯ ಸುತ್ತುವಿಕೆಯ ಪ್ರಮಾಣವು ಹೆಚ್ಚಾಗುತ್ತದೆ. ಹೀಗೆ ತಿರುಗಿಸುವಾಗ ಹಿಟ್ಟನ್ನು ಮುಟ್ಟಿ ನೋಡುತ್ತಾರೆ. ಹದವಾಗಿ ಕಂಡುಬಂದರೆ ಎರಡರಿಂದ ಮೂರು ನಿಮಿಷ ಬೇಯಲು ಬಿಡುತ್ತಾರೆ. ನಂತರ ಕೆಳಕ್ಕೆ ಇಳಿಸಿಕೊಂಡು ತೆಕ್ಕೆಯ ಮೇಲೆ ಇಡುತ್ತಾರೆ. ಈ ತೆಕ್ಕೆಯನ್ನು ಬಿದಿರಿನ ನಾರಿನಿಂದ ವೃತ್ತಾಕಾರದಲ್ಲಿ ಹೆಣೆದಿರುತ್ತಾರೆ. ಇದನ್ನು ಹಿಟ್ಟಿನ ಮಡಿಕೆ, ಸಾಂಬಾರು ಮಡಿಕೆಗಳನ್ನು ನೆಲದ ಮೇಲೆ ಇಡುವ ಬದಲು ಇವುಗಳ ಮೇಲೆ ಇಟ್ಟುಕೊಳ್ಳುತ್ತಾರೆ. ನಂತರ ಮತ್ತೆ ಕವಗೋಲ್‌ನಿಂದ ಬಿಗಿಯಾಗಿ ಮಡಿಕೆಯ ಕೊರಳನ್ನು ಹಿಡಿದುಕೊಂಡು ಹಿಟ್ಟಿನ ದೊಣ್ಣೆಯಿಂದ ತಿರುಗಿಸುತ್ತಾರೆ. ಹೀಗೆ ತಿರುಗಿಸುತ್ತಾ ಹಿಟ್ಟಿನ ದೊಣ್ಣೆಯ ಸಹಾಯದಿಂದ ಹಿಟ್ಟನ್ನು ಎತ್ತಿ ಹಸೆಕಲ್ಲಿನ ಮೇಲೆ ಹಾಕುತ್ತಾರೆ. "ಕರ್ಚಿಪು"(ಕೆರೆಬಿಲ್ಲೆ)ಯಿಂದ ಹಿಟ್ಟಿನದೊಣ್ಣೆಗೆ ಕಟ್ಟಿರುವ ಹಿಟ್ಟನ್ನು ಕೆರೆದು ಹಸೆಕಲ್ಲಿನ ಮೇಲೆ ಹಾಕಿ ಒಂದು ಬಟ್ಟಲಿನಲ್ಲಿ ನೀರು ತೆಗೆದುಕೊಂಡು ಅದರಲ್ಲಿ ಕೈ ಅದ್ದಿಕೊಂಡು ಹಿಟ್ಟನ್ನು ಮಿದ್ದಿಸುತ್ತಾ ಹುಂಟೆ ಕಟ್ಟುತ್ತಾರೆ. ಹೀಗೆ ಹಲವಾರು ಮುದ್ದೆಗಳನ್ನು ಕಟ್ಟಿ ಹಸೆಕಲ್ಲಿನ ಒಂದು ಭಾಗಕ್ಕೆ ಸೇರಿಸುತ್ತಾರೆ. ಇಡೀ ಮಡಿಕೆಯಲ್ಲಿನ ಹಿಟ್ಟು ಖಾಲಿಯಾದ ನಂತರ ಕೆರೆಬಿಲ್ಲೆಯಿಂದ ಮಡಿಕೆಯ ಒಳಗೆ ಕರೆದು ಶುಚಿಗೊಳಿಸುತ್ತಾರೆ. ಹಸೆಕಲ್ಲಿನ ಮೇಲಿರುವ ಮುದ್ದೆಗಳನ್ನು ಮತ್ತೆ ಮಡಿಕೆಗಳಿಗೆ ಹಾಕಿ, ಮಡಿಕೆಯ ಬಾಯಿಯನ್ನು ಮುಚ್ಚುತ್ತಾರೆ. ನಂತರ ಬೂದಿಯನ್ನು ತೆಗೆದುಕೊಂಡು ವಿಭೂತಿಯಾಕಾರದಲ್ಲಿ ಮಡಿಕೆಯ ಕೊರಳಿನ ಭಾಗಕ್ಕೆ ಹಚ್ಚುತ್ತಾರೆ. ಕಾರಣ ಕೇಳಿದರೆ ಮನೆಯ ಸುತ್ತ ಗಾಳಿಗರಾವೂಗಳು ಓಡಾಡುತ್ತಿರುತ್ತವೆ. ಅವುಗಳು ಮುದ್ದೆಗಳನ್ನು ಮುಟ್ಟಬಾರದೆಂದು ಹೀಗೆ ಮಾಡುವುದಾಗಿ ಹೇಳುತ್ತಾರೆ.

ಇರುಳಿಗರು ಕಾಡಿನಿಂದ ಪಡೆದು ತಿನ್ನುವ ಪ್ರಮುಖ ಹಣ್ಣುಗಳು ಕಾರೆಹಣ್ಣು, ಹೆಸರೇಹಣ್ಣು, ಕಾಡ್‌ನೆಲ್ಲಿಕಾಯಿ, ಅಮಟೆ, ಗೀರಣ್ಣು, ಅಂಕಾಲೆಹಣ್ಣು, ಪುಳ್ಳಣ್ಣು, ಬೇಲ್ದಕಾಯಿ, ನೆರಳೆಹಣ್ಣು, ಸೊಡ್ಲಿಹಣ್ಣು, ಹತ್ತಿಹಣ್ಣು, ಹಿಪ್ಪನೇರಳೆಹಣ್ಣು, ತೊಂಡೆಹಣ್ಣು ಮುಂತಾದ ಹಣ್ಣುಗಳನ್ನು ತಿನ್ನುತ್ತಾರೆ.

ಇರುಳಿಗರು ಉಪಯೋಗಿಸುವ ಸೊಪ್ಪುಗಳು

ಅಣ್ಣೆಸೊಪ್ಪು, ಜಾಗಡಿಸೊಪ್ಪು, ಬೆರೆಕೆಸೊಪ್ಪು, ಕೀರೆಸೊಪ್ಪು, ಸೀಗೆಸೊಪ್ಪು, ಕುಂಬಳಸೊಪ್ಪು, ನುಗ್ಗೆಸೊಪ್ಪು, ಅರೆಚಿಟ್ಟೆಸೊಪ್ಪು, ಆಗಲಸೊಪ್ಪು, ಏರಿಸಾಸಿವೆಸೊಪ್ಪು, ಒಡ್ಡಾಣಿಸೊಪ್ಪು, ಕನ್ನೆಸೊಪ್ಪು, ಅಣ್ಣೆಸೊಪ್ಪು, ಕರಿಕಟ್ಟೆಸೊಪ್ಪು, ಕಾಡ್‌ಮೆಣಸಿಗೆ ಸೊಪ್ಪು, ಕಾಡ್ ಸೇಬುಸೊಪ್ಪು, ಕೆಸರುಗಡೆಸೊಪ್ಪ, ದೊಗಳಗಿರಿಸೊಪ್ಪು, ಬಳ್ಳೆಸೊಪ್ಪು, ಚಿಕ್ಕಟಿಗೆಸೊಪ್ಪು, ಸೀಮೆ ಹೊನಗೊನೆಸೊಪ್ಪು, ಸೂರತಕುಡಿಸೊಪ್ಪು, ಗಣಿಕೆಸೊಪ್ಪು, ತಗಚೆಸೊಪ್ಪು, ಬೂದಿಸೊಪ್ಪು, ಕೆಂಪುಗಣಿಕೆಸೊಪ್ಪು, ದಂಡಿನಸೊಪ್ಪು, ಸಪ್ಪಸೀಗೆಸೊಪ್ಪು, ಲೊಳೆಸೊಪ್ಪು, ಮುಳ್ಳಂದಿಸೊಪ್ಪು, ಬೇಲಿಕೀರಿಸೊಪ್ಪು, ಆಗಲಸೊಪ್ಪು, ಹೊಳೆಹಣ್ಣೆಸೊಪ್ಪು, ಕೊರಳಣಿಕೆ ಸೊಪ್ಪು ಮುಂತಾದವುಗಳು.

ಇರುಳಿಗರು ತಿನ್ನುವ ಪ್ರಾಣಿ ಮತ್ತು ಪಕ್ಷಿಗಳು

ಮೊಲ, ಜಿಂಕೆ, ಸಾರಂಗ, ನರಿ, ಕೀರಿ(ಮುಂಗುಸಿ) ಮುಸ್ವ(ಕೋತಿಯ ಜಾತಿಗೆ ಸೇರಿದ್ದು ಮುಖಕಪ್ಪಾಗಿ ಇರುತ್ತದೆ. ಆದರೆ ಕೋತಿಗಿಂತ ಬಲಶಾಲಿಯಾಗಿದ್ದು, ದಪ್ಪವಾಗಿರುತ್ತದೆ) ಆಮೆ, ಮೀನು, ನವಿಲು, ಕಾಡ್‌ಕೋಳಿ, ಪಿಟ್ಟೆಕೋಳಿ, ಕರಡಿ, ಇಲಿ, ತೋಡೆ, ಆಡು, ಕುರಿ, ಮುಳ್ಳುಂದಿ, ಚಿಪ್ಪಂದಿ, ತೊಲಕ್ಕಿ, ಕಾಡುಬೆಕ್ಕು, ಪುಣ್ಣುಬೆಕ್ಕು, ಕರಿಕೊತ್ತಿ, ಕೂರ್ಗ, ಕೊರ್ಮ, ಏಡಿ, ಕಮೋದ ಪಿಡ್ಡೆ, ನೀರುನಾಯಿ, ನೀರುಕಾಗೆ, ಪಿಟ್ಟೆಕೋಳಿ, ಬಾತುಕೋಳಿ, ಆವ್‌ಬತ್ತಿಮೀನು, ನಕ್ಷತ್ರ ಮೀನು, ಸೀಗಡಿ, ಕರಿಮೀನು, ಕ್ಯಾರೆಹಾವು, ಅಳ್ಳುಮ, ಕೆಂಬೂತ, ಲಾವಗ, ಸ್ವಾರಕ್ಕಿ, ಕಾಡಕ್ಕಿ, ಮುದುಕನಹಕ್ಕಿ, ಹಿರಿಯಕ್ಕಿ, ಪಾರಿವಾಳ, ಬುಂಡೆ ಬುಳ್ಕ, ಸೋರೆಬಿಜ್ಜು, ಬಿಜ್ಜು, ಗೌಜಲಕ್ಕಿ, ಕಟ್ಟುಹಕ್ಕಿ, ಕಬಟನಹಕ್ಕಿ, ಕಾರ್ಬೋರಹಕ್ಕಿ, ಕಾಡುಬಾತು, ಕುಟಾರೆಹಕ್ಕಿ, ಕುರುಕುಣಿಸಕ್ಕಿ, ಕೂವಕ್ಕಿ, ತಿತ್ಗನಕ್ಕಿ, ಕೊಕ್ಕರೆ, ಕೊಲ್ಲ, ಭೂತ್ಗನಕ್ಕಿ, ಕೋಲಂಡಿಹಕ್ಕಿ, ಗಾಣಿಕುಣಿಸನಹಕ್ಕಿ, ಗಿಣಿ, ಗೀಜನಕ್ಕಿ, ಗುಡುಗಾಡಹಕ್ಕಿ, ಚಿಟ್ಟಕ್ಕಿ, ನೂಚರಹಕ್ಕಿ, ಪುಲಂಬೆಮಾಂಸ, ಪೊಳಕ್ಕಿ, ಭಂಗಿರಾಹುತ ಬೆಳ್ಳಕ್ಕಿ, ಹೆಗ್ಗಾರಿಕೆ, ಹೊಗೆಹಂಡಕ್ಕಿ, ಹೊಳೆ ನರಕ್ಕನಹಕ್ಕಿ, ಬೀಮರಾಜ, ಕಾಡುಕೋಳಿ, ಮೆದೆತೋಡ, ಕಡವೆ, ಅಣುಜು, ಹಾರೋಬೆಕ್ಕು, ಕೂರಹಂದಿ, ಗುಬ್ಬಣಿ, ಕೆಂಜರಿ, ಕೊಕ್ಕೆಬಾಲ ಮುಂತಾದವುಗಳ ಆಹಾರಕ್ಕಾಗಿ ಬಳಸುತ್ತಾರೆ.

ಇರುಳಿಗರು ತಿನ್ನುವ ಅಣಬೆಗಳು

ಅಣಬೆಯ ಹುಟ್ಟಿನ ಬಗ್ಗೆ ಇರುಳಿಗರು ತಮ್ಮದೇ ರೀತಿಯಲ್ಲಿ ವ್ಯಾಖ್ಯಾನ ನೀಡುತ್ತಾರೆ. ಗೆದ್ದಲ ಹುಳುಗಳು ಕಟ್ಟಿಗೆ, ಗಿಡ, ಚೆಕ್ಕಗಳನ್ನು ಹಿಡಿದು ಕುಟ್ಟೆಯನ್ನುಂಟುಮಾಡಿ ಕಟ್ಟಿಗೆಯನ್ನು ಪುಡಿ ಪುಡಿ ಮಾಡಿಕೊಂಡು ಭೂಮಿಯ ಒಳಗಡೆ ಮೂರು-ನಾಲ್ಕು ಅಡಿ ಆಳಕ್ಕೆ ಹೊತ್ತೊಯ್ಯುತ್ತವೆ. ಅಲ್ಲಿ ತಮ್ಮ ಗೆದ್ದಲು ರಸವನ್ನು ಶ್ರವಿಸಿ ಗೂಡುಮಾಡಿಕೊಳ್ಳುತ್ತವೆ. ನಂತರ ಅಲ್ಲೇ ತಮ್ಮ ಮರಿಗಳನ್ನು ಮಾಡುತ್ತವೆ. ಈ ಗೂಡುಗಳನ್ನು 'ಗುಗ್ಗೆ' ಎನ್ನುತ್ತಾರೆ. ಇದು ಕರಡಿಗೆ ಅತ್ಯಂತ

ಇಷ್ಟವಾದ ಆಹಾರ. ಆದ್ದರಿಂದಲೇ ಕರಡಿ ಯಾವಾಗಲೂ ಹುತ್ತ ಬಗೆಯುತ್ತಿರುತ್ತದೆ. ಹೀಗೆ ಗೆದ್ದಲು ಹುಳುಗಳು ಭೂಮಿಯ ಮೇಲ್ಭಾಗದಿಂದ ಆಳದವರೆಗೆ ಕೋಳವೆಗಳನ್ನು ಮಾಡಿಕೊಂಡು ತಮ್ಮ ಮರಿಗಳನ್ನು ಬೆಳೆಸಿ ಮೇಲಕ್ಕೆ ಕರೆದುಕೊಂಡುಬರುತ್ತವೆ. ಇವುಗಳ ಗೂಡುಗಳು ಮಾತ್ರ ಭೂಮಿಯಲ್ಲಿ ಉಳಿಯುತ್ತವೆ. ಮಳೆ ಬಿದ್ದನಂತರ ಈ ಗುಗ್ಗೆಯಿಂದಲೇ ಅಣಬೆಗಳು ಏಳುತ್ತವೆ ಎನ್ನುತ್ತಾರೆ.[೨] ಇವರು ತಿನ್ನುವ ಪ್ರಮುಖ ಅಣಬೆಗಳೆಂದರೆ, ನೆಲ್ಲಣಬೆ, ಮುಳ್ಳಣಬೆ ಮೊಗ್ಗುಹುಲ್ಲಣಬೆ, ಹುತ್ತುದ್‌ಅಣಬೆ, ಮೊಟ್ಟಣಬೆ, ಮಂಜಣಬೆ, ಬೂರ್ಗದಣಬೆ, ಬುರ್ಜ, ಬೀಕ, ಬಿದಿರುಮುಂಡಣಬೆ, ತರ್ಗ್‌ಣಬೆ, ಕೋಟೆ ಸುತ್ತಣಬೆ, ಕೊಡೆ ಅಣಬೆ, ಕಾಸರಕಣಬೆ, ಕಾರೆಅಣಬೆ, ಉಪ್ಪುರ್ಕಣಬೆ, ಆನೆಕಚ್ಚಲುಅಣಬೆ ಮುಂತಾದವುಗಳು.

ಇರುಳಿಗರು ಆಹಾರಕ್ಕಾಗಿ ಬಳಸುವ ಧಾನ್ಯಗಳು

ನವಣೆ, ಸಜ್ಜೆ, ರಾಗಿ, ಸಾಸಿವೆ, ಸಾಮೆಅಕ್ಕಿ, ಭತ್ತ, ಜೋಳ, ಅವರೆ, ತೊಗರಿ, ಹೆಸರುಕಾಳು, ಕಾರಮಣಿಕಾಳು, ಕಡಲೆಕಾಳು, ನೆಲ್ಲವರಿ, ಉದ್ದವರೆ, ಅವರೆಕಾಯಿ, ಹಲಸಿನಬೀಜ, ಕಳಳೆ(ಬಿದಿರಿನ ಎಳೆಯಭಾಗ).

ಇತರೆ ಆಹಾರ ಪದಾರ್ಥಗಳು: ಮೆಣಸಿನಕಾಯಿ, ಕಾಶಿಮೆಣಸಿನಕಾಯಿ, ಈರುಳ್ಳಿ, ಬೆಳ್ಳುಳ್ಳಿ, ಕುಂಬಳಕಾಯಿ, ಸ್ವಾರೆಕಾಯಿ, ಆಗಲಕಾಯಿ, ಪಡವಲಕಾಯಿ ಪರಂಗಿ, ಜೀಪ, ಸೀತಫಲ, ನಗರಿಹಣ್ಣು..

ಇರುಳಿಗರು ತಿನ್ನುವ ಕಾಡುಹಣ್ಣುಗಳು

ಪುಳ್ಳಣ್ಣು, ಕಾರೆಹಣ್ಣು, ಅಮಟೆಹಣ್ಣು, ಅಂಕಾಲೆಹಣ್ಣು, ಅತ್ತಿಹಣ್ಣು, ನೇರಳೆಹಣ್ಣು, ಗೇರಣ್ಣು, ಸೊಡ್ಲಿ ಹಣ್ಣು, ಹಿಪ್ಪೆಹಣ್ಣು, ಕಾಡ್ ಈರುಳ್ಳಿ, ಕಾಡ್‌ನೆಲ್ಲಿಕಾಯಿ, ಸೊಳ್ಳೆಹಣ್ಣು, ಸೊಟ್ಟೆಹಣ್ಣು, ಸೇಲೆಸಕ್ಕೆ ಹಣ್ಣು, ಸುಂಡೇಕಾಯಿ, ಮರ್ಕಲೆಹಣ್ಣು, ಬಾರೆಹಣ್ಣು, ಬಸರಿಹಣ್ಣು, ಬಟ್ಲುಕದಣ್ಣು, ನಸರೆಹಣ್ಣು, ನಗರಿಹಣ್ಣು, ಗೊಣ್ಣೆ ಹಣ್ಣು, ಗುಡುಮೆಹಣ್ಣು, ಹಿಡಿಗಲ್ಲಣ್ಣು, ಚೂರಿಹಣ್ಣು, ಜಿಡ್ಡಿಹಣ್ಣು, ಗೇವರಣ್ಣು, ಕೊತ್ರಹಣ್ಣು, ಕಾಡುಕುಂಬಳಣ್ಣು, ಕರ್ಚಿಹಣ್ಣು, ಎಣ್ಣೆಹಣ್ಣು, ಉಳುಪಹಣ್ಣು, ಅಂದಾಲಹಣ್ಣು, ಅಗಲಹಣ್ಣು, ಅನಾದಿಹಣ್ಣು, ಆಡವಣ್ಣು, ಈಚಲಹಣ್ಣು ಗಾಳಿಹಣ್ಣು, ಕಾಡಲಸಿನ ಹಣ್ಣು.

೫.೨. ವೇಷಭೂಷಣ

ಆದಿಮಾನವ ಮಳೆ, ಚಳಿ, ಬಿಸಿಲು, ಹುಳು, ಹುಪ್ಪಟ್ಟೆಗಳಿಂದ ತನ್ನ ದೇಹವನ್ನು ರಕ್ಷಣೆ ಮಾಡಿಕೊಳ್ಳಲು ಮತ್ತು ಬೇಟೆಯ ಸಂದರ್ಭಗಳಲ್ಲಿ ದೇಹದ ನೇತಾಡುವ ಅಂಗಗಳು ಕೆಲಸಕಾರ್ಯಗಳಿಗೆ ಅಡ್ಡಿಪಡಿಸಿದಂತೆ ಮಾಡುವ ಉದ್ದೇಶದಿಂದ ಗಂಡಸರು ತಮ್ಮ ನಡುವಿನ

ಕೆಳಭಾಗವನ್ನು ಲಂಗೋಟಿಯಂತೆ ಮುಚ್ಚಿಕೊಂಡರೆ; ಹೆಂಗಸರು ಸೊಂಟದ ಸುತ್ತಲಾರಂಭಿಸುವ ಹಾಗೂ ಕೆಲವು ಸಂದರ್ಭದಲ್ಲಿ ನಡುವಿನ(ಸೊಂಟ) ಕೆಳಭಾಗವನ್ನು ಗರ್ಭಧಾರಣೆ ಹಾಗೂ ಹೆರಿಗೆ ಇನ್ನಿತರ ಕಾರಣಗಳಿಂದ ಮುಚ್ಚಿಕೊಳ್ಳುವ ಪದ್ಧತಿ ಬೆಳೆದು ಬಂದಿದೆ. ಇದಕ್ಕಾಗಿ ಮಾನವ ಮರದ ಎಲೆ, ಸೊಪ್ಪು ತೊಗಟೆ ಮತ್ತು ಪ್ರಾಣಿಗಳ ಚರ್ಮವನ್ನು ವಸ್ತ್ರಗಳಾಗಿ ಬಳಸಿಕೊಂಡನು.

ಇಡೀ ಪ್ರಾಣಿಸಂಕುಲಗಳಲ್ಲಿ ಮನುಷ್ಯ ಉಡುಗೆತೊಡುಗೆಯ ಮೂಲಕ ಪ್ರತ್ಯೇಕವಾಗಿ ಗುರುತಿಸಿಕೊಳ್ಳುತ್ತಾನೆ. ಏಕೆಂದರೆ ಮನುಷ್ಯ ಮಾತ್ರವೇ ವಿವಿಧ ಬಗೆಯ ಉಡುಗೆ ತೊಡುಗೆಗಳನ್ನು ಬಳಸಿಕೊಳ್ಳುತ್ತಿದ್ದಾನೆ. ಆದಿಮಾನವನ ಉಡುಗೆ ತೊಡುಗೆಯು ಕಾಲ ಬದಲಾದಂತೆ ಬದಲಾವಣೆ ಗೊಂಡಿತು. ಕೇವಲ ಕೆಲವೇ ಅಂಗಗಳನ್ನು ಮುಚ್ಚಿಕೊಳ್ಳುತ್ತಿದ್ದ ಪರಿಪಾಠ ಬದಲಾಗಿ ಇಡೀ ದೇಹವನ್ನು ಮುಚ್ಚಿಕೊಳ್ಳುವ ಹಂತಕ್ಕೆ ತಲುಪಿತು. ಇದು ಅವನಿಗೆ ಆಹಾರ ಮತ್ತು ನೀರಿನಷ್ಟೇ ಅನಿವಾರ್ಯವಾಗಿ ಕಂಡುಬಂದಿತು. ಆದರೆ ಇಂದು ಉಡುಗೆ ತೊಡುಗೆಯು ಸೌಂದರ್ಯ ಸಾಧನವಾಗಿ ಮಾರ್ಪಾಡುಗೊಂಡಿದೆ. ಹಿಂದೆ ಅಗತ್ಯತೆಗಳಿಗೆ ಅನುಗುಣವಾಗಿದ್ದ ವಸ್ತ್ರಗಳು ಇಂದು ಅಲಂಕಾರಿಕ ಮತ್ತು ಮಾನರಕ್ಷಣೆಯ ವಸ್ತುಗಳಾಗಿ ರೂಪಾಂತರವಾಗಿವೆ.

ಎಲೆ, ಸೊಪ್ಪು, ಮರದ ತೊಗಟೆ ಪ್ರಾಣಿಯ ಚರ್ಮಗಳ ಜಾಗಕ್ಕೆ ರೇಷ್ಮೆ, ಹತ್ತಿ, ಉಣ್ಣೆಯ ಬಟ್ಟೆಗಳು ಬಂದವು. ಒಂದು ಕಾಲಕ್ಕೆ ಕೇವಲ ದೇಹರಕ್ಷಣೆ ಮತ್ತು ಅನಿವಾರ್ಯತೆ ಸಂಕೇತವಾಗಿದ್ದ ಉಡುಗೆ ತೊಡುಗೆಗಳು ಇಂದು ಧರ್ಮ, ಸಂಸ್ಕೃತಿ ಮತ್ತು ವ್ಯಕ್ತಿ ಗೌರವದ ಮಾನದಂಡಗಳಾಗಿ ಗುರುತಿಸಿಕೊಳ್ಳುತ್ತಿವೆ. ದೇಹ ರಕ್ಷಣೆಯ ವಸ್ತುಗಳಾಗಿದ್ದು ಈ ಬಟ್ಟೆ ಇಂದು ಮಾನರಕ್ಷಣೆಯ ಸಾಧನಗಳಾಗಿವೆ.

ಆದರೆ ಪ್ರಕೃತಿಯ ನಿಯಮದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದ ಮಾನವನು ಆಧುನಿಕತೆ ಅಥವಾ ನಾಗರಿಕತೆಯ ಹೆಸರಿನಲ್ಲಿ ದೇಹದ ತುಂಬಾ ಹಾಕಿಕೊಳ್ಳುತ್ತಿದ್ದ ಬಟ್ಟೆಯನ್ನು, ದೇಹದ ಕೆಲವೇ ಕೆಲವು ಭಾಗಗಳನ್ನು ಮುಚ್ಚಿಕೊಳ್ಳಲು ಪ್ರಾರಂಭಿಸಿದ್ದಾನೆ. ಮಾನರಕ್ಷಣೆಯ ಮನೋಭಾವ ನಾಗರಿಕತೆಯ ಹೊಡೆತದಿಂದ ನಶಿಸಿ ಮತ್ತೆ ಆದಿಮಾನವನ ರೀತಿಯಲ್ಲೂ ತನ್ನ ಕೆಲಸಕ್ಕೆ ಅಡ್ಡಿಯಾಗಬಾರದೆಂದು ದೇಹದ ನೇತಾಡುವ ಭಾಗಗಳನ್ನು ಬಂಧಿಸಿಕೊಂಡಂತೆ ಪ್ರಸ್ತುತ ಕೆಲವು ಭಾಗಗಳನ್ನು ಮಾತ್ರ ವಸ್ತ್ರಗಳಿಂದ ಮುಚ್ಚಿಕೊಳ್ಳಲು ಪ್ರಾರಂಭಿಸಿದ್ದಾನೆ. ಇದಕ್ಕೆ ಸ್ಪೆಂಗ್ಲರ್ ಹೀಗೆ ಹೇಳುತ್ತಾರೆ. "ಸಂಸ್ಕೃತಿ ಸದಾ ತ್ರಿಭುಜ ರೀತಿಯಲ್ಲಿ ಸುತ್ತುತ್ತಿರುತ್ತದೆ. ಸಂಸ್ಕೃತಿ ಎಂಬುದು ಹುಟ್ಟು, ಆದರೆ ನಾಗರಿಕತೆ ಎಂಬುದು ಅವನತಿ, ಮನುಷ್ಯ ನಾಗರಿಕತೆಯ ಹೆಸರಿನಲ್ಲಿ ಮತ್ತೆ ಹುಟ್ಟಿನ ಕಡೆಗೆ ಹಿಂದಿರುಗುತ್ತಿದ್ದಾನೆ".

ಒಟ್ಟಾರೆಯಾಗಿ ಆದಿಕಾಲದ ಬದುಕಿನಲ್ಲಿಯೇ ಹುಟ್ಟಿಕೊಂಡಿರಬಹುದಾದ ಉಡುಗೆ ತೊಡುಗೆಗಳು ಅಥವಾ ವೇಷಭೂಷಣಗಳು ನಂತರದಲ್ಲಿ ಅನಿವಾರ್ಯವಾಗಿ ಅನೇಕ ರೀತಿಯ ವೈವಿಧ್ಯತೆಗಳೊಂದಿಗೆ ಇಂದು ಕಾಣಸಿಗುತ್ತವೆ. ಮುಂದುವರಿದು ಉಡುಗೆ ತೊಡುಗೆಗಳು ಧರ್ಮ, ಜಾತಿ, ಸಂಸ್ಕೃತಿ, ಮೇಲು-ಕೀಳು, ಬಡವ, ಶ್ರೀಮಂತ ಎಂಬೆಲ್ಲಾ ಭೇದಗಳಿಗೂ ಎಡೆಮಾಡಿಕೊಟ್ಟಿವೆ. ಇಂದು ಉಡುಗೆ ತೊಡುಗೆಗಳ ಆಧಾರದ ಮೇಲೆ ವ್ಯಕ್ತಿಯ ಶ್ರೇಷ್ಠತೆ ಮತ್ತು ಕನಿಷ್ಠತೆಯನ್ನು ನಿರ್ಧರಿಸುವ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವೆಲ್ಲ ಬದುಕುತ್ತಿದ್ದೇವೆ.

ಇರುಳಿಗ ಬುಡಕಟ್ಟಿನಲ್ಲಿ ನಿರ್ದಿಷ್ಟವಾದ ಉಡುಗೆ ತೊಡುಗೆಗಳು ಕಂಡು ಬರುವುದಿಲ್ಲ. ಇತ್ತೀಚಿನ ದಿನಮಾನಗಳಲ್ಲಿ ಆಧುನಿಕತೆಯ ಪ್ರಭಾವದಿಂದ ಸೀರೆ, ನೈಟಿ, ಮಿಡಿ, ಚೂಡಿದಾರ, ಜೀನ್ಸ್ ಪ್ಯಾಂಟ್, ಟೀಶರ್ಟ್, ಪಂಚೆ, ಲುಂಗಿಗಳನ್ನು ಹಾಕಲು ಪ್ರಾರಂಭಿಸಿದ್ದಾರೆ. ಇವರ ಉಡುಗೆ ತೊಡುಗೆಯ ಬಗ್ಗೆ ವಿಚಾರಿಸಿದರೆ "ನಮ್ ತಾತ ಮುತ್ತಾತಂದಿರು, ಮುತ್ತುಗದ ಎಲೆ, ತೇಗದ ಎಲೆಗಳಿಂದ ದೇಹ ಮುಚ್ಚಿಕೊಂಡು ಬದುಕುತ್ತಿದ್ದು, ನಮ್ಮ ಅಪ್ಪನ ಕಾಲದಲ್ಲಿ ಒಂದು ಲುಂಗಿ ತುಂಡನ್ನು ಎದೆಯಿಂದ ಮೊಣಕಾಲಿನವರೆಗೂ ಸುತ್ತಿಕೊಂಡು ಹೆಂಗಸರು ಜೀವ್ನ ಮಾಡಿದ್ರೆ, ಗಂಡಸ್ರು ಚಡ್ಡಿ, ಪುಟುಗೋಸಿ ಹಾಕಿಕೊಳ್ಳುವುದು ಸರ್ವೇಸಾಮಾನ್ಯವಾಗಿತ್ತು. ಇತ್ತೀಚಿನ ದಿನಗಳಲ್ಲಿ ಮೈತುಂಬ ಬಟ್ಟೆ ಹಾಕುತ್ತಿದ್ದೇವೆ ಎನ್ನುತ್ತಾರೆ.[೩] ವರ್ಷ, ಕೋಣನದೊಡ್ಡಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ದಿನಾಂಕ ೨೬-೭-೨೦೧೬).

ಫ್ರಾನ್ಸಿಸ್ ಬುಕಾನನ್ ಇರುಳಿಗರ ಉಡುಗೆ ತೊಡುಗೆ ಬಗ್ಗೆ ವಿವರಿಸುತ್ತಾ;

"Here they livein little huts near the villages and have a small, piece of blanket or cotton cloth to cover their nakedness, where the woods are more extensive, they are terrified at the sight of any civilized being and live absolutely without a few leaves)[೪]

ಜೊತೆಗೆ ಸ್ವಲ್ಪ ಸ್ಥಿತಿವಂತರಾದರೆ, ಕಾಲ್‌ಮುರಿ, ಕೈಕಡಗ, ಡಾಬೂ, ಚಿನ್ನದ ತಾಳಿ, ಗುಂಡು ಹಾಕುತ್ತಾರೆ. ಇರುಳಿಗರ ಉಡುಗೆ ತೊಡುಗೆ ಬಗ್ಗೆ ಎಡ್ಗರ್ ಥರ್‌ಸ್ಟನ್ ಹೀಗೆ ಹೇಳುತ್ತಾರೆ. "Hair Curly tied in a bunch behind round a black cotton swab. Wears a plain waist - cloth and print body - cloth worn square a cross breasts and reacling below the kness. tahooed on for head. A mass of grass bead necklaces gold ornament in leff. nostril brass ornanment in lobe of each ear. Eight brass bangless on right wrist two brass and six glass bangles on left wrist. Five brass rings on right first finger four brass and one time ringorrigut fore finger. Women aet. 25 Red cadjam(palm leaf) roll in dilated lobes of

ears. Brass and glass bead ornament in helix of right ear. Brass ornament in left nostril. A number of bead necklets. one with yong cowry shells pendent, another consisting of a heavy roll of black beads. The latter is very characteristic of Irula female adornment. one steel bangle eight brass bangles and chank shell bangle or right wristi three lead, six glass bangles and one glass bead bangle on left wrist. one steel and one brass on left finger women Act-35 wears loine cloth only. Breasts fleely exposed cap of Badaga pattern on head. Girl Act-8 Lo be of each earbeing dilated by a number of wooden sticks like matches.[೫]

ಎಲ್.ಕೆ. ಅನಂತಕೃಷ್ಣ ಅಯ್ಯರ್ ತಮ್ಮ ಕೃತಿಯಲ್ಲಿ 'ಇರುಳಿಗರ ಉಡುಗೆ ತೊಡುಗೆ ಬಗ್ಗೆ ಹೀಗೆ ವಿವರಿಸುತ್ತಾರೆ. "The Irulas, as their name in dicated(irul-black) is the darkest of the hill tribes of southern India they possess the negroid traits(Short Stature plat nose and promiment Cheek boness. Curly or wavg hair and narrow fore heads). At one time these poor people went also lutely nakes. Slept under tres. Possesed the power of charming tigers so as to prevent these ferocious animals for doing them any injury; But now the males are scantily dressed. like the kadars of the cochine forest, they are found of wearing shirts and coats when they lan afford they keep locks of head and face. The ordinary dress of the Iruligas woment is a body - cloth of striped cotton worm straiglt a cross the breasts and reaching below the knees with a print cotton cloth over their shoulders and tied in to a knot in front the long crisp or wavyhair fallings in heary masses of both sides of the head without and any parting in the middee".[೬]

ಒಟ್ಟಾರೆಯಾಗಿ ಇರುಳಿಗರು ಇತ್ತೀಚಿನ ದಿನಮಾನಗಳಲ್ಲಿ ಪಟ್ಟಣ, ಸಿನಿಮಾ ಮತ್ತು ಸುತ್ತಮುತ್ತಲಿನ ಪರಿಸರದ ಪ್ರಭಾವದಿಂದ ತಾವು ಎಲ್ಲರಂತೆ ಉಡುಗೆ ತೊಡುಗೆಗಳನ್ನು ಬಳಸುತ್ತಿದ್ದಾರೆ. ಹಿಂದೆ ಇರುಳಿಗರ ಹೆಂಗಸರು ಕೈಗಳಿಗೆ ಕೆಂಪು ಸಾಣೆ ಮಣ್ಣಿನ ಬಳೆಗಳನ್ನು ಹಾಕಿಕೊಳ್ಳುತ್ತಿದ್ದರು. ತಾಳಿ, ಕಾಲುಂಗುರಗಳು ಇವರಲ್ಲಿ ಇತ್ತೀಚೆಗೆ ಪರಿಚಯವಾಗಿದೆ ಎಂದೂ ವಕ್ತೃಗಳೇ ಹೇಳುತ್ತಾರೆ. ಇಂದು ತಾಳಿ ಕಾಲುಂಗುರಗಳೇ ಮದುವೆ ಸಂಕೇತವಾಗಿರುವಾಗ ಇರುಳಿಗರು ಹೆಣ್ಣು ಗಂಡು ಜೊತೆಯಾಗಿ ಬಾಳುವುದೇ ಮದುವೆಯಾದಂತೆ ಎಂದು ನಂಬಿಕೊಂಡಿದ್ದರು. ಚಿನ್ನ, ಬೆಳ್ಳಿ ವಸ್ತುಗಳು ಇವರಿಗೆ ಇತ್ತೀಚೆಗೆ ಪರಿಚಯವಾದಂತೆ ಕಂಡುಬರುತ್ತದೆ.

ಮಣ್ಣು ಮರದ ವಸ್ತುಗಳೇ ಇವರ ಸಂಗಾತಿಗಳಾಗಿದ್ದವು. ಹಣೆಗೆ ಕುಂಕುಮ ಇಟ್ಟುಕೊಳ್ಳುತ್ತಾರೆ. ಗಂಡಸರಾದರೆ ವಿಭೂತಿ ಧರಿಸುತ್ತಾರೆ. ಒಂದು ನಿಕ್ಕರ್(ಚಡ್ಡಿ)ನಲ್ಲಿಯೇ ವರ್ಷ ಕಳೆಯುತ್ತಾರೆ. ಹಬ್ಬ, ಹರಿದಿನಗಳಲ್ಲಿ ಹೊರಗಡೆ ಹೋಗಲು ಪಂಚೆಯನ್ನು ಬಳಸುತ್ತಾರೆ. ಇಲ್ಲವಾದರೆ ಶರ್ಟ್ ಮತ್ತು ಚೆಡ್ಡಿಯಲ್ಲಿಯೇ ಇರುತ್ತಾರೆ. ಹೆಂಗಸರು ಸೀರೆ, ಜಾಕೀಟು, ಲಂಗವನ್ನು ಬಳಸುತ್ತಾರೆ. ಹಿತ್ತಾಳೆ ತಾಳಿ, ಮೂಗುತಿ, ಕಿವಿ ಓಲೆಗಳು ಇರುಳಿಗರ ಸಾಮಾನ್ಯ ಆಭರಣಗಳಾಗಿ ಕಂಡುಬರುತ್ತವೆ. ಅದಕ್ಕೆ ಚಿನ್ನದ ನೀರನ್ನು ಹಾಕಿಸಿಕೊಂಡು ಪ್ರತಿದಿನ ಬಳಸುತ್ತಾರೆ. ಕೈಗೆ ಗಾಜಿನ ಬಳೆಗಳನ್ನು ಹಾಕಿದ್ದು ಚಿನ್ನವಂತು ಇವರ ಕೈಗೆ ಎಟುಕದ ವಸ್ತುವಾಗಿದೆ.

ಇರುಳಿಗರಲ್ಲಿ ಹಾಕಿಸಿಕೊಳ್ಳುವುದು(ಹಚ್ಚೆ)ಹೆಚ್ಚು ಪ್ರಚಾರದಲ್ಲಿದ್ದು ವ್ಯಕ್ತಿ ಸತ್ತ ಮೇಲು ಹಸಿರು ತಮ್ಮ ಹಿಂದೆಯೇ ಬರುತ್ತದೆ ಎಂದು ನಂಬಿಕೊಂಡಿದ್ದಾರೆ. ಪರಸ್ಪರ ಪ್ರೀತಿಸುವವರು, ಅಣ್ಣ, ತಂಗಿ, ಸ್ನೇಹಿತರು ತಮ್ಮ ನೆನಪಿಗಾಗಿ ಹಸಿರು ಉಳಿಸಿಕೊಳ್ಳುವುದನ್ನು ಕಾಣಬಹುದು. ಸಾಮಾನ್ಯವಾಗಿ ಮುಂಗೈ, ಹಣೆ, ಗಲ್ಲ, ಮೊಣಕೈ, ಹಸ್ತದ ಮೇಲ್ಭಾಗದ ತೋಳುಗಳಲ್ಲಿ ಹಚ್ಚೆ ಹಾಕಿಸಿಕೊಳ್ಳುತ್ತಾರೆ.

ಪ್ರೀತಿಯ ನೆನಪಿಗಾಗಿ ಕೊಡುವ ಯಾವ ವಸ್ತುಗಳು ಹಸಿರು(ಹಚ್ಚೆ)ಯಷ್ಟು ಸ್ಥಾನ ಪಡೆಯುವುದಿಲ್ಲ ಎಂದು ಇವರು ನಂಬಿಕೊಂಡಿದ್ದಾರೆ. ಪ್ರೀತಿಪಾತ್ರರು ಸತ್ತರೆ ಅವರು ಹಾಕಿಸುವ ಹಸಿರು(ಹಚ್ಚೆ) ತಮ್ಮ ಸಂಗಡ ಸಾಯುವವರೆಗೂ ಜೊತೆ ಇರುತ್ತದೆ ಎಂಬ ಭಾವನಾತ್ಮಕ ಸಂಬಂಧವನ್ನು ಹೊಂದಿದ್ದಾರೆ. ಈ ಹಚ್ಚೆ ಹಸಿರುಗಳ ನೆನಪುಗಳು ಹಚ್ಚೆ ಹಾಕಿಸಿದ ವ್ಯಕ್ತಿ ಸತ್ತು ತನ್ನ ಸ್ನೇಹಿತನಿಗೆ ಕಾಟ ಕೊಟ್ಟಿರುವ ಬಹುತೇಕ ಘಟನೆಗಳು ಇರುಳಿಗರಲ್ಲಿ ಸಂಭವಿಸಿದ್ದರ ಬಗ್ಗೆ ವಕ್ತೃಗಳು ಹೇಳುತ್ತಾರೆ.

ಸಾಮಾನ್ಯವಾಗಿ ಈ ಹಚ್ಚೆ ತಯಾರಿಸುವ ವಿದ್ಯೆ ಇವರಿಗೆ ಗೊತ್ತಿದೆ. ಹೊನ್ನಗೋನೆಸೊಪ್ಪು, ಬೆಟ್ಟದ ನೆಲ್ಲಿಕಾಯಿ ಸೊಪ್ಪು, ವಿಷದುಂಬೆ ಸೊಪ್ಪು ಅವರೆ ಸೊಪ್ಪು, ಹಾಗಲಸೊಪ್ಪು ಮುಂತಾದವುಗಳಲ್ಲಿ ಯಾವುದಾದರೂ ಎರಡನ್ನು ತೆಗೆದುಕೊಂಡು ಹಚ್ಚೆ ಸೊಪ್ಪಿನ ಜೊತೆ ಸೇರಿಸಿ ಅದಕ್ಕೆ ಎದೆಹಾಲು, ದೀಪದ ಕಿಟ್ಟ(ಕಾಡಿಗೆ)ಯನ್ನು ಬೆರೆಸಿ ಅರೆದು ಹಚ್ಚೆ ರಸವನ್ನು ತಯಾರಿಸುತ್ತಾರೆ. ಮೊದಲು ಹಚ್ಚೆಯ ಚಿತ್ತಾರವನ್ನು ಬರೆದು ಅದರ ಮೇಲೆ ಕಾರೆ ಮುಳ್ಳು, ಹಸಿ ನಿಂಬೆ ಮುಳ್ಳನ್ನು ಅಥವಾ ಸೂಜಿಯಿಂದ ಚಿತ್ತಾರದ ಮೇಲೆ ಚುಚ್ಚಿ ಅದಕ್ಕೆ ಹಚ್ಚೆ ರಸವನ್ನು ಬಿಡುತ್ತಾರೆ. ಹಚ್ಚೆರಸ ಚರ್ಮದ ಒಳಗಡೆ, ಹೋದ ಮೇಲೆ ಅರಿಶಿಣವನ್ನು ಸವರುತ್ತಾರೆ. ಹಚ್ಚೆ ಚುಚ್ಚಿದ ಎರಡು ಮೂರು ದಿನಗಳಲ್ಲಿ ಹಚ್ಚೆ ಚಿತ್ತಾರ ಕಂಗೊಳಿಸುತ್ತವೆ. ಈ ಸಂದರ್ಭದಲ್ಲಿ ಜ್ವರ ಬರುವುದು ಸಾಮಾನ್ಯವಾಗಿರುತ್ತದೆ ಎಂದು ನಂಬಿಕೊಂಡಿದ್ದಾರೆ.

ಹಸಿರು ಹೊಯ್ದುಕೊಳ್ಳುವುದು, ಹಚ್ಚೆ ಹಾಕಿಕೊಳ್ಳುವುದು ಆದಿವಾಸಿಗಳಲ್ಲಿ ಪರಂಪರೆ ಯಿಂದಲೂ ಬಂದಿರುವುದಾಗಿ ಗುರುತಿಸಬಹುದು. ಏಕೆಂದರೆ ಹಚ್ಚೆಯನ್ನು ಇರುಳಿಗರು ಕೇವಲ

ಅಲಂಕಾರದ ಸಂಕೇತವಾಗಿ ಬಳಸದೇ ಗಿಡಮೂಲಿಕೆಯ ಔಷಧಿಯಾಗಿ ನಂಬಿಕೊಂಡಿದ್ದಾರೆ. ಚರ್ಮರೋಗ, ಲಕ್ವ, ಸನ್ನಿ, ಸ್ನಾಯು ಸೆಳೆತ ಮುಂತಾದ ನರಕ್ಕೆ ಸಂಬಂಧಿಸಿದ ಕಾಯಿಲೆಗಳಿಗೆ ಈ ಹಚ್ಚೆ ಮದ್ದಾಗಿ ಕಂಡುಬರುತ್ತದೆ. ಹಚ್ಚೆಯ ಮೂಲಕ ಗಿಡಮೂಲಿಕೆಯ ರಸ ಚರ್ಮದಲ್ಲಿ ಸೇರಿಕೊಳ್ಳುತ್ತದೆ. ಈ ಹಚ್ಚೆಗಳನ್ನು ಥೈರಾಯಿಡ್, ನಿರ್ನಾಳ ಗ್ರಂಥಿ ರಕ್ತ ಪರಿಸರಣ ನರಗಳ ಮೇಲೆ ಹಾಕಿಸಿಕೊಳ್ಳುವುದು ಕಾಣಬಹುದು. ಇದು ನರ ಸಂಬಂಧಿ ಕಾಯಿಲೆಗಳಿಂದ ರಕ್ಷಣೆ ನೀಡುತ್ತದೆ ಎನ್ನಬಹುದು.

ಇರುಳಿಗರಲ್ಲಿ ಈ ಹಚ್ಚೆ ಚಿತ್ತಾರವು, ಹುಲಿಯುಗುರು, ರಂಗೋಲಿ, ಚುಕ್ಕೆಗಳು, ವನಗುಂಡು, ತೊಟ್ಲು, ಗೌರಿಗದ್ದಿಗೆ, ತೇರು ಎಲೆ, ಗಿಂಡಿ ಚಿತ್ರಗಳನ್ನು ಕಾಣಬಹುದು. ಕೈ ಮೇಲೆ ಗಿಂಡಿಯಿಲ್ಲದವಳು ಗಂಡನಿಗೆ ನೀರು ಕೊಟ್ಟರೆ ಶ್ರೇಯಸ್ಸು ಆಗದೆಂಬ ನಂಬಿಕೆ ಇವರಲ್ಲಿದೆ. ಮದುವೆಯಲ್ಲಿ ಅಥವಾ ಇನ್ನಿತರ ಶುಭ ಕಾರ್ಯದ ಸಂದರ್ಭದಲ್ಲಿ ಹಚ್ಚೆ ಹೊಯ್ದುಕೊಂಡಿರುವ ಹೆಂಗಸಿಗೆ ಹೆಚ್ಚು ಮಣೆ ಹಾಕುತ್ತಾರೆ. ಹಚ್ಚೆ ಇರುಳಿಗರಲ್ಲಿ ಶ್ರೇಷ್ಠತೆ ಮತ್ತು ದೈವತ್ವದ ನಂಬಿಕೆಯಿಂದ ಗುರುತಿಸಿಕೊಳ್ಳುತ್ತದೆ.

ಒಟ್ಟಾರೆಯಾಗಿ ಇರುಳಿಗರಲ್ಲಿ ಒಂದೇ ನಿರ್ದಿಷ್ಟವಾದ ಉಡುಗೆ ತೊಡುಗೆಗಳು ಕಂಡುಬರುವುದಿಲ್ಲ ಮತ್ತು ಇವರ ಎಲ್ಲಾ ಉಡುಗೆ-ತೊಡುಗೆಗಳು ಬಹುಪಾಲು ಕಾಡನ್ನೇ ಅವಲಂಬಿಸಿರುವುದು ಗೊತ್ತಾಗುತ್ತದೆ. ಬಟ್ಟೆ ಇರುವುದು ದೇಹ ರಕ್ಷಣೆಗೆ ಹೊರತು ಮಾನ ರಕ್ಷಣೆಗಲ್ಲ ಎಂಬ ನಂಬಿಕೆ ಇವರಲ್ಲಿದ್ದಂತೆ ಕಾಣುತ್ತದೆ.

ಹೊಟ್ಟೆಯಲ್ಲಿರುವುದು ಯಾರು ನೋಡಿಯಾರೂ? ಬಟ್ಟೆಯನ್ನು ನೋಡಿ ಅಳೆಯುತ್ತಾರೆ ಎಂಬ ಕಿವಿಮಾತು ಇವರಿಗೆ ತಿಳಿಯದಂತೆ ಕಂಡುಬರುತ್ತದೆ. ಇದಕ್ಕೆ ಅವರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವುದು ಕಾರಣವಾಗಿದೆ. ಅವರ ಮನೋಭಾವನೆಯಲ್ಲೇ ಆಡಂಬರವನ್ನು ಒಪ್ಪದವರಾಗಿ ವ್ಯಕ್ತವಾಗುತ್ತದೆ.

ಮದುವೆ ಸಂದರ್ಭದಲ್ಲಿ ಉಡುಗೆ ತೊಡುಗೆಗಳು ಇತ್ತೀಚಿನ ದಿನಗಳಲ್ಲಿ ಹೊಸ ರೂಪ ಪಡೆದುಕೊಂಡಿವೆ. ಹಿಂದೆ ಮದುವೆಗೆ ನಿರ್ದಿಷ್ಟ ಸ್ಥಾನಮಾನ ಕೊಡದ ಇವರು ಹುಟ್ಟು ಬಟ್ಟೆಯಲ್ಲೇ ಮರ ಸುತ್ತಿ ಮದುವೆ ಮುಗಿಸಿಕೊಳ್ಳುತ್ತಿದ್ದರು. ಆದರೆ ಆಧುನಿಕತೆಯ ಪ್ರಭಾವವು ಅಥವಾ ಇವರು ನಗರ ಗ್ರಾಮಗಳಲ್ಲಿ ವಾಸ ಮಾಡಿದ್ದರಿಂದ ಎಲ್ಲರಂತೆಯೂ ಇವರು ಕೂಡ ಬದುಕಲು ಪ್ರಾರಂಭ ಮಾಡಿದ್ದಾರೆ. ಇರುಳಿಗರ ಮದುವೆಯಲ್ಲಿ ಗಂಡಿಗೆ ಬಿಳಿಪಂಚೆ, ಬಿಳಿ ಶರ್ಟ್, ಪಟಪಟೆ ನಿಕ್ಕರ್, ಟವಲ್, ತಲೆಗೆ ಮೈಸೂರು ಪೇಟ ಹಾಕುತ್ತಾರೆ. ಹೆಣ್ಣಿಗೆ ಬಿಳಿ ರೇಷ್ಮೆ ಸೀರೆ, ಜಾಕೇಟ್ ಹಾಕಿರುತ್ತಾರೆ. ಕೈಗಳಿಗೆ ಕಂಕಣದ ಬಳೆ, ಕಾಲಿನ ಎರಡು ಬೆರಳಿಗೆ ಕಾಲುಂಗುರ ಮೂಗಿಗೆ ಮೂರುಹರಳು ಅಥವಾ ಎರಡು ಹರಳಿನ ಮೂಗುತಿ ಹಾಕಿರುತ್ತಾರೆ.

ಮಧುವಣಗಿತ್ತಿ ತಾಳಿ ಕಟ್ಟುವ ಸಮಯದಲ್ಲಿ ಬಿಳಿಸೀರೆ ಉಟ್ಟಿರಲೇಬೇಕು. ವಿವಾಹದ ಗುರುತಾಗಿ ಈಗ ಕರಿಮಣಿ ತಾಳಿ ಮತ್ತು ಕಾಲುಂಗುರಗಳನ್ನು ಹಾಕಿಕೊಳ್ಳುತ್ತಾರೆ. ಆದರೆ ಹಿಂದೆ ಈ ಯಾವ ತರಹದ ಗುರುತುಗಳನ್ನು ಇರುಳಿಗರಲ್ಲಿ ಕಾಣದಿರುವುದನ್ನು ವಕ್ತೃಗಳ ವಿವರಿಸುತ್ತಾರೆ. ವಿಧವೆಯರು ಇರುಳಿಗರಲ್ಲಿ ಬೆರಳೆಣಿಕೆಯಲ್ಲಿ ಮಾತ್ರ ಕಾಣಬಹುದು. ಗಂಡ ಸತ್ತ ನಂತರ ಹೆಣ್ಣು ಒಂಟಿಯಾಗಿ ಬದುಕದೆ ಇನ್ನೊಬ್ಬ ಗಂಡನ್ನು ಆರಿಸಿಕೊಳ್ಳಲು ಸಮುದಾಯ ಮುಕ್ತ ಅವಕಾಶ ನೀಡುತ್ತದೆ. ಆದರೂ ಇತ್ತೀಚಿನ ದಿನಗಳಲ್ಲಿ ವಿಧವೆಯಾದ ಹೆಂಗಸು, ತಾಳಿ, ಕಾಲುಂಗುರ, ಕುಂಕುಮ, ಹೂಗಳಿಂದ ದೂರ ಉಳಿಯಬೇಕಾಗಿದೆ.

೫.೩. ಹಬ್ಬ-ಹರಿದಿನಗಳು

ಭಾರತದ ತಳಸಮುದಾಯಗಳಲ್ಲಿನ ಆಚರಣೆಗಳು ಆಯಾ ಸಮುದಾಯದ ಚಾರಿತ್ರಿಕ ದಾಖಲೆಗಳ ಆಕರಗಳಾಗಿರುತ್ತವೆ. ಅದರಲ್ಲೂ ಬುಡಕಟ್ಟುಗಳಲ್ಲಿನ ಆಚರಣೆಗಳು ಮತ್ತು ಅವರು ಆರಾಧಿಸುವ ದೈವಗಳು ಪರಂಪರಾನುಗತವಾಗಿ ಸಮುದಾಯದೊಳಗೆ ಬೆರೆತು ಹೋಗಿರುತ್ತವೆ. ಪ್ರತಿಯೊಂದು ಬುಡಕಟ್ಟು ಸಮುದಾಯಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಚಾರಿತ್ರಿಕ ಅಂಶಗಳು ಅವರು ಆರಾಧಿಸುವ ದೈವ ಮತ್ತು ವಿಧಿವಿಧಾನಗಳಲ್ಲಿ ಕೇಂದ್ರೀಕೃತ ಗೊಂಡಿರುತ್ತವೆ. ಇವುಗಳ ಚರಿತ್ರೆಯನ್ನು ಅಧ್ಯಯನ ಮಾಡುವ ಯಾರೇ ಆದರೂ ಮೊದಲು ಇವುಗಳನ್ನು ಸೂಕ್ಷ್ಮವಾಗಿ ಗಮನಿಸಬೇಕಾದದ್ದು ಅತ್ಯವಶ್ಯಕ.

ಏಕೆಂದರೆ ಒಂದು ದೇವತೆ ಅಥವಾ ಒಂದು ಹಬ್ಬ ಆ ಸಮುದಾಯ ತನ್ನ ಜೀವಮಾನದಲ್ಲಿ ತಮ್ಮ ಸಮಸ್ಯೆಗಳಿಗೆ ಕಂಡುಕೊಂಡ ಉತ್ತರವೇ ಆಗಿರುತ್ತದೆ ಹಾಗೂ ಆ ಸಮುದಾಯದ ಮೂಲ ಪರಂಪರೆಯ ಪ್ರತೀಕವಾಗಿರುತ್ತವೆ.

ಡಾ. ಸಿದ್ಧಲಿಂಗಯ್ಯ ಅವರು ಹೇಳುವಂತೆ "ವಿಶಿಷ್ಟವೂ, ವೈವಿಧ್ಯಮಯವೂ ಆದ ಬುಡಕಟ್ಟು ಸಂಸ್ಕೃತಿಯನ್ನು ವಿವರಿಸಲು ಬುಡಕಟ್ಟುಗಳು ಹೇಳುವ ಪುರಾಣಗಳು, ಆರಾಧಿಸುವ ದೈವಗಳು, ಆಚರಿಸುವ ಧಾರ್ಮಿಕ ವಿಧಿ-ವಿಧಾನಗಳು ಬಹಳ ಸಹಕಾರಿಯಾಗುತ್ತವೆ. ಆದ್ದರಿಂದ ಈ ಸಂಸ್ಕೃತಿಯನ್ನು ಅರ್ಥೈಸುವ ಯಾರೇ ಆಗಲಿ ಬಡಕಟ್ಟು ಪುರಾಣ ಪ್ರಪಂಚವನ್ನು ಎಚ್ಚರಿಕೆಯಿಂದ ಪ್ರವೇಶಿಸಬೇಕು. ಏಕೆಂದರೆ ಶಿಷ್ಟ ದೇವತೆಗಳಲ್ಲದ ವೈವಿಧ್ಯ, ವೈಚಿತ್ರ್ಯವನ್ನು ಈ ಬುಡಕಟ್ಟು ದೇವತೆಗಳು ಅಥವಾ ಅವುಗಳ ಪುರಾಣಗಳು ಹೇಳುತ್ತಿರುತ್ತವೆ.[೭]

ಈ ಹಿನ್ನೆಲೆಯಿಂದ ತಳಸಮುದಾಯ ಅಥವಾ ಬುಡಕಟ್ಟುಗಳನ್ನು ಕುರಿತು ಅಧ್ಯಯನ ಮಾಡುವವರಿಗೆ ಬುಡಕಟ್ಟುಗಳು ಆರಾಧಿಸುವ ದೈವಗಳು, ಆಚರಿಸುವ ಹಬ್ಬಹರಿದಿನಗಳು ಮತ್ತು ಅವರು ತಲತಲಾಂತರದಿಂದ ಪಾಲಿಸಿಕೊಂಡು ಬಂದ ವಿಧಿ-ವಿಧಾನಗಳು ಅತ್ಯವಶ್ಯಕ

ಚಾರಿತ್ರಿಕ ದಾಖಲೆಗಳಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಆದರೆ ಬ್ರಾಹ್ಮಣರ ಸಾಂಸ್ಕೃತಿಕ ರಾಜಕಾರಣದ ಸಂವೇದನೆ ತಿಳಿದಿರಬೇಕು. ಇಲ್ಲವಾದರೆ ಬುಡಕಟ್ಟು ಕುರಿತ ಚರಿತ್ರೆ ಅಸ್ಪಷ್ಟವಾಗುತ್ತದೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡಾಗ ಮಾತ್ರ ಬುಡಕಟ್ಟುಗಳ ದೈವದ ಮೂಲಕ ಆಯಾ ಸಮುದಾಯದ ಚರಿತ್ರೆ ನಿರ್ಮಿಸಬಹುದು.[೮]

ಭಾರತದ ಸಂಸ್ಕೃತಿಯನ್ನು ಅಧ್ಯಯನಕಾರರು, ಆದಿವಾಸಿ ಸಂಸ್ಕೃತಿ, ಆರ್ಯ ಸಂಸ್ಕೃತಿ, ದ್ರಾವಿಡ ಸಂಸ್ಕೃತಿ ಎಂಬ ಮೂರು ಭಾಗಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಿರುವುದನ್ನು ಕಾಣಬಹುದು.

ಮೊದಲನೆಯದಾಗಿ, ಐವತ್ತು ಸಾವಿರ ವರ್ಷಗಳ ಹಿಂದೆ ಭಾರತಕ್ಕೆ ಮೊಟ್ಟ ಮೊದಲು ಕಾಲಿಟ್ಟ ಆದಿವಾಸಿಗಳು, ಇವರೇ ಈ ನೆಲದ ಮೂಲ ನಿವಾಸಿಗಳು ಇವರನ್ನು ದ್ರಾವಿಡ ಪೂರ್ವ ಜನಾಂಗ ಎಂದು ಕರೆಯುತ್ತಾರೆ. Anthropological terminologyಯಲ್ಲಿ ಇವರನ್ನು ಪ್ರೋಟೋ ಆಸ್ಟ್ರೋಲಾಯ್ಡ್ ಮತ್ತು ಆಸ್ಟ್ರೋ ಏಷಿಯಾಟಿಕ್ಸ್ ಎಂದು ಕರೆಯುತ್ತಾರೆ. ಇವರು ಲಿಂಗ ಆರಾಧಕರು ಇವರನ್ನು ಲಿಂಗ ಸಂಸ್ಕೃತಿಯವರು ಅಥವಾ ಲಿಂಗ ಸಂಸ್ಕೃತಿ ಜನಾಂಗ ಎಂದು ಗುರುತಿಸಬಹುದು. ಇವರು ಪೂರ್ವಿಕ ಪಿತೃವಿನ ಆರಾಧಕರು Anciptle worshipers ಎಂಬ ಪರಂಪರೆಗೆ ಸೇರಿದವರು. ಇವರು ೫೦ ಸಾವಿರ ವರ್ಷಗಳ ಹಿಂದೆ ಈ ನೆಲಕ್ಕೆ ಕಾಲಿಟ್ಟವರು.

ಎರಡನೆಯದಾಗಿ, ಆಸ್ಟ್ರೋಲಾಯ್ಡ್ ಎನ್ನುವ ದ್ರಾವಿಡ ಭಾಷೆಯನ್ನಾಡುವ ಜನ. ಇವರು ಹನ್ನೆರಡರಿಂದ ಹದಿನೈದು ಸಾವಿರ ವರ್ಷಗಳ ಅವಧಿಯಲ್ಲಿ ಗುಜರಾತಿನ ಭಾಗದಿಂದ ಭಾರತಕ್ಕೆ ಬಂದವರು. ಇವರನ್ನು ಶಿವಸಂಸ್ಕೃತಿಯವರು ಎಂದು ಕರೆಯುತ್ತಾರೆ. ಇವರು ಪಿತೃಆರಾಧಕರು ಹೌದು. ಹಾಗೆಯೇ ಸಮನಾಗಿ ಮಾತೃ ಆರಾಧಕರು ಹೌದು. ದ್ರಾವಿಡ ಭಾಷೆಯಲ್ಲಿರುವ ಅರ್ಧನಾರೀಶ್ವರ ಪರಿಕಲ್ಪನೆಯು ಇದರಿಂದಲೇ ಬಂದಿರುವುದು. ಇವರನ್ನು ದ್ರಾವಿಡರು ಎಂದು ಕರೆಯುತ್ತಾರೆ.

ಮೂರನೆಯದಾಗಿ, ಆರ್ಯ ಭಾಷೆಯನ್ನಾಡುವ, ಮಧ್ಯ ಏಷ್ಯಾದಿಂದ ಬಂದು ಅಗ್ನಿ ಆರಾಧಿಸುವ, ಯಜ್ಞಯಾಗಾದಿ ಮಾಡುವ ಯಜಮಾನ ಸಂಸ್ಕೃತಿಯವರು. ಇವರನ್ನು ಮಾನವಶಾಸ್ತ್ರಜ್ಞರು ಕಕೇಸಿಯನ್ ಜನಾಂಗ ಎಂದು ಕರೆಯುತ್ತಾರೆ. ಹಾಗೆಯೇ ಇವರಿಗೆ ರುದ್ರ ಸಂಸ್ಕೃತಿಯವರು ಎಂಬ ಹೆಸರು ಇದೆ.[೯]

ಈ ಮೂರು ಭಾಗಗಳಲ್ಲಿ ಮೊದಲನೆ ಸ್ಥಾನದ ಪ್ರೋಟೋ ಆಸ್ಟ್ರೋಲಾಯ್ಡಾ ಮತ್ತು ಆಸ್ಟ್ರೋ ಏಷಿಯಟಿಕ್ ಜನಾಂಗಕ್ಕೆ ಸೇರಿದ ದ್ರಾವಿಡ ಪೂರ್ವಜನರ ಎಲ್ಲಾ ಕುರುಹುಗಳನ್ನು

ನಾವು ಇರುಳಿಗ ಬುಡಕಟ್ಟಿನಲ್ಲಿ ಕಾಣಬಹುದಾಗಿದೆ. ಏಕೆಂದರೆ ದ್ರಾವಿಡ ಪೂರ್ವ ಜನಾಂಗವಾದ ಇವರು ಇಂದಿಗೂ ಪೂರ್ವಿಕ ಪಿತೃಗಳನ್ನು ತಮ್ಮ ದೈವಗಳೆಂದು ನಂಬಿ ಪೂಜಿಸಿಕೊಂಡು ಬಂದಿದ್ದಾರೆ. ಇವರು ಪೂಜಿಸುವ ದ್ಯಾವರಳಾಮ್ಮ, ಮದ್ದೂರಮ್ಮ, ಎಳೆಯಮ್ಮ, ಬರಿಯಮ್ಮ, ಕಬ್ಬಾಳಮ್ಮ, ಬಾಣಂತಿ ಮಾರಮ್ಮ, ಹಲಗಮ್ಮ, ಈರಮಾಸ್ತಿ ಕೆಂಪಮ್ಮ ಮುಂತಾದ ದೈವಗಳು ಇವರ ಹಿಂದಿನ ತಲೆಮಾರಿನವರೇ ಎಂಬುವುದಕ್ಕೆ ಹಲವಾರು ಐತಿಹ್ಯ ಮತ್ತು ಪುರಾಣಗಳು ಸಿಗುತ್ತವೆ.

ಇರುಳಿಗರು ಪೂಜಿಸುವ ದೈವಗಳಿಗೆ ಒಂದು ನಿರ್ದಿಷ್ಟವಾದ ಆಕಾರ ಕಂಡು ಬರುವುದಿಲ್ಲ. ನುಣುಪಾದ ಕರಿಯಕಲ್ಲಿಗೆ ಅರಿಶಿಣ, ಕುಂಕುಮ ವಿಭೂತಿ ಹಚ್ಚಿ ತಮ್ಮ ಪೂರ್ವಿಕ ಪಿತೃಗಳ ಹೆಸರಿನಲ್ಲಿ ಪೂಜಿಸುತ್ತಾರೆ. ಇವರಿಗೆ ಶೈವ, ವೈಷ್ಣವ ಪಂಥಗಳ ಭಿನ್ನತೆ ಇದ್ದಂತೆ ಕಂಡು ಬರುವುದಿಲ್ಲ. ತಮ್ಮ ಪೂರ್ವಿಕ ಪಿತೃಗಳನ್ನು ಹಿರೀಕರೆಂಬ ಹೆಸರಿನಲ್ಲಿ, ಕಲ್ಲು ಗುಂಪುಗಳ ಸಂಕೇತವಾಗಿಸಿಕೊಂಡು, ಆಲೇಮರದ ಕೆಳಗೆ ಸಾಲಾಗಿ ಜೋಡಿಸಿಟ್ಟು ಪೂಜೆ ಮಾಡುತ್ತಾರೆ. ಈ ಕಲ್ಲುಗಳನ್ನೇ ತಮ್ಮ ಕುಲದೈವಗಳಾಗಿ ನಂಬಿ ಆರಾಧಿಸುವುದನ್ನು ಕಾಣಬಹುದು. ದ್ಯಾವರಾಳಮ್ಮ, ಕಬ್ಬಾಳಮ್ಮ, ಮದ್ದೂರಮ್ಮ, ಈರಮಾಸ್ತಿ ಕೆಂಪಮ್ಮ, ಹಲಗಮ್ಮ, ಮಾದೇಶ್ವರ, ಈರಭದ್ರಸ್ವಾಮಿ, ಕಳ್ಳಳ್ಳಿಯಪ್ಪ, ಯಂಕ್ಟ್ರೋಣ್‌ಸ್ವಾಮಿ, ತೆಳ್ಳೂರಮ್ಮ, ನಂಜುಂಡೇಶ್ವರ, ಮುತ್ತತ್ತಿರಾಯ, ಮುನಿಯಪ್ಪ ಮುಂತಾದ ದೈವಗಳ ಒಕ್ಕಲುಗಳಾಗಿ ತಮ್ಮ ದೈವಗಳನ್ನು ತಮ್ಮದೇ ಆದ ರೀತಿ ರಿವಾಜುಗಳಲ್ಲಿ ಪೂಜಿಸಿಕೊಂಡು ಬರುತ್ತಿದ್ದಾರೆ.

ಇರುಳಿಗರಲ್ಲಿ ಕಂಡುಬರುವ ಪ್ರಮುಖ ಹಬ್ಬ-ಹರಿದಿನಗಳು

ಇರುಳಿಗರು ಹಬ್ಬ -ಹರಿದಿನಗಳನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಪ್ರತಿನಿತ್ಯ ತಮ್ಮ ಹಸಿವಿನ ಚೀಲ ತುಂಬಿಸಿಕೊಳ್ಳಲು ಕಾಡುಮೇಡು ಅಲೆಯುವುದರಲ್ಲೇ ಕಾಲ ಕಳೆಯುವುದರಿಂದ ಹಬ್ಬ-ಹರಿದಿನಗಳ ಅರಿವು ಇವರಿಗೆ ಬರುವುದಿಲ್ಲ. ಇತ್ತೀಚಿನ ದಿನಮಾನಗಳಲ್ಲಿ ಅರಣ್ಯ ಒತ್ತುವರಿಯಾಗಿ ಗ್ರಾಮಗಳು ಇವರ ವಾಸದ ಪ್ರದೇಶಕ್ಕೆ ಬಂದಿದ್ದರಿಂದ ಗ್ರಾಮ ಮತ್ತು ನಗರ ಪ್ರದೇಶದ ಸಂಸ್ಕೃತಿ ಇವರಲ್ಲಿ ಹಬ್ಬ-ಹರಿದಿನಗಳ ವಾತಾವರಣ ಉಂಟುಮಾಡುತ್ತಿವೆ. ಈ ಹಬ್ಬಗಳಿಗೂ ಇರುಳಿಗರಿಗೆ ಯಾವುದೇ ಪೂರ್ವಿಕ ನಂಟು ಇಲ್ಲದೇ. ಸುತ್ತಮುತ್ತಲಿನ ಸಮಾಜದ ಅನುಕರಣೆಯಲ್ಲಿ ತೊಡಗಿಕೊಳ್ಳುತ್ತಾರೆ. ದೀಪಾವಳಿ, ಶ್ರಾವಣ, ಆಯುಧ ಪೂಜೆ, ಗೌರಿ, ಯುಗಾದಿ, ಸಂಕ್ರಾಂತಿ ಮುಂತಾದ ಹಬ್ಬಗಳು ಇತ್ತೀಚಿನ ದಿನಮಾನಗಳಲ್ಲಿ ಇರುಳಿಗರಲ್ಲೂ ಆಚರಣೆಗೊಳಪಡುತ್ತಾ ಬಂದಿವೆ.

ಇರುಳಿಗರಲ್ಲಿ ಯುಗಾದಿ ಹಬ್ಬವು ಒಂದು ವಿಶಿಷ್ಟ ಸ್ಥಾನಮಾನ ಪಡೆದುಕೊಂಡಿದೆ. ಯುಗಾದಿಯ ದಿನ ಹಳ್ಳಕೊಳ್ಳಗಳಿಗೆ ಹೋಗಿ ನೀರು ಹ್ಯೊದುಕೊಂಡು, ಬಟ್ಟೆ ಬರೆ ಒಗೆದುಕೊಂಡು

ರಾತ್ರಿ ಸಮಯಕ್ಕೆ ಕಾಡಿನಲ್ಲಿ ಸಿಗುವ ಕೆಲವು ಗಿಡಮೂಲಿಕೆಗಳೊಂದಿಗೆ ಮನೆಗೆ ಹಿಂದಿರುಗುತ್ತಾರೆ. ಮನೆಯಲ್ಲಿ ಹೊಸ ಬಟ್ಟೆ ತೊಟ್ಟುಕೊಂಡು ಮನೆಯಲ್ಲಿ ಸಿಹಿ ಅಡುಗೆಯಾದ ಒಬ್ಬಿಟ್ಟು, ಕಾಯಾಲು, ಕಡಲೆಕಾಳು ಗೊಜ್ಜು, ಅನ್ನ, ಪಾಯಿಸ, ಮುದ್ದೆ ಮುಂತಾದ ಅಡುಗೆಗಳನ್ನು ಸಿದ್ಧಪಡಿಸಿಕೊಂಡು ಸತ್ತ ತಮ್ಮ ಹಿರಿಯರಿಗೆ ಎಡೆ ಹಾಕುತ್ತಾರೆ. ಅದೇ ದಿನ ತಮ್ಮ ತಮ್ಮ ಹಿರಿಯರು ಕಲ್ಲುಗುಡಿ(ತಲೆಕಲ್ಲು) ಬಳಿಗೆ ಹೋಗಿ ಎಡೆ ಇಟ್ಟು ಪೂಜೆ ಮಾಡಿಕೊಂಡು ಬರುತ್ತಾರೆ. ಅಡುಗೆ ಮಾಡುವ ಮೊದಲು ಇಡೀ ಬೂಡುಗೆ ಹಸುವಿನ ಸಗಣಿ ಗಂಜಲದಿಂದ ಸಾರಿಸುತ್ತಾರೆ. ಅದೇ ರೀತಿಯಲ್ಲಿಯೇ ಹಿರಿಯರ ತಲೆಕಲ್ಲುಗಳನ್ನು ಸ್ವಚ್ಛ ಮಾಡಿ ಸಾರಿಸಿ ರಂಗೋಲಿ ಹಾಕಿ ಸಿದ್ಧಪಡಿಸಿರುತ್ತಾರೆ.

ಸಿಹಿ ತಿಂಡಿ ಮಾಡಿದ ಮಾರನೇ ದಿನವನ್ನು "ಹೊಸತಡಕು" ದಿನ ಎಂದು ಕರೆಯುತ್ತಾರೆ. ಈ ದಿನ ಕುರಿ, ಕೋಳಿ ಕೊಯ್ದು ಮಾಂಸದ ಊಟ ಸಿದ್ಧಪಡಿಸುತ್ತಾರೆ. ಹಿಂದೆ ಕಾಡಿಗೆ ಹೋಗಿ ಯಾವುದಾದರೂ ಒಂದು ಪ್ರಾಣಿಯನ್ನು ಬೇಟೆ ಆಡಿ ತರಲೇಬೇಕಿತ್ತು. ಅರಣ್ಯ ನಾಶವಾದ ಮೇಲೆ ಗ್ರಾಮಗಳಲ್ಲೇ ಸಿಗುವ ಕುರಿ, ಕೋಳಿ, ಮೇಕೆ ಮಾಂಸಗಳ ಮೇಲೆಯೇ ಅವಲಂಬಿತರಾಗಿದ್ದಾರೆ. ಮಾಂಸದ ಅಡುಗೆಯನ್ನು ಸಿದ್ಧ ಮಾಡಿಕೊಂಡು ಹಿರಿಯರ ತಲೆಕಲ್ಲು ಬಳಿಗೆ ಹೋಗಿ ಹೊಸ ಸೀರೆ(ಹೆಂಗಸರಾಗಿದ್ದರೆ) ಹೊಸ ಪಂಚೆ (ಗಂಡಸರಾಗಿದ್ದರೆ)ಯನ್ನು ತಂದು ತಲೆಕಲೆ ಕಲ್ಲನ್ನು ಸ್ವಚ್ಛಗೊಳಿಸಿ ರಾಗಿ ಸುರಿದು ಹಸೆ ಮಾಡಿ ಅದರ ಮೇಲೆ ಹೊಸ ಸೀರೆ ಪಂಚೆಯನ್ನು ಹಾಸುತ್ತಾರೆ. ಹಾಗೆಯೇ ಆ ಸತ್ತ ವ್ಯಕ್ತಿ ಜೀವಂತವಾಗಿದ್ದ ಸಂದರ್ಭದಲ್ಲಿ ಬಳಸುತ್ತಿದ್ದ ಎಲ್ಲಾ ವಸ್ತುಗಳನ್ನು ಎಡೆ ಇಡುತ್ತಾರೆ. ಎಡೆ ಇಟ್ಟು ಪೂಜೆ ಮಾಡಿದ ನಂತರವಷ್ಟೇ ಎಲ್ಲರೂ ಸಾಮೂಹಿಕವಾಗಿ ಕುಳಿತು ಊಟ ಮಾಡುತ್ತಾರೆ. ಅಲ್ಲಿಯವರೆಗೂ ನೀರು ಕುಡಿಯದಂತೆ ನಿಷ್ಠೆ ವಹಿಸುತ್ತಾರೆ.

ಸಂಕ್ರಾಂತಿ ಹಬ್ಬ

ಇರುಳಿಗರು ಮೂಲತಃ ಬೇಟೆ ಸಂಸ್ಕೃತಿಯವರಾದ್ದರಿಂದ ಇತ್ತೀಚಿನ ದಿನಮಾನಗಳಲ್ಲಿ ಮಾತ್ರ ಪಶುಸಂಗೋಪನೆ ಮಾಡುತ್ತಿರುವುದನ್ನು ಕಾಣಬಹುದು. ಈ ಸಂಕ್ರಾಂತಿಯು ದನಗಳಿಗಾಗಿ ಆಚರಿಸುವ ಹಬ್ಬವಾದ್ದರಿಂದ ಬೆಳಿಗ್ಗೆಯೇ ದನಗಳು, ಕುರಿ, ಮೇಕೆಗಳನ್ನು ಕಾಡಿಗೆ ಹೊಡೆದುಕೊಂಡು ಹೋಗಿ ಹಳ್ಳ, ಕೆರೆಗಳಲ್ಲಿ ಮೈ ತೊಳೆದುಕೊಂಡು ಇಳಿ ಹೊತ್ತಿನೊತ್ತಿಗೆ ಮನೆ ಸೇರುತ್ತಾರೆ. ಹಸುವಿನ ಮೈ ಮತ್ತು ಕೊಂಬುಗಳಿಗೆ ನೀಲಿಬಣ್ಣದಿಂದ ಚಿತ್ತಾರವನ್ನು ಮೂಡಿಸಿ, ಮೈದ ಹಿಟ್ಟಿನ ದ್ರಾವಣವನ್ನು (ಗಮ್) ಸಿದ್ಧಪಡಿಸಿಕೊಂಡು ಹಸುವಿನ ಕೊಂಬುಗಳಿಗೆ "ಗುಲ್ಲಾಂಪಟ್ಟೆ" ಗಳನ್ನು ಹಚ್ಚುತ್ತಾರೆ. ಕೊಂಬಿನ ತುದಿಗಳಿಗೆ ಬಲೂನು(ಪೀಪಿ), ಹಿತ್ತಾಳೆಯ ಕವಚವನ್ನು ಹಾಕುತ್ತಾರೆ. ಹಾಗೆಯೇ ಹಸುವಿನ ಹೆಗಲ ಮೇಲೆ ಬಣ್ಣ ಬಣ್ಣದ ಅಲಂಕಾರಿಕ ವಸ್ತ್ರವನ್ನು

ಹಾಕಿ ಸಿಂಗರಿಸುತ್ತಾರೆ. ಅದಾಗಲೇ ಊರು ಹೊರಗೆ ಒಂದು ಮೈಲಿ ದೂರದಲ್ಲಿ ಕಳಸದ ಆಕೃತಿಯನ್ನು ಹೋಲುವ ತ್ರಿಭುಜದ ರೀತಿಯಲ್ಲಿ ಸಂಕ್ರಾಂತಿ ಗುಡಿ ನಿರ್ಮಿಸಿರುತ್ತಾರೆ. ಅದರ ಒಂದು ಭಾಗದಲ್ಲಿ ದೀಪ ಇಡಲು 'ಗೂಡು' ಮಾಡಿರುತ್ತಾರೆ. ಆ ಗೂಡಿನಲ್ಲಿ ದೀಪ ಹಚ್ಚಿಟ್ಟು ಇಡೀ ಸಂಕ್ರಾಂತಿ ಗುಡಿಯನ್ನು ಅರಿಶಿಣ, ಕುಂಕುಮದ ಸಹಾಯದಿಂದ ಹಾಗೂ ಅಣ್ಣೆ ಹೂ ಸಂಕ್ರಾಂತಿ ಹೂ ಜಿಡ್ಡಿವೂ ಮುಂತಾದ ಕಾಡು ಹೂಗಳಿಂದ ಸಿಂಗರಿಸುತ್ತಾರೆ. ಸಂಕ್ರಾಂತಿ ಗುಡಿಯ ಮುಂದೆ ನೂರು ಮೀಟರ್ ದೂರದಲ್ಲಿ 'ಹುಚ್ಚಳ್ಳು, ಎಳ್ಳು ಪುಳ್ಳೆಗಳನ್ನು ಬೆಂಕಿ ಇಟ್ಟು ಅವುಗಳ ಮೇಲೆ ರಾಸುಗಳನ್ನು ಹಾರಿಸಲು ಸಿದ್ಧ ಮಾಡಿಕೊಂಡಿರುತ್ತಾರೆ. ಇದನ್ನು ಕಿಚ್ಚಾಯಿಸುವುದು ಎಂದು ಕರೆಯುತ್ತಾರೆ. ಸಂಜೆ ಐದರಿಂದ ಆರು ಗಂಟೆಯ ಒಳಗೆ ಪ್ರತಿಯೊಬ್ಬರ ಮನೆಯ ಮುಂದೆ ಹಸುವಿನ ತೊಪ್ಪೆ(ಸೆಗಣಿ) ಮತ್ತು ಗಂಜಲದಿಂದ ಸಾರಿಸಿ ಅದರ ಮೇಲೆ ರಂಗೋಲಿ ಹಾಕಿ, ಹಳದಿ ಹೂ, ಸಂಕ್ರಾಂತಿ, ಜಿಡ್ಡಿ ಮುಂತಾದ ಕಾಡು ಹೂಗಳಿಂದ ಸಿಂಗಾರಗೊಳಿಸುತ್ತಾರೆ. ಇನ್ನೇನು ಹೊತ್ತು ಮುಳುಗುವ ಸಮಯವಾದ ನಂತರ ಸಿಂಗಾರಗೊಂಡಿರುವ ಜಾನುವಾರುಗಳನ್ನು ಸಂಕ್ರಾಂತಿಯ ಗುಡಿಯ ಕಡೆ ಕರೆದುಕೊಂಡು ಹೋಗುತ್ತಾರೆ. ಊರಿನ ಎಲ್ಲ ರಾಸುಗಳು ಒಂದು ಕಡೆ ಸೇರಿದ ಮೇಲೆ ಅವರಲ್ಲಿ ಯಾರಾದರೂ ಒಬ್ಬರು ಹೊಸ ಮಡಿಕೆ ತಂದು, ಹೊಸ ಒಲೆಯನ್ನು ಒಡ್ಡಿ ಉನ್ನಿ ಅನ್ನ ಬೇಯಿಸುತ್ತಾರೆ. ಈ ಅನ್ನಕ್ಕೆ ಹಸುವಿನ ಕೆಚ್ಚಲಿನ ಹುನ್ನಿ, ತೊಳಛಿ ಮತ್ತು ಕೋಳಿಯ ರಕ್ತವನ್ನು ಹಾಕಿ ಬೇಯಿಸಿರುತ್ತಾರೆ. ಇದಕ್ಕೆ ಸುಣ್ಣ ಮತ್ತು ಹಸುವಿನ ಹಾಲನ್ನು ಸೇರಿಸಿ, ಸಂಕ್ರಾಂತಿ ಗುಡಿಯ ಮುಂದೆ ಎಡೆಯಿಟ್ಟು ಪೂಜೆ ಮಾಡುತ್ತಾರೆ. ನಂತರ ಅದನ್ನು ಎಲ್ಲ ಜಾನುವಾರುಗಳ ಮೇಲೂ ಎರಚುತ್ತಾನೆ. ಜೊತೆಗೆ ಪ್ರತಿ ಮನೆಯವರ ಕೈಗೂ ಕೊಟ್ಟು ದನದ ಕೊಟ್ಟಿಗೆಗೆ ಹಾಕುವಂತೆ ಸೂಚಿಸುತ್ತಾನೆ. ಈ ಎಲ್ಲಾ ಕೆಲಸ ಮುಗಿದ ನಂತರ ದನಗಳನ್ನು ಕಿಚ್ಚಾಯಿಸುವಂತೆ ಹೇಳುತ್ತಾರೆ. ಸಿದ್ಧವಾಗಿಟ್ಟುಕೊಂಡಿರುವ ಎಳ್ಳು, ಹುಚ್ಚೆಳ್ಳು ಪುಳ್ಳೆಗಳಿಗೆ ಬೆಂಕಿ ಹಚ್ಚುತ್ತಾರೆ. ಧಗಧಗ ಉರಿಯಲಾರಂಭಿಸಿದ ನಂತರ ಬೆಂಕಿಯಲ್ಲಿ ತಮ್ಮ ತಮ್ಮ ಜಾನುವಾರುಗಳನ್ನು ಹಾರಿಸಿಕೊಂಡು ಮನೆ ಕಡೆಗೆ ಹೋಗುತ್ತಾರೆ. ಹೀಗೆ ಹಾರಿಸುವುದರಿಂದ ಹಸುವಿನ ಹೊಟ್ಟೆ ಭಾಗದಲ್ಲಿರುವ ತೊಳಚಿ, ಉಣ್ಣೆ(ಉನ್ನಿ) ಇನ್ನೂ ಸಣ್ಣಪುಟ್ಟ ಜೀವಿಗಳು ಸಾಯುತ್ತವೆಯೆಂಬ ನಂಬಿಕೆಯಿಂದ ಈ ಆಚರಣೆ ಬಂದಿರುವ ಸಾಧ್ಯತೆಗಳಿವೆ.

ಕಿಚಾಯಿಸಿಕೊಂಡು ಬಂದು ಹಸುಗಳನ್ನು ನೇರವಾಗಿ ಮನೆಗೆ ಕರೆದುಕೊಳ್ಳುವುದಿಲ್ಲ. ಜಾನುವಾರಗಳು ಬರುವುದಕ್ಕಿಂತ ಮುಂಚೆ ಕೊಟ್ಟಿಗೆಯನ್ನು ಸ್ವಚ್ಛಗೊಳಿಸಿ ರಂಗೋಲಿ ಹಾಕಿ ಹೂಗಳಿಂದ ಸಿಂಗರಿಸಿರುತ್ತಾರೆ. ಮನೆಯ ಬಾಗಿಲಿನಲ್ಲಿ ಜಾನುವಾರುಗಳನ್ನು ನಿಲ್ಲಿಸಿ ಮನೆಯ ಒಳಗಿನಿಂದ ಒನಕೆಯನ್ನು ತಂದು ಬಾಗಿಲ ಪಕ್ಕದಲ್ಲಿ ಅಂದರೆ ಕೊಟ್ಟಿಗೆಯ ಬಾಗಿಲಿಗೆ ಅಡ್ಡಲಾಗಿ ಇಟ್ಟು ಒನಕೆ ದಾಟಿಸುತ್ತಾರೆ. ನಂತರ ಹಸುವಿನ ಕಾಲಿಗೆ ಕೋಳಿ ಕೊಯ್ದು ರಕ್ತವನ್ನು ಅಡ್ಡಲಾಗಿ ಎರಚಿ ದಾಟಿಸುತ್ತಾರೆ. ಹಸುಗಳನ್ನು ಗೊಂತು(ಅವುಗಳನ್ನು ಕಟ್ಟುವ

ಜಾಗ)ಗಳಿಗೆ ಕಟ್ಟಿ ಬಿಡುತ್ತಾರೆ. ಮನೆಯಲ್ಲಿ ಕಾರ(ಮಾಂಸ) ಅಡುಗೆ ಮಾಡಿ ಊಟ ಮಾಡುವ ಮೂಲಕ ಸಂಕ್ರಾಂತಿ ಹಬ್ಬಕ್ಕೆ ಸಮಾಪ್ತಿ ಹೇಳುತ್ತಾರೆ.

ಹಿರಿಯರ ಹಬ್ಬ ಅಥವಾ ಈರ್ರಹಬ್ಬ

ಇರುಳಿಗ ಬುಡಕಟ್ಟಿನಲ್ಲಿ ಅತ್ಯಂತ ವಿಶೇಷವಾಗಿ ಕಂಡುಬರುವ ಆಚರಣೆಯಲ್ಲಿ ಈರ್ರಬ್ಬ ಪ್ರಮುಖವಾದುದ್ದು. ಈ ಹಬ್ಬವು ಪಾರಂಪರಿಕವಾಗಿ ಇರುಳಿಗ ಸಮುದಾಯ ಉಳಿಸಿ, ನಡೆಸಿಕೊಂಡು ಬಂದಿರುವುದನ್ನು ಕಾಣಬಹುದು. ಈ ಹಬ್ಬವು ಸಂಪೂರ್ಣವಾಗಿ ಪೂರ್ವಿಕರನ್ನು ನೆನೆದು ಆರಾಧಿಸುವ ಹಬ್ಬವಾಗಿರುತ್ತದೆ. ಈ ಸಂದರ್ಭದಲ್ಲಿನ ಇರುಳಿಗ ಸಮುದಾಯ ಆಚರಿಸುವ ಕೆಲವು ವಿಧಿ ವಿಧಾನಗಳು ಪ್ರಾಚೀನ ಕಾಲದ ಕುರುಹುಗಳಂತೆ ಕಂಡುಬರುತ್ತವೆ. ಲಕ್ಷ್ಮೀಪತಿ ಕೋಲಾರ ಅವರು ಹೇಳುವಂತೆ "ಇರುಳಿಗರಲ್ಲಿ ಕಂಡುಬರುವ ಈರ್ರಬ್ಬವು ಈ ದೇಶದ ಮೂಲನಿವಾಸಿಗಳಾಗಿರುವುದನ್ನು ಪ್ರತಿನಿಧಿಸುತ್ತದೆ. ಹಾಗೆಯೇ ಐವತ್ತು ಸಾವಿರ ವರ್ಷಗಳ ಹಿಂದೆ ಭಾರತಕ್ಕೆ ವಲಸೆ ಬಂದ ದಕ್ಷಿಣ ಆಫ್ರಿಕಾದ ಗಿಗಿಯೂ ಬುಡಕಟ್ಟಿನ ಆಚರಣೆಯನ್ನೇ ಹೋಲುತ್ತದೆ ಎಂದಿದ್ದಾರೆ."[೧೦]

ಈ ಈರ್ರಬ್ಬವು ಪ್ರಸ್ತುತ ಮಾಗಡಿ ತಾಲ್ಲೂಕಿನಲ್ಲಿ ಮಾತ್ರ ಕಂಡು ಬರುತ್ತದೆ. ಇಡೀ ರಾಮನಗರ ಜಿಲ್ಲೆಯ ಇರುಳಿಗರು "ಈರ್ರಬ್ಬ" ಸೇರಿಕೊಳ್ಳುತ್ತಾರೆ. ಪ್ರತಿ ಒಂದು ಅಥವಾ ಮೂರು ವರ್ಷಗಳಿಗೊಮ್ಮೆ ಈ ಹಬ್ಬ ಆಚರಿಸುವುದನ್ನು ಕಾಣಬಹುದು. ಇದು ಅರಣ್ಯ ಮಧ್ಯಭಾಗದ ನೀರಿನ ಚಿಲುಮೆ ಇರುವ ಕಡೆ ವಿಶೇಷವಾಗಿ ಕಂಡುಬರುತ್ತದೆ. ಒಂದು ಕಡೆ ನೀರಿನ ಉಪಯೋಗಕ್ಕಾಗಿ ಆ ಪ್ರದೇಶವನ್ನು ಆಯ್ಕೆ ಮಾಡಿಕೊಂಡಂತೆ ಮೇಲುನೋಟಕ್ಕೆ ಮಾಡಿಕೊಂಡರು. ಆ ಪ್ರದೇಶಕ್ಕೂ ಇರುಳಿಗರಿಗೂ ಆಂತರಿಕ ಸಂಬಂಧವಿರುವುದನ್ನು ಕಾಣಬಹುದು. ಮಾಗಡಿಯಲ್ಲಿ ವಾಸಿಸುತ್ತಿರುವ ಇರುಳಿಗರು ತಮ್ಮ ಪಾರಂಪರಿಕ ಆಚರಣೆಯನ್ನು ಬಿಟ್ಟುಕೊಡದೆ ಉಳಿಸಿಕೊಂಡು ಬಂದಿರುವ ಪ್ರತೀಕವಾಗಿ ಈ ಆಚರಣೆ ಉಳಿದುಕೊಂಡಿರಬಹುದು. ಏಕೆಂದರೆ ಮಾಗಡಿ ಹೊರತುಪಡಿಸಿದರೆ ಇರುಳಿಗರು ವಾಸ ಮಾಡುವ ಯಾವ ಭಾಗದಲ್ಲೂ ಈ ಆಚರಣೆ ಕಂಡುಬರುವುದಿಲ್ಲ. ಹಾಗೆಯೇ ಇರುಳಿಗ ಭಾಷೆಯು ಕೂಡ ಇದೇ ಪ್ರದೇಶದಲ್ಲಿ ಇನ್ನೂ ಜೀವಂತವಾಗಿ ಉಳಿದುಕೊಂಡಿದೆ. ಇನ್ನುಳಿದ ಇರುಳಿಗರು ವಾಸ ಮಾಡುವ ಪ್ರದೇಶದಲ್ಲಿ 'ಮುನಿಯಪ್ಪ' ಎನ್ನುವ ಆಚರಣೆಯನ್ನು ಕುಟುಂಬ, ಕುಟುಂಬಗಳು ಮಾಡಿಕೊಳ್ಳುತ್ತವೆ ಹೊರತು ಹೀಗೆ ಒಟ್ಟಾಗಿ ಆಚರಿಸಿಕೊಳ್ಳುವುದನ್ನು ಕಾಣಲು ಸಾಧ್ಯವಿಲ್ಲ.

ಮಾಗಡಿ ತಾಲ್ಲೂಕಿನಲ್ಲಿ ಕಂಡುಬರುವ ಈರ್ರಬ್ಬವನ್ನು ಆಚರಿಸಲು ತಾಲ್ಲೂಕಿನ ಪ್ರತಿ ಇರುಳಿಗರ ಗ್ರಾಮಗಳಿಂದ ಒಬ್ಬೊಬ್ಬರಂತೆ ಬಂದು ಒಂದು ಕಡೆ ಸೇರುತ್ತಾರೆ. ಎಲ್ಲರೂ ಸೇರಿದ್ದನ್ನು ಖಾತ್ರಿಪಡಿಸಿಕೊಂಡ ಕೋಲುಕಾರ, ನಾಗಗೌಡ, ಕಟ್ಟುಗೌಡ, ಕಣಿಗಾರ, ಕುಲಗೌಡರಿಗೆ

ಸಭೆ ಸೇರಿರುವ ಸ್ಥಳಕ್ಕೆ ಬರುವಂತೆ ಆಹ್ವಾನಿಸುತ್ತಾನೆ. ಸಭೆ ಸೇರಿರುವ ಸ್ಥಳದಲ್ಲಿ ಒಂದು ಭಾಗವನ್ನು ಹಸುವಿನ ಸಗಣಿ ಮತ್ತು ಗಂಜಲದಿಂದ ಸಾರಿಸಿ ರಂಗೋಲಿ ಹಾಕಿ ಸಿದ್ಧಗೊಳಿಸಿರುತ್ತಾರೆ. ಕೋಲುಕಾರ ತನ್ನ ಹೆಗಲ ಮೇಲಿದ್ದ ಕರಿಯ ಕಂಬಳಿಯನ್ನು ನಾಲ್ಕು ಜನ ಮುಖಂಡರು ಕುಳಿತುಕೊಳ್ಳುವಂತೆ ಹಸೆ ಮಾಡುತ್ತಾನೆ. ನಾಡಗೌಡ ಕಟ್ಟುಗೌಡರು ಕೂರುವ ಎಡಭಾಗಕ್ಕೆ ಹಸುವಿನ ಸಗಣಿಯನ್ನು ಉಂಡೆ ಮಾಡಿ ಅದಕ್ಕೆ ಗಂಧದಕಡ್ಡಿ ಹಚ್ಚಿರುತ್ತಾನೆ. ಸಭೆಗೆ ಬಂದ ನಾಡಗೌಡ, ಕಟ್ಟುಗೌಡ, ಕೋಲುಕಾರ ಮತ್ತು ಕುಲಗೌಡರು ಸಭೆಯ ಮುಂದೆ ನಿಂತು ಎಲ್ಲರಿಗೂ ಕೈ ಮುಗಿಯುತ್ತಾರೆ. ಅದೇ ರೀತಿಯಲ್ಲಿ ಸಮಸ್ತ ಇರುಳಿಗರು ಗೌಡರುಗಳಿಗೆ ಎದ್ದು ನಿಂತು, ಕೈ ಮುಗಿದು ಗೌರವ ಕೊಡುತ್ತಾರೆ. ನಂತರ ಕೋಲುಕಾರ ಮಾಡಿರುವ ಹಸೆಯ ಮೇಲೆ ಕುಳಿತುಕೊಳ್ಳುತ್ತಾನೆ. ಕಟ್ಟುಗೌಡ ಬಲಭಾಗದಲ್ಲಿ ಸಿದ್ಧವಾಗಿರುವ ಹಿರಿಯರ ನೆನಪಿನ ಕರಿಯಕಲ್ಲನ್ನು ತೊಳೆದು ಅರಿಶಿಣ, ಕುಂಕುಮ, ವಿಭೂತಿ ಮತ್ತು ಹೂ ಮುಡಿಸಿ ಪೂಜೆ ಮಾಡಿ ನಾಡಗೌಡ, ಕೋಲುಕಾರ ಮತ್ತು ಕುಲಗೌಡರಿಗೆ ಆರತಿ ಕೊಡುತ್ತಾನೆ. ನಂತರ ಆರತಿಯನ್ನು ಕೋಲುಕಾರ ಕೈಗೆ ಕೊಟ್ಟು ಸಮಸ್ತ ಇರುಳಿಗ ಬಂಧುಗಳಿಗೂ ಕೊಡುವಂತೆ ಹೇಳುತ್ತಾನೆ. ಹೀಗೆ ಪೂಜೆ ಮುಗಿದ ನಂತರ ತಾನು ಕೂಡ ಹಸೆಯಲ್ಲಿ ಕುಳಿತುಕೊಳ್ಳುತ್ತಾನೆ. ಕೋಲುಕಾರ ಸಭೆ ಸೇರಿರುವ ಉದ್ದೇಶವನ್ನು ನಾಡಗೌಡನ ಸಮ್ಮತಿ ಪಡೆದು ಸಭೆಯ ಮುಂದೆ ಪ್ರಸ್ತಾಪಿಸುತ್ತಾನೆ. ಈ ಕುರಿತು ಆಗುವ ವೆಚ್ಚ ಕೊಡಬೇಕಾದ ದೇಣಿಗೆ ಕುರಿತು ವಿವರಿಸುವ ಮೂಲಕ ಚರ್ಚೆ ಆರಂಭವಾಗುತ್ತದೆ. ಈ ಚರ್ಚೆಯನ್ನು ಸೂಕ್ಷ್ಮವಾಗಿ ಗಮನಿಸಿದ ನಾಡಗೌಡ ಕೊನೆಗೆ ಕುಲಗೌಡನ ಒಪ್ಪಿಗೆ ಪಡೆದು, ಈರ್ರಬ್ಬ ಮಾಡುವ ದಿನಾಂಕ, ಕೊಡಬೇಕಾದ ದೇಣಿಗೆ, ನಡೆದುಕೊಳ್ಳಬೇಕಾದ ರೀತಿ ರಿವಾಜುಗಳನ್ನು ವಿವರಿಸುತ್ತಾನೆ. ಇದಕ್ಕೆ ಎಲ್ಲರೂ ಒಪ್ಪಲೇಬೇಕು. ಏಕೆಂದರೆ ಅಲ್ಲಿಯವರೆಗಿನ ಚರ್ಚೆಯ ಸಾರದ ಅಂತಿಮ ತೀರ್ಪು ನಾಡಗೌಡನ ಮಾತಾಗಿರುತ್ತದೆ. ನಂತರ ಕಟ್ಟುಗೌಡ ಎದ್ದು ನಿಂತು ಈರ್ರಬ್ಬಕ್ಕೆ ಗ್ರಾಮ ಸಜ್ಜು ಮಾಡಿಕೊಳ್ಳಬೇಕಾದ ರೀತಿ, ನೀತಿಗಳನ್ನು ಹೇಳುತ್ತಾ ಒಂದು ವಾರದ ಮುಂಚೆ ಪ್ರತಿ ಮನೆಯವರು ಅಂಟು, ಮುಂಟು ಮಾಡದಂತೆ ಹೇಗೆಲ್ಲಾ ಇರಬೇಕು. ಹಾಗೊಮ್ಮೆ ತಪ್ಪಿ ನಡೆದರೆ ಏನೆಲ್ಲಾ ಶಿಕ್ಷೆಗಳನ್ನು ಎದುರಿಸಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ನೀಡುತ್ತಾನೆ. ಕೊನೆಯದಾಗಿ ಕುಲಗೌಡ ಎದ್ದು ನಿಂತು ಎಲ್ಲರೂ ಭಯ ಭಕ್ತಿಯಿಂದ ಹಬ್ಬ ಆಚರಿಸಿ, ನಾಡಗೌಡ, ಕಟ್ಟುಗೌಡ ಕೋಲುಕಾರನಿಗೆ ವಿನಯದಿಂದ ನಡೆದುಕೊಳ್ಳಬೇಕು. ಕುಲದ ಕಟ್ಟಳೆಗಳನ್ನು ಯಾವುದೇ ಕಾರಣಕ್ಕೂ ಮೀರದಂತೆ ಎಚ್ಚರಿಕೆ ವಹಿಸಬೇಕು. ಇಲ್ಲವಾದಲ್ಲಿ ನಮ್ಮ ಪೋಡುಗಳಿಗೆ ಅಪಾಯ ಕಂಡುಬರುತ್ತದೆ ಎಂದು ಎಚ್ಚರಿಸುತ್ತಾನೆ. ಕೋಲುಕಾರನ ಮಾತಿನೊಂದಿಗೆ ಸಭೆಯ ಅಂತಿಮಗೊಳ್ಳುತ್ತದೆ. ಎಲ್ಲರೂ ಗೌಡರುಗಳಿಗೆ ಮತ್ತು ಹಿರಿಯರ ಸಂಕೇತವಾಗಿರುವ ಕಲ್ಲುಗಳಿಗೆ ಕೈ ಮುಗಿದು ತಮ್ಮ ಊರು ಮನೆಗಳಿಗೆ ಹಿಂದಿರುಗುತ್ತಾರೆ.

ಕೋಲುಕಾರ ಪ್ರತಿ ಹಳ್ಳಿಗಳಿಗೂ ತಿರುಗಿ ಹಬ್ಬದ ದೇಣಿಗೆಯನ್ನು ಸಂಗ್ರಹಿಸಿಕೊಂಡು ಬರುತ್ತಾನೆ. ತಂದ ಹಣವನ್ನು ನಾಡಗೌಡನಿಗೆ ಒಪ್ಪಿಸುತ್ತಾನೆ. ನಾಡಗೌಡ, ಕುಲಗೌಡ, ಕೋಲುಕಾರ, ಕಟ್ಟುಗೌಡರು ಚರ್ಚೆ ಮಾಡಿ ಯಾರಾದರೂ ಇಬ್ಬರನ್ನು ಗೊತ್ತು ಮಾಡಿ(ಇದರಲ್ಲಿ ಒಮ್ಮೊಮ್ಮೆ ಕೋಲುಕಾರನು ಇರುತ್ತಾನೆ) ಹಬ್ಬಕ್ಕೆ ಬೇಕಾದ ಸಾಮಾನು ಸರಂಜಾಮುಗಳನ್ನು ತರಲು ಕಳುಹಿಸುತ್ತಾನೆ. ತಂದ ಸಾಮಾನುಗಳನ್ನು ಊರಿಗೆ ತರದಂತೆ ಕೋಲುಕಾರ ನಿಗಾ ವಹಿಸಬೇಕು. ಏಕೆಂದರೆ ಊರಿಗೆ ತರುವುದರಿಂದ ಅಂಟು ಮುಂಟಾಗಿ ಬಿಡುತ್ತದೆ ಎಂದು ಭಯಪಡುತ್ತಾರೆ. ಆದ್ದರಿಂದ ಊರ ಹೊರಗೆ ಒಂದು ಆಲದ ಮರದಲ್ಲಿ ತಂದಿರುವ ಸಾಮಗ್ರಿಗಳನ್ನು ಕಟ್ಟುತ್ತಾರೆ. ಸಾಮಾನು ತರಲು ಹೋಗಿದ್ದವರು ಪೂಜೆಯಾಗುವವರೆಗೂ ಆ ಸಾಮಾನುಗಳನ್ನು ಕಾಯ್ದುಕೊಂಡು ಅಲ್ಲೇ ಕಾಲ ಕಳೆಯಬೇಕಾಗುತ್ತದೆ.

ವಿಶೇಷವಾಗಿ ತಂದ ಸಾಮಗ್ರಿಗಳನ್ನು ಬೆಪ್ಪಾಲೆ ಮರಕ್ಕೆ ಕಟ್ಟುವುದು ವಿಶೇಷವಾಗಿ ಕಂಡುಬರುತ್ತದೆ. ಈ ಬೆಪ್ಪಾಲೆ ಮರಕ್ಕೂ ಇರುಳಿಗರೂ ವಿಶೇಷ ಸಂಬಂಧವಿದೆ. ಇಂದಿಗೂ ಇರುಳಿಗರು ಸ್ನಾನ ಮಾಡದೆ ಈ ಮರದ ಕೆಳಗೆ ಹೋಗಲು ಭಯಪಡುತ್ತಾರೆ. ಹಾಗೆಯೇ ಈ ಮರದ ಸೌದೆಯನ್ನು ಅಡುಗೆ ಮತ್ತು ಇನ್ನಿತರ ಕೆಲಸಕ್ಕೆ ಬಳಸದೆ ಇರುವುದನ್ನು ಕಾಣಬಹುದು. ಈ ಕುರಿತು ವಿಚಾರಿಸಿದ ಒಂದು ಐತಿಹ್ಯವನ್ನು ಬಿಚ್ಚಿಟ್ಟರು. ಇಂದು ಎಲ್ಲರೂ ಪೂಜಿಸುತ್ತಿರುವ ಲಿಂಗ ಮೊದಲು ನಮ್ಮತ್ರ ಇತ್ತಂತೆ. ನಮ್ಮೋನೊಬ್ಬ ಬಾಡ್ ತಿನ್ನುವ ಆಸೆಯಿಂದ(ಮಾಂಸ) ತನ್ನಲ್ಲಿದ್ದ ಲಿಂಗವನ್ನು ಕಳಚಿ ಇದೇ ಬೆಪ್ಪಾಲೇ ಮರಕ್ಕೆ ಕಟ್ಟಿ ಮೀನು ಹಿಡಿಯಲು ಇಳಿದು ಬಿಟ್ನಂತೆ. ಇದನ್ನೇ ಕಾಯ್ತ ಇದ್ರಲ್ಲಾ ಲಿಂಗಾಯಿತ್ರು, ಆ ಲಿಂಗವನ್ನು ಎತ್ತಿ ತಾವಾಕೋಬುಟ್ರಂತೆ; ಅವರತ್ರ ಎಲ್ಲಿತ್ತು ಲಿಂಗ. ಅವರದು ಕಟ್ಟು ಲಿಂಗ, ನಮ್ಮದು ಹುಟ್ಟುಲಿಂಗ. ಆವತ್ತಿನಿಂದ ಈ ಬೆಪ್ಪಾಲೆ ಮರ ನಮಗೆ ಪೂಜ್ಯನೀಯ.[೧೧] ಈ ಐತಿಹ್ಯವು ಮೇಲಿನ ವಿವರಣೆಗೆ ಸರಿಯಾದ ಕಾರಣ ಎಂದು ಕಂಡುಬಂದರೂ ಖಚಿತವಾದ ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ. ಏಕೆಂದರೆ ಬುಡಕಟ್ಟು ಮೂಲತಃ ಬೇಟೆ ಸಂಸ್ಕೃತಿಯವರು ಮಾಂಸ ಆಹಾರವೇ ಇವರ ಪ್ರತಿನಿತ್ಯ ಆಹಾರ ಪದ್ಧತಿ. ಅಂದ ಮೇಲೆ ಮೀನು ಹಿಡಿದು ತಿಂದಿದ್ದರಿಂದಲೇ ಲಿಂಗ ತಪ್ಪಿ ಹೋಯಿತು ಎಂಬುದು ಎಷ್ಟು ಸರಿ. ಹಾಗೆಯೇ ಐತಿಹ್ಯದಲ್ಲಿ ಪ್ರಸ್ತಾಪವಾಗಿರುವ "ಲಿಂಗಾಯಿತ" ಎಂಬ ಪದವೇ ಇತ್ತೀಚಿನ ದಿನಮಾನದ್ದಾಗಿ ಕಂಡುಬರುತ್ತದೆ. ಲಿಂಗವನ್ನು ಹಾಕಿಕೊಂಡಿರುವುದರಿಂದಲೇ ಇವರನ್ನು ಲಿಂಗಾಯಿತರು ಎಂದು ಕರೆಯುತ್ತಾರೆಯೇ? ಎಂಬ ವಿಷಯದ ಬಗ್ಗೆ ನಮ್ಮಲ್ಲಿ ಹಲವಾರು ಚರ್ಚೆಗಳಿವೆ. ಒಟ್ಟಾರೆಯಾಗಿ ಈ ಐತಿಹ್ಯ ಭಾರತದಲ್ಲಿ ಲಿಂಗದ ಕಲ್ಪನೆ ಆರಂಭವಾದ ಸಂದರ್ಭದ ಕುರುಹುಗಳನ್ನು ನೀಡುತ್ತದೆ ಎಂದು ಭಾವಿಸಬಹುದು. ಏಕೆಂದರೆ ಡಾ. ಲಕ್ಷ್ಮೀಪತಿ ಕೋಲಾರ ಅವರು ಹೇಳುವಂತೆ "ದಕ್ಷಿಣ ಆಫ್ರಿಕಾದ ಸ್ಯಾನ್‌ಬುಸ್ಮಾನ್ ಎಂಬ ಬುಡಕಟ್ಟು ಜನ ವಲಸೆ ಹೊರಟು ಪ್ರಪಂಚದ ಮೂಲೆ ಮೂಲೆಯಲ್ಲಿ ನೆಲೆನಿಂತು

ಆ ದೇಶದ ಮೂಲ ನಿವಾಸಿಗಳಾದರು. ಈ ಬುಡಕಟ್ಟು ಜನ ತಮ್ಮ ಮೂಲ ನೆಲೆಯಿಂದ ಹೊರಟಾಗ ತಮ್ಮ ಜೊತೆಗೆ ತಮ್ಮ ಆಚಾರ, ವಿಚಾರ, ದೇವರು ನಂಬಿಕೆಗಳನ್ನು ಕೊಂಡೊಯ್ದರು. ಅದರ ಫಲವೇ ಈ ಲಿಂಗದ ಪರಿಕಲ್ಪನೆ ಬೆಳೆದಿರಬೇಕು. ಸ್ಯಾನ ಬುಸ್ಮಾನ್‌ನಿಂದ ಹೊರಟ ಬುಡಕಟ್ಟುಗಳು ಭಾರತಕ್ಕೆ ಬಂದ ಮೇಲೆ ತಮ್ಮ ದೈವತ್ವದ ನೆನಪಿಗಾಗಿ ಮರದ ತುಂಡನ್ನು ಲಿಂಗದ ರೂಪದಲ್ಲಿ(ಗಂಡಸಿನ ಶಿಶ್ನದ ರೂಪದಲ್ಲಿ) ಸಿದ್ಧಪಡಿಸಿಕೊಂಡರು. ಮೂಲತಃ ಸ್ಯಾನ್ ಬುಸ್ಮಾನ್ ಬುಡಕಟ್ಟಿನಿಂದ ತಮಿಳುನಾಡು ಕರ್ನಾಟಕದ ಮೂಲಕ ಹಾದು ಹೋಗಿರುವುಕ್ಕೆ ಹಲವಾರು ಸಾಕ್ಷಿಗಳು ಸಿಗುತ್ತವೆ. ಹೀಗೆ ವಲಸೆ ಬಂದವರಲ್ಲಿ ಇರುಳಿಗರು ಕೂಡ ಒಬ್ಬರಾಗಿದ್ದಾರೆ. ಸ್ಯಾನ್‌ಬುಸ್ಮನ್ ಬುಡಕಟ್ಟಿನ ಎಲ್ಲಾ ಲಕ್ಷಣಗಳನ್ನು ಹೊಂದಿರುವ ಇರುಳಿಗರು ತಮ್ಮ ಪೂರ್ವಿಕ ಪಿತೃವಿನ ಆರಾಧಕರಾಗಿಯೂ ಹಾಗೆಯೇ ಲಿಂಗವನ್ನು ತಮ್ಮ ದೈವದ ಸಂಕೇತವಾಗಿ ಉಳಿಸಿಕೊಂಡು ಬಂದಿದ್ದಾರೆ. ಇರುಳಿಗರು ಆಲೆ ಮರವಾಗಿ ದೈವೀಕರಿಸುವುದು ನೋಡಿದರೆ ಇವರ ಸಂಬಂಧ ಇತ್ತೀಚಿನ ದಿನದಂತೆ ಕಂಡು ಬರದೇ ತಮ್ಮ ಪೂರ್ವಿಕರ ವೃತ್ತಾಂತದ ಸಾಕ್ಷಿಯಾಗಿರುವುದರಲ್ಲಿ ಯಾವುದೇ ಸಂಶಯವಿಲ್ಲ.[೧೨]

ಈರ್ರಬ್ಬ ಮಾಡುವ ಸಂದರ್ಭದಲ್ಲಿ ಇರುಳಿಗರು ತಮ್ಮ ಎಲ್ಲಾ ಪೂಜಾ ಸಾಮಗ್ರಿಗಳನ್ನು ಬೆಪ್ಪಾಲೆ ಮರದಲ್ಲೇ ಕಟ್ಟುತ್ತಾರೆ. ತಪ್ಪಿಯೂ ಇನ್ನೊಂದು ಮರದಲ್ಲಿ ಇಡುವುದಿಲ್ಲ. ಹೀಗೆ ಈರ್ರಬ್ಬಕ್ಕಾಗಿ ತಂದ ಪೂಜಾ ಸಾಮಗ್ರಿಗಳನ್ನು ನೆಲಕ್ಕೆ ತಾಕಿಸದ ರೀತಿಯಲ್ಲೇ ಕಾಯ್ದುಕೊಂಡಿರುತ್ತಾರೆ. ಹಬ್ಬ ನಡೆಯುವ ದಿನದವರೆಗೂ ಆ ಪೂಜಾ ಸಾಮಗ್ರಿಗಳನ್ನು ಕಾಯ್ದು ಅಲ್ಲೇ ಕೆಲವು ಜನರು ಮಲಗಿಸಿಕೊಳ್ಳುತ್ತಾರೆ. ಈ ಹಬ್ಬದ ಕೇಂದ್ರ ಬಿಂದುವಾದ ಕಣಿಗಾರ ಅಥವಾ ಪೂಜಾರಿ ಹಬ್ಬಕ್ಕೆ ಏಳು ದಿನ ಇರುವಾಗಲೇ ಮಾಂಸ ಮಡ್ಡಿ ಸೇವಿಸುವುದನ್ನು ಬಿಟ್ಟು ಬಿಡುತ್ತಾನೆ. ಜೊತೆಗೆ ಊಟ ಮಾಡದೆ ಏಳು ದಿನಗಳ ಕಾಲ ಕೇವಲ ಹಸಿ ಹಾಲು, ಹಸಿಕಡಲೆಕಾಯಿ, ಜೇನುತುಪ್ಪ ಪ್ರತಿದಿನ ಒಂದು ಏಲಕ್ಕಿ ತಿಂದು ಜೀವಿಸುತ್ತಾನೆ.

ಹಬ್ಬದ ದಿನ ಮುಂಜಾನೆ ಎದ್ದು ಸ್ನಾನ ಮಡಿ ಮಾಡಿಕೊಂಡು ಹಳ್ಳಕ್ಕೆ ಹೋಗಿ ತಮ್ಮ ದೇವರ ಚೀಲದಲ್ಲಿರುವ ದೇವರ ಮುಖವಾಡ, ವಿಗ್ರಹ, ಗಂಟೆ, ಆರತಿತಟ್ಟೆ, ಗಿಂಡಿ, ಕಳಸ, ಕತ್ತಿ ಎಲ್ಲವನ್ನು ಹುಣಸೆ ಹಣ್ಣು ಹಾಗೂ ನಂತರ ಚುಜ್ಜಿಲಿ ಚಕ್ಕೆಯಿಂದ ಉಜ್ಜಿ ತೊಳೆಯುತ್ತಾನೆ. ಎಲ್ಲವನ್ನು ಗೂಡಿಗೆ(ಬೂಡು ದೇವಸ್ಥಾನ) ತಂದು. ಅವುಗಳಿಗೆ ಅರಿಶಿಣ, ಕುಂಕುಮ, ಯೂಭೂತಿ, ಗಂಧವನ್ನು ಹಚ್ಚಿ ಹೂ ಮುಡಿಸಿ ಸಿಂಗರಿಸುತ್ತಾರೆ. ನಂತರ ತನ್ನ ಚೀಲದಲ್ಲಿರುವ ಎಲ್ಲಾ ಸಾಮಗ್ರಿಗಳನ್ನು ನೀರು ಇರುವ ದೋಣಿ(ಎರಡು ಬಂಡೆಯ ನಡುವಿನಲ್ಲಿ ನಿಂತಿರುವ ನೀರು)ಯ ಹತ್ತಿರ ತರುತ್ತಾನೆ. ತಂದು ಗಿಂಡಿಗೆಯ ಒಳಕೆ ಮುಕ್ಕಾಲು ಭಾಗ ಅಕ್ಕಿಯನ್ನು ತುಂಬುತ್ತಾನೆ. ಅದೇ ರೀತಿಯಲ್ಲಿ ಕಳಸಕ್ಕೂ ಅಕ್ಕಿ ಹಾಕಿ, ಗಿಂಡಿಯ ಒಳಗೆ ಹೊಂಬಾಳೆಯನ್ನು(ತೆಂಗಿನ ಮರದ್ದು) ಹಾಕುತ್ತಾನೆ. ಅದೇ ರೀತಿಯಲ್ಲಿ ಕಳಸಕ್ಕೆ ವೀಳ್ಯದೆಲೆ ಹಾಕಿ ಸಿಂಗರಿಸುತ್ತಾನೆ. ಆ

ಹೊತ್ತಿಗಾಗಲೇ ಸಮಸ್ತ ಇರುಳಿಗರು ದೋಣೆಯ ಬಳಿ ಸೇರಿರುತ್ತಾರೆ. ಈ ಪೂಜಾ ಕೈಂಕರ್ಯಗಳೆಲ್ಲ ಮುಗಿದ ಮೇಲೆ ನಾಡಗೌಡನ ಒಪ್ಪಿಗೆ ಪಡೆದು ಮೆರವಣಿಗೆಯ ಮೂಲಕ ಪೂಜಾ ಸಾಮಗ್ರಿಗಳನ್ನು ಕಟ್ಟಿರುವ ಬೆಪ್ಪಾಲೆ ಮರದ ಬಳಿಗೆ ಬರುತ್ತಾರೆ. ಪೂಜಾ ಸಾಮಗ್ರಿಗಳನ್ನು ಮರದಿಂದ ಕಳೆದುಕೊಂಡು ಕರಗವನ್ನು ಪೂಜಾರಿ ಮೇಲೆ ಹೊರಿಸಿಕೊಂಡು ಈಗಾಗಲೇ ಸಿದ್ಧಪಡಿಸಿಕೊಂಡಿರುವ ಅರೆಕಲ್ಲು(ಅರೆಬಂಡೆ) ಬಳಿಗೆ ಬರುತ್ತಾರೆ. ಇದನ್ನು "ಒಳಮೆಟ್ಟಿಸುವುದು" ಎನ್ನುತ್ತಾರೆ. ಅಂದರೆ ಪೂಜಾರಿಯ ತಲೆಯ ಮೇಲೆ ಕರಗವನ್ನು ಇಟ್ಟು ಅವನ ಮೇಲೆ ದೇವರು ಭರಿಸಿಕೊಂಡು ಕರೆದುಕೊಂಡು ಬರುವುದು. ನಂತರ ಈ ಸಂದರ್ಭದಲ್ಲಿ ತಮಟೆ ವಾದ್ಯಗಳು ಹೆಚ್ಚಾಗಿ ಶಬ್ದ ಮಾಡುತ್ತಿರುತ್ತವೆ. ಇತ್ತ ಕಡೆ ಅದಾಗಲೇ ನಾಲ್ಕೈದು ಜನ ಬಂದು ಅರೆಕಲ್ಲನ್ನು ಶುದ್ಧವಾಗಿ ತೊಳೆದು ರಂಗೋಲಿ ಹಾಕಿ ಶುಚಿಗೊಳಿಸಿಟ್ಟು ಕೊಂಡಿರುತ್ತಾರೆ. ಮೊದಲೇ ನಿರ್ಧರಿಸಿ ಆಯ್ಕೆ ಮಾಡಿಕೊಂಡಿರುವ ಸ್ಥಳದಲ್ಲಿ ಅನುಕೂಲಕರವಾಗಿರುವ ಮತ್ತು ಅನೂಚಾನವಾಗಿ ಪರಂಪರೆಯಿಂದ ನಡೆಸಿಕೊಂಡು ಬಂದಿರುವ ಅರೆಕಲ್ಲಿನ ಮೇಲಕ್ಕೆ ಬಂದು ಸೇರುತ್ತಾರೆ.

ಹೀಗೆ ಶುಚಿಗೊಳಿಸಿರುವ ಅರೆಕಲ್ಲಿನ ಒಂದು ಭಾಗದಲ್ಲಿ ಮೂರರಿಂದ ನಾಲ್ಕು ಸೇರು ರಾಗಿ ಅಥವಾ ಅಕ್ಕಿ ಸುರಿದು ಹಸೆ ಮಾಡುತ್ತಾರೆ. ಈ ಹಸೆಯ ಮೇಲೆ ಕೆಂಪು ಟವಲ್‌ನ್ನು ಹಾಕಿ ಅದರ ಮೇಲೆ ಮೆರವಣಿಗೆಯಲ್ಲಿ ಹೊತ್ತು ತಂದ ಕಳಸ ಮತ್ತು ಗಿಂಡಿಯನ್ನು ಇಡುತ್ತಾರೆ. ನಂತರ ಬಂದಿರುವ ಎಲ್ಲ ಸಮಸ್ತ ಇರುಳಿಗರು ಆ ಕಳಸ ಮತ್ತು ಕರಗಕ್ಕೆ ಪೂಜೆ ಮಾಡುತ್ತಾರೆ. ಹೀಗೆ ಪೂಜೆ ಮಾಡಿದ ನಂತರ ಬೆಪ್ಪಾಲ ಮರದ ಕೆಳಗೆ ಸಾಲಾಗಿ ಐದಾರು ಕಲ್ಲನ್ನು ಜೋಡಿಸಿಟ್ಟು ಇವುಗಳೇ ತಮ್ಮ ಪೂರ್ವಿಕರು ಎಂದು ನಂಬುತ್ತಾರೆ. ಈ ಕಲ್ಲುಗಳನ್ನು ಹಸನಾಗಿ ತೊಳೆದು ಅವುಗಳಿಗೆ ಅರಿಶಿಣ, ಕುಂಕುಮ ಇಟ್ಟು ಹೂ ಮುಡಿಸಿ ಎಲೆ, ಅಡಿಕೆ, ಬಾಳೆಹಣ್ಣಿನ ಚರ್ಪುನ್ನು ಮಾಡಿ ಎಲ್ಲರಿಗೂ ಹಂಚುತ್ತಾರೆ. ನಂತರ ಈ ಹಬ್ಬಕ್ಕೆ ಎಂದೇ ಮೀಸಲಿರಿಸಿದ್ದ ಕುರಿ, ಮೇಕೆ, ಕೋಳಿಗಳನ್ನು ಕೊಯ್ದು ಅಡುಗೆ ಮಾಡುತ್ತಾರೆ. ತಂದ ಪ್ರಾಣಿಗಳನ್ನು ಕೂಯ್ಯುವಾಗ ಈ ಪೂರ್ವಿಕ ಪಿತೃವಿನ ಕಲ್ಲುಗಳಿಗೆ ಮುಂದೆ ಬಿಳಿಯ ಬಟ್ಟೆಯನ್ನು ಅಡ್ಡಲಾಗಿಡುತ್ತಾರೆ. ಈ ದೇವರುಗಳನ್ನು ನೋಡಬಾರದೆಂದು 'ತೆರ' ಎಳೆಯಲಾಗುತ್ತದೆ ಎನ್ನುತ್ತಾರೆ. ಕುರಿ, ಕೋಳಿಗಳನ್ನು ಕೂಯ್ಯುವ ಸಂದರ್ಭದಲ್ಲಿ ಹೊರ ಬರುವ ರಕ್ತವನ್ನು ಹತ್ತು ಅಥವಾ ಹನ್ನೆರಡು ಸದೃಢ ಯುವಕರು ವೃತ್ತಾಕಾರದಲ್ಲಿ ಒಬ್ಬರ ಹೆಗಲ ಮೇಲೆ ಒಬ್ಬರು ಕೈ ಹಾಕಿಕೊಂಡು ಜೋಲಿ ಹೊಡೆಯುತ್ತಾರೆ. ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ ತೂಗುತ್ತಾ ಉನ್ಮಾದದಿಂದ ಚೀರುತ್ತಾರೆ. ಈ ಸಂದರ್ಭದಲ್ಲಿ ಕೆಲವು ಯುವಕರ ಮೇಲೆ ಹಿರಿಯರು ಆಹ್ವಾನವಾಗಿ ಬಂದು(ಮೈಮೇಲೆ ಬರುವುದು) ಕುರಿ, ಕೋಳಿ ಮತ್ತು ಮೇಕೆಯ ರಕ್ತವನ್ನು ನಾಲಿಗೆಯಿಂದ ನೆಕ್ಕಿ ಹೀರಿಕೊಳ್ಳುತ್ತಾರೆ. ಈ ಆಟ ಸ್ವಲ್ಪ ಹೊತ್ತು ನಡೆಯುತ್ತದೆ. ಈ ಸಂದರ್ಭದಲ್ಲಿ ಪ್ರತಿಯೊಬ್ಬ ಯುವಕರು ಇಹಲೋಕದ ಜ್ಞಾನವನ್ನು ಕಳೆದುಕೊಂಡವರಂತೆ ಕಂಡುಬರುತ್ತಾರೆ.

ನಂತರ ಎಲ್ಲರ ಮೇಲೆ ತೀರ್ಥ ಹಾಕುವ ಮೂಲಕ ಕಣಿಗಾರ ಪೂಜಾರಿಯು ನಿಯಂತ್ರಿಸುತ್ತಾನೆ. ಆಗ ಎಲ್ಲರೂ ಸಮಾಧಾನಗೊಳ್ಳುತ್ತಾರೆ. ನಂತರ ಎಲ್ಲರೂ ಒಟ್ಟಾಗಿ ಸೇರಿ ಅಡುಗೆ ಸಿದ್ಧ ಮಾಡಿ ಹಿರಿಯರಿಗೆ ಎಡೆ ಇಟ್ಟು ಎಲ್ಲಾ ಪೂಜೆ, ಪುನಸ್ಕಾರಗಳನ್ನು ಮುಗಿಸಿದ ಮೇಲೆ ಎಲ್ಲರೂ ಮೊದಲೇ ತಯಾರಿಸಿರುವ ಅಡುಗೆಯನ್ನು ಊಟ ಮಾಡುತ್ತಾರೆ. ಅಂದಿನ ಹಬ್ಬಕ್ಕೆ ಬಂದು ನೆರೆದ ಎಲ್ಲ ಸೀಮೆಯ ಜನರೂ ಊಟ ಮಾಡುತ್ತಾರೆ. ಇಲ್ಲಿಯೂ ಕೂಡ ಊಟ ಮಾಡುವಾಗ ಕೋಲಕಾರನ ಪಾತ್ರ ಬಹುಮುಖ್ಯವಾಗಿರುತ್ತದೆ. ಅವನು ಅನುಮತಿಸುವವರೆಗೆ ಯಾರೂ ಊಟ ಮಾಡುವಂತಿಲ್ಲ. ಎಲ್ಲರ ಊಟ ಮುಗಿಯುವವರೆಗೆ ಮೊದಲೇ ಎದ್ದು ಯಾರೂ ಕೈ ತೊಳೆದುಕೊಳ್ಳುವಂತಿಲ್ಲ.

೫.೪. ನಾಟಿ ವೈದ್ಯಪದ್ಧತಿ

ಆದಿ ಮಾನವನು ಪ್ರಕೃತಿಯ ಜೊತೆ ಸೆಣಸಾಡುತ್ತಾ, ತಾನು ಬದುಕಲು ಪ್ರಕೃತಿಯ ಮೇಲೆ ಹಲವಾರು ಪ್ರಯೋಗಗಳನ್ನು ಮಾಡುತ್ತಲೇ ತನ್ನ ಮಸ್ತಕದಲ್ಲೂ ಅನುಭವಗಳನ್ನು ದಾಖಲಿಸುತ್ತಾ ಬಂದನು. ಬೆಂಕಿಯನ್ನು ಮುಟ್ಟಿ ಸುಟ್ಟಕೊಂಡ ನಂತರ ಅದನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡನು. ಪ್ರಾಣಿಗಳ ಜೊತೆ ನಿರಂತರವಾಗಿ ಗುದ್ದಾಡಿ ಅವುಗಳ ಸೂಕ್ಷ್ಮತೆಗಳನ್ನು ಗ್ರಹಿಸಿ ತನ್ನ ಅಧೀನದಲ್ಲಿರಿಸಿಕೊಂಡನು. ಹೀಗೆ ಪ್ರಕೃತಿಯ ಮೇಲೆ ಅವನ ಪ್ರಯೋಗ ನಿರಂತರವಾಗಿ ಸಾಗಲಾರಂಭಿಸಿತು. ಪ್ರಕೃತಿಯು ಒಡ್ಡುವ ಅನೇಕ ಸವಾಲುಗಳಿಗೆ ತನ್ನ ಅನುಭವದ ಮತಿಯ ಶಕ್ತಿಯಿಂದ ಜವಾಬು ಕೊಡಲು ಸಿದ್ಧಗೊಳ್ಳುವ ಹಂತಕ್ಕೆ ತಲುಪಿದನು. ಇವುಗಳ ಫಲವಾಗಿಯೇ ಅವನಿಗೆ ಅರಣ್ಯದಲ್ಲಿನ ಗಿಡಮೂಲಿಕೆ, ಔಷಧಿಯುಕ್ತ ಪದಾರ್ಥಗಳ ಪರಿಚಯವಾಯಿತು. ಇವುಗಳನ್ನು ತನ್ನ ದೇಹದಲ್ಲಿ ಉಂಟಾಗುವ ವ್ಯತಿರಕ್ತ ಪರಿಣಾಮಗಳ ಮೇಲೆ ಬಳಸಿ ಗುಣಪಡಿಸಿಕೊಳ್ಳುವ ಚಾಕಚಕ್ಯತೆ ಪಡೆದುಕೊಂಡನು. ಇದೇ ಮುಂದೆ ವಿದ್ಯೆಯಾಗಿ ಮಾರ್ಪಟ್ಟು ಗುಂಪಿನಲ್ಲಿ ಈ ವಿದ್ಯೆ ವ್ಯಕ್ತಿಯ ಶ್ರೇಷ್ಠತೆಯನ್ನು ಹೆಚ್ಚಿಸಿತು. ಇವನನ್ನು ನಾಟಿ ವಿದ್ಯೆ ಪಂಡಿತ, ಕಟ್ಟುಗೌಡ, ಕಣಿಕಾರ, ಅರಳೇಕಾಯಿ ಪಂಡಿತ ಎಂಬ ಹೆಸರುಗಳಿಂದ ಕರೆಯಲ್ಪಟ್ಟನು.

ನಾಡಿನಿಂದ ದೂರವಿದ್ದು ಕಾಡಿನಲ್ಲಿಯೇ ಜೀವನ ನಡೆಸುವ ಎಷ್ಟೋ ಬುಡಕಟ್ಟುಗಳು ತಮ್ಮದೇ ಆದ ನಾಟಿವಿದ್ಯೆ ಪದ್ಧತಿಗಳಿಂದ ತಮ್ಮ ಕಾಯಿಲೆ ಕಸಾಲೆಗಳನ್ನು ಗುಣಪಡಿಸಿಕೊಂಡು ಇಂದಿನ ವೈದ್ಯಕೀಯ ಪ್ರಪಂಚಕ್ಕೆ ಸವಾಲಾಗಿದ್ದಾರೆ. ನಗರ ಪಟ್ಟಣಗಳಲ್ಲಿ ಕಂಡುಬರುವ ಹಲವಾರು ಕಾಯಿಲೆಗಳಿಗೆ ಮದ್ದು ನೀಡುವ ಹಂತಕ್ಕೆ ತಲುಪಿದ್ದಾರೆ. ಪ್ರಕೃತಿಯ ಜೊತೆ ತಮ್ಮ ಜೀವನ ವಿಧಾನವನ್ನು ಬದಲಿಸಿಕೊಂಡು ತಮ್ಮದೇ ಆದ ಜ್ಞಾನ ಪರಂಪರೆಯನ್ನು ಸಂಗ್ರಹಿಸಿಕೊಂಡು ಬರುತ್ತಿರುವ ಬುಡಕಟ್ಟುಗಳ ಜ್ಞಾನವು ಪರಂಪರಾನುಗತವಾಗಿ ಬಂದಿದ್ದು ಪ್ರತಿಯೊಂದನ್ನು ತಮ್ಮ ಅನುಭವಗಳಿಂದ ಖಚಿತಪಡಿಸಿಕೊಂಡಿರುವುದನ್ನು ಕಾಣಬಹುದು. ಆಧುನಿಕ ವೈದ್ಯಕೀಯ

ಪ್ರಪಂಚ ಅನೇಕ ಔಷಧಿಗಳನ್ನು ಕಂಡುಹಿಡಿಯಲು ಪ್ರಾಣಿಗಳ ಮೇಲೆ ಮೊದಲು ಪ್ರಯೋಗಿಸಿ ದೃಢಪಡಿಸಿಕೊಂಡರೆ, ಬುಡಕಟ್ಟು ಜನರು ಪ್ರತಿಯೊಂದು ಪ್ರಯೋಗವನ್ನು ತಮ್ಮ ಮೇಲೆ ಪ್ರಯೋಗಿಸಿ ಖಚಿತಪಡಿಸಿಕೊಂಡಿರುವುದನ್ನು ಕಾಣಬಹುದು.

ಬುಡಕಟ್ಟುಗಳು ತಮ್ಮ ಸಮಸ್ಯೆಗಳನ್ನು ಎರಡು ಭಾಗಗಳಾಗಿ ವಿಂಗಡಿಸಿಕೊಳ್ಳುತ್ತಾರೆ. ಅವುಗಳೆಂದರೆ ಮಾನಸಿಕ ಕಾಯಿಲೆಗಳು ಮತ್ತು ದೈಹಿಕ ಕಾಯಿಲೆಗಳು ಇವುಗಳಿಗೆ ಪ್ರತ್ಯೇಕವಾಗಿಯೇ ಪರಿಹಾರಗಳನ್ನು ಕಂಡುಕೊಂಡಿರುವುದನ್ನು ಕಾಣಬಹುದು. ಮಾನಸಿಕ ಕಾಯಿಲೆಗಳಿಗೆ ಮಾನಸಿಕ ಸ್ಥಿತಿ ವೃದ್ಧಿಸುವ ಮೂಲಕ ಪರಿಹಾರ ಕಂಡುಕೊಂಡರೆ, ದೈಹಿಕ ಕಾಯಿಲೆಗಳಿಗೆ ಗಿಡಮೂಲಿಕೆ, ಪ್ರಾಣಿಗಳ ಚರ್ಮ, ಕೊಬ್ಬು, ಮಾಂಸ, ಮರದ ಎಲೆ ಸೊಪ್ಪು, ಕಾಯಿ ಮುಂತಾದವುಗಳನ್ನು ಹಚ್ಚುವ ಮೂಲಕ ಗುಣಪಡಿಸಿಕೊಳ್ಳುತ್ತಾರೆ. ಒಂದು ನಾಯಿ ಅಜೀರ್ಣವಾದಾಗ ಪಕ್ಕದಲ್ಲಿದ್ದ ಗರಿಕೆಯನ್ನು ತಿಂದು ವಾಂತಿ ಮಾಡಿಕೊಳ್ಳುವಂತೆ ಬುಡಕಟ್ಟುಗಳು ತಮ್ಮ ಸಮಸ್ಯೆಗಳಿಗೆ ತಮ್ಮ ಸುತ್ತಲಿನ ಪರಿಸರದಲ್ಲೇ ಪರಿಹಾರ ಕಂಡುಕೊಳ್ಳುತ್ತಾರೆ.

ಭಾರತದ ಪ್ರಾಚೀನ ಬುಡಕಟ್ಟುಗಳಲ್ಲಿ ಒಂದಾದ ಇರುಳಿಗ ಬುಡಕಟ್ಟು ಇಂದಿಗೂ ಅರಣ್ಯದ ಜೊತೆ ನಂಟು ಇಟ್ಟುಕೊಂಡು ಬದುಕುತ್ತಿರುವುದನ್ನು ಕಾಣಬಹುದು. ತಮ್ಮ ಎಲ್ಲಾ ಸಮಸ್ಯೆಗಳಿಗೆ ಇವತ್ತಿನ ಆಧುನಿಕ ಸಮಾಜದಲ್ಲೂ ಗಿಡಮೂಲಿಕೆಯ ಔಷಧಿಗಳನ್ನು ಅವಲಂಬಿಸಿರುವುದು ಕಂಡುಬರುತ್ತದೆ. ಇರುಳಿಗರಲ್ಲಿ ಹಿರಿಯ ತಲೆಮಾರಿನವರು ಯಾವುದೇ ಕಾಯಿಲೆ ಕಸಾಲೆಗಳಿಲ್ಲದೆ ನೂರು ವರ್ಷ ಮೇಲ್ಪಟ್ಟು ಬದುಕಿರುವ ಹಲವಾರು ನಿದರ್ಶನಗಳನ್ನು ಕಾಣಬಹುದು. ಇದಕ್ಕೆಲ್ಲಾ ಇವರ ಪ್ರಕೃತಿಯೊಂದಿಗಿನ ಜೀವನ ವಿಧಾನವೇ ಕಾರಣ ಎಂದರೆ ತಪ್ಪಾಗಲಾರದು. ಇರುಳಿಗರು ಮಾನಸಿಕ ಕಾಯಿಲೆಗಳಿಗೆ ಅಂತ್ರ, ತಂತ್ರ, ಮಂತ್ರ, ದೃಷ್ಟಿ ತೆಗೆಯುವುದು, ಶಾಂತಿ ಮಾಡಿಸುವುದು, ಬಲಿ ಕೊಡುವುದು, ವಾರ ಒಪ್ಪೋತು ಮಾಡುವುದು, ಪೂಜೆ ಪುನಸ್ಕಾರ ಮಾಡುವುದು. ದೆವ್ವ ಬಿಡಿಸಿಕೊಳ್ಳುವುದು, ಹರಕೆ ತೀರಿಸುವುದು, ಕಾಲ್‌ಧೂಳು ತೆಗೆಯುವುದು, ರತ್ನದ ನೀರು ಹಾಕುವುದು, ಮೂರು ದಾರಿ ಕೂಡುವ ಸ್ಥಳದಲ್ಲಿ ತಡೆ ಒಡೆಯುವುದು, ಗೊಂಬೆ ತಿದ್ದಿಸುವುದು, ಮೊಟ್ಟೆ, ಮಡಿಕೆ ಒಡೆಯುವುದು, ಕೋಳಿ ಕೊಯ್ದು ರಕ್ತ ಬಿಡುವುದು, ಕಂಟ ಸುಡುವುದು, ಬಿದ್ದಗುಳಿ ಎತ್ತುವುದು, ಕಣಿ ಹಾಕಿಸುವುದು, ಕಾಲ್ ಡ್ರಂಜ್ ಹಾಕಿಸುವುದು ಇತ್ಯಾದಿ ಮಾರ್ಗಗಳ ಮೂಲಕ ಮಾನಸಿಕ ಕಾಯಿಲೆಗಳನ್ನು ಗುಣಪಡಿಸಿ ಕೊಳ್ಳುತ್ತಾರೆ.

ದೈಹಿಕ ಕಾಯಿಲೆಗಳಾದ ಜ್ವರ, ಕೆಮ್ಮು, ನೆಗಡಿ, ತಲೆನೋವು ಮೈಕೈ ನೋವು, ಹೊಟ್ಟೆ ನೋವು, ಶೀತದ ಕೆಮ್ಮು ಬರಗೆಮ್ಮ, ಶೀತಾಳ್ ಶಿಡ್ಬು, ಮಾತ್‌ಕಟ್ಟು, ಬಾಯಿಬೆಸಲು, ಅಕ್ಕಕ್, ಕಿರುನಾಲಿಗೆ ಬೀಳುವುದು, ಗಂಟಲು ನೋವು, ಕೆಂಬಾರ, ಕಾಮಾಲೆರೋಗ, ಎದೆನೋವು ಎಂಜಲುಗುಳ್ಳೆ, ಅರಾಸ್ತಿ ಕೆಂಬಸ್ತಿ, ಹಸಿರು ಮೂಡಿಗೆ, ಕಿವಿಯಲ್ಲಿ ಗುಗ್ಗೆ ಅರಳುವುದು,

ಹುಳುಕಡ್ಡಿ, ನೀರಿಸುಬು, ಹಾಲಿಸುಬು, ಬರಿಸುಬು, ಪೆಣೆ, ಅಂಗಾಲು ಪೆಣೆ, ತೊಡೆಬಾಳೆ, ಶಂಖುದಾಳ, ಜಂತೂಳ, ಕುರು, ಕುಪ್ಪ ಕುರು, ಶೆಖೆಗುಳ್ಳೆ, ಪೈತ್ಯೆ, ಸಿಡುಬು, ಸರುಣ್ಣು, ಸರ್ಪಸುತ್ತು ಕಜ್ಜಿ, ಸುಟ್ಟಗಾಯ, ಕುಡುಗೋಲುಗಾಯ, ಅರ್ಪ, ಉಗುರುಸುತ್ತು, ಕಲ್ಲೋತ್ಲು. ಅಂಗಾಲವರು, ಮಾದಕಟ್ಟು, ಬಿದ್ದುಗುಲಿ, ಬಂಜೆತನ, ಋತುಮತಿಯಾಗದೆ ಇರುವುದು, ಜಾನುವಾರುಗಳಿಗೆ ಬರುವ ಪ್ರಮುಖ ದೈಹಿಕ ಕಾಯಿಲೆಗಳಾದ ಗೂಬೆ ರೋಗ, ಎದೆಬಾವು, ಬುಜಭಾವು, ಗೆರೆಸಲು, ಹರಸ್ತಿ, ರಕ್ತ ಪಿಂಜರಿ, ಹೆಗಲುಬಾವು, ಹೊಟ್ಟೆ ಉಬ್ಬರಿಸಿಕೊಳ್ಳುವುದು. ಎಣ್ಣೆ ಹೆಚ್ಚಾಗುವುದು, ಸತ್ತೆ ಬೀಳದೆ ಇರುವುದು, ಕಾಲು ಬಾಯಿರೋಗ, ಜ್ವರ, ಹುತ್ತಗೊಂಬು, ಚಪ್ಪೆರೋಗ, ನಾಗೇರು ರೋಗ ಮುಂತಾದ ಸಮಸ್ಯೆಗಳಿಗೆ ಕಾಡಿನಲ್ಲಿ ಸಿಗುವ ಗಿಡಮೂಲಿಕೆಗಳು, ಮರದ ಚೆಕ್ಕೆ, ಹೂ, ಕಾಯಿ, ಎಲೆ, ಬೇರು, ಅಂಬು, ಪುಡಿ ಮತ್ತು ಪ್ರಾಣಿಯ ಮಾಂಸ, ಕೊಬ್ಬು, ಎಂಜಲುಗಳ ಜೊತೆಗೆ ಪೇಟೆಯ ಗಂಧಿಗೆ ಅಂಗಡಿಯಲ್ಲಿ ಸಿಗುವ ಕೆಲವು ವಿಶೇಷ ವಸ್ತುಗಳೊಂದಿಗೆ ಬೆರೆಸಿ ಹಚ್ಚುವ ಮೂಲಕ ದೈಹಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಾರೆ. ಅಂತಹ ಪ್ರಮುಖ ಗಿಡಮೂಲಿಕೆಗಳೆಂದರೆ ಕಾಡ್ ಈರುಳ್ಳಿ, ಇಸ್ಪಿರಿಬೇರು, ಕಾಡ್‌ನೆಲ್ಲಿಕಾಯಿ, ಕಾಡ್ ಮೆಣಸಿಗೆ, ಕೋಳಿ ಕಾಲುಸೊಪ್ಪು, ತುಂಬೆಸೊಪ್ಪು, ತುಂಬೆ ಹೂ, ಅಮಟೆ ಸೊಪ್ಪು, ಗೇರುಬೀಜ, ವಿಷ್ಣು ಕಾಂತಿ ಸೊಪ್ಪು, ನೆಲ್ಲವರೆಕಾಯಿ, ತಪಾಲದ ಚೆಕ್ಕ ಮತ್ತು ಎಲೆ, ಕೆಂಬಾರೆ ಸೊಪ್ಪು, ಬೇವಿನ ಎಲೆ, ಹೊನಗಾನೆ ಸೊಪ್ಪು, ಹರಳೆಣ್ಣೆ, ಎಕ್ಕದ ಗೆಡ್ಡೆ ಮತ್ತು ಹೂ, ಕಾಡ್ ತೊಳಚಿಗಿಡ ನಾಗದಾಳೆಬೇರು, ಚೆಕ್ಕೆ, ಮೊಗ್ಗು, ಗೇರುಸೊಪ್ಪು, ಮುಟ್ಟಿದರೆ ಮುನಿಸೊಪ್ಪು, ರಕ್ತಾಳೆ, ಬೂತಾಳೆ, ಉಪ್ಪುಚ್ಚಿ ಮುಳ್ಳು, ಕೈಗಕ್ಕೆ ಸೊಪ್ಪು, ರೋಜ ಹೂ ಮತ್ತು ಎಲೆ, ಗುಳೆಕಾಯಿ, ಆಡು ಮುಟ್ಟದ ಸೊಪ್ಪು, ಸಂಜೀವಿನಿ ಕಡ್ಡಿ ಮತ್ತು ಸೊಪ್ಪು, ಹೊಂಗೆ ಬೀಜ ಮತ್ತು ಸೊಪ್ಪು, ನೆಲ್ಲಿಕಾಯಿ, ಈರುಳ್ಳಿ, ಹಿಟ್ಟು, ಕತ್ತೆಲದ್ದಿ ಮತ್ತು ಉಚ್ಚೆ, ಬೆಳ್ಳಿ, ಸತು, ಪಾದರಸ, ಹೊಗೆಸೊಪ್ಪು, ಗಂಧ, ಕಸ್ತೂರಿ ಮೃಗದ ಅಂಟು, ಹಂದಿ ಕರಳು, ಅದರ ಕಸ, ಮಾಂಸ, ಕೇರೆ ಹಾವಿನ ಕೊಬ್ಬು ಮತ್ತು ಮಾಂಸ, ಮಾಂಸ(ಜಿವಾಜಿ) ಮತ್ತು ಕೊಬ್ಬು, ತೊಳಖಿ ಮಾಂಸ, ಪುನುಗು ಬೆಕ್ಕಿನ ಮಾಂಸ, ನಾಯಿ ಉಚ್ಚೆ ಊದ ಜಾಗದ ಮಣ್ಣು, ವಿಭೂತಿಗಟ್ಟಿ ಮೀನೆಣ್ಣೆ, ಹಂಚಿನ ಚೂರು, ಮೇಕೆಹಾಲು, ಹಸುವಿನ ಹಾಲು, ಮುಸುವದ ಮಾಂಸ ಮತ್ತು ರಕ್ತ, ಆಮೆ ಮಾಂಸ ಮತ್ತು ಚಿಪ್ಪು, ಚಿಪ್ಪು ಹಂದಿಯ ಮಾಂಸ ಮತ್ತು ಚಿಪ್ಪು ಮುಂತಾದ ಅತ್ಯಮೂಲ್ಯ ವಸ್ತುಗಳನ್ನು ಬಳಸಿ ಔಷಧಿಗಳನ್ನು ತಯಾರಿಸುತ್ತಾರೆ.

ಕೆಲವೊಂದು ಕಾಯಿಲೆಗಳಿಗೆ ಇರುಳಿಗರು ಕಂಡುಕೊಂಡಿರುವ ಔಷಧಿಗಳು. 'ಸನ್ನಿ' ಬಾಣಂತಿಗೆ ಸನ್ನಿ ಹೊಡೆಯುವುದು ಎಂಬ ಕಾಯಿಲೆ ಬರುತ್ತದೆ. ಇದು ಅತ್ಯಂತ ಗಂಭೀರ ಪರಿಣಾಮದಲ್ಲಿದ್ದು ಸಾವನ್ನು ತಂದೊಡ್ಡುವ ಪ್ರಸಂಗವೂ ಉಂಟು. ಇದರಿಂದ ಬಾಣಂತಿಗೆ ವಿಪರೀತ ಶೀತವಾಗಿ ಪ್ರಜ್ಞೆ ಕಳೆದುಕೊಂಡು ಕೈಕಾಲುಗಳು ಮೂರ್ಛೆ ರೋಗದಂತೆ ಒದರುತ್ತವೆ.

ಆಗ ಬೆಪ್ಪಾಲೆ ಮರದ ಸೊಪ್ಪನ್ನು ಮುಳ್ಳು ಹಂದಿಯ ಹೊಟ್ಟೆಯ ಕರಚು(ಕರಳು)ನೊಂದಿಗೆ ಕುಟ್ಟಿ ತಲೆಗೆ ಲೇಪನ ಹಾಕಿದರೆ ಬಾಣಂತಿಗೆ ಹಿಡಿದ ಸನ್ನಿ ಬಿಡುತ್ತದೆ.

ಮಗುವಿಗೆ ಮಂದವಾಗುವುದು: ಮಗುವಿಗೆ ಪದೇ ಪದೇ ಭೇದಿ ಆಗಿ ಆ ಭೇದಿ ನೀರಿನ ರೂಪದಲ್ಲಿದ್ದರೆ ಅದನ್ನು "ಮಂದ" ಎಂದು ಕರೆಯುತ್ತಾರೆ. ಈ ಸಂದರ್ಭದಲ್ಲಿ ಮಗು ಜಗ್ಗಿ ಬೀಳುವುದು ಅಥವಾ ಪದೇ ಪದೇ ಹೆದರಿಬೀಳುವುದು ಮಾಡಿ ಭೇದಿ ಮಾಡಿಕೊಳ್ಳುತ್ತದೆ. ಮಗುವಿನ ಕಿವಿ ಮಾತ್ರ ಯಾವಾಗಲೂ ತಣ್ಣಗಾಗಿದ್ದು, ದೇಹವೆಲ್ಲ ಬಿಸಿಯಾಗಿರುತ್ತದೆ. ಇಂತಹ ಸಮಸ್ಯೆ ಕಂಡು ಬಂದಾಗ ಕೈಯಣ್ಣೆ(ಹರಳೆಣ್ಣೆ) ದೀಪದಿಂದ ಬಳೆಯ ಚೂರನ್ನು ಕೆಂಪಾಗಿ ಕಾಯಿಸಿ "ಚುಟುಕಿ" ಹಾಕುತ್ತಾರೆ. ಈ ಚುಟುಕಿಯನ್ನು ಕಣ್ಣುಬ್ಬು, ನೆತ್ತಿ, ಹೆಬ್ಬರಳಿನ ನರ ಮುಂತಾದ ಭಾಗದಲ್ಲಿ ಹಾಕಿ ಈ ಸಮಸ್ಯೆಯಿಂದ ಪಾರಾಗಿಸುತ್ತಾರೆ.

ಅಕ್ಕಕ್ : ಮಗುವು ಹುಟ್ಟಿದ ಮೇಲೆ ಹೊಟ್ಟೆ ಮಾತ್ರ ಬೆಳವಣಿಗೆಗೊಂಡು ಕೈಕಾಲುಗಳು ಸಣ್ಣದಾಗುತ್ತಾ ಬೆಳವಣಿಗೆ ಕುಂಠಿತವಾಗುತ್ತದೆ. ಮಗು ಅತ್ಯಂತ ಸಣ್ಣದಾಗಿ ಕೋತಿಯ ಮರಿಯಂತೆ ಕಾಣುತ್ತದೆ. ಇದನ್ನು ಹಕ್ಕಿರೋಗ, ರಿಕೆಟ್ಸ್, ಲಿವರ್‌ಕಾಯಿಲೆ, ಮೆದುಳು ರೋಗ ಎಂಬ ಹೆಸರುಗಳಿಂದ ಕರೆಯುತ್ತಾರೆ. ಈ ಕಾಯಿಲೆ ಮಗುವಿಗೆ ಆರು ತಿಂಗಳಿಂದ ಐದು ವರ್ಷಗಳ ಒಳಗೆ ಕಾಣಿಸಿಕೊಳ್ಳುತ್ತದೆ. ಇಂದಿನ ವೈದ್ಯಕೀಯ ಪ್ರಪಂಚ "ಡಿ" ಜೀವಸತ್ವದಿಂದ ಬರುವ ಕಾಯಿಲೆ ಎಂದು ದೃಢೀಕರಿಸಿದೆ. ಈ ಕಾಯಿಲೆ ಕಂಡುಬಂದ ಮಗುವಿಗೆ ತೋಲಕ್ಕೆ(ಬಾವಲಿ)ಯನ್ನು ಹೊಡೆದು, ಕೈಯಣ್ಣೆ(ಹರಳೆಣ್ಣೆ)ಯಲ್ಲಿ ಬೇಯಿಸಿ ಆ ಎಣ್ಣೆಯನ್ನು ದಿನಂಪ್ರತಿ ಮೈಕೈಗೆ ಸವರಿ, ಸ್ವಲ್ಪ ಹೊಟ್ಟೆಗೆ ತಿನಿಸಿದರೆ ರೋಗ ನಿವಾರಣೆಯಾಗುತ್ತದೆ. ಇಲ್ಲವಾದಲ್ಲಿ ಬಿದಿರು ಮೆಳೆ(ಗಿಡ)ಯಲ್ಲಿ ವಾಸ ಮಾಡುವ ಕಾಡುಪಾಪವನ್ನು ಹೊಡೆದು ತಂದು ಕೈಯೆಣ್ಣೆಯಲ್ಲಿ ಬೇಯಿಸಿ ಅದರ ಎಣ್ಣೆಯಿಂದ ದಿನಂಪ್ರತಿ ಮಸಾಜು ಮಾಡಿ, ಸ್ವಲ್ಪ ಹೊಟ್ಟೆಗೆ ತಿನಿಸಿದರೆ ಈ ಕಾಯಿಲೆ ಎರಡರಿಂದ ಮೂರು ತಿಂಗಳಲ್ಲಿ ಮಾಯವಾಗುತ್ತದೆ.

ಗ್ವಾರೆ : ಮಗುವಿನ ದೇಹದ ಮೇಲೆ ಗುಳ್ಳೆಗಳುಂಟಾಗುವ ಕಾಯಿಲೆ ಇದನ್ನು ಆಡು ಅಥವಾ ಕುರಿಯ ಕಸರೆಯನ್ನು ಮೈಗೆಲ್ಲಾ ಸವರಿ ಬಿಸಿ ನೀರಿನಿಂದ ಸ್ನಾನ ಮಾಡಿಸಿದರೆ ವಾಸಿಯಾಗುತ್ತದೆ.

ಮಾತಕಟ್ಟು : ಮಗುವಿನ ಹೊಟ್ಟೆ ಮಾತ್ರ ದಪ್ಪವಾಗುತ್ತಾ ಕೈಕಾಲುಗಳು ಸಣ್ಣವಾಗುವ ಕಾಯಿಲೆಯಾಗಿದೆ. ದಿನದಿಂದ ದಿನಕ್ಕೆ ಮಗು ಸೊರಗಿ ಮಾತನಾಡುವುದನ್ನು ನಿಲ್ಲಿಸಿಬಿಡುತ್ತದೆ. ಆಗ 'ಮಾತಕಟ್ಟು ಮಣಿ' ಎಂಬುದನ್ನು ತಂದು ಕಟ್ಟುತ್ತಾರೆ. ಇಲ್ಲವಾದರೆ 'ಸಾವಿರಕಾಲು (ಒನಕೆಬಂಡಿ) ಅಥವಾ ಶತಪಥಿಯನ್ನು ಗೆಣಸಿನೊಂದಿಗೆ ಬೇಯಿಸಿ ಅರೆದು ತಿನ್ನಿಸಿದರೆ ರೋಗ ನಿವಾರಣೆಯಾಗುತ್ತದೆ.

ಕೆಂಚಾರ : ಇದು ಇರುಳಿಗರಲ್ಲಿ ಅತಿಹೆಚ್ಚಾಗಿ ಕಂಡುಬರುವ ಕಾಯಿಲೆ. ಈ ಕಾಯಿಲೆ ಬಂದಾಗ ಮಗುವಿನ ಕಿವಿ ಭಾಗದಲ್ಲಿ ಗುಳ್ಳೆ ಉಂಟಾಗಿ ಆ ಗುಳ್ಳೆ ಒಡೆದು ಕುತ್ತಿಗೆ ಭಾಗಕ್ಕೆ ಪಸರಿಸಿ ಮಗು ಸಾಯುತ್ತದೆ. ಈ ರೋಗ ಬಂದಾಗ ಮಗು ಮಲಗುವುದೇ ಇಲ್ಲ. ಈ ಕಾಯಿಲೆ ಗುಣಪಡಿಸಲು ಕೆಂಪುಗಣಿಕೆ ಬೇರು ಅಥವಾ ಗಂಗಗುಂಗೆ ಬೇರನ್ನು ತಂದು ಹರಳೆಣ್ಣೆಯೊಂದಿಗೆ ತೇದು ಲೇಪಿಸುವುದರಿಂದ ರೋಗ ವಾಸಿಯಾಗುತ್ತದೆ.

ಬಾಲಗ್ರಹ, ನೆಲಗ್ರಹ : ಮಗು ಪದೇ ಪದೇ ಜಗ್ಗಿ ಬೀಳುವುದು ಅಥವಾ ಮೆಟ್ಟು ನಿಂತು ಜ್ವರ ಬರುತ್ತದೆ. ಮಗು ಯಾವಾಗಲೂ ನಿದ್ರೆ ಮಂಪರಿನಲ್ಲಿರುತ್ತದೆ. ಬಾಲಗ್ರಹ ಮತ್ತು ನೆಲಗ್ರಹದ ತಾಯಿತ ಕಟ್ಟಿಸುವ ಮೂಲಕ ಗುಣಪಡಿಸುತ್ತಾರೆ.

ಬಿದ್ದಗುಳಿ : ಮಗುವಿಗೆ ಸದಾ ಜ್ವರವಿದ್ದು ಮಗು ದಿನದಿಂದ ದಿನಕ್ಕೆ ಸಣ್ಣದಾಗುತ್ತಾ ಹೋಗುತ್ತದೆ. ಹಾಗೆ ಇದನ್ನು ಬಿದ್ದು ಗುಳಿಯಾಗಿದೆ ಎಂದು ತಿಳಿದುಕೊಳ್ಳುತ್ತಾರೆ. ನಂತರ ಮಗು ಬಿದ್ದಿರುವ ಜಾಗವನ್ನು ಗುರುತು ಮಾಡಿಕೊಂಡು ಅಲ್ಲಿ ಒಂದರಿಂದ ಎರಡು ಅಡಿ ಗುಣಿ ತೋಡಿ ಅದಕ್ಕೆ ಅರಿಶಿಣ ಕುಂಕುಮದಿಂದ ಪೂಜೆ ಮಾಡಿ ಕಪ್ಪೆಯೊಂದನ್ನು ತಂದು ಅದಕ್ಕೂ ಅರಿಶಿಣ ಕುಂಕುಮ ಹಚ್ಚಿ ಪೂಜೆ ಮಾಡಿ, ಅನ್ನ, ಬಾಳೆಹಣ್ಣು ಹಾಗೂ ಎಲೆ, ಅಡಿಕೆ, ಕಾಯಿಕಡ್ಡಿ, ಕರ್ಪೂರ ಎಲ್ಲವನ್ನು ಗುಂಡಿಯಲ್ಲಿ ಹಾಕಿ ಗುಂಡಿ ಮುಚ್ಚಿ ಬಿಡುತ್ತಾರೆ. ನಂತರ ಮಗುವನ್ನು ಗುಂಡಿಯ ಮೇಲೆ ಮೂರು ಸಾರಿ ಇಳಿ ತೆಗೆಯುತ್ತಾರೆ ಹಾಗೂ ಬಿದ್ದಗುಳಿ ನಿವಾರಣೆಯಾಗುತ್ತದೆ ಎಂದು ನಂಬಿಕೊಂಡಿದ್ದಾರೆ.

ಲೋಳೆಕಿವಿ : ಕಿವಿ ಸೋರುವ ಕಾಯಿಲೆ. ಅಂದರೆ ಕಿವಿಯ ಒಳಗಿನಿಂದ ಕೀವು ಹೊರಬಂದು ಕೆಟ್ಟ ವಾಸನೆ ಬರುತ್ತಿರುತ್ತದೆ. ಇದನ್ನು ಗುಣಪಡಿಸಲು ಜೀವವಿರುವ ಹಸಿರು ಹಾವನ್ನು ಹಿಡಿದು ತಂದು ಅದರ ಬಾಲವನ್ನು ಸೋರುವ ಕಿವಿಯೊಳಗೆ ಹಾಕಿ ತಿರುಗಿಸಿದರೆ ಕಿವಿ ಸೋರುವುದು ನಿಂತು ಹೋಗುತ್ತದೆ.

ಚಂಡಿ ಹಿಡಿಯುವುದು: ಮಗು ಯಾವಾಗಲೂ ಅಳುತ್ತಲೇ ಇರುತ್ತದೆ. ನಿದ್ದೆ ಮಾಡುವುದಿಲ್ಲ. ಇಂತಹ ಸಂದರ್ಭದಲ್ಲಿ ಐದು ಎಕ್ಕದ ಎಲೆಯನ್ನು ತಂದು 'ಇಸ್ತ್ರೀ' ಮಾಡಿ(ಊಟದ ಎಲೆಯ ರೀತಿ ಸಿದ್ಧಪಡಿಸುವುದು) ಅದರ ಮೇಲೆ ಮೂರು ಅಥವಾ ಐದು ಅನ್ನದ ಉಂಡೆ ಗಳನ್ನು ಮಾಡಿ ಅದಕ್ಕೆ ಅರಿಶಿಣ, ಕುಂಕುಮ ಹಚ್ಚಿ, ಹೂ ಮುಡಿಸಿ ಪೂಜೆ ಮಾಡಿ ಮೂರು ದಾರಿ ಕೂಡುವ ಸ್ಥಳದಲ್ಲಿ ಇಟ್ಟು ಮಗುವನ್ನು ಹಿಂದಿರುಗಿಸಿ ನೋಡದಂತೆ ಬಂದುಬಿಟ್ಟರೆ ಮಗು ಅಳುವುದು ನಿಲ್ಲಿಸುತ್ತದೆ ಎಂದು ನಂಬಿಕೊಂಡಿದ್ದಾರೆ.

ಎದೆಬಾವು: ಬಾಣಂತಿಗೆ ಕಾಣಿಸಿಕೊಳ್ಳುವ ಕಾಯಿಲೆ ಇದಾಗಿದೆ. ತಾಯಿಯ ಎದೆಯಲ್ಲಿ ಹಾಲು ಬರುವ ಬದಲು ರಕ್ತ ಬರುತ್ತಿರುತ್ತದೆ. ಎದೆಯ ತೊಟ್ಟಿನ ಭಾಗದಲ್ಲಿ ಗಡ್ಡೆ ಕಾಣಿಸಿಕೊಂಡು

ತಾಯಿಗೆ ಸಹಿಸಲಾರದ ನೋವು ಉಂಟಾಗಿ ಜ್ವರ, ತಲೆನೋವು ಬರುತ್ತದೆ. ಇಂತಹ ಸಂದರ್ಭದಲ್ಲಿ ಕಾಡಿನಿಂದ ಮರಗೆಣಸನ್ನು ತಂದು ನೀರಿನಲ್ಲಿ ತೇದು ಹಚ್ಚಿದರೆ ವಾಸಿಯಾಗುತ್ತದೆ.

ಈ ಸಂದರ್ಭದಲ್ಲಿ ಬಾಣಂತಿ ಮಗುವಿಗೆ ಹಾಲುಣಿಸಬಾರದು. ಅದೇ ರೀತಿಯಲ್ಲಿ ಹೊರಗಡೆ ಹೋಗಿ ಬಂದ ಮೇಲೆ ಮೊದಲ ಎದೆಹಾಲನ್ನು ಗೋಡೆಗೆ ಕರೆಯದೆ ಮಗುವಿಗೆ ಕುಡಿಸುವಂತಿಲ್ಲ. ಬಾಣಂತಿಯು ಹೊರಗಡೆಯಾಗಿ ಸ್ನಾನ ಮಾಡಿಕೊಂಡು ಹೋಗುತ್ತಿರುವ ಹೆಂಗಸಿನ ತಲೆಯನ್ನು ನೋಡಿದರೆ ಮಗುವಿಗೆ ಭೇದಿಯಾಗಿ ಬಿಡುತ್ತದೆ ಎಂಬ ನಂಬಿಕೆ ಇವರಲ್ಲಿದೆ. ಆದ್ದರಿಂದ ಆಗೊಮ್ಮೆ ತಲೆ ನೋಡಿದರೆ ಅದೇ ಹೆಂಗಸನ್ನು ಕರೆದು ಬಾಣಂತಿಯ ತಲೆಗೆ ಕೈ ಎಣ್ಣೆ ಹಾಕಿಸಿಕೊಂಡರೆ ಸಮಸ್ಯೆ ಬಗೆಹರಿಯುತ್ತದೆ ಎಂದು ನಂಬಿಕೊಂಡಿದ್ದಾರೆ.

ಬಾಯಿ ಬಸಲು: ಇದು ಬಾಚಣಿಕೆಯನ್ನು ಬಾಯಿಗೆ ಹಾಕಿಕೊಳ್ಳುವುದರಿಂದ ಉಂಟಾಗುವ ತೊಂದರೆಯಾಗಿದೆ. ಈ ಬಾಯಿಯ ಕವಟೆಯ ಸಂದಿಗಳಲ್ಲಿ ಗಾಯವಾಗಿ ಮಾತನಾಡಲು ಆಹಾರ ತಿನ್ನಲು ಬರುವುದಿಲ್ಲ. ಇಂತಹ ಸಂದರ್ಭದಲ್ಲಿ ಕಾಡಿನಿಂದ ಇಸ್ಪರಿ ಬೇರನ್ನು ತಂದು ನೀರಿನೊಂದಿಗೆ ಅರೆದು ಬಾಯಿಯ ಕವಟೆಗಳಿಗೆ ಹಚ್ಚಿದರೆ ವಾಸಿಯಾಗುತ್ತದೆ.

ಬಡಗದ : ಎರಡರಿಂದ ಹನ್ನೆರಡನೇ ವಯಸ್ಸಿನ ಮಕ್ಕಳಲ್ಲಿ ಕಾಣಿಸಿಕೊಳ್ಳುವ ಚಿಕ್ಕ ಕಾಯಿಲೆ ಇದಾಗಿರುತ್ತದೆ. ಆದರೂ ಸರಿಯಾಗಿ ಚಿಕಿತ್ಸೆ ಮಾಡದಿದ್ದರೆ ಸಾವು ಸಂಭವಿಸುತ್ತದೆ. ಗಂಟಲಿನ ಅಳ್ಳುಗಳು ಊದಿಗೊಂಡ ಎರಡು ಕಡೆಯ ಕಪಾಳವು ಊದಿಕೊಳ್ಳುತ್ತದೆ. ಇದರಿಂದ ಮಾತನಾಡು ವುದಕ್ಕಾಲಿ, ಆಹಾರ ತಿನ್ನುವುದಕ್ಕಾಗಲಿ ಬರುವುದಿಲ್ಲ. ವಿಪರೀತ ನೋವು ಜ್ವರ ಕಾಣಿಸಿಕೊಳ್ಳುತ್ತದೆ. ಈ ಸಮಸ್ಯೆ ಉಂಟಾದಾಗ ಇಸ್ಪಿರಿ ಬೇರನ್ನು ನೀರಿನ ಜೊತೆಗೆ ತೇದಿ ಹಚ್ಚಿ ಗುಣಪಡಿಸಿಕೊಳ್ಳುತ್ತಾರೆ.

ಇದರ ಜೊತೆಗೆ ಮಗುವಿಗೆ ಧೈರ್ಯ ಬರಲೆಂದು ಭೂಮಿಯ ಒಳಗಡೆ ವಾಸ ಮಾಡುವ ದಿಬ್ಬುಣದ ಪುಸಿ(ಜೇಡರಹುಳು)ವನ್ನು ಜೀವಂತವಾಗಿ ಹಿಡಿದು ಬಟ್ಟೆಯಲ್ಲಿ ಕಟ್ಟಿ ತಾಯಿತದ ಹಾಗೆ ಮಾಡಿ ಮಗುವಿನ ಕೊರಳಿಗೆ ಕಟ್ಟುತ್ತಾರೆ. ಮತ್ತೆ ಕೆಲವು ಸಂದರ್ಭದಲ್ಲಿ ಉಡುದಾರಕ್ಕಿ ಕಟ್ಟುತ್ತಾರೆ. ಪ್ರತಿಯೊಂದು ಮಗುವಿಗೂ ಉಡುದಾರವನ್ನು ಕಡ್ಡಾಯವಾಗಿ ಕಟ್ಟಬೇಕೆಂಬ ಪ್ರತೀತಿ ಇದೆ.

ಅರ್ಧ ತಲೆನೋವು: ಅರ್ಧ ತಲೆನೋವು ಸರ್ವೇಸಾಮಾನ್ಯವಾಗಿ ಕಂಡುಬರುತ್ತದೆ. ಇಂತಹ ಸಮಸ್ಯೆ ಬಂದಾಗ ತುಂಬೆಸೊಪ್ಪು, ಒಂದು ಚಿಟಿಕೆ ಸುಣ್ಣ ಹಸುವಿನ ಬೆಣ್ಣೆಯ ಕನಿಕಿಸಿ ಮೂರನ್ನು ತಿಕ್ಕಿ ಬರುವ ರಸವನ್ನು ಎಡಗಡೆ ತಲೆನೋವಿದ್ದರೆ ಬಲಗಡೆ ಮೂಗಿನ ಹೊಳ್ಳೆಗೂ ಬಲಗಡೆ ತಲೆನೋವಿದ್ದರೆ ಎಡಗಡೆ ಮೂಗಿನ ಹೊಳ್ಳೆಗೂ ಬಿಡುತ್ತಾರೆ. ಹಾಗೆಯೇ ಲಕ್ಕಿಸೊಪ್ಪನ್ನು ಹಸುವಿನ ತುಪ್ಪದೊಂದಿಗೆ ತಿಕ್ಕಿ ರಸ ಬಿಟ್ಟು ವಾಸಿ ಮಾಡಿಕೊಳ್ಳುತ್ತಾರೆ.

ಕಾಮಾಲೆ(ಜಾಂಡೀಸ್): ಈ ಕಾಯಿಲೆ ಬಂದವರಿಗೆ ಕಣ್ಣುಗಳೆಲ್ಲ ಅರಿಶಿಣ ಬಣ್ಣಕ್ಕೆ ಬಂದಿರುತ್ತವೆ. ಮುಖ ಬಿಳಿಚಿಕೊಳ್ಳಲಾರಂಭಿಸಿ, ಸುಸ್ತು, ಸಂಕಟ ಹೆಚ್ಚಾಗುತ್ತದೆ. ಊಟ ಸೇರದಾಗಿ ವ್ಯಕ್ತಿ ಸಾಯುತ್ತಾನೆ. ಇಂತಹ ಕಾಯಿಲೆಗೆ ಇರುಳಿಗರು ನಾಯಿ ತೊಳಛಿ, ದೇವರ ತುಳಚಿ, ಕೊಕ್ಕುಮುಳ್ಳು, ಯಮಮಾಕ್ಷಿ ಸೊಪ್ಪು ಮಾಮೇರಿಸೊಪ್ಪು ಚೆನ್ನಾಗಿ ಕುಟ್ಟಿ, ಪುಡಿಮಾಡಿ ನಿಂಬೆರಸ ಅಥವಾ ಎಳ್ಳೆಣ್ಣೆಯೊಂದಿಗೆ ಸೇರಿಸಿ ಪ್ರತಿದಿನ ಮುಖಕ್ಕೆ ಹಚ್ಚಬೇಕು. ಕಾಯಿಲೆ ಗುಣವಾಗುವವರೆಗೂ ಸಪ್ಪೆ ಅಡುಗೆಯನ್ನು ತಿನ್ನಬೇಕು. ಮೊಸರು ಮಜ್ಜಿಗೆಯಂತೂ ಯಾವುದೇ ಕಾರಣಕ್ಕೂ ತಿನ್ನುವಂತಿಲ್ಲ.

ಹೆಂಗಸರಿಗೆ ಬಟ್ಟೆ ಹೋಗುವುದು: ಅಂದರೆ ಹೆಂಗಸರಲ್ಲಿ ಹೊರಗಡೆಯಾಗುವ ಸಮಯದಲ್ಲಿ ಅತೀಯಾದ ರಕ್ತಶ್ರಾವ ಆಗುತ್ತದೆ. ಇದರಿಂದ ಮಹಿಳೆ ಸುಸ್ತಾಗಿ ಸಾಯಲೂಬಹುದು. ಅಂತಹ ಸಂದರ್ಭದಲ್ಲಿ ಕಾಡಳ್ಳಿ ಚೆಕ್ಕೆ ಕರಿಜೀರಿಗೆ, ರಸಬಾಳೆಹಣ್ಣು, ಕಲ್ಲುಸಕ್ಕರೆ, ಹಸುವಿನ ತುಪ್ಪ ಎಲ್ಲವನ್ನು ಹಿಡಿಯಲ್ಲಿ ಒಂದು ಹೊಸ ಮಡಿಕೆಗೆ ಹಾಕಿ ಎಲ್ಲವನ್ನು ಮಿಶ್ರಣ ಮಾಡಬೇಕು. ರಸಬಾಳೆಹಣ್ಣನ್ನು ಸಿಪ್ಪೆ ತೆಗೆಯದೆ ಹಾಗೆಯೇ ಹಾಕಬೇಕು. ಎಲ್ಲವನ್ನು ಮಿಶ್ರಣ ಮಾಡಬೇಕು. ನಂತರ ಒಂದು ತೆಳುವಾದ ಬಟ್ಟೆಯಿಂದ ಪ್ರತಿದಿನ ಒಂದೊಂದು ಚಮಚ ಸೇವಿಸಿದರೆ ಒಂದು ವಾರದಲ್ಲಿ ಈ ಕಾಯಿಲೆಯಿಂದ ಗುಣಮುಖವಾಗಬಹುದು.

ಒಟ್ಟಾರೆಯಾಗಿ ಇರುಳಿಗರು ಪ್ರಕೃತಿಯ ಜೊತೆ ಬಿಡಿಸಲಾಗದ ನಂಟು ಹೊಂದಿದ್ದು ತಮ್ಮ ಪ್ರತಿಯೊಂದು ಸಮಸ್ಯೆಗಳಿಗೂ ಪ್ರಕೃತಿಯನ್ನು ಅವಲಂಬಿಸಿಕೊಂಡಿದ್ದಾರೆ. ಇಂದಿಗೂ ಎಷ್ಟೋ ಇರುಳಿಗರು ಆಸ್ಪತ್ರೆಗಳ ಮುಖ ನೋಡದೇ ೧೧೦, ೧೨೦ ವರ್ಷಗಳವರೆಗೂ ಬದುಕಿ ಬಾಳಿದ್ದಾರೆ. ವಿಶೇಷವಾಗಿ ಇವರಲ್ಲಿ ಅಂಗವಿಕಲರು, ಬುದ್ಧಿಮಾಂದ್ಯದವರು ಸಿಗುವುದು ಇಲ್ಲ. ಹಾಗೊಮ್ಮೆ ಇದ್ದರೂ ಅವರು ಇತ್ತೀಚಿನ ತಲೆಮಾರಿಗೆ ಮಾತ್ರ ಸೇರಿದವರಾಗಿರುತ್ತಾರೆ. ಇರುಳಿಗರಲ್ಲಿ ಶುಗರ್, ಬಿ.ಪಿ. ಮುಂತಾದ ಸರ್ವೇಸಾಮಾನ್ಯ ಕಾಯಿಲೆಗಳು ತೀರಾ ವಿರಳವಾಗಿವೆ. ಇದು ಅವರ ಪ್ರಕೃತಿಯೊಳಗಿನ ಸಂಬಂಧ ಫಲ ಎಂದರೆ ತಪ್ಪಾಗಲಾರದು. ಇಂತಹ ಅಪಾರ ಜ್ಞಾನದ ಇರುಳಿಗರು ಇಂದು ಅರಣ್ಯದಿಂದ ಹೊರಬಂದು ಬದುಕುವುದಕ್ಕೆ ಇಟ್ಟಿಗೆ ಫ್ಯಾಕ್ಟರಿ, ರೇಷ್ಮೆಗೂಡು ಬೇಯಿಸುವ ಕಾರ್ಖಾನೆ, ಗಾರ್ಮೆಂಟ್ಸ್‌ಗಳಲ್ಲಿ ದುಡಿಯುತ್ತಿರುವುದರಿಂದ ಅನೇಕ ಮಾರಣಾಂತಿಕ ಕಾಯಿಲೆಗಳಿಗೆ ತುತ್ತಾಗಿ, ಅದಕ್ಕೆ ತಮ್ಮ ಪಾರಂಪರಿಕ ಮದ್ಯಗಳನ್ನು ನಂಬಿಕೊಂಡು ಜೀವ ಕಳೆದುಕೊಳ್ಳುತ್ತಿದ್ದಾರೆ. ಕಾಲ ಬದಲಾದಂತೆ ಮಾನವನ ಜೀವನವು ಬದಲಾಗುತ್ತವೆ. ಕಾಲವು ತರುವ ತೊಂದರೆಗೆ ಆ ಕಾಲದ ಪರಿಹಾರವನ್ನು ಹುಡುಕಬೇಕು, ಅದನ್ನು ಬಿಟ್ಟು ಮತ್ತೊಂದು ಕಾಲದ ಪರಿಹಾರವನ್ನು ಹುಡುಕಿಕೊಂಡರೇ ವ್ಯತ್ಯಾಸವುಂಟಾಗುತ್ತವೆ.

ಪ್ರಮುಖವಾಗಿ ಹಿಂದೆ ಇರುಳಿಗರು ಅರಣ್ಯದಲ್ಲಿ ಸಿಗುವ ಗಿಡಮೂಲಿಕೆ, ಗೆಡ್ಡೆಗೆಣಸು ಮತ್ತು ಹಣ್ಣು ಹಂಪಲುಗಳನ್ನು ತಿನ್ನುತ್ತಿದ್ದರಿಂದ ಅವರಿಗೆ ಯಾವುದೇ ರೀತಿಯ ಕಾಯಿಲೆಗಳು ಸಾಮಾನ್ಯವಾಗಿ ಕಂಡುಬರುತ್ತಿರಲಿಲ್ಲ. ಆದರೆ ಅರಣ್ಯದಿಂದ ಹೊರಬಂದ ಇರುಳಿಗರು ಬದುಕಲು

ಇತರರಂತೆ ಅನೇಕ ಅಪಾಯಕಾರಿ ವೃತ್ತಿ ಮತ್ತು ಆಹಾರ ಸೇವನೆಯಿಂದ ಇತರೆ ಸಮಾಜದವರಂತೆ ಮಾರಾಣಾಂತಿಕ ಕಾಯಿಲೆಗಳಿಗೆ ತುತ್ತಾಗುವಂತಾಗಿವೆ. ಇದಕ್ಕೆ ತಮ್ಮ ಪಾರಂಪರಿಕ ಔಷಧಿಗಳ ಮೊರೆ ಹೋಗುತ್ತಿದ್ದಾರೆ. ಇದರಿಂದ ಇರುಳಿಗರಲ್ಲೂ ಸಾವು ನೋವುಗಳು ಸಂಭವಿಸುತ್ತಿವೆ. ಆದ್ದರಿಂದ ಆ ಕಾಲಕ್ಕೆ ಸೂಕ್ತವಾದ ಔಷಧಿಗಳು ಈ ಕಾಲಕ್ಕೆ ಕೆಲಸ ಮಾಡಿದಂತಹ ವಾತಾವರಣವನ್ನು ಸೃಷ್ಟಿಸಲಾಗಿದೆ. ಆದ ಕಾರಣ ಪ್ರಸ್ತುತ ಕಾಯಿಲೆಗಳಿಗೆ ಔಷಧಿಗಳನ್ನು ಪಡೆಯಬೇಕಾದ ಅನಿವಾರ್ಯತೆ ಇದೆ.

ಕೊನೆ ಟಿಪ್ಪಣಿಗಳು

೧. ನವಣಯ್ಯ, ೯೨, ಗಿಣಗಿದೊಡ್ಡಿ, ಕನಕಪುರ ತಾಲೂಕು, ರಾಮನಗರ ಜಿಲ್ಲೆ, ೨೬-೮-೨೦೧೬

೨. ವೆಂಕಟಲಕ್ಷ್ಮಮ್ಮ, ೮೨, ಇರುಳಿಗರ ಕಾಲೋನಿ, ಚನ್ನಪಟ್ಟಣ ತಾಲೂಕು, ರಾಮನಗರ ಜಿಲ್ಲೆ, ೨೩-೮-೨೦೧೬

೩. ಕೆಂಪಮ್ಮ, ೭೦, ಕೋಣನದೊಡ್ಡಿ(ಹೊಸಕೋಟೆ), ಕನಕಪುರ ತಾಲೂಕು, ರಾಮನಗರ ಜಿಲ್ಲೆ, ೨೯-೦೮-೨೦೧೬

೪. ಫ್ರಾನ್ಸಿಸ್ ಬುಕಾನನ್, ೧೮೦೭, A Journey from Madras through the Country of Mysore, Canara and Malbar, ಪು.೧೬೭

೫. ರಂಗಚಾರಿ ಕೆ., ಎಡ್ಗರ್ ಥರ್ಸ್ಟನ್, ೧೯೦೯, Caste and Tribes of Southern India, Vol.2, ಪು.೩೮೨

೬. ನಂಜುಂಡಯ್ಯ ಎಚ್.ವಿ., ಅನಂತಕೃಷ್ಣಯ್ಯ ಎಲ್.ಕೆ., ೧೯೩೦, The Mysore Tribes and Castes, Vol.4, ಪು.೩೯೨-೯೩

೭. ಸಿದ್ಧಲಿಂಗಯ್ಯ, ೧೯೯೭, ಗ್ರಾಮದೇವತೆಗಳು: ಜಾನಪದೀಯ ಅಧ್ಯಯನ, ಪು.೨

೮. ಚಿನ್ನಸ್ವಾಮಿ ಸೋಸಲೆ ಎನ್., ಪ್ರಾಧ್ಯಾಪಕರು, ಚರಿತ್ರೆ ವಿಭಾಗ, ಚರ್ಚೆಯ ಸಂದರ್ಭ ೨೨-೫-೨೦೧೬

೯. ಲಕ್ಷ್ಮೀಪತಿ ಕೋಲಾರ, ೨೦೧೬, ಕಸಿಮಡಗಿದ ಕಣ್ಣು, ಪು.೧೮೦

೧೦. ಅದೇ, ಪು.೧೮೨

೧೧. ಶಿವಣ್ಣ, ೩೮, ತೇರುಬೀದಿ, ಡೆಂಕಣಿಕೋಟೆ ತಾಲೂಕು, ಕೃಷ್ಣಗಿರಿ ಜಿಲ್ಲೆ, ೧೯-೯-೨೦೧೬

೧೨. ಲಕ್ಷ್ಮೀಪತಿ ಕೋಲಾರ, ೨೦೧೬, ಪೂರ್ವೋಕ್ತ, ಪು.೧೮೪

ಅಧ್ಯಾಯ: ಆರು

ಇರುಳಿಗರ ಸಾಂಸ್ಕೃತಿಕ ಸ್ಥಿತ್ಯಂತರಗಳ ವಿಮರ್ಶಾತ್ಮಕ ಅಧ್ಯಯನ

೬.೧. ಸಾಮಾಜಿಕ ಸ್ಥಿತ್ಯಂತರಗಳು

೬.೨. ಆರ್ಥಿಕ ಸ್ಥಿತ್ಯಂತರಗಳು

೬.೩. ಶೈಕ್ಷಣಿಕ ಸ್ಥಿತ್ಯಂತರಗಳು

೬.೪. ರಾಜಕೀಯ ಸ್ಥಿತ್ಯಂತರಗಳು

ಅಧ್ಯಾಯ: ಆರು

ಇರುಳಿಗರ ಸಾಂಸ್ಕೃತಿಕ ಸ್ಥಿತ್ಯಂತರಗಳ ವಿಮರ್ಶಾತ್ಮಕ ಅಧ್ಯಯನ

ಭಾರತದ ಚರಿತ್ರೆ ರಚನೆಯ ಸಂದರ್ಭದಲ್ಲಿ ಸಂಸ್ಕೃತಿ ಮತ್ತು ಸ್ಥಿತ್ಯಂತರಗಳನ್ನು ಚರಿತ್ರೆಯಿಂದ ದೂರದಲ್ಲಿಟ್ಟು ನೋಡಲಾಗಿದೆ. ಏಕೆಂದರೆ ಸಂಸ್ಕೃತಿ ಎಂಬುದು ನಿರಂತರವಾಗಿ ಚಲನೆಯಿಂದಲೇ ಕೂಡಿರುತ್ತದೆ. ಮತ್ತು ಅದು ಹಾಗೆಯೇ ಇರಬೇಕು ಕೂಡ ಇಲ್ಲವಾದರೆ ಅದು ಜಡಗೊಂಡು ರಿಜಿಡ್ ಆಗಿ ಸಮಾಜದಲ್ಲಿ ಅನೇಕ ಅಪಾಯಗಳನ್ನು ತಂದೊಡ್ಡುವ ಸಾಧ್ಯತೆಗಳಿರುತ್ತವೆ.

ಸಂಸ್ಕೃತಿ ಎಂಬುದು ಸ್ವತಂತ್ರ ಘಟಕವಲ್ಲ. ಅದು ಸಮುದಾಯದ ಅಂತರ್‌ಸತ್ವವಾಗಿದೆ. ಇದು ಕಾಲದ ಒತ್ತಡಗಳು, ಪ್ರಭಾವಗಳು ಹೇಗೆ ಸಮುದಾಯಗಳ ಮೇಲೆ ಬದಲಾವಣೆಯ ಅನಿವಾರ್ಯತೆಯನ್ನು ತರುತ್ತವೆಯೋ ಹಾಗೆಲ್ಲಾ ಸಂಸ್ಕೃತಿ ತನ್ನಷ್ಟಕ್ಕೆ ತಾನು ಸ್ಥಿತ್ಯಂತರಗಳಿಗೆ ಒಳಗಾಗುತ್ತ ಹೋಗುತ್ತದೆ. ಕಾಲದ ಎಲ್ಲ ಬಗೆಯ ಪ್ರಭಾವಗಳ ಜೊತೆ ಅದರ ಮುಖಾಮುಖಿಯೇ ಹೊರತು ಸಂಸ್ಕೃತಿಯ ನಾಶವಲ್ಲ.[೧] ಪ್ರಪಂಚವು ನಿರಂತರವಾಗಿ ಚಲನಾಶೀಲತೆಯಿಂದ ಕೂಡಿರುತ್ತದೆ. ಭೂಮಿಯ ಮೇಲಿನ ಸಜೀವಿಗಳು ಮತ್ತು ನಿರ್ಜೀವಿಗಳೆಲ್ಲವೂ ಒಂದಲ್ಲೊಂದು ಕಾರಣಗಳಿಂದ ಸ್ಥಿತ್ಯಂತರಗೊಳ್ಳುತ್ತಲೇ ಇರುತ್ತವೆ. ಒಂದು ದಿನ ಇದ್ದ ಹಾಗೆ ಇನ್ನೊಂದು ದಿನವಿರುವುದಿಲ್ಲ. ಪ್ರತಿದಿನವು ಬದಲಾವಣೆಯನ್ನು ಹೊಂದಿರುತ್ತದೆ ಎಂದ ಮೇಲೆ ಸಂಸ್ಕೃತಿಯು ಹಾಗೆ ಸದಾ ಹರಿಯುವ ನದಿಯಂತೆ ಹರಿಯುತ್ತಿರುತ್ತದೆ. ಅದರಲ್ಲಿ ಒಳ್ಳೆದ್ದು ಕೆಟ್ಟದ್ದು ಇದ್ದು, ಕೆಟ್ಟದ್ದು ಹರಿಯುವ ರಭಸಕ್ಕೆ ಮೂಲೆಗೆ ಸರಿಯುತ್ತದೆ. ಹಾಗೆಯೇ ಒಳ್ಳೆದು ಹರಿಯುವಿಕೆಯೊಂದಿಗೆ ಸಾಗಿ ಕಾಲಾನಂತರದಲ್ಲಿ ಅದು ಕೆಟ್ಟದಾಗಿ ಮೂಲೆಗೆ ಸರಿಯುವ ಸಂದರ್ಭವು ಇರುತ್ತದೆ.

ರಾಷ್ಟ್ರೀಯವಾದಿಗಳ ಕಾಲಘಟ್ಟದಲ್ಲಿ ಸಂಸ್ಕೃತಿಯನ್ನು ಸ್ಥಿರವಾಗಿಯೇ ನೋಡಲಾಗಿತ್ತು. ಹಾಗೆಯೇ ಸಂಸ್ಕೃತಿಯನ್ನು ಸ್ಥಿರವಾಗಿರುವಂತೆಯೇ ನೋಡಿಕೊಳ್ಳಲಾಗಿತ್ತು. ಏಕೆಂದರೆ ವಸಾಹತುಶಾಹಿಯರ ಸವಾಲಿಗೆ ಜವಾಬು ಕೊಡುವ ತವಕದಲ್ಲಿದ್ದ ಇವರು ಸಂಸ್ಕೃತಿಯನ್ನು ಏಕೀಕೃತಗೊಳಿಸಿ ಸೀಮಿತವನ್ನಾಗಿಸಲಾಯಿತು. ಇದರ ಜೊತೆಗೆ ಸಂಸ್ಕೃತಿಯನ್ನು ಶ್ರೇಷ್ಠವೆಂಬ

ಭ್ರಮೆಯನ್ನು ಹುಟ್ಟಿಸಿಕೊಂಡು ಜನಾಂಗಗಳ ಚರಿತ್ರೆಯನ್ನು ರಚಿಸಿ ಅನೇಕ ದುರಂತಗಳಿಗೆ ಎಡೆಮಾಡಿಕೊಡಲಾಯಿತು. ಈ ಏಕಸಂಸ್ಕೃತಿಯ ಬೀಜ ಬಿತ್ತುವ ಕೆಲಸದಲ್ಲಿ ವಸಾಹತುಶಾಹಿಗಳು ಹಗಲಿರುಳು ಶ್ರಮಿಸಿದರು. ಇದರಿಂದ ಇವರು ಸಂಸ್ಕೃತಿ ಎಂಬ ಚರ್ಚೆಯನ್ನು ಹುಟ್ಟು ಹಾಕಿ ಅದಕ್ಕೆ ಪೂರಕವಾದ ಆಕರಗಳ ಅಧ್ಯಯನ ಅಂದಿನಿಂದಲೇ ಪ್ರಾರಂಭವಾಗಿದ್ದರಿಂದ ವೈದಿಕ ಸಾಹಿತ್ಯ ಮತ್ತು ಸಂಸ್ಕೃತಿಯನ್ನಾಗಿ ಬಿಂಬಿಸಿ ನಂಬಿಸಲಾಯಿತು. ಇಲ್ಲಿ ಪ್ರಮುಖ ಪಾತ್ರವಹಿಸಿದವರು ಪುರೋಹಿತವರ್ಗದವರು. ಇವರು ಶತಶತಮಾನಗಳಿಂದಲೂ ತಮ್ಮ ಹಳೆಯ ಚಾಳಿಯಾದ ಪ್ರಭುತ್ವದ ಹೊಂದಾಣಿಕೆ ರಾಜಕೀಯವನ್ನು ಬ್ರಿಟಿಷರೊಂದಿಗೆ ಮುಂದುವರಿಸಿ ಬ್ರಿಟಿಷರನ್ನು ಮುಂದಿಟ್ಟುಕೊಂಡು ತಳಸಮುದಾಯಗಳು ಮತ್ತು ಬುಡಕಟ್ಟುಗಳನ್ನು ನಿಯಂತ್ರಿಸಿ ಅನೇಕ ಬದಲಾವಣೆಗಳಿಗೆ ಕಾರಣಕರ್ತರಾದರು.

ಹೀಗೆ ಹಲವಾರು ಪ್ರಭಾವ, ಒತ್ತಡಗಳೊಂದಿಗೆ ಮುಖಾಮುಖಿಗಳ ಗೊಂದಲಗಳಲ್ಲಿ ಬದಲಾವಣೆಯನ್ನು ಬಯಸುವ ಸಂಸ್ಕೃತಿ ಒಂದು ನಿಚ್ಚಳ ಚಹರೆಯನ್ನು ಕಾಪಾಡಿಕೊಳ್ಳುತ್ತಲೇ ಇರುತ್ತದೆ. ಇದು ಸಂಸ್ಕೃತಿಯ ಒಳಗಡೆ ನಡೆಯುವ ವ್ಯಾಪಾರ, ಇದು ನಿರಾಕರಣ ಮತ್ತು ಸ್ವೀಕರಣದ ವಿಸ್ಮಯ ಪ್ರತಿಕ್ರಿಯೆ ಆಗಿದೆ.[೨]

ಯಾವುದೇ ಒಂದು ಸಮುದಾಯ ತನ್ನ ಜೀವಿತದ ಅವಧಿಯಲ್ಲಿ ತನಗೆ ಎದುರಾಗುವ, ಪ್ರಭಾವ ಬೀರುವ ಮತ್ತು ಅನಿವಾರ್ಯವಾದ ಅಂಶಗಳನ್ನು ವೀಕ್ಷಿಸುವ ಕೆಲಸವನ್ನು ಮಾಡುತ್ತಿರುತ್ತದೆ. ಅದು ಸಮುದಾಯದ ದೈನ್ಯ ಸ್ಥಿತಿ ಎಂದರೆ ತಪ್ಪಾಗುತ್ತದೆ. ಏಕೆಂದರೆ ಒಂದು ಸಮುದಾಯ ಕಾಲ ಉಂಟುಮಾಡುವ ಎಲ್ಲಾ ಏರಿಳಿತಗಳನ್ನು ಅಸಹಾಯಕವಾಗಿ ಒಪ್ಪಿಕೊಳ್ಳದೇ ತನ್ನೊಳಗೆ ಸ್ವೀಕರಣ ಮತ್ತು ಪ್ರತಿರೋಧಗಳನ್ನು ಮಾಡುತ್ತಾ ಬರುತ್ತಿರುತ್ತದೆ. ಹೀಗೆ ಸಮುದಾಯವು ತನ್ನೊಳಗೆ ಸ್ವೀಕರಿಸುವ ಮತ್ತು ಪ್ರತಿರೋಧಿಸುವ ಕೆಲಸಗಳಿಂದ ಸಮುದಾಯದ ಬದಲಾವಣೆ ಮತ್ತು ಅನುಕರಣೆಗೆ ತನ್ನನ್ನು ಒಡ್ಡಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿರುತ್ತದೆ. ಇಂತಹ ಪ್ರಕ್ರಿಯೆಯ ಹಿಂದೆ ಸಮುದಾಯದ ಚಾರಿತ್ರಿಕ ಹಸಿವು, ಅವಶ್ಯಕ ಮತ್ತು ಅನಿವಾರ್ಯತೆಗಳು ಕೆಲಸ ಮಾಡುತ್ತವೆ. ಹಾಗೆಯೇ ಪ್ರತಿರೋಧಿಸುವಾಗ ತನ್ನ ಪಾರಂಪರಿಕ ಅನನ್ಯತೆಯನ್ನು ಕಳೆದುಕೊಳ್ಳುವ ಭಯ ಮತ್ತು ತನ್ನ ನಂಬಿಕೆ ಆಚರಣೆಯ ಜೊತೆಗೆ ತನ್ನ ಸ್ವತಂತ್ರದ ಬದುಕನ್ನು ಕಳೆದುಕೊಳ್ಳುವ ಆತಂಕವೂ ಇರುತ್ತದೆ.

ಇದು ಮೇಲುನೋಟಕ್ಕೆ ಕಂಡು ಬರದೇ ಇದ್ದರೂ, ಸಮುದಾಯದ ಹಿರಿಯರ ಅನುಭವದ ಮಾತು ಅವರ ಬದುಕಿನ ನಡವಳಿಕೆಯಲ್ಲಿ ವ್ಯಕ್ತವಾಗುತ್ತಿರುತ್ತದೆ. ಏಕೆಂದರೆ ಒಂದು ಸಮುದಾಯ ಎಂದರೆ ಅದು ವಾಸಿಸುವ ಪ್ರದೇಶವಲ್ಲ ಅಥವಾ ಅದು ಆಚರಿಸಿಕೊಂಡು ಬರುತ್ತಿರುವ ಸಂಸ್ಕೃತಿಯಲ್ಲ. ಅದು ಜನರನ್ನು ಪ್ರತಿನಿಧಿಸುವಂತದ್ದು, ಒಂದು ಸಮುದಾಯ ಏನನ್ನಾದರೂ ಕಳೆದುಕೊಳ್ಳಲಿ ಅಥವಾ ಪಡೆದುಕೊಳ್ಳಲಿ ಅದು ಸಮುದಾಯದ ಜನರಿಂದ

ಪ್ರತಿಕ್ರಿಯಿಸಿ ಬಿಡುತ್ತದೆ. ಈ ಪ್ರತಿಕ್ರಿಯೆಯು ಹಿರಿಯರಲ್ಲಿ ಮತ್ತು ಕಿರಿಯರಲ್ಲಿ ವಿಭಿನ್ನವಾಗಿ ಕಂಡುಬರುತ್ತದೆ. ಹಿರಿಯನಿಗೆ ಕಳೆದುಕೊಂಡಿದ್ದರ ಅನುಭವವಾದರೆ, ಕಿರಿಯರಲ್ಲಿ ಪಡೆದುಕೊಳ್ಳುತ್ತಿರುವಂತೆ ಭಾಸವಾಗಿ ಕಳೆದುಕೊಳ್ಳುತ್ತಿರುವುದರ ಯಾವ ಅನುಭವವೂ ಉಂಟಾಗುವುದಿಲ್ಲ. ಹೀಗೆ ಒಂದು ಸಂಸ್ಕೃತಿ ಅಥವಾ ಸಮುದಾಯ ಕಾಲದ ಒತ್ತಡಗಳಿಂದ ಸ್ಥಿತ್ಯಂತರಗಳ ಸವಾಲುಗಳನ್ನು ಸ್ವೀಕರಿಸುವಾಗ ಬೌದ್ಧಿಕವಾಗಿ ಚಿಂತಿಸುವುದರ ಜೊತೆಗೆ, ಪ್ರತಿರೋಧದ ವೈಚಾರಿಕ ದಿಟ್ಟತನವನ್ನು ಮೈಗೂಡಿಸಿಕೊಂಡಿರುತ್ತದೆ. ಏಕೆಂದರೆ ಭಾರತಕ್ಕೆ ತನ್ನದೇ ಆದ ಒಂದು ವಿಶಿಷ್ಟವಾದ ಗುಣವಿದೆ. ಅದೇನೆಂದರೆ ತನ್ನ ಜ್ಞಾನದ ಜೊತೆಗೆ ಅನ್ಯಜ್ಞಾನವನ್ನು ಸೇರಿಸಿಕೊಂಡು ಸಂಯೋಜನೆಗೊಳಪಡಿಸುವ ಸತ್ವವಿದೆ. ಅಂದರೆ ತನ್ನನ್ನು ಉಳಿಸಿಕೊಂಡು ಅನ್ಯವನ್ನು ತನ್ನೊಳಗೆ ಸಂಯೋಜಿಸಿಕೊಳ್ಳುವ ಗುಣ ಸಮುದಾಯಗಳಿಗೂ ಇದೆ.

ಸಂಸ್ಕೃತಿ ಎಂಬುದು ಸ್ವತಂತ್ರವಾದುದಲ್ಲ. ಹಾಗೆಯೆ ಕಟ್ಟುನಿಟ್ಟಿನಿಂದ ಪೂರ್ವನಿರ್ಧಾರಿತವಾಗಿ ಎಲ್ಲವನ್ನು ಒಳಗೊಂಡ ಜಡವಾದ ಮ್ಯೂಜಿಯಂ ವಸ್ತುವಲ್ಲ. ಅದು ಹರಿಯುವ ನದಿಯ ಹಾಗೆ ಸದಾ ಹರಿಯುತ್ತಿರುತ್ತದೆ. ನದಿಯ ನೀರನ್ನು ಒಂದು ಕಡೆ ಕಟ್ಟಿಹಾಕುವುದಾಗಲಿ ಅಥವಾ ಒಂದು ನಿರ್ದಿಷ್ಟ ಜಾಗ, ಬಣ್ಣಕ್ಕೆ ಸೇರಿಸುವುದು ಹೇಗೆ ಸಾಧ್ಯವಿಲ್ಲವೋ ಅದೇ ರೀತಿಯಲ್ಲಿ ಸಂಸ್ಕೃತಿಯು ಕೂಡ ಒಂದು ನದಿ ಹರಿಯುವಾಗ ಅದರಲ್ಲಿ ಒಳ್ಳೆದು ಇರುತ್ತದೆ. ಹಾಗೆಯೇ ಕೆಟ್ಟದ್ದು ಇರುತ್ತದೆ. ಕೆಟ್ಟದ್ದು ಹರಿಯುವ ರಭಸಕ್ಕೆ ಮೂಲೆಗೆ ಸರಿಯುತ್ತದೆ. ಅದೇ ರೀತಿಯಲ್ಲಿ ಒಳ್ಳೆದು ಜೊತೆಯಲ್ಲೇ ಸಾಗುತ್ತದೆ. ಒಂದು ಕಾಲಮಿತಿಯನ್ನು ದಾಟಿದ ನಂತರ ಆ ಒಳ್ಳೆಯದು ಕೆಟ್ಟದಾಗಿ ಮೂಲೆ ಸರಿದು ಇನ್ನೊಂದು ಒಳ್ಳೆದೆನ್ನಿಸಿಕೊಂಡು ಸಾಗುತ್ತದೆ. ಇದೇ ರೀತಿಯಲ್ಲಿ ಸಂಸ್ಕೃತಿಯು ಕೂಡ. ಏಕೆಂದರೆ ಸಂಸ್ಕೃತಿಗೆ ಚಾರಿತ್ರಿಕ ಪರೀಕ್ಷಣೆಯ ಗುಣವನ್ನು ಕಾಲ ಒತ್ತಡ ಸಹಜವಾಗಿಯೇ ಕಲ್ಪಿಸಿಕೊಟ್ಟಿರುತ್ತದೆ. ಇದು ಕಾಲ ಕಾಲಕ್ಕೆ ಬದಲಾವಣೆಯನ್ನು ಹೊಂದುತ್ತಲೇ ಇರುತ್ತದೆ. ಮತ್ತು ಅದು ಹಾಗೆಯೇ ಮುಂದುವರಿಯಬೇಕು. ಅದನ್ನು ಒಂದು ಸೀಮಿತ ಚೌಕಟ್ಟಿಗೆ ಸೇರಿಸುವುದು ಸೀಮಿತ ಮತಿಯೇ ಆಗಿರುತ್ತದೆ. ಸಂಸ್ಕೃತಿಯು ಸಮುದಾಯದ ಮೇಲೆ ನಿರ್ಧಾರವಾಗುವುದರಿಂದ ಸಮುದಾಯದ ಮೇಲೆ ಕಾಲದ ಒತ್ತಡಗಳು, ಪ್ರಭಾವಗಳು ಮತ್ತು ಅನಿವಾರ್ಯ ಅಗತ್ಯತೆಗಳು ಮುಖಾಮುಖಿಗೊಳ್ಳುತ್ತಿದ್ದಂತೆ ಸಂಸ್ಕೃತಿ ಸಮುದಾಯ ಮತ್ತು ಸಂಸ್ಕೃತಿ ನಾಶವಾಗುತ್ತದೆ ಎಂದಲ್ಲ ಅದು ತನ್ನನ್ನು ತನ್ನ ಅನಿವಾರ್ಯತೆ ಮತ್ತು ಕಾಲದ ಒತ್ತಡಕ್ಕಾಗಿ ತನ್ನದನ್ನು ಉಳಿಸಿಕೊಂಡು ಪರಿಸ್ಥಿತಿಯ ಮೇಲರಿಮೆಯನ್ನು ಒಪ್ಪಿಕೊಳ್ಳುತ್ತದೆ.

ಹದಿನೆಂಟನೆಯ ಕಾಲಘಟ್ಟದ ಸಂದರ್ಭದಲ್ಲಿ ಸಮುದಾಯಗಳು ಬಹುದೊಡ್ಡ ಬದಲಾವಣೆಗೆ ಒಳಗಾಗುವಂತಾಯಿತು. ಈ ಅವಧಿಯಲ್ಲಿ ವಸಾಹತುಶಾಹಿ ಮತ್ತು ದೇಸಿಯ ಮಧ್ಯವರ್ತಿಗಳು ಅನುಸಂಧಾನ ಮಾಡಿಕೊಂಡವು. ಇದರ ಫಲವಾಗಿ ಭಾರತದ ಕೆಳವರ್ಗ ಮತ್ತು ಬುಡಕಟ್ಟುಗಳು ಅನೇಕ ಸಾಮಾಜಿಕ ಸ್ಥಿತ್ಯಂತರಗಳನ್ನು ಅನುಭವಿಸುವಂತಾಯಿತು. ಏಕೆಂದರೆ ವಸಾಹತುಶಾಹಿಗಳು

ಭಾರತವನ್ನು ಕೇವಲ ಬಂಡವಾಳದ ಆಶಯಗಳಿಂದ ನೋಡಿದ್ದರೆ ವಿನಃ ಇನ್ನಾವ ಸಾಮಾಜಿಕ ಕಳಕಳಿಯಿಂದಲ್ಲ. ಆದ್ದರಿಂದ ಈ ಬಂಡವಾಳಶಾಹಿ ವಿಧಾನವು ಅದಕ್ಕೆ ಬೇಕಾದ ಸಂಪತ್ತು ಮತ್ತು ಸಂಪನ್ಮೂಲಗಳ ಶೋಧನೆಯಲ್ಲಿ ತೊಡಗಿ ಅನೇಕ ಅಧ್ಯಯನಗಳ ನೆಪದಲ್ಲಿ ತಮ್ಮ ಕೆಲಸವನ್ನು ಮಾಡಿಕೊಂಡಿತು. ಇದಕ್ಕೆ ಪ್ರಮುಖ ಕಾರಣವೆಂದರೆ ಬಂಡವಾಳಶಾಹಿ ಧೋರಣೆಯ ವಸಾಹತುಶಾಹಿಗಳಿಗೆ ಬೇಕಾದ ಎಲ್ಲವೂ ಬುಡಕಟ್ಟು ಮತ್ತು ಕೆಳವರ್ಗದ ಜನರು ವಾಸಿಸುವ ಪ್ರದೇಶಗಳಲ್ಲಿದ್ದುದರಿಂದ, ಅಧ್ಯಯನಗಳ ನಾಟಕ ಮಾಡಿದರು. ಇದಕ್ಕೆ ದೇಸಿಯ ಮಧ್ಯವರ್ತಿಗಳಾದ ಪುರೋಹಿತರು ಮತ್ತು ಭೂಮಾಲೀಕರು ಬೆಂಬಲವಾಗಿ ನಿಂತಿದ್ದರು. ಈ ಕೆಳಜಾತಿ ಮತ್ತು ಬುಡಕಟ್ಟುಗಳನ್ನು ಯಮಾರಿಸುವುದು ಅಷ್ಟು ಸುಲಭವಾದ ಕೆಲಸವಲ್ಲ ಎಂಬುದು ವಸಾಹತುಶಾಹಿ ಗಳಿಗೆ ಮೊದಲೇ ತಿಳಿದಿತ್ತು. ಅದಕ್ಕಾಗಿ ಇಲ್ಲಿನ ಪುರೋಹಿತ ಮತ್ತು ಭೂಮಾಲೀಕರ ಸಹಾಯದಿಂದ ತಮ್ಮ ಕೆಲಸವನ್ನು ಗೆದ್ದುಕೊಳ್ಳುವ ನಿಟ್ಟಿನಲ್ಲಿ ಪುರೋಹಿತರ ತಂತ್ರಗಾರಿಕೆಯಾದ ಒಡೆದು ಆಳುವ ನೀತಿಯನ್ನು ಪಾಲಿಸಿ ಭೂಮಿ ಮತ್ತು ಅರಣ್ಯದಿಂದ ಈ ಕೆಳಜಾತಿ ಮತ್ತು ಬುಡಕಟ್ಟುಗಳನ್ನು ಬೇರ್ಪಡಿಸುವ ನಿರ್ಧಾರಕ್ಕೆ ಬಂದು ಅದಕ್ಕೆ ಬೇಕಾದ ಕಾಯ್ದೆ ಕಾನೂನುಗಳನ್ನು ರೂಪಿಸಿ ಯಶಸ್ವಿಯಾದರು. ಈ ತಂತ್ರಗಾರಿಕೆಯಿಂದ ಭಾರತದ ಆರ್ಥಿಕವಲಯ ಅನೇಕ ಸ್ಥಿತ್ಯಂತರಗಳಿಗೆ ಕಾರಣವಾಯಿತು. ಈ ಕಾಯ್ದೆ ಕಾನೂನುಗಳಿಂದ ಕರಕುಶಲ ಕರ್ಮಿಗಳು, ಗುಡಿ ಕೈಗಾರಿಕೆಗಳು ಮತ್ತು ಸಣ್ಣಪುಟ್ಟ ವ್ಯಾಪಾರಸ್ಥರೆಲ್ಲ ಝುರ್ಜರಿತಗೊಂಡು ಇದರಿಂದ ಚೇತರಿಸಿಕೊಳ್ಳಲಾಗದೇ ಸ್ಥಗಿತಗೊಂಡು ಬಿಟ್ಟರು. ಇವರನ್ನು ನಂಬಿಕೊಂಡಿದ್ದ ಈ ಬುಡಕಟ್ಟುಗಳ ಬದುಕು ಸಹ ದುಸ್ತರವಾಗಿ ವೃತ್ತಿ ಬದುಕು, ನಂಬಿಕೆ, ಆಚರಣೆ, ಆಹಾರ, ಭಾಷೆ, ಮನೋಧೋರಣೆ ಎಲ್ಲವೂ ಆನೇಕ ಸ್ಥಿತ್ಯಂತರಗಳಿಗೆ ಒಳಗಾಗುವಂತಾಯಿತು.

ವಸಾಹತುಶಾಹಿಯ ದಾಳಿಗಿಂತ ಹಿಂದೆ ಯಾವುದೇ ಪ್ರಭಾವ ಬುಡಕಟ್ಟುಗಳ ಮೇಲೆ ನಡೆದಿಲ್ಲ ಎಂದಲ್ಲ. ಹಿಂದೆ ಯಾವ ರಾಜ ಪ್ರಭುತ್ವ ಧಾರ್ಮಿಕ ಪಂಥಗಳು ಮತ್ತು ಸಾಂಸ್ಕೃತಿಕ ಪ್ರಭಾವಗಳುಂಟಾಗಿದ್ದರೂ ವಸಾಹತುಶಾಹಿಯಂತೆ ಭೀಕರವಾಗಿರಲಿಲ್ಲ. ಅವುಗಳು ಕಾಡು ಮತ್ತು ಬುಡಕಟ್ಟುಗಳನ್ನು ದೂರ ಮಾಡುವ ಯಾವ ಯೋಜನೆಯನ್ನು ರೂಪಿಸಿರಲಿಲ್ಲ. ಹಾಗೊಮ್ಮೆ ನಡೆದಿದ್ದರೂ ಅಲ್ಲೊಂದು ಇಲ್ಲೊಂದು ಮತ್ತೆ ವಿನಃ ಇಷ್ಟೊಂದು ವ್ಯಾಪಕತೆಯಿಂದ ಕೂಡಿರಲಿಲ್ಲ. ಈ ಪ್ರಭಾವಗಳಿಂದ ಬುಡಕಟ್ಟು ಜನರ ನಂಬಿಕೆ ಆಚಾರ ವಿಚಾರಗಳನ್ನು ಮತ್ತು ಜೀವನ ವಿಧಾವನ್ನು ಬದಲಾಯಿಸುವ ನಿಟ್ಟಿನಲ್ಲಿ ಪರಿವರ್ತನೆಯ ಹಾದಿಯನ್ನು ತುಳಿದಿದ್ದರು. ಅದರಲ್ಲಿ ಅವರು ಯಶಸ್ವಿ ಕಾಣದೆ ತಮ್ಮ ರೀತಿ ರಿವಾಜುಗಳೊಂದಿಗೆ ಬುಡಕಟ್ಟು ರೀತಿ ರಿವಾಜುಗಳೊಂದಿಗೆ ಅನುಸಂಧಾನ ಮಾಡಿಕೊಂಡು, ಬುಡಕಟ್ಟುಗಳ ಹಾದಿಯಲ್ಲಿಯೇ ತಮ್ಮ ನಿಯಮಗಳನ್ನು ರೂಪಿಸುವ ಕೆಲಸ ಮಾಡಿಕೊಂಡವು. ಉದಾಹರಣೆಗೆ ಸಾಕ ಆಹಾರ ಪ್ರತಿಪಾದಿಸಿದ ಶೈವ ಮತ್ತು ವೈಷ್ಣವ ಪಂಥಗಳು ಬುಡಕಟ್ಟುಗಳ ಜೀವನ ವಿಧಾನವು ಕಾಡುನೊಂದಿಗೆ ಬೆಸೆದುಕೊಂಡಿದ್ದನ್ನು

ಕಂಡು ತನ್ನಲ್ಲಿಯೇ ಬದಲಾವಣೆ ಮಾಡಿಕೊಂಡು ವಾರದಲ್ಲಿ ಒಂದು ದಿನ ಅಥವಾ ಎರಡು ದಿನಕ್ಕೆ ತನ್ನ ಶಾಕಾ ಆಹಾರ ನಂಬಿಕೆಯ ಸೀಮಿತಗೊಳಿಸಿಕೊಂಡಿತು. ಇದಕ್ಕೆ ಪ್ರಮುಖ ಕಾರಣ ಬುಡಕಟ್ಟುಗಳು ಸಂಪೂರ್ಣ ಕಾಡುವಾಸಿಗಳಾಗಿದ್ದ ಇವರನ್ನು ಬದಲಾಯಿಸಲು ಸಾಧ್ಯವಿಲ್ಲ ಎಂಬ ತಿಳುವಳಿಕೆಯು ಈ ವೈದಿಕರಿಗೆ ಗೊತ್ತಿತ್ತು. ಆದ್ದರಿಂದ ಸುಮ್ಮನಾಗಿದ್ದರು. ಆದರೆ ಹದಿನೆಂಟನೆಯ ಶತಮಾನದೊತ್ತಿಗೆ ಬ್ರಿಟಿಷರ ಆಗಮನವಾಗಿದ್ದು, ಪುರೋಹಿತರೊಂದಿಗೆ ಅನುಸಂಧಾನ ಮಾಡಿಕೊಂಡ ಇವರಿಗೆ ಬೇಕಾದ ಎಲ್ಲ ರೀತಿಯ ಸಹಾಯವನ್ನು ವಸಾಹತುಶಾಹಿ ಗಳು ಮಾಡಿದ್ದರಿಂದ ಅವರನ್ನು ಮುಂದಿಟ್ಟುಕೊಂಡು ಕಾಡಿನಿಂದಲೇ ಬುಡಕಟ್ಟುಗಳನ್ನು ಬೇರ್ಪಡಿಸುವ ಕೆಲಸಕ್ಕೆ ಕೈ ಹಾಕಿದರು. ಇದು ತಮ್ಮ ಸ್ವಾರ್ಥಕಾರ್ಯಕ್ಕೆ ಅನುಕೂಲಕರವಾದ ಪರಿಸ್ಥಿತಿ ನಿರ್ಮಿಸಿಕೊಂಡು ಬಿಟ್ಟಿತು. ಇದಕ್ಕೆ ಬ್ರಿಟಿಶರ ಕಾಯ್ದೆ ಕಾನೂನುಗಳನ್ನು ಬಳಸಿಕೊಂಡರು. ಇದನ್ನೇ ಅಪೇಕ್ಷಿಸುತ್ತಿದ್ದ ಬ್ರಿಟಿಶರು ಮತ್ತಷ್ಟು ಒತ್ತಡ ತಂದು ಬುಡಕಟ್ಟುಗಳನ್ನು ಅರಣ್ಯದಿಂದ ಬೇರ್ಪಡಿಸುವ ಕೆಲಸ ಮಾಡಿದರು. ಇದರಿಂದ ಬುಡಕಟ್ಟುಗಳು ಅತಂತ್ರ ಸ್ಥಿತಿ ಎದುರಿಸು ವಂತಾಯಿತು.

ವಸಾಹತುಶಾಹಿಯ ಕಾಲದಲ್ಲಿ ಸಮುದಾಯಗಳಲ್ಲಿದ್ದ ತಿಳುವಳಿಕೆಯ ಜಗತ್ತನ್ನು ಅಪವಿತ್ರಗೊಳಿಸುವ ಕೆಲಸಗಳು ನಡೆದವು. ಇವುಗಳ ಜೊತೆಗೆ ಬುಡಕಟ್ಟು ದೈವಗಳನ್ನು ಕಿತ್ತುಕೊಂಡು ಅವುಗಳಿಗೆ ವೈದಿಕ ಲೇಪನ ಹಚ್ಚಿ ಪ್ರಚಾರ ಮಾಡಿ ವೈದಿಕ ಧರ್ಮದ ವಿಸ್ತರಣೆ ಮಾಡಿಕೊಂಡರು.

ವೈದಿಕರ ಪ್ರಭಾವವನ್ನು ವಿರೋಧಿಸುವುದು ಎಷ್ಟು ಸರಿ ಎಂಬ ಪ್ರಶ್ನೆ ಮೂಡದೇ ಇರಲಾರದು. ಹಾಗೆಯೇ ಎ.ಎಸ್. ಪ್ರಭಾಕರ ಅವರು ಹೇಳುವಂತೆ ಯಾವ ಭಾಷೆ, ಜನಾಂಗ ಹಾಗೂ ಪರಂಪರೆಗಳು ಜ್ಞಾನದ ಸಂಯೋಗಗಳಿಗೆ ಒಪ್ಪುವಿದಿಲ್ಲವೋ ಅಂಥವು ಜೀವಂತವಿದ್ದರೂ ಆಧುನಿಕತೆಯ ಲೆಕ್ಕದಲ್ಲಿ ಸತ್ತಂತೆ" ಎನ್ನುತ್ತಾರೆ.[೩] ಅದರಂತೆ ಸಂಸ್ಕೃತಿ ಎಲ್ಲಾ ಏರಿಳಿತಗಳನ್ನು ಕಾಣಬೇಕು. ಆಗ ಮಾತ್ರ ಆ ಸಂಸ್ಕೃತಿಯು ಜೀವಂತಿಕೆಯನ್ನು ಪ್ರತಿನಿಧಿಸುತ್ತದೆ ಎಂಬ ಅಂಶ ಗಳನ್ನು ಗಮನದಲ್ಲಿಟ್ಟುಕೊಂಡು ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಲೇಬೇಕು. ಮೇಲಿನ ಎಲ್ಲಾ ಕಾಲಘಟ್ಟದಲ್ಲಿ ಪ್ರೇರಣೆ ಮತ್ತು ಪ್ರಭಾವಗಳು ಬುಡಕಟ್ಟುಗಳ ಮೇಲೆ ಪ್ರಭಾವ ಬೀರಿರುವುದು ಸರಿಯೇ. ಆದರೆ ಆ ಸಂದರ್ಭ ಮತ್ತು ಅದಕ್ಕೆ ತೆಗೆದುಕೊಂಡ ಮಾರ್ಗಗಳು ಅತ್ಯಂತ ಪ್ರಮುಖವಾದವುಗಳು. ಏಕೆಂದರೆ ವಸಾಹತುಶಾಹಿ ಕಾಲಘಟ್ಟದಲ್ಲಿ, ಬಂಡವಾಳಶಾಹಿ ಬ್ರಿಟಿಶರು ಮತ್ತು ಅವರ ಹಿಂದೆ ಕಾರ್ಯನಿರ್ವಹಿಸಿದ ಪುರೋಹಿತರ ನಿರ್ಧಾರಗಳು ಅತ್ಯಂತ ಘೋರವಾಗಿದ್ದವು. ಇಡೀ ಬುಡಕಟ್ಟುಗಳನ್ನು ಕಾಡಿನಿಂದ ಹೊರಗೆ ಹಾಕಿ ಅವರಿಗೆ ತುತ್ತು ಅನ್ನಕ್ಕೂ ಸೆಣಸಾಡುವ ಪರಿಸ್ಥಿತಿ ನಿರ್ಮಾಣ ಮಾಡಿ ನಂತರ ಅವರ ಕಾರ್ಯಸಾಧನೆ ಮಾಡಿಕೊಂಡರು. ವಸಾಹತುಶಾಹಿಗಳಿಗೂ ಹಿಂದೆ ಸಮುದಾಯಗಳು ಎಲ್ಲಾ ಸಾಂಸ್ಕೃತಿಕ

ಕಾಲಘಟ್ಟಗಳಲ್ಲಿಯೂ ತಮ್ಮ ಚಹರೆಯನ್ನು ಉಳಿಸಿಕೊಂಡಿದ್ದರು. ಆದರೆ ಬ್ರಿಟಿಷರ ಕಾಲದಲ್ಲಿ ಮಾತ್ರ ಬುಡಕಟ್ಟುಗಳು ತಮ್ಮ ಪಾರಂಪರಿಕ ಚಹರೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಮತ್ತೊಂದು ಅಂಶವೆಂದರೆ ಒಂದು ವರ್ಗ ಸಂಸ್ಕೃತಿಯು ಬದಲಾಗಬೇಕೆಂದು ಹೇಳುತ್ತಿದ್ದರೆ ಮತ್ತೊಂದು ವರ್ಗ ಯಾವುದು ಬದಲಾಗಬೇಕು ಎಂಬ ಪ್ರಶ್ನೆಯನ್ನೆತ್ತುತ್ತದೆ. ಈ ಬದಲಾವಣೆಯು ಬುಡಕಟ್ಟುಗಳಿಗೆ ಒಡ್ಡುವ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಬೇಕಲ್ಲವೆ?. ಬುಡಕಟ್ಟುಗಳು ಪಾರಂಪರಿಕವಾಗಿ ಸತ್ಯ, ಪ್ರಾಮಾಣಿಕತೆ, ಸಹಬಾಳ್ವೆ ಮತ್ತು ಸಮಾನತೆಯನ್ನು ಮೈಗೂಡಿಸಿಕೊಂಡು ಬಾಳುತ್ತಾ ಬಂದಿವೆ. ಆದರೆ ಈ ಆಧುನಿಕತೆಯ ಸಂದರ್ಭದಲ್ಲಿ ಇವುಗಳಿಗೆ ಎಷ್ಟು ಬೆಲೆ ಸಿಗುತ್ತದೆ ಎಂಬುದೇ ಯಕ್ಷ ಪ್ರಶ್ನೆಯಾಗಿದೆ. ಹಾಗೆಯೇ ಕೆಲವು ಸಂದರ್ಭದಲ್ಲಿ ಈ ಮೇಲಿನ ಅಂಶಗಳೆ ಈ ಬುಡಕಟ್ಟುಗಳಿಗೆ ಅಪ್ಯಾಯಮಾನವಾಗಿ ಭೂಮಿ, ಹಣ, ಆಸ್ತಿ ಎಲ್ಲವನ್ನು ಕಳೆದುಕೊಳ್ಳುವಂತೆ ಮಾಡಿರುವುದನ್ನು ಕಾಣಬಹುದು. ಅಂದಮೇಲೆ ಈ ಬದಲಾವಣೆಯ ಜೊತೆಗೆ ಬುಡಕಟ್ಟುಗಳು ಕೂಡ ಸತ್ಯ, ಪ್ರಾಮಾಣಿಕತೆ, ಸಹಬಾಳ್ವೆ ಮತ್ತು ಸಮಾನತೆಯನ್ನು ಬದಲಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂದಾಯಿತು ಅಥವಾ ಬದಲಾವಣೆ ಬೇಡ ಎಂದು ಹೇಳಬೇಕೇ ಬುಡಕಟ್ಟುಗಳನ್ನು ಬುಡಕಟ್ಟುಗಳನ್ನು ಪ್ರಾಮಾಣಿಕತೆ, ಸತ್ಯಪರತೆ, ಸಹಬಾಳ್ವೆ, ಸಮಾನತೆಯಿಂದ ಗುರುತಿಸುವ ಸಂದರ್ಭದಲ್ಲಿ ಆಧುನಿಕತೆಯು ಇವುಗಳನ್ನು ನಾಶ ಮಾಡು ತ್ತದೆಯಲ್ಲವೆ. ಇಂತಹ ಸಂದಿಗ್ಧ ಸ್ಥಿತಿಯ ನಿರ್ಮಾಣವಾಗುತ್ತದೆ. ಆ ನಿಟ್ಟಿನಲ್ಲಿ ಬುಡಕಟ್ಟುಗಳ ಅಧ್ಯಯನ ಮಾದರಿಯಲ್ಲಿ ನೋಡುವುದು ಅತ್ಯಂತ ಕಷ್ಟಕರ ಕೆಲಸವಾಗಿದೆ. ಇದನ್ನು ಆಧುನಿಕತೆಯ ವಿರೂಪ ಎನ್ನದೇ ಮತ್ತೇನೆನ್ನಲು ಸಾಧ್ಯ. ಈ ಆಧುನಿಕತೆ ಬುಡಕಟ್ಟುಗಳಲ್ಲಿ ಕೆಲವು ತೊಂದರೆ ಗಳನ್ನುಂಟು ಮಾಡಿತು. ಒಂದು ಕಡೆ ಸಮಾಜದಲ್ಲಿದ್ದ ಅಸಮಾನತೆ, ಅಸ್ಪೃಶ್ಯತೆ, ಶೋಷಣೆ ಹತ್ತಿಕ್ಕಿದರೆ ಮತ್ತೊಂದು ಕಡೆ ಬುಡಕಟ್ಟುಗಳ ಬದುಕನ್ನು ಬರಿದು ಮಾಡಿತು. ಅರಣ್ಯ ರಕ್ಷಣೆಯ ನೆಪದಲ್ಲಿ ಕಾಡಿನಿಂದ ಬುಡಕಟ್ಟುಗಳನ್ನು ಹೊರಗೆ ಹಾಕಿ ಅವರ ಪಾರಂಪರಿಕ ನಂಬಿಕೆ ಮತ್ತು ಜ್ಞಾನವವನ್ನು ಮೂಢನಂಬಿಕೆ, ಅವೈಜ್ಞಾನಿಕತೆ ಎಂದು ಮೂಲೆಗುಂಪು ಮಾಡಿತು. ಇದರಿಂದ ಇದ್ದಿಲು ಮತ್ತು ಬೇವಿನಕಡ್ಡಿಯಿಂದ ಹಲ್ಲು ಉಜ್ಜುತ್ತಿದ್ದವನಿಗೆ ಬ್ರೆಸ್ ಮತ್ತು ಪೇಸ್ಟ್ ಕೊಟ್ಟು ಮತ್ತೆ ಅವನು ಬೇವಿನಕಡ್ಡಿ ಮತ್ತು ಇದ್ದಿಲನ್ನು ಬಳಸದಂತೆ ಮಾಡಿತು. ಅಂಡಮಾನ್ ಬುಡಕಟ್ಟಿನ ಜನರನ್ನು ಮನರಂಜನೆಯ ಪ್ರಾಣಿಗಳಂತೆ ಅವರಿಗೆ ಆಹಾರದಲ್ಲಿ ಡ್ರಕ್ಸ್ ಕೊಟ್ಟು ಅಡಿಟ್ ಮಾಡಿ ಹೋಗಿಬರುವ ವಾಹನಗಳ ಮುಂದೆ ಪ್ರಾಣಿಗಳಂತೆ ನಿಲ್ಲುವಂತೆ ಮಾಡಿಕೊಂಡ ಆಧುನಿಕತೆ ಮ್ಯೂಜಿಸಂ ವಸ್ತುಗಳನ್ನಾಗಿ ಮಾಡಲಾಯಿತು. ಬುಡಕಟ್ಟುಗಳಿದ್ದ ಕಟ್ಟುಕಾರ ಅಥವಾ ಅರಳೆಕಾಯಿ ಪಂಡಿತನನ್ನು ಮತ್ತು ಅವನ ನಾಟಿ ಔಷಧಿಯನ್ನು ಮೂಲೆಗುಂಪು ಮಾಡಿ ಅದನ್ನೇ ಅವನಿಗೆ ಅರಿವಿಲ್ಲದಂತೆ ಕದ್ದು ಆರ್ಯುವೇದ, ಪತಂಜಲಿಯ ಹೆಸರಿನಲ್ಲಿ ಅವನಿಗೆ ಕೊಡುವ ಕೆಲಸ ಮಾಡಿತು. ಇದರ ಜೊತೆಗೆ ಅನೇಕ ಮಾನಸಿಕ ಕಾಯಿಲೆಗಳಿಗೆ ಚಿಕಿತ್ಸೆ ನೀಡಿ

ಆತ್ಮಸ್ಥೈರ್ಯ ತುಂಬಿ ಗುಣಪಡಿಸುತ್ತಿದ್ದ ಕಟ್ಟುಕಾರನನ್ನು ಅಥವಾ ಪೂಜಾರಿಯನ್ನು ಮೌಢ್ಯ, ಮೂಢನಂಬಿಕೆ ಎಂದು ಕರೆದು ಅದರ ವಿರುದ್ಧ ಕಾನೂನು ಕ್ರಮ ಜರುಗಿಸಿ, ಮನೋಶಾಸ್ತ್ರಜ್ಞರು ಎಂಬ ಹೆಸರಿನಲ್ಲಿ ಅದೇ ಕೆಲಸವನ್ನು ಮಾಡಲಾಯಿತು. ವಸಾಹತುಶಾಹಿ ಕಾಲಕ್ಕೂ ಹಿಂದೆ ರಾಜಪ್ರಭುತ್ವ, ಧಾರ್ಮಿಕ ಚಳುವಳಿ, ರಾಜಕೀಯ ಚಳುವಳಿ ಎಲ್ಲಾ ರೀತಿಯ ಪ್ರಭಾವಗಳನ್ನು ತನ್ನೊಳಗೆ ಅರಗಿಸಿಕೊಂಡು ಮೂಲಕ್ಕೆ ನಿಷ್ಠರಾಗಿ ಕಾಲವುಂಟು ಮಾಡುವ ಪ್ರಭಾವಗಳಿಗೆ ಅತ್ಯುತ್ತಮ ಮಾದರಿಗಳನ್ನು ಕಂಡುಕೊಂಡು ಸ್ಥಿತ್ಯಂತರಗಳಿಗೆ ಜೀವಂತಿಕೆಯಿಂದ ಸ್ಪಂದಿಸುವ ಬುಡಕಟ್ಟುಗಳು ಈ ಆಧುನಿಕತೆಯ ಸಂದರ್ಭದಲ್ಲಿ ಪಾರಂಪರಿಕ ಜ್ಞಾನವನ್ನು ಯುವ ಸಮುದಾಯಕ್ಕೆ ಇಲ್ಲದಂತೆ ಮಾಡುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿರುವುದನ್ನು ಕಾಣಬಹುದು. ಇದನ್ನು ಚರಿತ್ರೆ ವಿದ್ಯಾರ್ಥಿಗಳಾದ ನಾವುಗಳು ಹೇಗೆ ಗ್ರಹಿಸಿಕೊಳ್ಳಬೇಕು ಎಂಬುದು ಯಕ್ಷಪ್ರಶ್ನೆಯಾಗಿ ಉಳಿದು ಬಿಡುತ್ತದೆ.

ಕಾಲ ಉಂಟುಮಾಡುವ ಸ್ಥಿತ್ಯಂತರಗಳಿಗೆ ಜೀವಂತಿಕೆಯಿಂದ ಸ್ಪಂದಿಸುವ ಯಾವ ಜನಸಮುದಾಯವೂ ನಾಶವಾಗುವುದಿಲ್ಲ. ಸಂಸ್ಕೃತಿ ಎಂಬುದು ಕಾಲ ಕಾಲಕ್ಕೆ ಬದಲಾಗುತ್ತಿರುತ್ತದೆ. ಅದು ಹಾಗೆಯೇ ಇರಬೇಕು ಇಲ್ಲವಾದರೆ ನಿಂತ ನೀರಿನಂತೆ ಕೊಳೆಯುವ ಸಾಧ್ಯತೆಗಳಿರುತ್ತವೆ ಎಂಬ ರೋಮಾಂಚನಕಾರಿ ಮಾತುಗಳ ಹಿಂದೆ ನಾಶವಾಗುತ್ತಿರುವ ಮೌಲ್ಯಗಳ ಕಡೆ ಗಮನಹರಿಸಬೇಕಾದ ಅವಶ್ಯಕವೂ ಇದೆ. ಹೊಸನೀರು ಬಂದ ಮೇಲೆ ಹಳೆನೀರನ್ನು ಕೊಚ್ಚಿ ಹೋಗಬೇಕು ಎನ್ನುವಂತೆ ಹೊಸದು ಬಂದಾಗ ಹಳೆಯದು ಹೋಗುತ್ತಿರುತ್ತದೆ. ಇದನ್ನು ಚರಿತ್ರೆಯು ಸೂಕ್ಷ್ಮವಾಗಿ ಗಮನಿಸಿ ಹೊಸನೀರಿನ ಸಾಧಕ-ಬಾಧಕಗಳು, ಮಾನವನ ವಿಕಾಸಕ್ಕೆ ಮತ್ತು ಪ್ರಕೃತಿ ವಿಕಾಸಕ್ಕೂ ಅತ್ಯಮೂಲ್ಯವಾದ ಮೌಲ್ಯಗಳನ್ನು ವರ್ತಮಾನದ ಸಂದರ್ಭದಲ್ಲಿ ಚರ್ಚಿಸಿ ಹಳೆಯ ನೀರಿನಲ್ಲಿರುವ ಮೌಲ್ಯಗಳನ್ನು ಉಳಿಸಿಕೊಂಡು ಹೊಸನೀರಿಗೆ ಮೌಲ್ಯಗಳ ಅವಶ್ಯಕತೆ ಮತ್ತು ಜಾಗೃತಿ ಮೂಡಿಸಬೇಕು. ಇದರಿಂದ ಭವಿಷ್ಯತ್ತಿನ ದಿನಗಳು ಸುಂದರವಾಗಿರಲು ಸಾಧ್ಯ.

ಇವೆಲ್ಲವುಗಳ ಜೊತೆಗೆ ಬುಡಕಟ್ಟುಗಳಲ್ಲಿ ಪ್ರಗತಿಪರರು ಮತ್ತು ಎನ್‌ಜಿಓಗಳ ಪ್ರಭಾವವು ಇದೆ. ಇವರುಗಳು ಬುಡಕಟ್ಟುಗಳಿಗೆ ಸಮಸ್ಯೆಗಳುಂಟಾದರೆ ಬುಡಕಟ್ಟುಗಳ ಪರ ನಿಲ್ಲುವವರು. ಇವರುಗಳಲ್ಲಿ ಸ್ವಾರ್ಥ, ಪ್ರಚಾರ, ಸಂಪತ್ತುಗಳಿಕೆಯಂತಹ ಎಲ್ಲಾ ರೀತಿಯ ಉದ್ದೇಶಗಳು ತುಂಬಿಕೊಂಡಿರುತ್ತವೆ. ಇವರು ಗ್ರಾಮ ಮತ್ತು ನಗರ ಸಮಾಜದಲ್ಲಿ ಅಸ್ಪೃಶ್ಯತೆ, ಶೋಷಣೆ ಮತ್ತು ಸಮಾನತೆಯ ಹೋರಾಟಗಳನ್ನು ಕಾಲಕಾಲಕ್ಕೆ ಮಾಡಿ ಹೆಸರು ಮಾಡಿಕೊಂಡು ಬುಡಕಟ್ಟುಗಳ ರಕ್ಷಣೆಗೂ ನಿಂತಿರುತ್ತಾರೆ. ಇವರು ಬುಡಕಟ್ಟು ಸಮುದಾಯಗಳಲ್ಲಿ ಹುಟ್ಟಿ ಬೆಳೆದಿಲ್ಲವಾದರೂ ಬುಡಕಟ್ಟಿನಲ್ಲಿ ಹುಟ್ಟಿ ಬೆಳೆದಿರುವವರನ್ನೇ ಬುಡಕಟ್ಟಿನವರನ್ನು ಮೀರಿಸುವಂತೆ ತಯಾರಾಗಿರುತ್ತಾರೆ. ಇವರು ಸರ್ಕಾರ, ದೇಶ, ವಿದೇಶಗಳು ಮತ್ತು ಬುಡಕಟ್ಟುಗಳ ನಡುವೆ

ಕೊಂಡಿಯಂತೆ ಕೆಲಸ ಮಾಡುತ್ತಾರೆ. ಸರ್ಕಾರಗಳು ಬುಡಕಟ್ಟುಗಳನ್ನು ನಂಬುವುದಕ್ಕಿಂತ ಹೆಚ್ಚಾಗಿ ಇವರನ್ನು ನಂಬುತ್ತಾರೆ. ಬುಡಕಟ್ಟುಗಳು ಇವರೊಂದಿಗೆ ಹೋದರೆ ಮಾತ್ರ ಕೆಲಸ ಕಾರ್ಯಗಳಾಗುತ್ತವೆ ಎಂಬ ಮಟ್ಟಕ್ಕೆ ಬೆಳೆದು ಬಿಟ್ಟಿರುತ್ತಾರೆ. ಇವರುಗಳು ಬುಡಕಟ್ಟುಗಳ ಜ್ಞಾನ ಪರಂಪರೆಯನ್ನು ಮತ್ತು ಜೀವನ ವಿಧಾನದ ಮೌಲ್ಯಗಳನ್ನು ಸಾಂಕೇತಿಕವಾಗಿ ಕಲಿತುಕೊಂಡು ಅದಕ್ಕೆ ಭಾಷೆ, ರೋಮಾಂಚಕತೆಯನ್ನು ಕೊಟ್ಟು ಮತ್ತು ವೈಭವ ಪ್ರೇರಿತವಾಗಿಸಿಕೊಂಡು ಇತರೆ ಸಮುದಾಯಗಳಿಗೆ ಪಾಠ ಮಾಡಿ ಬುಡಕಟ್ಟುಗಳ ದೈವಾಂತ ಸಂಭೂತರನ್ನಾಗಿ ಮಾಡಿ ಅವರ ಬದುಕನ್ನು ಕಿಂಚಿತ್ತು ಮುಟ್ಟದೆ ಅವರು ಇರುವ ಸ್ಥಿತಿಯಲ್ಲಿಯೇ ಸಾಯಬೇಕು. ಅದೇ ಈ ದೇಶದ ಹೆಮ್ಮೆಯ ವಿಷಯ ಎಂಬ ಮನೋಭಾವನೆಯನ್ನು ಭರಿಸುತ್ತಾರೆ. ಇನ್ನು ಕೆಲವರು ನಿಸ್ವಾರ್ಥತೆಯಿಂದ ದುಡಿಯುವವರೂ ಇರುತ್ತಾರೆ. ಆದರೆ ಇವರ ಸಂಖ್ಯೆ ಮಾತ್ರ ತೀರ ಕಡಿಮೆ.

ಜಾಗತೀಕರಣ ಎಂಬುದು ಬುಡಕಟ್ಟುಗಳ ಮೇಲೆ ತನ್ನದೇ ಪರಿಣಾಮವನ್ನುಂಟು ಮಾಡಿ ಬುಡಕಟ್ಟುಗಳ ಸ್ಥಿತ್ಯಂತರಕ್ಕೆ ಕಾರಣವಾಗಿದೆ. ಈ ಜಾಗತೀಕರಣದ ಬಗ್ಗೆ ಬುಡಕಟ್ಟುಗಳಿಗೆ ಎಳ್ಳಷ್ಟೂ ತಿಳಿದಿಲ್ಲದಿದ್ದರೂ ಇದರ ಪರಿಣಾಮ ಮಾತ್ರ ಬುಡಕಟ್ಟುಗಳೇ ನೇರವಾಗಿ ಅನುಭವಿಸು ವಂತೆ ಮಾಡಿತು. ಪ್ರಪಂಚದ ಎಲ್ಲಾ ಕಂಪನಿಗಳು, ಸಂಸ್ಕೃತಿಗಳು ಮತ್ತು ಜನಸಮುದಾಯಗಳು ಭಾರತಕ್ಕೆ ಬರುವಂತಾಗಿ ಭಾರತದಲ್ಲಿ ಆ ಎಲ್ಲಾ ದೇಶಗಳು ಬಂಡವಾಳ ಹೂಡಿಕೆಗೆ ಸಾಧ್ಯವಾಯಿತು ಮತ್ತು ಇದರಿಂದ ಭಾರತದಲ್ಲಿ ಅಪಾರ ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿಯಾಯಿತು. ಸುತ್ತಿಗೆಯ ಜಾಗಕ್ಕೆ ಡ್ರಿಲ್ಲಿಂಗ್ ಯಂತ್ರಗಳು ಬಂದವು. ಹತ್ತು ದಿನ ಶ್ರಮಪಡಬೇಕಾದದ್ದು ಒಂದೇ ದಿನಕ್ಕೆ ಮುಗಿಸುವಂತಾಯಿತು. ಮತ್ತು ಸಾವಿರಾರು ಜನರು ಶ್ರಮ ಹಾಕಬೇಕಾದ ಕೆಲಸವನ್ನು ಒಂದೇ ಯಂತ್ರ ಮಾಡಿ ಮುಗಿಸಿ ಬಿಟ್ಟಿತು. ಹೀಗೆ ಸಮಯ, ಶ್ರಮ ಎಲ್ಲವನ್ನು ಉಳಿಸಿಕೊಡುವ ಕೆಲಸ ವನ್ನು ಜಾಗತೀಕರಣ ಮಾಡಿತು. ಜೊತೆಗೆ ದೇಶ ವಿದೇಶಗಳ ಅಭಿವೃದ್ಧಿ ಪಟ್ಟಿಯಲ್ಲಿ ಭಾರತಕ್ಕೂ ಸ್ಥಾನಮಾನ ಸಿಗುವಂತಾಯಿತು ಎಂಬುದು ಸತ್ಯ. ಆದರೆ ಇದು ಭಾರತಕ್ಕೆ ಎಷ್ಟರಮಟ್ಟಿಗೆ ಪೂರಕವಾಯಿತು ಎನ್ನುವುದು ಮುಖ್ಯ ವಿಷಯ. ಭಾರತ ದೇಶವು ಬಹುಸಂಖ್ಯಾತ ಹಳ್ಳಿಗಳ ದೇಶ. ಇಲ್ಲಿ ಸೂಜಿಗೂ ಹಾರೆಗೂ ಸಂಬಂಧವಿರುತ್ತದೆ. ಕತ್ತಾಳೆ ಬೇರಿಗೂ ಗ್ರಾಮದ ವ್ಯವಸಾಯಕ್ಕೂ ಸಂಬಂಧವಿದೆ. ಮತ್ತು ಅಷ್ಟೇ ಪ್ರಮುಖವಾಗಿ ಭಾರತದಲ್ಲಿ ಜಾತಿಯ ಅಸಮಾನತೆಯಿಂದ ಇದು ಆರ್ಥಿಕ ಅಸಮಾನತೆಯನ್ನು ಹುಟ್ಟುಹಾಕಿದೆ. ಇಲ್ಲಿ ಎಲ್ಲದಕ್ಕೂ ಜಾತಿ ಇದೆ. ಈ ಜಾತೀಯತೆ ಪಾರಂಪರೆಯಿಂದಲೂ ಭಾರತವನ್ನು ನಿಯಂತ್ರಿಸಿಕೊಂಡು ಬಂದಿದೆ. ಈ ಜಾತಿಯನ್ನು ಹುಟ್ಟು ಹಾಕಿದ ವರ್ಗ, ವಸಾಹತುಶಾಹಿ, ರಾಜಪ್ರಭುತ್ವ, ಬಂಡವಾಳ ಶಾಹಿ, ಊಳಿಗಮಾನ್ಯ ಪದ್ಧತಿ, ಆಧುನಿಕತೆ ಮತ್ತು ಜಾಗತೀಕರಣವನ್ನು ತಮ್ಮ ಕಬಂಧ ಬಾಹುಗಳಿಂದ ನಿಯಂತ್ರಿಸುವ ಮಟ್ಟಕ್ಕೆ ಬೆಳೆದು ನಿಂತಿವೆ. ಇದರ ವಿರುದ್ಧ ಹಲವರು ಪ್ರಾಣ ತ್ಯಾಗ ಮಾಡಿದರೂ ಪ್ರಯೋಜನ

ವಾಗಲಿಲ್ಲ. ಮತ್ತೆ ಕೆಲವರಂತೂ ಈ ವರ್ಗಕ್ಕೆ ಬ್ರೇಕ್ ಹಾಕುವ ಕೆಲಸವನ್ನು ಈ ಜಾತಿಯತೆ ಮತ್ತು ಅಸಮಾನತೆಯನ್ನು ಹೋಗಲಾಡಿಸಲು ಬಾಬಾ ಸಾಹೇಬ್ ಅಂಬೇಡ್ಕರ್ ರಾಜಕೀಯ ಕಲಿಕೆಯನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಟ್ಟಿಹೋದರು. ಆದರೆ ಮತ್ತೆ ಅದೇ ವರ್ಗ ಆ ಕೀಲಿಯನ್ನು ಯಾರ ಕೈಗೂ ಸಿಗದಂತೆ ಮಾಡುತ್ತಾ ಸದಾ ಜಾಗರೂಕತೆಯಿಂದ ಕೆಲಸ ಮಾಡುತ್ತಾ ಬರುತ್ತದೆ. ಈ ಕೀಲಿಯ ಮೊದಲು ತೆಗೆದುಕೊಂಡು ಅದರಂತೆ ಜಾಗತೀಕರಣ ಎಂಬುದು ಈ ಯಾವ ಗೋಜಿಗೆ ಹೋಗದೆ ಅರಣ್ಯಗಳ ಒತ್ತುವರಿ, ಅರಣ್ಯ ಸಂಪನ್ಮೂಲಗಳ ಸಂಗ್ರಹಣೆ ಮಾಡುವುದರಲ್ಲಿ ತಲೆ ಕೆಡಿಸಿಕೊಂಡಿತು. ಇದಕ್ಕೆ ಮತ್ತೆ ಬೆಂಬಲವಾಗಿ ನಿಂತವರೇ ಜಾತೀಯತೆಯನ್ನು ಸೃಷ್ಟಿಸಿದ ವರ್ಗ. ಈ ವರ್ಗ ಜಾಗತೀಕರಣವನ್ನು ಇನ್ನೊಂದು ಅಸ್ತ್ರ ಮಾಡಿಕೊಂಡು ಬುಡಕಟ್ಟುಗಳ ಸ್ಥಿತ್ಯಂತರಗಳಿಗೆ ಕಾರಣವಾಯಿತು.

ಈ ಮೇಲಿನ ಎಲ್ಲಾ ಅಂಶಗಳಿಂದ ಇರುಳಿಗ ಬುಡಕಟ್ಟಿನಲ್ಲಿ ಅನೇಕ ರೀತಿಯ ಸ್ಥಿತ್ಯಂತರಗಳಿಗೆ ಕಾರಣವಾಯಿತು. ಸಾಮಾಜಿಕ ಸ್ಥಿತ್ಯಂತರ, ಆರ್ಥಿಕ ಸ್ಥಿತ್ಯಂತರ, ಶೈಕ್ಷಣಿಕ ಸ್ಥಿತ್ಯಂತರ ಮತ್ತು ಅರಣ್ಯಕಾಯ್ದೆ ಕಾನೂನುಗಳಿಂದಾದ ಸ್ಥಿತ್ಯಂತರಗಳೆಂದು ವರ್ಗೀಕರಿಸಿ ನೋಡಬಹುದಾಗಿದೆ.

೬.೧. ಸಾಮಾಜಿಕ ಸ್ಥಿತ್ಯಂತರಗಳು

ಬದಲಾವಣೆ ಎಂಬುದು ಜಗದ ನಿಯಮ. ಇದರ ಪ್ರಮುಖ ಬಿಂದು ಪ್ರಕೃತಿಯೇ ಆಗಿರುತ್ತದೆ. ಆದರೂ ಮಾನವ ಪ್ರಕೃತಿಗೆ ವಿರುದ್ಧವಾಗಿ ಬದಲಾವಣೆ ಮಾಡುವುದರಲ್ಲಿ ಇಂದಿಗೂ ನಿರತನಾಗಿದ್ದಾನೆ. ಈ ಬದಲಾವಣೆ ಎಂಬುದು ಸಾರ್ವತ್ರಿಕವಾದದ್ದು. ಇದಕ್ಕೆ ಎಲ್ಲವೂ ಒಳಗೊಳ್ಳಲೇಬೇಕು. ಅದು ಸಜೀವಿಯಾಗಿರಲಿ, ನಿರ್ಜೀವಿಯಾಗಿರಲಿ. ಕೆಲವು ಸಮುದಾಯಗಳಲ್ಲಿ ಬದಲಾವಣೆ ಎಂಬುದು ಬಿಂಬಿತವಾಗುತ್ತಿದ್ದರೆ, ಮತ್ತೆ ಕೆಲವು ಸಮುದಾಯಗಳಲ್ಲಿ ಮೇಲುನೋಟಕ್ಕೆ ಗೋಚರವಾಗದೆ ಅಂತರಿಕವಾಗಿ ಕ್ರಿಯಾತ್ಮಕವಾಗಿರುತ್ತದೆ. ಈ ಬದಲಾವಣೆಯ ಧೇಯ್ಯೋದ್ದೇಶ ಮತ್ತು ಗುರಿಗಳು ಎರಡು ಹಿನ್ನೆಲೆಯಲ್ಲಿ ಕಂಡುಬರುತ್ತಿರುತ್ತದೆ. ಒಂದು ನಿಶ್ಚಿತ ಭ್ರಮೆಯ ಹೊರತಾಗಿಯೂ ಸಮಾಜಗಳು ಬದಲಾಗುತ್ತಿವೆ ಎಂಬುದು ನಿಶ್ಚಿಯ ಬದಲಾವಣೆಯು ಅನಿವಾರ್ಯವಾಗಿರುತ್ತದೆ.

ಸಾಮಾಜಿಕ ಬದಲಾವಣೆ ಎಂದರೆ ಎರಡು ಬೇರೆ ಬೇರೆ ಕಾಲಘಟ್ಟದಲ್ಲಿ ಒಂದೇ ವಸ್ತುವಿನಲ್ಲಿ ಉಂಟಾದ ಗಮನಿಸಬಹುದಾದ ವ್ಯತ್ಯಾಸ. ಈ ಸಾಮಾಜಿಕ ಬದಲಾವಣೆಯನ್ನು ಕುರಿತು ಅನೇಕ ವಿದ್ವಾಂಸರುಗಳು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಪ್ರಮುಖವಾಗಿ ಕಿಂಗ್ಸ್‌ಲೀ ಡೇವಿಸ್ ಅವರು ಸಾಮಾಜಿಕ ಪ್ರಕ್ರಿಯೆಗಳು, ಸಾಮಾಜಿಕ ಮಾದರಿಗಳು ಮತ್ತು ಸಾಮಾಜಿಕ ಅಂತರ್‌ಕ್ರಿಯೆಗಳನ್ನು ವಿವರಿಸಲು ಸಾಮಾಜಿಕ ಬದಲಾವಣೆ ಎಂಬ ಕಲ್ಪನೆಯನ್ನು

ಬಳಸಲಾಗಿದೆ ಎನ್ನುತ್ತಾರೆ.[೪] ಚರಿತ್ರೆಕಾರರು ಮತ್ತು ಸಮಾಜ ವಿಜ್ಞಾನಿಗಳು ಸಾಮಾಜಿಕ ಬದಲಾವಣೆಯನ್ನು ವಿಭಿನ್ನ ಆಲೋಚನೆಗಳ ಸಹಾಯದಿಂದ ಮತ್ತು ವಿಭಿನ್ನ ಕ್ರಮಗಳಿಂದ ಅಧ್ಯಯನ ನಡೆಸಿದ್ದಾರೆ. ಕೆಲವರು ತಮ್ಮದೇ ಆದ ನೈತಿಕ ಇಲ್ಲವೇ ಭಾವನಾತ್ಮಕ ದೃಷ್ಟಿಕೋನಗಳಿಂದ ಭಾರತದಲ್ಲಿನ ಬದಲಾವಣೆ ಹಾಗೂ ಬದಲಾವಣೆ ಯಾಗದಿದ್ದುದನ್ನು ವಿಶ್ಲೇಷಿಸಿದ್ದಾರೆ. ಇದೇ ಸಂದರ್ಭದಲ್ಲಿ ಬದಲಾವಣೆಗೆ ಪೂರಕವಾದ ಅಂಶಗಳನ್ನು ಹಾಗೂ ಬದಲಾವಣೆಯಾದ ಮೇಲೆ ಉಂಟಾದ ಪರಿಣಾಮಗಳಲ್ಲಿ ಅನುಕೂಲ ಮತ್ತು ಅನಾನುಕೂಲಗಳನ್ನು ಕುರಿತು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಮತ್ತೆ ಕೆಲವರು ಈ ಬದಲಾವಣೆಯ ಕಾಲ, ಅದರ ವೇಗದ ಬಗ್ಗೆ ತಮ್ಮದೇ ಆದ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ.

ಸಮಾಜ ಎಂಬುದು ಸಾಮಾಜಿಕ ಸಂಬಂಧಗಳಿಂದಾದ್ದುದಾಗಿದೆ. ಇದು ಸಂಬಂಧಗಳ ಚೈನ್‌ಲಿಂಕ್ ಆಗಿರುತ್ತದೆ. ಸಾಮಾಜಿಕ ಸ್ಥಿತ್ಯಂತರಗಳ ಎಂದರೆ ಸಾಮಾಜಿಕ ಸಂಬಂಧಗಳಲ್ಲಿ ಉಂಟಾಗುವ ಬದಲಾವಣೆಗಳೇ ಆಗಿರುತ್ತವೆ. ಈ ಸಾಮಾಜಿಕ ಸಂಬಂಧ ಎಂಬುದು ಒಂದು ಕುಟುಂಬ ಅಥವಾ ಒಂದು ಗುಂಪಿಗೆ ಸೀಮಿತವಾಗಿರದೆ ಇದರ ವ್ಯಾಪಕತೆ ಅತ್ಯಂತ ವಿಸ್ತಾರವಾಗಿರುತ್ತದೆ. ಆದರೆ ಈ ಎಲ್ಲವುಗಳಿಗೂ ಒಂದಕ್ಕೊಂದು ಕಳ್ಳುಬಳ್ಳಿ ಸಂಬಂಧಗಳೇ ಇರುತ್ತವೆ. ಯಾವುದಾದರೂ ಒಂದರಲ್ಲಿ ವ್ಯತ್ಯಾಸ ಅಥವಾ ಬದಲಾವಣೆ ಕಂಡುಬಂದರೂ ಇಡೀ ಸಮಾಜದ ಎಲ್ಲಾ ಸಂಬಂಧಗಳು ಬದಲಾವಣೆಗೊಳ್ಳುತ್ತವೆ. ಇದು ನಿರಂತರವಾದ ಪ್ರಕ್ರಿಯೆ. ಪ್ರತಿಯೊಂದು ಸಮುದಾಯವು ಚಲನಾಶೀಲತೆಯಿಂದಲೇ ಕೂಡಿರುತ್ತದೆ. ಈ ಚಲನೆಯು ಸಮುದಾಯದಲ್ಲಿ ಬಾಹ್ಯವಾಗಿ ಮತ್ತು ಆಂತರಿಕವಾಗಿ, ನಿರಂತರವಾಗಿ ಅರಿವಿಕೆಯನ್ನುಂಟು ಮಾಡುತ್ತಿರುತ್ತದೆ.

ಸಮಾಜವು ನಿರಂತರ ಚಲನಶೀಲತೆಯಿಂದ ಕೂಡಿರುತ್ತದೆ. ಆದರೆ ಅದರ ತೀವ್ರತೆಯು ಬುಡಕಟ್ಟು ಮತ್ತು ಗ್ರಾಮ, ನಗರ ಸಮಾಜಗಳಲ್ಲಿ ಭಿನ್ನ ಭಿನ್ನವಾಗಿ ಗುರ್ತಿಸಿಕೊಳ್ಳುತ್ತವೆ. ಗ್ರಾಮ ಮತ್ತು ನಗರ ಸಮಾಜದಂತೆ ತೀವ್ರವಾಗಿ ಬದಲಾವಣೆ ಎಂಬುದು ಕಂಡುಬರುವುದಿಲ್ಲ. ಇದು ಮೇಲುನೋಟಕ್ಕೆ ಕಂಡುಬರುವುದು ಇಲ್ಲ. ಈ ಸಾಮಾಜಿಕ ಬದಲಾವಣೆಯು ಸುತ್ತಮುತ್ತಲಿನ ಪರಿಸರ, ವ್ಯಕ್ತಿ, ಧರ್ಮ, ಪಂಥ, ಆಧುನಿಕತೆ, ಅನಿವಾರ್ಯತೆ ಮತ್ತು ಅವಶ್ಯಕತೆಗಳಿಂದಲೂ ಕಂಡುಬರುತ್ತದೆ. ಪ್ರತಿಯೊಂದು ಸಮಾಜದಲ್ಲಿ ಬದಲಾವಣೆ ಎಂಬುದು ಎಷ್ಟು ವಾಸ್ತವವೋ ಅಷ್ಟೇ ಅವಾಸ್ತವಿಕತೆಯಿಂದ ಕೂಡಿರುತ್ತದೆ. ಇನ್ನೊಂದು ಪ್ರಮುಖವಾದ ಅಂಶವೆಂದರೆ ಸಾಮಾಜಿಕ ಸ್ಥಿತ್ಯಂತರಗಳಲ್ಲಿ ಎರಡು ಬಗೆಗಳಿವೆ. ಮಾನವನ ಬೌದ್ಧಿಕತೆಯಿಂದ ಹುಟ್ಟಿಕೊಂಡಿರುವುದು ಒಂದಾದರೆ, ಪ್ರಕೃತಿಯಿಂದ ಹುಟ್ಟಿದ್ದು ಇನ್ನೊಂದು ಬಗೆಯದ್ದು. ಈ ಎರಡು ಬಗೆಗಳು ಸಾಮಾಜಿಕ ಸ್ಥಿತ್ಯಂತರಗಳಿಗೆ ಆಂತರಿಕವಾಗಿ ಪ್ರೇರೇಪಿಸುತ್ತಿರುತ್ತವೆ. ಮೊದಲನೆಯದಾದ ಮಾನವನ ಬೌದ್ಧಿಕತೆಯಿಂದ ಹುಟ್ಟಿದ್ದು ಎಂದರೆ ಮಾನವನು ಆವಿಷ್ಕರಿಸಿದ ಯಂತ್ರಗಳು, ಧರ್ಮ,

ಪಂಥ, ಚಿಂತನೆ, ಆಚಾರ, ವಿಚಾರ, ಆಚರಣೆಯ ಜಾಗತೀಕರಣ ಮತ್ತು ತಂತ್ರಜ್ಞಾನಗಳಾಗಿವೆ. ಎರಡನೆಯದಾದ ಪ್ರಕೃತಿ ಕೊಡುಗೆಗಳೆಂದರೆ ಬರಗಾಲ, ಅತೀವೃಷ್ಟಿ, ಅನಾವೃಷ್ಟಿ ಮುಂತಾದ ಪ್ರಾಕೃತಿಕ ವಿಕೋಪಗಳನ್ನುಂಟು ಮಾಡುವ ಸಾಮಾಜಿಕ ಸ್ಥಿತ್ಯಂತರಗಳಾಗಿರುತ್ತವೆ.

ಸಾಮಾಜಿಕ ಬದಲಾವಣೆಯಲ್ಲಿ ಮೌಲ್ಯಗಳು ಬದಲಾಗುತ್ತಿರುತ್ತವೆ. ಎಲ್ಲಾ ಕಾಲಕ್ಕೂ ಒಂದೇ ಮೌಲ್ಯ ಸ್ಥಿರವಾಗಿರುವುದಿಲ್ಲ. ಒಂದು ಕಾಲಕ್ಕೆ ಒಂದು ಮೌಲ್ಯವೆನಿಸಿದರೆ, ಇನ್ನೊಂದು ಕಾಲಕ್ಕೆ ಮತ್ತೊಂದು ಅಪಮೌಲ್ಯವೆನಿಸುತ್ತದೆ. ಈ ಮೌಲ್ಯಗಳನ್ನು ನಿರ್ಧರಿಸಲು ಯಾರಿಂದಲೂ ಸಾಧ್ಯವಿಲ್ಲ. ಅದು ಆಯಾ ಕಾಲಗನುಗುಣವಾಗಿ ಸೃಷ್ಟಿಗೊಳ್ಳುತ್ತಾ ಹೋಗುತ್ತಿರುತ್ತದೆ. ಹಿಂದಿನ ಕಾಲದ ಮೌಲ್ಯಗಳನ್ನು ಪ್ರಸ್ತುತ ಸಮಾಜದ ಮೌಲ್ಯಗಳೊಂದಿಗೆ ಅನುಸಂಧಾನ ಮಾಡಬಾರದು. ಆದರೆ ಮೌಲ್ಯವು ಪ್ರಸ್ತುತ ಸಮಾಜದ ಒಳಿತಿಗೆ ಉಪಯುಕ್ತವಾದುದ್ದಾಗಿದ್ದರೆ ಅದನ್ನು ಅನುಸಂಧಾನ ಮಾಡುವುದರಲ್ಲಿ ತಪ್ಪೇನಿಲ್ಲ. ಏಕೆಂದರೆ ಜಗತ್ತು ನಿರಂತರ ಚಕ್ರದಂತೆ ಸುತ್ತುತ್ತಿರುತ್ತದೆ. ಅದ್ದರಿಂದಲೇ ಹಿಸ್ಟರಿ ಇಸ್ ರಿಪೀಟ್ ಎನ್ನುತ್ತಾರೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು ಎಂದಿದ್ದಾರೆ. ಅಂದರೆ ಹಿಂದಿನ ಮೌಲ್ಯಗಳು ಅಥವಾ ಅಪಮೌಲ್ಯಗಳು ಇವತ್ತಿನ ಸಂದರ್ಭದಲ್ಲಿ ಭವಿಷ್ಯದ ಶಿಖರವೇರಲಿರುವ ಮೆಟ್ಟಿಲುಗಳಾಗಿರುತ್ತವೆ. ಆ ಹಿನ್ನೆಲೆಯಲ್ಲಿ ಮೌಲ್ಯಗಳ ಅನುಸಂಧಾನ ಕ್ರಿಯೆಯನ್ನು ಮಾನವ ಮಾಡಿಕೊಳ್ಳದಿದ್ದರೂ ಪ್ರಕೃತಿಯು ಮಾಡುತ್ತಿರುತ್ತವೆ ಎಂಬ ಸತ್ಯ ಮರೆಯಬಾರದು. ಏಕೆಂದರೆ ಹಿಂದಿನ ಸರಳತೆ, ಆಚಾರ ವಿಚಾರ, ಉಡುಗೆ ತೊಡುಗೆ, ರೀತಿ ರಿವಾಜುಗಳು ಇಂದು ಆಧುನಿಕತೆಯ ಲೇಬಲ್‌ಗಳೊಂದಿಗೆ ಟ್ರೆಂಡ್ ಆಗಿ ಮತ್ತೆ ಸಮಾಜಕ್ಕೆ ಬರುತ್ತಿವೆ. ಉದಾಹರಣೆಗೆ ಹಿಂದೆ ಬಳಸುತ್ತಿದ್ದ ಬುಲೆಟ್ ಗಾಡಿ ಇಂದು ಹೊಸ ಟ್ರೆಂಡ್ ಆಗಿದೆ. ಹಾಗೆಯೇ ಕುರಿ, ಮೇಕೆ, ಹಸುವಿನ ಗೊಬ್ಬರದಿಂದ ಬೆಳೆದ ಬೆಳೆಗಳನ್ನು ತಿನ್ನುತ್ತಿದ್ದರು. ಆದರೆ ಅದು ಇಂದು ಸಾವಯವ ಎಂಬ ಹೊಸಲೇಬಲ್‌ನೊಂದಿಗೆ ಪ್ರಚಾರ ಪಡೆಯುತ್ತಿದೆ. ಪುರೋಹಿತ, ಮಂತ್ರ, ಮಾಂಗಲ್ಯಗಳಿಲ್ಲದ ಮದುವೆಗಳು ಇಂದೂ ಹೊಸಟ್ರೆಂಡ್ ಆಗಿವೆ. ಇಂದಿನ ಉಡುಗೆ ತೊಡುಗೆ, ಗೃಹೋಪಯೋಗಿ ವಸ್ತುಗಳು, ಫ್ಯಾಶನ್ ಹೆಸರಿನಲ್ಲಿ ಮತ್ತೆ ಬರುತ್ತಿವೆ. ಹೀಗೆ ಒಂದು ಕಾಲದ ಮೌಲ್ಯಗಳು ಮತ್ತೊಂದು ಕಾಲಕ್ಕೂ ಅನ್ವಯವಾಗುತ್ತವೆ. ಆದರೆ ಅದರ ರೂಪತೆ ಬದಲಾಗಿರುತ್ತದೆಯಷ್ಟೇ.

ಮೌಲ್ಯಗಳು ಎಂದರೆ ಒಂದೇ ಬಗೆಯಾಗಿ ಇರುವುದಿಲ್ಲ. ಅವು ಒಬ್ಬೊಬ್ಬರಿಗೂ ಒಂದೊಂದು ರೀತಿಯಲ್ಲಿ ಕಂಡುಬರುತ್ತದೆ. ಒಳ್ಳೆಯ ಉದ್ದೇಶವಿರುವ ಮೌಲ್ಯಗಳು ಎಲ್ಲಾ ಕಾಲಕ್ಕೂ ಅನುಸಂಧಾನವಾಗುತ್ತಿದ್ದಾರೆ. ಒಳ್ಳೆಯ ಉದ್ದೇಶದಿಂದ ಸ್ವಾರ್ಥಮೌಲ್ಯಗಳು ಕಾಲಕಾಲಕ್ಕೆ ಅಪಮೌಲ್ಯಗೊಳ್ಳುತ್ತಿರುತ್ತವೆ. ಸ್ಥಿತ್ಯಂತರದ ಸಂಪೂರ್ಣ ಅರಿವಾಗಬೇಕಾದರೆ ಸಿದ್ಧಾಂತದ ಬೆನ್ನ ಹಿಂದೆ ಸಾಗಿದರೆ ವಾಸ್ತವತೆ ಅರ್ಥವಾಗುವುದಿಲ್ಲ. ಅದು ಕೇವಲ ಥಿಯರಿ ಮಾತ್ರವಾಗಿರುತ್ತದೆ. ಆದರೆ ಈ ಸ್ಥಿತ್ಯಂತರವನ್ನು ಸಮುದಾಯಗಳೊಂದಿಗೆ ಅನುಸಂಧಾನ ಮಾಡಿ ನೋಡಿದಾಗ

ಸ್ಥಿತ್ಯಂತರದ ರೂಪುರೇಷೆ ಅರ್ಥವಾಗುತ್ತದೆ. ಆ ಹಿನ್ನೆಲೆಯಲ್ಲಿ ಇರುಳಿಗಲ್ಲುಂಟಾದ ಸಾಮಾಜಿಕ ಸ್ಥಿತ್ಯಂತರಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಏಕೆಂದರೆ ಸಾಮಾನ್ಯವಾಗಿ ಬುಡಕಟ್ಟುಗಳಲ್ಲಿ ಈ ಸ್ಥಿತ್ಯಂತರಗಳು ವೃತ್ತಿಯಲ್ಲಿ ಮೇಲೇರಿ, ಮೇಲುವರ್ಗದ ಉದ್ಯೋಗಗಳನ್ನು ಅಳವಡಿಸಿಕೊಳ್ಳುವ ತವಕದಲ್ಲಿದ್ದುದರಿಂದ ಮುಕ್ತ ವೃತ್ತಿಗೆ ಅವಕಾಶ ಸಿಗಲಿಲ್ಲ. ಇದರಿಂದ ತಮ್ಮ ಮೂಲ ಉದ್ಯೋಗವನ್ನು ತೊರೆದು ಕೆಳವರ್ಗದ ಕಸುಬುಗಳನ್ನು ಅವಲಂಬಿಸುವಂತಾಯಿತು. ಜೊತೆಗೆ ತಮ್ಮ ಪಾರಂಪರಿಕ ವೃತ್ತಿಯನ್ನು ಉಳಿಸಿಕೊಂಡು ಮುಂದುವರಿಸಿಕೊಂಡು ಹೋಗಬೇಕೆ ಅಥವಾ ಬೇಡವೇ ಎಂಬ ದ್ವಂದ್ವ ನಿರ್ಧಾರಗಳಲ್ಲಿ ಬದುಕುವಂತಾಯಿತು. ಇಂತಹ ಹತ್ತಾರು ಸಂದರ್ಭಗಳು ಇರುಳಿಗರ ಬುಡಕಟ್ಟಿನಲ್ಲುಂಟಾಯಿತು. ಒಂದು ಕಡೆ ಸಮುದಾಯ ಪಡೆದುಕೊಳ್ಳುತ್ತಿದೆ ಎಂಬುದರಿಂದ ಕಳೆದುಕೊಂಡಿದ್ದೇ ಹೆಚ್ಚಾಗಿತ್ತು. ಇದರಿಂದ ಇರುಳಿಗರು ಅನೇಕ ಸಮಸ್ಯೆಗಳಿಗೆ ಸಿಲುಕುವಂತಾಯಿತು.

ಇರುಳಿಗರು ಸಾಂಪ್ರದಾಯಿಕ ಬದ್ಧತೆಗಳು ಆಧುನಿಕತೆಯ ಬೆನ್ನಲ್ಲೇ ನಾಗರಿಕತೆಯ ನಾಗಾಲೋಟದಿಂದಲೋ, ಕಾಲಕ್ಕೆ ತಕ್ಕಂತೆಯೋ ಅಥವಾ ವಸಾಹತುಶಾಹಿ ಮತ್ತು ವೈದಿಕ ಸಂಪ್ರದಾಯದಿಂದಲೋ ಇರುಳಿಗರ ಪಾರಂಪರಿಕ ನಂಬಿಕೆಗಳು ಸಂಪೂರ್ಣವಾಗಿ ಬದಲಾವಣೆಯನ್ನು ಕಾಣುತ್ತಿವೆ. ಹಿಂದೆ ಇರುಳಿಗರ ಗರ್ಭಿಣಿಯರಿಗೆ ಕಾಡಿನ ಗಿಡ ಮೂಲಿಕೆಗಳು, ಕಾಡು ಪ್ರಾಣಿಗಳು, ಮಣ್ಣುಂಡೆಗಳು ಮುಂತಾದವುಗಳನ್ನು ಕಟ್ಟುಗೌಡನ ಆಜ್ಞೆಗಳಂತೆ ಗರ್ಭಿಣಿಗೆ ಕೊಟ್ಟು ಆರೈಕೆ ಮಾಡಲಾಗುತ್ತಿತ್ತು. ಹೆರಿಗೆ ನೋವು ಕಾಣಿಸಿಕೊಳ್ಳುವ ಹಂತದವರೆಗೂ ಈ ಗರ್ಭಿಣಿಯು ಇತರ ಮಹಿಳೆಯರಂತೆ ಮನೆ ಕೆಲಸಕಾರ್ಯಗಳಲ್ಲಿ ಭಾಗಿಯಾಗಿದ್ದಳು. ಇದರಿಂದ ಯಾವುದೇ ಪ್ರಯಾಸವಿಲ್ಲದೇ ಹೆರಿಗೆಯಾಗುತ್ತಿತ್ತು. ಹೆರಿಗೆಯ ನಂತರ ಹತ್ತಾರು ರೀತಿ ರಿವಾಜುಗಳನ್ನು ಪಾಲನೆ ಮಾಡಿ ತಾಯಿ ಮತ್ತು ಮಗುವನ್ನು ಆರೈಕೆ ಮಾಡಿ ಪ್ರಕೃತಿಯಲ್ಲಿ ಸಿಗುವ ಸ್ವಾಭಾವಿಕ ಸತ್ವಯುತ ಸಂಪನ್ಮೂಲಗಳನ್ನು ಕೊಟ್ಟು ಯಾವುದೇ ತೊಂದರೆ ಇಲ್ಲದಂತೆ ನೋಡಿಕೊಳ್ಳಲಾಗುತ್ತಿತ್ತು. ಹೆರಿಗೆಯಾದ ಮೂರು ತಿಂಗಳವರೆಗೆ ಕೆಲವು ಕಟ್ಟುನಿಟ್ಟಿನ ಕ್ರಮಗಳನ್ನು ಮನೆಯವರು ಮತ್ತು ಮಗುವಿನ ತಾಯಿ ಇಬ್ಬರು ಪಾಲಿಸುತ್ತಿದ್ದರು. ಕಾಡಿನಲ್ಲಿ ಸಿಗುವ ಸೊಪ್ಪು, ಕಾಡು ಪ್ರಾಣಿಗಳನ್ನು ತಂದು ತಿನ್ನಲು ಕೊಡುತ್ತಿದ್ದರು. ಇವುಗಳ ಜೊತೆಗೆ ಇನ್ನಿತರ ಗಿಡಮೂಲಿಕೆಗಳಿಂದ ತಾಯಿ ಮಗುವನ್ನು ಆರೈಕೆ ಮಾಡುತ್ತಿದ್ದರು. ಇದರಿಂದ ತಾಯಿ ಮಗುವು ಯಾವುದೇ ಸಮಸ್ಯೆಯಿಲ್ಲದೆ ಸದೃಢವಾಗಿರುತ್ತಿದ್ದರು. ವಿಶೇಷವೆಂದರೆ ಇರುಳಿಗರಲ್ಲಿ ಹೆರಿಗೆಯ ಸಂದರ್ಭದಲ್ಲಿ ಮಗು ಸಾಯುವುದಾಗಲಿ ಅಥವಾ ಅಂಗವಿಕಲತೆ ಇನ್ನಿತರ ಯಾವುದೇ ಸಮಸ್ಯೆಗಳು ಕಂಡು ಬರುವುದಿಲ್ಲ. ಇಂದಿಗೂ ಇರುಳಿಗರಲ್ಲಿ ಅಂಗವಿಕಲ ಮಕ್ಕಳನ್ನು ಕಾಣಲು ಸಾಧ್ಯವಿಲ್ಲ. ಹಾಗೊಮ್ಮೆ ಕಂಡರೂ ಸಾವಿರಕ್ಕೆ ಒಬ್ಬರು ಇರುತ್ತಾರೆ. ಅದು ಇತ್ತೀಚಿನ ದಿನಮಾನಗಳಲ್ಲಿಯೇ ಆಗಿರುತ್ತದೆ. ಆದರೂ ಹೆರಿಗೆಯ ಸಂದರ್ಭದಲ್ಲಿ ಮಗುವಿಗೆ ತೊಂದರೆಯಾಗಿ ಅಥವಾ ತಾಯಿಗೆ

ತೊಂದರೆಯಾಗಿ ಸೀಜರಿಂಗ್ ಮಾಡುವ ಯಾವ ದಾಖಲೆಯು ಇರುಳಿಗರಲ್ಲಿ ಇಂದಿಗೂ ಕಂಡುಬಂದಿರುವುದಿಲ್ಲ. ಆದರೆ ಇರುಳಿಗರು ಕೂಡ ತಮ್ಮ ಪಾರಂಪರಿಕ ರೀತಿ ರಿವಾಜುಗಳನ್ನು ಬಿಟ್ಟು ಆಧುನಿಕ ಸಮಾಜಗಳಂತೆ ಬೇಬಿಕೇರ್ ಸೆಂಟರ್‌ಗಳು ಮತ್ತು ಆಸ್ಪತ್ರೆಗಳ ರೀತಿ–ರಿವಾಜುಗಳನ್ನು ಬಳಸಲು ಪ್ರಾರಂಭಿಸಿದ್ದಾರೆ. ಇದು ಇರುಳಿಗರಲ್ಲಿ ಇಂದಿಗೂ ಪರಿಚಯಾತ್ಮಕ ಹಂತದಲ್ಲೇ ಇದೆ.

ಇರುಳಿಗರಲ್ಲಿ ಮದುವೆ ಕ್ರಿಯೆಯು ಅತ್ಯಂತ ಸರಳ ರೀತಿಯಲ್ಲಿದ್ದು ಪರಸ್ಪರ ಇಷ್ಟಪಟ್ಟ ಹುಡುಗ, ಹುಡುಗಿಯರು ಕಾಡಿಗೆ ಅಥವಾ ಇನ್ನೊಂದು ಪ್ರದೇಶಕ್ಕೆ ಓಡಿಹೋಗಿ ಮತ್ತೆ ವಾಪಾಸ್ಸಾಗುತ್ತಿದ್ದರು. ನಂತರ ಕುಲಗೌಡ, ಕಟ್ಟೆಗೌಡ, ನಾಡಗೌಡ, ಕೋಲುಕಾರ ಮತ್ತು ಕುಲದ ಹಿರಿಯರೆಲ್ಲ ಸೇರಿ ಅವರಿಬ್ಬರ ಅಭಿಪ್ರಾಯಗಳನ್ನು ದಾಖಲಿಸಿಕೊಂಡು ಒಂದು ಮರವನ್ನು ಸುತ್ತಿಸಿ ಒಂದಾಗಿ ಬಾಳಲು ಅನುವು ಮಾಡಿಕೊಡುತ್ತಿದ್ದರು. ಇಲ್ಲಿಗೆ ಮದುವೆ ಮುಗಿಯುತ್ತಿತ್ತು. ಆದರೆ ಇಂದು ಈ ಪಾರಂಪರಿಕ ವಿಧಾನವು ಇತರ ಸಮುದಾಯಗಳೆದುರು ಅತ್ಯಂತ ಕೆಟ್ಟಚಾಳಿ ಎಂದು ಬಿಂಬಿತಗೊಂಡಿದೆ. ಇದು ಸಮುದಾಯದ ಕೆಟ್ಟ ಸಂಪ್ರದಾಯದಂತೆ ಕಂಡುಬಂದಿದೆ. ಇದರಿಂದ ಸಮುದಾಯವು ತಮ್ಮ ಪಾರಂಪರಿಕ ನಂಬಿಕೆಯನ್ನು ಅನುಸರಿಸಿಕೊಂಡು ಬರದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಇತರೆ ಸಮುದಾಯಗಳಂತೆ ವೈದಿಕೀಕರಣದ ಮದುವೆ ಸಂಪ್ರದಾಯಗಳನ್ನು ಅನುಸರಿಸಲಾಗುತ್ತಿದೆ. ಆದರೂ ತಮ್ಮ ಪಾರಂಪರಿಕ ರೀತಿ ರಿವಾಜುಗಳನ್ನು ಬಿಟ್ಟುಕೊಡದ ಇರುಳಿಗರು ವೈದಿಕೀಕರಣ ವಿವಾಹ ಪದ್ಧತಿಯನ್ನು ಅನುಸರಿಸದೇ ಬಹುಸಂಖ್ಯಾತರು ತಮ್ಮ ಪಾರಂಪರಿಕತೆಯನ್ನು ಮುಂದುವರಿಸಿಕೊಂಡು ಬರುತ್ತಿರುವುದನ್ನು ಕಾಣಬಹುದು.

ಇರುಳಿಗರ ಸಾಂಪ್ರದಾಯಿಕ ನ್ಯಾಯ ವ್ಯವಸ್ಥೆಯು ಇಂದು ಸಂಪೂರ್ಣವಾಗಿ ಮರೆಯಾಗಿ ಹೋಗಿದೆ. ನಾಡಗೌಡ, ಕಟ್ಟುಗೌಡ, ಕೋಲುಗೌಡ, ಕಾಡುಗೌಡರು ಇಲ್ಲದಂತಾಗಿದ್ದರೆ ಸಮುದಾಯಕ್ಕೆ ರೀತಿ ರಿವಾಜುಗಳಿಲ್ಲದೆ ಅನೈತಿಕತೆಯು ತಾಂಡವಾಡುತ್ತಿದೆ. ಇರುಳಿಗರ ಸಾಮಾಜಿಕ ವ್ಯವಸ್ಥೆಯು ಒಂದು ಸುಸಜ್ಜಿತ ಸಮಾಜದ ಪರಿಕಲ್ಪನೆಯಲ್ಲಿತ್ತು. ಇವರು ನ್ಯಾಯಾಂಗವು ಅತ್ಯಂತ ಮೌಲ್ಯಯುತ ವಾದುದ್ದಲ್ಲದೆ ಕಟ್ಟುನಿಟ್ಟಿನ ರಿವಾಜುಗಳಿಂದ ಕೂಡಿತ್ತು. ಇವರೇ ದುರ್ಬಲ, ಪ್ರಬಲ, ಮಧ್ಯಮ, ಮಹಿಳೆ ಎಂಬ ಭೇದಭಾವವಿಲ್ಲದೆ ಸರಿಸಮನಾದ ಕಾನೂನು ಕಟ್ಟಳೆಗಳಿದ್ದ ಇವನ್ನು ಪಾಲನೆ ಮಾಡುತ್ತಿದ್ದ ಜನರು ಮತ್ತು ಇದರ ರಕ್ಷಕರಾಗಿದ್ದ ನಾಡಗೌಡ, ಕಟ್ಟುಗೌಡ, ಕೋಲುಕಾರ, ಗಡಿಗೌಡರು ಅತ್ಯಂತ ಜವಾಬ್ದಾರಿಯುತವಾಗಿರುತ್ತಿದ್ದರು. ಜೊತೆಗೆ ಇವರು ಇಡೀ ಸಮುದಾಯದ ವರ ಪ್ರಶ್ನೆಗೂ ಅರ್ಹರಾಗಿದ್ದರು. ಇವರುಗಳು ಸ್ವಹಿತಕ್ಕಿಂತ ಸಮುದಾಯದ ಹಿತಕ್ಕೆ ದುಡಿಯುತ್ತಿದ್ದರು. ಇದಕ್ಕೆ ತಕ್ಕಂತೆ ಸಮುದಾಯದ ಜನರು ಭಾಗವಹಿಸುತ್ತಿದ್ದರು. ಆದರೆ ಇಂದು ಸಂಪೂರ್ಣವಾಗಿ ಬದಲಾಗಿದೆ. ಅರಣ್ಯದಿಂದ ಒಕ್ಕಲೆಬ್ಬಿಸಿದ ಇರುಳಿಗರ ವಾಸದ ಮನೆಗಳು, ಗ್ರಾಮಗಳಿಗೆ

ಹೊಂದಿಕೊಂಡಂತಾದ್ದರಿಂದ ಅಥವಾ ಇರುಳಿಗರ ಹಾಡಿಗಳಿಗೆ ಇತರೆ ಸಮುದಾಯದವರು ಬರುವಂತಾದ್ದರಿಂದ ಇವರ ಕಟ್ಟುಪಾಡುಗಳು ಮೌಲ್ಯ ಕಳೆದುಕೊಂಡು ಗೌಡರುಗಳಿಗೆ ಗೌರವ ಇಲ್ಲದಂತಾಗಿ ಅವರ ಮಾತುಗಳನ್ನು ಯಾರೂ ಕೇಳದಂತಾಗಿದೆ. ಅದರಂತೆ ಆಧುನಿಕತೆ ಮತ್ತು ಗ್ರಾಮ ಸಮಾಜದ ಆಸೆ ಆಮಿಷಗಳಿಗೆ ಬಲಿಯಾದ ಈ ಜವಾಬ್ದಾರಿಯುತ ಹುದ್ದೆಗಳು ತಮ್ಮ ಗಾಂಭೀರ್ಯವನ್ನು ಕಳೆದುಕೊಡಿವೆ.

ಇರುಳಿಗರು ಬದುಕುವುದಕ್ಕಾಗಿ ವಲಸೆ ಹೊರಟಿದ್ದರಿಂದ ಬೇರೆ ಬೇರೆ ಸಂಪ್ರದಾಯಗಳ ಪ್ರಭಾವವುಂಟಾಗಿ ತಮ್ಮ ರೀತಿ ರಿವಾಜುಗಳನ್ನು ಗೌರವಿಸುವವರಿಲ್ಲದಂತಾಗಿದೆ. ಆಧುನಿಕತೆಯ ಪ್ರಮುಖ ಕೊಡುಗೆಯಾದ ಮದ್ಯಪಾನವೂ ಇಡೀ ಸಮುದಾಯವನ್ನು ಇಂದು ಹಾಳು ಮಾಡುತ್ತಿದೆ. ತಮ್ಮ ಪಾರಂಪರಿಕ ಉದ್ಯೋಗಗಳನ್ನು ಕಳೆದುಕೊಂಡ ಇರುಳಿಗರು ಬದುಕುವುದಕ್ಕಾಗಿ ಇತರರ ಮನೆಯಲ್ಲಿ ಜೀತಕ್ಕೆ ಸೇರಿಕೊಂಡರು. ಇದರಿಂದ ಸ್ವಾಭಿಮಾನವನ್ನು ಕಳೆದುಕೊಂಡು ಇರುಳಿಗರ ಗುಲಾಮಗಿರಿಯನ್ನು ಒಪ್ಪಿಕೊಳ್ಳುವಂತಾಗಿದೆ. ವಸಾಹತುಶಾಹಿಯ ಅಪರಾಧಿ ಬುಡಕಟ್ಟು ಎಂಬ ಹಣೆಪಟ್ಟಿಯಿಂದ ಬಿಡಿಸಿಕೊಳ್ಳಲಾಗದ ಇರುಳಿಗರು ಪ್ರಸ್ತುತ ದಿನಮಾನಗಳಲ್ಲಿ ಅರಣ್ಯ ಅಧಿಕಾರಿಗಳು ಮತ್ತು ಪೊಲೀಸರ ದೃಷ್ಟಿಯಲ್ಲಿ ಸದಾ ಅನುಮಾನಾಸ್ಪದದ ವ್ಯಕ್ತಿಗಳಂತೆ ಕಂಡುಬರುತ್ತಾರೆ. ಇದನ್ನು ಬಂಡವಾಳ ಮಾಡಿಕೊಂಡು ಭೂಮಾಲೀಕರು ಮತ್ತು ಮೇಲ್ಜಾತಿಯ ಜನರು ಈ ಜನರಿಗೆ ಪೊಲೀಸರು ಮತ್ತು ಜೈಲಿನ ಭಯ ಹುಟ್ಟಿಸಿ ತಮ್ಮ ಅಗತ್ಯತೆಗೆ ತಕ್ಕಂತೆ ಬಳಸಿಕೊಳ್ಳುತ್ತಿದ್ದಾರೆ.

ಇರುಳಿಗರಲ್ಲಿದ್ದ ವಿಶಿಷ್ಟವಾದ ಸಾವಿನ ಸಂದರ್ಭ ಮತ್ತು ನಂತರದ ಆಚರಣೆಗಳು ಇಂದು ಅನೇಕ ಸ್ಥಿತ್ಯಂತರಗಳಿಗೆ ಒಳಗಾಗುವಂತಾಗಿದೆ. ಹಿಂದೆ ಇರುಳಿಗರು ಯಾರಾದರೂ ಸತ್ತರೆ ಕುಲಗೌಡ, ಕಟ್ಟುಗೌಡ, ನಾಡಗೌಡ, ಗಡಿಗೌಡ ಮತ್ತು ಕೋಲುಕಾರರೆಲ್ಲರೂ ಸಂಬಂಧಿಕರನ್ನು ಕಟ್ಟಿಕೊಳ್ಳದೆ ಮುಂದೆ ನಿಂತು ಸಮುದಾಯದ ರೀತಿ ರಿವಾಜುಗಳಂತೆ ಸತ್ತ ವ್ಯಕ್ತಿಯನ್ನು ಹೂಳುವುದಾಗಲಿ ಅಥವಾ ಸುಡುವುದಾಗಲಿ ಮಾಡದೇ ತಮ್ಮ ಪರಂಪರೆಯಂತೆ ಕಲ್ಲು ಸೇವೆ ಮಾಡುತ್ತಿದ್ದರು. ಆದರೆ ಇಂದು ಸಂಪೂರ್ಣವಾಗಿ ನಿಂತು ಹೋಗಿದೆ. ಕಲ್ಲುಸೇವೆಯಲ್ಲಿ ತೊಡಗಿದ್ದ ಇರುಳಿಗರಿಗೆ ತಮ್ಮ ಪಾರಂಪರಿಕ ಹಿರಿಯರನ್ನು ಹಾಕಿದ್ದ ಕಲ್ಲು ಗುಹೆಗಳಿಗೆ ಹೋಗಲು ಅರಣ್ಯ ಇಲಾಖೆಯವರು ಬಿಡುತ್ತಿಲ್ಲ. ಹಾಗೆಯೇ ಇಂದು ಇರುಳಿಗರು ಕಲ್ಲುಸೇವೆ ಮಾಡಲು ಇತರೆ ಸಮುದಾಯದವರು ವಾಸನೆ ಬರುತ್ತದೆ ಎಂದು ಹೇಳಿ ಬಿಡುತ್ತಿಲ್ಲ. ಇದರಿಂದ ಇರುಳಿಗರಿಗೆ ತಮ್ಮ ರೂಢಿ ಸಂಪ್ರದಾಯಗಳನ್ನು ಪಾಲಿಸಿಕೊಂಡು ಬರಲಾಗದೆ ಇವತ್ತಿನ ಆಧುನಿಕತೆ ಮತ್ತು ಸುತ್ತಮುತ್ತಲಿನ ಜನಸಮುದಾಯಗಳ ಮೇಲರಿಮೆಯನ್ನು ಒಪ್ಪಿಕೊಂಡು ಬದುಕುವಂತಾಗಿದೆ. ಇಷ್ಟೇ ಅಲ್ಲದೆ ಇರುಳಿಗರ ಕೌಟುಂಬಿಕ ಜೀವನವು ಇವತ್ತಿನ ಸಂದರ್ಭದಲ್ಲಿ ಅತ್ಯಂತ ಸಂಕೀರ್ಣವಾಗಿ ಪರಸ್ಪರ ನಂಬಿಕೆ, ವಿಶ್ವಾಸ, ಪ್ರೀತಿ, ಮಮಕಾರಗಳ ಕೊರತೆಯನ್ನು ಅನುಸರಿಸುವಂತಾಗಿದೆ. ಇರುಳಿಗರ ಸಾಮಾಜಿಕತೆಯು ವೈದಿಕತೆ, ಆಧುನಿಕತೆ, ಜಾಗತೀಕರಣಗಳಿಂದ

ಪಡೆದುಕೊಂಡಿದ್ದಕ್ಕಿಂತ ಕಳೆದುಕೊಂಡದ್ದೇ ಹೆಚ್ಚಾಗಿದೆ. ಇತ್ತ ತಮ್ಮ ಪಾರಂಪರಿಕ ಜೀವನ ವಿಧಾನವನ್ನು ಅನುಸರಿಸಲಾಗದೆ ಪ್ರಸ್ತುತ ದಿನಮಾನಕ್ಕೂ ಹೊಂದಿಕೊಳ್ಳಲು ದ್ವಂದ್ವ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ.

ಇದರ ಜೊತೆಗೆ ಕೆಲವು ಸಮಾಧಾನಕ್ಕೆ ಬದಲಾವಣೆಗಳು ಇರುಳಿಗ ಸಮಾಜದಲ್ಲಿ ಸಂಭವಿಸುತ್ತಿವೆ. ಎಲ್ಲರಂತೆ ಇವರುಗಳು ಶೈಕ್ಷಣಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಭಾಗವಹಿಸು ವಂತಾಗಿದೆ. ಆದರೆ ಅದರ ಪರಿಸ್ಥಿತಿಯು ಮಾತ್ರ ವಿವರಿಸಲಾಗದು. ಸಂವಿಧಾನದ ಪರಿಶಿಷ್ಟ ಪಂಗಡಕ್ಕೆ ಬರುವುದರಿಂದ ಇರುಳಿಗರನ್ನು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ನಿಲ್ಲಿಸಿ ಗೆಲ್ಲಿಸಿ ತಮ್ಮ ಕೆಲಸ ಕಾರ್ಯಗಳಿಗೆ ಇದೇ ಭೂಮಾಲೀಕ ಮತ್ತು ಮೇಲ್ಜಾತಿಯವರು ಮಾಡುತ್ತಿದ್ದಾರೆ. ಇನ್ನು ಶಿಕ್ಷಣ ಪಡೆದ ಇರುಳಿಗರ ಯುವಕರು ಇತ್ತ ಪಾರಂಪರಿಕ ಜೀವನವು ಇಲ್ಲದೆ ಆಧುನಿಕತೆ ಇತರೆ ಸಮುದಾಯದವರ ಜೊತೆ ಸ್ಪರ್ಧಿಸಲಾರದೆ ದಿಕ್ಕು ತೋಚದ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ.

೬.೨. ಆರ್ಥಿಕ ಸ್ಥಿತ್ಯಂತರಗಳು

ಬುಡಕಟ್ಟು ಸಮುದಾಯಗಳು ಸಾಮಾನ್ಯವಾಗಿ ಅರಣ್ಯದಲ್ಲಿ ದೊರೆಯುವ ಗೆಡ್ಡೆ ಗೆಣಸು, ಹಣ್ಣು ಹಂಪಲು, ಸೊಪ್ಪು ಸದೆ, ಜೇನು ಮುಂತಾದ ಗಿಡಮೂಲಿಕೆ ಸಂಗ್ರಹಿಸಿಕೊಂಡು ತಮಗೆ ಅವಶ್ಯವಿದ್ದಷ್ಟನ್ನು ಇರಿಸಿಕೊಂಡು ಉಳಿದಿದ್ದನ್ನು ಗ್ರಾಮಗಳಿಗೆ ಅಥವಾ ನಗರಗಳಿಗೆ ಮಾರಾಟ ಮಾಡಿ ಅಗತ್ಯವಿದ್ದುದನ್ನು ಪಡೆದುಕೊಂಡು ಬದುಕುತ್ತಿರುತ್ತವೆ. ಸಾಮಾನ್ಯವಾಗಿ ಭವಿಷ್ಯದ ಆಸೆ ಇಲ್ಲದೆ ಸಂಪತ್ತಿನ ಕ್ರೋಢೀಕರಣದ ಕಲ್ಪನೆಯಿಲ್ಲದೆ ವರ್ತಮಾನದ ಜೀವನಕ್ಕಾಗಿ ಹೆಚ್ಚು ಶ್ರಮವಹಿಸುವ ಅಲ್ಪ ತೃಪ್ತಿಯ ಮನೋಭಾವದವರು ಇವತ್ತಿನ ಹಣದ ದಾವಂತದ ಸಂದರ್ಭದಲ್ಲೂ ಚಿಂತಿಸುವ ಬುಡಕಟ್ಟುಗಳಿಗೆ ನಾಳಿನ ಭವಿಷ್ಯತ್ತಿನ ಕಲ್ಪನೆ ಇಲ್ಲದಾಗಿದೆ. ಆರ್ಥಿಕ ಕ್ರೋಢೀಕರಣ ವೊಂದೇ ಜೀವನದ ಉದ್ದೇಶವಲ್ಲ ಎಂಬ ಮನೋಭಾವನೆ ಇಂದಿಗೂ ಬುಡಕಟ್ಟುಗಳಲ್ಲಿದೆ. ಆದರೆ ಕಾಲ ಬದಲಾಗಿದೆ ಎಲ್ಲರೂ ಭವಿಷ್ಯದ ಕನಸ್ಸಿನೊಂದಿಗೆ ಬದುಕುತ್ತಿರುವಾಗ ಬುಡಕಟ್ಟುಗಳ ಮನೋಧೋರಣೆಯು ಬದಲಾಗಬೇಕಾದ ಅತ್ಯವಶ್ಯಕತೆ ಇದೆ.

ಆಧುನಿಕತೆಯು ಕಾಲದ ಒಂದು ಸ್ಥಿತಿ. ಬದಲಾವಣೆಯನ್ನು ಹುಟ್ಟುಹಾಕುವ ಆಧುನಿಕತೆಯು ನಾಗರಿಕತೆಗಳ ಮೂಲಕವೇ ಸಂಸ್ಕೃತಿಯೊಂದಿಗೆ ಮುಖಾಮುಖಿಯಾಗುತ್ತಾ ಬಂದಿದೆ. ಈ ಆಧುನಿಕತೆಯು ಅನೇಕ ಸಂದರ್ಭದಲ್ಲಿ ಇತಿಹಾಸದ ಭಾವನಾತ್ಮಕ ಸಂಬಂಧಗಳ ಮೇಲೆ ದಾಳಿ ಮಾಡುತ್ತಾ ಬರುತ್ತಿರುತ್ತದೆ. ಜೊತೆಗೆ ಪರಂಪರೆಯ ಎಷ್ಟು ಸಂವೇದನೆಗಳನ್ನು ನಾಶ ಮಾಡಿ ತನ್ನ ಅವಧಿಯ ಚೌಕಟ್ಟಿನೊಳಗೆ ಬಲವಂತವಾಗಿ ಬಂಧಿಸುತ್ತಲೇ ಇರುತ್ತದೆ. ಆಗಲೂ ಆಧುನಿಕತೆ ಎಂಬುದು ಸಂಸ್ಕೃತಿಯಂತೆ ಸಮಾಜದೊಂದಿಗೆ ಸಾಗಲು ಸಾಧ್ಯವಾಗುವುದಿಲ್ಲ.

ಏಕೆಂದರೆ ಸಂಸ್ಕೃತಿ ಎಂಬುದು ಅಂತರಜಾಲದಂತೆ ಸಮುದಾಯಗಳ ಸಮಷ್ಟಿ ಮಾತ್ರ ಸದಾ ವೇಗೋತ್ಕರ್ಷದಲ್ಲಿ ಸಮಾಜಗಳನ್ನು ಮುನ್ನಡೆಸಲು ಹೊಂದಾಣಿಕೆ ಮಾಡಿಕೊಳ್ಳುವ ಕ್ರಮದಲ್ಲಿ ಪರಂಪರಾನುಗತವಾದ ಉತ್ಪನ್ನ ಪದ್ಧತಿಗಳು ಅನಿವಾಯವಾಗಿ ಕಾಲದ ಮುಂದೆ ಸರಿಯುತ್ತವೆ.

ಬುಡಕಟ್ಟು ಸಮುದಾಯಗಳು ಪ್ರಕೃತಿಯೊಂದಿಗೆ ಅತ್ಯಂತ ಆಂತರಿಕ ಸಂಬಂಧವನ್ನು ಇಟ್ಟುಕೊಂಡಿರುತ್ತಾರೆ. ಇವರ ಬೇಡಿಕೆಗಳು ಕೂಡ ಪ್ರಕೃತಿಯ ಆಶಯದಂತಿರುತ್ತವೆ ಎನ್ನಬಹುದು. ತಮ್ಮ ಕನಿಷ್ಠ ಪ್ರಮಾಣದ ಅವಶ್ಯಕತೆಗಳಿಗಾಗಿ ಕಾಡನ್ನು ನಂಬಿಕೊಂಡಿರುತ್ತಾರೆ. ಪಾರಂಪರಿಕವಾಗಿ ಈ ಬುಡಕಟ್ಟುಗಳು ಅರಣ್ಯವನ್ನು ಹಾಗೆ ಅರಣ್ಯ ಸಂಪನ್ಮೂಲಗಳನ್ನು ದೈವಭಕ್ತಿಯಂತೆ ಕಾಪಾಡಿಕೊಂಡು ಬಂದಿದ್ದರು. ಆದರೆ ಆಧುನಿಕತೆಯ ಸಂದರ್ಭದಲ್ಲಿ ಆ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಳ್ಳದ ಮನಸ್ಸುಗಳು ಇಲ್ಲವಾಗಿ ಬುಡಕಟ್ಟುಗಳನ್ನು ಕೂಡ ಅರಣ್ಯದ ಅಪಾಯದ ಅಸ್ತ್ರಗಳಲ್ಲಿ ಒಂದು ಎಂದು ನಂಬಿಸಲಾಗಿದೆ. ಪಾರಂಪರಿಕವಾಗಿ ತಮ್ಮ ಜ್ಞಾನವನ್ನು ಅಡಗಿಸಿ ಕೊಂಡಿದ್ದ ಬುಡಕಟ್ಟು ಸಮುದಾಯಗಳು ಆಧುನಿಕತೆಯ ತಂತ್ರಜ್ಞಾನ ಮತ್ತು ಅವುಗಳಿಂದ ಉಂಟಾದ ಕಾರ್ಖಾನೆಗಳಿಂದ ತಮ್ಮ ಮೂಲ ಕಸುಬುಗಳಿಂದ ದೂರ ಸರಿಯಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಭಾರತದ ಬುಡಕಟ್ಟುಗಳು ಅರಣ್ಯದಲ್ಲಿದ್ದು ಸಂಪನ್ಮೂಲಗಳನ್ನು ಅವಶ್ಯಕತೆಯಷ್ಟು ಬಳಸಿ ಮತ್ತೆ ಬೆಳೆಸುತ್ತಿದ್ದಾರೆ. ಆಧುನಿಕತೆಯ ಆಹ್ವಾನದಿಂದ ಅರಣ್ಯದ ಒಡಲನ್ನು ಬಗೆದು ಬುಡಕಟ್ಟುಗಳನ್ನು ಆರ್ಥಿಕವಾಗಿ ಹಿಂದುಳಿಯುವಂತೆ ಮಾಡಿತು. ಅಸಮಾನತೆ ಎಂಬುವುದು ಕೇವಲ ಹಣದ ಮೂಲಕ ಅಳೆಯುತ್ತಿರುವ ಇಂದಿನ ವ್ಯವಸ್ಥೆಯಲ್ಲಿ ಜಾಗತೀಕರಣವು ಹೆಚ್ಚಿನ ಸಮಸ್ಯೆಗಳನ್ನುಂಟು ಮಾಡಿತು.

ಈ ಜಾಗತೀಕರಣದ ಅಸ್ತ್ರವನ್ನು ಹಿಡಿದುಕೊಂಡಿರುವ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಅಭಿವೃದ್ಧಿ ಹೊಂದದ ಹಾಗೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಹವಣಿಸುತ್ತಿರುವ ಈ ಸಂದರ್ಭದಲ್ಲಿ ಈ ದೇಶಗಳಲ್ಲಿ ವಾಸಿಸುತ್ತಿರುವ ಬುಡಕಟ್ಟು ಸಮುದಾಯಗಳು ಇನ್ನಷ್ಟು ಶೋಷಣೆಗೆ ಒಳಗಾಗಿರಬೇಕೆಂದು ಊಹಿಸಲು ಸಾಧ್ಯ. ಸಾಮಾನ್ಯವಾಗಿ ಆರ್ಥಿಕ ವ್ಯವಸ್ಥೆಯು ಒಂದು ಬುಡಕಟ್ಟಿನ ಸ್ಥಾನಮಾನವನ್ನು ನಿರ್ಧರಿಸುವಲ್ಲಿ ಉತ್ತಮವಾಗಿರು ತ್ತದೆಯೋ ಆ ಬುಡಕಟ್ಟು ಆಧುನೀಕರಣಗೊಂಡು ಬೆಳೆಯುತ್ತಿರುತ್ತದೆ. ಯಾವ ಬುಡಕಟ್ಟು ಆರ್ಥಿಕವಾಗಿ ಬಹಳ ಹಿಂದುಳಿದಿರುತ್ತದೆಯೋ ಆ ಬುಡಕಟ್ಟು ಸಾಂಸ್ಕೃತಿಕ ಗುಣಲಕ್ಷಣಗಳನ್ನು ಆರ್ಥಿಕವಾಗಿ ಮುಂದುವರಿದಿರುವ ಬುಡಕಟ್ಟುಗಳು ನೀಡಲು ಸಾಧ್ಯವಿಲ್ಲ. ಏಕೆಂದರೆ ಆರ್ಥಿಕ ಅಭಿವೃದ್ಧಿಯ ಪದರಗಳ ಕೆಳಗೆ ಕೆದಕುತ್ತಾ ಹೋದಂತೆ ಕೆಲವು ಸಂದರ್ಭದಲ್ಲಿ ಮೂಲಸಂಸ್ಕೃತಿಯನ್ನು ಗುರುತಿಸುವುದೇ ಬಹಳ ಕಷ್ಟವಾಗುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ಬುಡಕಟ್ಟುಗಳ ಅಸ್ತಿತ್ವವನ್ನು ಇಲ್ಲದಂತೆ ಮಾಡುವ ಹುನ್ನಾರ ನಡೆಯುತ್ತಿದೆ. ಬುಡಕಟ್ಟುಗಳ ಪರಂಪರಾಗತ ವೃತ್ತಿಗಳಿಗೆ ಮನ್ನಣೆ ನೀಡದೇ ಅವರ ಬೇಟೆ

ಹಾಗೂ ಆಹಾರ ಸಂಗ್ರಹಣೆಗೆ ಅವಕಾಶ ಕೊಡದೆ ಕಾನೂನುಗಳನ್ನು ರೂಪಿಸಿ ಬುಡಕಟ್ಟುಗಳನ್ನು ಅರಣ್ಯದ ಒಳಗೆ ಬಿಡದಂತೆ ನೋಡಿಕೊಳ್ಳಲಾಗುತ್ತಿದೆ. ಇದರಿಂದ ಬುಡಕಟ್ಟುಗಳ ಜೀವನ ನಿರ್ವಹಣೆಯೇ ಅತ್ಯಂತ ಶೋಚನೀಯವೆನಿಸಿದೆ. ಇಂತಹುದೇ ಪರಿಸ್ಥಿತಿಯಲ್ಲಿ ಇರುಳಿಗ ಬುಡಕಟ್ಟು ಸಮುದಾಯವು ಕೂಡ ಬದುಕುತ್ತಿರುವುದು ಕಂಡುಬರುತ್ತಿದೆ.

ಇರುಳಿಗರು ತಮ್ಮ ಬದುಕಿನ ಭಾಗವನ್ನು ಕಾಡಿನೊಂದಿಗೆ ಬೆಸೆದುಕೊಂಡು ಬಂದ ಬುಡಕಟ್ಟು ಸಮುದಾಯ. ಇವರು ಅರಣ್ಯದಲ್ಲಿ ಸಿಗುವ ಗೆಡ್ಡೆ ಗೆಣಸು, ಔಷಧಿ ಗಿಡ ಸಸ್ಯಗಳು ಸಣ್ಣಪುಟ್ಟ ಪ್ರಾಣಿಗಳನ್ನು ಬೇಟೆಯಾಡಿ ತಂದು ತಮಗೆ ಬೇಕಾದಷ್ಟು ಇಟ್ಟುಕೊಂಡು ಉಳಿದುದ್ದನ್ನು ಗ್ರಾಮ ಅಥವಾ ಪಟ್ಟಣಗಳಿಗೆ ಮಾರಾಟ ಮಾಡಿ ಸಾಟಿ ವಿನಿಮಯ ಪದ್ಧತಿಯಿಂದ ಜೀವನ ಸಾಗಿಸುತ್ತಿದ್ದರು. ಆದರೆ ಅರಣ್ಯ ನೀತಿಗಳು ಅರಣ್ಯ ಸಂಪನ್ಮೂಲಗಳ ಸಂಗ್ರಹಣೆ ನಿರ್ಬಂಧ ವಿಧಿಸಿತು. ಆದರೂ ತಮ್ಮ ಪಾರಂಪರಿಕ ವೃತ್ತಿಯನ್ನು ಬಿಡದ ಇರುಳಿಗರು ಕದ್ದುಮುಚ್ಚಿ ಮಾಡಲಾರಂಭಿಸಿದರು. ಇದರಿಂದ ಅನೇಕ ಕೇಸುಗಳನ್ನು ದಾಖಲಿಸಿಕೊಂಡು ಇನ್ನುಳಿದ ಕೆಲವರು ಕಾಡಿನಲ್ಲಿ ಸೌದೆಗಳನ್ನು ಕಡಿದು ಭೂಮಿಯಲ್ಲಿ ಗುಂಡಿ ತೋಡಿ ಅದಕ್ಕೆ ಕಟ್ಟಿಗೆ ತುಂಬಿ ಬೆಂಕಿ ಇಟ್ಟು ಮಣ್ಣು ಹಾಕಿ ಬರುತ್ತಿದ್ದರು. ಬೆಳಿಗ್ಗೆ ಮುಂಜಾನೆ ಹೋಗಿ ತೆರೆದು ನೋಡಿದರೆ ಇದ್ದಿಲಾಗುತ್ತಿರುತ್ತಿತ್ತು. ಅದನ್ನು ತಂದು ಗ್ರಾಮಗಳಲ್ಲಿ ಮಾರಾಟ ಮಾಡುವ ಮೂಲಕ ಜೀವನ ನಿರ್ವಹಣೆ ನಡೆಸುತ್ತಿದ್ದರು. ಆದರೆ ಇದಕ್ಕೂ ಅರಣ್ಯ ಇಲಾಖೆ ಅವಕಾಶ ಕೊಡಲಿಲ್ಲ. ನಂತರ ಅರಣ್ಯದಲ್ಲಿ ಒಣಗಿದ ಸೌದೆಗಳನ್ನು ಕಡಿದುಕೊಂಡು ಹೋಗಿ ಗ್ರಾಮ ಮತ್ತು ಬುಡಕಟ್ಟುಗಳಲ್ಲಿ ಮಾರಿ ಜೀವನ ನಡೆಸುತ್ತಾರೆ. ಇದಕ್ಕೆ ಅರಣ್ಯ ಇಲಾಖೆಯವರು ಅರಣ್ಯ ನಾಶದ ನೆಪವೊಡ್ಡಿ ನಿರ್ಬಂಧ ವಿಧಿಸಿದ್ದಾರೆ. ಇವೆಲ್ಲದರ ನಡುವೆಯು ತಾವು ವಾಸ ಮಾಡುತ್ತಿದ್ದ ಸ್ಥಳದಲ್ಲಿ ಸ್ವಲ್ಪ ಜಾಗವನ್ನು ಹಸನು ಮಾಡಿಕೊಂಡು ಕಿತ್ತು ಬೇಸಾಯದಂತಹ ಬೇಸಾಯ ಮಾಡಿಕೊಂಡು ಬದುಕುತ್ತಿದ್ದರು. ಭೂಮಿಯನ್ನು ಪಹಣಿ, ಪಟ್ಟ ಎಂಬ ದಾಖಲೆಗಳ ಅವಶ್ಯಕತೆಯನ್ನು ಸೃಷ್ಟಿಸಿ ಇದರ ಬಗ್ಗೆ ಅರಿವಿಲ್ಲದ ಇರುಳಿಗರ ಭೂಮಿಯನ್ನು ಭೂಮಾಲೀಕ ಮೇಲ್ಜಾತಿಯವರು ತಮ್ಮದಾಗಿಸಿಕೊಂಡಿದ್ದಾರೆ. ಇದರ ಜೊತೆಗೆ ಅರಣ್ಯ ಇಲಾಖೆಯವರು ಪಾರಂಪರಿಕವಾಗಿ ಬೇಸಾಯ ಮಾಡಿಕೊಂಡು ಬಂದಿದ್ದ ಭೂಮಿಯಲ್ಲಿ ಅರಣ್ಯ ಒತ್ತುವರಿ ಎಂದು ಸಿಪಿಟಿಯ ಕಾಲುವೆ ತೋಡಿ ಭೂಮಿಯ ಅರಣ್ಯ ಇಲಾಖೆಯ ವ್ಯಾಪ್ತಿಗೆ ಸೇರಿಸಿಕೊಂಡಿದ್ದಾರೆ. ವಸಾಹತುಶಾಹಿಯ ಕಾಲಘಟ್ಟಕ್ಕಿಂತಲೂ ಇರುಳಿಗರು ಸ್ವಾತಂತ್ರ್ಯ ನಂತರ ಸಂದರ್ಭದಲ್ಲಿ ತಮ್ಮ ಜೀವನವನ್ನು ನಡೆಸಲು ಅತ್ಯಂತ ಕಷ್ಟಪಡುತ್ತಿದ್ದಾರೆ. ಬದುಕುವುದಕ್ಕಾಗಿ ಇತರರ ಜಮೀನುಗಳಲ್ಲಿ ಜೀತದಾಳುಗಳಾಗಿ ಹಾಗೂ ಮಾವಿನ ತೋಟ ಕಾಯುವುದು, ಎಸ್ಟೇಟ್‌ಗಳಲ್ಲಿ ಕುಟುಂಬ ಸಮೇತ ನೆಲೆಸಿ ಪ್ರತಿನಿತ್ಯ ದುಡಿಯುವುದು, ಅದೇ ರೀತಿಯ, ಇಟ್ಟಿಗೆ ಫ್ಯಾಕ್ಟರಿಗಳು, ಹೊಲ ಗದ್ದೆಗಳನ್ನು, ನೋಡಿಕೊಳ್ಳುವ ಕಂಪನಿಗಳಿಗೆ ಸೇರಿಕೊಂಡರು. ಉಳಿದಂತೆ ಮತ್ತೆ

ಕೆಲವರು ಗೂಡು ಬಾಯಿಸುವ ಕಾರ್ಖಾನೆಗಳಲ್ಲಿ, ಸಕ್ಕರೆ ಫ್ಯಾಕ್ಟರಿಗಳಲ್ಲಿ, ಸಿಮೆಂಟ್ ಫ್ಯಾಕ್ಟರಿಗಳಲ್ಲಿ, ಕೋಕಕೋಲ ಮದ್ಯ ತಯಾರಿಕೆ ಫ್ಯಾಕ್ಟರಿಗಳಲ್ಲಿ ಸೇರಿಕೊಂಡು ಕಸ ಹೊಡೆಯುವುದು ಕೊನೆಯ ದರ್ಜೆಯ ಕೆಲಸಕ್ಕೆ ಮೀಸಲಾಗುವಂತಾಯಿತು. ಆಧುನಿಕತೆಯ ನಯನಾಜೂಕು ಗೊತ್ತಿಲ್ಲದ ಇವರು ಆ ಹುದ್ದೆಗಳಿಗೆ ಮೀಸಲಾಗುವಂತಾಯಿತು.

ಒಟ್ಟಾರೆಯಾಗಿ ಆಧುನಿಕತೆಯ ಇರುಳಿಗರು ಸ್ವಾತಂತ್ರ್ಯವನ್ನು ಕಸಿದುಕೊಂಡು ಪರಾವಲಂಬಿಯನ್ನಾಗಿ ಮಾಡಿ ಹೊತ್ತಿನ ಚೀಲ ತುಂಬಿಸಿಕೊಳ್ಳಲು ಅನೇಕ ಕೆಲಸ ಕಾರ್ಯಗಳನ್ನು ಮಾಡುವಂತಾಯಿತು. ಆಧುನಿಕತೆಯ ನಯನಾಜೂಕುಗಳು, ಶಿಸ್ತು, ಸ್ವಚ್ಛತೆ ಇಲ್ಲದ ಇವರು ಆಧುನಿಕ ಸಮಾಜದ ಕೊನೆಯ ದರ್ಜೆಯ ಕೆಲಸಗಳಿಗೆ ಮೀಸಲಿರಿಸಿತು. ತಮ್ಮ ನಂಬಿಕೆ, ಆಚರಣೆಯಲ್ಲಿ ದೇವರು, ಅಂತ್ರ ಮಂತ್ರಗಳಿಗೆ ಕಟ್ಟಿಕೊಡುತ್ತಿದ್ದವರು ಆಧುನಿಕತೆಯ ಭರಾಟೆಯ ಎದುರಿಸಲಾಗದೆ ತಮ್ಮ ಪಾರಂಪರಿಕ ರೂಢಿ ಸಂಪ್ರದಾಯ ಮತ್ತು ದೈಹಿಕತೆಯನ್ನು ಬಿಟ್ಟು ಕೂಲಿನಾಲಿ ಮಾಡಿಕೊಂಡು ಬದುಕುವ ಸ್ಥಿತಿ ನಿರ್ಮಾಣವಾಯಿತು.

ಪ್ರಸ್ತುತ ದಿನಮಾನದಲ್ಲಿ ಇರುಳಿಗರು ತಮ್ಮಲ್ಲಿರುವ ಅಷ್ಟೋ ಇಷ್ಟು ಭೂಮಿಯನ್ನು ಉಳಿಸಿಕೊಳ್ಳ ಹೆಣಗುವಂತಾಗಿದೆ. ಪಾರಂಪರಿಕವಾಗಿ ಉತ್ತು ಬಿತ್ತು ವ್ಯವಸಾಯ ಮಾಡಿಕೊಂಡು ಬಂದಿದ್ದ ಭೂಮಿಗೆ ವಸಾಹತುಶಾಹಿ ಮತ್ತು ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿ ಅನುಭವಿಸಿದ ನೋವುಗಳನ್ನು ಇಂದು ಅನುಭವಿಸುತ್ತಿದ್ದಾರೆ. ಏಕೆಂದರೆ ಪಾರಂಪರಿಕವಾಗಿ ಇರುವ ಅಷ್ಟು ಇಷ್ಟು ಭೂಮಿಯ ವ್ಯವಸಾಯ ಮಾಡುವಲ್ಲಿ ನಿರತರಾಗಿದ್ದವರಿಗೆ ಪಹಣಿ ಪಟ್ಟದ ಪರಿಜ್ಞಾನ ಇದ್ದಿರಲಿಲ್ಲ. ಆದರೆ ಇಂದು ಅವುಗಳಿದ್ದರೆ ಮಾತ್ರ ಭೂಮಿಯ ವಾರಸುದಾರಿಕೆ ಸಿಗುವಂತಾಗಿದೆ. ಆದರೆ ಕಾಡಿನಲ್ಲಿ ಸ್ವಲ್ಪ ಭಾಗ ಕಡಿದು ಮಾಡಿಕೊಂಡು ಭೂಮಿಯನ್ನು ಅರಣ್ಯ ಇಲಾಖೆಯವರು ಅರಣ್ಯಭೂಮಿ ಎಂದು ಸಿಪಿಡಿಗಳನ್ನು ಹಾಕುತ್ತಿದ್ದಾರೆ. ಉಳಿದ ಭೂಮಿಯು ಗೋಮಾಳ ಎಂದು ಕರೆಸಿಕೊಂಡ ಇನ್ನಾರೊಬ್ಬರು ಇವರ ಭೂಮಿಯನ್ನು ತಮ್ಮ ಹೆಸರಿಗೆ ಮಾಡಿಕೊಳ್ಳುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಪಹಣಿ ಪಟ್ಟಿಯ ಅವಶ್ಯಕತೆ ಗೊತ್ತಿಲ್ಲ. ಸರ್ಕಾರಿ ಇಲಾಖೆಗಳು ಭೇಟಿ ಮಾಡಿದಾಗ ತಮ್ಮ ಪಾರಂಪರಿಕ ಜಮೀನು ೩೦ರಿಂದ ೪೦ ವರ್ಷಗಳ ಹಿಂದೆ ಇನ್ನೊಬ್ಬರ ಹೆಸರಿಗೆ ಆಗಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಇತ್ತ ಅರಣ್ಯ ಇಲಾಖೆ ಮತ್ತು ಭೂಮಾಲೀಕರಿಂದ ಇರೋ ಒಂದಿಷ್ಟು ಭೂಮಿಯನ್ನು ಕಳೆದುಕೊಳ್ಳುವಂತಾಗಿದೆ. ಶಿಕ್ಷಣವು ಇತ್ತೀಚಿನ ದಿನಗಳ ಪರಿಯವಾಗಿದ್ದರಿಂದ ಇಂದಿನವರೆಗೆ ಒಬ್ಬ ಸರ್ಕಾರಿ ನೌಕರನ್ನು ಕಾಣಲು ಸಾಧ್ಯವಾಗಿಲ್ಲ. ಇತ್ತ ಸರ್ಕಾರದ ಯಾವ ಯೋಜನಗಳು ಗೊತ್ತಿಲ್ಲ. ನಾನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿದ ಹಾಗೆ ಬಹುಸಂಖ್ಯಾತ ಇರುಳಿಗರಲ್ಲಿ ಆದಾಯ ಪ್ರಮಾಣ ಪತ್ರ, ಗುರುತಿಸಿ ಚೀಟಿ, ಪಡಿತರ ಕಾರ್ಡ್ ಯಾವುದೇ ಸರ್ಕಾರಿ ದಾಖಲೆಗಳೇ ಇಲ್ಲದೆ ಇರುವುದು ಕಾಣಬಹುದು. ಇಂತಹ ಸಂದರ್ಭ ಇನ್ನು ಸರ್ಕಾರಿ ಸೌಲಭ್ಯಗಳಿಗಿಂತ ಇವರಿಗೆ ಎಲ್ಲಿಂದ

ಸಿಗಬೇಕು. ಇಂದಿಗೂ ಇಟ್ಟಿಗೆ ಫ್ಯಾಕ್ಟರಿ, ರೇಷ್ಮೆ ಬೇಯಿಸುವ ಕಾರ್ಖಾನೆ, ಹೋಟೇಲುಗಳ ಮತ್ತು ಇತರೆ ಕಾರ್ಖಾನೆ, ಎಸ್ಟೇಟ್, ಮಾವಿನ ತೋಟ, ಭೂಮಾಲೀಕರ ತೋಟದ ಮನೆಗಳಲ್ಲಿ ಜೀತಕ್ಕೆ ದುಡಿಯುತ್ತಿರುವುದು ಕಾಣಬಹುದು. ಇರುವ ಸ್ವಂತ ಭೂಮಿಯನ್ನು ಸದ್ಬಳಿಕೆ ಮಾಡಿಕೊಳ್ಳದೆ ಬಂಡವಾಳದ ಕೊರತೆ ಇದ್ದು, ಮತ್ತೆ ಜೀತಗಾರಿಕೆಗೆ ಬಲಿಯಾಗುತ್ತಿದ್ದಾರೆ. ಇದರ ಜೊತೆಗೆ ಸವರ್ಣೀಯರು ಈ ಸಮುದಾಯಗಳ ಮೇಲೆ ಇಲ್ಲಸಲ್ಲದ ಕೇಸುಗಳನ್ನು ದಾಖಲಿಸಿ ಕಳ್ಳರೆಂದು ಜೈಲಿಗೆ ಅಥವಾ ಪೊಲೀಸರನ್ನು ತೋರಿಸಿ ತಮ್ಮ ಮನೆಯಲ್ಲಿ ಜೀತಕ್ಕೆ ಇರಿಸಿಕೊಳ್ಳುತ್ತಿರುವ ಸಂದರ್ಭವನ್ನು ನಾವು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡಿದ್ದೇನೆ. ಇಂದಿಗೂ ಬಹುಸಂಖ್ಯಾತ ಇರುಳಿಗ ಆರ್ಥಿಕತೆಯನ್ನು, ಜೀತಗಾರಿಕೆಯಿಂದಲೇ ನಿರ್ಧರಿಸುತ್ತಿರುವುದು ಕಾಣಬಹುದು.

೬.೩. ಶೈಕ್ಷಣಿಕ ಸ್ಥಿತ್ಯಂತರಗಳು

ಭಾರತವು ಪ್ರಾಚೀನ ಕಾಲದಿಂದಲೂ ಶಿಕ್ಷಣ ಎಂಬುದನ್ನು ಜ್ಞಾನ ಸಂಗ್ರಹಣೆಯ ಅಸ್ತ್ರವಾಗಿ ಬಳಸಲಾಗುತ್ತಿದೆ. ಈ ಜ್ಞಾನವು ಕಾಲದಿಂದ ಕಾಲಕ್ಕೆ ಭಿನ್ನವಾಗುತ್ತಾ ಬಂದಿದೆ. ಶಿಕ್ಷಣ ಎಂದರೆ ಅದಕ್ಕೆ ನಿರ್ದಿಷ್ಟ ಚೌಕಟ್ಟಾಗಲಿ ಸೀಮಿತವಾದ ವ್ಯಾಪ್ತಿಯಾಗಲಿ ಅಥವಾ ಒಂದು ಕ್ಷೇತ್ರ ಅಥವಾ ಒಂದು ವಿಷಯಕ್ಕೆ ಸೀಮಿತವಾದುದ್ದಲ್ಲ. ಶಿಕ್ಷಣ ಎಂಬುದು ಕಲಿಯುವುದು ಪ್ರತಿನಿಧಿಸು ವುದರಿಂದ ಅದಕ್ಕೆ ಇಂತಹುದೇ ವಿಷಯ, ವ್ಯಕ್ತಿ, ವಸ್ತು ಅಥವಾ ಕ್ಷೇತ್ರ ಎಂಬ ಮಡಿವಂತಿಕೆ ಇಲ್ಲ. ಶಿಕ್ಷಣವು ಜೀವನವನ್ನು ರೂಪಿಸಿಕೊಳ್ಳಲು ಬೇಕಾದ ಅತ್ಯಂತ ಮೌಲ್ಯಯುತವಾದ ಅಂಶವಾಗಿದೆ. ಇದು ಕಾಲದಿಂದ ಕಾಲಕ್ಕೆ ತನ್ನ ಉದ್ದೇಶವನ್ನು ಬದಲಾಯಿಸಿಕೊಳ್ಳುತ್ತಾ ಬರುತ್ತಿದೆ. ಆದರೆ ಪುರೋಹಿತರು ಈ ಶಿಕ್ಷಣಕ್ಕೆ ಒಂದು ಚೌಕಟ್ಟನ್ನು ಕಟ್ಟಿಬಿಟ್ಟರು. ಅದಕ್ಕೂ ಮುಂಚೆ ಈ ಶಿಕ್ಷಣ ಎಂಬುದು ಬದುಕಿನ ಅನುಭವಗಳೊಂದಿಗೆ ಮುಂದಿನ ಜೀವನವನ್ನು ರೂಪಿಸಿಕೊಳ್ಳುವ ಮಾರ್ಗವಾಗಿತ್ತು. ಬೆಂಕಿ ಮುಟ್ಟಿ ಕೈಸುಟ್ಟಿಕೊಂಡ ಆದಿಮಾನವ ಆ ಬೆಂಕಿಯ ಬಳಕೆಯನ್ನು ಇತರರಿಗೆ ಕಲಿಸಿದ ಇದು ಶಿಕ್ಷಣವೇ. ಅದೇ ರೀತಿಯಲ್ಲಿ ತಂದೆ ಮಗನಿಗೆ ಪ್ರಕೃತಿಯ ಉಪಯುಕ್ತತೆ ಮತ್ತು ಅಪಾಯಗಳ ಬಗ್ಗೆ ಹೇಳಿ ಕೊಡುತ್ತಿದ್ದ ಶಿಕ್ಷಣವೇ ಹಿರಿಯರು ಕಿರಿಯರಿಗೆ ಜೀವನವನ್ನು ನಡೆಸಲು ತಮ್ಮ ಅನುಭವದ ಸಾರದ ಜೊತೆಗೆ ವರ್ತಮಾನದ ಅಗತ್ಯಗಳನ್ನು ಹೇಳುವುದು ಶಿಕ್ಷಣದ ಮುಖ್ಯ ಉದ್ದೇಶವಾಗಿತ್ತು. ಆದರೆ ವೈದಿಕರ ಕಾಲಘಟ್ಟದಲ್ಲಿ ಈ ಶಿಕ್ಷಣಕ್ಕೆ ಒಂದು ಜಾಗ, ಒಂದು ಚೌಕಟ್ಟು ಅಥವಾ ಮಡಿಮೈಲಿಗೆ, ರೀತಿ ನೀತಿಗಳೆಂಬ ಪರಿಧಿಗಳನ್ನು ಹಾಕಿಬಿಟ್ಟರು. ಶಿಕ್ಷಣ ಎಂಬುದು ಬದುಕಿನ ವಾಸ್ತವತೆಯ ಜೊತೆಗೆ ಇದ್ದುದ್ದನ್ನು ಆಧ್ಯಾತ್ಮದ ಕಲ್ಪನೆಯಲ್ಲಿ ಮುಳುಗುವಂತೆ ಮಾಡಿದರು. ಇದು ಸಮಾಜದಲ್ಲಿ ಹೊಸ ಸಂಚಲನವನ್ನು ಮೂಡಿಸಿತು. ಈ ಶಿಕ್ಷಣವು ಕಾಲಾನಂತರದಲ್ಲಿ ಜಾತಿಯ ರೂಪಗಳಿಂದ ಬಂಧಿಸಲಾಯಿತು. ಜೊತೆಗೆ ಈ ಶಿಕ್ಷಣವನ್ನು ಬದುಕಿನಿಂದ ಬೇರೆ ಮಾಡಲಾಯಿತು. ಇದರೊಂದಿಗೆ ಬದುಕಿನಲ್ಲಿ ಜ್ಞಾನಕ್ಕೂ ಶಿಕ್ಷಣದ ಜ್ಞಾನಕ್ಕೂ ಅಂತರ ಕಾಯ್ದುಕೊಂಡು ತಮ್ಮ ಸ್ವಾರ್ಥ ಶಿಕ್ಷಣವನ್ನು ನೀಡಿ

ಅದರಿಂದ ಸ್ವಾರ್ಥತೆಯ ಜ್ಞಾನ ಸೃಷ್ಟಿಸಿ ಇದೇ ಜ್ಞಾನ ಎಂದು ನಂಬುವಂತೆ ಮಾಡಲಾಯಿತು. ಇದು ಶಿಕ್ಷಣದಿಂದ ಪಡೆದ ಜ್ಞಾನ ಅದಕ್ಕೆ ಬದುಕಿನ ಜ್ಞಾನಕ್ಕೂ ಮೇಲುಕೀಳುಗಳುಂಟಾಗುವಂತೆ ಮಾಡಿದರು. ಇದರಿಂದ ಕೃಷಿ ಕೆಲಸ ಮಾಡುತ್ತಿದ್ದವನು ಮತ್ತು ಜೀವನವನ್ನು ಅರಿತುಕೊಂಡವನು ಪುರೋಹಿತರು ಸೃಷ್ಟಿಸಿದ ಶಿಕ್ಷಣದ ಜ್ಞಾನದೆದುರು ಕೀಳರಿಮೆಯುಂಟಾಗುವಂತಾಯಿತು. ಇದು ಮುಂದೆ ವಿದ್ಯಾವಂತ ಮತ್ತು ಅವಿದ್ಯಾವಂತ ಎಂಬ ಹಣೆಪಟ್ಟಿಯನ್ನು ಕಟ್ಟಿಕೊಟ್ಟಿತು. ಇದರಿಂದ ಪುರೋಹಿತರು ಕಲಿಸಿದ್ದು ಮಾತ್ರ ಶಿಕ್ಷಣವಾಗಿ ಉಳಿದೆಲ್ಲವೂ ಅಶಿಕ್ಷಣದಂತೆ ಬಿಂಬಿಸಲಾಯಿತು. ಈ ಪುರೋಹಿತರು ತಮ್ಮ ಸ್ವಾರ್ಥ ಶಿಕ್ಷಣದಲ್ಲಿ ಇಲ್ಲಿನ ಮೂಲನಿವಾಸಿಗಳನ್ನು ಶತ್ರುಗಳಂತೆ ಬಿಂಬಿಸಿ ತಮ್ಮಲ್ಲಿ ಕಲಿತವರೆಲ್ಲರು ಮೂಲನಿವಾಸಿಗಳನ್ನುದ್ದೇಶಿಸುವಂತೆ ಮನಪರಿವರ್ತಿಸಲಾಯಿತು. ಹೀಗೆ ಶಿಕ್ಷಣವು ಅಸ್ತ್ರವಾಗಿಟ್ಟುಕೊಂಡ ಈ ಪುರೋಹಿತ ವರ್ಗ ಅದಷ್ಟು ಕೆಲವು ವರ್ಗಕ್ಕೆ ಸೀಮಿತಗೊಳಿಸುವ ಕೆಲಸ ಮಾಡಿದರು. ಈ ಶಿಕ್ಷಣದ ಜ್ಞಾನವನ್ನು ಪರಮಜ್ಞಾನ ಎಂಬಂತೆ ಬಿಂಬಿಸಿ ಆಳುವ ಪ್ರಭುತ್ವದ ಸಹಾಯದಿಂದ ಅದಕ್ಕೆ ಮನ್ನಣೆ ಸಿಗುವಂತೆ ಮಾಡಿ ಉಳಿದ ಜ್ಞಾನವನ್ನು ಅಜ್ಞಾನ ಎಂಬಂತೆ ಸಮಾಜದಲ್ಲಿ ನಂಬಿಸಲಾಯಿತು. ಶಿಕ್ಷಣವನ್ನು ಇಂಥವರೇ ಕಲಿಯಬೇಕೆಂಬ ನಿರ್ಬಂಧವನ್ನು ಹೇರಲಾಯಿತು. ಇವರ ಶಿಕ್ಷಣದ ರಾಜಕೀಯಕ್ಕೆ ಮೊದಲು ಪೆಟ್ಟುಕೊಟ್ಟವರು ವಸಾಹತುಶಾಹಿಗಳು. ಇವರ ಆಗಮನದ ಕಾಲಘಟ್ಟದಲ್ಲಿ ಅಲ್ಲಿಯವರೆಗೆ ಕೇವಲ ಕೆಲವೇ ಜನರಿಗೆ ಮೀಸಲಾಗಿದ್ದ ಶಿಕ್ಷಣ ಎಲ್ಲರಿಗೂ ಸಿಗುವಂತಾಯಿತು. ಇದರಿಂದ ಈ ಪುರೋಹಿತರ ಶಿಕ್ಷಣ ಕೇವಲ ಕೆಲವೇ ಜನರ ಸ್ವತ್ತಲ್ಲ. ಶಿಕ್ಷಣದ ರಾಜಕೀಯ ಅರ್ಥವಾಗಿದೆ ಎಂಬುದು ಎಲ್ಲರಿಗೂ ಗೊತ್ತಾಯಿತು. ಹಾಗೂ ಈ ಶಿಕ್ಷಣದ ಮೇಲಿನ ವೈದಿಕ ರಾಜಕಾರಣದಲ್ಲಿನ ಅರಿವು ಎಲ್ಲರಿಗೂ ಮೂಡಿದ್ದರಿಂದ ಕ್ರಾಂತಿಯೇ ಉಂಟಾಯಿತು. ಹಾಗೆ ಈ ಶಿಕ್ಷಣವು ಕಾಲಾನಂತರ ಪುರೋಹಿತರು ಹಾಕಿಕೊಟ್ಟಿದ್ದ, ಚೌಕಟ್ಟುಗಳು ಮುರಿಯುವ ಹಂತಕ್ಕೆ ತಲುಪಿದವು. ಇದರಿಂದ ಶಿಕ್ಷಣ ಎಂಬುದು ಸರ್ವರಿಗೂ ಕಡ್ಡಾಯದ ಹಕ್ಕಾಗಿ ಮಾರ್ಪಾಡು ಹೊಂದಿತು. ಈ ಹಿನ್ನೆಲೆಯಲ್ಲಿ ಸಮಾಜದಲ್ಲಿನ ಎಲ್ಲರೂ ಶಿಕ್ಷಣವಂತರಾಗುವಂತಾಯಿತು. ಜಾತಿಯ ತಾರತಮ್ಯ ದಿಂದ ಶಿಕ್ಷಣದಿಂದ ದೂರವಿಟ್ಟಿದ್ದ ವರ್ಗದವರು ಹೆಚ್ಚಾಗಿ ಶಿಕ್ಷಣ ಪಡೆದು ಪುರೋಹಿತರು ಮತ್ತು ಅವರ ಅಧೀನದಲ್ಲಿ ಕಲಿತು ಇದಿಷ್ಟೇ ಇವರು ಮಿತ್ರರು, ಇವರು ಶತ್ರುಗಳು ಎಂದು ಬರೆದಿದ್ದ ಚರಿತ್ರೆಯನ್ನು ಶಿಕ್ಷಣದಿಂದ ದೂರ ಉಳಿದಿದ್ದ ವರ್ಗ ಧಿಕ್ಕರಿಸಿ ತಮ್ಮ ತಮ್ಮ ಚರಿತ್ರೆ ಯನ್ನು ಬರೆಯುವಂತಾಯಿತು.

ಹೀಗೆ ಶಿಕ್ಷಣದಿಂದ ಭಾರತದಲ್ಲಿದ್ದ ಶೋಷಿತ ಅಸ್ಪೃಶ್ಯರು ಕ್ರಾಂತಿ ಸಾಧಿಸಿ ಇಂದು ಉನ್ನತ ಹುದ್ದೆಗಳನ್ನು ಅಲಂಕರಿಸಿ ...ರೂಪುರೇಷಗಳಲ್ಲಿ ತೊಡಗಿಕೊಂಡಿದ್ದಾರೆ. ಆದರೆ ಇಂದಿಗೂ ಬುಡಕಟ್ಟುಗಳು ಮಾತ್ರ ಶಿಕ್ಷಣದಿಂದ ದೂರವೇ ಉಳಿಯುವಂತಾಗಿದೆ. ಇದಕ್ಕೆ ಪ್ರಮುಖ ಕಾರಣ ಬಡತನ ಮತ್ತು ಬುಡಕಟ್ಟುಗಳು ವಾಸಿಸುವ ಪ್ರದೇಶಗಳು. ಬುಡಕಟ್ಟುಗಳು ಇಂದಿಗೂ

ದಟ್ಟ ಅರಣ್ಯ ಪ್ರದೇಶದ ಮಧ್ಯಭಾಗದಲ್ಲಿ ಗ್ರಾಮಗಳಿಂದ ಹಾಗೂ ನಗರಗಳಿಂದ ದೂರ ಉಳಿದಿದ್ದರಿಂದ ಇಲ್ಲಿಗೆ ಹೋಗಲು ರಸ್ತೆಗಳಿರಲಿಲ್ಲ. ಆದ್ದರಿಂದ ಶಾಲೆಗಳಾಗಲಿ, ಜ್ಞಾನಕೇಂದ್ರಗಳಾಗಲಿ ಇವರಿಗೆ ಇಂದಿಗೂ ತಲುಪುತ್ತಿಲ್ಲ. ಆರ್ಥಿಕವಾಗಿ ತೀರ ಬಡವಾದ್ದರಿಂದ ಇವರುಗಳು ದುಡಿದರೆ ಮಾತ್ರ ಇವರಿಗೆ ಒಪ್ಪತ್ತಿನ ಊಟ ಸಿಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಮಗ ವಯಸ್ಸಿಗೆ ಬಂದ ಕೂಡಲೇ ಅವನು ಜೀತಕ್ಕೆ ಕೂಲಿಗೆ ಸೇರಿಸಿ ಬದುಕಿನ ಕಟ್ಟಿಕೊಳ್ಳುವ ಹಂಬಲ ಇವರಿಗಿರುತ್ತದೆ. ಆದ್ದರಿಂದ ಶಿಕ್ಷಣದ ಕಡೆಗೆ ಇಂದಿಗೂ ಈ ಬುಡಕಟ್ಟುಗಳ ಹೋಗಲು ಸಾಧ್ಯವಾಗುತ್ತಿಲ್ಲ. ಹಾಗೊಮ್ಮೆ ಹೋದರೂ ಇತರ ಸಮುದಾಯದ ವಿದ್ಯಾರ್ಥಿಗಳ ಜೊತೆ ಇವರು ಸ್ಪರ್ಧಿಸಲು ಸಾಧ್ಯವಾಗುತ್ತಿಲ್ಲ. ಅಷ್ಟು ಇಷ್ಟು ಕಲಿತರೂ ಇವತ್ತಿನ ಸ್ಪರ್ಧಾತ್ಮಕ ಯುಗದಲ್ಲಿ ಕೆಲಸ ಪಡೆಯುವುದು ದುಸ್ತರವಾಗಿದೆ. ಇಂತಹ ಸಂದರ್ಬದಲ್ಲಿ ಕಲಿಯುವುದಕ್ಕಿಂತ ಕಲಿಯದೇ ಕೂಲಿನಾಲಿ ಮಾಡಿ ಬದುಕುವುದು ಸೂಕ್ತ ಎಂಬ ತೀರ್ಮಾನಕ್ಕೆ ತಂದೆ ತಾಯಿಗಳು ಬರುತ್ತಿರುವುದು ಕಾಣಬಹುದು.

ಶೈಕ್ಷಣಿಕವಾಗಿ ತೀರ ಹಿಂದುಳಿದಿರುವ ಈ ಸಮುದಾಯದಲ್ಲಿ ಇಡೀ ರಾಜ್ಯದಲ್ಲಿ ೪೦ ರಿಂದ ೫೦ಜನ ಮಾತ್ರ ವಿದ್ಯಾವಂತರು ಸಿಗುತ್ತಾರೆ. ದಿನನಿತ್ಯ ಹೊಟ್ಟೆಪಾಡು ನೋಡಿಕೊಳ್ಳುವುದೇ ಉದ್ಯೋಗವಾಗಿರುವ ಇರುಳಿಗರಿಗೆ ಇನ್ನು ಶಿಕ್ಷಣದ ಮಾತಿಲ್ಲ. ಊರಿಂದ ಊರಿಗೆ ಕೂಲಿ ಅರಸಿ ಹೋಗುವುದರಿಂದ ಮಕ್ಕಳಿಗೆ ಶಿಕ್ಷಣ ಕೊಡಿಸಲು ಸಾಧ್ಯವಾಗುತ್ತಿಲ್ಲ. ಸರ್ಕಾರ ಶಿಕ್ಷಣದ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದರೂ ಇವು ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಏಕೆಂದರೆ ಇವರ ಹಾಡಿಗಳಿಗೆ ಯಾವುದೇ ಬಸ್ ಇನ್ನಿತರ ವಾಹನಗಳ ಸೌಲಭ್ಯ ಇಲ್ಲದ್ದರಿಂದ ಅಧ್ಯಾಪಕರು ಬರುವುದು ವಾರಕ್ಕೊಮ್ಮೆಯಾಗಿರುತ್ತದೆ. ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ಶಿಕ್ಷಣ ಪಡೆದಿರುವ ನಿರುದ್ಯೋಗಿಗಳಾಗಿ ಅತ್ತ ಮೂಲ ಕಸುಬಿಗೂ ಹೊಂದಿಕೊಳ್ಳಲಾಗದೆ ಇತ್ತ ಶಿಕ್ಷಣ ತಕ್ಕಂತೆ ಕೆಲಸವೂ ಸಿಗದೇ ಅನ್ಯಮಾರ್ಗಗಳನ್ನು ಹಿಡಿಯುತ್ತಿದ್ದಾರೆ.

೬.೪. ರಾಜಕೀಯ ಸ್ಥಿತ್ಯಂತಗಳು

ಪಾರಂಪರಿಕವಾಗಿ ಇರುಳಿಗರು ತಮ್ಮದೇ ಆದ ಕಾನೂನು ನ್ಯಾಯತೀರ್ಮಾನ, ಬದುಕಿನ ರೀತಿಗಳಿಂದ ಸುಸರ್ಜಿತವಾದ ಜೀವನವನ್ನು ಬದುಕಿ ಬಂದವರಾಗಿದ್ದಾರೆ. ಇವರ ನ್ಯಾಯಾಂಗ ವ್ಯವಸ್ಥೆಯಲ್ಲಿ ಮಹಿಳೆ, ಪುರುಷ ಪ್ರಬಲ ಮತ್ತು ದುರ್ಬಲ ಹಾಗೂ ಅಧಿಕಾರ ಮತ್ತು ಅಧಿಕಾರ, ಹಿರಿಯರ ಕಿರಿಯ, ಮೇಲು ಕೀಳುಗಳೆಂಬ ಯಾವ ಬೇದಭಾವವಿಲ್ಲದೆ ಸರ್ವರಿಗೂ ಸಮಬಾಳು ಎನ್ನುವ ಕಲ್ಪನೆಯಲ್ಲಿ ಬದುಕಿದ್ದವರು. ಇವರು ತಮ್ಮ ಬದುಕಿನ ಅನುಕೂಲಕ್ಕಾಗಿ ಹಲವಾರು ಕಾನೂನು ಕಟ್ಟಳೆಗಳನ್ನು ರೂಪಿಸಿಕೊಂಡು ಇದನ್ನು ಕಾಯುವ ನಿಟ್ಟಿನಲ್ಲಿ ನಾಡಗೌಡ, ಕಟ್ಟುಗೌಡ, ಕೋಲುಗಾರ ಮತ್ತು ಗಡಿಗೌಡರನ್ನು ನೇಮಕ ಮಾಡಿಕೊಳ್ಳುತ್ತಿದ್ದರು. ಈ ಆಯ್ಕೆಯಲ್ಲಿ ಅನುಭವ, ತಿಳುವಳಿಕೆ, ಸೂಕ್ಷ್ಮ ಸಂವೇದನೆ, ಶಕ್ತಿ, ಸಮುದಾಯದ ರೀತಿ ರಿವಾಜುಗಳನ್ನು ತಿಳಿದುಕೊಂಡವರನ್ನು ಆಯ್ಕೆ ಮಾಡಲಾಗುತ್ತಿತ್ತು. ಪ್ರತಿ ಹಂತದ ಅಯ್ಕೆಯಲ್ಲೂ ಪಾರದರ್ಶಕತೆ

ಯನ್ನು ಹೊಂದಿರುತ್ತಿದ್ದ ಇರುಳಿಗರು 'ನಾಡಗೌಡ, ಕಟ್ಟುಗೌಡ, ಕೋಲುಕಾರ, ಗಡಿಗೌಡರ ಆಯ್ಕೆಯ ಸಂದರ್ಭದಲ್ಲಿ ಎಲ್ಲರೂ ಒಂದೆಡೆ ಕುಳಿತುಕೊಳ್ಳುತ್ತಿದ್ದರು. ಯಾರಾದರೂ ಒಬ್ಬ ಇಡೀ ಸಭೆಯ ನಾಯಕತ್ವವನ್ನು ವಹಿಸಿಕೊಂಡು ಹುದ್ದೆಗಳ ವಿವರ ಮತ್ತು ರೀತಿ-ರಿವಾಜುಗಳನ್ನು ತಿಳಿಸಿ ಹುದ್ದೆಯ ಆಕಾಂಕ್ಷೆಗಳು ಮುಂದೆ ಬರಬಹುದೆಂದು ಆಹ್ವಾನಿಸುತ್ತಿದ್ದನು. ಹಾಗೆ ಹುದ್ದೆಯ ಆಕಾಂಕ್ಷೆಗಳು ಮುಂದೆ ಬಂದು ನಿಂತ ಮೇಲೆ ನೆರೆದಿದ್ದ ಜನರ ಅಭಿಪ್ರಾಯಗಳನ್ನು ಕೇಳುವ ಕೆಲಸ ಆರಂಭವಾಗುತ್ತಿತ್ತು. ವಿವಿಧ ಹುದ್ದೆಗಳಿಗೆ ತಕ್ಕಂತೆ ಆಕಾಂಕ್ಷಿಗಳನ್ನು ಸಮುದಾಯ ಹಿರಿಯರು ಸಮುದಾಯದವರ ಸಮ್ಮುಖದಲ್ಲಿ ಸಮುದಾಯದ ಕಟ್ಟಲೆಗಳ ಬಗ್ಗೆ ಕೇಳುತ್ತಿದ್ದರು, ಆಕಾಂಕ್ಷಿಯೂ ಎಲ್ಲರೂ ಮೆಚ್ಚುವಂತೆ ಉತ್ತರ ನೀಡಿದರೆ ಆ ಹುದ್ದೆಗೆ ಆಯ್ಕೆ ಮಾಡುತ್ತಿದ್ದರು. ಆದಷ್ಟು ಅನುಭವ ಉಳ್ಳವರನ್ನು ನಾಡಗೌಡ ಮತ್ತು ಕಟ್ಟು ಗೌಡರಾಗಿ ಆಯ್ಕೆ ಮಾಡಿಕೊಳ್ಳ ಲಾಗುತ್ತಿತ್ತು. ಉಳಿದ ಕೋಲುಕಾರ ಅಥವಾ ಉದಾರಿಯ ಆಯ್ಕೆಯು ಶಕ್ತಿ ಮತ್ತು ಬಲಾಢ್ಯನಾದ ಯುಕವನನ್ನು ಆಯ್ಕೆ ಮಾಡಲಾಗುತ್ತಿತ್ತು. ಹೀಗೆ ಎಲ್ಲವೂ ಸಮುದಾಯದವರ ಸಮ್ಮುಖದಲ್ಲಿ ನಡೆಯುತ್ತಿತ್ತು. ಆಯ್ಕೆಗೊಂಡವರು ಕೂಡ ತಮ್ಮ ಸ್ವಾರ್ಥ ಹಿತವನ್ನು ಬದಿಗೊತ್ತಿ ಸಮುದಾಯದ ಒಳಿತಿಗೆ ದುಡಿಯುತ್ತಿದ್ದುದ್ದನ್ನು ಕಾಣಬಹುದು.

ಹೀಗೆ ಒಂದು ಸುಸರ್ಜಿತ ಆಡಳಿತದಲ್ಲಿ ಕುಲಕಟ್ಟಲೆಗಳನ್ನು ಮೀರದಂತೆ ಸರ್ವರಿಗೂ ಒಳಿತಿನ ಹಿನ್ನೆಲೆಯಲ್ಲಿ ಬದುಕುತ್ತಿದ್ದ ಇರುಳಿಗರ ಸಮುದಾಯದವರು ಅರಣ್ಯದಿಂದ ಹೊರಬಂದ ಮೇಲೆ ಆಧುನಿಕತೆಯ ಪ್ರಭಾವಕ್ಕೊಳಗಾಗಿ ತಮ್ಮೆಲ್ಲ ರೂಢಿ ಸಂಪ್ರದಾಯಗಳನ್ನು ಕಳೆದುಕೊಳ್ಳು ವಂತಾಯಿತು. ಇವರಿಗೆ ಪ್ರಭುತ್ವ, ವಸಾಹತುಶಾಹಿ ಮತ್ತು ಪ್ರಜಾಪ್ರಭುತ್ವದ ಅರಿವೇ ಇಲ್ಲದೆ, ಹೊತ್ತಿನ ಊಟಕ್ಕೆ ದುಡಿಯುವುದರಲ್ಲೇ ಮುಳುಗಿ ಹೋಗಿದ್ದರು. ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದು ೧೯೫೦ರಲ್ಲಿ ಭಾರತಕ್ಕೆ ಬಾಬಾಸಾಹೇಬ್ ಅಂಬೇಡ್ಕರ್ ಅವರು ಸರ್ವರಿಗೂ ಒಳಿತನ್ನು ಮಾಡುವ ನಿಟ್ಟಿನಲ್ಲಿ ಅಧಿಕಾರ ಎಂಬುದು ಕೇವಲ ಶಕ್ತಿ ಮತ್ತು ಬುದ್ಧಿ ಇದ್ದವರಿಗಷ್ಟೇ ಅಲ್ಲದೆ ಸಮಾಜದ ಪ್ರತಿಯೊಬ್ಬರಿಗೂ ಸಿಗುವಂತಾಗಬೇಕು. ಈ ಭೂಮಿಯ ಮೇಲೆ ಎಲ್ಲರೂ ಸಮಾನರು ಅವರನ್ನು ವಿದ್ಯೆ, ಜಾತಿ, ಶಕ್ತಿ, ಧರ್ಮ, ಆಚಾರ, ವಿಚಾರ, ಭಾಷೆ ಮತ್ತು ದೇವರು-ದಿಂಡಿರ ಮೇಲೆ ವಿಂಗಡಿಸದಂತೆ ಮಾಡುವ ನಿಟ್ಟಿನಲ್ಲಿ ಇದಕ್ಕೆಲ್ಲಾ ಒಂದು ಅಸ್ತ್ರವಾದ ಸಂವಿಧಾನವನ್ನು ರೂಪಿಸಿದರು. ಈ ಸಂವಿಧಾನವೂ ಇಡೀ ಭಾರತದ ಸರ್ವರನ್ನು ಒಳಗೊಂಡು ಅವರ ಒಳಿತಿಗಾಗಿ ದುಡಿಯುವ ಆಶಯದೊಂದಿಗೆ ಕಾರ್ಯರೂಪಿತವಾಯಿತು. ಪಾರಂಪರಿಕವಾಗಿ ವಿದ್ಯೆ ಅಧಿಕಾರವನ್ನು ಧರ್ಮ ಮತ್ತು ಜಾತೀಯ ಆಧಾರದ ಮೇಲೆ ನಿಯಂತ್ರಿಸುತ್ತಿದ್ದ ವರ್ಗದಿಂದ ಅಧಿಕಾರವನ್ನು ಕಿತ್ತು ಎಲ್ಲರಿಗೂ ಸಿಗುವಂತೆ ಮಾಡಿದರು. ಇದರಿಂದಲೇ ಜನಾಂಗಿಕ ವಾಗಿ, ಸಾಮಾಜಿಕವಾಗಿ ಆರ್ಥಿಕವಾಗಿ ದೂರ ಉಳಿದಿದ್ದ ಅಸ್ಪೃಶ್ಯರು, ನಿರ್ಗತಿಕರು, ಅಧಿಕಾರದ ಚುಕ್ಕಾಣಿ ಹಿಡಿಯುವಂತಾಯಿತು. 'ಇದರ ಫಲವೇ ಇರುಳಿಗರೆಂಬ ಭಾರತದ ಪ್ರಾಚೀನ ಬುಡಕಟ್ಟುಗಳೊಂದಾದ ಸಮಾಜದಿಂದ ದೂರ ತಳ್ಳಲ್ಪಟ್ಟು, ಸಮುದಾಯಕ್ಕೂ ರಾಜಕೀಯ

ಅಧಿಕಾರ ಸಿಗುವಂತಾಯಿತು. ಬಾಬಾಸಾಹೇಬರು ಜಾರಿಗೆ ತಂದಿದ್ದ ಸಂವಿಧಾನವು ಒಳಗೊಂಡಿದ್ದ ಮೀಸಲಾತಿಯು ಇರುಳಿಗರಂತಹ ಲಕ್ಷಾಂತರ ಸಮುದಾಯಗಳನ್ನು ಸಮಾಜದ ಮುನ್ನೆಲೆಗೆ ತಂದು ನಿಲ್ಲಿಸಿತು. ಇದರಿಂದ ಗ್ರಾಮ ಪಂಚಾಯಿತಿಯಿಂದ ಪ್ರಧಾನ ಮಂತ್ರಿಯವರೆಗೂ ಶೋಷಿತರು, ಬುಡಕಟ್ಟುಗಳು, ದಲಿತರು ಬರುವಂತಾಯಿತು. ಅದು ಎಷ್ಟು ಉಪಯುಕ್ತವಾಯಿತು ಅಥವಾ ಅಧಿಕಾರದಿಂದ ಆದ ಲಾಭವೇನು ಎಂಬುದು ಬೇರೆ ಬಗೆಯ ಚರ್ಚೆ. ಆದರೆ ಕೇವಲ ಅಧಿಕಾರ, ಹಣ, ಆಸ್ತಿ, ಜಾತಿ ಮತ್ತು ಧರ್ಮದ ಆಧಾರದ ಮೇಲೆ ಓಡುತ್ತಿದ್ದ ಅಧಿಕಾರಕ್ಕೆ ಈ ಯಾವುದೂ ಇಲ್ಲದ ನಿರ್ಗತಿಕರು ಬಂದು ಆ ಬಂಡವಾಳಶಾಹಿ, ಭೂಮಾಲೀಕ ಮತ್ತು ಮೇಲ್ಜಾತಿಯವರ ಸರಿಸಮವಾಗಿ ಕುಳಿತು ಕೊಳ್ಳುವಂತಾಯಿತು. ಇದು ಒಂದು ಹೊಸ ಬಗೆಯ ಕ್ರಾಂತಿಯನ್ನೇ ಉಂಟುಮಾಡಿತು.

ಮೀಸಲಾತಿಯ ಕಾರಣಕ್ಕೆ ಇಂತಹ ಸಮುದಾಯಗಳನ್ನು ಈ ಮಾಲೀಕರೆ ಗುರ್ತಿಸಿ ಕರೆತಂದು ಚುನಾವಣೆಗೆ ಬೇಕಾದ ಎಲ್ಲಾ ದಾಖಲೆಗಳನ್ನು ಸಿದ್ದಪಡಿಸಿ ಚುನಾವಣೆಗೆ ನಿಲ್ಲಿಸಿ, ಗೆಲ್ಲಿಸಿಕೊಳ್ಳುತ್ತಾರೆ. ಇದರಿಂದ ಪಾರಂಪರಿಕವಾಗಿ ತಮ್ಮ ಹಿತ್ತಲಿನಲ್ಲಿ, ತಿಪ್ಪೆಯಲ್ಲಿ ಹಸು ಕಟ್ಟಿ ಹಾಕಿಕೊಳ್ಳುವ ಜಾಗದಲ್ಲಿ ಕುಳಿತುಕೊಳ್ಳುತ್ತಿದ್ದವನನ್ನು ಒಂದು ದಿನವು ಮನೆಯ ಒಳಗೆ ಸೇರಿಸಿಕೊಳ್ಳದ ಇವರುಗಳು ಮೀಸಲಾತಿಯ ಕಾರಣದಿಂದ ಅವನಿಗೆ ಕುರ್ಚಿಕೊಟ್ಟು, ತಾವು ಕೈಕಟ್ಟಿ ನಿಂತುಕೊಳ್ಳುವ ಕ್ರಾಂತಿ ಸಂಭವಿಸಿತು. ಇದೇ ಹಿನ್ನೆಲೆಯಲ್ಲಿ ಇರುಳಿಗರಿಗೂ ಮೀಸಲಾತಿಯ ಆಧಾರದ ಮೇಲೆ ಚುನಾವಣೆಗೆ ಸ್ಪರ್ಧಿಸುವ ಅವಕಾಶಗಳು ಒದಗಿಬಂದವು. ತಮ್ಮ ಪಾರಂಪರಿಕ ನ್ಯಾಯವ್ಯವಸ್ಥೆ ಮತ್ತು ಆಯ್ಕೆಯನ್ನು ಕಂಡಿದ್ದ ಇರುಳಿಗರಿಗೆ ಆಧುನಿಕತೆಯ ಚುನಾವಣೆಗಳು ದಿಗ್ಭ್ರಮೆ ಮೂಡಿಸಿದವು. ಹಣ-ಜಾತಿಯ ಲೆಕ್ಕಚಾರದಲ್ಲಿ ನಡೆಯುತ್ತಿದ್ದ ಚುನಾವಣೆಗಳಲ್ಲಿ ಇವರಿಗೂ ಅವಕಾಶ ಸಿಕ್ಕಿದ್ದು ಒಂದು ವಿಸ್ಮಯವೇ ಆಗಿತ್ತು. ಸಂವಿಧಾನದ ಮೀಸಲಾತಿಯ ಪರಿಪಾಲನೆಯಿಂದ 'ಇರುಳಿಗರಿಗೆ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶ ಸಿಕ್ಕಿತು. ಊರ ಗೌಡರು, ರಾಜಕೀಯ ಮುಖಂಡರು ಭೂಮಾಲೀಕರು ಇರುಳಿಗರನ್ನು ಕರೆತಂದು ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿ, ಅವರನ್ನು ರಬ್ಬರ್ ಸ್ಟಾಂಪ್‌ಗಳಂತೆ ಬಳಸಿಕೊಳ್ಳಲಾರಂಭಿಸಿದರು.

ಕರ್ನಾಟಕದಲ್ಲಿ ಇರುಳಿಗರು ರಾಮನಗರ ಜಿಲ್ಲೆಯಲ್ಲಿ ಅತೀ ಹೆಚ್ಚಾಗಿ ಕಂಡುಬರುತ್ತಾರೆ. ಇನ್ನುಳಿದಂತೆ ಕೋಲಾರ, ಶಿವಮೊಗ್ಗ, ಮಂಡ್ಯ, ಮೈಸೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಚಾಮರಾಜನಗರಗಳಲ್ಲಿ ಕಂಡುಬರುತ್ತಾರೆ. ಇನ್ನುಳಿದಂತೆ ಇತರ ಜಿಲ್ಲೆಗಳಲ್ಲಿ ಅಲ್ಲೊಂದು ಇಲ್ಲೊಂದು ಕುಟುಂಬಗಳು ಕಂಡುಬರುತ್ತವೆ. ಈ ಮೇಲಿನ ಎಲ್ಲ ಜಿಲ್ಲೆಗಳಲ್ಲಿನ ರಾಜಕೀಯ ಅಧಿಕಾರಗಳನ್ನು ಪಡೆದುಕೊಂಡಿರುವವರು ರಾಮನಗರ ಜಿಲ್ಲೆಯ ಇರುಳಿಗರು ಎಂದರೆ ತಪ್ಪಾಗಲಾರದು. ಏಕೆಂದರೆ ಬಹುಸಂಖ್ಯಾತ ಇರುಳಿಗರು ರಾಮನಗರದಲ್ಲಿ ಕಂಡುಬರುವುದು ಇನ್ನುಳಿದಂತೆ ಅಲ್ಲೊಂದು ಇಲ್ಲೊಂದರಲ್ಲಿ ಚುನಾವಣೆ ಗೆದ್ದಿರುವುದನ್ನು ಕಾಣಬಹುದಾಗಿದೆ.

ಚುನಾವಣೆ ಘೋಷಣೆಯಾಗಿ ಮೀಸಲಾತಿ ಬಂದು ಬಿಟ್ಟರೆ ಇರುಳರನ್ನು ಕರೆದು ಚುನಾವಣೆಗೆ ಬೇಕಾದ ಸೂಕ್ತ ದಾಖಲೆಗಳನ್ನು ಸಿದ್ಧಪಡಿಸಿ ಚುನಾವಣೆಗೆ ಸ್ಪರ್ಧಿಸಿಸುತ್ತಾರೆ. ಆಗೊಮ್ಮೆ ಗೆದ್ದರೆ ಇವರ ವೈಯಕ್ತಿಕ ಕಾರ್ಯಸಾಧನೆಗೆ ಇವರನ್ನು ಬಳಸಿಕೊಳ್ಳುತ್ತಾರೆ. ಏಕೆಂದರೆ ತೀರ ಹಿಂದುಳಿದ ಮತ್ತು ಅನಕ್ಷರಸ್ಥರಾದ ಇರುಳಿಗರಿಗೆ ಚುನಾವಣೆ, ಆಡಳಿತ, ಪಕ್ಷ ಕಾನೂನುಗಳ ಅರಿವೇ ಇಲ್ಲದಿರುತ್ತದೆ. ಹಾಗೊಮ್ಮೆ ಕೆಲವೊಬ್ಬರಿದ್ದರೂ ಅಂತಹವರನ್ನು ಈ ಭೂಮಾಲೀಕರು ಸ್ಪರ್ಧಿಸಲು ಬಿಡುವುದಿಲ್ಲ. ನನ್ನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಚುನಾಯಿತ ಸದಸ್ಯರನ್ನು ಸಂದರ್ಶಿಸಿದಾಗ ಗ್ರಾಮ ಪಂಚಾಯಿತ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಕಾನೂನು ಅಧಿಕಾರದ ಯಾವ ಪರಿವೆಯೂ ಇಲ್ಲದೇ ಇರುವುದು ಕಂಡುಬಂದಿತು. ಮಹಿಳಾ ಮೀಸಲಾತಿಯ ಫಲವಾಗಿ ಇರುಳಿಗರು ಬಹುಸಂಖ್ಯಾತ ಮಹಿಳೆಯರು ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ. ಇವರನ್ನು ಅವರ ಗಂಡಂದಿರೇ ಕರೆದುಕೊಂಡು ಹೋಗಬೇಕು. ಅವರನ್ನು ಸಂಪೂರ್ಣವಾಗಿ ಅವಲಂಬಿಸಿದ್ದಾರೆ. ಇವರ ಗಂಡಂದಿರು ಭೂಮಾಲೀಕ ತಾಳಕ್ಕೆ ಕುಣಿಯಲೇ ಬೇಕು. ಆದ್ದರಿಂದ ಇವರುಗಳನ್ನು ಕೇವಲ ರಬ್ಬರ್ ಸ್ಟಾಂಪ್‌ಗಳಾಗಿ ಬಳಸಿಕೊಳ್ಳುತ್ತಿದ್ದಾರೆ. ರಾಮನಗರ ಜಿಲ್ಲಾ ಪಂಚಾಯಿತಿಯ ಉಪಾಧ್ಯಕ್ಷ ಆಗಿದ್ದ ಮಹಾದೇವಮ್ಮ ಅಧಿಕಾರದಲ್ಲಿದ್ದ ಸಂದರ್ಭದಲ್ಲಿಯೂ ಕೂಲಿ ಕೆಲಸಕ್ಕೆ ಹೋಗಿದ್ದರ ಬಗ್ಗೆ ಹೇಳಿಕೊಳ್ಳುತ್ತಾರೆ. ಏನಾದರೂ ಮೀಟಿಂಗ್ ಅಥವಾ ಕೆಲಸ ಕಾರ್ಯಗಳಿದ್ದರೆ ಹೇಳಿ ಕಳುಹಿಸಿ ಜೊತೆಗೆ ಕಾರು ಬರುತ್ತಿತ್ತು. ಅದರಲ್ಲಿ ಹೋಗಿ ಮೀಟಿಂಗ್‌ನಲ್ಲಿ ಭಾಗಿಯಾಗಿ ಸಹಿ ಇದ್ದರೆ ನಮ್ಮ ನಾಯಕರು ಸೂಚಿಸಿದ ಜಾಗದಲ್ಲಿ ಮಾಡುತ್ತಿದ್ದರು. ಊಟ ಕೊಡಿಸುತ್ತಿದ್ದರು. ಮತ್ತೆ ತಂದು ಕಾರಿನಲ್ಲಿ ಮನೆಗೆ ಬಿಡುತ್ತಿದ್ದರು. ಮತ್ತೆ ಅದೇ ಕೂಲಿ ಕೆಲಸಕ್ಕೆ ಹೋಗುತ್ತಿದ್ದೆ ಎನ್ನುತ್ತಾರೆ. ನಿಮಗೆ ಕೊಟ್ಟಿದ್ದ ಕಾರು ಎಂದರೆ ನಮ್ಮ ನಾಯಕರ ಹತ್ತಿರ ಇರುತ್ತಿತ್ತು ಎನ್ನುತ್ತಾರೆ. ಇದೇ ಪರಿಸ್ಥಿತಿ ಇಡೀ ಚುನಾಯಿತ ಇರುಳಿಗರ ಸಮುದಾಯದವರದಾಗಿದೆ. ಸದ್ಯ ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರು ಗಾರ್ಮೆಂಟ್ಸ್‌ಗಳಿಗೆ ಕೆಲಸಕ್ಕೆ ಹೋಗುತ್ತಿರುವುದನ್ನು ಕಾಣಬಹುದು. ಇವರಿಗೆ ಪಂಚಾಯಿತಿಯ ಕಾನೂನುಗಳು ರೀತಿ-ರಿವಾಜುಗಳು ಮತ್ತು ಅನುಧಾನಗಳ ಕಿಂಚಿತ್ತು ಮಾಹಿತಿ ಇಲ್ಲದೆ ಇರುವುದನ್ನು ಕಾಣಬಹುದು. ಅನಕ್ಷರಸ್ಥರಾದ ಇವರಿಗೆ ಪಂಚಾಯಿತಿಯ ನಿಯಮಗಳು ಮತ್ತು ಕಾನೂನು ಅನುದಾನಗಳ ಕಾರ್ಯಾಗಾರವನ್ನು ಏರ್ಪಡಿಸುತ್ತಾರೆ. ಆದರೆ ಅಲ್ಲಿನ ಭಾಷೆ ವೈಜ್ಞಾನಿಕ ವಿಧಾನಗಳು ಅರ್ಥ ವಾಗದೇ ಸುಮ್ಮನೆ ಕುಳಿತು ಬರುವಂತಾಗಿದೆ. ಆದ್ದರಿಂದ ಸರ್ಕಾರಗಳು ಇವರಿಗೆ ಪ್ರತ್ಯೇಕವಾದ ಕಾನೂನು ಅರಿವಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾದ ಅವಶ್ಯಕತೆಯಿದೆ.

ಇತ್ತೀಚಿನ ದಿನಮಾನಗಳಲ್ಲಿ ಚುನಾವಣೆಯ ಸ್ಪರ್ಧೆಗೆ ಇಂತಿಷ್ಟು ಶಿಕ್ಷಣ ಅರ್ಹತೆ ನಿಗದಿಪಡಿಸಿರುವುದರಿಂದ 'ಇರುಳಿಗರಿಗೆ ಸ್ಪರ್ಧಿಸುವ ಯಾವ ಅವಕಾಶಗಳು ಇಲ್ಲದಂತಾಗಿದೆ. ಏಕೆಂದರೆ ಕೂಲಿನಾಲಿ ಮಾಡಿ ಹೊಟ್ಟೆ ತುಂಬಿಸಿಕೊಳ್ಳಲು ಹಾತೊರೆಯುತ್ತಿರುವ ಸಂದರ್ಭದಲ್ಲಿ

ಶಿಕ್ಷಣದ ಮಾತೆಲ್ಲಿ. ಹೀಗಿದ್ದಾಗ ಕಡ್ಡಾಯ ಶಿಕ್ಷಣವು ಇದ್ದ ಒಂದು ಅವಕಾಶವನ್ನು ಕಿತ್ತುಕೊಂಡಿದೆ. ಅಂದರೆ ಕಡ್ಡಾಯ ಶಿಕ್ಷಣವು ತಪ್ಪು ಎಂದಲ್ಲ. ಅದನ್ನು ಸಮುದಾಯಗಳ ಹಿನ್ನೆಲೆಯಲ್ಲಿ ವಿಧಿಸಬೇಕಾದ ಅನಿವಾರ್ಯತೆ ಇದೆ. ಇತ್ತೀಚಿನ ದಿನಮಾನಗಳಲ್ಲಿ ಶಿಕ್ಷಣದ ಕಡೆ ಮುಖಮಾಡಿರುವ ಇರುಳಿಗರು ಇನ್ನೂ ಹತ್ತರಿಂದ ಹದಿನೈದು ವರ್ಷಗಳ ನಂತರ ಇವರಿಗೆ ಅನ್ವಯವಾಗುತ್ತದೆ ಎಂದು ನಾನು ಭಾವಿಸುತ್ತೇನೆ.

ಒಟ್ಟಾರೆಯಾಗಿ ಇರುಳಿಗರು ಪ್ರಸ್ತುತ ರಾಜಕೀಯ ಸಂದರ್ಭದಲ್ಲಿ ಮೀಸಲಾತಿಯ ಆಧಾರದ ಮೇಲೆ ಗುರುತಿಸಿಕೊಂಡಿದ್ದಾರೆಯೇ ಹೊರತು ಇವರು ಚುನಾವಣೆ ನಿರ್ಧರಿಸುವ ಅಥವಾ ಅಭ್ಯರ್ಥಿಯನ್ನು ನಿರ್ಧರಿಸುವ ಜನಸಂಖ್ಯೆಯನ್ನು ಹೊಂದಿಲ್ಲ. ಅದರಲ್ಲೂ ಶೇ.೮೦ರಷ್ಟು ಇರುಳಿಗರು ಇಂದಿಗೂ ಓಟ್ ಕಾರ್ಡ್, ರೇಷನ್ ಕಾಡ್, ಬಿ.ಪಿ.ಎಲ್ ಕಾರ್ಡ್, ಆಧಾರ್ ಕಾರ್ಡ್ ಮುಂತಾದ ಸರ್ಕಾರಿ ಸೌಲಭ್ಯಗಳನ್ನು ಪಡೆಯದೇ ಭಾರತೀಯ ನಾಗರೀಕರು ಹಿಂದಿನ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಕೇವಲ ಕೂಲಿ ಕೆಲಸಕ್ಕೆ, ಜೀತಕ್ಕಾಗಿ ಇಂತಹ ಸಮುದಾಯ ಗಳನ್ನು ಬಳಸಿಕೊಳ್ಳುವ ಭೂಮಾಲೀಕರು ಅಥವಾ ರಾಜಕಾರಣಿಗಳು, ಸಮುದಾಯಗಳಿಗೂ ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ಅಲ್ಲೊಬ್ಬ, ಇಲ್ಲೊಬ್ಬ ಇರುಳಿಗರು ಹೊಂದಿರುವ ದಾಖಲಾತಿಗಳನ್ನು ಬಂಡವಾಳ ಮಾಡಿಕೊಂಡಿರುವ ಅಧಿಕಾರಿಗಳು ಪರಿಶಿಷ್ಟ ಪಂಗಡಕ್ಕೆ ಬರುವ ಸೌಲಭ್ಯಕ್ಕೆ ಅವರನ್ನು ಹೊಣೆ ಮಾಡಿ ಅವರ ಹೆಸರಿನಲ್ಲಿ ಅನುಧಾನವನ್ನು ಪಡೆದು, ಸ್ವಲ್ಪ ಭಾಗ ಅವನಿಗೆ ಕೊಟ್ಟು ಉಳಿದಿದ್ದನ್ನು ತಾವಿಟ್ಟುಕೊಳ್ಳುವ ಎಷ್ಟೋ ನಿದರ್ಶನಗಳು ಇಂದಿಗೂ ನಡೆಯುತ್ತಿವೆ. ಏನೂ ಇಲ್ಲದವನಿಗೆ ಕರೆದು ದುಡ್ಡು ಕೊಡುತ್ತಿದ್ದುರಿಂದ ಅವನು ಅವರು ಹೇಳಿದಂತೆ ಕೇಳುತ್ತಿದ್ದಾನೆ. ಈ ಅಧಿಕಾರಿಗಳು ಪರಿಶಿಷ್ಟ ಪಂಗಡಕ್ಕೆ ಯಾವುದೇ ಸೌಲಭ್ಯ ಬಂದರೂ ಅವನಿಗೆ ತಿಳಿಸುತ್ತಾರೆಯೇ ವಿನಃ ಅವರಲ್ಲಿರುವ ವಿದ್ಯಾವಂತನಿಗೆ ಅಥವಾ ತಿಳುವಳಿಕಸ್ಥನಿಗೆ ತಿಳಿಸುವುದಿಲ್ಲ. ಇದರಿಂದ ಸಮುದಾಯವು ಮತ್ತಷ್ಟು ಆರ್ಥಿಕ ದುಸ್ಥಿತಿಗೆ ಒಳಗಾಗುವಂತಾಗಿದೆ. ರಾಜಕಾರಣಿಗಳಿಗೆ ಅಥವಾ ಭೂಮಾಲೀಕರಿಗೆ ಇರುಳಿಗರು ದಾಳಗಳಾಗಿ ಕಂಡುಬರುತ್ತಿದ್ದಾರೆ.

ಕೊನೆ ಟಿಪ್ಪಣಿಗಳು

೧. ಪ್ರಭಾಕರ ಎ.ಎಸ್., ೨೦೦೦, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪು.೨

೨. ಅದೇ, ಪು.೨

೩. ಅದೇ, ಪು.೬

೪. ವೆಂಕಟೇಶ್, ೨೦೧೧, ಬುಡಕಟ್ಟುಗಳ ಸಾಮಾಜಿಕ ಬದಲಾವಣೆ ಬೆಂಗಳೂರು ಗ್ರಾಮಾಂತರ ಪರಿಸರವನ್ನು ಅನುಲಕ್ಷಿಸಿ(ಇರುಳಿಗರು ಮತ್ತು ಹಕ್ಕಿಪಿಕ್ಕಿಗಳನ್ನು ಕುರಿತು ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಪು.೧೦೪

ಅಧ್ಯಾಯ: ಏಳು

ತೌಲನಿಕ ಅಧ್ಯಯನ

೭.೧. ಇರುಳಿಗ ಮತ್ತು ಇರುಳಾಸ್

೭.೨. ಇರುಳಿಗ ಮತ್ತು ಚೆಂಚು

೭.೩. ಇರುಳಿಗ ಮತ್ತು ಸೋಲಿಗ

ಅಧ್ಯಾಯ ಏಳು

ತೌಲನಿಕ ಅಧ್ಯಾಯ

ಬಾಬಾ ಸಾಹೇಬ ಅಂಬೇಡ್ಕರ್ ಬುಡಕಟ್ಟುಗಳನ್ನು ಕುರಿತು ಹೀಗೆ ಹೇಳುತ್ತಾರೆ. ಒಂದು ಸುಂದರ ಮತ್ತು ಶಾಂತಿಯುತ ನಾಗರಿಕತೆಯ ಮೇಲೆ ಆರ್ಯರ ಆಕ್ರಮಣವಾಯಿತು. ಈ ಆಕ್ರಮಣ ಅಮಾನವೀಯತೆಯಿಂದ ಕೂಡಿತ್ತು. ಇದರಿಂದ ಅಲ್ಲಿನ ಮೂಲನಿವಾಸಿಗಳು ಅನೇಕ ಸಾವು-ನೋವುಗಳನ್ನು ಅನುಭವಿಸುವಂತಾಯಿತು. ಈ ಸಂದರ್ಭದಲ್ಲಿ ಅಲ್ಲಿನ ಮೂಲನಿವಾಸಿಗಳು ಆರ್ಯರ ಮೇಲರಿಮೆಯನ್ನು ಹಾಗೂ ಅವರ ಧರ್ಮ ಮತ್ತು ಸಂಸ್ಕೃತಿಯನ್ನು ಒಪ್ಪಿಕೊಂಡು ಅವರಿಗೆ ದಾಸರಾಗಿ ಶೋಷಣೆಗೆ ಒಳಗಾಗಿ ಅಲ್ಲಿಯೇ ನೆಲೆಸಿದರು. ಆದರೆ ಮತ್ತೊಂದು ಗುಂಪು ಆ ಪ್ರದೇಶವನ್ನು ಬಿಟ್ಟು ಆರ್ಯರ ದೇವರು, ಧರ್ಮ ಮತ್ತು ಸಂಸ್ಕೃತಿಯನ್ನು ವಿರೋಧಿಸುತ್ತಾ ತಮ್ಮದೇ ಆದ ದೇವರು, ಧರ್ಮ ಮತ್ತು ಸಂಸ್ಕೃತಿಯನ್ನು ಪಾಲಿಸಿಕೊಂಡು ಕಾಡುಮೇಡುಗಳಲ್ಲಿ ಗುಂಪುಗುಂಪಾಗಿ ವಾಸಿಸಲಾರಂಭಿಸಿದರು. ಅವರೇ ಈ ಬುಡಕಟ್ಟುಗಳು.[೧] ಇವರನ್ನು ಕುರಿತು ಅತ್ಯಂತ ಸೂಕ್ಷ್ಮವಾಗಿ ಅಧ್ಯಯನಗಳು ನಡೆಯಬೇಕಾದ ಜರೂರು ಇದೆ. ಏಕೆಂದರೆ ಒಂದೊಂದು ಬುಡಕಟ್ಟುಗಳು ಚರಿತ್ರೆಯು ಭಾರತದ ಒಂದೊಂದು ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುತ್ತವೆ. ಆದರೆ ಬುಡಕಟ್ಟುಗಳನ್ನು ಕುರಿತು ನಡೆದ ಹಲವಾರು ಅಧ್ಯಯನಗಳು ಈ ಸೂಕ್ಷ್ಮತೆಯನ್ನು ಅರಿಯದೇ ಗುಂಪುಗುಂಪಾಗಿ ಅಧ್ಯಯನ ಮಾಡಿ ತಮ್ಮ ಗ್ರಹಿಕೆ ಮತ್ತು ಆಲೋಚನೆಯ ದೃಷ್ಟಿಕೋನದಲ್ಲಿ ಅನೇಕ ದ್ವಂದ್ವಗಳನ್ನು ನಿರ್ಮಿಸಿಬಿಟ್ಟಿವೆ. ಇದರಿಂದ ಪ್ರಸ್ತುತ ಸಂದರ್ಭದಲ್ಲಿ ತಮ್ಮ ಐಡೆಂಟಿಟಿಯನ್ನು ಗುರುತಿಸಿಕೊಳ್ಳಲು ಮುಂದಾದ ಬುಡಕಟ್ಟುಗಳು ತಮ್ಮ ತಮ್ಮ ಚರಿತ್ರೆ ರಚಿಸಿಕೊಳ್ಳುವಾಗ ಅನೇಕ ಮುಜುಗರ ಅನುಭವಿಸುವಂತಾಗಿದೆ. ಆ ಹಿನ್ನೆಲೆಯಲ್ಲಿ ಇರುಳಿಗ ಮತ್ತು ಚೆಂಚು, ಇರುಳಿಗ ಮತ್ತು ಸೋಲಿಗ, ಇರುಳಿಗ ಮತ್ತು ಇರುಳ ಕುರಿತು ತೌಲನಿಕ ಅಧ್ಯಯನ ಕೈಗೊಳ್ಳಲಾಗಿದೆ. ಆ ನಿಟ್ಟಿನಲ್ಲಿ ಈ ದೇಶದ ಮೂಲನಿವಾಸಿಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಇರುಳಿಗರು, ಸೋಲಿಗರು, ಕಾಡುಕುರುಬರು, ಜೇನುಕುರುಬರು ಮತ್ತು ಅಡವಿ ಚೆಂಚರ ಮೂಲಸ್ಥಳ ಒಂದೇ ಆಗಿದ್ದರೂ ತಮ್ಮ ತಮ್ಮ

ಬದುಕಿನ ನೀತಿ ರೀತಿಗಳಿಂದ, ನಂಬಿಕೆ, ಆಚರಣೆ ದೈವಗಳಿಂದ ಬೇರೆ ಬೇರೆಯಾಗಿ ಗುರುತಿಸಿಕೊಳ್ಳುತ್ತಾರೆ. ಒಂದೊಂದು ಬುಡಕಟ್ಟು ಪ್ರತ್ಯೇಕ ಪ್ರತ್ಯೇಕವಾದ ದೈಹಿಕ ರಚನೆ, ಭಾಷೆ, ಪುರಾಣ, ಐತಿಹ್ಯ ಮತ್ತು ವೃತ್ತಿಗಳನ್ನು ಹೊಂದಿವೆ. ಆದರೆ ಮೇಲುನೋಟಕ್ಕೆ ಒಂದೇ ಎಂಬಂತೆ ಕಂಡು ಬರುತ್ತವೆಯಾದರೂ, ಭಾರತದ ಪ್ರಾಚೀನ ಜನಜೀವನದ ವಿವಿಧ ಮಜಲುಗಳನ್ನು ಬಿತ್ತರಿಸುತ್ತವೆ.

ಈ ತೌಲನಿಕ ಅಧ್ಯಯನವನ್ನು ಕೈಗೊಳ್ಳಲು ಪ್ರಮುಖ ಕಾರಣವೆಂದರೆ ೧೯೬೧ರ ಜನಗಣತಿಯಲ್ಲಿ ಚೆಂಚರೇ ಉತ್ತರ ಆರ್ಕಾಟ್ ಮತ್ತು ಮೈಸೂರಿನಲ್ಲಿ ಇರುಳರೆಂದು ಕರೆಯಲ್ಪಡುತ್ತಾರೆ.[೨] ಇದರ ಜೊತೆಗೆ ಬುಕಾನನ್ ಕೂಡ ರಾಮಗಿರಿ ದುರ್ಗಕ್ಕೆ ಬಂದಾಗ ಇರುಳಿಗರು ನಾವು ಕಾಡ್‌ಚೆನ್ಸುಗಳು ಎಂದು ಕರೆದುಕೊಂಡಿದ್ದಾರೆ ಎನ್ನುತ್ತಾರೆ. ಈ ಇರುಳಿಗರು ಯಾಕೆ ಕಾಡ್‌ಚೆನ್ಸುಗಳು ಎಂದು ಕರೆದುಕೊಂಡರು, ಚೆನ್ಸು ಮತ್ತು ಚೆಂಚರು ಒಂದೇನಾ ಅಥವಾ ಇರುಳಿಗರು, ಚೆಂಚರು ಒಂದೇನಾ ಅಥವಾ ಇದು ಅಧ್ಯಯನಕಾರರ ಪ್ರಮಾದವಾ ಅಥವಾ ಇರುಳಿಗರಿಗೂ, ಚೆಂಚರಿಗೂ ಇರುವ ಸಂಬಂಧವೇನು ಎಂಬ ಹತ್ತು ಹಲವು ಪ್ರಶ್ನೆಗಳು ಇರುವುದರಿಂದ ಇರುಳಿಗ ಮತ್ತು ಚೆಂಚರನ್ನು ತೌಲನಿಕವಾಗಿ ಅಧ್ಯಯನ ಮಾಡುವ ಅನಿವಾರ್ಯ ಸಂದರ್ಭ ಉಂಟಾಗಿ ಅಧ್ಯಯನ ಮಾಡಲಾಗಿದೆ.

ಎರಡನೆಯದಾಗಿ ಇರುಳಿಗ ಮತ್ತು ಸೋಲಿಗರು ಪರಸ್ಪರ ಸಾಮ್ಯತೆ ಇರುವ ಬುಡಕಟ್ಟುಗಳಾಗಿವೆ. ಇರುಳಿಗರ ಐತಿಹ್ಯ ಮತ್ತು ಪುರಾಣಗಳಲ್ಲಿ ಸೋಲಿಗರ ಪ್ರಸ್ತಾಪ ಹೆಚ್ಚಾಗಿ ಕಂಡುಬರುತ್ತದೆ. ಅದೇ ರೀತಿಯಾಗಿ ಸೋಲಿಗರ ಐತಿಹ್ಯ ಪುರಾಣಗಳಲ್ಲಿ ಇರುಳಿಗರ ಪ್ರಸ್ತಾಪ ಕಂಡುಬರುತ್ತವೆ. ಜೊತೆಗೆ ಇರುಳಿಗ ಮತ್ತು ಸೋಲಿಗರು ಒಂದು ಸಾಂಸ್ಕೃತಿಕ ಕಾಲಘಟ್ಟದಲ್ಲಿ ವಿಘಟನೆಗೊಂಡಿರಬಹುದು. ಇಂದಿಗೂ ಬೇರೆ ಬೇರೆಯಾಗಿಯೇ ಬದುಕುತ್ತಿವೆ. ಸೋಲಿಗರ ಮನೆಯಲ್ಲಿ ಇರುಳಿಗ ಮಹಿಳೆಯರು ಊಟ ಮಾಡುವಂತಿಲ್ಲ. ಹಾಗೆಯೇ ಸೋಲಿಗರು ಇರುಳಿಗರ ಮನೆಯಲ್ಲಿ ಉಣ್ಣುವಂತಿಲ್ಲ. ಪರಸ್ಪರ ಇಬ್ಬರಲ್ಲೂ ಕೊಡುಕೊಳ್ಳುವ ಸಂಬಂಧವಿಲ್ಲ. ಆದರೆ ಇಬ್ಬರು ಕೂಡ ನಾವು ಅಣ್ಣ-ತಮ್ಮಂದಿರು ಅಂತ ಹೇಳಿಕೊಳ್ಳುತ್ತಾರೆ. ಆದ್ದರಿಂದ ಈ ಎರಡು ಬುಡಕಟ್ಟುಗಳನ್ನು ಚಾರಿತ್ರಿಕ ವಿಧಾನಗಳ ಮೂಲಕ ಅಧ್ಯಯನ ನಡೆಸಬೇಕಾದ ಅನಿವಾರ್ಯತೆ ಇದೆ.

ಮೂರನೆಯದಾಗಿ ಇರುಳ, ಇರುಳಾಸ್, ಇರುಳರ್ ಮತ್ತು ಇರುಳಿಗರು ಬೇರೆ ಬೇರೆಯೇ ಅಥವಾ ಒಂದೇನಾ ಎಂಬ ಚರ್ಚೆ ಮುಖ್ಯವಾದುದು. ಕೆಲವು ವಿದ್ವಾಂಸರು ಒಂದೇ ಎಂದು ಮತ್ತೆ ಕೆಲವು ವಿದ್ವಾಂಸರು ಬೇರೆ ಬೇರೆ ಎಂದು ತಮ್ಮ ವಾದಗಳನ್ನು ಮಂಡಿಸುತ್ತಾರೆ. ಈ ದ್ವಂದ್ವವನ್ನು ಬಗೆಹರಿಸಲು ಇರುಳ ಮತ್ತು ಇರುಳಿಗರನ್ನು ಕುರಿತು ತೌಲನಿಕ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೭.೧. ಇರುಳ, ಚೆಂಚು, ಸೋಲಿಗ ಮತ್ತು ಇರುಳಿಗರ ವಾಸಿಸುವ ಭೂ ಪ್ರದೇಶಗಳು

ಸಾಮಾನ್ಯವಾಗಿ ಬುಡಕಟ್ಟುಗಳು ವಾಸಿಸುವ ಭೂಪ್ರದೇಶಗಳು ಜೀವನಾಂಶಕ್ಕೆ ಉಪಯುಕ್ತ ವಾಗುವ ಪರಿಸರವನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಕಣಿಕಾರ, ಕುಲಗೌಡ ಅಥವಾ ಸಮುದಾಯಗಳಲ್ಲಿ ಒಬ್ಬ ಕಟ್ಟುಪಾಡುಗಳನ್ನು ನಿರ್ಧರಿಸುವ ವ್ಯಕ್ತಿ ಇರುತ್ತಾನೆ. ಅವನ ಆದೇಶದ ಮೇರೆಗೆ ಕಾಡದೇವತೆಯ ಅಪ್ಪಣೆ ಪಡೆದು ಒಂದು ಸೂಕ್ತವಾದ ಜಾಗವನ್ನು ಆಯ್ಕೆ ಮಾಡಿಕೊಳ್ಳುವುದು ಪ್ರತಿಯೊಂದು ಬುಡಕಟ್ಟುಗಳಲ್ಲೂ ಕಂಡುಬರುತ್ತದೆ. ಈ ವ್ಯವಸ್ಥೆಯು ಆರಂಭದ ಮಾನವನ ಜೀವನ ವಿಧಾನವು ಆಗಿತ್ತು. ಆದರೆ ಇಂದು ವ್ಯವಸ್ಥೆ ಬದಲಾಗಿದೆ. ಅಲೆಮಾರಿತನವನ್ನು ಬಿಟ್ಟು ಮಾನವ ಒಂದು ಕಡೆ ನೆಲೆ ನಿಂತಿದ್ದಾನೆ. ಆರಂಭದ ಕಾಲಘಟ್ಟದಲ್ಲಿ ಅದರಲ್ಲೂ ಬುಡಕಟ್ಟುಗಳಲ್ಲಿ ಇಂತಹ ಹತ್ತು ಹಲವಾರು ವಿಧಿ ವಿಧಾನಗಳನ್ನು ಅನುಸರಿಸಿರುವುದನ್ನು ಕಾಣಬಹುದು. ಇದು ಬುಡಕಟ್ಟುಗಳ ವಾಸ ಸ್ಥಳಕ್ಕೆ ಸಂಬಂಧಿಸಿದ ಚರ್ಚೆಯಾದರೆ ಗ್ರಾಮ ಸಮಾಜದಲ್ಲಿ ವಾಸಿಸುತ್ತಿದ್ದ ಬಡವರು, ಶೋಷಿತರು ಮತ್ತು ಅಸ್ಪೃಶ್ಯರ ವಾಸಸ್ಥಳದ ಆಯ್ಕೆ ಅತ್ಯಂತ ಭಿನ್ನವಾಗಿರುತ್ತಿತ್ತು(ಇದಕ್ಕೆ ಸಂಬಂಧಿಸಿದ ಇರುಳಿಗರು ವಾಸಿಸುವ ಪ್ರದೇಶಗಳು ಎಂಬ ಭಾಗದಲ್ಲಿ ಚರ್ಚಿಸಲಾಗಿದೆ).

ಅಡವಿ ಚೆಂಚರನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸಲು ಕೆಲವು ಪ್ರಮುಖ ಕಾರಣಗಳಿವೆ. ೧೮೦೧ರ ಕಾಲಘಟ್ಟದಲ್ಲಿ ಬುಕಾನನ್ ರಾಮಗಿರಿ ದುರ್ಗಕ್ಕೆ ಬಂದಾಗ ಅಲ್ಲಿದ್ದ ಇರುಳಿಗರು ಕಾಡ್ ಇರುಳಿಗರು ಮತ್ತು ಕಾಡ್ ಚೆನ್ಸುಗಳು ಎಂದು ತಮ್ಮನ್ನು ತಾವೇ ಕರೆದುಕೊಳ್ಳುತ್ತಾರೆ. ಇರುಳಿಗರು ಯಾಕೆ ಕಾಡ್ ಚೆನ್ಸುಗಳು ಎಂದು ಕರೆದುಕೊಂಡರು, ಕಾಡ್ ಚೆನ್ಸುಗಳು ಅನ್ನುವುದು ಚೆಂಚರಿಗೆ ಸಂಬಂಧಿಸಿದ್ದ, ಚೆನ್ಸು ಅಥವಾ ಚೆಂಚು ಬೇರೆ ಬೇರೆನಾ ಅಥವಾ ಕಾಡ್ ಚೆನ್ಸು ಎಂದು ಇರುಳಿಗರು ತಮ್ಮನ್ನು ತಾವೇ ಕರೆಯುತ್ತಾರೆ ಎಂದು ಬುಕಾನನ್ ತಪ್ಪಾಗಿ ದಾಖಲಿಸಿ ಕೊಂಡಿದ್ದಾರೆ. ಅಥವಾ ಚೆಂಚು, ಚೆನ್ಸು, ಇರುಳ ಮತ್ತು ಇರುಳಿಗ ಒಂದೇ ಆಗಿದೆಯಾ ಎಂಬ ಹಲವಾರು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಜೊತೆಗೆ ೧೯೧೪ರ ಜನಗಣತಿಯಲ್ಲಿ ಉತ್ತರ ಆರ್ಕಾಟ್ ಮತ್ತು ಮೈಸೂರಿನಲ್ಲಿರುವ ಇರುಳಿಗರು ಚೆಂಚರೇ ಆಗಿದ್ದಾರೆ ಎಂದು ದಾಖಲಿಸಲಾಗಿದೆ. ಇಂತಹ ಹಲವು ದ್ವಂದ್ವವನ್ನು ಬಗೆಹರಿಸುವ ಹಿನ್ನೆಲೆಯಲ್ಲಿ ಇರುಳಿಗ ಮತ್ತು ಚೆಂಚು ಬುಡಕಟ್ಟುಗಳ ಕುರಿತು ತೌಲನಕ ಅಧ್ಯಯನ ಕೈಗೊಳ್ಳಲಾಗಿದೆ. ಅಡವಿ ಚೆಂಚರ ಐತಿಹ್ಯ ಪುರಾಣ, ದೇವರು, ನಂಬಿಕೆ, ಆಚಾರ ವಿಚಾರಗಳನ್ನು ಇರುಳಿಗರ ಆಚಾರ ವಿಚಾರ ಗಳೊಂದಿಗೆ ತೌಲನಿಕ ಅಧ್ಯಯನ ಮಾಡುವ ಅಗತ್ಯತೆ ಇದೆ. ಆದ್ದರಿಂದ ಇರುಳಿಗ ಮತ್ತು ಅಡವಿಚೆಂಚರ ತೌಲನಿಕ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ. ಸೋಲಿಗರನ್ನು ಇರುಳಿಗ ರೊಂದಿಗೆ ತೌಲನಿಕ ಅಧ್ಯಯನ ಮಾಡಲು ಪ್ರಮುಖ ಕಾರಣಗಳು ಈ ಕೆಳಕಂಡಂತೆ ಕಂಡುಬರುತ್ತವೆ.

ಇರುಳಿಗರ ಐತಿಹ್ಯ, ಪುರಾಣಗಳಲ್ಲಿ ಸೋಲಿಗರ ಪ್ರಸ್ತಾಪವು ಹೆಚ್ಚಾಗಿ ಕಂಡುಬರುತ್ತದೆ. ಇರುಳಿಗ ಮತ್ತು ಸೋಲಿಗರು ಮೂಲತಃ ಒಂದೇ ತಾಯಿಯ ಮಕ್ಕಳಾಗಿದ್ದುದರ ಬಗ್ಗೆ ವಕ್ತೃಗಳು ಹೇಳುತ್ತಾರೆ. ಇರುಳಿಗ ಮತ್ತು ಸೋಲಿಗರಲ್ಲಿ ಕಾರಯ್ಯ ಮತ್ತು ಬಿಲ್ಲಯ್ಯರು ಮೂಲಪುರುಷರಾಗಿ ಕಂಡುಬಂದು ಇವರು ಪರಸ್ಪರ ಸೋಲಿಗ ಮತ್ತು ಇರುಳಿಗ ಬುಡಕಟ್ಟಿನ ವ್ಯಕ್ತಿಗಳಾಗಿ ಕಂಡುಬರುತ್ತಾರೆ. ಇವರುಗಳು ಮೂಲಗಳಲ್ಲಿ ಒಂದೇ ರೀತಿಯ ಐತಿಹಾಸಿಕ ಅಂಶಗಳು ಮತ್ತು ಕೆಲವು ಸಾಂಸ್ಕೃತಿಕ ಚರಿತ್ರೆಯನ್ನು ವಿವರಿಸುತ್ತಾರೆ. ಆ ನಿಟ್ಟಿನಲ್ಲಿ ಇರುಳಿಗ ಮತ್ತು ಸೋಲಿಗರ ಸಂಬಂಧವನ್ನು ತಿಳಿಯಲು ತೌಲನಿಕ ಅಧ್ಯಯನ ಮಾಡಲಾಗಿದೆ.

ಇರುಳ, ಇರುಳಾಸ್, ಇರುಳರ್ ಮತ್ತು ಇರುಳಿಗರು ಒಂದೇನಾ ಅಥವಾ ಬೇರೆ ಬೇರೆನಾ ಎಂಬ ಪ್ರಶ್ನೆ ಎದುರಾಗಿದೆ. ಇರುಳ ಮತ್ತು ಇರುಳಿಗರ ಬಗ್ಗೆ ಅಧ್ಯಯನ ಕೈಗೊಂಡಿರುವ ಕೆಲವು ವಿದ್ವಾಂಸರು ತಮ್ಮದೇ ಅಭಿಪ್ರಾಯ ನೀಡುತ್ತಾರೆ. ಸಿದ್ಧಗಂಗಯ್ಯ ಕಂಬಾಳರು ತಮ್ಮ ಕೃತಿ ಇಲ್ಲಿಗರ ಸಂಸ್ಕೃತಿಯಲ್ಲಿ ಇರುಳ ಮತ್ತು ಇಲ್ಲಿಗರು ಬೇರೆ ಬೇರೆ ಎಂದು ಪ್ರತಿಪಾದಿಸುತ್ತಾರೆ. ಇದಕ್ಕೆ ಅವರು ಕೆಲವು ಕಾರ್ಯಕಾರಣಿಕ ಸಂಬಂಧಗಳನ್ನು ನೀಡುತ್ತಾರೆ. ಹೆಚ್.ವಿ. ನಂಜುಂಡಯ್ಯನವರು ಬೆಂಗಳೂರು ಜಿಲ್ಲೆಯ ಕಾಡು ಪೂಜಾರಿಗಳನ್ನು ಸಂದರ್ಶಿಸಿ ಮಾಹಿತಿ ಪಡೆಯುವ ಹೊತ್ತಿಗೆ ಈ ಜನಾಂಗದವರು ತಮ್ಮನ್ನು ಇಲ್ಲಿಗರು, ಕಾಡು ಪೂಜಾರಿಗಳೆಂದು ಹೇಳಿಕೊಂಡಿದ್ದಾರೆ. ಕಾಡುಪೂಜಾರಿಗಳೆಂಬ ಹೆಸರಿದ್ದರೂ ನಂಜುಂಡಯ್ಯನವರು ಇರುಳಿಗರೆಂದೇ ದಾಖಲಿಸುತ್ತಾರೆ. ಹಾಗೇ ಗುರುತಿಸಲು ಇಲ್ಲಿಗರು ಎಂಬ ಪದ ಇರುಳಿಗ ಪದದ ರೂಪಾಂತರವೆಂದು ನಂಜುಂಡಯ್ಯನವರು ಭಾವಿಸಿರುವುದನ್ನು ಕಾರಣವಾಗಿರಬೇಕು. ಮತ್ತೊಬ್ಬ ವಿದ್ವಾಂಸರಾದ ಎಡ್ಗರ್ ಥರ್‌ಸ್ಟನ್ ಅವರು ಇರುಳಿಗರನ್ನು ಕುರಿತು ಹೇಳುವಾಗ, ಇರುಳಿಗರಿಗೆ ಪರ್ಯಾಯವಾಗಿ ಇಲ್ಲಿಗರೆಂದಾಗಲೀ, ಕಾಡು ಪೂಜಾರಿಗಳೆಂದಾಗಲಿ ಹೆಸರಿಲ್ಲ, ಬೆಂಗಳೂರು ಜಿಲ್ಲೆಯ ಕಾಡು ಪೂಜಾರಿಗಳು ಆಚರಿಸುವ ಸಂಪ್ರದಾಯಗಳು, ಆರಾಧನೆಗಳು, ವಿವಾಹ, ಜನನ, ಸೂತಕ, ಶವಸಂಸ್ಕಾರದ ವಿಧಿ ವಿಧಾನಗಳು ಅವರದ್ದೇ ಆದ ಉಪಸಂಸ್ಕೃತಿಯನ್ನು ಬಿಂಬಿಸುತ್ತವೆ. ಥರ್‌ಸ್ಟನ್ ಹೇಳುವ ನೀಲಗಿರಿಯ ಇರುಳರ ಜೀವನ ವಿಧಾನವು ಕಾಡು ಕುರುಬರು, ಜೇನುಕುರುಬರ ಜೀವನದ ರೀತಿನೀತಿಗಳನ್ನು ಹೋಲುವಂತಿದೆ. ನನಗೆ ಕ್ಷೇತ್ರಕಾರ್ಯ, ಸಂದರ್ಶನಗಳ ಸಮಯದಲ್ಲಿ ಯಾವೊಬ್ಬ ವಕ್ತೃವೂ ತಮ್ಮನ್ನು ಇರುಳಿಗನೆಂದು ಹೇಳಿಕೊಳ್ಳುವುದಿಲ್ಲ. ಸಂದರ್ಶಕರು ನೀವು ಇರುಳಿಗರಲ್ಲವೇ ಎಂದು ಕೇಳಿದಾಗ ಸರ್ಕಾರದ ಲೆಕ್ಕದಲ್ಲಿ ಹಾಗಂತ ಇದೆ. ನಾವು ಕಾಡು ಪೂಜಾರಿಗಳು, ಕಾಡಿಲಿಗರು ಎಂದು ಹೇಳಿಕೊಳ್ಳುತ್ತಾರೆ. ನೀಲಗಿರಿಯ ಇರುಳರು ಥರ್‌ಸ್ಟನ್ ಹೇಳಿರುವಂತೆ ಅಪಭ್ರಂಶ ತಮಿಳನ್ನು ಮಾತನಾಡಿದರೆ ಬೆಂಗಳೂರು ಜಿಲ್ಲೆ ಕಾಡುಪೂಜಾರಿಗಳು, ಇಲ್ಲಿಗರು ಕನ್ನಡದ ಉಪಭಾಷೆಯಂತಿರುವ ಭಾಷೆಯೊಂದನ್ನು ಮಾತನಾಡುತ್ತಾರೆ. ಈ ಮೇಲಿನ ಎಲ್ಲಾ ಕಾರಣಗಳಿಂದ ಇರುಳ, ಇರುಳಾಸ್, ಇರುಳರ ಮತ್ತು

ಇರುಳಿಗರು ಬೇರೆ ಬೇರೆಯಾಗಿದ್ದ ಇವರಿಗೆ ಪರಸ್ಪರ ಸಂಬಂಧವಿಲ್ಲ ಎಂದು ಹೇಳುತ್ತಾರೆ. ಇದರ ಜೊತೆಗೆ ಭೈರೇಗೌಡ ಎಂ. ಅವರು ತಮ್ಮ ಇರುಳಿಗರ ಜಾನಪದ ಅಧ್ಯಯನ ಎಂಬ ಕೃತಿಯಲ್ಲಿ ಸಿದ್ಧಗಂಗಯ್ಯ ಅವರ ಮಾತನ್ನು ಒಪ್ಪಲಾಗದಿದ್ದರೂ ಸಾರಾಸಗಟಾಗಿ ತಿರಸ್ಕರಿಸಲು ಸಾಧ್ಯವಿಲ್ಲ ಎನ್ನುತ್ತಾರೆ.

ಹಾಗೆಯೇ ಮಾಗಡಿ ಭಾಗದಲ್ಲಿರುವ ಇರುಳಿಗರಿಗೂ ಉತ್ತರ ಕನ್ನಡ ಜಿಲ್ಲೆಯ ಸಿದ್ಧಿಯರಿಗೂ ದೈಹಿಕ ಲಕ್ಷಣ ಒಂದೇ ಆಗಿದೆ. ಇವರಿಬ್ಬರಿಗೂ ಸಂಬಂಧವಿರುವ ಸಾಧ್ಯತೆಗಳಿವೆ ಎಂದು ಅಭಿಪ್ರಾಯಿಸುತ್ತಾರೆ.[೩]

ಹೀಗೆ ಇರುಳ, ಇರುಳಾಸ್, ಇರುಳಾರ್ ಮತ್ತು ಇರುಳಿಗರು ಎಂಬ ಪದನಾಮಗಳಿಂದ ಬೇರೆ ಬೇರೆ ವಾದಗಳು ಮತ್ತು ಗ್ರಹಿಕೆಗಳು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಇದರ ಬಗ್ಗೆ ತೌಲನಿಕ ಅಧ್ಯಯನ ಅತ್ಯಂತ ಜರೂರಾಗಿದ್ದು ಆ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಇರುಳಾಸ್-ಇರುಳಿಗರ, ಸೋಲಿಗ-ಇರುಳಿಕ, ಅಡವಿ ಚೆಂಚು-ಇರುಳಿಗರ ಕುರಿತು ತೌಲನಿಕ ಅಧ್ಯಯನ ಕೈಗೊಂಡಿರುವ ಈ ಸಂದರ್ಭದಲ್ಲಿ ವಾಸಿಸುವ ಭೂಪ್ರದೇಶಗಳು, ಮಾತನಾಡುವ ಭಾಷೆ, ಕುಲ ಮತ್ತು ಬೆಡಗುಗಳು, ಕುಲದೇವತೆಗಳು ಮತ್ತು ಪರಸ್ಪರ ಜೀವನಾವರ್ತಕ ಆಚರಣೆಗಳನ್ನು ಚಾರಿತ್ರಿಕ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ತೌಲನಿಕ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಚೆಂಚರು ವಾಸಿಸುವ ಭೂಪ್ರದೇಶಗಳು

ಅಡವಿ ಚೆಂಚರು ಸಾಮಾನ್ಯವಾಗಿ ದಕ್ಷಿಣ ಪ್ರಸ್ಥಭೂಮಿಯಿಂದ ಕೃಷ್ಣ ನದಿಯ ದಕ್ಷಿಣದ ಪ್ರದೇಶದವರೆಗೂ ವಾಸಿಸುವುದನ್ನು ಕಾಣಬಹುದಾಗಿದೆ. ಇದರ ಜೊತೆಗೆ ಆಂಧ್ರದ ನೆಲ್ಲೂರು, ವಿಶಾಖಪಟ್ಟಣ, ನಲ್ಲಾ ಮಲ್ಯೆ ಬೆಟ್ಟ ಮತ್ತು ಶ್ರೀಶೈಲ ಬೆಟ್ಟದಲ್ಲಿ ಕಂಡುಬರುತ್ತಾರೆ. ಚೆಂಚರು ಕರ್ನಾಟಕದಲ್ಲಿ ವಿಜಯಪುರ, ಧಾರವಾಡ, ಹುಬ್ಬಳ್ಳಿ, ಗದಗ, ಬಾಗಲಕೋಟೆ, ಖಾನಾಪುರ, ರಾಯಚೂರು, ಗುಲಬರ್ಗಾ, ಬಳ್ಳಾರಿ, ಚಿಕ್ಕಮಗಳೂರು, ಮೈಸೂರು ಭಾಗದಲ್ಲಿ ಕಂಡುಬರುತ್ತಾರೆ. ಹಾಗೂ ಮುಂಬೈ ಮತ್ತು ಬ್ರಿಟಿಶ್ ಸೆಟೆಲ್‌ಮೆಂಟ್‌ಗಳಲ್ಲೂ ಕಂಡುಬರುತ್ತಾರೆ.[೪]

ಅಡವಿ ಚೆಂಚರು ಅರ್ಕಾಟ್ ಪ್ರದೇಶ ಮತ್ತು ಶ್ರೀಶೈಲ ಪ್ರದೇಶಗಳಲ್ಲಿನ ಇರುಳಿಗರೊಂದಿಗೆ ಸಂಬಂಧವಿದ್ದು ಇರುಳಿಗರು, ಚೆಂಚರು, ಚೆಂಚರು ಇರುಳಿಗರು ಅಥವಾ ಈ ಭಾಗದಲ್ಲಿ ವಾಸಿಸುವ ಎಲ್ಲರನ್ನು ಚೆನ್ಸುಗಳು ಎಂದು ಕರೆಯಲಾಗಿದೆ ಎಂಬುದನ್ನು ಪ್ರಹ್ಲಾದ್ ಬೆಟಗೇರಿ ಅವರು ತಮ್ಮ ಕೃತಿಯಾದ ಅಡವಿ ಚೆಂಚರ ಸಂಸ್ಕೃತಿ ಎಂಬುದರಲ್ಲಿ ವಿವರಿಸಿದ್ದಾರೆ. ಅದೇನೆಂದರೆ "ಮರಗೊಲ್ಲ, ಯನಾಡಿ, ಇರುಳ, ಬೆಕ್ಕು ಚೆಂಚು, ಲಂಬಾಡಿ ಮುಂತಾದ ಬುಡಕಟ್ಟಿನವರನ್ನು

ಒಟ್ಟಾಗಿ ಚೆನ್ಸುಗಳು ಎಂದು ಕರೆಯಲಾಗಿದೆ. ಇಲ್ಲಿ ಅಧ್ಯಯನಕಾರರು ಬೆಕ್ಕು ಚೆಂಚರನ್ನು ಅಡವಿ ಚೆಂಚರೆಂದು ಕರೆದು ಅಧ್ಯಯನ ಮಾಡಿರುವುದು ಗೊತ್ತಾಗುತ್ತದೆ."[೫] ಆದ್ದರಿಂದ ಈ ಪ್ರದೇಶದಲ್ಲಿ ವಾಸಿಸುತ್ತಿರುವ ಬೆಕ್ಕು ಚೆಂಚರು ಮತ್ತು ಅಡವಿ ಚೆಂಚರು ಒಂದೇನೇ ಆಗಿದ್ದರೆ ಅಡವಿಚೆಂಚರ ಜನಸಂಖ್ಯೆ ಎಷ್ಟು? ಅವರಿಗೂ ಇರುಳಿಗರಿಗೂ ಸಂಬಂಧವಿದೆಯಾ ಅಥವಾ ಚೆಂಚರ ಅಧ್ಯಯನ ಕೈಗೊಂಡಿರುವ ಅಧ್ಯಯನಕಾರರು ಚೆಂಚರ ರೀತಿನೀತಿಗಳು ಬಿಟ್ಟು ಆ ಪ್ರದೇಶದಲ್ಲಿ ಕಂಡುಬರುವ ಇರುಳಿಗರನ್ನು ಚೆಂಚರು ಎಂದು ಅಧ್ಯಯನ ಮಾಡಿದ್ದಿರಬಹುದು ಎಂಬ ಸಂಶಯ ಮೂಡುತ್ತದೆ. ಆ ಪ್ರದೇಶದಲ್ಲಿ ಕಂಡುಬರುವ ಬೆಕ್ಕು ಚೆಂಚರಿಗೂ ಅಡವಿಚೆಂಚರಿಗೂ ಸಂಬಂಧವಿದೆಯಾ ಅಥವಾ ಇಲ್ಲವೋ ಎಂಬುದನ್ನು ಕಂಡುಹಿಡಿಯುವುದಕ್ಕೆ ಪ್ರತ್ಯೇಕವಾದ ಅಧ್ಯಯನದ ಅವಶ್ಯಕತೆ ಇದೆ. ಚೆಂಚರು, ಚೆನ್ಸುಗಳಾಗಿದ್ದರೆ ಆರ್ಕಾಟ್ ಮತ್ತು ಶ್ರೀಶೈಲ ಭಾಗದಲ್ಲಿ ವಾಸಿಸುವ ಇರುಳಿಗರೊಂದಿಗೆ ನಂಟರಿರಬಹುದು. ಇದರ ಬಗ್ಗೆ ತಿಳಿದುಕೊಳ್ಳಲು ಪ್ರತ್ಯೇಕವಾದ ಅಧ್ಯಯನದ ಅವಶ್ಯಕತೆಯಿದೆ.

ಸೋಲಿಗರು ವಾಸಿಸುವ ಭೂಪ್ರದೇಶ

ಸೋಲಿಗರು ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಕೇರಳದಲ್ಲಿ ಕಂಡುಬರುತ್ತಾರೆ. ಕರ್ನಾಟಕದಲ್ಲಿ ಬೆಂಗಳೂರು, ಮೈಸೂರು, ಚಾಮರಾಜನಗರ, ಮಂಡ್ಯ, ತುಮಕೂರು, ಶಿವಮೊಗ್ಗ, ಚಿಕ್ಕಮಗಳೂರು, ಬಿಜಾಪುರ, ಧಾರವಾಡ, ನಾರ್ತ್‌ಕೆನರಾ, ಬೀದರ್, ಗುಲಬರ್ಗಾ, ರಾಯಚೂರು, ಕೋಲಾರ, ಚಿತ್ರದುರ್ಗ, ಮಡಿಕೇರಿ, ಮಂಗಳೂರು ಮತ್ತು ಅತೀ ಹೆಚ್ಚಾಗಿ ಕೊಳ್ಳೆಗಾಲ ಮತ್ತು ಬಿಳಿಗಿರಿರಂಗನ ಬೆಟ್ಟದಲ್ಲಿ ಕಂಡುಬರುತ್ತಾರೆ.[೬] ಸೋಲಿಗರು ವಾಸಿಸುವ ಪ್ರದೇಶಗಳಿಗೂ ಇರುಳಿಗರಿಗೂ ಸಂಬಂಧವಿದೆ. ಸೋಲಿಗರು ಅಣ್ಣಮಲೈ ಬೆಟ್ಟ ಸಾಲಿನವರಾಗಿದ್ದರಿಂದ ಕಾವೇರಿ ನದಿಯ ಆಸುಪಾಸಿನಲ್ಲಿ ಬಾಳಿ ಬದುಕಿ ಕಾರಣಾಂತರಗಳಿಂದ ಬೇರೆಯಾಗಿರುವುದನ್ನು ಕಾಣಬಹುದು. ಇರುಳಿಗರು, ಸೋಲಿಗರು, ಕಾಡುಕುರುಬರು, ಜೇನುಕುರುಬರು ಮೂಲ ಒಂದೇ ಆಗಿದೆ ಯಾವುದೋ ಒಂದು ಸಾಂಸ್ಕೃತಿಕ ಕಾಲಘಟ್ಟದಲ್ಲಿ ಸೋಲಿಗ ಮತ್ತು ಇರುಳಿಗರು ಬೇರೆಯಾಗಿದ್ದು ಪರಸ್ಪರ ವಾಸಿಸುವ ಪ್ರದೇಶಗಳು ಬೇರೆ ಬೇರೆಯಾಗಿರುವುದಕ್ಕೆ ವಕ್ತೃಗಳು ಹೇಳುತ್ತಾರೆ. ಸೋಲಿಗರು ಮತ್ತು ಇರುಳಿಗರು ಇಂದಿಗೂ ಒಂದೇ ಕಡೆ ಪಾರಂಪರಿಕವಾಗಿ ವಾಸಿಸಿಕೊಂಡು ಬದುಕುತ್ತಿರುವುದನ್ನು ಕಾಣಲು ಸಾಧ್ಯವಿಲ್ಲ.

ಇರುಳಾಸ್(ಇರುಳ) ವಾಸಿಸುವ ಭೂಪ್ರದೇಶ

ಇರುಳರು ಕರ್ನಾಟಕ ಕೇರಳ, ತಮಿಳುನಾಡು, ಆಂಧ್ರ ಪ್ರದೇಶದಲ್ಲಿ ಕಂಡುಬರುತ್ತಾರೆ. ಪ್ರಮುಖವಾಗಿ ನೀಲಗಿರಿ ಬೆಟ್ಟ ಸೌತ್ ಅರ್ಕಾಟ್ ಮತ್ತು ನಾರ್ತ್ ಆರ್ಕಾಟ್, ಚೆಂಗಲ್ ಪೇಟೆ, ಕೊಯಮತ್ತೂರು, ಸೇಲಂ, ಧರ್ಮಪುರಿ, ಕೃಷ್ಣಗಿರಿ, ಚೆನ್ನೈ, ಮಧುರೆ ಒಳಗೊಂಡಂತೆ

ಕರ್ನಾಟಕಕ್ಕಿಂತಲೂ ತಮಿಳುನಾಡಿನಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇರುಳರು ವಾಸಿಸುವ ಪಾರಂಪರಿಕ ಪ್ರದೇಶಗಳೆಂದರೆ ಮಲೆನಾಡು, ಸೀರ್ರುಡಿನಾಡು, ವೆಲ್ಲೂರುನಾಡು, ಮಲ್ಲಿಕೋಟೈನಾಡು, ಪಾಕನೇರಿ, ಕಂಡ್ರಮಾನಿಕಮ್ ಅಥವಾ ಕನ್ನಾರ್‌ಕೊಟ್ಯೆನಾಡು, ಪರಮಲ್ಯೆನಾಡು, ತನ್ನಿರೈನಾಡು ಮತ್ತು ಪಾಲೈನಾಡುಗಳಲ್ಲಿ ಕಂಡುಬರುತ್ತಾರೆ.[೭] ಇದರ ಜೊತೆಗೆ ಕೇರಳದ ವೈನಾಡು ಮತ್ತು ಮಲಬಾರು ಪ್ರದೇಶಗಳಲ್ಲೂ ಕಂಡುಬರುತ್ತಾರೆ. ಇರುಳಿಗರಿಗೂ ಕಾವೇರಿ ನದಿಗೂ ಅತ್ಯಂತ ಪಾರಂಪರಿಕ ಸಂಬಂಧವಿದೆ. ಕಾವೇರಿ ನದಿಯು ಆರಂಭವಾಗುವ ಭಾಗದಿಂದ ಅದು ಬಂಗಾಳ ಕೊಲ್ಲಿ ಸಮುದ್ರ ಸೇರುವವರೆಗೂ ಇರುಳಿಗರು ಕಾವೇರಿ ನದಿಯ ಆಸುಪಾಸಿನಲ್ಲಿ ಕಂಡುಬರುತ್ತಾರೆ. ಕಾವೇರಿಯು ಕರ್ನಾಟಕದಿಂದ ಆರಂಭವಾಗಿ ತಮಿಳುನಾಡು ಸೇರುವ ಪ್ರದೇಶವಾದ ಮೈಸೂರು, ಮಂಡ್ಯ, ರಾಮನಗರ, ಕೃಷ್ಣಗಿರಿ, ಸೇಲಂ, ನೀಲಗಿರಿಯ ಭಾಗದಲ್ಲಿ ಇರುಳಿಗರು ಅತಿಹೆಚ್ಚಾಗಿ ಕಂಡುಬರುತ್ತಾರೆ. ಆದಾಗ್ಯೂ ಬೇರೆ ಭಾಗದಲ್ಲಿ ಇರುಳರು ನೆಲೆಸಿದ್ದರೂ ಅವರ ಮೂಲಸ್ಥಳ ಈ ಕಾವೇರಿ ನದಿಯ ಸಮೀಪವೇ ಆಗಿರುತ್ತದೆ. ಅದು ಕರ್ನಾಟಕ, ಕೇರಳ, ತಮಿಳು, ಆಂಧ್ರದ ಭಾಗದಲ್ಲೇ ವಾಸ ಮಾಡುತ್ತಿದ್ದರು. ಬೆಂಗಳೂರು ಮತ್ತು ರಾಮನಗರ ಜಿಲ್ಲೆಯಲ್ಲಿ ವಾಸಿಸುವ ಇರುಳಿಗರು ತಮಿಳುನಾಡಿನ ಇರುಳರೊಂದಿಗೆ ವೈವಾಹಿಕ ಸಂಬಂಧವನ್ನು ಇಂದಿಗೂ ಮಾಡುತ್ತಾ ಬಂದಿದ್ದಾರೆ.

ಒಟ್ಟಾರೆಯಾಗಿ ಅಡವಿಚೆಂಚರು, ಸೋಲಿಗರು, ಇರುಳರು ಮತ್ತು ಇರುಳಿಗ ವಾಸಸ್ಥಳಗಳ ಅಧ್ಯಯನ ಮಾಡಿದಾಗ, ಇರುಳಿಗರು ವಾಸಿಸುವ ಪ್ರದೇಶಗಳಲ್ಲಿ ದೊಡ್ಡಿ, ಹಳ್ಳಿ ಸಡ್ಡು, ಪಾಳ್ಯ, ಕಾಲೋನಿ ಎಂಬ ಹೆಸರುಗಳಿಂದ ಕರೆದರೆ ಸೋಲಿಗರು ವಾಸಿಸುವ ಪ್ರದೇಶಗಳನ್ನು ಜಮ್ಮ, ಪೋಡು, ಹಾಡಿ ಎಂಬ ಹೆಸರುಗಳಿಂದ ಕರೆಯುತ್ತಾರೆ. ಅದೇ ರೀತಿಯಲ್ಲಿ ಅಡವಿ ಚೆಂಚರು ವಾಸಿಸುವ ಪ್ರದೇಶಗಳ ಪ್ಲಾಟಿ, ಸೆಟಲ್‌ಮೆಂಟ್, ಹಾಡಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ.

೭.೨. ಇರುಳ, ಚೆಂಚು, ಸೋಲಿಗ ಮತ್ತು ಇರುಳಿಗರ ಉಡುಗೆ–ತೊಡುಗೆಗಳು

ಅಡವಿ ಚೆಂಚರ ಉಡುಗೆ ತೊಡುಗೆಗಳು

ಅಡವಿ ಚೆಂಚರ ವಸ್ತ್ರವಿನ್ಯಾಸವು ಲಂಬಾಣಿ ಮತ್ತು ಗುಜರಾತಿನ ಮಹಿಳೆಯರ ವಸ್ತ್ರವಿನ್ಯಾಸದ ಅನುಕರಣೆಯಂತೆ ಕಂಡುಬರುತ್ತದೆ. ಅಂದಮಾತ್ರಕ್ಕೆ ಅವರಿಂದಲೇ ಅನುಕರಿಸಿದ್ದಾರೆ ಎಂದು ಹೇಳುವುದು ನನ್ನ ಉದ್ದೇಶವಲ್ಲ. ಆದಿವಾಸಿಗಳು ಪಾರಂಪರಿಕವಾದ ಉಡುಗೆ ತೊಡುಗೆಗಳನ್ನು ಉಳಿಸಿಕೊಂಡು ಬಂದವರಾಗಿರುತ್ತಾರೆ ಎಂಬ ಸಾಮಾನ್ಯ ಜ್ಞಾನವಿದೆ. ಉಡುಗೆ ತೊಡುಗೆಗಳು ಒಂದೊಂದು ಪ್ರಾದೇಶಿಕತೆ ಮತ್ತು ಸಮುದಾಯಕ್ಕೂ ಭಿನ್ನವಾಗಿರುತ್ತವೆ. ಆಯಾ ಪ್ರದೇಶದಲ್ಲಿ ಸಿಗುವ ವಸ್ತುಗಳು ಆಯಾಯ ಸಮುದಾಯಗಳ ಪಾರಂಪರಿಕ ಉಡುಗೆ ತೊಡುಗೆಗಳಾಗಿರುತ್ತವೆ. ಆ ಹಿನ್ನೆಲೆಯಲ್ಲಿ ಅಡವಿಚೆಂಚರ ಉಡುಗೆತೊಡುಗೆಗಳು ಲಂಬಾಣಿ ಮತ್ತು ಗುಜರಾತಿ ಮಹಿಳೆಯರ

ಉಡುಗೆ ತೊಡುಗೆಯೊಂದಿಗೆ ಸಾಮ್ಯತೆ ಹೊಂದುತ್ತವೆ. ಇವರು ಬುಗಡಿ, ಲೋಲಕ್ಯಾ ತಾಂಬೂಲ್ಯಾ ಬೆಂಡೋಲ್ಯ, ಬುಗುಡ್ಯಾ(ಬುಗುಡಿ ಕಟ್ಟೆ), ಕಾನಡಾಮ್, ನಾಪೋಲ್(ಬೆಂಡೋಲೆ), ಚಂದ್ರ ಮೂಗುತಿ, ಕಾಳಾ ಚಿಡಿಯ್ಯಾ(ಕರಿಮಣಿ), ಪದಕಾ ಗುಂಡು, ಸುತ್ತುಂಗರಾ ಪಲ್ಯಾ(ಕೆಂಪು ಹವಳದ ಮಣಿಸರ, ಬಂಗಾರದ ಗುಂಡುಗಳು), ಸೂಡಿ, ಚೂಡಿ(ಬಳೆ), ಇಂಟೀ(ಉಂಗುರಾ), ಪೆಜಣ್(ಕಾಲೊಜ್ಜೆ),[೮] ಮುಂತಾದ ಆಭರಣಗಳು ಬಳಸುತ್ತಾರೆ. ಇವರು ಇರುಳಿಗರಿಗಿಂತ ಸಂಪೂರ್ಣವಾಗಿ ಭಿನ್ನವಾಗಿ ಕಂಡುಬರುತ್ತಾರೆ. ಆರ್ಥಿಕವಾಗಿ ಹಿಂದುಳಿದಿರುವ ಇರುಳಿಗರು ಕೈಯಣ್ಣೆ(ಹರಳೆಣ್ಣೆ)ಯನ್ನು ತಲೆಗೆ ಇಟ್ಟುಕೊಂಡು, ಹಣೆಗೆ ಕುಂಕುಮ, ಕತ್ತಲ್ಲಿ ಇತ್ತೀಚೆಗೆ ಕರಿಮಣಿ ಒಂದು ತಗ್ಗಿದ ತಾಳಿ, ಅದನ್ನು ಬಿಟ್ಟರೆ ಮೂಗುತಿ, ಆಗೊಮ್ಮೆ ಯಾರಾದರೂ ಸ್ಥಿತಿವಂತರಾಗಿದ್ದಾರೆ ಓಲೆ, ಮೂಗುತಿ, ಡಾಬು, ತೋಳುಬಂದಿ, ಕಾಲ್ಗೆಜ್ಜೆ, ಕಾಲುಮುರಿ ಮುಂತಾದ ಬೆಳ್ಳಿ ಅಥವಾ ಹಿತ್ತಾಳೆ ಆಭರಣಗಳನ್ನು ಹಾಕಿಕೊಳ್ಳುತ್ತಾರೆ.

ಉಡುಗೆ ತೊಡುಗೆಯ ಬಗ್ಗೆ ಇರುಳಿಗರ ವಕ್ತೃಗಳನ್ನು ಕೇಳಿದರೆ ನಮಗೆ ಬಟ್ಟೆ ಎಲ್ಲಿತ್ತು ಸ್ವಾಮಿ ತೇಗದ ಎಲೆಯೇ ನಮ್ಮ ಬಟ್ಟೆ; ಅದನ್ನೇ ಬಟ್ಟೆ ಅಂತ ತಿಳ್ಕೊಂಡು ಸೊಂಟದ ಕೆಳಗೆ ಮುಚ್ಚಿಕೊಳ್ಳುತ್ತಿದ್ದೆವು ಎನ್ನುತ್ತಾರೆ. ಬುಕಾನನ್ ಇರುಳಿಗರ ಉಡುಗೆ ತೊಡುಗೆ ಬಗ್ಗೆ ಹೀಗೆ ಹೇಳುತ್ತಾನೆ. ಒಂದು ತುಂಡು ಬಟ್ಟೆಯಿಂದ ಇಡಿ ದೇಹವನ್ನು ಮುಚ್ಚಿಕೊಳ್ಳುತ್ತಿದ್ದರು. ಹೆಂಗಸರು ಮರದ ಎಲೆ ಅಥವಾ ಲುಂಗಿ ದುಂಡಿನಿಂದ ಸೊಂಟದ ಭಾಗ ಮುಚ್ಚಿಕೊಂಡರೆ ಗಂಡಸರು ಅದೇ ಲುಂಗಿ ತುಂಡನ್ನು ಸೊಂಟದ ಕೆಳಗಿನ ಭಾಗವನ್ನು ಮಾತ್ರ ಮುಚ್ಚಿಕೊಳ್ಳುತ್ತಿದ್ದರು ಎಂದಿದ್ದಾರೆ. ಚೆಂಚರಿಗೂ, ಇರುಳಿಗರಿಗೂ ಉಡುಗೆ ತೊಡುಗೆಯಲ್ಲೂ ಭಿನ್ನತೆಗಳನ್ನು ಗುರ್ತಿಸ ಬಹುದು. ಆದರೆ ಸೋಲಿಗರು ಮತ್ತು ಇರುಳಿಗರಿಗೆ ಉಡುಗೆ ತೊಡುಗೆಯಲ್ಲಿ ಯಾವುದೇ ಭಿನ್ನತೆಗಳನ್ನು ಕಾಣಲು ಸಾಧ್ಯವಿಲ್ಲ. ಪರಸ್ಪರ ಇಬ್ಬರು ಕಾಡಿನಲ್ಲಿ ಸಿಗುವ ಪಕ್ಷಿಗಳ ಪುಕ್ಕ, ಪ್ರಾಣಿಯ ಮೂಳೆಗಳನ್ನು ಅಲಂಕಾರಿಕಗಳಾಗಿ ಬಳಸುತ್ತಿದ್ದರ ಬಗ್ಗೆ ಹೇಳುತ್ತಾರೆ. ಆದರೆ ಗ್ರಾಮ ಮತ್ತು ನಗರಗಳ ಸಂಪರ್ಕವಾದಂತೆಲ್ಲ ಇವರು ಎಲ್ಲರಂತೆ ಉಡುಗೆ ತೊಡುಗೆಗಳನ್ನು ಅನುಸರಿಸುತ್ತಿರುವುದನ್ನು ಕಾಣಬಹುದು. ಇನ್ನು ಇರುಳ್ ಎಂದು ಬೇರೆಯಾಗಿ ಗುರ್ತಿಸುವ ಪ್ರಮೇಯವೇ ಇಲ್ಲ. ಇಬ್ಬರ ಉಡುಗೆ ತೊಡುಗೆಗಳು ಒಂದೇ ಆಗಿದೆ. ಪ್ರಾದೇಶಿಕತೆಯ ಆಧಾರದ ಮೇಲೆ ಈ ಭಾಗದ ಇರುಳಿಗರು, ಆ ಭಾಗದ ಇರುಳರು ಎಂದು ಹೇಳಬೇಕೆ ವಿನಃ ಇರುಳ ಮತ್ತು ಇರುಳಿಗ ಬೇರೆ ಬೇರೆಯಾಗಿ ನೋಡಬೇಕಾಗಿಲ್ಲ.

೭.೩. ಇರುಳ, ಚೆಂಚು, ಸೋಲಿಗ ಮತ್ತು ಇರುಳಿಗರ ಕುಲ ಮತ್ತು ಕುಲದೈವಗಳು

ಈ ಬೆಡಗುಗಳು, ಕುಲಗಳು ಸಮುದಾಯಗಳ ಒಳಗೆ ಕಾಲಕಾಲಕ್ಕೆ ಹುಟ್ಟಿಕೊಂಡಿರು ವಂಥವುಗಳೇ ಆಗಿವೆ. ಇವುಗಳ ಹುಟ್ಟಿಗೆ ಇತರ ಸಮುದಾಯಗಳ ಪ್ರಭಾವ, ಪಾರಂಪರಿಕ

ನಂಬಿಕೆಗಳು, ಸಾಂಸ್ಕೃತಿಕ ಪುರುಷರು ಮತ್ತು ಅವರ ಪಂಥಗಳು, ಆಹಾರ ಪದ್ಧತಿಗಳು ಮತ್ತು ಆಹಾರ ಕ್ರಮಗಳ ಅನುಕರಣೆ ಅಥವಾ ಪ್ರಾದೇಶಿಕತೆಯ ಪ್ರಭಾವಗಳು ಕಾರಣವಾಗಿರುವುದರಲ್ಲಿ ಯಾವುದೇ ಸಂಶಯವಿಲ್ಲ. ಸಮುದಾಯಗಳಲ್ಲಿ ಮೊದಲಿನಿಂದಲೂ ಈ ಕುಲ ಮತ್ತು ಬೆಡಗುಗಳು ಬಂದಿರಲು ಸಾಧ್ಯವಿಲ್ಲ. ಏಕೆಂದರೆ ಕಾಲಘಟ್ಟದಲ್ಲಿ ಗ್ರಾಮಕಲ್ಪನೆ ಅಥವಾ ಒಂದಾಗಿ ಬಾಳುವ ಹಿನ್ನೆಲೆಯಿಂದ ಈ ಕುಲಗಳು ಹುಟ್ಟಿಕೊಂಡಿರುವ ಸಾಧ್ಯತೆಗಳಿವೆ.

ಪ್ರಮುಖವಾಗಿ ಗ್ರಾಮ ಸಮಾಜದ ಕಲ್ಪನೆಯಲ್ಲಿ ಅಥವಾ ಒಟ್ಟಾಗಿ ಬದುಕುವ ಪ್ರಮೇಯಗಳು ಉಂಟಾದಾಗ ಈ ಕುಲಗಳು ಸೃಷ್ಟಿ ಆಗಿರುವುದರಲ್ಲಿ ಎರಡು ಮಾತಿಲ್ಲ. ಏಕೆಂದರೆ ಗ್ರಾಮ ಸಮಾಜದ ಒಳಿತಿಗೆ ಒಂದೊಂದು ಕುಟುಂಬ ಒಂದೊಂದು ವೃತ್ತಿಗಳ ಆಯ್ಕೆ ಮಾಡಿಕೊಳ್ಳುತ್ತದೆ. ಇದು ಮುಂದೆ ಆ ಸಮುದಾಯದೊಳಗೆ ಕುಲಗಳು ಅಥವಾ ಬೆಡಗುಗಳಾಗಿ ಪರಿಣಮಿಸುತ್ತದೆ. ಈ ಕುಲ ಮತ್ತು ಬೆಡಗುಗಳು ಗ್ರಾಮ ಸಮಾಜದಲ್ಲಿ ತನ್ನದೇ ಆದ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಆದರೆ ಇದು ಬುಡಕಟ್ಟು ಸಮಾಜದಲ್ಲಿ ಅಂತಹ ಪ್ರಾಮುಖ್ಯತೆಯನ್ನು ಉಂಟು ಮಾಡುವುದಿಲ್ಲ. ಗ್ರಾಮ ಸಮಾಜದಲ್ಲಿ ಕುಲಗಳನ್ನು ಮೀರಲು ಸಾಧ್ಯವಿಲ್ಲ. ಆದರೆ ಬುಡಕಟ್ಟುಗಳಲ್ಲಿ ಅಂತಹ ಕಟ್ಟುನಿಟ್ಟು ಕಂಡುಬರುವುದಿಲ್ಲ.

ಹಾಗೆಂದು ಬುಡಕಟ್ಟುಗಳ ಪ್ರಮುಖ ಎಂತಲೂ ಅಲ್ಲ. ಕುಲ, ಪಂಗಡಗಳು, ಆಚರಣೆಯ ಸಂದರ್ಭದಲ್ಲಿ ಪಾಲಿಸಲಾಗುತ್ತದೆ. ಒಂದೊಂದು ದೇವರು ಒಂದೊಂದು ಕುಲಗಳಾಗಿ ಗುರ್ತಿಸಿಕೊಳ್ಳುತ್ತವೆ. ಅದರಲ್ಲೂ ಬುಡಕಟ್ಟುಗಳಲ್ಲಿ ಒಕ್ಕಲುಗಳು ಪ್ರಮುಖ ಪಾತ್ರವಹಿಸುತ್ತವೆ. ಒಂದೊಂದು ದೇವರು ಒಂದೊಂದು ಒಕ್ಕಲನ್ನು ಪ್ರತಿನಿಧಿಸುತ್ತವೆ. ಆ ದೇವರಿನ ಒಕ್ಕಲಿನವು ಈ ದೇವರುಗಳಿಗೆ ಕೈಮುಗಿಯುವುದಿಲ್ಲ. ಕುಂಕುಮ ಇಟ್ಟುಕೊಳ್ಳುವುದಿಲ್ಲ. ಪೂಜೆ ಮಾಡದೇ ಕಟ್ಟುನಿಟ್ಟಾಗಿ ಕುಲಕಟ್ಟುಗಳಲ್ಲಿ ಆಚರಿಸಿಕೊಂಡು ಬರುತ್ತಾರೆ. ಬುಡಕಟ್ಟುಗಳ ಒಳಪಂಗಡಗಳು ಅಥವಾ ಕುಲಗಳು ಕಾಲಾನಂತರದಲ್ಲಿ ಹುಟ್ಟಿಕೊಂಡವುಗಳೇ ಆಗಿವೆ.

ಈ ಒಳಪಂಗಡಗಳು ಅಥವಾ ಕುಲಗಳು ತೌಲನಿಕ ಅಧ್ಯಯನದಲ್ಲಿ ಅತ್ಯಂತ ಪ್ರಮುಖ ವಾದವುಗಳಾಗಿವೆ. ಏಕೆಂದರೆ ಸಮುದಾಯದ ವಿಶಿಷ್ಟವಾದ ಭಿನ್ನತೆ ಮತ್ತು ಐಡೆಂಟಿಟಿಯನ್ನು ಗುರುತಿಸುವುದು ಈ ಕುಲ ಅಥವಾ ಒಳಪಂಗಡಗಳಿಂದ; ಅಂದಮಾತ್ರಕ್ಕೆ ಅವುಗಳೇ ಪ್ರಮುಖ ಎಂದು ವಾದಿಸುತ್ತಿಲ್ಲ. ಹಾಗೆಂದೂ ನಿರ್ಲಕ್ಷಿಸಲು ಸಾಧ್ಯವಿಲ್ಲ. ಈ ಕುಲಗಳು ಸಮುದಾಯಗಳ ಸಾಮ್ಯತೆ ಮತ್ತು ಪ್ರಾದೇಶಿಕತೆಯನ್ನು ನಿರ್ಧರಿಸುತ್ತವೆ. ಹಾಗೂ ಕುಲದೇವತೆಗಳನ್ನು ಗುರ್ತಿಸಿ ಸಮುದಾಯದ ವಿಶಿಷ್ಟವಾದ ಆಚರಣೆಗಳನ್ನು ಪ್ರತಿಪಾದಿಸಿ ಪ್ರತ್ಯೇಕತೆಯನ್ನು ಸೂಚಿಸುತ್ತವೆ. ಆ ಹಿನ್ನೆಲೆಯಲ್ಲಿ ಒಳಪಂಗಡ ಅಥವಾ ಕುಲಗಳ ತೌಲನಿಕ ಅಧ್ಯಯನದಲ್ಲಿ ಮಾಡಲಾಗಿದೆ.

ಅಡವಿ ಚೆಂಚರಲ್ಲಿ ಕಂಡುಬರುವ ಕುಲಗಳು ಅಥವಾ ಒಳಪಂಗಡಗಳು

ಅಡವಿ ಚೆಂಚರಲ್ಲಿ ನಾಲ್ಕು ವಿಭಾಗಗಳಿವೆ. ಅಡವಿ ಚೆಂಚರು, ಕೃಷ್ಣ ಚೆಂಚರು, ತೆಲುಗು ಚೆಂಚರು ಮತ್ತು ಬೊಂಟ ಚೆಂಚರು.[੯] ಆದರೆ ಇವರಲ್ಲಿ ಬೆಕ್ಕ ಚೆಂಚರು ಕಂಡುಬರುವುದಿಲ್ಲ. ಏಕೆಂದರೆ ಬೆಕ್ಕು ಚೆಂಚರು ಎಂಬುದು ನೀಲಗಿರಿ ಬೆಟ್ಟ ಅಥವಾ ಅಣ್ಣಾಮಲೈ ಬೆಟ್ಟ ಸಾಲಿನಲ್ಲಿ ಕಂಡುಬರುವ ಒಂದು ಬುಡಕಟ್ಟು, ಈ ಕಾರಣದಿಂದ ಬೆಕ್ಕು ಚೆಂಚು ಮತ್ತು ಅಡವಿ ಚೆಂಚರಿಗೂ ಭಿನ್ನ ಎನ್ನುವ ವಾದಕ್ಕೆ ಪುಷ್ಟಿ ಸಿಗುತ್ತದೆ. ಅಡವಿ ಚೆಂಚರಲ್ಲಿ ಕಂಡುಬರುವ ಬೆಗಡುಗಳೆಂದರೆ, ಪಿಂಪಳಜ್ಯಾ, ಖೋಡಿಯಾರ್, ಇಕೋತ್ಯಾ, ಸೌಂಡ್ಯಾ, ಹರಕ್ತಾ, ಕೊರಬ್ಯಾ, ಖಾಂಜಿಡಾಗರೋ ಮುಂತಾದ ಕುಲಗಳು ಕಂಡುಬರುತ್ತದೆ. ಈ ಕುಲಗಳೇ ಮೇಲುನೋಟಕ್ಕೆ ಬಯಲುಸೀಮೆಯ ಬುಡಕಟ್ಟುಗಳ ರೀತಿಯಿದ್ದು ಜೊತೆಗೆ ಉತ್ತರ ಭಾರತದ ಪ್ರಭಾವದಂತೆ ಕಂಡುಬರುತ್ತದೆ. ಅಡವಿಚೆಂಚರ ಕುಲಪಂಗಡಗಳಿಗೂ ಅಥವಾ ಒಳಪಂಗಡಗಳಿಗೂ ಇರುಳಿಗರ ಕುಲ ಮತ್ತು ಒಳಪಂಗಡಗಳಿಗೂ ಹೊಂದಾಣಿಕೆ ಕಂಡುಬರುವುದಿಲ್ಲ. ಅಡವಿಚೆಂಚರ ಒಳಪಂಗಡಗಳು ಅರಣ್ಯದ ಜೊತೆಗಿನ ಕುಲನಾಮಗಳು ವಿರಳವಾಗಿ ಕಂಡುಬಂದು ಜನ ಮತ್ತು ಸಮುದಾಯದ ಪ್ರಭಾವವನ್ನು ಹೋಲುವಂಥವುಗಳಾಗಿವೆ. ಹಾಗೂ ಅಡವಿ ಚೆಂಚರ ಕುಲದೈವಗಳು ರುಪ್ಪೋ, ಟಿಲ್ಲೋ, ಚಿಯ್ಯೋ, ಲಿಂಗ್ವಾಜ ಎಂಬ ಹೆಸರಿನ ದೈವಗಳನ್ನು ಪೂಜಿಸುತ್ತಾರೆ. ಈ ಯಾವ ದೈವಗಳು ಇರುಳಿಗರಲ್ಲಿ ಕಂಡುಬರುವುದಿಲ್ಲ. ಆದ್ದರಿಂದ ಇರುಳಿಗರಿಗೂ, ಅಡವಿ ಚೆಂಚರುಗಳಿಗೆ ಭಿನ್ನತೆಯು ಕಾಣಬಹುದಾಗಿದೆ.

ಸೋಲಿಗರಲ್ಲಿನ ಒಳಪಂಗಡಗಳು ಅಥವಾ ಕುಲಗಳು

ಸೋಲಿಗರಲ್ಲಿ ಪ್ರಮುಖವಾಗಿ ಪ್ರಾದೇಶಿಕತೆಗೆ ಅನುಗುಣವಾಗಿ ಐದು ಬಗೆಯ ಸೋಲಿಗರು ಕಾಣಬಹುದು. ಉರುಳಿ ಸೋಲಿಗರು, ಕಾಡುಸೋಲಿಗರು, ಮಲೆಸೋಲಿಗರು, ಊರುಬತ್ತಿ ಸೋಲಿಗರು ಮತ್ತು ಬುರುಡೆ ಸೋಲಿಗರು ಎಂಬ ಐದು ಬಗೆಯ ಸೋಲಿಗರು ಪ್ರಾದೇಶಿಕತೆಗೆ ತಕ್ಕಂತೆ ಕಂಡುಬರುತ್ತಾರೆ. ಹಾಗೆಯೇ ಇವರಲ್ಲಿ ಕಂಡುಬರುವ ಪ್ರಮುಖ ಒಳಪಂಗಡಗಳೆಂದರೆ ಹೊಂಗೆ ಕುಲ, ಆಲುರು ಕುಲ, ಬೆಲ್ಲರ ಕುಲ, ಸೂರ್ಯಕುಲ, ತನೇರು ಕುಲ, ಜೇನುಕುಲ ಮತ್ತು ಕುಂಬಳು ಕುಲ ಎಂಬ ಕುಲಗಳು ಕಂಡುಬರುತ್ತವೆ.[೧೦] ಇರುಳಿಗರಲ್ಲಿಯೂ ಆಲುರು ಕುಲ, ಜೇನುಕುಲ ಮತ್ತು ಹೊಂಗೆ ಕುಲಗಳು ಕಂಡುಬರುತ್ತವೆ. ಇನ್ನುಳಿದಂತೆ ಸೋಲಿಗರಲ್ಲಿರುವ ಕುಲಗಳೆಲ್ಲವು ಕಾಡಿನೊಂದಿಗೆ ಹೊಂದಿರುವ ಸಂಬಂಧವನ್ನು ಪ್ರತಿನಿಧಿಸುವಂತಿವೆ. ಇವುಗಳ ಇರುಳಿಗರಿಗಿಂತ ಭಿನ್ನವಾಗಿ ಗುರ್ತಿಸಿಕೊಳ್ಳುತ್ತವೆ.

ಇದರ ಜೊತೆಗೆ ಸೋಲಿಗರು ಆರಾಧಿಸುವ ದೈವಗಳಲ್ಲೂ ಇರುಳಿಗರ ದೈವಗಳು ಯಾವುದೇ ಭಿನ್ನತೆಯನ್ನು ಗುರ್ತಿಸಲು ಸಾಧ್ಯವಿಲ್ಲ. ಸೋಲಿಗರು, ಮಾರಪ್ಪ, ಬಿಳಿಗಿರಿರಂಗ,

ಸಿದ್ದೇಶ್ವರ, ಮುನಿಯಪ್ಪ, ರತ್ನಗಿರಿಯಮ್ಮ, ಮದ್ದುರಮ್ಮ, ದೊಡ್ಡಿತಾಯಿ, ಚಿಕ್ಕಮ್ಮ ತಾಯಿ, ಕಾರಯ್ಯ, ಬಿಲ್ಲಯ್ಯ ಪೂಜಿಸುತ್ತಾರೆ. ಬಿಳಿಗಿರಂಗನನ್ನು ಹೊರತುಪಡಿಸಿದರೆ ಸೋಲಿಗರು ಮತ್ತು ಇರುಳಿಗರ ದೈವಗಳು ಒಂದೇ ಆಗಿವೆ. ಅದರಲ್ಲೂ ಮುದ್ದೂರವ್ವ, ರತ್ನಗಿರಿಯಮ್ಮ ಮತ್ತು ಮುನೇಶ್ವರ ಈ ಎರಡು ಬುಡಕಟ್ಟುಗಳಿಗೆ ಪಾರಂಪರಿಕ ದೈವಗಳಾಗಿವೆ. ಆದ್ದರಿಂದ ಕುಲದೈವಗಳಲ್ಲಿ ಇರುಳಿಗ ಮತ್ತು ಸೋಲಿಗರ ಭಿನ್ನತೆಗಳೇನು ಕಂಡುಬರುವುದಿಲ್ಲ.

ಇರುಳಿಗ ಮತ್ತು ಇರುಳರ ಕುಲಗಳು ಮತ್ತು ಕುಲದೈವಗಳು

ಸಂಶೋಧಕರಿಗೆ ಇರುಳ ಮತ್ತು ಇರುಳಿಗ ಬೇರೆ ಬೇರೆ ಎಂದೆನಿಸುವುದು ಈ ಕುಲ ಅಥವಾ ಒಳಪಂಗಡಗಳಲ್ಲೇ. ಮಾಗಡಿಸೀಮೆಯಲ್ಲಿ ವಾಸಿಸುವ ಇರುಳಿಗರಿಗೆ ಮತ್ತು ತಮಿಳುನಾಡು ಮತ್ತು ಕೇರಳದಲ್ಲಿ ವಾಸಿಸುವ ಇರುಳಿಗರಿಗೂ ಕುಲಗಳಲ್ಲಿ ಭಿನ್ನತೆ ಇದೆ. ಇವುಗಳ ಆಧಾರದ ಮೇಲೆ ಇರುಳಿಗ, ಇರುಳ ಮತ್ತು ಇರುಳಾಸ್ ಬೇರೆ ಬೇರೆ ಎಂದು ವಾದಿಸುವುದನ್ನು ಕಾಣಬಹುದು. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹಿಂದೆ ಚರ್ಚಿಸಿದಂತೆ ಈ ಕುಲಗಳು ಪಂಥಗಳು, ವೃತ್ತಿಗಳು, ಸಾಂಸ್ಕೃತಿಕ ಪುರುಷರು, ಪ್ರಾದೇಶಿಕತೆಯ ಪ್ರಭಾವದಿಂದ ಸೃಷ್ಟಿಗೊಂಡಿರುವುಗಳೇ ಆಗಿವೆ. ಆದರೆ ಇರುಳಿಗರಲ್ಲಿ ಕಂಡುಬರುವ ಕುಲಗಳ ಬಗ್ಗೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕೆಲವು ಗಮನಿಸಬೇಕಾದ ಅಂಶಗಳನ್ನು ಕಂಡುಕೊಳ್ಳಲಾಗಿದೆ. ಇಲ್ಲಿನ ವಕ್ತೃಗಳು ಹೀಗೆ ಹೇಳುತ್ತಾರೆ: ನಮ್ಮಲ್ಲಿ ಬುದುಕುವುದಕ್ಕಾಗಿ ಹಲವಾರು ವೃತ್ತಿಗಳನ್ನು ಮಾಡುತ್ತಾರೆ. ಮೀನು ಹಿಡಿಯುವುದು, ಬೇಟೆಯಾಡುವುದು, ಜೇನು ಸಂಗ್ರಹಿಸುವುದು, ಇದ್ದಿಲು ಮಾಡುವುದು, ಸೌದೆ ಮಾರುವುದು, ಇಲಿ ಬೇಟೆಯಾಡುವುದು, ಹಾವಿನ ವಿಷ ತೆಗೆಯುವುದು ಮುಂತಾದ ಎಲ್ಲಾ ವೃತ್ತಿಗಳನ್ನು ಮಾಡುತ್ತಾರೆ. ಈ ವೃತ್ತಿಗಳಿಂದ ನಮಗೆ ಅನೇಕ ಹೆಸರುಗಳು ಬಂದಿವೆ. ಆ ಕುಟುಂಬವು ಅಂತಹ ವೃತ್ತಿಗಳನ್ನು ಪಾರಂಪರಿಕವಾಗಿ ಇಂದಿಗೂ ಮಾಡುತ್ತಾ ಬಂದಿವೆ. ಅವರವರ ವೃತ್ತಿಗೆ ಅನುಗುಣವಾಗಿ ಅವರವರು ಒಂದೊಂದು ಹೆಸರುಗಳು ಪಡೆದುಕೊಂಡಿದ್ದಾರೆ. ಇದನ್ನು ಅಧ್ಯಯನಕಾರರು ಆ ಸಮುದಾಯದವರ ಕುಲಗಳು ಎಂದು ದಾಖಲಿಸಿಕೊಂಡಿದ್ದಾರೆ ಎನ್ನುತ್ತಾರೆ.[೧೧] ಅಧ್ಯಯನಕಾರರು ಇರುಳಿಗರು ಬದುಕುವುದಕ್ಕೆ ಅನುಸರಿಸಿಕೊಂಡಿದ್ದ ಒಂದೊಂದು ವೃತ್ತಿಗಳನ್ನು ಇರುಳಿಗರ ಕುಲಗಳು ಎಂದು ದಾಖಲಿಸಿಕೊಂಡಿರುವ ಸಾಧ್ಯತೆಗಳಿವೆ. ಒಂದು ಕುಟುಂಬ ಒಂದು ವೃತ್ತಿಯನ್ನು ಪಾರಂಪರಿಕವಾಗಿ ಮಾಡುತ್ತಾ ಬರುತ್ತಿದೆ ಎಂದರೆ ಅದು ಆ ವೃತ್ತಿಗೆ ಅನುಗುಣವಾಗಿ ಇಡೀ ತಮ್ಮ ಜೀವನ ವಿಧಾನವಾಗಿ ಪರಿವರ್ತಿಸಿಕೊಳ್ಳುತ್ತದೆ ಎಂದಾಗುತ್ತದೆ. ಬೇಟೆ ಆಡುವವರಿಗೆ ಕಾಡೇ ದೈವ ಕಾಡಿನೊಂದಿಗೆ ಅವರ ನಂಬಿಕೆ, ಆಚರಣೆ, ಜೀವನ ವಿಧಾನಗಳಲ್ಲೇ ರೂಪಿಸಿಕೊಂಡಿರುತ್ತವೆ. ಇಂತಹ ಸಂದರ್ಭದಲ್ಲಿ ಅಧ್ಯಯನಕಾರರು ಆ ವೃತ್ತಿಗಳನ್ನು ಕುಲಗಳಾಗಿ ಗುರುತಿಸಿಕೊಂಡಿರುವ ಸಾಧ್ಯತೆಗಳಿವೆ. ಹಾಗೆಂದು ಆ ವೃತ್ತಿಗಳೆಲ್ಲವನ್ನು ಅಧ್ಯಯನಕಾರರೇ ಸೃಷ್ಟಿಸಿದ್ದಾರೆ ಎಂದು ವಾದಿಸುತ್ತಿಲ್ಲ. ಈ ಬಗೆಯ ಸಾಧ್ಯತೆಗಳಿವೆ ಎಂಬುದನ್ನು ಹೇಳಲು

ಪ್ರಯತ್ನಿಲಾಗಿದೆ. ಈ ಹಿನ್ನೆಲೆಯಲ್ಲಿ ಇರುಳರು ಅನೇಕ ಕುಲ ಅಥವಾ ಒಳಪಂಗಡಗಳನ್ನು ಹೊಂದಿರುವ ಸಾಧ್ಯತೆಗಳಿವೆ. ಅವುಗಳೆಂದರೆ

ನೀಲಗಿರಿ ಪ್ರದೇಶದಲ್ಲಿ ಕಲ್ಕಟ್ಟಿ, ಕುಪ್ಪರ್, ಪೀರ್‌ದರ್, ಸಂಬರ್, ಕೊಡುವರ್, ಕುಸ್ನಾಗರ್, ಕುಪ್ಪಡಿಗರ್, ಪೋರಿಗರ್, ಬೆಳಗರ್, ಕರ್ಟಿಗರ್, ಉಪ್ಪಿಲಿಗರ್ ಮುಂತಾದವು.[೨] ಹಾಗೆಯೇ ಉತ್ತರ ಆರ್ಕಾಟ್ ಮತ್ತು ದಕ್ಷಿಣ ಆರ್ಕಾಟ್ ಚೆಂಗಲ್‌ಪೇಟೆ ಮತ್ತು ಕೊಯಮತ್ತೂರು ಭಾಗದಲ್ಲಿನ ಇರುಳಿಗರಲ್ಲಿ ಒಳಪಂಗಡಗಳೆಂದರೆ ಪುಂಗಕಾರು, ಕುಡಗಾರ, ಕಾಲಕೇತಿ, ವೆಲ್ಲಾಕಾಯಿ, ದೇವಲಾ, ಕೊಪ್ಪಿಲಿಂಗಂ ಇವುಗಳ ಜೊತೆಗೆ ಹೊರಬಾಂಧವ್ಯದ ಹದಿನಾಲ್ಕು ಕುಲಗಳು ಕಂಡುಬರುತ್ತದೆ. ಅವುಗಳೆಂದರೆ ಕುಪ್ಪಿ, ಸಂಬಾರ, ಪುಂಗೆ, ಕರಟಿಗೆ, ಉರುನೆಯ್ಗೆ, ಕಲಕತಿ, ದೇವೆನೆ, ಕೊಡುವೆ, ಪರಥಾರ, ಕುಪ್ಪಿಲಿ, ಉಪ್ಪಿಲಿ, ವೆಲ್ಯೆ ಕುಪ್ಪರ ಮತ್ತು ಅನುಮಾಪು ಎಂಬ ಕುಲಗಳು ಕಂಡುಬರುತ್ತವೆ.[೩] ಇವೆಲ್ಲವುಗಳು ಗ್ರಾಮವಾಸಿ ಇರುಳಿಗರಲ್ಲಾದರೆ ಇನ್ನು ಅರಣ್ಯವಾಸಿ ಇರುಳಿಗರಲ್ಲಿ ಈಶ್ವರನ್, ಅಗೇರಿಯ ಮತ್ತು ಧರ್ಮರಾಜ ಕುಲಗಳು ಕಂಡುಬಂದು, ಭದ್ರಕಾಳಿ, ಮಸಣಿ, ಮಾರಮ್ಮ, ಮಾದಪ್ಪ, ಮದ್ದುರಮ್ಮ, ರತ್ನಗಿರಿಯಮ್ಮ, ದ್ಯಾವರಾಳಮ್ಮ, ಬಾಣಂತಿಮಾರಮ್ಮ, ಮುನಿಪ್ಪ ಮುಂತಾದ ದೈವಗಳನ್ನು ಪೂಜಿಸುತ್ತಾರೆ. ಜೊತೆಗೆ ಸತ್ತ ತಮ್ಮ ಹಿರಿಯರನ್ನು ದೈವಗಳಾಗಿಸಿಕೊಂಡು ಪೂಜಿಸುವುದನ್ನು ಕಾಣಬಹುದು. ಇರುಳಿಗರಲ್ಲಿಯು ಧರ್ಮರಾಜ, ಈಶ್ವರನ್ ಕುಲಗಳೆಂದು ಕರೆಯದೇ ಒಕ್ಕಲುಗಳಾಗಿ ಕರೆಯುತ್ತಾರೆ. ಇನ್ನು ಇರುಳಿಗ ಮತ್ತು ಇರುಳರಲ್ಲಿ ಆರಾಧಿಸುವ ದೈವಗಳಲ್ಲಿ ಯಾವುದೇ ಭಿನ್ನತೆಗಳನ್ನು ಕಾಣಲು ಸಾಧ್ಯವಿಲ್ಲ.

ಒಟ್ಟಾರೆಯಾಗಿ ಇರುಳಿಗ ಮತ್ತು ಅಡವಿ ಚೆಂಚರನ್ನು ಗಮನಿಸಿದಾಗ ಕುಲಗಳಾಗಲೀ, ಕುಲದೈವಗಳಾಗಲೀ ಯಾವುದೇ ಸಾಮ್ಯತೆ ಕಂಡುಬರದೇ ಇರುವುದನ್ನು ಕಾಣಬಹುದು. ಅದೇ ರೀತಿಯಲ್ಲಿ ಸೋಲಿಗ ಮತ್ತು ಇರುಳಿಗರ ಕುಲಗಳು ಮತ್ತು ಕುಲದೈವಗಳಲ್ಲಿ ಸಾಮ್ಯತೆ ಕಂಡು ಬಂದರೂ ಪ್ರತ್ಯೇಕ ಬುಡಕಟ್ಟುಗಳಾಗಿ ಗುರ್ತಿಸಿಕೊಳ್ಳುತ್ತವೆ. ಏಕೆಂದರೆ ಸಾಮಾನ್ಯವಾಗಿ ಪಾರಂಪರಿಕ ವಾಗಿ ಕಾಡುವಾಸಿಗಳಾಗಿದ್ದ ಯಾವುದೇ ಬುಡಕಟ್ಟಿನ ಕುಲಗಳಲ್ಲಿ ಕಾಡಿನ ಪ್ರಭಾವ ಹೆಚ್ಚಾಗಿದ್ದ ಕುಲಗಳ ಹೆಸರುಗಳು ಅರಣ್ಯದ ಗಿಡ, ಸಸ್ಯ, ಬೆಟ್ಟ, ಗುಡ್ಡ, ಪ್ರಾಣಿ ಮತ್ತು ಮಾಡುವ ವೃತ್ತಿಗಳ ಮೇಲೆ ನಿರ್ಧರಿತವಾಗುತ್ತವೆ ಎಂಬ ಚಿನ್ನಸ್ವಾಮಿ ಸೋಸಲೆ ಅವರ ಮಾತಿನಂತೆ ಇರುಳಿಗ ಮತ್ತು ಸೋಲಿಗರ ಕುಲ ಮತ್ತು ಕುಲದೈವಗಳಲ್ಲಿ ಅರಣ್ಯದ ಪ್ರಭಾವ ಉಂಟಾಗಿ ಇರುಳಿಗ ಮತ್ತು ಸೋಲಿಗರಲ್ಲಿ ಅಲೆಕುಲ, ಹೊಂಗೆಕುಲ, ಮುಳ್ಳುಕುಲ ಮುಂತಾದ ಕುಲನಾಮಗಳು ಕಂಡುಬರುತ್ತವೆ. ಈ ಸಾಮ್ಯತೆಯು ಈ ಎರಡು ಬುಡಕಟ್ಟುಗಳು ಒಂದೇ ಪ್ರದೇಶದ ಮೂಲ ನಿವಾಸಿಗಳು ಎಂಬುದನ್ನು ಸೂಚಿಸುತ್ತದೆ. ಸೋಲಿಗರು ಬಿಳಿಗಿರಿರಂಗನನ್ನು ಆರಾಧಿಸಿದರೆ ಇರುಳಿಗರಿಗೂ ಬಿಳಿಗಿರಿರಂಗನಿಗೆ ಯಾವುದೇ ಸಂಬಂಧವಿಲ್ಲ. ಆದರೆ ಮಾದಪ್ಪನ ಕಾಲಘಟ್ಟಗಳೇ ಇಬ್ಬರು ಪರಸ್ಪರ ಅಣ್ಣ ತಮ್ಮಂದಿರುಗಳಾಗಿ ಆರಾಧಿಸಿಕೊಳ್ಳುತ್ತಾರೆ. ಮಾದಪ್ಪನೇ ನಮ್ಮನ್ನು

ಬೇರೆ ಬೇರೆ ಮಾಡಿಬಿಟ್ಟ ಎಂಬ ಐತಿಹ್ಯ ಮತ್ತು ಪೌರಾಣಿಕತೆಗಳನ್ನು ಹೇಳುತ್ತಾರೆ. ಇಲ್ಲಿ ಸೋಲಿಗ ಮತ್ತು ಇರುಳಿಗರ ಒಂದೇ ಮೂಲಕ್ಕೆ ಸೇರಿದ್ದು ಬೇರೆ ಬೇರೆಯಾಗಿರುವುದು ಕಂಡುಬರುತ್ತದೆ. ಈ ಎರಡು ಸಮುದಾಯದವರು ಹೇಳುವಂತೆ ಇರುಳಿಗರು ಮತ್ತು ಸೋಲಿಗರು ಅಣ್ಣ ತಮ್ಮಂದಿರು ಎಂಬುದು ಗೊತ್ತಾಗುತ್ತದೆ.

ಆದರೆ ಇರುಳ, ಇರುಳಾರ್ ಮತ್ತು ಇರುಳಿಗರು ಒಂದೇ ಆಗಿದ್ದ ಪ್ರಾದೇಶಿಕತೆಗೆ ತಕ್ಕಂತೆ ಬೇರೆ ಬೇರೆಯಾಗಿ ಕರೆದುಕೊಳ್ಳುವುದನ್ನು ಕಾಣಬಹುದು. ಹಾಗೊಮ್ಮೆ ಬದಲಾವಣೆಗಳಿದ್ದರೂ ಅದು ಆಯಾ ಪ್ರದೇಶದ ಪ್ರಭಾವವೇ ಎಂದು ಪರಿಗಣಿಸಬೇಕಾಗುತ್ತದೆ. ಏಕೆಂದರೆ ಅಂತಹ ಹೇಳಿಕೊಳ್ಳುವ ಯಾವ ವ್ಯತ್ಯಾಸಗಳು ಕಂಡುಬರುವುದಿಲ್ಲ.

ಇರುಳಿಗ, ಸೋಲಿಗ, ಅಡವಿಚೆಂಚು, ಬುಡಕಟ್ಟುಗಳು ಪ್ರಾದೇಶಿಕವಾಗಿ ಭಿನ್ನತೆಗಳನ್ನು ಗುರ್ತಿಸಿಕೊಳ್ಳುತ್ತವೆ. ಇರುಳಿಗ ಮತ್ತು ಸೋಲಿಗರು ಒಂದೇ ಮೂಲದವರಾದರೆ, ಚೆಂಚರು ಆಚರಣೆಯಲ್ಲಿ ಕುಲ ಮತ್ತು ದೈವಗಳಲ್ಲಿ ಭಿನ್ನವಾಗಿಯೇ ಗುರುತಿಸಿಕೊಳ್ಳುತ್ತಾರೆ. ಇನ್ನು ಇರುಳ, ಇರುಳಾರ್ ಮತ್ತು ಇರುಳಿಗ ಎಂಬುದು ಒಂದೇ ಆಗಿದ್ದು ಭಿನ್ನತೆ ಇದ್ದರೆ ಅದು ಪ್ರದೇಶಗಳ ಪ್ರಭಾವವಾಗಿದೆ. ಈ ಇರುಳಿಗರು ತಮ್ಮ ಮೂಲಸಂಸ್ಕೃತಿಯ ಜೊತೆಗೆ ಪ್ರಾದೇಶಿಕತೆಯ ಪ್ರಭಾವವನ್ನು ಅನುಭವಿಸಿ ಆ ಪ್ರಾದೇಶಿಕ ಮೇಲರಿಮೆಯನ್ನು ಒಪ್ಪಿಕೊಂಡು ಬದುಕುತ್ತಿದ್ದಾರೆ.

ಇರುಳ, ಚೆಂಚು, ಸೋಲಿಗ ಮತ್ತು ಇರುಳಿಗರ ಮೂಲ ಮತ್ತು ಭಾಷೆ

ಭಾರತದಲ್ಲಿರುವ ಯಾವುದೇ ಬುಡಕಟ್ಟುನ್ನು ಕುರಿತು ಅಧ್ಯಯನ ಮಾಡುವಾಗ ಅವರ ಮೂಲಸ್ಥಳ ಇದೆ ಎಂದು ನಿಖರವಾಗಿ ಹೇಳುವುದು ಉಚಿತವಲ್ಲ. ಏಕೆಂದರೆ ಬುಡಕಟ್ಟುಗಳು ತಮ್ಮ ಬದುಕಿಗೆ ಯೋಗ್ಯವಾದ ಸ್ಥಳಗಳನ್ನು ಆಯ್ಕೆ ಮಾಡಿಕೊಂಡಿರುತ್ತವೆ. ಇದು ಆರಂಭದ ಕಾಲಘಟ್ಟವಾದರೆ ನಂತರದಲ್ಲಿ ಈ ಆಯ್ಕೆಯು ಅನೇಕ ಸಂಕೋಲೆಗಳಿಗೆ ಒಳಗಾಗುವಂತಾಯಿತು. ಅಲೆಮಾರಿತನವನ್ನು ಬಿಟ್ಟು ಮಾನವ ಒಂದು ಕಡೆ ನೆಲೆನಿಂತ ಮೇಲೆ ಅವನು ಸಂಘಜೀವಿ ಯಾಗಲಾರಂಭಿಸಿದ. ಗುಂಪು ಗುಂಪಾಗಿದ್ದ ಮಾನವ ತನ್ನದೇ ಆದ ಭಾಷೆ ಹಾವಭಾವಗಳಿಂದ ಪರಸ್ಪರ ಅರ್ಥೈಸಿಕೊಳ್ಳುತ್ತಿದ್ದರು. ಹಾಗೆ ನೆಲೆ ನಿಂತವರು ಪರಸ್ಪರ ತಮ್ಮನ್ನು ತಾವು ಅರ್ಥೈಸಿ ಕೊಳ್ಳುವಂತಾಗಿ ಒಂದೊಂದು ಗುಂಪಿಗೆ ಒಂದೊಂದು ಭಾಷೆ ಆರಂಭವಾಯಿತು. ಈ ಭಾಷೆಯ ಪ್ರಾದೇಶಿಕತೆಗೆ ಅನುಗುಣವಾಗಿ ಬೆಳೆಯಲಾರಂಭಿಸಿತು. ಈ ಗುಂಪು ದೊಡ್ಡದಾಗುತ್ತಾ ಸಾಗಿದಂತೆ ಅನೇಕ ಭಾಷೆಗಳು ಹುಟ್ಟಿಕೊಂಡವು. ಇಲ್ಲಿ ಬಹುಸಂಖ್ಯಾತರ ಅಥವಾ ಪ್ರಬಲರ ಭಾಷೆ ಉಳಿದುಕೊಂಡು ಅಲ್ಪಸಂಖ್ಯಾತರ ಅಥವಾ ದುರ್ಬಲರ ಭಾಷೆ ಅವನತಿಯ ಹಾದಿಯನ್ನು ಹಿಡಿಯಲಾರಂಬಿಸಿತು. ಆದರೆ ಈ ಸಮುದಾಯಗಳನ್ನು ಕುರಿತು ಅಧ್ಯಯನ ಮಾಡುವವರು ಈ ಸೂಕ್ಷ್ಮತೆಯನ್ನು ಗುರುತಿಸದೇ ಹೋಗಿರುವುದನ್ನು ಕಾಣಬಹುದು.

ಭಾರತದ ಬುಡಕಟ್ಟುಗಳ ಮೂಲದ ಬಗ್ಗೆ ಡಾ. ಕೆ. ಮೋಹನ್‌ಕೃಷ್ಣ ರೈ ಅವರು ಹೀಗೆ ಹೇಳುತ್ತಾರೆ. ಪ್ರಸ್ತುತ ಸಂದರ್ಭದಲ್ಲಿ ಬುಡಕಟ್ಟುಗಳ ಮೂಲವನ್ನು ಒಂದು ನಿರ್ದಿಷ್ಟ ಪ್ರದೇಶದ ಹಿನ್ನೆಲೆಯಿಂದ ಹೇಳುವುದು ಅತ್ಯಂತ ಕಷ್ಟದ ಕೆಲಸ. ಅದರಲ್ಲೂ ಇವತ್ತಿನ ಸಂದರ್ಭದ ಗಡಿ ವಿಂಗಡಣೆಯನ್ನು ಬುಡಕಟ್ಟು ಮೂಲಗಳೊಂದಿಗೆ ಗುರ್ತಿಸುವುದು ಸೂಕ್ತವಾದುದಲ್ಲ.[೧೪] ಉತ್ತರ ಭಾರತದ ನದಿಮುಖಜ ಭೂಮಿಗಳು ಮತ್ತು ನಿತ್ಯ ಹರಿದ್ವರ್ಣ ಕಾಡುಗಳು ಒಂದು ಭಾಗವಾದರೇ, ವಿಂದ್ಯಾ ಶ್ರೇಣಿಯೂ ಒಂದು ಭಾಗ. ಹಾಗೆಯೇ ದಕ್ಷಿಣದ ಭಾಗವಾಗಿ ವಿಂದ್ಯಾ ಶ್ರೇಣಿಯ ಕೆಳಭಾಗವನ್ನು ಗುರುತಿಸುವುದು ಸೂಕ್ತವಾದದ್ದು. ಅದರಲ್ಲೂ ದಕ್ಷಿಣ ವಲಯ, ಮಧ್ಯ ವಲಯ ಮತ್ತು ಈಶಾನ್ಯ ವಲಯಗಳೆಂದು ವಿಭಾಗಿಸಿಕೊಂಡು ಬುಡಕಟ್ಟುಗಳ ಮೂಲಸ್ಥಳ ಹೇಳುವುದು ಸೂಕ್ತವಾದುದ್ದಾಗಿದೆ.

ಅಡವಿ ಚೆಂಚರ ಮೂಲವನ್ನು ಗಮನಿಸಿದಾಗ ಇವರು ಕೃಷ್ಣಾ ನದಿಯ ಆಸುಪಾಸಿನ ಜನರೆಂಬುದು ಗೊತ್ತಾಗುತ್ತದೆ. ಆದರೆ ಇವರನ್ನು ಅಣ್ಣಾಮಲೈ ಬೆಟ್ಟದ ಸಾಲಿನವರು ಎಂದು ಕರೆದಿರುವುದು ಚರ್ಚಾಸ್ಪದ ವಿಷಯವಾಗಿದೆ. ಅಡವಿ ಚೆಂಚರ ದೈವ ಮತ್ತು ಭಾಷೆಯನ್ನು ಗಮನಿಸಿದಾಗ ದಕ್ಷಿಣ ಪ್ರಸ್ಥಭೂಮಿಯಿಂದ ಕೃಷ್ಣಾನದಿಯ ದಕ್ಷಿಣದ ಪ್ರದೇಶವಾಗಿರಬೇಕು ಎಂದು ಪ್ರಹ್ಲಾದ್ ಬೆಟಗೇರಿಯವರು ಅಡವಿ ಚೆಂಚರ ಸಂಸ್ಕೃತಿ ಎಂಬ ಕೃತಿಯಲ್ಲಿ ವಿವರಿಸುತ್ತಾರೆ. ಜೊತೆಗೆ ಶ್ರೀಶೈಲ, ನೆಲ್ಲೂರು ಬೆಟ್ಟಗಳಲ್ಲೂ ಇವರ ಕುರುಹುಗಳಿರುವುದರ ಬಗ್ಗೆಯೂ ಸೂಚಿಸುತ್ತಾರೆ.[೧೫]

ಅಡವಿ ಚೆಂಚರ ಭಾಷೆಯು ಹಿಂದಿ ಮತ್ತು ಉರ್ದು ಭಾಷೆಯ ಸಮ್ಮಿಲನವಾಗಿ ಬಂಗಾಲದಿಂದ ಬೇರ್ಪಟ್ಟ ಭಾಷೆಯಂತೆ ಕಂಡುಬರುತ್ತದೆ. ನಲ್ಲಾಮಲೈ ಬೆಟ್ಟ ಹಾಗೂ ಕರ್ನೂಲ್ ಗುಡ್ಡಗಾಡಿನ ಚೆಂಚರು ಅಥವಾ ಚೆಂಚೂಸ್ ತೆಲುಗು ಮಾತನಾಡುತ್ತಾರೆ. ಹಾಗೆಯೇ ಚೆಂಚರು ಅಶುದ್ಧ ತಮಿಳು ಬಹಳ ವಿರಳ, ಕನ್ನಡ ಶಬ್ದಗಳನ್ನು ಸೇರಿಸಿ ಉಚ್ಚರಿಸುತ್ತಾರೆ. ಇವರ ಭಾಷೆ ಮದ್ರಾಸ್ ಭಾಷೆಗಿಂತಲೂ ಭಿನ್ನವಾಗಿರುತ್ತದೆ ಎಂದು ಕೃತಿಕಾರರು ಹೇಳುತ್ತಾರೆ. ಮಿ. ನಿವಿಲ್ ಅವರು ಹೇಳುವಂತೆ ಚೆಂಚರ ಭಾಷೆಯು ಲಂಬಾಣಿಯ ಭಾಷೆಯ ಸಾಮೀಪ್ಯವನ್ನು ಹೋಲುತ್ತದೆ. ಜೊತೆಗೆ ಮರಾಠಿ ಮಿಶ್ರಿತ ಭಾಷೆಯನ್ನು ಮಾತನಾಡುತ್ತಾರೆ.[೧೬]

ಚೆಂಚರ ಭಾಷೆಯ ಮೇಲೆ ಹಲವಾರು ಭಾಷೆಯ ಪ್ರಭಾವ ಉಂಟಾಗಿದ್ದ ಬಹುಭಾಷೆಗಳ ಶಬ್ದಗಳ ಸಮ್ಮಿಳನದಿಂದ ಚೆಂಚರ ಭಾಷೆ ರೂಪುಗೊಂಡಿದೆ ಎಂದು ಕೃತಿಕಾರರು ಅಭಿಪ್ರಾಯಿಸುತ್ತಾರೆ. ಚೆಂಚರ ಭಾಷೆಯ ಮೇಲೆ ಪ್ರಾದೇಶಿಕತೆಯ ಪ್ರಭಾವ ಉಂಟಾಗಿರುವುದನ್ನು ಅಧ್ಯಯನ ಸಂದರ್ಭದಲ್ಲಿ ಕಾಣಬಹುದು. ಮೇಲೆ ಹೇಳಿದಂತೆ ಚೆಂಚರ ಭಾಷೆಯ ಹುಟ್ಟಿಗೆ ಹಲವಾರು ಶಬ್ದಗಳ ಮೂಲವಲ್ಲ. ಚೆಂಚರ ಭಾಷೆಯನ್ನು ಒಂದು ಸ್ವತಂತ್ರ ಭಾಷೆಯೆಂದು

ನೋಡಬೇಕು. ಅಗ ಮಾತ್ರ ಬುಡಕಟ್ಟುಗಳ ನಿಜ ಚರಿತ್ರೆ ಹೊರಬರಲು ಸಾಧ್ಯ. ಏಕೆಂದರೆ ಈ ಬುಡಕಟ್ಟುಗಳು ನಿನ್ನೆ ಮೊನ್ನೆಯವುಗಳಲ್ಲ. ತಲತಲಾಂತರದಿಂದ ಬದುಕುತ್ತಿರುತ್ತವೆ. ಇದಕ್ಕೆ ಸಂಬಂಧಿಸಿದಂತೆ ಇರುಳಿಗರ ಭಾಷೆ ಎಂಬ ಭಾಗದಲ್ಲಿ ಚರ್ಚಿಸಲಾಗಿದೆ. ಇರುಳಿಗ ಮತ್ತು ಚೆಂಚರ ಭಾಷೆಯನ್ನು ಗಮನಿಸಿದಾಗ ಚೆಂಚರ ಭಾಷೆಯು ಪ್ರತ್ಯೇಕವಾಗಿಯೇ ಗುರುತಿಸಿಕೊಳ್ಳುತ್ತದೆ. ಆದರೆ ಇವರ ಮೂಲ ಅಣ್ಣಾಮಲೈ ಒಂದಾದರೆ ಇವರ ಭಾಷೆ ಇರುಳಿಗ ಭಾಷೆಯ ಸಾಮ್ಯತೆ ಕಾಣಬಹುದು. ಇದಕ್ಕೆ ಮೊದಲು ಇವರ ಮೂಲ ಕೃಷ್ಣಾ ನದಿಯ ಆಸುಪಾಸು ಎಂದು ಕೃತಿಕಾರರು ಹೇಳುತ್ತಾರೆ. ಹಾಗಾದರೆ ಅಣ್ಣಾಮಲೈ ಬೆಟ್ಟದಲ್ಲಿರುವ ಚೆನ್ಸುಗಳಿಗೂ ಚೆಂಚರಿಗೂ ಸಂಬಂಧವಿಲ್ಲ ಎಂದೆನಿಸುತ್ತದೆ. ಅಣ್ಣಾಮಲೈ ಪ್ರದೇಶದಲ್ಲಿ ಕಂಡುಬರುವ ಬೆಕ್ಕುಚೆಂಚರು ಅಡವಿ ಚೆಂಚರ ಒಳಪಂಗಡಗಳಲ್ಲಾಗಲಿ ಅಥವಾ ಕುಲಗಳಲ್ಲಾಗಲಿ ಕಂಡುಬರುವುದಿಲ್ಲ. ಆದ್ದರಿಂದ ಚೆಂಚರೇ ಬೇರೆ ಚೆನ್ಸು ಬೇರೆ ಎಂದು ನಿರ್ಧರಿಸಲು ಎಲ್ಲಾ ಸಾಧ್ಯತೆಗಳಿವೆ. ಅದು ಇಂದಿಗೂ ಹಾಗೆ ಉಳಿದುಕೊಂಡು ಬಂದಿದೆ. ಯನಾದಿ ಎಂಬುದು ಚೆಂಚರ ಉಪಪಂಗಡವಾಗಿದ್ದು, ಅದು ಇರುಳಿಗರೊಂದಿಗೆ ಸೇರಿಸಲಾಗಿದೆ ಎಂದೆನಿಸುತ್ತದೆ.

ಸೋಲಿಗರ ಮೂಲವು ನೀಲಗಿರಿ ಪ್ರದೇಶದ ಬೆಟ್ಟ ಸಾಲುಗಳು ಚಾಮರಾಜನಗರ, ಮೈಸೂರು ಜಿಲ್ಲೆಯಲ್ಲಿ ಅತಿಹೆಚ್ಚಾಗಿ ಕಂಡುಬರುತ್ತದೆ. ಅಂದರೆ ಸೋಲಿಗರ ಮೂಲ ನೀಲಗಿರಿ ಬೆಟ್ಟವೇ ಎಂದು ನಿಖರವಾಗಿ ಹೇಳುವುದು ಸೂಕ್ತವಾದುದ್ದಲ್ಲ. ಏಕೆಂದರೆ ಈ ವರ್ಗೀಕರಣವೂ ಆಡಳಿತಾತ್ಮಕ ವಿಂಗಡಣೆಯೂ ಆಗಿರುವ ಸಾಧ್ಯತೆಗಳಿವೆ. ಅದೇ ರೀತಿಯಲ್ಲಿ ಇರುಳಿಗರೂ ಕೂಡ ಕಾವೇರಿ ನದಿಯ ತಪ್ಪಲಿನ ಪ್ರದೇಶದ ಮೂಲನಿವಾಸಿಗಳೇ ಆಗಿದ್ದಾರೆ. ಆದರೆ ಇವರನ್ನು ಕುರಿತು ಅಧ್ಯಯನ ಕೈಗೊಂಡವರು ಪ್ರಸ್ತುತ ಗಡಿ ವಿಂಗಡಣೆಯನ್ನು ಇಟ್ಟುಕೊಂಡು ಕರ್ನಾಟಕ, ಕೇರಳ ಮತ್ತು ತಮಿಳುನಾಡಿನ ಮೂಲದವರು ಎಂದು ಗುರುತಿಸಿದ್ದಾರೆ.[೧೭]

ಸೋಲಿಗ ಮತ್ತು ಇರುಳಿಗರ ಭಾಷೆಯೂ ಸಾಮ್ಯತೆಯಿಂದ ಕೂಡಿದ್ದ ಅನೇಕ ಪ್ರಾದೇಶಿಕತೆಯ ಪ್ರಭಾವದಿಂದ ಅನುಕರಣೆ ಮತ್ತು ಕಳೆದುಕೊಳ್ಳುವಿಕೆ ಉಂಟಾಗಿರುವುದನ್ನು ಕಾಣಬಹುದು. ಸೋಲಿಗರ ಭಾಷೆಯ ಬಗ್ಗೆ ಕೃತಿಕಾರರು ಹೀಗೆ ಹೇಳುತ್ತಾರೆ. ತಮಿಳು ಮಾತೃಭಾಷೆಯ ಸೋಲಿಗರು ಶೇ. ೫.೦೪, ತೆಲುಗು ಮಾತೃಭಾಷೆಯ ಸೋಲಿಗರು ಶೇ. ೪.೭೮. ಹಾಗೆಯೇ ಕನ್ನಡ ಮಾತೃಭಾಷೆಯ ಸೋಲಿಗರು ಶೇ. ೮೯.೮೯ ಕಂಡುಬರುತ್ತಾರೆ. ಸೋಲಿಗರ ಮಾತೃಭಾಷೆ ಕನ್ನಡವಾಗಿದ್ದು, ಇವರು ಕರ್ನಾಟಕದ ಮೂಲನಿವಾಸಿಗಳಾಗಿದ್ದು, ಬೇರೆ ಬೇರೆ ಕಡೆ ವಲಸೆ ಹೋಗಿ ನೆಲೆ ನಿಂತಿದ್ದರಿಂದ ಅವರ ಭಾಷೆಯಲ್ಲಿ ತೆಲುಗು ಮತ್ತು ತಮಿಳು ಪ್ರಭಾವವಾಗಿರುವ ಸಾಧ್ಯತೆಗಳಿದ್ದು, ಜೊತೆಗೆ ಕರ್ನಾಟಕದ ಕೆಲವು ಭಾಗಗಳು ಹಿಂದೆ ತಮಿಳುನಾಡಿನ ಹಾಗೂ ಆಂಧ್ರದ ಆಡಳಿತಕ್ಕೆ ಒಳಪಟ್ಟಿದ್ದರಿಂದ ಸೋಲಿಗರ ಮೇಲೆ ತೆಲುಗು ಮತ್ತು ತಮಿಳಿನ ಪ್ರಭಾವ ಉಂಟಾಗಿದೆ ಎನ್ನುತ್ತಾರೆ.[೧೮]

ಸೋಲಿಗರ ಭಾಷೆಯ ಒಂದು ಉಪಭಾಷೆಯಾಗಿರದೆ, ಸ್ವತಂತ್ರ ಭಾಷೆಯೇ ಆಗಿದ್ದು ತೆಲುಗು ಮತ್ತು ತಮಿಳು ಭಾಷೆಗಳು ಸೋಲಿಗರ ಭಾಷೆಯಿಂದ ಎರವಲು ಪಡೆದಿರಬಹುದು. ಮತ್ತೊಂದು ಸೋಲಿಗರು ಹಿಂದೆ ಚರ್ಚಿಸಿದಂತೆ ಕಾವೇರಿ ನದಿಯ ತಪ್ಪಲಿನವರಾಗಿದ್ದು, ಇವರನ್ನು ಇವತ್ತಿನ ಕರ್ನಾಟಕ, ಕೇರಳ, ಆಂಧ್ರ ಮತ್ತು ತಮಿಳುನಾಡಿನ ಗಡಿಗೆ ತುರುಕುವುದು ಸಮಂಜಸವಾದುದಲ್ಲ. ಇರುಳಿಗರಂತೆಯೇ ಇವರು ಕಾವೇರಿ ನದಿಯ ಮೂಲನಿವಾಸಿಗಳೇ ಆಗಿದ್ದಾರೆ ಎಂದೇ ಅಧ್ಯಯನ ಮಾಡಬೇಕು.

ಇನ್ನು ಇರುಳಿಗರ ಮೂಲವನ್ನು ನೋಡಿದಾಗ ಇರುಳಿಗರೂ ಕೂಡ ಅಣ್ಣಾಮಲೈ ಬೆಟ್ಟ ಸಾಲಿನವರೇ ಎಂದು ಕಂಡುಬರುತ್ತದೆ. ಇವರು ಕೂಡ ಕಾವೇರಿ ನದಿಯ ತಪ್ಪಲಿನವರೇ ಆಗಿದ್ದು, ಕಾರಣಾಂತರಗಳಿಂದ ಬೇರೆ ಬೇರೆ ಕಡೆ ಹೋಗಿ ನೆಲೆಸಿದ್ದಾರೆ. ಆದ್ದರಿಂದ ಅವರ ಮೇಲೆ ಪ್ರಾದೇಶಿಕ ಭಾಷೆಯ ಪ್ರಭಾವವಾಗಿರುವ ಸಾಧ್ಯತೆಗಳಿವೆ.

ಅಡವಿ ಚೆಂಚರಲ್ಲಿ ಜನನ ಸಂದರ್ಭದ ಆಚರಣೆಗಳು

ಚೆಂಚರಲ್ಲಿ ಮಗುವು ಹುಟ್ಟಿದ ಕೂಡಲೇ ಮಗುವಿನ ಕರುಳು ಬಳ್ಳಿಯನ್ನು ಕುಡುಗೋಲು ಅಥವಾ ಬಾಣದ ಸಹಾಯದಿಂದ ಕತ್ತರಿಸುತ್ತಾರೆ. ಆಯಾ ಋತುಮಾನಕ್ಕನುಗುಣವಾಗಿ ತಣ್ಣೀರು ಅಥವಾ ಬಿಸಿನೀರಿನಿಂದ ಸ್ನಾನ ಮಾಡಿಸುತ್ತಾರೆ. ಮಗು ಹುಟ್ಟಿದ ಮೂರನೇ ದಿನಕ್ಕೆ ಮಹಿಳೆಯನ್ನು ಮನೆಗೆ ಕರ್ದು ವೀಳ್ಯದೆಲೆ, ಅಡಿಕೆಯನ್ನು ಕೊಡುತ್ತಾರೆ. ನಾಲ್ಕನೇ ದಿನಕ್ಕೆ ವಯಸ್ಸಾದ ಹೆಂಗಸು ಮಗುವಿಗೆ ನಾಮಕರಣ ಮಾಡುತ್ತಾಳೆ. ಮಗುವನ್ನು ಜಿಂಕೆ ಚರ್ಮದಿಂದ ತೊಟ್ಟಿಲು ಮಾಡಿ ಅದು ತೂಗುವಂತೆ ಕಟ್ಟಿ ಮಗುವನ್ನು ಮಲಗಿಸುತ್ತಾರೆ.

ಮಗು ಹುಟ್ಟಿದ ಕೂಡಲೇ ಎಣ್ಣೆ ಸವರದೇ, ತಣ್ಣೀರಿನ ಸ್ನಾನವನ್ನು ತಾಯಿ ಮಗು ಇಬ್ಬರಿಗೂ ಮಾಡಿಸುತ್ತಾರೆ. ನಂತರ ಭಟ್ಟಿ ಸರಾಯಿಯನ್ನು ಕುಡಿಯುತ್ತಾರೆ. ಭಟ್ಟಿ ಸರಾಯಿಯನ್ನು ತಣ್ಣೀರಿನಿಂದ ಯಾವುದೇ ಪರಿಣಾಮ ಆಗದೇ ಇರಲಿ ಎಂಬ ಕಾರಣಕ್ಕೆ ಸೇವಿಸುವುದಾಗಿ ಹೇಳುತ್ತಾರೆ. ಹೆರಿಗೆ ಆದ ಬಾಣಂತಿ ಮತ್ತು ಮಗುವನ್ನು ಐದು ದಿನಗಳವರೆಗೆ ಯಾರು ಮುಟ್ಟುವುದಿಲ್ಲ. ಎರಡು ತಿಂಗಳವರೆಗೆ ಬಾಣಂತಿಗೆ ಕುರಿಯ ತಲೆಮಾಂಸವನ್ನು ತಿನ್ನಲು ಕೊಡುತ್ತಾರೆ.

ಆರನೆಯ ದಿನಕ್ಕೆ ಮಗುವಿನ ಕೂದಲು ಜವುಳ ತೆಗೆದು ಸ್ನಾನ ಮಾಡಿಸಿದ ನಂತರ ಎಲ್ಲರೂ ಮುಟ್ಟುತ್ತಾರೆ. ಆರನೇ ದಿನದಿಂದಲೇ ಬಾಣಂತಿ ಎಲ್ಲರಂತೆ ಮನೆಯ ಕೆಲಸಗಳನ್ನು ಮಾಡಿಕೊಳ್ಳುತ್ತಾಳೆ. ಮಗುವಿಗೆ ಎರಡು ತಿಂಗಳು ತುಂಬಿದ ಮೇಲೆ ಕೊಬ್ಬರಿ ಎಣ್ಣೆ ಹಚ್ಚಿ ಬಿಸಿನೀರಿನ ಸ್ನಾನ ಮಾಡಿಸುತ್ತಾರೆ. ನಂತರ ಕತ್ತೆಯ ಮೊಲೆಯನ್ನು ಗುಟುಕಿ ಹಾಕುವ ಸಂಪ್ರದಾಯ ಇದೆ. ಹಾಗೊಮ್ಮೆ ಕತ್ತೆ ಹಾಲು ಸರಿಯಾದ ಸಮಯಕ್ಕೆ ಸಿಕ್ಕದಿದ್ದರೆ ಕತ್ತೆ ಹಾಲು

ಸಿಕ್ಕಿದಾಗ ಒಂದು ಬಿಳಿ ಬಟ್ಟೆಯನ್ನು ಕತ್ತೆ ಹಾಲಿಗೆ ಹಚ್ಚಿ ಒಣಗಿಸಿರುತ್ತಾರೆ. ಇಂತಹ ಸಂದರ್ಭದಲ್ಲಿ ಅದನ್ನು ನೀರಿಗೆ ಅದ್ದಿ ಮಗುವಿನ ಬಾಯಿಗೆ ಹಾಲನ್ನು ಹಿಂಡುತ್ತಾರೆ.

'ಖೋಡಿಯಾರ್' ಬೆಡಗಿನವರು ಹುಟ್ಟುದ ಕೂಸಿಗೆ ಮೈಯೆಲ್ಲ ಬೂದಿ ಬಳಿಯುತ್ತಾರೆ. ಇದರಿಂದ ಮಗುವಿಗೆ ಉಷ್ಣತೆ ಆರೋಗ್ಯವಾಗಿರುತ್ತದೆ ಎಂದು ನಂಬುತ್ತಾರೆ. ಬಾಣಂತಿ ಮತ್ತು ಮಗು ಮೈತೊಳೆದುಕೊಂಡ ನಂತರ ರವೆ, ರೊಟ್ಟಿ, ಬೆಲ್ಲ, ತುಪ್ಪದಿಂದ ಮಾಡಿದ ಅಡುಗೆಯನ್ನು ಊಟಕ್ಕೆ ಕೊಡುತ್ತಾರೆ. ಎರಡುವರೆ ತಿಂಗಳವರೆಗೆ ದೇವರ ಹತ್ತಿರ ಬಾಣಂತಿಯನ್ನು ಬಿಡುವುದಿಲ್ಲ. ಮೊದಲ ಐದು ದಿನಕ್ಕೆ ಉಟ್ಟುಕೊಂಡಿದ್ದ ಬಟ್ಟೆ ಬರೆ ಹಾಸಿಗೆಯನ್ನು ಬಿಸಾಕಿ ಬಿಡುತ್ತಾರೆ. ಅಲ್ಲಿಂದ ಎರಡುವರೆ ತಿಂಗಳವರೆಗೆ ಬೇರೆ ಹಾಸಿಗೆ, ಬಟ್ಟೆ ಬರೆ ಉಪಯೋಗಿಸಿದ ನಂತರ ಅವುಗಳನ್ನು ಬಿಸಾಕಿ ಬಿಡುತ್ತಾರೆ. ಈ ಹಿನ್ನೆಲೆಯಲ್ಲಿ ಅಡವಿ ಚೆಂಚರಲ್ಲಿ ಭಿನ್ನವಾದ ಆಚರಣೆಗಳಾದ ಭಟ್ಟಿ ಸರಾಯಿ ಸೇವನೆ, ತಣ್ಣೀರು ಸ್ನಾನ, ಒಂದು ವಾರದಲ್ಲೇ ಜವಳಿ ಕೂದಲು ತೆಗೆಯುವುದು ವಿಶಿಷ್ಟವಾಗಿ ಕಂಡುಬರುತ್ತದೆ.[೧೯]

ಸೋಲಿಗರಲ್ಲಿ ಜನನ ಸಂಬಂಧಿ ಆಚರಣೆಗಳು

ಹೆಣ್ಣುಮಗಳು ಬಸುರಿಯಾದಾಗ ಚೊಚ್ಚಲ ಹೆರಿಗೆಗಾಗಿ ತವರುಮನೆಗೆ ಕಳುಹಿಸಿಕೊಡುವ ಪದ್ಧತಿ ಸೋಲಿಗರಲ್ಲಿದೆ. ಒಂದು ನಿರ್ದಿಷ್ಟ ದಿನವನ್ನು ಗೊತ್ತು ಮಾಡಿಕೊಂಡು ಹೊಸ ಸೀರೆ, ಕುಪ್ಪಸ ತೆಗೆದುಕೊಂಡು ಐದು ಅಥವಾ ಏಳು ಮಂದಿ ಬಂದು ಬಸುರಿ ಹೆಂಗಸನ್ನು ತವರುಮನೆಗೆ ಕರೆದುಕೊಂಡು ಹೋಗುತ್ತಾರೆ. ಬಸುರಿ ಹೆಂಗಸಿಗೆ ಹೆರಿಗೆಯ ದಿನ ಸಮೀಪಿಸುತ್ತಿದ್ದಂತೆ ಅವರು ವಾಸಿಸುತ್ತಿದ್ದ ಗುಡಿಸಲಿನ ಪಕ್ಕದಲ್ಲಿ ಮತ್ತೊಂದು ಗುಡಿಸಲು ನಿರ್ಮಿಸಿ ಒಬ್ಬ ಹಿರಿಯ ಮುದುಕಿಯನ್ನು ಅವಳಿಗೆ ಮುತುವರ್ಜಿ ಮಾಡಲು ಇಬ್ಬರನ್ನು ಗುಡಿಸಲಿನಲ್ಲಿ ಇರಿಸುತ್ತಾರೆ. ಅಲ್ಲಿಗೆ ಅವರಿಗೆ ಅವಶ್ಯವಿರುವ ಎಲ್ಲ ವಸ್ತುಗಳನ್ನು ಒದಗಿಸಿಕೊಡುತ್ತಾರೆ. ಬಸುರಿಗೆ ಹೆರಿಗೆ ನೋವು ಕಾಣಿಸಿಕೊಂಡರೆ ಪೋಡಿನಲ್ಲಿರುವ ಸೂಲಗಿತ್ತಿಯನ್ನು ಕರೆದುಕೊಂಡು ಬರುತ್ತಾರೆ. ಹೆರಿಗೆಯ ಸಂದರ್ಭದಲ್ಲಿ ಪ್ರಯಾಸವಾಗುತ್ತಿದ್ದರೆ, ಅಂದರೆ ಮಗು ಬರುವುದಕ್ಕೆ ತೊಂದರೆಯಾದರೆ ಬೆಂಡ ಮತ್ತು ನೆಲ್ಲಿ ಮರದ ತೊಗಟೆಯ ಚಟ್ನಿ ರಸ ಮಾಡಿಸಿಕೊಡಿಸುತ್ತಾರೆ. ನಂತರ ಆ ತಾತ್ಕಾಲಿನ ಗುಡಿಸಿನಲ್ಲಿ ಬಾಣಂತನ ಮುಂದುವರಿಯುತ್ತದೆ. ಮಗುವಿಗೆ ವಿಭೂತಿ ಇಟ್ಟು ಮಗುವಿನ ಕಿವಿಯಲ್ಲಿ ಮೂರು ಬಾರಿ ಹೆಸರು ಹೇಳುತ್ತಾರೆ.

ಇದಾದ ಮೇಲೆ ಬಾಣಂತಿಯ ಎದುರಿಗೆ ಬೆಂಕಿಯ ಕೆಂಡದ ಚೂರುಗಳನ್ನು ಹಾಕಿ ಐದು ಮಂದಿ ಕುಲಸ್ಥರು ಸೇರಿ ಧೂಪದ ಪುಡಿಯನ್ನು ಅದರೊಳಕ್ಕೆ ಹಾಕುತ್ತಾರೆ. ಹಾವಿನ ಸೆಲೆ, ಕಟ್ಟಿರುವೆ, ಕೊಳ್ಳಿರುವೆ, ಕುಂದನ ಸ್ವಾಲೆ ಎಮ್ಮಿರುಕ ಎಂಬ ಒಂದು ಜಾತಿಯ ವಿಷದ ಮುಳ್ಳು ಮುಂತಾದವುಗಳನ್ನು ಪುಡಿ ಮಾಡಿ ಐದು ಜನರು ಸೇರಿಕೊಂಡು ಮಗುವಿಗೆ ಇಳಿ ತೆಗೆದು ಬೆಂಕಿಗೆ ಹಾಕುತ್ತಾರೆ. ಇದರಲ್ಲಿ ಗುಣಿಗೆ ಶಾಸ್ತ್ರ ಎಂಬ ಆಚರಣೆ ಕಾಣಬಹುದು.

ಆರಂಭದಲ್ಲಿ ಮಗು ಹಾಗು ತಾಯಿಗೆ ಪ್ರತಿದಿನ ಸ್ನಾನದ ವ್ಯವಸ್ಥೆ ಮಾಡಲಾಗುತ್ತದೆ. ಪ್ರತಿ ಎಂಟು ದಿನಕ್ಕೆ(ವಾರಕ್ಕೆ) ಮೇಲೆ ಹೇಳಿದ ಪ್ರಾಣಿಗಳ ಅವಯವದಿಂದ ಹಾಗೂ ಧೂಪದ ಚಕ್ಕೆಯಿಂದ ಹೊಗೆಯನ್ನು ಮಗುವಿಗೆ ಹಿತವಾಗುವ ಹಾಗೆ ಹಾಕುತ್ತಾರೆ. ಹಾಲು ಸೋರೆಯ ಹಾಲನ್ನು ಮಗುವಿಗೆ ಕುಡಿಸುವ ಪದ್ಧತಿ ಇದೆ ಎಂಬುದನ್ನು ವಿದ್ವಾಂಸರು ಹೇಳುತ್ತಾರೆ. ಈ ಸಂದರ್ಭದಲ್ಲಿ ಬಾಣಂತಿಗೆ, ಬಾಳೆಹಣ್ಣು, ಸಕ್ಕರೆ, ಜೇನು, ಬೆಲ್ಲ, ಕುಂಬಳಕಾಯಿ, ಸೋರೆಕಾಯಿ ಕೊಡುವುದಿಲ್ಲ ಮತ್ತು ತಣ್ಣೀರು ಸ್ನಾನ ಮಾಡಿಸುವುದಿಲ್ಲ. ಹಾಗೆಯೇ ಮೂರು ತಿಂಗಳತನಕ ಮಾಂಸ, ಮಡ್ಡಿ ಕೊಡುವುದಿಲ್ಲ. ಇರುಳಿಗರ ಆಚರಣೆಯಂತೆಯೇ ಇದ್ದ ಯಾವುದೇ ಭಿನ್ನತೆಗಳನ್ನು ಕಾಣಲು ಸಾಧ್ಯವಿಲ್ಲದಿದ್ದರೂ, ಇರುಳಿಗರಲ್ಲಿರುವ ತೊಟ್ಟಿಲು ಶಾಸ್ತ್ರ ಸೋಲಿಗರಲ್ಲಿ ಕಂಡು ಬರುವುದಿಲ್ಲ.[೨೦]

ಇರುಳ ಮತ್ತು ಇರುಳಿಗರಲ್ಲಿ ಅಂತಹ ಯಾವುದೇ ಭಿನ್ನತೆಯನ್ನು ಕಾಣಲು ಸಾಧ್ಯವಿಲ್ಲ. ಇರುಳ ಮತ್ತು ಇರುಳಿಗರು ಒಂದೇ ಆದುದರಿಂದ ಸಂಪೂರ್ಣ ಅರಣ್ಯದ ಜೊತೆ ತಮ್ಮ ಜೀವನ ವಿಧಾನವನ್ನು ರೂಪಿಸಿಕೊಂಡಿದ್ದಾರೆ. ಭಿನ್ನತೆಗಳು ಯಾವುದೂ ಇಲ್ಲದ ಕಾರಣ ಇರುಳ ಮತ್ತು ಇರುಳಿಗರು ಒಂದೇ ಎಂದು ಹೇಳಬಹುದಾಗಿದೆ. ಹಾಗೊಮ್ಮೆ ಇಂತಹ ವ್ಯತ್ಯಾಸಗಳಿದ್ದರೆ ಅದು ಆ ಪ್ರದೇಶದ ಪ್ರಭಾವ ಎಂದು ತಿಳಿದುಕೊಳ್ಳಬೇಕೆ ಹೊರತು ಎರಡು ಬೇರೆ ಬೇರೆ ಎಂದು ವಾದಿಸುವುದರಲ್ಲಿ ಅರ್ಥವಿಲ್ಲ. ಮದುವೆ ಎಂಬುದು ಒಂದು ಪರಿಪಕ್ವವಾದ ಗ್ರಾಮದ ಕಲ್ಪನೆಯ ಭಾಗ ಎಂದರೆ ತಪ್ಪಾಗಲಾರದು. ಮದುವೆಯ ಬಗ್ಗೆ ಈಗಾಗಲೇ ಚರ್ಚಿಸಲಾಗಿದೆ. ಇದು ಪ್ರಸ್ತುತ ದಿನದಲ್ಲಿ ಒಂದು ಗಂಡು, ಹೆಣ್ಣು ಸಂತಾನೋತ್ಪತ್ತಿಗೆ ನೀಡುವ ಪರವಾನಗಿಯಾಗಿದೆ. ಅದಕ್ಕೆ ಅನೇಕ ವಿದ್ವಾಂಸರುಗಳು ವಿವಿಧ ಅಭಿಪ್ರಾಯಗಳನ್ನು ನೀಡುವುದನ್ನು ಇರುಳಿಗರ ಮದುವೆಯ ಸಂದರ್ಭದಲ್ಲಿ ಚರ್ಚಿಸಲಾಗಿದೆ. ಇಲ್ಲಿ ಮದುವೆ ಎಂಬ ಒಂದು ಅಸ್ತ್ರವನ್ನು ಹಿಡಿದುಕೊಂಡು ಇತರ ಸಮುದಾಯಗಳು ಪುರೋಹಿತರು ಹೀಗೆಲ್ಲ ನಡೆಸಿಕೊಳ್ಳಲಾಗು ತ್ತಿದೆ ಎಂಬುದು ಕೂಡ ಚರ್ಚಿಸಲಾಗಿದೆ.

ಮದುವೆ ಎಂಬುದು ಒಂದು ಆಚರಣೆ, ಪದ್ಧತಿಯಾದರೂ ಇದು ದೈವಿಕವಾಗಿ, ಭಾವನಾತ್ಮಕವಾಗಿ, ದೈಹಿಕವಾಗಿ, ಸಮಾಜದ ಒಪ್ಪಿಗೆಯೊಂದಿಗೆ ಸಂತಾನೋತ್ಪತ್ತಿ ಕ್ರಿಯೆಗೆ ಪರವಾನಗಿಯಾಗಿದೆ. ಪುರೋಹಿತರು ಒಂದು ಮಂತ್ರ ಹೇಳಿದರೆ ಮಾತ್ರ ಮದುವೆ. ಅದು ಸಮಾಜ ಸಮ್ಮತಿ ಇಲ್ಲದಿದ್ದರೆ ವ್ಯಭಿಚಾರ, ಅಪಮಾನ, ಸಮಾಜದ ಕಳಂಕ ಎಂದು ನಂಬಿಸಲಾಗಿದೆ. ಆದರೆ ಪ್ರಸ್ತುತ ದಿನಮಾನದಲ್ಲಿ ಮದುವೆ ಎಂಬ ಸಾಮಾಜಿಕ ಕಟ್ಟುಪಾಡನ್ನು ಮುರಿದು ಇದೊಂದು ಮಾನಸಿಕ ಒಪ್ಪಂದ ಎಂದು ಸಾರುವ ನಿಟ್ಟಿನಲ್ಲಿ ಗಂಡು, ಹೆಣ್ಣು ಒಂದಾಗುತ್ತಿರುವುದನ್ನು ಗಮನಿಸಬಹುದು. ಗಂಡು ಹೆಣ್ಣು ಒಂದಾಗುವುದು ಇಂತಹ ಮಾನದಂಡಗಳಿಂದ ಮಾತ್ರ ಸಾಧ್ಯ ಎಂಬ ನಿಲುವು ಬದಲಾಯಿಸುತ್ತಿರುವುದು ಕಾಣಬಹುದು.

ಮದುವೆ ಎಂಬ ಪುರೋಹಿತರ ಸ್ವಾರ್ಥದ ಆಚರಣೆಯನ್ನು ಈ ಜನಸಮುದಾಯದ ಮೇಲೆ, ಹಾಗೆಯೇ ಈ ದೇಶ ಎಲ್ಲಾ ನಂಬಿಕೆಗಳ ಮೇಲೆ ಹೇರಲಾಗಿದೆ. ಇಂತಹ ಹೇರಿಕೆಗೆ ಒಳಗಾಗದೆ ತಮ್ಮ ನಂಬಿಕೆ ಆಚರಣೆಯ ಮೂಲಕ ಗಂಡು, ಹೆಣ್ಣು ಸಂತಾನೋತ್ಪತ್ತಿ ಕ್ರಿಯೆಯಲ್ಲಿ ತೊಡಗುವುದನ್ನು ಬುಡಕಟ್ಟುಗಳಲ್ಲಿ ನೋಡಬಹುದಾಗಿದೆ. ಇಲ್ಲಿಗೆ ಈ ಪುರೋಹಿತರ ಸ್ವಾರ್ಥ ಆಚರಣೆಯ ಮದುವೆ ಎಂಬ ಚೌಕಟ್ಟು ನುಸುಳಿದರೂ ತಮ್ಮ ಪಾರಂಪರಿಕ ನಂಬಿಕೆಗಳನ್ನು ಬಿಟ್ಟುಕೊಡದ ಬುಡಕಟ್ಟು ತಮ್ಮ ಮೇಲಾದ ಪುರೋಹಿತ ಮೇಲರಿಮೆಯ ಜೊತೆಗೆ ತಮ್ಮದೇ ಆದ ಕೆಲವು ನಂಬಿಕೆಗಳನ್ನು ಇಂದಿಗೂ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಬುಡಕಟ್ಟುಗಳಲ್ಲಿ ಮದುವೆ ತಮ್ಮದೇ ಆದ ಪ್ರತ್ಯೇಕವಾದ ಐಡೆಂಟಿಟಿಯನ್ನು ಪ್ರತಿಪಾದಿಸುತ್ತವೆ.

ಅಡವಿಚೆಂಚರ ಮದುವೆ

ಅಡವಿಚೆಂಚರಲ್ಲಿ ಮದುವೆ ಮೂರು ವಿಧದಲ್ಲಿ ಕಂಡುಬರುತ್ತದೆ.

೧. ಗಂಡು ಮದುವೆಯಾಗಬಯಸಿದ್ದು, ಅವನೇ ತನ್ನ ಬಾಳ ಸಂಗಾತಿಯನ್ನು ಆಯ್ಕೆ ಮಾಡಿಕೊಂಡು ಗುಡಿಸಲಿನಲ್ಲಿ ಒಂದು ರಾತ್ರಿ ಒಟ್ಟಿಗೆ ಕಳೆಯುತ್ತಾರೆ. ಅವರು ಮರುದಿನ ಬೆಳಿಗ್ಗೆ ವಾಪಸ್ಸು ಬಂದ ಮೇಲೆ, ತಂದೆ ತಾಯಿ ಸ್ನೇಹಿತರು ಮತ್ತು ಬಂಧು ಬಳಗದವರು ಸೇರಿ, ಹೊಸಬಟ್ಟೆ ತೊಡಿಸಿ ಸಿಂಗರಿಸಿ 'ಗಂಡ-ಹೆಂಡತಿ' ಆದಿರಿ ಎಂದು ಘೋಷಿಸುತ್ತಾರೆ. ಸೇರಿದ ಜನರೆಲ್ಲ ಉಡುಗೊರೆ ನೀಡಿ ವಧುವರರನ್ನು ಹರಸುತ್ತಾರೆ.

೨. ಗುಡಿಸಲಿನ ಅಂಗಳವನ್ನು ವೃತ್ತಾಕಾರವಾಗಿ ಕೆತ್ತಿ, ಗುಡಿಸಿ, ಸೆಗಣಿಯಿಂದ ಸಾರಿಸುತ್ತಾರೆ. ಸಾರಿಸಿದ ನೆಲದ ಮೇಲೆ ಬಿಲ್ಲು ಬಾಣಗಳನ್ನು ಇರಿಸಿ ಮದುವೆ ಆಗುವ ಗಂಡು ಹೆಣ್ಣುಗಳನ್ನು ಅದರ ಸುತ್ತ ಪ್ರದಕ್ಷಿಣೆ ಹಾಕಿಸುತ್ತಾರೆ. ನೆರೆದ ಜನರು ಅಕ್ಕಿ ಕಾಳುಗಳನ್ನು ಹಾಕುತ್ತಾರೆ.

೩. ಗಂಡು ಹೆಣ್ಣನ್ನು ಎದುರುಬದುರು ಕುಂದ್ರಿಸಿ, ಗುರು ಹಿರಿಯರ ಸಮಕ್ಷಮದಲ್ಲಿ ಬ್ರಾಹ್ಮಣ ಪುರೋಹಿತರು ಮಂತ್ರ ಉಚ್ಚರಿಸಿ ಮಾಡಿಸುವ ಮದುವೆಯಲ್ಲಿ ಗಂಡು ಹೆಣ್ಣಿಗೆ ತಾಳಿ ಕಟ್ಟುತ್ತಾನೆ. ಮೂರು ದಿನಗಳ ನಂತರ ಬ್ರಾಹ್ಮಣ ಕಾಣಿಕೆ ಸ್ವೀಕರಿಸಿ ಹೊರಟು ಹೋಗುತ್ತಾನೆ. ಈ ಮದುವೆ ಸಂದರ್ಭದಲ್ಲಿ ಮದುವೆ ಆಗುವುದರ ಬಗ್ಗೆ ಟಾಂಟಾಂ ಹೊಡೆಸುತ್ತಾರೆ. ಮತ್ತು ನೃತ್ಯ ಏರ್ಪಡಿಸುತ್ತಾರೆ.

ಚೆಂಚರಲ್ಲಿ ಗಂಡುಹೆಣ್ಣುಗಳ ನಡುವೆ ಬಾಣವನ್ನಿಟ್ಟು ಆ ಬಾಣದ ನೆರಳು ಬೀಳುವುದರೊಳಗೆ ಮದುವೆ ಮಾಡಿ ಮುಗಿಸುತ್ತಾರೆ. ಯನಾಡಿ ಮತ್ತು ಚೆಂಚರಲ್ಲಿ ಒಂದೇ ರೀತಿಯ ಮದುವೆ ಆಚರಣೆಗಳನ್ನು ಕಾಣಬಹುದು. ಇಲ್ಲಿ ಬೆಡಗುಗಳು ಪ್ರಮುಖ ಪಾತ್ರವಹಿಸಿ ಒಂದೇ ಬೆಡಗಿನ

ಕೊರಬಟ್ಟಿ, ಇಕೋತ್ತ್ಯಾ ಮತ್ತು ಸಾವುಂಡ್ಯಾರು ಪರಸ್ಪರ ಮದುವೆಯಾಗುತ್ತದೆ. ವೆಂಪಳಜ್ಯ ಖೋಡಿಯಾರ್, ಹೋದರಕ್ಕ್ಯಾ ಜೊತೆ ವಿವಾಹ ಕಾರ್ಯ ನಡೆಸುತ್ತಾರೆ. ಒಂದೇ ಬೆಡಗಿನೊಂದಿಗೆ ವಿವಾಹ ಸಾಧ್ಯವಾಗದೇ ಇರುವುದು ಅಡವಿ ಚೆಂಚರಲ್ಲಿ ಕಾಣಬಹುದು. ಅಡವಿ ಚೆಂಚರು ಮದುವೆಯ ಒಂದು ಹಗಲು ಒಂದು ರಾತ್ರಿಯಲ್ಲಿ ಮುಗಿಸಿ ಬಿಡುತ್ತಾರೆ. ಚೆಂಚರು ಮದುವೆ ಮಾಡಿಸುವುದನ್ನು 'ಉಪಾದಿ' ಎಂದು ಕರೆಯುತ್ತಾರೆ. ಹುಡುಗ, ಹುಡುಗಿಯನ್ನು ಹೆಗಲ ಮೇಲೆ ಹೊತ್ತುಕೊಂಡು ತನ್ನ ಮನೆಗೆ ಓಡಿಕೊಂಡು ಹೋಗುತ್ತಾನೆ. ದಾರಿ ಅಡ್ಡಗಟ್ಟಿದ ಬೀಗತಿಯರು ಹುಡುಗನಿಗೆ ಹುಡುಗಿಯ ಹೆಸರು ಹೇಳುವಂತೆ ಕೀಟಲೆ ಮಾಡುತ್ತಾರೆ. ನಂತರ ಹುಡುಗ, ಹುಡುಗಿ ತಮ್ಮ ತಮ್ಮ ಮನೆಯ ದೇವರ ಮುಂದೆ ಕುಳಿತು ರಾತ್ರಿ ಕಳೆಯುತ್ತಾರೆ. ಮಾರನೆಯ ದಿನ ಹುಡುಗಿಗೆ ಸೆರಗು ಉಲ್ಪಾ ಹಾಕಿಸುತ್ತಾರೆ. ಅದೇ ರಾತ್ರಿಯಲ್ಲಿ ಗಂಡನನ್ನು ಅಲಂಕರಿಸಿ ಮದುವೆ ಮಾಡಿಸುತ್ತಾರೆ.[೨೧]

ಅಡವಿ ಚೆಂಚರಲ್ಲಿ ಮೊದಲು ಮತ್ತು ಎರಡನೆಯ ವಿವಾಹ ಪದ್ಧತಿಗಳು ಇವೆ. ಆದರೆ ಮೂರನೇ ರೀತಿಯ ವಿವಾಹ ಕ್ರಮವು ಆಧುನಿಕತೆಯ ಪ್ರಭಾವಕ್ಕೊಳಗಾಗಿದ್ದು ಪ್ರಾದೇಶಿಕ ಪ್ರಭಾವದ ಅಂಶಗಳು ಗೋಚರಿಸುತ್ತವೆ. ಅದರಲ್ಲೂ ವಿಶೇಷವಾಗಿ ನೀಲಗಿರಿ ಬೆಟ್ಟ ಸಾಲಿನಲ್ಲಿ ಕಂಡುಬರುವ ಚೆಂಚರ ವಿವಾಹ ಕ್ರಮವು ಸೋಲಿಗರ, ಇರುಳ ಮತ್ತು ಇರುಳಿಗರಂತೆಯೇ ಕಂಡುಬರುತ್ತದೆ. ಆದರೆ ಕೃಷ್ಣಾ ನದಿಯ ಪ್ರದೇಶದಲ್ಲಿ ಕಂಡುಬರುವ ಚೆಂಚರ ವಿವಾಹ ಕ್ರಮವು ಸಂಪೂರ್ಣವಾಗಿ ಭಿನ್ನವಾಗಿ ಕಂಡುಬರುತ್ತದೆ. ಸೋಲಿಗ ಮತ್ತು ಇರುಳಿಗರೂ ಅಂಥದ್ದೇ ಹೇಳಿಕೊಳ್ಳುವಂತಹ ಭಿನ್ನತೆಗಳೇನು ಕಂಡುಬರುವುದಿಲ್ಲ. ಇರುಳಿಗರಲ್ಲಿರುವಂತೆಯೇ ಗಂಡು, ಹೆಣ್ಣು ಪರಸ್ಪರ ಇಷ್ಟಪಟ್ಟರೆ ಇಬ್ಬರು ಕಾಡಿಗೆ ಓಡಿ ಹೋಗುತ್ತಿದ್ದರು. ಕೆಲದಿನಗಳ ನಂತರ ಹಾಡಿಗೆ ಹಿಂತಿರುಗುತ್ತಿದ್ದರು. ಆಗ ಕುಲದ ಯಜಮಾನರೆಲ್ಲರೂ ಸೇರಿಕೊಂಡು ಹುಡುಗಿಗೆ ಇವನು ನಿನ್ನ ಬಾಳಿಸುವನೆಂಬ ನಂಬಿಕೆ ಇದೆಯೇ ಎಂದು ಕೇಳುತ್ತಾರೆ. ಅವಳು ಒಪ್ಪಿಕೊಂಡರೆ ಮರ ಸುತ್ತುವ ಮೂಲಕ ಮದುವೆಯ ಮಾಡಿಸುತ್ತಾರೆ. ಕೆಲವೊಮ್ಮೆ ಹೀಗೆ ಓಡಿ ಹೋದವರು ಮಗುವನ್ನು ಎತ್ತಿಕೊಂಡು ಬಂದಿರುವುದುಂಟು. ಗಂಡು ಹೆಣ್ಣು ಒಂದಾಗಲು ಮದುವೆಯೇ ಆಗ ಬೇಕೆಂದಿಲ್ಲ, ಪರಸ್ಪರ ಇಷ್ಟಪಟ್ಟರೆ ಓಡಿ ಹೋಗುತ್ತಾರೆ. ಅದೇ ಮದುವೆ ಆದಂತೆ. ಆದರೆ ಸೋಲಿಗರಲ್ಲಿ ಅಪರಾಹ್ನ, ವಿವಾಹ, ಸೇವಾ ವಿವಾಹ, ಅಕ್ರಮ ಪ್ರವೇಳ ವಿವಾಹ, ಬಹುಪತ್ನಿತ್ವ, ಏಕಸಂಗಾತಿ ವಿವಾಹ, ಬಲವಂತ ವಿವಾಹ ಇತ್ಯಾದಿ ಬಗೆಯ ವಿವಾಹಗಳು ಕಂಡುಬರುತ್ತವೆ.[೨೨]

ಸೋಲಿಗರ ಮತ್ತು ಇರುಳಿಗರ ವಿವಾಹಗಳ ಅತ್ಯಂತ ಸರಳವಾದವುಗಳಾಗಿರುತ್ತವೆ. ವಧುದಕ್ಷಿಣೆ ಹಿಂದೆ ಪ್ರಚಲಿತದಲ್ಲಿತ್ತು. ಇಂದು ವರದಕ್ಷಿಣೆ ಇದೆ. ಸೋಲಿಗರು ಒಂದುವರೆ ರೂಪಾಯಿ ವಧುದಕ್ಷಿಣೆ ನೀಡಿದರೆ. ಇರುಳಿಗರೂ ನಾಲ್ಕಾಣೆ ವಧುದಕ್ಷಿಣೆ ನೀಡುವ ಪದ್ಧತಿ

ಜಾರಿಯಲ್ಲಿದೆ.[೨೩] ಬುಡಕಟ್ಟುಗಳಲ್ಲಿ ವಿವಾಹವು ಎಷ್ಟು ಸರಳವೋ, ವಿಚ್ಛೇದನ ಅಷ್ಟೇ ಕಷ್ಟಕರವಾಗುತ್ತದೆ. ಇದಕ್ಕೆ ಕುಲ ಪಂಚಾಯಿತಿ ಒಪ್ಪಿಗೆ ಅವಶ್ಯಕವಾಗಿರುತ್ತವೆ. ಪರಸ್ಪರ ಮದುವೆಯಾಗುವುದಕ್ಕೆ ಇಲ್ಲದ ಕಟ್ಟುಪಾಡುಗಳು ವಿಚ್ಛೇದನಕ್ಕೆ ಹೇರಳವಾಗಿ ಕಂಡುಬರುತ್ತವೆ.

ಇರುಳಗ ಮತ್ತು ಸೋಲಿಗರಲ್ಲಿ ವಿಚ್ಛೇದನ ಅತ್ಯಂತ ಗಂಭೀರ ಮತ್ತು ಕಟ್ಟುನಿಟ್ಟಾಗಿ ಕಂಡುಬರುತ್ತದೆ. ಗಂಡ ಸತ್ತ ನಂತರ ಹೆಂಡತಿ ಇನ್ನೊಂದು ಮದುವೆಯಾಗಬಯಸಿದ್ದಲ್ಲಿ ಅವಳಿಗಾಗಿರುವ ಮಕ್ಕಳನ್ನು ತಂದೆಯ ಮನೆಯವರೇ ನೋಡಿಕೊಳ್ಳುವುದು ಅಥವಾ ತಾಯಿಯೊಂದಿಗೆ ಮಕ್ಕಳು ಇರಲು ಬಯಸಿದರೆ ಮದುವೆಯಾಗುವವನು ತಮ್ಮ ಮಕ್ಕಳಂತೆ ತಿಳಿದು ಸಾಕಬೇಕು. ವಿಧವಾ ವಿವಾಹ ಪದ್ಧತಿಯಲ್ಲಿ ಸೋಲಿಗರಲ್ಲಿನ ಕಟ್ಟುಪಾಡುಗಳು, ಸಂಪ್ರದಾಯಗಳು ಹೆಚ್ಚು ಎನ್ನುವಂತೆ ಇರುತ್ತವೆ. ಹೊಸ ಮದುವೆಯಾಗುವ ರೀತಿಯಲ್ಲಿ ಗಂಡ ಸತ್ತ ಅಥವಾ ಗಂಡ ಬಿಟ್ಟ ಹೆಣ್ಣನ್ನು ಮದುವೆಯಾಗಲು ಇಚ್ಛಿಸಿದರೆ ಹೊಸ ಮದುವೆಯಾದಂತೆ ಹೆಣ್ಣಿನ ಮನೆಗೆ ಹೋಗಿ ಹೆಣ್ಣು ಕೇಳೋಕು ಒಪ್ಪಿಗೆಯಾದರೆ ವಧುದಕ್ಷಿಣೆ ತೆರವನ್ನು ಕಟ್ಟಿ ಕುಲಸ್ಥರನ್ನೆಲ್ಲ ಸೇರಿಸಬೇಕು ಮತ್ತು ಬಂದವರಿಗೆಲ್ಲ ಮಾಂಸದೂಟವನ್ನು ಹಾಕಿ ಕೂಡಾವಳಿ ಮಾಡಿಕೊಳ್ಳಬೇಕು.

ಒಟ್ಟಾರೆಯಾಗಿ ಇರುಳಿಗ ಮತ್ತು ಸೋಲಿಗರಲ್ಲಿನ ಮದುವೆ ವಿಚಾರದಲ್ಲಿ ಅಂತಹ ಹೇಳಿಕೊಳ್ಳುವಂತಹ ಭಿನ್ನತೆಗಳೇನು ಕಾಣಲು ಸಾಧ್ಯವಿಲ್ಲ. ಇರುಳಿಗರ ಮದುವೆ ಗಮನಿಸಿದಾಗ ನೀಲಗಿರಿಯ ಬೆಟ್ಟದಲ್ಲಿ ಕಾಡು ಇರುಳಿಗರು ಮತ್ತು ಊರು ಇರುಳರೆಂಬ ಎರಡು ವಿಧಗಳಿದ್ದು ಕಾಡು ಇರುಳಿಗರಿಗೆ ಊರು ಇರುಳರಿಗೂ ಯಾವುದೇ ಹೇಳಿಕೊಳ್ಳುವ ವ್ಯತ್ಯಾಸವೇನು ಕಂಡುಬರುವುದಿಲ್ಲ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೇನೆಂದರೆ ಸಿದ್ದಗಂಗಯ್ಯ ಕಂಬಾಳರು ತಮ್ಮ ಕೃತಿಯಾದ ಇಲ್ಲಿಗರ ಸಂಸ್ಕೃತಿ ಎಂಬುವುದರಲ್ಲಿ ಎಡ್ಗರ ಥರ್‌ಸ್ಟನ್ ಮತ್ತು ಎಚ್.ವಿ. ನಂಜುಂಡಯ್ಯ ಅವರು ಗುರುತಿಸುವ ಇರುಳರ ಮದುವೆಯ ವಿಧಿ ವಿಧಾನಗಳನ್ನು ಗಮನಿಸಿ ಇರುಳ ಮತ್ತು ಇರುಳಿಗ ಬೇರೆ ಬೇರೆ ಎಂದು ವಾದಿಸುತ್ತಾರೆ.

ಎಡ್ಗರ್ ಥರ್‌ಸ್ಟನ್ ತಮ್ಮ ಕೃತಿಯಾದ 'Caste and tribes of southern Iindian'ದ ಸಂಪುಟ ೩ರಲ್ಲಿ ಪು. ೩೭೮ರಲ್ಲಿ ಇರುಳರ ಮದುವೆ ಕುರಿತು ಹೀಗೆ ಹೇಳುತ್ತಾರೆ. 'The marriage ceremony as described to me is a very simple affair. A feast is held, at which a sheep is killed, and the guest make a present of a few annas to the bridegram, who give up the money in a cloth and going to the bride's hut conducts her to her future home ಎಂದಿದ್ದಾರೆ. ಹಾಗೆಯೇ ಎಚ್.ವಿ.ನಂಜುಂಡಯ್ಯ ಅವರು ಇರುಳಿಗರ ಮದುವೆಯನ್ನು The marriage ceremonies of Iruligas are very simle. They consist in eloping with an adult girl to jugle and remaing there

for a day or some longer period. After their return to the village of fowler an animal is killed in honour of the event and cast people are fed.[೨೪]

ಈ ಎರಡು ಪ್ರಮುಖ ಅಂಶಗಳನ್ನಿಟ್ಟುಕೊಂಡು ಕಂಬಾಳರು ಇರುಳ ಮತ್ತು ಇರುಳಿಗರು(ಇಲ್ಲಿಗರು) ಬೇರೆ ಬೇರೆ ಎಂದು ಹೇಳುತ್ತಾರೆ. ಆದರೆ ಇರುಳಿಗ ವಕ್ತೃಗಳು ತಮ್ಮ ಮದುವೆಯ ಬಗ್ಗೆ ವಿಚಾರಿಸಿದರೆ ಹೀಗೆ ಹೇಳುತ್ತಾರೆ. ಯಾರ ಸ್ವಾಮಿ ಮದುವೆ ಗಿದ್ವೆ ಮಾಡಿಕೊಳ್ತಿದ್ದರೋ, ಯಾರ್ಗೆ ಯಾರ್ಮೆಲೇ ಇಷ್ಟ ಆಯ್ತೋದು ಅವರವ್ರು ಕರ್ಕೊಂಡು ಓಡೋಗ್ತಾ ಇದ್ರು, ಅಣ್ಣ ಅಕ್ಕ ಅನ್ನೊಂಗಿಲ್ಲ. ಚಿಕ್ಕವ್ವ, ದೊಡ್ಡವ್ವ ಅನ್ನಾಂಗಿಲ್ಲ. ತಂಗಿಗೆ ಅಣ್ಣ ಇಷ್ಟ ಆಯ್ತು ಕರ್ಕೊಂಡು ಹೋಗೋದೆ. ಅವರು ವಾಪಸ್ಸು ಬಂದ್ರೆ ಕುಲಸ್ತರೆಲ್ಲರು ಸೇರಿ ಇಬ್ರೂನು ಸೇರಿಸಿ ಮರಿಗಿರಿ ಕೊಯ್ದು ಎಲ್ಲರಿಗೂ ಊಟ ಹಾಕಿ ಮದುವೆ ಅಂತ ಮಾಡ್ತಿದ್ವಿ, ಇತ್ತೀಚೆಗೆ ಈ ಮದ್ವೆಗಿದ್ವೆ ಅಂತ ನಡಿತ್ತಾ ಇದೆ. ನಮ್ಮಗೆಲ್ಲಾ ಜಾಸ್ತಿ ಅಂಗೆ ಓಡೋಗಿ ಮದ್ವೆ ಆಗಿರೋದು ಎನ್ನುತ್ತಾರೆ.[೨೫]

ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಸಿದ್ಧಗಂಗಯ್ಯ ಕಂಬಾಳರು ಅಧ್ಯಯನ ಕೈಗೊಂಡ ಸಂದರ್ಭವೇ ಬೇರೆ, ಮೇಲಿನ ಅಧ್ಯಯನಕಾರರು ಅಧ್ಯಯನ ಕೈಗೊಂಡ ಸಂದರ್ಭವೇ ಬೇರೆಯಾಗಿದೆ. ಸಂಸ್ಕೃತಿ ಮತ್ತು ಆಚರಣೆಗಳು ನಿರಂತರ ಚಲನೆಯಿಂದ ಕೂಡಿರುವುದಾಗಿದ್ದರಿಂದ ಅಕ್ಕಪಕ್ಕದ ಜನರ ಪ್ರಭಾವ ಇರುಳಿಗರ ಮೇಲೆ ಉಂಟಾಗಿ ಅಥವಾ ತಮ್ಮ ಆಚರಣೆಯ ಬಗ್ಗೆ ಇರಿಸುಮುರಿಸು ಉಂಟಾಗಿ ತಮ್ಮ ಆಚರಣೆಯ ಜೊತೆ ಜೊತೆಗೆ ಅಕ್ಕಪಕ್ಕದ ಸಮುದಾಯಗಳ ಆಚರಣೆಗಳನ್ನು ಅನುಕರಿಸುವ ಸಾಧ್ಯತೆಗಳಿವೆ. ಇರುಳಿಗರಲ್ಲಿ ಹೇಳುವ ಸೋಬಾನೆ ಪದಗಳನ್ನು ಇರುಳಿಗರ ಜೀವನ ವಿಧಾನದಲ್ಲಿ ಒಂದಕ್ಕೊಂದು ಸಂಬಂಧವಿರುವುದಿಲ್ಲ. ಹಾಗೆಯೇ ಇರುಳಿಗರ ಮದುವೆ ಪದ್ಧತಿಯ ಸುತ್ತಮುತ್ತಲಿನ ಒಕ್ಕಲಿಗ, ಹೊಲೆಯ, ಬಣಜಿಗ, ಲಿಂಗಾಯಿತರು ಮಾಡುತ್ತಾರೆ. ಅನಿವಾರ್ಯವಾಗಿ ಕಾಡಿನಿಂದ ಹೊರಗೆ ಬಂದ ಇರುಳಿಗರು ಗ್ರಾಮಗಳಲ್ಲಿ ವಾಸಿಸಲು ಪ್ರಾರಂಭಿಸಿದ್ದರಿಂದ ಅನುಕರಣೆಯ ಸಾಧ್ಯತೆಗಳು ಸಹಜವಾಗಿವೆ. ಇರುಳ ಮತ್ತು ಇರುಳಿಗರು ಬೇರೆ ಬೇರೆ ನೀಲಗಿರಿಯ ಬೆಟ್ಟದ ಇರುಳರಿಗೂ ಊರು ಇರುಳಿಗರಿಗೂ ಮದುವೆ ಆಚರಣೆಯು ಸಂಪೂರ್ಣವಾಗಿ ಭಿನ್ನವಾಗಿದೆ. ಏಕೆಂದರೆ ಅವರು ಹೆಣ್ಣಿನ ಮನೆಯಿಂದ ಗಂಡಿನ ಮನೆಗೆ ಹೋಗುವಾಗ ಮಾರ್ಗ ಮಧ್ಯೆಯೇ ಗಂಡು ಹೆಣ್ಣಿಗೆ ತಾಳಿ ಕಟ್ಟುತ್ತಾನೆ. ಯಾವ ಗಳಿಗೆ, ಕಾಲ, ಸ್ಥಳ ನೋಡುವುದಿಲ್ಲ. ಇದು ಸುತ್ತಮುತ್ತಲಿನ ಸಮುದಾಯದವರ ಪ್ರಭಾವ ಎಂದೇ ಭಾವಿಸುವುದು. ಆದರೆ ವೀಳ್ಯ ತಿದ್ದುವುದು, ನೀರು ತರುವುದು, ಕುಲಗೌಡ, ಕಟುಗೌಡ ಅಪ್ಪಣೆ ಕೋಲುಗಾರನ ಭಾಗವಹಿಸುವಿಕೆ ಊರು ಇರುಳ, ಕಾಡು ಇರುಳ, ಇರುಳಿಗರಲ್ಲಿಯು ಕಂಡುಬರುತ್ತದೆ. ಆದ್ದರಿಂದ ಇರುಳ, ಇರುಳಿಗ, ಇರುಳಾಸ್ ಒಂದೇ ಆಗಿದ್ದು ಪ್ರಾದೇಶಿಕತೆಗೆ ತಕ್ಕಂತೆ ಭಾಷೆ, ಹೆಸರು ಮತ್ತು ಆಚರಣೆಗಳು ಬದಲಾವಣೆ

ಕಂಡುಬರುತ್ತವೆ. ಆರಾಧಿಸುವ ದೈವಗಳು, ಆಚರಣೆಗಳು, ದೈಹಿಕ ಲಕ್ಷಣಗಳು, ಕುಲವೃತ್ತಿಗಳು ಒಂದೇ ಆಗಿರುವುದನ್ನು ಕಾಣಬಹುದು.

ಮರಣ ಸಂಬಂಧಿ ಆಚರಣೆಗಳು

ಅಡವಿ ಚೆಂಚರಲ್ಲಿ ಸತ್ತ ವ್ಯಕ್ತಿಯ ದೇಹವನ್ನು ಗುಡಿಸಲಿನಿಂದ ಹೊರಕ್ಕೆ ತಂದು ಪೂರ್ವಕ್ಕೆ ಕೈಕಾಲು ಮಾಡಿ ಪಶ್ಚಿಮಕ್ಕೆ ತಲೆಮಾಡಿ ಅಂಗಾತವಾಗಿ ಮಲಗಿಸುತ್ತಾರೆ. ಚಟ್ಟಕಟ್ಟಿ ಮಸಣದ ಕಡೆ ಹೊತ್ತೊಯ್ಯುತ್ತಾರೆ. ಅಡವಿ ಚೆಂಚರಲ್ಲಿ ಸತ್ತ ವ್ಯಕ್ತಿಗಳನ್ನು ಸುಡುವ, ಮಣ್ಣಿಗಾಸುವ ಎರಡು ವಿಧಾನಗಳನ್ನು ಮಾಡುತ್ತಾರೆ. ದೇವರ ಪೂಜಾರಿ ಅಥವಾ ಮದುವೆ ಆಗದೇ ಇರುವವರು ಸತ್ತರೆ ಮಣ್ಣಿಗೆ ಹಾಕುತ್ತಾರೆ. ಇನ್ನುಳಿದಂತೆ ಹನ್ನೊಂದು ವರ್ಷ ಮೇಲ್ಪಟ್ಟ ಎಲ್ಲ ಗಂಡಸರು ಮತ್ತು ಹೆಂಗಸರನ್ನು ಸುಡುವ ಕೆಲಸ ಮಾಡುತ್ತಾರೆ. ಹನ್ನೊಂದು ವರ್ಷ ಕಡಿಮೆ ವಯಸ್ಸಿನ ಮದುವೆ ಆಗದವರು, ಪೂಜಾರಿಯ ಹೆಣವನ್ನು ರುದ್ರಭೂಮಿಗೆ ತರುವುದಕ್ಕಿಂತ ಮುಂಚೆ ಕೆಲವು ಜನರನ್ನು ಮುಂದಾಗಿ ಬಂದು ಕುಣಿ ತೋಡಿರುತ್ತಾರೆ. ಕುಣಿಯ ಪಕ್ಕದಲ್ಲಿ ಹೆಣವನ್ನು ಹೊತ್ತು ತಂದು ಸಿದಗಿ(ಚಟ್ಟ)ವನ್ನು ಬುಡಮೇಲು ಮಾಡಿ(ಹೆಣವನ್ನು ಬಿಗಿಯಾಗಿ ಚಟ್ಟಕ್ಕೆ ಕಟ್ಟುತ್ತಾರೆ). ಹೆಣಕ್ಕೆ ಹಸಿಬೆಣ್ಣೆ ಸವರಿ ಸ್ನಾನ ಮಾಡಿಸುತ್ತಾರೆ. ನಂತರ ಪೂಜೆ ಮಾಡಿ ಮಣ್ಣು ಅಥವಾ ಸುಡುವ ಕೆಲಸವನ್ನು ಮಾಡುತ್ತಾರೆ. ಆದರೆ ಇರುಳಿಗರಲ್ಲಿ ಮನೆಯ ಹತ್ತಿರವೇ ಸ್ನಾನ ಮಾಡಿಸುತ್ತಾರೆ. ಸುಡುವುದಾಗಲಿ, ಮಣ್ಣು ಮಾಡುವುದಾಗಲಿ ಮಾಡದೆ ಕಲ್ಲು ಸೇವೆ ಮಾಡುತ್ತಾರೆ. ಅಡವಿ ಚೆಂಚರು ಮಣ್ಣು ಅಥವಾ ಧಪನ ಮಾಡಿದ ಜಾಗಕ್ಕೆ ೧೧ನೇ ದಿನದ ಕಾರ್ಯದವರೆಗೂ ಹೋಗಿ ಬರುವುದು ವಿಶೇಷವಾಗಿದೆ. ಇರುಳಿಗರು ಹನ್ನೊಂದು ದಿನಕ್ಕೆ ಆ ಕಡೆ ಹೋಗುತ್ತಾರೆ. ಇಲ್ಲವಾದರೆ ತಲೆಕಟ್ಟಿಗೆ ಪೂಜಿಸಿ ಬರುವುದು ಇದೆ.

ವ್ಯಕ್ತಿ ಸತ್ತ ಮೂರನೇ ದಿನಕ್ಕೆ ಸಮಾಧಿ ಮೇಲೆ ಎಡಗೈಯಿಂದ ರೊಟ್ಟಿ ಮಾಡಿ ಅದರ ಮೇಲೆ ತುಪ್ಪ, ಪುಟಾಣಿ, ಬೆಲ್ಲ ಹಾಕಿ ಸಮಾಧಿಯ ಮೇಲೆ ಇಟ್ಟು ಕಾಗೆಗಳು ತಿನ್ನುತ್ತವೆ ಎಂದು ನೋಡುತ್ತಾರೆ. ತಿಂದರೆ ಸತ್ತವರ ಆತ್ಮಕ್ಕೆ ಶಾಂತಿಯಾಗಿದೆ ಎಂದು ನಂಬುತ್ತಾರೆ. ವ್ಯಕ್ತಿಯ ಸುಟ್ಟಿದ್ದರ ಬೂದಿಯನ್ನು ನೀರಿನಲ್ಲಿ ಬಿಡುತ್ತಾರೆ. ಹನ್ನೊಂದನೇ ದಿನಕ್ಕೆ ದಿವಸ (ಕಾರ್ಯ) ಮಾಡಿ ನಂತರ ಸಂಜೆ ಸತ್ತ ವ್ಯಕ್ತಿಯ ಮನೆಯ ಮುಂದೆ ಸೇರುತ್ತಾರೆ. ಮನೆಯ ಮುಂದಿನ ನೆಲ ಸಾರಿಸಿ ಹೊಸದಾಗಿ ತಂದ ಇಪ್ಪತ್ನಾಲ್ಕು ಚಟಿಕೆಗಳನ್ನು ಹನ್ನೆರಡು, ಹನ್ನೆರಡರಂತೆ ಎರಡು ಸಾಲಿನಲ್ಲಿ ಮುಗಿಲಿಗೆ ಬಾಯಿ ತೆರೆದಂತೆ ಇಡುತ್ತಾರೆ. ಏಳು ಸುತ್ತು ಆ ಎರಡು ಚಟಕೆ ಸಾಲಿಗೆ ದಾರವನ್ನು ಸುತ್ತುತ್ತಾರೆ.

ಈ ಚಟಿಕೆಗಳಿಗೆ ನೀರು ತುಂಬಿಸುವ ಕ್ರಿಯೆ ಅತ್ಯಂತ ಕುತೂಹಲಕರವಾಗಿದ್ದುದರಿಂದ ದೊಡ್ಡ ಗಡಿಗೆಯ ತಳಕ್ಕೆ ತೂತು ಮಾಡಿ ಅದನ್ನು ನೆಲ್ಲಿಗೆ ಕಟ್ಟಿರುತ್ತಾರೆ. ನೆಲ್ಲಿ ತ್ರಿಕೋನಾಕಾರದಲ್ಲಿ

ಬಿದಿರು ಕಟ್ಟಿಗಳಿಗೆ ಕಟ್ಟಿ ಅವುಗಳ ತುದಿಯನ್ನು ಮೂರು ದಾರಗಳನ್ನು ಕಟ್ಟಿ ಜೋತಾಡುವಂತೆ ಮಾಡಿ ತ್ರಿಕೋನಾಕಾರದ ತಳದ ಮೇಲೆ ಗಡಿಗೆ ಇರಿಸಿರುತ್ತಾರೆ. ಬಾವಿಯಿಂದ ನೀರು ಸೇದಿ ಗಡಿಗೆಗೆ ಸುರಿಯುತ್ತಾರೆ. ತಳದಿಂದ ನೀರು ಬರುತ್ತಿದ್ದ ಹಾಗೆ ತಂದು ಚಟಿಗೆ ತುಂಬುತ್ತಾರೆ. ನೀರು ತರುವ ಸ್ಥಳ ಬಹಳ ದೂರವಿದ್ದು, ಗಡಿಗೆ ತಳದಿಂದ ನೀರು ಸೋರಿ ತೀರ ಕಡಿಮೆ ಆದರೆ ಜೊತೆಗೆ ಕೊಡಪಾನದಾಗ ಹೊತ್ತು ತರುವ ವ್ಯಕ್ತಿಯು ಗಡಿಗೆಗೆ ನೀರನ್ನು ಸುರಿಸುತ್ತಾ ನೀರಿನ ಮಟ್ಟವನ್ನು ಕಾಪಾಡುತ್ತಿರುತ್ತಾರೆ.[೨೬]

ಹೀಗೆ ತಳ ತೂತಿಗೆ ಗಡಿಗೆ ಚಟಿಕೆಗಳನ್ನು ತುಂಬುವಾಗ ಒಡೆದು ಹೋದರೆ ಅಪಶಕುನ ವೆಂದು ನಂಬುತ್ತಾರೆ. ಇಪ್ಪತ್ನಾಲ್ಕು ಚಟಿಕೆಗಳು ತುಂಬಿಯಾದ ಮೇಲೆ ಆ ತೂತಿನ ಗಡಿಗೆಯೊಳಗೆ ರೊಟ್ಟಿಯ ತುಂಡು ತುಪ್ಪ ಹಾಕಿ ದೂರದಲ್ಲಿ ಇರಿಸುತ್ತಾರೆ. ನಾಯಿಗಳು ಬಂದು ತಿನ್ನುವ ದೃಶ್ಯವನ್ನು ನೋಡಲು ನೆರೆದವರೆಲ್ಲರೂ ಕುತೂಹಲದಿಂದ ವೀಕ್ಷಿಸುತ್ತಾರೆ. ಇದೊಂದು ಅಡವಿ ಚೆಂಚರಲ್ಲಿ ಕಂಡುಬರುವ ವಿಶಿಷ್ಟ ಆಚರಣೆಯಾಗಿದೆ. ಇದರಿಂದ ಇರುಳಿಗರಿಗೂ, ಚಂಚರಿಗೂ ಮರಣ ಸಂಬಂಧ ಆಚರಣೆಗಳು ಭಿನ್ನ ಎಂದು ಹೇಳಬಹುದು.

ಸೋಲಿಗರಲ್ಲಿ ಸಾವಿನ ಸಂದರ್ಭದ ಆಚರಣೆಗಳು: ಸಾಮಾನ್ಯ ಇರುಳಿಗರ ಮತ್ತು ಸೋಲಿಗರಲ್ಲಿನ ಸಾವಿನ ಸಂದರ್ಭದ ಆಚರಣೆಗಳು ಸಾಮ್ಯತೆ ಹೆಚ್ಚಾಗಿಯೇ ಕಂಡುಬರುತ್ತದೆ. ಇರುಳಿಗರಲ್ಲಿ ವ್ಯಕ್ತಿ ಸತ್ತರೆ ಅವನು ದೈಹಿಕವಾಗಿ ನಮ್ಮಂತೆ ಬೇರೆಯಾಗಿ ಮಾನಸಿಕವಾಗಿ ತಮ್ಮೊಂದಿಗೆ ಇರುತ್ತಾನೆ ಎಂಬ ನಂಬಿಕೆ ಇಟ್ಟುಕೊಂಡಿರುತ್ತಾರೆ. ಅದೇ ರೀತಿಯಲ್ಲಿಯೇ ಸೋಲಿಗರು ವ್ಯಕ್ತಿ ಸತ್ತರೆ ಅವನು ದೈಹಿಕವಾಗಿ ನಮ್ಮಿಂದ ದೂರವಾಗಿ ಮಾನಸಿಕವಾಗಿ ನಮ್ಮೊಂದಿಗಿದ್ದು ನಮ್ಮ ಕಷ್ಟ ಕಾರ್ಪಣ್ಯಗಳಿಂದ ಕಾಪಾಡುತ್ತಾರೆ ಎಂದು ನಂಬಿಕೊಂಡಿದ್ದಾರೆ. ಇರುಳಿಗರು ವ್ಯಕ್ತಿಗೆ ಎರಡು ಉಸಿರು ಇರುತ್ತದೆ. ವ್ಯಕ್ತಿ ಸತ್ತ ಕೂಡಲೇ ಚಿಕ್ಕ ಉಸಿರು ಹೋಗಿ ಅವನನ್ನು ಮಣ್ಣು ಮಾಡಿದ ಅಥವಾ ಕಲ್ಲು ಸೇವೆ ಮಾಡಿದ ನಂತರ ದೊಡ್ಡ ಉಸಿರು ಹೋಗುತ್ತದೆ ಎಂದು ನಂಬಿದ್ದಾರೆ. ಅದೇ ರೀತಿಯಲ್ಲಿ ಸೋಲಿಗರೂ ಎರಡು ಬಗೆಯ ಆತ್ಮಗಳ ಕಲ್ಪನೆಯನ್ನು ಇಟ್ಟುಕೊಂಡಿದ್ದಾರೆ. ಇದನ್ನು ಅವರು ಸೋಲು ಎಂದು ಕರೆಯುತ್ತಾರೆ. ಅವುಗಳೆಂದರೆ ಚಿಕ್ಕಸೋಲು ಮತ್ತು ದೊಡ್ಡಸೋಲು. ಚಿಕ್ಕಸೋಲು ಎಂಬುದು ಚಲಿತ ಆತ್ಮ. ಅದು ಮನುಷ್ಯನ ದೇಹದಲ್ಲಿ ಇರುವವರೆಗೆ ಬದುಕಿರುತ್ತಾನೆ. ಇದು ಮನುಷ್ಯದೇಹವನ್ನು ಬಿಟ್ಟ ನಂತರ ಅವನು ಸಾಯುತ್ತಾರೆ. ಸತ್ತವನು ಬಿಟ್ಟ ಚಿಕ್ಕಸೋಲು ದೊಡ್ಡಸೋಲನ್ನು ಸೇರುತ್ತದೆ ಎಂಬುದು ಸೋಲಿಗರು ನಂಬುತ್ತಾರೆ.[೨೭]

ಇರುಳಿಗರಂತೆ ಸತ್ತ ವ್ಯಕ್ತಿಯನ್ನು ಮನೆಯ ಹೊರಗೆ ತಂದು ಮಲಗಿಸುತ್ತಾರೆ. ಮನೆ ಮುಂದೆ ಬೆಂಕಿ ಹಾಕಿ ಎಲ್ಲ ನೆಂಟರಿಷ್ಟರಿಗೆ ಹೇಳಿ ಕಳುಹಿಸುತ್ತಾರೆ. ನೆಂಟರಿಷ್ಟರೆಲ್ಲ ಬಂದ ಮೇಲೆ ಸ್ನಾನ ಮಾಡಿಸಿ ಚಟ್ಟಕಟ್ಟಿ ಅದರ ಮೇಲೆ ಮಲಗಿಸಿ ಸ್ಮಶಾನದ ಕಡೆ ತೆಗೆದುಕೊಂಡು

ಹೋಗುತ್ತಾರೆ. ಸ್ಮಶಾನ ಸಮೀಪಿಸುತ್ತಿದ್ದಂತೆ ಚಟ್ಟವನ್ನು ಕೆಳಗಿಳಿಸಿ ಹಿಂದಿನವರು ಮುಂದಕ್ಕೆ ಮುಂದಿನವರು ಹಿಂದಕ್ಕೆ ಹೆಗಲು ಬದಲಾಯಿಸಿಕೊಳ್ಳುತ್ತಾರೆ. ಎಲ್ಲರೂ ಒಂದೊಂದು ಕಲ್ಲನ್ನು ತೆಗೆದುಕೊಂಡು ಒಂದು ಕಡೆ ಗುಡ್ಡೆ ಹಾಕುತ್ತಾರೆ. ಇನ್ನು ಗುಂಡ ಗುಡ್ಡ ಎನ್ನುತ್ತಾರೆ. ಇರುಳಿಗರು ಇದನ್ನು ತಲೆಕಲ್ಲು ಎಂದು ಕರೆಯುತ್ತಾರೆ. ನಂತರ ಗೋಪಮನೆದ ಕಡೆ ತೆಗೆದುಕೊಂಡು ಹೋಗುತ್ತಾರೆ. ಇನ್ನುಳಿದಂತೆ ಇರುಳಿಗ ಆಚರಣೆಯಂತೆಯೇ ನಡೆಯುತ್ತದೆ. ಇರುಳಿಗರಲ್ಲಿರುವಂತೆ ಸೋಡು ನೋಡುವ ಪದ್ಧತಿ ಇದೆ. ಇದನ್ನು ಸೋಲಿಗರು ಸೊಳ್ಳ ನೋಡುವುದು ಎನ್ನುತ್ತಾರೆ. ಚಟ್ಟಕ್ಕೆ ಹೆಗಲುಕೊಟ್ಟ ಇರುಳಿಗರು ತಿಥಿ ದಿನ ಅಂದರೆ ಸತ್ತ ಹನ್ನೊಂದನೆ ದಿನಕ್ಕೆ ಮಾಡುತ್ತಾರೆ. ಆದರೆ ಸೋಲಿಗರು ಸತ್ತ ದಿನವೇ ಮಾಡುತ್ತಾರೆ.

ಮಾದೇಶ್ವರ ಬೆಟ್ಟದ ಸೋಲಿಗರು ಐದು ದಿನಕ್ಕೆ ತಿಥಿ ಕಾರ್ಯ ಮಾಡಿದರೆ ಇನ್ನುಳಿದ ಸೋಲಿಗರು ೧೨ನೇ ದಿನಕ್ಕೆ ಮಾಡುತ್ತಾರೆ. ಇನ್ನುಳಿದಂತೆ ಎಲ್ಲವೂ ಇರುಳಿಗರ ಸಂಪ್ರದಾಯಂತೆ ಇದ್ದು ಬೆಟ್ಟದ ಸೋಲಿಗರು ಊಟ ಮುಗಿದ ನಂತರ ಹನ್ನೆರಡು ಜನ ಉಳಿದುಕೊಂಡು ಪ್ರತಿಯೊಬ್ಬರು ಒಂದೊಂದು ಹಿಡಿಯಾಗಿ ಒದು ಬಿಂದಿಗೆ ನೀರು ತೆಗೆದುಕೊಂಡು ಪೂಜೆ ಮಾಡಿರುವ ಜಾಗಕ್ಕೆ ಹೋಗಿ ಒಬ್ಬರ ಕೈ ನೀರು ಮತ್ತು ರಾಗಿ ಇನ್ನೊಬ್ಬರ ಕೈ ಮೇಲೆ ಬೀಳುವಂತೆ ಹುಯ್ಯುತ್ತಾ ಗುಡ್ಡ ಗುಡ್ಡ ಎಂದು ಜೋರಾಗಿ ಬೊಳ್ಳ ಹಾಕ್ತಾರೆ. ಇದರಿಂದ ಸತ್ತವನ ಆತ್ಮ ಭೂಮಿಯಲ್ಲಿದ್ದರೆ ಭೂಮಿ ಬಿಟ್ಟು ಹೋಗಿಬಿಡಲೆಂದು ಮಾಡುತ್ತಾರೆ.[೨೮]

ಹಾಲು, ತುಪ್ಪದ ದಿನ ಇರುಳಿಗರಿಗಿಂತ ಸೋಲಿಗರ ಕೆಲವು ಆಚರಣೆಗಳಲ್ಲಿ ಭಿನ್ನವಾಗಿ ಕಂಡುಬರುತ್ತವೆ. ಸಮಾಧಿಯನ್ನು ಹಸನು ಮಾಡಿ ಅದರ ಮೇಲೆ ತಿಂಡಿ ಪದಾರ್ಥಗಳನ್ನೆಲ್ಲಾ ಇಟ್ಟು ಕೆಲವು ಪ್ರಮುಖ ಐದು ಜನರನ್ನು ಕರೆದು ಅವರ ಕಾಲಿಗೆ ಅರಿಶಿಣ, ಕೆಂಪು, ಕಪ್ಪು, ಬಿಳಿದಾರದಲ್ಲಿ ಕಟ್ಟಿ ಒಬ್ಬೊಬ್ಬರನ್ನು ಒಂದೊಂದು ದಿಕ್ಕಿಗೆ ಕಳುಹಿಸುತ್ತಾರೆ. ಹೋಗಿ ಒಂದೊಂದು ದಿಕ್ಕಿಗೆ ಹೋದ ಒಬ್ಬೊಬ್ಬ ವ್ಯಕ್ತಿಗಳು ಒಬ್ಬನ ಕಾಲಿಗೆ ಒಂದು ಕಲ್ಲು ತಾಗುತ್ತದೆ. ಅದನ್ನು ತಂದು ತೊಳೆದು ಪೂಜೆ ಮಾಡಿ ಸತ್ತ ವ್ಯಕ್ತಿಯ ಎದೆಯ ಮೇಲೆ ಇಡುತ್ತಾರೆ. ನಂತರ ಅದೇ ಒಂದು ಮರದ ಪೊಟರೆಯಲ್ಲಿಟ್ಟು ತಾವೇ ಊಟದ ಕ್ರಿಯೆಯಲ್ಲಿ ಮುಗಿದ ಮೇಲೆ ಆ ಕಲ್ಲಿಗೆ ಒಂದು ಕೋಳಿ ಮರಿಯನ್ನು ಬಲಿಕೊಟ್ಟು ಅದು ಈಗಾಗಲೇ ಹಿರಿಯರ ಕಲ್ಲುಗಳನ್ನು ಗುಹೆಗೆ ಸೇರಿಸಿ ಬರುತ್ತಾರೆ.

ಇಂತಹ ಕೆಲವು ಆಚರಣೆಗಳನ್ನು ಬಿಟ್ಟರೆ ಇರುಳಿಗ ಮತ್ತು ಸೋಲಿಗರಲ್ಲಿ ಅಂತಹ ಯಾವುದೇ ಭಿನ್ನತೆಗಳನ್ನು ಕಾಣಲು ಸಾಧ್ಯವಿಲ್ಲ. ಇವುಗಳನ್ನು ಗಮನಿಸಿದಾಗ ಇರುಳಿಗರ ವಕ್ತೃಗಳು ಹೇಳುವಂತೆ ಸೋಲಿಗರು ಇರುಳಿಗರು, ಜೇನು ಕುರುಬರು, ಬೇಡಗಂಪಣರು, ಕಾಡು ಕುರುಬರು ಒಂದೇ ಮೂಲದ ಅಣ್ಣ ತಮ್ಮಂದಿರು ಎನ್ನುವ ವಾದಕ್ಕೆ ಪುಷ್ಟಿ ದೊರೆಯುತ್ತದೆ.

ಇರುಳ, ಇರುಳಾಸ್, ಇರುಳಿಗ, ಇಲ್ಲಿಗ, ಇರುಳಾರ್ ಎಂಬುದು ಪ್ರಾದೇಶಿಕ ಭಿನ್ನತೆಯ ನಾಮಪದವೇ ಹೊರತು ಅವು ಬೇರೆ ಬೇರೆ ಬುಡಕಟ್ಟುಗಳಲ್ಲಿ ಅಧ್ಯಯನ ಮಾಡುವ ಅಧ್ಯಯನಕಾರರ ಗ್ರಹಿಕೆಯು ಕೆಲವು ಸಂದರ್ಭದಲ್ಲಿ ಬೇರೆ ಬೇರೆ ಎಂಬುದು ಪ್ರತಿಪಾದಿಸುತ್ತವೆ ಎಂಬುದಾಗಿ ಕಂಡುಬರುತ್ತದೆ. ಚೆಂಗಲ್‌ಪೇಟೆಯ ಇರುಳ ವಕ್ತೃ ಒಬ್ಬರು ಇದಕ್ಕೆ ಸಂಬಂಧಿಸಿದ ತಮ್ಮ ಅಭಿಪ್ರಾಯವನ್ನು ಹೀಗೆ ಹೇಳುತ್ತಾರೆ. ನಾವು ಮಾಡುವ ವೃತ್ತಿಗಳ ಅನುಸಾರವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗಿದೆ. ನಮ್ಮಲ್ಲಿ ಮೀನು ಹಿಡಿಯುವವರು ಅರಣ್ಯದಲ್ಲಿ ಬೇಟೆಯಾಡಿ ಜೀವನ ಸಾಗಿಸುವವರು. ಇದ್ದಿಲು ಕೆಲಸ ಮಾಡುವ ಅರಣ್ಯ ಇಲಾಖೆಯಲ್ಲಿ, ಎಸ್ಟೇಟ್, ಕೂಲಿ ಕೆಲಸ, ಬೇರೆ ದೇವರ ಪೂಜೆ ಮುಂತಾದ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಾರೆ. ಇವುಗಳನ್ನು ನೋಡಿದ ಅಧ್ಯಯನಕಾರರು ಇವುಗಳಿಗೆ ಒಂದೊಂದು ಹೆಸರು ಕೊಟ್ಟಿರುವುದು ನಮಗೆ ಕಂಡುಬಂದಿದೆ.[೨೯]

ಅದೇ ರೀತಿಯಲ್ಲಿ ಮೈಸೂರು ಭಾಗ ಇರುಳಿಗರಲ್ಲಿ ಕಸುಬಾ ಎಂಬ ಹೆಸರಿನಿಂದಲು ಕರೆಯುತ್ತಾರೆ. ಇದಕ್ಕೆ ಅಧ್ಯಯನಕಾರರು ಅವರು ಕಸೂತಿ ಕೆಲಸ ಮಾಡುತ್ತಾರೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಅರಣ್ಯದಿಂದ ಹೊರ ಬಂದ ಇರುಳಿಗರು ಬದುಕುವುದಕ್ಕಾಗಿ ಅನೇಕ ವೃತ್ತಿಗಳ ಆಯ್ಕೆ ಮಾಡಿಕೊಂಡು ಅದರಿಂದ ಅವರಿಗೆ ಇನ್ನೊಂದು ಹೆಸರು ಸೂಚಿಸುವುದು ಎಷ್ಟು ಸರಿ? ೧೯೬೧ ಮತ್ತು ೧೮೦೦ರಲ್ಲಿ ಫ್ರಾನ್ಸಿಸ್ ಬುಕಾನನ್ ಇರುಳಿಗರನ್ನು ಕಾಡ್‌ಚೆನ್ಸುಗಳು ಎಂದು ಕರೆದಿದ್ದಾರೆ. ಇದಕ್ಕೆ ಬುಕಾನನ್ ಕೊಡುವ ಕಾರಣ ಅವರ ತಮ್ಮ ಪದ್ಧತಿ, ಒಂದು ಭಾಷೆಯನ್ನು ಮಾತನಾಡುತ್ತಿದ್ದರು. ಆ ಭಾಷೆಯನ್ನು ನಾವು ಉತ್ತರ ಆರ್ಕಾಟ್ ಭಾಗದಲ್ಲಿ ಗಮನಿಸಿದ್ದೇವೆ. ಹಾಗೆಯೇ ನಾವು ಅವರನ್ನು ಪ್ರಶ್ನಿಸಿದರೆ 'Who called them self cad chenges' ಎನ್ನುತ್ತಾರೆ.[೩೦]

ಆದರೆ ಇರುಳಿಗರ ಮತ್ತು ಚೆಂಚರಿಗೆ ಆಚರಣೆ, ಭಾಷೆ ಮತ್ತು ಜೀವನಾವರ್ತಕ ಎಲ್ಲದರಲ್ಲೂ ಭಿನ್ನತೆಗಳಿವೆ. ಆದರೆ ನೀಲಗಿರಿ, ಉತ್ತರ ಆರ್ಕಾಟ್ ಮತ್ತು ದಕ್ಷಿಣ ಆರ್ಕಾಟ್ ಪ್ರದೇಶದಲ್ಲಿ ಕಂಡುಬರುವ ಚೆಂಚರ ಆಚರಣೆ ನಂಬಿಕೆ, ಭಾಷೆ ಮತ್ತು ಜೀವನಾವರ್ತಕ ಆಚರಣೆಗಳಿಗೆ ಅಂತಹ ಹೇಳಿಕೊಳ್ಳುವಂತಹ ವ್ಯತ್ಯಾಸಗಳೇನು ಕಂಡುಬರುವುದಿಲ್ಲ. ಇಲ್ಲಿ ಪ್ರಮುಖವಾಗಿ ಎರಡು ಪ್ರಶ್ನೆಗಳು ಉಂಟಾಗುತ್ತದೆ. ಮೊದಲಿಗೆ ಈ ಭಾಗದ ಚೆಂಚರನ್ನು ಅಧ್ಯಯನಕ್ಕೊಳಪಡಿಸಬೇಕಾದ ಅನಿವಾರ್ಯತೆ ಇದೆ. ಅದು ಸೂಕ್ಷ್ಮ ಅತೀಸೂಕ್ಷ್ಮ ಗ್ರಹಿಕೆಯಿಂದ ಸಾಧ್ಯವಾಗುತ್ತದೆ. ಈ ಪ್ರದೇಶದಲ್ಲಿ ಇರುಳಿಗ ಮತ್ತು ಚೆಂಚರ ವಾಸದ ನೆಲೆಗಳನ್ನು ಗುರುತಿಸಿ ಈ ಸಂದರ್ಭದಲ್ಲಿ ಚೆಂಚರನ್ನು ಕುರಿತು ಬಂದಿರುವ ಕೃತಿಗಳ ಆಧಾರದ ಮೇಲಷ್ಟೇ ಚರ್ಚಿಸಲಾಗಿದೆ. ಆದರೆ ಆ ಪ್ರದೇಶದ ಕ್ಷೇತ್ರಕಾರ್ಯ ಅತ್ಯಂತ ಅವಶ್ಯಕ. ಆಗ ಆ ಪ್ರದೇಶದಲ್ಲಿ ಚೆಂಚರು ಮತ್ತು ಇರುಳಿಗರು ಬೇರೆ ಬೇರೆಯಾಗಿದ್ದರ ಅಥವಾ ಇರುಳರನ್ನು ಚೆಂಚರು

ಎಂದು ಕರೆದಿರುವ ಸಾಧ್ಯತೆಗಳೇನಾದರೂ ಇದ್ದಿರಬಹುದೋ ಎಂಬ ಪ್ರಶ್ನೆ ಬಲವಾಗಿ ಕಾಡುತ್ತದೆ. ಏಕೆಂದರೆ ಚೆಂಚರು ಸಾಮಾನ್ಯವಾಗಿ ಬಯಲು ಸೀಮೆಯ ಬುಡಕಟ್ಟುಗಳ ಉತ್ತರ ಆರ್ಕಾಟ್, ದಕ್ಷಿಣ ಆರ್ಕಾಟ್ ಮತ್ತು ನೀಲಗಿರಿಯಂತಹ ದಟ್ಟ ಅರಣ್ಯ ಪ್ರದೇಶದಲ್ಲಿ ಕಂಡುಬರುತ್ತಾರೆ. ಅವರ ಬಗ್ಗೆ ಅಧ್ಯಯನ ಅವಶ್ಯಕ. ಹಾಗೆಯೇ ಚೆಂಚರ ಭಾಷೆ, ಆಚಾರ, ವಿಚಾರ, ದೇವರು, ನಂಬಿಕೆ, ಜೀವನ ವಿಧಾನಗಳಲ್ಲಿದ್ದ ಮೇಲು ರಾಜಸ್ಥಾನ, ಲಂಬಾಣಿಗಳ ಪ್ರಭಾವ ಕಂಡುಬರುತ್ತದೆ. ಅವರ ದೈವಗಳು ಮತ್ತು ಅವರ ಭಾಷೆಗಳು ಕೂಡ ಇದೇ ನಿಟ್ಟಿನಲ್ಲಿ ಕಂಡುಬರುತ್ತದೆ. ಆ ನಿಟ್ಟಿನಲ್ಲಿ ಅವರ ಸೂಕ್ಷ್ಮವಾಗಿ ಅಧ್ಯಯನ ಕೈಗೊಂಡರೆ ವಾಸ್ತವಾಂಶ ಗೊತ್ತಾಗುತ್ತದೆ. ಎರಡನೆಯ ಸಾಧ್ಯತೆ ಚೆಂಚು ಎಂಬ ನಾಮಪದಕ್ಕೆ ಸಂಬಂಧಿಸಿದ್ದು; ಚೆಂಚರು ಅರಣ್ಯ, ಶಿಕಾರಿ, ಚಿಗರೆ, ಹಕ್ಕಿಪಿಕ್ಕಿ, ಪಾದ್ರಿ, ಚೆಂಚುಕುಲ, ಬೆಚ್ಚು ಚೆಂಚು ಎಂಬ ಹೆಸರಿನಿಂದ ಕರೆಯುತ್ತಾರೆ. ಚೆಂಚಗೆ(ಕೆಂಪಗೆ) ಇರುವ ಚೆಂಚರು ಕೆ ಕಾರಕ್ಕೆ ಬದಲಾಗಿ ಚೆ ಕಾರ ಮಾಡಿ ಹಬ್ಬಿ ಚೆಂಚರು ಎಂದು ಕರೆದಿರುವರು. ಹಾಗೆಯೇ ಮರಗೊಲ್ಲ, ಯಾನಾಡಿ, ಇರುಳ, ಬೆಕ್ಕು ಚೆಂಚು, ಲಂಬಾಣಿ ಮುಂತಾದ ಅರಣ್ಯವಾಗಿ ಬುಡಕಟ್ಟಿನವರು ಗುರುತಿಸಿದ ಚರಿತ್ರೆಕಾರರು ಚೆಂಚರನ್ನು ಅಡವಿ ಚೆಂಚರೆಂದು ಗುರುತಿಸಿ ನಾಮಕರಣ ಮಾಡಿದ್ದಾರೆನ್ನಬಹುದು[೬೧] ಎಂದು ಕೃತಿಕಾರರು ಚರ್ಚಿಸುತ್ತಾರೆ.

ಅಂದರೆ ಕೃತಿಕಾರರೇ ಹೇಳುವಂತೆ ಚೆಂಚರಿಗೂ ಅಡವಿ ಚೆಂಚರಿಗೂ ವಿಭಾಗಿಸಿ ನೋಡಬೇಕಾದ ಸಾಧ್ಯತೆಗಳಿವೆ ಎಂದು ಹೇಳುತ್ತಾರೆ. ಅಂದರೆ ಚೆಂಚರು ಎಂದು ಕರೆಯುವವರು ಇಲ್ಲಿದ ಚರ್ಚೆಗಳು ಅಡವಿ ಚೆಂಚರು ಎಂದು ಕರೆಯುವಲ್ಲಿ ಹುಟ್ಟಿಕೊಳ್ಳುತ್ತವೆ. ಕಾರಣವೆಂದರೆ ಅಡವಿ ಚೆಂಚರು ಎಂದರೆ ಒಂದೇ ಬುಡಕಟ್ಟು, ಆದರೆ ಚೆನ್ಸು ಎಂದರೆ ಮೇಲಿನ ಎಲ್ಲ ಬುಡಕಟ್ಟುಗಳು ಬರುತ್ತವೆ. ಈ ಅಡವಿ ಚೆಂಚರು ಅನುಭವವನ್ನು ಅಧ್ಯಯನಕಾರರು ಮಾಡಿದ ತಪ್ಪು ಅಥವಾ ಅವರ ಗ್ರಹಿಕೆ ಎಂದೆ ಹೇಳಲಾಗದು. ಏಕೆಂದರೆ ಬುಕಾನನ್ ರಾಮಗಿರಿ ದುರ್ಗಕ್ಕೆ ಬಂದು ಅಲ್ಲಿದ್ದ ಇರುಳಿಗರು ವಿಚಾರಿಸಿದಾಗ ಕಾಡ್ ಚೆನ್ಸುಗಳು ಎಂದು ಹೇಳಿಕೊಂಡಿದ್ದಾರೆ. ಇಂದಿಗೂ ಆ ಭಾಗದ ಇರುಳಿಗರು ಚೆಂಚು, ಚುಂಚಯಿ, ಚುಂಚ್ಚು ಎಂಬ ಹೆಸರುಗಳನ್ನಿಟ್ಟುಕೊಳ್ಳುತ್ತಿದ್ದಾರೆ. ಅಂದರೆ ಕಾಡ್‌ಚೆಂಚು(ಅಡವಿಚೆಂಚು) ಎಂಬುದು ಇರುಳಿಗರಿಗೆ ಸೇರಿದ್ದಾಗಿದ್ದು ಅದು ಅಧ್ಯಯನಕಾರರು ಮೇಲೆ ಸೂಚಿಸಿದ ಎಲ್ಲ ಬುಡಕಟ್ಟುಗಳಿಗೆ ಸೇರಿಸಿ ಕರೆದಿದ್ದಿರಬಹುದು ಎಂಬ ಸಂಶಯ ನಮ್ಮನ್ನು ಕಾಡದೆ ಇರಲಾರರು. ಏಕೆಂದರೆ ಚೆಂಚು ಎಂಬ ಪದನಿಷ್ಪತ್ತಿಗೆ ಅಡವಿ ಚೆಂಚರು ಅಂತಹ ಪ್ರಬಲವಾದ ವಿವರಣೆ ಸಿಗುವುದಿಲ್ಲ. ಆದಕಾರಣ ನಾವು ಈ ಅಡವಿ ಚೆಂಚು ಎನ್ನುವ ಪದನಾಮವನ್ನು ಅತ್ಯಂತ ಸೂಕ್ಷ್ಮವಾಗಿ ನೋಡುವ ಅತ್ಯವಶ್ಯಕ ಇದೆ. ಹಾಗೇ ಈ ಅಡವಿ ಚೆಂಚ ಎಂಬ ನಾಮಪದ ಕಗ್ಗಂಟು ಬಿಡಿಸಲು ಸಾಧ್ಯವಾಗಬಹುದು. ಇನ್ನು ಇರುಳಿಗ, ಸೋಲಿಗ, ಮತ್ತು ಇರುಳ ನಡುವೆ ಅಂತಹ ಯಾವುದೇ ಭಿನ್ನತೆಗಳಿಲ್ಲದಿರುವುದು ನಾವು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಒಟ್ಟಾರೆಯಾಗಿ ಈ ತೌಲನಿಕ ಅಧ್ಯಯನದಿಂದ ಕಂಡುಕೊಂಡ ಪ್ರಮುಖ ಅಂಶಗಳೆಂದರೆ ಇರುಳಿಗ, ಇರುಳ, ಇಲ್ಲಿಗ, ಇರುಳರ್ ಎಂಬುದು ಪ್ರಾದೇಶಿಕ ಹಿನ್ನೆಲೆಯಲ್ಲಿ ಬೇರೆ ಬೇರೆಯಾಗಿ ಕರೆಯುವ ನಾಮಪದಗಳಾಗಿವೆಯೇ ಹೊರತು ಅವು ಬೇರೆ ಬೇರೆ ಬುಡಕಟ್ಟುಗಳಲ್ಲ. ಆದರೆ ಇರುಳಿಗರಿಗೂ ಅಡವಿ ಚೆಂಚರಿಗೂ ಸಂಬಂಧವಿಲ್ಲ. ಹಾಗೆಯೇ ಅಡವಿ ಚೆಂಚರಿಗೂ, ಚಿಕ್ಕಚೆಂಚರಿಗೂ ವ್ಯತ್ಯಾಸವಿದೆ ಎಂಬುದು ಗೊತ್ತಾಗುತ್ತದೆ. ಚೆನ್ಸು ಎನ್ನುವುದು ಚೆಂಚು ಅಲ್ಲ; ಅದು ಹಲವಾರು ಬುಡಕಟ್ಟುಗಳ ಸೂಚಕ ಪದವೇ ಹೊರತು ಚೆಂಚರಿಗೂ ಚೆನ್ಸು ಎಂಬ ಪದಕ್ಕೂ ಸಂಬಂಧವಿಲ್ಲ. ಆದ್ದರಿಂದ ಇರುಳಿಗರು ತಮ್ಮನ್ನು ಕಾಡಚೆನ್ಸುಗಳು ಎಂದು ಕರೆದುಕೊಂಡಿದ್ದಾರೆ.

ಕೊನೆ ಟಿಪ್ಪಣಿಗಳು

೧. ಚಿನ್ನಸ್ವಾಮಿ ಸೋಸಲೆ ಎನ್., ಪ್ರಾಧ್ಯಾಪಕರು, ಚರಿತ್ರೆ ವಿಭಾಗ, ಚರ್ಚೆಯ ಸಂದರ್ಭ ೨೨.೬.೨೦೧೮

೨. ಪ್ರಹ್ಲಾದ್ ಬೆಟಗೇರಿ, ೧೯೯೩, ಅಡವಿ ಚೆಂಚರು, ಪು.೪೮

೩. ಭೈರೇಗೌಡ ಎಂ., ೨೦೦೦, ಇರುಳಿಗರ ಜಾನಪದ ಅಧ್ಯಯನ, ಪು.೧೬

೪. ಪ್ರಹ್ಲಾದ್ ಬೆಟಗೇರಿ, ೧೯೯೩, ಪೂರ್ವೋಕ್ತ, ಪು.೪೪

೫. ಅದೇ, ಪು.೪೯

೬. ಚಂದ್ರು ಕಾಳೇನಹಳ್ಳಿ, ೧೯೯೩, ಸೋಲಿಗರ ಸಂಸ್ಕೃತಿ, ಪು.೨೩

೭. ಸ್ವಾಮಿ ಕೆ.ಪಿ., ೨೦೧೫, ನೀಲಗಿರಿ ಸಾಮಾಜಿಕ ಸಾಂಸ್ಕೃತಿಕ ಕಣ್ಣೋಟ, ಪು.೮೮

೮. ಪ್ರಹ್ಲಾದ್ ಬೆಟಗೇರಿ, ೧೯೯೩, ಪೂರ್ವೋಕ್ತ, ಪು.೫೬

೯. ಅದೇ, ಪು.೫೦

೧೦. ಚಂದ್ರು ಕಾಳೇನಹಳ್ಳಿ, ೧೯೯೩, ಪೂರ್ವೋಕ್ತ, ಪು.೨೭

೧೧. ಕನ್ನಿಯಮ್ಮ, ೭೮, ಚೆಂಗಲಪೇಟೆ, ಚೆನ್ನೈ ಜಿಲ್ಲೆ, ೨-೫-೨೦೧೬

೧೨. ಸ್ವಾಮಿ ಕೆ.ಪಿ., ೨೦೧೫, ಪೂರ್ವೋಕ್ತ, ಪು.೮೭

೧೩. ಅದೇ, ಪು.೮೭

೧೪. ಮೋಹನ್‌ಕೃಷ್ಣ ರೈ ಕೆ., ಪ್ರಾಧ್ಯಾಪಕರು, ಚರಿತ್ರೆ ವಿಭಾಗದಲ್ಲಿ ಚರ್ಚೆಯ ಸಂದರ್ಭ ೫-೨-೨೦೧೯

೧೫. ಪ್ರಹ್ಲಾದ್ ಬೆಟಗೇರಿ, ೧೯೯೩, ಪೂರ್ವೋಕ್ತ, ಪು.೪೭

೧೬. ಅದೇ, ಪು.೪೭

೧೭. ಚಂದ್ರು ಕಾಳೇನಹಳ್ಳಿ, ೧೯೯೩, ಪೂರ್ವೋಕ್ತ, ಪು.೨೩

೧೮. ಅದೇ, ಪು.೨೪

೧೯. ಪ್ರಹ್ಲಾದ್ ಬೆಟಗೇರಿ, ೧೯೯೩, ಪೂರ್ವೋಕ್ತ, ಪು.೨೦

೨೦. ಅದೇ, ಪು.೨೧

೨೧. ಅದೇ, ಪು.೨೨

೨೨. ಭೈರೇಗೌಡ ಎಂ., ೨೦೦೦, ಇರುಳಿಗರ ಜಾನಪದ ಅಧ್ಯಯನ, ಪು.೩೨೦

೨೩. ಚಂದ್ರು ಕಾಳೇನಹಳ್ಳಿ, ೧೯೯೩, ಪೂರ್ವೋಕ್ತ, ಪು.೩೮

೨೪. ಸಿದ್ಧಗಂಗಯ್ಯ ಕಂಬಾಳ ಬಿ., ೧೯೯೩, ಪೂರ್ವೋಕ್ತ, ಪು.೭೮

೨೫. ಭಂಗಯ್ಯ, ೮೪, ಗುರುಕಾರದೊಡ್ಡಿ, ಕನಕಪುರ ತಾಲೂಕು, ರಾಮನಗರ ಜಿಲ್ಲೆ, ೨೬-೯-೨೦೧೮

೨೬. ಪ್ರಹ್ಲಾದ್ ಬೆಟಗೇರಿ, ೧೯೯೩, ಪೂರ್ವೋಕ್ತ, ಪು.೧೦೩

೨೭. ಅದೇ, ಪು.೮೨

೨೮. ಚಂದ್ರು ಕಾಳೇನಹಳ್ಳಿ, ೧೯೯೩, ಪೂರ್ವೋಕ್ತ, ಪು.೮೭

೨೯. ಕನ್ನಿಯಮ್ಮ, ೭೮, ಚೆಂಗಲಪೇಟೆ, ಚೆನ್ನೈ ಜಿಲ್ಲೆ, ೨೬-೫-೨೦೧೬

೩೦. ಫ್ರಾನ್ಸಿಸ್ ಬುಕಾನನ್, 1806, A Journey from Madras through the Country of Mysore, Cannar, Malabar, Vol.II, ಪು.೧೬೭

೩೧. ಪ್ರಹ್ಲಾದ ಬೆಟಗೇರಿ, ೧೯೯೩, ಪೂರ್ವೋಕ್ತ, ಪು.೪೯

ಅಧ್ಯಾಯ: ಎಂಟು

ಸಮರೋಪ

೮.೧. ಪ್ರಸ್ತುತ ಸಂದರ್ಭದಲ್ಲಿ ಇರುಳಿಗರು

೮.೨. ಇರುಳಿಗ ಸಮುದಾಯಕ್ಕೆ ಸಂಬಂಧಿಸಿದ ಸಮಸ್ಯೆ ಮತ್ತು ಪರಿಹಾರೋಪಾಯಗಳು

೮.೩. ಅಧ್ಯಯನದ ಫಲಿತಗಳು

ಅಧ್ಯಾಯ: ಎಂಟು

ಸಮಾರೋಪ

ಭಾರತದ ಇತಿಹಾಸವನ್ನು ಕೇವಲ ಆರ್ಯ ವೇದಗಳ ಕಾಲದಿಂದ ವೈಭವ ಪ್ರೇರಿತವಾಗಿ ಕಟ್ಟಿಕೊಡುವ ಇತಿಹಾಸಕಾರರು ಅದಕ್ಕೂ ಮೊದಲು ತಮ್ಮದೇ ಸಂಸ್ಕೃತಿ, ಸಂಪ್ರದಾಯ ಆಚರಣೆ ಮತ್ತು ವಿಶಿಷ್ಟವಾದ ಬದುಕಿನ ರೀತಿನೀತಿಗಳಿಂದ ಗುರುತಿಸಿಕೊಂಡಿದ್ದ ಸಾವಿರಾರು ಆದಿಮ ಬುಡಕಟ್ಟುಗಳನ್ನು ಗುರುತಿಸದೆ ಇರುವುದನ್ನು ಕಾಣಬಹುದು.

ಬುಡಕಟ್ಟು ಜನರ ಸಂಸ್ಕೃತಿಯೇ ನಿಜವಾದ ಅಧ್ಯಯನವೇ ಈ ದೇಶದ ಮೂಲ ಸಂಸ್ಕೃತಿಯ ಅಧ್ಯಯನವಾಗುತ್ತದೆ. ಒಂದು ದೇಶದ ನಾಗರಿಕತೆಯು ಬೆಳೆದು ಬಂದಿರುವ ಹಾದಿಯನ್ನು ತಿಳಿದುಕೊಳ್ಳಬೇಕಾದರೆ ಅಥವಾ ಒಂದು ದೇಶದ ಮೂಲವನ್ನು ತಿಳಿದು ಕೊಳ್ಳಬೇಕಾದರೆ ಅ ದೇಶದಲ್ಲಿರುವ ಬುಡಕಟ್ಟು ಜನರು ಮತ್ತು ಅವರು ಬದುಕುತ್ತಿರುವ ರೀತಿನೀತಿಗಳನ್ನು ಅಧ್ಯಯನ ಮಾಡಬೇಕಾಗುತ್ತದೆ ಎಂದು ಪ್ರೊ.ಎನ್ ಚಿನ್ನಸ್ವಾಮಿ ಸೋಸಲೆ ಅಭಿಪ್ರಾಯಪಡುತ್ತಾರೆ.

ಬುಡಕಟ್ಟುಗಳು ತಾವು ಬದುಕುತ್ತಿರುವ ಸುತ್ತಮುತ್ತಲಿನ ಪ್ರಕೃತಿಯನ್ನೇ ತಮ್ಮ ಜೀವನ ವಿಧಾನದ ಸಂಸ್ಕೃತಿಯಾಗಿ ಬದಲಾಯಿಸಿಕೊಂಡಿದ್ದಾರೆ. ಇವರು ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬಂತೆ ಸಮಾಜದ ಮುಂದಿನ ಪೀಳಿಗೆಯನ್ನು ಗಮನದಲ್ಲಿರಿಸಿ ಕೊಳ್ಳುವುದರೊಂದಿಗೆ, ಇಂದಿನ ಅಗತ್ಯತೆಗಳನ್ನಷ್ಟೇ ಈಡೇರಿಸಿಕೊಂಡು, ಮಾನವೀಯ ಮೌಲ್ಯಗಳ ತಳಹದಿಯ ಮೇಲೆ ನೆಮ್ಮದಿಯ ಬದುಕನ್ನು ಕಟ್ಟಿಕೊಂಡು ಬರುತ್ತಿದ್ದಾರೆ. ಬುಡಕಟ್ಟುಗಳು ತಮ್ಮದೇ ಆದ ನ್ಯಾಯ ಪಂಚಾಯಿತಿ, ದೇವರು, ಧರ್ಮ, ನಂಬಿಕೆ, ಆಚಾರ, ವಿಚಾರಗಳನ್ನು ಅನುಸರಿಸಿಕೊಂಡು ಬದುಕುತ್ತಿದ್ದಾರೆ. ಇಂತಹ ನೆಮ್ಮದಿ ಮತ್ತು ಮಾದರಿಯ ಬದುಕನ್ನು ಗ್ರಂಥಸ್ಥವಾಗಿಸುವುದು ಹಾಗೂ ಪ್ರಸ್ತುತ ಸಮಾಜಕ್ಕೆ ಮಾನವೀಯ ಮೌಲ್ಯಗಳನ್ನು ತಿಳಿಸುವುದರ ಮೂಲಕ ಚರಿತ್ರೆ ಎಂದರೆ ಕೇವಲ ಯುದ್ಧ ಒಪ್ಪಂದದ ಗತವನ್ನೇ ಹೇಳುವ ಕಥೆಯಲ್ಲ. ಅದು

ವರ್ತಮಾನವನ್ನು ನೆನಪಿಸಿ ಭವಿಷ್ಯದ ಸುಂದರ ಬದುಕಿಗೆ ದಾರಿದೀಪವಾಗುವಂತೆ ಮಾಡುವ ಮಾರ್ಗದರ್ಶಕನಾಗಿ ತೋರಿಸಬೇಕಾದ ಅನಿವಾರ್ಯತೆ ಇದೆ.

ಭಾರತಾಧ್ಯಯನಕಾರರು ಅಧ್ಯಯನಕ್ಕೊಳಪಡಿಸಿದ ಗ್ರಂಥಗಳನ್ನು ಮಾನವಶಾಸ್ತ್ರಜ್ಞರು ಸಂಗ್ರಹಿಸಿದ ಮಾಹಿತಿಗಳೊಂದಿಗೆ ಒಟ್ಟುಗೂಡಿಸುವ ಪ್ರಯತ್ನಗಳು ಭಾರತದ ಮಟ್ಟಿಗೆ ಅಷ್ಟಾಗಿ ಕಂಡುಬರಲಿಲ್ಲ. ಏಕೆಂದರೆ ಈ ಎರಡೂ ಚಿಂತನೆಗಳು ಭಾರತೀಯ ಸಮಾಜ ಕುರಿತು ಸಾರಭೂತವಾದ, ಅನೇಕ ಮಾಹಿತಿಗಳನ್ನು ಒಳಗೊಂಡಿದ್ದವು. ಈ ಸಂದರ್ಭದಲ್ಲಿ ಒಡಕುಂಟು ಮಾಡಿದ್ದು 'ನಾಗರಿಕ' ಮತ್ತು ಅನಾಗರಿಕ' ಎಂಬ ಕಲ್ಪನೆಯಾಗಿತ್ತು. ಅಂದರೆ ವಿದ್ಯೆ, ಅಧಿಕಾರ ಮತ್ತು ಸಮಾಜದ ಮೇಲ್ಪಂಕ್ತಿಯಲ್ಲಿ ಗುರುತಿಸಿಕೊಂಡವರನ್ನು ನಾಗರಿಕರು ಎಂದು, ಹಾಗೆಯೇ ವಿದ್ಯೆ, ಅಧಿಕಾರ ಮತ್ತು ಸಮಾಜದ ಮೇಲ್ಪಂಕ್ತಿಯಲ್ಲಿ ಗುರುತಿಸಿಕೊಳ್ಳದವರನ್ನು ಅನಾಗರಿಕರು ಎಂದು ಕರೆಯಲಾಯಿತು. ಎರಡನೇ ಪಂಕ್ತಿಯಲ್ಲಿ ಗುರುತಿಸಿಕೊಳ್ಳುವವರಲ್ಲಿ ಯಾವುದೇ ಸಾಹಿತ್ಯಿಕ ಆಕರಗಳು ಇಲ್ಲ ಎನ್ನಲಾಯಿತು. ಹಾಗೊಮ್ಮೆ ಇದ್ದರೂ ಅವುಗಳನ್ನು ಮೌಖಿಕ ಆಕರಗಳೆಂದು ಕರೆದು ಇವರನ್ನು ಕೂಡ ವಿದ್ವಾಂಸರೆಂದು ಕರೆಯಲಾಯಿತಾದರೂ, ಇವರನ್ನು ಬೇರೆ ವರ್ಗಕ್ಕೆ ಸೇರಿದವರು ಎನ್ನಲಾಯಿತು. ಇವರನ್ನು ಮತ್ತು ಇವರ ಆಲೋಚನೆಯನ್ನು ಕೆಳಜಾತಿಯವರಿಗೆ, ಬುಡಕಟ್ಟಿನವರಿಗೆ ಹಾಗೂ ಕಾಡು ಜನರಿಗೆ ಸೀಮಿತ ಎಂಬಂತೆ ನೋಡ ಲಾಯಿತು. ಹಾಗಾಗಿಯೇ ಮೇಲುಜಾತಿಯ ಹಾಗೂ ಗಣ್ಯವರ್ಗದ ಗ್ರಂಥಗಳಿಗೆ ಹೋಲಿಸಿದರೆ ಮೌಖಿಕ ಪರಂಪರೆ ನಂಬಲರ್ಹವಲ್ಲ ಎಂಬಂತೆ ಕಾಣಲಾಯಿತು. ಇವೆರಡನ್ನು ಒಂದೇ ಸಮಾಜದ ಎರಡು ಮುಖಗಳು ಎಂಬಂತೆ ನೋಡಿದ್ದಾರೆ. ಧರ್ಮಶಾಸ್ತ್ರದ ಸಿದ್ಧಾಂತಗಳಿಗಿಂತ ಭಿನ್ನವಾಗಿ ಜಾತಿಯ ಕಾರ್ಯವಿಧಾನವನ್ನು ನೋಡಬಹುದಿತ್ತು.

ಮುಂದೆ ಪ್ರಬಲವಾಗಬಹುದಿದ್ದ ವಿಧವಿಧವಾದ ಬೇರೆ ಬೇರೆ ಮೂಲಗಳನ್ನು ಪುರಾವೆ ಗಳನ್ನಾಗಿ ಬಳಸಿಕೊಳ್ಳುವಂತಹದ್ದು ಉಳಿದವುಗಳ ಸಮರ್ಥನೆಯಾಗಿದ್ದರೂ ಗ್ರಾಂಥಿಕ ಪುರಾವೆಗಳ ಕೆಲವೊಂದು ಅಂಶಗಳಿಗೆ ಸವಾಲಾಗಿತ್ತಲ್ಲದೆ, ಗತಕಾಲದ ಬಗ್ಗೆ ಹೆಚ್ಚು ನಿಖರವಾದರೂ ಕಡಿಮೆ ಏಕಪಕ್ಷೀಯವಾದ ಚಿತ್ರಣವನ್ನು ನೀಡುತ್ತದೆ. ಉದಾಹರಣೆಗೆ ಸಮಕಾಲೀನ ಶಾಸನಗಳಿಂದ ಸಿಗುವ ಸಾಕ್ಷಿಗಳು ಹೆಚ್ಚೆಚ್ಚು ಮುಖ್ಯವಾಗುತ್ತವೆ. ಕುಲದ ಕಥೆಗಳು ಮತ್ತು ಸ್ಥಳೀಯ ಬಖೈರುಗಳಲ್ಲಿ ಒಂದು ಸಣ್ಣ ಆಸಕ್ತಿ ಬೆಳೆಯಿತು.

ಭಾರತ ದೇಶವು ಕ್ರಿ.ಪೂ. ೩೦೦೦ರ ವೇಳೆಗಾಗಲೇ ತನ್ನದೇ ಆದ ಒಂದು ಪರಿಪಕ್ವವಾದ ಸಂಸ್ಕೃತಿಯನ್ನು ಹೊಂದಿತು ಎನ್ನುವುದಕ್ಕೆ ಸಿಂಧೂ ಬಯಲಿನ ನಾಗರಿಕತೆ ಸಾಕ್ಷಿಯಾಗಿ ನಿಲ್ಲುತ್ತದೆ. ಇದು ಪ್ರಪಂಚದ ಇತರೆ ನಾಗರಿಕತೆಗಳಿಗಿಂತ ಭಿನ್ನ ಹಾಗೂ ವಿಶಿಷ್ಟವಾಗಿ ಗುರ್ತಿಸಿಕೊಳ್ಳುತ್ತದೆ. ಆದರೆ ಭಾರತದ ಚರಿತ್ರೆಯಲ್ಲಿ ಸಿಂಧೂ ನಾಗರಿಕತೆಗಿಂತ ವೈದಿಕ

ಕಾಲಘಟ್ಟವನ್ನು ಜ್ಞಾನಪರ್ವದ ಯುಗ, ಮಾನವ ಸಂಸ್ಕೃತಿಯ ಮೂಲ ಬೇರಿನ ಕಾಲವೆಂದು ಭಯ ಮತ್ತು ಭಕ್ತಿಯಿಂದ ಬರೆಯುವ ಮನಸ್ಸುಗಳಿಗೆ ದ್ರಾವಿಡರಿಂದ ಆರಂಭವಾದ ಸಿಂಧೂ ನಾಗರಿಕತೆಯು ಈ ದೇಶದ ಮೂಲ ಮತ್ತು ಮಾನವ ಸಂಸ್ಕೃತಿಯ ಪ್ರತೀಕ ಎಂದು ಒಪ್ಪಿಕೊಳ್ಳಲು ಹೇಗೆ ಸಾಧ್ಯವಾದಿತು.

ಭಾರತದ ಚರಿತ್ರೆ ಎಂದರೆ ಇವತ್ತಿಗೂ ವೇದ ಮತ್ತು ಆನಂತರ ಕಾಲಘಟ್ಟದಿಂದಲೇ ಆರಂಭಗೊಂಡ, ಉತ್ತರ ಭಾರತಕ್ಕೆ ಸೀಮಿತವಾದ ಚರಿತ್ರೆ ಎಂದು ನಂಬಿಸಲಾಗಿದೆ. ಕೇವಲ ಉತ್ತರ ಭಾರತದ ಚರಿತ್ರೆಯೇ ಭಾರತದ ಚರಿತ್ರೆಯಾಗಿ, ಉತ್ತರದ ಧರ್ಮ, ಭಾಷೆ, ದೇವರು ಮತ್ತು ಆಚಾರ ವಿಚಾರಗಳೇ ಇಡೀ ಭಾರತದ ಧರ್ಮ, ಭಾಷೆ ಮತ್ತು ಸಂಸ್ಕೃತಿಯಾಗಿ ಬಿಂಬಿತಗೊಂಡಿದೆ. ಅಂತಹವುದರಲ್ಲಿ ದಕ್ಷಿಣದ ಧರ್ಮ, ಭಾಷೆ, ದೇವರು ಮತ್ತು ಸಂಸ್ಕೃತಿಗೆ ಹೇಗೆ ಪ್ರಾಮುಖ್ಯತೆ ಸಿಗಬೇಕು. ಇವತ್ತಿಗೂ ಭಾರತದ ಚರಿತ್ರೆಯನ್ನು ನಿರ್ಮಿಸಿಕೊಂಡು ಬರುತ್ತಿರುವವರಲ್ಲಿ ಉತ್ತರದ ಪ್ರಾಬಲ್ಯ ಹೆಚ್ಚಾಗಿದೆ. ಹಾಗೆಂದು ದಕ್ಷಿಣದಲ್ಲಿ ಚರಿತ್ರೆ ನಿರ್ಮಾಣ ಮಾಡುವವರಿಲ್ಲ ಎಂದಲ್ಲ. ಉತ್ತರ ಭಾರತದ ಚರಿತ್ರೆಕಾರರು ರಚಿಸಿರುವ ಚರಿತ್ರೆಗೆ ಸಿಗುವಷ್ಟು ಮನ್ನಣೆ ಮತ್ತು ಪ್ರೋತ್ಸಾಹ ದಕ್ಷಿಣದ ಚರಿತ್ರೆಕಾರರಿಗೆ ಸಿಗದೇ ಇರುವುದನ್ನು ಕಾಣಬಹುದು. ಉತ್ತರ ಭಾರತದ ಚರಿತ್ರೆಕಾರರಿಗಿರದ ಜ್ಞಾನ ಮತ್ತು ಸಾಮಾಜಿಕ ಕಳಕಳಿಯ ದಕ್ಷಿಣ ಭಾರತದ ಚರಿತ್ರೆಕಾರರಿಗಿದೆ. ಆದರೆ ಅದನ್ನು ಒಪ್ಪಿಕೊಳ್ಳುವ ಮನಸ್ಸುಗಳಿಲ್ಲ. ಇದಕ್ಕೆ ಭಾಷೆ ಪ್ರಾಬಲ್ಯ ಕಾರಣವೋ, ಜಾತಿ ಕಾರಣವೋ ಸಾಮಾಜಿಕ ಅಸಮಾನತೆ ಕಾರಣವೋ ಅಥವಾ ಇವೆಲ್ಲವುದಕ್ಕಿಂತ ಪುರೋಹಿತ ಮಹಾಶಯರು ದಕ್ಷಿಣದ ಬಗ್ಗೆ ಮೂಡಿಸಿರುವ ಅಮಂಗಳವೆಂಬ ಕೀಳರಿಮೆ ಕಾರಣವೋ ತಿಳಿದಿಲ್ಲ.

ವಿಪರ್ಯಾಸವೆಂದರೆ ಉತ್ತರ ಭಾರತದ ಚರಿತ್ರಾಕಾರರು ದಕ್ಷಿಣ ಭಾರತದ ಚರಿತ್ರಾ ಬರವಣಿಗೆ ಮತ್ತು ಚರಿತ್ರಾಕಾರರನ್ನು ನಿರ್ಲಕ್ಷಿಸಲು ಮೇಲಿನ ಯಾವುದಾದರೊಂದು ಕಾರಣವಾಗಿರಲೇಬೇಕು. ಆದರೆ ದಕ್ಷಿಣ ಭಾರತದ ನಮ್ಮವರಿಗೆ ನಮ್ಮ ಚರಿತ್ರೆಕಾರರ ಹೊಸ ಚಿಂತನೆ, ಆವಿಷ್ಕಾರಗಳು ಬೇಕಾಗಿಲ್ಲದಿರುವುದು ಪ್ರಶ್ನೆಗೆ ಎಡೆ ಮಾಡಿಕೊಡುತ್ತದೆ. ಈ ವರ್ಗ ಉತ್ತರ ಭಾರತದ ಚರಿತ್ರಾಕಾರರು ಮತ್ತು ಅವರ ಚರಿತ್ರಾ ಬರವಣಿಗೆಯನ್ನು ಪರ ಮನೋಜ್ಞಾನದಂತೆ ಒಪ್ಪಿಕೊಂಡು ನಮ್ಮದೇ ಜ್ಞಾನವನ್ನು ತಾತ್ಸಾರದಿಂದ ನೋಡುತ್ತಾರೆ. ಇಂತಹ ಸಂದರ್ಭದಲ್ಲಿಯೇ ಹಿತ್ತಲಗಿಡ ಮದ್ದಲ್ಲ ಎಂಬ ಜಾನಪದ ಗಾದೆ ಹುಟ್ಟಿರುವುದು. ಇದು ಒಂದು ಕಡೆಯಾದರೆ ಮತ್ತೊಂದು ಕಡೆ ದ್ರಾವಿಡರು ಎಂದರೆ ಅಸ್ಪೃಶ್ಯ ಅನಾಗರಿಕರು, ರಾಕ್ಷಸರು ಎಂದು ಪೂರ್ವಾಗ್ರಹ ಪೀಡಿತ ಪುರೋಹಿತ ಮಹಾಶಯರು ತಮ್ಮ ಸ್ವಾರ್ಥ ಬರವಣಿಗೆಗಳಾದ ವೇದ, ಉಪನಿಷತ್ತು ಮತ್ತು ಪುರಾಣಗಳಲ್ಲಿ ಚಿತ್ರಿಸಿ ನಂಬಿಸಿದ್ದಾರೆ. ಇದು ಚರಿತ್ರೆ ರಚಿಸುವವರ ಮನಸ್ಸನ್ನು ಮತ್ತು ಸಮಾಜದವರಿಗೆ ದಕ್ಷಿಣ ಎಂದರೆ ಆಲಕ್ಷ್ಯ ಬರುವಂತೆ

ಮಾಡಿದೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ದಕ್ಷಿಣ ಭಾರತದ ಚರಿತ್ರೆ ಭಾರತದ ಚರಿತ್ರೆಯಾಗಲು ಹೇಗೆ ಸಾಧ್ಯ. ಹಾಗೆಯೇ ದಕ್ಷಿಣ ಭಾರತ ಚರಿತ್ರಾಕಾರರನ್ನು ಸಹ ಭಾರತದ ಚರಿತ್ರಾಕಾರರು ಎಂದು ಒಪ್ಪಿಕೊಳ್ಳುವುದು ಯಾವಾಗ? ಆದರೆ ಉತ್ತರ ಭಾರತದವರು ಬರೆದ ಚರಿತ್ರೆಗೆ ದಕ್ಷಿಣ ಭಾರತವೇ ಪ್ರಮುಖ ತಳಹದಿಯಾಗಿದೆ. ದಕ್ಷಿಣ ಭಾರತವನ್ನು ಬಿಟ್ಟ ಉತ್ತರ ಭಾರತದ ಚರಿತ್ರೆ ಬೇರಿಲ್ಲದ ಮರದಂತಾಗುತ್ತದೆ. ಏಕೆಂದರೆ ಭಾರತದ ಪ್ರತಿನಿಧೀಕರಣದ, ಅದರಲ್ಲೂ ಉತ್ತರ ಭಾರತ ಪ್ರತಿನಿಧಿಸುವ ರಾಮಾಯಣ, ಮಹಾಭಾರತ, ಜೈನ, ಬೌದ್ಧ, ಚಂದ್ರಗುಪ್ತಮೌರ್ಯ, ಅಶೋಕ ಮುಂತಾದವರೆಲ್ಲರೂ ಪ್ರಪಂಚದಲ್ಲಿ ವಿಶಿಷ್ಟವಾಗಿ ಗುರುತಿಸಿಕೊಳ್ಳಬೇಕಾದರೆ ದಕ್ಷಿಣ ಭಾರತದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಇದು ಚರಿತ್ರೆ ರಚನೆಯಲ್ಲಿ ತೊಡಗಿರುವ ಉತ್ತರ ಭಾರತದ ಚರಿತ್ರಾಕಾರರಿಗೆ ತಿಳಿದಿದ್ದರೂ, ಉದ್ದೇಶಪೂರ್ವಕವಾಗಿಯೇ ನಿರ್ಲಕ್ಷಿಸಿದ್ದಾರೆ. ಆದರೆ ದಕ್ಷಿಣ ಭಾರತದ ನಮ್ಮ ಚರಿತ್ರಾಕಾರರಿಗೆ ತಮ್ಮ ನೆಲದ ಪ್ರಾಮುಖ್ಯತೆ ಇಂದಿಗೂ ತಿಳಿಯುತ್ತಿಲ್ಲ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಉತ್ತರ ಭಾರತಕ್ಕಿಂತಲೂ ಪೂರ್ವದಲ್ಲಿ ದಕ್ಷಿಣ ಭಾರತದಲ್ಲಿ ಜನವಸತಿ ಇದ್ದು, ಸಿಂಧೂ ನಾಗರಿಕತೆಗಿಂತ ಪೂರ್ವದಲ್ಲಿಯೇ ಸಿಂಧೂ ನಾಗರಿಕತೆಯನ್ನು ಮೀರಿಸುವ ನಾಗರಿಕತೆಯ ಕುರುಹುಗಳು ದಕ್ಷಿಣದಲ್ಲಿವೆ ಎಂದು ಕೆಲವು ದಕ್ಷಿಣದ ಚರಿತ್ರಾಕಾರರು ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ಹೇಳುತ್ತಿದ್ದರೂ ಕೇಳುವವರಿಲ್ಲ. ಆದ್ದರಿಂದ ದಕ್ಷಿಣದ ಚರಿತ್ರೆ ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಇದರ ಜೊತೆಗೆ ಚರಿತ್ರೆ ರಚನೆಗೆ ಬೇಕಾದ ಆಕರವೆಂದರೆ ಅದು ಲಿಖಿತ ಆಕರವೇ ಮಾತ್ರ ಎನ್ನುವ ಮಡಿವಂತಿಕೆಯನ್ನು ಪಾಲಿಸಿಕೊಂಡು ಬಂದಿರುವ ಚರಿತ್ರಾಕಾರರು ಮೌಖಿಕ ದಾಖಲೆಗಳನ್ನು ಹೇಗೆ ಒಪ್ಪಿಕೊಳ್ಳುತ್ತಾರೆ. ಚರಿತ್ರೆ ರಚನೆಯಲ್ಲಿ ಲಿಖಿತ ದಾಖಲೆಗಳಿಗೆ ಇವರುಗಳು ನೀಡುವ ಪ್ರಾಮುಖ್ಯತೆಯನ್ನು ಮೌಖಿಕ ಆಕರಗಳಿಗೆ ನೀಡುವುದಿಲ್ಲ. ಭಾರತದ ಚರಿತ್ರಾಕಾರರಿಗೆ ಪಾಶ್ಚಿಮಾತ್ಯ ಚಿಂತನೆಗಳ ಮೋಹ ಇಂದಿಗೂ ಬೆಂಬಿಡದೆ ಕಾಡುತ್ತಿದೆ. ಹಿಂದೆ ಬ್ರಿಟಿಶ್ ಅಧಿಕಾರಿ ಹೇಳಿದ ಮಾತು ನೆನಪಿಗೆ ಬರುತ್ತದೆ. ಇನ್ನು ಮುಂದೆ ಭಾರತದಲ್ಲಿ ಹುಟ್ಟುವ ಮುಂದಿನ ಪೀಳಿಗೆಯ ಬುದ್ಧಿವಂತರಲ್ಲಿ ಬುದ್ಧಿ ನಮ್ಮದಾಗಿದ್ದು ದೇಹ ಮಾತ್ರ ಅವರದ್ದಾಗಿರುತ್ತದೆ ಎನ್ನುವ ಮಾತಿನಂತೆ ಭಾರತದ ಚರಿತ್ರಾಕಾರರು ಪಾಶ್ಚಿಮಾತ್ಯ ತತ್ವ ಸಿದ್ಧಾಂತಕ್ಕೆ ನೀಡುವ ಮಹತ್ವವನ್ನು ಭಾರತದ ತತ್ವ ಸಿದ್ಧಾಂತಕ್ಕೆ ನೀಡುವುದಿಲ್ಲ. ಇಂತಹ ಮನಸ್ಥಿತಿಗಳಿಂದ ಭಾರತದಲ್ಲೇ ಹುಟ್ಟಿ ಬೆಳೆದ ಬೌದ್ಧಧರ್ಮಕ್ಕೆ ಪ್ರಾಶಸ್ತ್ಯ ಸಿಗದೆ ಹೋದದ್ದು. ಮಾರ್ಕ್ಸ್‌ವಾದ, ಸಬಾಲ್ಟರ್ನ್ ಚಿಂತನೆಗಳಿಗಿಂತಲೂ ಮೊದಲೇ ಈ ಎಲ್ಲಾ ಚಿಂತನೆಗಳನ್ನು ಮೀರಿಸುವ ಬುದ್ಧನ ಶಾಂತಿ ಸಂದೇಶಗಳು, ಬಸವಣ್ಣನ ಸಾಮಾಜಿಕ ಕ್ರಾಂತಿಯ ವಿಚಾರಧಾರೆಗಳು ಮತ್ತು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಾಂವಿಧಾನಿಕ ಆಲೋಚನೆಗಳು ಚರಿತ್ರೆಗೆ ಮತ್ತು ಚರಿತ್ರೆ ರಚಿಸುವವರಿಗೆ ಒಂದು ತತ್ವಸಿದ್ಧಾಂತವಾಗಿ ಕಾಣಲೇ ಇಲ್ಲ. ಈ ಎಲ್ಲಾ ಕಾರಣಗಳಿಂದ ಲಿಖಿತ ದಾಖಲೆಗಳಿಲ್ಲದ ಬಹುಸಂಖ್ಯಾತ ಬುಡಕಟ್ಟು, ದಲಿತ

ಮತ್ತು ಶೋಷಿತರ ಚರಿತ್ರೆಯು ಚರಿತ್ರೆಯ ಕೇಂದ್ರಕ್ಕೆ ಬರಲು ಸಾಧ್ಯವಾಗಲೇ ಇಲ್ಲ. ಹಾಗಿದ್ದಾಗ ಇವರ ಸಂಸ್ಕೃತಿಯನ್ನು ಭಾರತದ ಸಂಸ್ಕೃತಿ ಎಂದು ಯಾರು ಒಪ್ಪಿಕೊಳ್ಳಬೇಕು? ಮೊದಲೇ ದಕ್ಷಿಣವೆಂದರೆ ಅಮಂಗಳ ಎಂಬ ಗ್ರಹಿಕೆ ಇರುವಾಗ, ಇನ್ನು ದಕ್ಷಿಣದ ಜನಸಮುದಾಯದವರ ಚರಿತ್ರೆ ಉತ್ತರ ಭಾರತದ ಜನರ ಸಂಸ್ಕೃತಿಯೊಂದಿಗೆ ಸ್ಪರ್ಧಿಸಿ ಭಾರತದ ಚರಿತ್ರೆಯಾಗುವುದು ಕನಸಿನ ಮಾತು. ಆದರೆ ಇಂತಹ ಕನಸ್ಸನ್ನು ನನಸ್ಸು ಮಾಡುವ ನಿಟ್ಟಿನಲ್ಲಿ ಕರ್ನಾಟಕ ಹಾಗೂ ಇತರೆ ರಾಜ್ಯಗಳ ಕೆಲವು ಚರಿತ್ರಾಕಾರರು ಪ್ರಯತ್ನಿಸುತ್ತಿರುವುದು ಪ್ರಶಂಸನೀಯವಾಗಿದೆ.

ಒಂದೊಂದು ಯುಗದಲ್ಲೂ ಒಂದೊಂದು ರಾಜಕೀಯ ಶಕ್ತಿಯು ತನ್ನ ಇತಿಹಾಸವನ್ನು ಹಾಗೂ ತನಗೆ ಸಂಬಂಧಪಟ್ಟವರ ಇತಿಹಾಸವನ್ನು ತನ್ನ ರಾಜಕೀಯ ಆಶೋತ್ತರಗಳ ಉದ್ದೇಶದಿಂದ ಮರುಪರಿಶೀಲನೆ ಮಾಡುತ್ತಾ ಬಂದಿದೆ. ಈ ಸಂದರ್ಭದಲ್ಲಿ ವಿದ್ಯೆ, ಅಧಿಕಾರ ಇರುವ ಪ್ರಬಲ ಸಮುದಾಯಗಳು ತಮ್ಮ ತಮ್ಮ ಚರಿತ್ರೆ ಮತ್ತು ಐಡೆಂಟಿಟಿಯನ್ನು ಇತಿಹಾಸದ ಪುಟಗಳಲ್ಲಿ ಗುರ್ತಿಸುವ ಕೆಲಸ ಮಾಡಿಕೊಂಡವು. ಆದರೆ ಸಾವಿರಾರು ವರ್ಷಗಳಿಂದ ಪ್ರಭುತ್ವದ ಜೀವನಕ್ಕೆ ಬೆನ್ನುಕೊಟ್ಟು ದುಡಿದ ಸಮುದಾಯಗಳ ಚರಿತ್ರೆಯನ್ನು ಮಾತ್ರ ಕಾಣಲು ಸಾಧ್ಯವಾಗಲಿಲ್ಲ. ಏಕೆಂದರೆ ಒಂದು ಕಾಲಕ್ಕೆ ಭಾರತದ ಚರಿತ್ರೆ ಕೇವಲ ಅರಮನೆ ಮತ್ತು ಗುರುಮನೆಗೆ ಸೀಮಿತವಾಗಿ ಪ್ರಭುತ್ವದ ಕಣ್ಣಿಗೆ ಅಥವಾ ಪ್ರಭುತ್ವದ ಚರಿತ್ರೆಯ ರಚಿಸುವವರ ಕಣ್ಣಿಗೆ ಬಿದ್ದ ಸಮುದಾಯಗಳು ಚರಿತ್ರೆಯಲ್ಲಿ ದಾಖಲೆಗಳಾಗಿ ಉಳಿದುಕೊಂಡವು. ಈ ಸಮುದಾಯಗಳು ಚರಿತ್ರೆಯ ಮರುಪರಿಶೀಲನೆಯ ಸಂದರ್ಭದಲ್ಲಿ ತಮ್ಮ ತಮ್ಮ ಚರಿತ್ರೆಯನ್ನು ರಚಿಸಿಕೊಂಡರು. ಆದರೆ ಪ್ರಭುತ್ವದ ವೈಭವಪೂರಿತ ಜೀವನಕ್ಕೆ ಮತ್ತು ಅವರ ದನಕರುಗಳಿಗೆ, ಆನೆ, ಒಂಟೆ, ಕುದುರೆಗಳಿಗೆ, ಬೆಟ್ಟಗುಡ್ಡ ಸುತ್ತಾಡಿ ಹುಲ್ಲು ಕೊಯ್ದು, ಪ್ರಭುತ್ವದ ಮೋಜುಮಸ್ತಿಗಳಿಗೆ ಜೀವ ತೇಯ್ದ ಬುಡಕಟ್ಟು ಸಮುದಾಯಗಳ ಚರಿತ್ರೆ ಮಾತ್ರ ಕಾಣದೆ ಹೋಯಿತು. ಆದರೆ ಇತ್ತೀಚಿನ ಚರಿತ್ರಾ ಬರವಣಿಗೆಗಳು ಇಂತಹ ಅಲಕ್ಷಿತ ಸಮುದಾಯಗಳ ಕಡೆ ಗಮನಹರಿಸಿದ್ದರ ಫಲವಾಗಿಯೇ ಅನೇಕ ಬುಡಕಟ್ಟುಗಳು ಬೆಳಕಿಗೆ ಬಂದಿವೆ. ಇಂತಹ ಪ್ರಯತ್ನವಾಗಿ ಪ್ರಸ್ತುತ 'ಇರುಳಿಗರು: ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ' ಎಂಬ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಭಾರತದ ಸಾಂಸ್ಕೃತಿಕ ಚರಿತ್ರೆಗೆ ಮೂಲ ಆಕರಗಳಾದ ಭಾಷೆ, ಆಚಾರ, ವಿಚಾರ, ರೂಢಿ ಪದ್ಧತಿ ಮುಂತಾದವುಗಳನ್ನು ನೋಡಿ ಆನಂದಿಸಲಾಗುತ್ತದೆಯೇ ಹೊರತು ಅವುಗಳ ಮೂಲ ಸ್ವರೂಪವನ್ನು ಕುರಿತು ಅಧ್ಯಯನ ನಡೆಸುವ ಪ್ರಯತ್ನ ವ್ಯಾಪಕವಾಗಿ ನಡೆದಿಲ್ಲ. ಭಾರತದ ಮೂಲನಿವಾಸಿಗಳ ವರ್ಗಕ್ಕೆ ಹತ್ತಿರವಾದ ಇರುಳಿಗರು ಪ್ರಕೃತಿದತ್ತವಾದ ನೈಜ ಜೀವನಕ್ಕೆ ಜೋತು ಬಿದ್ದ ಅಪರೂಪದ ಬುಡಕಟ್ಟು ಸಮುದಾಯ. ಪ್ರಕೃತಿಯನ್ನು ದೇವರೆಂದು ನಂಬಿರುವ ಇವರ ನಂಬಿಕೆ ಜಗತ್ತಿನ ಎಲ್ಲಾ ಧರ್ಮಗಳಿಗೂ ಮೀರಿದ ನಂಬಿಕೆಯಾಗಿದೆ. ಜಗತ್ತಿನ ಪ್ರಾಚೀನ ನಾಗರಿಕತೆಗಳಲ್ಲಿ ಒಂದಾದ ಸಿಂಧೂ ಜನರ ಹಾಗೂ ದ್ರಾವಿಡ

ಸಂಸ್ಕೃತಿಯೊಂದಿಗೆ ಸಮೀಕರಿಸಿದಾಗ ಅದಕ್ಕೂ ಪೂರ್ವಸ್ಥಿತಿಯನ್ನು ಇರುಳಿಗರ ನಂಬಿಕೆ ಮತ್ತು ಆಚರಣೆಗಳಲ್ಲಿ ನೋಡಬಹುದಾಗಿದೆ ಎಂದು ಇತ್ತೀಚಿನ ಸಂಶೋಧನೆಗಳಿಂದ ದೃಢಪಟ್ಟಿದೆ.

ಜಗತ್ತಿನ ಯಾವ ವೈಜ್ಞಾನಿಕ ಆಯಾಮಗಳ ಅನುಕರಣೆಗೂ ತಲೆಬಾಗದೇ ತಮ್ಮದೇ ಆದ ಮೂಲ ಆಚಾರ, ವಿಚಾರಗಳನ್ನೇ ಜೀವನದಲ್ಲಿ ಅಳವಡಿಸಿಕೊಂಡು ಬದುಕುತ್ತಿರುವ ಇರುಳಿಗರು ಹಣ, ಅಂತಸ್ತು, ಆಮಿಷಗಳಿಂದ ದೂರ ಉಳಿದರು. ಇವರು ನಂಬಿಕೊಂಡಿರುವ ಆಚಾರ-ವಿಚಾರಗಳು ಸಮನ್ವಯ ಸಾರುವ ಆದಿಧರ್ಮವಾಗಿದೆ ಎಂದು ಇತ್ತೀಚಿನ ಸಮಾಜ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಪ್ರಕೃತಿಯೊಂದಿಗೆ ವಿರಾಜಮಾನವಾಗಿ ಬದುಕುವ ಕಲೆಯನ್ನು ರೂಢಿಸಿಕೊಂಡಿರುವ ಇರುಳಿಗರು ಅರಣ್ಯದ ಅಪರೂಪದ ಗಿಡಮೂಲಿಕೆಯ ಮಹತ್ವವನ್ನು ಅರಿತು ಅದನ್ನು ಮುಂದಿನ ಜನಾಂಗದ ಒಳಿತಿಗಾಗಿ ಬಳಸಿಕೊಳ್ಳಲು ನೆರವಾಗುತ್ತಾರೆ. ಭಾರತದ ಪ್ರಾಚೀನ ಜನಾಂಗಗಳ ಮೂಲಭೂತ ಕಸುಬಾದ ಬೇಟೆಯನ್ನರಿಸಿ ಜೀವನೋಪಾಯ ಮಾಡುತ್ತಾರೆ. ಅರಣ್ಯದಲ್ಲಿ ಪ್ರಾಣಿಗಳು ನಡೆದಾಡುವ ದಾರಿ, ಪಕ್ಷಿಗಳ ದಿನಚರಿಗಳನ್ನು ಕುರಿತು ಇಂದು ವೈಜ್ಞಾನಿಕ ದೃಷ್ಟಿಯಿಂದ ಅಧ್ಯಯನಗಳು ಪ್ರಪಂಚದಾದ್ಯಂತ ನಡೆದಿವೆ. ಇವುಗಳೆಲ್ಲವುದಕ್ಕೂ ಪೂರಕವಾಗಿ ಇರುಳಿಗರಿಗೆ ಅರಣ್ಯ, ಪ್ರಾಣಿ ಪಕ್ಷಿಗಳ ಬದುಕು ಹಾಗೂ ಅರಣ್ಯ ಸಂಪನ್ಮೂಲಗಳ ಉಪಯುಕ್ತತೆಯ ಬಗ್ಗೆ ಆಳವಾದ ಜ್ಞಾನವುಂಟು. ಪ್ರಾಣಿ, ಪಕ್ಷಿ, ಜೀವಜಂತುಗಳ ಹುಟ್ಟು, ಬೆಳವಣಿಗೆ, ಚಲನವಲನ ಮತ್ತು ಪ್ರಯೋಜನ ಹಾಗೂ ಅನಾನುಕೂಲಗಳು ಇತ್ಯಾದಿ ವಿಚಾರಗಳಲ್ಲಿ ಇವರು ತಜ್ಞರಾಗಿದ್ದು, ಅರಣ್ಯದಿಂದ ದೊರೆಯುವ ಸ್ವಾಭಾವಿಕ ಉತ್ಪನ್ನಗಳನ್ನು ಜೀವನೋಪಾಯಕ್ಕೆ ಬಳಕೆ ಮಾಡುತ್ತಾರೆ.

ಉತ್ತಮ ಜನಪದ ವೈದ್ಯರಾದ ಇವರು ಮರದಿಂದ ಸ್ರವಿಸುವ ಗೋಂದನ್ನು ಉತ್ಪಾದಿಸುವ ಬಗೆಯನ್ನು ತಿಳಿದವರು. ಪ್ರಾಚೀನ ಕಾಲದ ಬಣ್ಣಗಳ ತಯಾರಿಕೆಯಲ್ಲಿ ಇವರ ಪಾತ್ರವನ್ನು ಅಲ್ಲಗಳೆಯಲಾಗದು. ಅರಣ್ಯದಲ್ಲಿ ಬಾಳಿ ಬದುಕುವ ಇರುಳಿಗರು ಎಂದಿಗೂ ಅರಣ್ಯಕ್ಕೆ ಅಪಾಯಕಾರಿಯಲ್ಲ. ಇದರ ನ್ಯಾಯ ಪದ್ಧತಿಯು ಪ್ರಜಾಪ್ರಭುತ್ವ ಮೌಲ್ಯಗಳನ್ನು ಮೀರಿವಂತದ್ದಾಗಿದೆ. ಪ್ರತಿಯೊಬ್ಬರಲ್ಲೂ ಸಮಾನತೆಯನ್ನು ಸಾಧಿಸಲು ಆದ್ಯತೆ ನೀಡುವವರಾಗಿದ್ದಾರೆ. ಕಾಡುಪ್ರಾಣಿಗಳ ಬೇಟೆಯೊಂದಿಗೆ ಗೆಡ್ಡೆ, ಗೆಣಸು ತಿಂದು ಮರದ ತೊಗಟೆ, ಎಲೆಗಳಿಂದ ಮೈಮುಚ್ಚಿಕೊಂಡು ಗವಿಗಳಲ್ಲೋ, ಮರದ ಪೊಟರೆಗಳಲ್ಲೋ ವಾಸಿಸುತ್ತಿದ್ದವರೇ ಆದಿಮಾನವರು ಎನ್ನುವುದಕ್ಕೆ ಇರುಳಿಗರನ್ನು ಸಮೀಕರಿಸಬಹುದು. ಈ ಮೇಲಿನ ಎಲ್ಲ ಲಕ್ಷಣಗಳನ್ನು ಹೊಂದಿ ತಮ್ಮದೇ ಸಾಂಸ್ಕೃತಿಕ ಮೌಲ್ಯಗಳೊಂದಿಗೆ ಕಾಡಿನ ತಪ್ಪಲಿನಲ್ಲಿ ವಾಸಿಸುತ್ತಾ ಪ್ರತ್ಯೇಕ ಜೀವನಕ್ರಮದಿಂದ ಬದುಕುತ್ತಿರುವ ಬಡುಕಟ್ಟು ಸಮುದಾಯವೇ ಇರುಳಿಗರು.

ಭಾರತದ ಸಾಂಸ್ಕೃತಿಕ ಚರಿತ್ರೆಗೆ ಮೂಲ ಆಕರಗಳಾದ ಭಾಷೆ, ಆಚಾರ, ವಿಚಾರ, ನಂಬಿಕೆ ರೂಢಿ ಪದ್ಧತಿ ಮುಂತಾದ ಸಾಂಸ್ಕೃತಿಕ ಆಚರಣೆಗಳನ್ನು ನೋಡಿ ಆನಂದಿಸಲಾಗುತ್ತದೆಯೇ

ಹೊರತು, ಅವುಗಳ ಮೂಲ ಸ್ವರೂಪವನ್ನು ಕುರಿತು ಅಧ್ಯಯನ ನಡೆಸುವ ಪ್ರಯತ್ನಗಳು ವ್ಯಾಪಕವಾಗಿ ಕಂಡುಬರಲೇ ಇಲ್ಲ. ಆದ್ದರಿಂದಲೇ ಇತ್ತೀಚಿನ ದಿನಮಾನಗಳಲ್ಲಿ ಸದಾ ಚರಿತ್ರೆಯಿಂದ ದೂರ ಇಟ್ಟಿದ್ದ ಬುಡಕಟ್ಟುಗಳು ಮತ್ತು ಶೋಷಿತ ಸಮುದಾಯಗಳನ್ನು ಚರಿತ್ರೆಯ ಕೇಂದ್ರಕ್ಕೆ ತರುವ ಕೆಲಸ ವ್ಯಾಪಕವಾಗಿ ಕಂಡುಬರುತ್ತಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ ಚರಿತ್ರೆಯು ಕೇವಲ ಸಂಪ್ರದಾಯವಾದಿಗಳ ಹಿಡಿತದಿಂದ ತಪ್ಪಿಸಿಕೊಂಡು ಶೋಷಿತರು ಮತ್ತು ಬುಡಕಟ್ಟುಗಳ ಕಡೆ ವಾಲಿದ್ದು. ಇದರ ಪರಿಣಾಮವಾಗಿಯೇ ಇಂದು ಸಮಾಜದಿಂದ ದೂರ ಉಳಿದಿದ್ದ ಇರುಳಿಗ ಬುಡಕಟ್ಟು ಚರಿತ್ರೆಯ ಕೇಂದ್ರಕ್ಕೆ ತರುವ ಪ್ರಯತ್ನ ಮಾಡಲಾಗಿದೆ.

ಚರಿತ್ರೆ ಎಂದರೆ ಕೇವಲ ಲಿಖಿತ ದಾಖಲೆಗಳ ಮೇಲೆ ನಿಲ್ಲುವುದಾಗಿತ್ತು. ಆದರೆ ಇಂದು ಮೌಖಿಕ ಆಕರಗಳಾದ ಐತಿಹ್ಯ, ಪುರಾಣ, ಲಾವಣಿ, ಜಾನಪದ ಗೀತೆ ಮತ್ತು ಸೋಬಾನೆ ಗೀತೆಗಳಿಂದಲೂ ರಚಿಸಬಹುದೆಂದು ಸಾಭೀತುಗೊಂಡಿದೆ. ಈ ಪರಂಪರೆಯೇ ಇಂದು ಚರಿತ್ರೆಯಲ್ಲಿ ಹೊಸ ಸಿದ್ಧಾಂತವಾಗಿ ಮಾರ್ಪಾಡುಗೊಳ್ಳುತ್ತಿರುವ ನಿಟ್ಟಿನಲ್ಲಿ ಇರುಳಿಗರನ್ನು ಕುರಿತ ಯಾವ ಲಿಖಿತ ಆಕರಗಳು ಸಿಗದಿದ್ದರೂ ಮೌಖಿಕ ಆಕರಗಳನ್ನೆ ಪ್ರಧಾನವಾಗಿಸಿಕೊಂಡು ಇರುಳಿಗರ ಚರಿತ್ರೆಯನ್ನು ಕಟ್ಟುವ ಪ್ರಯತ್ನ ಮಾಡಲಾಗಿದೆ.

೮.೧. ಪ್ರಸ್ತುತ ಸಂದರ್ಭದಲ್ಲಿ ಇರುಳಿಗರು

ಜೀವ ವಿಕಾಸದ ದಾರಿಯಲ್ಲಿ ಎಲ್ಲ ಜೀವ ಪ್ರಭೇದಗಳನ್ನು ಮೀರಿಸಿ ನಿಂತ ಮಾನವ ತಾನು ವಾಸಿಸುತ್ತಿರುವ ಈ ಜಗತ್ತನ್ನು ವಸ್ತುನಿಷ್ಠವಾಗಿ ಅರಿಯಲು ಮಾಡಿದ ಪ್ರಯತ್ನಗಳು ನಿರಂತರತೆಯಿಂದ ಕೂಡಿದ್ದವು. ಕಾರ್ಲ್ ಸೇಗನ್ ತಮ್ಮ 'ಕಾಸೋಸ್' ಕೃತಿಯಲ್ಲಿ ಹೇಳು ವಂತೆ ಸ್ವತಃ ಮನುಷ್ಯನನ್ನು ಸೃಷ್ಟಿಸಿರುವ ಈ ವಿಶ್ವವನ್ನು(ಕಾಸ್ಮೋಸ್) ಅದು ಹೇಗಿದೆಯೋ ಹಾಗೆ ಅರಿಯಲು ಮನುಷ್ಯ ಕಂಡುಕೊಂಡಿರುವ ಅತ್ಯಂತ ಪರಿಣಾಮಕಾರಿಯಾದ ವಿಧಾನ ಎಂದರೆ ವಿಜ್ಞಾನ ಅಥವಾ 'ಅರಿಮೆ' ಎನ್ನುವುದು. ಇದರಿಂದ ಮನುಷ್ಯ ಪ್ರಕೃತಿಯನ್ನು ಸಂಶೋಧನೆಗೆ ಒಳಪಡಿಸುವ ಜೊತೆಗೆ ಸ್ವತಃ ಮನುಷ್ಯನನ್ನೇ ಸೃಷ್ಟಿಸುವ ಹಂತಕ್ಕೆ ಬೆಳೆದುನಿಂತನು. ಆದರೂ ಮನುಷ್ಯ ಏನೆಲ್ಲ ಆವಿಷ್ಕಾರಗಳನ್ನು ಮಾಡಿದರೂ, ಪ್ರಕೃತಿಯನ್ನು ಸಂಪೂರ್ಣವಾಗಿ ಅರಿಯಲು ಸಾಧ್ಯವಾಗಲಿಲ್ಲ. ಇದರಿಂದ ಮನುಷ್ಯ ಮತ್ತು ಪ್ರಕೃತಿಯೊಡನೆ ಅನೇಕ ಸವಾಲು ಮತ್ತು ಜವಾಬುಗಳು ನಿರಂತರವಾಗಿ ಸಾಗುತ್ತಲೇ ಹೋದವು. ಮನುಷ್ಯ ಪ್ರಕೃತಿಯನ್ನು ಮೀರಿಸಿದ್ದೀನಿ ಎಂದು ಬೀಗುತ್ತಿರುವಾಗಲೇ ಪ್ರಕೃತಿ ಮನುಷ್ಯನಿಗೆ ಇನ್ನೊಂದು ಸವಾಲು ಎಸೆಯುತ್ತದೆ. ಇದಕ್ಕೆ ಜವಾಬು ಕೊಡಲು ಮನುಷ್ಯ ಮತ್ತೆ ಹೊಸ ಆವಿಸ್ಕಾರಗಳನ್ನು ಮಾಡಲು ಮುಂದಾಗುತ್ತಾನೆ. ಇದು ಕೊನೆಯಿಲ್ಲದೆ ಇಂದಿಗೂ ಮುಂದುವರೆದುಕೊಂಡು ಬರುತ್ತಿದೆ. ಹೀಗೆ ತನ್ನದೇ ಆದ ಒಂದು ಆಡಳಿತ, ಕಾನೂನು, ಕಟ್ಟಳೆ, ದೇವರು, ಧರ್ಮ, ವೃತ್ತಿಗಳನ್ನು

ಮಾಡಿಕೊಂಡು ಸಮಾನಾಂತರ ಜೀವನ ವಿಧಾನವನ್ನು ನಡೆಸಿಕೊಂಡು ಬರುತ್ತಿದ್ದಾಗ ಇರುಳಿಗರು ಕಾಲದ ಒತ್ತಡಕ್ಕೆ ಸಿಕ್ಕಿ ಅನೇಕ ಸ್ಥಿತ್ಯಂತರಗಳಿಗೆ ಒಳಗಾಗುತ್ತಾ ಬಂದಿದ್ದಾರೆ. ಅವರ ಆಲೋಚನೆ, ಅಭಿಲಾಷೆಗೆ ತಕ್ಕಂತೆ ಅವರಿಗೆ ಸಾಮಾಜಿಕ ವ್ಯವಸ್ಥೆಯನ್ನು ರೂಪುಗೊಳಿಸಿಕೊಂಡರು. ಇಲ್ಲಿ ಅನಿವಾರ್ಯವಾದ ಅಂಶಗಳೇ ಹೆಚ್ಚಾಗಿದ್ದವು. ಅರಣ್ಯದಿಂದ ಹೊರಬಿದ್ದ ಇರುಳಿಗರು ಇತರೆ ಸಮಾಜಗಳಂತೆ ಬದುಕುವುದು ಅನಿವಾರ್ಯವಾಯಿತು. ಪಾರಂಪರಿಕ ವೃತ್ತಿಗಳನ್ನು ಬಿಟ್ಟು ಇವರಿಗೆ ಇತರೆ ಸಮುದಾಯದವರ ವೃತ್ತಿಯ ಬಗ್ಗೆ ಗೊತ್ತಿಲ್ಲದೆ ಆ ವೃತ್ತಿಯ ಸಹಾಯಕರಾಗಿ ಸೇರಿಕೊಂಡು ಅನೇಕ ಶೋಷಣೆಗಳನ್ನು ಅನುಭವಿಸಿದರು. ಅರಣ್ಯದಿಂದ ಹೊರಬಂದ ಇರುಳಿಗರಿಗೆ ಸಮಾಜದಲ್ಲಿ ಕೈ ಬೀಸಿ ಕರೆದುದ್ದು ಜೀತಗಾರಿಕೆ. ಏಕೆಂದರೆ ಆ ಸಂದರ್ಭಕ್ಕಾಗಲೇ ಪಾರಂಪರಿಕವಾಗಿ ಜೀತಗಾರಿಕೆಯ ತುತ್ತುಗಳಾಗಿದ್ದವರು ವಸಾಹತುಶಾಹಿಯ ಶಿಕ್ಷಣ ನೀತಿಯಿಂದ ಅಲ್ಪಸ್ವಲ್ಪ ಪ್ರಜ್ಞಾವಂತಿಕೆಯನ್ನು ಪಡೆದಿದ್ದರು. ಬ್ರಿಟಿಶರು ನೀಡಿದ ಶಿಕ್ಷಣದಿಂದ ಪ್ರಜ್ಞಾವಂತರಾದ ಪಾರಂಪರಿಕವಾಗಿ ಜೀತಗಾರಿಕೆ ಮಾಡಿಕೊಂಡು ಬಂದ ವರ್ಗ ಜೀತಗಾರಿಕೆಯನ್ನು ವಿರೋಧಿಸಿ ಸ್ವತಂತ್ರ ಜೀವನವನ್ನು ಪಡೆಯಲು ಹವಣಿಸಿ ತಮ್ಮ ವೃತ್ತಿಗಳನ್ನು ತೊರೆದು ಅನ್ಯ ಮಾರ್ಗಗಳನ್ನು ಅನುಸರಿಸತೊಡಗಿದರು. ಇದೇ ಸಂದರ್ಭದಲ್ಲಿ ಈ ಭೂಮಾಲೀಕರಿಗೆ ಇರುಳಿಗರು ಸಂದರ್ಭದ ಶಿಶುಗಳಾಗಿ ಸಿಕ್ಕಿ ಬಿಟ್ಟರು. ತಮ್ಮ ಪಾರಂಪರಿಕ ವೃತ್ತಿಯಿಂದ ಹೊರಬಿದ್ದ ಇರುಳಿಗರು ವಿಧಿ ಇಲ್ಲದೆ ಎಸ್ಟೇಟ್, ಹೊಲ, ಗದ್ದೆ, ಫ್ಯಾಕ್ಟರಿಗಳಲ್ಲಿ ಜೀತಕ್ಕೆ ಸೇರಿಕೊಂಡರು. ಪ್ರಸ್ತುತ ಸಂದರ್ಭ ಮುಂದುವರಿಯುತ್ತಿದೆ.

ತಲಾತಲಾಂತರದಿಂದಲೂ ವಿದ್ಯೆ, ಅಧಿಕಾರ, ಸಂಪತ್ತು, ಕೆಳವರ್ಗಗಳ ಸ್ವತ್ತಾಗಿತ್ತು. ಆದರೆ ಭಾರತಕ್ಕೆ ಬ್ರಿಟಿಷರ ಆಗಮನದಿಂದ ವಿದ್ಯೆಯನ್ನು ಆ ಕೆಲವೇ ವರ್ಗದಿಂದ ಕಿತ್ತು ಎಲ್ಲರಿಗೂ ಸಿಗುವಂತೆ ಮಾಡಿದರು. ಅದರ ಹಿಂದಿನ ಉದ್ದೇಶವೇನೇ ಇರಲಿ, ಆದರೆ ಕೆಲವೇ ವರ್ಗದ ಸ್ವತ್ತಾಗಿದ್ದ ಶಿಕ್ಷಣವನ್ನು ಎಲ್ಲ ವರ್ಗಕ್ಕೂ ಸಿಗುವಂತೆ ಮಾಡಿತು. ಆದರೆ ಅಧಿಕಾರ ಸಂಪತ್ತು ಮಾತ್ರ ಹಾಗೆಯೇ ಮುಂದುವರಿಯಿತು. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ಬರೆಯುವ ಮೂಲಕ ಪಾರಂಪರಿಕ ಅಧಿಕಾರವನ್ನು ಎಲ್ಲರಿಗೂ ಸಿಗುವಂತೆ ಮಾಡುವ ನಿಟ್ಟಿನಲ್ಲಿ ಹೋರಾಡಿದರು. ಆದರೆ ಅವರ ಆಶಯ ಪರಿಪೂರ್ಣವಾಗದೆ ಇದ್ದರೂ ಅದರ ಪ್ರಭಾವ ಮಾತ್ರ ಇಂದು ಕೋಟ್ಯಾಂತರ ಸಮುದಾಯಗಳಿಗೆ ಅಧಿಕಾರದ ಅವಕಾಶವನ್ನು ಕೊಡುತ್ತಿದೆ. ಇದು ಶಿಕ್ಷಣದಿಂದ ಸಾಧ್ಯವಾದ ಕ್ರಾಂತಿ ಅದಕ್ಕಾಗಿ ಬಾಬಾ ಸಾಹೇಬ್ ಅಂಬೇಡ್ಕರ್; ಶಿಕ್ಷಣ–ಸಂಘಟನೆ–ಹೋರಾಟ ಎಂದು ಮೂರು ಸೂತ್ರಗಳನ್ನು ಸಮಾಜದಲ್ಲಿ ಸಾಮಾಜಿಕ ಸಮಾನತೆ, ಅಧಿಕಾರ ಸಮಾನತೆ, ಶೈಕ್ಷಣಿಕ ಸಮಾನತೆ, ಅಂತಸ್ಥಿತಿ ಸಮಾನತೆಯನ್ನು ಸಾಕಾರಗೊಳಿಸಲು ಸಂವಿಧಾನದ ಮೂಲಕ ಭಾರತದಲ್ಲಿ ಭಿತ್ತಿದರು. ಇದು ನಿರಂತರವಾಗಿ ಚಲನಶೀಲತೆಯಿಂದ ಕೂಡಿ ಕೋಟ್ಯಾಂತರ ಸಮಾಜಗಳು ಆರ್ಥಿಕವಾಗಿ ಸಬಲರಾಗುತ್ತ

ಕ್ರಿಯಾಶೀಲತೆಯಿಂದ ದುಡಿಯುವಂತಾಯಿತು. ಆದರೆ ಇದು ಗ್ರಾಮ ಮತ್ತು ನಗರ ಸಮಾಜದಲ್ಲಿ ವಾಸಿಸುತ್ತಿದ್ದವರಿಗೆ ಸೀಮಿತವಾಯಿತು. ಅದು ಅವರ ಬದುಕಿನ್ನು ಒಂದು ಕ್ರಾಂತಿ ನಡೆಯಲು ಪ್ರೇರಣೆಯಾಯಿತು. ಆದರೆ ಇನ್ನೂ ಕಾಡಿನಲ್ಲೇ ಇರುವ ಹಾಗೂ ಇತ್ತೀಚಿನ ದಿನಮಾನಗಳಲ್ಲಿ ಗ್ರಾಮವಾಸಿಗಳಾಗುತ್ತಿರುವ ಬುಡಕಟ್ಟುಗಳಿಗೆ ಮಾತ್ರ ಇವರ ಸದುಪಯೋಗವಿಲ್ಲದೇ ಹೋಯಿತು.

ಪ್ರಸ್ತುತ ದಿನಮಾನಗಳಲ್ಲಿ ಬುಡಕಟ್ಟುಗಳಿಗೆ ಆಧುನಿಕ ಸಮಾಜದಲ್ಲಿ ಹಲವಾರು ಸಮಸ್ಯೆಗಳು ಎದುರಾಗಿವೆ. ಜೀತಗಾರಿಕೆಯಿಂದ ಹೊರಬರಲಾಗದ ಬುಡಕಟ್ಟುಗಳು ಇತರೆ ಸಮಾಜದಂತೆ ಬದುಕಲು ಅನೇಕ ರೀತಿಯಲ್ಲಿ ಪ್ರಯತ್ನಿಸುತ್ತಿವೆ. ಜಾತಿ, ಅಧಿಕಾರ, ಜನಸಂಖ್ಯೆಯಾಧಾರದ ಮೇಲೆ ವಿದ್ಯೆ, ಅಧಿಕಾರ ಪಡೆಯುತ್ತಿರುವ ಸಂದರ್ಭದಲ್ಲಿ ಈ ಯಾವ ಮಾನದಂಡಗಳು ಇಲ್ಲದ ಬುಡಕಟ್ಟುಗಳು ಆಟಕ್ಕುಂಟು, ಲೆಕ್ಕಕಿಲ್ಲ ಎಂಬ ಮಾತಿನಂತಾಗಿದ್ದಾರೆ. "ಅಧಿಕಾರ ಪಡೆಯುವ ನಿಟ್ಟಿನಲ್ಲಿ ತಮ್ಮ ತಮ್ಮ ಜಾತಿ ಮತ್ತು ಧರ್ಮದ ಜನಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಈ ದೇಶಕ್ಕೆ ದಾಳಿ ಮಾಡಿಕೊಂಡು ಬಂದ ವರ್ಗಗಳು ಹವಣಿಸುತ್ತಿದ್ದಾರೆ. ಈ ದೇಶದ ಮೂಲ ನಿವಾಸಿಗಳಿಗೆ ಇದು ಬೇಡವಾದಂತೆ ಕಾಣುತ್ತದೆ. ಇದರ ಹಿಂದಿನ ಕಾರಣ ತಮ್ಮ ನೆಲದ ಬಗ್ಗೆ ನಂಬಿಕೆ ಮತ್ತು ಹಕ್ಕು ಕಾರಣವಾಗಿದೆ. ಈ ದೇಶದ ಮೂಲ ನಿವಾಸಿಗಳು ಪಾರಂಪರಿಕವಾಗಿ ಇಲ್ಲೇ ಹುಟ್ಟಿ ಬೆಳೆದು ಬದುಕುತ್ತಿದ್ದಾರೆ. ಆದ್ದರಿಂದ ಅವರಿಗೆ ಈ ನೆಲವನ್ನು ಕಳೆದುಕೊಳ್ಳುವ ಭಯವಿಲ್ಲ. ಆದರೆ ಆಕ್ರಮಣ ಮಾಡಿಕೊಂಡು ಬಂದ ವರ್ಗಕ್ಕೆ ತಮ್ಮ ಅಸ್ತಿತ್ವಕ್ಕೆ ಧಕ್ಕೆ ಉಂಟಾಗುವ ಭಯವಿರುವುದರಿಂದ ತಮ್ಮ ಜನಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಹವಣಿಸುತ್ತಿವೆ ಎಂದು ಡಾ.ಎನ್.ಚಿನ್ನಸ್ವಾಮಿ ಸೋಸಲೆ ಅವರು ಹೇಳುತ್ತಾರೆ. ಇವರ ಮಾತು ಪ್ರಸ್ತುತ ಸಮಾಜದ ನಿಜ ಸ್ಥಿತಿಯಾಗಿದೆ. ಏಕೆಂದರೆ ಇಂದು ಪ್ರತಿಯೊಂದು ಸಮುದಾಯವು ರಾಜಕೀಯ ಅಧಿಕಾರ ಮತ್ತು ಸಾಮಾಜಿಕವಾಗಿ ಆಳ್ವಿಕೆ ಮಾಡಬೇಕೆಂದು ತಮ್ಮ ತಮ್ಮ ಜಾತಿಗಳನ್ನು ಒಗ್ಗೂಡಿಸಿಕೊಂಡು ಮುಂದಾಗುತ್ತಿದ್ದಾರೆ. ಈ ಬುಡಕಟ್ಟುಗಳು ಈ ಯಾವ ಪರಿವೆ ಇಲ್ಲದೆ ತಮ್ಮ ಜೀತಗಾರಿಕೆಯನ್ನು ಮುಂದುವರಿಸುತ್ತಿವೆ. ಇಂತಹ ಬುಡಕಟ್ಟು ಸಮುದಾಯಗಳಲ್ಲಿ ಇರುಳಿಗರು ಅಗ್ರಗಣ್ಯ ಸ್ಥಾನದಲ್ಲಿ ನಿಲ್ಲುತ್ತಾರೆ. ಈ ಸಮುದಾಯದವರು ಇಂದಿಗೂ ಜೀತಗಾರಿಕೆಯಿಂದ ಹೊರಗೆ ಬಂದಿಲ್ಲ. ೭೫ರಷ್ಟು ಇರುಳಿಗರು ಇಂದಿಗೂ ಇಟ್ಟಿಗೆ ಫ್ಯಾಕ್ಟರಿ, ಎಸ್ಟೇಟ್, ಮಾವಿನ ತೋಟ ಅಥವಾ ಮೇಲುವರ್ಗಗಳ ಮನೆ, ಕೋಳಿ ಫಾರ್ಮ್, ಸೀಮೆ ಹಸುಗಳನ್ನು ನೋಡಿಕೊಂಡು ಬದುಕುತ್ತಿದ್ದಾರೆ. ಕರ್ನಾಟಕದಲ್ಲಿ ವಾಸಿಸುತ್ತಿರುವ ಇರುಳಿಗರಲ್ಲಿ ಶೇ.೨೦ರಷ್ಟು ಜನಕ್ಕೆ ಭೂಮಿ ಇದೆ. ಈ ಭೂಮಿಯು ಇಂದಿಗೂ ಪಾರಂಪರಿಕ ಬೇಸಾಯವನ್ನು ಬಿಟ್ಟು ಹೊರಗೆ ಬಂದಿಲ್ಲ. ಬಂಡವಾಳ ಇಲ್ಲದೆ, ತಮ್ಮ ಸ್ವಂತ ಭೂಮಿಯನ್ನು ತಕ್ಕಲು ಬಿಟ್ಟು(ಖಾಲಿಬಿಟ್ಟು) ಇನ್ನೊಬ್ಬರ ಹೊಲಗದ್ದೆಗಳಿಗೆ ಕೂಲಿಗೆ ಹೋಗುತ್ತಿದ್ದಾರೆ. ಇನ್ನುಳಿದ ೮೦ರಷ್ಟು ಜನಕ್ಕೆ ಭೂಮಿ ಇಲ್ಲ. ಇದರಲ್ಲಿ ಶೇಕಡ ೬೦ರಷ್ಟು ಜನಕ್ಕೆ ಸ್ವಂತ ಮನೆಯೂ ಇಲ್ಲ.

ಇವರೆಲ್ಲರೂ ಇಟ್ಟಿಗೆ ಪ್ಯಾಕ್ಟರಿಗಳಲ್ಲಿ, ಎಸ್ಟೇಟ್‌ಗಳಲ್ಲಿ, ಗೂಡು ಬೇಯಿಸುವ ಕಾರ್ಖಾನೆಗಳಲ್ಲಿ ಜೀತಕ್ಕೆ ದುಡಿಯುತ್ತಿದ್ದಾರೆ. ಬಹಳ ಮುಖ್ಯವಾಗಿ ಶಿಕ್ಷಣ ಇಲ್ಲದ ಇವರನ್ನು ಭೂಮಾಲೀಕರು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಪೊಲೀಸ್ ಇಲಾಖೆಯವರನ್ನು ಮುಂದಿಟ್ಟು ಈ ವರ್ಗ ಗ್ರಾಮಗಳಲ್ಲಿ ನಡೆಯುವ ಕಳ್ಳತನಗಳಿಗೆ ಇವರನ್ನು ಹೊಣೆಗಾರರನ್ನಾಗಿ ಮಾಡಿ ಕೇಸು ದಾಖಲಿಸಿ, ನಂತರ ಅವರೇ ಇವರನ್ನು ಬಿಡಿಸಿಕೊಂಡು ಬಂದು ತಮ್ಮ ಮನೆಗಳಲ್ಲಿ ಜೀತಕ್ಕೆ ಇರಿಸಿಕೊಂಡಿದ್ದಾರೆ. ಇದು ಇವರಿಗೂ ಅನಿವಾರ್ಯವಾಗಿದೆ. ಅರಣ್ಯ ಇಲಾಖೆಯವರು ಇರುಳಿಗರಿಗೆ ದಿನನಿತ್ಯ ಕಿರುಕುಳ ನೀಡುತ್ತಿದ್ದಾರೆ. ಅದರ ಜೊತೆಗೆ ಬದುಕು ಇವರನ್ನು ಅನೇಕ ಅಪಾಯಕಾರಿ ಕೆಲಸಕ್ಕೆ ಕೈ ಹಾಕುವಂತೆ ಮಾಡಿದೆ. 'ರೇಷ್ಮೆ ಗೂಡು ಬೇಯಿಸುವ ಕೆಲಸದಲ್ಲಿ ಬಹುಸಂಖ್ಯಾತರು ಇರುಳಿಗರು. ಇದರಿಂದ ಇವರ ಕೈಗಳೆಲ್ಲ ಕೊಳೆತು ಕ್ಯಾನ್ಸರ್, ಅಸ್ತಮಗಳಂತಹ ಮಾರಣಾಂತಿಕ ಕಾಯಿಲೆಗಳಿಗೆ ತುತ್ತಾಗಿದ್ದಾರೆ. ಆಧುನಿಕತೆಯ ಪರಿಜ್ಞಾನವಿಲ್ಲದ ಇವರು ಆಸ್ಪತ್ರೆಗಳಿಗೆ ಹೋಗದೇ ಮನೆ ಮದ್ದುಗಳನ್ನು ನಂಬಿಕೊಂಡು ಜೀವ ಕಳೆದುಕೊಳ್ಳುತ್ತಿದ್ದಾರೆ.

ಇಂತಹ ಗ್ಲೋಬಲೈಜೇಷನ್ ಯುಗದಲ್ಲೂ ಇರುಳಿಗರು ತಮ್ಮ ಪಾರಂಪರಿಕತೆಯನ್ನು ಬಿಟ್ಟುಕೊಡದೆ ಇರುವುದೇ ಇವರಿಗೆ ಮಾರಕವಾಗಿ ಪರಿಣಮಿಸಿದೆ. ಇಂದಿಗೂ ಈ ಸಮುದಾಯಗಳಿಗೆ ಶಿಕ್ಷಣ ಪಡೆದುಕೊಳ್ಳಬೇಕು, ಆಸ್ತಿ ಮಾಡಬೇಕು, ಹಣ ಗಳಿಸಬೇಕು, ಇತರೆ ಸಮುದಾಯಗಳಂತೆ ನಾವು ಬದುಕಬೇಕು ಎಂಬ ಯಾವ ಪರಿಜ್ಞಾನವು ಇಲ್ಲದ ಸ್ಥಿತಿಯನ್ನು ನಾನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡಿದ್ದೇನೆ. ಓಡಿ ಹೋಗಿ ಮದುವೆಯಾಗಿ ಬಂದ ಯುವಕ ಯುವತಿಯರು ಬದುಕಲು ಕುಟುಂಬ ಸಮೇತವಾಗಿ ಇಟ್ಟಿಗೆ ಪ್ಯಾಕ್ಟರಿ ಮತ್ತು ಎಸ್ಟೇಟ್‌ಗಳಲ್ಲಿ ಹೋಗಿ ನೆಲೆಸುತ್ತಾರೆ. ಇವರಿಗೆ ಹುಟ್ಟುವ ಮಕ್ಕಳು ಅಲ್ಲೇ ಇರುತ್ತವೆ. ಭೂಮಾಲೀಕ ಕೊಡುವ ಕೂಲಿ ಹಣದಿಂದ ಜೀವನ ಸಾಗಿಸುತ್ತಾರೆ. ತಮ್ಮಲ್ಲಿದ್ದ ಬಿ.ಪಿ.ಎಲ್ ಕಾರ್ಡ್, ಓಟ್ ಕಾರ್ಡ್ ಮುಂತಾದ ಸರ್ಕಾರಿ ದಾಖಲೆಗಳನ್ನು ಗೌಡನಿಗೆ ಒಪ್ಪಿಸಿ ಅವನಿಂದ ಸಿಗುವ ಅಷ್ಟೋ ಇಷ್ಟನ್ನು ಪಡೆದುಕೊಂಡು ತಮ್ಮ ಜೀತಗಾರಿಕೆಯನ್ನು ಮುಂದುವರಿ ಸುತ್ತಾರೆ. ಇದರಿಂದ ಇವರಿಗೆ ಸಮಾಜದ ಯಾವ ಆಗುಹೋಗುಗಳ ಬಗ್ಗೆ ಪರಿಜ್ಞಾನವೇ ಇಲ್ಲದಂತಾಗಿದೆ. ಇದರ ಜೊತೆಗೆ ಇರುಳಿಗರನ್ನೂ ಪ್ರಸ್ತುತ ನಾಶ ಮಾಡುತ್ತಿರುವುದು 'ಕುಡಿತ'(ಮದ್ಯಪಾನ). ಇದು ಶೇಕಡ ೭೦ರಷ್ಟು ಇರುಳಿಗರನ್ನು ಆಕ್ರಮಿಸಿ ಬಿಟ್ಟಿದೆ. ಈ ಚಟದಿಂದ ಇರುಳಿಗರು ಇನ್ನೊಬ್ಬರ ಮನೆಯಲ್ಲಿ ಜೀತಕ್ಕೆ ಸೇರಿಕೊಳ್ಳುವುದು ಅಥವಾ ಇನ್ಯಾರದೋ ಮಾತಿನಂತೆ ಕಳ್ಳತನ ಮಾಡುವುದು ಮುಂತಾದ ಮಾರ್ಗಗಳನ್ನು ತುಳಿಯುತ್ತಿದ್ದಾರೆ. ಇದರಿಂದ ವರ್ಷಕ್ಕೆ ೨೦ರಿಂದ ೩೦ ಇರುಳಿಗರು ಕುಡಿದು ಸಾಯುತ್ತಿದ್ದಾರೆ. ಇನ್ನುಳಿದ ಅಷ್ಟೋ ಇಷ್ಟೋ ಇರುಳಿಗರು ಗುಡಿಸಲುಗಳನ್ನು ಕಟ್ಟಿಕೊಂಡು ಸರ್ಕಾರಿ ದಾಖಲೆಗಳನ್ನು ಪಡೆದುಕೊಂಡು ಎನ್‌ಜಿಓಗಳು, ರಾಜಕೀಯ ಪಕ್ಷಗಳೂ ಮತ್ತು ಸಂಘಟನೆಗಳಿಗೆ ಬಂಡವಾಳ ವಾಗಿದ್ದಾರೆ. ಇವರುಗಳು ಇರುಳಿಗರನ್ನು ಸಂದರ್ಭದ

ಶಿಶುಗಳಂತೆ ಬಳಸಿಕೊಳ್ಳುತ್ತಿದ್ದಾರೆ. ಸರ್ಕಾರದಿಂದ ಬರುವ ಸೌಲಭ್ಯಗಳಿಗೆ ಇತರ ಜಾತಿ ಪ್ರಮಾಣ ಪತ್ರ ನೀಡಿ, ಇವರನ್ನು ಹೊಣೆಗಾರರನ್ನಾಗಿ ಮಾಡಿ ತಮ್ಮ ಸ್ವಾರ್ಥ ಸಾಧನೆಯನ್ನು ಯಶಸ್ವಿಗೊಳಿಸಿಕೊಳ್ಳುತ್ತಿದ್ದಾರೆ.

೮.೨. ಇರುಳಿಗ ಸಮುದಾಯಕ್ಕೆ ಸಂಬಂಧಿಸಿದ ಸಮಸ್ಯೆ ಮತ್ತು ಪರಿಹಾರೋಪಾಯಗಳು

ಇರುಳಿಗರು ಪ್ರತಿನಿತ್ಯ ಕೆಲವು ಪ್ರಮುಖವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆಧುನಿಕತೆಗೆ ತಮ್ಮನ್ನು ತೆರೆದುಕೊಂಡಿರುವ ಇರುಳಿಗರು ಎರಡು ಪ್ರಮುಖ ಬದಲಾವಣೆಗಳಿಗೆ ಒಳಗಾಗು ವಂತಾಯಿತು. ಒಂದು ಕಡೆ ನಾಗರಿಕತೆಯ ಪ್ರಭಾವದಿಂದ ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಳ್ಳದಂತಾಯಿತು. ಎರಡನೆಯದು ನಾಗರಿಕ ಸಂಪರ್ಕದಿಂದ ತಮ್ಮ ಪದ್ಧತಿ, ಆಚಾರ–ವಿಚಾರ, ನಂಬಿಕೆಗಳನ್ನು ಬಿಟ್ಟು ನಾಗರಿಕರನ್ನು ಅನುಸರಿಸತೊಡಗಿದ್ದಾರೆ. ಹಾಗಿದ್ದರೆ ಬುಡಕಟ್ಟುಗಳು ಅದೇ ಸ್ಥಿತಿಯಲ್ಲಿಯೇ ಇರಬೇಕು ಎನ್ನುವ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಇದೇ ವಿಷಯವನ್ನಿಟ್ಟುಕೊಂಡು ಚರ್ಚಿಸುವ ಸಂದರ್ಭದಲ್ಲಿ 'ಬುಡಕಟ್ಟುಗಳು ತಮ್ಮ ಪಾರಂಪರಿಕ ನೆಲೆಯನ್ನು ಬಿಟ್ಟು ಎಲ್ಲರಂತೆ ಬದುಕುವಂತಾಗಬೇಕು." ಅವರೇಕೆ ಇನ್ನೂ ಆ ಸ್ಥಿತಿಯಲ್ಲಿಯೇ ಇರಬೇಕು ಎಂದ ಪ್ರಶ್ನೆಯನ್ನು ಇಡುತ್ತಾರೆ. ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ, ಹಾಗೊಮ್ಮೆ ಬುಡಕಟ್ಟುಗಳು ತಮ್ಮ ಪಾರಂಪರಿಕ ವೃತ್ತಿ, ನೆಲೆಗಳನ್ನು ಬಿಟ್ಟು ಬಂದರೆ ಸರ್ಕಾರಗಳು ಮತ್ತು ಸಮಾಜಗಳು ಅವುಗಳನ್ನು ನಡೆಸಿಕೊಳ್ಳುವ ರೀತಿಯ ಬಗ್ಗೆ ಯೋಚಿಸಬೇಕಲ್ಲವೆ? ಪಾರಂಪರಿಕವಾಗಿ ಜಾತಿಯತೆಯನ್ನು ಆಚರಿಸಿಕೊಂಡು ಬಂದಿರುವ ವರ್ಗಗಳು ಇವತ್ತಿನ ಆಧುನಿಕ ಯುಗದಲ್ಲೂ ತಮ್ಮ ಕರಾಳ ಶೋಷಣೆಯನ್ನು ಬಿಟ್ಟಿಲ್ಲ. ಅಂತಹದರಲ್ಲಿ ನಾಗರಿಕತೆಯ ಜ್ಞಾನವಿಲ್ಲದ ಆದಿವಾಸಿಗಳ ಸ್ಥಳಾಂತರದ ಸ್ಥಿತಿಯೇನು? ಹಾಗೆಂದು ಅವರು ಈಗಿರುವ ಸ್ಥಿತಿಯಲ್ಲಿಯೇ ಇರಬೇಕು ಎಂಬುದು ನನ್ನ ಅಭಿಪ್ರಾಯವಲ್ಲ. ಅವರನ್ನು ಒಕ್ಕಲೆಬ್ಬಿಸಿ ಕರೆತಂದರೆ ಅವರಿಗೆ ವಿಶೇಷ ಸ್ಥಾನಮಾನಗಳನ್ನು ಹಾಗೂ ವಿಶೇಷ ನಿಗಾ ಘಟಕಗಳನ್ನು ಸ್ಥಾಪಿಸಬೇಕು. ಅದು ಇವತ್ತಿನ ರಾಜಕೀಯ ಸಂದರ್ಭದಲ್ಲಿ ಸಾಧ್ಯವೇ ಎಂಬ ಪ್ರಶ್ನೆ ಕಾಡುತ್ತದೆ.

ಪಾರಂಪರಿಕವಾಗಿ ಇರುಳಿಗರು ಹಲವಾರು ಒತ್ತಡಗಳಿಂದ ಬದಲಾವಣೆಯನ್ನು ಕಂಡಿದ್ದಾರೆ. ಮಲೆಮಾದಪ್ಪನ ಕಾಲದಲ್ಲಿ ತಮ್ಮ ಪಾರಂಪರಿಕ ಬೇಟೆಗಾರಿಕೆಯನ್ನು ಬಿಟ್ಟು ಕೆಲವು ಇರುಳಿಗರು ಸಸ್ಯಹಾರಿಗಳಾದರು. ಶೈವ ಪಂಥದ ಅನುಯಾಯಿಗಳಾಗಿ ಮಾದಪ್ಪನ ಗುಡ್ಡರಾದರು. ಹಾಗೆಯೇ ರಾಮಾನುಜರ ಕಾಲಘಟ್ಟದಲ್ಲಿ ವೈಷ್ಣವ ಧೀಕ್ಷೆ ಪಡೆದು ಕೆಲವರು ದಾಸರಾದರು. ಹೀಗೆ ಇರುಳಿಗರು ಕಾಲಘಟ್ಟದಲ್ಲಿ ಉಂಟಾದ ಒತ್ತಡಗಳಿಂದ ಅನೇಕ ಬದಲಾವಣೆಗೆ ಒಳಗಾಗು ವಂತಾಯಿತು. ನಾಗರಿಕತೆಯಿಂದ ಇರುಳಿಗರು ತಮ್ಮ ವಾತಾವರಣದಲ್ಲಿ ಉಂಟಾದ ಬದಲಾವಣೆ ಯಿಂದ ಗ್ರಾಮೀಣ ವಾತಾವರಣಕ್ಕೆ ಒಗ್ಗಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಹೀಗೆ

ಅರಣ್ಯದಿಂದ ಹೊರ ಬಂದು ಗ್ರಾಮಗಳಲ್ಲಿ ಬದುಕಾಲಾರಂಭಿಸಿದ ಇರುಳಿಗರು ಅನೇಕ ಸಮಸ್ಯೆಗಳನ್ನು ಎದುರಿಸುವಂತಾಯಿತು. ಅಂತವುಗಳಲ್ಲಿ ಪ್ರಮುಖ ವಾದವುಗಳೆಂದರೆ,

೧. **ಭೂಮಿ ಸಮಸ್ಯೆ:** 'ಇರುಳಿಗರು ಇಂದು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಲ್ಲಿ ಭೂಮಿ ಸಮಸ್ಯೆ ಪ್ರಮುಖವಾಗಿದೆ. ಇರುಳಿಗರು ಪಾರಂಪರಿಕವಾಗಿ ಕಾಡುವಾಸಿಗಳಾಗಿದ್ದು, ಕಣಿಗಾರ ಸೂಚಿಸುವ ಪ್ರದೇಶಗಳಲ್ಲಿ ಗುದ್ದಲಿಯಿಂದ ಅಗೆದು ರಾಗಿ ಮತ್ತು ಕಾಳುಕಡ್ಡಿಯನ್ನು ಚೆಲ್ಲಿ ಬೆಳೆ ಬೆಳೆಯುತ್ತಿದ್ದರು. ಒಂದು ಪ್ರದೇಶದಲ್ಲಿ ಸತತ ಎರಡರಿಂದ ಮೂರು ಭಾರಿ ಬೇಸಾಯ ಮಾಡಿದ ನಂತರ ಸ್ಥಳ ಬದಲಾವಣೆ ಮಾಡಿಕೊಳ್ಳುತ್ತಿದ್ದರು. ಹೀಗೆ ಒಂದು ಗೊತ್ತಾದ ಜಾಗದಲ್ಲಿ ಕೆತ್ಲು(ಕಿಕ್ಲು) ಬೇಸಾಯ ಮಾಡಿಕೊಂಡು ಬದುಕುತ್ತಿದ್ದ ಇರುಳಿಗರಿಗೆ ಅರಣ್ಯ ಹಕ್ಕು ಕಾಯ್ದೆಗಳು ತಡೆಯೊಡ್ಡಿದ್ದವು. ತಮ್ಮ ಪಾರಂಪರಿಕ ಬೇಸಾಯ ಭೂಮಿಯನ್ನು ಅರಣ್ಯ ಸಂರಕ್ಷಣೆಯ ನೆಪದಲ್ಲಿ ಅರಣ್ಯ ಒತ್ತುವರಿ ಭೂಮಿ ಎಂದು ಕರೆದು ಇದ್ದ ಭೂಮಿಯನ್ನು ಕಿತ್ತುಕೊಂಡರು. ಇದರಿಂದ ಇರುಳಿಗರಿಗೆ ಭೂಮಿ ಇಲ್ಲದಂತಾಯಿತು. ಇನ್ನು ಕೆಲವು ಇರುಳಿಗರು ಇರುವ ಭೂಮಿಯನ್ನು ಕೈ ಸಾಲಕ್ಕಾಗಿ ಮಾಡಿಕೊಂಡರು. ಹೀಗೆ ಇರುಳಿಗರು ತಮ್ಮ ಪಾರಂಪರಿಕ ಭೂಮಿಯನ್ನು ಕಳೆದುಕೊಂಡು ಇಂದು ಸರ್ಕಾರವು ಭೂಮಿ ಕೊಡಬಹುದೆಂಬ ಬಯಕೆಯಲ್ಲಿ ಕಾಯುತ್ತಾ ಕುಳಿತಿವೆ. ಇರುವ ಅಷ್ಟೋ ಇಷ್ಟೋ ಭೂಮಿಯು ಸಂಪೂರ್ಣ ಮಳೆಯ ಆಶ್ರಿತ ಪ್ರದೇಶವಾಗಿದೆ. ವರ್ಷಕ್ಕೊಮ್ಮೆ ರಾಗಿ, ಜೋಳಗಳನ್ನು ಬೆಳೆದು ಬದುಕುತ್ತಿದ್ದಾರೆ. ಇವರು ಆ ಒಣಬೇಸಾಯದ ಭೂಮಿಗೆ ನೀರಾವರಿ ಮಾಡಲು ಸರ್ಕಾರದ ಯಾವ ಸಹಾಯವು ದೊರೆಯದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಏಕೆಂದರೆ ಇವರಿಗೆ ಪಹಣಿಪಟ್ಟದ ಕಲ್ಪನೆ ಇಲ್ಲ. ಆದರೆ ಸರ್ಕಾರ ನೀರಾವರಿಗೆ ಅವುಗಳನ್ನು ಕೇಳುತ್ತದೆ. ಹಾಗೊಮ್ಮೆ ಇವರು ಪಹಣಿ-ಪಟ್ಟವನ್ನು ಹೊಂದಿದ್ದರು ನೀರಾವರಿ ಯೋಜನೆಗೆ ಸ್ಥಳೀಯ ಶಾಸಕರ ಒಪ್ಪಿಗೆ ಇರಬೇಕು. ಜನಸಂಖ್ಯೆಯಲ್ಲಿ ಕಡಿಮೆ ಇರುವ, ಶಿಕ್ಷಣವು ಇಲ್ಲದ ಇರುಳಿಗರಿಗೆ ಇದು ಎಲ್ಲಿ ಸಾಧ್ಯವಾಗಬೇಕು. ಆದ್ದರಿಂದ ಪ್ರಕೃತಿಯು ನೀಡುವ ಮಳೆಯನ್ನೇ ಆಶ್ರಯಿಸಿಕೊಂಡು ಈ ಸಮುದಾಯದವರು ಇಂದಿಗೂ ಬದುಕುತ್ತಿದ್ದಾರೆ.

೨. **ಅರಣ್ಯ ಇಲಾಖೆಯವರ ಸಮಸ್ಯೆ:** ಬುಡಕಟ್ಟುಗಳು ಇಂದು ಹೆಚ್ಚಿನ ಶೋಷಣೆಗೆ ಒಳಗಾಗುತ್ತಿರುವುದು ಅರಣ್ಯ ಇಲಾಖೆಯವರಿಂದ. ಅರಣ್ಯ ಸಂರಕ್ಷಣೆಯ ನೆಪದಲ್ಲಿ ಬುಡಕಟ್ಟುಗಳನ್ನು ಇಂದು ಹೊರಹಾಕಲಾಗುತ್ತಿದೆ. ಇದು ವಸಾಹತುಶಾಹಿ ಬ್ರಿಟಿಷರು ಆರಂಭಿಸಿದ ಕಾನೂನಾಗಿದೆ. ಟಿಪ್ಪುವಿನ ಮರಣದ ನಂತರ ಟಿಪ್ಪುವಿನ ಶಕ್ತಿಯಾಗಿದ್ದ ಬುಡಕಟ್ಟುಗಳನ್ನು ತಿಳಿದುಕೊಳ್ಳುವ ನೆಪದಲ್ಲಿ ಬುಕಾನನ್ ತನ್ನ ಪ್ರವಾಸವನ್ನು ಆರಂಭಿಸಿ ಪ್ರತಿಯೊಂದು ಬುಡಕಟ್ಟು ಮತ್ತು ಅರಣ್ಯದೊಂದಿಗಿನ ಸಂಬಂಧವನ್ನು ಕಂಪನಿಗೆ ತಿಳಿಸಿದನು. ಇದರಿಂದ ಕಂಪನಿ ಸರ್ಕಾರ ಬುಡಕಟ್ಟುಗಳನ್ನು ಹತ್ತಿಕ್ಕಲು ಅವರನ್ನು ಅರಣ್ಯದಿಂದ ಹೊರ ಹಾಕುವುದೊಂದೇ

ಮಾರ್ಗ ಎಂದು ನಿರ್ಧರಿಸಿಕೊಂಡು ಬ್ರಿಟಿಶರು ಅನೇಕ ಕಾಯ್ದೆ ಕಾನೂನುಗಳನ್ನು ಜಾರಿಗೆ ತಂದರು. ಬ್ರಿಟಿಶರು ಅರಣ್ಯ ಸಂರಕ್ಷಣೆಯ ನೆಪದಲ್ಲಿ ಅವರನ್ನು ಅರಣ್ಯದಿಂದ ಹೊರ ಹಾಕಿದರು. ಇದರ ಜೊತೆಗೆ ಬುಡಕಟ್ಟಿನವರು ಅರಣ್ಯದ ಒಳಗಡೆ ಪ್ರವೇಶಿಸುವುದಕ್ಕೆ ತಡೆಯಲು ಅರಣ್ಯಾಧಿಕಾರಿಗಳನ್ನು ನೇಮಕ ಮಾಡಿದರು. ಇದರಿಂದ ಬುಡಕಟ್ಟುಗಳು ತಮ್ಮ ನೆಲಕ್ಕೆ ತಾವೇ ಕದ್ದುಮುಚ್ಚಿ ಹೋಗುವಂತಾಯಿತು. ಇವರ ಪ್ರವೇಶವು ಅತಿಕ್ರಮಣ ಪ್ರವೇಶವಾಯಿತು. ಈ ವಸಾಹತು ಧೋರಣೆಯು ಭಾರತಕ್ಕೆ ಸ್ವಾತಂತ್ರ್ಯ ಬಂದರೂ ಅರಣ್ಯ ಹಕ್ಕು ಕಾಯ್ದೆಗಳು ಬ್ರಿಟಿಷರ ಧೋರಣೆಗಳಿಂದ ಮುಕ್ತವಾಗಿಲ್ಲ. ಹಿಂದೆ ಬ್ರಿಟಿಷ್ ಅಧಿಕಾರಿಗಳಲ್ಲಿ ಮೃದುಧೋರಣೆ ಇತ್ತೇನೋ, ಆದರೆ ಪ್ರಸ್ತುತ ನಮ್ಮದೇ ಆದ ಅರಣ್ಯಾಧಿಕಾರಿಗಳು ಬುಡಕಟ್ಟು ಜನರನ್ನು ಭಯೋತ್ಪಾದಕರಂತೆ ನೋಡುತ್ತಿದ್ದಾರೆ. ಸಂಪೂರ್ಣವಾಗಿ ಕಾಡಿನೊಂದಿಗೆ ಬದುಕನ್ನು ಬೆಸೆದುಕೊಂಡಿದ್ದ ಇರುಳಿಗರನ್ನು ಕಾಡಿನಿಂದ ಹೊರಹಾಕಿದ ನಂತರ ತಮ್ಮ ಪಾರಂಪರಿಕ ವೃತ್ತಿಯನ್ನು ಕದ್ದುಮುಚ್ಚಿ ಮಾಡುವಂತಾಯಿತು. ಇದರಿಂದ ಅರಣ್ಯ ಇಲಾಖೆಯವರು ಇಲ್ಲಸಲ್ಲದ ಕೇಸುಗಳನ್ನು ದಾಖಲಿಸಿ ಇವರನ್ನು ಜೈಲಿಗೆ ಅಟ್ಟುತ್ತಿದ್ದಾರೆ. ಅರಣ್ಯ ಇಲಾಖೆ ಬರುವುದಕ್ಕೂ ಮುಂಚೆಯೇ ಬುಡಕಟ್ಟುಗಳು ಕಾಡಿನಲ್ಲಿದ್ದವು. ಆಗ ಇದೇ ಅರಣ್ಯ, ದಟ್ಟಕಾಡುಗಳಿಂದ ತುಂಬಿ, ಪ್ರಾಣಿ ಸಂಕುಲಗಳು ಯಥೇಚ್ಚವಾಗಿದ್ದವು. ಆದರೆ ಇಂದು ಅರಣ್ಯ ಸಂರಕ್ಷಣೆ ಆರಂಭವಾಗಿ ಕಾಡೆಲ್ಲ ನಾಶವಾಗಿ ಪ್ರಾಣಿಗಳು ನಾಡಿನ ಕಡೆ ಬರುವುದಕ್ಕೆ ಪ್ರಾರಂಭಿಸಿವೆ. ಅರಣ್ಯ ಸಂರಕ್ಷಣೆಯ ನೆಪದಲ್ಲಿ ಕಾಡನ್ನು ಸಂಪೂರ್ಣವಾಗಿ ಲೂಟಿ ಮಾಡಲಾಗುತ್ತಿದೆ.

೩. **ಭೂಮಿ ಹಕ್ಕು:** ಬುಡಕಟ್ಟುಗಳಿಗೆ ಭೂಮಿಯ ಮೇಲೆ ಒಡೆತನ ಸಾಧಿಸುವುದು ತಾಯಿಯ ಮೇಲೆ ಒಡತನ ಸಾಧಿಸಿದಂತೆ ಎಂದು ನಂಬಿಕೊಂಡು ಬಂದಿದ್ದರು. ಇದರಿಂದ ಸಮುದಾಯದ ಒಟ್ಟು ಆಸ್ತಿಯ ಕಲ್ಪನೆ ಇತ್ತು. ಆದರೆ ವಸಾಹತುಶಾಹಿಯ ಆಡಳಿತದ ಸಂದರ್ಭದಲ್ಲಿ ಖಾಸಗಿ ಆಸ್ತಿಯ ಕಲ್ಪನೆ ಮೂಡಿಸಿ, ಪ್ರತಿಯೊಬ್ಬರೂ ಆಸ್ತಿಯನ್ನು ಹೊಂದಬೇಕು ಎಂದು ಹೇಳಿ, ಆಸ್ತಿ ಹಕ್ಕನ್ನು ಜಾರಿಗೆ ಬರುವಂತೆ ಮಾಡಿದರು. ಇದಕ್ಕೆ ಹಕ್ಕು ಪತ್ರ ಹೊಂದಬೇಕು ಎಂದು ಕಾಯ್ದೆ, ಕಾನೂನುಗಳನ್ನು ರೂಪಿಸಿದರು. ಇದರ ಫಲವಾಗಿಯೇ ಯಾರು ದಾಖಲೆಗಳನ್ನು ಹೊಂದಿದ್ದರೋ ಅದು ಅವರ ಸ್ವತ್ತಾಗಿ, ಯಾರಲ್ಲಿ ದಾಖಲೆಗಳು ಇಲ್ಲವೋ ಅದು ಸರ್ಕಾರದ ಭೂಮಿ ಎಂದೂ ನಿರ್ಧರಿಸಿ ವಶಪಡಿಸಿಕೊಂಡರು. ಇದರಿಂದ ಬುಡಕಟ್ಟುಗಳಲ್ಲೂ ಖಾಸಗಿ ಆಸ್ತಿಯ ಕಲ್ಪನೆ ಬೆಳೆಯುವಂತಾಯಿತು.

ಆದರೆ ಈಗ ಕಾಲ ಬದಲಾಗಿದೆ. ಹಿಂದೆ ಆಸ್ತಿಯ ಹಕ್ಕು ಬೇಡ ಎಂದರೂ ದಾಖಲೆಗಳನ್ನು ನಿರ್ಮಿಸಿಕೊಳ್ಳಲು ಬಲವಂತಪಡಿಸುತ್ತಿದ್ದ ಸರ್ಕಾರಗಳು ಇಂದು ದಾಖಲೆಗಳನ್ನು ಮಾಡಿಕೊಳ್ಳು ತ್ತೇವೆಂದರೂ ಬಿಡುತ್ತಿಲ್ಲ. ಹೀಗೆ ಅರಣ್ಯ ಇಲಾಖೆಗಳು ಮತ್ತು ಬುಡಕಟ್ಟುಗಳ ನಡುವೆ ನಿರಂತರ ಹೋರಾಟಗಳು ನಡೆದು ಭಾರತ ಸರ್ಕಾರ ಬುಡಕಟ್ಟುಗಳಿಗೆ ಅವರ ಪಾರಂಪರಿಕ

ಭೂಮಿಯನ್ನು ಹಾಗೂ ಅವರ ಪಾರಂಪರಿಕ ಹಕ್ಕನ್ನು ನೀಡುವ ನಿಟ್ಟಿನಲ್ಲಿ ೨೦೦೬ರಲ್ಲಿ ಅರಣ್ಯ ಹಕ್ಕು ಕಾಯ್ದೆ ೨೦೦೬ ಎಂಬ ಮಹತ್ತರವಾದ ಕಾನೂನನ್ನು ಜಾರಿ ಮಾಡಿದೆ. ಇದು ಬುಡಕಟ್ಟುಗಳು ಶತಶತಮಾನಗಳಿಂದಲೂ ಕಳೆದುಕೊಂಡಿರುವ ಹಕ್ಕುಗಳನ್ನು ತಂದುಕೊಡುವ ಹಕ್ಕಾಗಿದೆ. ಈ ಹಕ್ಕಿನ ಪ್ರಕಾರ ಪ್ರತಿಯೊಂದು ಬುಡಕಟ್ಟು ಕುಟುಂಬಕ್ಕೆ ೧೦ ಎಕರೆ ಭೂಮಿ ನೀಡಬೇಕು. ಹಾಗೂ ಅವರಿಗೆ ಸಮುದಾಯ ಹಕ್ಕನ್ನು ಕೊಟ್ಟು, ಆ ಹಕ್ಕಿನ ಅನ್ವಯ ಅವರು ಅರಣ್ಯದಲ್ಲಿ ಕಿರು ಉತ್ಪನ್ನಗಳನ್ನು ಸಂಗ್ರಹಿಸಿಕೊಳ್ಳುವ ಸ್ವಾತಂತ್ರ್ಯ ನೀಡುವ ಹತ್ತಾರು ಅವಕಾಶಗಳನ್ನು ಕೊಡುವ ಹಕ್ಕನ್ನು ಸುಪ್ರೀಂಕೋರ್ಟ್ ಘೋಷಿಸಿದೆ. ಅದನ್ನು ಕಾರ್ಯಗತಗೊಳಿಸುವ ಬಗ್ಗೆ ಆಯಾಯ ರಾಜಕೀಯ ಪಕ್ಷಗಳು, ಕಾರ್ಯಕರ್ತರು, ಸಚಿವರು, ಅಧಿಕಾರಿಗಳು ಮನಸ್ಸು ಮಾಡುತ್ತಿಲ್ಲ.

೪. ಆರ್ಥಿಕ ಸಮಸ್ಯೆಗಳು: ಇರುಳಿಗರು ಬೇಟೆಗಾರಿಕೆಯ ಮೂಲಕ ಅರಣ್ಯದಲ್ಲಿ ಸಿಗುವ ಮಾಕಳಿಬೇರು, ನೆಲ್ಲಿಕಾಯಿ, ಗೇರುಬೀಜ, ಮೊಗ್ಗು, ಕಲ್ಲುನುರು, ಕಲ್ಲುಪಾಚಿ, ಅರಿಶಿಣ ಭೂತಾಳೆ, ಕೆಂಪು ಭೂತಾಳಿ, ಜೇನು, ಮೊಲ, ಕಾಡುಕೋಳಿ ಮುಂತಾದ ಅರಣ್ಯದಲ್ಲಿ ಸಿಗುವ 'ಕಿರು ಉತ್ಪನ್ನಗಳನ್ನು ಸಂಗ್ರಹಿಸಿ ತಂದು ತನ್ನ ಅವಶ್ಯಕತೆಗೆ ಬೇಕಾದಷ್ಟನ್ನು ಇಟ್ಟುಕೊಂಡು ಉಳಿದಿದ್ದನ್ನು ಗ್ರಾಮ ಅಥವಾ ಪಟ್ಟಣಗಳಿಗೆ ಮಾರಾಟ ಮಾಡಿ, ಅದರಿಂದ ಅಕ್ಕಿ, ಎಣ್ಣೆ, ಮೆಣಸಿನಕಾಯಿ ಮುಂತಾದವುಗಳನ್ನು ಪಡೆದು ಜೀವನ ಸಾಗಿಸುತ್ತಿದ್ದರು. ಆದರೆ ಬ್ರಿಟಿಷರು ಅರಣ್ಯದಲ್ಲಿ ನಿರ್ಬಂಧ ಹೇರಿದ ಮೇಲೆ ಒಣಗಿದ ಸೌದೆಯನ್ನು ಕಡಿದು, ಗ್ರಾಮ, ಪಟ್ಟಣಗಳಿಗೆ ಮಾರಾಟ ಮಾಡಿ ಬದುಕುವುದರೊಂದಿಗೆ ಕಾಡಿನಲ್ಲಿ ಇದ್ದಿಲೂ ಮಾಡಿಕೊಂಡು ಮಾರುವುದು, ಸೌದೆ ಮಾರುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದ ಇರುಳಿಗರಿಗೆ ಅದಕ್ಕೂ ನಿರ್ಬಂಧ ಬಿದ್ದಾಗ ಅವರಿಗೆ ಕರೆದುಕೊಟ್ಟ ಕೆಲಸವೆಂದರೆ ಅದು ಜೀತಗಾರಿಕೆ. ಇದೇ ಇವರಿಗೆ ಆದಾಯದ ಮೂಲವಾಗಿತ್ತು. ಇದರ ಜೊತೆಗೆ ಬುಟ್ಟಿ ಹೆಣೆಯುವುದರಿಂದ ಹಿಡಿದು ಪ್ರತಿಯೊಂದು ಕೆಲಸವನ್ನು ಮಾಡಿಕೊಂಡು ಜೀವನ ಸಾಗಿಸುತ್ತಿರುವ ಇರುಳಿಗರು ಇನ್ನೊಬ್ಬರ ಜಮೀನಿನಲ್ಲಿ ದುಡಿಯುವುದೇ ಅವರ ಆದಾಯದ ಮೂಲ ಎಂದಾಗಿದೆ. ಇದು ಹೊರತುಪಡಿಸಿದರೆ ಇವರಿಗೆ ಇನ್ನಾವುದೇ ಆದಾಯದ ಮೂಲಗಳಿಲ್ಲದೆ ಇರುವುದನ್ನು ಕಾಣಬಹುದು.

೫. ಸಾಮಾಜಿಕ ಸಮಸ್ಯೆಗಳು: ಇರುಳಿಗರಿಗೆ ಸುತ್ತಮುತ್ತಲಿನ ಜನರ ಶೋಷಣೆ ಅಧಿಕವಾಗಿದೆ. ಅಕ್ಕಪಕ್ಕದ ಇತರೆ ಸಮುದಾಯದವರು ಇವರನ್ನು ನಿರಂತರವಾಗಿ ಶೋಷಣೆಗೆ ಒಳಪಡಿಸುತ್ತಲೇ ಬಂದಿದ್ದಾರೆ. ಇವರದಲ್ಲದ ತಪ್ಪಿಗೂ ಇವರ ಮೇಲೆ ಅನೇಕ ಕೇಸುಗಳನ್ನು ದಾಖಲಿಸಿ ಜೈಲಿಗೆ ಕಳುಹಿಸಿ ಮತ್ತೆ ತಾವೇ ಬಿಡಿಸಿಕೊಂಡು ಬಂದು ತಮ್ಮ ಮನೆಯಲ್ಲಿ ಜೀತಕ್ಕೆ ಇರಿಸಿಕೊಳ್ಳುತ್ತಾರೆ. ಇದರ ಜೊತೆಗೆ ತಮ್ಮ ಪಾರಂಪರಿಕ ಆಚರಣೆಗಳನ್ನು ಮಾಡಲು ಬಿಡುತ್ತಿಲ್ಲ. ಇವರ ಪಾರಂಪರಿಕ ಆಚರಣೆಗಳು ಇತರೆ ಸಮುದಾಯದವರಿಗೆ ಕೆಟ್ಟದಾಗಿ ಕಾಣುತ್ತದೆ. ಆದ್ದರಿಂದ ಅವರು

ನಿರಂತರವಾಗಿ ಇವರ ಪಾರಂಪರಿಕ ಆಚರಣೆಗಳನ್ನು ಮಾಡಲು ಬಿಡುವುದಿಲ್ಲ. ರಸ್ತೆ ಅಗಲೀಕರಣ ಇತರ ಕಾರ್ಯಕ್ರಮಗಳ ನೆಪವೊಡ್ಡಿ ಇರುಳಿಗರ ಕಲ್ಲು ಗೋರಿಗಳನ್ನು ನಾಶ ಮಾಡಲಾಗುತ್ತಿದೆ. ಇದರ ಜೊತೆಗೆ ಇರುಳಿಗರ ಬಡತನವನ್ನು ಮತ್ತು ಅಜ್ಞಾನವನ್ನು ಬಂಡವಾಳ ಮಾಡಿಕೊಂಡು ಅನೈತಿಕ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಇರುಳಿಗರಿಗೆ ಬರುವ ಯಾವುದೇ ಕೆಲಸಗಳಿಗೆ ಇವರ ದಾಖಲಾತಿಗಳನ್ನು ಸಲ್ಲಿಸಿ ಸೌಲಭ್ಯಗಳನ್ನು ಬಳಿಸಿಕೊಳ್ಳುತ್ತಿದ್ದಾರೆ. ಇಲ್ಲಿಗರು ಕಾಡು ಪೂಜಾರಿ ಎಂದು ಅನೇಕ ಬಾರಿ ಚೇಡಿಸುವುದರಿಂದ ಅಸಹಾಯಕರಾದ ಇರುಳಿಗರು ಬಡವನ ಕೋಪ ದವಡೆಗೆ ಮೂಲ ಎಂಬಂತೆ ಸಹಿಸಿಕೊಂಡು ಬದುಕುತ್ತಿದ್ದಾರೆ.

೬. ಮೂಲಭೂತ ಸೌಕರ್ಯಗಳ ಸಮಸ್ಯೆ: ಇರುಳಿಗರು ಇಂದು ಮೂಲಭೂತ ಸಮಸ್ಯೆಗಳಿಲ್ಲದೆ ನರಳುತ್ತಿದ್ದಾರೆ. ಕುಡಿಯುವ ನೀರು, ಸಾರಿಗೆ ವ್ಯವಸ್ಥೆ, ವಸತಿ ವ್ಯವಸ್ಥೆ, ಆಹಾರ, ಆರೋಗ್ಯ ಮುಂತಾದ ಸಮಸ್ಯೆಗಳಿಂದ ಇರುಳಿಗರು ಇಂದು ಬಳಲುತ್ತಿದ್ದಾರೆ. ಇರುಳಿಗರು ವಾಸ ಮಾಡುವ ಪ್ರದೇಶಗಳು ದಟ್ಟಾರಣ್ಯ ಪ್ರದೇಶಗಳಾಗಿದ್ದು, ಅಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಉಲ್ಬಣವಾಗಿದೆ. ಹಿಂದೆ ಬೆಟ್ಟಗುಡ್ಡಗಳಿಂದ ಹರಿಯುತ್ತಿದ್ದ ಹಳ್ಳ ಕೊಳ್ಳಗಳ ನೀರನ್ನು ಕುಡಿದು ಬದುಕುತ್ತಿದ್ದರು. ಕಾಡು ಕಡಿಮೆಯಾದಂತೆ ಹಳ್ಳ-ಕೊಳ್ಳಗಳೆಲ್ಲ ಮಾಯವಾಗಿ ಇರುಳಿಗರು ಕೆರೆ, ಕುಂಟೆಗಳ ನೀರನ್ನು ಕುಡಿಯುವಂತಾಗಿದೆ. ಅಲ್ಲಿಯೂ ನೀರು ಸಿಗದೇ ನೀರಿಗಾಗಿ ಪ್ರತಿನಿತ್ಯ ಅಲೆಯು ವಂತಾಗಿದೆ. ಕೇವಲ ಚುನಾವಣೆಯ ಸಂದರ್ಭದಲ್ಲಿ ಮಾತ್ರ ಬಂದು ಹೋಗುವ ರಾಜಕಾರಣಿಗಳು ಇವರ ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸಿಲ್ಲ. ನೀರೇ ಇಲ್ಲದ ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಮತ್ತೆಲ್ಲಿ? ಇರುವ ಅಷ್ಟೋ ಇಷ್ಟೋ ಜಾಗವು ತಮ್ಮದಲ್ಲದೆ ಇದ್ದರೂ ಸಣ್ಣ ಗುಡಿಸಲನ್ನು ಹಾಕಿಕೊಂಡು ಬದುಕುತ್ತಿರುವ ಇರುಳಿಗರ ವಸತಿಯನ್ನು ಖಾಲಿ ಮಾಡಿಸುವ ಕೆಲಸವನ್ನು ಮಾಡಲಾಗುತ್ತಿದೆ. ಸಂಪೂರ್ಣ ಬಡತನದಿಂದ ಇರುಳಿಗರು ಉಡುಗೆ-ತೊಡುಗೆ, ಆಹಾರ ಮುಂತಾದ ಸಮಸ್ಯೆಗಳಿಂದ ಬದುಕುತ್ತಿದ್ದಾರೆ. ಇರುಳಿಗರ ಹಾಡಿಗಳಲ್ಲಿ ಆಶ್ರಯ ವಸತಿ ಯೋಜನೆಗಳು ದಾಪುಗಾಲಿಟ್ಟಿದ್ದು, ಕಮಿಷನ್ ಆಸೆಗೆ ಕಳಪೆ ಮಟ್ಟದ ಮನೆಗಳನ್ನು ಕಟ್ಟಿಸಿಕೊಟ್ಟು, ಆ ಮನೆಗಳು ಮಳೆಗಾಲದಲ್ಲಿ ಸೋರುವಂತಾಗಿದೆ. ಇನ್ನು ಈ ಗ್ರಾಮಗಳಿಗೆ ರಸ್ತೆಗಳು ಇಂದಿಗೂ ಸಾಧ್ಯವಾಗಿಲ್ಲ. ಜೊತೆಗೆ ಇನ್ನೂ ಎಷ್ಟೋ ಮನೆಗಳು ವಿದ್ಯುತ್ ಇಲ್ಲದೆ ಕತ್ತಲಲ್ಲಿ ಕುಳಿತಿವೆ. ಜೊತೆಗೆ ಅಪೌಷ್ಠಿಕತೆ ಈ ಜನರನ್ನು ಗಂಭೀರವಾಗಿ ಕಾಡುತ್ತಿದೆ. ಅರಣ್ಯದಲ್ಲಿದ್ದ ಇರುಳಿಗರು ಕಾಡಿನಲ್ಲಿ ಹಣ್ಣು, ಹಂಪಲುಗಳನ್ನು ತಿಂದು ಬದುಕುತ್ತಿದ್ದರು. ಆದರೆ ಕಾಡಿನಿಂದ ಹೊರಬಂದು ಸರಿಯಾದ ಆಹಾರವಿಲ್ಲದೆ ಅಪೌಷ್ಠಿಕತೆಯಿಂದ ನರಳುವಂತಾಗಿದೆ.

ಇನ್ನು ಸರ್ಕಾರದ ಯೋಜನೆಗಳನ್ನು ಪಡೆದುಕೊಳ್ಳಲು ಸರ್ಕಾರಿ ದಾಖಲೆಗಳಾದ ಬಿ.ಪಿ.ಎಲ್. ಕಾರ್ಡ್, ಓಟ್ ಕಾರ್ಡ್, ಆಧಾರ್ ಕಾರ್ಡ್, ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರಗಳಂತಹ ಯಾವ ದಾಖಲೆಗಳು ಇಲ್ಲ. ಆದ್ದರಿಂದ ಯಾವ ರಾಜಕಾರಣಿಗಳಿಗಾಗಲಿ,

ಸಂಘ-ಸಂಸ್ಥೆಗಳಿಗಾಗಲಿ ಇವರು ಬೇಡವಾಗಿ ಬಿಟ್ಟಿದ್ದಾರೆ. ಆದರೆ ಎನ್.ಜಿ.ಓ.ಗಳು ಇದನ್ನೇ ಬಂಡವಾಳ ಮಾಡಿಕೊಂಡು ಇವರನ್ನು ತೋರಿಸಿ ಸ್ವ ಅಭಿವೃದ್ಧಿ ಹೊಂದುತ್ತಿವೆ.

೭. ಶೈಕ್ಷಣಿಕ ಸಮಸ್ಯೆಗಳು: ಇರುಳಿಗರು ಶೈಕ್ಷಣಿಕ ಹಂತದಲ್ಲಿ ಅತ್ಯಂತ ಹಿಂದುಳಿದ ಸಮುದಾಯವಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದು ೭೨ ವರುಷಗಳು ಕಳೆದಿದ್ದರೂ ಒಬ್ಬ ಸರ್ಕಾರಿ ಅಧಿಕಾರಿಗಳು ಇವರಲ್ಲಿ ಸಿಗುವುದಿಲ್ಲ. ಇತ್ತೀಚೆಗೆ ಎಂ.ಎ., ಎಂ.ಕಾಂ., ಪಿಎಚ್.ಡಿ. ಯಂತಹ ಉನ್ನತ ವ್ಯಾಸಂಗದಲ್ಲಿ ಬೆರಳೆಣಿಕೆಯಷ್ಟು ಮಂದಿ ಬಿಟ್ಟರೆ ಇವರ ಶೈಕ್ಷಣಿಕ ಸ್ಥಿತಿಗತಿ ತೀರ ಹಿಂದುಳಿದಿದೆ. ಇಡೀ ಇರುಳಿಗರಲ್ಲಿ ೭೨ ವರ್ಷಗಳಾದರೂ ಇನ್ನು ಎರಡನೆಯ ತಲೆಮಾರಿನ ಶಿಕ್ಷಣವನ್ನು ಮಾತ್ರ ಕಾಣಲು ಸಾಧ್ಯವಾಗಿದೆ. ಇದು ಸಾವಿರಕ್ಕೆ ಮೂರು ಅಥವಾ ನಾಲ್ಕು ಜನ ಮಾತ್ರ ಸಿಗುತ್ತಾರೆ. ಇದಕ್ಕೆ ಹಲವಾರು ಕಾರಣಗಳನ್ನು ನೀಡಬಹುದು. ಇರುಳಿಗರು ಆರ್ಥಿಕವಾಗಿ ತೀರ ದುರ್ಬಲರಿರುವ ಕಾರಣ ದಿನ ಹೊತ್ತಿನ ಊಟವನ್ನು ಸಂಪಾದಿಸುವುದು ಕಷ್ಟವಾಗಿರುವಾಗ ಇನ್ನು ಶಿಕ್ಷಣದ ಮಾತೆಲ್ಲಿ? ತಂದೆ-ತಾಯಿಗಳ ಜೊತೆ ಮಗ ದುಡಿದರೆ ತುತ್ತಿನ ಚೀಲ ತುಂಬುತ್ತದೆ ಎನ್ನುವ ಪರಿಸ್ಥಿತಿಯಲ್ಲಿರುವಾಗ ಶಿಕ್ಷಣದ ಕಡೆ ಗಮನಹರಿಸದೇ ಇರುವುದನ್ನು ಕಾಣಬಹುದು. ಇನ್ನೊಬ್ಬರ ಎಸ್ಟೇಟ್, ಇಟ್ಟಿಗೆ ಫ್ಯಾಕ್ಟರಿ, ಹೊಲಗದ್ದೆಗಳಿಗೆ ಕುಟುಂಬ ಸಮೇತವಾಗಿ ಹತ್ತರಿಂದ ಹದಿನೈದು ವರುಷಗಳು ದುಡಿಯುವುದರಿಂದ ಮಕ್ಕಳು ತಂದೆಯಂತೆ ವ್ಯವಸಾಯಕ್ಕೆ ಸೀಮಿತವಾಗುತ್ತಾರೆ ವಿನಃ ಶಿಕ್ಷಣ ಕೊಡಿಸಲು ಪ್ರಯತ್ನಿಸುವುದಿಲ್ಲ. ಹಾಗೊಮ್ಮೆ ಇರುಳಿಗರ ಹಾಡಿಗಳಿಗೆ ಶಾಲೆಗಳು ಬಂದಿದ್ದರೂ ಅದಕ್ಕೆ ಮೇಷ್ಟ್ರುಗಳ ಕೊರತೆ ಎದ್ದು ಕಾಣುತ್ತದೆ. ಅಂದರೆ ಇವರ ಹಾಡಿಗಳಿಗೆ ಯಾವುದೇ ಬಸ್‌ಗಳ ಸೌಲಭ್ಯವಿರುವುದಿಲ್ಲ. ಸರಿಯಾದ ರಸ್ತೆಗಳು ಇರುವುದಿಲ್ಲ. ಆದ್ದರಿಂದ ಮೇಷ್ಟ್ರುಗಳು ವಾರಕ್ಕೊಮ್ಮೆ ಬಂದು ಹೋದರೂ ಆಶ್ಚರ್ಯಪಡಬೇಕಾಗಿಲ್ಲ. ಜೊತೆಗೆ ತಮ್ಮ ಊರಿನಲ್ಲಿರುವವರೆಗೂ ಹಾಗೋ ಹೀಗೋ ಶಿಕ್ಷಣ ಕೊಡಿಸುತ್ತಾರೆ. ನಂತರ ಪಕ್ಕದ ಹಳ್ಳಿಗಳಿಗೆ ಹೋಗಬೇಕಾದ ಸಂದರ್ಭ ಬಂದರೆ ಅಲ್ಲಿಗೆ ವಿದ್ಯಾಭ್ಯಾಸವನ್ನು ಮೊಟಕುಗೊಳಿಸ ಲಾಗುತ್ತದೆ. ಹೀಗೆ ಇರುಳಿಗರ ಶೈಕ್ಷಣಿಕ ಸ್ಥಿತಿ ಅತ್ಯಂತ ದುಸ್ತರವಾಗಿದೆ.

೮. ಆರೋಗ್ಯ ಸಮಸ್ಯೆ: ಇರುಳಿಗರು ಇವತ್ತಿಗೂ ತಮ್ಮ ಪಾರಂಪರಿಕ ನಾಟಿ ವೈದ್ಯವನ್ನು ಅವಲಂಬಿಸಿರುವುದನ್ನು ಕಾಣಬಹುದು. ಇದು ಇವತ್ತಿನ ಸಂದರ್ಭದಲ್ಲಿ ಕೆಲಸ ಮಾಡದಂತಾಗಿದೆ. ಕಾಡಿನಲ್ಲಿದ್ದ ಸಂದರ್ಭದಲ್ಲಿ ಉಂಟಾಗುವ ಸಮಸ್ಯೆಗಳಿಗೆ ಕಾಡಿನ ಗಿಡಮೂಲಿಕೆಗಳನ್ನು ತಿಂದರೆ ಸರಿ ಹೋಗುತ್ತಿತ್ತು. ಆದರೆ ಕಾಡಿನಿಂದ ಹೊರಗೆ ಬಂದು ಮತ್ತೆ ಕಾಡಿನ ಗಿಡ ಮೂಲಿಕೆಗಳ ಮೊರೆಹೋದರೆ ಹೇಗೆ ಸರಿಹೋಗುತ್ತದೆ. ಆದರೆ ಇವತ್ತಿಗೂ ಇರುಳಿಗರು ಪಾರಂಪರಿಕ ನಾಟಿ ವೈದ್ಯಪದ್ಧತಿಯ ಮೊರೆಹೋಗಿ ಜೀವ ಕಳೆದುಕೊಳ್ಳುತ್ತಿದ್ದಾರೆ. ಹಾಗೆಂದು ನಾಟಿ ವಿದ್ಯೆಯನ್ನು ಅಲ್ಲಗಳೆಯುತ್ತಿಲ್ಲ. ಜೀವನ ವಿಧಾನವನ್ನು ಆಧುನಿಕತೆಗೆ ಅನುಸರಿಸಿಕೊಂಡು, ಕಾಯಿಲೆಗಳನ್ನು

ತಂದುಕೊಂಡು, ಪಾರಂಪರಿಕ ವಿಧಾನಕ್ಕೆ ಮೊರೆ ಹೋದರೆ ಹೇಗೆ ಗುಣಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಬದುಕುವ ಉದ್ದೇಶದಿಂದ ಗೂಡು ಬೇಯಿಸುವ ಫ್ಯಾಕ್ಟರಿಗಳಲ್ಲಿ ಕೆಲಸಕ್ಕೆ ಸೇರಿಕೊಂಡು, ಹಾಗೆಯೇ ಇಟ್ಟಿಗೆ ಫ್ಯಾಕ್ಟರಿ ಮುಂತಾದ ಅಪಾಯಕಾರಿ ಕಾರ್ಖಾನೆಗಳಲ್ಲಿ ಸರಿಯಾದ ಸಂರಕ್ಷಣೋಪರಣಕಗಳಿಲ್ಲದೇ ಅನೇಕ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಇನ್ನು ಅಸ್ಪತ್ರೆಗಳಲ್ಲಿ ತೋರಿಸಿಕೊಳ್ಳದೆ, ಮನೆ ಮದ್ದುಗಳಣ್ಣು ನಂಬಿಕೊಂಡು ಜೀವ ಕಳೆದುಕೊಳ್ಳುತ್ತಿದ್ದಾರೆ.

೯. ಸರ್ಕಾರ ಮತ್ತು ರಾಜಕೀಯ ನಾಯಕರುಗಳ ನಿರ್ಲಕ್ಷ್ಯ: ಸರ್ಕಾರಕ್ಕೆ ಮತ್ತು ರಾಜಕೀಯ ನಾಯಕರಿಗೆ ಜಾತಿ ಮತ್ತು ಓಟಿನ ಲೆಕ್ಕಾಚಾರವಿರುತ್ತದೆ. ಆದರೆ ಅಲ್ಪಸಂಖ್ಯಾತರಾದ ಈ ಸಮುದಾಯಗಳು ಯಾವುದಕ್ಕೂ ಬೇಡವಾಗಿರುವುದರಿಂದ ಈ ವರ್ಗವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ.

೧೦. ಕೇರಳ ಮತ್ತು ತಮಿಳುನಾಡಿನಲ್ಲಿರುವಂತೆ ಕರ್ನಾಟಕದ ಇರುಳಿಗರಿಗೂ(PVTGS) ಗುಂಪಿಗೆ ಸೇರಿಸಬೇಕು. ತ್ವರಿತವಾಗಿ ೨೦೦೫-೨೦೦೬ರ ಅರಣ್ಯ ಹಕ್ಕು ಕಾಯಿದೆಯನ್ನು ಸುಪ್ರೀಂಕೋರ್ಟ್ ತೀರ್ಮಾನದಂತೆ ಜಾರಿಗೆ ತಂದು ಪ್ರತಿ ಕುಟುಂಬಗಳಿಗೆ ಹತ್ತು ಎಕರೆ ಭೂಮಿಯನ್ನು ನೀಡಬೇಕು. ಇದರ ಸಂಪೂರ್ಣ ಜವಾಬ್ದಾರಿಯನ್ನು ಆಯಾ ಜಿಲ್ಲಾಧಿಕಾರಿಗಳು ಸಮುದಾಯದವರ ಜೊತೆಗೂಡಿ ವಿತರಿಸಬೇಕು. ಇದಕ್ಕೆ ಯಾವುದೇ ರಾಜಕೀಯ ಹಸ್ತಕ್ಷೇಪ ಇರದಂತೆ ನೋಡಿಕೊಳ್ಳಬೇಕು.

೧೧. ಪೊಲೀಸ್ ಮತ್ತು ಅರಣ್ಯ ಇಲಾಖೆಯವರು ತಮ್ಮ ಹಿಂದಿನ ವಸಾಹತು ಧೋರಣೆ ಯನ್ನು ಕೈಬಿಟ್ಟು ಆದಿವಾಸಿಗಳನ್ನು ನಂಬಿ ಅವರ ಹಕ್ಕುಗಳನ್ನು ಗೌರವಿಸಬೇಕು.

೧೨. ಇರುಳಿಗ ಸಮುದಾಯವು ಆದಿಮ ಬುಡಕಟ್ಟು ಪಟ್ಟಿಗೆ ಸೇರುವ ಎಲ್ಲ ಲಕ್ಷಣಗಳನ್ನು ಹೊಂದಿರುವುದರಿಂದ ಕರ್ನಾಟಕ ಸರ್ಕಾರವು ಇವರನ್ನು ಆದಿಮ ಬುಡಕಟ್ಟು ಪಟ್ಟಿಗೆ ತ್ವರಿತವಾಗಿ ಸೇರಿಸಬೇಕು.

೧೩. ಆದಿವಾಸಿ ಕಲ್ಯಾಣ ಕಾರ್ಯಕ್ರಮಗಳು ಅವರ ವ್ಯಕ್ತಿತ್ವ ಮತ್ತು ಕರ್ತವ್ಯಗಳಿಂದ ಅಳೆಯಬೇಕೆ ವಿನಃ ಅವರ ಜನಸಂಖ್ಯೆಯಿಂದಲ್ಲ.

೧೪. ಬುಡಕಟ್ಟು ಪ್ರಾಧಿಕಾರಗಳನ್ನು ಪ್ರತಿ ಜಿಲ್ಲಾವಾರು ಸ್ಥಾಪಿಸಿ ಅವರ ಅಧ್ಯಕ್ಷರು ಮತ್ತು ಸದ್ಯರು, ಆಯಾ ಜಿಲ್ಲೆಯ ಬುಡಕಟ್ಟುಗಳೇ ನಿರ್ವಹಿಸುವಂತೆ ನೋಡಿಕೊಳ್ಳಬೇಕು.

೧೫. ಬುಡಕಟ್ಟು ಸಮುದಾಯದವರ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೂ ಸರ್ಕಾರವೇ ವಹಿಸಿಕೊಂಡು ಶಿಕ್ಷಣ ಪಡೆದವರಿಗೆ ತಮ್ಮ ತಮ್ಮ ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳಿಗೆ ದುಡಿಯುವಂತಹ ವ್ಯವಸ್ಥೆ ಮಾಡಿಕೊಡಬೇಕು.

೧೬. ಪ್ರತಿ ತಾಲೂಕುಗಳಿಗೆ ಬುಡಕಟ್ಟುಗಳಿಗಾಗಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸ್ಥಾಪಿಸಿ ಉಚಿತ ಚಿಕಿತ್ಸೆ ನೀಡಬೇಕು.

೧೭. ಪ್ರತಿ ಜಿಲ್ಲಾವಾರು ಬಡುಕಟ್ಟುಗಳಿಗೆ ಸಾಂತ್ವನ ಕೇಂದ್ರಗಳನ್ನು ಸ್ಥಾಪಿಸಿ ಆದಿವಾಸಿಗಳ ವ್ಯಾಜ್ಯಗಳನ್ನು ಅಲ್ಲಿಯೇ ಬಗೆಹರಿಸಿಕೊಳ್ಳುವಂತೆ ಮಾಡಿಕೊಳ್ಳಬೇಕು. ಇದರ ಮಧ್ಯೆ ಪೊಲೀಸ್ ಮತ್ತು ಅರಣ್ಯ ಇಲಾಖೆಯವರ ಹಸ್ತಕ್ಷೇಪವಿರದಂತೆ ಕಾಯ್ದುಕೊಳ್ಳಬೇಕು.

೧೮. ಇರುಳಿಗರು ಅನಕ್ಷರಸ್ಥರಾದ್ದರಿಂದ ಇವರ ಸೌಲಭ್ಯಗಳನ್ನು ಮತ್ತೊಬ್ಬರು ಪಡೆದುಕೊಳ್ಳುತ್ತಿದ್ದಾರೆ.

೧೯. ಇತರ ಸಮುದಾಯದವರು ಈ ಸಮುದಾಯದವರನ್ನು ಅನೇಕ ವಿಧದಲ್ಲಿ ಹಿಂಸಿಸುತ್ತಿದ್ದಾರೆ.

೨೦. ಸಮುದಾಯದ ಯುವ ಪೀಳಿಗೆ ತಮ್ಮ ಪಾರಂಪರಿಕ ವೃತ್ತಿಗಳು ಇಲ್ಲದೆ ಇತ್ತ ಆಧುನಿಕತೆಗೆ ಒಗ್ಗಿಕೊಳ್ಳಲಾಗದೆ ಆಧುನಿಕತೆಯ ಭ್ರಮನಿರಶನಕ್ಕೆ ಸಿಕ್ಕಿ ಅನೇಕ ಕೆಟ್ಟ ಚಾಳಿಗೆ ಬಲಿಯಾಗುತ್ತಿದ್ದಾರೆ.

೧೩. ಬ್ಯಾಂಕಿನಿಂದ ದೊರೆಯುವ ಯಾವ ಸೌಲಭ್ಯಗಳೂ ಇವರಿಗೆ ಸಿಗುತ್ತಿಲ್ಲ. ಕಾರಣ ಇವರಲ್ಲಿ ಆಸ್ತಿ ಇಲ್ಲ, ಹಣವಿಲ್ಲ ಮತ್ತು ವಿದ್ಯೆಯಿಲ್ಲ. ಇವು ಯಾವುದೂ ಇಲ್ಲದೆ ಬ್ಯಾಂಕುಗಳು ಇವರಿಗೆ ಯಾವುದೇ ಸೌಲಭ್ಯ ಒದಗಿಸುವುದಿಲ್ಲ.

೧೪. ಮೀಸಲಾತಿಯ ಸಮಸ್ಯೆ ಇರುಳಿಗರು ಅತ್ಯಂತ ಸಣ್ಣ ಸಮುದಾಯ. ಇದು ಪರಿಶಿಷ್ಟ ಪಂಗಡದ ಪಟ್ಟಿಗೆ ಬರುತ್ತದೆ. ಆದರೆ ಪರಿಶಿಷ್ಟ ಪಂಗಡಕ್ಕೆ ದಿನೇ ದಿನೇ ಒಂದೊಂದು ಸಮುದಾಯವನ್ನು ಸೇರಿಸುತ್ತಿದ್ದು ಒಂದು ಕಡೆಯಾದರೆ, ಮತ್ತೊಂದು ಕಡೆ ಒಂದೇ ಸಮುದಾಯ ಇಡೀ ಪರಿಶಿಷ್ಟ ಪಂಗಡದ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದೆ.

೧೫. ಉದ್ಯೋಗ ಸಮಸ್ಯೆ: ಹಾಗೊಮ್ಮೆ ಅಷ್ಟೋ ಇಷ್ಟೋ ಶಿಕ್ಷಣ ಪಡೆದರೂ ಇವರಿಗೆ ಸರಿಯಾದ ಉದ್ಯೋಗ ಸಿಗುತ್ತಿಲ್ಲ. ಇಂತಹ ಸಮುದಾಯಗಳು ಓದುವುದೇ ಒಂದು ಕ್ರಾಂತಿ, ಅಂಥದರಲ್ಲಿ ಓದಿದ ವಿದ್ಯಾರ್ಥಿಗಳಿಗೆ ಕೆಲಸ ಸಿಗದೆ ಇದ್ದರೆ ಅದು ಇಡೀ ಸಮುದಾಯದ ಮೇಲೆ ಪ್ರಭಾವ ಬೀರುತ್ತದೆ. ಏಕೆಂದರೆ ಓದಿದ ವಿದ್ಯಾವಂತನೇ ಕೆಲಸವಿಲ್ಲದೆ ನಿಂತರೆ ಇನ್ನು ಮುಂದಿನ ಪೀಳಿಗೆಗೆ ಅವರೇ ಮಾಡಲ್ ಆಗಿ ಓದುವುದೇ ಬೇಡ ಎಂಬ ತೀರ್ಮಾನಕ್ಕೆ ಬರುತ್ತಾರೆ.

೧೬. ಸರ್ಕಾರ ಪರಿಶಿಷ್ಟ ಪಂಗಡದ ಯೋಜನೆಗಳು ಸರಿಯಾಗಿ ಜಾರಿಯಾಗದೆ ಇರುವುದನ್ನು ಕಾಣಬಹುದು. ಅಂಥವುದರಲ್ಲಿ ಇಂತಹ ಸಮುದಾಯಗಳ ಅಭಿವೃದ್ಧಿ ಹೇಗೆ ಸಾಧ್ಯವಾದೀತು.

ಇಂತಹ ಹತ್ತಾರು ಸಮಸ್ಯೆಗಳಿಂದ ಇರುಳಿಗರ ಸಮುದಾಯ ಪ್ರಸ್ತುತ ಸಂದರ್ಭದಲ್ಲಿ ನರಳುತ್ತಿದೆ. ಇದಕ್ಕೆ ಪರಿಹಾರೋಪಾಯಗಳಾಗಿ ಕೆಲವು ಸಲಹೆಗಳನ್ನು ನೀಡಲಿಚ್ಛಿಸುತ್ತೇನೆ.

೧. ಇರುಳಿಗರಿಗೆ ಭೂಮಿ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ೨೦೦೬ರ ಅರಣ್ಯ ಹಕ್ಕು ಕಾಯ್ಕೆಯನ್ನು ಅತ್ಯಂತ ಜರೂರಾಗಿ ಜಾರಿ ಮಾಡಬೇಕು. ಇದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಇಲಾಖೆಗಳನ್ನು ಜಾರಿಗೆ ತಂದು ಅದಕ್ಕಾಗಿ ಅನೇಕ ಕಾರ್ಯಗಾರಗಳು, ತರಬೇತಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇವರು ಸಂಪೂರ್ಣವಾಗಿ ಬುಡಕಟ್ಟು ಗಳಿಗೆ ಪ್ರಾತಿನಿಧ್ಯತೆ ನೀಡಬೇಕು.

೨. ಅರಣ್ಯ ಇಲಾಖೆಯವರು ತಮ್ಮ ವಸಾಹತು ನೀತಿಯನ್ನು ಬಿಟ್ಟು ಬುಡಕಟ್ಟುಗಳ ಸಂಸ್ಕೃತಿ ಮತ್ತು ಬದುಕನ್ನು ಗೌರವಿಸಬೇಕು. ಅವರು ಬುಡಕಟ್ಟುಗಳು ಅರಣ್ಯಕ್ಕೆ ಎಂದಿಗೂ ಅಪಾಯಕಾರಿಯಲ್ಲ ಎಂದು ತಿಳಿದುಕೊಂಡು ಅರಣ್ಯ ರಕ್ಷಣೆ ಮತ್ತು ಅಭಿವೃದ್ಧಿಗೆ ಬುಡಕಟ್ಟುಗಳ ಸಲಹೆ ಸೂಚನೆ ಪಡೆದುಕೊಳ್ಳುವುದು ಉತ್ತಮವಾದುದ್ದು. ಸ್ಥಳೀಯ ಅರಣ್ಯದ ಬಗ್ಗೆ ಸಂಪೂರ್ಣ ಜ್ಞಾನ ಹೊಂದಿರುವ ಇರುಳಿಗರನ್ನು ಅರಣ್ಯ ಇಲಾಖೆಯವರು ಸದುಪಯೋಗಪಡಿಸಿಕೊಳ್ಳಬೇಕು.

೩. ಬುಡಕಟ್ಟುಗಳು ಸ್ವತಂತ್ರ ಪ್ರಿಯರು. ಅವರು ಖಾಸಗಿ ಆಸ್ತಿ ಹಕ್ಕಿಗಿಂತ ಸಮುದಾಯದ ಹಕ್ಕಿಗೆ ಹೆಚ್ಚಿನ ಮನ್ನಣೆ ಕೊಡುತ್ತಾರೆ. ಆದ್ದರಿಂದ ಅವರ ಆಸೆಯಂತೆ ಅವರಿಗೆ ಭೂಮಿಯ ಹಕ್ಕು ಕೊಡಬೇಕು. ಇದಕ್ಕೆ ಸಂಬಂಧಿಸಿದ ಜಿಲ್ಲಾವಾರು 'ಬುಡಕಟ್ಟು ಕೇರ್' ಸೆಂಟರ್‌ಗಳನ್ನು ಜಾರಿಗೆ ತರಬೇಕು.

೪. ಸರ್ಕಾರಿ ಯೋಜನೆಗಳನ್ನು ಪಡೆಯುವಲ್ಲಿ ಇರುವ ತೊಂದರೆಗಳ ಬಗ್ಗೆ ಸಮುದಾಯಕ್ಕೆ ಮಾರ್ಗದರ್ಶನ ಹಾಗೂ ನಾಯಕತ್ವದ ತರಬೇತಿ ನೀಡಬೇಕು.

೫. ತಮ್ಮ ಸಮುದಾಯದ ಅಮೂಲ್ಯ ಹೆಗ್ಗುರುತಾದ ಕಣಿ, ಕಲ್ಲುಸೇವೆ, ಭಾಷೆ, ಹಣ, ಪಾರಂಪರಿಕ ವೈದ್ಯ ಜ್ಞಾನದ ಬಗ್ಗೆ ಇರುಳಿಗ ಯುವಕರಿಗೆ ಅರಿವು ಮೂಡಿಸಬೇಕು.

೬. ಸಮುದಾಯದಲ್ಲಿನ ಸಂಘಟನೆ ಮತ್ತು ಅದರ ಅವಶ್ಯಕತೆ ಬಗ್ಗೆ ಅರಿವು ಮೂಡಿಸುವುದು.

೭. ಪ್ರತಿ ಬುಡಕಟ್ಟುಗಳು ವಾಸಿಸುವ ಪ್ರದೇಶಗಳಿಗೆ ಸರ್ಕಾರ ಯೋಜನೆ ತಲುಪುವಂತಾಗಬೇಕು. ಇದಕ್ಕೆ ವಿಶೇಷ ಅಧಿಕಾರಿಗಳನ್ನು ನೇಮಿಸಿಕೊಳ್ಳಬೇಕು. ಇದಕ್ಕೆ ಆ ಸಮುದಾಯದ ವಿದ್ಯಾವಂತರನ್ನು ಹೆಚ್ಚಿಗೆ ಬಳಸಿಕೊಳ್ಳಬೇಕು.

೮. ಮಹಿಳೆಯರಿಗೆ ತರಬೇತಿಗಳು, ಕಾರ್ಯಗಾರಗಳು, ಕೊಡುವ ಮೂಲಕ ಅದರ ಸದುಪಯೋಗಪಡಿಸಿಕೊಳ್ಳಲು ಅವರಿಗೆ ಉಪಕರಣಗಳನ್ನು ನೀಡಬೇಕು.

೯. ಸರ್ಕಾರದ ಎಲ್ಲಾ ಕಾರ್ಯಕ್ರಮಗಳನ್ನು ಇರುಳಿಗರಿಗೆ ತಿಳಿಸುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳು ಕ್ರಮವಹಿಸಬೇಕು.

ಇರುಳಿಗ ಸಮುದಾಯದ ಸಂಘಟನೆಗಳು

ಇರುಳಿಗರು ಸುತ್ತಮುತ್ತಲಿನ ಜನರ ಪ್ರಭಾವದಿಂದಲೋ ಅಥವಾ ಅವರಲ್ಲಿ ಶಿಕ್ಷಣ ಅರಿವಿನ ಮೂಲಕವೋ ಸಂಘಟಿತರಾಗುವ ಹಂತಕ್ಕೆ ಬಂದು ತಲುಪಿದ್ದಾರೆ. ಇರುಳಿಗರು ಶಾಂತಿ ಸಮುದಾಯದವರು. ತಮ್ಮ ಮೇಲೆ ಉಂಟಾಗುವ ಒತ್ತಡಗಳಿಗೆ ಹೊಂದಾಣಿಕೆಯ ಮನೋಭಾವವನ್ನು ಹೊಂದಿದಂತಹ ಸಮುದಾಯವಾಗಿದ್ದು, ಕಾಲ ಬದಲಾದಂತೆ ಸಮುದಾಯ ದವರಿಗೆ ಸಂಘಟನೆಯ ಮಹತ್ವ ಗೊತ್ತಾಗುತ್ತ ಬಂದಿದೆ. ಇರುಳಿಗ ವಕ್ತೃಗಳು ತಮ್ಮ ಸಂಘಟನೆಯ ಬಗ್ಗೆ ಹೇಳುತ್ತ ನಮ್ಮ ಅಪ್ಪನ ಕಾಲದಲ್ಲಿ 'ನಮ್ಮ ಅಪ್ಪ, ಚಿಕ್ಕಪ್ಪ ಮತ್ತು ಇತರೆ ಸಂಬಂಧಿಕರೆಲ್ಲರೂ ಸೇರಿ ಹಮ್ಮಿಗಾನಹಳ್ಳಿ ಅರಣ್ಯ ಇಲಾಖೆಯವರು ಕಿತ್ತುಕೊಂಡಿದ್ದ ನಮ್ಮ ಭೂಮಿಯಲ್ಲಿ ಶೆಡ್‌ಗಳನ್ನು ಹಾಕಿಕೊಂಡಿದ್ದರು. ರಾತ್ರೋರಾತ್ರಿ ನಮ್ಮ ಅಪ್ಪ(ಮೊಟಯ್ಯ), ಚಿಕಂಟಯ್ಯ, ಧರ್ಮಯ್ಯ, ಭಂಗಯ್ಯ ಎಲ್ಲರೂ ಒಟ್ಟಾಗಿ ನಮ್ಮ ಜಾಗದಲ್ಲಿ ಶೆಡ್ಡನ್ನು ಹಾಕ್ಕೊಂಡಿದ್ರು, ಆದರೆ ಅರಣ್ಯ ಇಲಾಖೆಯವರು ಬಂದು ಬೆಂಕಿ ಹಚ್ಚಿದರು. ನಂತರ ಎಲ್ಲರೂ ರಾಗಿ ರೊಟ್ಟಿನ ಕಟ್ಕೊಂಡು ರಾತ್ರೋರಾತ್ರೀ ಬೆಂಗಳೂರಿಗೆ ನಡಕೊಂಡು ಹೋಗಿ ಕಲೆಕ್ಟರ್‌ನ ಕಂಡು ತಮ್ಮ ಬೇಡಿಕೆ ಇಟ್ಟಿದ್ರು, ಆವಾಗಿನಿಂದ ನಮ್ಮ ಜನರು ಒಟ್ಟಾಗಿ ಸೇರೋದನ್ನ ಪ್ರಾರಂಭ ಮಾಡಿದ್ರು, ಈ ಕುಲ ಕಟ್ಟಳೆಗೆ ಸೇರ್ತಿದ್ರಲ್ಲಾ ಅವಗ್ಗೆ ಭೂಮಿ ತಕೊಬೇಕು ಅಂತ ಮಾತಾಡಕ್ಕೊತ್ತಿದು ಎಂದು ತಮ್ಮ ಸಂಘಟನೆಯ ಹಾದಿಯ ಬಗ್ಗೆ ವಿವರಿಸುತ್ತಾರೆ. ಇದಾದ ನಂತರ ಮಾಗಡಿ ತಾಲ್ಲೂಕಿನ ಅರಣ್ಯ ಹೊಡೆದಾಟದ ಬಗ್ಗೆ "ಮುನಿಯಪ್ಪ ವಿವರಿಸುತ್ತಾ ನಮ್ಮಪ್ಪನ ಕಾಲದಲ್ಲಿ ಚೋಡುಕಟ್ಟೆಯ ಹಿರಿರ ಹಬ್ಬಕ್ಕೆ ಬಂದಿದ್ದ ಎಲ್ಲ ಸಂಬಂಧಿಕರನ್ನು ಕಟ್ಟಿಕೊಂಡು ರಾತ್ರೋರಾತ್ರಿ ತಮ್ಮನ್ನು ಒಕ್ಕಲೆಬ್ಬಿಸಿದ್ದ ಜಾಗದಲ್ಲಿ ಶೆಡ್ಡುಗಳನ್ನು ನಿರ್ಮಿಸಿದ್ದಾರೆ. ಇದಕ್ಕೆ ಇತರೆ ಸಂಘಟನೆಗಳು ಮತ್ತು NGO ಗಳು ಪ್ರಮುಖ ಪಾತ್ರ ವಹಿಸಿವೆ. ಈ ಘಟನೆ ಇಡೀ ಇರುಳಿಗರ ಚರಿತ್ರೆಯಲ್ಲಿ ಇಂದಿಗೂ ನೆನಪಿಸಿಕೊಳ್ಳುವಂಥ ದಂಗೆಯಾಗಿದೆ ಅನ್ನುತ್ತಾರೆ." ರಾತ್ರೋರಾತ್ರಿ ನಿರ್ಮಾಣವಾಗಿದ್ದ ಶೆಡ್ಡುಗಳಿಗೆ ಬೆಂಕಿ ಹಚ್ಚಲು ಅರಣ್ಯ ಇಲಾಖೆಯವರು ಬಂದಿದ್ದಾರೆ. ಆಗ ನಮ್ಮೋರು ಅವರ ಜೊತೆ ಜಗಳ ಮಾಡಿಕೊಂಡು ಪರಸ್ಪರ ಇಬ್ಬರಿಗೂ ಹೊಡೆದಾಟವಾಗಿದೆ. ಅರಣ್ಯ ಅಧಿಕಾರಿಗೆ ನಮ್ಮೋರು ಹೊಡೆದು ರಕ್ತ ಬರಿಸಿ ಕಳುಹಿಸಿದ್ದಾರೆ. ಇದರಿಂದ ಅರಣ್ಯ ಇಲಾಖೆಯವರು ಮಾಗಡಿ ಪೊಲೀಸ್ ಠಾಣೆಯ ಕೆಲವು ಸಿಬ್ಬಂದಿಗಳನ್ನು ಕರೆದುಕೊಂಡು ಆ ಜಾಗಕ್ಕೆ ಮತ್ತೆ ಬಂದಿದ್ದಾರೆ. ಪರಸ್ಪರ ಇಬ್ಬರಿಗೂ ಹೊಡೆದಾಟವಾಗಿ ಅವರೆಲ್ಲ ನಮ್ಮೋರು ಹಬ್ಬಕ್ಕೆ ಬಂದಿದ್ರಲ್ಲಾ ಎಲ್ಲರೂ ಸೇರ್ಕೊಂಡು ಹೊಡೆದು ಬಿಟ್ಟಿದ್ದಾರೆ. ಇದರಿಂದ ವಿಷಯ ದೊಡ್ಡದಾಗಿ ಇಡೀ ಪೊಲೀಸ್ ರಿಜರ್ವ್‌ವೇ ಬಂದಿತಂತೆ.

ಆಗ ಸಿಕ್ಕ ಸಿಕ್ಕ ನಮ್ಮವರೆಲ್ಲರನ್ನು ಹೊಡೆದು ಜೈಲಿಗೆ ಹಾಕಿದ್ರಂತೆ. ಹಬ್ಬಕ್ಕೆ ಬಂದಿದ್ದ ನೆಂಟರನ್ನು ಬಿಟ್ಟಿಲ್ಲ ಅಂತ ಮುನಿಯಪ್ಪ ತಮ್ಮ ಹೋರಾಟದ ನೆನಪು ಮಾಡಿಕೊಳ್ಳುತ್ತಾರೆ. ಆ ಕೇಸ್‌ನಿಂದ ಇನ್ನು ಕೆಲವರನ್ನು ಹೊರಗೆ ತರಲಾಗದೆ ಇವತ್ತಿಗೂ ಜೈಲಿನಲ್ಲಿರುವುದಾಗಿ ಹೇಳುತ್ತಾರೆ. ಇಡೀ ಘಟನೆಗೆ NGO ಮತ್ತು ಇತರೆ ಸಂಘಟನೆಯವರ ತಪ್ಪು ಮಾಹಿತಿಯಾದುದ್ದು ಎಂದು ಹೇಳುತ್ತಾರೆ. ಇವತ್ತಿಗೂ ಈ ಭಾಗದಲ್ಲಿ ಇರುಳಿಗರೂ ಸಂಘಟನೆಯ ಹೆಸರು ಹೇಳಿದರೆ ಭಯಪಟ್ಟು ಕೊಳ್ಳುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿರುತ್ತೇವೆ.

ಎರಡು ಘಟನೆಗಳು ಇರುಳಿಗರಲ್ಲಿ ಸಂಘಟನೆಯ ಹಾದಿಯನ್ನೇ ಮುಚ್ಚಿಸುವಂಥ ಕೆಲಸಗಳನ್ನು ಮಾಡಿದವು. ಇದರ ಜೊತೆಗೆ ಆದಾಯ ಪ್ರಮಾಣ ಪತ್ರಕ್ಕಾಗಿ ೧೯೮೩ರಲ್ಲಿ ಕನಕಪುರ ತಾಲ್ಲೂಕಿನ ಅಮಲ್ದಾರ್ ಕಛೇರಿಯ ಮುಂದಿನ ಹೋರಾಟದ ಪರಿಚಯವನ್ನು ಮಹದೇವಯ್ಯ ವಿವರಿಸುತ್ತಾರೆ. “ನಮ್ಮ ಜನದ ಮುನೇಶ್ವರನ ದೊಡ್ಡಿಯ ಕುಳ್ಳೆಯ್ಯನ ಮಕ್ಕಳು ನಮ್ಮ ತಾಲೂಕಿನಲ್ಲೇ ಮೊದಲು ೭ನೇ ತರಗತಿ ಪಾಸಾಗಿದ್ರು. ಅವರಿಗೆ ಮುಂದಕ್ಕೆ ಓದಲು ಜಾತಿ ಸರ್ಟಿಫಿಕೇಟ್ ಬೇಕಾದುದರಿಂದ ಅಮಲ್ದಾರರ ಹತ್ತಿರ ಕೇಳಿದ್ದಾರೆ. ಅವಾಗ ಅವ್ರು ನೀವು ಯಾರು, ಇಲ್ಲಿ ಇರುಳಿಗ ಅಂತ ಯಾರೂ ಇಲ್ಲ. ಅವರು ಪರಿಶಿಷ್ಟ ಪಂಗಡಕ್ಕೆ ಬರೋದಿಲ್ಲ, ಅಂತ ಅಂದಿದ್ದಕ್ಕೆ ಕನಕಪುರ ಅಮಲ್ದಾರ ಆಫೀಸ್‌ನ ಮುಂದೆ ಹೋರಾಟ ಮಾಡಿ, ಜಾತಿ ಸರ್ಟಿಫಿಕೇಟ್ ಪಡೆದುಕೊಂಡಿದ್ದರ ಬಗ್ಗೆ ತಿಳಿಸುತ್ತಾರೆ (ಮಹದೇವಯ್ಯ, ೫೧ ವರ್ಷ, ಬುಡಗಯ್ಯನ ದೊಡ್ಡಿ, ಮರಳವಾಡಿ ತಾಲ್ಲೂಕು, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ೨೭-೦೩-೨೦೧೭). ಇಂತಹ ಸಣ್ಣಪುಟ್ಟ ಘಟನೆಗಳನ್ನು ಬಿಟ್ಟರೆ ಇರುಳಿಗರು ಮತ್ತೆ ಸಂಘಟಿತರಾಗಿದ್ದು ‘ಜಿಲ್ಲಾ ಗಿರಿಜನರ ಅಭಿವೃದ್ಧಿ ಸಂಘ (KITDP)ಎಂಬ ಶಿವರಾಜೇಗೌಡರ NGOಗಳ ಮೂಲಕ. ಇವರು ಸತತ ೨೫ ವರ್ಷಗಳಲ್ಲಿ ಇರುಳಿಗರನ್ನು ಸಂಘಟಿಸುವ ಜೊತೆಗೆ ನಿಯಂತ್ರಿಸುವ ಕೆಲಸ ಮಾಡಿರುವುದಾಗಿ ಇರುಳಿಗರ ವಕ್ತೃಗಳ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದ್ದಾರೆ. ಶಿವರಾಜೇಗೌಡರ ಬಗ್ಗೆ ಇರುಳಿಗರು ಭಿನ್ನ ನಿಲುವುಗಳನ್ನು ವ್ಯಕ್ತಪಡಿಸುತ್ತಾರೆ. ಕೆಲವರು ಶಿವರಾಜೇಗೌಡ್ರು ಬಂದ ಮೇಲೆ ನಾವು ಸಂಘಟಿತರಾಗಿ ಶಿಕ್ಷಣ, ಹೋರಾಟ ಮತ್ತು ಹಕ್ಕುಗಳ ಬಗ್ಗೆ ತಿಳಿದುಕೊಳ್ಳಲು ಸಹಾಯಕವಾಯಿತು ಎಂದರೆ, ಬಹುಸಂಖ್ಯಾತರು ಶಿವರಾಜೇಗೌಡ್ರು ನಮ್ಮನ್ನು ತೋರಿಸಿ ದುಡ್ಡು ಮಾಡಿಕೊಂಡರು ಎಂದು ಹೇಳುವುದನ್ನು ಕಾಣಬಹುದು. ಮೊದಲು ನಡಕ್ಕೊಂಡು ಒಂದು ಬ್ಯಾಗ್ ಇಡ್ಕೊಂಡು ಬತ್ತಿದ್ದ ಶಿವರಾಜೇಗೌಡ ಈಗ ಚನ್ನಪಟ್ಟಣದಲ್ಲೇ ೩ ಅಂತಸ್ತಿನ ಬಿಲ್ಡಿಂಗ್ ಕಟ್ಟಿಕೊಂಡು, ಕಾರಲ್ಲಿ ಓಡಾಡುತ್ತಾರೆ ಅಂತ ನಮ್ಮನ್ನ ಅಲ್ಲೇ ಇಲ್ಲೇ ಕರೆದು ಫೋಟೊ ಗೀಟ ತಗೊಂಡು ಒಂದಿಷ್ಟು ಅನ್ನ ಕೊಟ್ಟು ಕಳುಹಿಸುತ್ತಿದ್ದ ಎಂದು ವಕ್ತೃಗಳು ತಮ್ಮ ಅಳಲನ್ನು ತೋಡಿಕೊಳ್ಳುವುದನ್ನು ಕಾಣಬಹುದು.

ಒಟ್ಟಾರೆಯಾಗಿ ನನ್ನ ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡ ಕೆಲವು ಅಂಶಗಳು ಮತ್ತು ಸ್ವತಃ ನಾನು ಅದೇ ಸಮುದಾಯದ ವ್ಯಕ್ತಿಯಾದುದರಿಂದ "ಶಿವರಾಜೇಗೌಡರ NGO ಬಗ್ಗೆ ಹೇಳಬಯಸುವ ಕೆಲವು ಪ್ರಮುಖಾಂಶಗಳೆಂದರೆ, ಸತತ ೨೫ ವರ್ಷ ಇರುಳಿಗರಿಗೆ ಹೋರಾಟ, ಕಾನೂನು ಮತ್ತು ಸರ್ಕಾರಿ ಅಧಿಕಾರಿಗಳೊಂದಿಗೆ ವ್ಯವಹರಿಸುವ ರೀತಿ ನೀತಿಗಳನ್ನು ಕಲಿಸಿಕೊಟ್ಟು, ಇರುಳಿಗರು ಜಿಲ್ಲೆಯಲ್ಲಿ ಇದ್ದಾರೆ ಎಂದು ತೋರಿಸಿಕೊಡುವ ಕೆಲಸವನ್ನು ಮಾಡಿದ್ದಾರೆ. ಆದರೆ ಇಡೀ ತಮ್ಮ ಇಪ್ಪತ್ತೈದು ವರ್ಷದ ಅವಧಿಯಲ್ಲಿ ತಿಳುವಳಿಕೆಯ ಒಬ್ಬ ವ್ಯಕ್ತಿಯನ್ನು ಸಂಘಟನೆಯಲ್ಲಿ ಇರಲು ಬಿಟ್ಟಿಲ್ಲ. ಜೊತೆಗೆ ಪ್ರತ್ಯೇಕವಾಗಿ ಒಂದು ಸಂಘಟನೆ ಮಾಡಿಕೊಳ್ಳಲು ಬಿಟ್ಟಿಲ್ಲದೆ ಇರುವುದನ್ನು ಕಾಣಬಹುದು. ಜೊತೆಗೆ ಇರುಳಿಗರ ಅನ್ಯಾಯದ ವಿರುದ್ಧ ಸೊಲ್ಲು ಎತ್ತದೆ ಇರುವ ಹಲವಾರು ಸಂದರ್ಭಗಳನ್ನು ಕಂಡಿದ್ದೇನೆ. ಇವರು ಸರ್ಕಾರ ಮತ್ತು ರಾಜಕಾರಣಿಗಳ ದೃಷ್ಟಿಯಲ್ಲಿ ಇರುಳಿಗರ ಪ್ರತಿನಿಧಿಯಂತೆ ಬಿಂಬಿತಗೊಳ್ಳಲು ಶ್ರಮಿಸಿದ್ದಾರೆ ಹೊರತು ಸಮುದಾಯ ದವರ ನಾಯಕನಾಗುವ ನಿಟ್ಟಿನಲ್ಲಿ ದುಡಿಯದೇ ಇದ್ದದು ಕಾಣಬಹುದು. ಏನೇ ಇದ್ದರೂ ಶಿವರಾಜೇಗೌಡರು ತಮ್ಮ NGOದ ಮೂಲಕ ಅಷ್ಟೋ ಇಷ್ಟೋ ತಿಳುವಳಿಕೆಯನ್ನು ನೀಡಿದಂತೂ ಸತ್ಯವಾದುದ್ದಾಗಿದೆ. ಆ NGO ಗಳು ಇರುಳಿಗರಿಗೆ ಮಾಡಿರುವುದಕ್ಕಿಂತ ಪಡೆದುಕೊಂಡಿರುವುದೇ ಹೆಚ್ಚೆನ್ನಬಹುದು. ಇವರ ಆಳ್ವಿಕೆಯಲ್ಲಿ ಇರುಳಿಗರು ಶಿವರಾಜೇಗೌಡರನ್ನು ಬಿಟ್ಟು ಪ್ರತ್ಯೇಕವಾಗಿ ಸಂಘಟನೆ ಮಾಡಿಕೊಳ್ಳಬೇಕೆಂದು ತೀರ್ಮಾನಿಸಿ ಕೆಲಸ ಕಾರ್ಯಗಳನ್ನು ರೂಪಿಸಿದ್ದಾರಾದರೂ ಅದನ್ನು ಸಾಕಾರಗೊಳಿಸಲು ಬಿಡದಂತೆ ನಿಯಂತ್ರಣ ಸಾಧಿಸಿದ್ದನ್ನು ಕಾಣಬಹುದು. ಈ ಹಿಡಿತ ಇಂದಿಗೂ ಹಾಗೇ ಇದೆ. ಆದರೆ ಇರುಳಿಗರು ಶಿವರಾಜೇಗೌಡರನ್ನು ಹೊರತುಪಡಿಸಿ ಪ್ರತ್ಯೇಕ ಸಂಘಟನೆಗಳನ್ನು ಕಟ್ಟಿಕೊಂಡು ಶಿವರಾಜೇಗೌಡರಿಗೆ ಕೆಲಸವಿಲ್ಲದಂತೆ ಮಾಡಿದ್ದಾರೆ. ಆದರೆ ಇಪ್ಪತ್ತು ವರ್ಷಗಳ ನಿಯಂತ್ರಣದಲ್ಲಿ ಸ್ಥಳೀಯ ರಾಜಕಾರಣಿಗಳು ಮತ್ತು ಇತರೆ ಸಂಘ-ಸಂಸ್ಥೆಗಳಲ್ಲಿ ಶಿವರಾಜೇಗೌಡರು ಅಂದರೆ ಇರುಳಿಗ ಜನರ ನಾಯಕ ಎಂದು ಗುರುತಿಸಿಕೊಳ್ಳುತ್ತಾರೆ. ಇದಕ್ಕೆ ಅವರ ಜಾತಿಯು ಕಾರಣವಾಗಿರುವುದರಲ್ಲಿ ಯಾವುದೇ ಅನುಮಾನವಿಲ್ಲ.

೨೦೦೯ರಲ್ಲಿ ಮೊದಲ ಬಾರಿಗೆ ಕೂತಗಾನಹಳ್ಳಿಯಲ್ಲಿ ಇರುಳಿಗರ ಯುವಕರು ಆರಂಭಿಸಿದ ಗ್ರಾಮಮಟ್ಟದ ಸಂಘಟನೆ ಇಂದು ಇಡೀ ಜಿಲ್ಲೆಯಲ್ಲಿ ಇರುಳಿಗರ ಸಂಘಟನೆಯಾಗಿ ಬೆಳೆದಿದೆ. ಗ್ರಾಮದ ದೇವಸ್ಥಾನದ ಜಾತ್ರೆಯ ಸಂದರ್ಭದಲ್ಲಿ ಕನಕಪುರ ಪರಿಶಿಷ್ಟ ಜಾತಿ ಮತ್ತು ಪಂಗಡದ ವಸತಿ ಶಾಲೆಯಲ್ಲಿ ಓದುತ್ತಿದ್ದ ಇರುಳಿಗರ ಯುವಕರ ಮೇಲೆ ಬುದ್ಧ, ಬಸವ, ಅಂಬೇಡ್ಕರ್ ಅವರ ಪ್ರಭಾವದಿಂದಾಗಿ, ಶಿಕ್ಷಣ ಸಂಘಟನೆಯ ಮಂತ್ರ ಅರಿತುಕೊಂಡ ಯುವಕರು ಇಡೀ ಜಿಲ್ಲೆಯಲ್ಲಿ ಸುತ್ತಾಡಿ ೨೦೦೯ರ ಹೊತ್ತಿಗೆ ಇಡೀ ಇರುಳಿಗರ ಇತಿಹಾಸದಲ್ಲಿ ಸ್ವತಃ ಇರುಳಿಗರೆಲ್ಲರೂ ಸೇರಿಕೊಂಡು ಜೊತೆಗೆ ಪಕ್ಕದ ಸೋಲಿಗರನ್ನು ಸೇರಿಸಿಕೊಂಡು ರಾಜನಗರ ಗಿರಿಜನ ಕ್ಷೇಮಾಭಿವೃದ್ಧಿ ಸಂಘವನ್ನು ನೋಂದಣಿ ಮಾಡಿಸಿಕೊಂಡು ಅತ್ಯಂತ ಕ್ಷಿಪ್ರವಾಗಿ ಇರುಳಿಗರ ಕುಂದುಕೊರತೆಗಳ

ಬಗ್ಗೆ ರಾಜಕಾರಣಿ ಮತ್ತು ಸರ್ಕಾರ ಅಧಿಕಾರಿಗಳ ಗಮನಕ್ಕೆ ತರುವಲ್ಲಿ ಜಿಲ್ಲೆ ಗಿರಿಜನ ಕ್ಷೇಮಾಭಿವೃದ್ಧಿ ಸಂಘದ 'ಅಧ್ಯಕ್ಷರಾದ ಶಿವಣ್ಣ ಅವರು ಅನೇಕ ಕಾರ್ಯಕ್ರಮಗಳನ್ನು ಕೈಗೆತ್ತಿ ಕೊಂಡು ರಾಮನಗರ ಬೆಂಗಳೂರು ಗ್ರಾಮಾಂತರ, ಮಂಡ್ಯ, ಮೈಸೂರು, ಚಾಮರಾಜನಗರ, ತುಮಕೂರು ಜೊತೆಗೆ ತಮಿಳುನಾಡಿನ ಕೆಲವು ಭಾಗಗಳಲ್ಲಿ ಗಿರಿಜನ ಕ್ಷೇಮಾಭಿವೃದ್ಧಿ ಸಂಘದ ಮೂಲಕ ಅನೇಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಪ್ರಸ್ತುತ ದಿನಗಳಲ್ಲೂ ಅರಣ್ಯ ಹಕ್ಕು ಕಾಯ್ದೆ, ಭೂಮಿ ಪ್ರಶ್ನೆ, ಇರುಳಿಗರ ಮೇಲಿನ ದೌರ್ಜನ್ಯಗಳ ವಿರುದ್ಧ ಹೋರಾಟ ಮಾಡುತ್ತಲೇ ಬರುತ್ತಿದ್ದಾರೆ. ಈ ಸಂಘ ೨೦೧೪ರ ಹೊತ್ತಿಗೆ ಅನೇಕ ಸಂಘಟನೆಗಳ ಹಸ್ತಕ್ಷೇಪ ಮತ್ತು ಇತರೆ ಆಮಿಷಗಳಿಗೆ ಒಳಗಾಗಿ ಇಬ್ಭಾಗವಾಗಿ ಇರುಳಿಗರ(ಅರಣ್ಯವಾಸಿ) ಕ್ಷೇಮಾಭಿವೃದ್ಧಿ ಸಂಘ, ರಾಮನಗರ ಟೌನ್, ರಾಮನಗರ ಎಂಬ ಇನ್ನೊಂದು ಭಾಗವಾಗಿ ರಾಮನಗರ ಮತ್ತು ಕರ್ನಾಟಕದ ಇತರೆ ಭಾಗಗಳಲ್ಲಿ ಅತ್ಯಂತ ಕ್ಷಿಪ್ರ ಹೋರಾಟಗಳನ್ನು ಹಮ್ಮಿಕೊಳ್ಳುವ ಮೂಲಕ ಇರುಳಿಗರಿಗೆ ಅರಣ್ಯ ಭೂಮಿಗಳನ್ನು ಕೊಡಿಸುವ ನಿಟ್ಟಿನಲ್ಲಿ ಹೋರಾಟಗಳನ್ನು ಮಾಡುತ್ತಾ ಬರುತ್ತಿದೆ.

ಈ ಎರಡು ಸಂಘಟನೆಗಳು ಕರ್ನಾಟಕದ ಇರುಳಿಗ ಸಮುದಾಯದ ಹಕ್ಕುಗಳಿಗಾಗಿ ನಿರಂತರ ಹೋರಾಟ, ಸತ್ಯಾಗ್ರಹ ಸಂಘಟನೆಯನ್ನು ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಇವರ ಜೊತೆಗೆ ಇತರ ಸಮುದಾಯದವರ ಸಂಘಟನೆಗಳು ಪೂರಕವಾಗಿ ದುಡಿಯುತ್ತವೆ.

ಪರಿವರ್ತನಾ ಹಾದಿಯಲ್ಲಿ ಇರುಳಿಗರು

ಪ್ರಸ್ತುತ ಸಂದರ್ಭದಲ್ಲಿ ಇರುಳಿಗರು ತಮ್ಮ ಮೇಲೆ ಉಂಟಾದ ಒತ್ತಡಗಳು, ಪ್ರಭಾವಗಳು ಮತ್ತು ಅನಿವಾರ್ಯ ಪರಿಸ್ಥಿತಿಗೆ ಒಳಗಾಗಿ ತಮ್ಮ ಪಾರಂಪರಿಕ ಜೀವನ ಬಿಟ್ಟು ಎಲ್ಲರಂತೆ ಬದುಕುವುದನ್ನು ಕಲಿತುಕೊಳ್ಳುತ್ತಿದ್ದಾರೆ. ಇರುಳಿಗರು ಕಂಡುಬರುತ್ತಿರುವ ಇತ್ತೀಚಿನ ಪರಿವರ್ತನ ಅಂಶಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

ಪರಿವರ್ತನೆ ಎಂಬುದು ಪ್ರಕೃತಿಯ ನಿಯಮ. ಅದು ಯಾವುದೇ ಒಂದು ವ್ಯವಸ್ಥೆಗೆ ಸೀಮಿತವಾಗಿರದೆ ವಿಶಾಲ ವ್ಯಾಪ್ತಿಯನ್ನು ಹೊಂದಿರುತ್ತದೆ. ಇದು ಸಮುದಾಯದ ಜೀವಂತಿಕೆಯ ಸಂಕೇತ ಎಂದು ಕೆಲವು ವಿದ್ವಾಂಸರು ಹೇಳಿದ್ದಾರೆ. ಇದು ಒಂದು ಸಾಮಾಜಿಕ ವ್ಯವಸ್ಥೆಯ ಅವನತಿಯ ಮೇಲಿನ ಸೌದ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಆ ಬುಡಕಟ್ಟುಗಳು ಮಾತ್ರ ತಮ್ಮ ಜೀವನದ ಅನಿವಾರ್ಯತೆಗೆ ರಾಜಪ್ರಭುತ್ವದಿಂದ ಮತ್ತು ಬ್ರಿಟಿಷರಿಂದ ಅನೇಕ ಪರಿವರ್ತನೆಗೊಂಡ ಇರುಳಿಗರು ಇಂದು ಪರಿವರ್ತನೆಗೊಳ್ಳುತ್ತಿದ್ದಾರೆ. ಅಂತಹ ಕೆಲವು ಸೂಕ್ಷ್ಮವಾದ ಪರಿವರ್ತನಾಂಶಗಳನ್ನು ಈ ಕೆಳಕಂಡಂತೆ ಕೊಡಲಾಗಿದೆ.

* ಇರುಳಿಗರು ತಮ್ಮ ಪಾರಂಪರಿಕವಾದ ಜೀವನ ವಿಧಾನಕ್ಕೆ ವಿದಾಯ ಹೇಳಿ ಇತರ ಸಮುದಾಯಗಳಂತೆ ಬದುಕನ್ನು ರೂಪಿಸಿಕೊಳ್ಳಲು ತಮ್ಮ ಮೂಲಸ್ಥಳಗಳನ್ನು ಬಿಟ್ಟು ಹೊರಗೆ ಬಂದು ಆಧುನಿಕತೆಯೊಂದಿಗೆ ಮುಖಾಮುಖಿಗೊಳ್ಳುತ್ತಿದ್ದಾರೆ.

* ತಮ್ಮ ಪಾರಂಪರಿಕ ವೃತ್ತಿಯಾದ ಬೇಟೆಯಾಡುವುದು, ಸೌದೆ ಮಾರುವುದು, ಇದ್ದಿಲು ಮಾರುವುದು ಮುಂತಾದವುಗಳನ್ನು ಬಿಟ್ಟು ಇತರೆ ಸಮುದಾಯದವರಂತೆ ಕೃಷಿ, ವ್ಯವಸಾಯ, ಗಾರ್ಮೆಂಟ್ಸ್, ಇತರೆ ಕಾರ್ಖಾನೆಗಳಿಗೆ ಕೆಲಸಕ್ಕೆ ಸೇರಿಕೊಳ್ಳುತ್ತಿದ್ದು, ಸುತ್ತಮುತ್ತಲಿನ ಜನರ ಜೀವನ ವಿಧಾನಗಳನ್ನು ಅನುಸರಿಸುತ್ತಿದ್ದಾರೆ.

* ತಮ್ಮ ನ್ಯಾಯಪದ್ಧತಿಯನ್ನು ಕಳೆದುಕೊಂಡ ಇರುಳಿಗರು ಕೋರ್ಟು ಕಚೇರಿ, ಪೋಲೀಸ್ ಠಾಣೆಗೆ ಹೋಗುತ್ತಿದ್ದಾರೆ.

* ಹುಟ್ಟು, ಸಾವು ಮದುವೆ ಮುಂತಾದ ತಮ್ಮ ಸಾಂಸ್ಕೃತಿಕ ಆಚರಣೆಗಳ ಜಾಗಕ್ಕೆ ಸುತ್ತಮುತ್ತಲಿನ ಜನರ ಜೀವನ ವಿಧಾನಗಳನ್ನು ಆಹ್ವಾನ ಮಾಡಿಕೊಳ್ಳುತ್ತಿದ್ದಾರೆ. ಇವರೂ ಮದುವೆ, ಸಾವು ಮುಂತಾದ ಎಲ್ಲಾ ಕಾರ್ಯಕ್ರಮಗಳಲ್ಲಿ ಪುರೋಹಿತರನ್ನು ಆಹ್ವಾನಿಸುತ್ತಾರೆ.

* ತಮ್ಮ ಪಾರಂಪರಿಕ ದೈವಗಳ ಜಾಗಕ್ಕೆ ರಾಮ, ಲಕ್ಷ್ಮಣ, ಆಂಜನೇಯ ಮುಂತಾದ ದೈವಗಳು ಬಂದಿವೆ. ಇವರು ದೈವಿಕ ವ್ರತಾಚರಣೆಗಳನ್ನು ಆಚರಿಸುತ್ತಿದ್ದು, ತಮ್ಮ ಪಾರಂಪರಿಕ ಹೆಸರುಗಳನ್ನು ಮಕ್ಕಳಿಗೆ ಇಡುವ ಬದಲು ಇತ್ತೀಚಿನ ಟ್ರೆಂಡ್‌ನ ಹೆಸರುಗಳನ್ನಿಡಲು ಪ್ರಾರಂಭಿಸಿದ್ದಾರೆ. ಹೆರಿಗೆ, ಬಾಣಂತಿಯ ಸಮಸ್ಯೆಗಳಿಗೆ ಆಸ್ಪತ್ರೆಗಳ ಮೊರೆ ಹೋಗುತ್ತಿದ್ದಾರೆ.

* ಆಧುನಿಕತೆಯ ಜೊತೆ ಜೊತೆಗೆ ಸಾಗುತ್ತಿರುವ ಇರುಳಿಗರು ಕಟ್ಟುಪಾಡುಗಳನ್ನು ಮೀರಿ ಬದುಕುತ್ತಿದ್ದಾರೆ. ಎಲ್ಲರಂತೆ ಮದುವೆ ಮುಂಜಿ ಮಾಡಿಕೊಳ್ಳಲಾರಂಭಿಸಿದ್ದಾರೆ. ಕಣಿ, ನಾಟಿ ಔಷಧ ಮುಂತಾದ ಪಾರಂಪರಿಕ ಮೌಲ್ಯಗಳನ್ನು ದೂರ ಸರಿಸುತ್ತಿರುವ ಇರುಳಿಗರು, ಆಸ್ಪತ್ರೆಗಳು, ಪುರೋಹಿತರ ಮೊರೆ ಹೋಗುತ್ತಿದ್ದಾರೆ. ತಮ್ಮ ಪಾರಂಪರಿಕ ಆಹಾರ ಪದ್ಧತಿಯನ್ನು ಬಿಟ್ಟು ಕುರಿ, ಮೇಕೆ, ಕೋಳಿ ಮುಂತಾದ ಇತ್ತೀಚಿನ ಸಂದರ್ಭದ ಆಹಾರ ಪದ್ಧತಿಗಳಾದ ಚಿತ್ರಾನ್ನ, ಉಪ್ಪಿಟ್ಟು, ಪುಳಿಯೋಗರೆ ಮುಂತಾದವು ಇವರ ಪ್ರತಿನಿತ್ಯದ ಆಹಾರಗಳಾಗಿವೆ.

* ಇತರೆ ಸಮುದಾಯದವರಂತೆ ಹಬ್ಬ ಹರಿದಿನಗಳನ್ನು ಆಚರಿಸಿಕೊಂಡು ಸಿಮೆಂಟ್, RCC ಮನೆಗಳನ್ನು ಕಟ್ಟಿಸಿಕೊಂಡು ಎಲ್ಲರಂತೆಯೇ ಬದುಕುತ್ತಿದ್ದಾರೆ.

* ತಮ್ಮ ಪಾರಂಪರಿಕ ಜ್ಞಾನವನ್ನು ಕಳೆದುಕೊಳ್ಳುತ್ತಿರುವ ಇರುಳಿಗರು ಅರಣ್ಯದೊಂದಿಗೆ ನಂಟನ್ನು ಕಳೆದುಕೊಂಡು, ಗ್ರಾಮ, ಪಟ್ಟಣಗಳ ಜೀವನ ವಿಧಾನಕ್ಕೆ ಒಗ್ಗಿಕೊಳ್ಳುತ್ತಿದ್ದಾರೆ.

* ಇವರಿಗೂ ಆಸ್ತಿ, ಸಂಪತ್ತುಗಳನ್ನು ಮಾಡಬೇಕೆಂಬ ಭಾವನೆ ಮೂಡಿ, ಆ ನಿಟ್ಟಿನಲ್ಲಿ ದುಡಿಯುತ್ತಿದ್ದಾರೆ. ತಮ್ಮ ಭಾಷೆಯನ್ನು ಕಳೆದುಕೊಂಡಿರುವ ಇರುಳಿಗರು ಕನ್ನಡ ಭಾಷೆಯನ್ನು ಮಾತೃಭಾಷೆಯನ್ನಾಗಿ ಮಾಡಿಕೊಂಡಿದ್ದಾರೆ.

* ಶಿಕ್ಷಣದ ಕಡೆ ಹೆಚ್ಚು ಆಸಕ್ತರಾಗಿ ಎಂ.ಎ, ಎಂ.ಫಿಲ್, ಪಿಎಚ್.ಡಿ ಗಳಂತಹ ಉನ್ನತ ವ್ಯಾಸಂಗದಿಂದ ಒಳ್ಳೆಯ ಹುದ್ದೆಗಳನ್ನು ಇರುಳಿಗರು ಗಳಿಸುವಂತಾಗಿದೆ.

* ಸರ್ಕಾರದ ವಿರುದ್ಧ ಕಾನೂನಾತ್ಮಕ ಹೋರಾಟ ಮಾಡುವುದು, ಹೋರಾಟಗಳನ್ನು ರೂಪಿಸುವುದು ಸತ್ಯಾಗ್ರಹಗಳನ್ನು ಹಮ್ಮಿಕೊಳ್ಳುವುದರ ಮೂಲಕ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳುವಂತಾಗಿದ್ದಾರೆ.

* ಇತರೆ ವರ್ಗದವರಂತೆ ಅಧಿಕಾರ ಪಡೆಯಬೇಕೆಂಬ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದಾರೆ. ಇವರಲ್ಲಿಯೂ ಬೈಕ್, ಮೊಬೈಲ್‌ಗಳು ಬಂದು ಆಧುನಿಕತೆಯ ಜೊತೆಜೊತೆಗೆ ಮುಖಾಮುಖಿಯಾಗುವ ಹಂತಕ್ಕೆ ಬಂದಿದ್ದಾರೆ.

* ಶಿಕ್ಷಣ, ಸಂಘಟನೆ, ಹೋರಾಟದಂತಹ ಬದುಕಿನ ಸತ್ಯಗಳು ಅರ್ಥವಾಗಿ ಇರುಳಿಗ ಸಮುದಾಯದವರು ಅವುಗಳನ್ನು ಸಾಕಾರಗೊಳಿಸಲು ಹವಣಿಸಿ, ನಿರಂತರವಾಗಿ ಪ್ರಯತ್ನಿಸುತ್ತಿರುವುದನ್ನು ಕಾಣಬಹುದು.

ಒಟ್ಟಾರೆಯಾಗಿ ಪ್ರಸ್ತುತ ಇರುಳಿಗರು ತಮ್ಮ ಪಾರಂಪರಿಕತೆಯನ್ನು ಬಿಟ್ಟು ಕೊಡಲಾಗದಿದ್ದರೂ ಆಧುನಿಕತೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ತಮ್ಮ ಬದುಕನ್ನು ರೂಪಿಸಿ ಕೊಳ್ಳುತ್ತಿರುವುದನ್ನು ಕಾಣಬಹುದು. ಆಧುನಿಕತೆಯು ಇರುಳಿಗರಿಗೆ ಶಿಕ್ಷಣ, ಸಾಮಾಜಿಕ ಜ್ಞಾನ ಮತ್ತು ವಾಸ್ತವತೆಯ ಬದುಕನ್ನು ತೋರಿಸಿಕೊಟ್ಟಂತೆಯೇ ಮೋಸ, ವಂಚನೆ, ಅನ್ಯಾಯವನ್ನು ಕಲಿಸಿ ಕೊಡುತ್ತಿದೆ. ಆಧುನಿಕತೆಯ ಬಳುವಳಿಯಾದ ಮದ್ಯಪಾನ ಇಡೀ ಇರುಳಿಗ ಸಮುದಾಯವನ್ನು ನಾಶ ಮಾಡುತ್ತಿದೆ. ಅಲ್ಪಸಂಖ್ಯಾತರಾದ ಇರುಳಿಗರು ರಾಜಕಾರಣಿಗಳು ಮತ್ತು ಸರ್ಕಾರದ ನಿರ್ಲಕ್ಷ್ಯಕ್ಕೆ ಒಳಗಾಗಿ ಅನೇಕ ಸಮಸ್ಯೆಗಳನ್ನು ಅನುಭವಿಸುವಂತಾಗಿದೆ.

೮.೩. ಅಧ್ಯಯನದ ಫಲಿತಗಳು

ಸಂಶೋಧನೆ ಕೈಗೊಂಡು ಕಂಡುಕೊಂಡ ಫಲಿತಗಳಲ್ಲಿ ಕೆಲವು ಹೇಳಲೇಬೇಕಾಗಿರುವುದನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

೧. ಕರ್ನಾಟಕದಲ್ಲಿ ಇರುಳಿಗ ಸಮುದಾಯವನ್ನು ಕುರಿತು ಜಾನಪದೀಯ, ಸಾಮಾಜಿಕ, ಆರ್ಥಿಕ ಮತ್ತು ಮಾನವಶಾಸ್ತ್ರದ ಹಿನ್ನೆಲೆಯಲ್ಲಿ ಅಧ್ಯಯನಗಳು ನಡೆದಿರುವುದು ಕಂಡುಬಂದಿದೆ. ಇದರ ಜೊತೆಗೆ ಸರ್ಕಾರ ರಚಿಸಿದ ವಿವಿಧ ಹಿಂದುಳಿದ ಆಯೋಗಗಳ ಮತ್ತು ಬಿಡಿಬಿಡಿ ಲೇಖನಗಳನ್ನು ಹೊರತುಪಡಿಸಿದರೆ ಚಾರಿತ್ರಿಕ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಂಡಿರುವುದು ಇದೇ ಮೊದಲಾಗಿದ್ದು ಈ ನಿಬಂಧನೆಯು ಮಹತ್ವದ ಫಲಿತವಾಗಿದೆ.

೨. ಈವರೆಗಿನ ಅಧ್ಯಾಯಗಳು ಇರುಳಿಗರ ಪದನಿಷ್ಪತ್ತಿಯನ್ನು ಕುರಿತು ವರ್ಣ, ಆಹಾರ ಮತ್ತು ಕಸುಬುಗಳ ಆಧಾರಗಳಿಂದಲೇ ಗುರುತಿಸಿರುವುದನ್ನು ಕಾಣುತ್ತೇವೆ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಇರುಳಿಗರ ಮೂಲವನ್ನು ಪ್ರಕೃತಿಯೊಂದಿಗೆ ಹೊಂದಿರುವ ಸಂಬಂಧದ ಹಿನ್ನೆಲೆಯಲ್ಲಿ ಇಳೆಯೊಳಗೆ ಬೆಳೆಯುವ ಗೆಡ್ಡೆ, ಗೆಣಸುಗಳೊಂದಿಗೆ ಗುರುತಿಸಿರುವುದು ಪ್ರಸ್ತುತ ಅಧ್ಯಯನದ ಫಲಿತವಾಗಿದೆ.

೩. ಇರುಳಿಗರ ಮೂಲಕ್ಕೆ ಸಂಬಂಧಿಸಿದಂತೆ ಈವರೆಗಿನ ಅಧ್ಯಯನಗಳು ಪ್ರಸ್ತುತ ಸಂದರ್ಭವನ್ನು ಗಮನದಲ್ಲಿಟ್ಟುಕೊಂಡು ತಮಿಳುನಾಡು ಮತ್ತು ಕರ್ನಾಟಕ ಎಂದು ಗುರುತಿಸಿರುವುದನ್ನು ಕಾಣಬಹುದು. ಆದರೆ ನನ್ನ ಈ ಅಧ್ಯಯನದಲ್ಲಿ ಇರುಳಿಗರ ಮೂಲವನ್ನು ಪ್ರಸ್ತುತ ಸಂದರ್ಭ ಕರ್ನಾಟಕ, ತಮಿಳುನಾಡು ಮತ್ತು ಕೇರಳಕ್ಕೆ ಸೀಮಿತಗೊಳಿಸದೇ ಕಾವೇರಿ ನದಿ ತಪ್ಪಲಿನ ಪ್ರದೇಶ ಎಂದು ಗುರುತಿಸಲಾಗಿದೆ.

೪. ಇರುಳಿಗರ ಭಾಷೆಯೊಳಗಿನ ಪದಗಳ ಪ್ರಾತಿನಿಧ್ಯತೆಯ ಆಧಾರದ ಮೇಲೆ ಇರುಳಿಗರ ಮೂಲವನ್ನು ನಿರ್ಧರಿಸಿರುವುದನ್ನು ಈವರೆಗೆ ಅಧ್ಯಾಯದಲ್ಲಿ ಗಮನಿಸಲಾಗಿದೆ. ಇರುಳಿಗರ ಭಾಷೆಯಲ್ಲಿ ತಮಿಳಿನ ಪದಗಳು ಹೆಚ್ಚಾಗಿ ಕಂಡುಬರುವುದರಿಂದ ಇವರು ತಮಿಳು ಮೂಲದವರು. ಹಾಗೆಯೇ ಕನ್ನಡ ಮತ್ತು ತೆಲುಗು ಪದಗಳು ಹೆಚ್ಚಾಗಿ ಕಂಡುಬರುವುದರಿಂದ ಕನ್ನಡಿಗರು ಮತ್ತು ತೆಲುಗರು ಎಂದು ವಿಭಾಗಿಸುವುದು ಸೂಕ್ತವಲ್ಲ. ಏಕೆಂದರೆ ಇರುಳಿಗರು ಈ ನಾಲ್ಕು ಭಾಷಿಕ ಪ್ರದೇಶಗಳ ಗಡಿಯಲ್ಲಿ ವಾಸಿಸುತ್ತಿದ್ದಾರೆ. ಇವರ ಭಾಷೆಯಲ್ಲಿ ಆಯಾ ಭಾಷಿಕ ಪ್ರದೇಶದ ಪ್ರಭಾವವಾಗಿರಬಹುದು ಅಥವಾ ಇರುಳಿಗರು ಈ ಭಾಷಿಕ ಪ್ರದೇಶಗಳಿಗಿಂತ ಪೂರ್ವಿಕ ಭಾಷಿಕರಾಗಿರಬಹುದು ಎಂಬುವುದು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಫಲಿತವಾಗಿದೆ.

೫. ಇರುಳಿಗರು ಮೂಲತಃ ಬೇಟೆ ಸಂಸ್ಕೃತಿಯ ಬುಡಕಟ್ಟು ಸಮುದಾಯ. ಇವರು ಬೇಟೆಯ ಜೊತೆ ಅರಣ್ಯದಲ್ಲಿ ಸಿಗುವ ಜೇನು ಸಂಗ್ರಹಿಸುವುದರಲ್ಲಿ ಪರಿಣಿತರು. ಆಧುನಿಕ ತಂತ್ರಜ್ಞಾನಗಳ ಸಹಾಯವಿಲ್ಲದೆ ತಮ್ಮ ಪಾರಂಪರಿಕ ವಿಧಾನಗಳ ಮೂಲಕ ಜೇನು ಸಂಗ್ರಹಿಸಿ, ಜೇನುಹುಳಗಳ ಉತ್ಪತ್ತಿಗೆ ಪೂರಕವಾಗಿ ದುಡಿಯುತ್ತಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

೬. ಇರುಳಿಗ ಭಾಷೆಯನ್ನು ಕುರಿತ ಇಲ್ಲಿಯವರೆಗಿನ ಅಧ್ಯಯನಗಳು ಇರುಳಿಗರ ಭಾಷೆ ಯನ್ನು ತಮಿಳಿನ ಉಪಭಾಷೆ, ಕನ್ನಡ ಉಪಭಾಷೆ ಮತ್ತು ತೆಲುಗಿನ ಉಪಭಾಷೆ ಎಂದು ಹೇಳಿರುವುದನ್ನು ಕಾಣಬಹುದು. ಈ ಎಲ್ಲಾ ವಿದ್ವಾಂಸರ ಅಭಿಪ್ರಾಯಗಳನ್ನು ಹೊರತುಪಡಿಸಿ ಪ್ರಸ್ತುತ ಅಧ್ಯಯನದಲ್ಲಿ ಇರುಳಿಗ ಭಾಷೆಯು ಒಂದು ಸ್ವತಂತ್ರ ಭಾಷೆ ಎಂಬುದನ್ನು ಪ್ರಸ್ತಾಪಿಸಲಾಗಿದೆ.

೭. ಪಾರಂಪರಿಕವಾದ ಕುಲ ಮತ್ತು ಕಸುಬುಗಳು ಬುಡಕಟ್ಟು ಸಮಾಜಗಳಲ್ಲಿ ಮತ್ತು ಇತರೆ ಸಮಾಜಗಳಲ್ಲಿ ಭಿನ್ನವಾಗಿ ಗುರುತಿಸಿಕೊಳ್ಳುತ್ತವೆ. ಪಾರಂಪರಿಕ ಕುಲಕಸುಬುಗಳು, ಬುಡಕಟ್ಟುಗಳಿಗೆ ಅನುಕೂಲ ಮತ್ತು ಸ್ವಾತಂತ್ರ್ಯದ ಬದುಕನ್ನು ತಂದುಕೊಟ್ಟರೆ ಇತರೆ ಸಮುದಾಯಗಳಿಗೆ ಅನಾನುಕೂಲವಾಗಿ ಶೋಷಣೆಗೆ ಒಳಗಾಗುವಂತೆ ಮಾಡುತ್ತವೆ. ಇವುಗಳ ಹಿಂದಿನ ರಾಜಕಾರಣವನ್ನು ಚರ್ಚಿಸಿರುವುದು ನನ್ನ ಅಧ್ಯಯನದ ಪ್ರಮುಖ ಫಲಿತವಾಗಿದೆ.

೮. ಐತಿಹ್ಯ ಮತ್ತು ಪುರಾಣಗಳು ಬುಡಕಟ್ಟುಗಳ ಜೀವನದ ವೃತ್ತಾಂತವನ್ನು ಸಾರುವ ಚಾರಿತ್ರಿಕ ದಾಖಲೆಗಳು ಹೌದು. ಹಾಗೆಯೇ ಪ್ರಭುತ್ವ ಮತ್ತು ವೈದಿಕರ ಸ್ವಾರ್ಥ ಸಾಧನೆಯ ಅಸ್ತ್ರಗಳು ಹೌದು. ಹೀಗೆ ಐತಿಹ್ಯ ಮತ್ತು ಪುರಾಣಗಳು ಉಪಯೋಗ ಮತ್ತು ದುರುಪಯೋಗ ಸಂದರ್ಭದಲ್ಲಿ ಚರ್ಚಿಸಿರುವುದು ಹಾಗೂ ಇರುಳಿಗರಲ್ಲಿ ಇವುಗಳ ಪ್ರಭಾವವನ್ನು ಗುರುತಿಸುವುದು ಪ್ರಸ್ತುತ ಅಧ್ಯಯನದ ಫಲಿತವಾಗಿದೆ.

೯. ಇರುಳಿಗರ ಸೃಷ್ಟಿ ಪುರಾಣದ ಸಂದರ್ಭದಲ್ಲಿ ಶಿವನ ವಾಹನ ನಂದಿಯ ಬದಲು ನವಿಲಿನ ಪ್ರಸ್ತಾಪ ಬಂದಿದೆ. ನವಿಲು ಮುರುಗನ್‌ನ ವಾಹನವಾದುದ್ದರಿಂದ ಇರುಳಿಗರಿಗೆ ಪಾರಂಪರಿಕ ದೈವ ಮುರುಗ ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

೧೦. ಕಣಿ ಎಂದರೆ ಭವಿಷ್ಯ ಹೇಳುವುದು ಎಂದು ನಂಬಲಾಗಿದ್ದರೂ ಇರುಳಿಗರಲ್ಲಿ ಕಣಿಯೂ ಭವಿಷ್ಯ ಹೇಳುವ ಬದಲಿಗೆ ವರ್ತಮಾನದ ಸಮಸ್ಯೆಯನ್ನು ಬಗೆಹರಿಸುವ ಹಾಗೆಯೇ ಬದುಕಿಗೆ ಮಾರ್ಗದರ್ಶನ ನೀಡುವ ಗುರುವಂತೆ ಕೆಲಸ ಮಾಡುತ್ತದೆ. ಜೊತೆಗೆ ಪಾರಂಪರಿಕ ಜ್ಞಾನದಿಂದ ಮಾನಸಿಕ ಕಾಯಿಲೆಗಳನ್ನು ಗುಣಪಡಿಸುವ ಮೂಲಕ ಆಧುನಿಕ ಮನೋವೈದ್ಯನನ್ನು ಮೀರಿಸುವಂತಹ ಕಲೆಯನ್ನು ಕಣಿಯಲ್ಲಿ ಕಂಡುಬರುತ್ತದೆ.

೧೧. ಇವತ್ತಿನ ಆಧುನಿಕತೆಯ ದಿನಮಾನಗಳಲ್ಲಿ ಮಹಿಳೆಯರು ಹೆರಿಗೆ, ಬಾಣಂತನ ಮತ್ತು ಗರ್ಭಿಣಿಯ ಸಂದರ್ಭದಲ್ಲಿ ಅನೇಕ ಸಮಸ್ಯೆಗಳಿಂದ ನರಳುವಂತಾಗಿದೆ. ಸರಿಯಾಗಿ ಹೆರಿಗೆಯಾಗದೆ ಚಿಕಿತ್ಸೆಗಳ ಮೂಲಕ ಮಗುವನ್ನು ತೆಗೆಯುತ್ತಿರುವುದು ಇತ್ತೀಚಿನ ದಿನಗಳಲ್ಲಿ ಸಾಮಾನ್ಯ ಸಂಗತಿಯಾಗಿವೆ. ಆದರೆ ಪ್ರಸ್ತುತದ ದಿನದಲ್ಲೂ ಇರುಳಿಗರಲ್ಲಿ ಈ ರೀತಿಯ ಸಮಸ್ಯೆಗಳಿಂದ ದೂರ ಉಳಿಯಲು ಪೂರಕವಾದ ತಯಾರಿಯ ಬಗ್ಗೆ ಪಾರಂಪರಿಕ ಜ್ಞಾನವನ್ನು ಇರುಳಿಗರು ಹೊಂದಿದ್ದಾರೆ ಎಂಬುದನ್ನು ಅಧ್ಯಯನದ ಸಂದರ್ಭದಲ್ಲಿ ಕಂಡುಕೊಂಡ ಫಲಿತವಾಗಿದೆ.

೧೨. ಪ್ರಸ್ತುತ ದಿನಮಾನಗಳಲ್ಲಿ ಮಹಿಳಾ ಸ್ವಾತಂತ್ರ್ಯ ಕುರಿತು ಹೆಚ್ಚು ಚರ್ಚೆಗಳು ನಡೆಯುತ್ತಿವೆ. ಇದಕ್ಕೆ ಸಾಂವಿಧಾನಿಕ ಸ್ಥಾನಮಾನಗಳನ್ನು ನೀಡಿದ್ದರೂ ಮಹಿಳೆಯರಿಗೆ ಸ್ವಾತಂತ್ರ್ಯ ಕೊಡುವಲ್ಲಿ ಸೋತ ಆಧುನಿಕ ಸಮಾಜ ಮಹಿಳೆಯನ್ನು ಮತ್ತೆ ಸಂಕೋಲೆಗಳಿಗೆ ಸಿಕ್ಕಿಸುತ್ತಿರುವ

ಸಂದರ್ಭದಲ್ಲಿ ಇರುಳಿಗ ಬುಡಕಟ್ಟಿನ ಮಹಿಳೆ ಸ್ಥಾನಮಾನಗಳು ಮಾದರಿಯಾಗುತ್ತವೆ ಎಂಬುವುದರಲ್ಲಿ ಯಾವುದೇ ಅನುಮಾನವಿಲ್ಲ.

೧೩. ಇರುಳಿಗರ ಸಾವಿನ ಸಂದರ್ಭ ಮತ್ತು ಸಾವಿನ ನಂತರದ ಆಚರಣೆಗಳನ್ನು ಗಮನಿಸಿದಾಗ ಶಿಲಾಯುಗದ ಮಾನವನ ಜೀವನ ನೆನಪಾಗುತ್ತದೆ. ಇಂದಿಗೂ ತಮ್ಮ ಪಾರಂಪರಿಕತೆಯನ್ನು ಬಿಟ್ಟುಕೊಡದ ಇರುಳಿಗರು ಸತ್ತ ವ್ಯಕ್ತಿಯು ದೈಹಿಕವಾಗಿ ಬೇರೆಯಾದರೂ ಮಾನಸಿಕವಾಗಿ ನಮ್ಮೊಂದಿಗೆ ಇದ್ದು, ತಮ್ಮೆಲ್ಲ ಕಷ್ಟ ಕಾರ್ಪಣ್ಯಗಳಿಗೂ ಕಾಯುತ್ತಾನೆಂದು ನಂಬಿಕೊಂಡು ಅವನನ್ನು ದೇವರಾಗಿಸಿಕೊಂಡು ಪೂಜಿಸುವ ವಿಶಿಷ್ಟ ಸಂಪ್ರದಾಯ ಇರುಳಿಗರಲ್ಲಿರುವುದನ್ನು ಕಾಣಬಹುದು.

೧೪. ಸತ್ತ ವ್ಯಕ್ತಿಯನ್ನು ಉಳುವುದಾಗಲಿ ಅಥವಾ ಸುಡುವುದಾಗಲಿ ಮಾಡದೇ ತಮ್ಮ ಪಾರಂಪರಿಕವಾದ ಕಲ್ಲು ಸೇವೆ ಮಾಡುವುದು ಇರುಳಿಗರ ವಿಶಿಷ್ಟ ನಂಬಿಕೆಗಳಲ್ಲೊಂದು. ಇವರಿಗೆ ಸ್ವರ್ಗ, ನರಕದ ಕಲ್ಪನೆಗಳಿಲ್ಲದೆ; ಸತ್ತ ವ್ಯಕ್ತಿಯು ತಮ್ಮ ಕುಲದ ಹಿರಿಯರ ಜೊತೆ ಸೇರಿಸಿಕೊಳ್ಳುತ್ತಾನೆ. ತಾವು ಕರೆದಾಗಲೆಲ್ಲ ಬರುತ್ತಾನೆ ಎಂಬ ನಂಬಿಕೆ ಇರುಳಿಗರಲ್ಲಿದೆ.

೧೫. ಇರುಳಿಗರ ಆಡಳಿತ ಪದ್ಧತಿಯು ಒಂದು ಸುಸಜ್ಜಿತವಾದ ಆಡಳಿತ ಪದ್ಧತಿಯಂತೆ ಕಂಡುಬಂದು ಇವರ ನ್ಯಾಯ ತೀರ್ಮಾನವು ಒಬ್ಬ ಸ್ವತಂತ್ರವಾಗಿ, ಸ್ವಾಭಿಮಾನಿಯಾಗಿ, ಮೇಲು–ಕೀಳು, ಪ್ರಬಲ–ದುರ್ಬಲ, ಬಡವ–ಶ್ರೀಮಂತನೆಂಬ ಯಾವುದೇ ಕಲ್ಪನೆಯಿಲ್ಲದೆ ಬದುಕುವ ವ್ಯವಸ್ಥೆ ರೂಪಿಸುವಂತಹ ನ್ಯಾಯಾಂಗ ವ್ಯವಸ್ಥೆಯಾಗಿದೆ. ಇಲ್ಲಿ ಪರಸ್ಪರ ನಂಬಿಕೆ, ಪ್ರಾಮಾಣಿಕತೆ, ಸತ್ಯಪರಿಪಾಲನೆ, ಒಗಟು, ಗಾದೆ ಮತ್ತು ದೇವರುಗಳೇ ಕಾನೂನುಗಳಾಗಿರುತ್ತವೆ ಎಂಬುವುದು ಅತ್ಯಂತ ಮಹತ್ವದ್ದಾಗಿದೆ.

೧೬. ಊರು ಮತ್ತು ಕೇರಿಗಳಲ್ಲಿ ವಾಸಿಸುವ ಜನರು ತಮ್ಮದೇ ನ್ಯಾಯ ಪದ್ಧತಿಗಾಗಿ ಹಲವಾರು ರೀತಿ ನೀತಿಗಳನ್ನು ಪಾಲಿಸುವುದುಂಟು. ಅದರಲ್ಲಿ ಗಡಿಮನೆ ನ್ಯಾಯ ಪದ್ಧತಿ, ಕಟ್ಟೆಮನೆ ನ್ಯಾಯ ಪದ್ಧತಿ ಇತ್ಯಾದಿ ಈ ಹಿನ್ನೆಲೆಯಲ್ಲಿಯೇ ಕಾಡಿನ ವಾಸಿಗಳಾದ ಇರುಳಿಗರ ನ್ಯಾಯಪದ್ಧತಿಯನ್ನು ಹಾಗೂ ವಿವಿಧ ಆಯಾಮಗಳ ತೀರ್ಪುಗಳನ್ನು ವಸ್ತುನಿಷ್ಠವಾಗಿ ಚಾರಿತ್ರಿಕ ಹಿನ್ನೆಲೆಯಲ್ಲಿ ದಾಖಲಿಸಿರುವುದು ಪ್ರಸ್ತುತ ಅಧ್ಯಯನದ ಫಲಿತವಾಗಿದೆ.

೧೭. ಇರುಳಿಗರು ಸಂಪೂರ್ಣವಾಗಿ ಅರಣ್ಯ ವಾಸಿಗಳಾಗಿದ್ದರಿಂದ ಅರಣ್ಯದ ಬಗೆಗಿನ ಸಮಗ್ರ ಜ್ಞಾನವನ್ನು ಹೊಂದಿದ್ದಾರೆ. ಪ್ರಾಣಿ ಹೆಜ್ಜೆ, ವಾಸನೆಯ ಆಧಾರದ ಮೇಲೆ ಇಂಥದೇ ಪ್ರಾಣಿ ಎಂದು ನಿಖರವಾಗಿ ಗುರುತಿಸುತ್ತಾರೆ. ಜೇನಿನ ಹುಳುವನ್ನು ಹಿಂಬಾಲಿಸಿ ಜೇನು ಪತ್ತೆ ಹಚ್ಚುವ ಸೂಕ್ಷ್ಮ ಸಂವೇದನೆಯನ್ನು ಇರುಳಿಗರು ಹೊಂದಿದ್ದಾರೆ. ಅರಣ್ಯದಲ್ಲಿರುವ ಪ್ರಾಣಿ, ಪಕ್ಷಿ, ಮರ, ಗಿಡ, ಸಸ್ಯಗಳ ಹೆಸರುಗಳನ್ನು ಮತ್ತು ಅವುಗಳ ಉಪಯುಕ್ತತೆಯ

ಮೇಲೆ ಅಪಾರ ಜ್ಞಾನ ಹೊಂದಿರುವ ಇರುಳಿಗರನ್ನು ಗುರುತಿಸುವುದು ನನ್ನ ಅಧ್ಯಯನ ಫಲಿತವಾಗಿದೆ.

೧೮. ಅರಣ್ಯದಲ್ಲಿ ಸಿಗುವ ಗಿಡಮೂಲಿಕೆಗಳನ್ನು ಬಳಸಿ ಅನೇಕ ಕಾಯಿಲೆಗಳನ್ನು ಗುಣಪಡಿಸಿ ಕೊಳ್ಳುತ್ತಾರೆ. ಮರದಿಂದ ಶ್ರಮಿಸುವ ಗೋಂದು, ಬಣ್ಣ ತಯಾರಿಕೆಯ ಕಲೆ ಹೊಂದಿರುವ ಇರುಳಿಗರು ಎಂತಹ ಹೆಬ್ಬಂಡೆಗಳಾದರೂ ತಮ್ಮ ಪಾರಂಪರಿಕ ವಿಧಾನವಾದ ಮಾಲ್‌ಗಳನ್ನು ಕಟ್ಟಿಕೊಂಡು ಹತ್ತಿ ಇಳಿಯುವ ಕಲೆ ರೂಪಿಸಿಕೊಂಡಿದ್ದಾರೆ.

೧೯. ಬ್ರಿಟಿಶರ ಕಾಲಘಟ್ಟದಲ್ಲಿ, ಸ್ವಾತಂತ್ರ್ಯ ನಂತರದಲ್ಲಿ ಮತ್ತು ಪ್ರಸ್ತುತ ದಿನಮಾನದಲ್ಲಿ ಇರುಳಿಗ ಸಮುದಾಯದವರ ಮೇಲಾದ ಜಾಗತೀಕರಣ ಮತ್ತು ಆಧುನಿಕತೆಯ ಪರಿಣಾಮದಿಂದ ಇಡೀ ಸಮುದಾಯವು ಆಂತರಿಕವಾಗಿ ಮತ್ತು ಬಾಹ್ಯವಾಗಿ ನಿರಂತರವಾಗಿ ಹೇಗೆ ಬದಲಾವಣೆಗೊಳುತ್ತಿವೆ ಎಂಬುದನ್ನು ಚರ್ಚಿಸಿರುವುದು ಪ್ರಸ್ತುತ ಅಧ್ಯಯನದ ಫಲಿತವಾಗಿದೆ.

೨೦. ಇಲ್ಲಿಯವರೆಗೂ ನಡೆದಿರುವ ಅಧ್ಯಯನಗಳು ಇರುಳಿಗ ಮತ್ತು ಇರುಳ ಬೇರೆ ಬೇರೆ ಎಂದು ಹಾಗೆಯೇ ಇರುಳಿಗರು ಮತ್ತು ಚೆಂಚರು ಒಂದೇ ಎಂಬ ನಿಟ್ಟಿನಲ್ಲಿ ಅನೇಕ ಸಂಶೋಧನೆಗಳನ್ನು ಕೈಗೊಂಡಿದ್ದರು. ಪ್ರಸ್ತುತ ಅಧ್ಯಯನದಲ್ಲಿ ಇರುಳಿಗ ಮತ್ತು ಇರುಳ ಒಂದೇ ಆಗಿದ್ದು ಚೆಂಚರಿಗೂ ಇರುಳಿಗರಿಗೂ ಸಂಬಂಧವಿಲ್ಲ ಎಂಬುವುದರೊಂದಿಗೆ ಚೆಂಚುಗಳಿಗೂ ಚೆನ್ಸ್‌ಗಳಿಗೆ ವ್ಯತ್ಯಾಸವಿದೆ ಎಂಬುವುದನ್ನು ನನ್ನ ಅಧ್ಯಯನದಲ್ಲಿ ಕಂಡುಕೊಂಡ ಫಲಿತವಾಗಿದೆ.

೨೧. ಇರುಳಿಗ ಸಮುದಾಯ ಚಾರಿತ್ರಿಕವಾಗಿ ಮಹೋನ್ನತ ಸ್ಥಾನದಲ್ಲಿದ್ದರೂ ಸಹ ಸಮಕಾಲೀನ ಸಂದರ್ಭದಲ್ಲಿ ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಅತ್ಯಂತ ಹಿಂದುಳಿದವರಾಗಿರುವುದಕ್ಕೆ ಮಹತ್ವದ ಕಾರಣಗಳನ್ನು ಗುರುತಿಸಿ ಇವುಗಳನ್ನು ಹೋಗಲಾಡಿಸಲು ಸಮಕಾಲೀನ ಸಂದರ್ಭದ ಆಧುನಿಕ ಜಗತ್ತಿಗೆ ತಮ್ಮನ್ನು ತಾವು ತೆರೆದುಕೊಳ್ಳಬೇಕೆನ್ನುವ ಸಲಹೆಗಳನ್ನು ನಿಬಂಧನೆಗಳನ್ನು ನೀಡಿರುವುದು ಫಲಿತದ ಒಂದು ಭಾಗವೇ ಆಗಿದೆ.

೨೨. ಸಂವಿಧಾನ ಜಾರಿಗೆ ಬಂದಾಗಿನಿಂದ ಈವರೆಗೂ ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಗೊಂಡು ೬೫ ವರ್ಷಗಳು ಕಳೆದು ಯಾವೊಬ್ಬ ವ್ಯಕ್ತಿಯೂ ಸರ್ಕಾರಿ ನೌಕರಿಯನ್ನು ಪಡೆಯದೇ ಇರುವುದು, ಈವರೆಗೆ ರಾಜ್ಯ ಸಭೆ, ಲೋಕಸಭೆ, ವಿಧಾನ ಪರಿಷತ್, ವಿಧಾನ ಮಂಡಳಿಗೆ ಹೋಗದಿರುವುದು, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು ಆಗದಿರುವುದಕ್ಕೆ ಕಾರಣಗಳನ್ನು ಕಂಡುಕೊಂಡು ಅದರ ಸಾಧಕ ಬಾಧಕಗಳನ್ನು ಕುರಿತು ಚರ್ಚಿಸಿರುವುದು ನನ್ನ ಅಧ್ಯಯನದ ಫಲಿತವೇ ಆಗಿದೆ.

ಅನುಬಂಧ

೧. ಪರಾಮರ್ಶನ ಗ್ರಂಥಗಳು
೨. ವಕ್ತೃವಿವರಗಳು
೩. ಸಂದರ್ಶನಗಳು
೪. ಅಧ್ಯಯನಕ್ಕೆ ಪೂರಕವಾದ ಭೂಪಟಗಳು
೫. ಅಧ್ಯಯನಕ್ಕೆ ಪೂರಕವಾದ ಛಾಯಾಚಿತ್ರಗಳು

ಪರಾಮರ್ಶನ ಗ್ರಂಥಗಳು

ಪ್ರಾಥಮಿಕ ಆಕರಗಳು

1. Annual report on Administration of the Mysore and Coorg 1864-65.
2. Annual report on the Administration Mysore 1865-66.
3. Census of India Series of Karnataka Part IX(V): Special Tables for Tribes(1991)
4. Census of India Series II, Karnataka, SC/STs Total Final Populations
5. Commissioner for Scheduled Caste and Scheduled Tribes 1957-58, Indian Press, New Delhi, 1957
6. Census of India, 2001, Series-30, Table on Houses, House Hold Amatities and Assets Vol-I, Director of Census Operation Karnataka
7. Census Report-1911
8. Chinnappa Reddy, Report of the Karnataka Back word classes comission, VoI -1-1990.
9. Commisioner for Scheduled Castes and Scheduld Tribes, 1956-57, Indian press, New Delhi, 1957.
10. Family Welfare Statistic in India 2001, Ministry of Health and Family Welfare Govermment of India
11. Government Census of India Reports 1961 and 1971, Vol.IX(Tamil Nadu)
12. Havannur L.G., Karnataka Backward Class Commission Report, Government Press, Bangalore
13. Planning Commission, Report of the study Team on Tribal Development programmes, Madras, 1967.

14. Report of the Administration of the Madras presidency, 1862-63 Government Press, Madras-1864.

15. Report on the Administration of the Mysore 1863-64.

16. Ministry of Home Affairs Regulations for Post Matric Scholarships to Scheduled Castes and Scheduled Tribes 1971-72 and 1975-76

17. Reports, Pp.2789, See also sir Herberts, The People at India, 1908

18. Reports of Sri P.K.Syamasundar Commission on Enquiary, Bangalore 1987

19. Report on the Administration on the Madras Presidence 1864-65, Government Press, Madras, 1866

20. Report on the Administration of the Madrass 1869-70, Government Press Madras, 1970

21. Report on the Socio-Economic condition of the Aboriginal Tribes of the Province of Madras, Madras Governemtn Press, 1948

22. Seminar proceedings, Statistical Accounting of lamp and forestry Resources Central Statistical organistion ministry of Statistical and programme Implimentation Government of India 28-29, April 2006.

23. Tribes in Contemporary India the Irular of Tamil Nadu: Anthropological Survey of India, 1983

24. Tribes in Contemporary India: The Irular of Tamilunadu: Anthropological Servey of India, 1963

Gazetteer

1. Abhishankar(Ed), 1969, Gezetteer of India, Mysore State, Bangalore Rural District.

2 Hunter Willim Wilson, 1886, Nilgiri Hills in the imperical Gazetteer of India, London

3. Hayavadana Rao C., Mysore Gazetteer, Vol.1to 5, Government Press, Bangalore

4. John Wolker, 1856, Charles Walker, A Gazetteer, Madras1.
Hunter William Wilson, 1886, Nilgiri Hills in The Imperical Gazetteer of India, London

5. Suryanath V.Kamath(Ed), 1985, Karnataka State Gazetteer, Part 1,2, 3, Government of Karnataka

6. Rice B.L., 2001, Mysore Gazetteer, Asian Publication Services, New Delhi

ಕನ್ನಡ ಗ್ರಂಥಗಳು

೧. ಅಂಬಳಿಕೆ ಹಿರಿಯಣ್ಣ, ೧೯೮೯, ಕೊಡವರು, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು

೨. ಅಂಬಳಿಕೆ ಹಿರಿಯಣ್ಣ, ೧೯೮೫, ಮಲೆನಾಡ ಒಕ್ಕಲಿಗರು ಮತ್ತು ಅವರ ಜಾನಪದ, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು

೩. ಅಂಬಳಿಕೆ ಹಿರಿಯಣ್ಣ, ೧೯೯೪, ಜಾನಪದ: ಕೆಲವು ಅಧ್ಯಯನಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೪. ಅರವಿಂದ ಮಾಲಗತ್ತಿ, ೧೯೮೫, ಜಾನಪದ ವ್ಯಾಸಂಗ, ಶೈಲಿ ಪ್ರಕಾಶನ, ಮುದ್ದೇಬಿಹಾಳ

೫. ಅಂತೋನವ ಕೆ.ಜಿ., ೧೯೮೭, ಬೋಗಾರ್ಡ್ ಲೆವಿನ್, ಭಾರತದ ಇತಿಹಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು

೬. ಅಂತೋನವ ಕೆ. ಕತೋವ್‌ಸ್ಕಿ ಜಿ., ೧೯೮೮, ಭಾರತದ ಇತಿಹಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು,

೭. ಅಂಬೇಡ್ಕರ್ ಬಿ.ಆರ್. ಬರಹಗಳು ಮತ್ತು ಭಾಷಣಗಳು(೧ರಿಂದ ೧೮ ಸಂಪುಟಗಳು) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

೮. ಆರಾಧ್ಯ ಬಿ.ಎಂ., ೧೯೮೫, ಪರಿಶಿಷ್ಟ ಜನಾಂಗದವರಿಗೆ ಸಂವಿಧಾನದ ಕೊಡುಗೆ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು

೯. ಆಶೀಫ್ ಷರೀಫ್, ೨೦೦೬ ರೇಷ್ಮೆನಗರ, ಅಂಕನಹಳ್ಳಿ ಪ್ರಕಾಶನ, ಅಂಕನಹಳ್ಳಿ.

೧೦. ಇಂದಿರಾ ಹೆಗ್ಗಡೆ, ೨೦೦೪, ಬಂಟರು ಒಂದು ಸಮಾಜೋ-ಸಾಂಸ್ಕೃತಿಕ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೧. ಇರ್ಫಾನ್ ಹಬೀಬ್, ವಿಜಯಕುಮಾರ್ ಠಾಕೂರ್(ಮೂಲ), ಚಂದ್ರಪ್ಪ ಸಿ.ಪ್ರದೀಪ್ ಬಿ.(ಅನು), ೨೦೧೪, ವೈದಿಕ ಯುಗ, ಚಿಂತನಾ ಪ್ರಕಾಶನ, ಬೆಂಗಳೂರು

೧೨. ಇರ್ಫಾನ್ ಹಬೀಬ್(ಮೂಲ), ಪ್ರದೀಪ್ ಬೆಳಗಲ್, ಜೈಕುಮಾರ್ ಹೆಚ್.ಎಸ್., ಜೈಕುಮಾರ್(ಅನು), ೨೦೧೧, ಸಿಂಧೂ ನಾಗರಿಕತೆ, ಚಿಂತನಾ ಪುಸ್ತಕ ಪ್ರಕಾಶನ, ಬೆಂಗಳೂರು

೧೩. ಈಶ್ವರಪ್ಪ ಎಂ.ಜಿ. ೧೯೯೫, ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ, ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.

೧೪. ಕರಿಶೆಟ್ಟಿ ರುದ್ರಪ್ಪ, ೧೯೯೫ ಮ್ಯಾಸನಾಯಕರು: ಜನಾಂಗೀಯ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.

೧೫. ಕಲಬುರ್ಗಿ ಎಂ.ಎಂ. ೧೯೭೪, ಉತ್ತರ ಕರ್ನಾಟಕದ ಜಾನಪದ ಪದ್ಯ ಸಾಹಿತ್ಯ. ಸಮಾಜ ಪುಸ್ತಕಾಲಯ, ಧಾರವಾಡ.

೧೬. ಕಿಕ್ಕೇರಿ ನಾರಾಯಣ(ಸಂ), ೨೦೧೧, ಬುಡಕಟ್ಟು ಸಂಸ್ಕೃತಿ, ಅರುಹು-ಕುರುಹು ಪ್ರಕಾಶನ. ಮೈಸೂರು.

೧೭. ಕೃಷ್ಣಮೂರ್ತಿ. ಪಿ.ವಿ. ೧೯೮೭, ತಮಿಳುನಾಡಿನ ಕನ್ನಡ ಶಾಸನಗಳು, ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.

೧೮. ಕೆಂಪೇಗೌಡ ಕೆ., ೧೯೯೬, ದ್ರಾವಿಡ ಭಾಷಾ ವಿಜ್ಞಾನ, ಭಾರತೀ ಪ್ರಕಾಶನ, ಮೈಸೂರು

೧೯. ಕೆಂಪೇಗೌಡ ಕೆ., ೨೦೧೪, ಕನ್ನಡ ತೌಲನಿಕ ವ್ಯಾಕರಣ್, ವಿಜಯಲಕ್ಷ್ಮಿ ಪ್ರಕಾಶನ, ಮೈಸೂರು

೨೦. ಕೇಶವ ಶರ್ಮ ಕೆ., ೨೦೧೧ ವಸಹಾತುಶಾಹಿ ಅನುಭವ, ಪೂರ್ಣ ಪ್ರಕಾಶನ, ಶಿವಮೊಗ್ಗ

೨೧. ಕೊಸಾಂಬಿ ಡಿ.ಡಿ.(ಮೂಲ), ವೇಣುಗೋಪಾಲ್, ಶೈಲಜಾ(ಅನು), ೨೦೦೩, ಪುರಾಣ ಮತ್ತು ವಾಸ್ತವ, ಚಿಂತನ ಪುಸ್ತಕ ಪ್ರಕಾಶನ, ಬೆಂಗಳೂರು

೨೨. ಕೊಸಾಂಬಿ ಡಿ.ಡಿ.(ಮೂಲ), ವೇಣುಗೋಪಾಲ್, ಶೈಲಜಾ(ಅನು), ೨೦೦೩, ಪ್ರಾಚೀನ ಭಾರತದ ಚರಿತ್ರೆಯ ರೂಪು-ರೇಷೆಗಳು, ಚಿಂತನ ಪುಸ್ತಕ ಪ್ರಕಾಶನ, ಬೆಂಗಳೂರು

೨೩. ಕೊಸಾಂಬಿ ಡಿ.ಡಿ.(ಮೂಲ), ವೇಣುಗೋಪಾಲ್ ಟಿ.ಎಸ್., ಶೈಲಜಾ, ೨೦೧೧, ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರಿಕತೆ ಚಾರಿತ್ರಿಕ ರೂಪುರೇಷೆ, ಚಿಂತನ ಪುಸ್ತಕ ಪ್ರಕಾಶನ, ಬೆಂಗಳೂರು

೨೪. ಗೋವಿಂದರಾಜು ಸಿ.ಆರ್., ೨೦೧೦, ನವಚಾರಿತ್ರಿಕವಾದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೫. ಚಂದ್ರು ಕಾಳೇನಹಳ್ಳಿ ೧೯೯೩, ಸೋಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.

೨೬. ಚಂದ್ರಶೇಖರ್ ಎಸ್., ೨೦೦೬, ವಸಹಾತುಶಾಹಿಕಾಲೀನ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೨೭. ಚಂದ್ರಶೇಖರಯ್ಯ ಬಿ.ಎಂ., ೨೦೦೫, ಕರ್ನಾಟಕ ಸಾಂಸ್ಕೃತಿಕ ಇತಿಹಾಸ ಪರಂಪರೆ, ಡಿ.ವಿ.ಜಿ. ಪ್ರಕಾಶನ, ಬೆಂಗಳೂರು

೨೮. ಚಕ್ಕೆರೆ ಶಿವಶಂಕರ್, ೨೦೦೮, ಜಾನಪದ ತಿಳುವಳಿಕೆ, ಸಾಗರ್ ಪ್ರಕಾಶನ, ಬೆಂಗಳೂರು.

೨೯. ಚಿನ್ನಸ್ವಾಮಿ ಸೋಸಲೆ ಎನ್., ೨೦೦೧, ಕರ್ನಾಟಕ ರಾಜಕೀಯ ಚರಿತ್ರೆ ಮತ್ತು ಸಾಹಿತ್ಯ ಸಿ.ವಿ.ಜಿ. ಪಬ್ಲಿಕೇಶನ್ಸ್, ಬೆಂಗಳೂರು

೩೦. ಚಿನ್ನಸ್ವಾಮಿ ಸೋಸಲೆ ಎನ್., ೨೦೦೮, ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೧. ಚಿನ್ನಸ್ವಾಮಿ ಸೋಸಲೆ ಎನ್., ೨೦೧೦, ವಸಹಾತು ಕಾಲಘಟ್ಟದ ಮೈಸೂರು ಸಂಸ್ಥಾನದಲ್ಲಿ ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೨. ಚಿನ್ನಸ್ವಾಮಿ ಸೋಸಲೆ ಎನ್., ೨೦೦೮, ಪ್ರಭುತ್ವ ಮತ್ತು ದಲಿತರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೩೩. ಚಿನ್ನಸ್ವಾಮಿ ಸೋಸಲೆ ಎನ್., ೨೦೦೮ ಭಾರತೀಯ ಸಮಾಜ ಮತ್ತು ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೪. ಚಿನ್ನಸ್ವಾಮಿ ಸೋಸಲೆ ಎನ್.(ಸಂ), ೨೦೧೦, ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಸಮಕಾಲೀನ ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೫. ಚಿನ್ನಸ್ವಾಮಿ ಸೋಸಲೆ ಎನ್., ೨೦೦೬, ದಲಿತರ ಬದುಕು-ಮೆಲುಕು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೬. ಚಿನ್ನಸ್ವಾಮಿ ಸೋಸಲೆ ಎನ್., ೨೦೧೨, ದಲಿತರ ಚರಿತ್ರೆಯಲ್ಲಿ ಕಾಡಲೇಬೇಕಾದ ಪ್ರಶ್ನೆಗಳು, ಗೀತಾಂಜಲಿ ಪ್ರಕಾಶನ, ಶಿವಮೊಗ್ಗ

೩೭. ಚಿನ್ನಸ್ವಾಮಿ ಸೋಸಲೆ ಎನ್., ೨೦೧೯, ಓನಕೆ ಓಬವ್ವೆ ದಲಿತ ಸಂವೇದನೆಯೊಂದಿಗೆ ಮುಖಾಮುಖಿ, ಸೋಸಲೆ ಪ್ರಕಾಶನ, ಹೊಸಪೇಟೆ

೩೮. ಚಿನ್ನಸ್ವಾಮಿ ಸೋಸಲೆ ಎನ್., ೨೦೧೨, ಅಂಬೇಡ್ಕರ್‌ವಾದ ಮತ್ತು ಪ್ರಸ್ತುತ ದಲಿತರು, ಸ್ವಪ್ನ ಬುಕ್‌ಹೌಸ್, ಬೆಂಗಳೂರು

೩೯. ಚೆನ್ನಸ್ವಾಮಿ ಸೋಸಲೆ ಎನ್., ೨೦೧೩, ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೦. ತಾಪಿ ಧರ್ಮರಾವ್(ಮೂಲ), ಶಾಸ್ತ್ರೀ ಎಸ್.ಆರ್(ಅನು), ೧೯೮೦, ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೪೧. ದಾಸೇಗೌಡ ಜಿ.ವಿ., ೨೦೦೭, ನಮ್ಮ ಜನಪದ ನಂಬಿಕೆಗಳು, ಚೇತನ ಬುಕ್‌ಹೌಸ್, ಮೈಸೂರು

೪೨. ನಾಗೇಶ ಎಚ್.ವಿ., ೨೦೦೩, ಬುಡಕಟ್ಟು ಜನರ ನ್ಯಾಯ ತೀರ್ಮಾನಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪೩. ಪರಮಶಿವಯ್ಯ ಜಿ.ಶಂ., ೧೯೭೯, ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೪೪. ಪಾರ್ವತಮ್ಮ ಸಿ., ೨೦೦೭, ಆದಿವಾಸಿ ಸಮುದಾಯಗಳ ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೫. ಫಣಿಕ್ಕರ್ ಕೆ.ಎಂ.(ಮೂಲ), ನಾರಾಯಣಮೂರ್ತಿ ಜಿ.ವಿ.(ಅನು), ೧೯೭೫, ಭಾರತೀಯ ಇತಿಹಾಸ ಸಮೀಕ್ಷೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೪೬. ಪ್ರಭಾಕರ ಎ.ಎಸ್., ೨೦೦೦, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೭. ಪ್ರಭಾಕರ ಎ.ಎಸ್.(ಸಂ), ೨೦೦೪, ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೮. ಪ್ರಭಾಕರ ಎ.ಎಸ್.(ಸಂ), ೨೦೦೬, ಆದಿವಾಸಿ ಆಖ್ಯಾನ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ

೪೯. ಪುರುಷೋತ್ತಮ ಬಿಳಿಮಲೆ, ೧೯೯೩, ಜನಪದ ಕ್ಷೇತ್ರಕಾರ್ಯ ಆಧುನಿಕ ವಿಧಾನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೦ ಪೆರುಮಾಳ್ ಮುರುಗನ್(ಮೂಲ), ನಲ್ಲತಂಬಿ(ಅನು), ೨೦೧೬, ಅರ್ಧನಾರೀಶ್ವರ, ಲಂಕೇಶ ಪ್ರಕಾಶನ, ಬೆಂಗಳೂರು

೫೧. ಬಾಲಗೋಪಾಲ ಕೆ.(ಮೂಲ), ಶ್ರೀಮತಿ ಎಚ್.ಎಸ್.(ಅನು), ೧೯೯೮, ಪ್ರಾಚೀನ ಭಾರತದ ಚರಿತ್ರೆ: ಡಿ.ಡಿ.ಕೊಸಂಬಿಯವರ ಚಿಂತನೆಗಳು, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು

೫೨. ಬಾಬು ಶಿವಪೂಜಾರಿ, ೨೦೦೩, ಬಿಲ್ಲವರು ಒಂದು ಅಧ್ಯಯನ, ಬಿಲ್ಲವ ಜಾಗೃತಿ ಬಳಗ. ಮುಂಬೈ

೫೩. ಬೋರಲಿಂಗಯ್ಯ ಹಿ.ಚಿ., ೧೯೯೫, ಕಾಡು ಕಾಂಕ್ರೀಟು ಮತ್ತು ಜಾನಪದ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೫೪. ಬೋರಲಿಂಗಯ್ಯ ಚಿ., ೨೦೦೧, ವಿಸ್ಮೃತಿ ಮತ್ತು ಸಂಸ್ಕೃತಿ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು

೫೫. ಬೋರಲಿಂಗಯ್ಯ ಹಿ.ಚಿ., ೨೦೦೧, ವಿಸ್ಮೃತಿ ಮತ್ತು ಸಂಸ್ಕೃತಿ, ಸಿ.ವಿ.ಜಿ.ಪಬ್ಲಿಕೇಶನ್ಸ್, ಬೆಂಗಳೂರು

೫೬. ಬೈರೇಗೌಡ ಎಂ., ೨೦೦೦,ಇರುಳಿಗರ ಜಾನಪದ ಅಧ್ಯಯನ, ಸಿ.ವಿ.ಜಿ.ಪ್ರಕಾಶನ, ಬೆಂಗಳೂರು

೫೭. ಬೈರೇಗೌಡ ಎಂ.(ಸಂ), ೧೯೯೯, ಬಾಡಲೊಲ್ಲದ ಕಾಡಕುಡಿಗಳು, ಜಿಲ್ಲಾ ಗಿರಿಜನ ಅಭಿವೃದ್ಧಿ ಸಂಘ, ಕನಕಪುರ

೫೮. ಮಂಜುನಾಥ ಬೇವಿನಕಟ್ಟಿ(ಸಂ), ೨೦೦೯, ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೯ ಮಂಗಳ ಶ್ರೀಧರ್, ೨೦೦೮, ಬುಡಕಟ್ಟು ವೈದ್ಯ ಸಂಸ್ಕೃತಿ, ಮುದ್ದಣ್ಣ ಪ್ರತಿಷ್ಠಾನ, ರಾಮನಗರ

೬೦. ಮಹದೇವಯ್ಯ ಪಿ., ೨೦೦೦, ಸಾಮಾಜಿಕ ಉಪಭಾಷೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೧. ಮೈತ್ರಿ ಕೆ.ಎಂ., ೨೦೦೨, ಬುಡಕಟ್ಟು ಕುಲಕಸಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೨. ಮೈತ್ರಿ ಕೆ.ಎಂ., ೨೦೧೭, ಸೂಕ್ಷ್ಮ ಆದಿವಾಸಿಗಳು, ಕರ್ನಾಟಕ ಆದಿವಾಸಿ ರಕ್ಷಣ ಪರಿಷತ್, ಬೆಂಗಳೂರು

೬೩. ಮೈತ್ರಿ ಕೆ.ಎಂ., ೨೦೧೨, ಮರುಗ ಭಾಷೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೪. ಮೇತ್ರಿ ಕೆ.ಎಂ., ೨೦೧೭, ಸೂಕ್ಷ್ಮ ಆದಿವಾಸಿಗಳು, ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ತ್ ಬೆಂಗಳೂರು

೬೫. ಮೇಟಿ ಮಲ್ಲಿಕಾರ್ಜುನ, ೨೦೧೩, ಸಬಾಲ್ಟನ್ ಓದು, ಅರುಹು-ಕುರುಹು ಪ್ರಕಾಶನ, ಮೈಸೂರು

೬೬. ಮೊಗಳ್ಳಿ ಗಣೇಶ, ೧೯೯೬,ಮಲೆಮಾದೇಶ್ವರ ಕಾವ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೬೭. ಮೊಗಳ್ಳಿ ಗಣೇಶ, ೨೦೦೫, ಆದಿಮ, ಸಾರಂಗ ಪ್ರಕಾಶನ, ತಿಪಟೂರು

೬೮. ಮೋಹನ ಚಂದ್ರಗುತ್ತಿ, ೨೦೦೩, ಸಮಪಾಲು, ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ

೬೯. ಮೋಹನ್‌ಕೃಷ್ಣ ರೈ ಕೆ., ೨೦೦೪, ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೦. ಮೋಹನ್‌ಕೃಷ್ಣ ರೈ ಕೆ., ೨೦೧೦, ಕೆನರಾದ ವಿಭಜನೆ ಹತ್ತಿ ರಾಜಕೀಯದ ವಿಶ್ಲೇಷಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೧. ಮೋಹನ್‌ಕೃಷ್ಣ ರೈ, ೨೦೧೨, ತುಳುನಾಡು ಕನ್ನಡ ನುಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೨. ಮೋಹನ್‌ಕೃಷ್ಣ ರೈ ಕೆ., ೧೯೯೯, ತುಳು ಸಂಸ್ಕೃತಿ: ಚತುರ್ಮುಖಿ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೩. ರಂಗಸ್ವಾಮಿ ಎ., ೨೦೧೨, ಬುಡಕಟ್ಟು ಜನಪದ, ಪ್ರಸಾರಾಂಗ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಮೈಸೂರು

೭೪. ರಮೇಶ ಸ.ಚಿ.(ಸಂ), ೨೦೦೫, ಅಲೆಮಾರಿಗಳ ಸ್ಥಿತಿಗತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೫. ರಹಮತ್ ತರೀಕೆರೆ, ೧೯೯೩, ಪ್ರತಿ ಸಂಸ್ಕೃತಿ, ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ಬೆಂಗಳೂರು

೭೬. ರಹಮತ್ ತರೀಕೆರೆ, ೨೦೧೨, ನಡೆದಷ್ಟು ನಾಡು, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು

೭೭. ರಹಮತ್ ತರೀಕೆರೆ, ಕರ್ನಾಟಕ ಶಾಕ್ತಪಂಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೮. ರಾಜೇಗೌಡ ಹ.ಕ., ೨೦೦೭, ಜಾನಪದ ಶೋಧ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೯. ರಾಮಚಂದ್ರಪ್ಪ ಬರಗೂರು, ೧೯೯೪, ಸಂಸ್ಕೃತಿ ಉಪಸಂಸ್ಕೃತಿ, ಭೂಮಿ ಬಳಗ, ಮಾನಸ ಗಂಗೋತ್ರಿ, ಮೈಸೂರು

೮೦. ಬರಗೂರು ರಾಮಚಂದ್ರಪ್ಪ, ೨೦೦೧, ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು

೮೧. ರಾಮಕೃಷ್ಣ ಆರ್., ೨೦೦೭, ಕರ್ನಾಟಕ ಬುಡಕಟ್ಟುಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೮೨. ರಾಜಾರಾಮ್ ಹೆಗ್ಗಡೆ(ಸಂ), ೨೦೦೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೮೩. ರೇಣುಕಾ ಕೋಡಗುಂಟಿ(ಸಂ), ೨೦೦೯, ಸರ್ಕಾರದಲ್ಲಿ ಶವಸಂಸ್ಕಾರ, ಮಂದಾರ ಪ್ರಕಾಶನ, ಮಸ್ಕಿ

೮೪. ರೊಮಿಲಾ ಥಾಪರ್(ಮೂಲ), ಉಮೇಶ್ ಎಚ್.ಎಸ್., ಶಶಿಕುಮಾರ್ ಜೆ. ದೀಪ(ಅನು), ೨೦೧೬, ಪ್ರಾಚೀನ ಭಾರತ ಉಗಮದಿಂದ ಕ್ರಿ.ಶ.೧೩೦೦ರವರೆಗೆ, ವಿಸ್ಮಯ ಪ್ರಕಾಶನ, ಮೈಸೂರು.

೮೫. ಲಕ್ಷ್ಮೀಪತಿ ಕೋಲಾರ, ೨೦೧೬, ದಕ್ಷಿಣ ದಂಡಾದೇವಿಕ, ಕ್ರಿಯಾ ಪ್ರಕಾಶನ, ಬೆಂಗಳೂರು.

೮೬. ಲಕ್ಷ್ಮೀಪತಿ ಕೋಲಾರ, ೨೦೧೬, ಕಸಿ ಮಡಗಿದ ಕಣ್ಣು, ಶಾಹು ಪ್ರಕಾಶನ, ಮಾಲೂರು

೮೭. ಲಕ್ಷ್ಮೀಪತಿ ಕೋಲಾರ, ಸುರೇಶ ಭಟ್, ಬಾಕ್ರ ಬೈಲು, ೨೦೧೮, ಹರಪ್ಪ ಡಿ.ಎನ್.ಎ. ನುಡಿದ ಸತ್ಯ, ಓದು ಪ್ರಕಾಶನ, ಶಿವಮೊಗ್ಗ

೮೮. ವಸು ಎಂ.ವಿ.(ಸಂ), ೨೦೦೯ ಕನ್ನಡದೋಳ್ ಭಾವಿಸಿದ ಜನಪದಂ, ಚಿಂತನ ಪುಸ್ತಕ ಪ್ರಕಾಶನ, ಬೆಂಗಳೂರು

೮೯. ವಸು ಮಳಲಿ, ೨೦೧೫, ಒಡಲ ಬೆಂಕಿ ಆರದಿರಲಿ(ಕಳ್ಳುಬಳ್ಳಿ ಬರಹಗಳು), ಚಿಂತನಾ ಪುಸ್ತಕ ಪ್ರಕಾಶನ, ಬೆಂಗಳೂರು.

೯೦. ವಿಜಯ್ ಪೂಣಚ್ಚ ತಂಬಂಡ, ೨೦೦೦, ಆಧುನಿಕ ಕೊಡುಗು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೯೧. ವಿಜಯ್ ಪೂಣಚ್ಚ ತಂಬಂಡ, ೨೦೦೪, ಪಳಮೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೯೨. ವಿರೂಪಾಕ್ಷಿ ಪೂಜಾರಹಳ್ಳಿ(ಸಂ), ೨೦೦೮, ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೩. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೨ ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೪. ವೆಂಕಟೇಶ ಇದ್ವಾಂಡಿ, ೨೦೦೮ ಮಲೆಮಾದಪ್ಪನ ಮಹಾಕಾವ್ಯ ಸಾಂಸ್ಕೃತಿಕ ಮುಖಾಮುಖಿ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೫. ವೆಂಕಟೇಶ ಇಂದ್ವಾಡಿ, ೨೦೦೩, ದೇವಚಂದ್ರನ ರಾಜಾವಳಿ ಕಥೆ ಸಾಂಸ್ಕೃತಿಕ ಮುಖಾಮುಖಿ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೬. ಶಂಕರನಾರಾಯಣ ತೀ.ನಂ.(ಸಂ), ೧೯೯೮, ಕರ್ನಾಟಕ ಜನಪದ ಮಹಾಕಾವ್ಯಗಳು, ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೯೭. ಶಂಕರನಾರಾಯಣ ರಾವ್ ಎನ್.ಪಿ., ೨೦೦೦, ಪರಿವರ್ತನೆಯ ಹಾದಿಯಲ್ಲಿ ಕಿರು ಸಮುದಾಯ ಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

೯೮. ಶರ್ಮ ಆರ್.ಎಸ್.(ಮೂಲ), ಶ್ರೀನಿವಾಸ ಮೂರ್ತಿ ಜೆ. ಶೋಭಾ ಆರ್, ಗುರುದತ್ತ ಎಸ್. ರಾಮಕೃಷ್ಣ ಜಿ.(ಅನು), ೨೦೦೪, ಭಾರತದಲ್ಲಿ ಶೂದ್ರರು ನವಕರ್ನಾಟಕ ಪ್ರಕಾಶನ, ಬೆಂಗಳೂರು.

೯೯. ಶರ್ಮ ಆರ್.ಎಸ್.(ಮೂಲ), ಗುರುದತ್ತ ಎಸ್.(ಅನು), ೧೯೯೮ ಭಾರತಕ್ಕೆ ಆರ್ಯರ ಪ್ರವೇಶ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೦೦. ಶರ್ಮ ಆರ್.ಎಸ್.(ಮೂಲ), ಶಂಕರನಾರಾಯಣರಾವ್ ಎನ್.ಪಿ.(ಅನು), ಪ್ರಾಚೀನ ಭಾರತ, ನವಕರ್ನಾಟಕ ಪ್ರಕಾಶನ, ಬೆಂಗಳೂರು

೧೦೧. ಶಿವರಾಜಪ್ಪ ಎಸ್, ೨೦೧೩ ಮಾದೇಶ್ವರ ಚರಿತ್ರೆ, ಸಪ್ನ ಬುಕ್‌ಹೌಸ್,, ಬೆಂಗಳೂರು.

೧೦೨. ಶೈಲಜಾ ಹಿರೇಮಠ, ೨೦೧೩, ಮಾತೃ ಪ್ರಧಾನ ಪರಿಕಲ್ಪನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦೩. ಶೆಟ್ಟರ್ ಷ. ೨೦೦೭, ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ, "ಆರಂಭ ಕಾಲದ ದ್ರಾವಿಡ ಸಂಬಂಧದ ಚಿಂತನೆಗಳು" ಅಭಿನವ ಪ್ರಕಾಶನ, ಬೆಂಗಳೂರು.

೧೦೪. ಸದಾಶಿವಯೋಗಿ, ೧೯೭೦ ಭಾರತೀಯರಿಗೆ ಭಗವಂತರೆಷ್ಟು, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೦೫. ಸಿದ್ದಗಂಗಯ್ಯ ಕಂಬಾಳ ಬಿ. ೧೯೯೩ ಇರುಳಿಗ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.

೧೦೬. ಸಿದ್ದಲಿಂಗಯ್ಯ, ೧೯೯೭, ಗ್ರಾಮದೇವತೆಗಳು ಜಾನಪದೀಯ ಅಧ್ಯಯನ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು

೧೦೭. ಸಣ್ಣಯ್ಯ ಎಸ್.ಬಿ.(ಸಂ), ೧೯೮೮, ದೇವಚಂದ್ರ ವಿರಚಿತ ರಾಜಾವಳಿ ಕಥಾಸಾರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೧೦೮. ಹಿರೇಮಠ ಎಸ್.ಎಸ್., ೨೦೦೪, ಕಾಳಮುಖ ದರ್ಶನ, ಸಮತಾ ಪ್ರಕಾಶನ, ಹರಪನಹಳ್ಳಿ

ಇಂಗ್ಲಿಶ್ ಗ್ರಂಥಗಳು

1. Abbe Dobois, 1990, Hindu Manners Customs and Ceremonies, Oxford University Press, New Delhi

2. Breeks J., 2012, Monuments of Nilgiri District Anchives Department Library, Chenni

3. Channa S.M., 2004, Encyclopedia of Indian Tribes and Castes, Vol-8, Cosm Publication, New Delhi

4. Crober A.L, 1972, Anthropology Culcutta Oxford and IBH Publishing Culcutta.

5. David Anold Ramachandra Guha(Ed), 1995, Nature culture Imperialism Essays on The Environmental History of South India, Oxford University Press, New Delhi

6. Enthoren 1992, The Tribes and Caste of Bombay, Vol-II, Government Central Press Bombay.

7. Francis Buchanan, 1807, A journey from Madras Through the Countries of Mysore, Canara and Malabar, Vol-I & II, Karnataka Gazetteer Department, Bangalore

8. Hutton J.H., 1986, Censue of India, 1931, With Complete Survey of Trible Life and System, Gaian Publication House Delhi

9. James Birx H.(Ed), 2006, Encyclopedia of Anthropology, A Sage Reference Publication, New Delhi

10. Kiran Kumar Prasasd, 2005, In Search of An Identity Jama Jagruti Prakashana, Bangalore

11. Lohia Rammanohar, 1963, Marx, Gandhi and Socialism, Navahind Prakashan, Hydrabad

12. Nirmal Kumar Bose, 2002, Tribal Life in India, National book Trust, New Delhi

13. Nanjundaiah H.V and Ananthakrishna Iyer L.K., 1930, The Mysore Tribes and Cast, Vol.III, University of Mysore, Mysore

14. Rangachari K. and Edger Thurston, 1909, Castes and Tribes of Sourhtern India, Vol-II, Consmo Publications, Delhi

15. Ravindranath Rao Y., 2003, Tribal Tradition and Change South India, Mangalore Publications, Mangalore

16. Sachindandan, 1998, Encylopadic Profile of Indian Tribes, Vol-II, Discovery Publication, New Delhi

17. Singh K.S., 1994, People of India National Series, Vol-III, The Scheduled Tribes, Anthropological Survey of India, Oxford University Press, Delhi

18 Singh K. S. 1990 The Scheduled Tribes, People of India, Vol-III, Anthropological Survey of India, Oxford University Press, Delhi

19. Singh K.S.(Ed), 2003, People India, Karnataka, Vol.XXI, Part-2, East-West Press Priviate Limited, New Delhi

20. Srinivas M.N., 1992, Caste in Modern India, Mediapromotru Publication, Bombay

21. Srikant, Report the Commissioner for Scheduled Castes and Scheduled Tribes 1957-58, Part-1, Indian on Assit Manager Govt. press New Delhi.

22. Sukant K. Chaudhary, S.M.Patnaik, 2013, Indian tribes and the mainstream, Rawat Publication, Jaipur

23. Subba Rao M., 2013, Understindins Denotified and Nomodec tribes, Masses publication, Secundrabad

24. Vidyarthi Rai B.K., 1977, The Tribal Cultured of India, Concept publication, Delhi

ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧಗಳು

೧. ಅನ್ನಪೂರ್ಣಮ್ಮ ಸಿ.ಬಿ., ಮ್ಯಾಸಬೇಡರ ಸಾಂಸ್ಕೃತಿಕ ನಾಯಕಿಯರು: ಒಂದು ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಅಜ್ಜಯ್ಯ ಸಿ., ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಮಾಜೋ:ಆರ್ಥಿಕ ವ್ಯವಸ್ಥೆ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಇಸ್ಮಾಯಿಲ್ ಜಬೀರ್ ಬಾವಾಜಿ., ಮೌಖಿಕ ಪರಂಪರೆ ಮತ್ತು ಚರಿತ್ರೆ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಉಮೇಶ ಗುರಿಕಾರ., ಹೈದ್ರಾಬಾದ್ ಕರ್ನಾಟಕದ ಕುರುಬರ ಚಾರಿತ್ರಿಕ ಅಧ್ಯಯನ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫. ಕಡ್ಲಬಾಳ ಪನ್ನಂಗದರ., ಮೇದರ ಸಂಸ್ಕೃತಿ ಮತ್ತು ವಾಣಿಜ್ಯ ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬. ಕಲವೀರ ಮನ್ವಾಚಾರ್., ಮಾತೃದೇವತಾ ಆರಾಧನೆ: ಉಗಮ ಮತ್ತು ವಿಕಾಸ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಕುಮಾರ್ ಆರ್.ಬಿ., ಕರ್ನಾಟಕದ ಮುದ್ದೆ ಕಂಬಾರರು, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೮. ಕೃಷ್ಣಮೂರ್ತಿ ಎನ್., ಬಡಿಗ ಬುಡಕಟ್ಟು ಸಮುದಾಯ: ಒಂದು ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೯. ಕೃಷ್ಣವೇಣಿ ಆರ್., ಹುಲಿಗೆಮ್ಮ: ಜಾಪದದಲ್ಲಿ ಮಹಿಳಾ ಪ್ರತಿನಿಧೀಕರಣ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦. ಕೊಂತಮ್ ಸತೀಶ, ಬೇಡಗಂಪಣರ ಸಾಮಾಜಿಕ ಹಾಗೂ ಆರ್ಥಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ

೧೧. ಗಣಪತಿ ಕೆ.ಲಮಾಣಿ., ಲಂಬಾಣಿಗಳ ಗೋವಾ ವಲಸೆ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೨. ಗುರುಪ್ರಸಾದ್ ಸಿ.ಟಿ., ನೀಲಗಾರರು: ಒಂದು ಧಾರ್ಮಿಕ ಸಮುದಾಯದ ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೩. ಗುರುಪ್ರಸಾದ್ ಎಸ್.ಎಚ್., ವಲಸಿಗರ ನೆಲೆ ಮರಿಯಮ್ಮನಹಳ್ಳಿ ಸಂಕಥನ, ಜಾನ ಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೪. ಗೌಡರ ಸೋಮಶೇಖರಪ್ಪ., ಸಾಮಾಜಿಕ ಬದಲಾವಣೆಯಲ್ಲಿ ಸಿಳ್ಳೇಕ್ಯಾತರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೫. ಗೋವಿಂದರಾಜ ಲಿಂಗಣ್ಣ., ಕನ್ನಡ ಕಾದಂಬರಿಗಳಲ್ಲಿ ಆದಿವಾಸಿ ಸಂವೇದನೆಗಳು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೬. ಚನ್ನಮಲ್ಲಪ್ಪ ಜುಬೀರ್., ಗುಲಬರ್ಗಾ ಜಿಲ್ಲೆಯ ಬುಡಕಟ್ಟು ರಾಜಕೀಯ ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೭. ಚಲುವಾದಿ ಬಸವರಾಜ., ಸಿಕ್ಲಿಗರು: ಒಂದು ಸಾಮಾಜಿಕ ಅಧ್ಯಯನ, ಬುಡಕಟ್ಟು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೮. ಜಗದೀಶ ಕುಮಾರ., ಬೇಡ ಸಮುದಾಯದ ಮಹಿಳೆ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೯. ತಿಮ್ಮರೆಡ್ಡಿ ಎಸ್.ವೈ., ಕುಲಕಸುಬುಗಳು ಮತ್ತು ಆಧುನಿಕತೆ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦. ತಾರಾಮತಿ., ಕರ್ನಾಟಕದ ಖಾಟಿಕ ಸಮುದಾಯ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೧. ದಾದಾಪೀರ ಬಿ.ಸಿ., ಕರ್ನಾಟಕದ ಪಿಂಜಾರರು, ಜಾನಪದ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೨. ದುರುಗಪ್ಪ ಎಂ.ಕೆ., ವಿಜಯನಗರೋತ್ತರ ಕಾಲೀನ ಬೇಡ ಜನಾಂಗದಲ್ಲಾದ ಸ್ಥಿತ್ಯಂತರಗಳು: ಚಾರಿತ್ರಿಕ ಅಧ್ಯಯನ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೩. ದೇವರಕುರಿ ಓಬಯ್ಯ., ಮ್ಯಾಸಬೇಡರ ಸಾಂಸ್ಕೃತಿಕ ಆತ್ಮಕಥನ, ಜಾನಪದ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೪. ದೊಡ್ಡಮನಿ ಲೋಕರಾಜ., ಕರ್ನಾಟಕ ಸಿಂಧೊಳ್ಳು ಸಮುದಾಯ: ಸಮಾಜಶಾಸ್ತ್ರಿಯ ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೫. ನಾಗಭೂಷಣ., ಬದಲಾಗುತ್ತಿರುವ ಆಧುನಿಕ ಪರಿಸರದಲ್ಲಿ ಜಾನಪದ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೬. ನಾರಾಯಣಸ್ವಾಮಿ ಡಿ., ಕೇಳಿಕೆ: ಒಂದು ಅಧ್ಯಯನ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೭. ನಾಗರಾಜ ಹೊಸೂರಕರ್., ಮೈಲಾರಲಿಂಗನ ಆಚರಣೆ ಒಂದು ಸಾಂಸ್ಕೃತಿಕ ಅಧ್ಯಯನ, ಎಂ.ವಿ.ಸೀ.ಸ್ನಾತಕೋತ್ತರ ಕೇಂದ್ರ, ಬಿ.ಎಂ.ಶ್ರೀ.ಪ್ರತಿಷ್ಠಾನ, ಬೆಂಗಳೂರು, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೮. ನಿಂಗಪ್ಪ., ಕೊಪ್ಪಳ ಜಿಲ್ಲೆಯ ದೈವಗಳು: ಜಾನಪದೀಯ ಅಧ್ಯಯನ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೯. ಪ್ರಶಾಂತ ಎಚ್.ಡಿ., ಲಂಬಾಣಿಗಳಲ್ಲಿ ಸಾಮಾಜಿಕ ಬದಲಾವಣೆ: ಒಂದು ಸಮಾಜ ಶಾಸ್ತ್ರೀಯ ಅಧ್ಯಯನ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೦. ಪ್ರಭಾಕರ ಎ.ಎಸ್., ಕರ್ನಾಟಕದ ಡೊಂಬರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೧. ಬಂಡಯ್ಯಸ್ವಾಮಿ., ಬೀದರ ಜಿಲ್ಲೆಯ ಜಂಗಮರು: ಒಂದು ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೨. ಬಡಿಗೇರ ವಿ.ಎಸ್., ಉತ್ತರ ಕರ್ನಾಟಕದ ಗೀತಮೇಳಗಳು, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೩. ಬಸವರಾಜ ಕೆ.ಪಿ., ಸಿರಾ ಸೀಮೆಯ ಸಾಂಸ್ಕೃತಿಕ ವೀರರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೪. ಬಸವರಾಜು ಎ.ಡಿ., ಗೌಡಾಲು ಸಮುದಾಯದ ಅಧ್ಯಯನ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೫. ಬಸವರಾಜಪ್ಪ ಎನ್., ಜನಪದ ಮಹಾಕಾವ್ಯಗಳ ನಿರ್ಮಾಣ ಪ್ರತಿಭೆಯ ನೆಲೆಗಳು, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೬. ಬಸವರಾಜ ಹಿರೇಮಠ., ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ಸಾಮಾಜಿಕ ಅಧ್ಯಯನ, ಸಮಾಜ ವಿಜ್ಞಾನ ನಿಕಾಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೭. ಮುನಿರಾಜ್ ಎಂ., ವಸಾಹತು ಕರ್ನಾಟಕದ ಕಂಟೋನ್ಮೆಂಟುಗಳು ಸಾಮಾಜಿಕ, ಆರ್ಥಿಕ ಹಾಗೂ ಮಿಲಿಟರಿ ನೆಲೆಗಳ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ

೩೮. ಮಲ್ಲಿಕಾರ್ಜುನ ಯು., ಹೊಸಪೇಟೆ ತಾಲೂಕಿನ ಗರಡಿ ಸಂಪ್ರದಾಯ: ಒಂದು ಅಧ್ಯಯನ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೯. ಮಲ್ಲಿಕಾರ್ಜುನ ಕಿಚಡಿ., ಬಳ್ಳಾರಿ ಜಿಲ್ಲೆಯ ಬೇಡ ಸಮುದಾಯದ ಶಿಕ್ಷಣದ ಪ್ರಗತಿ: ಒಂದು ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೦. ಮಲ್ಲಿಕಾರ್ಜುನ ಭೀಮರಾಯ., ಕರ್ನಾಟಕ ವಿಮುಕ್ತ ಬುಡಕಟ್ಟುಗಳ ಸಾಮಾಜಿಕ ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೧. ಮಹೇಂದ್ರಕುಮಾರ ಎ.ಎಸ್., ಇರುಳಿಗ ಸಮುದಾಯದ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಅಧ್ಯಯನ(ರಾಮನಗರ ಜಿಲ್ಲೆಯನ್ನು ಪರಿಗಣಿಸಿ), ಕನ್ನಡ ವಿಶ್ವವಿದ್ಯಾಲಯ ಹಂಪಿ

೪೨. ಮಾರುತಿ ವಿ.ಎಸ್., ಗೋಸಂಗಿ ಸಮುದಾಯ: ಒಂದು ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೩. ಮುನಿರಾಜು ಎಸ್.ಬಿ., ಬುಡಕಟ್ಟು ಅಭಿವೃದ್ಧಿ: ಒಂದು ವಿಮರ್ಶಾತ್ಮಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೪. ಮೆಘಾವತ್ ಗೋವಿಂದನಾಯ್ಕ, ಲಂಬಾಣಿ ಜನಾಂಗದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಸ್ಥಿತ್ಯಂತರಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ

೪೫. ಮೊಗಳ್ಳಿ ಗಣೇಶ., ಕರ್ನಾಟಕ ಗ್ರಾಮ ದೈವಗಳ ಸಂಸ್ಕೃತಿ ವಿಕಾಸ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೬. ಮೋಹನ್ ಎಸ್., ದಕ್ಷಿಣ ಕನ್ನಡ ಜಿಲ್ಲೆಯ ಮರಾಠಿಗರ ಜಾನಪದ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೭. ಮೋಹನಕುಮಾರ್., ಬುಡಕಟ್ಟು ಸಮುದಾಯಗಳ ಸಂಘಟನೆ ಹಾಗೂ ಸಹಬಾಳ್ವೆ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೮. ಯರ್ರಪ್ಪ ಡಿ., ಅಲೆಮಾರಿ ಕುರುಬರ ಆರ್ಥಿಕ ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೯. ರಮೇಶ ಸ.ಚಿ., ದಕ್ಷಿಣ ಕರ್ನಾಟಕದ ಉಪ್ಪಾರರ ಜಾನಪದ ಅಧ್ಯಯನ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೦. ರಾಧಮ್ಮ., ಕೊರವರ ಸಮುದಾಯದ ಮಹಿಳೆ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೧. ಲಕ್ಷ್ಮೀದೇವಿ ಎಲ್., ಕೋಲಾರ ಜಿಲ್ಲೆಯ ಐತಿಹ್ಯಗಳು: ಒಂದು ಅಧ್ಯಯನ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೨. ಲೀಲಾ ಸಂಪಿಗೆ., ಜನಪದ ಮತ್ತು ಆಧುನಿಕ ಬುಡಕಟ್ಟು ಸಮುದಾಯಗಳಲ್ಲಿ ವೇಶ್ಯಾವಾಟಿಕೆ ಮತ್ತು ಸಮಸ್ಯೆಗಳು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೩. ವಿಶ್ವನಾಥ ಬದಿಕಾನ., ಕರ್ನಾಟಕ ಜಾನಪದ ಅಧ್ಯಯನದ ಮೊದಲ ಘಟ್ಟ,ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೪. ವೆಂಕನಗೌಡ., ಬಳ್ಳಾರಿ ಮತ್ತು ಆಂಧ್ರ ಗಡಿಭಾಗದ ಹಗಲು ವೇಷಗಾರರು: ಒಂದು ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೫. ವೆಂಕಟೇಶ್, ಬುಡಕಟ್ಟುಗಳ ಸಾಮಾಜಿಕ ಬದಲಾವಣೆ ಬೆಂಗಳೂರು ಗ್ರಾಮಾಂತರ ಪರಿಸರವನ್ನು ಅನುಲಕ್ಷಿಸಿ(ಇರುಳಿಗರು ಮತ್ತು ಹಕ್ಕಿಪಿಕ್ಕಿಗಳು ಕುರಿತು), ಕನ್ನಡ ವಿಶ್ವವಿದ್ಯಾಲಯ ಹಂಪಿ

೫೬. ವೆಂಕಟೇಶ ಜಿ., ಗುಡ್ಡದ ಮಲ್ಲಯ್ಯ ಮೀನಗುಂದಿ ಮಲ್ಲಯ್ಯ ಆಚರಣೆ ಒಂದು ಜಾನಪದೀಯ ಅಧ್ಯಯನ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೭. ವೆಂಕಟೇಶ., ಬುಡಕಟ್ಟುಗಳ ಸಾಮಾಜಿಕ ಬದಲಾವಣೆ ಬೆಂಗಳೂರು ಗ್ರಾಮಾಂತರ ಪರಿಸರವನ್ನು ಅನುಲಕ್ಷಿಸಿ (ಇರುಳಿಗರು ಮತ್ತು ಹಕ್ಕಿಪಿಕ್ಕಿಗಳನ್ನು ಕುರಿತು), ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೮. ವಿಜಯಲಕ್ಷ್ಮೀ., ಹಾಲಕ್ಕಿ ಒಕ್ಕಲಿಗ ಮಹಿಳೆ, ಬುಡಕಟ್ಟು ಅಧ್ಯಯನ ವಿಭಾಗ, ಕವಿಹಂ.

೫೯. ವಿಮಲ ಅಮಲಪ್ಪ., ಕಾಡುಗೊಲ್ಲರ ಆರ್ಥಿಕ ಸ್ಥಿತಿಗತಿಗಳು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೦. ವಿರೂಪಾಕ್ಷಿ, ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು: ಒಂದು ಚಾರಿತ್ರಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೧. ವಿರೂಪಾಕ್ಷಿ., ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು: ಒಂದು ಅಧ್ಯಯನ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೨. ವೀರೇಂದ್ರ ಎಂ., ದೀವರ ಜನಾಂಗದ ಸಾಮಾಜಿಕ ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳು, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೩. ಸಣ್ಣ ಓಬಯ್ಯ ಕೆ.ಎಸ್., ಮ್ಯಾಸ ಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೪. ಸತೀಶ ಪಿ., ಮಲೆಯ ಮಾದೇಶ್ವರ ಕಾವ್ಯ: ಒಂದು ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೫. ಸುಚಿತಾನಂದ ಕೆ.ಮಲ್ಕಾಪೂರೆ., ಬೀದರ್ ಜಿಲ್ಲೆಯ ಬುಡಕಟ್ಟು: ಒಂದು ಅರ್ಥ ಶಾಸ್ತ್ರೀಯ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೬. ಸುನಂದ ಎಂ., ನಿಷೇದಗಳು ಮತ್ತು ಲಿಂಗ ವ್ಯವಸ್ಥೆ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೭. ಸುಮಂಗಲಾ ಅತ್ತಿಗೇರಿ., ಕೃಷಿ ಜಾನಪದ ಮತ್ತು ಮಹಿಳೆ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೮. ಸುಜಾತಾ ಅಕ್ಕಿ., ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೯. ಸುಧಾಕರ ಬಿ.ಎಸ್., ಬಳ್ಳಾರಿ ಜಿಲ್ಲೆಯ ಜಾನಪದ ವೈದ್ಯ: ಒಂದು ವೈಜ್ಞಾನಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೦. ಸುಧೀರ ಡಿ.ಪುಲೆ., ಗುಲಬರ್ಗಾ ನಗರದ ಅಂತರ್ಜಾತಿ ವಿವಾಹಿತರು ಒಂದು ಸಮಾಜ ಶಾಸ್ತ್ರೀಯ ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೧. ಸುದರ್ಶನಕುಮಾರ ಎಂ., ಕರ್ನಾಟಕದ ಮೂಲನಿವಾಸಿ ಬುಡಕಟ್ಟು ಸಮುದಾಯದ ಪರಿಸರ ಮತ್ತು ಅಭಿವೃದ್ಧಿ: ಅರ್ಥಶಾಸ್ತ್ರೀಯ ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೨. ಸೋಮಶೇಖರ., ಸಿದ್ಧಿಯರ ಸಾಮಾಜಿಕ ಸ್ಥಿಂತರಗಳು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೩. ಶ್ರೀನಿವಾಸ ಎಂ.ಸಿ., ಗಿರಿಜನ ಉಪಯೋಗದಡಿಯಲ್ಲಿ ಬಳ್ಳಾರಿ ಜಿಲ್ಲೆಯ ಬುಡಕಟ್ಟುಗಳು ಅಭಿವೃದ್ಧಿ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೪. ಶ್ರೀನಿವಾಸಚಾರಿ ಬಿ., ಪಾಂಚಾಳ ಜಾನಪದ, ಜಾನಪದ ಅಧ್ಯಯನ ವಿಭಾಗ, ಕವಿಹಂ.

೭೫. ಶಶಿಕಲಾ ಹೂಗಾರ., ಕರ್ನಾಟಕದ ತೊಗಲುಗೊಂಬೆ ಚಿತ್ರಕಲೆ, ಲಲಿತಕಲಾ ನಿಕಾಯ ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೬. ಶಿವಪ್ಪ ಬಸಪ್ಪ., ಮಹಿಳಾ ಆರೋಗ್ಯ ಯೋಜನೆಗಳು, ಕಾರ್ಯಗತಗಳು, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೭. ಶೀವಲೀಲಾ ಕೆ.ಲೋಕೇಶ್., ಕಮಲಾಪುರ ಒಂದು ಸಾಂಸ್ಕೃತಿಕ ಅಧ್ಯಯನ, ಶಾಸನ ಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೮. ಹಂದ್ರಾಳ ಮಾರ್ಕಂಡೇಯ., ಬಳ್ಳಾರಿ ಜಿಲ್ಲಾ ಗಾಣಿಗರು: ಒಂದು ಅಧ್ಯಯನ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೯. ಹರಿಜನ ಮಲ್ಲಿಕಾರ್ಜುನ., ಚೇಳಗುರಿಕೆ ಎರ್ರಿತಾತ ಸಾಂಸ್ಕೃತಿಕ ಸಂಕಥನ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೮೦. ಹೇಮಲತಾ ವಡ್ಡೆ., ಬೀದರ ಜಿಲ್ಲೆಯ ಟೋಕ್ರಿಕೋಳಿ ಬುಡಕಟ್ಟು: ಒಂದು ಸಾಂಸ್ಕೃತಿಕ ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿಶ್ವಕೋಶಗಳು

೧. ಅರವಿಂದ ಮಾಲಗತ್ತಿ(ಸಂ), ೨೦೦೫, ಕನ್ನಡ ವಿಷಯ ವಿಶ್ವಕೋಶ, ಸಂ-೧೨, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೨. ರಾಮಚಂದ್ರಗೌಡ ಹಿ.ಶಿ.(ಸಂ), ೨೦೦೭, ಕನ್ನಡ ವಿಷಯ ವಿಶ್ವಕೋಶ, ಸಂ.೧ ಮತ್ತು ೨, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩. ವಿಜಯ ಪೂಣಚ್ಚ ತಂಬಂಡ(ಸಂ), ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ–೪, ಚರಿತ್ರೆ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಪುಟಗಳು

೧. ಚಂದ್ರಶೇಖರ್ ಎಸ್., ಸುರೇಂದ್ರರಾವ್ ಬಿ.(ಪ್ರ.ಸಂ.), ೨೦೧೬, ಕರ್ನಾಟಕ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಸಂಪುಟಗಳು ೧–೧೨, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು

೨. ದಿವಾಕರ್ ಆರ್.ಆರ್., ೨೦೦೬, ಕರ್ನಾಟಕ ಪರಂಪರೆ ಸಂಪುಟಗಳು ೧ ಮತ್ತು ೨, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು

೩. ದೇವಿಪ್ರಸಾದ್ ಚಟ್ಟೋಪಾಧ್ಯಾಯ(ಮುಲ), ಮುರುಳಿ ಕೃಷ್ಣ ಮ.ಶ್ರೀ.(ಅನು), ಲೋಕತತ್ವ ಶಾಸ್ತ್ರ ಪ್ರವೇಶಿಕೆ, ೧–೮, ಸಂಪುಟಗಳು

೪. ನರಸಿಂಹಮೂರ್ತಿ ಎ.ವಿ.(ಪ್ರ.ಸಂ.), ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ, ಸಂಪುಟಗಳು ೧–೨೫, ಭಾರತೀಯ ವಿದ್ಯಾಭವನ, ಬೆಂಗಳೂರು

೫. ನಾಗೇಗೌಡ ಎಚ್.ಎಲ್., ೧೯೯೮, ಪ್ರವಾಸಿ ಕಂಡ ಇಂಡಿಯಾ ಸಂಪುಟ ೮–೯, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೬. ಬರಗೂರು ರಾಮಚಂದ್ರಪ್ಪ(ಪ್ರ.ಸಂ.), ಉಪಸಂಸ್ಕೃತಿ ಅಧ್ಯಯನ ಸಂಪುಟ ೧ ರಿಂದ ೩೭, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೭. ರಾಜಶೇಖರ ಪಿ.ಕೆ., ೨೦೦೬, ಜಾನಪದ ಕಾವ್ಯ(ಮಲೇಮಾದೇಶ್ವರ), ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು

೮. ವಿಜಯ್ ಪೂಣಚ್ಚ ತಂಬಂಡ(ಪ್ರ.ಸಂ.), ೨೦೧೦, ಕನ್ನಡ ವಿಶ್ವವಿದ್ಯಾಲಯ ಚರಿತ್ರೆ ಸಂಪುಟ ೧ರಿಂದ ೮ ಸಂಪುಟಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧. ಷೇಕ್ ಅಲಿ ಬಿ.(ಪ್ರ.ಸಂ.), ೧೯೯೭, ಕರ್ನಾಟಕ ಚರಿತ್ರೆ ಸಂಪುಟಗಳು ೧ ರಿಂದ ೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಿಯತಕಾಲಿಕೆಗಳು

೧. ಇತಿಹಾಸ ದರ್ಶನ(ವಾರ್ಷಿಕ), ಕರ್ನಾಟಕ ಇತಿಹಾಸ ಅಕಾಡೆಮಿ(ರಿ), ಬೆಂಗಳೂರು.

೨. ಪ್ರಭುದ್ಧ ಕರ್ನಾಟಕ(ತ್ರೈಮಾಸಿಕ), ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು.

೩. ಚರಿತ್ರೆ ಅಧ್ಯಯನ(ಅರ್ಧವಾರ್ಷಿಕ), ಕ.ವಿ.ವಿ. ಪ್ರಸಾರಾಂಗ, ಕ.ವಿ.ವಿ. ಹಂಪಿ.

೪. ಜಾನಪದ ಜಗತ್ತು(ತ್ರೈಮಾಸಿಕ), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.

೫. ಜಾನಪದ ಗಂಗೋತ್ರಿ(ತ್ರೈಮಾಸಿಕ), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.

೬. ಪ್ರಯತ್ನ, ಬುಡಕಟ್ಟು ಜನರ(ದ್ವೈಮಾಸಿಕ), ಕೊಡಗು ಗ್ರಾಮೀಣ ಅಭಿವೃದ್ಧಿ ಸಂಘ, ಕೊಡಗು(ಖಾಸಗಿ ಪ್ರಸಾರಕ್ಕಾಗಿ ಮಾತ್ರ).

೭. ಲೋಕ ಜಾನಪದ(ತ್ರೈಮಾಸಿಕ) ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು.

೮. ಸಾಧನೆ(ತ್ರೈಮಾಸಿಕ), ಕನ್ನಡ ಅಧ್ಯಯನ ಸಂಸ್ಥೆ, ಬೆಂಗಳೂರು ವಿ.ವಿ., ಬೆಂಗಳೂರು.

೯. ಹಂಬಲ, ಕಾಡುಕುರುಬ ಬುಡಕಟ್ಟು ಜನರ ಮಾಸಪತ್ರಿಕೆ, ಶಿಕ್ಷಣದ ಮುಖೇನ ಪ್ರಗತಿ(ಡೀಡ್) ಹುಣಸೂರು(ಖಾಸಗಿ ಪ್ರಸಾರಕ್ಕಾಗಿ ಮಾತ್ರ).

೧೦. ಹೊಸತು(ಮಾಸಿಕ), ನವಕರ್ನಾಟಕ ಪಬ್ಲಿಕೇಶನ್, ಬೆಂಗಳೂರು.

ದಿನಪತ್ರಿಕೆಗಳು

೧. ಆಂದೋಲನ

೨. ಉದಯವಾಣಿ

೩. ಡೆಕ್ಕನ್ ಹೆರಾಲ್ಡ್

೪. ದಿ ಟೈಮ್ಸ್ ಆಫ್ ಇಂಡಿಯಾ

೫. ನೆಲದ ಸಿರಿ

೬. ಪ್ರಜಾವಾಣಿ

೭. ಮೈಸೂರು ಮಿತ್ರ

೮. ವಿಜಯ ಕರ್ನಾಟಕ

೯. ವಿಜಯವಾಣಿ

೧೦. ಸಂಯುಕ್ತ ಕರ್ನಾಟಕ

ವಕ್ತೃವಿವರಗಳು

ರಾಮನಗರ ತಾಲ್ಲೂಕು

ಕ್ರಸಂ.	ಹೆಸರು	ವಯಸ್ಸು	ಲಿಂಗ	ಊರು
೧.	ಗುಂಡಯ್ಯ	೬೫	ಗಂಡು	ಕೂನಮುದ್ದನಹಳ್ಳಿ.
೨.	ಅಂದಾನಿ	೩೦	ಗಂಡು	ಗೊಲ್ಲರದೊಡ್ಡಿ.
೩.	ಬೈರಯ್ಯ	೩೭	ಗಂಡು	ಗೊಲ್ಲರದೊಡ್ಡಿ.
೪.	ಸಣ್ಣಮ್ಮ	೫೦	ಹೆಣ್ಣು	ಗೊಲ್ಲರದೊಡ್ಡಿ
೫.	ಹಲಗಮ್ಮ	೪೭	ಹೆಣ್ಣು	ಗೊಲ್ಲರದೊಡ್ಡಿ
೬.	ಮಾರಕ್ಕ	೭೫	ಹೆಣ್ಣು	ಚಾಮುಂಡಿಪುರ
೭.	ದುರ್ಗಯ್ಯ	೩೮	ಗಂಡು	ದಾಸರಹಳ್ಳಿ
೮.	ಕಾಳಯ್ಯ	೭೮	ಗಂಡು	ಬಸವನಹಳ್ಳಿ
೯.	ಚಿಕ್ಕಣ್ಣ	೬೯	ಗಂಡು	ಬಸವಲಿಂಗನದೊಡ್ಡಿ
೧೦.	ಅಟ್ಟಬರಿಯಯ್ಯ	೭೨	ಗಂಡು	ಮಟಗಯ್ಯನ ದೊಡ್ಡಿ
೧೧.	ಕಣಿಮಾರಯ್ಯ	೫೯	ಗಂಡು	ರಾಮನರಸಿಂಹರಾಯದೊಡ್ಡಿ
೧೨.	ಗೆಜ್ಜಯ್ಯ	೭೧	ಗಂಡು	ವಡೇರಹಳ್ಳಿ
೧೩.	ಹುಲೂರಯ್ಯ	೭೦	ಗಂಡು	ವಡೇರಹಳ್ಳಿ
೧೪.	ಕೃಷ್ಣಮೂರ್ತಿ	೪೩	ಗಂಡು	ವಡ್ಡರಹಳ್ಳಿ(ಚನ್ನಿಗನದೊಡ್ಡಿ)
೧೫.	ವೆಂಕಟಪ್ಪ	೬೩	ಗಂಡು	ವಡ್ಡರಹಳ್ಳಿ(ಚನ್ನಿಗನದೊಡ್ಡಿ)
೧೬.	ಮಾರಪ್ಪ	೭೯	ಗಂಡು	ಬಸವನಪುರ

ಕ್ರ.ಸಂ.	ಹೆಸರು	ವಯಸ್ಸು	ಲಿಂಗ	ಊರು
೧೭.	ಆನಂದ	೨೭	ಗಂಡು	ಬಸವನಪುರ
೧೮.	ಲಕ್ಷ್ಮಿ	೪೩	ಹೆಣ್ಣು	ಪಾದರಹಳ್ಳಿ
೧೯.	ವರಲಕ್ಷ್ಮಿ	೩೫	ಹೆಣ್ಣು	ಬಸವನಪುರ
೨೦.	ಕೃಷ್ಣಯ್ಯ	೪೯	ಗಂಡು	ರಾಮನಗರ
೨೧.	ಮಾದೇವಮ್ಮ	೩೫	ಹೆಣ್ಣು	ರಾಮನಗರ
೨೨.	ನಂಜಮ್ಮ	೬೦	ಹೆಣ್ಣು	ರಾಮನಗರ
೨೩.	ಪಾರ್ವತಿ	೪೩	ಹೆಣ್ಣು	ಪಾದರಹಳ್ಳಿ
೨೪.	ಕೆಂಪಮ್ಮ	೭೬	ಹೆಣ್ಣು	ಪಾದರಹಳ್ಳಿ
೨೫.	ಗುಡ್ಡಿ	೬೦	ಹೆಣ್ಣು	ಪಾದರಹಳ್ಳಿ
೨೬.	ಚಿಕ್ಕಹಲಗಯ್ಯ	೪೩	ಗಂಡು	ಬಸವನಪುರ
೨೭.	ಧರ್ಮಯ್ಯ	೬೦	ಗಂಡು	ಬಸವನಪುರ
೨೮.	ಚಿಣ್ಣಯ್ಯ	೭೯	ಗಂಡು	ಬಸವನಪುರ
೨೯.	ಲೋಕಿ	೩೮	ಗಂಡು	ಬಸವನಪುರ
೩೦.	ಪುಟ್ಟಮಾದಯ್ಯ	೫೪	ಗಂಡು	ಕೂನಮುದ್ದನಹಳ್ಳಿ
೩೧.	ಅಂದಾನಯ್ಯ	೬೦	ಗಂಡು	ಕೂನಮುದ್ದನಹಳ್ಳಿ
೩೨.	ಶಿವರಾಜು	೬೩	ಗಂಡು	ಕೂನಮುದ್ದನಹಳ್ಳಿ
೩೩.	ಕೆಂಪರಾಜು	೫೯	ಗಂಡು	ಕೂನಮುದ್ದನಹಳ್ಳಿ
೩೪.	ನಿಂಗಯ್ಯ	೬೦	ಗಂಡು	ನೆಲಮಲೆ
೩೫.	ಹಲಗಯ್ಯ	೭೦	ಗಂಡು	ನೆಲಮಲೆ
೩೬.	ಮಾರಕ್ಕ	೬೫	ಹೆಣ್ಣು	ಬಸವನಪುರ
೩೭.	ಹಲಗಮ್ಮ	೬೫	ಹೆಣ್ಣು	ಬಸವನಪುರ
೩೮.	ದೊಡ್ಡಯ್ಯ	೭೦	ಗಂಡು	ಚನ್ನಿಗನದೊಡ್ಡಿ
೩೯.	ಪಾರ್ವತಿ	೪೫	ಹೆಣ್ಣು	ಚನ್ನಿಗನದೊಡ್ಡಿ

ಕ್ರ.ಸಂ.	ಹೆಸರು	ವಯಸ್ಸು	ಲಿಂಗ	ಊರು
ಚನ್ನಪಟ್ಟಣ ತಾಲ್ಲೂಕು				
೧.	ನಿಂಗಯ್ಯ	೮೩	ಗಂಡು	ಇರುಳಿಗರ ಕಾಲೋನಿ (ಗಂಗವಾಡಿ)
೨.	ಮದ್ದುರಯ್ಯ	೮೪	ಗಂಡು	ಇರುಳಿಗಂ ಕಾಲೋನಿ (ಗಂಗವಾಡಿ)
೩.	ಮುನಿಯಪ್ಪ	೭೩	ಗಂಡು	ಇರುಳಿಗರ ಕಾಲೋನಿ (ಗಂಗವಾಡಿ)
೪.	ದೊಡ್ಡಮರಿಯಯ್ಯ	೮೯	ಗಂಡು	ಇರುಳಿಗರ ಕಾಲೋನಿ (ಗಂಗವಾಡಿ)
೫.	ಹುಲ್ಲೂರಮ್ಮ	೮೩	ಹೆಣ್ಣು	ಇರುಳಿಗರ ಕಾಲೋನಿ (ಗಂಗವಾಡಿ)
೬.	ಮಾದಮ್ಮ	೬೦	ಹೆಣ್ಣು	ಇರುಳಿಗರಕಾಲೋನಿ (ಗಂಗವಾಡಿ)
೭.	ನಂಜಯ್ಯ	೬೩	ಗಂಡು	ಇರುಳಿಗರ ಕಾಲೋನಿ (ಗಂಗವಾಡಿ)
೮.	ಬರಿಯಯ್ಯ	೭೯	ಗಂಡು	ಇರುಳಿಗರ ಕಾಲೋನಿ (ಗಂಗವಾಡಿ)
೯.	ಮಾದೇವಮ್ಮ	೬೯	ಹೆಣ್ಣು	ಇರುಳಿಗರ ಕಾಲೋನಿ (ಗಂಗವಾಡಿ)
೧೦.	ನಂಜಮ್ಮ	೮೦	ಹೆಣ್ಣು	ಇರುಳಿಗರ ಕಾಲೋನಿ (ಗಂಗವಾಡಿ)
೧೧.	ಬರಗಮ್ಮ	೪೯	ಹೆಣ್ಣು	ಇರುಳಿಗರಕಾಲೋನಿ (ಗಂಗವಾಡಿ)
೧೨.	ಮನಿಯಯ್ಯ	೮೦	ಗಂಡು	ಇರುಳಿಗರಕಾಲೋನಿ (ಗಂಗವಾಡಿ)

ಕ್ರಸಂ.	ಹೆಸರು	ವಯಸ್ಸು	ಲಿಂಗ	ಊರು
ಮಾಗಡಿ ತಾಲ್ಲೂಕು				
೦೧.	ಅಟ್ಟಬರಯ್ಯ	೬೨	ಗಂಡು	ಜೋಡುಗಟ್ಟೆ
೦೨.	ಚಿಕ್ಕಬರಯ್ಯ	೭೫	ಗಂಡು	ಜೋಡುಗಟ್ಟೆ
೦೩.	ಚಿನ್ನಯಳಗಮ್ಮ	೭೦	ಹೆಣ್ಣು	ಜೋಡುಗಟ್ಟೆ
೦೪.	ಬೈರಮ್ಮ	೫೦	ಹೆಣ್ಣು	ಜೋಡುಗಟ್ಟೆ
೦೫.	ಮಾಸ್ತಮ್ಮ	೬೭	ಹೆಣ್ಣು	ಮತ್ತ
೦೬.	ಮಾರಕ್ಕ	೬೯	ಹೆಣ್ಣು	ಮಾರೇಗೌಡನದೊಡ್ಡಿ
೦೭.	ಮುನಿಯಪ್ಪ	೪೫	ಗಂಡು	ಜೇನಕಲ್ ಪಾಳ್ಯ
೦೮.	ಮುನಿಯ	೩೨	ಗಂಡು	ಜೋಡುಗಟ್ಟೆ
೦೯.	ನವಣಯ್ಯ	೬೦	ಗಂಡು	ಸೊನ್ನೆಹಳ್ಳಿ
೧೦.	ದೊಡ್ಡ	೩೦	ಗಂಡು	ರಾಮಕಲ್‌ಪಾಳ್ಯ
೧೧.	ಮಾರಕ್ಕ	೪೨	ಹೆಣ್ಣು	ರಾಮಕಲ್‌ಪಾಳ್ಯ
೧೨.	ಅಂದಾನಿ	೪೯	ಗಂಡು	ರಾಮಕಲ್‌ಪಾಳ್ಯ
೧೩.	ನಿಂಗಾ	೩೨	ಗಂಡು	ರಾಮಕಲ್‌ಪಾಳ್ಯ
೧೪.	ಪಾಮಯ್ಯ	೫೫	ಗಂಡು	ಏಳಗಳ್ಳಿ ಕಾಲೋನಿ
೧೫.	ಕೊರಗಯ್ಯ	೭೫	ಗಂಡು	ಏಳಗಳ್ಳಿ ಕಾಲೋನಿ
೧೬.	ಚಿಕ್ಕ ಮಾದಯ್ಯ	೬೫	ಗಂಡು	ಏಳಗಳ್ಳಿ ಕಾಲೋನಿ
೧೭.	ದೊಡ್ಡ ಮಾದಯ್ಯ	೭೯	ಗಂಡು	ಏಳಗಳ್ಳಿ ಕಾಲೋನಿ
೧೮.	ಅಪ್ಪಯ್ಯ	೬೫	ಗಂಡು	ಏಳಗಳ್ಳಿ ಕಾಲೋನಿ
೧೯.	ಸಾಕವ್ವ	೬೫	ಹೆಣ್ಣು	ಏಳಗಳ್ಳಿ ಕಾಲೋನಿ
೨೦.	ಕೆಂಪಮ್ಮ	೫೫	ಹೆಣ್ಣು	ಏಳಗಳ್ಳಿ ಕಾಲೋನಿ
ಕನಕಪುರ ತಾಲ್ಲೂಕು				
೦೧.	ಮಾರಯ್ಯ	೬೯	ಗಂಡು	ಉರುಗನದೊಡ್ಡಿ

ಕ್ರ.ಸಂ.	ಹೆಸರು	ವಯಸ್ಸು	ಲಿಂಗ	ಊರು
೦೨.	ಹೊನ್ನಮ್ಮ	೭೮	ಹೆಣ್ಣು	ಉರುಗನದೊಡ್ಡಿ
೦೩.	ಮಾರಕ್ಕ	೭೦	ಹೆಣ್ಣು	ಉರುಗನದೊಡ್ಡಿ
೦೪.	ಗುಂಡಯ್ಯ	೭೯	ಗಂಡು	ಗುರಿಕಾರದೊಡ್ಡಿ
೦೫.	ದುರ್ಗಯ್ಯ	೬೮	ಗಂಡು	ಅಣಕಡಬೂರು
೦೬.	ಜವನಯ್ಯ	೬೯	ಗಂಡು	ಅಣಕಡಬೂರು
೦೭.	ಚಿಕ್ಕಲಗಮ್ಮ	೭೦	ಹೆಣ್ಣು	ಕೂತಗಾನಹಳ್ಳಿ
೦೮.	ಚಿಕ್ಕೋಳಮ್ಮ	೭೭	ಹೆಣ್ಣು	ಕೂತಗಾನಹಳ್ಳಿ
೦೯.	ಭಂಗಯ್ಯ	೬೯	ಗಂಡು	ಕೂತಗಾನಹಳ್ಳಿ
೧೦.	ಶಿವನಮ್ಮ	೭೩	ಹೆಣ್ಣು	ಗುರಿಕಾರದೊಡ್ಡಿ
೧೧.	ಲಕ್ಕಮ್ಮ	೬೬	ಹೆಣ್ಣು	ಗುರಿಕಾರದೊಡ್ಡಿ
೧೨.	ಈರಮ್ಮ	೬೯	ಹೆಣ್ಣು	ಚಾಮುಂಡಿಪುರ
೧೩.	ಕರಗಯ್ಯ	೭೦	ಗಂಡು	ಚಾಮುಂಡಿಪುರ
೧೪.	ತಿಮ್ಮಮ್ಮ	೬೫	ಹೆಣ್ಣು	ಚಾಮುಂಡಿಪುರ
೧೫.	ಕುಕ್ಕಯ್ಯ	೬೮	ಗಂಡು	ತಿಮ್ಮೇಗೌಡನದೊಡ್ಡಿ
೧೬.	ಕೃಷ್ಣ	೬೩	ಗಂಡು	ತಿಮ್ಮೇಗೌಡನದೊಡ್ಡಿ
೧೭.	ಗೌರಮ್ಮ	೬೯	ಹೆಣ್ಣು	ನೆಹರುದೊಡ್ಡಿ
೧೮.	ಚಾಮಯ್ಯ	೭೯	ಗಂಡು	ನೆಹರುದೊಡ್ಡಿ
೧೯.	ಬಸಮ್ಮ	೭೦	ಹೆಣ್ಣು	ನೆಹರುದೊಡ್ಡಿ
೨೦.	ಕೆಂಪಮ್ಮ	೬೩	ಹೆಣ್ಣು	ಬುಂಡಂಗಯ್ಯನದೊಡ್ಡಿ
೨೧.	ಬೈರಯ್ಯ	೭೫	ಗಂಡು	ಬುಂಡಂಗಯ್ಯನದೊಡ್ಡಿ
೨೨.	ದ್ಯಾವಲಿಂಗಯ್ಯ	೮೦	ಗಂಡು	ಬುಂಡಂಗಯ್ಯನದೊಡ್ಡಿ
೨೩.	ಕೆಂಪಯ್ಯ	೬೮	ಗಂಡು	ಮಡಿವಾಳ
೨೪.	ಬೈರಲಿಂಗಯ್ಯ	೬೭	ಗಂಡು	ಮಡಿವಾಳ

ಕ್ರಸಂ.	ಹೆಸರು	ವಯಸ್ಸು	ಲಿಂಗ	ಊರು
೨೫.	ಶಿವನಾಂಕರಯ್ಯ	೬೯	ಗಂಡು	ಮಡಿವಾಳ
೨೬.	ಮದ್ದೂರಮ್ಮ	೭೦	ಹೆಣ್ಣು	ಮಡಿವಾಳ
೨೭.	ಶಿವಮಾದಮ್ಮ	೬೬	ಹೆಣ್ಣು	ಮಡಿವಾಳ
೨೮.	ಬೈರಯ್ಯ	೭೧	ಗಂಡು	ಮಡಿವಾಳ
೨೯.	ಮಾರಕ್ಕ	೭೩	ಹೆಣ್ಣು	ಮಾರಣ್ಣನದೊಡ್ಡಿ
೩೦.	ಬೋಳಯ್ಯ	೮೧	ಗಂಡು	ಮುತ್ತರಾಯನದೊಡ್ಡಿ
೩೧.	ಮುತ್ತಯ್ಯ	೭೯	ಗಂಡು	ಮುತ್ತರಾಯನದೊಡ್ಡಿ
೩೨.	ಮುನಿಯಪ್ಪ	೮೦	ಗಂಡು	ಮುತ್ತರಾಯನದೊಡ್ಡಿ
೩೩.	ನವಣಯ್ಯ	೮೫	ಗಂಡು	ಇರುಳಿಗರ ಕಾಲೋನಿ
೩೪.	ದೊಡ್ಡಯ್ಯ	೮೯	ಗಂಡು	ಗಿಣಿಗಿದೊಡ್ಡಿ
೩೫.	ಮಾರಣ್ಣ	೭೮	ಗಂಡು	ಜಟ್ಟಿದೊಡ್ಡಿ
೩೬.	ಚಿಕ್ಕೈದಯ್ಯ	೯೦	ಗಂಡು	ಹೊಂಗಾಣಿದೊಡ್ಡಿ
೩೭.	ಕೆಂಪಮ್ಮ	೪೫	ಹೆಣ್ಣು	ಹೊಸಕೋಟೆ
೩೮.	ಮಾದಯ್ಯ	೩೨	ಗಂಡು	ಹೊಸಕೋಟೆ
೩೯.	ಮಾಸ್ತಮ್ಮ	೪೩	ಹೆಣ್ಣು	ಹೊಸಕೋಟೆ
೪೦.	ಹಲಗಯ್ಯ	೫೩	ಗಂಡು	ಹೊಸಕೋಟೆ
೪೧.	ಶಿವಣ್ಣ	೬೭	ಗಂಡು	ಹೊಸಕೋಟೆ
ಬೆಂಗಳೂರು ನಗರ ಜಿಲ್ಲೆ				
೦೧.	ಕಂಚಣ್ಣ	೬೩	ಗಂಡು	ದಿಣ್ಣೆ ಪಾಳ್ಯ
೦೨.	ಭದ್ರಯ್ಯ	೮೩	ಗಂಡು	ದಿಣ್ಣೆ ಪಾಳ್ಯ
೦೩.	ಮಾದಯ್ಯ	೬೦	ಗಂಡು	ದಿಣ್ಣೆ ಪಾಳ್ಯ
೦೪.	ಕೆಂಪಮ್ಮ	೬೮	ಹೆಣ್ಣು	ದಿಣ್ಣೆ ಪಾಳ್ಯ
೦೫.	ಸಾಕಮ್ಮ	೭೨	ಹೆಣ್ಣು	ದಿಣ್ಣೆ ಪಾಳ್ಯ

ಕ್ರ.ಸಂ.	ಹೆಸರು	ವಯಸ್ಸು	ಲಿಂಗ	ಊರು
೦೬.	ಹಲಗಪ್ಪ	೬೦	ಗಂಡು	ಸೊಳ್ಳೆಪುರ
೦೭.	ಮಾದೇವಮ್ಮ	೫೭	ಹೆಣ್ಣು	ಸೊಳ್ಳೆಪುರ
೦೮.	ಬಸವಪ್ಪ	೭೦	ಗಂಡು	ಸೊಳ್ಳೆಪುರ
೦೯.	ಚಿಕ್ಕಹಲಗ	೨೮	ಗಂಡು	ಅಣ್ಣಯ್ಯಪ್ಪನದೊಡ್ಡಿ
೧೦.	ಶಿವಣ್ಣ	೩೯	ಗಂಡು	ಅಣ್ಣಯ್ಯಪ್ಪನದೊಡ್ಡಿ
೧೧.	ದೊಡ್ಡಹಲಗ	೩೪	ಗಂಡು	ಅಣ್ಣಯ್ಯಪ್ಪನದೊಡ್ಡಿ
೧೨.	ಬರೆಯಪ್ಪ	೬೮	ಗಂಡು	ಅಣ್ಣಯ್ಯಪ್ಪನದೊಡ್ಡಿ
೧೩.	ಎಳೆಯಪ್ಪ	೭೫	ಗಂಡು	ಅಣ್ಣಯ್ಯಪ್ಪನದೊಡ್ಡಿ
೧೪.	ರಾಜಪ್ಪ	೪೩	ಗಂಡು	ಹಕ್ಕಿಪಿಕ್ಕಿ ಕಾಲೋನಿ
೧೫.	ಹೊಟ್ಟಪ್ಪ	೪೨	ಗಂಡು	ಹಕ್ಕಿಪಿಕ್ಕಿ ಕಾಲೋನಿ
೧೬.	ಮಾದಣ್ಣ	೪೦	ಗಂಡು	ಹಕ್ಕಿಪಿಕ್ಕಿ ಕಾಲೋನಿ
ತುಮಕೂರು ಜಿಲ್ಲೆ				
೦೧.	ದೊಡ್ಡಗೌಡ	೭೦	ಗಂಡು	ಹಕ್ಕಿಮರಿ ಪಾಳ್ಯ
೦೨.	ಚಿಕ್ಕಗೌಡ	೬೦	ಗಂಡು	ಹಕ್ಕಿಮರಿ ಪಾಳ್ಯ
೦೩.	ಮಾದೇಗೌಡ	೭೨	ಗಂಡು	ಕರಿಕಲ್ ಪಾಳ್ಯ
೦೪.	ಪಾಮಯ್ಯ	೭೫	ಗಂಡು	ಜೇನ್‌ಕಲ್ ಪಾಳ್ಯ
೦೫.	ನಂಜಯ್ಯ	೫೦	ಗಂಡು	ಜೇನ್‌ಕಲ್ ಪಾಳ್ಯ
೦೬.	ನಾಗರಾಜು	೪೫	ಗಂಡು	ಜೇನ್‌ಕಲ್ ಪಾಳ್ಯ
೦೭.	ಮಾದಮ್ಮ	೭೦	ಹೆಣ್ಣು	ಜೇನ್‌ಕಲ್ ಪಾಳ್ಯ
೦೮.	ಚಿಕ್ಕಮಾದಮ್ಮ	೩೫	ಹೆಣ್ಣು	ಜೇನ್‌ಕಲ್ ಪಾಳ್ಯ
೦೯.	ನಂಜಯ್ಯ	೫೦	ಗಂಡು	ಜೇನ್‌ಕಲ್ ಪಾಳ್ಯ
೧೦.	ಕಾಳಯ್ಯ	೬೫	ಗಂಡು	ಜೇನ್‌ಕಲ್ ಪಾಳ್ಯ
೧೧.	ಬರಿಯಮ್ಮ	೭೦	ಹೆಣ್ಣು	ಜೇನ್‌ಕಲ್ ಪಾಳ್ಯ

ಕ್ರಸಂ.	ಹೆಸರು	ವಯಸ್ಸು	ಲಿಂಗ	ಊರು
೧೨.	ದೊಡ್ಡ ಮಾದಯ್ಯ	೮೦	ಗಂಡು	ಜೇನ್‌ಕಲ್ ಪಾಳ್ಯ
೧೩.	ಚಿಕ್ಕಮಾದಯ್ಯ	೭೦	ಗಂಡು	ಸಿದ್ದೇಶ್ವರ ಕಾಲೋನಿ
೧೪.	ತಟ್ಟಯ್ಯ	೮೦	ಗಂಡು	ಸಿದ್ದೇಶ್ವರ ಕಾಲೋನಿ
೧೫.	ನಾಗರಾಜು	೫೦	ಗಂಡು	ಸಿದ್ದೇಶ್ವರ ಕಾಲೋನಿ
೧೬.	ಪುಟ್ಟ ಮಾದಮ್ಮ	೪೫	ಹೆಣ್ಣು	ಸಿದ್ದೇಶ್ವರ ಕಾಲೋನಿ
೧೭.	ಗಿರಿಜಮ್ಮ	೩೮	ಹೆಣ್ಣು	ಸಿದ್ದೇಶ್ವರ ಕಾಲೋನಿ
೧೮.	ಬೋರಮ್ಮ	೭೦	ಹೆಣ್ಣು	ಸಿದ್ದೇಶ್ವರ ಕಾಲೋನಿ
೧೯.	ಶ್ರೀದೇವಿ	೪೫	ಹೆಣ್ಣು	ಸಿದ್ದೇಶ್ವರ ಕಾಲೋನಿ
೨೦.	ಮದ್ದುರಮ್ಮ	೭೫	ಹೆಣ್ಣು	ಸಿದ್ದೇಶ್ವರ ಕಾಲೋನಿ
೨೧.	ಮದ್ದುರಯ್ಯ	೮೦	ಗಂಡು	ಸಿದ್ದೇಶ್ವರ ಕಾಲೋನಿ

ಮಂಡ್ಯ ಜಿಲ್ಲೆ

೦೧.	ರಾಜಪ್ಪ	೭೯	ಗಂಡು	ಬಾಣಸವಾಡಿ
೦೨.	ಶೇಖರ	೪೩	ಗಂಡು	ಬಾಣಸವಾಡಿ
೦೩.	ಪುಟ್ಟೀರಣ್ಣ	೮೦	ಗಂಡು	ಬಾಣಸವಾಡಿ
೦೪.	ಜಯಲಕ್ಷ್ಮಿ	೭೪	ಹೆಣ್ಣು	ಬಾಣಸವಾಡಿ
೦೫.	ದುರ್ಗಪ್ಪ	೮೩	ಗಂಡು	ಬಾಣಸವಾಡಿ
೦೬.	ಕರಿಯಪ್ಪ	೮೯	ಗಂಡು	ಬಾಣಸವಾಡಿ
೦೭.	ಮುತ್ತಯ್ಯ	೭೨	ಗಂಡು	ಮತ್ತತ್ತಿ
೦೮.	ಎಳಿಯ	೫೦	ಗಂಡು	ಮತ್ತತ್ತಿ
೦೯.	ಬರಿಯಪ್ಪ	೬೩	ಗಂಡು	ಮತ್ತತ್ತಿ

ಮೈಸೂರು ಜಿಲ್ಲೆ

೦೧.	ರಾಣಿ	೨೭	ಹೆಣ್ಣು	ಮುಸ್ಕೆರೆ ಕಾಲೋನಿ
೦೨.	ಅಂದಾನಿ	೬೦	ಗಂಡು	ಮುಸ್ಕೆರೆ ಕಾಲೋನಿ

ಕ್ರಸಂ.	ಹೆಸರು	ವಯಸ್ಸು	ಲಿಂಗ	ಊರು
೦೩.	ಮಾದಪ್ಪ	೭೦	ಗಂಡು	ಮುಸ್ಕೆರೆ ಕಾಲೋನಿ
೦೪.	ಮಲ್ಲಯ್ಯ	೮೩	ಗಂಡು	ಮುಸ್ಕೆರೆ ಕಾಲೋನಿ
೦೫.	ಕರಿಯಯ್ಯ	೭೯	ಗಂಡು	ಮುಸ್ಕೆರೆ ಕಾಲೋನಿ
೦೬.	ಶ್ರೀನಿವಾಸ	೪೩	ಗಂಡು	ಮುಸ್ಕೆರೆ ಕಾಲೋನಿ
ಡೆಂಕಣಿಕೋಟೆ (ತಮಿಳುನಾಡು)				
೦೧.	ರಾಮಣ್ಣ	೮೦	ಗಂಡು	ಕೊಂಬರ್‌ಕೋಟೆ
೦೨.	ಮಾದಪ್ಪ	೬೫	ಗಂಡು	ಕೊಂಬರ್‌ಕೋಟೆ
೦೩.	ಶೀಯಪ್ಪ	೫೦	ಗಂಡು	ಕೊಂಬರ್‌ಕೋಟೆ
೦೪.	ಮರಿಯಪ್ಪ	೫೬	ಗಂಡು	ಕೊಂಬರ್‌ಕೋಟೆ
೦೫.	ಗುಂಡಣ್ಣ	೭೦	ಗಂಡು	ನಾಚಳ್ಳಿ
೦೬.	ಪರೀಕರ್‌ಪ್ಪ	೮೨	ಗಂಡು	ನಾಚಳ್ಳಿ
೦೭.	ಚಿಟ್ಟದ್ಯಾವಪ್ಪ	೭೯	ಗಂಡು	ನಾಚಳ್ಳಿ
೦೮.	ಕರಿಯಪ್ಪ	೮೩	ಗಂಡು	ಗುಡಿವೂರು(ತೇರಬೀದಿ)
೦೯.	ಮಲ್ಲಣ್ಣ	೭೯	ಗಂಡು	ಗುಡಿವೂರು(ತೇರಬೀದಿ)
೧೦.	ಶಿವಣ್ಣ. ಡಿ	೩೮	ಗಂಡು	ಗುಡಿವೂರು(ತೇರಬೀದಿ)
ಚಂಗಲ್‌ಪೇಟೆ (ತಮಿಳುನಾಡು)				
೦೧.	ತನ್ನಾಳಪ್ಪ	೮೦	ಗಂಡು	ಚಂಗಲ್‌ಪೇಟೆ
೦೨.	ಕನ್ನಿಯಮ್ಮ	೮೫	ಹೆಣ್ಣು	ಚಂಗಲ್‌ಪೇಟೆ
೦೩.	ಮುರುಗನ್	೬೯	ಗಂಡು	ಕೊಯ್ಯಮತ್ತೂರು
೦೪.	ಸೆಲ್ವಕುಮಾರ್	೫೦	ಗಂಡು	ಕೊಯ್ಯಮತ್ತೂರು
೦೫.	ಕೊಳುದಯಪ್ಪನ್	೯೨	ಗಂಡು	ಚಂಗಲ್‌ಪೇಟೆ
೦೬.	ಬಾಲನ್	೬೯	ಗಂಡು	ಚಂಗಲ್‌ಪೇಟೆ
೦೭.	ನಾಲಕೊಂಡಪ್ಪ	೭೩	ಗಂಡು	ಚಂಗಲ್‌ಪೇಟೆ

ಕ್ರ.ಸಂ.	ಹೆಸರು	ವಯಸ್ಸು	ಲಿಂಗ	ಊರು
೦೮.	ಮತ್ತ	೨೬	ಗಂಡು	ಮಾಸನಗುಡಿ
೦೯.	ಮಾಸ್ತಯ್ಯ	೮೩	ಗಂಡು	ಮಾಸನಗುಡಿ
೧೦.	ಮಾದ	೩೪	ಗಂಡು	ಮಾಸನಗುಡಿ
೧೧.	ಮಾದೇವಪ್ಪ	೮೩	ಗಂಡು	ಮಾಸನಗುಡಿ
೧೨.	ಹಲಗ	೨೫	ಗಂಡು	ಮಾಸನಗುಡಿ

ಸಂದರ್ಶನಗಳು

ಸಂದರ್ಶದ ದಿನಾಂಕ : 26–03–2017

ಹೆಸರು : ಚಿಕ್ಕದೊಳ್ಳಯ್ಯ

ವಯಸ್ಸು : 76

ಲಿಂಗ : ಗಂಡು

ಉದ್ಯೋಗ : ವ್ಯವಸಾಯ/ಕೂಲಿ

ವಿಳಾಸ : ಕೂಸಗನಹಳ್ಳಿ ಹೋಬಳಿ, ವೆಂಕಟರಾಯನದೊಡ್ಡ ಅಂಚೆ, ಕನಕಪುರ ತಾಲೂಕು, ರಾಮನಗರ ಜಿಲ್ಲೆ

I. ನಿಮ್ಮ ಕೌಟುಂಬಿಕ ವ್ಯವಸ್ಥೆ ಎಂತಹದ್ದು?

ಪ್ರತ್ಯೇಕವಾಗಿ ವಾಸಿಸುತ್ತಿದ್ದೇವೆ.

1. **ಮುಖ್ಯ ತೀರ್ಮಾನ ಯಾರು ತೆಗೆದುಕೊಳ್ಳುತ್ತಾರೆ?**

   ನಾನು ತೀರ್ಮಾನ ತೆಗೆದುಕೊಂಡರು ತಂದೆಯ ಮಾರ್ಗದರ್ಶನ ಪಡೆಯುತ್ತೇನೆ. ಇದಕ್ಕೆ ಕುಲಸ್ಥರ ಅಭಿಪ್ರಾಯವಿದೆ.

2. **ನಿಮ್ಮ ಕುಟುಂಬದಲ್ಲಿ ಹೆಣ್ಣಿನ ಸ್ಥಾನ ಮಾನ ಏನು?**

   ಭೇದ ಭಾವ ಏನಿಲ್ಲಾ ಅವರು ನಮ್ಮಂತೆ

3. **ಬಹುಪತ್ನಿತ್ವ ಇದೆಯೇ( ), ಇಲ್ಲವೇ( ) ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು?**

   ಒಬ್ಬಳ್ಳಿಗೆ ಹಿಟ್ಟಾಕೊಕ್ಕೆ ಆಗಲ್ಲ. ಇನ್ನೊಬ್ಬಳ್ಳನ್ನು ಕಟ್ಟಿಕೊಂಡು ಎನ್ ಮಾಡ್ಲಿ

4. ನಿಮ್ಮ ಕುಟುಂಬದಲ್ಲಿ ಮದುವೆಯ ವಯೋಮಾನ ಹೆಣ್ಣು( ) ಗಂಡು( )

   ಅವರಿಗೆ ಬುದ್ಧಿ ಬಂದ ಮೇಲೆ ಅವರ ಮದುವೆ ಮಾಡ್ಕೊತ್ತಾರೆ

5. ನಿಮ್ಮ ಕುಟುಂಬದ ವಯೋಮಾನ ಎಷ್ಟು? ನಿಮ್ಮ ಉಟುಂಬದ ವೃತ್ತಿ ಮತ್ತು ಆದಾಯದ ಮೂಲ ಏನು?

ವರ್ಷಕ್ಕೆ 25 ರಿಂದ 30 ಸಾವಿರ, ದಿನಗೂಲಿ

II. ಸುತ್ತ ಮುತ್ತಲಿನ ಜನರೊಡನೆ ನಿಮ್ಮ ಸಂಬಂಧ ಹೇಗಿದೆ?

ನಮ್ಮ ನಮ್ಮವರ ನಡುವೆ ಚೆನ್ನಾಗಿದ್ದೇವೆ, ಬೇರೆ ಜಾತಿ ಮಾಡ್ತಾರೆ(ಅಸ್ಪೃಶ್ಯತೆ ಆಚರಿಸುತ್ತಾರೆ)

1. ನಿಮಗೆ ಜಾತಿಯ ಶೋಷಣೆ ಇದೆಯೇ(✓), ಇಲ್ಲವೇ(   )

ಹೌದು

2. ಶೋಷಣೆಗೆ ಶೋಷಕರು ಕೊಡುವ ಕಾರಣಗಳೇನು?

ಆಹಾರವೇ(   ) ಬಟ್ಟೆ ಬರೆಯೇ(✓) ನಿಮ್ಮ ಬಣ್ಣವೇ(✓) ನಿಮ್ಮ ಆಚರಣೆಯೇ (   ) ನೀವು ಬದುಕುವ ರೀತಿ ನೀತಿಯೇ(   ) ಇಲ್ಲ ಬಡತನವೇ(✓) ಅಥವಾ ನಿಮಗೆ ಅನಿಸಿದ್ದು?

3. ಯಾವ ಸಮುದಾಯದ ಜನ ನಿಮ್ಮನ್ನು ಶೋಷಣೆಯಿಂದ ಕಾಣುತ್ತಿದ್ದರೆ (ನಮ್ಮೂರಲ್ಲಿ ಶೆಟ್ರು) ಅವರಿಗೂ ನಿಮಗೂ ಏನು ಸಂಬಂಧವಿದೆ? (ಅವರ ಫ್ಯಾಕ್ಟರಿಗಳಲ್ಲಿ, ಗದ್ದೆಗಳಲ್ಲಿ ಅಥವಾ ಮನೆಯಲ್ಲಿ ಜೀತಕ್ಕೆ ದುಡಿಯುತ್ತಿದ್ದೀರಾ?)

ಹಿಂದೆಲ್ಲ ನಾವೆಲ್ಲ ಜೀತ ಮಾಡುತ್ತಿದ್ದೇವು. ಈಗ ಇಲ್ಲಿ ಅಷ್ಟು ಇಷ್ಟು ಭೂಮಿಯಲ್ಲಿ ವ್ಯವಸಾಯ ಮಾಡ್ಕೊಂಡು ಬದುಕುತ್ತಿದ್ದೇವೆ.

4. ಜೀತ ಪದ್ಧತಿ ನಿಮ್ಮಲ್ಲಿ ಇದೆಯಾ(✓) ಇಲ್ಲವಾ(   )

ಹಿಂದೆ ನಾವೆಲ್ಲ ಜೀತಕ್ಕೆ ಇದ್ದು, ಹಾಗೆ ಇಲ್ಲಿ ಎಸ್ಟೇಟ್, ಇಟಿಗೆ ಫ್ಯಾಕ್ಟರಿ ಅವರಿಗೆ ಸಂಸಾರವೇ ಹೋಗಿ ದುಡಿಯುತ್ತಾರೆ.

5. ನೀವು ಜೀತಕ್ಕೆ ಸೇರಿಕೊಳ್ಳಲು ಇರುವ ಪ್ರಮುಖ ಕಾರಣಗಳು ಯಾವುವು?

ಬಡತನ ಸ್ವಾಮಿ

6. ಇತ್ತೀಚೆಗೆ ನಿಮ್ಮ ಸಮುದಾಯದವರ ಮೇಲೆ ಯಾವುದಾದರೊಂದು ಕಾರಣಕ್ಕೆ ಮೇಲ್ಜಾತಿಯವರು ಹಲ್ಲೆ ಮಾಡಿದ ಉದಾಹರಣೆಗಳಿವೆಯೇ? ಇದ್ದರೆ ಕಾರಣಗಳೇನು? ಆಗ ನಿಮ್ಮ ನೆರವಿಗೆ ಬಂದವರಾರು? (ಸಂಘಟನೆಗಳು, ವ್ಯಕ್ತಿಗಳು, ಅಧಿಕಾರಿಗಳು, ರಾಜಕಾರಣಿಗಳು ಮತ್ತು ಸ್ವಾಮೀಜಿಗಳು)

ಎರಡು ಮೂರು ವರ್ಷದ ಹಿಂದೆ ಆಯ್ತು, ಆ ದಿನ ನಮ್ಮ ಜನರ ಎಣ್ಣೆದ್ದುಗೆ ಫೋನ್ ಮಾಡಿ ಅಂಗೆ-ಇಂಗೆ ಅಂದ್ರಂತೆ ಅವಾಗ ಕೇಳಕ್ಕೆ ಹೋದಾಗ ಓಡ್ಡಾಟ ಆಯ್ತು. ಅದಕ್ಕೆ ಅವರೆಲ್ಲ ಅವರ ಮನೆಗೆ ನುಗ್ಗಿದ್ರು, ಈ ಅಂಬೇಡ್ಕರ್ ಕಡೆಯವರು ಬಂದಿದ್ರು

7. **ನಿಮ್ಮ ಸಮುದಾಯದ ದುಸ್ಥಿತಿಗೆ ಕಾರಣಗಳು ಏನು? ನೀವು ಕೊಡ ಬಯಸುವ ಪ್ರಮುಖ ಕಾರಣಗಳು ಮತ್ತು ಸಲಹೆಗಳು.**

ನಮಗೆ ಕಾಡಿನಿಂದ ಹೊರಗೆ ಹಾಕಿರೋದು

ನಮಗೆ ಕಾಸು ಇಲ್ಲ. ಅದಕ್ಕೆ ಜೀತಗೀತ ಮಾಡ್ಕೊಂಡು ಬದುಕುತ್ತಾ ಇದ್ದೀವಿ.

III. ನಿಮ್ಮ ಜೀವನ ನಿರ್ವಹಣೆ ಹೇಗೆ?

ಕೂಲಿ

1. **ನಿಮ್ಮ ಮನೆಯಲ್ಲಿ ಯಾರು ಯಾರು ಎಲ್ಲೆಲ್ಲಿ ದುಡಿಯುತ್ತಾರೆ?**

ಯಲ್ರೂ ಇಲ್ಲೆ ಇದೀವಿ ನಮ್ಮ ತಮ್ಮನ ಸಂಸಾರ ಎಸ್ಟೇಟ್‌ಗೆ ಹೋಗವ್ರೆ

2. **ನಿಮ್ಮ ಪಾರಂಪರಿಕ ಕುಲ ಕಸುಬು ಯಾವುದು? ಅದು ಇಂದಿಗೂ ಇದೆಯಾ( ) ಇಲ್ಲವಾ( ) ಇಲ್ಲ ಎಂದರೆ ಕಾರಣವೇನು? ಯಾರನ್ನು ಹೊಣೆಗಾರಿಕೆ ಮಾಡುತ್ತೀರಿ?**

ಬೇಟೆಯಾಡೋದು, ಅರಣ್ಯ ಇಲಾಖೆಯವರು ನಮ್ಮನ್ನು ಕಾಡಿಗೆ ಬಿಡೋದಿಲ್ಲ, ಹಾಗೆ ಕಾಡಿಗೆ ಹೋದರೆ ನಮ್ಮ ಮೇಲೆ ಕೇಸ್ ಆಗ್ತಾರೆ.

3. **ನಿಮ್ಮ ಕುಲಕಸುಬು ಬಿಟ್ಟು ಬೇರೆ ಯಾವ ದುಡಿಮೆಯಲ್ಲಿ ತೊಡಗಿ ಕೊಳ್ಳಬೇಕೆಂದು ಅನ್ನಿಸಿದಾಗ ನೀವು ನಿರೀಕ್ಷಿಸಿದ ನೆರವು ಸಿಕ್ಕಿದೆಯೇ? ಹೌದು( ) ಇಲ್ಲ(✓) ಹೌದು ಎಂದರೆ ಯಾರ ನೆರವು? ಇಲ್ಲ ಎಂದರೆ ಏಕೆ?**

ನಮ್ಮ ಪಾರಂಪರಿಕ ವೃತ್ತಿ ಬಿಟ್ಟ ಮೇಲೆ ನಮಗೆ ಸಿಕ್ಕಿದ್ದು ಜೀತಗಾರಿಕೆ. ಸ್ಥಳೀಯ ಗೌಡ್ರು, ಪಟೇಲರು, ಶೆಟ್ರು, ಲಿಂಗಾಯಿತರು.

4. **ಸರ್ಕಾರದ ಯೋಜನೆಗಳು ನಿಮ್ಮನ್ನು ಅಭಿವೃದ್ಧಿಗೊಳಿಸುತ್ತಿದೆ, ಎಂದು ನಿಮಗನಿಸು ತ್ತದೆಯೇ? ಹೌದು( ) ಇಲ್ಲ(✓)**

ಅದರ ಬಗ್ಗೆ ಗೊತ್ತೆ ಇಲ್ಲ. ಯಾರಾದ್ರು ಬತ್ತರೆ ಅವರು ಹೇಳಿದಾಗ ಹೊಯ್ತೀವಿ. 100, 200 ಕೊಡ್ತಾರೆ.

5. **ನಿಮಗೆ ಭೂಮಿ ಇದೆಯಾ? ಹೌದು(✓) ಇಲ್ಲ( ), ಇದ್ದರೆ ಯಾವಾಗಿನಿಂದ ಇದೆ? ಇಲ್ಲ ಎಂದರೆ ಯಾವಗಿನಿಂದ ಇಲ್ಲ?**

20 ಕುಂಟೆ ಅದೆ, ಹಿಂದಿನಮ್ಮಪ್ಪನ ಕಾಲ್ದೇಲೆ ನಮ್ಮಪ್ಪನಿಗೆ ಸಿಕ್ಕಿತಂತೆ

6. **ಭೂಮಿ ಇದ್ದರೆ ಸದ್ಬಳಕೆ ಮಾಡಿಕೊಳ್ಳುತ್ತಿದ್ದೀರಾ ಹೌದು(✓) ಇಲ್ಲ(   ) ಹೌದಾದರೆ ಹೇಗೆ? ಇಲ್ಲವಾದರೆ ಕಾರಣಗಳನ್ನು ಹೇಳಿ?**

ವ್ಯವಸಾಯ ಮಾಡಿ ದಿನ ಒಪ್ಪತ್ತು ನೆಮ್ಮದಿಯಾಗಿ ಊಟ ಮಾಡ್ತಾ ಇದ್ದೇ

7. **ನಿಮಗೆ ಇದ್ದ ಭೂಮಿಯನ್ನು ಕಿತ್ತುಕೊಳ್ಳಲಾಗಿದೆಯೇ ಹೌದು(✓) ಇಲ್ಲ(   ), ಇದಕ್ಕೆ ಕಾರಣ ಸರ್ಕಾರ (✓), ಭೂಮಾಲಿಕರು(✓), ಮೇಲ್ಜಾತಿಯವರು(   ) ಅದಕ್ಕೆ ಅವರು ಕೊಟ್ಟ ಕಾರಣವೇನು?**

ಸರ್ಕಾರ ಅರಣ್ಯ ಭೂಮಿ ಅಂತೇಳಿ ಇತ್ತಕೊಂಡಿತು. ಭೂಮಾಲಿಕರು ಅಷ್ಟೋ ಇಷ್ಟು ಕಾಸುಕೊಟ್ಟು, ನಾವು ಅವರತ್ರ ಸಾಲ ಮಾಡಿದ್ದವಲ್ಲ, ಅದೆಲ್ಲಾ ಸೆರ್ರ್ಕೊಂಡು ಕಿತ್ಕೊಂಡ್ರು

IV. **ನಿಮ್ಮ ಶೈಕ್ಷಣಿಕ ಸ್ಥಿಗತಿಗಳು ಹೇಗಿದೆ?**

ನಾವು ಓದಿಲ್ಲ. ನಮ್ಮ ಮಕ್ಕಳನ್ನು ಶಾಲೆಗೆ ಕಳಸ್ತಾ ಇದೀವಿ. ನಮ್ಮ ಊರಲ್ಲಿ ಶಾಲೆ ಇರುವರೆಗೆ ಓದಿಸ್ತೀವಿ. ಆಮೇಲೆ ಊರಿಂದ ಹೋಗಬೇಕು ಅವಾಗ ಕಲ್ಸೋಕ್ಕಾಗಲ್ಲ

1. **ನಿಮ್ಮಲ್ಲಿರುವ ವಿದ್ಯಾವಂತರು ಎಷ್ಟು? ಹೆಣ್ಣು(   ) ಗಂಡು(   )**

ಸರಿಯಾಗಿ ಗೊತ್ತಿಲ್ಲ. ಹೀಗಾಗಿ ಅಲ್ಲೊಬ್ರು ಇಲ್ಲುಬ್ರು ಇರಬೇಕು.

2. **ನಿಮ್ಮಲ್ಲಿ ಸರ್ಕಾರಿ ನೌಕರರು ಇದ್ದಾರೆಯೇ ಹೌದು(   ) ಇಲ್ಲ(✓) ಯಾವ ನೌಕರಿ.**

3. **ನಿಮಗೆ ಶಿಕ್ಷಣದ ಬಗ್ಗೆ ಏನು ಅನಿಸುತ್ತದೆ? ನೀವು ಯಾಕೆ ಕಲಿಯಲಿಲ್ಲ, ನಿಮ್ಮ ಮಕ್ಕಳೆಲ್ಲ ಕಲಿಯುತ್ತಿದ್ದಾರ ಹೌದು(✓) ಇಲ್ಲ(   ) ಹೌದಾದರೆ ಅವರ ಕಲಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?**

ಓದಿಕೊಂಡ್ರ ಅಷ್ಟೋ ಇಷ್ಟು ಬುದ್ಧಿ ಬತ್ತದೆ. ನಾಕಾರು ಜನರ ತರ ಮಾತಾಡಂಗೆ ಆಗುತ್ತೆ. ಚೆನ್ನಾಗಿ ಓದ್ಕೊಳ್ಳಿಲಿ ಅದೇ ತಾನೇ ಬೇಕಾಗಿರುವುದು ಇವತ್ತಿನ ಕಾಲಕ್ಕೆ.

4. **ನಿಮ್ಮೂರಿನಲ್ಲಿ ಶಾಲೆ ಇದೆಯೇ? ಹೌದು(✓) ಇಲ್ಲ(   )**

5. **ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದೀರಾ ಹೌದು(✓) ಇಲ್ಲ(   ) ಕಳುಹಿಸದಿದ್ದರೆ ಕಾರಣವೇನು?**

6. **ನಿಮಗೆ ನಿಮ್ಮ ಮಕ್ಕಳು ಏನಾಗಬೇಕೆಂದು ಆಸೆ ಇದೆ?**

ಒಳ್ಳೆ ವ್ಯಕ್ತಿಗಳಾಗಿ ಅವರ ಹಿಟ್ಟು ಅವರು ಹುಟ್ಟಿಸಿಕೊಂಡು ಬದುಕುವಂತಾಗಬೇಕು.

7. **ನಿಮ್ಮ ಮಕ್ಕಳು ಏನು ಓದುತ್ತಿದ್ದಾರೆ ಅದರ ಬಗ್ಗೆ ನಿಮಗೆ ಗೊತ್ತಾ? ಹೌದು( ) ಇಲ್ಲ ( ) ನಿಮ್ಮ ಮಕ್ಕಳು ಕಲಿತು ನಿಮ್ಮ ಪಾರಂಪರಿಕ ನಂಬಿಕೆ, ಜ್ಞಾನಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬ ಆತಂಕವೇನಾದರೂ ಇದೆಯಾ? ಹೌದು(✓) ಇಲ್ಲ ( )**

   ನಮಗೆ ಇಲ್ಲ ಅಂದ್ರ ನಮ್ಮ ಮಕ್ಳ ಕಾಲಕ್ಕೆ ಎಲ್ಲಿಂದ ಬರಬೇಕು. ಎಲ್ಲಾ ನನಕಾಲಕ್ಕೆ ಹೊಂಟೊಯ್ತು.

8. **ನೀವು ಯಾವ ರೀತಿಯ ಶಿಕ್ಷಣ ಬಯಸುತ್ತೀರಾ? ಯಾಕೆಂದರೆ ನಿಮ್ಮ ಮನೆಯಲ್ಲಿ ಕಲಿತ ಮಗ/ ಮಗಳು, ಕಲಿಯದ (ಓದು ಬರಹ) ಮಗ/ ಮಗಳನ್ನು ನೋಡಿ ಏನೆನಿಸುತ್ತದೆ?**

   ಗೊತ್ತಿಲ್ಲ ಇವತ್ತಿಗೆ ಓದಿರೊರದೆ ಅಲ್ಪಸ್ವಾಮಿ, ಎಲ್ಲ ವಸಿ ಮಾತುಕತೆ ಕಲಿಕೊತ್ತಾರೆ.

9. **ಮೀಸಲಾತಿ, ಮೂಲಭೂತ ಸೌಲಭ್ಯ ಮತ್ತು ಉದ್ಯೋಗ ಇವುಗಳ ಬಗ್ಗೆ ಮಾಹಿತಿ ಇದೆಯಾ ಹೌದು( ) ಇಲ್ಲ(✓) ಇದರ ಬಗ್ಗೆ ನಿಮ್ಮ ಅಭಿಪ್ರಾಯ ಹೇಳಿ?**

   ಓಟು ಟೈಮಲ್ಲಿ ನಿಮ್ಮ ಜಾತಿಗೆ ಬಂದರೆ ಅಂತರೆ ಅಷ್ಟೆ. ಅದನ್ನು ಬಿಟ್ರೆ ಅವಾನ ಆವಾಗ ರೇಷನ್‌ಕಾರ್ಡ್ ಫೋಟಾ ಇಸ್ಕೊಂಡು ಅದು ಇದು ಕೊಡ್ತರೆ ಅಷ್ಟೆ.

V. **ನಿಮ್ಮ ಆಚರಣೆಗಳ ವಿಶೇಷತೆಗಳೇನು?**

ಇಗೆಲ್ಲಾ ಇಲ್ಲ ಸ್ವಾಮಿ ಹಿಂದೆ ನಮ್ಮ ಅಪ್ಪನ ಕಾಲದ್ದಲಿ ಮಾಡ್ತಿಇದ್ವಿ ಇಗ ಬದುಕೊದೆ ಸಾಕಾಗಿದೆ.

1. **ನಿಮ್ಮ ಮನೆ ದೇವರು ಯಾವುದು?**

   ಗಂಡು ದೇವರು(ಧರ್ಮರಾಯ) ಹೆಣ್ಣು ದೇವರು( )

2. **ಆ ದೇವರ ಮೂಲ ಸ್ಥಳ ಯಾವುದು?**

   ದ್ಯಾವರಲ್ಲಿ ಮತ್ತು ಶಿವನಳ್ಳಿ

3. **ನಿಮ್ಮ ಒಕ್ಕಲು ಯಾವುದು?**

   ಧರ್ಮರಾಯರ ಒಕ್ಕಲು

4. **ನೀವು ಹಬ್ಬ ಹರಿದಿನಗಳನ್ನು ಆಚರಿಸುತ್ತಿದ್ದೀರಾ? ಹೌದು(✓) ಇಲ್ಲ( )ಯಾವ ಯಾವ ಹಬ್ಬ ಆಚರಿಸುತ್ತೀರಿ?**

   ಊರೋರು ಮಾಡುವಲ್ಲಿ ಹಬ್ಬನು ಮಾಡ್ತೀವಿ

5. **ನಿಮ್ಮ ಸಮುದಾಯ (ಜಾತಿ)ದವರೇ ಪ್ರತ್ಯೇಕವಾಗಿ ಆಚರಿಸುವ ಹಬ್ಬ ಇದೆಯಾ? ಹೌದು (✓) ಇಲ್ಲ( )ಅದು ಯಾವುದು?**

ಆ ಕಡೆ ಮಾಗಡಿ ಕಡೆ ಮಾಡ್ತರಂತೆ. ನಮ್ಮೂರಿಂದಲು ಹೊಯ್ತಾರೆ.

6. **ನಿಮ್ಮ ಪಾರಂಪರಿಕ ಆಚರಣೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದೀರಾ ಹೌದು ( ) ಇಲ್ಲ(✓) ಅವು ಯಾವುವು? ಈ ಆಚರಣೆಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗದಿದ್ದಕ್ಕೆ ಕಾರಣವೇನು?**

   ಎಲ್ಲಿ ಸ್ವಾಮಿ ಕಾಡಿನ ಒಳಕ್ಕೆ ಬಿಡಲ್ರು ನಾವು ಕಾಡ ಒಳಗೆನೆ ಹಬ್ಬಗಿಬ್ಬಯಲ್ಲ. ಯಾರಾದ್ರು ಸತ್ರು ಕಲ್ಲುಸೇವೆ ಮಾಡೋಕೆ ಬುಡಲ್ರು

7. **ನಿಮ್ಮ ಕುಲದ ಹೆಸರು (ಆಲದ ಕುಲ)**

   ಆಲದ ಕುಲ

VI. **ನಿಮಗೆ ರಾಜಕೀಯದ ಬಗ್ಗೆ ತಿಳಿದಿದೆಯೇ ಹೌದು(✓) ಇಲ್ಲ( )**

1. **ನೀವು ಮತ (ಓಟು) ಹಾಕಿದ್ದೀರಾ? ಹೌದು(✓) ಇಲ್ಲ( ) ಇಲ್ಲವಾದರೆ ಕಾರಣವೇನು?**
2. **ನೀವು ಗ್ರಾಮ ಪಂಚಾಯಿತಿಯಲ್ಲಿ ಸ್ಪರ್ಧಿಸಿದ್ದೀರಾ? ಹೌದು( ) ಇಲ್ಲ(✓) ಹೌದಾದರೆ ಗ್ರಾಮ ಪಂಚಾಯಿತಿಯಲ್ಲಿ ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ? ನಿಮಗೆ ಅಧ್ಯಕ್ಷರ ಸ್ಥಾನ ನೀಡಿದ್ದಾರಾ? ನೀವು ಅಧ್ಯಕ್ಷರಾಗಿದ್ದಾಗ ನಿಮ್ಮನ್ನು ಯಾರಾದರೂ ನಿಯಂತ್ರಿಸಿದ್ದರಾ?**
3. **ಇಲ್ಲಿಯವರೆಗೂ ಮೀಸಲಾತಿ ಬಂದಿಲ್ಲವಾ ಅಥವಾ ಈ ವಿಷಯ ಗೊತ್ತಿಲ್ಲದಂತೆ ನೋಡಿಕೊಳ್ಳಲಾಗುತ್ತಿದೆಯಾ? ಹೌದು( ) ಇಲ್ಲ( ) ಗ್ರಾಮ ಪಂಚಾಯಿತಿಯಲ್ಲೂ ಜಾತಿಯತೆ ಮಾಡುತ್ತಾರೆಯೇ? ಹೌದು( ) ಇಲ್ಲ( )**

   ಸಂಬಂಧಿಸುವುದಿಲ್ಲ

4. **ಗ್ರಾಮ ಪಂಚಾಯಿತಿಯಲ್ಲಿ ನಿಮಗೆ ಏನೇನು ಸೌಲಭ್ಯ ಇದೆ ಎಂದು ಗೊತ್ತಾ ಹೌದು ( ) ಇಲ್ಲ( ) ಗೊತ್ತಿದ್ದರೆ ಹೇಗೆ ಗೊತ್ತಾಯಿತು? ಇಲ್ಲವಾದರೆ ಯಾಕೆ?**

   ಯಾಕ್ ಹೇಳ್ಬೇಕುಸ್ವಾಮಿ ನಮ್ಮ ಜನದಲ್ಲಿ ಗೆದ್ದಿರೋರಿಗೆ ಗೊತ್ತಿದ್ರಿ ತಾನೇ ನಮಗೆ ಹಾಳಾರು ಅವರಿಗೆ ಗೊತ್ತಿಲ್ಲ, ನಮ್ಗು ಗೊತ್ತಿಲ್ಲ.

5. ನಿಮಗೆ ಸಂಘಟನೆ, ಹೋರಾಟ, ಮೀಸಲಾತಿ, ಸರ್ಕಾರದ ಯೋಜನೆಗಳು, ಅಭಿವೃದ್ಧಿ ನಿಗಮಗಳು, ವಿಶೇಷ ಘಟಕ ಯೋಜನೆಗಳು, ತಾಲ್ಲೂಕು ಕಛೇರಿ, ಜಿಲ್ಲಾಧಿಕಾರಿ ಕಛೇರಿ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ನ್ಯಾಯಾಂಗ, ಕಾನೂನುಗಳ ಬಗ್ಗೆ ಮಾಹಿತಿ ಇದೆಯಾ? ಹೌದು( ) ಇಲ್ಲ( ).

   ಈ ಹೆಕ್ಳೂ ಯಾವುದೋ ಸಂಘ ಪಂಗ ಅಂತ ಮಾಡ್ಕೊಂಡವೇ. ಪರವಾಗಿಲ್ಲ ಈ ಸಂಘ ಬಂದ ಮೇಲೆ ನಮಗೂ ಜನ ಹೆದ್ರೂಕತ್ತಾರೆ.

ಸಂದರ್ಶದ ದಿನಾಂಕ	:	27–03–2017
ಹೆಸರು	:	ಸಿದ್ದರಾಮಯ್ಯ
ವಯಸ್ಸು	:	45
ಲಿಂಗ	:	ಗಂಡು
ಉದ್ಯೋಗ	:	ವ್ಯವಸಾಯ
ವಿಳಾಸ	:	ಇರುಳಿಗರ ಕಾಲೋನಿ, ಕಸಬಾ ಹೋಳಿ, ಕನಕಪುರ ತಾಲೂಕು, ರಾಮನಗರ ಜಿಲ್ಲೆ 562 112

I. ನಿಮ್ಮ ಕೌಟುಂಬಿಕ ವ್ಯವಸ್ಥೆ ಎಂತಹದ್ದು?

ಅವಿಭಕ್ತ ಕುಟುಂಬ ಇಲ್ಲ ಬೇರೆ ಬೇರೆನೆ ಇದೀವಿ

1. ಮುಖ್ಯ ತೀರ್ಮಾನ ಯಾರು ತೆಗೆದುಕೊಳ್ಳುತ್ತಾರೆ?

ಸದ್ಯಕ್ಕೆ ನಾನೇ ನಮ್ಮ ಇದ್ದಾಗ ಅವನು

2. ನಿಮ್ಮ ಕುಟುಂಬದಲ್ಲಿ ಹೆಣ್ಣಿನ ಸ್ಥಾನ ಮಾನ ಏನು?

ಎಲ್ಲರಂತೆ ಅವಳುವೇ

3. ಬಹುಪತ್ನಿತ್ವ ಇದೆಯೇ(   ), ಇಲ್ಲವೇ(   ) ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಒಬ್ಬರನ್ನು ಕಟ್ಟಿಕೊಂಡು ಬದೋಕೋದು ಕಷ್ಟ ಅಲ್ಲವೇ

4. ನಿಮ್ಮ ಕುಟುಂಬದಲ್ಲಿ ಮದುವೆಯ ವಯೋಮಾನ ಹೆಣ್ಣು(17) ಗಂಡು(2)

5. ನಿಮ್ಮ ಕುಟುಂಬದ ವಯೋಮಾನ ಎಷ್ಟು? ನಿಮ್ಮ ಉಟುಂಬದ ವೃತ್ತಿ ಮತ್ತು ಆದಾಯದ ಮೂಲ ಏನು?

ವರ್ಷಕ್ಕೆ 25–30 ಸಾವಿರ, ವ್ಯವಸಾಯ ಮಾಡ್ತೀವಿ, ಇಲ್ಲ ನಮ್ಮಲೆಲ್ಲಾ ಮದುವೆ ಆದ್ರು ಅಂದರೆ ಬೇರೆ ಕಳುಹಿಸಿಬಿಡ್ತಾರೆ. ನಮ್ಮ ಹಿರಿಯರೇ ಬೇರೆ ಸಡ್ಡು ಕಟ್ಟೊಂಡು ಬಿಡ್ತಾರೆ.

II. ಸುತ್ತ ಮುತ್ತಲಿನ ಜನರೋಡನೆ ನಿಮ್ಮ ಸಂಬಂಧ ಹೇಗಿದೆ?

ಚೆನ್ನಾಗಿದೆ

1. **ನಿಮಗೆ ಜಾತಿಯ ಶೋಷಣೆ ಇದೆಯೇ(✓), ಇಲ್ಲವೇ(   )**

   ಹೌದು

2. **ಶೋಷಣೆಗೆ ಶೋಷಕರು ಕೊಡುವ ಕಾರಣಗಳೇನು?**

   ಆಹಾರವೇ(   ) ಬಟ್ಟೆ ಬರಿಯೇ(✓) ನಿಮ್ಮ ಬಣ್ಣವೇ(✓) ನಿಮ್ಮ ಆಚರಣೆಯೇ (   ) ನೀವು ಬದುಕುವ ರೀತಿ ನೀತಿಯೇ( ) ಇಲ್ಲ ಬಡತನವೇ(✓) ಅಥವಾ ನಿಮಗೆ ಅನಿಸಿದ್ದು?

   ನಮ್ಮ ಜನ ಬಡೂರಲ್ಲಾ ಬಟ್ಟೆ ಬರಿ ನೀಟ ಆಗಿ ಇರಲಿಲ್ಲ. ಪಾಪ ಎನ್ ಮಾಡೋನು

3. **ಯಾವ ಸಮುದಾಯದ ಜನ ನಿಮ್ಮನ್ನು ಶೋಷಣೆಯಿಂದ ಕಾಣುತ್ತಿದ್ದರೆ (ನಮ್ಮೂರಲ್ಲಿ ಶೆಟ್ರು) ಅವರಿಗೂ ನಿಮಗೂ ಏನು ಸಂಬಂಧವಿದೆ? (ಅವರ ಫ್ಯಾಕ್ಟರಿಗಳಲ್ಲಿ, ಗದ್ದೆಗಳಲ್ಲಿ ಅಥವಾ ಮನೆಯಲ್ಲಿ ಜೀತಕ್ಕೆ ದುಡಿಯುತ್ತಿದ್ದೀರಾ?)**

   ನಮ್ಮ ಜನ ಎಲ್ಲಾ ಅವರತ್ರಾನೆ ಕೂಲಿನಾಲಿ ಮಾಡೋದು

4. **ಜೀತ ಪದ್ಧತಿ ನಿಮ್ಮಲ್ಲಿ ಇದೆಯಾ(✓) ಇಲ್ಲವಾ(   )**

5. **ನೀವು ಜೀತಕ್ಕೆ ಸೇರಿಕೊಳ್ಳಲು ಇರುವ ಪ್ರಮುಖ ಕಾರಣಗಳು ಯಾವುವು?**

   ಇನ್ನೇನಿದೆ ಬಡತನವೇ, ಊಟದ ಸಮಸ್ಯೆ, ಊಟಕ್ಕಾಗಿ ಜೀತಕ್ಕೆ ಸೇರಿಕೊಂಡಿದ್ದಾರೆ.

6. **ಇತ್ತೀಚೆಗೆ ನಿಮ್ಮ ಸಮುದಾಯದವರ ಮೇಲೆ ಯಾವುದಾದರೊಂದು ಕಾರಣಕ್ಕೆ ಮೇಲ್ಜಾತಿಯವರು ಹಲ್ಲೆ ಮಾಡಿದ ಉದಾಹರಣೆಗಳಿವೆಯೇ? ಇದ್ದರೆ ಕಾರಣಗಳೇನು? ಆಗ ನಿಮ್ಮ ನೆರವಿಗೆ ಬಂದವರಾರು? (ಸಂಘಟನೆಗಳು, ವ್ಯಕ್ತಿಗಳು, ಅಧಿಕಾರಿಗಳು, ರಾಜಕಾರಣಿಗಳು ಮತ್ತು ಸ್ವಾಮೀಜಿಗಳು)**

   ಆಗಿತ್ತು 2009ರಲ್ಲಿ ನಮ್ಮ ಅಣ್ಣನ ಮಗಳಿಗೆ ಈ ಊರಿನ ಶೆಟ್ರು ಹುಡುಗ್ರು ಫೋನ್ ಮಾಡಿ ಅದು ಇದು ಅಂತಿದ್ರಂತೆ ಕೇಳೋಕೆ ಹೋಗಿದ್ದಕ್ಕೆ ನಮಗೆ ಎಲ್ಲರೂ ಸೇರ್ಕೊಂಡು ಹೊಡುದ್ರು, ನಾವು ಕಂಪ್ಲೆಂಟ್ ಕೊಟ್ಟಿದ್ದು, ಅಂಬೇಡ್ಕರ್ ಸಂಘದೋರು (ಡಿ.ಎಸ್.ಎಸ್.)

7. **ನಿಮ್ಮ ಸಮುದಾಯದ ದುಸ್ಥಿತಿಗೆ ಕಾರಣಗಳು ಏನು? ನೀವು ಕೊಡ ಬಯಸುವ ಪ್ರಮುಖ ಕಾರಣಗಳು ಮತ್ತು ಸಲಹೆಗಳು.**

   ಏನು ಅಂದ್ರೆ ಭೂಮಿ ಇಲ್ಲ, ಕಾಡಿನ ಒಳಗಡೆ ಬಿಡೋದಿಲ್ಲ ಭೂಮಿ ಕೊಟ್ರೆ ಎಲ್ಲರಂತೆ ಬದುಕುತ್ತೀವಿ.

III. ನಿಮ್ಮ ಜೀವನ ನಿರ್ವಹಣೆ ಹೇಗೆ?

ಕೂಲಿನಾಲಿ ಮಾಡ್ಕೊಂಡು ಬದುಕ್ತಾ ಇದ್ದೀವಿ

1. **ನಿಮ್ಮ ಮನೆಯಲ್ಲಿ ಯಾರು ಯಾರು ಎಲ್ಲೆಲ್ಲಿ ದುಡಿಯುತ್ತಾರೆ?**

   ನಾವೆಲ್ಲೂ ಹೋಗಿ ಮೊದ್ಲು ನಾನೇ ಎಸ್ಟೇಟ್‌ಲಿ ಕೆಲಸ ಮಾಡ್ತಾ ಇದ್ದೆ. ಈಗ ಊರಲ್ಲಿ ಇದ್ದೀನಿ ಎಲ್ಲರೂ ಇಲ್ಲೆ ಇದಾರೆ.

2. **ನಿಮ್ಮ ಪಾರಂಪರಿಕ ಕುಲ ಕಸುಬು ಯಾವುದು? ಅದು ಇಂದಿಗೂ ಇದೆಯಾ( ) ಇಲ್ಲವಾ( ) ಇಲ್ಲ ಎಂದರೆ ಕಾರಣವೇನು? ಯಾರನ್ನು ಹೊಣೆಗಾರಿಕೆ ಮಾಡುತ್ತೀರಿ?**

   ಯಾರಿಗೆ ಬೇಕಾಂಗಿಲ್ಲ. ಪಾರಂಪರಿಕ ಕುಲಕಸಬನ್ನು ಮಾಡಲು ಕಾಡಿಗೆ ಬಡಿಬೇಕಲ್ಲ ಅರಣ್ಯ ಇಲಾಖೆಯವರು.

3. **ನಿಮ್ಮ ಕುಲಕಸುಬು ಬಿಟ್ಟು ಬೇರೆ ಯಾವ ದುಡಿಮೆಯಲ್ಲಿ ತೊಡಗಿ ಕೊಳ್ಳಬೇಕೆಂದು ಅನ್ನಿಸಿದಾಗ ನೀವು ನಿರೀಕ್ಷಿಸಿದ ನೆರವು ಸಿಕ್ಕಿದೆಯೇ? ಹೌದು( ) ಇಲ್ಲ(✓) ಹೌದು ಎಂದರೆ ಯಾರ ನೆರವು? ಇಲ್ಲ ಎಂದರೆ ಏಕೆ?**

   ಕೂಲಿನಾಲಿ, ಆದೇ ಶೆಟ್ರು ಬಳಿ

4. **ಸರ್ಕಾರದ ಯೋಜನೆಗಳು ನಿಮ್ಮನ್ನು ಅಭಿವೃದ್ಧಿಗೊಳಿಸುತ್ತಿದೆ, ಎಂದು ನಿಮಗನಿಸು ತ್ತದೆಯೇ? ಹೌದು( ) ಇಲ್ಲ(✓)**

   ಸರ್ಕಾರ ಯೋಜನೆಗಳು ನಮಗೆ ತಲುಪುವ ಮೊದಲೇ ಯಾರ‍್ಯಾರೋ ತಿಂತಾವರೆ ಕೇಳ್ಕೋರುಯಾರು, ನಮಗೆ ತಿಳುವಳಿಕೆ ಇಲ್ಲ.

5. **ನಿಮಗೆ ಭೂಮಿ ಇದೆಯಾ? ಹೌದು(✓) ಇಲ್ಲ( ), ಇದ್ದರೆ ಯಾವಾಗಿನಿಂದ ಇದೆ? ಇಲ್ಲ ಎಂದರೆ ಯಾವಗಿನಿಂದ ಇಲ್ಲ?**

   ನಮ್ಮಪ್ಪನ ಕಾಲದಿಂದ

6. **ಭೂಮಿ ಇದ್ದರೆ ಸದ್ಬಳಿಕೆ ಮಾಡಿಕೊಳ್ಳುತ್ತಿದ್ದೀರಾ ಹೌದು(✓) ಇಲ್ಲ( ) ಹೌದಾದರೆ ಹೇಗೆ? ಇಲ್ಲವಾದರೆ ಕಾರಣಗಳನ್ನು ಹೇಳಿ?**

   ಮಾಮೂಲಿ ರಾಗಿ ಬೆಳಕ್ಕೋತೀವಿ, ನೀರುಗೀರು ವ್ಯವಸ್ಥೆ ಇತ್ತೀಚೆಗೆ ಮಾಡ್ಕೊಂಡಿದ್ದೀವಿ.

7. **ನಿಮಗೆ ಇದ್ದ ಭೂಮಿಯನ್ನು ಕಿತ್ತುಕೊಳ್ಳಲಾಗಿದೆಯೇ ಹೌದು(✓) ಇಲ್ಲ( ), ಇದಕ್ಕೆ ಕಾರಣ ಸರ್ಕಾರ (✓), ಭೂಮಾಲಿಕರು(✓), ಮೇಲ್ಜಾತಿಯವರು( ) ಅದಕ್ಕೆ**

ಅವರು ಕೊಟ್ಟ ಕಾರಣವೇನು?

ಕಾಡತ್ತಿರ ಸ್ವಲ್ಪ ನಮ್ ತಾತನ ಕಾಲದಿಂದ ಮಾಡ್ಕೊಂಡು ಬದುಕುತ್ತಾ ಇದ್ದೀವಿ. ಅದನ್ನ ಅರಣ್ಯ ಇಲಾಖೆಯವರು ಕಾಡು ಒತ್ತುವರಿ ಅಂತ ಕಿತ್ಕೊಂಡ್ರು, ಇನ್ನು ಸಾಲಪಾಲ ಮಾಡಿದ್ವಲ್ಲ ನಮೂರಿನ ಶೆಟ್ರು ಕಿತ್ಕೊಂಡ್ರು.

IV. **ನಿಮ್ಮ ಶೈಕ್ಷಣಿಕ ಸ್ಥಿಗತಿಗಳು ಹೇಗಿದೆ?**

ಪರವಾಗಿಲ್ಲ

1. **ನಿಮ್ಮಲ್ಲಿರುವ ವಿದ್ಯಾವಂತರು ಎಷ್ಟು? ಹೆಣ್ಣು(12) ಗಂಡು(4)**

   ಸರಿಯಾಗಿ ಗೊತ್ತಿಲ್ಲ. ಹೀಗಾಗಿ ಅಲ್ಲೊಬ್ರು ಇಲ್ಲುಬ್ರು ಇರಬೇಕು.

2. **ನಿಮ್ಮಲ್ಲಿ ಸರ್ಕಾರಿ ನೌಕರರು ಇದ್ದಾರೆಯೇ ಹೌದು(   ) ಇಲ್ಲ(✓) ಯಾವ ನೌಕರಿ.**

3. **ನಿಮಗೆ ಶಿಕ್ಷಣದ ಬಗ್ಗೆ ಏನು ಅನಿಸುತ್ತದೆ? ನೀವು ಯಾಕೆ ಕಲಿಯಲಿಲ್ಲ, ನಿಮ್ಮ ಮಕ್ಕಳೆಲ್ಲ ಕಲಿಯುತ್ತಿದ್ದಾರ ಹೌದು(✓) ಇಲ್ಲ(   ) ಹೌದಾದರೆ ಅವರ ಕಲಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?**

   ನಮಗೆ ತಿನ್ನೊಕೆ ಅನ್ನ ಇರ್ಲಿಲ್ಲ. ಅಂತದರಲ್ಲಿ 8ನೇ ತರಗತಿವರೆಗೂ ಓದಿದ್ದೇವೆ. ನಮ್ಮ ಮಕ್ಕಳು ಓದಿಕೊಂಡು ಒಳ್ಳೊಳ್ಳೇ ಕೆಲಸ ತಗೋಬೇಕು. ಹತ್ತಾರು ಜನರಂತೆ ಅವರು ಆಗಬೇಕು.

4. **ನಿಮ್ಮೂರಿನಲ್ಲಿ ಶಾಲೆ ಇದೆಯೇ? ಹೌದು(✓) ಇಲ್ಲ(   )**

5. **ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದೀರಾ ಹೌದು(✓) ಇಲ್ಲ(   ) ಕಳುಹಿಸದಿದ್ದರೆ ಕಾರಣವೇನು?**

6. **ನಿಮಗೆ ನಿಮ್ಮ ಮಕ್ಕಳು ಏನಾಗಬೇಕೆಂದು ಆಸೆ ಇದೆ?**

   ಒಳ್ಳೆ ಕೆಲಸಕ್ಕೆ ಸೇರ್ಕೊಂಡು ಎಲ್ಲರಂತೆ ಬದುಕಬೇಕು.

7. **ನಿಮ್ಮ ಮಕ್ಕಳು ಏನು ಓದುತ್ತಿದ್ದಾರೆ ಅದರ ಬಗ್ಗೆ ನಿಮಗೆ ಗೊತ್ತಾ? ಹೌದು(   ) ಇಲ್ಲ ( ) ನಿಮ್ಮ ಮಕ್ಕಳು ಕಲಿತು ನಿಮ್ಮ ಪಾರಂಪರಿಕ ನಂಬಿಕೆ, ಜ್ಞಾನಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬ ಆತಂಕವೇನಾದರೂ ಇದೆಯಾ? ಹೌದು(✓) ಇಲ್ಲ (   )**

   ಯಾಕೆ ಅಂದ್ರೆ ಪಾರಂಪರಿಕ ನಂಬಿಕೆ ಈ ಕಾಲಕ್ಕೆಲ್ಲ ಆಗಲ್ಲ. ಅದು ಆ ಕಾಲಕ್ಕೆ ಸರಿ.

8. **ನೀವು ಯಾವ ರೀತಿಯ ಶಿಕ್ಷಣ ಬಯಸುತ್ತೀರಾ? ಯಾಕೆಂದರೆ ನಿಮ್ಮ ಮನೆಯಲ್ಲಿ ಕಲಿತ ಮಗ/ ಮಗಳು, ಕಲಿಯದ (ಓದು ಬರಹ) ಮಗ/ ಮಗಳನ್ನು ನೋಡಿ ಏನೆನಿಸುತ್ತದೆ?**

ಓದಿದೋರು ಬುದ್ದಿವಂತರಲ್ಲವೇ ನಾಲ್ಕು ಮಾತಾಡ್ತಾರೆ. ಕುಸಿ ಆಗುತ್ತೆ.

9. **ಮೀಸಲಾತಿ, ಮೂಲಭೂತ ಸೌಲಭ್ಯ ಮತ್ತು ಉದ್ಯೋಗ ಇವುಗಳ ಬಗ್ಗೆ ಮಾಹಿತಿ ಇದೆಯಾ ಹೌದು( ) ಇಲ್ಲ(✓) ಇದರ ಬಗ್ಗೆ ನಿಮ್ಮ ಅಭಿಪ್ರಾಯ ಹೇಳಿ?**

ನಾವು ಗ್ರಾಮಪಂಚಾಯಿತಿ ಸದಸ್ಯರಾಗಿದ್ದರಿಮದ ಅಷ್ಟು ಇಷ್ಟು ಮಾಹಿತಿ ಇದೆ. ಆದರೆ ನಮಗೆ ಏನನ್ನು ದಕ್ಕಿಸಿಕೊಡುತ್ತಿಲ್ಲ.

V. **ನಿಮ್ಮ ಆಚರಣೆಗಳ ವಿಶೇಷತೆಗಳೇನು?**

ಅಂತಹ ವಿಶೇಷತೆ ಇನ್ನು ಇಲ್ಲ

1. **ನಿಮ್ಮ ಮನೆ ದೇವರು ಯಾವುದು?**

ಗಂಡು ದೇವರು(ಯಂಟ್ರೋಣಸ್ವಾಮಿ) ಹೆಣ್ಣು ದೇವರು( )

2. **ಆ ದೇವರ ಮೂಲ ಸ್ಥಳ ಯಾವುದು?**

ಕಲ್ಲಳ್ಳಿ ಮತ್ತು ಸೋಲಿಗೇರಿ

3. **ನಿಮ್ಮ ಒಕ್ಕಲು ಯಾವುದು?**

ಯಂಟ್ರೋಣ್‌ಸ್ವಾಮಿ ಒಕ್ಕಲು

4. **ನೀವು ಹಬ್ಬ ಹರಿದಿನಗಳನ್ನು ಆಚರಿಸುತ್ತಿದ್ದೀರಾ? ಹೌದು(✓) ಇಲ್ಲ( )ಯಾವ ಯಾವ ಹಬ್ಬ ಆಚರಿಸುತ್ತೀರಿ?**

ಊರಿನಲ್ಲಿ ಮಾಡುವ ಎಲ್ಲಾ ಹಬ್ಬ ಮಾಡ್ತೀವೆ.

5. **ನಿಮ್ಮ ಸಮುದಾಯ (ಜಾತಿ)ದವರೇ ಪ್ರತ್ಯೇಕವಾಗಿ ಆಚರಿಸುವ ಹಬ್ಬ ಇದೆಯಾ? ಹೌದು (✓) ಇಲ್ಲ( )ಅದು ಯಾವುದು?**

ಮಾಗಡಿಯಲ್ಲಿ ಮಾಡ್ತಾರೆ ನಾವು ಹೋಗಿ ಬರ್ತೀವಿ.

6. **ನಿಮ್ಮ ಪಾರಂಪರಿಕ ಆಚರಣೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದೀರಾ ಹೌದು ( ) ಇಲ್ಲ(✓) ಅವು ಯಾವುವು? ಈ ಆಚರಣೆಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗದಿದ್ದಕ್ಕೆ ಕಾರಣವೇನು?**

ಕಾಡಿನಲ್ಲಿದ್ದಾಗ ಇವೆಲ್ಲ ಇದ್ದು. ಹೀಗ ಅಲ್ಲಿಂದ ಹೊರಗೆ ಹಾಕಿ, ಕಾಡಿನ ಒಳಗೆ ಹೋಗಲು ಬಿಡುತ್ತಿಲ್ಲ ಮತ್ತೇನು ಆಚರಿಸೋದು.

7. **ನಿಮ್ಮ ಕುಲದ ಹೆಸರು (ಕಕ್ಕೆಕುಲ)**

ಕಕ್ಕೆಕುಲ

VI. ನಿಮಗೆ ರಾಜಕೀಯದ ಬಗ್ಗೆ ತಿಳಿದಿದೆಯೇ ಹೌದು(✓) ಇಲ್ಲ( )

1. ನೀವು ಮತ (ಓಟು) ಹಾಕಿದ್ದೀರಾ? ಹೌದು(✓) ಇಲ್ಲ( ) ಇಲ್ಲವಾದರೆ ಕಾರಣವೇನು?

2. ನೀವು ಗ್ರಾಮ ಪಂಚಾಯಿತಿಯಲ್ಲಿ ಸ್ಪರ್ಧಿಸಿದ್ದೀರಾ? ಹೌದು( ) ಇಲ್ಲ(✓) ಹೌದಾದರೆ ಗ್ರಾಮ ಪಂಚಾಯಿತಿಯಲ್ಲಿ ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ? ನಿಮಗೆ ಅಧ್ಯಕ್ಷರ ಸ್ಥಾನ ನೀಡಿದ್ದಾರಾ? ನೀವು ಅಧ್ಯಕ್ಷರಾಗಿದ್ದಾಗ ನಿಮ್ಮನ್ನು ಯಾರಾದರೂ ನಿಯಂತ್ರಿಸಿದ್ದರಾ?

   ನಮ್ಮ ಜನರನ್ನು ಹೀಗೆ ನಡೆಸಿಕೊಳ್ಳುತ್ತಾರೆ ಅಂತ ನಿಮಗೆ ಗೊತ್ತಿಲ್ಲ. ಅಲ್ಲೆಲ್ಲ ಕೆಲವರದ್ದೇ ದರ್ಬಾರು. ಇಲ್ಲಿ ಮೀಸಲಾತಿಯೇ ಬಂದಿಲ್ಲ.

3. ಇಲ್ಲಿಯವರೆಗೂ ಮೀಸಲಾತಿ ಬಂದಿಲ್ಲವಾ ಅಥವಾ ಈ ವಿಷಯ ಗೊತ್ತಿಲ್ಲದಂತೆ ನೋಡಿಕೊಳ್ಳಲಾಗುತ್ತಿದೆಯಾ? ಹೌದು( ) ಇಲ್ಲ( ) ಗ್ರಾಮ ಪಂಚಾಯಿತಿಯಲ್ಲೂ ಜಾತಿಯತೆ ಮಾಡುತ್ತಾರೆಯೇ? ಹೌದು( ) ಇಲ್ಲ( )

   ಹಿಂದೊಂಮ್ಮೆ ಬಂದಿತ್ತಂತೆ

4. ಗ್ರಾಮ ಪಂಚಾಯಿತಿಯಲ್ಲಿ ನಿಮಗೆ ಏನೇನು ಸೌಲಭ್ಯ ಇದೆ ಎಂದು ಗೊತ್ತಾ ಹೌದು ( ) ಇಲ್ಲ( ) ಗೊತ್ತಿದ್ದರೆ ಹೇಗೆ ಗೊತ್ತಾಯಿತು? ಇಲ್ಲವಾದರೆ ಯಾಕೆ?

   ನಾವು ಪಂಚಾಯಿತಿಯ ಸದಸ್ಯರಾದ್ದರಿಂದ ಅಷ್ಟೋ ಇಷ್ಟು ತಿಳಿದಿದೆ.

5. ನಿಮಗೆ ಸಂಘಟನೆ, ಹೋರಾಟ, ಮೀಸಲಾತಿ, ಸರ್ಕಾರದ ಯೋಜನೆಗಳು, ಅಭಿವೃದ್ಧಿ ನಿಗಮಗಳು, ವಿಶೇಷ ಘಟಕ ಯೋಜನೆಗಳು, ತಾಲ್ಲೂಕು ಕಛೇರಿ, ಜಿಲ್ಲಾಧಿಕಾರಿ ಕಛೇರಿ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ನ್ಯಾಯಾಂಗ, ಕಾನೂನುಗಳ ಬಗ್ಗೆ ಮಾಹಿತಿ ಇದೆಯಾ? ಹೌದು( ) ಇಲ್ಲ( ).

ಸಂದರ್ಶದ ದಿನಾಂಕ	:	28–03–2017
ಹೆಸರು	:	ಮುನಿಯಪ್ಪ
ವಯಸ್ಸು	:	32
ಲಿಂಗ	:	ಗಂಡು
ಉದ್ಯೋಗ	:	ವ್ಯವಸಾಯ/ಸಂಘಟನೆ
ವಿಳಾಸ	:	ಎಳೆಗೆಹಳ್ಳಿ ಕಾಲೋನಿ, ಮಾಡಬಾಳ ಹೋಬಳಿ, ಮಾಗಡಿ ತಾಲೂಕು, ರಾಮನಗರ ಜಿಲ್ಲೆ 562 112

I. ನಿಮ್ಮ ಕೌಟುಂಬಿಕ ವ್ಯವಸ್ಥೆ ಎಂತಹದ್ದು?

ಅವಿಭಕ್ತ ಕುಟುಂಬ ಬೇರೆ ಬೇರೆಯೇ ವಾಸಿಸುತ್ತೇವೆ

1. **ಮುಖ್ಯ ತೀರ್ಮಾನ ಯಾರು ತೆಗೆದುಕೊಳ್ಳುತ್ತಾರೆ?**

   ನಮ್ಮ ಅಪ್ಪ ಮೊದಲು ತೆಗೆದುಕೊಳ್ಳುತ್ತಿದ್ದರು. ಈಗ ನಾನೇ ತಗೊಂಡರು ಅವರ ಒಪ್ಪಿಗೆ ಬೇಕು.

2. **ನಿಮ್ಮ ಕುಟುಂಬದಲ್ಲಿ ಹೆಣ್ಣಿನ ಸ್ಥಾನ ಮಾನ ಏನು?**

   ನಮಗೆಂಗೋ ಅವರಿಗೂ ಅಂಗೆನೇ

3. **ಬಹುಪತ್ನಿತ್ವ ಇದೆಯೇ(   ), ಇಲ್ಲವೇ(   ) ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು?**

   ನಮ್ಮಲ್ಲಿ ಇಲ್ಲ.

4. **ನಿಮ್ಮ ಕುಟುಂಬದಲ್ಲಿ ಮದುವೆಯ ವಯೋಮಾನ ಹೆಣ್ಣು(16) ಗಂಡು(22)**

   ಹೆಣ್ಣಿಗೆ 16ರಿಂದ 17, ಗಂಡಿಗೆ 22 ರಿಂದ 25ರ ವರೆಗೆ

5. **ನಿಮ್ಮ ಕುಟುಂಬದ ವಯೋಮಾನ ಎಷ್ಟು? ನಿಮ್ಮ ಉಟುಂಬದ ವೃತ್ತಿ ಮತ್ತು ಆದಾಯದ ಮೂಲ ಏನು?**

   ವರ್ಷಕ್ಕೆ 25000, 30,000, ವ್ಯವಸಾಯ, ನಾವೆಲ್ಲ ಒಂದೇ ಕಡೆ ಇದಿವಲ್ಲ. ಜೊತೆಗೆ ಇರ್ತೀವಿ. ಹಬ್ಬ ಹರಿದಿನಗಳಲ್ಲಿ ಒಟ್ಟಿಗೆ ಮಾಡ್ತೀವಿ.

II. **ಸುತ್ತ ಮುತ್ತಲಿನ ಜನರೋಡನೆ ನಿಮ್ಮ ಸಂಬಂಧ ಹೇಗಿದೆ?**

1. **ನಿಮಗೆ ಜಾತಿಯ ಶೋಷಣೆ ಇದೆಯೇ(✓), ಇಲ್ಲವೇ( )**

2. **ಶೋಷಣೆಗೆ ಶೋಷಕರು ಕೊಡುವ ಕಾರಣಗಳೇನು?**

   ಆಹಾರವೇ( ) ಬಟ್ಟೆ ಬರಿಯೇ(✓) ನಿಮ್ಮ ಬಣ್ಣವೇ(✓) ನಿಮ್ಮ ಆಚರಣೆಯೇ ( ) ನೀವು ಬದುಕುವ ರೀತಿ ನೀತಿಯೇ( ) ಇಲ್ಲ ಬಡತನವೇ(✓) ಅಥವಾ ನಿಮಗೆ ಅನಿಸಿದ್ದು?

   ನಮ್ಮಜನ ಕಾಡ್ ಜನ ಅರಕಲು ಬಟ್ಟೆ ಹಾಕೋತ್ತಾರೆ. ನೋಡೊಕೆ ಚೆನ್ನಾಗಿಲ್ವಲ್ಲ ಅದಕ್ಕೆ ಇರಬೇಕು.

3. **ಯಾವ ಸಮುದಾಯದ ಜನ ನಿಮ್ಮನ್ನು ಶೋಷಣೆಯಿಂದ ಕಾಣುತ್ತಿದ್ದರೆ (ಒಕ್ಕಲಿಗರು) ಅವರಿಗೂ ನಿಮಗೂ ಏನು ಸಂಬಂಧವಿದೆ? (ಅವರ ಫ್ಯಾಕ್ಟರಿಗಳಲ್ಲಿ, ಗದ್ದೆಗಳಲ್ಲಿ ಅಥವಾ ಮನೆಯಲ್ಲಿ ಜೀತಕ್ಕೆ ದುಡಿಯುತ್ತಿದ್ದೀರಾ?)**

   ನಾವು ಅವರ ಮನೆಗೆ ಕೂಲಿನಾಲಿಗೆ ಹೋಗ್ತೀವಿ. ಹಿಂದೆ ಇದ್ರಂತೆ ಹೀಗ ಇಲ್ಲ.

4. **ಜೀತ ಪದ್ಧತಿ ನಿಮ್ಮಲ್ಲಿ ಇದೆಯಾ(✓) ಇಲ್ಲವಾ( )**

   ಹಿಂದೆ ಇದ್ದ ಹಾಗೆ ಇಲ್ಲ. ದಿನ ಅವರ ಮನೆಗೆ ಕೂಲಿಗೆ ಹೋಗ್ತಾರೆ

5. **ನೀವು ಜೀತಕ್ಕೆ ಸೇರಿಕೊಳ್ಳಲು ಇರುವ ಪ್ರಮುಖ ಕಾರಣಗಳು ಯಾವುವು?**

   ಬಡತನ ಮತ್ತೇನು ಇಲ್ಲ, ಭೂಮಿ ಇಲ್ಲ.

6. **ಇತ್ತೀಚೆಗೆ ನಿಮ್ಮ ಸಮುದಾಯದವರ ಮೇಲೆ ಯಾವುದಾದರೊಂದು ಕಾರಣಕ್ಕೆ ಮೇಲ್ಜಾತಿಯವರು ಹಲ್ಲೆ ಮಾಡಿದ ಉದಾಹರಣೆಗಳಿವೆಯೇ? ಇದ್ದರೆ ಕಾರಣಗಳೇನು? ಆಗ ನಿಮ್ಮ ನೆರವಿಗೆ ಬಂದವರಾರು? (ಸಂಘಟನೆಗಳು, ವ್ಯಕ್ತಿಗಳು, ಅಧಿಕಾರಿಗಳು, ರಾಜಕಾರಣಿಗಳು ಮತ್ತು ಸ್ವಾಮೀಜಿಗಳು)**

   ದಾಳಿ ಮಾಡಿಲ್ಲ. ನಾವು ಅವರ ಸಹವಾಸಕ್ಕೆ ಹೋಗೋದಿಲ್ಲ.

7. **ನಿಮ್ಮ ಸಮುದಾಯದ ದುಸ್ಥಿತಿಗೆ ಕಾರಣಗಳು ಏನು? ನೀವು ಕೊಡ ಬಯಸುವ ಪ್ರಮುಖ ಕಾರಣಗಳು ಮತ್ತು ಸಲಹೆಗಳು.**

   ನಮ್ಮನ್ನು ಅರಣ್ಯದಿಂದ ಒಕ್ಕಲೆಬ್ಬಿಸಿದ್ದ ನಮಗೆ ನಮ್ಮ ಭೂಮಿ ಕೊಡಿ, ನಾವು ಕಾಡಲ್ಲಿ ಮುಕ್ತವಾಗಿ ಓಡಾಡಿಕೊಂಡಿರುವಂತೆ ಮಾಡಿ

III. ನಿಮ್ಮ ಜೀವನ ನಿರ್ವಹಣೆ ಹೇಗೆ?

ಕೂಲಿನಾಲಿ ಮಾಡಿಕೊಂಡು ಬದುಕುತ್ತಾ ಇದ್ದೀವಿ. ನಾನು ಆಫೀಸ್ ಈ ಆಫೀಸು ತಿರುಗುತ್ತಾ ಇದ್ದೀವಿ.

1. **ನಿಮ್ಮ ಮನೆಯಲ್ಲಿ ಯಾರು ಯಾರು ಎಲ್ಲೆಲ್ಲಿ ದುಡಿಯುತ್ತಾರೆ?**

ಎಲ್ಲರೂ ಇಲ್ಲಿ ಇರ್ತೀವಿ.

2. **ನಿಮ್ಮ ಪಾರಂಪರಿಕ ಕುಲ ಕಸುಬು ಯಾವುದು? ಅದು ಇಂದಿಗೂ ಇದೆಯಾ( ) ಇಲ್ಲವಾ( ) ಇಲ್ಲ ಎಂದರೆ ಕಾರಣವೇನು? ಯಾರನ್ನು ಹೊಣೆಗಾರಿಕೆ ಮಾಡುತ್ತೀರಿ?**

ಬೇಟೆಯಾಡುವುದು, ಎಲ್ಲ ಅರಣ್ಯ ಇಲಾಖೆಯವರು ನಮ್ಮನ್ನು ಕಾಡಿನ ಒಳಗೆ ಬಿಡುತ್ತಿಲ್ಲವಲ್ಲ.

3. **ನಿಮ್ಮ ಕುಲಕಸುಬು ಬಿಟ್ಟು ಬೇರೆ ಯಾವ ದುಡಿಮೆಯಲ್ಲಿ ತೊಡಗಿ ಕೊಳ್ಳಬೇಕೆಂದು ಅನ್ನಿಸಿದಾಗ ನೀವು ನಿರೀಕ್ಷಿಸಿದ ನೆರವು ಸಿಕ್ಕಿದೆಯೇ? ಹೌದು( ) ಇಲ್ಲ(✓) ಹೌದು ಎಂದರೆ ಯಾರ ನೆರವು? ಇಲ್ಲ ಎಂದರೆ ಏಕೆ?**

ಅದಕ್ಕೆ ಇನ್ನೊಬ್ಬರ ಮನೆಗೆ ಜೀತಕ್ಕೆ ಸೇರಿಕೊಳ್ಳುವಂತಾಯಿತು. ನಮಗೆ ಏನು ಗೊತ್ತು, ಏನು ಇಲ್ಲ, ಬುದ್ದಿ ಇಲ್ಲ.

4. **ಸರ್ಕಾರದ ಯೋಜನೆಗಳು ನಿಮ್ಮನ್ನು ಅಭಿವೃದ್ಧಿಗೊಳಿಸುತ್ತಿದೆ, ಎಂದು ನಿಮಗನಿಸುತ್ತದೆಯೇ? ಹೌದು( ) ಇಲ್ಲ(✓)**

ಯೋಜನೆಗಳೇನು ಸರ್ಕಾರ ಮಾಡುತ್ತಿದೆ. ಅದಕ್ಕೆ ಅದನ್ನು ಸಕಾರಗೊಳಿಸುವವರು ಸರಿಯಾಗಿಲ್ಲ.

5. **ನಿಮಗೆ ಭೂಮಿ ಇದೆಯಾ? ಹೌದು(✓) ಇಲ್ಲ( ), ಇದ್ದರೆ ಯಾವಾಗಿನಿಂದ ಇದೆ? ಇಲ್ಲ ಎಂದರೆ ಯಾವಗಿನಿಂದ ಇಲ್ಲ?**

ನಮ್ಮ ಅಪ್ಪನ ಕಾಲದಲ್ಲಿ ಸ್ವಲ್ಪ ಕಾಡನ್ನು ಕಡೆದು ಮಾಡಿಕೊಂಡಿದ್ದರು. ಹೀಗ ಅದನ್ನು ಅರಣ್ಯ ಇಲಾಖೆಯವರು ಕಿತ್ತುಕೊಂಡಿದ್ದಾರೆ.

6. **ಭೂಮಿ ಇದ್ದರೆ ಸದ್ಬಳಕೆ ಮಾಡಿಕೊಳ್ಳುತ್ತಿದ್ದೀರಾ ಹೌದು(✓) ಇಲ್ಲ( ) ಹೌದಾದರೆ ಹೇಗೆ? ಇಲ್ಲವಾದರೆ ಕಾರಣಗಳನ್ನು ಹೇಳಿ?**

ವ್ಯವಸಾಯ ಮಾಡಿಕೊಂಡು, ಸರ್ಕಾರದ ಸೌಲಭ್ಯ ಪಡೆಯಬಹುದಿತ್ತು.

7. **ನಿಮಗೆ ಇದ್ದ ಭೂಮಿಯನ್ನು ಕಿತ್ತುಕೊಳ್ಳಲಾಗಿದೆಯೇ ಹೌದು(✓) ಇಲ್ಲ(   ), ಇದಕ್ಕೆ ಕಾರಣ ಸರ್ಕಾರ (✓), ಭೂಮಾಲಿಕರು(✓), ಮೇಲ್ಜಾತಿಯವರು(   ) ಅದಕ್ಕೆ ಅವರು ಕೊಟ್ಟ ಕಾರಣವೇನು?**

   ಅರಣ್ಯಭೂಮಿ ಎಂದು ಅರಣ್ಯ ಇಲಾಖೆಯವರು ಕಿತ್ತುಕೊಂಡರೆ ಕೈ ಸಾಲ ಮಾಡಿಕೊಂಡಿದ್ದೇನೆ. ನೆಪಮಾಡಿಕೊಂಡು ನಮ್ಮ ಭೂಮಿಯನ್ನು ಮೇಲ್ಜಾತಿಯವರು ಕಿತ್ತುಕೊಂಡರು

IV. **ನಿಮ್ಮ ಶೈಕ್ಷಣಿಕ ಸ್ಥಿಗತಿಗಳು ಹೇಗಿದೆ?**

ಪರವಾಗಿಲ್ಲ

1. **ನಿಮ್ಮಲ್ಲಿರುವ ವಿದ್ಯಾವಂತರು ಎಷ್ಟು? ಹೆಣ್ಣು(1) ಗಂಡು(2)**

   ಸರಿಯಾಗಿ ಗೊತ್ತಿಲ್ಲ. ಹೀಗಾಗಿ ಅಲ್ಲೊಬ್ರು ಇಲ್ಲುಬ್ರು ಇರಬೇಕು.

2. **ನಿಮ್ಮಲ್ಲಿ ಸರ್ಕಾರಿ ನೌಕರರು ಇದ್ದಾರೆಯೇ ಹೌದು(   ) ಇಲ್ಲ(✓) ಯಾವ ನೌಕರಿ.**

3. **ನಿಮಗೆ ಶಿಕ್ಷಣದ ಬಗ್ಗೆ ಏನು ಅನಿಸುತ್ತದೆ? ನೀವು ಯಾಕೆ ಕಲಿಯಲಿಲ್ಲ, ನಿಮ್ಮ ಮಕ್ಕಳೆಲ್ಲ ಕಲಿಯುತ್ತಿದ್ದಾರ ಹೌದು(✓) ಇಲ್ಲ(   ) ಹೌದಾದರೆ ಅವರ ಕಲಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?**

   ಅವರು ಕಲಿಸಿದ್ದಕ್ಕೆ ಒಳ್ಳೆ ಕೆಲಸಬೇಕು ಅನಿಸುತ್ತದೆ.

4. **ನಿಮ್ಮೂರಿನಲ್ಲಿ ಶಾಲೆ ಇದೆಯೇ? ಹೌದು(✓) ಇಲ್ಲ(   )**

5. **ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದೀರಾ ಹೌದು(✓) ಇಲ್ಲ(   ) ಕಳುಹಿಸದಿದ್ದರೆ ಕಾರಣವೇನು?**

6. **ನಿಮಗೆ ನಿಮ್ಮ ಮಕ್ಕಳು ಏನಾಗಬೇಕೆಂದು ಆಸೆ ಇದೆ?**

   ಒಳ್ಳೆ ಕೆಲಸಕ್ಕೆ ಸೇರಿಕೋಬೇಕು, ಎಲ್ಲರಂತೆ ಕಾರುಗೀರು ತಗೋಬೇಕು.

7. **ನಿಮ್ಮ ಮಕ್ಕಳು ಏನು ಓದುತ್ತಿದ್ದಾರೆ ಅದರ ಬಗ್ಗೆ ನಿಮಗೆ ಗೊತ್ತಾ? ಹೌದು(   ) ಇಲ್ಲ ( ) ನಿಮ್ಮ ಮಕ್ಕಳು ಕಲಿತು ನಿಮ್ಮ ಪಾರಂಪರಿಕ ನಂಬಿಕೆ, ಜ್ಞಾನಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬ ಆತಂಕವೇನಾದರೂ ಇದೆಯಾ? ಹೌದು(✓) ಇಲ್ಲ (   )**

   ಇವತ್ತಿಗೆ ಆ ಎಲ್ಲ ಬೇಕಾಗಿಲ್ಲ. ಅವನ್ನ ನಂಬಿಕೊಂಡು ನಿಂತೆ ಹೊಟ್ಟೆಗಿರಲ್ಲ. ಕಾಲಕ್ಕೆ ತಕ್ಕಂತೆ ಬದಲಾಗಬೇಕು.

8. ನೀವು ಯಾವ ರೀತಿಯ ಶಿಕ್ಷಣ ಬಯಸುತ್ತೀರಾ? ಯಾಕೆಂದರೆ ನಿಮ್ಮ ಮನೆಯಲ್ಲಿ ಕಲಿತ ಮಗ/ ಮಗಳು, ಕಲಿಯದ (ಓದು ಬರಹ) ಮಗ/ ಮಗಳನ್ನು ನೋಡಿ ಏನೆನಿಸುತ್ತದೆ?

ಶಿಕ್ಷಣವಾಗಬೇಕು. ವಿದ್ಯೆ ಕಲಿತವರು ಬುದ್ದಿವಂತರಲ್ಲವೆ.

9. ಮೀಸಲಾತಿ, ಮೂಲಭೂತ ಸೌಲಭ್ಯ ಮತ್ತು ಉದ್ಯೋಗ ಇವುಗಳ ಬಗ್ಗೆ ಮಾಹಿತಿ ಇದೆಯಾ ಹೌದು(   ) ಇಲ್ಲ(✓) ಇದರ ಬಗ್ಗೆ ನಿಮ್ಮ ಅಭಿಪ್ರಾಯ ಹೇಳಿ?

ನಮ್ಮನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದ್ದಾರೆ. ಅದರಲ್ಲಿ 51 ಜಾತಿಗಳು ಬರುತ್ತವೆ. ಇವು ಸಣ್ಣ ಸಮುದಾಯವಾದ್ದರಿಮದ ಬಹುಸಂಖ್ಯಾತರು ಇಡೀ ಮೀಸಲಾತಿಯನ್ನು ಪಡೆದುಕೊಳ್ಳುತ್ತಿದ್ದಾರೆ. ಇವತ್ತಿನವರೆಗೂ ನಮ್ಮಲ್ಲಿ ಒಬ್ಬರಿಗೆ ಸರ್ಕಾರಿ ಕೆಲಸ ಸಿಕ್ಕಿಲ್ಲ. ಅದಕ್ಕೆ ನಮಗೆ ಪ್ರತ್ಯೇಕವಾದ ಮೀಸಲಾತಿ ಬೇಕು.

V. ನಿಮ್ಮ ಆಚರಣೆಗಳ ವಿಶೇಷತೆಗಳೇನು?

1. ನಿಮ್ಮ ಮನೆ ದೇವರು ಯಾವುದು?

ಗಂಡು ದೇವರು: ನಂಜುಂಡೇಶ್ವರ, ಹೆಣ್ಣು ದೇವರು: ಎಳಿಯಮ್ಮ, ಬರೆಯಮ್ಮ

2. ಆ ದೇವರ ಮೂಲ ಸ್ಥಳ ಯಾವುದು?

ಮಾಗಡಿ/ ನಂಜನಗೂಡು

3. ನಿಮ್ಮ ಒಕ್ಕಲು ಯಾವುದು?

ನಂಜುಂಡೇಶ್ವರನ ಒಕ್ಕಲು

4. ನೀವು ಹಬ್ಬ ಹರಿದಿನಗಳನ್ನು ಆಚರಿಸುತ್ತಿದ್ದೀರಾ? ಹೌದು(✓) ಇಲ್ಲ(   )ಯಾವ ಯಾವ ಹಬ್ಬ ಆಚರಿಸುತ್ತೀರಿ?

ಎಲ್ಲರು ಆಚರಿಸುವ ಹಬ್ಬಗಳನ್ನೆಲ್ಲ ಆಚರಿಸುತ್ತೇವೆ.

5. ನಿಮ್ಮ ಸಮುದಾಯ (ಜಾತಿ)ದವರೇ ಪ್ರತ್ಯೇಕವಾಗಿ ಆಚರಿಸುವ ಹಬ್ಬ ಇದೆಯಾ? ಹೌದು (✓) ಇಲ್ಲ(   )ಅದು ಯಾವುದು?

ಹಿರಿಯರಬ್ಬ/ ಈರಬ್ಬ

6. ನಿಮ್ಮ ಪಾರಂಪರಿಕ ಆಚರಣೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದೀರಾ ಹೌದು ( ) ಇಲ್ಲ(✓) ಅವು ಯಾವುವು? ಈ ಆಚರಣೆಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗದಿದ್ದಕ್ಕೆ ಕಾರಣವೇನು?

7. ನಿಮ್ಮ ಕುಲದ ಹೆಸರು (ಬೆಳ್ಳಿಕುಲ)

VI. ನಿಮಗೆ ರಾಜಕೀಯದ ಬಗ್ಗೆ ತಿಳಿದಿದೆಯೇ ಹೌದು(✓) ಇಲ್ಲ(   )

1. ನೀವು ಮತ (ಓಟು) ಹಾಕಿದ್ದೀರಾ? ಹೌದು(✓) ಇಲ್ಲ( ) ಇಲ್ಲವಾದರೆ ಕಾರಣವೇನು?
2. ನೀವು ಗ್ರಾಮ ಪಂಚಾಯಿತಿಯಲ್ಲಿ ಸ್ಪರ್ಧಿಸಿದ್ದೀರಾ? ಹೌದು(   ) ಇಲ್ಲ(✓) ಹೌದಾದರೆ ಗ್ರಾಮ ಪಂಚಾಯಿತಿಯಲ್ಲಿ ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ? ನಿಮಗೆ ಅಧ್ಯಕ್ಷರ ಸ್ಥಾನ ನೀಡಿದ್ದಾರಾ? ನೀವು ಅಧ್ಯಕ್ಷರಾಗಿದ್ದಾಗ ನಿಮ್ಮನ್ನು ಯಾರಾದರೂ ನಿಯಂತ್ರಿಸಿದ್ದರಾ?
3. ಇಲ್ಲಿಯವರೆಗೂ ಮೀಸಲಾತಿ ಬಂದಿಲ್ಲವಾ ಅಥವಾ ಈ ವಿಷಯ ಗೊತ್ತಿಲ್ಲದಂತೆ ನೋಡಿಕೊಳ್ಳಲಾಗುತ್ತಿದೆಯಾ? ಹೌದು(   ) ಇಲ್ಲ(   ) ಗ್ರಾಮ ಪಂಚಾಯಿತಿಯಲ್ಲೂ ಜಾತಿಯತೆ ಮಾಡುತ್ತಾರೆಯೇ? ಹೌದು(   ) ಇಲ್ಲ(   )
4. ಗ್ರಾಮ ಪಂಚಾಯಿತಿಯಲ್ಲಿ ನಿಮಗೆ ಏನೇನು ಸೌಲಭ್ಯ ಇದೆ ಎಂದು ಗೊತ್ತಾ ಹೌದು (   ) ಇಲ್ಲ(   ) ಗೊತ್ತಿದ್ದರೆ ಹೇಗೆ ಗೊತ್ತಾಯಿತು? ಇಲ್ಲವಾದರೆ ಯಾಕೆ?

   ನಾನು ಸರ್ಕಾರಿ ಇಲಾಖೆಗಳ ಕಡೆ ಓಡಾಡುವುದರಿಂದ ಗೊತ್ತಾಯಿತು.
5. ನಿಮಗೆ ಸಂಘಟನೆ, ಹೋರಾಟ, ಮೀಸಲಾತಿ, ಸರ್ಕಾರದ ಯೋಜನೆಗಳು, ಅಭಿವೃದ್ಧಿ ನಿಗಮಗಳು, ವಿಶೇಷ ಘಟಕ ಯೋಜನೆಗಳು, ತಾಲ್ಲೂಕು ಕಛೇರಿ, ಜಿಲ್ಲಾಧಿಕಾರಿ ಕಛೇರಿ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ನ್ಯಾಯಾಂಗ, ಕಾನೂನುಗಳ ಬಗ್ಗೆ ಮಾಹಿತಿ ಇದೆಯಾ? ಹೌದು(✓) ಇಲ್ಲ(   ).

ಸಂದರ್ಶದ ದಿನಾಂಕ : 29-03-2017

ಹೆಸರು : ಲಕ್ಷ್ಮಿ ಶಿವಣ್ಣ

ವಯಸ್ಸು : 29

ಲಿಂಗ : ಹೆಣ್ಣು

ಉದ್ಯೋಗ : ಕೂಲಿ

ವಿಳಾಸ : ಗುಡಿಯೂರು(ತೇರುಬೀದಿ), ಡೆಕ್ಕಣಿಕೋಟೆ ತಾಲೂಕು, ಕೃಷ್ಣಗಿರಿ ಜಿಲ್ಲೆ

I. ನಿಮ್ಮ ಕೌಟುಂಬಿಕ ವ್ಯವಸ್ಥೆ ಎಂತಹದ್ದು?

ಬೇರೆ ಬೇರೆಯಾಗಿದ್ದೀವಿ

1. **ಮುಖ್ಯ ತೀರ್ಮಾನ ಯಾರು ತೆಗೆದುಕೊಳ್ಳುತ್ತಾರೆ?**

ನಮ್ಮ ಯಜಮಾನ್ರು

2. **ನಿಮ್ಮ ಕುಟುಂಬದಲ್ಲಿ ಹೆಣ್ಣಿನ ಸ್ಥಾನ ಮಾನ ಏನು?**

ಎಲ್ಲಾದ್ರೆಲೂ ನನ್ನನ್ನು ಕೇಳ್ತಾರೆ. ಇಬ್ರು ದುಡಿತೀವಿ. ಕಾಸುಕರಿಮಣಿಯಲ್ಲ ನನ್ನ ಕೈಲೆ ಕೊಡ್ತಾರೆ.

3. **ಬಹುಪತ್ನಿತ್ವ ಇದೆಯೇ( ), ಇಲ್ಲವೇ( ) ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ನಮ್ಮಲ್ಲಿ ಅವೆಲ್ಲ ಇಲ್ಲ

4. **ನಿಮ್ಮ ಕುಟುಂಬದಲ್ಲಿ ಮದುವೆಯ ವಯೋಮಾನ ಹೆಣ್ಣು(16) ಗಂಡು(21)**

5. **ನಿಮ್ಮ ಕುಟುಂಬದ ವಯೋಮಾನ ಎಷ್ಟು? ನಿಮ್ಮ ಉಟುಂಬದ ವೃತ್ತಿ ಮತ್ತು ಆದಾಯದ ಮೂಲ ಏನು?**

25000ರಿಂದ 30000 ಇರಬೇಕು. ನಮ್ಮ ಯಜಮಾನ್ರುಗೆ ಗೊತ್ತು. ನಂಗೆ ಗೊತ್ತಿಲ್ಲ.

II. ಸುತ್ತ ಮುತ್ತಲಿನ ಜನರೋಡನೆ ನಿಮ್ಮ ಸಂಬಂಧ ಹೇಗಿದೆ?

ಚೆನ್ನಾಗಿದೆ

1. **ನಿಮಗೆ ಜಾತಿಯ ಶೋಷಣೆ ಇದೆಯೇ(✓), ಇಲ್ಲವೇ( )**

2. **ಶೋಷಣೆಗೆ ಶೋಷಕರು ಕೊಡುವ ಕಾರಣಗಳೇನು?**

   ಆಹಾರವೇ( ) ಬಟ್ಟೆ ಬರಿಯೇ(✓) ನಿಮ್ಮ ಬಣ್ಣವೇ(✓) ನಿಮ್ಮ ಆಚರಣೆಯೇ ( ) ನೀವು ಬದುಕುವ ರೀತಿ ನೀತಿಯೇ( ) ಇಲ್ಲ ಬಡತನವೇ(✓) ಅಥವಾ ನಿಮಗೆ ಅನಿಸಿದ್ದು?

   ನಮ್ಮೋರಷ್ಟು ಅವರೇನು ಪವಿತ್ರ ಅಲ್ಲ. ಆದ್ರಾ ಶ್ರೇಷ್ಠ ಮಾಡ್ತಾರೆ. ನಮಗೆ ದೇವ್ರು ಬಡನತಕೊಟ್ಟುಕೊಳ್ತನಾ ಕೊಟ್ಟಿದ್ದಾನೆ.

3. **ಯಾವ ಸಮುದಾಯದ ಜನ ನಿಮ್ಮನ್ನು ಶೋಷಣೆಯಿಂದ ಕಾಣುತ್ತಿದ್ದರೆ (ಒಕ್ಕಲಿಗರು) ಅವರಿಗೂ ನಿಮಗೂ ಏನು ಸಂಬಂಧವಿದೆ? (ಅವರ ಫ್ಯಾಕ್ಟರಿಗಳಲ್ಲಿ, ಗದ್ದೆಗಳಲ್ಲಿ ಅಥವಾ ಮನೆಯಲ್ಲಿ ಜೀತಕ್ಕೆ ದುಡಿಯುತ್ತಿದ್ದೀರಾ?)**

   ಅವರ ಹೊಲಕ್ಕೆ ಕೂಲಿಗೆ ಹೋಗ್ತೀವಿ.

4. **ಜೀತ ಪದ್ಧತಿ ನಿಮ್ಮಲ್ಲಿ ಇದೆಯಾ(✓) ಇಲ್ಲವಾ( )**

   ಹಿಂದೆ ಇದ್ದಾಂಗೆ ಇಲ್ಲ. ಈಗ ದಿನಾಲು ಅವರ ಹೊಲಕ್ಕೆ ಹೋಗಿ ದುಡಿಬೇಕು.

5. **ನೀವು ಜೀತಕ್ಕೆ ಸೇರಿಕೊಳ್ಳಲು ಇರುವ ಪ್ರಮುಖ ಕಾರಣಗಳು ಯಾವುವು?**

   ಬಡತನ ಮತ್ತೇನು, ನಮಗೂ ಭೂಮಿ ಇದ್ರೆ ನಾವ್ಯಾಕೆ ಇನ್ನೊಬ್ರತ್ರ ಹೋಗ್ಬೇಕು.

6. **ಇತ್ತೀಚೆಗೆ ನಿಮ್ಮ ಸಮುದಾಯದವರ ಮೇಲೆ ಯಾವುದಾದರೊಂದು ಕಾರಣಕ್ಕೆ ಮೇಲ್ಜಾತಿಯವರು ಹಲ್ಲೆ ಮಾಡಿದ ಉದಾಹರಣೆಗಳಿವೆಯೇ? ಇದ್ದರೆ ಕಾರಣಗಳೇನು? ಆಗ ನಿಮ್ಮ ನೆರವಿಗೆ ಬಂದವರಾರು? (ಸಂಘಟನೆಗಳು, ವ್ಯಕ್ತಿಗಳು, ಅಧಿಕಾರಿಗಳು, ರಾಜಕಾರಣಿಗಳು ಮತ್ತು ಸ್ವಾಮೀಜಿಗಳು)**

   ಅಂತಾದೇನು ನಂಗೆ ಗೊತ್ತಿಲ್ಲ.

7. **ನಿಮ್ಮ ಸಮುದಾಯದ ದುಸ್ಥಿತಿಗೆ ಕಾರಣಗಳು ಏನು? ನೀವು ಕೊಡ ಬಯಸುವ ಪ್ರಮುಖ ಕಾರಣಗಳು ಮತ್ತು ಸಲಹೆಗಳು.**

   ನಮಗೆ ಭೂಮಿ ಇಲ್ಲ, ನಮಗೆ ಕಾಡಿಗೆ ಹೋಗಲು ಬಿಡಬೇಕು. ನಾವು ಕಾಡು ಕಡಿದು ಮಾಡಿಕೊಂಡಿದ್ದ ಭೂಮಿಯನ್ನು ನಮಗೆ ಕೊಡಬೇಕು.

III. ನಿಮ್ಮ ಜೀವನ ನಿರ್ವಹಣೆ ಹೇಗೆ?

ಕೂಲಿನಾಲಿ ಮಾಡಿಕೊಂಡು

1. ನಿಮ್ಮ ಮನೆಯಲ್ಲಿ ಯಾರು ಯಾರು ಎಲ್ಲೆಲ್ಲಿ ದುಡಿಯುತ್ತಾರೆ?

ಇಲ್ಲಿರೂ ಇಲ್ಲೇ ಇದ್ದಾರೆ ಕೂಲಿ ಮಡಿಕೊಂಡು

2. ನಿಮ್ಮ ಪಾರಂಪರಿಕ ಕುಲ ಕಸುಬು ಯಾವುದು? ಅದು ಇಂದಿಗೂ ಇದೆಯಾ(   ) ಇಲ್ಲವಾ(   ) ಇಲ್ಲ ಎಂದರೆ ಕಾರಣವೇನು? ಯಾರನ್ನು ಹೊಣೆಗಾರಿಕೆ ಮಾಡುತ್ತೀರಿ?

ಅದಕ್ಕೆಲ್ಲ ಹೀಗೆ ಬೆಳೆ ಸಿಗಬೇಕು. ಕಾಡಿನ ಒಳಕ್ಕೆ ಬಿಡದಿದ್ದಾಗ ನಮಗೆ ನಮ್ಮ ಕಸಬು ಎಲ್ಲಿಂದ ಮಾಡೋದು.

3. ನಿಮ್ಮ ಕುಲಕಸುಬು ಬಿಟ್ಟು ಬೇರೆ ಯಾವ ದುಡಿಮೆಯಲ್ಲಿ ತೊಡಗಿ ಕೊಳ್ಳಬೇಕೆಂದು ಅನ್ನಿಸಿದಾಗ ನೀವು ನಿರೀಕ್ಷಿಸಿದ ನೆರವು ಸಿಕ್ಕಿದೆಯೇ? ಹೌದು(   ) ಇಲ್ಲ(✓) ಹೌದು ಎಂದರೆ ಯಾರ ನೆರವು? ಇಲ್ಲ ಎಂದರೆ ಏಕೆ?

ಯಾರಿದ್ದಾರೆ ನಮಗೆ ನಾವೇ ದುಡಿಬೇಕು ನಾವೇ ತಿನ್ನಬೇಕು.

4. ಸರ್ಕಾರದ ಯೋಜನೆಗಳು ನಿಮ್ಮನ್ನು ಅಭಿವೃದ್ಧಿಗೊಳಿಸುತ್ತಿದೆ, ಎಂದು ನಿಮಗನಿಸು ತ್ತದೆಯೇ? ಹೌದು(   ) ಇಲ್ಲ(✓)

5. ನಿಮಗೆ ಭೂಮಿ ಇದೆಯಾ? ಹೌದು(✓) ಇಲ್ಲ(   ), ಇದ್ದರೆ ಯಾವಾಗಿನಿಂದ ಇದೆ? ಇಲ್ಲ ಎಂದರೆ ಯಾವಗಿನಿಂದ ಇಲ್ಲ?

ಎರಡು ಎಕ್ಕರೆ ನಮ್ಮ ಅಜ್ಜನ ಕಾಲದಲ್ಲಿ ಬಂದಿದೆ.

6. ಭೂಮಿ ಇದ್ದರೆ ಸದ್ಬಳಕೆ ಮಾಡಿಕೊಳ್ಳುತ್ತಿದ್ದೀರಾ ಹೌದು(✓) ಇಲ್ಲ(   ) ಹೌದಾದರೆ ಹೇಗೆ? ಇಲ್ಲವಾದರೆ ಕಾರಣಗಳನ್ನು ಹೇಳಿ?

ವ್ಯವಸಾಯ ಅಥವಾ ಏನಾದ್ರು ಬೆಳೆ ಬೆಳೆದು ಬದುಕುತ್ತಾದ್ವಿ

7. ನಿಮಗೆ ಇದ್ದ ಭೂಮಿಯನ್ನು ಕಿತ್ತುಕೊಳ್ಳಲಾಗಿದೆಯೇ ಹೌದು(✓) ಇಲ್ಲ(   ), ಇದಕ್ಕೆ ಕಾರಣ ಸರ್ಕಾರ (   ), ಭೂಮಾಲಿಕರು(), ಮೇಲ್ಜಾತಿಯವರು(   ) ಅದಕ್ಕೆ ಅವರು ಕೊಟ್ಟ ಕಾರಣವೇನು?

IV. ನಿಮ್ಮ ಶೈಕ್ಷಣಿಕ ಸ್ಥಿಗತಿಗಳು ಹೇಗಿದೆ?

1. ನಿಮ್ಮಲ್ಲಿರುವ ವಿದ್ಯಾವಂತರು ಎಷ್ಟು? ಹೆಣ್ಣು(1) ಗಂಡು(1)

2. ನಿಮ್ಮಲ್ಲಿ ಸರ್ಕಾರಿ ನೌಕರರು ಇದ್ದಾರೆಯೇ ಹೌದು(   ) ಇಲ್ಲ(✓) ಯಾವ ನೌಕರಿ.

3. ನಿಮಗೆ ಶಿಕ್ಷಣದ ಬಗ್ಗೆ ಏನು ಅನಿಸುತ್ತದೆ? ನೀವು ಯಾಕೆ ಕಲಿಯಲಿಲ್ಲ, ನಿಮ್ಮ ಮಕ್ಕಳೆಲ್ಲ

ಕಲಿಯುತ್ತಿದ್ದಾರ ಹೌದು(✓) ಇಲ್ಲ( ) ಹೌದಾದರೆ ಅವರ ಕಲಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?

ನಾವು ಎಲ್ಲ ಕಲಿಯೋದು ನಮ್ಮ ಅಪ್ಪ ಕಳಿಸಲಿಲ್ಲ. ನಾವು 7ನೇ ತರಗತಿವರೆಗೂ ಓದಿಕೊಂಡು ನಂತರ 3ರಿಂದ 4 ಕಿ.ಮೀ.ದೂರ ಹೋಗಬೇಕು ಬಸ್ ಇಲ್ಲ, ರಸ್ತೆ ಇಲ್ಲ ಏನ್ ಮಾಡೋದು.

4. **ನಿಮ್ಮೂರಿನಲ್ಲಿ ಶಾಲೆ ಇದೆಯೇ? ಹೌದು(✓) ಇಲ್ಲ( )**

5. **ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದೀರಾ ಹೌದು(✓) ಇಲ್ಲ( ) ಕಳುಹಿಸದಿದ್ದರೆ ಕಾರಣವೇನು?**

ಊರಲ್ಲಿ 7ನೇ ತರತಗತಿಯವರೆಗೂ ಇದೆ ನಂತರ ಪಕ್ಕದ ಊರಿಗೆ ಹೋಗಬೇಕು. ಒಪ್ಪಲಿಲ್ಲ. ಸರಿಯಾದ ದಾರಿ ಇಲ್ಲ, ಓಡಾಡಲು ಆಗದಿದ್ದರಿಂದ ಮುಂದೆ ಹೋಗಲು ಸಾಧ್ಯವಾಗಲಿಲ್ಲ.

6. **ನಿಮಗೆ ನಿಮ್ಮ ಮಕ್ಕಳು ಏನಾಗಬೇಕೆಂದು ಆಸೆ ಇದೆ?**

ಚೆನ್ನಾಗಿ ಓದಿಕೊಂಡು ಯಾವುದಾದರೂ ಒಳ್ಳೇ ಕೆಲಸಕ್ಕೆ ಹೋಗಿ ಸಂಪಾದಿಸಬೇಕು.

7. **ನಿಮ್ಮ ಮಕ್ಕಳು ಏನು ಓದುತ್ತಿದ್ದಾರೆ ಅದರ ಬಗ್ಗೆ ನಿಮಗೆ ಗೊತ್ತಾ? ಹೌದು( ) ಇಲ್ಲ ( ) ನಿಮ್ಮ ಮಕ್ಕಳು ಕಲಿತು ನಿಮ್ಮ ಪಾರಂಪರಿಕ ನಂಬಿಕೆ, ಜ್ಞಾನಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬ ಆತಂಕವೇನಾದರೂ ಇದೆಯಾ? ಹೌದು(✓) ಇಲ್ಲ ( )**

ಬೇಕಾಗಿಲ್ಲ

8. **ನೀವು ಯಾವ ರೀತಿಯ ಶಿಕ್ಷಣ ಬಯಸುತ್ತೀರಾ? ಯಾಕೆಂದರೆ ನಿಮ್ಮ ಮನೆಯಲ್ಲಿ ಕಲಿತ ಮಗ/ ಮಗಳು, ಕಲಿಯದ (ಓದು ಬರಹ) ಮಗ/ ಮಗಳನ್ನು ನೋಡಿ ಏನೆನಿಸುತ್ತದೆ?**

ಓದಿದೋರು ಒಳ್ಳೆ ಮಾತಾಡೋದನ್ನ ಕಲಿತುಕೊತ್ತಾರೆ ಅಲ್ವ

9. **ಮೀಸಲಾತಿ, ಮೂಲಭೂತ ಸೌಲಭ್ಯ ಮತ್ತು ಉದ್ಯೋಗ ಇವುಗಳ ಬಗ್ಗೆ ಮಾಹಿತಿ ಇದೆಯಾ ಹೌದು( ) ಇಲ್ಲ(✓) ಇದರ ಬಗ್ಗೆ ನಿಮ್ಮ ಅಭಿಪ್ರಾಯ ಹೇಳಿ?**

V. ನಿಮ್ಮ ಆಚರಣೆಗಳ ವಿಶೇಷತೆಗಳೇನು?

1. **ನಿಮ್ಮ ಮನೆ ದೇವರು ಯಾವುದು?**

ಗಂಡು ದೇವರು: ದಬ್ಲೂಳಪ್ಪ, ಹೆಣ್ಣು ದೇವರು: ದಬ್ಲೂಳಮ್ಮ

2. ಆ ದೇವರ ಮೂಲ ಸ್ಥಳ ಯಾವುದು?

ಮರಳವಾಡಿ

3. ನಿಮ್ಮ ಒಕ್ಕಲು ಯಾವುದು?

ಧರ್ಮರಾಯರ ಒಕ್ಕಲು

4. ನೀವು ಹಬ್ಬ ಹರಿದಿನಗಳನ್ನು ಆಚರಿಸುತ್ತಿದ್ದೀರಾ? ಹೌದು(✓) ಇಲ್ಲ( )ಯಾವ ಯಾವ ಹಬ್ಬ ಆಚರಿಸುತ್ತೀರಿ?

ಸಂಕ್ರಾಂತಿ, ಯುಗಾದಿ, ದೀಪಾವಳಿ, ಪೊಂಗಲ್, ಕರ್ನಾಟಕ ಮತ್ತು ತಮಿಳುನಾಡಿನ ಮಧ್ಯೆ ಇರುವುದರಿಂದ ಎಲ್ಲ ಹಬ್ಬನು ಆಚಾರಿಸುತ್ತೇವೆ.

5. ನಿಮ್ಮ ಸಮುದಾಯ (ಜಾತಿ)ದವರೇ ಪ್ರತ್ಯೇಕವಾಗಿ ಆಚರಿಸುವ ಹಬ್ಬ ಇದೆಯಾ? ಹೌದು (✓) ಇಲ್ಲ( )ಅದು ಯಾವುದು?

6. ನಿಮ್ಮ ಪಾರಂಪರಿಕ ಆಚರಣೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದೀರಾ ಹೌದು ( ) ಇಲ್ಲ(✓) ಅವು ಯಾವುವು? ಈ ಆಚರಣೆಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗದಿದ್ದಕ್ಕೆ ಕಾರಣವೇನು?

ಯಾರಿಗೆ ಬೇಕು

7. ನಿಮ್ಮ ಕುಲದ ಹೆಸರು (ಆಲದ ಕುಲ)

VI. ನಿಮಗೆ ರಾಜಕೀಯದ ಬಗ್ಗೆ ತಿಳಿದಿದೆಯೇ ಹೌದು() ಇಲ್ಲ(✓)

1. ನೀವು ಮತ (ಓಟು) ಹಾಕಿದ್ದೀರಾ? ಹೌದು(✓) ಇಲ್ಲ( ) ಇಲ್ಲವಾದರೆ ಕಾರಣವೇನು?

2. ನೀವು ಗ್ರಾಮ ಪಂಚಾಯಿತಿಯಲ್ಲಿ ಸ್ಪರ್ಧಿಸಿದ್ದೀರಾ? ಹೌದು( ) ಇಲ್ಲ(✓) ಹೌದಾದರೆ ಗ್ರಾಮ ಪಂಚಾಯಿತಿಯಲ್ಲಿ ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ? ನಿಮಗೆ ಅಧ್ಯಕ್ಷರ ಸ್ಥಾನ ನೀಡಿದ್ದಾರಾ? ನೀವು ಅಧ್ಯಕ್ಷರಾಗಿದ್ದಾಗ ನಿಮ್ಮನ್ನು ಯಾರಾದರೂ ನಿಯಂತ್ರಿಸಿದ್ದರಾ?

3. ಇಲ್ಲಿಯವರೆಗೂ ಮೀಸಲಾತಿ ಬಂದಿಲ್ಲವಾ ಅಥವಾ ಈ ವಿಷಯ ಗೊತ್ತಿಲ್ಲದಂತೆ ನೋಡಿಕೊಳ್ಳಲಾಗುತ್ತಿದೆಯಾ? ಹೌದು( ) ಇಲ್ಲ( ) ಗ್ರಾಮ ಪಂಚಾಯಿತಿಯಲ್ಲೂ ಜಾತಿಯತೆ ಮಾಡುತ್ತಾರೆಯೇ? ಹೌದು( ) ಇಲ್ಲ( )

4. ಗ್ರಾಮ ಪಂಚಾಯಿತಿಯಲ್ಲಿ ನಿಮಗೆ ಏನೇನು ಸೌಲಭ್ಯ ಇದೆ ಎಂದು ಗೊತ್ತಾ ಹೌದು ( ) ಇಲ್ಲ( ) ಗೊತ್ತಿದ್ದರೆ ಹೇಗೆ ಗೊತ್ತಾಯಿತು? ಇಲ್ಲವಾದರೆ ಯಾಕೆ?

ನಮ್ಮ ಯಜಮಾನರಿಗೆ ಗೊತ್ತು

5. ನಿಮಗೆ ಸಂಘಟನೆ, ಹೋರಾಟ, ಮೀಸಲಾತಿ, ಸರ್ಕಾರದ ಯೋಜನೆಗಳು, ಅಭಿವೃದ್ಧಿ ನಿಗಮಗಳು, ವಿಶೇಷ ಘಟಕ ಯೋಜನೆಗಳು, ತಾಲ್ಲೂಕು ಕಛೇರಿ, ಜಿಲ್ಲಾಧಿಕಾರಿ ಕಛೇರಿ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ನ್ಯಾಯಾಂಗ, ಕಾನೂನುಗಳ ಬಗ್ಗೆ ಮಾಹಿತಿ ಇದೆಯಾ? ಹೌದು(✓) ಇಲ್ಲ(   ).

ಸಂದರ್ಶದ ದಿನಾಂಕ : 26-03-2017

ಹೆಸರು : ಕೆಂಪಮ್ಮ

ವಯಸ್ಸು : 56

ಲಿಂಗ : ಹೆಣ್ಣು

ಉದ್ಯೋಗ : ಕೂಲಿ

ವಿಳಾಸ : ಹೊಸಕೋಟೆ, ಕನಕಪುರ ತಾಲೂಕು, ಕಸಬಾ ಹೋಬಳಿ, ಕನಕಪುರ ತಾಲೂಕು, ರಾಮನಗರ ಜಿಲ್ಲೆ

I. ನಿಮ್ಮ ಕೌಟುಂಬಿಕ ವ್ಯವಸ್ಥೆ ಎಂತಹದ್ದು?

ಒಟ್ಟಿಗೆ ಇಲ್ಲ. ಬ್ಯಾರೆ ಬ್ಯಾರೇನೆ ಮದ್ವೆ ಆದ್ರೆ ಸಾಕು ನಾವು ಬ್ಯಾರ ಬ್ಯಾರೇನೆ

1. **ಮುಖ್ಯ ತೀರ್ಮಾನ ಯಾರು ತೆಗೆದುಕೊಳ್ಳುತ್ತಾರೆ?**

   ನನ್ನ ಗಂಡ ಇದ್ದಾಗ ತಗೋತ್ತಿದ್ದ ಈಗ ನಾನೇ

2. **ನಿಮ್ಮ ಕುಟುಂಬದಲ್ಲಿ ಹೆಣ್ಣಿನ ಸ್ಥಾನ ಮಾನ ಏನು?**

   ಅಂಗಂದ್ರೆ ಗೊತ್ತಿಲ್ಲ

3. **ಬಹುಪತ್ನಿತ್ವ ಇದೆಯೇ( ), ಇಲ್ಲವೇ( ) ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು?**

   ಎರಡುಮೂರು ಮದುವೆ ಆಗಿ ಎನ್ ಮಾಡೋದು. ಅವರಿಗೆ ಶಕ್ತಿ ಇದ್ರೆ ಮಾಡ್ಕೊತ್ತಾರೆ.

4. **ನಿಮ್ಮ ಕುಟುಂಬದಲ್ಲಿ ಮದುವೆಯ ವಯೋಮಾನ ಹೆಣ್ಣು(16) ಗಂಡು(17)**

5. **ನಿಮ್ಮ ಕುಟುಂಬದ ವಯೋಮಾನ ಎಷ್ಟು? ನಿಮ್ಮ ಉಟುಂಬದ ವೃತ್ತಿ ಮತ್ತು ಆದಾಯದ ಮೂಲ ಏನು?**

   ಎಂಟೊಂಬತ್ತು ಸಾವಿರ ಇರಬೇಕು, ಇನ್ನೇನೂ ಇದೆಸ್ವಾಮಿ, ಭೂಮಿ ಇಲ್ಲ ಗೀಮಿ ಇಲ್ಲ. ಕೂಲನೇ ಗತಿ.

II. ಸುತ್ತ ಮುತ್ತಲಿನ ಜನರೊಡನೆ ನಿಮ್ಮ ಸಂಬಂಧ ಹೇಗಿದೆ?

1. **ನಿಮಗೆ ಜಾತಿಯ ಶೋಷಣೆ ಇದೆಯೇ(✓), ಇಲ್ಲವೇ( )**

ಇಲ್ವೆ ಮತ್ತೆ ನಮ್ಮ ಜಾತಿನಾ ಒಳ್ಗೆ ಬಿಟ್ಕೊಳಲ್ಲ ಅವರು

2. **ಶೋಷಣೆಗೆ ಶೋಷಕರು ಕೊಡುವ ಕಾರಣಗಳೇನು?**

ಆಹಾರವೇ( ) ಬಟ್ಟೆ ಬರಿಯೇ(✓) ನಿಮ್ಮ ಬಣ್ಣವೇ(✓) ನಿಮ್ಮ ಆಚರಣೆಯೇ ( ) ನೀವು ಬದುಕುವ ರೀತಿ ನೀತಿಯೇ( ) ಇಲ್ಲ ಬಡತನವೇ(✓) ಅಥವಾ ನಿಮಗೆ ಅನಿಸಿದ್ದು?

ನಾವು ಬಡೂರು, ಅದಕ್ಕೆ ಅಂಗೆ ಮಾಡ್ತಾರೆ

3. **ಯಾವ ಸಮುದಾಯದ ಜನ ನಿಮ್ಮನ್ನು ಶೋಷಣೆಯಿಂದ ಕಾಣುತ್ತಿದ್ದರೆ (ಗೌಡ್ರು) ಅವರಿಗೂ ನಿಮಗೂ ಏನು ಸಂಬಂಧವಿದೆ? (ಅವರ ಫ್ಯಾಕ್ಟರಿಗಳಲ್ಲಿ, ಗದ್ದೆಗಳಲ್ಲಿ ಅಥವಾ ಮನೆಯಲ್ಲಿ ಜೀತಕ್ಕೆ ದುಡಿಯುತ್ತಿದ್ದೀರಾ?)**

ಅವರತ್ತಿರ ಕೂಲಿಗೆ ಹೋಗ್ತಿವಲ್ಲ

4. **ಜೀತ ಪದ್ಧತಿ ನಿಮ್ಮಲ್ಲಿ ಇದೆಯಾ(✓) ಇಲ್ಲವಾ( )**

ಹಿಂದೆ ಇದ್ದಾಂಗೆ ಇಲ್ಲ. ಈಗ ದಿನಾಲು ಅವರ ಹೊಲಕ್ಕೆ ಹೋಗಿ ದುಡಿಬೇಕು.

5. **ನೀವು ಜೀತಕ್ಕೆ ಸೇರಿಕೊಳ್ಳಲು ಇರುವ ಪ್ರಮುಖ ಕಾರಣಗಳು ಯಾವುವು?**

ಅನ್ವಯಿಸುವುದಿಲ್ಲ.

6. **ಇತ್ತೀಚೆಗೆ ನಿಮ್ಮ ಸಮುದಾಯದವರ ಮೇಲೆ ಯಾವುದಾದರೊಂದು ಕಾರಣಕ್ಕೆ ಮೇಲ್ಜಾತಿಯವರು ಹಲ್ಲೆ ಮಾಡಿದ ಉದಾಹರಣೆಗಳಿವೆಯೇ? ಇದ್ದರೆ ಕಾರಣಗಳೇನು? ಆಗ ನಿಮ್ಮ ನೆರವಿಗೆ ಬಂದವರಾರು? (ಸಂಘಟನೆಗಳು, ವ್ಯಕ್ತಿಗಳು, ಅಧಿಕಾರಿಗಳು, ರಾಜಕಾರಣಿಗಳು ಮತ್ತು ಸ್ವಾಮೀಜಿಗಳು)**

ಇಲ್ಲ, ಯಾರಪ್ಪ ಕೇಳೋರು ನಮಗೆ ಹೊಡಿದ್ರು ಕೇಳೋರಿಲ್ಲ ಬಡಿದ್ರು ಕೇಳೋರಿಲ್ಲ.

7. **ನಿಮ್ಮ ಸಮುದಾಯದ ದುಸ್ಥಿತಿಗೆ ಕಾರಣಗಳು ಏನು? ನೀವು ಕೊಡ ಬಯಸುವ ಪ್ರಮುಖ ಕಾರಣಗಳು ಮತ್ತು ಸಲಹೆಗಳು.**

ನಾವು ಬಡೂರು ನಮಗೂ ನಮ್ಮ ಭೂಮಿ ಕೊಡಿ ನಾವು ಬದಕೊತ್ತೀವಿ.

III. ನಿಮ್ಮ ಜೀವನ ನಿರ್ವಹಣೆ ಹೇಗೆ?

ಕೂಲಿ

1. **ನಿಮ್ಮ ಮನೆಯಲ್ಲಿ ಯಾರು ಯಾರು ಎಲ್ಲೆಲ್ಲಿ ದುಡಿಯುತ್ತಾರೆ?**

   ಮಾವಿನತೋಟ ಕಾಯೋಕೆ ಒಬ್ಬ ಮಗ ಹೋಗ್ತಾನೆ, ಇನೊಬ್ಬ ಅಲ್ಲಿ ಗೌಡ್ರ ಹೊಲಕ್ಕೆ ಹೋಗ್ತಾ ಅವ್ನೆ

2. **ನಿಮ್ಮ ಪಾರಂಪರಿಕ ಕುಲ ಕಸುಬು ಯಾವುದು? ಅದು ಇಂದಿಗೂ ಇದೆಯಾ( ) ಇಲ್ಲವಾ( ) ಇಲ್ಲ ಎಂದರೆ ಕಾರಣವೇನು? ಯಾರನ್ನು ಹೊಣೆಗಾರಿಕೆ ಮಾಡುತ್ತೀರಿ?**

   ಹಿಂದೆ ಕಾಡನಲ್ಲಿ ಸೌದೆ, ಮಾಕಳಿ ಬೇಕು, ಜೇನುಗೀನು ತಂದು ಮಾರ್ತಾಇದ್ವಿ, ಈಗ ಕಡಿಗೆ ಹೊಗಂತೆ ಇಲ್ಲ. ಪಾರೆಸ್ಟ್ರುಬಿಟ್ಟಾರಾ.

3. **ನಿಮ್ಮ ಕುಲಕಸುಬು ಬಿಟ್ಟು ಬೇರೆ ಯಾವ ದುಡಿಮೆಯಲ್ಲಿ ತೊಡಗಿ ಕೊಳ್ಳಬೇಕೆಂದು ಅನ್ನಿಸಿದಾಗ ನೀವು ನಿರೀಕ್ಷಿಸಿದ ನೆರವು ಸಿಕ್ಕಿದೆಯೇ? ಹೌದು(✓) ಇಲ್ಲ( ) ಹೌದು ಎಂದರೆ ಯಾರ ನೆರವು? ಇಲ್ಲ ಎಂದರೆ ಏಕೆ?**

   ಕೂಲಿ, ಜೀತ, ಇನ್ಯಾರ ಹೊಲಕ್ಕೆ ಹೋಗ್ಲಿ, ಗೌಡ್ರು, ಲಿಂಗಾಯಿತ್ರು ಅತ್ರನೇ

4. **ಸರ್ಕಾರದ ಯೋಜನೆಗಳು ನಿಮ್ಮನ್ನು ಅಭಿವೃದ್ಧಿಗೊಳಿಸುತ್ತಿದೆ, ಎಂದು ನಿಮಗನಿಸು ತ್ತದೆಯೇ? ಹೌದು( ) ಇಲ್ಲ(✓)**

   ಎನ್ ಕೊಟ್ಟಾವ್ರೆ ಸ್ವಾಮಿ ಯಾರ ಕೇಳ್ಬೇಕು ನಮ್ನ

5. **ನಿಮಗೆ ಭೂಮಿ ಇದೆಯಾ? ಹೌದು(✓) ಇಲ್ಲ( ), ಇದ್ದರೆ ಯಾವಾಗಿನಿಂದ ಇದೆ? ಇಲ್ಲ ಎಂದರೆ ಯಾವಗಿನಿಂದ ಇಲ್ಲ?**

   ಹಿಂದೆ ಕಾಡಿನ ಕಡ್ದು ವಂಚೂರು ಮಾಡ್ಕೊಂಡಿದ್ವಿ, ಅರಣ್ಯ ಇಲಾಖೆಯವರು ಕಿತ್ಕೊಂಡು ಬಿಟ್ರು,

6. **ಭೂಮಿ ಇದ್ದರೆ ಸದ್ಬಳಕೆ ಮಾಡಿಕೊಳ್ಳುತ್ತಿದ್ದೀರಾ ಹೌದು(✓) ಇಲ್ಲ( ) ಹೌದಾದರೆ ಹೇಗೆ? ಇಲ್ಲವಾದರೆ ಕಾರಣಗಳನ್ನು ಹೇಳಿ?**

   ಇಲ್ವೆ ಭೂಮಿ ಬುಟ್ಟಾರ, ಇನಾದ್ರು ಬೆಳೆ ತೆಗೆತ್ರಿದ್ದೋ

7. **ನಿಮಗೆ ಇದ್ದ ಭೂಮಿಯನ್ನು ಕಿತ್ತುಕೊಳ್ಳಲಾಗಿದೆಯೇ ಹೌದು(✓) ಇಲ್ಲ( ), ಇದಕ್ಕೆ ಕಾರಣ ಸರ್ಕಾರ ( ), ಭೂಮಾಲಿಕರು(), ಮೇಲ್ಜಾತಿಯವರು( ) ಅದಕ್ಕೆ ಅವರು ಕೊಟ್ಟ ಕಾರಣವೇನು?**

   ಅರಣ್ಯ ಭೂಮಿ ಇದು ಅಂತ ಅಂದ್ರು

IV. ನಿಮ್ಮ ಶೈಕ್ಷಣಿಕ ಸ್ಥಿತಿಗಳು ಹೇಗಿದೆ?

1. ನಿಮ್ಮಲ್ಲಿರುವ ವಿದ್ಯಾವಂತರು ಎಷ್ಟು? ಹೆಣ್ಣು( ) ಗಂಡು( )

   ಯಾರಿದ್ದರೋ ಏನೋ ಒಬ್ರೊ ಇಬ್ರೊ ಇರಬೇಕು.

2. ನಿಮ್ಮಲ್ಲಿ ಸರ್ಕಾರಿ ನೌಕರರು ಇದ್ದಾರೆಯೇ ಹೌದು( ) ಇಲ್ಲ(✓) ಯಾವ ನೌಕರಿ.

   ಇಲ್ಲ ಬಿಡ್ರಿ

3. ನಿಮಗೆ ಶಿಕ್ಷಣದ ಬಗ್ಗೆ ಏನು ಅನಿಸುತ್ತದೆ? ನೀವು ಯಾಕೆ ಕಲಿಯಲಿಲ್ಲ, ನಿಮ್ಮ ಮಕ್ಕಳೆಲ್ಲ ಕಲಿಯುತ್ತಿದ್ದಾರ ಹೌದು(✓) ಇಲ್ಲ( ) ಹೌದಾದರೆ ಅವರ ಕಲಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?

   ಅಯ್ಯೋ ನಮ್ಮ ಕಾಲ್ದೇಲಿ ತಿನ್ನಾಕೆ ಹಿಟ್ಟಿಲ್ಲಾ ಇನ್ನೂ ಓದುಗೀದು ಎಲ್ಲಿ?

4. ನಿಮ್ಮೂರಿನಲ್ಲಿ ಶಾಲೆ ಇದೆಯೇ? ಹೌದು(✓) ಇಲ್ಲ( )

5. ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದೀರಾ ಹೌದು(✓) ಇಲ್ಲ( ) ಕಳುಹಿಸದಿದ್ದರೆ ಕಾರಣವೇನು?

6. ನಿಮಗೆ ನಿಮ್ಮ ಮಕ್ಕಳು ಏನಾಗಬೇಕೆಂದು ಆಸೆ ಇದೆ?

   ಏನಾದರೂ ನಾಲ್ಕು ಮಾತ್ ಕಲಿತುಕೊಳ್ಳಿ ಅಷ್ಟೆ. ನಾಕಾರು ಜನರಂತೆ ಅವರು ಬದುಕಲಿ.

7. ನಿಮ್ಮ ಮಕ್ಕಳು ಏನು ಓದುತ್ತಿದ್ದಾರೆ ಅದರ ಬಗ್ಗೆ ನಿಮಗೆ ಗೊತ್ತಾ? ಹೌದು( ) ಇಲ್ಲ ( ) ನಿಮ್ಮ ಮಕ್ಕಳು ಕಲಿತು ನಿಮ್ಮ ಪಾರಂಪರಿಕ ನಂಬಿಕೆ, ಜ್ಞಾನಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬ ಆತಂಕವೇನಾದರೂ ಇದೆಯಾ? ಹೌದು(✓) ಇಲ್ಲ ( )

   ನಮ್ಮ ತಲೆಗೆ ಎಲ್ಲಾ ಹೋಗ್ತಾ ಇದೆ ಹೋಗ್ಲಿ ಬಿಡ್ರಿ, ಅದನ್ ತಕ್ಕೊಂಡು ಏನ್ ಮಾಡೋದು ಇವತ್ತೆಲ್ಲ ಕಂಪಿಟರ್ ಕಾಲ.

8. ನೀವು ಯಾವ ರೀತಿಯ ಶಿಕ್ಷಣ ಬಯಸುತ್ತೀರಾ? ಯಾಕೆಂದರೆ ನಿಮ್ಮ ಮನೆಯಲ್ಲಿ ಕಲಿತ ಮಗ/ ಮಗಳು, ಕಲಿಯದ (ಓದು ಬರಹ) ಮಗ/ ಮಗಳನ್ನು ನೋಡಿ ಏನೆನಿಸುತ್ತದೆ?

   ಓದಿದೋನು ಬುದ್ದಿವಂತ ಅಲ್ಲ, ಓದದೆ ಇರೋದನು ದಡ್ಡ ಅಷ್ಟೆ.

9. ಮೀಸಲಾತಿ, ಮೂಲಭೂತ ಸೌಲಭ್ಯ ಮತ್ತು ಉದ್ಯೋಗ ಇವುಗಳ ಬಗ್ಗೆ ಮಾಹಿತಿ ಇದೆಯಾ ಹೌದು( ) ಇಲ್ಲ(✓) ಇದರ ಬಗ್ಗೆ ನಿಮ್ಮ ಅಭಿಪ್ರಾಯ ಹೇಳಿ?

ಯಾರ್ ಹೇಳಕೊಡಬೇಕು ನಮಗೆ ಯಾರ್‌ಗೆ ಬೇಕಾಗದ್ದೀವಿ ನಾವು ಅವರಿಗೆ ಬೇಕಾದಾಗ ಬತ್ತರೆ ನೂರು ಇನ್ನೂರು ಕೊಡ್ತಾರೆ. ನಾವು ಓಟ ಹಾಕ್ತೀವಿ ಅಷ್ಟೆ.

V. **ನಿಮ್ಮ ಆಚರಣೆಗಳ ವಿಶೇಷತೆಗಳೇನು?**

ಅಂಗದ್ರೆ ಗೊತತಿಲ್ಲಪ್ಪ. ವಿಶೇಷ ಗಿಶೇಷ ಇನೂಇಲ್ಲ

1. **ನಿಮ್ಮ ಮನೆ ದೇವರು ಯಾವುದು?**

ಗಂಡು ದೇವರು: ಮುತ್ತತ್ತಿಯಪ್ಪ, ಹೆಣ್ಣು ದೇವರು: ಕಬ್ಬಾಳಮ್ಮ

2. **ಆ ದೇವರ ಮೂಲ ಸ್ಥಳ ಯಾವುದು?**

ಕಬ್ಬಾಳು, ಮುತ್ತತ್ತಿ

3. **ನಿಮ್ಮ ಒಕ್ಕಲು ಯಾವುದು?**

ಯಂಟ್ರೋಟ್‌ಸ್ವಾಮಿ ಒಕ್ಕಲು

4. **ನೀವು ಹಬ್ಬ ಹರಿದಿನಗಳನ್ನು ಆಚರಿಸುತ್ತಿದ್ದೀರಾ? ಹೌದು(✓) ಇಲ್ಲ( )ಯಾವ ಯಾವ ಹಬ್ಬ ಆಚರಿಸುತ್ತೀರಿ?**

ಎಲ್ಲ ಹಬ್ಬ ಮಾಡುತ್ತೀವಿ.

5. **ನಿಮ್ಮ ಸಮುದಾಯ (ಜಾತಿ)ದವರೇ ಪ್ರತ್ಯೇಕವಾಗಿ ಆಚರಿಸುವ ಹಬ್ಬ ಇದೆಯಾ? ಹೌದು (✓) ಇಲ್ಲ( )ಅದು ಯಾವುದು?**

6. **ನಿಮ್ಮ ಪಾರಂಪರಿಕ ಆಚರಣೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದೀರಾ ಹೌದು ( ) ಇಲ್ಲ(✓) ಅವು ಯಾವುವು? ಈ ಆಚರಣೆಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗದಿದ್ದಕ್ಕೆ ಕಾರಣವೇನು?**

ಮಾಡೋಕೆ ಬಿಡಬೇಕಲಪ್ಪ ಅರಣ್ಯದೋರು

7. **ನಿಮ್ಮ ಕುಲದ ಹೆಸರು (ಕಕ್ಕಕುಲ)**

VI. **ನಿಮಗೆ ರಾಜಕೀಯದ ಬಗ್ಗೆ ತಿಳಿದಿದೆಯೇ ಹೌದು( ) ಇಲ್ಲ(✓)**

1. **ನೀವು ಮತ (ಓಟು) ಹಾಕಿದ್ದೀರಾ? ಹೌದು(✓) ಇಲ್ಲ( ) ಇಲ್ಲವಾದರೆ ಕಾರಣವೇನು?**

2. **ನೀವು ಗ್ರಾಮ ಪಂಚಾಯಿತಿಯಲ್ಲಿ ಸ್ಪರ್ಧಿಸಿದ್ದೀರಾ? ಹೌದು( ) ಇಲ್ಲ(✓) ಹೌದಾದರೆ ಗ್ರಾಮ ಪಂಚಾಯಿತಿಯಲ್ಲಿ ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ? ನಿಮಗೆ ಅಧ್ಯಕ್ಷರ ಸ್ಥಾನ ನೀಡಿದ್ದಾರಾ? ನೀವು ಅಧ್ಯಕ್ಷರಾಗಿದ್ದಾಗ ನಿಮ್ಮನ್ನು ಯಾರಾದರೂ ನಿಯಂತ್ರಿಸಿದ್ದರಾ?**

3. **ಇಲ್ಲಿಯವರೆಗೂ ಮೀಸಲಾತಿ ಬಂದಿಲ್ಲವಾ ಅಥವಾ ಈ ವಿಷಯ ಗೊತ್ತಿಲ್ಲದಂತೆ ನೋಡಿಕೊಳ್ಳಲಾಗುತ್ತಿದೆಯಾ? ಹೌದು(   ) ಇಲ್ಲ(   ) ಗ್ರಾಮ ಪಂಚಾಯಿತಿಯಲ್ಲೂ ಜಾತಿಯತೆ ಮಾಡುತ್ತಾರೆಯೇ? ಹೌದು(   ) ಇಲ್ಲ(   )**

   ಅನ್ವಯಿಸುವುದಿಲ್ಲ

4. **ಗ್ರಾಮ ಪಂಚಾಯಿತಿಯಲ್ಲಿ ನಿಮಗೆ ಏನೇನು ಸೌಲಭ್ಯ ಇದೆ ಎಂದು ಗೊತ್ತಾ ಹೌದು (   ) ಇಲ್ಲ(   ) ಗೊತ್ತಿದ್ದರೆ ಹೇಗೆ ಗೊತ್ತಾಯಿತು? ಇಲ್ಲವಾದರೆ ಯಾಕೆ?**

   ಯಾರು ಹೇಳಬೇಕು.

5. **ನಿಮಗೆ ಸಂಘಟನೆ, ಹೋರಾಟ, ಮೀಸಲಾತಿ, ಸರ್ಕಾರದ ಯೋಜನೆಗಳು, ಅಭಿವೃದ್ಧಿ ನಿಗಮಗಳು, ವಿಶೇಷ ಘಟಕ ಯೋಜನೆಗಳು, ತಾಲ್ಲೂಕು ಕಛೇರಿ, ಜಿಲ್ಲಾಧಿಕಾರಿ ಕಛೇರಿ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ನ್ಯಾಯಾಂಗ, ಕಾನೂನುಗಳ ಬಗ್ಗೆ ಮಾಹಿತಿ ಇದೆಯಾ? ಹೌದು(✓) ಇಲ್ಲ(   ).**

   ಇಲ್ಲ. ನಮ್ಮ ಜನರ ಸೇರ್ಕೊಂಡು ಮಾಡವ್ರೆ, ಹಿಂದೆ ಶಿವರಾಜೇಗೌಡ್ರು ಮಾಡ್ಕೊಂಡಿದ್ರು.

ಸಂದರ್ಶದ ದಿನಾಂಕ : 28-03-2017

ಹೆಸರು : ರವಿಕುಮಾರ್

ವಯಸ್ಸು : 24

ಲಿಂಗ : ಗಂಡು

ಉದ್ಯೋಗ : ಇಲ್ಲ

ವಿಳಾಸ : ಸಾಲಬನ್ನಿ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲೂಕು, ರಾಮನಗರ ಜಿಲ್ಲೆ

I. ನಿಮ್ಮ ಕೌಟುಂಬಿಕ ವ್ಯವಸ್ಥೆ ಎಂತಹದ್ದು?

ನಮ್ಮದು ಅಭಿಭಕ್ತ ಕುಟುಂಬವಾಗಿದೆ

1. **ಮುಖ್ಯ ತೀರ್ಮಾನ ಯಾರು ತೆಗೆದುಕೊಳ್ಳುತ್ತಾರೆ?**

   ನಮ್ಮ ತಂದೆ

2. **ನಿಮ್ಮ ಕುಟುಂಬದಲ್ಲಿ ಹೆಣ್ಣಿನ ಸ್ಥಾನ ಮಾನ ಏನು?**

   ನಮ್ಮಲ್ಲಿ ಹೆಣ್ಣು ಗಂಡು ಎಂಬ ಭೇದ ಭಾವವಿಲ್ಲ.

3. **ಬಹುಪತ್ನಿತ್ವ ಇದೆಯೇ( ), ಇಲ್ಲವೇ( ) ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು?**

   ನಮ್ಮಲ್ಲಿ ತುಂಬ ಬಡತನವಿರುವ ಕಾರಣ ಬಹುಪತ್ನಿತ್ವ ಕಡಿಮೆ

4. **ನಿಮ್ಮ ಕುಟುಂಬದಲ್ಲಿ ಮದುವೆಯ ವಯೋಮಾನ ಹೆಣ್ಣು(17) ಗಂಡು(24)**

5. **ನಿಮ್ಮ ಕುಟುಂಬದ ವರಮಾನ ಎಷ್ಟು? ನಿಮ್ಮ ಉಟುಂಬದ ವೃತ್ತಿ ಮತ್ತು ಆದಾಯದ ಮೂಲ ಏನು?**

   ವಾರ್ಷಿಕವಾಗಿ 15 ರಿಂದ 20 ಸಾವಿರ ಇರಬಹುದು. ಕೂಲಿ ಕೆಲಸ ಮಾಡಿಕೊಂಡು ಬದುಕುತ್ತಿದ್ದೇವೆ. ನಮ್ಮಲ್ಲಿ ಸಾಮಾನ್ಯವಾಗಿ ಮದುವೆ ಮಾಡಿಕೊಂಡ ನಂತರ ಬೇರೆ ಮಾಡಿಕೊಂಡು ಬದುಕುತ್ತಾರೆ. ಅವಿಭಕ್ತ ಕುಟುಂಬದ ಕಲ್ಪನೆ ಇಲ್ಲ. ಪ್ರತಿಯೊಬ್ಬ ಸ್ವತಂತ್ರವಾಗಿ ಬದುಕಬೇಕು ಎನ್ನುವ ಉದ್ದೇಶದಿಂದ ಈ ರೀತಿಯ ನಿರ್ಧಾರಗಳನ್ನು ಮಾಡಬೇಕು.

II. ಸುತ್ತ ಮುತ್ತಲಿನ ಜನರೊಡನೆ ನಿಮ್ಮ ಸಂಬಂಧ ಹೇಗಿದೆ?

ಸುತ್ತಮುತ್ತಲಿನೊಡನೆ ಅಂತಹ ಹೇಳಿಕೊಳ್ಳುವಷ್ಟು ಸಂಬಂಧವಿಲ್ಲ

1. **ನಿಮಗೆ ಜಾತಿಯ ಶೋಷಣೆ ಇದೆಯೇ(✓), ಇಲ್ಲವೇ( )**

   ಕಂಡಿತಾ ಇದೆ

2. **ಶೋಷಣೆಗೆ ಶೋಷಕರು ಕೊಡುವ ಕಾರಣಗಳೇನು?**

   ಆಹಾರವೇ(✓) ಬಟ್ಟೆ ಬರಿಯೇ(✓) ನಿಮ್ಮ ಬಣ್ಣವೇ(✓) ನಿಮ್ಮ ಆಚರಣೆಯೇ ( ) ನೀವು ಬದುಕುವ ರೀತಿ ನೀತಿಯೇ( ) ಇಲ್ಲ ಬಡತನವೇ(✓) ಅಥವಾ ನಿಮಗೆ ಅನಿಸಿದ್ದು?

   ಈ ಮೇಲಿನ ಎಲ್ಲ ಕಾರಣಗಳಿಂದಲೂ ಇರುಳಿಗರನ್ನು ಶೋಷಣೆಗೆ ಒಳಪಡಿಸುತ್ತಾರೆ.

3. **ಯಾವ ಸಮುದಾಯದ ಜನ ನಿಮ್ಮನ್ನು ಶೋಷಣೆಯಿಂದ ಕಾಣುತ್ತಿದ್ದರೆ (ಗೌಡ್ರು) ಅವರಿಗೂ ನಿಮಗೂ ಏನು ಸಂಬಂಧವಿದೆ? (ಅವರ ಫ್ಯಾಕ್ಟರಿಗಳಲ್ಲಿ, ಗದ್ದೆಗಳಲ್ಲಿ ಅಥವಾ ಮನೆಯಲ್ಲಿ ಜೀತಕ್ಕೆ ದುಡಿಯುತ್ತಿದ್ದೀರಾ?)**

   ಒಕ್ಕಲಿಗ ಮತ್ತು ಲಿಂಗಾಯತರು ಇವರು ನಮ್ಮಲ್ಲಿ ಭೂಮಾಲಿಕರಾಗಿದ್ದರಿಂದ ಅವರ ಹೊಲಗದ್ದೆಗೆ ಕೂಲಿಗೆ ಹೋಗುತ್ತೇವೆ. ಹಿಂದೆ ನಮ್ಮ ಅಪ್ಪರೆಲ್ಲ ಅವರ ಮನೆಯಲ್ಲಿ ಜೀತಕ್ಕಿದ್ದರಂತೆ.

4. **ಜೀತಪದ್ಧತಿ ನಿಮ್ಮಲ್ಲಿ ಇದೆಯಾ(✓) ಇಲ್ಲವಾ( )**

   ಜೀತಪದ್ಧತಿಯು ಹಿಂದಿನ ರೂಪದಲ್ಲಿ ಇಲ್ಲಿ ರೂಪ ಬದಲಿಸಿಕೊಂಡು ಆಚರಣೆಯಲ್ಲಿದೆ. ಎಸ್ಟೇಟ್, ಇಟ್ಟಿಗೆ ಫ್ಯಾಕ್ಟರಿಗಳಲ್ಲಿ ಕುಟುಂಬ ದುಡಿಯುತ್ತಿರುವುದು ಆಧುನಿಕ ರೀತಿಯ ಜೀತಪದ್ಧತಿ.

5. **ನೀವು ಜೀತಕ್ಕೆ ಸೇರಿಕೊಳ್ಳಲು ಇರುವ ಪ್ರಮುಖ ಕಾರಣಗಳು ಯಾವುವು?**

   ಬಡತನ, ಅನಕ್ಷರತೆ. ಭೂಮಿ ಇಲ್ಲದೆ ಇರುವುದು, ನಮಲ್ಲಿ ವಿದ್ಯೆ, ಅಧಿಕಾರ ಕಡಿಮೆ.

6. **ಇತ್ತೀಚೆಗೆ ನಿಮ್ಮ ಸಮುದಾಯದವರ ಮೇಲೆ ಯಾವುದಾದರೊಂದು ಕಾರಣಕ್ಕೆ ಮೇಲ್ಜಾತಿಯವರು ಹಲ್ಲೆ ಮಾಡಿದ ಉದಾಹರಣೆಗಳಿವೆಯೇ? ಇದ್ದರೆ ಕಾರಣಗಳೇನು? ಆಗ ನಿಮ್ಮ ನೆರವಿಗೆ ಬಂದವರಾರು? (ಸಂಘಟನೆಗಳು, ವ್ಯಕ್ತಿಗಳು, ಅಧಿಕಾರಿಗಳು, ರಾಜಕಾರಣಿಗಳು ಮತ್ತು ಸ್ವಾಮೀಜಿಗಳು)**

ನಾವು ಉತ್ತಮವಾಗಿ ಬದುಕುವುದನ್ನು ಸಹಿಸಿಕೊಳ್ಳದೆ ಜನರು ನಮ್ಮ ಮೇಲೆ ನಿರಂತರವಾಗಿ ದೌರ್ಜನ್ಯ ಎಸುಗುತ್ತಲೆ ಇರುತ್ತಾರೆ. ಇದರಿಂದ ನಾವೀ ಸ್ವತಃ ಗಿರಿಜನ ಕ್ಷೇಮಾಭಿವೃದ್ಧಿ ಸಂಘವನ್ನು ಕಟ್ಟಿಕೊಂಡು ಸಂಘಟಿಸುತ್ತಿದ್ದೇವೆ ಹೊರತು ನಮ್ಮ ಸಹಾಯಕ್ಕೆ ಯಾರುಬಂದಿಲ್ಲ.

7. **ನಿಮ್ಮ ಸಮುದಾಯದ ದುಸ್ಥಿತಿಗೆ ಕಾರಣಗಳು ಏನು? ನೀವು ಕೊಡ ಬಯಸುವ ಪ್ರಮುಖ ಕಾರಣಗಳು ಮತ್ತು ಸಲಹೆಗಳು.**

ನಮ್ಮನ್ನು ಅರಣ್ಯದಿಂದ ಹೊರಹಾಕಿದ್ದು, ಪ್ರಮುಖ ಕಾರಣ. ನಮಗೆ ತುಂಡು ಭೂಮಿ ಇಲ್ಲದೆ ಇರುವುದುದು. ನಮ್ಮನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿ ಗುಂಪಿನಲ್ಲಿ ಗೋವಿಂದ ಮಾಡಿದದಾರೆ. ನಮಗೆ ಬರುವ ಎಲ್ಲ ಮೀಸಲಾತಿಯನ್ನು ಒಂದೇ ವರ್ಗ ಕಬಳಿಸುತ್ತಿದೆ. ಇದರ ಜೊತೆಗೆ ಭ್ರಷ್ಟ ಅಧಿಕಾರಿಗಳು, ಸ್ವಾರ್ಥ ರಾಜಕಾರಣಿಗಳು.

III. ನಿಮ್ಮ ಜೀವನ ನಿರ್ವಹಣೆ ಹೇಗೆ?

ನಮಗೆ ಸ್ವಂತ ಭೂಮಿ ಇಲ್ಲ. ಕೂಲಿನಾಲಿ ಮಾಡಿಕೊಂಡು ಬದುಕುತ್ತಿದ್ದೇವೆ.

1. **ನಿಮ್ಮ ಮನೆಯಲ್ಲಿ ಯಾರು ಯಾರು ಎಲ್ಲೆಲ್ಲಿ ದುಡಿಯುತ್ತಾರೆ?**

ನಮ್ಮ ಅಣ್ಣ ಎಸ್ಟೇಟ್‌ನಲ್ಲಿದ್ದಾನೆ. ನಾನು ಕೋಕಕೋಲ ಕಂಪನಿಗೆ ಕೆಲಸಕ್ಕೆ ಹೋಗುತ್ತಿದ್ದೇನೆ. ಒಂದು ನಿರ್ದಿಷ್ಟ ಸಂಪತ್ತು ಇಲ್ಲದೆ. ಭೂಮಿ ಇಲ್ಲದೆ ಅಲೆಯುವಂತಾಗಿದೆ.

2. **ನಿಮ್ಮ ಪಾರಂಪರಿಕ ಕುಲ ಕಸುಬು ಯಾವುದು? ಅದು ಇಂದಿಗೂ ಇದೆಯಾ( ) ಇಲ್ಲವಾ( ) ಇಲ್ಲ ಎಂದರೆ ಕಾರಣವೇನು? ಯಾರನ್ನು ಹೊಣೆಗಾರಿಕೆ ಮಾಡುತ್ತೀರಿ?**

ನಮ್ಮ ಪಾರಂಪರಿಕ ಕುಲಕಸುಬು ಬೇಟೆಗಾರಿಕೆ. ಆದರೆ ಅರಣ್ಯದಿಂದ ಹೊರ ಹಾಕಿದ ನಂರ ನಮ್ಮ ಪಾರಂಪರಿಕ ಕಸುಬು ನಾಶವಾಗಿ ನಮ್ಮ ಜೀವನ ನಿರ್ವಹಣೆ ಕಷ್ಟವಾಗಿದೆ. ಇದಕ್ಕೆ ಭಾರತ ಸರ್ಕಾರವೇ ಕಾರಣ.

3. **ನಿಮ್ಮ ಕುಲಕಸುಬು ಬಿಟ್ಟು ಬೇರೆ ಯಾವ ದುಡಿಮೆಯಲ್ಲಿ ತೊಡಗಿ ಕೊಳ್ಳಬೇಕೆಂದು ಅನ್ನಿಸಿದಾಗ ನೀವು ನಿರೀಕ್ಷಿಸಿದ ನೆರವು ಸಿಕ್ಕಿದೆಯೇ? ಹೌದು(✓) ಇಲ್ಲ( ) ಹೌದು ಎಂದರೆ ಯಾರ ನೆರವು? ಇಲ್ಲ ಎಂದರೆ ಏಕೆ?**

ಅಲ್ಲಿ ನಾವು ಬುದ್ಧಿವಂತರಲ್ಲ. ನಮ್ಮ ಜನ ತುಂಡು ಬಟ್ಟೆಗಳಿಂದ ಜೀವನ ನಡೆಸುವವರು. ಆಧುನಿಕತೆಯ ಮೋಸ, ವಂಚನೆಯನ್ನು ಅರಿತವರಲ್ಲ. ಆದ್ದರಿಂದ ಕುಲಕಸುಬು ಮಾಯವಾದ ಮೇಲೆ ನೇರವಾಗಿ ಜೀತಕ್ಕೆ ಸೇರಿಕೊಂಡಿದ್ದನ್ನು ಕಾಣಬಹುದು.

4. **ಸರ್ಕಾರದ ಯೋಜನೆಗಳು ನಿಮ್ಮನ್ನು ಅಭಿವೃದ್ಧಿಗೊಳಿಸುತ್ತಿದೆ, ಎಂದು ನಿಮಗನಿಸುತ್ತದೆಯೇ? ಹೌದು( ) ಇಲ್ಲ(✓)**

ಸರ್ಕಾರದ ಯೋಜನೆಗಳು ಕೇವಲ ಕಡತಗಳಲ್ಲಿವೆ ಎಂದೆನಿಸುತ್ತದೆ ಅಥವಾ ಅವುಗಳೆಲ್ಲ ಮಧ್ಯವರ್ತಿಗಳು ಮತ್ತು ಪ್ರಬಲ ಸಮುದಾಯದವರ ಜೇಬಿಗೆ ಸೇರಿಕೊಳ್ಳುತ್ತಿದೆ ಎನಿಸುತ್ತದೆ.

5. **ನಿಮಗೆ ಭೂಮಿ ಇದೆಯಾ? ಹೌದು(✓) ಇಲ್ಲ( ), ಇದ್ದರೆ ಯಾವಾಗಿನಿಂದ ಇದೆ? ಇಲ್ಲ ಎಂದರೆ ಯಾವಗಿನಿಂದ ಇಲ್ಲ?**

ಇಂದೆ ಅರಣ್ಯದಲ್ಲಿ ಸ್ವಲ್ಪ ಭಾಗ ಅಸನು ಮಾಡಿಕೊಂಡು ರಾಗಿ ಬೆಳೆಯುತ್ತಿರುವುದರ ಬಗ್ಗೆ ನಮ್ಮ ತಾತಾ ಹೇಳುತ್ತಿದ್ದರು. ಅರಣ್ಯ ಇಲಾಖೆಯವರು ಒಕ್ಕಲೆಬ್ಬಿದ್ದರು ಎನ್ನುತ್ತಿದ್ದರು.

6. **ಭೂಮಿ ಇದ್ದರೆ ಸದ್ಬಳಿಕೆ ಮಾಡಿಕೊಳ್ಳುತ್ತಿದ್ದೀರಾ ಹೌದು(✓) ಇಲ್ಲ( ) ಹೌದಾದರೆ ಹೇಗೆ? ಇಲ್ಲವಾದರೆ ಕಾರಣಗಳನ್ನು ಹೇಳಿ?**

ಇವತ್ತಿನ ಸಂದರ್ಭದಲ್ಲಿ ಭೂಮಿಯುಂದಿದ್ದರೆ ಚಿನ್ನ ತೆಗೆಯುತ್ತಿದ್ದೇವೂ. ಸರ್ಕಾರದ ಯೋಜನೆಗಳು ಪಾಣಿ ಇದ್ದವರಿಗೆ ಮಾತ್ರ ಸೀಮಿತವಾಗಿವೆ. ನಮಗೆ ಯಾವ ದಾಖಲೆಗಳು ಇಲ್ಲದೆ ಸರ್ಕಾರಿ ಸೌಲಭ್ಯವನ್ನು ಪಡೆದುಕೊಳ್ಳದಂತಾಗಿದೆ.

7. **ನಿಮಗೆ ಇದ್ದ ಭೂಮಿಯನ್ನು ಕಿತ್ತುಕೊಳ್ಳಲಾಗಿದೆಯೇ ಹೌದು(✓) ಇಲ್ಲ( ), ಇದಕ್ಕೆ ಕಾರಣ ಸರ್ಕಾರ ( ), ಭೂಮಾಲಿಕರು(), ಮೇಲ್ಜಾತಿಯವರು( ) ಅದಕ್ಕೆ ಅವರು ಕೊಟ್ಟ ಕಾರಣವೇನು?**

ಅರಣ್ಯದಿಂದ ಒತ್ತವರಿ ಮಾಡಿಕೊಂಡಿದ್ದೀರಿ ಎಂದು ಅರಣ್ಯ ಇಲಾಖೆಯವರು ಕಿತ್ತುಕೊಂಡರೆ, ಸಣ್ಣಪುಟ್ಟ ಸಾಲಕ್ಕೆ ಬಡ್ಡಿ, ಚಕ್ರಬಡ್ಡಿಯಾಕಿ ಇದ್ದ ಸ್ವಲ್ಪ ಭೂಮಿಯನ್ನು ಕಿತ್ತುಕೊಂಡಿದ್ದಾರೆ.

IV. **ನಿಮ್ಮ ಶೈಕ್ಷಣಿಕ ಸ್ಥಿಗತಿಗಳು ಹೇಗಿದೆ?**

ಪರವಾಗಿಲ್ಲ ನಾನು ಎಂ.ಎ.ವರೆಗೂ ಕಲಿತ್ತಿದ್ದೇನೆ. ನಮ್ಮ ಜನರು ಇನ್ನು ಶಿಕ್ಷಣದ ಕಡೆ ಗಮನಹರಿಸುತ್ತಿಲ್ಲ.

1. **ನಿಮ್ಮಲ್ಲಿರುವ ವಿದ್ಯಾವಂತರು ಎಷ್ಟು? ಹೆಣ್ಣು(1) ಗಂಡು(2)**

2. **ನಿಮ್ಮಲ್ಲಿ ಸರ್ಕಾರಿ ನೌಕರರು ಇದ್ದಾರೆಯೇ ಹೌದು( ) ಇಲ್ಲ(✓) ಯಾವ ನೌಕರಿ.**

3. **ನಿಮಗೆ ಶಿಕ್ಷಣದ ಬಗ್ಗೆ ಏನು ಅನಿಸುತ್ತದೆ? ನೀವು ಯಾಕೆ ಕಲಿಯಲಿಲ್ಲ, ನಿಮ್ಮ ಮಕ್ಕಳೆಲ್ಲ ಕಲಿಯುತ್ತಿದ್ದಾರ ಹೌದು(✓) ಇಲ್ಲ( ) ಹೌದಾದರೆ ಅವರ ಕಲಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?**

ನಮ್ಮ ತಂದೆ–ತಾಯಿಯಂದಿರೂ ಬಡತನದಲ್ಲಿ ಬದುಕಿ ಹೋದವರು. ಅವರಿಗೆ ಒಪ್ಪತ್ತಿನ ಚೀನ ತುಂಬಿಸುವುದು ಹೆಚ್ಚಾಗಿತ್ತು. ಇನ್ನು ಶಿಕ್ಷಣದ ಮಾತೆಲ್ಲಿ. ಆದ್ದರಿಂದ ನಮ್ಮ ಪೀಳಿಗೆ ಶಿಕ್ಷಣದ ಕಡೆಮುಖ ಮಾಡಬೇಕಾದ ಅನಿವಾರ್ಯತೆ ಇದೆ.

4. **ನಿಮ್ಮೂರಿನಲ್ಲಿ ಶಾಲೆ ಇದೆಯೇ? ಹೌದು(✓) ಇಲ್ಲ( )**

5. **ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದೀರಾ ಹೌದು(✓) ಇಲ್ಲ( ) ಕಳುಹಿಸದಿದ್ದರೆ ಕಾರಣವೇನು?**

6. **ನಿಮಗೆ ನಿಮ್ಮ ಮಕ್ಕಳು ಏನಾಗಬೇಕೆಂದು ಆಸೆ ಇದೆ?**

7. **ನಿಮ್ಮ ಮಕ್ಕಳು ಏನು ಓದುತ್ತಿದ್ದಾರೆ ಅದರ ಬಗ್ಗೆ ನಿಮಗೆ ಗೊತ್ತಾ? ಹೌದು( ) ಇಲ್ಲ ( ) ನಿಮ್ಮ ಮಕ್ಕಳು ಕಲಿತು ನಿಮ್ಮ ಪಾರಂಪರಿಕ ನಂಬಿಕೆ, ಜ್ಞಾನಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬ ಆತಂಕವೇನಾದರೂ ಇದೆಯಾ? ಹೌದು(✓) ಇಲ್ಲ ( )**

8. **ನೀವು ಯಾವ ರೀತಿಯ ಶಿಕ್ಷಣ ಬಯಸುತ್ತೀರಾ? ಯಾಕೆಂದರೆ ನಿಮ್ಮ ಮನೆಯಲ್ಲಿ ಕಲಿತ ಮಗ/ ಮಗಳು, ಕಲಿಯದ (ಓದು ಬರಹ) ಮಗ/ ಮಗಳನ್ನು ನೋಡಿ ಏನೆನಿಸುತ್ತದೆ?**

   ನಮಗೆ ನಮ್ಮ ಪಾರಂಪರಿಕ ಹಿನ್ನೆಲೆಯ ಶಿಕ್ಷಣ ಕೊಟ್ಟರೆ ನಮ್ಮ ಪಾರಂಪರಿಕೆ ಕಲೆಯು ಉಳಿಯುತ್ತದೆ. ಜೊತೆಗೆ ನಮಗೂ ಉದ್ಯೋಗ ಸಿಗುತ್ತದೆ.

9. **ಮೀಸಲಾತಿ, ಮೂಲಭೂತ ಸೌಲಭ್ಯ ಮತ್ತು ಉದ್ಯೋಗ ಇವುಗಳ ಬಗ್ಗೆ ಮಾಹಿತಿ ಇದೆಯಾ ಹೌದು( ) ಇಲ್ಲ(✓) ಇದರ ಬಗ್ಗೆ ನಿಮ್ಮ ಅಭಿಪ್ರಾಯ ಹೇಳಿ?**

   ಮೀಸಲಾತಿ ಎಂಬುದು ಇದು ಕೆಲವೇ ವರ್ಗದ ಸ್ವತ್ತಾಗಿದೆ. ಪರಿಶಿಷ್ಟ ಪಂಗಡದಲ್ಲಿ 51 ಬುಡಕಟ್ಟುಗಳು ಬಂದು ಕೇವಲ ಒಂದು ಸಮುದಾಯ ಎಲ್ಲಾ ಸೌಲಭ್ಯ ಪಡೆದುಕೊಳ್ಳುತ್ತಿದೆ. ಭಾರತದಲ್ಲಿ ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಒಂದು ಬುಡಕಟ್ಟು ಹೊರತುಪಡಿಸಿ ನಮ್ಮಂತ ಇನ್ನು ಹತ್ತಾರು ಬುಡಕಟ್ಟುಗಳು ಒಂದು ಸರ್ಕಾರಿ ಸೌಲಭ್ಯಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಜೊತೆಗೆ ಇಂದು ದಿನದಿಂದ ದಿನಕ್ಕೆ ಜಾತಿಗಳು ಸೇರಿಕೊಂಡು ಮೂಲಬುಡಕಟ್ಟುಗಳಿಗೆ ಸಿಗಬೇಕಾದ ಸೌಲಭ್ಯವನ್ನು ವಂಚಿಸುತ್ತಿದ್ದಾರೆ.

V. **ನಿಮ್ಮ ಆಚರಣೆಗಳ ವಿಶೇಷತೆಗಳೇನು?**

1. **ನಿಮ್ಮ ಮನೆ ದೇವರು ಯಾವುದು?**

ಗಂಡು ದೇವರು: ಮಾದೇಶ್ವರ, ಹೆಣ್ಣು ದೇವರು: ಈರಮಾಸ್ತಿ ಕೆಂಪಮ್ಮ

2. ಆ ದೇವರ ಮೂಲ ಸ್ಥಳ ಯಾವುದು?

ಮಾದೇಶ್ವರ ಬೆಟ್ಟ/ಸೋಲಿಗೇರಿ

3. ನಿಮ್ಮ ಒಕ್ಕಲು ಯಾವುದು?

ಮಾದೇಶ್ವರ ಒಕ್ಕಲು

4. ನೀವು ಹಬ್ಬ ಹರಿದಿನಗಳನ್ನು ಆಚರಿಸುತ್ತಿದ್ದೀರಾ? ಹೌದು(✓) ಇಲ್ಲ( )ಯಾವ ಯಾವ ಹಬ್ಬ ಆಚರಿಸುತ್ತೀರಿ?

ನಾವು ಯುಗಾದಿ, ದೀಪಾವಳಿ, ಸಂಕ್ರಾಂತಿ, ಗಣೇಶಚತುರ್ಥಿ ಎಲ್ಲ ಹಬ್ಬವನ್ನು ಆಚರಿಸುತ್ತೇವೆ. ಜೊತೆಗೆ ನಮ್ಮೂರ ಮಾರಿಹಬ್ಬಳನ್ನು ಮಾಡುತ್ತೇವೆ.

5. ನಿಮ್ಮ ಸಮುದಾಯ (ಜಾತಿ)ದವರೇ ಪ್ರತ್ಯೇಕವಾಗಿ ಆಚರಿಸುವ ಹಬ್ಬ ಇದೆಯಾ? ಹೌದು (✓) ಇಲ್ಲ( )ಅದು ಯಾವುದು?

ಅದನ್ನು ಮಾಗಡಿ ತಾಲೂಕಿನಲ್ಲಿ ಈರಬ್ಬ ಎಂದು ಆಚರಿಸುತ್ತಾರೆ. ಅದು ನಮ್ಮ ಪಾರಂಪರಿಕ ಹಬ್ಬವಾಗಿದ್ದು ತಲತಲಾಂತರದಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಜೊತೆಗೆ ಇಡೀ ಸಮುದಾಯದವರು ಪಾಲ್ಗೊಳ್ಳುತ್ತಾರೆ.

6. ನಿಮ್ಮ ಪಾರಂಪರಿಕ ಆಚರಣೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದೀರಾ ಹೌದು ( ) ಇಲ್ಲ(✓) ಅವು ಯಾವುವು? ಈ ಆಚರಣೆಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗದಿದ್ದಕ್ಕೆ ಕಾರಣವೇನು?

ಇಲ್ಲಿ ಆದರೂ ಬಿಟ್ಟಕೊಡದೆ ಸಾಂಕೇತಿಕವಾಗಿಯಾದರೂ ಮುಂದುವರಿಸಿಕೊಂಡು ಬರುತ್ತಿದ್ದೇವೆ. ಅರಣ್ಯದಿಂದ ಹೊರಗೆ ಹಾಕಿದಾಗಿನಿಂದ ನಮ್ಮ ಪಾರಂಪರಿಕ ಆಚರಣೆಗಳಿಗೆ ಕಷ್ಟ ಉಂಟಾಯಿತು.

7. ನಿಮ್ಮ ಕುಲದ ಹೆಸರು (ಆಲದ ಕುಲ)

VI. ನಿಮಗೆ ರಾಜಕೀಯದ ಬಗ್ಗೆ ತಿಳಿದಿದೆಯೇ ಹೌದು(✓) ಇಲ್ಲ( )

1. ನೀವು ಮತ (ಓಟು) ಹಾಕಿದ್ದೀರಾ? ಹೌದು(✓) ಇಲ್ಲ( ) ಇಲ್ಲವಾದರೆ ಕಾರಣವೇನು?

2. ನೀವು ಗ್ರಾಮ ಪಂಚಾಯಿತಿಯಲ್ಲಿ ಸ್ಪರ್ಧಿಸಿದ್ದೀರಾ? ಹೌದು( ) ಇಲ್ಲ(✓) ಹೌದಾದರೆ ಗ್ರಾಮ ಪಂಚಾಯಿತಿಯಲ್ಲಿ ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ? ನಿಮಗೆ ಅಧ್ಯಕ್ಷರ ಸ್ಥಾನ ನೀಡಿದ್ದಾರಾ? ನೀವು ಅಧ್ಯಕ್ಷರಾಗಿದ್ದಾಗ ನಿಮ್ಮನ್ನು ಯಾರಾದರೂ ನಿಯಂತ್ರಿಸಿದ್ದರಾ?

3. ಇಲ್ಲಿಯವರೆಗೂ ಮೀಸಲಾತಿ ಬಂದಿಲ್ಲವಾ ಅಥವಾ ಈ ವಿಷಯ ಗೊತ್ತಿಲ್ಲದಂತೆ

ನೋಡಿಕೊಳ್ಳಲಾಗುತ್ತಿದೆಯಾ? ಹೌದು(   ) ಇಲ್ಲ(   ) ಗ್ರಾಮ ಪಂಚಾಯಿತಿಯಲ್ಲೂ ಜಾತಿಯತೆ ಮಾಡುತ್ತಾರೆಯೇ? ಹೌದು(   ) ಇಲ್ಲ(   )

ಅನ್ವಯಿಸುವುದಿಲ್ಲ

4. **ಗ್ರಾಮ ಪಂಚಾಯಿತಿಯಲ್ಲಿ ನಿಮಗೆ ಏನೇನು ಸೌಲಭ್ಯ ಇದೆ ಎಂದು ಗೊತ್ತಾ ಹೌದು (   ) ಇಲ್ಲ(   ) ಗೊತ್ತಿದ್ದರೆ ಹೇಗೆ ಗೊತ್ತಾಯಿತು? ಇಲ್ಲವಾದರೆ ಯಾಕೆ?**

   ಗೊತ್ತಿದೆ. ಆದರೆ ಅದನ್ನು ಪಡೆದುಕೊಳ್ಳಲು ಸ್ಥಳೀಯ ನಾಯಕರು ಮತ್ತು ಗ್ರಾಮ ಪಂಚಾಯಿತಿಯ ಅಧಿಕಾರಿ ಮತ್ತು ಅಧ್ಯಕ್ಷರು ಬಳಸಿಕೊಳ್ಳುತ್ತಿದ್ದಾರೆ.

5. **ನಿಮಗೆ ಸಂಘಟನೆ, ಹೋರಾಟ, ಮೀಸಲಾತಿ, ಸರ್ಕಾರದ ಯೋಜನೆಗಳು, ಅಭಿವೃದ್ಧಿ ನಿಗಮಗಳು, ವಿಶೇಷ ಘಟಕ ಯೋಜನೆಗಳು, ತಾಲ್ಲೂಕು ಕಛೇರಿ, ಜಿಲ್ಲಾಧಿಕಾರಿ ಕಛೇರಿ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ನ್ಯಾಯಾಂಗ, ಕಾನೂನುಗಳ ಬಗ್ಗೆ ಮಾಹಿತಿ ಇದೆಯಾ? ಹೌದು(✓) ಇಲ್ಲ(   ).**


ಮೇಲಿನ ಸಂದರ್ಶನಗಳನ್ನು ಗಮನಿಸಿದಾಗ ಇರುಳಿಗರು ತಮ್ಮ ಪಾರಂಪರಿಕ ವೃತ್ತಿಯನ್ನು ಕಳೆದುಕೊಂಡು ಆಧುನಿಕತೆ ಮತ್ತು ಗ್ರಾಮ ಸಮಾಜದ ಜೊತೆಗೆ ಹೊಂದಿಕೊಳ್ಳುವ ಅನಿವಾರ್ಯತೆ ಉಂಟಾಗಿದೆ. ತಮ್ಮ ಪಾರಂಪರಿಕ ಜೀವನ ಮೌಲ್ಯಗಳೇ ಇಂದೂ ಇರುಳಿಗರಿಗೆ ಶಾಪವಾಗಿ ಎದುರಾಗಿವೆ. ಇರುಳಿಗರ ದೇವರು, ಧರ್ಮ, ನಂಬಿಕೆ ಮತ್ತು ಆಚರಣೆಗಳು ಗ್ರಾಮ ಸಮಾಜದ ಆಧುನಿಕತೆಯ ಸಂದರ್ಭದಲ್ಲಿ ಮುಜುಗರವನ್ನುಂಟು ಮಾಡಿವೆ. ತನು ಶುದ್ಧಿಗಿಂತ ಮನಶುದ್ಧಿ ಮುಖ್ಯ ಎಂದು ನಂಬಿಕೊಂಡಿದ್ದ ಇರುಳಿಗರಿಗೆ ಮನಶುದ್ಧಿಗಿಂತ ತನುಶುದ್ಧಿಯಾಗಿರಬೇಕೆಂದು ಅವರಿಗೆ ಶೋಷಣೆ ಮತ್ತು ಅವಮಾನ ಅನುಭವಿಸಿದ್ದರಿಂದ ಗೊತ್ತಾಗಿದೆ. ಲಕ್ಷದಿಂದ ಕೋಟಿ ವಾರ್ಷಿಕ ವರಮಾನವನ್ನು ಹೊಂದಿರವ ಇವತ್ತಿನ ಸಮಾಜದ ಎದುರು ಹತ್ತರಿಂದ ಇಪ್ಪತ್ತು ಸಾವಿರದ ವಾರ್ಷಿಕ ವರಮಾನವನ್ನು ಹೊಂದಿರುವ ಇರುಳಿಗರು ಬದುಕುವುದಕ್ಕಾಗಿ ಪ್ರಸ್ತುತ ಸಂದರ್ಶನದಲ್ಲೂ ಕೂಲಿ ಮತ್ತು ಜೀತಗಾರಿಕೆಯನ್ನು ಅವಲಂಬಿಸಿರುವುದು ಕಂಡುಬರುತ್ತದೆ. ಇಟ್ಟಿಗೆ ಕಾರ್ಖಾನೆ, ಎಸ್ಟೇಟ್ ಮತ್ತು ಇತರೆ ಮೇಲ್ಜಾತಿಯವರ ಹತ್ತಿರ ಕುಟುಂಬ ಸಮೇತ ರಾಗಿ ದುಡಿಯುವುತ್ತಿರುವುದರಿಂದ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಸಾಧ್ಯವಾಗುತ್ತಿಲ್ಲ. ಜೊತೆಗೆ ಇರುಳಿಗರು ವಾಸಿಸುವ ಪ್ರದೇಶಗಳಿಗೆ ಸರಿಯಾದ ರಸ್ತೆ ಮತ್ತು ಮೂಲಭೂತ ಸೌಲಭ್ಯಗಳಿಲ್ಲದ ಕಾರಣ ಸರ್ಕಾರದಿಂದ ತೆರೆದ ಶಾಲೆಗಳಿಗೆ ಶಿಕ್ಷಕರು ಇಲ್ಲದಂತಾಗಿದೆ. ಇದರ ಜೊತೆಗೆ ಬಡತನವೇ ಬಹು ದೊಡ್ಡದಾಗಿ ನಿತ್ಯ ದುಡಿದು ತಿನ್ನುವ ಇರುಳಿಗರು ಮಕ್ಕಳಿಗೆ ಶಿಕ್ಷಣ ಕೊಡಿಸುವ ಗೋಜಿಗೆ ಹೋಗದಿರುವುದನ್ನು ಕಾಣಬಹುದು. ಹಾಗೊಮ್ಮೆ ಕಲಿತರು

ಅದರಿಂದ ಕೆಲಸ ಸಿಗದೆ ದಿನಗೂಲಿ ಮಾಡಿಕೊಂಡು ಬದುಕುತ್ತಿರುವ ಇರುಳಿಗ ವಿದ್ಯಾವಂತರನ್ನು ನೋಡಿ ಇತರೆ ಇರುಳಿಗರು ಕೂಡ ಶಾಲೆಯನ್ನು ಬಿಡಿಸಿ ತಮ್ಮ ಕೆಲಸಕಾರ್ಯಗಳಿಗೆ ಕರೆದುಕೊಂಡು ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಸರ್ಕಾರಿ ಸೌಲಭ್ಯಗಳನ್ನು ಪಡೆದುಕೊಳ್ಳಲು ಬೇಕಾದ ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿ, ಆದಾಯ ಪ್ರಮಾಣಪತ್ರ, ಜಾತಿ ಪ್ರಮಾಣಪತ್ರ ಮತ್ತು ಆಧಾರ ಮುಂತಾದ ಯಾವ ದಾಖಲೆಗಳು ಇಲ್ಲದ ಬಹುತೇಕ ಕುಟುಂಬಗಳು ಇರುಳಿಗರಲ್ಲಿ ಕಂಡುಬಂದಿವೆ. ಇನ್ನು ಪರಿಶಿಷ್ಟ ಪಂಗಡಕ್ಕೆ ಬರುವ ಇರುಳಿಗರನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿರುವ ಇತರೆ ಸಮುದಾಯಗಳು ತಮ್ಮ ಜಮೀನು, ತೋಟಗಳಲ್ಲಿ ದುಡಿಯುತ್ತಿರುವ ಇರುಳಿಗರನ್ನು ಚುನಾವಣೆಗೆ ನಿಲ್ಲಿಸಿ, ಗೆಲ್ಲಿಸಿಕೊಂಡು ತಮ್ಮ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುತ್ತಿರುವುದು ಕಂಡುಬಂದಿದೆ. ಇದರ ಜೊತೆಗೆ ಹಣ, ಆಸ್ತಿ ಮತ್ತು ಜಾತಿ ಬಲವಿಲ್ಲದ ಇರುಳಿಗರು ಸರ್ಕಾರ ಮತ್ತು ರಾಜಕಾರಣಿಗಳಿಗೆ ಲೆಕ್ಕಕ್ಕಿಲ್ಲದಂತಾಗಿದ್ದಾರೆ. ಒಂದಷ್ಟು ಭೂಮಿ ಸಿಕ್ಕರೂ ಬದುಕಿ ಬಾಳುತ್ತೇವೆ ಎನ್ನುವ ಇರುಳಿಗರಿಗೆ ಅರಣ್ಯ ಇಲಾಖೆಯವರು ಇದ್ದ ಅಲ್ಪಸ್ವಲ್ಪ ಭೂಮಿಯನ್ನು ಕಿತ್ತುಕೊಂಡು ಪ್ರತಿನಿತ್ಯ ಕಿರುಕುಳ ನೀಡುತ್ತಿರುವುದು ಕಂಡುಬಂದಿದೆ. ಸುಪ್ರೀಂಕೋರ್ಟಿನ ೨೦೦೬ರ ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನವಾದರೆ ನಮ್ಮ ಬದುಕು ಬಂಗಾರವಾಗುತ್ತದೆ ಎಂದು ಇರುಳಿಗರು ಕಾಯುತ್ತ ಕುಳಿತಿರುವುದು ಸಂದರ್ಶನದ ಸಮಯದಲ್ಲಿ ಗೋಚರವಾಗುತ್ತದೆ.

ಅಧ್ಯಯನಕ್ಕೆ ಪೂರಕವಾದ ನಕ್ಷೆಗಳು

ದಕ್ಷಿಣ ಭಾರತದಲ್ಲಿ ಕಂಡುಬರುವ ಪ್ರಮುಖ ಇರುಳಿಗರ ನೆಲೆಗಳು






ಇರುಳಿಗರ ವಾಸಸ್ಥಾನವಾದ ಕಾವೇರಿ ನದಿಯ ಮುಖಜ ಭೂಮಿ




ಕರ್ನಾಟಕದಲ್ಲಿ ಇರುಳಿಗರ ನೆಲೆಗಳು ಇರುಳಿಗರ ವಕ್ತೃಗಳ ಅಭಿಪ್ರಾಯದಲ್ಲಿ






ಸ್ಪೆನ್ಸರ್‌ವೆಲ್ ಅವರು ಗುರುತಿಸುವ ಇರುಳಿಗ ಸಮುದಾಯದ ಮೂಲ ಮತ್ತು ವಲಸೆಯ ಹಾದಿ





ಇರುಳಿಗರ ಪಾರಂಪರಿಕ ಕಟ್ಟುಪಾಡಿನ ಕರಾರು ಪತ್ರ





[illegible] ೬೯೯೯
೩-ಎ

[illegible]
[illegible] ೩-[illegible]
(ತಾ. ೮.೨.೯೧
[illegible]

(೨) L.T.M. [illegible]
[illegible]
[illegible]

(೩) L.T.M. [illegible]
[illegible]
[illegible]

(೪) [illegible]
[illegible]

(೫) L.T.M. [illegible]
[illegible]
[illegible]

L.T.M. [illegible]
[illegible]
[illegible]

L.T.M. [illegible]
[illegible]
[illegible]

L.T.M. [illegible]
[illegible] S/o [illegible]
[illegible]

ಅಧ್ಯಯನಕ್ಕೆ ಪೂರಕವಾದ ಛಾಯಾಚಿತ್ರಗಳು



ಇರುಳಿಗರ ಪಾರಂಪರಿಕ
ವಾಸಸ್ಥಳ



ಕರ್ನಾಟಕದಲ್ಲಿ ಇರುಳಿಗರ ವಾಸದ ಮನೆಗಳು



ತಮಿಳುನಾಡಿನ ಇರುಳರ ವಾಸದ ಮನೆಗಳು




ಕಣಿ ಹೇಳುತ್ತಿರುವುದು



ಇರುಳಿಗರ ಪಾರಂಪರಿಕ ಕಲ್ಲು ಸೇವೆ



ಹಿರಿಯರ ಹಬ್ಬ



ಇರುಳಿಗರ ದೈವಗಳು



ಬೇಟೆಯ ಸಂದರ್ಭದಲ್ಲಿ ಇರುಳಿಗರು



ಅನಿವಾರ್ಯ ವೃತ್ತಿಗಳು



ಬೇಟೆಯಲ್ಲಿ ನಿರತ ಇರುಳಿಗ ಮಹಿಳೆ



ಇರುಳಿಗ ಪದನಿಷ್ಪತ್ತಿ ಕಾರಣವಾದ ಇರುಳ ಗೆಣಸು ಬೇರಿನೊಂದಿಗೆ



ಆಸ್ಟ್ರೇಲಿಯನ್ ಮತ್ತು ಇರುಳಿಗ ಬುಡಕಟ್ಟು ಹೋಲಿಕೆಯಾಗುವ ಛಾಯಾಚಿತ್ರಗಳು



ಪಾರಂಪರಿಕ ಹಕ್ಕುಗಳಿಗಾಗಿ ಪ್ರತಿಭಟನೆ



ಹಲವು ಬುಡಕಟ್ಟು ಸಮುದಾಯಗಳಿಗೆ ಸಿಗದ ಅರಣ್ಯ ಭೂಮಿ ಹಕ್ಕುಪತ್ರ

ಶಾಶ್ವತ ನೆಲೆ ಕಾಣದ ಇರುಳಿಗ ಕುಟುಂಬಗಳು


ನಿಲ್ಲದ ಆದಿವಾಸಿಗಳ ಪ್ರತಿಭಟನೆ

■ ಜಿಲ್ಲಾಡಳಿತ ನೀಡಿದ್ದ ಗಡುವು ಅಂತ್ಯ ■ 17ನೇ ದಿನಕ್ಕೆ ಕಾಲಿಟ್ಟ ನಿರಶನ


ಪತ್ರಿಕಾ ವರದಿಗಳು




ತಮಿಳುನಾಡಿನ
ಇರುಳ
ವಕ್ತೃಗಳೊಂದಿಗೆ
ಮಾಹಿತಿ ಸಂಗ್ರಹಣೆ



ಕರ್ನಾಟಕದ
ಇರುಳಿಗರ
ಯುವಪೀಳಿಗೆ



ಇರುಳಿಗರ ಚರಿತ್ರೆಗೆ ಸಂಬಂಧಿಸಿದ ಹಸ್ತಪ್ರತಿ ಮತ್ತು ತಾಮ್ರಪಟ(Govt. Orintal Manuscripts Library, University of Madras



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಚರಿತ್ರೆ ವಿಭಾಗ